Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಿಲು ಸಹಿತ ರೂ. 2—1—0.

ಪುಸ್ತಕ X — ಮಂಗಳೂರು ತಾ. 1ನೇ ಸಪ್ಟಂಬರ ಶುಕ್ರವಾರ 1916. — ಸಂಚಿಕೆ 35

296 ಪುಟಗಳು! ಕಾಗದದ ಬೆಲೆ ಮಾತ್ರ!!

ಅರ್ಧ ಬೆಲೆ.

ಶ್ರೀಯುತ ಎನ್. ಎ. ಶ್ರೀನಿವಾಸ ಹೆಗ್ಡೆರಿಂದ ರಚಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯ ಕಟ್ಟು ಎಂಬ ನೂತನ ಸಂಗ್ರಹದ ನವೀನ ಪ್ರತಿಯು ಅನೇಕ ಮಹನೀಯರ ಅಭಿಪ್ರಾಯ ಪ್ರಕಾರ ಬರುವ ಸಪ್ಟಂಬರ ಆಖೈರಿ ವರೇಗೆ 2 ಪ್ರತಿಗಳಿಗೆ ರೂ. 1—8—0ಗೆ ದೊರಕುವದು. ವಿದ್ಯಾ ಇಲಾಖೆಯವರಿಗೆ 2ಕ್ಕೆ ರೂ. 1—4—0 ದರದಲ್ಲಿ ಕೊಡುವೆವು ಸಪ್ಟಂಬರ ನಂತರ ಪ್ರತಿ ಒಂದಕ್ಕೆ ರೂ. 1—8—0ಗಿಂತ ಕಡಿಮೆ ಶಿಕ್ಕಲಾರದು.

ಅಂಕೆಗಳಿಂದಲೇ ಬರೆಯುವ, ಶಿಲಾಶಾಸನ ತಾಮ್ರಶಾಸನಗಳನ್ನು ಸುಲಭನಾಗಿ ಓದುವ ನೂತನ ತರದ ಶ್ರೀನಿವಾಸ ಲಿಪಿ ಎಂಬ ಪುಸ್ತಕವು ತ್ವರ್ಯ ತಯಾರಾಗುವುದು. ಪ್ರತಿ 1ಕ್ಕೆ 0—2—6. ವಿದ್ಯಾ ಇಲಾಖೆಯವರಿಗೆ 0—2—0. ಒಂದೇ ತಾಸಿನೊಳಗೆ ಸರಿಯಾಗಿ ಕಲಿಯಬಹುದು.

ವಿಳಾಸ:—

S. P. RAJA & Co., Car Street, POLALY, S. C. — ಎನ್. ಎ. ಶ್ರೀನಿವಾಸ ಹೆಗ್ಡೆ, ಕುಶಲ ಮಂದಿರ, ಪೊಳಲಿ, ದ. ಕ.

ನೂತನ ಪ್ರಬಂಧ! ಅದ್ಭುತ ಪತ್ತೆದಾರಿಯ ಕಥೆ!

ಕಳವಾದ ಇನ್ಸಪೆಕ್ಟರ್.

ಚೋರಾಗ್ರೇಸರನಾದ ಮಾಣಿಕ್ಯಲಾಲನಿಗೂ ಮತ್ತು ಪ್ರಸಿದ್ಧ ಪತ್ತೆದಾರನಾದ ಜಯದೇವ ಚಕ್ರವರ್ತಿಗೂ ನಡೆಯುವ ಬುದ್ಧಿ ಚಾತುರ್ಯದ ಭಯಂಕರ ಹೋರಾಟ

ಆರಂಭದಿಂದ ಅಂತ್ಯದವರೆವಿಗೂ ಒಂದೇ ಸಮನಾದ ಆಸಕ್ತಿಯನ್ನುಂಟುಮಾಡುವುವಲ್ಲದೆ ಇನ್ಸಪೆಕ್ಟರಂತೆ ವೇಷವನ್ನು ಧರಿಸಿ ನೌಕರಿ ಮಾಡುವ ಕಳ್ಳನ ದಿಟ್ಟತನವೂ ರೈಲ್ವೆ ಗಾಡಿಯಲ್ಲಿ ಸಿಕ್ಕಿಬಿದ್ದ ಚೋರನ ಅದ್ವಿತೀಯವಾದ ಕೌಶಲೋಪಾಯವೂ ವಿಲಾಯತಿ ಸರದಾರರ ಆಭರಣಗಳನ್ನು ಅಪಹರಿಸಲು ಪ್ರಯತ್ನಿಸುವ ಅದ್ಭುತ ಸಾಹಸವೂ ಅಸಮಾನವಾದವುಗಳಾಗಿರುತ್ತವೆ.

ಬೆಲೆ ಹತ್ತು ಆಣೆಗಳು ಮಾತ್ರ. ವ್ಯಾಪಾರಸ್ಥರಿಗೆ ಒಳ್ಳೆ ಡಿಸ್ಕೌಂಟು ಕೊಡಲ್ಪಡುತ್ತೆ.

ವಿಳಾಸ:— ಛಾಂಪಿಯನ್ ಏಜನ್ಸಿ, ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕಪ್ಪು ಶಾಯಿಪುಡಿಯ ಪೊಟ್ಟಣಗಳು.

ಅತ್ಯುತ್ತಮವಾದುದು! ವಿ.-ಪಿ. ಯಲ್ಲಿ ತರಿಸಿ, ಮಾರುವುದು ವಿಶೇಷ ಲಾಭಕರ!! ಸುಲಭ ದರ!!! 50ಕ್ಕೆ 0—4—0; 100ಕ್ಕೆ 0—6—0, 300ಕ್ಕೆ ರೂ. 1—0—0, 1,000ಕ್ಕೆ 2—8—0, 3,000ಕ್ಕೆ 6—0—0. ಅಂಚೆ, ಪೆಟ್ಟಿ, ಪ್ಯಾಕಿಂಗ್ ವಗೈರೆ ಖರ್ಚುಗಳು ಬೇರೆ.

ನಮ್ಮ ವಿಳಾಸ:— ವಿ. ಪಿ. ಡಿಪೋ, ಕೋಲಾರ್.

ಈಗಲೇ ಅಚ್ಚಾಗಿರುವದು! ಈಗಲೇ ಅಚ್ಚಾಗಿರುವದು!!

ರಾ. ಮಟ್ಟಿಗೋಪಾಲ ಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಮಟ್ಟಿನ ಪದಗಳೂ, ದಾಸರ ಕೀರ್ತನೆಯ ನಮೂನೆ ಪದಗಳೂ, ನಾಟಕದ ನಮೂನೆ ಹಿಂದೂಸ್ಥಾನಿ ಮಟ್ಟಿನ ಕೀರ್ತನೆಗಳೂ, ಮಂಗಲಪದಗಳೂ, ಶೋಭನಪದಗಳೂ, ಜೋಗುಳಪದಗಳೂ ಉದಯರಾಗದ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. 25 ಪ್ರತಿಗಳನ್ನು ಒಂದೇ ಸಲ ತರಿಸಿಕೊಳ್ಳುವರಿಗೆ ರೂ. 6—4—0. ಟಪ್ಪಾಲ ಖರ್ಚು ಪ್ರತ್ಯೇಕ.

ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

15 ದಿವಸಗಳೊಳಗೆ 500 ಪೆಟ್ಟಿಗೆ ಬತ್ತಿಗಳು ಮಾರೋಣಾದವು.

ನಮ್ಮ ನುಣುಪಾದ ಚಲೋ ಮೇಣದ ಬತ್ತಿಗಳು ಅದ್ವಿತೀಯ ಖ್ಯಾತಿಯನ್ನು ಹೊಂದುತ್ತಿವೆ. ಪ್ರತಿನಿತ್ಯದಲ್ಲಿಯೂ ಇವುಗಳ ವಿಕ್ರಿತವು ಬಹಳವಾಗಿ ಆಗುತ್ತಿರುವದು.

ನಿರಾಶೆ ಹೊಂದದಂತೆ ಬೇಕಾದವರು ಈ ದಿನವೇ ಬರೆಯಿರಿ.

ಈ ಮೇಣದ ಬತ್ತಿಯ ಮಾರಾಟದ ಏಜನ್ಸಿಯನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸದವರಿಗೆ ಬರಕೊಳ್ಳಬಹುದು.

ಕೆ. ದಯಾ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಪ್ರಧಾನ ಆಫೀಸು ಮತ್ತು ಬತ್ತಿಗಳನ್ನು ತಯಾರಿಸುವ ಕಾರಖಾನೆಯು ಮುಂಬಾಯಿಯಲ್ಲಿಯೂ ಇದರದೊಂದು ಶಾಖೆಯು ಕಲಿಕತ್ತೆಯಲ್ಲಿಯೂ ಇರುತ್ತವೆ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಜರ್ಮನ್, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಿಪತ್ಕಾಲಕ್ಕೂ ವೈದ್ಯರ ಸಮಯವನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಲೀನ, ಬಲಹೀನತೆ, ಕಟ್ಟಿಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವೆ, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260

ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ. 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ|| ರಾ|| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಫಾರ್ಮಸ್ಯೂಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2 ಬೊಂಬ್ಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಲವೆ ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಆಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ನಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರತ್ಯಕ್ಷಗೊಳಿಸಿ.

ಶೀಸೆ 1ರ ಕ್ರಯ ರೂಪ್ಯಾ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನಕಟ್ಟೆ ಶೋಪುಗಳಲ್ಲಿ ದೊರಕುವದು.

ಸಬ್ ಏಜಂಟರು ಬೇಕಾಗಿವೆ.

STANY BROTHERS
Sole Agents
C. M. C's, Toothache Specific, Mangalore.

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ವಿಕರಿಗೆ ಸಿದ್ಧವಾಗಿರುವದು!!!

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ವಿಕರಿಗೆ ಸಿದ್ಧವಾಗಿರುತ್ತವೆ.

ಕ್ರಯ ಪ್ರತಿ 1ರ 4 ಆಣೆ.

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾದೀತು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಯಲ್ಲಿ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ|| ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ. ಚಾಂಪಿಯನ್ ಅಥಲೈಕ್ ಏಜನ್ಸಿ ಮೈಸೂರು.

ಛಳಿಕಾಲ! (Best Shwals) ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿ

ಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಡುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಉದ್ದ 6 ಮೊಳ ಅಗಲ ಇದ್ದ ಶಾಲು 1ಕ್ಕೆ ರೂ. 2—8—0

ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— ವ್ಯಾರಂ ಅಂಡು ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

Estd. 1888. **K. B. RELE & Cos.,—BOMBAY** ಸ್ಥಾಪನೆ 1888.

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಗಜ್ಜು, ತುರಿಕೆ, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆ ರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷದ ಹಳತ, ಸ್ಥಾಯಿ ಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಿಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ತಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಿಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.



ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.

ವಿಳಾಸ:— ರಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.



ಆರೋಗ್ಯಕ್ಕೆ ಮೊದಲು ಸೋಪಾನವು.

ನಮ್ಮ ಅಪೂರ್ವವಾದ

ಕ್ರಯ ಹಾಸಲು

ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವ ವೈದ್ಯ ಬೋಧನೆಗಳಿರುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದುವದೇ ಯಾಗುವದು. ಈ ಪುಸ್ತಕ ಲೋಕ ಹಿತಾರ್ಥವಾಗಿ ಛಾಪಿಸಲ್ಪಟ್ಟು ಮುಫತ್ತಾಗಿ ಕಳುಹಿಸಲ್ಪಡುತ್ತೆ.

ಸಂಪೂರ್ಣ ಪುರುಷತ್ವಕ್ಕೆ ಮೊದಲು ಸೋಪಾನವು.

ಮದನಮಂಜರಿ ಮಾತ್ರೆಗಳು.

ಉಪಯೋಗಿಸುವದೇ ಯಾಗುವುದು. ಈ ಮಾತ್ರೆಗಳು ಬಲಹೀನತ್ವವನ್ನು ಹೋಗಲಾಡಿಸಿ ನರಗಳಿಗೆ ಬಲವನ್ನುಂಟು ಮಾಡಿ ರಕ್ತವನ್ನೂ, ಪುರುಷನ ವೀರ್ಯವನ್ನೂ ವೃದ್ಧಿಗೊಳಿಸಿ ಸಂಪೂರ್ಣ ಪುರುಷತ್ವವನ್ನು ಕೊಡುವವು. ೩೦ ಮಾತ್ರೆಗಳು ರೂ. 1.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಪ್ರಧಾನ ಆಫೀಸು:—ಜಾಮನಗರ್ (ಕಾಥ್ಯಾವಾರ್).

ಶಾಖೆ:—
ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ,
ಮದರಾಸು.

Rajavaidya Narayanji Keshavaji,
Ayurvedodaya Aushadhalaya,
Head Office:—JAMNAGAR, (KATHIAWAR),
Branch:—20 CHINA BAZAAR ROAD, MADRAS.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	370,018—12—9
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ನಿಯಮಿತ ಮೂಲ ಧನವು	300,000—0—0
ಹುಟ್ಟಿಬಂದ ಮೂಲ ಧನವು	225,000—0—0
ಪ್ರತಿಜ್ಞಾತ ಮೂಲ ಧನವು	225,000—0—0
ಆಗತ ಮೂಲ ಧನವು	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	370,018—12—9
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

Canara Bank Ltd.,
Mangalore, 1st. August 1916.

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟಿಗೆ ೨-೮-೦.

೩. ಕಂಠಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪ್ರಖ್ಯಾತವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಸುದರ್ಶನ ಜ್ವರಾಂಕುಶ ಮಾತ್ರೆ. ಚಳಿಜ್ವರ, ಮರಿಸಿದ ಜ್ವರ ಮುಂತಾದ ಎಲ್ಲ ಜ್ವರಗಳನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಗುರ್ಸಿ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾವ್ ಕಲಿನೋವು, ಎದೆನೋವು, ಸೊಂಟನೋವು, ಛಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೇನಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಯಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಭಾದ್ರಪದ ಶು. ೪ ಶುಕ್ರವಾರ.

ಮದ್ರಾಸಿನ ಬಿಶೊಪರೂ, ಸ್ವರಾಜ್ಯವೂ.

ಹಿಂದೂಸ್ಥಾನದ ಸ್ವರಾಜ್ಯದ ವಿಷಯದಲ್ಲಿ ಹಿಂದೀ ಗೃಹಸ್ಥರು ಮಾತ್ರ ಅನುಕೂಲ ಮತದವರಿದ್ದಾರೆಂತಲ್ಲ, ಅನೇಕ ಆಂಗ್ಲ ಸದ್ಗೃಹಸ್ಥರು ಸಹ ಅನುಕೂಲರಾಗಿಯೇ ಇದ್ದಾರೆ. ರಾಜ್ಯತಂತ್ರಗಳನ್ನು ನಡಿಸಲು ರಾಜಕಾರಣ ಪುರುಷರಿಗೆ ಸನ್ನಿವೇಶಸವ್ಯಗಳನ್ನು ಮಾಡುತ್ತಿರುವ ಪ್ರಸಂಗಗಳು ಭೂಯಾಗಲೂ ಬರುತ್ತಿರುವುದರಿಂದ ಅವರಿಗೆ ಪ್ರತಿ ಒಂದು ರಾಜಕೀಯ ವಿಷಯವನ್ನು ಬಹು ಜಾಗರೂಕತೆಯಿಂದಲೂ, ದೀರ್ಘ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಮತ್ತು ಆಗಾಗ್ಗೆ ತಂತಮ್ಮ ಮತಗಳನ್ನು ವ್ಯಕ್ತಗೊಳಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಹಿಂದೀ ಸ್ವರಾಜ್ಯದ ವಿಷಯದಲ್ಲಿ ಆಂಗ್ಲ ಕ್ಷತ್ರಿಯರು ತಂತಮ್ಮ ಅಭಿಪ್ರಾಯಗಳನ್ನು ಹೊರಪಡಿಸುವುದು ಸಹಜವೇ. ಅದು ಅವರ ಕ್ಷಾತ್ರವೃತ್ತಿಗೆ ಬೇಕಾದ ಸಂಗತಿಯೇ. ಆದರೆ ಆಂಗ್ಲವೈದಿಕ ಭಟ್ಟರು ಕೂಡ ಹಿಂದೀ ಸ್ವರಾಜ್ಯದ ಕುರಿತು ತಮ್ಮ ಆಲೋಚನೆಗಳನ್ನು ಜನರೆದುರಿಗಿಟ್ಟದ್ದನ್ನು ನೋಡಿದರೆ ಬಹು ಸಂತೋಷವಾಗುತ್ತದೆ. ಕಾರಣವೇನಂದರೆ ವೈದಿಕರೆಂದ ಮೇಲೆ—ಅವರು ಹಿಂದು ಭಟ್ಟರೇ ಆಗಿರಲಿ, ಕ್ರಿಸ್ತ ಭಟ್ಟರೇ ಆಗಿರಲಿ—ರಾಜಸ ವಿಷಯಗಳನ್ನು ಬಿಟ್ಟು ಧರ್ಮದಂಥಾ ಸಾತ್ವಿಕ ಸಂಗತಿಗಳನ್ನೇ ಆಲೋಚಿಸುವವರು, ಉಪದೇಶಿಸುವವರು ಮತ್ತು ಅದರಂತೆಯೇ ನಡಕೊಳ್ಳುವವರು. ಅಂಥವರು ರಾಜಸ ವಿಷಯವನ್ನು, ಅದರಲ್ಲಿಯೂ ಹಿಂದೀ ಸ್ವರಾಜ್ಯದ ಬಗ್ಗೆ, ಇನ್ನೂ ಅದರಲ್ಲಿ ಹಿಂದೀ ಜನರಿಗೆ ಅನುಕೂಲವಾಗುವಂತೆ ತಮ್ಮ ಅಭಿಪ್ರಾಯಗಳನ್ನು ಕೊಡುವುದಾಗಲಿ, ಸ್ವಜನರಿಗೆ ಯೋಗ್ಯವಾದ ಉಪದೇಶದ ಎರಡು ಮಾತುಗಳನ್ನು ಹೇಳುವುದಾಗಲಿ ಬಹು ವಿರಳ. ಆದರೆ ಇಂಥ ವಿರಳವಾದ ಸಂಗತಿಯನ್ನು ನಮ್ಮ ಮದ್ರಾಸಿನ ಬಿಶೊಪ ದೊರೆಗಳು ನಿರ್ವಂಚನೆಯಿಂದ ಮಾಡಿರುವರು. ಈ ಬಗ್ಗೆ ಮೊದಲು ನಾವು ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ.

ಬಿಶೊಪ ಸಾಹೇಬರು "ನೈಂಟೀನ್ಥ ಸೆಂಚುರಿ" ಎಂಬ ಮಾಸಿಕ ಪತ್ರಿಕೆಯಲ್ಲಿ ಈ ಯುದ್ಧವು ಮುಗಿದ ಮೇಲೆ ಹಿಂದೂಸ್ಥಾನದ ರಾಜ್ಯದಾಡಳಿತೆಯ ಶಾಸನಗಳಲ್ಲಿ ಜನರ ಸ್ವರಾಜ್ಯದ ಧ್ಯೇಯಕ್ಕೆ ಉಪಯುಕ್ತವಾದ ಎಂಥೆಂಥಾ ಬದಲಾವಣೆಗಳನ್ನು ಮಾಡಬಹುದೆಂಬುದನ್ನು ವಾದಿಸಿರುತ್ತಾರೆ. ರುಸೋ-ಜಪಾನಿ ಯುದ್ಧವಾದಂದಿನಿಂದ ಪೌರಸ್ತ್ಯರಲ್ಲಿ ಒಂದು ತರದ ಆತ್ಮವಿಶ್ವಾಸವು ಹುಟ್ಟಿತು; ಹಿಂದೀ ಜನರಲ್ಲಿ ಸ್ವರಾಷ್ಟ್ರದ ಧ್ಯೇಯವು ಅಂಕುರಿಸಿತು; ಈಗಿನ ಯುದ್ಧದಿಂದಂತೂ ಹಿಂದೀ ಜನರು ಅದರಲ್ಲಿ ತಮ್ಮ ದ್ರವ್ಯ ಮತ್ತು ರಕ್ತವನ್ನು ಚಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಸಾಹಾಯ್ಯ ಮಾಡಿರುವುದರಿಂದ ಈ ಧ್ಯೇಯಕ್ಕೆ ಅನುಸಾರವಾದ ಹಿಂದೀ ಜನರಿಗೆ ರಾಜ್ಯದಾಡಳಿತೆಯಲ್ಲಿ ಹೆಚ್ಚಿಚ್ಚಾದ ಪಾಲು ಸಿಕ್ಕಬೇಕೆಂಬುವ ಆ ಕಾಂಕ್ಷೆಯು ಯುದ್ಧವು ಮುಗಿದನಂತರ ಮತ್ತಷ್ಟು ಬಲಗೊಳ್ಳುವದೆಂದು ಬಿಶೊಪ ಸಾಹೇಬರು ಪ್ರಸ್ತಾವನೆ ಮಾಡಿ ಹಿಂದೀ ದೇಶದೊಳಗಿನ ಅಲ್ಪಸಂಖ್ಯಾಕರಾದ ಅನಾರ್ಕಿಸ್ಟರ ಎಂದರೆ ಅರಾಜಕರ ಉಲ್ಲೇಖವನ್ನು ಮಾಡಿರುವರು. ಈ ಅನಾರ್ಕಿಸ್ಟರ ಪಂಕ್ತಿಯಲ್ಲಿಯೇ ರಾಷ್ಟ್ರೀಯ ಪಕ್ಷದವರನ್ನು ಕೂಡ್ರಿಸಿರುವರು. ಇದು ಮಾತ್ರ ಒಪ್ಪಿಕೊಳ್ಳತಕ್ಕ ಸಂಗತಿಯಲ್ಲ. ಹಿಂದೀ ರಾಷ್ಟ್ರೀಯ ಪಕ್ಷದವರ ಉದ್ದಿಷ್ಟ ಹೇತುಗಳು, ಕಾನೂನಿಗೆ ವಿರೋಧದ ಪ್ರಯತ್ನಗಳು ಮತ್ತು ರಾಜನಿಷ್ಠವಾದ ಕೃತ್ಯಗಳು—ಇಷ್ಟು ಸಂಗತಿಗಳನ್ನು ಆಲೋಚಿಸದೆ, ಅವರು ಹೋಮರೂಲ ಕೇಳುವುದರಿಂದ ಅವರನ್ನು ಬಿಶೊಪರು ಆ ಅರಾಜಕರಲ್ಲಿ ಸೇರಿಸುತ್ತಾರೆ. ಇದು ಬಿಶೊಪರ ಒಂದು ಪ್ರಮಾದವೇ ಸರಿ. ಇರಲಿ, ಮುಂದೆ ಹಿಂದೀ ಜನರ ಮಾನಸಿಕ ಸ್ಥಿತಿಯನ್ನು ವರ್ಣಿಸಿ ಬಿಶೊಪರು ಅವರ ಮನಸ್ಸು ವ್ಯಾವಹಾರಿಕ ಸಂಗತಿಗಳಿಗಿಂತಲೂ ತಾತ್ವಿಕ ವಿಚಾರಗಳನ್ನೇ ಹೆಚ್ಚಾಗಿ ಗ್ರಹಿಸುತ್ತದೆ, ಇಂಗ್ಲಿಷ ಅಧಿಕಾರಿಗಳು ಜನರ ಸ್ವಾಭಾವಿಕ ಮತ್ತು ಮಾನ್ಯವಾದ ಮಹತ್ವಾಕಾಂಕ್ಷೆಗಳನ್ನು ನೋಡುವುದಿಲ್ಲ ಎಂಬೀ ರೀತಿಯಿಂದ ಇತ್ತಟ್ಟಿನ ದೋಷಗಳನ್ನು ವಿಶದಪಡಿಸಿರುವರು. ಇದರಂತೆಯೇ ಇನ್ನೂ ಅನೇಕ ಸಂಗತಿಗಳನ್ನು ಹೇಳಿ ಬಿಶೊಪರು ಇಂಗ್ಲಂಡವು ಹಿಂದೀ ರಾಷ್ಟ್ರಕ್ಕೆ ಸ್ವರಾಜ್ಯವನ್ನು ಹೇಗೆ ಕೊಡಬಹುದೆಂಬ ವಿಷಯ ತಮ್ಮ ನಿರ್ಣಯವನ್ನು ಕೊಟ್ಟಿರುವರು. ಇದರ ಸ್ಪಷ್ಟೀಕರಣಾರ್ಥವಾಗಿ ಅವರು ಸ್ವಬಾಂಧವರಿಗೆ ಅನೇಕ ಉಪದೇಶಗಳನ್ನು ಮಾಡಿದ್ದಾರೆ. ಮೊದಲಿನಿಂದ ಇಂಗ್ಲಿಷ ಅಧಿಕಾರಿಗಳಿಗೆ ತಾವು ಜೇತೃವರ್ಗದವರು. ಹಿಂದೀ ದೇಶವು ಜಿತರಾಷ್ಟ್ರವು ಎಂದು ಹೇಳಿಕೊಳ್ಳುವ ಅಭ್ಯಾಸವು ಬಿದ್ದುಹೋಗಿದೆ. ಇದು ರಾಜ್ಯದ ದೃಢತ್ವಕ್ಕೆ ಬಹು ಹಾನಿಕರವು; ಹಾನಿಕರವಲ್ಲದಿದ್ದರೂ ಲಾಭಕರವಲ್ಲ. ಆದುದರಿಂದ ಇಂಗ್ಲಿಷರು ಸರಕಾರಿ ಉದ್ಯೋಗಸ್ಥರೇ ಆಗಲಿ, ಬೇರೆತರದವರೇ ಆಗಲಿ, ಹಿಂದೀ ಜನರ ವಿಷಯದಲ್ಲಿ ಅವಶ್ಯ ಸಹಾನುಭೂತಿಯಿಂದ ನಡಕೊಳ್ಳಬೇಕು; ಸೇವ್ಯಸೇವಕ ಭಾವವನ್ನು ಮೂಲೆಗೊತ್ತಿ ಅವರಲ್ಲಿ ನಮ್ಮ ಇಂಗ್ಲಿಷರ ಸಾಮ್ಯದೃಷ್ಟಿಯು ಇರಬೇಕು; ಸಾಮರ್ಥ್ಯದಿಂದಲೇ ಸಾಮ್ರಾಜ್ಯವನ್ನು ಕಾಪಾಡೇವೆಂಬ ಅಭಿಮಾನವನ್ನು ಬಿಟ್ಟುಬಿಡಬೇಕು; ಪಾಶ್ಚಾತ್ಯ ಸುಧಾರಣೆಗಳನ್ನು ಅಕಾರಣವಾಗಿ ಅವರ ಮೇಲೆ ಹೊರಿಸುವುದು ಪ್ರಶಸ್ತವಲ್ಲ; ಇಷ್ಟೇ ಅಲ್ಲ; ಬಿಶೊಪರು ಇನ್ನೂ ಅನೇಕ ಸಂಗತಿಗಳನ್ನು ತಮ್ಮ ಸ್ವಕೀಯರಿಗೆ ಉಪದೇಶಿಸಿದ್ದಾರೆ.

ಬಿಶೊಪರ ಈ ಎಲ್ಲ ಮಾತುಗಳು, ಉಪದೇಶಗಳು ಮತ್ತು ಆಲೋಚನೆಗಳು ನಿಜವಾಗಿ ಶ್ಲಾಘನೀಯವೇ ಸರಿ. ಅಧಿಕಾರಿಗಳು ಕಿವಿಯನ್ನು, ಬಿಶೊಪರಂಥ ಯೋಗ್ಯ ಮತ್ತು ದೈವಿಕ ಸೇವೆಯಲ್ಲಿ ಸೇರಿದ ಪುರುಷರು ಹಿಡಿವುದರಿಂದ ಸ್ವಲ್ಪಮಟ್ಟಿಗಾದರೂ ಪ್ರಯೋಜನವಾದೀತು. ಆದರೆ ತಮ್ಮ ಲೇಖದಲ್ಲಿ ಬಿಶೊಪರು ಹೇಳಿದ ಎಲ್ಲ ಸಂಗತಿಗಳು ಪೂರ್ಣ ವಾದಯುಕ್ತವಾದವುಗಳಲ್ಲ. ಹೋಮ್‌ರೂಲ್ ಚಳವಳವು ಅಪಾಯಕರವೆಂತ ಹೇಳಿದ್ದಾರಲ್ಲದೆ ಹಿಂದೀ ಜನರ ಸ್ವರಾಜ್ಯದ ಧ್ಯೇಯಕ್ಕೆ ಅನುಕೂಲವಾದ ಚಳವಳದ ಮತ್ತಾವ ವಿಧಾನವನ್ನಾದರೂ ಸ್ಪಷ್ಟವಾಗಿ ಸೂಚಿಸಿರರು. ಹಿಂದೀ ಜನರ ಸ್ವರಾಜ್ಯಧ್ಯೇಯಕ್ಕೆ ಅನುಗುಣವಾದ ಕಾರಣಗಳನ್ನು ಬಿಶೋಪರವರು ತಮ್ಮ ದೀರ್ಘ ಕಾಲದ ಅನುಭವದಿಂದ ವ್ಯಕ್ತಗೊಳಿಸಿದ್ದನ್ನು ಪರ್ಯಾಲೋಚಿಸಿದರೆ, ಈ ಕಾರಣಗಳು ಹೋಮ್ ರೂಲ್ ಅಥವಾ ಸ್ವರಾಜ್ಯದ ಚಳವಳವನ್ನೆ ಪುಷ್ಟೀಕರಿಸುವಂಥವುಗಳೆಂತ ತೋರಿಬರುತ್ತದೆ. ಸ್ವರಾಜ್ಯದ ಧ್ಯೇಯವನ್ನು ಹಿಂದೀ ಪ್ರಜಾಜನರು ಅಂಗೀಕರಿಸಿರುವಂತೆ ಸರಕಾರದವರು ಸಹ ಸ್ಪಷ್ಟವಾಗಿ ಅದನ್ನು ಅಂಗೀಕರಿಸಿಕೊಂಡು ಯುದ್ಧಾಂತ್ಯದಲ್ಲಿ ಹಿಂದೀ ಜನರ ರಾಜನಿಷ್ಠೆ, ಸಾಮ್ರಾಜ್ಯಸೇವೆ, ವಿದೇಶದಲ್ಲಿ ಕೂಡ ಹೋಗಿ ಚಲ್ಲಿದ ರಕ್ತ ಇವೇ ಮೊದಲಾದ ಸಂಗತಿಗಳನ್ನು ಮನಸ್ಸಿನಲ್ಲಿ ತಂದು ಅವರ ದೇಶಕ್ಕೆ ಎಂದರೆ ಹಿಂದೂಸ್ಥಾನಕ್ಕೆ ಇಲ್ಲಿಯ ಲೋಕಮತಕ್ಕೆ ಉಪಯುಕ್ತವಾದ ಸ್ವರಾಜ್ಯವನ್ನು ಕೊಡಬೇಕೆಂಬುವದೇ ರಾಜನಿಷ್ಠರಾದ ನಮ್ಮ ಹಿಂದೀ ಪ್ರಜೆಗಳ ಕೋರಿಕೆಯಾಗಿದೆ.

ಹಿಂದು ವಿಶ್ವವಿದ್ಯಾಲಯ.

ಕಾಶೀಕ್ಷೇತ್ರದೊಳಗಿನ ಹಿಂದೂ ವಿಶ್ವವಿದ್ಯಾಲಯದ 'ಕೋರ್ಟ'ನ ಮೊದಲನೆಯ ಅಧಿವೇಶನವು ತಾ. ೧೨ನೇ ದಿವಸ ಸೆಂಟ್ರಲ ಹಿಂದು ಕೊಲೇಜಿನಲ್ಲಿ ನೆರೆದಿತ್ತು. ಈ ವಿಶ್ವವಿದ್ಯಾಲಯದ ಚೆನ್ಸಲರರಾದ ಮೈಸೂರಿನ ಮಹಾರಾಜರಿಗೂ ಪ್ರೋ. ಚೆನ್ಸಲರರಾದ ಗ್ವಾಲೇರದ ಮಹಾರಾಜರಿಗೂ ಅನಿವಾರ್ಯ ಕೆಲಸದ ದೆಸೆಯಿಂದ ಆ ದಿನ ಸಭೆಗೆ ಬರಲು ಆಗಲಿಲ್ಲ; ಅದಕಾರಣ ಬನಾರಸಿನ ಮಹಾರಾಜರು ಅಧ್ಯಕ್ಷ ಪದವನ್ನು ಅಲಂಕರಿಸಿದ್ದರು. ದರ್ಭಂಗದ ಮಹಾರಾಜರೂ, ಲೆಫ್ಟಿನೆಂಟ ಗವರ್ನರರೂ ಮೊದಲಾದ ದೊಡ್ಡ ದೊಡ್ಡ ಉದ್ಯೋಗಸ್ಥರೂ, ಮಾನ್ಯ ಮಾಲವೀಯ ಮೊದಲಾದ ಮಹನೀಯ ಗೃಹಸ್ಥರೂ ಸಭಾಸ್ಥಾನದಲ್ಲಿ ನೆರೆದಿದ್ದರು. ರೀತಿಯಂತೆ ಅಧ್ಯಕ್ಷರ ಚುನಾವಣೆಯಾದ ಮೇಲೆ ವಿಶ್ವವಿದ್ಯಾಲಯದ ವೈಸ ಚಾನ್ಸಲರರಾದ ಡಾ. ಸುಂದರಲಾಲ ಇವರು ಹಿಂದ್ಯಾ ಸರಕಾರದವರ ಭಾಷಣವನ್ನು ಓದಿ ತೋರಿಸಿದರು. ಅದರ ಸಾರಾಂಶವೇನೆಂದರೆ;—

ಲೋರ್ಡ ಹಾರ್ಡಿಂಜರವರು ಹಿಂದೀ ಜನರಲ್ಲಿ ವಿದ್ಯಾ ಪ್ರಸಾರಕ್ಕಾಗಿ ತಮ್ಮ ಆಳಿಕೆಯಲ್ಲಿ ಉದಾರ ಬುದ್ಧಿಯಿಂದ ಉತ್ತೇಜನವನ್ನು ಕೊಟ್ಟಿರುವುದರಿಂದ ನಾನು

ಅವರಿಗೆ ನನ್ನ ಕೃತಜ್ಞತೆಗಳನ್ನು ಅಂತಃಕರಣ ಪೂರ್ವಕವಾಗಿ ಅರ್ಪಿಸುತ್ತೇನೆ. ಈ ವಿಶ್ವವಿದ್ಯಾಲಯದಂಥ ಒಂದು ವಿಶಿಷ್ಟ ಧರ್ಮಮಾರ್ಗದ ಯುನಿವರ್ಸಿಟಿಯನ್ನು ಸ್ಥಾಪಿಸುವುದರಿಂದ ದೇಶಕ್ಕೆ ಎಷ್ಟು ಪ್ರಯೋಜನಕರವಾದೀತೆಂಬ ಬಗ್ಗೆ ಈ ವರೆಗೆ ಹಲವು ಸಾರಿ ಚರ್ಚೆಯು ಆಗಿ ಹೋಗಿದೆ; ಮತ್ತು ಈ ವಿಶ್ವವಿದ್ಯಾಲಯದ ಕೆಲಸದ ವಿಷಯದಲ್ಲಿ ಇನ್ನೂ ಎಷ್ಟೋ ಜನರಿಗೆ ಸಂಶಯವು ಬರುತ್ತಲೇ ಇದೆ. ಒಂದು ಚಳವಳಿಯ ಕಾರ್ಯಕರ್ತೃತ್ವದ ಸಂಬಂಧದಿಂದಲೂ ಜನರ ಪರಿಣಾಮದ ಸಂಬಂಧದಿಂದಲೂ ಆಲೋಚಿಸುವಾಗ ಮುಖ್ಯವಾಗಿ ಆ ಚಳವಳಿಯ ಪುರಸ್ಕರ್ತೃಗಳ ಎಂದರೆ ಮುಖಂಡರ ಭಾವನೆಗಳಾವವು ಇದನ್ನು ಮೊದಲು ಪರೀಕ್ಷಿಸಬೇಕು. ಬೇರೆ ಬೇರೆ ಧರ್ಮಪಂಥಗಳೊಡನೆ ಸ್ಪರ್ಧೆಯನ್ನು ಹುಟ್ಟಿಸುವುದೋ ಇಲ್ಲವೆ ಅವುಗಳೊಡನೆ ಸಹಕಾರದಿಂದ ದೇಶಹಿತವನ್ನು ಸಾಧಿಸುವುದೋ ಇದೇ ಮುಖ್ಯ ಪ್ರಶ್ನೆಯಾಗಿರುವುದು. ತನ್ನ ಸ್ವಂತ ಉನ್ನತಿಗಾಗಿ ಬೇರೆಯವರೊಡನೆ ವೃಥಾ ಮೇಲಾಟ ಮಾಡುವುದರಿಂದ ಹ್ಯಾಗೆ ದುಷ್ಪರಿಣಾಮವುಂಟಾಗುತ್ತದೆಂಬುದು ಈಗಿನ ಯುರೋಪದ ಯುದ್ಧವೇ ಹೇಳುತ್ತಿದೆ. ನಾವು ಈ ವಿಶ್ವವಿದ್ಯಾಲಯದ ವಿಷಯದಲ್ಲಿ ಯಾವ ಕೆಲಸವನ್ನು ಕೈಕೊಂಡಿರುವೆವೋ ಅದರಲ್ಲಿ ಸ್ಪರ್ಧೆಯ ಅಥವಾ ಮೇಲಾಟದ ಯಾವ ಭಾಗವೂ ಇಲ್ಲೆಂದು ಸ್ಪಷ್ಟವಾಗಿ ಗೊತ್ತಾಗುವುದು. ಸಹಕಾರವೇ ನಮ್ಮ ಧ್ಯೇಯವಾಗಿರುವುದರಿಂದ ಈ ನಮ್ಮ ವಿಶ್ವವಿದ್ಯಾಲಯವು ದೇಶಹಿತಕ್ಕೆ ಉತ್ತಮ ಸಾಹಾಯಕವೇ ಆದೀತೆಂದು ನನಗೆ ಭರವಸೆ ಇದೆ.

ಧಾರ್ಮಿಕ ಶಿಕ್ಷಣವನ್ನು ಕೊಡುವುದು ಈ ಯುನಿವರ್ಸಿಟಿಯ ಒಂದು ಮುಖ್ಯ ಉದ್ದೇಶವಾಗಿದೆ. ಶಾಸ್ತ್ರೀಯ ಜ್ಞಾನವೂ ಧಾರ್ಮಿಕ ಜ್ಞಾನವೂ ಈ ಎರಡರ ಮಿಶ್ರಣವು ಕಿಂಬಹುನಾ ಕೂಟವು ದೇಶಕ್ಕೆ ಲಾಭಕರವಾದೀತೊ ಎಂಬದೊಂದು ಸಂಶಯವು ಅನೇಕರಿಗೆ ಬರುತ್ತಿದೆ; ಆದರೆ ಇತ್ತಿತ್ತ ಶಾಸ್ತ್ರೀಯ ಜ್ಞಾನದ ಒಲವು ಧರ್ಮದ ಕಡೆಗೆನೇ ಹೆಚ್ಚಾಗಿ ಪ್ರವರ್ತಿಸುತ್ತಿದೆ ಮತ್ತು ಶಾಸ್ತ್ರೀಯ ಜ್ಞಾನದಿಂದ ಮನುಷ್ಯನು ಈಗ ಯಾವ ಸಂಗತಿಗಳನ್ನು ಶ್ರದ್ಧೆಯಿಂದ ನಂಬುವನೋ ಅವುಗಳ ಅನುಭವವೇ ಅವನಿಗೆ ಪ್ರತ್ಯಕ್ಷವಾಗಿ ಬರುವುದು. ಅಜ್ಞಾನದ ಪಟಲವು ಈಗ ಬಿಟ್ಟುಹೋಗುತ್ತಿದೆ; ಜ್ಞಾನಸೂರ್ಯನ ಬಾಲಕಿರಣಗಳು ಮೆಲ್ಲಮೆಲ್ಲನೆ ಪಸರಿಸ ಹತ್ತಿವೆ. ಇಂಥಾ ಸಮಯದಲ್ಲಿ ಅಧ್ಯಾತ್ಮಿಕ ಮತ್ತು ಆಧಿಭೌತಿಕ ಈ ಎರಡು ಜ್ಞಾನಗಳು ಸಮ್ಮಿಶ್ರವಾಗಿ ಅವು ಮನುಷ್ಯನ ಆತ್ಯಂತಿಕ ಕಲ್ಯಾಣವನ್ನು ತೋರಿಸಿಕೊಡುವವು. ಈ ವಿಶ್ವವಿದ್ಯಾಲಯದಲ್ಲಿ ಬೇಸಾಯ ಮತ್ತು ಉದ್ಯೋಗ ಶಿಕ್ಷಣ ಇವುಗಳ ವ್ಯವಸ್ಥೆಯು ಆಗಲಿಕ್ಕಿದ್ದದ್ದನ್ನು ತಿಳಿದು ನನಗೆ ಬಹು ಸಂತೋಷವಾಗುತ್ತದೆ. ಮತ್ತು ಈ ಔದ್ಯೋಗಿಕ ಶಿಕ್ಷಣಕ್ಕೆ ಶಾಸ್ತ್ರೀಯ ಶಿಕ್ಷಣದ ಸಹಕಾರವನ್ನೂ ಕೂಡಾ ಸಂಸ್ಥೆಯು ಒದಗಿಸಿಕೊಟ್ಟೀತೆಂದು ನಾನು ಭರವಸೆಪಡುತ್ತೇನೆ. ಗದ್ದೆ ಬೇಸಾಯವೇ ನಮ್ಮ ದೇಶದ ಮುಖ್ಯ ವೃತ್ತಿಯಾಗಿದೆ ಮತ್ತು ಭೂಮಿಯಿಂದ ಉತ್ತಮ ತರದ ಫಲೋತ್ಪತ್ತಿಯನ್ನು ನಾವು ಪಡಕೊಳ್ಳಬೇಕಾದುದು ನ್ಯಾಯವಿದ್ದರೂ ನಮ್ಮ ನಿತ್ಯ ಪ್ರಾಪಂಚಿಕ ವ್ಯವಹಾರದಲ್ಲಿ ೧೦೦ಕ್ಕೆ ೮೦ ವಸ್ತುಗಳನ್ನು ನಮಗೆ ಪರದೇಶದಿಂದ ಕೊಂಡುಕೊಳ್ಳಬೇಕಾಗಿದೆ. ಈಗಿನ ಮಹಾ ಯುದ್ಧವು ನಮ್ಮ ನಷ್ಟಪ್ರಾಯವಾದ ಕೈಗಾರಿಕೆಗಳನ್ನು ಸುಧಾರಿಸಲು ಒಂದು ಉತ್ಕೃಷ್ಟವಾದ ಸಮಯವನ್ನು ತಂದು ಕೊಟ್ಟಿದೆ. ಆದರೆ ನಮ್ಮ ಕೈಗಾರಿಕೆಗಳಿಗೆ ಪುನಃ ಉಚ್ಚಸ್ಥಿತಿಯನ್ನು ತಂದುಕೊಡುವ ವಿಷಯದಲ್ಲಿ ನಮಗಿರಬೇಕಾದ ಜ್ಞಾನವು ಇಲ್ಲದುದರಿಂದ ಈ ಸುಸಮಯವೂ ವ್ಯರ್ಥವಾಗಿ ಹೋಗಿದೆ. ನಮ್ಮ ಈ ವಿಶ್ವವಿದ್ಯಾಲಯದಲ್ಲಿ ಔದ್ಯೋಗಿಕ ಶಿಕ್ಷಣ ಮತ್ತು ಶಾಸ್ತ್ರೀಯ ಜ್ಞಾನ ಇವುಗಳ ಗಂಗಾಯಮುನೆಗಳ ಸಂಯೋಗವುಂಟಾಗುವುದರಿಂದ ಆ ಕುಂದುಕೊರತೆಗಳು ಪೂರ್ಣವಾಗಿ ಹೋಗುವವೆಂದು ನಾನು ನಂಬುತ್ತೇನೆ. 'ಐಕ್ಯ' ಮತ್ತು 'ಸಮಾಜ ಸಂಘಟನೆ' ಈ ಎರಡು ಸಂಗತಿಗಳ ನ್ಯೂನ್ಯತೆಯು ನಮ್ಮ ದೇಶೀಯರಲ್ಲಿ ಇದ್ದುದರಿಂದ ಅನೇಕ ಆಪತ್ತುಗಳು ಇಲ್ಲಿ ತಲೆದೋರಿದವು; ಆದರೆ ಈ ನಮ್ಮ ವಿಶ್ವವಿದ್ಯಾಲಯದಲ್ಲಿ ಅಂಥಾ ದೋಷಗಳೂ ಕೂಡ ತಗ್ಗಿಸಲ್ಪಟ್ಟು ಇಲ್ಲಿ ಬರುವ ತರುಣ ವಿದ್ಯಾರ್ಥಿಗಳಲ್ಲಿ ನಾನು ಹಿಂದು ಅಥವಾ ಮಹಮ್ಮದೀಯನು ಎಂಬೀ ಭಾವನೆಗಿಂತ 'ನಾನು ಹಿಂದೀ' ಎಂಬೀ ಭಾವನೆಯೇ ಹುಟ್ಟೀತೆಂದು ನನ್ನ ದೃಢವಾದ ನಂಬಿಕೆಯು ಇದೆ. ಆದುದರಿಂದ 'ನಾನು ಹಿಂದೀ' ಎಂಬ ಭಾವನೆಗೆ ಪೋಷಕವಾಗುವ ಶಿಕ್ಷಣವನ್ನೇ ಈ ಯುನಿವರ್ಸಿಟಿಯ ಚಾಲಕರು ಇಲ್ಲಿ ಪ್ರಾರಂಭಿಸಬೇಕಾಗಿ ನಾನು ವಿಜ್ಞಾಪಿಸುವೆನು. ಈಗಿನ ಬೇರೆ ಯುನಿವರ್ಸಿಟಿಗಳಲ್ಲಿಯ ಶಿಕ್ಷಣದಲ್ಲಿ ಕೆಲವು ಮಟ್ಟಿಗೆ ದೋಷಗಳಿರಬಹುದು. ಆದರೆ ಆ ಶಿಕ್ಷಣದಿಂದ ದೇಶದ ಅನಹಿತವಾಯಿತೆಂದು ಮಾತ್ರ ಹೇಳಲು ಸಾಧ್ಯವಿಲ್ಲ. ಈಗ ಪ್ರಚಲಿತವಿರುವ ಶಿಕ್ಷಣದಿಂದ ಸ್ವಲ್ಪಮಟ್ಟಿಗೆ ಕಲ್ಯಾಣವಾಗಿದ್ದರೂ ಇಲ್ಲಿಯ ಮತ್ತು ಪಾಶ್ಚಾತ್ಯ ದೇಶಗೊಳೊಳಗಿನ ಶಿಕ್ಷಣ ಕ್ರಮಗಳಲ್ಲಿಯ ವ್ಯತ್ಯಾಸವು ಯಾವುದೆಂಬುವುದು ನಮಗೆ ಈಗ ಗೊತ್ತಾಗಹತ್ತಿದೆ. ಬರೇ ಪುಸ್ತಕ ಜ್ಞಾನದಲ್ಲಿ ಅರ್ಥವಿಲ್ಲ, ವಿದ್ಯಾರ್ಥಿಗಳಲ್ಲಿ ಚಿಕಿತ್ಸಕ ಬುದ್ಧಿಯನ್ನು ಹುಟ್ಟಿಸಿ ಸ್ವತಂತ್ರವಾಗಿ ಎಂದರೆ ತಾವೇ ವಿಚಾರ ಮಾಡುವ ಪಾತ್ರತೆಯನ್ನು ಹುಟ್ಟಿಸುವುದೇ ಶಿಕ್ಷಣದ ಧ್ಯೇಯವಾಗಿದೆ. ಮತ್ತು ಈ ಧ್ಯೇಯಕ್ಕನುಸಾರವಾಗಿಯೇ ಪಾಶ್ಚಾತ್ಯ ದೇಶದಲ್ಲಿ ಅಭ್ಯಾಸ ಕ್ರಮವನ್ನು ಏರ್ಪಡಿಸಿರುವರು. ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಗುರುವಿನ ಸದಾಚರಣೆಯೂ ಪರಿಣಮಿಸುವುದು ಅಗತ್ಯವಿದ್ದ ಕಾರಣ ಅವರೊಳಗೆ ಆದಷ್ಟು ಪರಸ್ಪರ ಸಂಘಟನೆಯು ಆಗುವುದು ಯುಕ್ತವೆಂದು ಪಾಶ್ಚಾತ್ಯರು ಕೂಡ ಈಗ ಅಭಿಪ್ರಾಯಪಟ್ಟಿರುವರು. ಈ ಎಲ್ಲ ಸಂಗತಿಗಳು ನಮ್ಮ ದೇಶೀಯರಿಗೆ ಅಪೂರ್ವವಲ್ಲ; ಇಂಥ ವ್ಯವಸ್ಥೆಗಳನ್ನೇ ಈ ನಮ್ಮ ಸಂಸ್ಥೆಯಲ್ಲಿ ಏರ್ಪಡಿಸುವವರಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಬೇಕೆಂಬ ಕಾರಣವನ್ನಿಟ್ಟುಕೊಳ್ಳದೆ ಈ ವಿಶ್ವವಿದ್ಯಾಲಯದಿಂದ ತೇರ್ಗಡೆ ಹೊಂದುವವರು ಶೀಲದಿಂದ ಉತ್ತಮರಾದವರು ಮತ್ತು ದೇಶಹಿತವೇ ತಮ್ಮ ಹಿತವೆಂದು ನೆನಸುವವರಾಗಿರಬೇಕು. ಈ ವಿಚಾರಸರಣಿಗೆ ಅನುಗುಣವಾದ ಶಿಕ್ಷಣವನ್ನು ~~ಈ~~ ಸಂಸ್ಥೆಯಲ್ಲಿ ಕೊಡುವ ವ್ಯವಸ್ಥೆಯು ಆಗಬೇಕಾಗಿದೆ.

ಈ ಪ್ರಕಾರ ಸುವಿಚಾರ ಪರಿಪ್ಲುತವಾದ ಶಿಂದ್ಯಾ ಮಹಾರಾಜರ ಭಾಷಣವನ್ನು ಓದಿ ತೋರಿಸಿದ ಮೇಲೆ ಡಾ. ಸುಂದರಲಾಲ ಇವರು ಹಿಂದು ಯುನಿವರ್ಸಿಟಿಯ ಸಂಸ್ಥಾಪನೆಯ ವಿಷಯದಲ್ಲಿ ಅವಿಶ್ರಾಂತ ಪರಿಶ್ರಮಪಟ್ಟ ಮಾನ್ಯ ಮಾಲವೀಯ ಮುಂತಾದವರ ಆಭಾರಗಳನ್ನು ಪ್ರದರ್ಶಿಸಿ ಸಂಸ್ಥೆಯ ಫಂಡಿನ ಜಮೆಯನ್ನು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಈ ಸಂಸ್ಥೆಯ ಹತ್ತರ ಈಗ ೫೯,೭೪,೩೩೭ ರುಪಾಯಿಗಳು ಜಮೆ ಇದ್ದು ವಸೂಲಿ ಬರತಕ್ಕ ಹಣವು ಬೇಗನೆ ಅದರ ಕೈಗೆ ಬರುವ ಹಾಗಿದೆ.

ಔದ್ಯೋಗಿಕ ಕಮಿಶನಿನ ವಿಷಯಗಳು.

ಸುಪ್ರಸಿದ್ಧವಾದ 'ವಂಗ ಭಂಗ'ವಾದಂದಿನಿಂದ ಎಂದರೆ ಸುಮಾರು ೧೦ ವರ್ಷಗಳಿಂದ ಹಿಂದೂಸ್ಥಾನದಲ್ಲಿ "ಸ್ವದೇಶಿ" ಚಳವಳವು ಅಸ್ತಿತ್ವದಲ್ಲಿ ಬಂತು. ಈ ಚಳವಳವನ್ನು ದೃಢಮೂಲವಾಡುವುದಕ್ಕಾಗಿ ಮುಖಂಡರು ಯತ್ನಿಸುವಾಗ ವಿದೇಶ ಜೀನಸುಗಳ ಮೇಲೆ ಅವರು ಬಹಿಷ್ಕಾರಯೋಗ"ವನ್ನು ಕೈಕೊಂಡರು. ಆದರೆ ಅಧಿಕಾರಿಗಳಿಗೆ ಇದು ಅಷ್ಟೊಂದು ರುಚಿಸಲಿಲ್ಲ. ಅವರು ಈ ಸ್ವದೇಶಿ ಚಳವಳಿನಲ್ಲಿ ಪ್ರಾಮಾಣಿಕ ಮತ್ತು ಅಪ್ರಾಮಾಣಿಕ ಎಂಬೀ ಎರಡು ಭೇದಗಳನ್ನು ಕಲ್ಪಿಸಿ ಅದರ ಕಡೆಗೆ ಅಧಿಕಾರಿಗಳು ಪ್ರಸನ್ನ ದೃಷ್ಟಿಯಿಂದ ನೋಡಲಿಲ್ಲ. ಮಾತ್ರವಲ್ಲ, ಪ್ರಾಮಾಣಿಕ ಸ್ವದೇಶಿಯ ಅಭಿವೃದ್ಧಿಯು ಕೂಡ ಸಾಗದಂತೆ ಆಯಿತು. ಇದರ ಪರಿಣಾಮವೇನಾಯಿತೆಂದರೆ ಸುರುವಿನ ಉತ್ಸಾಹದಿಂದ ಹೊರಟ ಈ ಚಳವಳವು ಮತ್ತೆ ಕೊಂಚಕೊಂಚ ಮಂದತ್ವವನ್ನು ಹೊಂದಿತು. ಆದರೆ ಈಚೆಗೆ ಯುರೋಪದಲ್ಲಿ ಮಹಾಯುದ್ಧವು ಪ್ರಾರಂಭವಾದಂದಿನಿಂದ ಹಿಂದೂಸ್ಥಾನದ ಔದ್ಯೋಗಿಕ ಪರಿಸ್ಥಿತಿಯ ಕಡೆಗೆ ಸರಕಾರದ ಲಕ್ಷ್ಯವು ಹೋಗಿ ಇಲ್ಲಿ ಔದ್ಯೋಗಿಕ ಪುನರ್ಜೀವನವನ್ನು ಮಾಡುವದರಲ್ಲಿ ನಮ್ಮ ಸರಕಾರವು ಈಗ ಉದ್ಯುಕ್ತನಾಗಿದೆ. ಹತ್ತು ವರ್ಷಗಳ ಹಿಂದೆ ನಮ್ಮ ಜನರು ದೇಶೀಯ ಉದ್ಯೋಗಗಳಿಗೆ ಮತ್ತು ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡಿರಿ, ನಮ್ಮ ನಿತ್ಯ ವ್ಯವಹಾರಗಳಿಗೆ ಬೇಕಾದ [illegible]ವೆಗಳನ್ನು ನಾವೇ ಇಲ್ಲಿ ತಯಾರಿಸಿಕೊಳ್ಳುವೆವು; ಅಪ್ರತಿಬಂಧಕ ವ್ಯಾಪಾರದ ತತ್ವವನ್ನು ಅಂಗೀಕರಿಸಿ ಬೇಕಾದ ಕಡೆಯಲ್ಲಿ ಮಾಲುಗಳಿಗೆ ಹಿಂದೂಸ್ಥಾನದಲ್ಲಿ ನೀವು ಯಥೇಚ್ಛ ಸಂಚರಿಸಲು ಬಿಟ್ಟ ಕಾರಣ ಯಂತ್ರ ಸಾಮಾಗ್ರಿಗಳಿಂದ ತಯಾರಾಗುವ ಪರದೇಶದ 'ನಾಜೂಕ' ಮಾಲುಗಳಿಂದ ನಮ್ಮಲ್ಲಿಯ ಕೈಗಾರಿಕೆಗಳು ಬಿದ್ದು ಹೋದವು ಎಂದು ಹೇಳುವಾಗ ಸರಕಾರಕ್ಕೆ ಅಷ್ಟೊಂದು ಗೊಡವೆ ಇದ್ದಿಲ್ಲ; ಆದರೆ ಈಗ ಅದೇ ಸರಕಾರವು ಹಿಂದೂಸ್ಥಾನದ ಉದ್ಯೋಗ ಕೈಗಾರಿಕೆಗಳಿಗೆ ಹೊಸ ಜೀವನವನ್ನು ತುಂಬಿಸಲು ತೊಡಗಿದೆ. ಇದು ಬಹು ಸಂತೋಷದ ಮಾತೇ ಸರಿ. ಹತ್ತು ವರ್ಷಗಳ ಕಾಲಾವಧಿಯಿಂದಾಗಲಿ ಅಥವಾ ಈ ಮಹಾ ಯುದ್ಧದ ಪ್ರಭಾವದಿಂದಾಗಲಿ ನಮ್ಮ ಸರಕಾರವು ಇಲ್ಲಿಯ ಸ್ವದೇಶಿ ಉದ್ಯೋಗಗಳ ಪ್ರಶ್ನೆಯನ್ನು ಸಹಾನುಭೂತಿ ದೃಷ್ಟಿಯಿಂದ ಕೈಕೊಂಡದನ್ನು ನೋಡಿ ನಮ್ಮ ಸ್ವದೇಶಿ ತತ್ವವು ಈ ರೀತಿಯಿಂದ ವಿಜಯಿ ಆದ ಬಗ್ಗೆ ಯಾರಿಗೆ ತಾನೆ ಸಂತೋಷವಾಗದೆ ಇದ್ದೀತು?

ಸರಕಾರವು ಹಿಂದೂಸ್ಥಾನದ ಔದ್ಯೋಗಿಕ ಪ್ರಶ್ನೆಯನ್ನು ಕೈಕೊಂಡಿದೆಂಬುದು ಮೇಲೆ ಹೇಳಿದೆ. ಮತ್ತು ಇದಕ್ಕಾಗಿ ಅದು ಒಂದು ಔದ್ಯೋಗಿಕ ಕಮಿಶನನ್ನು ನೇಮಿಸಿದೆ. ಈ ಕಮಿಶನು ಬರುವ ಅಕ್ಟೋಬರದಿಂದ ತನ್ನ ಕೆಲಸವನ್ನು ಮಾಡಲು

ಪ್ರಾರಂಭಿಸುವುದು. ಇದರ ಕೆಲಸವು ಸುಲಭವಾಗುವಂತೆ ಅದರ ಕಾರ್ಯವ್ಯಾಪ್ತಿಯನ್ನೂ ನಿಶ್ಚಯಿಸಿ ಪೂರ್ವಸಿದ್ಧತೆಯನ್ನು ಮಾಡುವುದಕ್ಕಾಗಿ ಸರಕಾರವು ಒಂದು ಪ್ರಕಟಣೆ ಪತ್ರಿಕೆಯನ್ನು ಹೊರಡಿಸಿದೆ. ಹಿಂದೂಸ್ಥಾನದಲ್ಲಿ ಕಸರು ಸಾಮಾನುಗಳು ಬೇಕಷ್ಟು ಇದ್ದು ಕೈಗಾರಿಕೆಯ ಚಾತುರ್ಯ ಮತ್ತು ವ್ಯಾಪಾರದ ಬಂಡವಾಳ ಇವು ಸಂಗತಿಗಳಿಗೆ ನ್ಯೂನತೆಯು ಇಲ್ಲವಾದುದರಿಂದ ಧನೋತ್ಪಾದಕವಾದ ನವೀನ ಉದ್ಯೋಗಗಳನ್ನು ಅಭಿವೃದ್ಧಿಗೊಳಿಸುವುದು ಶಕ್ಯವಿದೆಂದು ಆ ಪ್ರಕಟನೆಯ ಪತ್ರಿಕೆಯಲ್ಲಿ ಮೊದಲೇ ಪ್ರಸ್ತಾವನೆಮಾಡಿ ಮುಂದಿನ ಸೂಚನೆಗಳು ಸೂಚಿಸಲ್ಪಟ್ಟಿವೆ. (೧) ಉಪಯೋಗವಿಲ್ಲದೆ ಬಿದ್ದಿರುವ ಭಂಡವಾಳದ ಎಂದರೆ ಮೂಲಧನದ ಉಪಯೋಗವನ್ನು ಮಾಡುವುದು ಹ್ಯಾಗೆ (೨) ದೇಶದಲ್ಲಿ ಕೈಗಾರಿಕೆಯ ಕೌಶಲ್ಯವನ್ನು ಬೆಳಸುವುದು ಹ್ಯಾಗೆ (೩) ಪ್ರಕೃತದಲ್ಲಿರುವ ಉದ್ಯೋಗಗಳ ಸುಧಾರಣೆಗಾಗಿ ಶಾಸ್ತ್ರೀಯ ಶೋಧಗಳನ್ನು ಹ್ಯಾಗೆ ಮಾಡಬಹುದು (೪) ಈ ಶೋಧಗಳ ವಿಷಯವಾಗಿಯೂ ಜಗತ್ತಿನೊಳಗಿನ ಬೇರೆ ನವೀನ ಶೋಧಗಳ ವಿಷಯವಾಗಿಯೂ ಎಲ್ಲ ತರದ ಜ್ಞಾನವನ್ನು ಹ್ಯಾಗೆ ಕೊಡಬಹುದು (೫) ನವೀನ ವ್ಯವಸಾಯ ಮತ್ತು ಸ್ವದೇಶೀ ವಸ್ತುಗಳು ಉತ್ಪತ್ತಿ ಮತ್ತು ಪ್ರಸಾರಣೆಗಾಗಿ ಬೇಕಾದ ಬಂಡವಾಳವನ್ನು ಹ್ಯಾಗೆ ಪೂರೈಸುವುದು ಈ ಐದು ಸಂಗತಿಗಳ ತನಖಿ ಮಾಡುವುದು ಕಮಿಷನಿನ ಕರ್ತವ್ಯವೆಂದು ಆ ಪತ್ರಿಕೆಯಲ್ಲಿ ಹೇಳಿದೆ. ಬರುವ ಅಕಟೋಬರಿನ ಒಳಗೆ, ಇಷ್ಟರವರೆಗೆ "ಔದ್ಯೋಗಿಕ ವಿಚಾರ ಮಂಡಲ"ಗಳು ಇಲ್ಲದ ಕಡೆಯಲ್ಲಿ ಬೇರೆ ಬೇರೆ ಪ್ರಾಂತಿಕ ಸರಕಾರದವರು ಅವುಗಳನ್ನು ಸ್ಥಾಪಿಸಬೇಕೆಂತಲೂ ಆ ಮಂಡಲಗಳು ಬೇರೆ ಬೇರೆ ಕಸರುಬೀನಸುಗಳ ಪಟ್ಟಿಯನ್ನು ತಯಾರಿಸಬೇಕೆಂತಲೂ, ಯಾವ ಯಾವ ಹೊಸ ಕೈಗಾರಿಕೆಗಳನ್ನು ಇಲ್ಲಿ ಏರ್ಪಡಿಸಬಹುದು, ಬೇರೆ ಬೇರೆ ಕಾರಣಗಳಿಂದ ನಿಂತು ಹೋದ ಕಾರಖಾನೆಗಳೂ ಕೈಗಾರಿಕೆಗಳೂ ಯಾವವು ಈ ಎಲ್ಲ ಸಂಗತಿಗಳ ಪಟ್ಟಿಯನ್ನು ತಯಾರಿಸುವಂತೆಯೂ ಆ ಪ್ರಕಟನ ಪತ್ರದಲ್ಲಿ ಸೂಚನೆಗಳಿರುವವು. ಅಲ್ಲದೆ, ಸರಕಾರಿ ಔದ್ಯೋಗಿಕ ಇಲಾಖೆಯ ಅಭಿವೃದ್ಧಿಯನ್ನೂ ವ್ಯವಸ್ಥೆಯನ್ನೂ ಹ್ಯಾಗೆ ಮಾಡಬಹುದೆಂಬದೊಂದು ಮಹತ್ವದ ಪ್ರಶ್ನೆಯನ್ನು ಕಮೀಶನು ವಿಚಾರದಲ್ಲಿ ತೆಕ್ಕೊಳ್ಳುವುದಿದೆ. "ಔದ್ಯೋಗಿಕ ವಿಚಾರ ಮಂಡಲ"ದವರು ಕಮಿಶನಿನೆದುರಿನಲ್ಲಿ ಔದ್ಯೋಗಿಕ ವಿಷಯದ ಸಂಪೂರ್ಣ ಜ್ಞಾನವಿರುವ ಯಾರ ಯಾರನ್ನು ಸಾಕ್ಷಿಗೆ ಕರೆಯಿಸಬೇಕೆಂಬವನ್ನು ಈಗಲೇ ನಿರ್ಣಯಿಸುವವರಿದ್ದಾರೆ. ಪ್ರಾಂತಿಕ ಸರಕಾರಗಳ ಮತ್ತು ಔದ್ಯೋಗಿಕ ಸರಕಾರದ ಔದ್ಯೋಗಿಕ ಇಲಾಖೆಗಳ ಪರಸ್ಪರ ಸಂಬಂಧವು ಹ್ಯಾಗಿರಬೇಕಾದುದು, ಕೈಮಗ್ಗ ಮೊದಲಾದ ಸಣ್ಣ ಸಣ್ಣ ಉದ್ಯೋಗಗಳ ಅಭಿವೃದ್ಧಿಗಾಗಿ ಅಲ್ಲಲ್ಲಿ ಸ್ಥಾನಿಕ ಮಂಡಲಗಳನ್ನು ನೇಮಿಸುವುದೊ ಬೇಡವೋ, ಹಾಗೆಯೆ, ರಸಾಯನ ಶಾಸ್ತ್ರ, ಎಲುಬು ಮತ್ತು ಚರ್ಮಗಳ ಕೈಗಾರಿಕೆ, ಗಾಜನ್ನು ತಯಾರಿಸುವ ಕೃತಿ, ಸಕ್ಕರೆ ಮತ್ತು ಹೆಂಡವನ್ನು ತಯಾರಿಸುವ ಕಾರಖಾನೆ, ಕಾಗದ ಮತ್ತು ಎಣ್ಣೆ ಇವುಗಳ ಕಾರಖಾನೆಗಳು ಹ್ಯಾಗೆ ಏಳಿಗೆಯನ್ನು ಹೊಂದಾವು ಮೊದಲಾದ ಹಲವು ಸಂಗತಿಗಳ ವಿಚಾರಣೆಗಾಗಿ ಒಂದು ಮಧ್ಯವರ್ತಿಯಾದ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಬೇಕೋ ಬೇಡವೋ ಈ ಪ್ರಶ್ನೆಯು ಕೂಡ ಕಮಿಶನಿನಲ್ಲಿ ನಿರ್ಣಯಿಸಲ್ಪಡುವುದು. ಔದ್ಯೋಗಿಕ ಮಾಹಿತಿಯ ಸರಕಾರಿ ಅಂಕೆಗಳೂ ಬೇರೆ ಮಾಹಿತಿಯೂ ಒಂದಕ್ಕೊಂದು ತಾಳೆ ಬೀಳುತ್ತವೋ ಇಲ್ಲವೋ, ಮತ್ತು ಪರಸ್ಪರ ಉಪಯುಕ್ತವಾಗುತ್ತವೋ ಇಲ್ಲವೋ ಇಲ್ಲವಾದರೆ ಇದರುದ್ದಿಶ್ಯ ಒಂದು ಮಾಸಿಕ ಪತ್ರಿಕೆಯನ್ನು ಪ್ರಕಟಿಸಬೇಕೋ ಹ್ಯಾಗೆ ಈ ಸಂಗತಿಗಳು ಅದರಲ್ಲಿ ಕಾಣುತ್ತವೆ. ಸಾರಾಂಶ, ಈ ಔದ್ಯೋಗಿಕ ಕಮಿಶನಿನಲ್ಲಿ ಅನೇಕ ಉಪಯುಕ್ತ ಸಂಗತಿಗಳು ಮತ್ತು ಮಹತ್ವದ ಪ್ರಶ್ನೆಗಳು ಅನೇಕ ವಿಧದಿಂದ ಚರ್ಚಿಸಲ್ಪಡಲಾದಾವೆಂಬುದಕ್ಕೆ ಸಂದೇಹವಿಲ್ಲ. ಆದರೆ ಈ ಎಲ್ಲ ಸಂಗತಿಗಳು ಲೋಕಮತಕ್ಕೆ ಅನುಕೂಲವಾಗಿ ನಿರ್ಣಯಿಸಲ್ಪಟ್ಟು ಸರಕಾರವು ಅವುಗಳನ್ನು ಆ ಕಮಿಶನಿನ ಅಭಿಪ್ರಾಯದಂತೆ—ವ್ಯವಹಾರದಲ್ಲಿ ತಂದರೆ ಮಾತ್ರ ಈ ಕಮಿಶನಿನಿಂದ ನಿಜವಾಗಿ ದೇಶಕ್ಕೆ ಧಾರಾಳವಾಗಿ ಉಪಕಾರವಾದೀತು. ಮತ್ತು ಮೇಲೆ ಹೇಳಿದಂತೆ ನಮ್ಮ "ಸ್ವದೇಶಿ" ಚಳವಳಿಗೆ ಸರಕಾರವು ತಾನಾಗಿಯೇ ಪ್ರೋತ್ಸಾಹನೆಯನ್ನು ಕೊಟ್ಟಂತೆ ಆದೀತು. ಲೋರ್ಡ ಕರ್ಝನ್ನ ಧೊರೆಗಳ ಆಳಿಕೆಯಲ್ಲಿ ಕಮಿಶನುಗಳಿಗೆ ನ್ಯೂನತೆ ಇರಲಿಲ್ಲ. ಫೆಮಿನ್ ಕಮಿಶನ, ಎಜ್ಯುಕೇಶನಲ್ ಕಮಿಶನ, ಆ ಕಮಿಶನ್ ಈ ಕಮಿಶನ ಎಂತ ಸಾಧಾರಣವಾಗಿ ಕಮಿಶನಗಳು ಒಂದು ಡಜನಿಗೂ ಮಿಕ್ಕಿದ್ದವೆಂತ ಕಾಣುತ್ತದೆ. ಆದರೆ ಅವುಗಳ ಉಪಯೋಗ ಮಾತ್ರ ಲೋಕಹಿತದ ದೃಷ್ಟಿಯಿಂದ ಏನೂ ಆಗಲಿಲ್ಲೆಂತ ಹೇಳುವುದು ಅಪ್ರಿಯವಾಗಿದ್ದರೂ ಅಷ್ಟೊಂದು ಆಗಲಿಲ್ಲೆಂಬುದು ಎಲ್ಲರೂ ಒಪ್ಪಿಕೊಳ್ಳತಕ್ಕ ಮಾತೇ ಸರಿ. ಅದು ಹ್ಯಾಗೂ ಇರಲಿ. ಹೋದ ಸಂಗತಿಯು. ಆದರೆ ನಾಳೆ ಬರತಕ್ಕ ಕಮಿಶನು ತನ್ನ ಕರ್ತವ್ಯವನ್ನು ಸಮಾಧಾನಕರವಾಗಿ ಮಾಡಿ ಅದರ ಸೂಚನೆಗಳನ್ನು ಸರಕಾರವು ಜಾರಿಗೆ ತಂದು ಜನರ "ಔದ್ಯೋಗಿಕ ಸ್ವರಾಜ್ಯ"ವನ್ನು ಬಲಪಡಿಸಲು ತಪ್ಪಲಿಕ್ಕಿಲ್ಲೆಂದು ಪ್ರಜೆಗಳ ಕಡೆಯಿಂದ ನಾವು ಪೂರ್ಣ ಭರವಸೆಪಡುತ್ತೇವೆ.

ಪತ್ರವ್ಯವಹಾರ.

ಸ್ವದೇಶಾಭಿಮಾನಿ ಕರ್ತರಿಗೆ,

ಧಾರವಾಡ ವ್ಯವಸಾಯ ಸಂಘದವರ ಪರವಾಗಿ ಪ್ರಕಟಿಸಲ್ಪಡಾಗುವ ಇದೇ ಆಗೋಸ್ತು ತಿಂಗಳ ಮಾಸ ಪತ್ರಿಕೆಯಲ್ಲಿ ಕನ್ನಡಾ ಜಿಲ್ಲೆಯಲ್ಲಿ ಈ ತಿಂಗಳಲ್ಲಿ ನಡೆಯತಕ್ಕ ಬೇಸಾಯದ ಕೆಲಸಗಳ ಕುರಿತು ಒಂದು ಲೇಖವನ್ನು ನವರಿ ಕನ್ನಡಾ ಜಿಲ್ಲೆಯ Agricultaral Overseer ಮಾ| ಎಮ್. ಆರ್. ಗೋಕರ್ಣರವರು ಬರೆದಿರುತ್ತಾರೆ. ಈ ಲೇಖದಲ್ಲಿ ಭತ್ತದ ಗದ್ದೆಗಳಲ್ಲಿ ಕಳೆಗಳನ್ನು ತೆಗಿಯುವ ಕೆಲಸವನ್ನು ಈ ತಿಂಗಳಲ್ಲಿ ಪ್ರಾರಂಭ ಮಾಡಬೇಕೆಂತಲೂ ಕಳೆ ತೆಗಿಯುವ ಮಹತ್ವವು ಹಿಂದಿನ ತಿಂಗಳ ಸಂಚಿಕೆಯಲ್ಲಿ ಹೇಳಲ್ಪಟ್ಟದೆಂತಲೂ, ಈ ಕೆಲಸವನ್ನು ಬೇಗನೇ ತೀರಿಸಿಕೊಳ್ಳಬೇಕೆಂತಲೂ ಇರುತ್ತದೆ. ಇದೇ ಮೇರೆಗೆ ನೆಲಗಡಲೆ, ಕಬ್ಬು, ತೆಂಗು ಮತ್ತು ಏಲಕ್ಕಿ ಕುರಿತು ಕೆಲವು ಸೂಚನೆಗಳು ಇರುತ್ತವೆ. ತೆಂಗಿನ ಗಿಡಗಳಿಗೆ ಶೆಗಣಿ ಹುಳ (ತುಂಬೆ ಹುಳ)ಗಳ ಉಪದ್ರವವು ಕಂಡು ಬಂದರೆ ಆ ಹುಳುಗಳನ್ನು ಕಬ್ಬಿಣದ ದಪ್ಪವಾದ ಮತ್ತು ತುದಿ ಚೂಪಾದ ಸರಿಗೆಯಿಂದ ಚುಚ್ಚಿ ತೆಗೆದು ಹುಳುಗಳು ಕಡಿದ ತೂತುಗಳಲ್ಲಿ ಉಪ್ಪು ನೀರು ಹಾಕಿ ಕೆರೋಸಿನ ಎಣ್ಣೆಯಲ್ಲಿ ಅದ್ದಿದ ಅರಿವೆಯನ್ನು ಇಡಬೇಕು ಎಂತ ಕೂಡಾ ಹೇಳಿರುತ್ತಾರೆ. ಇದಲ್ಲದೆ ತೆಂಗಿನ ಗಿಡಗಳಿಗೆ ಉಪ್ಪಿನ ಗೊಬ್ಬರ ಬೇಕಾದವರು ಸಪ್ಟಂಬರ ಮುಗಿಯುವದರೊಳಗೆ ತನ್ನ ಕಡೆಗೆ ಅರ್ಜಿಮಾಡಿಕೊಳ್ಳಬೇಕು ಎಂತಲೂ ಬರುವ ವರ್ಷಕ್ಕೆ ಪೂನಾ ಮಾದರಿಯ ಬೆಲ್ಲದ ಕೊಪ್ಪರಿಗೆ ಬೇಕಾದವರು ಮುಂಚಿತವಾಗಿಯೇ ಬೇಡಿಕೊಂಡರೆ ಯೋಗ್ಯ ವೇಳೆಯಲ್ಲಿ ತರಿಸಿಕೊಡುವ ವ್ಯವಸ್ಥೆಯನ್ನು ಮಾಡಲಾದೀತು ಎಂತ ಕೂಡಾ ಬರೆದಿರುತ್ತಾರೆ.

ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಇಂಥಾ ಕಾಮದಾರರೇ ಇಲ್ಲ ಮತ್ತು ಇಂಥಾ ವ್ಯವಸ್ಥೆಗಳು ಸರಕಾರದವರು ಮಾಡುತ್ತಾರಾಗಿ ನಮ್ಮ ಜನರಿಗೆ ಗೊತ್ತೇ ಇಲ್ಲಾ. ಆದಕಾರಣ ನಮ್ಮ ಜಿಲ್ಲೆಯಲ್ಲಿ ಕಲೆಕ್ಟರ ದೊರೆಗಳವರಾದರೂ ಈ ಕುರಿತು ಆಗ್ಗಾಗ್ಗೆ ತಮ್ಮ ಜಿಲ್ಲಾ ಗಜೇಟಿನ ಎಲ್ಲಜ ಶೀಟಿನಲ್ಲಿ ಇಂಥಾ ಸಂಗತಿಗಳ ಕುರಿತು ನೋಟೀಸುಗಳನ್ನು ಪ್ರಕಟಿಸಿ ತಾವು ಸಹಾಯಮಾಡುತ್ತೇವೆ ಎಂತ ತೋರಿಸಿದರೆ ಬಡ ಒಕ್ಕಲಿಗರು ಇಂಡಿಯಾ ಸರಕಾರಕ್ಕೆ ಎಷ್ಟೋ ಕೃತಜ್ಞರಾದಾರು.

ಗದಗ
ತಾ. 21—8—16. } ಎಲ್ಲೂರು ಸುಬ್ಬರಾವ.

ಬಡ ಉಪಾಧ್ಯಾಯರ ಗೋಳಾಟ.

ಈಗಿನ ಕಾಲದಲ್ಲಿ ಕಡಮೆ ತಲಬಿನ ಉಪಾಧ್ಯಾಯರ ಜೀವನವು ಎಷ್ಟು ಕಷ್ಟಮಯವಾಗಿರುವುದೆಂಬದು ಹಾಗೆ ಕಡಮೆ ತಲಬಿನಲ್ಲಿ ಜೀವಿಸುವ ಬಡ ನೌಕರರಿಗೆ ಮಾತ್ರ ತಿಳಿಯುವದಲ್ಲದೆ ಅನ್ಯರಿಗೆ ಅದರ ಯಥಾರ್ಥ ಸ್ವರೂಪವು ಅಷ್ಟೊಂದು ಗೋಚರಿಸಲಾರದು. ಅವರಲ್ಲಿಯೂ ಇಂಥಾ ಬಡ ಉಪಾಧ್ಯಾಯರಿಗೆ ಕುಟುಂಬವು ಸ್ವಲ್ಪ ದೊಡ್ಡದಾದರೆ ಅಂಥವರ ಉದರನಿರ್ವಾಹದ ಯೋಚನೆಯು ಮತ್ತಷ್ಟು ದೊಡ್ಡದಾಗಿ ಪರಿಣಮಿಸುವದು. ಇಂಥಾ ಸಂಕಷ್ಟಕರವಾದ ಜೀವನದ ಸರಿಯಾದ ವರ್ಣನೆಯು ಬರಹಮೂಲಕ ವ್ಯಕ್ತಗೊಳಿಸುವದು ಅಸಾಧ್ಯವೆಂದೇ ಹೇಳಬೇಕು. ಹೆಚ್ಚೇಕೆ? ಇಂಥಾ ಉಪಾಧ್ಯಾಯರಿಗೆ ಪ್ರತಿ ತಿಂಗಳಿಗೆ ಬರುವ ಸಂಬಳವು ಸಿಕ್ಕುವರೆ ಒಂದೆರಡು ಯಾ ಕೆಲವು ದಿನಗಳು ಹಿಂದೆ ಬಿದ್ದರೆ ಸಾಲದ ಅಂಗಡಿಗಾರ ಪಿತ್ರಾಯದಿಂದಲೂ ಅವರ ಬಿರುನುಡಿಗಳಿಂದಲೂ ತಪ್ಪಿಸಿಕೊಳ್ಳುವದಕ್ಕೆ ರಾಜದಾರಿಯನ್ನು ಬಿಟ್ಟು ಕುರು ದಾರಿಯಿಂದ ಶಾಲೆಯ ಹಾದಿಯನ್ನು ಹಿಡಿಯಬೇಕಾಗುವದು. ಹೀಗಿರುತ್ತಾ, ದವಸ ಧಾನ್ಯಗಳಿಗೆ ಬೆಲೆ ಏರಿದ್ದರಿಂದ ಲೋಕಲ್ ಫಂಡ ಡಿಸ್ಪೆನ್ಸರಿಗಳ ಕಂಪೌಂಡರರಿಗೆ ಕೂಡಾ ಮುಂಗಾಯಿ ಭತ್ತೆಯನ್ನು ಸೆಂಕ್ಷನ್ ಮಾಡಿರುವಲ್ಲಿ ಬೋರ್ಡ ನೌಕರರಾದ ನಾವು ಮಾತ್ರ ಮೇಲಾಧಿಕಾರಿಗಳ ಕಣ್ಮರೆಯಾದದ್ದು ಬಹಳ ಆಶ್ಚರ್ಯಕರ! ಮಾತ್ರವಲ್ಲ ತುಂಬಾ ವಿಷಾದಕರವೂ ಆಗಿರುವುದು. ಶಾರೀರಕ ಪರಿಶ್ರಮವಾಗಲೀ ಬೌದ್ಧಿಕ ಪರಿಶ್ರಮವಾಗಲೀ ಕಂಪೌಂಡರರಿಗಿಂತ ನಮಗೇನೂ ಕಡಮೆ ಇರುವುದಿಲ್ಲ. ಅದಲ್ಲದೆ ಬಾಜಾರಿನಲ್ಲಿ ದವಸ ಧಾನ್ಯಗಳಾಗಲೀ ಇತರ ಸಾಮಾಗ್ರಿಗಳಾಗಲೀ ಕಂಪೌಂಡರರಿ

ಗಿಂತ ನಮಗೇನೂ ಕಡಮೆ ಬೆಲೆಗೆ ಸಿಗುವುದಿಲ್ಲ. ಹೀಗಿರುತ್ತಾ ನಾವು ಮಾತ್ರ ಮಂಗಾಯಿ ಭತ್ತೆಗೆ ಹ್ಯಾಗೆ ಅಪಾತ್ರವೆಂಬದು ನಮಗೆ ತಿಳಿಯದು. ಗ್ರಾಂಟನೆ ಇಸವಿಯಲ್ಲಿ ಅಂದಷ್ಟೆ ಡಿವಿಜನಲ್ ಆಫೀಸರರು ಬೋರ್ಡ ಪ್ರೆಸಿಡೆಂಟರಾಗಿರುವ ಕಾಲದಲ್ಲಿ ನಮಗೆ ಮಂಗಾಯಿ ಭತ್ತೆ ಸಿಕ್ಕಿರುತ್ತದೆ. ಆದರೆ "ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಾ" ಎಂಬ ಗಾದೆಯಂತೆ ಶ್ರೀಮನ್ ಮಹಾರಾಜ ಚಕ್ರವರ್ತಿಯವರು ಡಿಲ್ಲಿದರಬಾರ ನಲ್ಲಿ ವಿದ್ಯಾ ಸಂಬಂಧವಾಗಿ ೫೦ ಲಕ್ಷ ರೂಪಾಯಿ ಸೆಂಕ್ಷನ್ ಮಾಡಿದಂದಿನಿಂದ ಪ್ರಾಥಮಿಕ ಶಿಕ್ಷಣಕ್ಕೆ ಸರಕಾರದವರಿಂದ ಮುಂಚೆಗಿಂತಲೂ ಹೆಚ್ಚಿನ ದ್ರವ್ಯಸಹಾಯವು ಸಿಕ್ಕುತ್ತವಾದರೂ, ದವಸ ಧಾನ್ಯಗಳಿಗೆ ಮಾತ್ರವಲ್ಲ; ಮಹಾ ಯುದ್ಧದ ದೆಸೆಯಿಂದ ಸಕಲ ಪದಾರ್ಥಗಳಿಗೂ ವಿಪರೀತ ಬೆಲೆಯೇರಿದ ಇಂಥಾ ವಿಷಮಕಾಲದಲ್ಲಿ ಮಂಗಾಯಿ ಭತ್ತೆಗೆ ವಿಮುಖರಾಗುವ ದುರದೃಷ್ಟವು ನಮಗೆ ಈ ವರೇಗೆ ತಪ್ಪಲಿಲ್ಲ. ಇನ್ನಾದರೂ ಮೇಲಾಧಿಕಾರಿಗಳು ಈ ವಿಷಯ ಕರುಣೆಯಿಟ್ಟು ಬೋರ್ಡ ಶಾಲೆಗಳ ೧೫ ರೂಪಾಯಿಗಿಂತ ಕಡಮೆ ತಲಬಿನ ಉಪಾಧ್ಯಾಯರಿಗೆ ಸಹ ಮಂಗಾಯಿ ಭತ್ತೆಯನ್ನು ಕೊಡಿಸುವ ಏರ್ಪಾಡು ಮಾಡುವರಾಗಿ ಹಾರೈಸುವ,

ಬಡ ಉಪಾಧ್ಯಾಯ.

~~~~~~~~

ಅಯ್ಯಾ ಪತ್ರಕರ್ತರೇ,

ಇದೇ ತಿಂಗಳ ತಾರೀಕು ೨೫ರಲ್ಲಿ ಪ್ರಕಟವಾದ ಸ್ವದೇಶಾಭಿಮಾನಿಯ ವರ್ತಮಾನ ಸಂಗ್ರಹವನ್ನು ಓದಿನೋಡಿ ಮುನಿಸಿಪಾಲಿಟಿಯೊಳಗೆ ಮಾಂಸ ಮಾರಾಟದ ಬಗ್ಗೆ ಆಡು ಕುರಿಗಳನ್ನು ಕೊಯ್ಯಬೇಕಾದರೆ ಡಿಸ್ಟ್ರಿಕ್ಟ್ ಆಫೀಸರರಿಂದ ಕೊಯ್ಯತಕ್ಕ ಪಶುಗಳನ್ನು ಪರೀಕ್ಷಿಸಬೇಕೆಂಬ ನಿಯಮವಿದೆ ಎಂತ ತಿಳಕೊಂಡೆ. ಇಂಥಾ ನಿಯಮವಿರುವಾಗ್ಯೆ ಅದಕ್ಕೆ ಪ್ರತಿಕೂಲವಾಗಿ ನಡಕೊಳ್ಳುವಂಥಾದ್ದು ಶುದ್ಧ ತಪ್ಪು, ಈ ಒಂದೇ ತಪ್ಪಲ್ಲದೆ ನಿರಖಿನ ಬೆಲೆಗಿಂತಲೂ ಕಡಿಮೆ ದರದಲ್ಲಿ ವಿಕ್ರಯಿಸಿ ನಷ್ಟಪಡಕೊಳ್ಳುವಂಥಾದ್ದು ಶುದ್ಧ ಹುಚ್ಚು; ಆದರೂ ಇವೆರಡಕ್ಕಿಂತಲೂ ಕೊಳೆತ ಮಾಂಸವನ್ನು ಮಾರಾಟ ಮಾಡುವದು ಮಹಾ ದೋಷ; ನೀವು ಇಂಥಾ ಕೃತ್ಯವನ್ನು ಸರ್ವರ ತಿಳುವಳಿಕೆಗೆ ತಂದನಂತರ ನಿಯಮಕ್ಕನುಸಾರವಾಗಿ ನಡಿಯುವ, ವ್ಯಾಪಾರಿಗಳ ಗುಣಾವಗುಣಗಳನ್ನು ಈ ವರೆಗೂ ಯಾರೊಬ್ಬರು ಮನಸ್ಸಿಗೆ ತಂದುಕೊಳ್ಳದೆ ಅಲಕ್ಷ್ಯಭಾವದಿಂದ ಮೌನವ್ರತಧಾರಿಗಳಾಗಿರುವದನ್ನು ಕಂಡಾಗ್ಯೆ ಆಶ್ಚರ್ಯವಾಗುತ್ತದೆ.

ನಿಯಮಕ್ಕನುಸಾರವಾಗಿ ಕೊಯ್ಯಲ್ಪಡುವ ಪಶುಗಳ ಮಾಂಸವು ನಿರಖಿನ ಬೆಲೆಗಿಂತಲೂ ಜಾಸ್ತಿಯಾಗಿ ವಿಕ್ರಯಿಸಲ್ಪಟ್ಟು ೧ನೇ ತರಗತಿಯ ಮಾಂಸವೆಂತ ಜನರಿಗೆ ಮೋಸಗೊಳಿಸುವದು, ಒಣಗಿ ಬಡಕಲಾದ ಕುರಿ ಆಡುಗಳ ಮಾಂಸವನ್ನು ಬಹಿರಂಗವಾದ ಸ್ಥಳದಲ್ಲಿ ಮಾರಾಟ ಮಾಡಿ ಎಷ್ಟು ಬೆಂಕಿ ಉರಿಸಿದರೂ ಬೇಯದ ನಾರು ಮಾಂಸಗಳನ್ನು ವಿಕ್ರಯಿಸುವದೂ ಮುಂಚಿನ ದಿನ ಕೊಯಿದ ಮಾಂಸವು ಮಾರಾಟವಾಗದೆ ಉಳಿದುಹೋದ ಪಕ್ಷ ಹೊಸ ಮಾಂಸದೊಂದಿಗೆ ಬೆರಿಕೆ ಮಾಡಿ ಮಾರಾಟ ಮಾಡುವದೂ ಪದ್ಧತಿ ಎಂಬಂತೆ ಇರುವಾಗ್ಯೆ ಇದಕ್ಕೆ ಈ ವರೆಗೆ ಯಾವದೊಂದು ವಿಧದ ನಿಯಮಗಳನ್ನೂ ಏರ್ಪಡಿಸಲಿಲ್ಲವೆಂದು ಕಾಣುತ್ತದ, ಮನೆ ಮನೆಗೆ ಯಾವನೊಬ್ಬನು ಮಾರಾಟಕ್ಕೆ ತಂದಪಕ್ಷ ಅದು ನಾರುವ ಮಾಂಸ, ಮಾರ್ಕೆಟನಲ್ಲಿ ಅಂಥವುಗಳು ಮಾರಾಟವಾದ ಪಕ್ಷ ನಿಯಮಕ್ಕನುಸಾರವಾಗಿ ಪರಿಶೋಧಿಸಿ ಕೊಯ್ಯಲ್ಪಟ್ಟ ಮಾಂಸವಾಗುವದೊ? ಆಡಿನ ಮಾಂಸವನ್ನು ಕುರಿ ಮಾಂಸವೆಂತಲೂ, ಎರಡನೇ ತರಗತಿಯ ಮಾಂಸವನ್ನು ಒಂದನೇ ತರಗತಿಯ ಮಾಂಸವೆಂತಲೂ ಏನೂ ಪರೀಕ್ಷೆ ಗೊತ್ತಿಲ್ಲದ ಅನೇಕರನ್ನೂ ಹಳ್ಳಿಪಳ್ಳಿಗಳಿಂದ ಬರುವ ಜನರನ್ನೂ ಮೋಸಗೊಳಿಸಿ ವಿಕ್ರಯಿಸುವ ಸಂಗತಿಗಳು ಮಾರ್ಕೆಟಿನ ಒಳಗೆ ಎಷ್ಟಾಗುತ್ತದೆಂಬದನ್ನು ವಿಚಾರಿಸದೆ, ಇಲ್ಲವೇ ಅದಕ್ಕೆ ತಕ್ಕ ಕ್ರಮಪಡಿಸದೆ ಇರುವದರಿಂದ ಪ್ರಜೆಗಳ ಕ್ಷೇಮಕ್ಕೂ, ಧನಕ್ಕೂ ಎಷ್ಟು ಹಾನಿಯಾಗುತ್ತದೆಂಬದನ್ನು ಲಕ್ಷಿಸದೆ ಹೋಗುವಂಥಾದ್ದು ಪ್ರಜೆಗಳಿಗೆ ವ್ಯಸನವಲ್ಲದೆ ಮುನಿಸಿಪಾಲಿಟಿಯ ಗೌರವಕ್ಕೂ ಹಾನಿಯಲ್ಲವೊ?

ಇನ್ನೂ ಅದೇ ಮಾರ್ಕೆಟಿನ ಒಳಗೆ ನಿಂತು ನಿಯಮಕ್ಕನುಸಾರವಾಗಿ ಮಾರಾಟವಾಗುವ ಮೀನುಗಳ ಅವಸ್ಥೆಯನ್ನು ನೋಡುವ ಪಕ್ಷ ಮೀನುಗಳ ಬೆಲೆಯೆಂತೂ ಚಿನ್ನದ ಬೆಲೆಯಾಗಿದೆ, ಅಷ್ಟು ಬೆಲೆ ಕೊಟ್ಟು ಮನೆಗೆ ಸೈದಲ್ಲಿ ಅದು ಕೊಳೆತು ನಾರುತ್ತದೆ, ಕೊಳೆತ ಮೀನುಗಳನ್ನು ನೀರಿನಲ್ಲಿ ತೊಳೆದು ತೊಳೆದು ಬೆಳಗಿಸಿ, ಜನರನ್ನು ಮೋಸಗೊಳಿಸುವಾಗ್ಯೆ ಅವರನ್ನು ಹೊರಪಡಿಸುವ ಜನರೇ ಇಲ್ಲ. ಇಷ್ಟು ಸಾಲದಕ್ಕೆ ಕೊಳೆಯದ ಮೀನನ್ನು ಕ್ರಯಕ್ಕೆ ಇತರರಿಂದ ಪಡಕೊಂಡು ತನ್ನ ಬಳಿ ಇರುವ ಮೀನಿಗೆ ಕೊಳೆತ ಮೀನನ್ನು ಬೆರಸಿ ಮೋಸಪಡಿಸುವದಕ್ಕೆ ದಿಕ್ಕಿಲ್ಲ; ಒಂದುವೇಳೆ ಮಾರ್ಕೆಟಿನಿಂದ ಹೊರಪಡಿಸಿದರೆ ಅದೇ ಮೀನುಗಳನ್ನು ಕುದ್ರೋಳಿಗೆ ಇಲ್ಲವೇ ಬಪ್ಪಿಗೆ ಕೊಂಡುಹೋಗಿ ಮಾರಿದರೆ ಅಲ್ಲಿ ಅವರನ್ನು ಕೇಳುವವರೇ ಇಲ್ಲ; ಇಂಥಾ ದುರ್ವ್ಯಾಪಾರಗಳಿಂದ ರೋಗಾದಿಗಳು ಜನರಲ್ಲಿ ಪ್ರವೇಶಿಸಿ ಕ್ಷೇಮಕ್ಕೆ ಹಾನಿ ಉಂಟಾಗುವಾಗ್ಯೆ ಸೆನಿಟರಿ ಆಫೀಸರುಗಳು ತಮ್ಮ ಕರ್ತವ್ಯಗಳನ್ನು ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿಯೂ ಜನರಿಗೆ ವಂಚನೆಯುಂಟಾಗದಂತೆಯೂ ವ್ಯಕ್ತಗೊಳಿಸುವದು ಪ್ರಜಾಚಿಂತನೆಯ ಕಾರ್ಯವಲ್ಲವೋ?

ಕಡೆಗೆ, ಕಾಯಿಪಲ್ಯ ಮಾರಾಟಮಾಡುವ ಸ್ಥಳವನ್ನು ಸಂದರ್ಶಿಸಿದರೆ ಹುಳಬಿದ್ದ ಕಾಯಿಪಲ್ಯ; ಬಾಡಿಹೋದ ಕಾಯಿಪಲ್ಯ; ನೀರಿನಲ್ಲಿ ಮುಳುಗಿಸಿ ಹಸಿಮಾಡಿಟ್ಟ ಕಾಯಿಪಲ್ಯ; ಬೆಳೆದು ಹೋಗಿ ಪಲ್ಯಮಾಡಲಯೋಗ್ಯವುಳ್ಳ ಕಾಯಿಪಲ್ಯಗಳು ಎಷ್ಟು ಜನರನ್ನು ಮನೆನೋಯಿಸುತ್ತದೆಂಬದನ್ನು ಹೇಳಿ ತೀರದು. ಆದುದರಿಂದ ಈ ಸಂಗತಿಗಳನ್ನು ಮಾನ್ಯ ಮುನಿಸಿಪಾಲಿಟಿಯ ಅಧಿಕಾರಸ್ಥರು ತಮ್ಮ ಮನಕ್ಕೆ ತಂದುಕೊಂಡು, ಪ್ರಜಾ ಕ್ಷೇಮವನ್ನು ಸಂವೃದ್ಧಿಪಡಿಸಿ ಕೀರ್ತಿಯನ್ನು ಪಡಕೊಳ್ಳುವಂತೆ ಸಾಹಸಪಡುವರೆಂಬ ಅಭಿಲಾಷೆಯಿಂದ ಈ ವಿಷಯವನ್ನು ಶ್ರುತಪಡಿಸುವ.

ಪ್ರಜಾಭಿಮಾನಿ.

~~~~~~~~

ಇದೇನಪ್ಪಾ ಅಕ್ಕಿಧಾರಣೆ!

~~~~~~~~

ಪತ್ರಾಧಿಪರೇ,

ಏಳು ದುಡ್ಡು ಕೊಟ್ಟರೂ ಅಕ್ಕಿಯ ಸೇರೊಂದಕ್ಕೆ ಸಾಕಾಗುವುದಿಲ್ಲ. ಬಡವರು ಬಹಳ ಗೋಳಾಡುತ್ತಿದ್ದಾರೆ. ದಾಸ್ತಾನು ಅಕ್ಕಿ ಇರುವದಿಲ್ಲವೋ ಅಥವಾ ದಾಸ್ತಾನು ಕಡಿಮೆ ಇರುವದೆಂದು ವರ್ಗದಾರರೂ, ವ್ಯಾಪಾರಸ್ಥರೂ, ತಮ್ಮಲ್ಲಿರುವ ಅಕ್ಕಿಯನ್ನು ವಿಕ್ರಯಕ್ಕೆ ಹೊರಗೆ ಹಾಕದೆ ಹೀಗೆ ಕ್ರಯವೇರಿ ಇರುವದೋ ಏನೆಂಬದು ಒಂದೂ ತಿಳಿಯದು. ಪರಶುರಾಮಸೃಷ್ಟಿಯ ಈ ಜಿಲ್ಲೆಯಲ್ಲಿ ಕ್ಷಾಮ ಬರಲಿಕ್ಕಿಲ್ಲವೆಂತ ಗಾದೆ ಇದ್ದರೂ ಒಬ್ಬ ಸ್ನೇಹಿತರು ಹೇಳಿರುವಂತೆ ಇಲ್ಲಿ ನಿತ್ಯ ದಾರಿದ್ರ್ಯವಿರುವದು. ಅಕ್ಕಿಬೆಳೆಯು ಕಳೆದ ವರುಷದ್ದು ಕಡಿಮೆ ಎಂದು ಹೇಳುವರು. ಕಡಿಮೆಯಾಗಿದ್ದರೂ ಅದು ನಮ್ಮ ಜಿಲ್ಲೆಯಲ್ಲಿಯೇ ಉಳಿದದ್ದಾದರೆ ಅಕ್ಕಿಮುಡಿ ೧ಕ್ಕೆ ರೂ. ೬ರಂತೆ ಕ್ರಯವಾಗಬಹುದಿತ್ತು. ಅಹಾ! ರೈಲ್ವೆ, ಹಡಗ ಇವೆಲ್ಲವನ್ನು ಶಪಿಸಿ ಬಿಡುವ ಎಂತ ಹೊಟ್ಟೆ ಉರಿ ಎದ್ದಾಗ ತೋರುತ್ತದೆ. ಆದರೆ ಜಗತ್ತಿನ ಸಮಸ್ತ ಎಡೆಗಳಲ್ಲಿಯೂ ವ್ಯಾಪಿಸಿರುವಂಥ ವಯ್ಯೋಣ ಸೌಕರ್ಯಗಳನ್ನು ಶಪಿಸಿ ಪುರುಷಾರ್ಥವೇನು? ಇನ್ನು ಯಾರನ್ನು ದೂರಲಿ, ಬೆಳೆ ಬೆಳೆಸುವ ಕೃಷಿಕನನ್ನೋ, ಅಲ್ಲ, ಅಲ್ಲ,—ಆತನೇ ನಮ್ಮೆಲ್ಲವರ ಪೈಕಿ ಇದ್ದ ಕಾಳನ್ನು ಧನಿಗೆ ಗೇಣಿಯಾಗಿ ಕೊಟ್ಟು ಕಾಸಿಲ್ಲದೆ ಓದರುತ್ತಿರುವನು. ಮತ್ತೆ ಯಾರನ್ನು?—ಗೇಣಿ ವಸೂಲು ಮಾಡಿ ತುಪ್ಪೆ ಹಾಕಿಟ್ಟು ಧಾರಣೆಯು ಏರಲೆಂದು ಕಾಯುತ್ತಿರುವ ವರ್ಗದಾರನನ್ನೋ, ಅಥವಾ ಹಲವು ಮಂಜಿಗಳಿದ್ದು, ಬೇರೇನೂ ಸರಕು ಪರಬಂದರಗಳಿಗೆ ಕಳುಹಿಸಿಕೊಡಲಿಕ್ಕಿಂದೆ ಮಂಜಿ ಚಲಾವಣೆ ಬಗ್ಗೆ ಅಕ್ಕಿಯನ್ನು ಪರಬಂದರಕ್ಕೆ ಕಳುಹಿಸಿಕೊಟ್ಟು ಈಗ ಅಕ್ಕಿಧಾರಣೆಯು ಏರಿದ್ದು ನೋಡಿ ಬೆರಳು ಕಚ್ಚುತ್ತಿರುವ ಸಾಹುಕಾರರನ್ನೋ, ಇವರಲ್ಲಿ ಅಪರಾಧಿಗಳು ಯಾರು?

ಏನೂ ಯೋಚಿಸದೆ ಹೇಳುವದಾದರೆ ಯಾರ ಅಪರಾಧವೂ ಇಲ್ಲವೆಂತ ಹೇಳಬಹುದು. ಲೋಕದ ಇತರ ಎಲ್ಲಾ ಅವಸ್ಥೆಗಳೊಂದಿಗೆ ದರಿದ್ರಾವಸ್ಥೆಯೊಂದು ಇದ್ದದ್ದೆ ಅಪರಾಧವು! ಆದರೆ ವ್ಯಾಪಾರಸ್ಥರಿಗೂ ವರ್ಗದಾರರಿಗೂ ಒಂದು ವಿಜ್ಞಾಪನೆಯನ್ನು ಮಾಡಿ ಪರರ ಕೇಡು ತನ್ನ ಕೇಡೇ ಆಗಿರುವದೆಂಬ ಮಾತು ಈ ಕಾಲದಲ್ಲಿಯೂ ಸತ್ಯವಾಗಿದೆಯೋ ಎಂತ ಕೈಜೋಡಿಸಿ ಕೇಳುವೆನು.

ಸಾಹುಕಾರರೇ, ಈ ಜಿಲ್ಲೆಯಲ್ಲಿ ಸರಾಸರಿ ಅಕ್ಕಿಯು ವರುಷ ಒಂದಕ್ಕೆ ಎಷ್ಟು ಪೈದಾಸ್ತು ಆಗುವದು? ಅಕ್ಕಿ ಸಾಹುಕಾರರೇ, ನಿಮ್ಮಲ್ಲಿ ಎಷ್ಟು ಜನರು ಈ ಪ್ರಶ್ನೆಗೆ ಉತ್ತರ ಕೊಡಲು ಶಕ್ತರಾಗಿರುವರು? ಗೋವೆ, ಅಮೀನುದೀವಿಗಳು, ಮಲೆಬಾರು ಈ ಪ್ರಾಂತ್ಯಗಳಿಗಲ್ಲದೆ ಮತ್ತಾವ ಪ್ರಾಂತ್ಯಗಳಿಗೆ ಇಲ್ಲಿಂದ ಅಕ್ಕಿ ಹೋಗುವದು? ಸಾಮಾನ್ಯ ಕಾಲಗಳಲ್ಲಿ ಆ ಪ್ರಾಂತ್ಯಗಳಿಗೆ ಅಕ್ಕಿ ಹೋಗುವಂಥಾದ್ದು ಎಷ್ಟು? ಬರ ಮೊದಲಾದವು ಪ್ರಾಪ್ತವಾದ ವಿಶೇಷ ಕಾಲದಲ್ಲಿ ಇಲ್ಲಿಂದ ಹೋಗುವ ಅಕ್ಕಿ ಎಷ್ಟು? ಗೋವೆ, ಅಮೀನದೀವಿ, ಮಲೆಬಾರು ಈ ಕಡೆಗಳಲ್ಲಿ ಅಕ್ಕಿಯು ಬೇಕಾಗುವ ಕಾಲ, ಬೇಕಾಗಿರುವಂಥಾದ್ದು ಎಷ್ಟು? ಎಷ್ಟು ಜನರು ಕಳುಹಿಸಿಕೊಡುತ್ತಿದ್ದಾರೆ? ರೈಲು ಮಾರ್ಗದ ಸಂಬಂಧ, ಮತ್ತು ಹಡಗ ಮಾರ್ಗಗಳ ಸಂಬಂಧ—ಇವುಗಳು ಈ ಜಿಲ್ಲೆಗೆ ಪ್ರಾಪ್ತವಾಗುವ ಮೊದಲು ಹ್ಯಾಗೆ ವ್ಯಾಪಾರ ನಡಿಸುತ್ತಿದ್ದರೋ ಅದೇ ರೀತಿಯಲ್ಲಿ ಈಗಲೂ ನಮ್ಮ ವ್ಯಾಪಾರಿಗಳು ವ್ಯಾಪಾರವನ್ನು ನಡಿಸುತ್ತಿದ್ದಾರೆ. ನಮ್ಮ ಜಿಲ್ಲೆಯ ಜನರಿಗೆ ಉಪಯುಕ್ತವಾದ ಅಕ್ಕಿಯು ಇತರ ಯಾವ ಪ್ರಾಂತ್ಯಗಳಲ್ಲಿ ದೊರಕುತ್ತದೆ? ಇದೊಂದೂ ಗೊತ್ತಿಲ್ಲದ ಕಾರಣ ಗೋವೆ ಮೊದಲಾದ ಕಡೆಗಳಲ್ಲಿ ಕ್ರಯವಿಲ್ಲದೆ ನಮ್ಮಲ್ಲಿಯ ಸಾವಿರಾರು ಮುಡಿಗಳು ದಾಸ್ತಾನು ಬಿದ್ದಿರುವಾಗ ನಾವು ಇಲ್ಲಿ ಉಪವಾಸ ಮಾಡುವ ಸಂಭವಗಳು ಪ್ರಾಪ್ತವಾಗುತ್ತಿವೆ. ಅಕ್ಕಿಧಾರಣೆಯು ಏರಿದ್ದು ಈ ಕಾರಣದಿಂದಲೋ ಹೇಳಿರಿ.

(ಈ ಲೇಖದ ಬಾಕಿ ಅಂಶವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು).

~~~~~~~~

ಯೂರೋಪದ ಮಹಾ ಯುದ್ಧ.

ಫ್ರೆಂಚರೂ ಬ್ರಿಟಿಷರೂ ಪಶ್ಚಿಮ ರಣರಂಗದಲ್ಲಿ ಜರ್ಮನರು ಗೆದ್ದುಕೊಂಡ ಸ್ಥಳಗಳನ್ನು ಹಿಂದಕ್ಕೆ ಪಡೆದುಕೊಳ್ಳುವದೊಂದೇ ಉದ್ದೇಶವನ್ನು ಹಿಡಕೊಂಡಿರುವದಿಲ್ಲ. ಜರ್ಮನರನ್ನು ಈ ರಣರಂಗದಲ್ಲಿ ಪೂರ್ಣವಾಗಿ ಸೋಲಿಸಿಬಿಡಬೇಕೆಂಬದೇ ಫ್ರೆಂಚ ಮತ್ತು ಬ್ರಿಟಿಷರ ಉದ್ದೇಶವಾಗಿದೆ. ಈ ಬಗ್ಗೆ ಮಿತ್ರರು ಹಲವು ಸಾಧನೆಗಳನ್ನು ಮಾಡುತ್ತಿದ್ದಾರೆ. ಅತ್ತಕಡೆ ಜರ್ಮನರ ಮತ್ತು ಆಸ್ಟ್ರಿಯನರ ಬಲವು ದಿನೇದಿನೇ ಕುಂದುತ್ತಿದೆ. ಆಸ್ಟ್ರೀಯವನ್ನು ನೋಡುವದಾದರೆ ಇವರ ಸೇನೆಯನ್ನು ಒಡೆದುಬಿಡುವ ಕಾಲವು ಸಮೀಪಿಸಿದಂತಿದೆ. ಜರ್ಮನಿಯಾದರೋ ಈಗಲೀಗ ತನ್ನ ರಣರಂಗದ ವಿಸ್ತೀರ್ಣವನ್ನು ಕಡಿಮೆಮಾಡುತ್ತಾ ಬರುತ್ತಿದೆ. ಆಸ್ಟ್ರಿಯನರಿಗೆ ಸಹಾಯಕ್ಕೆ ತಮ್ಮ ಸೇನಿಕರನ್ನು ಕಳುಹಿಸುವಹಾಗೆ ತೋರಬರುವದಿಲ್ಲ. ಇದನ್ನೆಲ್ಲಾ ಆಲೋಚಿಸುವಾಗ ಶತ್ರುರಾಷ್ಟ್ರಗಳ ಸೇನಾಬಲವು ಕುಂದುತ್ತಾ ಬರುತ್ತಿದೆಂತಲೇ ಭಾವಿಸಬೇಕಾಗಿದೆ.

ಪಶ್ಚಿಮ ರಣರಂಗ.

ಬ್ರಿಟಿಷರು ಗುಲ್ಲಿಮೊಂಟಿಯಲ್ಲಿರುವ ಶತ್ರುಗಳ ಸೇನೆಯ ಮೇಲೆ ಭೀಕರವಾದ ಗುಂಡುಗಳನ್ನು ಸುರಿಸಿದರೂ ಅಲ್ಲಿದ್ದ ಶತ್ರುಸೇನಿಕರು ಇನ್ನೂ ಎದುರಾಡುತ್ತಿದ್ದಾರೆ. ಬ್ರಿಟಿಷರು ಪುನಃ ಪೋಜಿಯರ್ಸಿನಲ್ಲಿ ಕೆಲವು ಪ್ರಾಂತ್ಯಗಳನ್ನು ಗೆದ್ದುಕೊಂಡಿರುವರು. ಜರ್ಮನರು ಅತಿ ರೋಷಾವೇಶದಿಂದ ಫಿರಂಗಿಗಳನ್ನು ಹಾರಿಸಿ ಅಭಿಯೋಗ ಮಾಡುತ್ತಿರುವನಾದರೂ ಬ್ರಿಟಿಷರು ಗೆದ್ದುಕೊಂಡ ಸ್ಥಳಗಳನ್ನು ಎಲ್ಲಾ ಕಡೆಯಲ್ಲಿ ತಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಂಡಿರುವರು. ಬ್ರಿಟಿಷರು ಶತ್ರುಗಳನ್ನು ಹಿಂದೂಡುತ್ತಿರುವದು ಮಾತ್ರವಲ್ಲ; ಶತ್ರುಗಳ ಫಿರಂಗಿಗಳ ನೆಲೆಗಳನ್ನು ಸ್ವಾಧೀನಮಾಡಿಕೊಳ್ಳುತ್ತಿದ್ದಾರೆ. ಈ ಕಾರಣದಿಂದ ಶತ್ರುಗಳು ತಮ್ಮ ಬತ್ತೇರಿಗಳನ್ನು ಮತ್ತಷ್ಟು ಹಿಂದಕ್ಕೆ ತಕ್ಕೊಂಡುಹೋಗಿರುವರು. ಬ್ರಿಟಿಷರು ನುಗ್ಗಿಹೋಗಿ ಕದನ ಮಾಡಲಾರಂಭಿಸಿ ಈಗ ೫೦ ದಿವಸಗಳು ದಾಟಿದವು. ಆದರೆ ಒಂದು ಕಡೆಯಲ್ಲಿಯೂ ಹಿಂದೆ ಸರಿದಿರುವದಿಲ್ಲ. ಗುಲ್ಲಿಮೊಂಟ್ ಸ್ಟೇಶನ್ ಮತ್ತು ಕ್ವೇರಿಯ ಮಧ್ಯೆ ಬ್ರಿಟಿಷರು ಗೆದ್ದುಕೊಂಡ ಸ್ಥಳಗಳನ್ನು ಹಿಂದಕ್ಕೆ ಪಡೆಯಲು ಶತ್ರುಗಳು ಭಗೀರಥ ಪ್ರಯತ್ನಮಾಡಿ ಸೋತುಬಿಟ್ಟಿದರು. ನಂತರ ಪುನಃ ಬ್ರಿಟಿಷ ಸೇನಾನೆಲೆಗಳಿಗೆ ಫಿರಂಗಿಗಳನ್ನು ಹಾರಿಸಿದರು. ಥಿಪಾವೆಲಿನ ದಕ್ಷಿಣದಲ್ಲಿ ಶತ್ರುಗಳ ಕಂದಕಗಳನ್ನು ಬ್ರಿಟಿಷರು ಸ್ವಾಧೀನಮಾಡಿಕೊಂಡಿರುವರು.

ಥಿಯಾಮೊಂಟ್, ಫ್ಲುರೆಯಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಫ್ರೆಂಚರು ಸ್ವಾಧೀನಮಾಡಿಕೊಂಡ ನೆಲೆಗಳ ಮೇಲೆ ಶತ್ರುಗಳು ಭೀಕರವಾದ ಗುಂಡಿನ ಮಳೆಯನ್ನು ಸುರಿದರು. ಫ್ರೆಂಚರು ಇಲ್ಲಿ ೨೫೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಸೊಮ್ಮೆಯ ಉತ್ತರದಲ್ಲಿ ಫ್ರೆಂಚರು ಮೊರೆಪಾಸ್ ಪ್ರಾಂತ್ಯದ ಮೇಲೆ ಅಭಿಯೋಗಮಾಡಿ ಒಂದೇ ಸಾರಿ ನುಗ್ಗಿಹೋಗಿ ಆ ಗ್ರಾಮದ ಒಂದಾಂಶವನ್ನೂ ಶತ್ರುಗಳ ಕೆಲವು ಕಂದಕಗಳನ್ನೂ ಸ್ವಾಧೀನಮಾಡಿಕೊಂಡರು. ೨೦೦ ಶತ್ರುಸೇನಿಕರು ಫ್ರೆಂಚರ ಸೆರೆಬಿದ್ದರು. ದಿನ್ನೆ ೧೨೧ರ ಬಳಿ ಶತ್ರುಗಳು ಅಭಿಯೋಗಮಾಡಿ ಪೂರ್ಣವಾಗಿ ಸೋತುಹೋದರು.

೧೩ಯು ಒಡೆದ ಬ್ರಿಟಿಷ ಸೇನಿಕರಲ್ಲಿ ಶೇಕಡಾ ೭೫ರಂತೆ ಗುಣಹೊಂದಿ ಪುನಃ ರಣರಂಗಕ್ಕೆ ಹೋಗಲು ತಯಾರಿರುವರು.

ಬ್ರಿಟಿಷರು ಸೊಮ್ಮೆಯಲ್ಲಿ ಎಡೆಬಿಡದೆ ಮುಂದರಿದುದರಿಂದ ಅವರ ಪ್ರಥಮ ಉದ್ದೇಶವು ನೆರವೇರಿದಂತಾಯಿತು. ಅಂದರೆ ಗುಲ್ಲಿಮೊಂಟ್, ಗಿಂಚಿ, ಮಾಂಟ್‌ಪುಬ್, ಕೋರ್ಸಲೆಟ್ಟೆ, ಮತ್ತು ಥಿಪಾವಲ್ ಗ್ರಾಮಗಳು ಬ್ರಿಟಿಷರ ಸ್ವಾಧೀನವಾದವು.

ಲೊಂಗ್‌ವಾಲ್ ಫ್ಲೆರ್ಸ್ ರಸ್ತೆಯಲ್ಲಿ ಬ್ರಿಟಿಷರು ಕೆಲವು ನೂರು ಗಜ ಮುಂದರಿದಿರುವರು. ಬಲಕಡೆಯಲ್ಲಿ ಮೋರ್‌ಪಾಸಿನಲ್ಲಿರುವ ಫ್ರೆಂಚಸೇನೆಗೆ ಬ್ರಿಟಿಷ ಸೇನೆಯು ಕೂಡಿರುವದು. ಡೆಲ್‌ವ್ವಿಲ್ಲೆ ಅರಣ್ಯದ ಪೂರ್ವ ಪಶ್ಚಿಮದಲ್ಲಿ ಕಠಿಣ ಕಾಳಗವು ನಡಿಯುತ್ತಿದೆ. ಇಲ್ಲಿ ಬ್ರಿಟಿಷರು ೮ ಆಫೀಸರರನ್ನೂ ೧೯೯ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ಅದಲ್ಲದೆ ೬೦೦ ಗಜದಷ್ಟು ದೂರದವರೆಗಿನ ಕಂದಕಗಳೂ ಬ್ರಿಟಿಷರ ಸ್ವಾಧೀನವಾಗಿರುವದು. ರಾತ್ರಿಕಾಲ ಬ್ರಿಟಿಷರು ಕೆಲವು ಕಡೆಯಲ್ಲಿ ದಾಳಿಮಾಡಿ ಅಲ್ಲಿಯೂ ಜಯಪ್ರದರಾಗಿರುವರು. ಮಾರ್ಟಿನ್ ಫಾರ್ಮಿನಬಳಿಯೂ ಬ್ರಿಟಿಷರು ಮುಂದರಿದಿರುವರು. ಶತ್ರುಗಳು ಡೆಲ್‌ವ್ವಿಲ್ಲೆ ಅರಣ್ಯದ ಉತ್ತರದಲ್ಲಿ ಮತ್ತು ಫ್ಲುಮೆಟ್ಸ್ ಅರಣ್ಯದಲ್ಲಿ ತೀಕ್ಷ್ಣವಾಗಿ ಫಿರಂಗಿಗಳನ್ನು ಹಾರಿಸುತ್ತಲಿದ್ದಾರೆ. ಇಲ್ಲಿ ಬ್ರಿಟಿಷರು ೬೬ ಮಂದಿಯನ್ನು ಸೆರೆಹಿಡಿದಿರುವರು. ಬ್ರಿಟಿಷರ ವಾಯುನಾವೆಗಳು ಯುದ್ಧ ಸಂಬಂಧವಾದ ಪ್ರಾಮುಖ್ಯ ಸ್ಥಳಗಳಮೇಲೆ ಬೊಂಬುಗಳನ್ನು ಎಸೆದಿರುವವು.

ಬೆಜಂಟಿನ್-ಲೆ ಪೆಟಿಟಿನಲ್ಲಿ ಹೆಚ್ಚಿಗೆ ೨೦೦ ಗಜ ಕಂದಕಗಳು ಬ್ರಿಟಿಷರಿಗೆ ಸ್ವಾಧೀನವಾಗಿವೆ. ಹೆಚ್ಚಿಗೆ ೭ ಯಂತ್ರಚಾಲಿತ ಫಿರಂಗಿಗಳೂ ಬ್ರಿಟಿಷರಿಗೆ ದೊರಕಿರುತ್ತವೆ.

ಜರ್ಮನರು ಸೊಮ್ಮೆಯಲ್ಲಿ ಗುಂಡುಹಾರಿಸುತ್ತಲಿದ್ದಾರೆ. ೬೦೦ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುವರು. ಕೆಲವು ಕಡೆಯಲ್ಲಿ ದಾಳಿಮಾಡಿದ ಶತ್ರುಗಳು ಹಿಂದಟ್ಟಲ್ಪಟ್ಟಿರುವರು.

ವೆರ್ಡನ್ ರಣರಂಗದಲ್ಲಿ ಆಗಾಗ್ಯೆ ದಾಳಿಮಾಡುತ್ತಿರುವ ಜರ್ಮನರು ಸೋತುಹೋಗುತ್ತಲಿದ್ದಾರೆ. ಇಲ್ಲಿ ಜರ್ಮನರ ಹನ್ನೆರಡು ವಾಯುನಾವೆಗಳನ್ನು ಫ್ರೆಂಚರು ಒಂದೇ ದಿನದಲ್ಲಿ ಕೆಡವಿಹಾಕಿರುವರು. ಥಿಯಾಮೊಂಟ್ ಫ್ಲುರೆ ಪ್ರಾಂತ್ಯದಲ್ಲಿ ತೋಪುಕಾಳಗವು ಅತಿ ತೀಕ್ಷ್ಣವಾಗಿರುವದು. ಚಾಫ್ಸ್ ಅರಣ್ಯದ ಮೇಲೆ ಜರ್ಮನರು ಮೂರಾವರ್ತಿ ಹಲ್ಲೆಮಾಡಿದರು. ಆದರೆ ಫ್ರೆಂಚರು ಪ್ರತಿಸಾರಿಯೂ ಅವರನ್ನು ಅವರ ಕಂದಕಗಳಿಗೆ ಹಿಂದೆ ಓಡಿಸಿದರು. ಬ್ರಿಟಿಷ ಫ್ರೆಂಚ ಸೇನಿಕರು ಈ ರಣರಂಗದಲ್ಲಿ ಅತಿ ವೀರಾವೇಶದಿಂದ ಯಾವದನ್ನೂ ಗಣ್ಯಮಾಡದೆ ಹೊಸ ರೀತಿಯಿಂದ ಮುಂದರಿದು ಶತ್ರುಗಳನ್ನು ದಿಗಿಲುಪಡಿಸುತ್ತಲಿದ್ದಾರೆ.

ಪೂರ್ವ ರಣರಂಗದಲ್ಲಿ.

ಬ್ರೋಡಿಯ ದಕ್ಷಿಣದಲ್ಲಿ ನುಗ್ಗಿಬಂದ ಶತ್ರುಗಳನ್ನು ರುಶ್ಯನರು ಎಲ್ಲೆಲ್ಲಿಯೂ ಹಿಂದಟ್ಟಿರುತ್ತಾರೆ. ಕೊವರ್ಲ ಪರ್ವತದ ದಕ್ಷಿಣ ಮತ್ತು ಉತ್ತರದಲ್ಲಿರುವ ಎರಡು ದಿನ್ನೆಗಳು ರುಶ್ಯನರಿಗೆ ವಶವಾಗಿವೆ. ಈ ಪರ್ವತವು ಹಂಗೇರಿಯ ಸರಹದ್ದಿನಲ್ಲಿದೆ. ಸ್ಟೊಕೊಡಿನ ಪಶ್ಚಿಮ ಕರಾವಳಿಯಲ್ಲಿ ಶತ್ರುಗಳ ಹಿಮ್ಮೆಟ್ಟಿರುವರು.

ಇಟಲಿ.

ಟೊಫಾನ ಮತ್ತು ಟ್ರಿವನಾನ್ಸ್ ಕಣಿವೆಗಳ ಪಶ್ಚಿಮ ಪ್ರಾಂತ್ಯದಲ್ಲಿದ್ದ ಶತ್ರುಗಳ ಬಲವಾದ ಸೇನಾನೆಲೆಗಳನ್ನು ಇಟಲಿಯನರು ಗೆದ್ದುಕೊಂಡಿರುತ್ತಾರೆ. ಶತ್ರುಗಳಿಗೆ ವಿಶೇಷ ನಷ್ಟವಾಗಿದೆ. ಪೊಸಿರೆನಿಕ ಕಣಿವೆಗಳ ಮೇಲೆ ಇದ್ದ ಶತ್ರುಗಳ ನೆಲೆಗಳೂ ಇಟಲಿಯನರ ಸ್ವಾಧೀನವಾಗಿರುವವು. ಶತ್ರುಗಳು ಪುನಃ ಅಭಿಯೋಗ ಮಾಡಿ ಅವನ್ನು ಗೆದ್ದುಕೊಳ್ಳಬೇಕೆಂದು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ.

ರುಶ್ಯಾ—ಟರ್ಕಿ.

ಕೌಕಾಸಸ್ ರಣರಂಗದಲ್ಲಿ ಟರ್ಕಿಯವರು ರುಶ್ಯನರ ಮೇಲೆ ನುಗ್ಗಿ ಕದನಮಾಡಲು ಯತ್ನಿಸಿದರು. ಆದರೆ ರುಶ್ಯನರು ಟರ್ಕಿಯವರನ್ನು ಹಿಂದಕ್ಕೆ ಓಡಿಸಿದರು.

ರುಶ್ಯನರು ಮುಶ್ ಪ್ರಾಂತ್ಯವನ್ನು ಪುನಃ ಗೆದ್ದುಕೊಂಡು ೨೩೦೦ ಟರ್ಕಿ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ರುಶ್ಯನರು ವಾನ್‌ಸರೋವರ ಪ್ರಾಂತ್ಯದಲ್ಲಿ ಮುಂದರಿಯುತ್ತಲಿದ್ದಾರೆ. ಮೌಸುಲಿನ ಬಳಿ ರುಶ್ಯನರು ಶತ್ರುಗಳ ಎರಡು ರೆಜಿಮೆಂಟ್ ಸೇನೆಗಳನ್ನು ಸೆರೆಹಿಡಿದಿರುವರು.

ಎಜ್ಜಿಂಗಾನ್ ಪ್ರಾಂತ್ಯದಲ್ಲಿ ಶತ್ರುಗಳ ೧೩—೧೬ ಡಿವಿಜನ್ ಸೇನೆಗಳೂ ಸುಮಾರು ಎರಡು ಸೇನಾಂಗಗಳು ವಾನ್ ಸರೋವರದ ಬಳಿಯೂ ೪—೬ ಡಿವಿಜನ್ ಸೇನೆಗಳು ಮೆಸಪಟೋಮಿಯದಲ್ಲಿಯೂ ಇರುವವೆಂದು ರುಶ್ಯನರು ಅಂದಾಜು ಮಾಡಿರುತ್ತಾರೆ.

ಕೌಕಾಸಸಿನ ಟರ್ಕಿ ಸೇನೆಗಳು ಬೇಗನೇ ಸೋತುಹೋಗುವ ಸ್ಥಿತಿಯಲ್ಲಿದೆ. ಡಿಕಾಬೇರಿನಲ್ಲಿ ರುಶ್ಯನರು ಶತ್ರುಗಳನ್ನು ಸೋಲಿಸಿರುವರು.

ಬಾಲ್ಕಾನ್.

ಇಟಲಿ ಮತ್ತು ರುಶ್ಯನರ ಸೇನೆಗಳು ಫ್ರೆಂಚ ಬ್ರಿಟಿಷರಿಗೆ ಸಹಾಯ್ಯಮಾಡುವರೆ ಸಲೋನಿಕದಲ್ಲಿ ಹೋಗಿ ಇಳಿದಿರುತ್ತವೆ. ಇಟಲಿ ಮತ್ತು ರುಶ್ಯನರ ಇನ್ನೂ ಕೆಲವು ಸೇನಾಂಗಗಳು ಸದ್ಯದಲ್ಲೇ ಸಲೋನಿಕಕ್ಕೆ ಬರುವದರಲ್ಲಿದೆ. ಹೀಗೆ ಸಲೋನಿಕದಲ್ಲಿ ಮಿತ್ರಪಕ್ಷದವರೆಲ್ಲರ ಸೇನೆಗಳು ಕೂಡಿದ್ದರಿಂದ ಬೇಗನೇ ಇಲ್ಲಿ ದೊಡ್ಡ ಕದನವು ನಡಿಯಬಹುದು.

ಮಿತ್ರ ಸೇನಿಕರು ಸ್ಟ್ರುಮ ಸರಹದ್ದಿನಲ್ಲಿ ರೈಲ್ವೇ ಸಂಕವನ್ನು ಮುರಿದು ಹಾಕಿರುತ್ತಾರೆ.

ಸರ್ವಿಯಕ ಸೇನಾನೆಲೆಯ ಎಡಪಾರ್ಶ್ವದಲ್ಲಿ ಕದನ ನಡೆಯುತ್ತಿದೆ. ಸರ್ವಿಯನರು ಬಲ್ಗೇರಿಯನರನ್ನು ಹಿಂದಕ್ಕೆ ಓಡಿಸಿ ಸ್ಟ್ರುಪಿನೋದ ಕಡೆ ಮುಂದರಿಯುತ್ತಲಿದ್ದಾರೆ.

ಡೌಲಿ ಮತ್ತು ಡ್ಯೊರಾನ್ ಸರಹದ್ದಿನಲ್ಲಿ ಶತ್ರುಗಳು ಇದ್ದಾರೆ. ಸ್ಟ್ರುಮ ಸರಹದ್ದಿನಲ್ಲಿ ಶತ್ರುಗಳನ್ನು ಕಂದಕಗಳನ್ನು ತೋಡಿ ಬಲಕಾಯಿಸುತ್ತಲಿರುವರು.

ಡ್ಯೊರಾನ್ ಸರೋವರದ ಪೂರ್ವದಲ್ಲಿ ವೆಲಿಸ್ ಪರ್ವತ ಮತ್ತು ವೊಗ್ಗೆನ್ಸಿಯ ನದಿಯ ಮಧ್ಯೆ ಬ್ರಿಟಿಷರು ಗೆದ್ದುಕೊಂಡ ಎಲ್ಲಾ ಸ್ಥಳದಳನ್ನು ಬಲಕಾಯಿಸುತ್ತಿದ್ದಾರೆ. ಡ್ಯೊರಾನ್ ಸರಹದ್ದಿನಲ್ಲಿ ತೋಪುಕಾಳಗವು ನಡೆಯುತ್ತಿದೆ. ನದಿಯ ಎಡದಡದಲ್ಲಿ ಕಂದಕಗಳಲ್ಲಿದ್ದ ಶತ್ರುಗಳನ್ನು ಮಿತ್ರಸೇನಿಕರು ಚದರಿಸಿಬಿಟ್ಟಿರುತ್ತಾರೆ. ಡ್ಯೊರಾನ್ ಪ್ರಾಂತ್ಯದ ಪಾಲ್ಮಿ ಎಂಬಲ್ಲಿ ಮಿತ್ರರು ಗೆದ್ದುಕೊಂಡ ನೆಲೆಗಳನ್ನು ಹಿಂದಕ್ಕೆ ಪಡೆಯಲು ಶತ್ರುಗಳು ಪ್ರಯತ್ನಿಸಿ ಸೋತುಹೋಗಿರುವರು. ಮೊಜೆಲೀನಿಸಿಯ ಪರ್ವತ ಪ್ರದೇಶದಲ್ಲಿ ಸರ್ವಿಯನರು ನುಗ್ಗಿಹೋಗಿ ಕದನ ಮಾಡುತ್ತಲಿದ್ದಾರೆ.

ತಾ. ೨೩ರಲ್ಲು ಮಿತ್ರರು ೩ ಸೇತುವೆಗಳನ್ನು ಮುರಿದು ಹಾಕಿರುತ್ತಾರೆ. ತಾ. ೨೫ರಲ್ಲು ಶತ್ರುಗಳು ಎಂಜೆಸ್ಟ ನದಿಯ ಬಳಿ ಮುಂದರಿಯಲಿಕ್ಕಿದ್ದಾಗ ಮಿತ್ರರು ಹಲವು ಸೇತುವೆಗಳನ್ನು ಮುರಿದು ಹಾಕಿರುತ್ತಾರೆ. ಬಲ್ಗೇರಿಯನರು ಇನ್ನೂ ಕಾವಲ್ಲ ಮತ್ತು ಡ್ರಾಮದ ಮೇಲೆ ಅಭಿಯೋಗ ಮಾಡಲಿಲ್ಲ. ಇಲ್ಲಿ ಗ್ರೀಕ ಸೇನಿಕರಿದ್ದಾರೆ. ವೆಲಿಸ್ ಪರ್ವತ ಮತ್ತು ಡ್ಯೊರಾನ್ ಸರೋವರದ ಬಳಿ ಮಾತ್ರ ಸಣ್ಣ ಕದನಗಳು ನಡೆಯುತ್ತಿವೆ. ಬಸ್ಟ್ರೋವೊ ಸರೋವರದ ಬಳಿ ಸರ್ವಿಯಾನರು ನೂರಾರು ಬಲ್ಗೇರಿಯನ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಇಲ್ಲಿ ಸರ್ವಿಯಾನರು ಶತ್ರುಗಳನ್ನು ಅರ್ಧ ಮೈಲುಗಳ ವರೆಗೆ ಹಿಂದಕ್ಕೆ ಓಡಿಸಿಕೊಂಡು ಹೋಗಿರುವರು. ಬಲ್ಗೇರಿಯಾನರಿಗೆ ಇಲ್ಲಿ ವಿಶೇಷ ನಷ್ಟವಾಗಿರುವದು. ಈ ಪ್ರಾಂತ್ಯದಲ್ಲಿ ಕಠಿಣ ಕಾಳಗಗಳು ನಡೆಯುತ್ತಲಿವೆ. ಈ ವರೆಗೆ ಬಂದ ವಾರ್ತೆಯಿಂದ ಮಿತ್ರಸೇನಿಕರಿಗೆನೇ ಎಲ್ಲಾ ಕಡೆಗಳಲ್ಲಿ ಜಯವಾಗಿರುವದೆಂತ ತಿಳಿದು ಬರುತ್ತದೆ.

ಪೂರ್ವ ಆಫ್ರಿಕ.

ಬ್ರಿಟಿಷರು ಕಿಲೋಸ ಎಂಬ ಶತ್ರುಗಳ ಪ್ರಾಂತ್ಯವನ್ನು ನುಗ್ಗಿರುತ್ತಾರೆ. ಕದನವು ರಾತ್ರಿ ಹಗಲು ನಡೆಯುತ್ತದೆ. ಕಿಲೋಸವು ಬ್ರಿಟಿಷರ ಸ್ವಾಧೀನವಾಗಿರುತ್ತದೆ. ಶತ್ರುಗಳು ಪಟ್ಟಣವನ್ನು ಬಿಟ್ಟು ಹೋಗಿರುವರು.

ವಾಯುನಾವೆಗಳ ದಾಳಿ.

ಶತ್ರುಗಳ ಕೆಲವು ವಾಯುನಾವೆಗಳು ಇಂಗ್ಲಾಂಡಿನ ಪೂರ್ವ ಮತ್ತು ತೆಂಕಣಿಡಲು ಕರಾವಳಿಯನ್ನು ದಾಟ ಮಧ್ಯ ರಾತ್ರಿ ಈ ಪ್ರಾಂತ್ಯಗಳಲ್ಲಿ ಕೆಲವು ಬೊಂಬುಗಳನ್ನು ಹಾಕಿರುತ್ತವೆ.

ಒಟ್ಟಿಗೆ ೬ ವಾಯುನಾವೆಗಳು ಇದ್ದವು. ಒಂದು ಮಾತ್ರ ಕರಾವಳಿಯಿಂದ ಸ್ವಲ್ಪ ದೂರದವರೆಗೆ ಬಂದಿರುತ್ತದೆ. ೯ ಮಂದಿಗೆ ಗಾಯವಾಗಿದೆ. ಕೆಲವರು ಮೋದಂಡ ಸ್ಥಿತಿಯಲ್ಲಿದ್ದಾರೆ. ಉಂಟಾದ ನಷ್ಟ ಅಷ್ಟೊಂದು ದೊಡ್ಡದಲ್ಲ. ಈ ವಾಯುನಾವೆಗಳು ಮಧ್ಯರಾತ್ರಿ ಮತ್ತು ಬೆಳಗ್ಗೆ ೩ ಘಂಟೆಯಕಾಲ ಕಾಣಿಸಿಕೊಂಡಿರುವವು. ೨ ಮನೆಗಳು ನಾಶವಾಗಿರುವವು. ಒಂದು ರೈಲ್ವೆ ಸ್ಟೇಶನೂ ಕೆಲವು ಮನೆಗಳೂ ಜಖಂ ಹೊಂದಿರುವವು. ೨ ಕುದುರೆಗಳು ಹತವಾಗಿರುವವು.

ಶತ್ರುಗಳ ಒಂದು ನಾವೆಯು ಲಂಡನಿನ ಆಜುಬಾಜಿಗೆ ಬಂದು ೪೦ ಸಿಡಿಮದ್ದುಗಳನ್ನು ಬಿಸಾಡಿರುತ್ತವೆ. ೩ ಗಂಡಸರು, ೩ ಹೆಂಗಸರು, ೨ ಮಕ್ಕಳು ಹತರಾಗಿರುತ್ತಾರೆ. ೩ ಗಂಡಸರು, ೪ ಹೆಂಗಸರು ಕಠಿಣ ಜಖಂ ಹೊಂದಿರುತ್ತಾರೆ. ೪ ಗಂಡಸರು, ೭ ಹೆಂಗಸರು, ೩ ಮಕ್ಕಳು ಸಾಧಾರಣ ಜಖಂ ಹೊಂದಿರುವರು. ವಿದ್ಯುಚ್ಛಕ್ತಿಯ ಸ್ಟೇಶನು ಮತ್ತು ಇಂಜಿನಿಯರಿಂಗ್ ಕೆಲಸ ಮಾಡುವ ಸ್ಥಳಗಳು ಬೆಂಕಿಯಿಂದ ಹಾಳಾಗಿರುತ್ತವೆ. ಒಟ್ಟಿಗೆ ೧೦೦ ಬೊಂಬುಗಳು ಹಾಕಲ್ಪಟ್ಟಿರುವವು ಎಂತ ಪ್ರಕಟವಾಗಿರುವದು.

ಬ್ರಿಟಿಷರ ೨ ವಾಯುನಾವೆಗಳು ನಾಮೂರಿನ ಬಳಿ ಶತ್ರುಗಳ ವಾಯುನಾವೆಗಳ ಸೆಡ್ಡುಗಳ ಮೇಲೆ ಬೊಂಬುಗಳನ್ನು ಹಾಕಿ ಬಂದಿರುತ್ತವೆ. ಒಂದು ವಾಯುನಾವೆಯು ಮಾತ್ರ ಹಿಂತಿರುಗಲಿಲ್ಲ.

ಜಲಾಂತರ್ಗಾಮಿ ನಾವೆಗಳು.

ಬ್ರಿಟಿಷರ "ಡ್ಯೂಕ್ ಆಫ್ ಅಲ್ಬಾನಿ" ಎಂಬ ಸಹಾಯಕ ಸ್ವಿನ್ನ ಇದ್ದ ನಾವೆಯನ್ನು ಉತ್ತರ ಕಡಲಲ್ಲಿ ಜರ್ಮನರು ಮುಳುಗಿಸಿರುತ್ತಾರೆ. ೨೪ ಮಂದಿ ಮುಳುಗಿಹೋಗಿರುವರು. ಉಳಿದ ಮಂದಿ ರಕ್ಷಿಸಲ್ಪಟ್ಟಿರುವರು.

ಉತ್ತರ ಹಿಂದೂಸ್ಥಾನ.

೧೯೧೨ನೇ ಇಸವಿಯಲ್ಲಿ ನೇಮಿಸಲ್ಪಟ್ಟ ಹಿಂದೂಸ್ಥಾನದ ರಾಜಕಿಯೋದ್ಯೋಗ ಕಮಿಷನಿನವರು ತಕ್ಕ ಕಾಲದಲ್ಲಿ ತಮ್ಮ ರಿಪೋರ್ಟನ್ನು ಚಕ್ರವರ್ತಿಯವರಿಗೆ ಒಪ್ಪಿಸಿದ್ದರು. ಆದರೆ ಯುದ್ಧ ಸಂಬಂಧ ತೊಡಗಿದ ನಾಸಿಂ ತೊಂದರೆಗಳಿಂದ ಈ ಕಮಿಷನಿನವರು ಕೊಟ್ಟ ಕೆಲವು ಸಲಹೆಗಳನ್ನು ಪ್ರಕಟಿಸುವದರಿಂದ ವರ್ತಮಾನ ಪತ್ರಿಕೆಗಳಲ್ಲಿಯೂ ಇತರ ಕಡೆಗಳಲ್ಲಿಯೂ ಅನೇಕ ವಾದವಿವಾದಗಳು ಹುಟ್ಟಬಹುದೆಂಬದರಿಂದ ಕಮಿಷನಿನ ರಿಪೋರ್ಟನ್ನು ಪ್ರಕಟಿಸದೆ ಹಾಗೆಯೇ ಸದ್ಯಾ ಹಿಂದಕ್ಕಿಡೋಣಾಗಿತ್ತು. ಈಗ ಯುದ್ಧದ ಅವಧಿಯು ಇನ್ನೂ ಮುಗಿಯದಿರುವದರಿಂದ ಕಮಿಷನಿನ ವರದಿಯಲ್ಲಿ ತೋರುವ ರಾಜಕಿಯೋದ್ಯೋಗಗಳಿಗೆ ಹಿಂದೀ ಜನರನ್ನು ಹೆಚ್ಚೆಚ್ಚಾಗಿ ಸೇರಿಸುವ ಸಂಬಂಧದ ವಿಷಯುವನ್ನು ಸದ್ಯದಲ್ಲಿಯೇ ಪ್ರಕಟಿಸಬಹುದೆಂತ ಬ್ರಿಟಿಷ ಸರಕಾರದವರು ನಿರ್ಧರಿಸಿರುವರು.

~~~

ಮುಂಬಾಯಿಯ ಪ್ರಖ್ಯಾತರಾದ ಒನರೆಬಲ್ ದಾಜಿ ಆಬಾಜಿ ಖರೆ ಎಲ್. ಎಲ್. ಬಿಯವರು ಪಕ್ಷವಾತ ರೋಗದಿಂದ ಇದೇ ತಾ. ೨೨ರಲ್ಲು ಕಾಲವಾದರು. ಮಾನ್ಯ ಖರೆಯವರು ಮುಂಬಾಯಿಯ ಹ್ಯಾಕೋರ್ಟಿನಲ್ಲಿ ಪ್ರಮುಖರಾದ ವಕೀಲರು, ರಾಷ್ಟ್ರೀಯ ಸಭೆಯಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸಿದವರು. ಕೆಲವು ವರ್ಷ ರಾಷ್ಟ್ರಿಯ ಸಭೆಯ ಸೆಕ್ರಟರಿಗಳಾಗಿಯೂ ಇದ್ದರು. ಆರು ವರುಷಗಳ ಹಿಂದೆ ಮುಂಬಾಯಿ ಪ್ರಾಂತಿಕ ಸಭೆಯ ಅಧ್ಯಕ್ಷರಾಗಿದ್ದರು. ರಾಷ್ಟ್ರೀಯ ಸಭೆಯು ಕಡೇಸಾರಿ ಮುಂಬಾಯಲ್ಲಿ ಕೂಡಿದ್ದಾಗ ಈ ಸಭೆಯ ಕಾರ್ಯನಿರ್ವಾಹಕ ಮೆಂಬರರಾಗಿದ್ದು ಈ ಸಭೆಯು ಫಲಕಾರಿಯಾಗುವಂತೆ ಬಹಳ ಸಾಹಸಪಟ್ಟಿದ್ದರು. ಮಾನ್ಯ ಖರೆಯವರು ಸೌಮ್ಯ ಪಕ್ಷದವರಾದರೂ ಮಾನ್ಯ ತಿಲಕರವರ ಪರಮ ಮಿತ್ರರು. ತಿಲಕರವರ ಮೇಲೆ ಆದ ಮೊಕದಮೆಗಳಲ್ಲೆಲ್ಲಾ ಮಾನ್ಯ ಖರೆಯವರೇ ತಿಲಕರ ಕಡೆಯ ವಕ್ಕೀಲರಾಗಿದ್ದರು. ಈಚೆಗೆ ತಾನೇ ಇವರು ಮುಂಬಾಯಿ ಮುನ್ಸಿಪಾಲಿಟಿಯ ಪರವಾಗಿ ಮುಂಬಾಯಿ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟಿದ್ದರು. ಇವರ ಮರಣದಿಂದ ಮುಂಬಾಯಲ್ಲಿ ವಿಶೇಷ ದುಃಖಕ್ಕೆ ಕಾರಣವಾಗಿದೆ.

~~~

ರೈಲ್ವೇಗಾಡಿಗಳಲ್ಲಿ ೩ನೇ ತರಗತಿಯ ಸಾಮಾನ್ಯ ಪ್ರಯಾಣಿಕರಿಗೆ ಆಗುವ ಸಂಕಷ್ಟಗಳೂ ಯುರೋಪಿಯಾನರಿಗಾಗಿ ಕಂಪಾರ್ಟಮೆಂಟಗಳನ್ನು ರಿಜರ್ವ ಮಾಡಿ ಇತರ ಸಾಮಾನ್ಯ ಪ್ರಯಾಣಿಕರಿಗೆ ಕಂಪೆನಿಯ ನೌಕರರು ಕೊಡುವ ತೊಂದರೆಗಳು ದಿನೇ ದಿನೇ ಹೆಚ್ಚಾಗುತ್ತಲೇ ಇದೆ ಎಂಬದು ಈಚೆಗೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳಿಂದ ತಿಳಿಯ ಬರುತ್ತದೆ. ತಾ. ೨೦ರಲ್ಲು ಮುಂಬಾಯಿಯಲ್ಲಿ ೧೦ ಹಿಂದೀ ಪ್ರಯಾಣಿಕರು "ಯುರೋಪಿಯಾನರಿಗೆ ರಿಜರ್ವ ಮಾಡಲ್ಪಟ್ಟಿದೆ" ಎಂದು ಬರೆಯಲ್ಪಟ್ಟಿರುವ ಗಾಡಿಯೊಳಗೆ ನುಗ್ಗಿದರು. ಆ ಗಾಡಿಯೊಳಗಿದ್ದ ಒಬ್ಬ ಯುರೋಪಿಯನ ಪ್ರಯಾಣಿಕನು ರೈಲ್ವೇ ಗಾರ್ಡನಿಗೆ ದೂರುಕೊಟ್ಟಲ್ಲಿ ರೈಲ್ವೆ ಗಾರ್ಡನು ಹಿಂದೀ ಪ್ರಯಾಣಿಕರನ್ನು ಕೆಳಗಿಳಿಯ ಹೇಳಿದನು. ಆದರೆ ಅವರು ಇಳಿಯಲಿಲ್ಲವಾದುದರಿಂದ ಗಾರ್ಡನು ಸ್ಟೇಶನುಮಾಸ್ತರರ ಹತ್ತಿರ ಹೇಳಿದನು. ಸ್ಟೇಶನುಮಾಸ್ತರರು ತಾನು ಈ ವಿವಾದಕ್ಕೆ ಪ್ರವೇಶಿಸುವದಿಲ್ಲವೆಂದು ಹೇಳಿದ್ದರಿಂದ ಗಾರ್ಡನು ಕಂಪಾರ್ಟಮೆಂಟಿನ ಬಾಗಲಿಗೆ ಬೀಗ ಹಾಕಿ ಹೋಗಿಬಿಟ್ಟನು. ಆಗ್ಗಾಡಿಯು ಬೋರಿ ಬಂದರಕ್ಕೆ ಬರುತ್ತಲೇ, ಗಾರ್ಡನು ಆ ಕಂಪಾರ್ಟಮೆಂಟಿನ ಬೀಗ ತೆಗೆದು ಯುರೋಪಿಯನ ಪ್ರಯಾಣಿಕನನ್ನು ಕೆಳಗಿಳಿಸಿ ಹಿಂದೀ ಪ್ರಯಾಣಿಕರನ್ನು ಇಳಿಯಬಿಡದೆ ಬಾಗಲಿಗೆ ಪುನಃ ಬೀಗಹಾಕಿದನು. ಬಾಗಲು ತೆರೆಯಲು ಏನೇನು ಹೇಳಿದರೂ ಯಾರ್ರೂ ಬಾಗಲು ತೆರೆಯದ್ದರಿಂದ ಸುಮಾರು ೧೫ ನಿಮಿಷದ ನಂತರ ಅದರೊಳಗಿದ್ದ ದೇಶಾಯಿ ಎಂಬ ಹಿಂದೀ ಪ್ರಯಾಣಿಕನು ಕಂಪಾರ್ಟಮೆಂಟಿನ ಕಿಟಿಕಿಯಿಂದ ಕೆಳಗೆ ಹಾರ ಪ್ರಯತ್ನಿಸಿದಲ್ಲಿ ಅವನ ಕುತ್ತಿಗೆಯನ್ನು ರೈಲ್ವೆ ಆಫೀಸರರು ಹಿಡಿದು ಒಳಗೆ ದೂಡಿ ಪೋಲೀಸಿನವರು ಬರುವ ವರೆಗೆ ಹೊರಗೆ ಬರಬಿಡದೆ, ಪೋಲೀಸಿನವರು ಬರುತ್ತಲೇ ಅವನನ್ನು ಪೋಲಿಸ ಸ್ಟೇಶನಿಗೆ ಎಳಕೊಂಡುಹೋದರು. ಇತರ ಹಿಂದೀ ಪ್ರಯಾಣಿಕರೂ ಪೋಲಿಸ ಸ್ಟೇಶನಿಗೆ ಹೋದರು. ಪೋಲೀಸ್ ಸ್ಟೇಶನಿನಲ್ಲಿ ದೇಶಾಯಿಯ ಸ್ನೇಹಿತರು ದಾಕ್ತರರನ್ನು ತರಿಸಿ ದೇಶಾಯಿಯನ್ನು ಪರೀಕ್ಷೆ ಮಾಡಿಸಿ ಚಿಕಿತ್ಸೆ ಬಗ್ಗೆ ಅವನನ್ನು ಆಸ್ಪತ್ರಿಗೆ ಕಳುಹಿಸಿದರು. ಈಗ ದೇಶಾಯಿ ಮತ್ತು ಇವನ ಜತೆಯವರು ರೈಲ್ವೇ ಆಫೀಸರರ ಮೇಲೆ ಫಿರ್ಯಾದಿ ಕೊಟ್ಟಿರುತ್ತಾರೆ.

~~~

ಹಿಂದೂಸ್ಥಾನದ ವೃದ್ಧಪಿತಾಮಹರಾದ ಮಾನ್ಯ ದಾದಬಾಯಿ ನೌರೋಜಿಯವರು ಇದೇ ಸಪ್ಟಂಬರ ತಾ. ೪ರಲ್ಲು ತನ್ನ ೯೧ನೇ ಜನನೋತ್ಸವವನ್ನು ಆಚರಿಸುವದರಲ್ಲಿದ್ದಾರೆ. ಮಾನ್ಯ ದಾದಭಾಯಿಯವರಿಗೆ ೯೧ ವರ್ಷಗಳ ವಯಸ್ಸಾದರೂ ಅವರ ಆರೋಗ್ಯವು ಇನ್ನೂ ನೆಟ್ಟಗಿದೆ. ಹಿಂದೂಸ್ಥಾನದ ಪರವಾಗಿ ಹಿಂದೆ ಅವರಿಗೆ ಇದ್ದ ವಾತ್ಸಲ್ಯವು ಇನ್ನೂ ಇದ್ದಕ್ಕಿದ್ದ ಹಾಗಿದೆಯಲ್ಲದೆ ಹಿಂದೂಸ್ಥಾನದ ದಾರಿದ್ರ್ಯವು ಹೋಗಬೇಕಾದರೆ 'ಸ್ವರಾಜ್ಯವು' ಅಗತ್ಯ ಎಂಬದೇ ಅವರ ಸಂಕಲ್ಪ ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~

ಬಿಹಾರ್ ಮತ್ತು ಯುನೈಟೆಡ್ ಪ್ರೊವಿನ್ಸ್ ಕಾಂಗ್ರೆಸ್ ಕಮಿಟಿಯವರು ಮಿಸೆಸ್ ಬೀಸೆಂಟರವರನ್ನು ಬರುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಬಹುದೆಂತ ನಿರ್ಧರಿಸಿರುವರು.

~~~

ಆಗೊಸ್ತು ತಾ. ೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೫೮೭ ಮಂದಿ ಪ್ಲೇಗ ಬೇನೆಯಿಂದ ಕಾಲವಾದರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೦೯೧; ಮದ್ರಾಸ್ ೧೧೬; ಬಿಹಾರ್ ೬೨; ಸಂಯುಕ್ತಸಂಸ್ಥಾನ ೬೦; ಪಂಜಾಬು ೧; ಬರ್ಮ ೫೬; ಮಧ್ಯ ಸಂಸ್ಥಾನ ೮೪; ಮೈಸೂರು ೨೯೪; ಹೈದರಾಬಾದ್ ೫೧೬; ಮಧ್ಯ ಹಿಂದೂಸ್ಥಾನ ೫ ಮರಣಗಳಾದವು.

~~~

೧೯೧೦ನೇ ಇಸವಿಯ ಪ್ರೆಸ್ ಆಕ್ಟನ್ನು ತೆಗೆದುಹಾಕಬೇಕೆಂಬದಾಗಿ ಇಂಡಿಯನ್ ಪ್ರೆಸ್ ಎಸೋಶಿಯೇಶನಿನವರ ಒಂದು ಪ್ರತಿನಿಧಿ ಮಂಡಲಿಯು ವೈಸರಾಯಲ್ಲಿಗೆ ಹೋಗಲಿಕ್ಕಿದ್ದಾರೆಂದು ತಿಳಿಸಿದ್ದೆವಷ್ಟೆ. ಇದಕ್ಕೆ ವೈಸರಾಯ ಪ್ರಭುಗಳವರು ಸಮ್ಮತಿ ಕೊಟ್ಟಿರುವರೆಂದೂ ಈ ಪ್ರತಿನಿಧಿ ಮಂಡಲಿಯವರು ಬರುವ ಒಕ್ಟೋಬರ ತಿಂಗಳಲ್ಲಿ ವೈಸರಾಯರವರಿಗೆ ಭೇಟಿ ಕೊಡುವರೆಂದೂ ವರ್ತಮಾನ ಬಂದಿದೆ.

~~~

ಬಂಗಾಳದಲ್ಲಿ ಏರ್ಪಡುತ್ತಲಿರುವ ವಂಗೀಯ ಸೈನಕ್ಕೆ ಜನರನ್ನು ಸೇರಿಸಲು ಡಾಕ್ಟರ್ ಶರತ್ಕುಮಾರ ಮಲ್ಲಿಕರವರೇ ಮೊದಲಾದ ಕೆಲವರು ಮುಂದಾಳುಗಳಾಗಿ ನಿಂತಿದ್ದಾರೆ. ಅನೇಕ ಮಂದಿ ವಿದ್ಯಾವಂತರೂ ಧನಿಕರ ಮನೆಯ ಜನರೂ ಸೇರಿದ್ದಾರೆ. ಹಲವರು ಸಂಬಳದಾಶೆಯಿಲ್ಲದೆಯೇ ಗೌರವಾರ್ಥವಾಗಿ ಸೇರಿದ್ದಾರೆ.

~~~

ಪ್ರಯಾಗ ಪಟ್ಟಣದಲ್ಲಿ ಕೆಲವು ಜಮೀನ್‌ದಾರರು ಸಭೆ ಸೇರಿ "ಆಗ್ರಾ ಜಮೀನುದಾರರ ಸೈನ್ಯ" ಎಂಬ ಹೆಸರಿನ ಸೇನೆಯೊಂದನ್ನು ಏರ್ಪಡಿಸಿ ಸಾಮ್ರಾಜ್ಯ ಸಹಾಯಕ್ಕೆ ಒದಗಿಸಬೇಕೆಂದೂ, ಜಮೀನುದಾರರೆಲ್ಲರಿಗೂ ಈ ವಿಷಯವನ್ನು ಕುರಿತು ಬರೆಯಬೇಕೆಂದೂ ನಿರ್ಧರಿಸಿದರು. ಸರಕಾರಕ್ಕೂ ಬರೆದುಕೊಂಡಿರುವಲ್ಲಿ ೩,೫೦೦ ಮಂದಿಗಳನ್ನು ಕೂಡಿಸಿದರೆ ಆ ಹೆಸರಿನ ಸೈನ್ಯವನ್ನು ನಿರ್ಮಿಸಿಕೊಳ್ಳುವ ವಿಷಯದಲ್ಲಿ ಸರಕಾರದ ಅನುಮತಿಯು ದೊರೆಯುವುದೆಂದು ಉತ್ತರಕೊಟ್ಟರು.

~~~

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದ ಕೆಲವು ಮುನ್ಸಿಪಾಲಿಟಿಗಳ ಆರೋಗ್ಯ ಸಂಬಂಧ ವಿನಿಯೋಗಿಸುವ ಬಗ್ಗೆ ಮದ್ರಾಸ್ ಸರಕಾರದವರು ೨೧,೦೦೦,೦೦೦ ರೂಪಾಯಿಗಳನ್ನು ಹಂಚಿ ಕೊಡುವದರಲ್ಲಿದ್ದಾರೆ.

~~~

ಮೈಸೂರಿನ ದಿವಾನ್ ಬಹದ್ದೂರ್ ಪುಟ್ಟಣ್ಣ ಚೆಟ್ಟಿಯವರು ಬೆಂಗಳೂರು ವಿಕ್ಟೋರಿಯ ಆಸ್ಪತ್ರಿಯ ಹೊರ ರೋಗಿಗಳ ಬಗ್ಯೆ ಒಂದು ಪ್ರತ್ಯೇಕ ವಾರ್ಡನ್ನು ಕಟ್ಟಿಸುವರೆ ೨೫,೦೦೦ ರೂಪಾಯಿಗಳ ದಾನಮಾಡಿರುತ್ತಾರೆ.

~~~

ಬೆಂಗಳೂರಿನಿಂದ ಕೊಡಗು ಜಿಲ್ಲೆಗೆ ಮೈಸೂರು ಸರಕಾರದವರು ರೈಲ್ವೇ ಲೈನ್ ತೆರೆಯುವದರಲ್ಲಿದ್ದಾರೆ.

~~~

ಇದೇ ಕಳೆದ ಜನವರಿ ತಾ. ೧ನೇ ದಿನ ಪಾಲ್ಘಾಟ್ ಬಾಸೆಲ್ ಮಿಶ್ಯನ್ ದೇವಾಲಯದಲ್ಲಿ ದೇವತಾರಾಧನೆಯು ನಡೆಯುತ್ತಿರುವಾಗ ಅಲ್ಲಿಯ ಮಿಶ್ಯನೆರಿಯು ದೇವತಾರಾಧನೆಯನ್ನು ನಿಲ್ಲಿಸಿದರಿಂದ ಹಿಂದೂಸ್ಥಾನದ ಹಿಂದೀಕ್ರೈಸ್ತರೊಳಗಾದ ಚಳವಳಿವು ವಾಚಕರಿಗೆ ಜ್ಞಾಪಕವಿದ್ದಿರಬಹುದು. ಈ ಸಂಬಂಧ ಬಾಸೆಲ್ ಮಿಶ್ಯನೆರಿಯ ಮೇಲೆ ಪಾಲ್ಘಾಟಿನ ಕ್ರೈಸ್ತರು ಮಾಡಿದ ಕ್ರಿಮಿನಲ್ ಮೊಕದಮೆಯನ್ನು ಅಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ತಳ್ಳಿಹಾಕಿದ್ದರಿಂದ ಈ ಸಂಬಂಧ ಹೈಕೋರ್ಟಿನಲ್ಲಿ ರಿವಿಜನ್ ಅರ್ಜಿ ದಾಕಲು ಮಾಡೋಣಾಗಿದೆ. ಅದಲ್ಲದೆ ಸದರಿ ಮಿಶ್ಯನೆರಿಯ ಮೇಲೆ ಇನ್ನೂ ಎರಡು ಮೊಕದಮೆಗಳು ತನಕಿಗೆ ಬಾಕಿ ಇವೆ. ಸದರಿ ಮಿಶ್ಯನೆರಿಯ ಈ ವರ್ತನೆಯನ್ನು ತಾಳಲಾರದೆ ಪಾಲ್ಘಾಟಿನ ೬೮ ಮಂದಿ ಕ್ರೈಸ್ತರು ಸಭೆಯನ್ನು ಬಿಟ್ಟಿರುತ್ತಾರೆ. ಇದರಿಂದ ಪಶ್ಚಿಮ ಕರಾವಳಿಯ ಹಿಂದೀ ಕ್ರೈಸ್ತರೊಳಗೆ ಅಸಂತೃಪ್ತಿ ಉಂಟಾಗಿ ಸ್ವಿಜರ್‌ಲೇಂಡಿನಲ್ಲಿರುವ ಬಾಸೆಲ್ ಮಿಶ್ಯನ್ ಹೋಮ್ ಬೋರ್ಡಿಗೆ ಮನವಿಗಳನ್ನು ಮಾಡಿದ್ದರಿಂದ ಹೋಮ್ ಬೋರ್ಡಿನವರು ಈ ವಿಷಯ ನಿಷ್ಪಕ್ಷವಾದ ವಿಚಾರ ನಡೆಸುವರೆ ಡಾಕ್ಟರ್ ಬೆನಿಯೊಟ್ ಎಂಬ ಮಿಶ್ಯನೆರಿಯನ್ನು ನೇಮಿಸಿರುತ್ತಾರೆ.

ಸ್ತ್ರೀ ವಿದ್ಯಾಭ್ಯಾಸ ಸಂಬಂಧವಾದ ಆಲೋಚನೆ ನಡಿಸುವರೆ ಮದ್ರಾಸ್ ವಿದ್ಯಾಖಾತೆಯ ಡಿರೆಕ್ಟರರವರು ಇದೇ ತಿಂಗಳಲ್ಲಿ ಒಂದು ಕನ್ಫರೆನ್ಸ್ ಕೂಡಿಸುವದರಲ್ಲಿದ್ದಾರೆ.

ಮದ್ರಾಸಿನಲ್ಲಿರುವ ಮೈಲಾಪುರದಲ್ಲಿ ಅರ್ಜುನ, ವಿನಾಯಕ ಎಂಬಿಬ್ಬರು ತುಂಟರು ಇದ್ದಾರೆ. ಇವರಿಗೆ ಕಳವು ಸುಲಿಗೆಗಳೇ ವೃತ್ತಿ. ಇವರನ್ನು ಕಂಡರೆ ಪೋಲಿಸರಿಗೂ ಕೂಡ ಭಯವಂತೆ. ಕಳೆದ ತಾ. ೫ರ ರಾತ್ರಿಯಲ್ಲಿ ಇವರು ಮೈಲಾಪುರದಲ್ಲಿರುವ ಸಭಾಪತಿ ಮೊದಲ್ಯಾರರೆಂಬುವರ ಮನೆಗೆ ಏಣಿಯ ಮೇಲಿನಿಂದ ಇಳಿದು ಮೊದಲ್ಯಾರ್ ದಂಪತಿಗಳು ಒಂದೇ ಮಂಚದಮೇಲೆ ಮಲಗಿದ್ದಾಗ್ಯೆ, ಕಳ್ಳರಲ್ಲಿ ಒಬ್ಬನು ಮೊದಲ್ಯಾರರ ಕೊರಳನ್ನು ಕತ್ತಿಯಿಂದ ಕಡಿಮುಹಾಕಬೇಕೆಂದು ಮಂಚದ ಮಗ್ಗುಲಲ್ಲಿ ನಿಂತು ಕೈಕತ್ತಿಯನ್ನೆತ್ತಲು, ಅಷ್ಟರಲ್ಲಿ ಪತ್ನಿಯು ಎಚ್ಚತ್ತು ಮಗ್ಗುಲಲ್ಲಿ ನಿಂತಿದ್ದ ಧೂರ್ತನನ್ನು ಕಂಡು ಗಟ್ಟಿಯಾಗಿ ಅವನ ಕೈಯನ್ನು ಹಿಡಿದುಕೊಂಡು ಕೂಗಿಕೊಂಡಳು. ಮನೆಯವರೆಲ್ಲರೂ ಆ ಕಳ್ಳನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಉಳಿದ ಕಳ್ಳರೆಲ್ಲಾ ಓಡಿ ಹೋದರು. ಈ ಸಾಹಸವನ್ನು ಮಾಡಿದ ಆ ಸ್ವಾಧ್ವೀಮಣಿಯ ಕೈಗೆ ಕಳ್ಳನ ಆಯುಧದಿಂದ ಬಲವಾದ ಗಾಯಗಳಾಗಿರುತ್ತವೆ.

ಮದ್ರಾಸ್ ಮತ್ತು ದಕ್ಷಿಣ ಮಹರಾಷ್ಟ್ರ ರೈಲ್ವೆಯ ಬೆಂಗಳೂರು ಮದ್ರಾಸ್ ಭಾಗದ ಗಾರ್ಡಾಗಿದ್ದ ಎ. ಎಚ್. ಫರ್ನಾಂಡಿಜ್ ಎಂಬುವವನು ಒಂದು ದಿನ ರಾತ್ರಿ ಹೊತ್ತು ಪಂಚಮ ಜಾತಿಯ ಗಂಡಹೆಂಡಿರು ಒಂದು ಬಂಡಿಯಲ್ಲಿ ಪ್ರಯಾಣಮಾಡುತ್ತಿರಲು, ಗಂಡಸರ ಬಂಡಿಯಲ್ಲಿ ಹೆಂಗಸರು ಕುಳಿತುಕೊಳ್ಳಬಾರದೆಂದು ಗದರಿಸಿ, ಆ ಹೆಂಗುಸನ್ನು ಗಂಡನಿಂದ ಬೇರ್ಪಡಿಸಿ, ಬೇರೊಂದು ಬಂಡಿಯಲ್ಲಿ ಕುಳ್ಳಿರಿಸಿ, ಟಿಕೆಟನ್ನು ಕೇಳುವ ನೆವದಲ್ಲಿ ತಾನು ಆಕೆಯ ಮಾನಭಂಗಮಾಡುವುದಕ್ಕೆ ಯತ್ನಿಸಿದನು. ಆಕೆ ಒಪ್ಪದೆ ಹೋಗಲು ಬಂಡಿಯಿಂದ ಕೆಳಕ್ಕೆ ನೂಕಿಬಿಟ್ಟನು. ಆಕೆಯು ಮುಂದಣ ನಿಲ್ದಾಣಕ್ಕೆ ಹೋದಾಗ ನಡೆದ ಸಂಗತಿಯನ್ನೆಲ್ಲಾ ಹೇಳಿಕೊಂಡಳು. ಗಾರ್ಡಿನ ಮೇಲೆ ಕ್ರಿಮಿನಲ್ ವ್ಯಾಜ್ಯವು ತರಲ್ಪಟ್ಟಿತು. ಗುಂಟಕಲ್ಲಿನ ದಂಡಾಧಿಕಾರಿಯು ಗಾರ್ಡಿಗೆ ರೂ. ೨೦೦ ಅರ್ಥ ದಂಡವನ್ನು ವಿಧಿಸಿದರು. ಆದರ ಮೇಲೆ ಹೈಕೋರ್ಟಿನಲ್ಲಿ ಅಪ್ಪೀಲಾಗಿರಲು ಶಿಕ್ಷೆಯು ಸಾಲದೆಂದು ಹೇಳಿ ಹೈಕೋರ್ಟು ಜಡ್ಜರು ಫರ್ನಾಂಡಿಸನಿಗೆ ನಾಲ್ಕು ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ದಕ್ಷಿಣ ಕನ್ನಡ.

WANTED.

For the Kalasa Medical Fund, a Compounder Pay Rs. 12/ per mensem. Apply stating age, and qualifications, with copies of testimonials to the undersigned.

W. H. REED.
KALASA POST, MYSORE STATE.

ಗೋರಕ್ಷಣ ಸಭೆ.

ಇದೇ ಕಳೆದ ಜುಲ್ಯಾ ತಾರೀಕು 6ನೇ ದಿನ ನೆರದ ಮಹಾಸಭೆಯವರಿಂದ ನೇಮಿಸಲ್ಪಟ್ಟ ಸಬ್ ಕಮಿಟಿಯವರು ಗೋ ರಕ್ಷಣೆ ಬಗ್ಯೆ ಈಗ ಸಾಧ್ಯವಿರುವ ಏರ್ಪಾಡುಗಳನ್ನು ಸೂಚಿಸಿರುವರು. ಇವುಗಳನ್ನು ಪರ್ಯಾಲೋಚಿಸಲು ಕೂಡಬೇಕಾದ ಮಹಾಸಭೆಯು ಬರುವ ಸಪ್ಟಂಬರ ತಾ. 3ನೇ ಆದಿತ್ಯವಾರ ಶ್ಯಾಮ ಘಂಟೆ 4-30ಕ್ಕೆ ಕೆನರಾ ಹ್ಯಾಸ್ಕೂಲಿನಲ್ಲಿ ಜರುಗುವದು. ಗೋರಕ್ಷಣೆಯ ಅಭಿಮಾನಿಗಳೆಲ್ಲರೂ ದಯಮಾಡಿ ಬರಬೇಕಾಗಿ ಈ ಮೂಲಕ ವಿಜ್ಞಾಪಿಸುತ್ತೇವೆ.

ಮಂಗಳೂರು, ತಾ 31-8-'16.

ವಿ. ಶ್ರೀನಿವಾಸ ಕಾಮತ್,
ಕೊಂಬ್ರಬೈಲ್ ಪದ್ಮನಾಭಯ್ಯ,
ಜ್ಯೊಂಟ್ ಸೆಕ್ರೆಟರಿಗಳು.

P. D. LIMA.

Dental Surgeon, Mangalore.

ಇವರು ಈಗ ತಾನೇ ಸರ್ಕೀಟಿನಿಂದ ಹಿಂತೆರಳಿ ಬಂದಿರುವರು. ಅಮೇರಿಕದಿಂದ ಭಾರೀ ಕೃತಕ ದಂತಗಳನ್ನು ತರಿಸಿಕೊಂಡಿಟ್ಟಿರುವರು. ಈ ಸುಸಮಯವನ್ನು ಕಳಕೊಳ್ಳಬೇಡಿರಿ. ಮಿತವಾದ ದರದಲ್ಲಿ ಹಲ್ಲುಗಳನ್ನು ಸರಿಪಡಿಸಿಕೊಡುವರು.

ಪಿ. ಡಿ. ಲಿಮಾ.
ದಂತ ವೈದ್ಯರು, ಒಡೆಯರರ ಆಫಿಸಿನ ಬಳಿ,
ಮಂಗಳೂರು

ನೋಟೀಸು.

ಮೆಸರ್ಸ್ ಸ್ಟೀವನ್ಸ್ ಎಂಡ್ ಸನ್,
ಬಿಸ್ಕುಟು ಮೆನ್ಯುಫೆಕ್ಚರರು.

ಇವರು ತಮ್ಮ ಶಾಪನ್ನು ಬಲ್ಮಠ ರಸ್ತೆಯಲ್ಲಿರುವ ಮೆ| ಜೊಕಿನ್ ಲೊರೆನ್ಸ್ ಸಾಲ್ದಾಂಞರ ಮನೆಯ ಎದುರಿರುವ ಮೆ| ಮೋನ ಪ್ಯಾಸರ ಕಟ್ಟಡಕ್ಕೆ ವೈದಿರುತ್ತಾರೆ.

ಸ್ಟಿವನ್ ಎಂಡ್ ಸನ್,
ಮಂಗಳೂರು.

ಮೂಡಬಿದ್ರೆ:— ಪ್ರೊಫೆಸರ್ ಎಲ್. [illegible]. ಶಹಾರವರು ಇಲ್ಲಿಗೆ ಬಂದು ತಮ್ಮ ಅದ್ಭುತಕರವಾದ ಅನೇಕ ಚಮತ್ಕಾರದ ಆಟಗಳನ್ನು ಆಡಿ ತೋರಿಸಿದರು. ಇಲ್ಲಿಯ ಜೈನಬಂಧುಗಳಾದ ಮ| ರಾ| ರಾ| ಕಟ್ಟೆಮಾರ ರಘುಚಂದ್ರ ಬಲ್ಲಾಳರೇ ಮೊದಲಾದವರು ಕೂಡಿ ಚಿನ್ನದ ಒಂದು ಪದಕವನ್ನು ಮ| ರಾ| ರಾ| ಮೂಡಬಿದ್ರೆ ಅರಮನೆ ಚೌಟರ ಕುಂಞಮ ಶೆಟ್ರವರಿಂದ ಅವರಿಗೆ ಬಹುಮಾನವಾಗಿ ಕೊಡಿಸಿದರು.

ಕುಂಬಳೆ:— ಮೊದಲಿನ ಸಂಚಿಕೆಯಲ್ಲಿ ತಿಳಿಸಿದ ರೈಲ್ವೆ ಟ್ರೈನುಗಳ ಸಮಯ ತಬ್ದೀಲಿಯನ್ನು ಸಪ್ಟಂಬರ್ ತಿಂಗಳ ಬದಲಿಗೆ ಇದೇ ಬರುವ ಅಕ್ಟೋಬರ ತಿಂಗಳ ಶುರುವಿನಿಂದ ಮಾಡಲಾದೀತೆಂತ ರೈಲ್ವೆ ಇಲಾಖೆಯವರು ಪುನಹಾ ಪ್ರಕಟಿಸಿರುವರು.

ಮಂಗಳೂರು.

ಇದೇ ಕಳೆದ ಜುಲಾಯಿ ತಿಂಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ೩೯೯೫ ಜನನಗಳೂ, ೨೪೬೭ ಮರಣಗಳೂ ಆಗಿರುತ್ತವೆ. ಜನನ:— ಮಂಗಳೂರು ತಾಲೂಕು ಗಂಡು ೪೦೦, ಹೆಣ್ಣು ೩೫೭=೭೫೭; ಉಡ್ಪಿ ಗಂಡು ೩೫೧, ಹೆಣ್ಣು ೩೩೦=೬೮೧; ಕುಂದಾಪುರ ತಾಲೂಕು ಗಂಡು ೨೩೮, ಹೆಣ್ಣು ೨೩೯=೪೭೭; ಕಾರ್ಕಳ ತಾಲೂಕು ಗಂಡು ೧೯೭, ಹೆಣ್ಣು ೧೯೧=೩೮೮; ಉಪ್ಪಿನಂಗಡಿ ತಾಲೂಕು ಗಂಡು ೨೯೭, ಹೆಣ್ಣು ೨೭೬=೫೭೩; ಕಾಸರಗೋಡು ತಾಲೂಕು ಗಂಡು ೪೭೪, ಹೆಣ್ಣು ೪೭೮=೯೫೨; ಮುನ್ಸಿಪಾಲಿಟಿ ಗಂಡು ೬೪, ಹೆಣ್ಣು ೬೩=೧೨೭. ಒಟ್ಟು ಜನನ ಸಂಖ್ಯೆ ಗಂಡು ೨೦೫೧, ಹೆಣ್ಣು ೧೯೪೪=೩೯೯೫.

ಮರಣ ಸಂಖ್ಯೆ:— ಮಂಗಳೂರು ತಾಲೂಕು ಗಂಡು ೧೯೭; ಹೆಣ್ಣು ೧೯೫=೩೯೧; ಉಡ್ಪಿ ತಾಲೂಕು ಗಂಡು ೨೫೬, ಹೆಣ್ಣು ೧೯೨=೪೧೮; ಕುಂದಾಪುರ ತಾಲೂಕು ಗಂಡು ೧೯೪, ಹೆಣ್ಣು ೧೮೧=೩೭೫; ಉಪ್ಪಿನಂಗಡಿ ತಾಲೂಕು ಗಂಡು ೨೩೫, ಹೆಣ್ಣು ೨೩೩=೪೬೮; ಕಾರ್ಕಳ ಗಂಡು ೧೭೦, ಹೆಣ್ಣು ೧೪೧=೩೧೧; ಕಾಸರಗೋಡು ಗಂಡು ೧೭೭, ಹೆಣ್ಣು ೧೯೮=೩೭೫; ಮುನಿಸಿಪಾಲಿಟಿ ಗಂಡು ೬೭, ಹೆಣ್ಣು ೫೨=೧೧೯. ಒಟ್ಟು ಮರಣ ಸಂಖ್ಯೆ ಗಂಡು ೧೨೭೫, ಹೆಣ್ಣು ೧೧೯೨=೨೪೬೭.

ಮಂಗಳೂರು ತಾಲೂಕು ಬೋರ್ಡಿಗೆ ಮಂಗಳೂರು ಸರ್ಕಲಿನಿಂದ ಒಬ್ಬ ಮೆಂಬರರನ್ನು ಚುನಾಯಿಸುವ ಸಂದರ್ಭದಲ್ಲಿ ಉಮೇದ್ವಾರರಾಗಿದ್ದ ಮ. ರಾ. ರಘುಚಂದ್ರ ಬಳ್ಳಾಲರ ಮತ್ತು ಮ. ರಾ. ಮುಲ್ಕಿ ದೊಡ್ಡ ಮನೆ ಸೇಸು ಸೆಟ್ಟಿಯವರ ಉಮೇದ್ವಾರಿಕೆಗಳು ಮಂಜೂರು ಮಾಡೋಣಾಗಿವೆ. ಈ ಇಬ್ಬರಲ್ಲಿ ಒಬ್ಬರನ್ನು ಓಟು ಮೂಲಕ ಆರಿಸುವ ಕೆಲಸವು ಇದೇ ತಿಂಗಳ ತಾ. ೭ನೇ ಬ್ರಹಸ್ಪತಿವಾರ ಮಂಗಳೂರು ಟೌನು ಡ್ಯೂಪಿಟಿ ತಹಸೀಲದಾರರವರ ಆಫೀಸಿನಲ್ಲಿ ಬೆಳಿಗ್ಗೆ ೧೧ ಘಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೆ ನಡೆಯುವದು.

ಇಲ್ಲಿಯ ಡಿವಿಜನಲ್ ಆಫೀಸರರಾಗಿ ನೇಮಿಸಲ್ಪಟ್ಟ ಖಾನ್ ಸಾಹೇಬ್ ಪಿ. ಎ. ಅಮ್ಮು ಸಾಹೇಬ್ ಬಹದ್ದೂರರವರು ಇದೇ ತಾ. ೨೭ನೇ ದಿನ ಇಲ್ಲಿಗೆ ಬಂದು ತಾ. ೨೮ರಲ್ಲು ಚಾರ್ಜು ತಕ್ಕೊಂಡಿರುತ್ತಾರೆ.

ಪಟ್ಟಣದ ಕೇಡಿಗಳಲ್ಲಿ ಹೆಸರು ಪಡೆದ ಕೆ. ಡಿ. ಮಂಜುನಾಥನನ್ನು ಇಲ್ಲಿಯ ಟೌನ್ ಪೋಲಿಸರು ಕಣ್ಣ ತೆಗೆಯುವ ಸಾಹಿತ್ಯ ಮತ್ತು ಕೆಲವು ಕಳ್ಳ ಮಾಲುಗಳ ಸಹಿತ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಕುಂದಾಪುರ ಹೆಡ್ ಎಕೌಂಟೆಂಟ ಮತ್ತು ಟ್ರೆಜರರರಾದ ಮ| ರಾ| ರಾ| ಯು. ಅನಂತಯ್ಯನವರು ತಾ. ೧೦-೯-೧೬ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಪಡಕೊಂಡಿರುವುದರಿಂದ ಉಡ್ಪಿ I ಗ್ರೇಡ್ ರೆವೆನ್ಯೂ ಇನ್ಸಪೆಕ್ಟರರಾದ ರಾ| ಕೆ. ನಾಗಪ್ಪಯ್ಯನವರು ಕುಂದಾಪುರ ಹೆಡ್ ಎಕೌಂಟೆಂಟ ಮತ್ತು ಟ್ರೆಜರರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮದ್ರಾಸಿನ ವೈರಂ ಕಂಪೆನಿಯವರ ಜಾಹೀರಾತುಗಳನ್ನು ವಾಚಕರ ಅವಗಾಹನೆ ಬಗ್ಗೆ ಈ ಸಂಚಿಕೆಯೊಂದಿಗೆ ಇಟ್ಟಿರುವೆವು.

ಇಲ್ಲಿಯ ಬೀಬಿ ಅಲಾಬಿಯ ಬಳಿ ಹಗಲು ಹೊತ್ತಿಗೆ ಉಳ್ಳಾಲ ಪಳ್ಳಿಬ್ಯಾರಿಯನ್ನು ಕೊಂದ ಬಜಿಲ ಪಳ್ಳಿ ಬ್ಯಾರಿಯು ತಪ್ಪಿತಸ್ಥನೆಂದು ಎಸ್ಸೆಸ್ಸರುಗಳು ಅಭಿಪ್ರಾಯ ಪಟ್ಟದ್ದರಿಂದ ಸೆಶ್ಶನ್ಸ್ ಜಡ್ಜರು ಬಜಿಲ ಪಳ್ಳಿ ಬ್ಯಾರಿಗೆ ಫಾಶಿ ಶಿಕ್ಷೆಯನ್ನು ವಿಧಿಸಿ ಈ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ಇನ್ನೊಬ್ಬನನ್ನು ಖುಲಾಸುಪಡಿಸಿರುವರು.

ಉಳ್ಳಾಲದ ಚಾಯುಬ್ಯಾರಿ ಎಂಬವನು ದಾಸ ಸಪ್ಪಳಿಗ ಎಂಬವನ ಒಂದು ಕೋಣವನ್ನು ಕಳವು ಮಾಡಿ, ಅದನ್ನು ಚರ್ಮದ ಬಗ್ಗೆ ಕೊಂದನೆಂಬದಾಗಿ ಆಪಾದಿಸಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಮೇಜಿಸ್ಟ್ರೇಟರು ಚಾಯುಬ್ಯಾರಿಯನ್ನು ತಾರೀಕು ೩೧ರಲ್ಲಿ ಚಾರ್ಜು ಮಾಡಿರುತ್ತಾರೆ.

ಪಟ್ಟಣದ ಮನೆ ಮನೆ ಹೋಗಿ ಜಗಲಿಕಳವು ಮಾಡುತ್ತಿದ್ದ ಮಲೆಬಾರಿನ ಅಚ್ಯುತ್ತನಿಗೆ ಮೂರು ಕಳವು ಮೊಕದಮೆಗಳಲ್ಲಿ ೬ ತಿಂಗಳ ಸಜಾ ವಿಧಿಸೋಣಾಗಿದೆ. ಇನ್ನು ೬ ಕಳವು ಮೊಕದಮೆಗಳು ಅವನ ಮೇಲೆ ತನಕಿಗೆ ಬಾಕಿ ಇದೆ.

ಮ|| ರಾ|| ಉಳ್ಳಾಲ ಕೃಷ್ಣರಾಯರಲ್ಲಿ ಕೆಲಸಕ್ಕಿದ್ದ ಒಬ್ಬ ಹುಡುಗನ ಕೂಡೆ ಪಟಾಯಿಸಲಿಕ್ಕೆ ಕೊಟ್ಟಿದ್ದ ೫೦ ರೂಪಾಯಿಯ ಕರೆನ್ಸಿ ನೋಟು ಸಹಿತ ಸದರಿ ಹುಡುಗನು ಪರಾರಿಯಾಗಿರುವನೆಂತ ತಿಳಿಯುತ್ತೇವೆ.

ಕಾರ್ಕಳದಲ್ಲಿ ಸಾವಕಾರ ಮ|| ರಾ|| ರಾ|| ಚೋಲಪಾಡಿ ಶ್ರೀನಿವಾಸ ಕಮ್ತಿಯವರು ಕಳದ ತಿಂಗಳ ತಾ. ೨೯ರಲ್ಲಿ ತಮ್ಮ ೬೮ನೇ ವರುಷದ ಪ್ರಾಯದಲ್ಲಿ ಕಾಲವಾದರೆಂಬುದಾಗಿ ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ. ಮೃತರ ಕಳೇಬರವನ್ನು ಭಜನೆ ಕೀರ್ತನೆಗಳಿಂದ ಊರಿನ ಗೃಹಸ್ಥರಲ್ಲಿ ಅನೇಕರು ಕೂಡಿಕೊಂಡು ವಿಶೇಷ ಬಹುಮಾನದಿಂದ ಸ್ಮಶಾನಕ್ಕೆ ವೈದದ್ದಲ್ಲದೆ ಬಡಬಗ್ಗರಿಗೂ ಬ್ರಾಹ್ಮಣರಿಗೂ ಯಥೋಚಿತ ದಾನದಕ್ಷಿಣೆಗಳು ಸಹ ಕೊಡೋಣಾದವು. ಕಾರ್ಕಳದಲ್ಲಿ ಸ್ಥಾಪಿತವಾಗಿರುವ ಕೆಲವು ಧರ್ಮಸ್ಥಾಪನೆಗಳನ್ನು ಇವರು ಸ್ಥಿರಪಡಿಸಿ ವಿದ್ಯಾಪ್ರೋತ್ಸಾಹಕರಲ್ಲಿ ಇವರೊಬ್ಬರಾಗಿದ್ದುದರಿಂದಲೂ, ತನ್ನ ಬಡ ಸ್ನೇಹಿತ ಮತ್ತು ಬಂಧುವರ್ಗದವರಿಗೆ ಸಹಾಯಕರಾಗಿದ್ದುದರಿಂದಲೂ ಇವರ ಮರಣದಿಂದ ಬಹಳ ವಿಷಾದವು ಉಂಟಾಗಿರುವದೆಂದು ಕಾರ್ಕಳದ ಬಾತ್ಮೀದಾರರು ಬರೆದಿರುವರು.

ಮೆಸೊಪೊಟೋಮಿಯಕ್ಕೆ ಸೈನಿಕರ ಚಿಕಿತ್ಸೆ ಬಗ್ಗೆ ಹೋಗಿದ್ದ ಮೆ|| ಲಿಯೊನಾರ್ಡ್ ರೋಬರ್ಟ್ಸರವರು ತಮ್ಮ ಕೆಲಸವನ್ನು ಸೇನಾಧಿಕಾರಿಗಳೆಲ್ಲರಿಗೆ ತೃಪ್ತಿಕರವಾದ ರೀತಿಯಲ್ಲಿ ತೀರಿಸಿಕೊಂಡು ಇಲ್ಲಿಗೆ ಬಂದಿರುವರಾಗಿ ತಿಳಿಯುತ್ತೇವೆ.

ಮೈಸೂರು ಸಂಸ್ಥಾನಕ್ಕೂ ಈ ಜಿಲ್ಲೆಗೂ ರೈಲ್ವೆಮಾರ್ಗವನ್ನು ಹಾಕಿಸುವ ವಿಷಯವನ್ನು ಪರ್ಯಾಲೋಚಿಸಲು ಬಂದ ಮೆ|| ರಿಚರ್ಡ್ಸ್‌ರ ಸಹಿತ ಕಲೆಕ್ಟರ ದೊರೆಗಳವರು ಮಲ್ಪೆಯ ರೇವನ್ನು ಸಂದರ್ಶಿಸಿ ಕಳದ ತಿಂಗಳ ತಾ. ೨೮ಕ್ಕೆ ಹಿಂತಿರುಗಿ ಬಂದಿರುತ್ತಾರೆ.

ಇಲ್ಲಿಯ ಪ್ರೊಟೆಸ್ಟಾಂಟ್ ಕ್ರೈಸ್ತ ಯುವಕರಲ್ಲಿರುವ ಮೈಗಳ್ಳತನವನ್ನು ಹೋಗಲಾಡಿಸಿ ಅವರಲ್ಲಿ ಕೆಲಸದ ಅಭಿರುಚಿಯನ್ನುಂಟುಮಾಡುವ ಉದ್ದೇಶದಿಂದ ಮೆ|| ಗೋಜರ್ ಮೊದಲಾದ ಕೆಲವು ಕ್ರೈಸ್ತ ಗ್ರಹಸ್ಥರು ಕೂಡಿಕೊಂಡು ಎಸ್. ಎಸ್. ಇಂಡಸ್ಟ್ರೀಯಲ್ ವರ್ಕ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ. ಇದರ ಪ್ರಥಮ ವರುಷದ ವರದಿಯು ನಮಗೆ ಬಂದಿರುವದು. ಸ್ಥಾಪನೆಯು ಇನ್ನೂ ಬಾಲ್ಯಾವಸ್ಥೆಯಲ್ಲಿರುವದರಿಂದ ವರದಿಯಲ್ಲಿ ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿರುವ ವಿಶೇಷ ಸಂಗತಿಗಳಿರವು. ಕ್ರೈಸ್ತ ಸಮುದಾಯದ ಸಹಾನುಭೂತಿಯಿಂದ ಆದರಿಸಬೇಕೆಂದು ಈ ಸಂಸ್ಥೆಯ ಕಾರ್ಯದರ್ಶಿಗಳು ವಿಜ್ಞಾಪಿಸಿಕೊಂಡಿರುತ್ತಾರೆ.

ಮದ್ರಾಸಿನಲ್ಲಿ ಪ್ರಕಟವಾಗುತ್ತಲಿರುವ ಮಿಸಿಸ್ ಎನಿಬಿಜೆಂಟರವರ ನ್ಯೂ ಇಂಡಿಯಾ ಛಾಪಖಾನೆಯ ಬಗ್ಗೆ ಬೆಸೆಂಟರಿಂದ ರೂ. ೨೦೦೦ದ ಜವಾಬ್ದಾರಿಯನ್ನು ತಕ್ಕೊಂಡ ಸಂಗತಿಯು ವಾಚಕರಿಗೆ ಗೊತ್ತಿರುವದು. ಈ ಪತ್ರದಲ್ಲಿ ಇನ್ನೂ ಆಕ್ಷೇಪದ ಸಂಗತಿಗಳು ಪ್ರಕಟವಾಗುತ್ತಿರುವವೆಂಬುದನ್ನು ಸರಕಾರದವರು ತಿಳಿದುಕೊಂಡು ಜವಾಬ್ದಾರಿ ಹಣವನ್ನು ದಂಡನಾರ್ಥವಾಗಿ ಕಳೆದುಬಿಟ್ಟಿರುವರು. ತಿರಿಗೊಮ್ಮೆ ಜವಾಬ್ದಾರಿಯನ್ನು ಕಟ್ಟಿಕೊಂಡು ನ್ಯೂ ಇಂಡಿಯಾ ಪತ್ರವು ಎಂದಿನಂತೆ ಪ್ರಕಟವಾಗುವದಾಗಿ ತಿಳಿಯುತ್ತೇವೆ. ಮದ್ರಾಸಿನ ಅಡ್ಯಾರದಲ್ಲಿರುವ ವಸಂತಾ ಪ್ರೆಸ್ಸಿನಿಂದ ರೂ. ೫೦೦೦ದ ಜವಾಬ್ದಾರಿಯನ್ನು ಕೇಳಿರುತ್ತಾರೆ.

ಕಳದ ವಾರದ ಕೂಡಿದ ಮುನ್ಸಿಪಲ್ ಕೌನ್ಸಿಲಿನವರ ಸಭೆಯಲ್ಲಿ ಬಂದೆರಡು ವಿಶೇಷ ವಿಷಯಗಳು ಬಂದಿದ್ದವು. ಹೊಸ ಚೇಯರ್ಮೇನರಾದ ರಾವ್ ಸಾಹೇಬ ಡಾಕ್ಟರ ವರ್ಗೀಸರವರ ಅಧ್ಯಕ್ಷತೆಯಲ್ಲಿ ಕೂಡಿದ ಪ್ರಥಮ ಸಭೆಯು ಈ ಸರ್ತಿ ಕೂಡಿದ್ದೇ ಆಗಿತ್ತು. ಮುನ್ಸಿಪಾಲಿಟಿಯ ಚುಕ್ಕಾಣಿಯನ್ನು ಡಾಕ್ಟರ್ ಚೇಯರ್ಮೇನರು ಯಾವ ರೀತಿ ಹಿಡಿಯುವರು ಎಂಬುದು ವ್ಯಕ್ತವಾಗಲು ಈ ಸರ್ತಿ ಕೂಡಿದ್ದ ಸಭೆಯಲ್ಲಿ ಸಂಭವಗಳಿದ್ದವು. ಕೊಡಿಯಾಲ್‌ಬೈಲ ವಾರ್ಡಿಗೆ ೨ ಜನ ಕೌನ್ಸಿಲರು ಇದ್ದಲ್ಲಿ ೩, ಗೋಳಿಕಟ್ಟೆಗೆ ೩ ಇರುವಲ್ಲಿ ೨, ಮಾರ್ಕೆಟ್ ವಾರ್ಡಿಗೆ ೨ ಇರುವಲ್ಲಿ ೧, ಪೋರ್ಟ್ ವಾರ್ಡಿಗೆ ೨ ಇರುವಲ್ಲಿ ೧, ಕೋರ್ಟ್ ವಾರ್ಡಿಗೆ ೨ ಇರುವಲ್ಲಿ ೩, ಜಪ್ಪು ವಾರ್ಡಿಗೆ ೧ ಇರುವಲ್ಲಿ ೨, ಸೆಂಟ್ರಲ್ ವಾರ್ಡಿಗೆ ಮೊದಲಿರುವಂತೆಯೇ ೨, ಕೆಂಟೋನ್‌ಮೆಂಟ್ ವಾರ್ಡಿಗೆ ಮೊದಲಿನಂತೆಯೇ ೧, ಈ ರೀತಿ ಕೌನ್ಸಿಲರರನ್ನು ಇನ್ನು ಮುಂದೆ ಚುನಾಯಿಸಬೇಕೆಂಬ ವಿಷಯವು ಸರಕಾರದವರ ಸೂಚನೆ ಮೇರೆಗೆ ಚರ್ಚೆಗೆ ಬಂದಿತ್ತು. ವಾರ್ಡುಗಳ ವಿಶೇಷತ್ವದ ಪ್ರಕಾರ ಅವುಗಳಿಗೆ ಮೆಂಬರರ ಸಂಖ್ಯೆಯು ಇಲ್ಲದ ಸಂಗತಿಯಲ್ಲಿ ಅಂಥಾ ಸಂಖ್ಯೆಗಳನ್ನು ಉಪಯುಕ್ತ ರೀತಿಯಲ್ಲಿ ಬದಲಾಯಿಸಬಹುದೆಂಬ ಸರಕಾರದ ಸೂಚನೆ ಇದೆ. ಆದರೆ ಇಲ್ಲಿ ಈ ಸೂತ್ರದ ಮೇಲೆಯೇ ಮೊದಲೇ ನಿಶ್ಚಿತವಾದ ಈ ಸಂಖ್ಯೆಗಳಲ್ಲಿ ದೋಷವಿಲ್ಲದ್ದರಿಂದ ಸಂಖ್ಯೆಗಳನ್ನು ಮೇಲೆ ಸೂಚಿಸಿದ ರೀತಿ ಬದಲಾಯಿಸುವದು ಅಗತ್ಯವಿಲ್ಲವೆಂತ ಕೌನ್ಸಿಲಿನ ಮೆಂಬರರಲ್ಲಿ ಕೆಲವರು ವಾದಿಸಿದರು. ಈ ವಿಷಯ ವಾದವು ನಡೆಯಿತು. ಅಲ್ಪಸ್ವಲ್ಪ ಗುಲ್ಲೂ ಆಯಿತು. ನಂತರ ಈ ವಿಷಯ ವೋಟುಗಳು ತೆಗೆಯೋಣಾದವು. ಸಂಖ್ಯೆಯನ್ನು ಬದಲಾಯಿಸುವದು ಬೇಡ ಎಂಬ ಕಡೆಗೆ ೭ ವೋಟುಗಳು, ಬದಲಾಯಿಸಬೇಕು. ಇದಕ್ಕೆ ಚೇಯರ್ಮೇನರ ವೋಟುಗಳು ಕೂಡಿ ೭ ವೋಟುಗಳು, ಈ ರೀತಿ ಕೌನ್ಸಿಲಿನಲ್ಲಿ ಅಭಿಪ್ರಾಯವು ಕಂಡು ಬಂತು. ಚೇಯರ್ಮೇನರಿಗೆ ಹೆಚ್ಚಿಗೆ ಇರುವ ಇನ್ನೊಂದು ವೋಟನ್ನು ಸಹ ಡಾಕ್ಟರ್ ಚೇಯರ್ಮೇನರು ಉಪಯೋಗಿಸಿ ಸಂಖ್ಯೆಗಳನ್ನು ಬದಲಾಯಿಸಬೇಕೆಂತಲೇ ಮಾಡಿದರು. ಚೇಯರ್ಮೇನರು ಚುಕ್ಕಾಣಿಯನ್ನು ಹೇಗೆ ಹಿಡಿಯಲು ಪ್ರಾರಂಭಿಸಿರುವರೆಂಬುದು ಇದರಿಂದ ವ್ಯಕ್ತವಾಗಬಹುದು.

ರೋಮನ್ ಕೆಥೋಲಿಕ ಕ್ರೈಸ್ತಮತವನ್ನವಲಂಬಿಸಿದ ತೋಟಿಗಳ ವಾಸ್ತವ್ಯದ ಬಗ್ಗೆ ದೇರೆಬೈಲಿನಲ್ಲಿ ಸುಮಾರು ೩೬ ಎಕ್ರೆ ಸ್ಥಳವನ್ನು ದರಕಾಸ್ತಿಗೆ ಕೊಡುವ ವಿಷಯವು ಮುನ್ಸಿಪಲ್ ಕೌನ್ಸಿಲಿನ ಮುಂದೆ ಅಭಿಪ್ರಾಯದ ಬಗ್ಗೆ ಬಂದಿತ್ತು. ಇದನ್ನು ಮುಂದಿನ ಸಭೆಗೆ ಮುಂದರಿಸಿಟ್ಟಿರುತ್ತಾರೆ.

ಮೋಟರ್ ಬಸ್ಸುಗಳಿಗೆ ಲೈಸನ್ಸು ಕೊಡುವ ವಿಷಯದಲ್ಲಿ ಕೆಲವು ಸೂಚನೆಗಳನ್ನೊಳಕೊಂಡಿರುವ ಸರಕಾರದವರ ಆಜ್ಞೆಯು ಕಳದ ಮುನ್ಸಿಪಲ್ ಮಿಟಿಂಗಿನ ಮುಂದೆ ಪರ್ಯಾಲೋಚನೆಗೆ ಬಂದಿತ್ತು. ಈ ಸೂಚನೆಗಳನ್ನು ನೋಡಿಕೊಂಡು ಒಂದು ವರದಿಯನ್ನು ಬರೆಯುವರೆ ಮ|| ರಾ|| ರಾವ್ ಬಹದ್ದೂರ್ ಎನ್. ಸುಬ್ಬರಾವ್; ಮ|| ರಾ|| ಪೇಜಾವರ ಭೋಜರಾವ್ ಮತ್ತು ಮ|| ರಾ|| ವಿ. ಶ್ರೀನಿವಾಸ ಕಾಮತ್ ಇವರದೊಂದು ಸಬ್ ಕಮ್ಮಿಟಿಯು ನೇಮಿಸಲ್ಪಟ್ಟದೆ.

ಬಂಟರ ಯಾನೆ ನಾಡವರ ಸಂಘ.

ಮ|| ರಾ|| ಬಸ್ರೂರು ಮಹಾಲಿಂಗ ಶೆಟ್ರಿಂದ ವಂತಿಗೆ (೨ನೇ ಕಂತು) ರೂ. ೩೭೫—೦—೦

ಮಂಗಳೂರು. } ಆ. ಬಾಲಕೃಷ್ಣ ಶೆಟ್ಟಿ,
ತಾ. 29—8—16. } ಕೋಶಾಧಿಕಾರಿ.

ನೋಟೀಸು.

ಮಂಗಳೂರು ತಾಲೋಕಿನಲ್ಲಿರುವ ಬಾಸೆಲ್ ಮಿಶ್ಶನಿನವರ ಎಲ್ಲಾ ಸ್ಥಿರಾಸ್ತಿಗಳ ಗೇಣಿ ವಸೂಲಿ ವಗೈರೆ ಆಡಳಿತೆ ನೋಡುವರೆ ಒಬ್ಬ ಮುತಾಲಿಕರು ಆಗತ್ಯ ಇರುವದರಿಂದ ಸ್ಥಿರಾಸ್ತಿಗಳ ಆಡಳಿತೆ ನೋಡಿ ಒಳ್ಳೆ ಮಾಹೀತಿಯುಳ್ಳ ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಈ ತಿಂಗಳ ತಾರೀಕು 30ರ ಒಳಗೆ ಬರಕೊಳ್ಳುವದು. ಸದರಿ ಕೆಲಸವು ಪ್ರಕೃತ ಒಂದು ವರುಷಕ್ಕೆ ಮಾತ್ರ; ಮತ್ತು ಸಂಬಳ ತಿಂಗಳು 1ರ ರೂಪಾಯಿ 25 ಆಗಿರುತ್ತದೆ. ಉಮೇದ್ವಾರರಿಗೆ ತಕ್ಕಮಟ್ಟಿಗೆ ಇಂಗ್ಲಿಷಿನ ಮಾಹಿತಿ ಕೂಡಾ ಇರಬೇಕಾಗಿರುತ್ತದೆ.

ಎಮ್. ಸುಬ್ರಾಯಪ್ಪ.
ಮಿಶ್ಶನ್ ವಕೀಲ,
ಮಂಗಳೂರು.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ	6—4—0ರಿಂದ	6—12—0
ಗುಡ್ಡು ,, ,,	6—2—0	6—8—0
ಊಟು ಸುಗ್ಗಿ ,,	6—3—0	6—6—0
ಗಾಡಿರಾಶಿ ,,	5—12—0	5—14—0
ಅವ್ವಲ್ ಬೆಳ್ತಿಗೆ ,,	6—8—0	7—0—0
ಗುಡ್ಡು ಬೆಳ್ತಿಗೆ ,,	5—12—0	6—4—0
ರಂಗೂನು ಬೆಳ್ತಿಗೆ ಗೋಣಿ ಗರ	9—10—0	10—0—0
ಗೋಧಿ ಗೋಣಿ ಗರ	11—12—0	12—0—0
ಹುರುಳಿ ಗೋಣಿ ಗರ	6—2—0	6—8—0
ಕಡಲೆ ಗೋಣಿ ಗರ ಬೊಂಬ್ಯ	8—12—0	10—8—0
ಕೊಗರು ಗೋಣಿ ಗರ		11—4—0
ಕೊಗರು ಬೇಳೆ ಗೋಣಿ ಗರ	12—8—0	14—8—0
ಉದ್ದು ಗೋಣಿ ಗರ	10—8—0	11—4—0
ಊರುಬೆಲ ಖಂಡಿ ಗರ		50—0—0
ಉಪ್ಪು ಗೋಣಿ ಗರ	4—8—0	4—14—0
ಕೊಬ್ರಿ ಖಂಡಿ ಗರ	95—0—0	105—8—0
ಕೊಬ್ರಿಹಿಂಡಿ ಖಂಡಿ ಗರ		18—8—0
ಎಳ್ಳಿಂಡಿ ಖಂಡಿ ಗರ ಬೊಂಬ್ಯ	25—0—0	32—8—0
ಕೊಬ್ರಿ ಎಣ್ಣೆ ಮುಡಿ ಗರ	7—2—0	7—8—0
ಎಳ್ಳೆಣ್ಣೆ ಮುಡಿ ಗರ(ಕುರಾಸನ)		5—4—0
ಚಮಣಿ ಎಣ್ಣೆ ಪೆಟ್ಟಿಗೆ ಗರ	6—0—0	6—11—0
ಮೋರಸ್ ಸಕ್ಕರೆ ಮುಡಿ ಗರ		5—0—0
ಕಾಫಿ ಖಂಡಿ ಗರ	225—0—0	235—0—0
ಹೊಸಬೇಳಗೋಟು ಖಂಡಿಗರ	82—0—0	85—0—0
ಹೊಸ ಗೇರುಬೀಜ ಮುಡಿ ಗರ		2—13—6
ಕಬ್ಬಿಣ ಖಂಡಿ ಗರ		75—0—0
ಕಾಂಬ್ರ ತಗಡು ಮುಡಿ ಗರ	26—0—0	27—0—0
ಕಾಂಬ್ರ ಪಾತ್ರೆಗಳು ಮುಡಿ ಗರ		28—0—0
ಚೀನಿ ಬೆಳ್ಳಿ ತೀರು ಗರ		24—0—0
ಹಳ್ಳಿ ಹೆಸರು ಮುಡಿ ಗರ	5—2—0	5—4—0

ಪ್ರಕಟಣೆ.

ಕುಂದಾಪುರ ತಾಲೂಕ ನಂಬ್ರ 88ನೇ ಹಳ್ಳಿಹೊಳೆ ಗ್ರಾಮದ ಇರ್ಗಿಯಲ್ಲಿರುವ ಸುಬ್ರಾಯ ಚಾತರನ ಮಗ ಶ್ರೀನಿವಾಸ ಚಾತರನಾದ ನಾನು ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ:—ನಾನು ಮಕ್ಕಳುಸಂತಾನದ ಕಟ್ಟಳೆ ಆಚರಿಸುವ ಬ್ರಾಹ್ಮಣ ಕುಲದವ. ನನ್ನ ಅಜ್ಜ ಸಂಣ್ಣ ಚಾತರರಿಗೆ ಹಿರಿಯನಾದ 1ನೇ ಸುಬ್ರಾಯ ಚಾತರ, 2ನೇ ಕೃಷ್ಣ ಚಾತರ, 3ನೇ ನಾಗಪ್ಪ ಚಾತರ, 4ನೇ ಮಂಜಣ್ಣ ಚಾತರ, ಹೀಗೆ 4 ಜನ ಮಕ್ಕಳು. 1ನೇಯುವನೇ ನನ್ನ ತಂದೆಯು. ಇವಗೆ ನನ್ನ ಅಣ್ಣ ರಾಮಕೃಷ್ಣ ಚಾತರ ವ ನಾನು ಕೂಡಾ 2 ಜನ ಮಕ್ಕಳು. ನನ್ನ ತಂದೆಗೂ ಇವನ ತಮ್ಮಂದಿರಿಗೂ ವಿಭಾಗವಾಗಲಿಲ್ಲ. ನನ್ನ ತಂದೆಯ ಜೀವಕಾಲದ ವರೇಗೂ ಇವನೇ ನಮ್ಮ ಮನೆಯ ಆಡಳ್ತೆದಾರ ವ ಭೂಮಿಯ ಪಟ್ಟಾದಾರನಾಗಿ ಇದ್ದು ನಮ್ಮ ಇಡೀ ಕುಟುಂಬದ ಸಂರಕ್ಷಕನಾಗಿದ್ದ. 2ನೇಯುವನು ನನ್ನ ತಂದೆಯ ಜೀವಕಾಲದ ನಂತರಲೂ 4ನೇಯವ್ವನು ಅದಕ್ಕೆ ಮುಂಚಿತವಾಗಿಯೂ ಮೃತವಾಗಿದ್ದಾರೆ. ಇವರಿಬ್ಬರು ನಿಃಸಂತತಿಯವರು. 4ನೇಯುವನ ವಿಧವೆ ಸುಬ್ಬಮ್ಮನು ನಮ್ಮೊಟ್ಟಿಗೆ ಇದ್ದಾಳೆ. ನನ್ನ ತಂದೆ ಮೃತಪಡುವಾಗ್ಯೆ ನನ್ನ ಅಣ್ಣ ವ ನಾನು ಕೂಡಾ ಮ್ಯಾನರರು. ನನ್ನ ತಂದೆ ಕಾಲವಾದ ನಂತರ ಇವನ ತಮ್ಮ 3ನೇಯುವನು ನಮಗೆಲ್ಲರಿಗೂ ಯಜಮಾನನಾಗಿ ನಾವೆಲ್ಲರು ಅವನೊಳಗೆ ಸಂರಕ್ಷಿಸಲ್ಪಟ್ಟೆವು. ಈ ತನ್ಮಧ್ಯೆ ನನ್ನ ಅಣ್ಣ ರಾಮಕೃಷ್ಣ ಚಾತರನು ಮೃತವಾದ. ಇವನ ವಿಧವೆ ತಿಪ್ಪಮ್ಮ ಇವಳ ಹೆಣ್ಣು ಹುಡುಗಿ ಸಹ ನಮ್ಮ ಸಂಗಡಲೆ ಇದ್ದಾರೆ. ನನ್ನ ಚಿಕ್ಕತಂದೆಯಾದ 3ನೇಯುವನ ಜೀವಾಂತ್ಯದ ವರೇಗೆ ನಮ್ಮ ಗೃಹಕೃತ್ಯವು ಕುಂದಿಲ್ಲದೆ ನಡಿಯಿತು. ಇವನು ಮೃತನಾಗಿ 3 ವರುಷವಾಯಿತು. ಇವನಿಗೆ ಸೌಭದ್ರ್ಯಮ್ಮ ಎಂಬ ವಿಧವೆ ವ ಮಗ ಶುಮಾರು 10 ವರುಷದ ವೆಂಕಟ ಸುಬ್ಬ ಎಂಬ ಹುಡುಗ ಸಹ ಇದ್ದಾರೆ. ಆ 3ನೇಯುವನ ಮರಣಾನಂತರ ವಾರೀಸಿ ಶಿರಸ್ತೆಯ ಪ್ರಕಾರ ಈಗ ನಾನು ಗೃಹಕೃತ್ಯದ ಯಜಮಾನ ವ ಪಟ್ಟಾದಾರನಾಗಿದ್ದೇನೆ. ನನ್ನ ಕುಟುಂಬದ ಜೀವಂತ ವಾರಿಸ್ದಾರರೆಲ್ಲರು ಏಕಪಾಕದಲ್ಲಿ ನನ್ನಿಂದ ಸಂರಕ್ಷಿಸಲ್ಪಡುತ್ತಾರೆ. 3ನೇಯುವನು ಮೃತವಾಗುವ ಕಾಲದಲ್ಲಿ—ನಮ್ಮ ಗೃಹಕೃತ್ಯದಿಂದ ಹೊರಗೆ ಸಲಬೇಕಾದ ಸಾಲದ ರೂಪಾಯಿ 500—0—0 ಗೃಹಕೃತ್ಯದ ಖರ್ಚಿನ ಬಗ್ಯೆ ನಾನು ಮಾಡಿದ ಸಾಲದ ರೂಪಾಯಿ 500—0—0 ಈ ಪ್ರಕಾರ ಹೊರಗೆ ಸಲುವ ಸಾಲದ ರೂಪಾಯಿ ಒಂದು ಸಾವಿರ. ಮತ್ತು ಡಿಮೆಂಡ ನೋಟು ವೈಸಾಲ ದಸ್ತಾವೇಜು ಈಡುದಸ್ತಾವೇಜು ಮೊದಲಾದವುಗಳ ಪ್ರಕಾರ ಹೊರಗಿನಿಂದ ನಮ್ಮ ಗೃಹಕೃತ್ಯಕ್ಕೆ ಬರಬೇಕಾದ ಸಾಲ ರೂಪಾಯಿ 1309—0—0 ಸಹಾ ಆಗಿರುತ್ತದೆ. ನಮ್ಮ ಆಸ್ತಿಯ ತೀರ್ವೆ ರೂಪಾಯಿ 135ಕ್ಕೆ ಮಿಕ್ಕುತ್ತದೆ. ಈ ವಿನಹ ನಮ್ಮ ಗೃಹಕೃತ್ಯಕ್ಕೆ ಒಪ್ಪಿದ್ದ ಚಿನ್ನ ಬೆಳ್ಳಿ ಆಭರಣಗಳು ಶುಮಾರು ಎರಡು ಸಾವಿರ ರೂಪಾಯಿ ಬೆಲೆ ಬಾಳುವವುಗಳೂ, ವ ರೂಪಾಯಿ 300—0—0 ಕ್ರಯಬಾಳುವ ಪಶ್ವಾದಿ ಪಂಚಲೋಹಗಳೂ, ಸಹ ಆಗಿರುತ್ತವೆ. ನನ್ನ ಪ್ರಥಮ ಲಗ್ನವು 3ನೇಯುವನ ಯಜಮಾನಿಕೆಯಲ್ಲಿ ಆದ್ದು. ಆದರೆ ನನ್ನ ದುರಾದೃಷ್ಟದಿಂದ ಆ ನನ್ನ ಹೆಂಡತಿಯು ಆಕಸ್ಮಿತವಾಗಿ ಮೃತಳಾದಳು. ನಾನು ಈ ವರುಷ ಎರಡನೇ ಲಗ್ನ ಮಾಡಿಕೊಂಡಿದ್ದೇನೆ. ಈ ನನ್ನ ಕೃತ್ಯವು ನನ್ನ ಚಿಕ್ಕತಾಯಿ ಸೌಭದ್ರಮ್ಮಗೆ ಸಹನವಾಗದೆ ವೈಮನಸ್ಸು ಹುಟ್ಟಿಸಿಕೊಂಡು ಬೇರೆಯವರ ದುರ್ಬೋಧನೆಗೂ ಸೇರಿ ನನ್ನನ್ನು ನಷ್ಟ ಕಷ್ಟದ ಗಂಡಾಂತರದಲ್ಲಿಕ್ಕಬೇಕೆಂಬ ದುರಾಲೋಚನೆಯಿಂದ ನಮ್ಮ ಗೃಹಕೃತ್ಯಕ್ಕೆ ಹೊರಗಿನಿಂದ ಬರಬೇಕಾದ ಸಾಲ ಸಮ್ಮಂಧವಾದ ದಸ್ತಾವೇಜುಗಳ ಪೈಕಿ ರಿಜಿಸ್ತ್ರಿಯಾಗದ (ತನ್ನ ಗಂಡನ ಹೆಸರಲ್ಲಿರುವ) ಕೆಲವು ಡಿಮಾಂಡ ನೋಟುಗಳೂ ವೈಸಾಲದ ದಸ್ತವೇಜುಗಳೂ ಶುಮಾರು ರೂಪಾಯಿ 2000—0—0 ಬೆಲೆ ಬಾಳುವ ಚಿನ್ನ ಬೆಳ್ಳಿ ಆಭರಣಗಳೂ 3ನೇಯುವನ ವಿಧವೆ ಸೌಭದ್ರಮ್ಮನು ತನ್ನ ಗಂಡನ ಅಧೀನದಲ್ಲಿರುವವುಗಳನ್ನು ನನಗೆ ವಂಚಿಸಿ ತನ್ನ ಸ್ವಾಧೀನಮಾಡಿಕೊಂಡು ಇರುವದರ ವಿನಹಾ ವಾಯಿದೆ ಹೋಗಲಿಕ್ಕಿದ್ದ ತನ್ನ ಗಂಡನ ಹೆಸರಿನಲ್ಲಿರುವ ಕೆಲವು ಡಿಮೆಂಡ ನೋಟುಗಳ ಏವಜು ತನ್ನ ಸ್ವಾರ್ಜಿತದ್ದೆಂತ ನಡಿಸುವದಕ್ಕಾಗಿ ಅವುಗಳ ಬದಲಿಗೆ ತನ್ನ ಹೆಸರಲ್ಲೆ ಹೊಸ ನೋಟುಗಳನ್ನು ಸಮ್ಮಂಧಪಟ್ಟ ಕುಳಗಳಿಂದ ಬರಸಿಕೊಂಡಿರುವದಾಗಿಯೂ ನಿಷ್ಕಾರಣವಾಗಿ ಹೆಚ್ಚಿಗೆ ಸಾಲಮಾಡುವ ಯತ್ನದಲ್ಲಿದ್ದಾಳೆಂತಲೂ ನನಗೆ ತಿಳಿಯಬಂದದೆ. ಒಟ್ಟಾರೆ ಇವಳ ಇಂಥಾ ದುಷ್ಕೃತ್ಯಗಳು ನನಗೂ ನನ್ನ ಭಾಗದ ಸ್ಥಿರಚರಸೊತ್ತುಗಳಿಗೂ ಯಾವ ವಿಧದಿಂದಲೂ ಬಾಧಿಸದಂತೆ ಈಗಲೇ ಈ ಮೂಲಕ ವ್ಯಕ್ತಪಡಿಸಲಿಕ್ಕೆ ನಾನು ಅಗತ್ಯಪಡುತ್ತೇನೆ. ನಮ್ಮಲ್ಲಿ ಹೆಂಗಸರಿಗೆ ಗೃಹಕೃತ್ಯದ ಅಂದರೆ ಮನೆವಾರ್ತೆ ಕೆಲಸಗಳಲ್ಲದೆ ಬೇರೆ ಯಾವ ತರದ ಸ್ವಂತ ಸಂಪಾದನೆಯೂ ಇಲ್ಲಾ. ಹೊರಗಿನಿಂದ ಬರುವ 3ನೇಯುವನ ಹೆಸರಲ್ಲಿರುವ ದಸ್ತಾವೇಜುಗಳ ಪೂರಾ ಸಾಲಗಳು ನಮ್ಮ ಗೃಹಕೃತ್ಯಕ್ಕೆ ಒಪ್ಪಿದವುಗಳಲ್ಲದೆ ಅನ್ಯಥಾ ಇಲ್ಲಾ. ನನ್ನನ್ನು ವಂಚಿಸುವ ಉದ್ದೇಶ್ಯ ನನ್ನ ಚಿಕ್ಕತಾಯಿ ಸೌಭದ್ರಮ್ಮನು ಇವಳ ಗಂಡನ ಹೆಸರ ದಸ್ತಾವೇಜುಗಳ ಮೇಲೆ ಇರುವ ಹೊರಗಿನಿಂದ ಬರತಕ್ಕ ಸಾಲಗಳಿಗೆ ತನ್ನ ಹೆಸರಲ್ಲಿ ಹೊಸತಾಗಿ ದಸ್ತಾವೇಜುಗಳು ಮುಂತಾಗಿ ಮಾಡಿಕೊಂಡಿರುವದಾದರೆ. ಯಾ ಎಂದಾ ಮಾಡುವ ಪಕ್ಷದಲ್ಲಿ ಅಂಥಾ ಏವಜಿನ ಮೇಲೆ ನನಗಿರುವ ಸಮ ಅರ್ಧಾಂಶ ಹಕ್ಕಿಗೆ ಯಾವ ಬಾಧಕವೂ ಇರಕೂಡದು. ಅದಕ್ಕೆಲ್ಲಾ ನಾನು ಭಾಗಿಯೇ ಆಗಿದ್ದೇನೆ. ದಸ್ತಾವೇಜುಗಳು ಇವಳು ನನಗೆ ಕೊಡದೇ ವಂಚಿಸಿಟ್ಟುಕೊಂಡ ದೆಸೆಯಿಂದ ಅವುಗಳ ವ್ಯಾದೆ ಗುಜಾರಾಗಿ ವಸೂಲಿಗೆ ಯತ್ನವಿಲ್ಲದೇ ಹೋಗುವ ವಿದ್ಯಮಾನದಲ್ಲಿ ತತ್ಸಮ್ಮಂದವಾದ ನನ್ನ ಭಾಗದ ನಷ್ಟವೂ ವಂಚಿಸಿಟ್ಟುಕೊಂಡಿರುವ ಚಿನ್ನಾಭರಣಗಳ ಬಾಬಿನ ನನ್ನ ಅಂಶದ ಅರ್ಧಾಂಶ ಬೆಲೆಯೂ ಈ ನನ್ನ ಚಿಕ್ಕತಾಯಿ ಸೌಭದ್ರಮ್ಮನು ತನ್ನ ಮಗ ಮ್ಯಾನರನ ಅಂಶದ ಆಸ್ತಿ ಜವಾಬದಾರಿಯಿಂದ ನನಗೆ ತೆರಲಿಕ್ಕೆ ಬದ್ಧಳಾಗಿರುವದರ ವಿನಹಾ ನನ್ನ ಒಪ್ಪಿಗೆಯಿಲ್ಲದೆ ಇವಳು ಸ್ವೇಛೆಯಾಗಿ ಈಡು ಅಡವು ವೈಸಾಲ ಮುಂತಾದ್ದರಿಂದ ಸಾಲ ತೆಗೆದರೆ ಅಂಥಾ ಸಾಲವು ನನ್ನ ಭಾಗದ ಆಸ್ತಿಗಾಗಲೀ ನನಗಾಗಲೀ ಎಷ್ಟು ಮಾತ್ರವೂ ಬಾಧಿಸತಕ್ಕದಲ್ಲಾ. ಆ ಪೂರಾ ಸಾಲವು ಇವಳ ದೇಹ ಜವಾಬದಾರಿಯಿಂದ ಇವಳು ತೆರಲಿಕ್ಕೆ ಬದ್ಧಳು. ನನ್ನ ಅಣ್ಣನ ವಿಧವೆ ಮತ್ತು ನನ್ನ ಚಿಕ್ಕತಂದೆ 4ನೆಯುವನ ವಿಧವೆ ಇವರಿಬ್ಬರ ಪೈಕಿ ಯಾರಾದರು ಸ್ವೇಛೆಯಾಗಿ ಸಾಲಮಾಡಿದ ಪಕ್ಷಕ್ಕೂ ನನ್ನ ಚಿಕ್ಕತಾಯಿ ಸೌಭದ್ರಮ್ಮಗೆ ಈ ಮಟ್ಟಿಗೆ ಬದ್ಧಪಡಿಸಲ್ಪಟ್ಟ ಶರ್ತವೇ ಲಗಾವಾಗಿರತಕ್ಕದ್ದೆಂತ ಸಹಾ ಇದರಿಂದ ಬಹಿರಂಗಪಡಿಸುತ್ತೇನೆ.

ತಾರೀಕು 30ನೇ ಜುಲಾಯಿ 1916. ಇರ್ಗೆ ಶ್ರೀನಿವಾಸ ಚಾತರನ ರುಜು.

ಮಾರಾಟಕ್ಕೆ ತಯ್ಯಾರದೆ.

ಕಾಸರಗೋಡು ತಾಲೂಕು ಮೊಗ್ರಾಲ್ ಮಾಗಣೆ ಕಸಬಾ ಗ್ರಾಮದಲ್ಲಿರುವ ಸಾವುಕಾರ ಕುಂಞಪಕ್ಕಿ ಬ್ಯಾರಿಗಳವರ ಬಾಬತು ಸದರಿ ತಾಲೂಕು ಪುತ್ತೂರು, ಕುಂಬುಡಾಜೆ, ಕನ್ನೂರು, ಬಾರೆ, ಕೊಡ್ಲು, ಪಳ್ಳಿಕೆರೆ ಈ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಮಾರಾಟಮಾಡುವ ಬಗ್ಯೆ ಮಂಗಳೂರ ಶಹರ ಗೋಳಿಕಟ್ಟೆ ಬಜಾರದಲ್ಲಿರುವ ಅಬ್ದುಲ್‌ರಹಿಮಾನ ಹಜಾರ ಬ್ಯಾರಿಗಳ ಮಗ ಸಿ. ಮಹಮೂದ ಬ್ಯಾರಿಯಾದ ನಾನು ಪವರ್ ಓಪ್ ಯೆಟರ್ನಿ ಮೂಲಕ ಅಧಿಕಾರಪಟ್ಟಿರುತ್ತೇನೆ. ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ನನ್ನ ಕೂಡೆ ಕೇಳಿ ತಿಳಕೊಳ್ಳಬಹುದು.

C. Mohomood,
C/o. C. Abdul Rahiman Koragappa,
Hoige Bazar, Mangalore.

ಮಾರಾಟಕ್ಕೆ ಸಿದ್ಧವಾಗಿದೆ.

ಕುರಿಫಂಡಿನ ರಶೀದಿ	100ರ	ಪುಸ್ತಕ 1ಕ್ಕೆ	ಕ್ರಯ ರೂಪಾಯಿ	0—8—0.
,,	50	,,	,,	0—4—0.
,,	25	,,	,,	0—2—0.
ಗೇಣಿ ರಶೀದಿ	100	,,	,,	0-10—0.
,,	50	,,	,,	0—5—0.
,,	25	,,	,,	0—2—6.
ಯಾವುದಕ್ಕಾದರೂ ಉಪಯೋಗಿಸಲು ಅನುಕೂಲವಾದ				
ರಶೀದಿಗಳು	100	,,	,,	0—8—0.
,,	50	,,	,,	0—4—0.
,,	25	,,	,,	0—2—0.
ಪರಸ್ಪರ ಸಹಾಯಕ ಸಂಘದ ರಶೀದಿ	100ರ	ಪುಸ್ತಕ 1ಕ್ಕೆ		0—8—0.
ಕೋರ್ಟು ಫೋರ್ಮುಗಳು	100ಕ್ಕೆ			0—12-0.
ಗೇಣಿಚೀಟು, ಪರ್ಮಿಟು ಫೋರ್ಮುಗಳು	100ಕ್ಕೆ			0—12-0.

ಇವುಗಳಲ್ಲದೆ ಅಂಗಡಿ, ಭಂಡಸಾಲೆ ಲೆಕ್ಕಗಳಿಗೆ ಅಗತ್ಯವಿರುವ ಎಲ್ಲಾ ನಮೂನೆಯ ವರ್ಗ ಊಳಿಗ ಪುಸ್ತಕಗಳೂ, ನೋಟುಬೂಕುಗಳೂ, ಸ್ಟೇಶನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಕುತ್ತವೆ.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಷ್ಟು ಸಾರ ತೆಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳಂಬು ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗದ್ದೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಸಕಲ ವ್ರಣ ಮತ್ತು ನಾನಾವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಸ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: — "ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಕೇಶ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ನ್ಯೂದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ನಿಲ್ಲುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು

ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಬಿಜಾಪೆ ಮಶ್ಶಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬಿಳೀ ಕೂದಲಿಗೆ ಲೇಪಿಸುವದರಿಂದ ಬಿಳೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುತ್ತವೆ. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ.

ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ನೈಸರ್ಗಿಕ ಬಣ್ಣದಂತೆ ಕಪ್ಪಾಗುವದು. ದೀರ್ಘಕಾಲ ಬಣ್ಣ ಉಳಿಯುವದು. ಅನಂತರ ಕೂದಲು ಕೆಂಪು ಯಾ ತವುದು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address:—

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅದು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ವಾಜೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆಟಿಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರ ಹಾರಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕಠಿಯಾವಾರ್, ಬಸ್ರದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತು ರೂ. 1—8—0. ಅಂಚೆ ಹಾಸಲು ಆಣೆ 6.

ವಿಳಾಸ:—

J. M. D. Vas, Kankanady. S. C.
ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ಪಂಡಿತ್ ಟಿ. ಬಾಬುರಾಯರ

ಟಾನಿಕ್ ವೈನ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಆರ್. ಮಾರ್ಟಿನ್ಸನರ ಮಾತ್ರೆಗಳು ನಂ. 2.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯ ವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿ ಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು ? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ಖಾತ್ರಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತದೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೬—೦.

ಆರ್. ಮಾರ್ಟಿನ್ಸನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Building.*

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಸೆಟ್ಟು ೧ಕ್ಕೆ ೨—೦—೦. ದೊಡ್ಡ ಸೆಟ್ಟು ಉತ್ತಮ ತರಹಗಳಕ್ಕೆ ರೂ ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯ್ಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ಉಚಿತವಾಗಿ ಕಳುಹಿಸಲಾದೀತು, ಪೋಸ್ಟು ಕಾರ್ಡ ಬೇಕು.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ,
SIROMANI NARAYANA CHARYA & CO, ಚೌಕಾಂಬಾ, ಕಾಶಿ.
Choukhambay, BENARES CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

---

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು. ಪೂರ್ವಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

1916-17ನೇ ಇಸವಿಯ ಇಂಡಿಯಾ ಗವರ್ನರ್ಮೆಂಟ್ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲವು.

ಪೋಸ್ಟ್ ಆಫೀಸು ಉಪಭಾಗವು.

1931ನೇ ಇಸವಿಗೆ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲದ ಪರಂತು 1936 ನೇ ಇಸವಿಯೊಳಗಾಗಿ ನೂರಕ್ಕೆ ನೂರರಂತೆ ಪೂರಾ ಮುದ್ದತಿಯಾಗತಕ್ಕ ಸಾಲವು.

ಸಾಲಿಯಾನಾ ವರ್ಷ ಒಂದರ ಸೇಕಡಾ 4ರ ದರದ ಬಡ್ಡಿಯು ಅರ್ಧವರ್ಷಕ್ಕೊಮ್ಮೆ ಎಂದರೆ ಎಪ್ರೀಲ್ 1ನೇ ತಾರೀಕಿನಲ್ಲಿಯೂ ಮತ್ತು ಅಕ್ಟೋಬರ 1ನೇ ತಾರೀಕಿನಲ್ಲಿಯೂ ಸಲಾಯಿಸಲ್ಪಡುವುದು.

ಸೇಕಡಾ 3ರಂತೆ ಮತ್ತು 3½ ಯಂತೆ ರೂಪಾಯಿ ನಾಣ್ಯದಲ್ಲಿರುವ ಸಾಲಗಳನ್ನು ಮಾರ್ಪಡಿಸಿಕೊಳ್ಳಲು ಅರ್ಜಿದಾರರು ಅರ್ಹರಾಗಿರುತ್ತಾರೆ.

ಅರ್ಜಿಗಳು 100 ರೂಪಾಯಿ-ಯಾ-ಅದರ ಅವರ್ತ್ಯಗಳ ಬಗ್ಗೆ (ಎಂದರೆ 200, 300 ಈ ಮೇರೆಗೆ) ಇದ್ದು 5,000 ರೂಪಾಯಿಗಳಿಗೆ ಮೀರಿರ ಕೂಡದು ಮತ್ತು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಪ್ರತಿಯೊಂದ ಟಪ್ಪಾಲ್ ಆಫೀಸಿನಲ್ಲಿಯೂ 1916ನೇ ಇಸವಿಯ ಜೂನ್ 14ನೇ ತಾರೀಖಿನಿಂದ 1916ನೇ ಇಸವಿಯ ಸಪ್ಟಂಬರ್ 25ನೇ ತಾರೀಖಿನ (ಇದು ಸೇರಿ) ವರೆಗೆ ಅವು ಅಂಗೀಕರಿಸೋಣಾಗುವವು. ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರನಾಗಿದ್ದರೂ ಅಲ್ಲದಿದ್ದರೂ ಸರಿಯೇ, ಯಾವನೇ ಆದರೂ ಅರ್ಜಿಮಾಡಬಹುದು.

ಎಲ್ಲಾ ಮೊಬಲಗುಗಳಿಗೆ ಅರ್ಜಿಮಾಡಲ್ಪಡತಕ್ಕದ್ದೋ ಆ ಪೂರಾ ಮೊಬಲಗುಗಳನ್ನು ಅರ್ಜಿಗಳ ಸಂಗಡ ಡಿಪಾಜಿಟು ಮಾಡತಕ್ಕದ್ದು ಮತ್ತು ಅಷ್ಟೇ ಮೊಬಲಗುಗಳ (ಗವರ್ನರ್ಮೆಂಟ್ ಸೆಕ್ಯೂರಿಟಿ) ಪತ್ರಗಳು ಅರ್ಜಿದಾರರಿಗೆ ಕೊಡಲ್ಪಡುವುವು. ಡಿಪಾಜಿಟುಗಳು ರೊಕ್ಕವಾಗಿ ಕೊಡಲ್ಪಡಬಹುದು ಅಥವಾ ಪೂರಾ ಯಾ ಒಂದು ಭಾಗವು ಪ್ರಕೃತವಿರುವ ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳಿಂದ ವಿತ್‌ಡ್ರಾಯಲ್ ಮೂಲಕ ಈಸುಕೊಳ್ಳುವದರ ಮೂಲಕವಾಗಿ ಕೊಡಲ್ಪಡಬಹುದು.

ಟಪ್ಪಾಲು ಆಫೀಸಿನ ಮುಖಾಂತರ ಪಡೆದ ಮತ್ತು ಟಪ್ಪಾಲು ಆಫೀಸಿನ ಅಧಿಕಾರಿಗಳ ವಶದಲ್ಲಿಯೇ ಇಡಲ್ಪಟ್ಟ ಹೊಸ ಸಾಲಪತ್ರಗಳ ಬಡ್ಡಿಯ ಮೇಲೆ ಇನ್‌ಕಮ್‌ಟ್ಯಾಕ್ಸು ಹೊರಿಸೋಣಾಗಲಿಕ್ಕಿಲ್ಲ.

ಅರ್ಜಿದಾರರಿಗೆ, ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನರ್ಮೆಂಟಿನವರ ಸೇಕಡಾ 3½ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 96 ರೂಪಾಯಿ ಪ್ರಕಾರವೂ ಅಥವಾ ಸೇಕಡಾ 3ರ ಬಡ್ಡಿಯ ಸೆಕ್ಯೂರಿಟಿ ಪತ್ರಗಳನ್ನು ಹೊಂದಿದವರು ಅವುಗಳ ಅಂಕಿತ ಮೌಲ್ಯದ ಸೇಕಡಾ 82½ರ ಪ್ರಕಾರವೂ, ಅವರು ಪಡೆಯುವ ಹೊಸ ಸಾಲದ ಮೊಬಲಗಿಗೆ ಸಮಾನವಾಗುವಷ್ಟು ಮೊಬಲಗಿನ ಮಟ್ಟಿಗೆ ಮರುಭಾಗಿಯಾಗಿ ಹೊಸ ಸಾಲವಾಗಿ ಮಾರ್ಪಡಿಸುವ ಹಕ್ಕುಗಳು ಕೊಡಲ್ಪಡುವುವು.

ಮಾರ್ಪಡಿಸುವ ಹಕ್ಕುಗಳುಳ್ಳವರು ಮಾರ್ಪಡಿಸುವ ಬಗ್ಗೆ ಮಾಡುವ ಅರ್ಜಿಗಳು, 1916ನೇ ಇಸವಿಯ ಅಕ್ಟೋಬರ್ 16ನೇ ತಾರೀಖಿನಿಂದ 1917ನೇ ಇಸವಿಯ ಜನವರಿ 16ನೇ ತಾರೀಖಿನ (ಇದು ಸೇರಿ) ವರೆಗೆ ಅಂಗೀಕರಿಸಲ್ಪಡುವುವು. ಮಾರ್ಪಡಿಸೋಣಾಗುವ ಸೆಕ್ಯೂರಿಟಿ ಪತ್ರಗಳ ಮೇಲಿನ 1916ನೇ ಇಸವಿಯ ಸಪ್ಟಂಬರು 30 ತಾರೀಖಿನ ವರೆಗಿನ ಬಡ್ಡಿಯು ಮಾರ್ಪಡಿಸುವ ಕಾಲದಲ್ಲಿ ರೊಕ್ಕವಾಗಿ ಸಲಾಯಿಸಲ್ಪಡುವುದು. ಇವುಗಳ ಬದಲಾಗಿ ಸಾದರುಮಾಡಲ್ಪಟ್ಟ ಹೊಸ ಸಾಲದ ಮೇಲಿನ ಬಡ್ಡಿಯು 1916ನೇ ಇಸವಿಯ ಅಕ್ಟೋಬರ 1ನೇ ತಾರೀಖಿನಿಂದ ಎಣಿಸಲ್ಪಡುವುದು.

ತಪಸೀಲು ಸಹಿತ ಅಡಗಿರುವ ನೋಟೀಸಿನ ನಕಲುಗಳು ಮತ್ತು ಅರ್ಜಿಯ ಫಾರಂಗಳನ್ನು ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವ ಪೋಸ್ಟಾಫೀಸಿನಿಂದಾದರೂ ಪಡೆಯಬಹುದು. ಬೇಕಾದರೆ ಇದಕ್ಕೆ ಅನುಬಂಧಿಸಿರುವ ಅರ್ಜಿಯ ಫಾರ್ಮನ್ನೇ ಉಪಯೋಗಿಸಬಹುದು.

1916-1917ನೇ ಇಸವಿಯ ಇಂಡಿಯಾ ಗವರ್ನರ್ಮೆಂಟಿನವರು ತೆಗೆಯುವ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ಪೋಸ್ಟು ಆಫೀಸುಗಳ ಪರಿಮುಖವಾಗಿ ಮಾಡುವ ಅರ್ಜಿಯ ನಮೂನೆ.

(ಸೇವಿಂಗ್ಸ್ ಬ್ಯಾಂಕ್ ಕೆಲಸವು ನಿರ್ವಹಿಸಲ್ಪಡುವ ಯಾವದೊಂದು ಪೋಸ್ಟ್ ಆಫೀಸಿನಲ್ಲಿ 1916ನೇ ಇಸವಿಯ ಸಪ್ಟಂಬರ 25ನೇ ತಾರೀಕು ದಾಟಿಹೋಗುವದರೊಳಗಾಗಿ ಹಾಜರು ಮಾಡಲ್ಪಡಬೇಕು. ಅವಶ್ಯವಿದ್ದರೆ ಇದೇ ಫಾರ್ಮನ್ನು ಕತ್ತರಿಸಿ ಉಪಯೋಗಿಸಬಹುದು.)

.... ಬಹಳ ಸ್ಪಷ್ಟವಾಗಿ ಬರೆಯಬೇಕಾದ.

ನಾನು 1916ನೇ ಇಸವಿಯ ಜೂನ್ 8ನೇ ತಾರೀಕಿನ ಇಂಡಿಯಾ ಗಜೇಟಿನ ವಿಶೇಷ ಸಂಚಿಕೆಯಾಗಿ ಫಾಯಿಸ್ ಮಾಡಲ್ಪಟ್ಟ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ 1916-17ನೇ ವರ್ಷದ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಪೈಕಿ ರೂ. .... ಬಗ್ಗೆ ಈ ಮೂಲಕ ದರಖಾಸ್ತು (ಅರ್ಜಿ) ಮಾಡುತ್ತೇನೆ.

ನಾನು ದರಖಾಸ್ತು ಮಾಡಿದ ಸಾಲದ ಮೊಬಲಗಿನ ಬಗ್ಗೆ,

(1) ನಾನು ರೊಕ್ಕವಾಗಿ ರೂ. .... ಚೆಕ್ ಮೂಲವಾಗಿ ರೂ. .... ಈ ಮೂಲಕ ಒಪ್ಪಿಸುತ್ತೇನೆ.

(2) ಪೋಸ್ಟು ಆಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ನನ್ನ ಲೆಕ್ಕದಲ್ಲಿ ಜಮ ಇರುವ ಮೊಬಲಗಿನಿಂದ ರೂ. .... ಈ ಬಗ್ಗಾಗಿ ಈಸುಕೊಳ್ಳಲು ನಾನು ಅಧಿಕಾರಗೊಳಿಸುತ್ತೇನೆ ಮತ್ತು ಪಾಸ್‌ಬುಕನ್ನು ಇದರೊಂದಿಗೆ ಲಗತ್ ಮಾಡಿದ್ದೇನೆ.

ಜುಮಲಾ ....

(ರೊಕ್ಕವಾಗಿ ಯಾ ಚೆಕ್ ಮೂಲವಾಗಿ ಪಾವತಿಮಾಡಿದ ಮೊಬಲಗುಗಳನ್ನು ಮತ್ತು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಿಂದ ಈಸುಕೊಂಡು ಪಾವತಿಮಾಡಿದ ಮೊಬಲಗುಗಳನ್ನು ಆ ಬಗ್ಗೆ ಬಿಟ್ಟ ಸ್ಥಳಗಳಲ್ಲಿ ಪ್ರತಿಪ್ರತ್ಯೇಕವಾಗಿ ಕಾಣಿಸತಕ್ಕದ್ದು. ಅನಾವಶ್ಯಕವಾದ ವಾಕ್ಯಗಳು ಯಾವುವೂ ಇದ್ದರೆ ಅವನ್ನು ಹೊಡೆದುಬಿಡತಕ್ಕದ್ದು.)

A. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗನ್ನು ನನ್ನ ಬಗ್ಗಾಗಿ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಅಕೌಂಟಂಟ್ ಜನರಲ್‌ರವರು ಇಟ್ಟುಕೊಳ್ಳಬಹುದಾಗಿ ಮತ್ತು ಆ ಬಾಬತು ಬಡ್ಡಿಯನ್ನು--

(i) .... ಪೋಸ್ಟ್ ಆಫೀಸಿನಲ್ಲಿ ತೆರೆದಿರುವ ನನ್ನ ಪ್ರಕೃತದ ನಂ. .... ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, (ಅರ್ಜಿದಾರನಿಗೆ ಈ ಮೊದಲೇ ತೆರೆಯಲ್ಪಟ್ಟ ಲೆಕ್ಕವು ಇಲ್ಲದಿದ್ದರೆ (i)ನೇ ಕ್ಲಾಜನ್ನು ಹೊಡೆದುಬಿಡತಕ್ಕದ್ದು).

(ii) .... ಪೋಸ್ಟ್ ಆಫೀಸಿನಲ್ಲಿ ಈ ಬಗ್ಗಾಗಿ ತೆರೆಯಲ್ಪಡುವ ಒಂದು ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ, ಜಮಾ ದಾಖಲು ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. ನನ್ನ ಬಳಿಯಿಂದ ಅಂಗೀಕರಿಸೋಣಾದ ಸಾಲದ ಮೊಬಲಗಿನ ಬಗ್ಗೆ .... ಖಜಾನೆಯಲ್ಲಿ ಬಡ್ಡಿ ಪಾವತಿಯಾಗುವಂತೆ ನಮೂದಿಸಲ್ಪಟ್ಟು ಈ ಕೆಳಗಿನ ಮೌಲ್ಯದ ಪ್ರಾಮಿಸರಿ ನೋಟುಗಳು ನನಗೆ ಕೊಡಲ್ಪಡಬೇಕಾಗಿ ಅಪೇಕ್ಷಿಸುತ್ತೇನೆ.

(A ಅಥವಾ B ಕಲಮನ್ನು ಭರಾಯಿಸಿ ಉಳಿದದ್ದನ್ನು ಹೊಡೆದುಬಿಡತಕ್ಕದ್ದು.)

1916-17ನೇ ಇಸವಿಯ ಸೇಕಡಾ 4ರ ಬಡ್ಡಿಯ ಕನ್‌ವರ್ಶನ್ ಲೋನ್ ಎಂಬ ಮಾರ್ಪಡಿಸಬಹುದಾದ ಸಾಲದ ಬಗ್ಗೆ ನನ್ನಿಂದ ದರಖಾಸ್ತು ಮಾಡಲ್ಪಟ್ಟ ಮೊಬಲಗಿಗೆ ಸಮಾನವಾದಷ್ಟು ಮೊಬಲಗಿನಮಟ್ಟಿಗೆ ಸೇಕಡಾ 3½ ಯಾ 3ರ ಬಡ್ಡಿಯ ರೂಪಾಯಿ ನಾಣ್ಯದಲ್ಲಿರುವ ಇಂಡಿಯಾ ಗವರ್ನರ್ಮೆಂಟಿನವರ ಸೆಕ್ಯೂರಿಟಿ ಪತ್ರಗಳನ್ನು ಮಾರ್ಪಡಿಸಲು ಸ್ವಾತಂತ್ರ್ಯಗೊಳಿಸುವ ಒಂದು ಹುಕುಮು ಯಾನೆ ಅಧಿಕಾರಪತ್ರವನ್ನು ಸಹಾ ನನಗೆ ಕೊಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹೆಸರು .... ವಿಳಾಸ .... ತಾರೀಖು ....

ಪೋಸ್ಟ್ ಆಫೀಸಿನಲ್ಲಿ ಹಾಜರು ಮಾಡಿದ ತಾರೀಖು .... ರಿಜಿಸ್ಟರು ನಂ. ....

ಅಂಗೀಕರಿಸುವ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು. (ಹೆಡ್ ಪೋಸ್ಟ್ ಮಾಸ್ಟರನಿಂದ ನಮೂದಿಸಲ್ಪಡತಕ್ಕದ್ದು.)

ಹೆಡ್ ಆಫೀಸು ಸ್ಟಾಂಪು.

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ.

ದ್ರಾಕ್ಷೆಯ ಸಾರ.

(Pure Grape Juice).

ಅಮೇರಿಕೆಯೊಳಗಿನ ಭಾರಿ ಕಂಪೆನಿಯೊಳಗೆ ತಯಾರಿಸಿದ ದ್ರಾಕ್ಷೆ ಹಣ್ಣಿನಿಂದ ತೆಗೆದ ಈ ಸಾರವು ನಿರಾಶ ಸ್ಥಿತಿಯಲ್ಲಿರುವ ಕಠಿಣ ರೋಗಿಗಳಿಗೆ ನೈಸರ್ಗಿಕ ಆಹಾರವೂ ಔಷಧಿಯೂ ಆಗಿದೆ. ಎಲ್ಲಾ ವಿಧದ ಜ್ವರ, ಸನ್ನಿಪಾತಜ್ವರ, ನೇವಸ, ಮಲಬದ್ಧತೆ, ದೀರ್ಘಕಾಲದ ತಲೆಸಿಡಿತ, ಅಜೀರ್ಣರೋಗ, ಕ್ಷಯರೋಗ, ಕೆಮ್ಮು, ನೆಗಡಿ, ಕಲಿಜೆಯ ರೋಗಗಳು, ಚರ್ಮರೋಗಗಳು, ಹೆಂಗಸರ ಮುಟ್ಟಿನದೋಷಗಳು, ಗರ್ಭಧಾರಣೆ ಕಾಲದಲ್ಲಿಯ ವಾಂತಿ, ಉಷ್ಣಭೇದಿ, ಅತಿಸಾರ, ಈ ಮೊದಲಾದ ರೋಗಗಳಿಗೆ ಕೈಕಂಡ ಔಷಧಿಯೂ ದುರ್ಬಲರಿಗೆ ಆಹಾರವೂ ಆಗಿದೆ. ಇದರಲ್ಲಿ ಅಲ್ಕಹೋಲ್ ಯಾ ಮದ್ಯ ಸೇರಿಲ್ಲ. ಮಕ್ಕಳೂ, ಹೆಂಗಸರೂ, ಮುದುಕರೂ ಧಾರಾಳವಾಗಿ ಸೇವಿಸಬಹುದು. ದೀರ್ಘಕಾಲದ ಅನೇಕ ಕ್ಷಯರೋಗಿಗಳು ಇದರ ಸೇವನೆಯಿಂದ ಗುಣಹೊಂದಿರುವರೆಂತ ಚಿಕಾಗೋ ನಗರದ ಡಾಕ್ಟರ್ ಫೋಸ್ಟರ್ ಎಮ್. ಡಿ. ಯವರು ಅನುಭವದಿಂದ ಹೇಳುವರು.

ಕ್ರಯ ಶೀಸೆ 1ಕ್ಕೆ ರೂ. 2—0—0. ವಿ. ಪಿ. ಬೇರೆ.

ಟೊರಕಬ್.

ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ಶೀಘ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇಟು. ಔಷಧಿಯ ಕ್ರಯ ಶೀಸೆ 1ಕ್ಕೆ ರೂ. 1-8-0; ವಿ. ಪಿ. ಸಹಿತ ರೂ. 1-12-0.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು, ಸುಗಂಧವಿಲಾಸ, ರಥಬೀದಿ, ಮಂಗಳೂರು.

Can be had at—**Electro Homeopathic Dispensary,**
Hampankatta, Mangalore.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡ್ಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರ, ಮೈಸೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಅರಗಜಾ:— ಇದು ಮತ್ತೊಂದು ವಿಧವಾದ ಪರಿಮಳದ್ರವ್ಯವು. ಇದನ್ನು ಪ್ರತ್ಯೇಕವಾಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಬಹುದು ಪ್ರತ್ಯೇಕವಾಗಿ ಶರೀರಕ್ಕೆ ಹಚ್ಚಿಕೊಳ್ಳಬಹುದು. ಮುಖಕ್ಕೆ ತಿಲಕವನ್ನು ಇಟ್ಟುಕೊಳ್ಳಬಹುದು, ದಿವ್ಯವಾದ ಉಡುಪುಗಳಿಗೆ, ವಸ್ತ್ರಗಳಿಗೆ, ಕೈಗುಡ್ಡೆಗಳಿಗೆ ಹಚ್ಚಬಹುದು. ಇದರ ಸುವಾಸನೆಯನ್ನು ಹೇಳಲು ಸಾಧ್ಯವಿಲ್ಲ. ಇದನ್ನು ದೇಹಕ್ಕೆ ಹಚ್ಚಿಕೊಂಡನಂತರ ಮೂರು ದಿವಸದವರಿಗು ಪ್ರತಿನಿತ್ಯ ಅಭ್ಯಂಗಸ್ನಾನಮಾಡಿದರೂ ಪರಿಮಳ ಬಿಡದೇ ಇರುತ್ತದೆ. ಕ್ರಯ ಡಬ್ಬಿ 1ಕ್ಕೆ 8 ಆಣೆಗಳು 12 ಡಬ್ಬಿಗಳವರಿಗು ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕ.

ಅಂಬರ್:— ಈ ಸುಗಂಧದ್ರವ್ಯವನ್ನು ಸ್ವಲ್ಪ ತೆಗದುಕೊಂಡು ಧೋತ್ರಗಳು, ಉಡುಪುಗಳು, ಮೊದಲಾದ ಬಟ್ಟೆಗಳಿಗೆ ಹಾಕಿದರೆ ಸುವಾಸನೆಕೊಡುವದಲ್ಲದೆ, ಬಟ್ಟೆಗಳಿಗೆ ಹುಳ ಮುಂತಾದ ಕ್ರಿಮಿಗಳು ಸೇರದೇ ಇರುತ್ತದೆ. ಶರೀರಕ್ಕೂ ಮುಖಕ್ಕೂ ಹಚ್ಚಿಕೊಂಡರೆ ಮುಖದಲ್ಲಿಯು ಶರೀರದಲ್ಲಿಯು ಉಂಟಾಗುವ ಕಪ್ಪುತುರಿ ಪೊಹೆ ಸಂಬಂಧವಾದ ಹುಳುಕಡ್ಡಿ ಮೊದಲಾದವು ಹೋಗಲಾಡಿಸಿ ತೇಜಸು ಉಂಟುಮಾಡುತ್ತದೆ. ತಾಂಬೂಲದ ಸಂಗಡ ಉಪಯೋಗಿಸಬಹುದು. ಇದನ್ನೇ ಸ್ವಲ್ಪ ತೆಗದು ಸ್ನಾನಮಾಡುವ ಬಿಸಿನೀರಲ್ಲಿ ಸೇರಿಸಿದರೆ ನೀರೆಲ್ಲಾ (ಪನ್ನೀರು) ಗುಲಾಬಿಯಂತೇ ಪರಿಮಳಿಸಿ ಮನಸ್ಸಿಗೆ ತೃಪ್ತಿಕರವನ್ನು ಕೊಟ್ಟು ದೇಹಶ್ರಮವನ್ನು ನಿವಾರಣಮಾಡುತ್ತದೆ. ಡಬ್ಬಿ 1ಕ್ಕೆ 8 ಆಣೆ, 1 ಮೊದಲು 12 ಡಬ್ಬಿಗಳವರಿಗೆ ವಿ. ಪಿ. 5 ಆಣೆ ಪ್ರತ್ಯೇಕವು.

ಇಂಡಿಯನ್ ಪೆಟಲ್‌ಡಸ್ಟ್:— ಈ ಮನೋಹರವಾದ ಸುಗಂಧ ಒಂದು ಪೊಟ್ಟವು ನೀವು ವಸ್ತ್ರವಿಡುವಲ್ಲಿಯಾಗಲಿ ವಸ್ತ್ರದ ಪೆಟ್ಟಿಗೆಯಲ್ಲಿಯಾಗಲಿ ಇಟ್ಟರೆ ನಿಮ್ಮ ಎಲ್ಲಾ ಉಡಿಗೆ ತೊಡಿಗೆಗಳಿಗೆ ಮಧುರವಾದ ಮತ್ತು ದೀರ್ಘಕಾಲದವರಿಗೆ ಉಳಿಯುವ ಸುವಾಸನೆಯನ್ನು ಕೊಡುವದು. ಮತ್ತು ನಿಮ್ಮ ವಸ್ತ್ರವನ್ನು ಕ್ರಿಮಿಗಳ ಅನಾಹುತದಿಂದ ಕಾಪಾಡುವದು. ಶಾಂತವಾದ ಮತ್ತು ಇಂಪಾದ ಪರಿಮಳದಿಂದ ಅಪ್ರಮೇಯವಾಗಿದ್ದು ಅದರ ಮೃದು ಸುಗಂಧಕ್ಕೂ ಸ್ಥಿರವಾದ ಪರಿಮಳಕ್ಕೂ ಅನೇಕರಿಂದ ಹಾರೈಸಲ್ಪಡುವದು. ಈ ಅದ್ವಿತೀಯವಾದ ಸುಗಂಧವು ಪರಿಮಳಾತಿಶಯದಿಂದಲೂ, ಸುಗುಣ ರಮ್ಯತೆಯಿಂದಲೂ ಸ್ಥಿರವಾಗಿ ನಿಂತೀತು. ಪೂರ್ವವಾಗಿಯು, ವಿಸ್ತಾರವಾಗಿಯೂ ವ್ಯಾಪಿಸಿಕೊಂಡದೆ. ಅದು ವಿಶೇಷವಾದ ಕ್ರಿಮಿನಾಶಕವೂ ಅಪೂರ್ವ ಗುಣಗಳಿಂದ ಕೂಡಿದ ಔಷಧವೆ ಸ್ವಚ್ಛಕಾರಿಯೂ ಆಗಿರುವದು. ಮತ್ತು ಈಗ ಇರುವವುಗಳಲ್ಲಿ ಅತ್ಯಂತ ಒಳ್ಳೆ ಕ್ರಿಮಿನಾಶಕ ಔಷಧವಲ್ಲದೆ ಹಿಂದೂಸ್ಥಾನದ ಅತ್ಯಂತ ಮನೋಹರವಾದ ವಿವಿಧ ಔಷಧಗಳ ಸಾರವು. ಕ್ರಯ ಪೊಟ್ಟ 1ಕ್ಕೆ 4 ಆಣೆಗಳು.

ವಸ್ತ್ರಗಳಿಗೆ ವಿಲಾಸಹಾಕುವ ಕೆಡದಂಥಾ ಶಾಯಿ:— ಹರಳೆ ಉಣ್ಣೆ ರೇಷ್ಮೆ ಮುಂತಾದ ವಸ್ತ್ರಗಳಿಗೆ ಇದರಿಂದ ವಿಲಾಸಹಾಕಿದಲ್ಲಿ ಎಷ್ಟಾವರ್ತಿ ತೊಳದರೂ ಇಸ್ತ್ರಿಮಾಡಿದರೂ ವಿಲಾಸವು ಯಾವಾಗಲೂ ಕೆಡುವದಿಲ್ಲ. ಈ ಶಾಯಿಯಿಂದ ವಿಳಾಸಹಾಕಿದಲ್ಲಿ ವಸ್ತ್ರಗಳು ಕಳವು ಹೋಗದೆಯು ಇರುವಂತೆ ಕಾಯುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು 5 ಆಣೆಗಳು ಬೀಳುವದು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರಸ್ಥವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ತಂಜಾವೂರ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಭಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವರು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—.

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೆತ್ತ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯಾರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.
ಪೋಸ್ಟ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝುಪರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಯಾವಾಗಲೂ ತಯಾರಿದೆ!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!



ಜೇಬು ದೀಪಗಳು.

ದೀವಟಿಗೆಗಳು.

ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.

ಬಡವರಿಗೂ, ದೊಡ್ಡವರಿಗೂ, ಪ್ರತೀ ಒಬ್ಬೊಬ್ಬನಿಗೂ, ಸರ್ವರಿಗೂ ಪ್ರಯೋಜನವಾದವುಗಳು!

ಕೆ. ದಯಾ ಮತ್ತು ಕಂಪೆನಿ,

ಹಂಪನಕಟ್ಟೆ, ಮಂಗಳೂರು.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ, ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ. ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

ಅರ್ಧ ಬೆಲೆ! ಅರ್ಧ ಬೆಲೆ!!

ಒಂದು ತಿಂಗಳು ಮಾತ್ರ.

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಒಳ್ಳೇ ಸಮಯ ಕೊಡುವಂಥಾದ್ದು, ಸದ್ಗೃಹಸ್ಥರು ಧರಿಸಲು ಯೋಗ್ಯವಾದದ್ದು ಆಗಿದೆ. ಮೂರು ವರುಷದ ಗ್ಯಾರಂಟಿ ಇದೆ. ಕ್ರಯ ರೂ. 8. ಈಗ ರೂ. 4. ಬೊನಲಿವರ್ ವಾಚು ಕ್ರಯ ರೂ. 11. ಈಗ ರೂ. 5—8—0. ನಿಕಲ್ ಹಂಟಿಂಗ್ ವಾಚು ಕ್ರಯ ರೂ. 12. ಈಗ ರೂ. 6. ಬೆಸ್ಟ್‌ರಿಸ್ಟ್ ವಾಚು ಚರ್ಮದ ಸ್ಟ್ರಾಪ್ ಸಹಿತ ರೂ. 10. ಈಗ ರೂ. 5. ಲೇಡಿಸ್ 9 ಕರೆಟ್ ಚಿನ್ನದ ವಾಚು ಕ್ರಯ ರೂ. 32. ಈಗಿನ ರೂ. 16. ಲೇಡಿಸ್ ಬೆಳ್ಳಿ ವಾಚು ರೂ. 14. ಈಗ ರೂ. 7. ಗಟ್ಟಿ ಮತ್ತು ನಂಬಿಕೆಗೆ ಯೋಗ್ಯವಾದ 8 ದಿವಸಕ್ಕೊಮ್ಮೆ ಕೀ ಕೊಡುವ ವ್ಹೈಟ್ ಟೇಸ್ ವಾಚು ನಿಕಲ್‌ಕೇಸ್ ಒಪನ್ ಫೇಸ್ ರೂ. 18. ಈಗ ರೂ. 9. ಅದೇ ಬೆಳ್ಳಿಯ ಕೇಸ್ ಉಳ್ಳದ್ದು ರೂ. 24. ಈಗ ರೂ. 12. ಅದೇ ಬೆಳ್ಳಿ ಹಂಟಿಂಗ್ ಕೇಸ್ ರೂ. 30. ಈಗ ರೂ. 15. ರಿಸ್ಟ್ ವಾಚು ವಿನಹಾ ಇತರ ವಾಚುಗಳನ್ನು ಕೊಂಡುಕೊಳ್ಳುವ ಪ್ರತಿ ಗಿರಾಕಿಗಳಿಗೆ ಒಂದು ವಾಚುಸರಪಣಿಯೂ ಒಂದೇ ಸಲ 6 ವಾಚುಗಳನ್ನು ಕೊಂಡುಕೊಳ್ಳುವವರಿಗೆ ಒಂದು ವಾಚುವುಗಸಾಟಿಯಾಗಿಯೂ ದೊರಕುವದು.

The Century Watch Agency,
25, Madan Mitra Lane, CALCUTTA.

ಕೋಮಲ ವಿಲಾಸವು

ಎಂಬ ಹೆಸರಿನ ಬ್ರಾಹ್ಮಣರ ಖಾನಾವಳಿಯು.

ಪ್ರೊಪ್ರೈಟರ್ ಮತ್ತು ಮ್ಯಾನೇಜರ್—ಸೋಮೇಶ್ವರ ನರಸಿಂಗರಾವ್.

ಈ ಖಾನಾವಳಿಯಲ್ಲಿ ಬ್ರಾಹ್ಮಣ ಜಾತಿಯವರಿಗೂ, ಇತರ ಜಾತಿಯವರಿಗೂ, ಊಟವೂ, ಫಲಾಹಾರವೂ, ಕಾಫಿ, ಚಾ ಮೊದಲಾದ ಪಾನಗಳೂ, ಉಳಕೊಳ್ಳಲಿಕ್ಕೆ ಜಾಗವೂ ದೊರಕುವದು.

ತಿಂಡಿ ಪದಾರ್ಥಗಳು ಕೆನಡಾ ಜಿಲ್ಲೆಯಲ್ಲಿ ಮಾಡುವ ಕ್ರಮದಲ್ಲಿ ಮಾಡೋಣಾಗುತ್ತವೆ. ದರ ಕಡಿಮೆ.

ಈ ಖಾನಾವಳಿಯು ಮದ್ರಾಸಿನಲ್ಲಿ ಹ್ಯಾಕೋರ್ಟಿಗೆ ಬಹಳ ಸಮೀಪವಾಗಿ ಫ್ರಾನ್ಸಿಸ್ ಜೋಸೆಫ್ ರಸ್ತೆ ನಂಬ್ರ 2ನೇ ಕಟ್ಟೋಣದಲ್ಲಿರುತ್ತದೆ. ಮದ್ರಾಸ್ ಪಟ್ಟಣಕ್ಕೆ ಬರುವ ಕಕ್ಷಿಗಾರರಿಗೂ, ವಿದ್ಯಾರ್ಥಿಗಳಿಗೂ, ಇತರ ಗೃಹಸ್ಥರಿಗೂ, ಕುಲಸ್ತ್ರೀಯರಿಗೂ ಬೇಕಾಗಿರುವ ಅನುಕೂಲತೆಗಳಿವೆ.

ಮದ್ರಾಸಿಗೆ ಬರುವವರು ಕೆಳಗೆ ಇಂಗ್ಲಿಷಿನಲ್ಲಿ ಬರೆದ ವಿಳಾಸಕ್ಕೆ ಕಾಗದ ಬರೆದರೆ ಅಥವಾ ತಂತೀ ಮೂಲಕ ತಿಳಿಸಿದರೆ ರೈಲ್ವೆ ಸ್ಟೇಶನಿಗೆ ನಮ್ಮ ಕಡೆಯಿಂದ ಜನರನ್ನು ಕಳುಹಿಸೋಣಾಗುವದು.

Telegraphic Address:—
"RESTAURANT"
(MADRAS).

"KOMALA VILAS"
No. 2. Francis Joseph Street,
Next Y.M.C.A. George Town,
MADRAS.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು. ಮತ್ತು ಅದು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ಕರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್, ಮಂಗಳೂರು, ದ. ಕ.

ಡಬಾರ್ಸ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*
ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	3ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ 6ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣು ಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣು ಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ತುಳುಕರ್ಮೋಪದೇಶ	0	2	0
ಹನುಮದ್ಭೀಮ ಮಧ್ವಾಸ್ತೋತ್ರ	0	2	0	ಆಚಾರದರ್ಪಣ	0	4	0

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಇನಾಂ ಸಾಮಾನು 50. ಇನಾಂ. ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸೌಂದರ್ಯವಾಗಿ ಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳು 6, ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೊಗಳು 6, ಸುವಾಸನೆ ಚಿತ್ರದ ಪೆಟ್ಟಿ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ಲೇಸ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3. ಇರುಳಪ್ಪನ್ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾ ರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯು ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,
ಮಂಗಳೂರು.

ಸುಲಭ ಬೆಲೆ! ಸದ್ಬೋಧಕ ಗ್ರಂಥಮಾಲೆ: ೧. ಸುಲಭ ಬೆಲೆ!!

ದೈವಭಕ್ತಿ.

ಭಗವದ್ಭಕ್ತಿಯನ್ನು ಚೆನ್ನಾಗಿ ಬೋಧಿಸುವುದು! ಮುದ್ದಾದ ಮುದ್ರಣ!! ಬೆಲೆ: ಒಂದಾಣೆ ಮಾತ್ರ!!! ೧೨ಕ್ಕೆ ೧ ಉಚಿತ.

ಅಚ್ಚಿನಲ್ಲಿದೆ! ಸದ್ಬೋಧಕ ಗ್ರಂಥಮಾಲೆ: ೨. ಬೇಗ ಬರೆಯಿರಿ!!

ಸುಮಿತ್ರ.

ಈ ಹೆಸರಿನ ಮನೋಹರ ಕಾದಂಬರಿಯು ಬೇಗನೆ ಪ್ರಕಾಶಿಸಲ್ಪಡುವುದು. ಬೆಲೆ: ಮೂರಾಣೆ. ಅಗೋಸ್ಟು ಅಖೈರಿಯೊಳಗೆ ಹೆಸರನ್ನು ದಾಖಲ್ಮಾಡಿಕೊಳ್ಳುವವರಿಗೆ: ಎರಡು ಆಣೆ ಮಾತ್ರ.

ನಮ್ಮಲ್ಲಿ ದೊರೆಯುವ ಇತರ ಕನ್ನಡ ಗ್ರಂಥಗಳು.

ಭೂತಾಳಪಾಂಡ್ಯರಾಯನ ಅಳಿಯಕಟ್ಟು ೧-೪-೦. ಆಹ್ನಿಕಮಂಜರೀ (ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕ) ೧-೦-೦. ಜಯವಿಜಯ. (ಅದ್ಭುತ ನವರಸ ಭರಿತವಾದ ಮನೋಹರ ಕಾದಂಬರಿ) ೦-೧೨-೦. ಗೋವಿನ ಚರಿತ್ರೆ. (ಹೊಸ ಪುಸ್ತಕ) ೦-೨-೦.

ಇವುಗಳಲ್ಲದೆ ಬೇರೆ ಬಗೆಬಗೆಯ ಗದ್ಯ ಪದ್ಯಗಳ ಪುಸ್ತಕಗಳು; ಯಕ್ಷಗಾನ, ನಾಟಕ, ಕಾದಂಬರಿ, ಕಥೆ ಮೊದಲಾದ ಪುಸ್ತಕಗಳೂ; ಶಾಲಾ ಬಾಲಕರಿಗೆ ಬೇಕಾದ ಪಾಠಪುಸ್ತಕಗಳೂ; ಬರವಣಿಗೆ ಸಾಮುಗ್ರಿಗಳೂ; ನಾಲಗೆಗೆ ರುಚಿಕರವಾದ ಅತ್ಯುತ್ತಮ ತಿಂಡಿಯ ಪದಾರ್ಥಗಳೂ; ಅಮೃತಾಂಜನ, ಡೋಂಗರೆಯವರ ಬಾಲಾಮೃತ, ಕಸ್ತೂರಿ ಮಾತ್ರೆ ಮೊದಲಾದ ಪೇಟೆಂಟ್ ಔಷಧಿಗಳೂ; ಉತ್ತಮ ತರದ ಸುಗಂಧ ದ್ರವ್ಯಗಳೂ; ತರ ತರದ ಸಾಬೂನುಗಳು, ಅನೇಕ ನಮೂನೆಯ ಅಂಗಿ ಗುಂಡಿಗಳು, ಜಿಂಟಾನ, ದಂತಮಂಜನ, ಪೊಮೆಡ್, ವೆಸ್ಲಿನ್ ವಗೈರೆ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್, ಸುರತ್ಕಲ್, ದ. ಕ.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರದಿಂದ ಆಗುವ ಅಪಾಯವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾದಿಮನೋಹರಕೋಚಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ [illegible] ಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 485

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ 1—4—0. ಟಪ್ಪಾಲು ಖರ್ಚು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ. 8ನೇ ಸೆಪ್ಟಂಬರ ಶುಕ್ರವಾರ 1916. | ಸಂಚಿಕೆ 36

296 ಪುಟಗಳು! ಕಾಗದದ ಬೆಲೆ ಮಾತ್ರ!!

ಅರ್ಧ ಬೆಲೆ.

ಶ್ರೀಯುತ ಎನ್. ಎ. ಶ್ರೀನಿವಾಸ ಹೆಗ್ಡೆರಿಂದ ರಚಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯರಾಯನ ಅಳಿಯ ಕಟ್ಟು ಎಂಬ ನೂತನ ಸಂಗ್ರಹದ ನವೀನ ಪ್ರತಿಯು ಅನೇಕ ಮಹನೀಯರ ಅಭಿಪ್ರಾಯ ಪ್ರಕಾರ ಬರುವ ಸೆಪ್ಟಂಬರ ಆಖೈರಿ ವರೇಗೆ 2 ಪ್ರತಿಗಳಿಗೆ ರೂ. 1—8—0ಗೆ ದೊರಕುವದು. ವಿದ್ಯಾ ಇಲಾಖೆಯವರಿಗೆ 2ಕ್ಕೆ ರೂ. 1—4—0 ದರದಲ್ಲಿ ಕೊಡುವೆವು. ಸೆಪ್ಟಂಬರ ನಂತರ ಪ್ರತಿ ಒಂದಕ್ಕೆ ರೂ. 1—8—0ಗಿಂತ ಕಡಿಮೆ ಸಿಕ್ಕಲಾರದು.

ಅಂಕೆಗಳಿಂದಲೇ ಬರೆಯುವ, ಶಿಲಾಶಾಸನ ತಾಮ್ರಶಾಸನಗಳನ್ನು ಸುಲಭವಾಗಿ ಓದುವ ನೂತನ ತರದ ಶ್ರೀನಿವಾಸ ಲಿಪಿ ಎಂಬ ಪುಸ್ತಕವು ತ್ವರ್ಯ ತಯಾರಾಗುವುದು. ಪ್ರತಿ 1ಕ್ಕೆ 0—2—6. ವಿದ್ಯಾ ಇಲಾಖೆಯವರಿಗೆ 0—2—0. ಒಂದೇ ತಾಸಿನೊಳಗೆ ಸರಿಯಾಗಿ ಕಲಿಯಬಹುದು.

ವಿಳಾಸ:—

S. P. RAJA & Co., Car Street, POLALY, S. C. | ಎನ್. ಎ. ಶ್ರೀನಿವಾಸ ಹೆಗ್ಡೆ, ಕುಶಲ ಮಂದಿರ, ಪೊಳಲಿ, ದ. ಕ.

ಕಪ್ಪು ಶಾಯಿಪುಡಿಯ ಪೊಟ್ಟಣಗಳು.

ಅತ್ಯುತ್ತಮವಾದುದು! ವಿ. ಪಿ. ಯಲ್ಲಿ ತರಿಸಿ, ಮಾರುವುದು ವಿಶೇಷ ಲಾಭಕರ!! ಸುಲಭ ದರ!!! 50ಕ್ಕೆ 0—4—0, 100ಕ್ಕೆ 0—6—0, 300ಕ್ಕೆ ರೂ. 1—0—0, 1,000ಕ್ಕೆ 2—8—0, 3,000ಕ್ಕೆ 6—0—0. ಅಂಚೆ, ಪೆಟ್ಟಿ, ಪ್ಯಾಕಿಂಗ್ ವಗೈರೆ ಖರ್ಚುಗಳು ಬೇರೆ.

ನಮ್ಮ ವಿಳಾಸ:— ವಿ. ಪಿ. ಡಿಪ್ಪೋ, ಕೋಲಾರ್.

ನೂತನ ಪ್ರಬಂಧ! ಅದ್ಭುತ ಪತ್ತೇದಾರಿಯ ಕಥೆ!

ಕಳವಾದ ಇನ್ಸ್‌ಪೆಕ್ಟರ್.

ಚೋರಾಗ್ರೇಸರನಾದ ಮಾಣಿಕ್ಯಲಾಲನಿಗೂ ಮತ್ತು ಪ್ರಸಿದ್ಧ ಪತ್ತೇದಾರನಾದ ಜಯದೇವ ಚಕ್ರವರ್ತಿಗೂ ನಡೆಯುವ ಬುದ್ಧಿ ಚಾತುರ್ಯದ ಭಯಂಕರ ಹೋರಾಟ

ಆರಂಭದಿಂದ ಅಂತ್ಯದವರೆವಿಗೂ ಒಂದೇ ಸಮನಾದ ಆಸಕ್ತಿಯನ್ನುಂಟುಮಾಡುವುದಲ್ಲದೆ ಇನ್ಸ್‌ಪೆಕ್ಟರಂತೆ ವೇಷವನ್ನು ಧರಿಸಿ ನೌಕರಿ ಮಾಡುವ ಕಳ್ಳನ ದಿಟ್ಟತನವೂ ರೈಲ್ವೆ ಗಾಡಿಯಲ್ಲಿ ಸಿಕ್ಕಿಬಿದ್ದ ಚೋರನ ಅದ್ವಿತೀಯವಾದ ಕೌಶಲೋಪಾಯವೂ ವಿಲಾಯತಿ ಸರದಾರರ ಆಭರಣಗಳನ್ನು ಅಪಹರಿಸಲು ಪ್ರಯತ್ನಿಸುವ ಅದ್ಭುತ ಸಾಹಸವೂ ಅಸಮಾನವಾದವುಗಳಾಗಿರುತ್ತವೆ.

ಬೆಲೆ ಹತ್ತು ಆಣೆಗಳು ಮಾತ್ರ. ವ್ಯಾಪಾರಸ್ಥರಿಗೆ ಒಳ್ಳೆ ಡಿಸ್ಕೌಂಟು ಕೊಡಲ್ಪಡುತ್ತೆ.

ವಿಳಾಸ:— ಛಾಂಪಿಯನ್ ಏಜನ್ಸಿ, ಅವೆನ್ಯು ರೋಡ್, ಬೆಂಗಳೂರು ಸಿಟಿ.

ಈಗಲೇ ಅಚ್ಚಾಗಿರುವದು! ಈಗಲೇ ಅಚ್ಚಾಗಿರುವದು!!

ರಾ. ಮಟ್ಟಿಗೋಪಾಲ ಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಮಟ್ಟಿನ ಪದಗಳೂ, ದಾಸರ ಕೀರ್ತನೆಯ ನಮೂನೆ ಪದಗಳೂ, ನಾಟಕದ ನಮೂನೆ ಹಿಂದೂಸ್ಥಾನಿ ಮಟ್ಟಿನ ಕೀರ್ತನೆಗಳೂ, ಮಂಗಲಪದಗಳೂ, ಶೋಭನಪದಗಳೂ, ಜೋಗುಳಪದಗಳೂ ಉದಯರಾಗದ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. 25 ಪ್ರತಿಗಳನ್ನು ಒಂದೇ ಸಲ ತರಿಸಿಕೊಳ್ಳುವರಿಗೆ ರೂ. 6—4—0. ಟಪ್ಪಾಲ ಖರ್ಚು ಪ್ರತ್ಯೇಕ.

ಮ್ಯಾನೇಜರ್, ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಬಡವರಿಗೂ, ದೊಡ್ಡವರಿಗೂ, ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಸರ್ವರಿಗೂ ಪ್ರಯೋಜನವಾದವುಗಳು!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.



ಕೆ. ಡಯಾಸ್ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಶಯ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾರ್ಗದಲ್ಲಿಯೂ ವೈದ್ಯರ ಸಹಾಯವನು ಕಾದು ಕೊರಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಕಫ, ಮತ್ತು ಕೆಡುಕಾದ ಸೀರಿ ನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಗಿರಿಯಮಾವೇನ್ ನಂ. 2. ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪ್ಯಾ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಕಂಬಳಕಟ್ಟೆ ಕಿರೋವುಗಳಲ್ಲಿ ದೊರಕುವದು.

ಸಬ್ ಏಜಂಟರು ಬೆಳಾಗಿನ.

STANY BROTHERS
Sole Agents
C. M. C's. Toothache Specific, Mangalore.

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ವಿಕರಿಗೆ ಸಿದ್ಧವಾಗಿರುವದು!!!

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ವಿಕರಿಗೆ ಸಿದ್ಧವಾಗಿರುತ್ತವೆ.

ಕ್ರಯ ಪ್ರತಿ 1ರ 4 ಆಣೆ.

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ನ ಕೊಡಲಾದೀತು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಯಲ್ಲಿ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿ ರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.
ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ॥ ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ ಚಾಂಪಿಯನ್ ಅಥ್ಲೆಟಿಕ್ ಏಜನ್ಸಿ ಮೈಸೂರು.

ಛಳಿಕಾಲ! (Best Shwals) ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿ

ಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಢಲುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸನಂಬಾ ಮಾಡಿರುತ್ತೆ. ಬಣ್ಣ-ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0
ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ— ವ್ಯಾರಂ ಅಂಡು ಕಂಪೆನಿ,
3. ಇರುಳಪ್ಪನ ಬೀದಿ,
ಮದರಾಸು.

ಅರ್ಧ ಬೆಲೆ! ಅರ್ಧ ಬೆಲೆ!!

ಒಂದು ತಿಂಗಳು ಮಾತ್ರ.

ನಮ್ಮ ರೈಲ್ವೆ ರೆಗ್ಯುಲೇಟರ್ ವಾಚು ಒಳ್ಳೇ ಸಮಯ ಕೊಡು ವಂಥಾದ್ದು, ಸದ್ಗೃಹಸ್ಥರು ಧರಿಸಲು ಯೋಗ್ಯವಾದದ್ದು ಆಗಿದೆ. ಮೂರು ವರುಷದ ಗ್ಯಾರಂಟಿ ಇದೆ. ಕ್ರಯ ರೂ. 9. ಈಗ ರೂ. 4. ಬೊನವಿಲ್ ವಾಚು ಕ್ರಯ ರೂ. 11. ಈಗ ರೂ. 5—8—0. ನಿಕಲ್ ಹಂಟಿಂಗ್ ವಾಚು ಕ್ರಯ ರೂ. 12. ಈಗ ರೂ. 6. ಬೆಸ್ಟ್‌ರಿಸ್ಟ್ ವಾಚು ಚರ್ಮದ ಸ್ಟ್ರಾಪ್ ಸಹಿತ ರೂ. 10. ಈಗ ರೂ. 5. ಲೇಡಿಸ್ 9 ಕರೆಟ್ ಚಿನ್ನದ ವಾಚು ಕ್ರಯ ರೂ. 32. ಈಗಿನ ರೂ. 16. ಲೇಡಿಸ್ ಬೆಳ್ಳಿ ವಾಚು ರೂ. 14. ಈಗ ರೂ. 7. ಗಟ್ಟಿ ಮತ್ತು ನಂಬಿಕೆಗೆ ಯೋಗ್ಯವಾದ 8 ದಿವಸಕ್ಕೊಮ್ಮೆ ಕೀ ಕೊಡುವ ಯ್ಯೆಟ್ ಟೇಸ್ ವಾಚು ನಿಕಲ್‌ಕೇಸ್ ಒಪನ್ ಫೇಸ್ ರೂ. 18. ಈಗ ರೂ. 9. ಅದೇ ಬೆಳ್ಳಿಯ ಕೇಸ್ ಉಳ್ಳದ್ದು ರೂ. 24. ಈಗ ರೂ. 12. ಅದೇ ಬೆಳ್ಳಿ ಹಂಟಿಂಗ್ ಕೇಸ್ ರೂ. 30. ಈಗ ರೂ. 15. ರಿಸ್ಟ್ ವಾಚು ವಿನಹಾ ಇತರ ವಾಚುಗಳನ್ನು ಕೊಂಡುಕೊಳ್ಳುವ ಪ್ರತಿ ಗಿರಾಕಿಗಳಿಗೆ ಒಂದು ವಾಚುಸರಪಣಿಯೂ ಒಂದೇ ಸಲ 6 ವಾಚುಗಳನ್ನು ಕೊಂಡುಕೊಳ್ಳುವವರಿಗೆ ಒಂದು ವಾಚು ಪುಗಸಾಟೆಯಾಗಿಯೂ ದೊರಕುವದು.

The Century Watch Agency,
25, Madan Mitra Lane, CALCUTTA.

ಕೋಮಲ ವಿಲಾಸವು

ಎಂಬ ಹೆಸರಿನ ಬ್ರಾಹ್ಮಣರ ಖಾನಾವಳಿಯು.

ಪ್ರೊಪ್ರೈಟರ್ ಮತ್ತು ಮ್ಯಾನೇಜರ್—ಸೋಮೇಶ್ವರ ನರಸಿಂಗರಾವ್.

ಈ ಖಾನಾವಳಿಯಲ್ಲಿ ಬ್ರಾಹ್ಮಣ ಜಾತಿಯವರಿಗೂ, ಇತರ ಜಾತಿಯವರಿಗೂ, ಊಟವೂ ಫಲಾಹಾರವೂ, ಕಾಫಿ, ಚಾ, ಮೊದಲಾದ ಪಾನಗಳೂ, ಉಳಕೊಳ್ಳಲಿಕ್ಕೆ ಜಾಗವೂ ದೊರಕುವದು.

ತಿಂಡಿ ಪದಾರ್ಥಗಳು ಕನರಾ ಜಿಲ್ಲೆಯಲ್ಲಿ ಮಾಡುವ ಕ್ರಮದಲ್ಲಿ ಮಾಡಲ್ಪಡುತ್ತವೆ. ದರ ಕಡಿಮೆ.

ಈ ಖಾನಾವಳಿಯು ಮದ್ರಾಸಿನಲ್ಲಿ ಹೈಕೋರ್ಟಿಗೆ ಬಹಳ ಸಮೀಪವಾಗಿ ಫ್ರಾನ್ಸಿಸ್ ಜೋಸೆಫ್ ರಸ್ತೆ ನಂಬ್ರ 2ನೇ ಕಟ್ಟೋಣದಲ್ಲಿರುತ್ತದೆ. ಮದ್ರಾಸ್ ಪಟ್ಟಣಕ್ಕೆ ಬರುವ ಕಕ್ಷಿಗಾರರಿಗೂ, ವಿದ್ಯಾರ್ಥಿಗಳಿಗೂ, ಇತರ ಗೃಹಸ್ಥರಿಗೂ, ಕುಲಸ್ತ್ರೀಯರಿಗೂ ಬೇಕಾಗಿರುವ ಅನುಕೂಲತೆಗಳಿವೆ.

ಮದ್ರಾಸಿಗೆ ಬರುವವರು ಕೆಳಗೆ ಇಂಗ್ಲಿಷಿನಲ್ಲಿ ಬರೆದ ವಿಳಾಸಕ್ಕೆ ಕಾಗದ ಬರೆದರೆ ಅಥವಾ ತಂತೀ ಮೂಲಕ ತಿಳಿಸಿದರೆ ರೈಲ್ವೆ ಸ್ಟೇಶನಿಗೆ ನಮ್ಮ ಕಡೆಯಿಂದ ಜನರನ್ನು ಕಳುಹಿಸೋಣಾಗುವದು.

Telegraphic Address:—
"RESTAURANT"
(MADRAS).

"KOMALA VILAS"
No. 2. Francis Joseph Street,
Next Y.M.C.A. George Town,
MADRAS.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಿಕ ಕ್ರಮದೊಡನೆ ಸೇರಿಕೊಳ್ಳುವುದೋ ಅದಷ್ಟು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಖಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್, ಮಂಗಳೂರು, ದ. ಕ.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮೀಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಶ್ರೀಮತ್ ಕಲ್ಯಾಣಿ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*
ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ .	0	3	0	ಗೋಪಿಕಾ ಗೀತ . . .	0	1	0
ಯಜುರ್ವೇದ ಸಂಧ್ಯಾವಂದನ .	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ .	0	3	0	ರಾಮಕವಚ . . .	0	2	0
ದೇವಪೂಜಾ ಪದ್ಧತಿ . .	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ . .	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು . .	0	2	0	1ನೇ ಭಾಗ . . .	0	6	0
ಶ್ರೀಸೂಕ್ತ ಪುರುಷಸೂಕ್ತ .	0	1	0	ಉದಯರಾಗ 1ನೇ ಭಾಗ	0	4	0
ವಾಯುಸ್ತುತಿ . .	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣು ಸಹಸ್ರನಾಮ ಸ್ತೋತ್ರ .	0	2	0	ಕುಲನಸಂಕೀರ್ತನೆ ಪದಗಳು	0	2	0
ವಿಷ್ಣು ಸಹಸ್ರನಾಮಾವಳಿ .	0	2	0	ಹರಿಭಕ್ತಿಸಾರ . . .	0	1	0
ದ್ವಾದಶ ಸ್ತೋತ್ರ . .	0	2	0	ಉಡುಪಿ ಶ್ರೀಕೃಷ್ಣಚರಿತ್ರೆ .	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ .	0	1	6
ಗಜೇಂದ್ರ ಮೋಕ್ಷ . .	0	1	6	ಬೀಗರಹಾಡು ದೂರುವವ ಹಾಡುಗಳು	0	2	0
ಪಾಂಡವ ಗೀತಾ . . .	0	1	6	ತುಳುಕನ್ನೋಪದೇಶ .	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ .	0	4	0

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಶಾಸ್ತ್ರ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಟಪ್ಪಾಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ... ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ, ದ. ಕ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	374,843—8—8
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st. September 1916.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	225,000—0—0
ಸಂತ ಮೂಲ ಧನವು ,, ...	200,000—0—0
ಠೇವಣಾತಿಯಾಗಿ ಕೊಡೋಣಾಗಿದ ಮೊಬಲಗುಗಳು ...	374,843—8—8
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಪಿಸೆ ವೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧರ್ಮತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುತ್ತದೆ. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕಾಂತಶಾಖಂಗ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಚಿನ್ನದ ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ದಂತರೋಗ ನಾಶ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಗಂಡೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂಗಂಧಾದಿ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ತೀರಿ ಅತ್ಯುತ್ತಮವು. ಪಥ್ಯವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಆಪಾಯವಿಲ್ಲದೆ ಬಾಯಿಬಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಂದಾಜ್ವರಾಂಕುಶ ಮಾತ್ರೆ. ಚಳಿಜ್ವರ, ಸರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಯುಶ್ವಾಸ, ಕಫ, ಕ್ಷಯಗಳ ಮೇಲೆ ಅತ್ಯುತ್ತಮವು. ರಾತಲಿಗೆ ೨ ರೂ.

೧೦. ಅಲ್ಪಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುಸ್ಸಂಸರ್ಗಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಿಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತನ್ನ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು ಶಕ ೧೮೩೮ ಭಾದ್ರಪದ ಶು. ೧೧ ಶುಕ್ರವಾರ.

ಈಗಲಾದರೂ ಈ ಗ್ರಹಣವು ಬಿಟ್ಟೀತೆ?

ನಮ್ಮ ಮಂಗಳೂರ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನದ ಚುನಾವಣೆಯ ಪ್ರಶ್ನೆಯು ಇನ್ನೊಮ್ಮೆ ಉಪಸ್ಥಿತವಾಗಿದೆಂದು ಕೇಳುತ್ತೇವೆ. ಸದ್ಯ ಕೆಲವು ವರ್ಷಗಳಿಂದ ಅಧ್ಯಕ್ಷಸ್ಥಾನವನ್ನು ಉಪಭೋಗಿಸುತ್ತಿದ್ದ ಡಾ. ವರ್ಗಿಸರವರ ಅವಧಿಯು ಈಗ ತೀರಿ ಅದೇ ಪ್ರಶ್ನೆಯು ಇನ್ನೊಮ್ಮೆ ವಿಚಾರಕ್ಕೆ ಬಂದಿದೆಂಬುದಾಗಿ ತಿಳಿದುಬರುತ್ತದೆ. ಡಾ. ವರ್ಗಿಸರವರು ಈ 'ಹಂಗಾಮಿ' ಅಧ್ಯಕ್ಷಸ್ಥಾನಕ್ಕೆ ಬರುವುದಕ್ಕಿಂತ ಮುಂಚೆ ಸರಕಾರದಿಂದ ನೇಮಕಪಟ್ಟ (ಮುನ್ಸಿಪಾಲಿಟಿಯು) ಕೌನ್ಸಿಲರಾಗಿದ್ದರು; ಅಲ್ಲಿಂದಲೇ ಅಧ್ಯಕ್ಷರಾದರು. ಆ ನೇಮಕಪಟ್ಟ ಕೌನ್ಸಿಲರ ಸ್ಥಾನದ ಅವಧಿಯು ಎರಡು ವರ್ಷಗಳದ್ದು. ಆ ಅವಧಿಯು ಈಗ ಮುಗಿದಿರುವುದರಿಂದ ಅದರ ಸಂಗಡಲೇ, ಮುನ್ಸಿಪಲ್ ಕಾಯಿದೆಯ ಪ್ರಕಾರ, ಅಧ್ಯಕ್ಷಪದದ ಅವಧಿಯೂ ಮುಗಿದಂತೆಯೇ ಆಗಿದೆ. ಈ ಕಾರಣದಿಂದ ಅಧ್ಯಕ್ಷರ ಚುನಾವಣೆಯ ಪ್ರಶ್ನೆಯು ತಿರಿಗಿ ಸಜೀವಾವಸ್ಥೆಯಲ್ಲಿ ಬಂದಿದೆಂದು ತೋರುತ್ತದೆ. ಒಂದೆರಡು ತಿಂಗಳುಗಳ ಹಿಂದೆ ಪ್ರಕೃತ ವರ್ಗಿಸ ಸಾಹೇಬರ ಚುನಾವಣೆಯ ಕುರಿತ ನಾವು ಟೀಕಿಸಿದ್ದು ವಾಚಕರಿಗೆ ಮರೆತು ಹೋಗುವಷ್ಟರೊಳಗಾಗಿಯೇ ಪುನಃ ಅದೇ ಪ್ರಶ್ನೆಯು ಇಲ್ಲಿಯ ನಾಗರಿಕರ ಮತ್ತು ಕೌನ್ಸಿಲರುಗಳ ಮುಂದೆ ಬಂದೀತೆಂದು ನಾವಾದರೂ ನೆನಸಿರಲಿಲ್ಲ. ವರ್ಗಿಸರವರು ಅಧ್ಯಕ್ಷಪದದ ಮೇಲೆ ಬಂದನಂತರ ಚುನಾವಣೆತತ್ವದ ಮೀಮಾಂಸೆಯನ್ನು ನಾವು ಮಾಡಿದ್ದು "ಪಯೋಗತೇ ಕಿಂಖಲು ಸೇತುಬಂಧಃ" (ನೀರು ಹೋದ ಮೇಲೆ ಸೇತು ಕಟ್ಟಿ ಪ್ರಯೋಜನವೇನು?) ಈ ನ್ಯಾಯದಂತೆ ಅವರ ಚುನಾವಣೆಗೆ ಪ್ರತಿಬಂಧಕವಾಗಲಿಲ್ಲೆಂಬುದು ನಿಜವಿದ್ದರೂ ಅದೇ ಸ್ಥಾನಕ್ಕೆ ಒಬ್ಬ ಸ್ಥಳಿಕ ಉಮೇದವಾರರು ನಿಂತಿರುವಾಗ, ಜಾತಿ ಭೇದವನ್ನು ಮನಸ್ಸಿಗೆ ತಂದುಕೊಂಡೂ ಆಗಿರಬಹುದು, ಬೇರೆ ಕಾರಣದಿಂದಲೂ ಆಗಿರಬಹುದು, ಅವರನ್ನು ಬಿಟ್ಟು, ಸ್ವಾಭಿಮಾನವನ್ನು ಮರೆತು, ಕೇವಲ ದಾಕ್ಷಿಣ್ಯಪರವಶರಾಗಿ ಕೌನ್ಸಿಲ ಮೆಂಬರುಗಳು ಡಾ. ವರ್ಗಿಸರಿಗೆ ತಮ್ಮ ವೋಟುಗಳನ್ನು ಕೊಟ್ಟದ್ದು ಕೇವಲ ಕರ್ತವ್ಯಭ್ರಷ್ಟತೆಯ ಲಕ್ಷಣವೆಂಬುದನ್ನು ಆ ಕೌನ್ಸಿಲರುಗಳ ನಾಗರಿಕರಿಗೆ ತಿಳಿಸುವುದು ನಮ್ಮ ಕರ್ತವ್ಯವಾದುದರಿಂದ ಚುನಾವಣೆಯ ಅನಂತರವಲ್ಲಾದರೂ ನಮ್ಮ ಮತವನ್ನು ನಾವು ಸ್ಪಷ್ಟವಾಗಿ ತೋರಿಸಿದ್ದೆವು. ಸಾರ್ವಜನಿಕ ಹಿತದ ಪ್ರಶ್ನೆಯ ವಿಷಯದಲ್ಲಿ ಲೋಕಮತವು ಇಂಥಾ ಒಂದು ವಿಧದಲ್ಲಿರುತ್ತದೆ. ಅದು ಒಂದು ಪ್ರಸಂಗದಲ್ಲಿ ಯಶಸ್ವಿಯಾಗದಿದ್ದರೆ ಕೆಲಸವು ಕೆಟ್ಟಿತೆನ್ನಕೂಡದು. ಕಾರಣವೇನೆಂದರೆ,—ಇಂಥಾ ಸಾರ್ವಜನಿಕ ಪ್ರಸಂಗಗಳು ಆಗಾಗ್ಗೆ ಬರುತ್ತಲೇ ಇರುವುದರಿಂದ ಇಲ್ಲಾದರೆ ಇನ್ನೊಂದು ಪ್ರಸಂಗದಲ್ಲಿಯಾದರೂ ಅದು ಯಶಸ್ವಿಯಾಗದೆ ಇರದು. ಈ ದೃಷ್ಟಿಯಿಂದ ನೋಡಲಾಗಿ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನದ ವಿಷಯದಲ್ಲಿ ನಾವು ಕಳೆದ ಸಾರಿ ಮಾಡಿರುವ ಲೋಕಮತ ನಿದರ್ಶಕವಾದ ವಿಸ್ತೃತ ವಿವೇಚನೆಯನ್ನು ಈ ಬರುವ ಪ್ರಸಂಗದಲ್ಲಿಯಾದರೂ ಕೌನ್ಸಿಲಿನ ಮೆಂಬರುಗಳು ಆಲೋಚಿಸಿದರೆ ಅದರ ಎಷ್ಟೋ ಪ್ರಯೋಜನವಾಗುವ ಹಾಗಿದೆ.

ಆದರೆ ನಮ್ಮ ಮನೋದೇವತೆಯು ಹೇಳುವಂತೆ ನಾಳೆಯ ಪ್ರಸಂಗದಲ್ಲಿ ಡಾ. ವರ್ಗಿಸರು ಅಥವಾ ಅನ್ಯ ಸರಕಾರಿ ಉದ್ಯೋಗಸ್ಥರು ತಿರಿಗಿ ಉಮೇದವಾರರಾಗಿ ನಿಲ್ಲಲಿಕ್ಕಿಲ್ಲೆಂತ ಕಾಣುತ್ತದೆ. ಕಾರಣ, ಕಳೆದ ಸಾರಿಯ ಅನುಭವದಿಂದ, ಸ್ವಲ್ಪಮಟ್ಟಿಗಾದರೂ ಸ್ವಾಭಿಮಾನವಿರುವ ಯಾವ ಸರಕಾರಿ ಉದ್ಯೋಗಸ್ಥನೂ ಈ ಕೆಲಸಕ್ಕೆ ಪುನಃ ಕೈಹಾಕಲಾರನು. ಜನರು ತಮ್ಮ ಮನೆಗೆ ಒಬ್ಬನನ್ನು ಬರುವುದು ಬೇಡೆಂತ ಹೇಳುವಾಗಲೂ ಆ ಮಾತುಗಳನ್ನು ಲೆಕ್ಕಿಸದೆ ಈ ವೃಥಾಮಾನದ ಮಾಲೆಯನ್ನು ಯಾವನು ಕೊರಳಿಗೆ ಹಾಕಿಕೊಂಡಾನು? ಸ್ಥಾನಿಕ ಅಧ್ಯಕ್ಷರನ್ನು ಬಿಟ್ಟು ಪರಸ್ಥಳದವರು, ಅವರಲ್ಲೂ ಸರಕಾರಿ ಉದ್ಯೋಗಸ್ಥರಾದವರು ಅಧ್ಯಕ್ಷರಾಗಿ ನಿಲ್ಲುವುದು ಇಲ್ಲಿಯ ಲೋಕಮತಕ್ಕೆ ಏನೂ ಸಮ್ಮತವಿಲ್ಲೆಂಬುದು ನಮ್ಮ ಪತ್ರದಲ್ಲಿ ಆಗಾಗ್ಗೆ ಪ್ರಕಟವಾದ ಮತ್ತು ಇನ್ನೂ ಪ್ರಕಟವಾಗುತ್ತಲಿದ್ದ ಪತ್ರವ್ಯವಹಾರಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಹೀಗಿರುತ್ತ ಯಾರೊಬ್ಬನು 'ನಾನು ಕೌನ್ಸಿಲರುಗಳ ಚುನಾವಣೆಯಿಂದಲೇ ಅಧ್ಯಕ್ಷನಾಗಿದ್ದೇನೆ'ಂದು ಸಮಾಧಾನಪಡುವುದೆಂದರೆ ಇಲಿಗಳನ್ನು ಬಲಾತ್ಕಾರದಿಂದ ಹಿಡಿದು ತರುವ ಬೆಕ್ಕು ಇಲಿಗಳು ತನ್ನನ್ನು ಪ್ರೀತಿಸುತ್ತವೆಂದು ತೋರಿಸಿಕೊಳ್ಳುವಂತೆಯೇ ಅಸಮಂಜಸವಾಗಿದೆ. ಈ ಎಲ್ಲ ಕಾರಣಗಳಿಂದ ಬುದ್ಧಿವಂತರು, ಲೋಕಮತ ಪ್ರಿಯರು ಹಾಗೆಯೇ ಈ ಮಂಗಳೂರಿನ ನಿಜವಾದ ಹಿತವನ್ನು ಬಯಸುವವರಾದ ಡಾ. ವರ್ಗಿಸರು ಈ ಸಾರಿ ಅಧ್ಯಕ್ಷಪದಕ್ಕಾಗಿ ನಿಲ್ಲಲಿಕ್ಕಿಲ್ಲ ಮತ್ತು ಅವರನ್ನು ನೋಡಿ ಅನ್ಯ ಸರಕಾರಿ ಉದ್ಯೋಗಸ್ಥರೂ ಸಹ ನಿಲ್ಲಲಿಕ್ಕಿಲ್ಲೆಂತ ಭರವಸೆ ಇದೆ.

ಈ ಭರವಸೆಯು ನಮ್ಮದು. ಒಂದುವೇಳೆ ಇಂಥಾ ಸರಕಾರಿ ಉದ್ಯೋಗಸ್ಥರ ಗ್ರಹಣವು ಇನ್ನೂ ಬಿಡುವುದಿಲ್ಲೆಂತಾದರೆ ಕೌನ್ಸಿಲರುಗಳು ಮಾಡುವುದೇನು? ಕಣ್ಣನ್ನು ಮುಚ್ಚಿಕೊಂಡು ಈ ಸರಕಾರಿ ಉದ್ಯೋಗಸ್ಥರಿಗನೇ ತಮ್ಮ ಮತಗಳನ್ನು ಧಾರಾದತ್ತ ಮಾಡಿಕೊಡುವುದೋ? ಈ ಪ್ರಶ್ನೆಯು ಬರುತ್ತದೆ. ಆದರೆ ಮತ ಸ್ವಾತಂತ್ರ್ಯದ ಕೊಂಚಮಟ್ಟಿಗಾದರೂ ಅಭಿಮಾನವಿರುವ ಮೆಂಬರುಗಳಿಗೆ ಇಂಥಾ ಪ್ರಶ್ನೆಗಳು ಬರಲಿಕ್ಕೇ ಇಲ್ಲ. ಸರಕಾರಿ ಉದ್ಯೋಗಸ್ಥರು ನಿಂತರೆ ಅವರಿಗೆ ತಮ್ಮ ಮತವನ್ನು ಕೊಡಲೇ ಬೇಕೆಂಬ ಶಾಸ್ತ್ರವೂ, ಆಗ್ರಹವೂ ಅಥವಾ 'ವಹಿವಾಟು' ಎಲ್ಲಿಯೂ ಇಲ್ಲ. ಈ ಮೂರು ಸಂಗತಿಗಳಿಗೆ ಸಿಕ್ಕಿದ ಮನೋ ದೌರ್ಬಲ್ಯವು ಮಾತ್ರ ಒಂದು ಪ್ರತಿಬಂಧಕವಾಗುತ್ತದೆಂಬುದು ಸರಿ. ಈ ಮನೋ ದೌರ್ಬಲ್ಯಕ್ಕೆ ಅಧಿಕಾರಿಗಳ ದಾಕ್ಷಿಣ್ಯದ ಇನ್ನೊಂದು ಗ್ರಾಸವು ಸಿಕ್ಕಿ ಅದು ಪುಷ್ಟವಾಗುತ್ತದೆ. ಅದುದರಿಂದ ಇಂಥಾ ಸಂದರ್ಭದಲ್ಲಿ ನಾವು ಕಳೆದ ಎರಡು ತಿಂಗಳುಗಳ ಹಿಂದೆ ಹೇಳಿದಂತೆಯೇ, ಸರಕಾರಿ ಉದ್ಯೋಗಸ್ಥರು ಪ್ರಜೆಗಳ ಹಕ್ಕುಗಳಲ್ಲಿ ತಿರಿಗಿ ತಾವೂ ಪಾಲುಗಾರರಾಗದಂತೆ ಸರಕಾರವೇ ಈ ವಿಷಯದಲ್ಲಿ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಸ್ಥಾನಿಕ ಸ್ವರಾಜ್ಯದ ಅಧ್ಯಕ್ಷಪದವಿಯನ್ನು ಪ್ರಜೆಗಳ ಕೈವಶಮಾಡಿದ್ದೇನೆಂದು ಸರಕಾರವು ನೆನಸಿಕೊಳ್ಳುವದಷ್ಟೇ. ಈ ಸ್ಥಾನಕ್ಕೆ ಸರಕಾರಿ ನೌಕರರು ಪ್ರಯತ್ನಿಸ ಕೂಡದೆಂಬ ಸ್ಪಷ್ಟವಾದ ಪ್ರತಿಬಂಧವನ್ನು ಇಡುವವರೆಗೆ ಜನರಿಗೆ ಕೊಟ್ಟ ಅಧಿಕಾರಗಳಲ್ಲಿಯೂ ಹಕ್ಕುಗಳಲ್ಲಿಯೂ ಸರಕಾರಿ ಉದ್ಯೋಗಸ್ಥರ ಗ್ರಹಣವು ತಪ್ಪದು. ಪರಿಸ್ಥಿತಿಯು ಹೀಗಿರುವಾಗ ಸರಕಾರವು ಮಾತ್ರ ಸ್ಥಾನಿಕ ಸ್ವರಾಜ್ಯವು ಜನರದೇ ಎಂದು ಹೇಳುವುದೆಂದರೆ—'ಅಪ್ಪಾ! ತನಗೊಂದು ರೂಪಾಯಿ ಕೊಡು, ವರಹ ಕೊಡು' ಎಂದು ಪದೇ ಪದೇ ಪೀಡಿಸುತ್ತಿರುವ ತನ್ನ ಮಗನ ಕೈಯಲ್ಲಿ ಅವನ ಸಮಾಧಾನಕ್ಕಾಗಿ ಒಂದು ರೂಪಾಯಿಯನ್ನು ಕೊಟ್ಟು, ತಂದೆಯು ಅವನ ಕೈಯಿಂದಲೆ ತನ್ನ ಪೆಟ್ಟಿಗೆಯಲ್ಲಿ ಹಾಕಿಸಿ ಪುನಃ ಮೇಲೆ 'ಮಗು! ರೂಪಾಯಿಯು ನಿನ್ನದೆ' ಎಂದು ಹೇಳಿ ಅದರ ಬೀಗದ ಕೈಯನ್ನು ತಾನೇ ಇಟ್ಟುಕೊಂಡ ಹಾಗಾಗುತ್ತದೆ. ಸ್ಥಾನಿಕ ಸ್ವರಾಜ್ಯವು ಪೂರ್ಣವಾಗಿ ಪ್ರಜೆಗಳ ಕೈವಶವಾಗಬೇಕಾದರೆ, ಬೇರೆ ಎಷ್ಟೋ ಸುಧಾರಣೆಗಳಂತೆಯೇ ಈ ಅಧ್ಯಕ್ಷಪದದ ಹಕ್ಕು ಪೂರಾ ಪ್ರಜೆಗಳ ಕೈಯಲ್ಲೇ ಕೊಡುವುದು ಉಚಿತವಾಗಿದೆ.

ಈ ಏರ್ಪಾಡಾಗುವ ತನಕ ಅಧಿಕಾರಿಗಳನ್ನು ಅಡ್ಡತಡೆಸುವುದು ಹ್ಯಾಗೆ? ಈ ಪ್ರಶ್ನೆಯ ಉತ್ತರವು ಸುಲಭವಾಗಿದೆ. ಪ್ರಜಾ ಪಕ್ಷೀಯ ಸ್ಥಾನಿಕ ಗೃಹಸ್ಥರು ನಿಂತಿರುವಾಗ ಅಧಿಕಾರಿಗಳು ಕೂಡ ನಿಂತರೆ ಅವರಿಗೆ ಮೆಂಬರುಗಳು ಎಂದೂ ತಮ್ಮ ಮತಗಳನ್ನು ಕೊಡಕೂಡದು. ಈಗ ಸ್ಥಾನಿಕ ಗೃಹಸ್ಥರು ಯಾರೂ ನಿಲ್ಲದಿದ್ದರೆ ಅಧಿಕಾರಸ್ಥರಿಗೆ ಬಾಯಿಬಿಟ್ಟು ತಮ್ಮ ಸಮ್ಮತಿಯನ್ನು ಕೊಡುವುದಕ್ಕಿಂತ ಮೌನವೇ ಒಳ್ಳೇದಾಗಿದೆ. ಮತ್ತು ಸ್ವಾಭಿಮಾನಿ ಹಾಗೂ ಮತ ಸ್ವಾತಂತ್ರ್ಯದ ಯೋಗ್ಯತೆ ಬಲ್ಲಾದ ಸದ್ಗೃಹಸ್ಥರು ಹೀಗೆಯೇ ಮಾಡ್ಯಾರೆಂದು ನಾವು ನಂಬುತ್ತೇವೆ.

ಇರಲಿ. ಈ ಸಾರಿಯ ಚುನಾವಣೆಯಲ್ಲಿ ನಾವು ಮೇಲೆ ಅಭಿಪ್ರಾಯಪಟ್ಟಂತೆ ಸರಕಾರಿ ಉದ್ಯೋಗಸ್ಥರಾರೂ ಬಹುಶಃ ನಿಲ್ಲಲಿಕ್ಕಿಲ್ಲೆಂತ ಕಾಣುತ್ತದೆ. ಆದುದರಿಂದ ನಗರ ವಾಸಿಗಳಲ್ಲಿ ಯಾರಾದರೂ ಯೋಗ್ಯರಾದವರು ಈ ಸಾರಿ ನಿಂತು ಬಂದ ಸಂಧಿಯನ್ನು ಬಿಡಲಿಕ್ಕಿಲ್ಲೆಂತ ನಾವು ಆಶಿಸುತ್ತೇವೆ.

ಮಹಾಕವಿಗಳ ಅರಸರು.

ಲೇಖಾಂಕ ೪.

ಭವಭೂತಿಗೆ ಮಹಾ ಕವಿಗಳಲ್ಲಿ ಉನ್ನತ ಸ್ಥಾನವನ್ನು ಕೊಡುವುದು ಹ್ಯಾಗೆ ಉಚಿತವೋ ಹಾಗೆಯೆ ಮಹಾ ಕವಿಗಳ ಅರಸರಲ್ಲಿ ದಾಶರಥಿ ರಾಮನಿಗೆ ಶ್ರೇಷ್ಠ ಪದವಿಯನ್ನು ಕೊಡುವುದು ಯೋಗ್ಯವಾಗಿದೆ. ಕವಿಗಳ ಪಂಕ್ತಿಯಲ್ಲಿ ಭವಭೂತಿಗೆ, ರಾಜಶ್ರೇಣಿಯಲ್ಲಿ ರಾಮಚಂದ್ರನಿಗೆ ಅನ್ಯರು ಉನ್ನತ ಪದವಿಯನ್ನು ಕೊಡಬೇಕೆಂತಿಲ್ಲ, ಅದು ಆ ಇಬ್ಬರಿಗೆ ಅವರವರ ಕೃತಿಗಳಿಂದಲೇ ಪ್ರಾಪ್ತವಾಗಿದೆಂದು ಹೇಳುವುದೇ ಹೆಚ್ಚು ಸಮಂಜಸವಾಗಿಯೂ, ಸಮರ್ಪಕವಾಗಿಯೂ ಇದೆ. ಶ್ರೀರಾಮನು ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಪೌರಾಣಿಕರು ಮತ್ತು ಭಾವಿಕರು ತಿಳಿಯುತ್ತಾರೆ. ಈ ತಿಳಿವು ಯಥಾರ್ಥವಾದುದೇ ಇರಲಿ ಇಲ್ಲವೆ ಅಂಧಶ್ರದ್ಧೆಯದೇ ಇರಲಿ, ನಮಗದು ಪ್ರಕೃತವಲ್ಲ. ದೇವರ ಅವತಾರವಾಗಿದ್ದರೂ ಮಾನವ ದೇಹವನ್ನು ಧರಿಸಿದವರು ಆ ಮಾನವ ಜನ್ಮಕ್ಕೆ ಅನುರೂಪವಾದ ಲೀಲೆಗಳನ್ನೇ ನಟಿಸುತ್ತಾರೆ. ತಾವರೆ ಎಲೆಯು ನೀರಿನಲ್ಲಿ ಮುಳುಗಿ ಹೋದರೂ ನಿರ್ಲಿಪ್ತವಿರುವಂತೆ ಈ ಮಹಾತ್ಮರು ಸ್ವತಃ ನಿರ್ಲಿಪ್ತರಾಗಿದ್ದು ರಂಗಭೂಮಿಯಲ್ಲಿ ಬರುವ ನಟನಿಗೆ ವಸ್ತುತಃ ಯಾವ ಅಭಿಮಾನವಿಲ್ಲಾದರೂ—ಪ್ರೇಕ್ಷಕರ ಆರಾಧನೆಗಾಗಿ—ಆಯಾ ರಸಗಳಿಗೆ ಅನುಕೂಲವಾದ ಬೇರೆ ಬೇರೆ ಭಾವಗಳನ್ನು ತೋರಿಸುವಂತೆ, ಈ ಮಾಯಾ ಪ್ರಪಂಚದಲ್ಲಿ ಅವರು ಅನೇಕ ಲೀಲಾ ಕೃತ್ಯಗಳನ್ನು ಮಾಡುತ್ತಾರೆ; ಅವರ ಹೃದಯವು ಒಮ್ಮೊಮ್ಮೆ ವಜ್ರಕ್ಕಿಂತಲೂ ಕಠೋರವಾಗಿಯೂ, ಒಮ್ಮೊಮ್ಮೆ ಬೆಣ್ಣೆಗಿಂತಲೂ ಮೃದುವಾಗಿಯೂ ತೋರುವುದು; ಇವರ ನಿಗ್ರಹ ಸಾಮರ್ಥ್ಯವು ಯಮನಿಗೆ ಸಹ ನಾಚಿಸುವುದು. ಆದರೂ ಇಂಥಾ ಮಹಾ ಪುರುಷರ ಚರಿತ್ರೆಯು ಲೋಕಕ್ಕೆ ಒಂದು ಆದರ್ಶವಾಗಿಯೇ ಇರುವುದು. ಇದು ಮಾತ್ರ ನಿಸ್ಸಂದೇಹದ ಮಾತು. ಈ ದೃಷ್ಟಿಯಿಂದ ಅರಸನಾದ ಶ್ರೀರಾಮನ ಚರಿತ್ರೆಯ ಕಡೆಗೆ ನೋಡಿದರೆ ಇಷ್ಟು ನಿಷ್ಕಲಂಕವಾದ ಆಚರಣೆ, ಸತ್ಯಪ್ರೀತಿ, ನ್ಯಾಯವತ್ಸಲತೆ ಮತ್ತು ಪಾಪಭೀರುತ್ವ ಇವು ಇನ್ನೆಲ್ಲೂ ಕಾಣಲಾರವು. ರಾಮಚರಿತ್ರೆಯಲ್ಲಿ ಈ ಗುಣಗಳು ಮುಖ್ಯ ಸ್ಥಾನವನ್ನು ಹೊಂದಿದವುಗಳಾಗಿದ್ದರೂ 'ಪರಾರಾಧನೆ'ಗೆ ಬರುವಷ್ಟು ಮಹತ್ವವು ಇನ್ನಾವ ಸಂಗತಿಗೂ ಬರುವುದಿಲ್ಲ. (ಶ್ರೀರಾಮನ ಪರಾರಾಧನೆಯನ್ನು ಕೆಳಗೆ ಸ್ಪಷ್ಟಪಡಿಸುವೆವು.) ರಾಮಚರಿತ್ರೆಯೊಳಗಿಂದ ಈ ಪರಾರಾಧನೆಯನ್ನು ಕಳೆದರೆ ಮತ್ತೆ ಅಲ್ಲಿರುವುದು ಸೊನ್ನೆಯೆ! ಹಾಗೆಯೆ ರಾಮನನ್ನು ಬಿಟ್ಟರೂ ಪರಾರಾಧನೆಯು ನಿರ್ಗತಿಕವಾಗುವುದು. ಈ ರೀತಿಯಿಂದ ಶ್ರೀರಾಮನಿಗೂ ಪರಾರಾಧನೆಗೂ ತಾದಾತ್ಮ್ಯ ಸಂಬಂಧವಿದೆ. ಈ ತಾದಾತ್ಮ್ಯ ಸಂಬಂಧವು ವಾಚಕರಿಗೆ ಚನ್ನಾಗಿ ಗೊತ್ತಾಗುವಂತೆ ಇನ್ನೊಂದು ದೃಷ್ಟಾಂತವನ್ನು ತೋರಿಸಬಹುದು. ಸಕ್ಕರೆಗೂ ಮಾಧುರ್ಯಕ್ಕೂ ಇರುವ ಸಂಬಂಧವು ಇದೇ ಸರಿ. ಸಕ್ಕರೆಯಿಂದ ಮಾಧುರ್ಯವನ್ನು ಪ್ರತ್ಯೇಕಿಸಿದರೆ ಅಲ್ಲೇನುಳಿಯುವುದು? ಬರೆ ಸೊನ್ನೆ! ಸಕ್ಕರೆ ಎಂದರೆ ಮಾಧುರ್ಯ, ಮಾಧುರ್ಯವೆಂದರೆ ಸಕ್ಕರೆ ಇದೇ ಅಭೇದ ಸಂಬಂಧವು ರಾಮಚರಿತ್ರೆಗೂ ಪರಾರಾಧನೆಗೂ ಇದೆ. ಈ ರೀತಿಯಿಂದ ಪರಾರಾಧನೈಕಪರನಾದ ರಾಮನು ಮೊದಲೇ ಕರುಣಾಮೂರ್ತಿಯು, ಆದರೆ ಅವನ ಚರಿತ್ರೆಯನ್ನು ವರ್ಣಿಸುವ ಭವಭೂತಿಯ ಲೇಖಣಿಯಂತೂ ಕರುಣರಸದ ಒಂದು ಬುಗ್ಗೆಯೇ ಸರಿ. ಈ ಇಬ್ಬರ ಅಪೂರ್ವವಾದ ಯೋಗವು ಬಂಗಾರದ ಮೇಲೆ ಕೂಡಿಸಿದ ರತ್ನದಂತೆ ದರ್ಶನೀಯವೂ ಶರ್ಕರಾಮಿಶ್ರಿತವಾದ ಹಾಲಿನಂತೆ ಆಸ್ವಾದ್ಯವೂ ಆಗಿದ್ದರೂ ನಿಜವಾಗಿ ಅದು ಅನನ್ವಯಾಲಂಕಾರದ ಒಂದು ಉತ್ಕೃಷ್ಟವಾದ ಉದಾಹರಣೆಯು. ಶ್ರೀರಾಮನಿಂದ ಭವಭೂತಿಯ ಲೇಖಣಿಯು ಕರುಣೆಯಿಂದ ದ್ರವಿಸಿರುವುದೋ ಅಥವಾ ಭವಭೂತಿಯಿಂದ ರಾಮಚರಿತ್ರೆಯು ಹೃದಯಂಗಮವಾಗಿರುವುದೋ ಈ ತಾರತಮ್ಯವನ್ನು ನಿರ್ಣಯಿಸುವುದು ಕಷ್ಟವಾಗಿದ್ದರೂ ಕರುಣರಸದಲ್ಲಿ ಮುಳುಗಿ ಹೋದ್ದ ಕವಿನಾಯಕರಿವರಿಬ್ಬರು ಚರಿತ್ರವಾಚಕರನ್ನು ಅವರಲ್ಲಿ ತೇಲಾಡಿಸುತ್ತಾರೆಂಬುವನ್ನು ಹೇಳುವುದು ಸುಲಭವಾಗಿದೆ. ಈ ನಮ್ಮ ವಿಧಾನದ ಸತ್ಯತ್ವವನ್ನು ನೋಡಬೇಕಾದವರು ಭವಭೂತಿಯ ಉತ್ತರರಾಮಚರಿತವೆಂಬ ನಾಟಕವನ್ನು ಮೇಲಿಂದಮೇಲಾದರೂ ನೋಡಬಹುದು. ಅವರಿಗೆ ರಾಮನ ಮತ್ತು ಭವಭೂತಿಯ ಯೋಗ್ಯತೆಯು ಆಯಾ ವರ್ಗೀಯರಲ್ಲಿ ಅತಿ ಶ್ರೇಷ್ಠವಾದುದು, ಎಲ್ಲರಕ್ಕೂ ಮಿಕ್ಕಿರುವದೆಂದು ಕಂಡುಬಂದೀತು. ಮತ್ತು ಆದುದರಿಂದಲೇ ನಾವು ಈ ಮಾತನ್ನು ಮೇಲೆಯೇ ಹೇಳಿದ್ದೇವೆ.

ಉತ್ತರ ರಾಮಚರಿತವೆಂಬ ಹೆಸರಿನಿಂದಲೇ ನಾಟಕೀಯ ವಸ್ತುವು ಯಾವುದೆಂದು ಗೊತ್ತಾಗುತ್ತದೆ. ರಾಮನು ವನವಾಸವನ್ನು ಮುಗಿಸಿ, ರಾಕ್ಷಸ ಕುಲವನ್ನು ನಿರ್ಮೂಲಿಸಿ ಸೀತೆಯೊಡನೆ ಸ್ವದೇಶಕ್ಕೆ ಬಂದ ಮೇಲೆ ಅವನಿಗೆ ರಾಜ್ಯಾಭಿಷೇಕವಾಯಿತು. ಆ ಪವಿತ್ರವಾದ ರಾಜದಂಡವನ್ನು ಹಿಡಿದು ಅವನು ತನ್ನ ಪ್ರಜೆಗಳನ್ನು ಶಾಸ್ತ್ರಾನುಸಾರವಾಗಿ ಕಾಪಾಡುತ್ತಿರುವಾಗ ಸೀತಾದೇವಿಯ ಮೇಲೆ ಒಂದು ವೃಥಾಪವಾದವು ಬಂದುದಕ್ಕಾಗಿ ಅವಳನ್ನು ಅವನು ಬಿಟ್ಟಿರುವನು. ಈ ಕಥಾ ಭಾಗವನ್ನು ಅವಲಂಬಿಸಿ ಭವಭೂತಿಯು 'ಉತ್ತರ ರಾಮಚರಿತ್ರ'ವನ್ನು ನಿರೂಪಿಸಿದ್ದಾನೆ. ಈ ನಾಟಕವು ಕರುಣ ರಸಪ್ರಧಾನವಾದುದರಿಂದ ಅದರಲ್ಲಿ ಆ ಪ್ರಧಾನ ರಸಕ್ಕೂ ತದನುಯಾಯಿಗಳಾದ ಬೇರೆ ರಸಗಳಿಗೂ, ಭಾವಗಳಿಗೂ ಪರಿಪೋಷಕಗಳಾದ ಎಷ್ಟೋ ವಿಷಯಗಳನ್ನು ಕವಿಯು ಬಹು ಸುಲಲಿತವಾಗಿ ವಿವೇಚಿಸಿರುವನು. ಆದರೆ ನಮಗೆ ಅವೆಲ್ಲ ಪ್ರಕೃತವಲ್ಲ. ಈ ಲೇಖಮಾಲಿಕೆಯಲ್ಲಿ ಹಿಂದಿನಿಂದ ಅರಸರ ವಿಷಯದಲ್ಲಿ, ಹೆಚ್ಚಾಗಿ ಅವರ ಆಳಿಕೆಯ ವಿಷಯದಲ್ಲಿ—ಮಹಾ ಕವಿಗಳು ಯಾವ ಅಭಿಪ್ರಾಯಪಡುತ್ತಾರೆಂಬುದನ್ನು ನೋಡುತ್ತ ಬಂದಂತೆ ಈ ಹೊತ್ತಿನ ಲೇಖದಲ್ಲಿ ಕೂಡ ಅರಸನಾದ ರಾಮನು ಕಾಳಿದಾಸನ ಅರಸರಂತೆ "ಪ್ರಜಾರಂಜನಪರ"ನಾಗಿಯೇ ಇದ್ದನೋ ಅಥವಾ ಪ್ರಜೆಗಳ ವಿಷಯದಲ್ಲಿ ಉದಾಸೀನನಾಗಿದ್ದನೋ ಎಂಬೀ ಪ್ರಶ್ನೆಯೇ ಪ್ರಕೃತವಾಗಿದೆ, ಅದನ್ನೇ ವಿವರಿಸೋಣ. ಈ ಪ್ರಶ್ನೆಯನ್ನು ಕುರಿತು ಆಲೋಚಿಸುವಾಗ ನಾವು ಒಂದು ಸಂಗತಿಯನ್ನು ಮರೆಯಕೂಡದು. ಕಾಳಿದಾಸನ 'ಪ್ರಕೃತಿ ಅಥವಾ ಪ್ರಜಾರಂಜನ'ವು ಭವಭೂತಿಯ 'ಲೋಕಾರಾಧನೆ'ಯ ಪರ್ಯಾಯವಲ್ಲದೆ ಬೇರೆ ಅಲ್ಲ. ಪ್ರಜಾರಂಜನೆ ಮತ್ತು ಲೋಕಾರಾಧನೆ ಇವು ಶಬ್ದತಃ ಭಿನ್ನವಾಗಿದ್ದರೂ ಅರ್ಥತಃ ಒಂದೇ. ಈಗ ಅವುಗಳ ಅರ್ಥದಲ್ಲಿ ವೈಲಕ್ಷಣ್ಯವನ್ನು (ಹೆಚ್ಚು ಕಡಿಮೆಯನ್ನು) ಹೇಳಲೇ ಬೇಕೆಂತಿರುವವರಿಗೆ ತೋರಿಸಿಕೊಡಬಹುದು: ಕಾಳಿದಾಸನ ಪ್ರಜಾರಂಜನೆಗಿಂತ ಭವಭೂತಿಯ ಲೋಕಾರಾಧನೆಯು ಒಂದು ತೂಕ ಭಾರವಾಗಿಯೇ ನಿಲ್ಲುತ್ತದೆ! ಮೇಲೆ ಹೇಳಿದ ಪರಾರಾಧನೆ ಮತ್ತು ಇಲ್ಲಿಯ ಲೋಕಾರಾಧನೆ ಒಂದೇ.

ಈ ಲೋಕಾರಾಧನೆಯನ್ನು ಭವಭೂತಿಯ ರಾಮನು ಎಷ್ಟರಮಟ್ಟಿಗೆ ಮಾಡಿದ್ದನೆಂಬುದನ್ನು ಈಗ ಮೆಲ್ಲಮೆಲ್ಲನೆ ನೋಡೋಣ. ಹದಿನಾಲ್ಕು ವರ್ಷಗಳ ವನವಾಸ ಕ್ಲೇಶವನ್ನು ಕಳೆದು ಸ್ವದೇಶಕ್ಕೆ ಬಂದದ್ದು, ರಾಜಲಕ್ಷ್ಮಿಯು ತತ್ಪರಳಾಗಿ ವರಿಸಿದ್ದು, ಸರ್ವಸತ್ತಾಧಾರಿತ್ವದ ಸೂತ್ರಗಳು ಕೈಗೆ ಬಂದದ್ದು, ಈ ಪರಿಸ್ಥಿತಿಯಲ್ಲಿ ರಾಮನು ಹ್ಯಾಗೆ ನಡಕೊಳ್ಳುತ್ತಿದ್ದನು? ಈಗೆ ಇದನ್ನು ವಿಚಾರಿಸಬೇಕಾಗಿದೆ. ರಾಮನು ಪಟ್ಟಕ್ಕೆ ಮಾತ್ರ ಬಂದಿದ್ದಾನೆ. ಆಗ ಋಷ್ಯಶೃಂಗನು ಒಂದು ಯಜ್ಞವನ್ನು ಮಾಡಲು ಪ್ರಾರಂಭಿಸಿರುವುದರಿಂದ ಅಲ್ಲಿ ರಾಮನ ಮಾತೃವರ್ಗವೂ ಕುಲಗುರುಗಳಾದ ವಸಿಷ್ಠ ಋಷಿಗಳೂ ಹೋಗಿರುವರು. ಕೆಲವು ದಿವಸಗಳ ನಂತರ ಅಲ್ಲಿಂದ ಗುರುಹಿರಿಯರು ರಾಮನಿಗೂ ಸೀತೆಗೂ ಅಷ್ಟಾವಕ್ರನ ಮುಖಾಂತರ ಕೆಲವು ಮಾತುಗಳನ್ನು ಹೇಳಿ ಕಳುಹಿಸಿರುವರು. ರಾಮನಿಗೆ ವಸಿಷ್ಠ ಋಷಿಗಳ ಉಪದೇಶವು ಹೀಗಿತ್ತು: ಇಲ್ಲಿ ಅಳಿಯ ಋಷ್ಯಶೃಂಗನ ಯಜ್ಞಕಾರ್ಯದಲ್ಲಿ ನಾವು ತೊಡಗಿರುವೆವು. ನೀನು ಇನ್ನೂ ಹುಡುಗನು, ನಿನಗೆ ಬಂದ ರಾಜ್ಯಾಧಿಕಾರವು ನವೀನವಾದುದು. ಹೀಗಿರುವುದರಿಂದ ನಾವು ನಿನಗೆ ಹೇಳುವ ಮಾತು ಒಂದೆ "ಯುಕ್ತಃ ಪ್ರಜಾನಾಮನುರಂಜನೇ ಸ್ಯಾಸ್ತಸ್ಮಾದ್ಯಶೋಯತ್ಪರಮಂ ಧನಂವಃ" ನೀನು ಪ್ರಜಾರಂಜನೆಯಲ್ಲಿ ತತ್ಪರನಾಗು, ಅದರಿಂದುಂಟಾಗುವ ಕೀರ್ತಿಯೆ ನಿಮ್ಮಂಥ ಅರಸರಿಗೆ ಶ್ರೇಷ್ಠವಾದ ಧನವು. ವಸಿಷ್ಠ ಋಷಿಗಳ ಈ ಉಪದೇಶವು ಕಾಳಿದಾಸನ ಪ್ರಕೃತಿರಂಜನೆಯಲ್ಲದೆ ಬೇರೆ ಅಲ್ಲ. ಕಾಳಿದಾಸನಾದರೇನು ಭವಭೂತಿಯಾದರೇನು ಇಬ್ಬರು ಮಹಾ ಕವಿಗಳೇ. ಮತ್ತು ಇದೇ ಕಾರಣದಿಂದ ಈ ಮಹಾ ಪುರುಷರಲ್ಲಿ ವಿಚಾರಗಳ ಸಾಮ್ಯವು ಕೆಂಬಹುನಾ ಏಕತಾನತ್ವವು ಕಂಡು ಬರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಇರಲಿ. ಈ ವಸಿಷ್ಠ ಸಂದೇಶವನ್ನು ಶಿರಸಾವಹಿಸಿ ಆ ಸಮಯದಲ್ಲಿ ರಾಮನು ನುಡಿದ ಮಾತು ವಿಶ್ವಬಂಧುವಾದ ಧೀರೋದಾತ್ತನ ಬಾಯಿಂದ ಬರುವ ಹಾಗೆಯೇ ಇದೆ. "ಲೋಕಾರಾಧನೆಯ ಸಲುವಾಗಿ ನಾನು ಸ್ನೇಹ ಸುಖವನ್ನು ಬಿಟ್ಟೇನು, ದಯೆಯನ್ನು ವರ್ಜಿಸೇನು, ಸೌಖ್ಯವನ್ನು ಮೂಲೆಗೊತ್ತೇನು, ಜಾನಕಿಯನ್ನು ಕೂಡ ತ್ಯಜಿಸೇನು, ಈ ಸಂಗತಿಗಳಲ್ಲಿ ನನಗೆಳ್ಳಷ್ಟೂ ವ್ಯಥೆ ಇಲ್ಲ. ಲೋಕಾರಾಧನೆಯನ್ನು ಮಾತ್ರ ನನ್ನಿಂದ ಬಿಡಲಾಗದು. ಈ ಅಭಿಪ್ರಾಯವನ್ನು ರಾಮನು "ಸ್ನೇಹಂ ದಯಾಂಚ ಸೌಖ್ಯಂಚ ಯದಿವಾ ಜಾನಕೀಮಪಿ ॥ ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿಮೇವ್ಯಥಾ ॥ ೧ ॥" ಎಂಬೀ ಪದ್ಯದಲ್ಲಿ ವ್ಯಕ್ತಗೊಳಿಸಿದ್ದಾನೆ. ಅಹಾಹಾ! ಎಷ್ಟು ಉದಾತ್ತ ಭಾವನೆಗಳಿವು! ಅಷ್ಟೈಶ್ವರ್ಯದ ರಾಜವೈಭವಗಳನ್ನು ಅನುಭವಿಸುವ ಯಾವ ಅರಸರಿಗೆ ಇಷ್ಟು ಉದಾತ್ತ ಭಾವನೆಗಳ ಸ್ಪರ್ಶವುಂಟಾಗುವುದು! ಈಚೆಗೆ ಕೆಲವರು ಪರೋಪಕಾರವೇ ಶ್ರೇಷ್ಠವಾದುದೆಂದು ಹೇಳಿ ತಾವು ಮಾತ್ರ ತನ್ನ ನೂಲಿನ ಜೋಲದಲ್ಲಿ ಸುತ್ತಿಬೀಳುವ ಪಟ್ಟೆ ಹುಳದಂತೆ ಸ್ವಾರ್ಥದ ಬಲೆಯಲ್ಲಿ ಹ್ಯಾಗೆ ಸಿಕ್ಕಿಬೀಳುವರೋ ಹಾಗೆ ಅರಸನಾದ ರಾಮನು 'ಲೋಕಾರಾಧನೆಗಾಗಿ ನಾನು ಹಾಗೆ

ಮಾಡೇನು, ಹೀಗ್ಗೆಮಾಡೇನು ಎಂದು ಬರೇ ಮಾತುಗಳನ್ನು ಮಾತ್ರ ಆಡಿದ್ದಾನೆ, ಮಾಡಿದ್ದೇನೂ ಇಲ್ಲೆಂದು ತಿಳಿದರೆ ಅದು ದೊಡ್ಡ ಪ್ರಮಾದವಾದೀತು. ಕಾರಣವೇನೆಂದರೆ, ಈ ಶಬ್ದಗಳು ರಾಮನ ಬಾಯಿಂದ ಹೊರಟ ಒಂದೆರಡು ತಾಸುಗಳಾಗುವಷ್ಟರೊಳಗೆನೇ ಒಬ್ಬ ಚಾರನು ಬಂದು ರಾಮನ ಕಿವಿಯಲ್ಲಿ ಸೀತಾದೇವಿಯ ವಿಷಯವಾಗಿ ಒಬ್ಬ ಕ್ಷುದ್ರ ಅಗಸನು ಮಾಡುವ ಆರೋಪಣೆಯನ್ನು ತಿಳಿಸುತ್ತಾನೆ. ಅದನ್ನು ಕೇಳಿ ರಾಮನು ಸೀತೆಯನ್ನು ಬಿಡಲು ನಿಶ್ಚಯಿಸಿದನು. ಯಾಕೆ? ಒಬ್ಬ ಅಗಸನ ಆರಾಧನೆಗಾಗಿ ಅಲ್ಲ, ಲೋಕಾರಾಧನೆಗಾಗಿ. ಲೋಕಾರಾಧನೆಗಾಗಿ ತನ್ನ ಇನ್ನೊಂದು ಜೀವಿತದಂತಿರುವ ಧರ್ಮಪತ್ನಿಯನ್ನು ತ್ಯಜಿಸುವವನು ಯಾರು ಇದ್ದಾನೆ? ಅಲ್ಲದೆ ಈ ರಾಜದ್ರೋಹಿಯಾದ ಅಗಸನಿಗೆ ಶಿಕ್ಷಿಸುವಂತೆ ಆ ಕಾಲದಲ್ಲಿ ಯಾವುದೂ ಒಂದು ಕಾಯಿದೆಯು ಇದ್ದಿಲ್ಲವೋ? ಈಗಿನ 'ಪಿನಲು ಕೋಡು' ಆಗ ಇದ್ದಿಲ್ಲವಾದರೂ ಮನುವಿನ 'ಕೋಡಾ'ದರೂ ಇತ್ತಲ್ಲವೇ? ಅದರಂತೆ ಈ ದಂಡ್ಯನಾದ ವೃಥಾನಿಂದಕನನ್ನು ಶಿಕ್ಷಿಸಬಹುದಿತ್ತಲ್ಲವೇ? ಆದರೆ ಲೋಕಾರಾಧಕನಾದ ರಾಮನು ಈ ಮಾರ್ಗವನ್ನು ಸ್ವೀಕರಿಸಲಿಲ್ಲ. ಈ ರಾಜದ್ರೋಹಿಯನ್ನು ಜೈಲಿಗೆ ಕಳುಹಿಸಿ ತನ್ನ ರಾಜತ್ವವನ್ನು ನೆಲೆಗೊಳಿಸಬೇಕೆಂಬ ಕಾಂಕ್ಷೆಯು ಅರಸನಾದ ರಾಮನಲ್ಲಿದ್ದಿಲ್ಲ. ಅಲ್ಲದೆ, ಆ ನಿಂದಕನ ಆರೋಪಣೆಯಲ್ಲಿ ತಥ್ಯಾಂಶವಿತ್ತೇ? ಅದೂ ಇದ್ದಿಲ್ಲ. ಕಾರಣ ಅದು ಆರೋಪಣೆಯೇ ಸರಿ! ಅಗ್ನಿಶುದ್ಧಿ, ದೇವತೆಗಳ ಅನುಮೋದನೆ, ದಶರಥನ ಆತ್ಮದ ಸಾಕ್ಷಿ, ಮೇಲಾಗಿ ರಾಮನ ಅಂತರಾತ್ಮದ ವಿಶ್ವಾಸ ಇಷ್ಟು ಪ್ರಬಲವಾದ ಕಾರಣ ಸಾಮಗ್ರಿಗಳಿರುವಾಗ ಈ ನಿಂದಕನ ಆರೋಪಣೆಗೆ ರಾಮನು ಕಿವಿಗೊಡಬೇಕಿತ್ತೇ? ಆದರೆ ಇಂಥ ಸಂದರ್ಭದಲ್ಲಿ ಮಹಾ ಪುರುಷರ ಮನಸ್ಸು ನ್ಯಾಯಾನ್ಯಾಯಗಳನ್ನು ಅಥವಾ ಯುಕ್ತಾಯುಕ್ತ ಸಂಗತಿಗಳನ್ನು ವಿಮರ್ಶಿಸುವುದಕ್ಕಿಂತಲೂ ಸ್ವಾರ್ಥನಿರಪೇಕ್ಷವಾದ ಲೋಕಾರಾಧನೆಯ ಕಡೆಗೆನೇ ತತ್ಪರವಾಗಿ ಹೋಗುತ್ತದೆ. ಇದೇ ಮಹಾ ಪುರುಷರ ಲಕ್ಷಣಕ್ಕನುಗುಣವಾಗಿ ಶ್ರೀ ರಾಮನು ಸೀತಾದೇವಿಯನ್ನು ತ್ಯಜಿಸಿ, ಐಹಿಕ ವೈಭವ ಶಿಖರದಲ್ಲಿ ಕುಳಿತು 'ಕರ್ತುಮಕರ್ತು ಮನ್ಯಥಾ ಕರ್ತುಂ ಸಮರ್ಥ'ನಾದ ಅರಸನಾದರೂ ಲೋಕಮತಕ್ಕೆ ಮಾನಕೊಡುವುದೂ ಲೋಕವನ್ನು ಆರಾಧಿಸುವುದೂ ಎಷ್ಟು ಅಗತ್ಯವಿದೆಂಬುದನ್ನು ತನ್ನ ಉದಾಹರಣೆಯಿಂದ ವಿಶ್ವ ಅರಸುಗಳಿಗೆ ತೋರಿಸಿರುವನು. ಈ ತರದ ದಾರುಣವಾದ ನಿಶ್ಚಯವನ್ನು ಮಾಡುವಾಗ ಶ್ರೀ ರಾಮನು ಆಡಿದ ಮಾತುಗಳು ನಿಜವಾಗಿ ಚಿನ್ನದ ಅಕ್ಷರಗಳಿಂದ ಬರೆದಿಡುವ ಹಾಗಿವೆ.

> ಸಹಾಂಕೇನಾಪಿ ಕಾರ್ಯೇಣ ಲೋಕಸ್ಯಾರಾಧನಂ ಪರಮ್ ।
> ತತ್ಪ್ರತೀಶಂ ಹಿ ತಾತೇನ ಮಾಂಚ ಪ್ರಾಣಾಂಶ್ಚ ಮುಂಚತಾ ॥ ೧ ॥

"ಯಾವ ಕಷ್ಟವನ್ನಾದರೂ ಸಹಿಸಿ, ಎಂಥಾ ಸೌಖ್ಯವನ್ನಾದರೂ ಬಿಟ್ಟು 'ಲೋಕಾರಾಧನೆ'ಯನ್ನು ಮಾಡುವುದು ಸತ್ಪುರುಷರ ಮುಖ್ಯವಾದ ಧರ್ಮವು. ನನ್ನ ತಂದೆಯು ನಡಕೊಂಡು ಹೋದ ಮಾರ್ಗವು ಇದೇ. ಅವನು ಈ ಲೋಕಾರಾಧನೆಗಾಗಿಯೇ ಔರಸನಾದ ನನ್ನನ್ನು ಬಿಟ್ಟನು. ತನ್ನ ಪ್ರಾಣಗಳನ್ನು ಕೂಡ ಕಳಕೊಂಡನು." ಶ್ರೀ ರಾಮನ ಈ ಉದ್ಗಾರಗಳು ನಮ್ಮಂಥ ಸಾಮಾನ್ಯರ ಹೃದಯಗಳನ್ನು ಭೇದಿಸುತ್ತವಲ್ಲವೆ? ಆದರೂ ಆ ರಾಮಚಂದ್ರನು ಗರ್ಭಭಾರದಿಂದ ನಮ್ರಳಾದ ಸೀತಾದೇವಿಯನ್ನು ತ್ಯಜಿಸಿ ಈ ವಿಷಮವಾದ ಲೋಕವನ್ನು ಸಹ ಸಮದೃಷ್ಟಿಯಿಂದ ಆರಾಧಿಸಿದ್ದಾನೆ.

ಮಹಾರಾಜನಾದ ರಾಮನು ಮಾತ್ರ ಲೋಕಾರಾಧನೆಯನ್ನು ಆಚರಿಸಿದ್ದಾನೆಂತಲ್ಲ, ಯುವರಾಜನಾದ ರಾಮನು ಕೂಡ ಈ ಲೋಕಾರಾಧನೆಯ ಪಾಠವನ್ನು ಕಲಿತಿರುವನು. ತಂದೆಯ ಮಾತನ್ನು ಉಳಿಸುವುದಕ್ಕಾಗಿ ಕೈಗೆ ಬಂದ ರಾಜ ಲಕ್ಷ್ಮಿಯನ್ನು ಕಾಲಿನಿಂದ ಒದ್ದಿ ಕಾಷಾಯ ವಸ್ತ್ರಗಳನ್ನು ತೊಟ್ಟುಕೊಂಡು ಕಾಡಿನ ಹಾದಿಯನ್ನು ಹಿಡಿದ ರಾಮನು ಇವನಲ್ಲವೇ? ಅಂದಿನಿಂದಲೇ ಲೋಕಾರಾಧನೆಯ ದೀಕ್ಷೆಯನ್ನು ಹಿಡಿದಿರುವುದರಿಂದ ಅದೇ ಕೆಲಸಕ್ಕಾಗಿ ಮುಂದೆ ಪ್ರಿಯ ಪತ್ನಿಯನ್ನು ತ್ಯಜಿಸುವುದು ಸಹ ಅವನಿಗೆ ಅಸಾಧ್ಯವಾಗಲಿಲ್ಲ.

ಅಸ್ತು, ಶ್ರೀರಾಮನಂಥ ಲೋಕಪಾವನನಾದ ಮಹಾ ಪುರುಷನ ಚರಿತ್ರೆಯನ್ನು—ವಿಶೇಷವಾಗಿ ಭವಭೂತಿಯಂಥ ಮಹಾ ಕವಿಯು ತನ್ನ ಸ್ವಯಂಸಿದ್ಧ ಪ್ರತಿಭೆಯಿಂದ ರೂಪಿಸಿರುವ ಚರಿತ್ರೆಯನ್ನು—ಯಾವ ದೃಷ್ಟಿಯಿಂದ ಅವಗಾಹಿಸಿದರೂ ಸಹೃದಯರ ಅಂತರಂಗವು ಇನ್ನಷ್ಟು ಅತೃಪ್ತವೇ ಆಗುವುದು. ಆದರೂ "ಮಹಾಕವಿಗಳ ಅರಸರು" ಈ ವಿಷಯವನ್ನು ಉಪಕ್ರಮಿಸಿ ನಾವು ಬರೆದಿರುವ ಮೂರು ನಾಲ್ಕು ಲೇಖಗಳಿಂದ ವಾಚನ ಪ್ರಿಯರಾದ ವಾಚಕರಿಗೆ ಅರಸನೆಂದರೆ ಕರಡಿ ಹುಲಿಗಳಂತೆ ಒಂದು ಭಯದ ಸ್ಥಾನವಲ್ಲ; ಲೋಕಾರಾಧನೆಯೇ ಅವನ ಮುಖ್ಯ ಕರ್ತವ್ಯವು, ಇದೇ ಅವನ ಕೋಶ ಭಂಡಾರವು, ಇದೇ ಅವನ ರಾಜ್ಯದ ದೃಢತ್ವಕ್ಕೆ ಬಲವತ್ತಾದ ಸೈನ್ಯವು" ಎಂಬ ಈ ಮಹಾಕವಿಗಳ ಅಭಿಪ್ರಾಯವು ತಿಳಿದು ಬಂದೀತು. ಪ್ರಾಚೀನ ವಾಙ್ಮಯವನ್ನು ಈ ದೃಷ್ಟಿಯಿಂದ ಓದಿದರೆ ಅದರಲ್ಲಿ ನಮ್ಮ ಹಿಂದಿನ ಆರ್ಯರು ಯಾವ ಯಾವ ವಿಷಯಗಳನ್ನು ಹ್ಯಾಗೆ ಹ್ಯಾಗೆ ವಿವೇಚಿಸಿರುವರೆಂದು ಗೊತ್ತಾಗುತ್ತದೆ, ಮತ್ತು ಇದರಿಂದ "ನಮ್ಮಲ್ಲಿ ಏನೂ ಇದ್ದಿಲ್ಲ, ಉದಾತ್ತಮತಗಳೂ ಆಲೋಚನೆಗಳೂ ಇಲ್ಲಿ ಪಶ್ಚಿಮದಿಂದಲೇ ಬಂದವುಗಳು, ಸ್ವರಾಜ್ಯದ ಕಲ್ಪನೆ, ರಾಜಕೀಯ ಸುಧಾರಣೆ, ಲೋಕಮತದ ಮಹಾತ್ಮ್ಯ ಮುಂತಾದವುಗಳನ್ನು ಈಗೀಗ ಪಾಶ್ಚಾತ್ಯರಿಂದ ನಾವು ಕಲಿತುಕೊಳ್ಳಬೇಕಾಗಿ ಬಂದಿದೆ" ಈ ತರದ ದುರಭಿಪ್ರಾಯವು ಪೂರ್ಣ ನಾಶವಾಗಿ ಹೋದೀತು. ನಮ್ಮ ಶಿಕ್ಷಿತ ತರುಣರ ಮನಸ್ಸು ಭಾರತೀಯರ ಪ್ರಾಚೀನ ಗ್ರಂಥ ಭಾಂಡಾರದಲ್ಲಿ ಎಂಥೆಂಥ ವಿಚಾರ ರತ್ನಗಳಿವೆಂಬುದನ್ನು ಹುಡುಕುವುದರಲ್ಲಿ ಪ್ರವರ್ತಿಸಲೆಂಬಾಶೆಯಿಂದ ನಾವು ಈ ಲೇಖಮಾಲೆಯನ್ನು ಬರೆದಿದ್ದಾಗಿದೆ. ಇದನ್ನು ನೋಡಿ ನಮ್ಮ ತರುಣರು ಪ್ರಾಚೀನ ಗ್ರಂಥಗಳ ವ್ಯಾಸಂಗವನ್ನು ಈ ದೃಷ್ಟಿಯಿಂದ ಮಾಡಲುಪಕ್ರಮಿಸಿದರೆ ನಮ್ಮ ಈ ಶ್ರಮವು ಸಾರ್ಥಕವಾಯಿತೆಂದು ನಾವು ಎಣಿಸುವೆವು.

ತುಪಟಕ್ಕೆ ಬಣ್ಣ ಹಾಕುವ ವಿಧಾನ.

ಬಣ್ಣಕ್ಕೆ ಹಾಕುವ ಪದಾರ್ಥಗಳು.

ಅಡಕೆಯ ಕಾಚು, (Areca catechu)—ಪುಡಿಮಾಡಿದ ಅಡಕೆಯನ್ನು ನೀರಲ್ಲಿ ಹಾಕಿ ಕುದಿಸಿ ತಿಳಿನೀರನ್ನು ಆರಿಸಿ ಒಣಗಿಸಿದರೆ ಕಾಚಾಗುವುದು.

ಈ ಕಾಚು ತಾಮ್ರದ (brown) ಬಣ್ಣವನ್ನು ಕೊಡುವುದು. ಇದನ್ನು ಪತಂಗದ ಚಕ್ಕೆಯ ಬಣ್ಣದೊಡನೆ ಸೇರಿಸಿದರೆ ಹೆಚ್ಚು ಕೆಂಪಾದ ತಾಮ್ರದ ಬಣ್ಣ (chocolate) ವಾಗುವುದು. ಮತ್ತು ಮುತ್ತಗದ ಹೂವು ಅರಸಿನ ಇವುಗಳ ಬಣ್ಣದ ನೀರಿನಲ್ಲಿ ಸೇರಿಸಿದರೆ ಬೂದುಬಣ್ಣವಾಗುವುದು.

ನೀಲಿ (Indigo)—ಈ ಬಣ್ಣವು ನೀಲಿಯ ಗಿಡದಿಂದ ತೆಗೆಯಲ್ಪಡುತ್ತದೆ. ಇದನ್ನು ಚದುರವಾದ ಗಟ್ಟಿ ಗಡ್ಡೆಗಳಲ್ಲಿ ಮಾರುತ್ತಾರೆ. ಒಳ್ಳೆಯ ನೀಲಿ ಬಣ್ಣವು ಹಗುರವಾಗಿರುತ್ತದೆ. ಉಗುರಿನಿಂದ ಮೇಲುಗಡೆ ಕೆರೆದರೆ ತಾಮ್ರದ ಛಾಯೆಯಿರುತ್ತದೆ. ಅನೇಕ ವೇಳೆ ಮರಳನ್ನು ನೀಲಿಯ ಜೊತೆಗೆ ಬೆರಸಿ ಮೋಸ ಮಾಡುತ್ತಾರೆ.

ಅರಗು (Lac)—ಇದು ಜಾಲದ ಮರದ ಕೊಂಬೆಗಳಲ್ಲಿ (Carteria Lacca) ಎಂಬ ಹುಳುಗಳು ಕಟ್ಟುವ ಗೂಡು. ಈ ಗೂಡುಗಳನ್ನು ಹುಳುಗಳು ಹೇಗೆ ಕಟ್ಟುತ್ತವೆಂಬ ವಿಷಯದಲ್ಲಿ ಒಬ್ಬೊಬ್ಬ ಗ್ರಂಥಕರ್ತರು ಒಂದೊಂದು ವಿಧವಾಗಿ ಅಭಿಪ್ರಾಯಪಡುತ್ತಾರೆ. ಕೆಲವರು ಮೇಲೆ ಹೇಳಿದ ಮರದ ಕಡ್ಡಿಗೆ ಸೇರಿದ ಹುಳುಗಳಲ್ಲಿ ಹೆಣ್ಣು ಹುಳುಗಳು ಮರಿ ಹಾಕಿದ ಕೂಡಲೆ ಶರೀರದಿಂದ ಒಂದು ವಿಧವಾದ ಕೆಂಪು ನೀರನ್ನು ಸುರಿದು ಸಾಯುತ್ತವೆಂದೂ ಈ ನೀರೇ ಕಡ್ಡಿಯ ಮೇಲೆ ಒಣಗಿ ಪರೆಪರೆಯಾಗಿ ಒಂದು ಅಂಗುಲ ದಪ್ಪಕ್ಕೆ ಮುತ್ತಿಕೊಳ್ಳುತ್ತದೆಂದೂ ಅಭಿಪ್ರಾಯಪಡುತ್ತಾರೆ. ಹುಳುಗಳು ಕಡ್ಡಿಗಳನ್ನು ಕಚ್ಚಿದಾಗ ಅವುಗಳಿಂದ ಹೊರಡುವ ರಸವು ಒಣಗಿಕೊಂಡು ಅರಗು ಆಗುತ್ತದೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಹುಳಗಳ ಮಲವೇ ಹೀಗೆ ಒಣಗಿ ಅರಗಾಗುವುದೆಂದು ಹೇಳುತ್ತಾರೆ.

ಅನ್ನಭೇದಿ (Iron Sulphate)—ಇದೊಂದನ್ನೇ ಕೊಂಚವಾಗಿ ಹಾಕಿ ಬಣ್ಣ ಮಾಡಿದರೆ ಬೂದುಬಣ್ಣವಾಗುತ್ತದೆ. ಇದರ ಜೊತೆಗೆ ಅಳಲೆಯ ಕಾಯನ್ನು ಸೇರಿಸಿದರೆ ಒಂದು ಬಗೆಯ ಕಪ್ಪಾಗುತ್ತದೆ. ಈ ಕಪ್ಪನ್ನು ಮೋಚಿಗಳು ಚರ್ಮಕ್ಕೆ ಹಾಕುತ್ತಾರೆ. ಬಣ್ಣಗಳ ಹೆಚ್ಚು ಪ್ರಕಾಶವನ್ನು ಕಡಿಮೆ ಮಾಡುವುದಕ್ಕೆ ಯಾವ ಬಣ್ಣಗಳೊಡನೆಯಾದರೂ ಅನ್ನಭೇದಿಯನ್ನು ಸೇರಿಸಬಹುದು.

ಮುತ್ತಗದ (The Flower of the Butea Frondosa)—ಒಣಗಿದ ಈ ಹೂವನ್ನು ನೀರಲ್ಲಿ ನೆನೆಹಾಕಿದರೆ ಸಾರಾಯಿ ಬಣ್ಣದ ಮಂಕು ಹಳದಿ ಅಥವಾ ಕಿತ್ತಳೆಯ ಬಣ್ಣವು ಬರುತ್ತದೆ. ಇದರೊಡನೆ ಅರಸಿನವನ್ನು ಸೇರಿಸಿದರೆ ಬಣ್ಣವು ಗಟ್ಟಿಯಾಗುತ್ತದೆ.

ಅಳಲೆಯ ಕಾಯಿ (Gallnut)—ಇದಕ್ಕೆ ಪಟಿಕವನ್ನು ಸೇರಿಸಿ ಬಣ್ಣ ಹಾಕಿದರೆ ಒಂದು ಬಗೆ ಹಳದಿಯ ಬಣ್ಣವಾಗುತ್ತದೆ. ಅನ್ನಭೇದಿಯನ್ನು ಸೇರಿಸಿದರೆ ಕಪ್ಪು ಮತ್ತು ಸ್ಲೇಟ್ ಬಣ್ಣಗಳಾಗುತ್ತವೆ.

ಪತಂಗದ ಚಕ್ಕೆ (Sappan wood)—ಈ ಕೆಂಪುಬಣ್ಣದ ಚಕ್ಕೆಯನ್ನು ಚೂರು ಚೂರಾಗಿ ಕತ್ತರಿಸಿಕೊಂಡು ಬಣ್ಣ ತೆಗೆಯುತ್ತಾರೆ. ಗುಲಾಲದಂತೆ ಬರುವ ಬಣ್ಣಕ್ಕೆ ಪಟಿಕವನ್ನು ಸೇರಿಸಿದರೆ ಬಣ್ಣವು ಪ್ರಕಾಶವಾಗುತ್ತದೆ.

ಅರಸಿನ (Turmeric)—ಬಳ್ಳಿಯ ಅರಿಸಿನವನ್ನು ಮುರಿದು ನೋಡಿದರೆ ಒಳಗೆ ಕೆಂಪಾಗಿಯೂ ಹಸಿಯಾಗಿಯೂ ಇರುತ್ತದೆ. ಬರಿಯ ಅರಿಸಿನದ ಬಣ್ಣವು ಗಟ್ಟಿಯಲ್ಲ. ಮುತ್ತಗದ ಹೂವಿನೊಡನೆ ಸೇರಿಸಿ ಹಾಕಿದರೆ ಗಟ್ಟಿಯಾಗುತ್ತದೆ.

ಒಗರುಗಳು—(Mordants) ಬಣ್ಣವನ್ನು ಗಟ್ಟಿ ಮಾಡುವುದಕ್ಕೆ ಬಣ್ಣಕ್ಕೆ ಒಗರು ಹಾಕುತ್ತಾರೆ. ಬರಿಯ ಬಣ್ಣವನ್ನು ನೂಲಿಗೆ ಹಾಕಿದರೆ ಅನೇಕ ವೇಳೆ ಬಣ್ಣವು ಬಿಸಿಲಿಗಾಗಲಿ ನೀರಿಗಾಗಲಿ ಹೋಗಿಯೇ ಬಿಡುತ್ತದೆ. ಹೀಗಾಗದೆ ಇರುವುದಕ್ಕೆ ಒಗರನ್ನು ಬಣ್ಣದ ಜೊತೆಗೆ ಸೇರಿಸಿಯಾಗಲಿ ಬಣ್ಣ ಹಾಕಿದ್ದನಂತರ ಅಥವಾ ಹಾಕುವುದಕ್ಕೆ ಮೊದಲೇ ಆಗಲಿ ನೂಲಿಗೆ ಹಾಕುತ್ತಾರೆ. ಒಗರುಗಳು ಉಪ್ಪಾಗಿಯಾಗಲಿ ಅಥವಾ ಹುಳಿರಸಗಳಾಗಿಯಾಗಲಿ ಆಗಿರುತ್ತವೆ.

ಪಟಿಕ (Alum)—ಇದೇ ಮುಖ್ಯವಾದ ಒಗರು. ಇದರಿಂದಲೇ ಅನೇಕ ಬಣ್ಣಗಳಿಗೆ ಒಗರು ಕೊಡುತ್ತಾರೆ. ಯೂರೋಪಿನ ಬಣ್ಣಗಾರರು ಪಟಿಕವನ್ನೇ ಹೆಚ್ಚಾಗಿ ಒಗರಿಗೆ ಉಪಯೋಗಿಸುತ್ತಾರೆ. ಒಳನಾಡಿನವರು ಇದಕ್ಕೆ ಬದಲು ಹಪ್ಪಳದ ಕಾರ ಅಥವಾ ಚೌಳನ್ನು ಹೆಚ್ಚಾಗಿ ಪ್ರಯೋಗಿಸುತ್ತಾರೆ. ಇವುಗಳ ಬೆಲೆ ಸುಲಭವಾಗಿರುವುದೇ ಇದಕ್ಕೆ ಕಾರಣವಿರಬಹುದು.

ಅನ್ನಭೇದಿ (Copperas)—ಇದನ್ನು ಹಿಂದೆ ಹೇಳಿದಂತೆ ಬಣ್ಣಕ್ಕೆ ಉಪಯೋಗಿಸುವುದಲ್ಲದೆ ಒಗರು ಕೊಡುವುದಕ್ಕೂ ಉಪಯೋಗಿಸುತ್ತಾರೆ.

ಅಗ್ನಿ ದ್ರಾವಕ (Sulphuric acid)—ನೀಲಿಯನ್ನು ಈ ದ್ರಾವಕದಲ್ಲಿ ಕದಡಿ ಕರಗಿಸಿಕೊಂಡು ಎಲ್ಲಾ ತರದ ನೀಲಿಯ ಬಣ್ಣಕ್ಕೂ ಉಪಯೋಗಿಸುವರು.

ಹುಣಿಸೆಯ ಹಣ್ಣು (Tamarind)—ಇದನ್ನು ಅರಗಿನ ಬಣ್ಣಕ್ಕೆ ಸೇರಿಸುತ್ತಾರೆ. ಬಣ್ಣಕ್ಕೆ ಹಳೆಯ ಹುಣಿಸೆಹಣ್ಣು ಉತ್ತಮ.

ತಂಗಡಿ (ಗಂಡುತಗಸಿ) ಅಥವಾ ನೀಲಿಬೀಜ (The seeds of Cassia Tora) ಈ ಬೀಜವನ್ನು ಬೆರಸಿ ನೀಲಿ ಬಣ್ಣಕ್ಕೆ ಹಾಕುತ್ತಾರೆ.

ಕೊಳೆ ತೆಗೆಯುವುದು (Scouring)—ತುಪಟದಲ್ಲಿರುವ ಎಣ್ಣೆ ಮತ್ತು ಕೊಳೆಗಳನ್ನು ತೆಗೆಯುವುದಕ್ಕೆ ಚೌಳು ಅಥವಾ ಹಪ್ಪಳದ ಕಾರದ ಜೊತೆಗೆ ಸುಣ್ಣವನ್ನು ಉಪಯೋಗಿಸುತ್ತಾರೆ.

ಚೌಳು ಅಥವಾ ಹಪ್ಪಳದಕಾರ (Fuller's earth)—ಇದು ಭೂಮಿಯಲ್ಲಿ ಸಿಕ್ಕುವ ಉಪ್ಪುಮಣ್ಣು. ಭೂಮಿಯಲ್ಲಿರುವ ಬಿಳಿಯ ಕಲ್ಲು (Granite stone) ನೀರಿನಿಂದ ಮೃದುವಾಗಿ ಮರಳು ಬಿದ್ದು ಮೇಲಕ್ಕೆ ಬಂದು ಚೌಳಾಗುತ್ತದೆ. ಹೀಗೆ ಭೂಮಿಯ ಮೇಲೆ ಬಂದು ನಿಲ್ಲುವ ಮಣ್ಣನ್ನು ಗುಡಿಸಿ ತೆಗೆದುಕೊಂಡು ಸ್ವಲ್ಪ ಸುಣ್ಣವನ್ನು ಸೇರಿಸಿ ನೀರಿನಲ್ಲಿ ಬೇಯಿಸಿ ಮುದ್ದೆಮಾಡಿಟ್ಟುಕೊಳ್ಳುತ್ತಾರೆ.

ಕೊಳೆಯನ್ನು ತೆಗೆಯುವ ವಿಧಾನ (The process of scouring)—ಹತ್ತು ಪೌಂಡು ತುಪಟಕ್ಕೆ ಒಂದು ಅಥವಾ ಒಂದೂವರೆ ಪೌಂಡು ಚೌಳು ಬೇಕಾಗುತ್ತದೆ. ತುಪಟವನ್ನು ಮೊದಲು ನೀರಲ್ಲಿ ತೊಳೆದುಕೊಳ್ಳಬೇಕು. ಒಂದು ಪಾತ್ರೆಗೆ ೧೪ ಗ್ಯಾಲನ್ ಅಥವಾ ೬೦ ಪಕ್ಕಾ ಸೇರು ನೀರು ಹಾಕಿ ಅದರಲ್ಲಿ ಮೇಲ್ಕಂಡ ಚೌಳನ್ನು ಪುಡಿಮಾಡಿ ಹಾಕಿ ಕುದಿಸಿಕೊಳ್ಳಬೇಕು. ನೀರು ಕುದಿಯುವಾಗ ನೀರಲ್ಲಿ ಚೆನ್ನಾಗಿ ನೆನಸಿದ ತುಪಟದ ನೂಲನ್ನು ಈ ಪಾತ್ರೆಯಲ್ಲಿ ಅದ್ದಿ ಮುಳುಗಿಸಿ ಆಗಾಗ್ಗೆ ಕಡ್ಡಿಯಿಂದ ತಿರುಗಿಸಿ ಹಾಕುತ್ತಿರಬೇಕು. ಕುದಿಯುವ ಪಾತ್ರೆಯ ಬಾಯನ್ನು ಒಂದು ಮುಚ್ಚಳದಿಂದ ಮುಚ್ಚಿರಬೇಕು. ಹೀಗೆ ೬ ಘಂಟೆಯ ಕಾಲ ಬೇಯಿಸುವುದರಿಂದ ಕೊಳೆಯೆಲ್ಲ ಹೋಗಿ ದಾರವು ಶುಚಿಯಾಗುವುದು. ಆಗ ನೂಲಿನ ಲಡಿಗಳನ್ನು ಪಾತ್ರೆಯಿಂದ ಹೊರಗೆ ತೆಗೆದು ಶುಚಿಯಾದ ತಣ್ಣೀರಲ್ಲಿ ತೊಳೆದು ಹೊರಗೆ ಸಾಫಾಗಿ ಒಣಗಿಸುತ್ತಾರೆ. ಚೌಳನ್ನು ಅನ್ನಭೇದಿ ಮತ್ತು ಅರಗು ಬಣ್ಣಗಳಿಗೆ ಒಗರಾಗಿ ಉಪಯೋಗಿಸುತ್ತಾರೆ.

ಸುಣ್ಣ (Lime)—ಇದ್ದಲಿನಿಂದ ಸುಟ್ಟ ಸುಣ್ಣದ ಹರಳಿಗೆ ನೀರು ಹಾಕಿ ಅರಳಿಸಿ ಸುಣ್ಣ ಮಾಡಿಕೊಳ್ಳಬೇಕು. ೩ ಪೌಂಡು ಸುಣ್ಣಕ್ಕೆ ೧೪ ಗ್ಯಾಲನ್ ನೀರು ಹಾಕಿ ಒಂದು ಪಾತ್ರೆಯಲ್ಲಿ ಕದಡಿ ತಿಳಿನೀರನ್ನು ತೆಗೆದುಕೊಂಡು ಅದರಲ್ಲಿ ತುಪಟವನ್ನು ಅದ್ದಿ ನೆನಸಿ ೧೨ ಘಂಟೆಗಳ ಕಾಲ ಪಾತ್ರೆಯಲ್ಲಿಯೇ ಬಿಟ್ಟಿರಬೇಕು. ಆಗ ತುಪಟವು ಹಳದಿಯ ಬಣ್ಣವಾಗುತ್ತದೆ. ಅದನ್ನು ತೆಗೆದು ತಣ್ಣೀರಲ್ಲಿ ತೊಳೆದು, ಹೊರಗೆ ಹಾಕಿ ಒಣಗಿಸಿಕೊಂಡರೆ ಬಣ್ಣಮಾಡಲು ಸಿದ್ಧವಾಗುತ್ತದೆ. ಈ ರೀತಿ ಶುದ್ಧಿಮಾಡಿಕೊಂಡ ತುಪಟದ ನೂಲು ನೀಲಿ ಬಣ್ಣ ಹಾಕುವುದಕ್ಕೆ ಮಾತ್ರ ಉಪಯೋಗವಾಗುತ್ತದೆ. ಸುಣ್ಣವನ್ನು ತಂಗಡಿ ಬೀಜದ ಜೊತೆಯಲ್ಲಿ ನೀಲಿ ಬಣ್ಣಕ್ಕೆ ಒಗರು ಕೊಡುವುದಕ್ಕೆ ಉಪಯೋಗಿಸುತ್ತಾರೆ. ಹೀಗೆ ತುಪಟದ ನೂಲನ್ನು ಶುಚಿ ಮಾಡಿಕೊಳ್ಳುವುದರಿಂದ ಅದರಲ್ಲಿರುವ ಕೊಳೆ ಹೋಗುವುದು ಮಾತ್ರವಲ್ಲದೆ ನೂಲು ಮೃದುವಾಗಿ ಬಣ್ಣವು ಒಂದೇ ಸಮನಾಗಿಯೂ ಜಾಗ್ರತೆಯಾಗಿಯೂ ಹತ್ತುತ್ತದೆ.

ಬಣ್ಣ ಹಾಕುವುದಕ್ಕೆ ಬೇಕಾದ ಪಾತ್ರೆಗಳು:—ಒಂದು ಸಲಕ್ಕೆ ಹೆಚ್ಚು ನೂಲನ್ನು ಬಣ್ಣ ಮಾಡಬೇಕಾದರೆ ತಾಮ್ರದ ಪಾತ್ರೆಗಳು ಉತ್ತಮ. ೬ ಅಡಿ ಉದ್ದ ೩ ಅಡಿ ಎತ್ತರ ೨½ ಅಡಿ ಅಗಲವಿರತಕ್ಕ ಪಾತ್ರೆಯಲ್ಲಿ ಒಂದಾವರ್ತಿಗೆ ೫೦ ಪೌಂಡು ತೂಕದ ದಾರಕ್ಕೆ ಬಣ್ಣ ಹಾಕಬಹುದು. ಒಂದು ದೊಡ್ಡ ಜಮಖಾನಕ್ಕೆ ಬೇಕಾದ ಒಂದೇ ಬಣ್ಣದ ಹೆಚ್ಚು ದಾರವನ್ನು ಒಂದು ಸಲಕ್ಕೆ ಬಣ್ಣ ಮಾಡಿಕೊಳ್ಳಬಹುದು. ಹೀಗಲ್ಲದೆ ಎರಡು ಮೂರಾವರ್ತಿ ಸ್ವಲ್ಪ ಸ್ವಲ್ಪ ನೂಲಿಗೆ ಬಣ್ಣಮಾಡಿಕೊಂಡರೆ ಬಣ್ಣ ಹೆಚ್ಚು ಕಡಿಮೆಯಾಗಿ ಪಟ್ಟೆ ಬೀಳುವುದು. ಇನ್ನೂರು ಸೇರು ನೀರು ಹಿಡಿಯುವ ಮಣ್ಣಿನ ಗುಡಾಣದಲ್ಲಿ ಒಂದಾವರ್ತಿಗೆ ೧೦, ೧೨½ ಪೌಂಡು ನೂಲಿಗೆ ಬಣ್ಣ ಹಾಕಬಹುದು. ನೀರಿಗೆ ಹಾಕಿದ ಹುಳಿದ್ರಾವಕಗಳಿಂದ ಗುಡಾಣಗಳು ಕೆಡುವುದಿಲ್ಲವಾದ್ದರಿಂದ ಇವುಗಳೂ ಅನುಕೂಲ.

ಜಮಖಾನಕ್ಕೆ ಉಪಯೋಗಿಸುವ ತುಪಟದಲ್ಲಿ—ಸತ್ತ ತುಪಟ, ಕತ್ತರಿಸಿದ ತುಪಟವೆಂದು ಎರಡು ವಿಧ. ಕುರಿಯ ಚಕ್ಕಳಕ್ಕೆ ಸುಣ್ಣದಕಾರ ಕೊಟ್ಟು ಬೇರು ಸಾಯಿಸಿ ತೆಗೆಯುವ ಕುರಿಯ ಕೂದಲು ಸತ್ತ ತುಪಟ. ಜೀವದ ಕುರಿಯ ಮೈಯಲ್ಲಿ ಕತ್ತರಿಸಿ ತೆಗೆದ ಕೂದಲೇ ಕತ್ತರಿಸಿದ ತುಪಟ.

ಸಾಮಾನ್ಯವಾದ ತುಪಟವು ಒಳನಾಡಿನಲ್ಲಿಯೇ ದೊರೆಯುತ್ತದೆ. ಉತ್ತರ ಹಿಂದುಸ್ಥಾನದಲ್ಲಿ ಕಾನ್‌ಪೂರ್, ಬಿಕಾನೀರ್, ಕಾಶ್ಮೀರ ಮುಂತಾದ ಸ್ಥಳಗಳಿಂದ ಬರುವ ತುಪಟವು ಉತ್ತಮವಾದದ್ದು. ಶೀತದೇಶದಲ್ಲಿರುವ ಕುರಿಗಳ ತುಪಟದ ಕೂದಲು ಉದ್ದವಾಗಿಯೂ, ರೇಶ್ಮೆಯಂತೆ ಮೃದುವಾಗಿಯೂ ಮಿಂಚಾಗಿಯೂ ಇರುತ್ತದೆ. ಉಷ್ಣದೇಶದ ಕುರಿಗಳ ತುಪಟವು ವ್ಯತ್ಯಸ್ತಗುಣಗಳುಳ್ಳದ್ದಾಗಿದೆ.

ತುಪಟವನ್ನು ಬಿಡಿಸಿ ಎಕ್ಕುವುದು:—ಮೇಲೆ ಸುತ್ತಲೂ ಮುಳ್ಳುಮುಳ್ಳಾಗಿ ಮೊಳೆಗಳು ನಾಟಿರುವ ಪೀಪಾಯಿ ಆಕಾರದ ಚಕ್ರವನ್ನು ತುಪಟ ಬಿಡಿಸುವುದಕ್ಕೆ ಉಪಯೋಗಿಸುತ್ತಾರೆ. ಈ ಚಕ್ರವು ತಿರುಗುವಾಗ ಮುದ್ದೆ ಕಟ್ಟಿಕೊಂಡಿರುವ ತುಪಟವು ಇದರ ಮುಳ್ಳುಗಳಿಗೆ ಸಿಕ್ಕಿ ಒಡೆದು ಬಿಚ್ಚಿಕೊಳ್ಳುತ್ತದೆ.

ಎಕ್ಕುವುದು:—೬ ಅಡಿ ಉದ್ದವೂ ೨ ಅಂಗುಲ ದಪ್ಪವೂ ಇರುವ ಮರದ ತುಂಡಿನ ಒಂದು ತುದಿಗೆ ತ್ರಿಕೋಣಾಕಾರದ ಹಲಗೆಯನ್ನು ಸೇರಿಸಿ, ಈ ಹಲಗೆಯ ಮೇಲಿನ ತುದಿಗೂ ಮೇಲ್ಕಂಡ ಮರದ ತುಂಡಿನ ಇನ್ನೊಂದು ತುದಿಗೂ ಬೇವೆಂಬ ಚಕ್ಕಳದ ದಾರವನ್ನು ಬಿಗಿದುಕಟ್ಟಿ ಬಿಲ್ಲುಮಾಡಿಕೊಂಡಿದ್ದಾರೆ. ಈ ಬಿಲ್ಲಿಗೆ ಹಗ್ಗ ಹಾಕಿ ಇದನ್ನು ಸೂರಿನಿಂದ ನೇತುಹಾಕಿರುವ ಬಿದಿರುಬಿಲ್ಲಿನ ತುದಿಗೆ ಎತ್ತಿ ಕಟ್ಟಿಕೊಳ್ಳುತ್ತಾರೆ. ಹೀಗೆ ಎತ್ತಿ ಕಟ್ಟಿದ ಬಿಲ್ಲಿಗೆ ಬೇವನ್ನು ಎಳೆದು ಕಟ್ಟಿ ಬಿಲ್ಲಿನ ಮಧ್ಯಭಾಗವನ್ನು ಎಡಗೈಯಿಂದ ಹಿಡಿದುಕೊಂಡು ಕೆಳಕ್ಕೆ ಎಳೆದು ಬೇವನ್ನು ತುಪಟದ ಮೇಲಿಟ್ಟು ಬಲಗೈಯಲ್ಲಿರುವ ಲಾಳಮುಂಡಿಗೆಯ ಆಕಾರದ ಕೊಡತಿಯಿಂದ ಹೊಡೆಯುತ್ತಾರೆ. ಇದರಿಂದ ತುಪಟದ ಕೂದಲುಗಳು ಗೋಜು ಬಿಟ್ಟು ಅವುಗಳಲ್ಲಿ ದೂಳು ಮತ್ತು ಕೊಳೆಗಳೆಲ್ಲಾ ಬಿದ್ದು ಹೋಗುತ್ತವೆ.

ಹಾಸು ಬೀಸುವುದು:—ಹೀಗೆ ಎಕ್ಕಿದ ತುಪಟವನ್ನು ರಾಟೆಯಲ್ಲಿ ನೂತು ದಾರ ಮಾಡಿ ಬಣ್ಣ ಹಾಕುವುದಕ್ಕಾಗಿ ೬೦ರಿಂದ ೧೦೦ರ ವರೆಗೆ ಎಳೆಯಿರುವ ೨ ಅಡಿ ಉದ್ದದ ಅಡಿಗಳಾಗಿ ಬೀಸಿಕೊಳ್ಳುತ್ತಾರೆ. ಒಂದು ಮರದ ತುಂಡಿಗೆ ಎರಡು ಅಡಿ ದೂರಕ್ಕೆ ಎರಡು ಗೂಟಗಳನ್ನು ನಾಟಿ ನೂತದಾರದ ತುದಿಯನ್ನು ಮೂರು ಅಂಗುಲ ಉದ್ದವಿರುವ ಕೊಂಬಿನ ಕೊಳವೆಯೊಳಗಿನಿಂದ ತೆಗೆದುಕೊಂಡು ಒಂದು ಗೂಟಕ್ಕೆ ಕಟ್ಟುತ್ತಾರೆ. ಕೊಳವೆಯನ್ನು ಕೈಯಲ್ಲಿ ಹಿಡಿದು, ಒಂದು ಗೂಟವಾದ ಮೇಲೆ ಮತ್ತೊಂದು ಗೂಟವನ್ನು ಬಳಸಿ ದಾರವನ್ನೂ ಕಂಡು ಹಾಸು ಬೀಸುತ್ತಾರೆ.

ಬಣ್ಣಹಾಕುವುದು:—ಹಿಂದೆ ಹೇಳಿದ ತಾಮ್ರದ ಪಾತ್ರೆಗಳಲ್ಲಿ ಹೆಚ್ಚು ತುಪಟಕ್ಕೆ ಬಣ್ಣಹಾಕುವ ವಿಧಾನವನ್ನು ಈ ಕೆಳಗೆ ವಿವರಿಸಿದೆ.

ಒಂದು ಬಿದಿರು ಕೋಲನ್ನು ಹಾಕಿ ಅದರಿಂದ ತುಪಟದ ದಾರದ ಬಳೆಗಳನ್ನು ಎತ್ತಿಕೊಂಡು ಬಣ್ಣದ ನೀರಿನಲ್ಲಿ ಅರ್ಧಭಾಗ ನೆನಸಿ ಮುಳುಗಿಸಬೇಕು. ಈ ಭಾಗವು ಎರಡು ಮೂರು ನಿಮಿಷಗಳು ನೆನೆದ ಮೇಲೆ ಲಡಿಗಳನ್ನು ತಿರುಗಿಸಿ ಮಿಕ್ಕ ಅರ್ಧಭಾಗವನ್ನು ನೆನಸಬೇಕು. ಹೀಗೆಯೇ ಲಡಿಗಳನ್ನು ಒಂದು ಭಾಗವಾದ ಮೇಲೆ ಮತ್ತೊಂದು ಭಾಗಕ್ಕೆ ತಿರುವಿ ಹಾಕುತ್ತಾ, ಒಂದು ಘಂಟೆಯಿಂದ ಮೂರು ಘಂಟೆ ಕಾಲಗಳ ವರೆಗೂ ಬಣ್ಣವನ್ನು ಕುದಿಸುತ್ತಿದ್ದರೆ ತುಪಟವು ಬಣ್ಣವನ್ನೆಲ್ಲಾ ಹೀರಿ ಬಿಡುವುದು. ಬಣ್ಣವು ಮುಗಿದು ಹೋದುದ್ದನ್ನು ಪರೀಕ್ಷಿಸುವುದಕ್ಕೆ ಸ್ವಲ್ಪ ಬಿಳಿಯ ತುಪಟವನ್ನು ಬಣ್ಣದ ನೀರಲ್ಲಿ ಅದ್ದಿ ಅದಕ್ಕೆ ಬಣ್ಣ ಹತ್ತದಿದ್ದರೆ ಬಣ್ಣ ಮುಗಿದು ಹೋಗಿದೆಯೆಂದು ತಿಳಿಯಬೇಕು.

ಗುಡಾಣಗಳಲ್ಲಿ ಬಣ್ಣ ಕಾಯಿಸಬೇಕಾದರೆ ತುಪಟದ ಲಡಿಗಳನ್ನು ಬಣ್ಣದ ನೀರಲ್ಲಿ ನೆನಸಿ ಮುಳುಗಿಸಿ ಬಿದಿರು ಕೋಲಿನಿಂದ ಆಗಾಗ್ಗೆ ಲಡಿಗಳನ್ನು ಎತ್ತಿ ತಿರುಗಿಸಿ ಹಾಕುತ್ತಿರಬೇಕು. ಬಣ್ಣವನ್ನೆಲ್ಲಾ ಹೀರಿಕೊಂಡ ಮೇಲೆ ಲಡಿಗಳನ್ನು ಹೊರಗೆ ತೆಗೆದು ತಣ್ಣೀರಲ್ಲಿ ಚೆನ್ನಾಗಿ ತೊಳೆದು ನೆರಳಿನಲ್ಲಿ ಒಣಗಿಸಬೇಕು.

ಅರ್ಥಸಾಧಕ ಪತ್ರಿಕೆ.

ಯೂರೋಪಿದ ಮಹಾ ಯುದ್ಧ.

ಕಳೆದ ವಾರದಲ್ಲಿ ರಣರಂಗದಿಂದ ಬಂದ ವಿಶೇಷ ವರ್ತಮಾನಗಳಲ್ಲಿ ಬಾಲ್ಕಾನ್ ಸಂಸ್ಥಾನಗಳಲ್ಲಿ ಒಂದಾದ ರುಮೇನಿಯವು ತಟಸ್ಥಭಾವವನ್ನು ತೊರೆದು ಆಸ್ಟ್ರಿಯದೊಡನೆ ಯುದ್ಧಕ್ಕೆ ನಿಂತದ್ದೇ ಆಗಿದೆ. ರುಮೇನಿಯವು ಯುದ್ಧ ಪ್ರಾರಂಭವಾದಂದಿನಿಂದ ಮಿತ್ರಪಕ್ಷದವರ ಸ್ನೇಹದಲ್ಲಿಯೇ ಇತ್ತು. ಆದರೆ ಸರ್ವಿಯಾ, ಮೊಂಟಿನಿಗ್ರೊ ದೇಶಗಳಿಗೆ ಆದ ಸ್ಥಿತಿಯೇ ತನಗೂ ಬರುತ್ತದೋ ಏನೋ ಎಂಬ ಭಯದಿಂದ ಈವರೆಗೆ ತಟಸ್ಥವಾಗಿತ್ತು. ರುಮೇನಿಯವು ಈ ಮೊದಲೇ ಮಿತ್ರ ರಾಷ್ಟ್ರಗಳ ಪಕ್ಷ ಸೇರಿದ್ದರೆ ಅದಕ್ಕೆ ಅಪಾಯ ಉಂಟಾಗುವ ಸಂಭವವೂ ಇತ್ತು. ಯಾಕಂದರೆ ಶತ್ರುಗಳು ರುಮೇನಿಯದ ಸರಹದ್ದಿನಲ್ಲಿಯೇ ಅಂದರೆ ಪಟ್ಟಣದ ಹೆಬ್ಬಾಗಲಲ್ಲಿ ಎಂಬಂತೆ ಇದ್ದರು. ಮಿತ್ರರಾಷ್ಟ್ರಗಳವರೋ ರುಮೇನಿಯಕ್ಕೆ ಬಹು ದೂರದಲ್ಲಿ ಇದ್ದುದರಿಂದ ಸಹಾಯಕ್ಕೆ ಬರುವ ಸಂಭವಗಳು ಕಡಿಮೆಯಾಗಿದ್ದವು. ರುಮೇನಿಯಕ್ಕೆ ಸಮೀಪವಿದ್ದ ರುಶ್ಯವಾದರೋ ೧೯೧೫ನೇ ಇಸವಿಯಲ್ಲಿ ಶತ್ರುಗಳಿಂದ ಪೆಟ್ಟು ತಿಂದು ಕಷ್ಟಾವಸ್ಥೆಯಲ್ಲಿತ್ತು. ಇದನ್ನೆಲ್ಲಾ ನೋಡಿ ರುಮೇನಿಯವು ಸಮಯ ಕಾಯುತ್ತಾ ಸುಮ್ಮನೆ ಕುಳಿತಿತ್ತು. ಈಗಲಾದರೋ ರುಶ್ಯವು ಪುನಃ ಬಲಗೊಂಡು ಶತ್ರುಗಳನ್ನು ಹತಬಡೆಯುತ್ತಿದೆಯಾದುದರಿಂದ ಮಿತ್ರರಾಷ್ಟ್ರಗಳವರಿಗೆ ಕೂಡಿಕೊಳ್ಳುವರೆ ಇದೇ ಸಮಯವೆಂದರಿತು ರುಮೇನಿಯವು ಜರ್ಮನ್ ಆಸ್ಟ್ರಿಯ ರಾಜ್ಯಗಳಿಗೆ ಮಲೆತು ನಿಂತಿದೆ. ಹೇಗೂ ಇರಲಿ; ಮಿತ್ರರಾಷ್ಟ್ರಗಳವರಿಗೆ ಜಯದಮೇಲೆ ಜಯವಾಗುತ್ತಲಿದೆಂಬುದು ರುಮೇನಿಯವು ಮಿತ್ರರಾಷ್ಟ್ರಗಳೊಂದಿಗೆ ಸೇರಿಕೊಂಡದ್ದರಿಂದ ಖಾತ್ರಿಯಾದ ಹಾಗಾಯಿತು.

ಪಶ್ಚಿಮ ರಣರಂಗ.

ಡೆಲ್‌ವಿಲ್ಲೆ ಅರಣ್ಯ ಮತ್ತು ಘೂಜಯೆಗ್ನಿನಲ್ಲಿರುವ ಮಿತ್ರರ ನೆಲೆಗಳಮೇಲೆ ಶತ್ರುಗಳು ಗುಂಡು ಹಾರಿಸುತ್ತಲಿದ್ದಾರೆ. ಫ್ಲುರೆಯಲ್ಲಿ ಅಭಿಯೋಗಮಾಡಿದ ಶತ್ರುಗಳನ್ನು ಫ್ರೆಂಚರು ಸುಲಭವಾಗಿ ಅಟ್ಟಿಬಿಟ್ಟಿರುತ್ತಾರೆ. ಮ್ಯೂಸಿನ ಬಲಕಡೆಯಲ್ಲಿ ಜರ್ಮನರು ಫ್ಲುರೆಯ ಪಶ್ಚಿಮ ದಿಕ್ಕಿನಿಂದ ಹಲ್ಲೆಮಾಡಿ ವಾಕ್ಸ್ ಮತ್ತು ಚಪಿಟ್ರೆಯಲ್ಲಿರುವ ಫ್ರೆಂಚರ ಕಂದಕಗಳ ಮೇಲೆ ಫಿರಂಗಿಗಳನ್ನು ಹಾರಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಫ್ಲೋಜಿಯರ್ಸ್, ಟಿವಪಾಲ್ ಅರಣ್ಯಗಳ ಮಧ್ಯೆಯೂ ತೋಪು-ಕಾಳಗವು ಅತಿ ತೀಕ್ಷ್ಣತೆಯಿಂದ ನಡೆಯುತ್ತಿದೆ.

ಬ್ರಿಟಿಷ ಸೇನಿಕರನ್ನು ಸೆರೆಹಿಡಿಯದೆ ಸಿಕ್ಕಿಸಿಕ್ಕಿದಲ್ಲಿ ಸಂಗೀನುಗಳಿಂದ ತಿವಿದು ಕೊಂದುಹಾಕಬೇಕೆಂಬದಾಗಿ ಜರ್ಮನರು ತಮ್ಮ ಸೇನಿಕರಿಗೆ ಆಜ್ಞಾಪಿಸಿರುವರೆಂತ ಬ್ರಿಟಿಷರ ಸೆರೆಬಿದ್ದ ಜರ್ಮನ ಸೇನಿಕರ ಕಡೆಗೆ ಸಿಕ್ಕಿದ ಪತ್ರಗಳಿಂದ ತಿಳಿದುಬರುತ್ತದೆ.

ಪಶ್ಚಿಮ ರಣರಂಗದಲ್ಲಿ ಹವೆಯು ನೆಟ್ಟಗಿಲ್ಲದಿರುವದರಿಂದ ಕಳೆದ ವಾರ ವಿಶೇಷ ಕದನಗಳು ನಡೆದಿರುವದಿಲ್ಲ. ಅಲ್ಲಲ್ಲಿ ಸಣ್ಣ ಪುಟ್ಟ ಕದನಗಳು ನಡೆದು ಮಿತ್ರರಾಷ್ಟ್ರಗಳವರಿಗೆನೇ ಜಯವಾಗಿರುವದು.

ಕಡೆಗೆ ಬಂದ ವಾರ್ತೆಯಿಂದ ಸೊಮ್ಮ ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಎಂತ ತಿಳಿದು ಬರುತ್ತದೆ. ಶತ್ರುಗಳ ೩೦೦೦ ಸೇನಿಕರನ್ನೂ ಬಹಳ ಕೊಳ್ಳಿಗಳನ್ನೂ ೫೦ ಯಂತ್ರಚಾಲಿತ ಫಿರಂಗಿಗಳನ್ನೂ ಬ್ರಿಟಿಷರು ಹಿಡಿದಿರುತ್ತಾರೆ. ಫ್ಲುರೆಯಲ್ಲಿ ೧೧೦೦ ಶತ್ರುಸೇನಿಕರು ಫ್ರೆಂಚರ ಸೆರೆಬಿದ್ದಿರುವರು.

ಗ್ರಿಂಚಿಯ ಒಂದಾಂಶವು ಮತ್ತು ಗುಲ್ಲೆಮೊಂಟನ ಎಲ್ಲಾ [illegible] ಬ್ರಿಟಿಷರ ಸ್ವಾಧೀನವಾಗಿದೆ. ಬ್ರಿಟಿಷರು ಕೆಲವು [illegible] ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ.

ಪೂರ್ವ ರಣರಂಗ.

ಸ್ಟೊಕೊಡಿನ ಪೂರ್ವದಲ್ಲಿ ಮೇಲ್ಮಾಯಿದ ಶತ್ರುಗಳನ್ನು ರುಶ್ಯನರು ಹಿಂದಕ್ಕೆ ಅಟ್ಟಿರುತ್ತಾರೆ.

ಹಂಗೇರಿಯದ ಮೇರೆಯಲ್ಲಿರುವ ರಫಾಯಿಲೋ ಎಂಬ ಗ್ರಾಮವನ್ನು ರುಶ್ಯನರು ಸ್ವಾಧೀನಮಾಡಿಕೊಂಡಿರುತ್ತಾರೆ. ಕೊವೆಲಿಗೆ ೩೪ ಮೈಲು ಈಶಾನ್ಯದಲ್ಲಿರುವ ಪ್ರದೇಶದಲ್ಲಿ ಮೇಲ್ಮಾಯಿದ ಶತ್ರುಗಳನ್ನು ರುಶ್ಯನರು ಹಿಂದಕ್ಕಟ್ಟಿರುತ್ತಾರೆ. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು.

ರುಶ್ಯನರು ಇಲ್ಲಿ ಶತ್ರುಗಳ ೩೪ ಆಫೀಸರರನ್ನೂ ೧೫,೫೧೧ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ಈ ಸ್ಥಳ ೨೪೦೦ ಜರ್ಮನ ಸೇನಿಕರು, ೬ ಫಿರಂಗಿಗಳೂ ೫೫ ಯಂತ್ರಚಾಲಿತ ಫಿರಂಗಿಗಳೂ ರುಶ್ಯನರಿಗೆ ದೊರಕಿರುತ್ತವೆ.

ವ್ಲಾಡಿಮಿರ್ ವೊಲಿನಿಸಿಕ್ ಪ್ರಾಂತ್ಯದಲ್ಲಿ ಶತ್ರುಗಳು ರೋಷಾವೇಶದಿಂದ ಹಲ್ಲೆಮಾಡುತ್ತಿದ್ದಾರೆ. ಹೆಲಿಕ್ಸ್ ಪ್ರಾಂತ್ಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಕಾರ್‌ಪಥೇನಿಯದಲ್ಲಿ ರುಶ್ಯನರು ಎಲ್ಲಾ ಗುಡ್ಡಗಳನ್ನು ಸ್ವಾಧೀನಮಾಡಿಕೊಂಡು ಡೊರ್ನಾವಾಟುಕ ಪ್ರಾಂತ್ಯದಲ್ಲಿ ಮುಂದರಿದಿರುತ್ತಾರೆ.

ರುಶ್ಯ ರಣರಂಗದ ಲುಟ್ಸ್ ಮತ್ತು ಬ್ರೋಡಿಯ ದಕ್ಷಿಣದಲ್ಲಿ ಶತ್ರುಗಳಿಗೂ ರುಶ್ಯನರಿಗೂ ೩೦ ಮೈಲು ರಣರಂಗದಲ್ಲಿ ಕಠಿಣಕಾಳಗ ನಡೆಯುತ್ತಿದೆ.

ಜೋಲ್ಪ ಲಿಪ್ಪಾದಲ್ಲಿ ರುಶ್ಯನರು ಶತ್ರುಗಳ ನೆಲೆಗಳನ್ನು ಗೆದ್ದುಕೊಂಡು ೮೦ ಆಫೀಸರರನ್ನೂ ೨೬೪೧ ಸೇನಿಕರನ್ನೂ ಸೆರೆ ಹಿಡಿದಿರುತ್ತಾರೆ.

ಬಾಲ್ಕಾನ್.

ಬಲ್ಗೇರಿಯನರು ತಾ. ೨೫ರಲ್ಲಿ ಗ್ರೀಕರ ಸ್ವಾಧೀನವಿದ್ದ ಕವಲ್ಲಾ ಕೋಟೆಯನ್ನು ಪ್ರವೇಶಿಸಿರುವರು. ಗ್ರೀಕ ಸರಕಾರದ ಅಪ್ಪಣೆ ಪ್ರಕಾರ ಈ ಕೋಟೆಯಲ್ಲಿದ್ದ ಗ್ರೀಕ ಸೇನಿಕರು ಅದನ್ನು ಬಲ್ಗೇರಿಯನರಿಗೆ ಬಿಟ್ಟುಕೊಟ್ಟಿರುತ್ತಾರೆ. ಬ್ರಿಟಿಷ ಯುದ್ಧನಾವೆಗಳು ಕೂಡಲೇ ಆ ಕೋಟೆಗೆ ಗುಂಡು ಹಾರಿಸಲು ಪ್ರಾರಂಭಿಸಿರುವವು. ಗ್ರೀಕರ ೭ ಆಫೀಸರರು ಕವಲ್ಲಾದಿಂದ ತಪ್ಪಿಸಿಕೊಂಡು ಟಾಸೊಸ್‌ಗೆ ತಲಪಿರುವರು. ಕವಲ್ಲಾ ಪ್ರಾಂತ್ಯದಲ್ಲಿ ೭೦ ಸಾವಿರ ಬಲ್ಗೇರಿಯ ಸೇನಿಕರು ಇದ್ದಾರೆಂತಲೂ ಅಲ್ಲಿರುವ ಗ್ರೀಕ ಪ್ರಜಾಜನರನ್ನು ಅಮಾನುಷ ರೀತಿಯಿಂದ ನಡಿಸುತ್ತಿದ್ದಾರೆಂತಲೂ ವಾರ್ತೆ ಇದೆ.

ಡೋಯಿರಾನಿನಲ್ಲಿ ಮಿತ್ರರಾಷ್ಟ್ರಗಳವರ ಫಿರಂಗಿಗಳು ಶತ್ರುಗಳು ಮುಂದರಿಯದಹಾಗೆ ಮಾಡಿರುತ್ತವೆ. ಬಲ್ಗೇರಿಯನರು ಮೆಕೆಸ್ಟ್ರುಮ ರಣರಂಗದ ಮೇಲೆ ಗುಂಡು ಹಾರಿಸುತ್ತಲಿದ್ದಾರೆ. ಸರ್ವಿಯರು ಬಗ್ನಿಟ್ಸದಿಂದ ಒಸ್ಟ್ರೊವದವರೆಗೆ ಮುಂದರಿದು [illegible] ಹಲ್ಲೆಮಾಡಿದ ಬಲ್ಗೇರಿಯನರನ್ನು ಹಿಂದಕ್ಕೆ ಅಟ್ಟಿರುವರು.

ರುಮೇನಿಯಾ.

ಅಗೋಸ್ತು ತಾ. ೨೭ನೇ ರಾತ್ರಿ ೯ ಘಂಟೆಗೆ ರುಮೇನಿಯವು ಆಸ್ಟ್ರಿಯದ ಮೇಲೆ ಯುದ್ಧ ಸಾರಿರುತ್ತದೆ.

ಶತ್ರುಗಳ ಒಂದು ಜೆಪಲಿನ ನಾವೆಯು ರುಮೇನಿಯದ ಮುಖ್ಯ ಪಟ್ಟಣವಾದ ಬುಖಾರೆಸ್ಟಿನ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ. ಆದರೆ ರುಮೇನಿಯನರ ವಾಯುನಾವೆಗಳು ಅದನ್ನು ಹಿಂದಕ್ಕೆ ಓಡಿಸಿದವು. ಶತ್ರುಗಳ ವಾಯುನಾವೆಗಳು ಬಾಲ್ಚಿಕೋ ಮೈತ್ರ ಮತ್ತು ನಿಯಾತ್ಸೊ ಎಂಬ ಪಟ್ಟಣಗಳ ಮೇಲೆಯೂ ಬೊಂಬುಗಳನ್ನು ಹಾಕಿರುತ್ತವೆ. ಆದರೆ ಅಪಾಯ ಸಂಭವಿಸಲಿಲ್ಲ.

ಟರ್ಕಿಯು ರುಮೇನಿಯದ ಮೇಲೆ ಯುದ್ಧ ಸಾರಿರುತ್ತದೆ.

ರುಮೇನಿಯ ಸೇನಿಕರು ಆಸ್ಟ್ರೋ-ಹಂಗೇರಿಯ ಸರಹದ್ದನ್ನು ದಾಟಿ, ಕದನಗಳನ್ನು ಮಾಡಿ ಕೆಲವು ನೆಲೆಗಳನ್ನು ಹಿಡಿದಿರುತ್ತಾರೆ. ೭೪೧ ಶತ್ರುಸೇನಿಕರು ಸೆರೆಬಿದ್ದಿರುವರು.

ಆಸ್ಟ್ರಿಯನರ ವಾರ್ತೆಯಿಂದ ರುಮೇನಿಯನರು ಹಂಗೇರಿಯದೊಳಗೆ ಇದ್ದಾರೆಂತ ತಿಳಿಯಬರುತ್ತದೆ. ರುಮೇನಿಯನರು ಬರ್ಝಾವದ ದಿನ್ನೆಗಳ ಮೇಲೆ ಹಲ್ಲೆಮಾಡಿರುವರು. ಆಸ್ಟ್ರಿಯನರ ಮುಂದರಿದ ಸೇನೆಯು ಹಿಂದೆ ಸರಿದಿರುತ್ತದೆ. ರುಮೇನಿಯನರು ಪೆಟ್ರೊಸ್ನಿ, ಬ್ರಾಸ ಮತ್ತು ಕೆಜಡಿವಸರೊಲಿಯನ್ನು ಸ್ವಾಧೀನಮಾಡಿಕೊಂಡಿದ್ದೇವೆಂತ ಹೇಳುತ್ತಿರುವರು ಎಂಬದಾಗಿ ಆಸ್ಟ್ರಿಯನರು ಪ್ರಕಟಿಸಿರುತ್ತಾರೆ.

ರುಶ್ಯನರ ಸೇನೆಯು ರುಮೇನಿಯನರಿಗೆ ಸಹಾಯವಾಗಿ ರುಮೇನಿಯಕ್ಕೆ ಹೋಗಿರುತ್ತದೆ.

ಬಲ್ಗೇರಿಯವು ರುಮೇನಿಯದ ಮೇಲೆ ಯುದ್ಧ ಸಾರಿರುತ್ತದೆ.

ರುಶ್ಯನರ ಯುದ್ಧ ನಾವೆಗಳು ಕೊನ್ಸ್ಟನ್ಸಕ್ಕೆ ಬಂದಿರುವವು.

ರುಮೇನಿಯರು ಪ್ರತಿಕಡೆಯಲ್ಲಿಯೂ ಮುಂದರಿಯುತ್ತಲಿದ್ದಾರೆ. ರುಮೇನಿಯರು ಟ್ರಾನ್‌ಸಿಲ್ವಾನಿಯ ಮತ್ತು ಬನಾಟ್ ಸಂಸ್ಥಾನಗಳಿಗೆ ಹೋಗುವ ಎಲ್ಲಾ ಕಣಿವೆಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ.

ಸರ್ವಿಯನರ ಸೇನಿಕರು ರುಮೇನಿಯರ ಸಹಾಯವಾಗಿ ರುಮೇನಿಯಕ್ಕೆ ಹೋಗಿರುವರು.

ಗ್ರೀಸ್.

ಗ್ರೀಸ್‌ದೇಶದ ಪ್ರಮುಖ ಸರದಾರರೂ ಆಫೀಸರರೂ ಕೂಡಿ ಒಂದು ಕಮಿಟಿಯನ್ನು ಮಾಡಿಕೊಂಡು, ಮಿತ್ರಮಂಡಲಿಯವರಿಗೆ ಸಹಾಯವಾಗಿ ಕೂಡಬೇಕೆಂದೂ ಗ್ರೀಕ ಪ್ರದೇಶದಿಂದ ಬಲ್ಗೇರಿಯನರನ್ನು ಓಡಿಸಬೇಕೆಂದೂ ಗ್ರೀಕ ಪ್ರಜಾ ಜನರನ್ನೂ ಸೇನೆಯನ್ನೂ ವಿಜ್ಞಾಪಿಸಿಕೊಂಡಿರುತ್ತಾರೆ.

ಗ್ರೀಕರ ಅರಸರಾದ ಕನಸ್ಟಂಟೈನರವರು ಸಿಂಹಾಸನ ಪರಿತ್ಯಾಗ ಮಾಡಿರುವರೆಂದೂ ಯುವರಾಜರು ರೀಜೆಂಟರಾಗಿ ನೇಮಿಸಲ್ಪಟ್ಟಿರುವರೆಂದೂ ಮಿ| ವೆನೆಜೊಲಿಸರಿಂದ ಆದರಿಸಲ್ಪಟ್ಟ ಮಿ| ಎಮ್. ಜೈಮಿಸ್‌ರವರು ಪ್ರಧಾನ ಮಂತ್ರಿಯಾಗಿ ಉಳಿದಿರವರೆಂದೂ ಅಥೆನ್ಸಿನಿಂದ ಸಲೋನಿಕಕ್ಕೆ ವಾರ್ತೆ ಬಂದದೆ. ಆದರೆ ಈ ವಾರ್ತೆಯು ಇನ್ನೂ ದೃಢೀಕರಿಸಲ್ಪಡಲಿಲ್ಲ.

ಸಲೋನಿಕದಲ್ಲಿ ಗ್ರೀಕ ಸೇನಾಪಾಳೆಯವನ್ನು ಗ್ರೀಕ ವಿಪ್ಲವಗಾರರು ಸುತ್ತು ಹಾಕಿ ರಕ್ತಪಾತವಾದನಂತರ ಮಿತ್ರಪಕ್ಷದ ಮಿ| ಸರೈಲರವರು ಮಧ್ಯ ಪ್ರವೇಶಿಸಿದ್ದರಿಂದ ಗ್ರೀಕ ಸೇನಾಪಾಳೆಯವು ವಿಪ್ಲವಗಾರರಿಗೆ ಶರಣಾಗತವಾಗಿರುವದು. ಫ್ಲೊಡೇನ, ಹೊರ್ಟ್, ಕಾರ್‌ಬುರಾನ್ ಎಂಬಲ್ಲಿದ್ದ ಗ್ರೀಕ ಸೇನಿಕರು ವಿಪ್ಲವಗಾರರಿಗೆ ಸೇರಿರುವರು. ಹೀಗೆ ಗ್ರೀಕ ಮಕೆದೋನಿಯದಲ್ಲಿ ವಿಪ್ಲವಗಾರರಿಗೆ ಎದುರು ನಿಲ್ಲುವವರು ಇಲ್ಲದಂತಾಗಿದೆ. ಗ್ರೀಕ ಸರಕಾರವು ರಾಷ್ಟ್ರೀಯ ಮರ್ಯಾದೆಯನ್ನು ಕಳಕೊಂಡು ಮಾತೃಭೂಮಿಗೆ ದ್ರೋಹಮಾಡಿದೆಂತ ಈ ವಿಪ್ಲವ ಪಕ್ಷದವರು ಸಾರಿರುತ್ತಾರೆ.

ಬ್ರಿಟಿಷರ ಮತ್ತು ಫ್ರೆಂಚರ ೪೬ ಯುದ್ಧ ಹಡಗಗಳು ಗ್ರೀಕ ಬಂದರವಾದ ಪಿರಾಯುಸಿಗೆ ಹೋಗಿ ಮೂರು ಜರ್ಮನ ಹಡಗಗಳನ್ನೂ ಗ್ರೀಕರ ಆಯುಧಶಾಲೆಯಲ್ಲಿದ್ದ ವಯರ್‌ಲೆಸ್ ತಂತಿ ಆಫೀಸನ್ನೂ ಹಿಡಿದಿರುತ್ತವೆ. ಗ್ರೀಕ ಅರಸರಾದ ಕಾನ್‌ಸ್ಟಂಟಿನರವರು ಜ್ವರ ಪೀಡಿತರಾಗಿ ಮಲಗಿರುವರು.

ಇಟಲಿ.

ಟ್ರೆಂಟಿನೋದಲ್ಲಿ ಇಟಲಿಯನರಿಗೆ ಜಯವಾಗಿರುವದು. ಇಟಲಿಯನರು ಶತ್ರುಸೇನೆಯಲ್ಲಿ ವಿಶೇಷ ನಷ್ಟವನ್ನುಂಟುಮಾಡಿ ಸಿಮ್ಮೊನೇ ಪರ್ವತದ ನೆಲೆಗಳಿಂದ ಶತ್ರುಗಳನ್ನು ಹಿಂದಕ್ಕೆ ಓಡಿಸಿರುತ್ತಾರೆ. ಡೊಲಾಮೈಟ್ಸಿನಲ್ಲಿ ಇಟಲಿಯನರು ೮೦೦೦ ಅಡಿಗಿಂತಲೂ ಹೆಚ್ಚಿಗೆ ಎತ್ತರವಿರುವ ಕಾಂಯೊಲ್ ಪರ್ವತವನ್ನು ಗೆದ್ದುಕೊಂಡಿರುತ್ತಾರೆ.

ರುಶ್ಯಾ — ಟರ್ಕಿ.

ಕೌಕಾಸಸಿನ ವಾನ್ ಸರೋವರದ ಪಶ್ಚಿಮದಲ್ಲಿ ರುಶ್ಯನರು ಮುಂದರಿದು ಶತ್ರುಗಳನ್ನು ಹಿಂದಕ್ಕೆ ಅಟ್ಟಿರುತ್ತಾರೆ. ಶತ್ರುಗಳಿಗೆ ವಿಶೇಷ ನಷ್ಟವಾಗಿರುತ್ತದೆ. ರುಶ್ಯನರು ಈಗ ಬಿಟ್ಲಿಸ್‌ಗೆ ೬ ಮೈಲು ದೂರದಲ್ಲಿರುವರು. ನಿಮೂಕ್‌ಜ್ವಾಲ್ ಸರೋವರದ ದಕ್ಷಿಣದಲ್ಲಿ ಇದ್ದ ತುರ್ಕರು ಬಿಟ್ಲಿಸ್ ಕಣಿವೆಯ ಮಾರ್ಗವಾಗಿ ಹಿಂದೆ ಸರಿದಿರುತ್ತಾರೆ. ಮೊಸುಲ್ ಪ್ರಾಂತ್ಯದಲ್ಲಿದ್ದ ಶತ್ರುಗಳು ವಿಶೇಷ ಯುದ್ಧ ಸಾಮಾಗ್ರಿಗಳನ್ನು ಬಿಟ್ಟು ಚದುರಿಹೋಗಿರುವರು. ಗುಮಿಸಾನಿನಲ್ಲಿ ಅಭಿಯೋಗಮಾಡಿದ ತುರ್ಕ ಸೇನಿಕರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ರುಶ್ಯನರು ಡಿಯಾಬಿಕರ್ ಕಡೆಗೆ ಮುಂದರಿಯುತ್ತಲಿದ್ದಾರೆ.

ಈಜಿಪ್ತ.

ಬಿರ್-ಎಲ್-ಬಾಯುದಿನ ಮೇಲೆ ಹಲ್ಲೆಮಾಡಲು ಯತ್ನಿಸಿದ ತುರ್ಕರ ೧೦೦ ಒಂಟೇ ಸವಾರರನ್ನು ಬ್ರಿಟಿಷರ ಕಾವಲು ಸೇನಿಕರು ೬ ಮೈಲುಗಳ ದೂರಕ್ಕೆ ಹಿಂದೆ ಅಟ್ಟಿರುತ್ತಾರೆ.

ಪೂರ್ವ ಆಫ್ರಿಕ.

ಪೂರ್ವ ಆಫ್ರಿಕದಲ್ಲಿ ಬ್ರಿಟಿಷ ಸೇನಿಕರು ಡಾರ್-ಎಸ್ ಸಾಲೆಮಿಗೆ ಸಮೀಪಿಸುತ್ತಿದ್ದಾರೆ. ಬ್ರಿಟಿಷ ಯುದ್ಧ ನಾವೆಗಳು ಕರಾವಳಿಯನ್ನು ಕಾಯುವ ಬಗ್ಗೆ ಭೂಸೇನೆಗೆ ಸಹಾಯಕವಾಗಿರುತ್ತವೆ.

ಶತ್ರುಗಳ ಸೇನಿಕರು ಉಲುಗುರು ಪರ್ವತದ ಪೂರ್ವ ಪಶ್ಚಿಮ ಪ್ರಾಂತ್ಯದಿಂದ ಓಡಿಹೋಗುತ್ತಿದ್ದಾರೆ. ಬ್ರಿಟಿಷರು ಮೊರೊಗೊರೊ ಪರ್ವತವನ್ನು ಹಿಡಿದಿರುತ್ತಾರೆ. ಶತ್ರುಗಳು ಮಾಹೆನ್ಗೆ ಎಂಬಲ್ಲಿಗೆ ಸರಿದಿರುವರು. ಬ್ರಿಟಿಷ ಮತ್ತು ಬೆಲ್ಜಿಯನ ಸೇನಿಕರು ಟಾಬೋರಕ್ಕೆ ಸಮೀಪಿಸುತ್ತಲಿದ್ದಾರೆ. ಈ ವರೆಗೆ ಬ್ರಿಟಿಷರು ಗೆದ್ದುಕೊಂಡ ಸ್ಥಳಗಳಲ್ಲಿ ಮೊರೊಗೊರೊ ಪಟ್ಟಣವು ಪ್ರಾಮುಖ್ಯವಾದದ್ದಾಗಿದೆ. ಈ ಪಟ್ಟಣವನ್ನು ಈಚೆಗೆ ಜರ್ಮನರು ತಾತ್ಕಾಲಿಕ ಪ್ರಧಾನ ಪಟ್ಟಣವಾಗಿ ಮಾಡಿಕೊಂಡಿದ್ದರು. ಶತ್ರುಗಳು

ಅಲ್ಲಿಯ ಆಸ್ಪತ್ರಿಗಳಲ್ಲಿದ್ದ ಗಾಯ ಒಡೆದ ಮತ್ತು ಅಸ್ವಸ್ಥರಾದ ಅನೇಕ ಸೇನಿಕರನ್ನು ಬಿಟ್ಟು ಓಡಿಹೋಗಿರುವರು. ಬ್ರಿಟಿಷರು ಅಕಸ್ಮಾತ್ತಾಗಿ ಈ ಪಟ್ಟಣವನ್ನು ಪ್ರವೇಶಿಸಿದ್ದರಿಂದ ಶತ್ರುಗಳಿಗೆ ರೈಲ್ವೇ ಪ್ಲ್ಯಾನುಗಳನ್ನು ಹಾಳುಮಾಡಲು ಸಾಧ್ಯವಾಗಲಿಲ್ಲ.

ಡಾರ್-ಎಸ್-ಸಾಲಿವ್‌ನಲ್ಲಿದ್ದ ಶತ್ರುಗಳು ಬ್ರಿಟಿಷರಿಗೆ ಶರಣಾಗತರಾಗಿರುವರು. ಬ್ರಿಟಿಷರು ಆ ಪಟ್ಟಣವನ್ನು ಸ್ವಾಧೀನಮಾಡಿಕೊಳ್ಳುತ್ತಿದ್ದಾರೆ.

ಜಲಾಂತರ್ಗಾಮಿ ನಾವೆಗಳು.

ಗ್ರೀಕರ "ಲೀನ್‌ಡ್ರ್ಯೀಸ್" ಹಡಗವು ಮುಣುಗಿಸಲ್ಪಟ್ಟಿರುತ್ತದೆ. ನೋರ್ವೇಯವರ "ಇಸ್ತಾಲಿನ್" "ರೆಂಟೇರಿಯೋ" ಅಮೇರಿಕದವರ "ಎಡ್ಮಿರಲ್‌ಕ್ಲಾರ್ಕ್" ಎಂಬ ಹಡಗಗಳು ಮುಣುಗಿಸಲ್ಪಟ್ಟಿವೆ.

ವಾಯುನಾವೆಗಳ ದಾಳಿ.

ಶತ್ರುಗಳ ವಾಯುನಾವೆಗಳು ಇಂಗ್ಲಾಂಡಿನ ಪೂರ್ವ ಕರಾವಳಿಯ ಮೇಲೆ ದಾಳಿ ಮಾಡಿರುತ್ತವೆ. ಪೂರ್ವ ಪ್ರದೇಶ ಮತ್ತು ಲಂಡನಿನ ಮೇಲೆ ಬೊಂಬುಗಳನ್ನು ಹಾಕಬೇಕೆಂಬದೇ ಈ ದಾಳಿಯ ಉದ್ದೇಶವಾಗಿದ್ದಂತೆ ತೋರಿಬರುತ್ತದೆ. ಲಂಡನಿನ ಮೇಲೆ ಬೊಂಬು ಹಾಕಲಿಕ್ಕೆ ಬಂದಿದ್ದ ವಾಯುನಾವೆಗಳನ್ನು ಬ್ರಿಟಿಷ ವಾಯುನಾವಿಕರು ಹಿಂದಕ್ಕೆ ಓಡಿಸಿ, ಒಂದು ವಾಯುನಾವೆಯನ್ನು ಕೆಳದೊಬ್ಬಿರುತ್ತಾರೆ. ಅನೇಕ ಬೊಂಬುಗಳು ಆಯಾ ಸ್ಥಳಗಳ ಮೇಲೆ ಎಸೆಯಲ್ಪಟ್ಟಿರುವವು. ಬ್ರಿಟಿಷರಿಂದ ಕೆಡವಲ್ಪಟ್ಟ ಶತ್ರುಗಳ ಉರಿಯುತ್ತಿದ್ದ ಜೆಪಲಿನ್ ನಾವೆಯು ಬಹಿರಂಗ ಪ್ರದೇಶದಲ್ಲಿ ಕೆಳಗೆ ಬಿತ್ತು. ಜನರು ಗುಂಪು ಗುಂಪಾಗಿ ಹತ್ತಿರ ಹೋಗಿ ನೋಡಿ ಧನ್ಯವಾದವನ್ನಿತ್ತರು. ಶತ್ರುಗಳ ೧೩ ವಾಯುನಾವೆಗಳು ಇಂಗ್ಲಾಂಡನ್ನು ಪ್ರವೇಶಿಸಿದ್ದವು. ಮೂರು ವಾಯುನಾವೆಗಳು ಮಾತ್ರ ಲಂಡನಿನ ಆಜುಬಾಜಿಗೆ ಸಮೀಪಿಸಿದ್ದವು. ಈ ಪೈಕಿ ಒಂದನ್ನು ಬ್ರಿಟಿಷ ವಾಯುನಾವಿಕರು ಕೆಡವಿಹಾಕಿದರು. ನಾವಿಕರ ಅರ್ಧ ಸುಟ್ಟ ಹೆಣಗಳು ಕಫ್ಲೆಂಬಲ್ಲಿ ಬಿದ್ದಿದ್ದವು. ಈ ದಾಳಿಯನ್ನು ಮಾಡಿದ ವಾಯುನಾವೆಗಳ ಸಂಖ್ಯೆಯನ್ನು ನೋಡುವದಾದರೆ ಈ ದಾಳಿಯಿಂದ ಆದ ನಷ್ಟವು ಸ್ವಲ್ಪವೇ ಎಂದು ಹೇಳಬೇಕಾಗಿದೆ. ಪೂರ್ವ ಮತ್ತು ದಕ್ಷಿಣ ಪ್ರದೇಶಗಳ ಮೇಲೆ ಅನೇಕ ಬೊಂಬುಗಳು ಹಾಕಲ್ಪಟ್ಟಿದ್ದವು. ಆದರೆ ಕೆಲವು ಸಮುದ್ರದ ಮೇಲೆಯೂ ಕೆಲವು ಏಕಾಂತ ಪ್ರದೇಶಗಳ ಮೇಲೆಯೂ ಬಿದ್ದವು. ಮೆಟ್ರೊಪೊಲಿಟನ್ ಪೋಲಿಸ್ ಡಿಸ್ಟ್ರಿಕ್ಟಿನಲ್ಲಿ ೨೫ ಮನೆಗಳಿಗೆ ಮಾತ್ರ ಸ್ವಲ್ಪ ಜಖಂ ಆಗಿದೆ. ೨ ಕುದುರೆಗಳು ಸತ್ತಿರುವವು. ಮೆಟ್ರೊಪೊಲಿಸಿಗೆ ಸಮೀಪಿಸುತ್ತಿದ್ದ ೨ ಜೆಪಲಿನ್ ನಾವೆಗಳನ್ನು ಬ್ರಿಟಿಷ ವಾಯುನಾವಿಕರು ಓಡಿಸಿರುವರು. ಈ ದಾಳಿಯಿಂದ ಒಬ್ಬ ಗಂಡಸು ಒಬ್ಬ ಹೆಂಗಸು ಹತರಾಗಿರುವರು, ೧೧ ಗಂಡಸರು ಮತ್ತು ಹೆಂಗಸರು ೨ ಮಕ್ಕಳು ಗಾಯಒಡೆದಿರುವರು ಎಂತ ವಾರ್ತೆ ಬಂದಿದೆ.

ಫ್ರೆಂಚ ವಾಯುನಾವಿಕರು ಮೆತ್ಸ್ ಪಟ್ಟಣದ ಮೇಲೆ ಬೊಂಬುಗಳನ್ನು ಹಾಕಿ ಜರ್ಮನರಿಗೆ ವಿಶೇಷ ನಷ್ಟಪಡಿಸಿ ಹಿಂತೆರಳಿರುವರು.

~~~~~

ವಿದೇಶ ವೃತ್ತಾಂತ

ರುಮೇನಿಯವು ಯುದ್ಧಕ್ಕೆ ಸೇರಿದ್ದರಿಂದ ಗ್ರೀಸ್ ಇನ್ನೂ ತಟಸ್ಥಭಾವದಲ್ಲಿ ಇರುವದು ಅಸಾಧ್ಯವೆಂದೂ ಆದಷ್ಟು ತ್ವರ್ಯದಲ್ಲಿ ಗ್ರೀಸ್ ತಮ್ಮ ಪರಂಪರಾಗತ ಮಿತ್ರರಿಗೆ ಸೇರ್ಕಿಕೊಳ್ಳುವದು ವಿಹಿತವೆಂದೂ ಗ್ರೀಸಿನ ಮಿ| ವೆಂಜಿಲೊಸರು ಹೇಳಿರುತ್ತಾರೆ.

~~~~~

ಇಂಗ್ಲಾಂಡಿನ ಹಲ್ ನಗರದಲ್ಲಿ ೨ ಮಂದಿ ಪ್ಲೇಗು ಬೇನೆಗೆ ತುತ್ತಾಗಿರುವರು.

~~~~~

ಆಸ್ಟ್ರೇಲಿಯದಲ್ಲಿ ಸೇನೆಗೆ ಸೇರಿಕೊಳ್ಳುವ ಕಡ್ಡಾಯ ವಿಧಿಯು ಜಾರಿಗೆ ಬರುವದರಲ್ಲಿದೆ. ಅಲ್ಲಿಯ ಪ್ರಧಾನ ಮಂತ್ರಿಯಾಗಿರುವ ಮಿ| ಹ್ಯೂಜೆಸ್‌ರವರ ಈ ಏರ್ಪಾಡಿನ ಮೇರೆಗೆ ೭೬,೦೦೦ ಅವಿವಾಹಿತರು ಸೇನೆಗೆ ಬರಿಸಿಕೊಳ್ಳುವ ಹಾಗಾಗುವದು.

~~~~~

ಉತ್ತರ ಹಿಂದೂಸ್ಥಾನ.

ಮುಂಬಾಯಿ ಸರಕಾರದವರು ಮಾನ್ಯ ತಿಲಕರವರಿಗೆ ಇಂಗ್ಲಾಂಡಿಗೆ ಹೋಗುವ ಬಗ್ಯೆ ಬೇಕಾದ ಪಾಸ್‌ಪೋರ್ಟನ್ನು ಕೊಟ್ಟಿರುವರು.

~~~~~

ಇದೇ ತಾ. ೨೮ನೇ ಮಧ್ಯರಾತ್ರಿ ಡಿಲ್ಲಿ ಮತ್ತು ಲಕ್ನೌ ನಗರದಲ್ಲಿ ಸುಮಾರು ೩೦ ಸೆಕೆಂದಗಳ ಕಾಲ ಭೂಕಂಪಿಸಿರುವದು.

~~~~~

ಬರುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನು ಆರಿಸುವ ಸಂಬಂಧ ಸ್ವಾಗತ ಕಮಿಟಿಯವರ ಸ್ಪೆಶ್ಯಲ್ ಮಿಟಿಂಗು ಲಕ್ನೌ ನಗರದಲ್ಲಿ ಕೂಡಿಬಂದಿತ್ತು. ಪ್ರಾಂತಿಕ ಕಮಿಟಿಗಳಿಂದ ಮಾನ್ಯ ಬಾಬು ಅಂಬಿಕಚರಣ ಮುಜುಮದಾರರಿಗೆ ೫ ಓಟುಗಳು; ಮಿಸೆಸ್ ಅನ್ನಿ ಬಿಸೆಂತರಿಗೆ ೨, ಮ| ದಿವಾನ್ ಬಹದ್ದೂರ್ ಗೋವಿಂದ ರಾಘವ ಅಯ್ಯರ್ ೧; ಮ| ಸಿ. ವಿಜಯ ರಾಘವಾಚಾರ್ಯರ್ ೧ ಓಟುಗಳು ದೊರಕಿದ್ದುವು. ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಂದ ಯಾರಿಗೆ ಹೆಚ್ಚಿಗೆ ಓಟುಗಳು ದೊರಕಿರುತ್ತವೋ ಅವರನ್ನು ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಆರಿಸಬೇಕೆಂತ ಈ ಸಭೆಯಲ್ಲಿ ಸೂಚಿಸೋಣಾಯಿತು. ಆದರೆ ಈ ಸಂಬಂಧ ಚರ್ಚೆಯು ನಡೆದು ಓಟಿಗೆ ಹಾಕಿದ್ದಲ್ಲಿ ೬೪ ಮಂದಿ ಈ ಸೂಚನೆಯನ್ನು ತೆಗೆದುಹಾಕುವ ಹಾಗೆಯೂ ೩೫ ಮಂದಿ ಈ ಸೂಚನೆಯನ್ನು ಅಂಗೀಕರಿಸುವ ಹಾಗೆಯೂ ಮತವನ್ನು ಕೊಟ್ಟರು. ಚೇಯರ್ಮೇನರು ಈ ವಿಷಯದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಸಭೆಯವರ ಅಭಿಪ್ರಾಯವನ್ನು ಕೇಳಬೇಕೆಂದು ಹೇಳಿ ಸಭೆಯನ್ನು ಮುಕ್ತಾಯಪಡಿಸಿದರು. ಹಿಂದೂಸ್ಥಾನಕ್ಕೆ ಆದಷ್ಟು ತ್ವರ್ಯದಲ್ಲಿ ಸ್ವರಾಜ್ಯ ಕೊಡಬೇಕೆಂತ ಸಾಧಿಸುವವರಲ್ಲೊಬ್ಬರನ್ನು ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಬೇಕೆಂಬದೇ ಸ್ವಾಗತ ಕಮಿಟಿಯ ಬಹುಮತವಾಗಿರುವದು.

~~~~~

ಸುಮಾರು ಒಂದು ತಿಂಗಳ ಹಿಂದೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ಕೈದುಮಾಡಲ್ಪಟ್ಟ "ಬಂಗಾಳೀ" ಪತ್ರಿಕೆಯ ಅಸಿಸ್ಟಾಂಟ ಎಡಿಟರರಾದ ಶ್ಯಾಮಸುಂದರ ಚಕ್ರವರ್ತಿಯವರನ್ನು ಸರಕಾರದವರು ತಾ. ೨೬ರಲ್ಲು ಆಲಿಪುರ ಬಂದಿಖಾನೆಯಿಂದ ಬಿಡುಗಡೆ ಮಾಡಿ, ಕೂಡಲೇ ಡಾರ್ಜಿಲಿಂಗಿನ ಬಳಿ ಇರುವ ಕಾಲಿಂಪೊಂಗಿಗೆ ಹೋಗಬೇಕೆಂದೂ ಅಲ್ಲಿಯೇ ಇದ್ದುಕೊಂಡು ಡಾರ್ಜಿಲಿಂಗ್ ಡಿಸ್ಟ್ರಿಕ್ಟಿನ ಪೋಲಿಸ್ ಸುಪರಿಂಟೆಂಡೆಂಟರವರಿಗೆ ತೋರಿಸಿಕೊಳ್ಳಬೇಕೆಂದೂ ಅಪ್ಪಣೆಮಾಡಿರುತ್ತಾರೆ.

~~~~~

ಮಿಸ್ ರೆಜಿನ ಗುಹಾ ಬಿ. ಎ., ಬಿ. ಎಲ್. ಎಂಬ ಮಹಿಳೆಯು ವಕೀಲಿ ವೃತ್ತಿಯನ್ನು ನಡಿಸುವರೆ ಅಪ್ಪಣೆ ಕೊಡಬೇಕೆಂದು ಕಲ್ಕತ್ತಾ ಹೈಕೋರ್ಟಿನಲ್ಲಿ ಮನವಿ ಮಾಡಿಕೊಂಡಿದ್ದಳೆಂದು ತಿಳಿಸಿತ್ತಷ್ಟೆ. ಮಿಸ್. ಗೂಹಾರವರ ಮನವಿಯನ್ನು ಹೈಕೋರ್ಟ ಜಡ್ಜರು ತಳ್ಳಿಹಾಕಿರುತ್ತಾರೆ.

~~~~~

ಪೂನೆಯಲ್ಲಿ ಪ್ರಕಟವಾಗುವ "ಕೇಸರಿ" ಪತ್ರಿಕೆಯ ಸಂಪಾದಕರಾದ ಮ| ರಾ| ಎನ್. ಸಿ. ಕೆಲ್ಕರರು ಕೇಸರಿ ಪತ್ರಿಕೆಯಲ್ಲಿಯೂ ಇತರ ಪತ್ರಿಕೆಯಲ್ಲಿಯೂ ಪೂನಾ ಬೇಂಕ್ ಸಂಬಂಧ ಒಂದು ಲೇಖನವನ್ನು ಪ್ರಕಟಿಸಿದ್ದರಿಂದ ಸದರಿ ಬೇಂಕಿನವರು ಮ| ಕೆಲ್ಕರರವರಿಂದ ೧೦,೦೦೦ ರೂಪಾಯಿಗಳ ಅರ್ಥ ನಷ್ಟವನ್ನು ಕೇಳಿರುವರಲ್ಲದೆ ಕ್ಷಮಾಪಣೆ ಕೇಳಬೇಕೆಂದು ನೋಟೀಸು ಕೊಟ್ಟಿರುವರು. ಮ| ಕೆಲ್ಕರರವರು ಜ್ಞಾನಪ್ರಕಾಶದಲ್ಲಿಯೂ ಕೇಸರಿಯಲ್ಲಿಯೂ ಕ್ಷಮಾಪಣೆ ಕೇಳಿರುವರು. ಆದರೆ ಬೇಂಕಿನವರು ಕೇಳಿದ ಅರ್ಥ ನಷ್ಟವನ್ನು ಕೊಡುವಹಾಗಿಲ್ಲವೆಂತ ತಿಳಿದುಬರುತ್ತದೆ.

~~~~~

ಪಂಜಾಬಿನಲ್ಲಿ ಹೈಕೋರ್ಟನ್ನು ಸ್ಥಾಪಿಸುವರೆ ಸ್ಟೇಟ್ ಸೆಕ್ರೆಟರಿಯವರಿಂದ ಇಂಡಿಯಾ ಸರಕಾರದವರಿಗೆ ಹುಕುಂ ಬಂದಿರುತ್ತದೆ. ಆದರೆ ಯುದ್ಧ ತೀರುವವರೆಗೆ ಈ ವಿಷಯವು ಬಾಕಿ ಇಡೋಣಾಗಿದೆಂತ ತಿಳಿದುಬರುತ್ತದೆ.

~~~~~

ಪೂನೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮಾನ್ಯ ತಿಲಕರವರಿಂದ ೪೦,೦೦೦ ರೂಪಾಯಿಗಳ ಜಾಮೀನು ತೆಗೆದುಕೊಂಡ ಸಂಬಂಧ ಹೈಕೋರ್ಟನಲ್ಲಿ ಅಪೀಲುಮಾಡುವರೆ ಮುಂಬಾಯಿ ಹೈಕೋರ್ಟ ಜಡ್ಜರಿಂದ ಮಾನ್ಯ ತಿಲಕರವರಿಗೆ ಅಪ್ಪಣೆ ದೊರಕಿರುತ್ತದೆ.

~~~~~

ಇದೇ ಕಳೆದ ತಾ. ೨೯ನೇ ಸಾಯಂಕಾಲ ಕಲ್ಕತ್ತೆಯಲ್ಲಿ ಒಬ್ಬ ಪೋಲಿಸ್ ಕನ್‌ಸ್ಟೇಬಲನು ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಶ್ಯಾಮಶ್ಯುಜೋಹರವರಿಗೆ ಗುಂಡುಹೊಡೆದು, ತಾನು ಕೂಡಲೆ ಆತ್ಮಹತ್ಯಮಾಡಿಕೊಂಡಿರುವನೆಂಬ ವಾರ್ತೆ ಬಂದಿರುವದು. ತಾ. ೨೮ನೇ ದಿನ ಸಬ್ ಇನ್ಸ್‌ಪೆಕ್ಟರರು ಒಂದು ಕಳವು ಮೊಕದಮೆಯನ್ನು ತನಕಿ ಮಾಡುತ್ತಿರುವಾಗ ಸದರಿ ಕನ್‌ಸ್ಟೇಬಲನ ಮೇಲೆ ಏನೋ ತಪ್ಪನ್ನು ಕಂಡುಹಿಡಿದರಂತೆ. ಇದರಿಂದ ಕನ್‌ಸ್ಟೇಬಲನು ತನಗೆ ಕೇಡು ಸಂಭವಿಸೀತೆಂದು ಭಾವಿಸಿ, ಸಬ್ ಇನ್ಸ್‌ಪೆಕ್ಟರರು ಸೈಕಲ್ ಮೇಲೆ ಹೋಗುತ್ತಿರುವಾಗ ಗುಂಡುಹೊಡೆದು, ಸಬ್ ಇನ್ಸ್‌ಪೆಕ್ಟರರು ಕೆಳಬಿದ್ದ ಕೂಡಲೇ ತಾನೂ ಅದೇ ಕೋವಿಯಿಂದ ಆತ್ಮಹತ್ಯಮಾಡಿಕೊಂಡಿರುವನು.

~~~~~

ಕರಾಚಿಯ ಖಾರ್‌ಪುರ ಬಂದಿಖಾನೆಯಲ್ಲಿದ್ದ ೧೭ ದಕಾಯಿತರು ತಾ. ೩೧ನೇ ರಾತ್ರಿ ಥಕ್ಕನೇ ತಪ್ಪಿಸಿಕೊಳ್ಳಲು ಯತ್ನಿಸಿ ಕಾವಲುಗಾರರಿಗೆ ಹೊಡೆದು ೫ ರೈಫಲ್ ಕೋವಿಗಳನ್ನು ಹಿಡಕೊಂಡು ಓಡಿಹೋದರು. ೨೦ ನಿಮಿಷಗಳ ನಂತರ ತಪ್ಪಿಸಿಕೊಂಡ ಇಬ್ಬರು ದಕಾಯಿತರನ್ನು ಬಂದಿಖಾನೆಯ ಅಧಿಕಾರಿಗಳು ಹಿಡಿದರು. ಅನಂತರ ಮಿಲಿಟರಿ ಅಧಿಕಾರಿಗಳು ಬಂದಿಖಾನೆಗೆ ಸುಮಾರು ೫೦೦ ಗಜ ದೂರದಲ್ಲಿದ್ದ ದಪ್ಪವಾದ ಪೊದೆಗಳಮೇಲೆ ಗುಂಡುಹಾರಿಸಿ, ಪೊದೆಯೊಳಗಿಂದ ಓಡಿಹೋಗುತ್ತಿದ್ದ ಒಬ್ಬ ದಕಾಯಿತನನ್ನು ಹಿಡಿದರು. ರಾತ್ರಿಕಾಲ ಮತ್ತು ಮರುದಿನ ಸಾಯಂಕಾಲ ೪ ಗಂಟೆಯವರೆಗೆ ಹುಡುಕಾಡಿ ಒಬ್ಬನೆ ಹೊರತು ತಪ್ಪಿಸಿಕೊಂಡ ಎಲ್ಲಾ ದಕಾಯಿತರನ್ನು ಅಧಿಕಾರಿಗಳು ಹಿಡಿದಿರುತ್ತಾರೆ.

~~~~~

ಪಂಜಾಬಿಗೆ ಸೇರಿದ ಕಲಾನೂರು ಎಂಬಲ್ಲಿ ಮೈಲ್ ಟ್ರೇನ್ ಗೂಡ್ಸ್ ಟ್ರೇನಿಗೆ ತಗಲಿ ೩ ಯೂರೋಪಿಯನರು ಮತ್ತು ೮ ಹಿಂದೀಗಳು ಹತರಾದರೆಂದೂ ೧೪ ಹಿಂದಿಗಳು ಮತ್ತು ಒಬ್ಬ ಬ್ರಿಟಿಷ ಆಫೀಸರನು ಜಖಂ ಹೊಂದಿರುವನೆಂದೂ ವಾರ್ತೆ ಬಂದದೆ.

~~~~~
~~~~~

ಗಂಗಾ ಮತ್ತು ಯಮುನಾ ನದಿಗಳಲ್ಲಿ ನೆರೆವುಂಟಾಗಿ ಅನೇಕ ಮನೆಗಳು ಮುಣುಗಿರುವವು. ಅಲ್ಲಹಾಬಾದಿಗೆ ಸಮೀಪವಿರುವ ಕೆಲವು ಗ್ರಾಮಗಳ ಪೈರಿಗೆ ವಿಶೇಷ ನಷ್ಟವಾಗಿರುವದು ಎಂದು ತಿಳಿದುಬಂದದೆ.

ಆಗೋಸ್ತು ತಾ. ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೫೮೫ ಮಂದಿಗೆ ಪ್ಲೇಗಬೇನೆಯು ಸೋಂಕಿ ೩೨೨೯ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಲ್ಲಿ ೧೪೦೦; ಮದ್ರಾಸ್ ೧೪೪; ಬಿಹಾರ್ ಮತ್ತು ಒರಿಸ್ಸ ೩೮; ಸಂಯುಕ್ತ ಸಂಸ್ಥಾನ ೧೦೧; ಪಂಜಾಬು ೫; ಬರ್ಮ ೫೪; ಮಧ್ಯ ಸಂಸ್ಥಾನ ೨೨೬; ಮೈಸೂರು ೩೫೪; ಹೈದರಾಬಾದ್ ೯೦೨; ಮಧ್ಯ ಹಿಂದೂಸ್ಥಾನ ೬ ಮರಣಗಳಾಗಿರುವವು. ಬಂಗಾಳದಲ್ಲಿ ಪ್ಲೇಗು ಮರಣವಿದ್ದಿಲ್ಲ.

ಇಂಡಿಯಾ ಸರಕಾರದವರು ಕೋರ್ಟುಫೀಸ್ ಆಕ್ಟಿನ ತಿದ್ದುವಡಿ ಮಸೂದೆ ಸಂಬಂಧವಾದ ಪ್ರಾಂತಿಕ ಸರಕಾರಗಳ ಅಭಿಪ್ರಾಯವನ್ನು ಕೇಳಿರುತ್ತಾರೆ.

ಇದೇ ತಾ. ೪ರಲ್ಲು ಡಾಕ್ಟರ್ ದಾದಾಬಾಯಿ ನೌರೋಜಿಯವರು ವಾರ್ಸೋವದಲ್ಲಿ ತನ್ನ ೯೨ನೇ ವರ್ಷೋತ್ಸವವನ್ನು ಜರಗಿಸಿದರು. ಆ ದಿನ ಬೆಳಿಗ್ಗೆ ಗುಜರಾಥಿ ಸ್ತ್ರೀಮಂಡಲ ಸಭೆಯ ಮಹಿಳೆಯರು ಮಾನ್ಯ ನೌರೋಜಿಯವರಿಗೆ ಬಹುಮಾನ ಪತ್ರವನ್ನು ಒಪ್ಪಿಸಿದರು. ಮಾನ್ಯ ನೌರೋಜಿಯವರು ಈ ಸ್ತ್ರೀಮಂಡಲಿಯಿಂದ ಉಂಟಾಗುತ್ತಿರುವ ಪ್ರಯೋಜನಗಳನ್ನು ಸೂಚಿಸಿ ಕಾಲೋಚಿತ ಮಾತುಗಳಿಂದ ಸ್ತ್ರೀಮಂಡಲಿಯವರನ್ನು ಪ್ರೋತ್ಸಾಹಿಸಿದರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಯುನಿವರ್ಸಿಟಿಯ ಈ ವರ್ಷದ "ಕನ್ವೋಕೇಶನ್" ಸಭೆಯು ಇದೇ ಬರುವ ನವಂಬರ ತಿಂಗಳ ತಾ. ೨೩ರಲ್ಲು ಕೂಡಿಬರುವದು. ನವಾಬ್ ಇಮಾದ್ ಉಲ್ ಮುಲ್ಕ್ ಸೈಯದ್ ಹುಶೇನ ಬಿಲ್‌ಗ್ರಾಮಿ ಸಿ. ಎಸ್. ಐ ರವರು "ಕನ್ವೋಕೇಶನ್" ಭಾಷಣವನ್ನು ಕೊಡುವರು.

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:— ಅರ್ಥಸಾಧಕ ಪತ್ರಿಕಾ ಸಂಪಾದಕರು,

"ರಿಂಗ್‌ವುಡ್," ಬೆಂಗಳೂರು.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	374,843—8—8
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	374,843—8—8
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭಹೇಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲಕ್ಕೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,

Mangalore, 1st September 1916.

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಲಾವಂಜ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಬ್ಮ ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹಹರಿವು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣಕೊಡುವುದು. ಬಾಟಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವವು. ಡಾಕಲಿಗೆ ೨ ರೂ.

೪. ಸೂರಣಾದ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಚಿಕಿತ್ಸೆ ಅತ್ಯುತ್ಕೃಷ್ಟವು. ಶೌಷ್ಟಿಕವಾಗಿದೆ. ಡಾಕಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಬಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಕ್ಕೇ ಸೊಗಸಾದ ಹಲ್ಲು ಪುಡಿ. ಅನೇಕ ಸಶೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ರೋಗ ನಿವಾರಣಾಕ್ಕೆ. ಡಾಕಲಿಗೆ ೨ ರೂ.

೧೦. ಕಾಲ್ಬಲೀ ಪಾಕ. ಸ್ವಪ್ನಾಸ್ಖಲನ, ಮೂತ್ರದಲ್ಲಿ ಧಾತುಪತನ, ಜನೈಸರ್ಗಿಕ ಸಂಬಂಧವಾಗಿ ಸ್ವಾಸ್ಥ್ಯವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೆಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ಡಾಕಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, [illegible], ನಾನಾ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ [illegible] ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಿಲ್ಲದೆ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸುವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಾಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ಶಾಲೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ಕನ್ನಡದ ಪತ್ರದಿಂದ ಅಥ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಬಹುದು.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ, ವೇಪರಿ ಪೋಸ್ಟು, ಮದರಾಸು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ

ಮಂಗಳೂರು ಶಕ ೧೮೩೮ ಭಾದ್ರಪದ ಬ. ೪ ಶುಕ್ರವಾರ.

ನಮ್ಮ ಮುನ್ಸಿಪಾಲಿಟಿಯ ರಥವು ಹ್ಯಾಗೆ ನಡಿಯುತ್ತಿದೆ?

ಲೇಖಾಂಕ ೧.

ಇಂಗ್ಲಿಷ ಸರಕಾರದ ರಾಜ್ಯವು ನಮ್ಮ ಭರತಖಂಡದಲ್ಲಿ ಸ್ಥಿರಸ್ಥಾಪಿತವಾದ ಮೇಲೆ ಇಲ್ಲಿಯ ಜನರಿಗೆ ಸುಧಾರಿಸಿದ ರಾಜ್ಯಪದ್ಧತಿಯ ಅನುಭವವು, ಹೊರಗಿನಿಂದಲ್ಲ, ಆ ರಾಜ್ಯಪದ್ಧತಿಯ ಕೆಲಸಗಳನ್ನು ಸ್ವತಃ ಮಾಡುವುದರಿಂದ ಬರುವಂತೆ ಸರಕಾರದವರು ಹಲವು ಏರ್ಪಾಟುಗಳನ್ನು ಮಾಡಿದ್ದಾರೆಂಬುದನ್ನು ಸರಕಾರದ ಬಿರುಸು ಟೀಕಾಕಾರರು ಕೂಡ ಒಪ್ಪಿಕೊಳ್ಳತಕ್ಕ ಮಾತೇ ಸರಿ. ಜನರಲ್ಲಿ ಪಾತ್ರತೆಯು ಬರುವಂತೆ ಸರಕಾರದವರು ವಿದ್ಯೆಯನ್ನು ಕೊಟ್ಟರು, ಸಮಾನತ್ವದ ತಿಳಿವು ಮೂಡುವಂತೆ ಶಿಕ್ಷಣವನ್ನು ಹಬ್ಬಿಸಲು ಪ್ರಯತ್ನಿಸಿದರು, ಆರೋಗ್ಯಾಭಿವೃದ್ಧಿಗೆ ಬೇಕಾದ ಹೊಸ್ಪಿಟಲುಗಳನ್ನು ಸ್ಥಾಪಿಸಿದರು, ವ್ಯಾಪಾರಕ್ಕೂ, ಪ್ರವಾಸಕ್ಕೂ ಅನುಕೂಲವಾಗುವಂತೆ ರೈಲುಗಳನ್ನೂ, ದೇಶದೇಶಗಳ ವ್ಯವಹಾರಗಳಿಗೆ ಸುಲಭವಾಗುವಂತೆ ತಂತಿ ಟಪಾಲು ಮುಂತಾದವುಗಳನ್ನೂ ನೆಲೆಗೊಳಿಸಿದರು. ಇದೇ ಮೇರೆಗೆ ಸರಕಾರದವರು ಎಷ್ಟೋ ಸುಧಾರಣೆಗಳನ್ನು ಮಾಡಿರುವಂತೆ ಇಲ್ಲಿಯವರು ಸ್ವರಾಜ್ಯದ ಪಾತ್ರತೆಯನ್ನು ಮೇಲೆ ಹೇಳಿದಂತೆ ತತ್ವದಿಂದಲ್ಲ, ಕೆಲಸದಿಂದ ಹೊಂದುವಂತೆ ಸ್ಥಾನಿಕ ಸ್ವರಾಜ್ಯದ ಹಕ್ಕನ್ನು ಸಹ ಎಷ್ಟೋ ಹಿಂದೆಯೇ ಕೊಟ್ಟಿರುವರು. ಈ ಸ್ಥಾನಿಕ ಸ್ವರಾಜ್ಯವೆಂದರೆ ಜನರೇ ತಮ್ಮ ನಾಗರಿಕತನದ ಕೆಲಸಗಳನ್ನು ಅದು ವ್ಯಕ್ತಿಶಃ ಮಾಡಿಕೊಳ್ಳುವದು ಅಸಾಧ್ಯವಾಗಿರುವುದರಿಂದ, ಪಾರ್ಲಿಮೆಂಟಿನಲ್ಲಿ ಜನರು ತಮ್ಮ ಕಡೆಯ ಪ್ರತಿನಿಧಿಗಳನ್ನು ಕಳುಹಿಸಿ ಕೊಡುವಂತೆ ಇಲ್ಲಿಯ ನಾಗರಿಕರು ಮುನ್ಸಿಪಲ ಕೌನ್ಸಿಲುಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ಆರಿಸಿಕೊಡಬೇಕೆಂಬುದಾಗಿ ವ್ಯವಸ್ಥೆಯಾಯಿತು. ಇವರ ಸಂಗಡಲೇ ಸರಕಾರದ ಪ್ರತಿನಿಧಿಗಳಿಗೂ ಮುನ್ಸಿಪಾಲಿಟಿಗಳಲ್ಲಿ ಅವಕಾಶವು ದೊರೆಯಿತು. ಆದರೂ ಇಲ್ಲಿ ಒಂದು ಸಂಗತಿಯನ್ನು ವಾಚಕರು ಮರೆಯ ಕೂಡದು. ಅದು ಯಾವುದೆಂದರೆ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಾಗಲಿ, ಸರಕಾರದಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಾಗಲಿ ಇವರೆಲ್ಲರು ಆ ಪಟ್ಟಣದ ಹಿತಕ್ಕಾಗಿಯೇ ಕೆಲಸ ಮಾಡುವವರಲ್ಲದೆ ಬೇರೆ ಕೆಲಸಕ್ಕೆ ಬಂದವರಲ್ಲ. ಪಟ್ಟಣದಲ್ಲಿ ಮಾರ್ಗಗಳ ಅನುಕೂಲತೆ, ನೀರಿನ ಪುರವಣೆ, ಕೊಳಕು ಕಾಲಿವೆಗಳ ಸಂಚಲನೆ, ಸ್ವಚ್ಛತೆ, ಶಿಕ್ಷಣ ಮತ್ತು ದೀಪಗಳ ಅನುಕೂಲತೆ ಹಾಗೂ ಆರೋಗ್ಯ ಇತ್ಯಾದಿ ಇವೇ ಮುನ್ಸಿಪಾಲಿಟಿಯ ಕೆಲಸಗಳು. ಈ ಕೆಲಸಗಳು ಮುನ್ಸಿಪಾಲಿಟಿಯ ಕಡೆಯಿಂದ ಸರಿಯಾಗಿ ನಡಿಸಲ್ಪಟ್ಟಿರುತ್ತವೋ ಇಲ್ಲವೊ ಎಂಬುದನ್ನು ಪಟ್ಟಣಿಗರು ಆಗಾಗ್ಗೆ ನೋಡುತ್ತಿರಬೇಕು. ಇವುಗಳಲ್ಲಿ ಏನಾದರೂ ನ್ಯೂನತೆ ಆದುದು ಕಂಡು ಬಂದರೆ ಈ ವಿಷಯದಲ್ಲಿ ಯೋಗ್ಯತಕರಾರುಗಳನ್ನು ನಡಿಸಲು ಜನರಿಗೆ ಹಕ್ಕು ಇದೆ. ಮತ್ತು ಆ ರೀತಿಯಿಂದ ನಗರಹಿತಕ್ಕೆ ಅಪಾಯಕರವಾದ ಸಂಗತಿಗಳು ಆದುದು ಕಂಡು ಬಂದರೆ ಅಲ್ಲಿಯ ನಾಗರಿಕರು ಇದರ ಯೋಗ್ಯ ಪ್ರಯೋಜನವನ್ನು ಪಡಕೊಳ್ಳದೆ ಇರುವುದಿಲ್ಲ. ಇನ್ನೊಂದು ಮಹತ್ವದ ಸಂಗತಿಯು. ಮುನ್ಸಿಪಾಲಿಟಿಯ ಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಅಧ್ಯಕ್ಷರು ನಾಗರಿಕ ಹಿತವನ್ನೇ ಮಾಡಲು ಈ ಕೆಲಸವನ್ನು ಕೈಕೊಂಡಿರುವುದರಿಂದ ಇದರಲ್ಲಿ ಅವರ ಮಹತ್ವ, ಪ್ರಭುತ್ವ, ಪದವಿ ಮೊದಲಾದ ಆಯಾ ವ್ಯಕ್ತಿಗಳಿಗೆ ಸಂಬಂಧಪಟ್ಟ ಎಂದರೆ ಒಂದೇ ಶಬ್ದದಿಂದ, ವೈಯಕ್ತಿಕ ಸಂಗತಿಗಳಿಗಾಗಲಿ ಇಲ್ಲವೆ ಪಕ್ಷಭೇದ, ಜಾತಿಭೇದ, ಸ್ವಕೀಯರ ಪ್ರಯೋಜನ ಮುಂತಾದ ಸಾಮುದಾಯಿಕ ವಿಷಯಗಳಿಗಾಗಲಿ ಮಹತ್ವವನ್ನು ಕೊಡದೆ ಕೌನ್ಸಿಲಿನಲ್ಲಿ ಯಾವುದಾದರೊಂದು ಪ್ರಶ್ನೆಯು ಬಂದರೆ ಅದನ್ನು ಎಲ್ಲರೂ ಇಡೀ ಪಟ್ಟಣದ ಹಿತದೃಷ್ಟಿಯಿಂದ ನಿರ್ಣಯಿಸಬೇಕು. ಲೋಕಹಿತಕ್ಕೆ ವಿಘಾತಕವಾದ ಸಂಗತಿಗಳನ್ನು ಬಿಟ್ಟುಬಿಡಬೇಕು. ಇದೇ ಪದ್ಧತಿಯು ನಮ್ಮ ಬ್ರಿಟಿಷ್ ಪಾರ್ಲಿಮೆಂಟಿಹಿಡಿದು ಎಲ್ಲ ಪ್ರಾತಿನಿಧಿಕ ಸಂಸ್ಥೆಗಳಲ್ಲಿಯೂ, ಭರತಖಂಡದ ಸಜೀವ ಮುನ್ಸಿಪಾಲಿಟಿಗಳಲ್ಲಿಯೂ ಕಂಡು ಬರುತ್ತದೆ.

ಮುನ್ಸಿಪಾಲಿಟಿಯ ಈ ಸಾಮಾನ್ಯ ಮತ್ತು ವಿಶೇಷ ಸಂಗತಿಗಳನ್ನು ಆಲೋಚಿಸುವಾಗ ನಮ್ಮ ಮಂಗಳೂರ ಮುನ್ಸಿಪಾಲಿಟಿಯ ರಥವು ಹ್ಯಾಗೆ ನಡಿಯುತ್ತಿದೆ? ಲೋಕಹಿತದ ಮಾರ್ಗವನ್ನೇ ಅಂಗೀಕರಿಸಿದೆಯೋ ಅಥವಾ ಆ ಮಾರ್ಗಕ್ಕಿರುವ ಸ್ಥಳಿಕಾಭಿಮಾನದ ಸೇತುವೆಯು (ಕಂಬಳದ ಸಂಕದಂತೆ) ಮುರಿದುಹೋದ ಕಾರಣ ಲೋಕಹಿತದ ಕಡೆಗೆ ಬೆನ್ನುಮಾಡಿ ಬೇರೊಂದು ಮಾರ್ಗವನ್ನು ಅವಲಂಬಿಸಿದೆಯೋ? ಈ ಪ್ರಶ್ನೆಗಳು ವಿಚಾರವಂತರ್‍ಯ್ರಹಸ್ಥರ ಅಂತಃಕರಣದಲ್ಲಿ ಹುಟ್ಟದೆ ನಿಲ್ಲಲಾರವು. ಆದರೆ ಈ ಪ್ರಶ್ನೆಗಳಿಗೆ ಒರುವ ಉತ್ತರವು ಮಾತ್ರ ನಮ್ಮ ಮತದಂತೆ ಬಹು ಅಸಮಾಧಾನಕರವಾಗಿವೆ. ದೃಷ್ಟಾಂತಕ್ಕಾಗಿ ಕೆಲವು ದಿವಸಗಳ ಹಿಂದೆ ಆದ ಮುನ್ಸಿಪಾಲಿಟಿಯ ಮೀಟಿಂಗಿನ ವಿಷಯವನ್ನೇ ನೋಡೋಣ. ಮದ್ರಾಸ ಸರಕಾರದ ಕಡೆಯಿಂದ ಈ ಸಂಸ್ಥಾನದಲ್ಲಿರುವ ಪ್ರಾಯಃ ಎಲ್ಲ ಮುನಿಸಿಪಾಲಿಟಿಗಳಿಗೆ ಬಂದಂತೆಯೇ ಇಲ್ಲಿಯ ಮುನ್ಸಿಪಾಲಿಟಿಗೂ ಒಂದು ಆರ್ಡರು ಬಂದಿರುವುದು. ಮುನ್ಸಿಪಾಲಿಟಿಗಳಲ್ಲಿ ಸದ್ಯಃ ಇರುವ ವಾರ್ಡುಗಳ ವಿಭಜನೆಯೂ ಆ ವಾರ್ಡುಗಳಿಗೆ ಇರುವ ಪ್ರತಿನಿಧಿಗಳೂ ಇಂಥಾದ್ದೇ ಒಂದು ವಿವಕ್ಷಿತ ತತ್ವವನ್ನು ಅಂಗೀಕರಿಸಿ ಇಲ್ಲಾದುದರಿಂದ ಜನ ಸಂಖ್ಯೆ, ಮತದಾರರು, ತೆರಿಗೆ ಈ ಮೂರು ಸಂಗತಿಗಳನ್ನು ಆಧರಿಸಿಕೊಂಡು ಇನ್ನು ಮುಂದೆ ವಾರ್ಡುಗಳ ವಿಭಜನೆ ಮತ್ತು ಪ್ರತಿನಿಧಿಗಳ ಸಂಖ್ಯೆಯನ್ನು ನಿಶ್ಚಯಿಸಬೇಕೆಂಬುದಾಗಿ ಆ ಗವರ್ನಮೆಂಟ ಆರ್ಡರಿನಲ್ಲಿ ತೋರಿಸಿರುತ್ತದೆ. ಮತ್ತು ಜನಸಂಖ್ಯೆ ಮುಂತಾದ ಆ ಮೂರು ಸಂಗತಿಗಳು ಯಾವ ಯಾವ ಪ್ರಮಾಣದಲ್ಲಿದ್ದರೆ ಹ್ಯಾಗೆ ಹ್ಯಾಗೆ ವಾರ್ಡುಗಳನ್ನೂ ಪ್ರತಿನಿಧಿಗಳನ್ನೂ ಏರ್ಪಡಿಸಬೇಕೆಂಬುದಕ್ಕೆ ಒಂದು ಉದಾಹರಣೆಯನ್ನು ಕೂಡ ಅದರಲ್ಲಿ ತೋರಿಸಿದೆ. ಇದೇ ಆರ್ಡರು ಕೆಲವು ಸಮಯಕ್ಕೆ ಹಿಂದೆ ಎಂದರೆ ಮ. ರಾ. ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರರವರು ಅಧ್ಯಕ್ಷರಾಗಿರುವಾಗ ಇಲ್ಲಿಗೆ ಬಂದಿತ್ತು. ಅದಕ್ಕೆ ಆ ಕಾಲದಲ್ಲಿ ಕೆಲವು ವಾರ್ಡುಗಳ ಪ್ರತಿನಿಧಿಗಳ ಸಂಖ್ಯೆಯನ್ನು ಬದಲಾಯಿಸುವಂತೆ ಮುನ್ಸಿಪಾಲಿಟಿಯ ಅಭಿಪ್ರಾಯವು ಸರಕಾರಕ್ಕೆ ತಿಳಿಸೋಣಾಯಿತು. ಆದರೆ ಮಧ್ಯದಲ್ಲಿ ಸರಕಾರವು ಓಟುದಾರರ ಯೋಗ್ಯತೆಗಳನ್ನು ಬದಲಾಯಿಸಿರುವದರಿಂದ ತಿರಿಗಿ ಅದೇ ಆರ್ಡರು ಇಲ್ಲಿಗೆ ಬಂದಿದೆ. ಈ ಆರ್ಡರಿನ ವಿಷಯವು ಕಳೆದ ಸಭೆಯಲ್ಲಿ ಚರ್ಚೆಗೆ ಬಂತು. ಅದರಲ್ಲಿ ೨ ಪಕ್ಷಗಳಾದವು. ಇಷ್ಟರವರೆಗೆ ಪ್ರತಿನಿಧಿಗಳ ಸಂಖ್ಯೆಯೂ ಕ್ರಮವೂ ಇದ್ದಂತೆ ಇರುವುದು ಉಚಿತವು. ಅವುಗಳನ್ನು ಬದಲಾಯಿಸುವುದು ಅಗತ್ಯವಿಲ್ಲವೆಂಬುದೊಂದು ಪಕ್ಷ; ಅಗತ್ಯವಿದೆಂಬದಿನ್ನೊಂದು ಪಕ್ಷ. ಈ ವಿಷಯವು ಹೀಗೆ ವಿವಾದಾಸ್ಪದವಾಗಿ ಕಂಡುಬಂದುದರಿಂದ ಆ ಬಗ್ಗೆ ಓಟುಗಳನ್ನು ತಕ್ಕೊಳ್ಳುವುದು ಯುಕ್ತವೆಂದು ಕಂಡುಬಂತು. ಮತ್ತು ಹೀಗೆ ಓಟುಗಳನ್ನು ತಕ್ಕೊಳ್ಳಲು ೭ ಓಟುಗಳು ಬದಲಾಯಿಸಕೂಡದೆಂಬ ಕಡೆಯಲ್ಲಿ. ೭ ಓಟುಗಳು ಎದುರು ಕಡೆಯಲ್ಲಿ. ಆಗ ಅಧ್ಯಕ್ಷರು ತಮ್ಮ ಎರಡು ಓಟುಗಳನ್ನು ಎದುರುಪಕ್ಷದ ಈ ೭ ಓಟುಗಳಿಗೆ ಕೂಡಿಸಿ ಬದಲಾವಣೆಯ ಆವಶ್ಯಕತೆಯನ್ನು ಎಂಟಕ್ಕೆ ತಂದು ನಿಲ್ಲಿಸಿದರು! ಈ ಸಂಗತಿಯನ್ನು ನಾವು ಎರಡು ವಾರಗಳ ಹಿಂದೆ ತಿಳಿಸಿದ್ದೇವೆ.

ಗವರ್ನಮೆಂಟ ಆರ್ಡರನ್ನು ನೋಡಿದರೆ ಅದರಲ್ಲಿ ಪ್ರತಿನಿಧಿಗಳ ಸಂಖ್ಯೆಯನ್ನು ಮಾತ್ರ ಬದಲಾಯಿಸಬೇಕೆಂತಿಲ್ಲ. ವಾರ್ಡುಗಳನ್ನು ಕೂಡ ಗ್ರಾಮಗಳ ಅಥವಾ ಕೇರಿಗಳ ಸೌಕರ್ಯಕ್ಕನುಗುಣವಾಗಿ ವಿಭಜಿಸಬೇಕೆಂತ ಸೂಚಿಸಿದೆ. ಈ ಎರಡು ಸೂಚನೆಗಳಲ್ಲಿ ಒಂದನ್ನು ಮಾತ್ರ ಜಾರಿಗೆ ತಂದು ವಾರ್ಡವಿಭಜನೆಯ ಪ್ರಶ್ನೆಯನ್ನು ಬಿಡುವುದು ಯಾಕೆ? ವಾರ್ಡುಗಳನ್ನು ತಿರಿಗಿ ವಿಭಜಿಸುವುದೆಂದರೆ ಬಹಳ ಖರ್ಚು, ತೊಂದರೆ, ಅನಾನುಕೂಲತೆ ಮುಂತಾದವುಗಳುಂಟಾಗುವುದರಿಂದ ಬರುವ ಖಾನೇಸುಮಾರಿಯಲ್ಲಿ ಹೆಚ್ಚಾಗುವ ಜನಸಂಖ್ಯೆಯ ಮಾನದಿಂದ ತಿರಿಗೊಮ್ಮೆ ಪ್ರತಿನಿಧಿಗಳ ಸಂಖ್ಯೆಯು ಹ್ಯಾಗಿದ್ದರೂ ಹೆಚ್ಚಾಗಬೇಕಾದ ಕಾರಣ ಆಗಲೇ ಈ ವಾರ್ಡ ವಿಭಜನೆಯ ಪ್ರಶ್ನೆಯನ್ನು ವಿಚಾರದಲ್ಲಿ ತೆಕ್ಕೊಳ್ಳಬಹುದೆಂಬ ಯುಕ್ತಿವಾದವನ್ನು ಯಾರಾದರೂ ನಮ್ಮ ಮೇಲಿನ ಪ್ರಶ್ನೆಗೆ ತೋರಿಸಬಹುದು. ಆದರೆ ಇದೇ ಯುಕ್ತಿವಾದ ಅಥವಾ ಸಮಾಧಾನವನ್ನು ಪ್ರತಿನಿಧಿಗಳ ಬದಲಾವಣೆಯಲ್ಲಿ ಕೂಡ ಆದರಿಸಬಹುದಾಗಿದೆ. ಮೊದಲೊಮ್ಮೆ ಇದೇ ಪ್ರಶ್ನೆಯು ಬಂದಾಗ ಕೌನ್ಸಿಲಿನವರು ವಾರ್ಡಿನ ಪ್ರಶ್ನೆಯನ್ನು ತೆಕ್ಕೊಳ್ಳದೆ ಪ್ರತಿನಿಧಿಗಳ ಪ್ರಶ್ನೆಯನ್ನು ಮಾತ್ರ ಚರ್ಚಿಸಿ ತಮ್ಮ ತೀರ್ಮಾನವನ್ನು ಕೊಟ್ಟಿರುವ ಕಾರಣ ಇದೇ ಕ್ರಮದಿಂದ ಈ ಹೊತ್ತಾದರೂ ನಿರ್ಣಯಿಸುವುದು ಯುಕ್ತವಲ್ಲವೇ? ಕೌನ್ಸಿಲು ಇದೇ, ವಿಷಯವು ಇದೇ, ಪ್ರತಿನಿಧಿಗಳೂ ಇವರೇ, ಹೀಗಿರುವಾಗ ಆಗೊಂದು ತರದ ಅಭಿಪ್ರಾಯವು ಈಗ ಮಾತ್ರ ಇನ್ನೊಂದು ತರದ್ದೇ!

ಎಂಬದಾಗಿಯೂ ಕೆಲವರು ಆಕ್ಷೇಪಿಸಬಹುದು. ಈ ಆಕ್ಷೇಪವು ಮಾತ್ರ ಅಸಾಂಪ್ರದಾಯಕವಾಗಿದೆ. ಇದನ್ನು ಕೆಳಗೆ ವಿವರಿಸುತ್ತೇವೆ.

ಇಂಗ್ಲಂಡ ದೇಶವು ಈಗ ಎಷ್ಟೋ ಶತಮಾನಗಳಿಂದ 'Free Trade' ಎಂದರೆ ಅಪ್ರತಿಬಂಧ ವ್ಯಾಪಾರದ ತತ್ವವನ್ನು ಬಹು ಆಗ್ರಹದಿಂದ ಪೂಜಿಸುತ್ತಿತ್ತು. ಎರಡು ವರ್ಷಗಳಿಂದ ಈ ಮಹಾ ಯುದ್ಧವು ಪ್ರಾರಂಭವಾಗುತ್ತಲೆ ಅತಿಪ್ರಿಯವಾದ ಈ ಅಪ್ರತಿಬಂಧ ವ್ಯಾಪಾರದ ತತ್ವವನ್ನು ಬಿಟ್ಟು ಈಗ ಅದಕ್ಕೆ ಸಂಕ್ಷಿತ ವ್ಯಾಪಾರದ ತತ್ವವನ್ನು ಅಂಗೀಕರಿಸಬೇಕಾಗಿ ಬಂದಿದೆ. ಅಲ್ಲದೆ, ಇಷ್ಟರ ವರೆಗೆ ಇಂಗ್ಲಂಡಿನಲ್ಲಿ ಮಿಲಿಟರಿಯ ಎಂದರೆ ಲಷ್ಕರಿನ ಖಡ್ಡಾಯದ ಶಿಕ್ಷಣವು ಇದ್ದಿಲ್ಲ. ಆದರೆ ಇದೇ ಯುದ್ಧದ ದೆಸೆಯಿಂದ ಆ ಮಾರ್ಗವನ್ನು ಬಿಟ್ಟು ಎಲ್ಲರಿಗೆ ಈ ಶಿಕ್ಷಣವನ್ನು ಖಡ್ಡಾಯದಿಂದ ಕೊಡಬೇಕಾಗಿ ಪಾರ್ಲಿಮೆಂಟು ಏಕಮತದಿಂದ ತನ್ನ ನಿರ್ಣಯವನ್ನು ಕೊಡಲಿಲ್ಲವೆ? ದೂರದಲ್ಲಿ ನಡೆದ ಈ ಉದಾಹರಣೆಗಳನ್ನು ಬಿಟ್ಟರೂ ನಮ್ಮ ಹಿಂದುಸ್ಥಾನದಲ್ಲಿಯೇ ನಡೆದ ಇಂಥಾ ಎಷ್ಟೋ ಉದಾಹರಣೆಗಳನ್ನು ನಾವು ಹುಡುಕಿ ತೋರಿಸಬಹುದು. ಹಲವು ವರ್ಷಗಳ ಹಿಂದೆ ಸರ್ ಸತ್ಯೇಂದ್ರ ಪ್ರಸನ್ನ ಸಿಂಹ ಇವರು ಎ. ಕೌ. ಮೆಂಬರರಾಗಿರುವಾಗ ಪ್ರೆಸ ಏಕ್ಟಿನ ಬಿಲ್ಲನ್ನು ತಂದು ಅದರ ಸ್ತುತಿಸ್ತೋತ್ರಗಳನ್ನು ಕೊಂಡಾಡಿದವರೇ ಕಳೆದ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗಿದ್ದಾಗ ಸರಕಾರದವರು ಈ ಕಾಯಿದೆಯ ಅಸ್ತ್ರವನ್ನು ಉಪಸಂಹರಿಸಬೇಕೆಂಬ, ನಿರ್ಣಯವನ್ನು ಪಾಸು ಮಾಡಿದರು. ಕೌನ್ಸಿಲಿನಲ್ಲಿ ಇದೇ ಕಾಯಿದೆಗೆ ಸಮ್ಮತಿಯನ್ನು ಕೊಟ್ಟ ಮದ್ರಾಸದ ಬಹುಮಾನಪಟ್ಟ ಮುದೋಳಕರು ಈಗ ಅಲಹಾಬಾದಿನ 'ಲೀಡರ' ಪತ್ರಿಕೆಯಲ್ಲಿ ಈ ಕಾಯಿದೆಯನ್ನು ರದ್ದುಪಡಿಸಬೇಕೆಂದು ಸ್ಪಷ್ಟವಾಗಿ ಬರೆದಿರುವರು. ಸ್ವರ್ಗಸ್ಥರಾದ ಗೋಖಲೆಯವರಿಗೂ ಕೂಡ ಈ ಕಾಯಿದೆಯ ವಿಷಯದಲ್ಲಿ ಮತ್ತೆ ಪಶ್ಚಾತ್ತಾಪವಾದುದು ಪ್ರಸಿದ್ಧವಾಗಿದೆ. ಇದರ ತಾತ್ಪರ್ಯ, ಒಮ್ಮೆ ಅಂಗೀಕರಿಸಿದ ಉಪಾಯವು, ಮತವು ಅಥವಾ ಹಾದಿಯು ಕೊನೇತನಕ ಇರಬೇಕೆಂದು ಹೇಳುವುದು ಪರಿಸ್ಥಿಯ ಬದಲಾವಣೆಯ ಕಡೆಗೆ ಕಣ್ಣು ಮುಚ್ಚುವುದೇ ಸರಿ. ನಾವು ಮೇಲೆ ತೋರಿಸಿದ ಇಂಗ್ಲಂಡದ ಜನಾಂಗದ ಉದಾಹರಣೆಯಲ್ಲಿ ಮತ್ತು ಇಲ್ಲಿಯ ಶಾಂತಪಕ್ಷದ ಸನ್ಮಾನ್ಯಗೃಹಸ್ಥರ ಉದಾಹರಣೆಯಲ್ಲಿ ಒಂದೇ ಸೂತ್ರವು ಗ್ರಥಿತವಾಗಿದೆ. ಅದೇನೆಂದರೆ ಪರಿಸ್ಥಿಗೆ ಅನುಕೂಲವಾಗಿಯೂ ದೇಶಹಿತಕ್ಕೆ ಅವಿರೋಧವಾಗುವಂತೆಯೂ ಜನಾಂಗಕ್ಕಾಗಲಿ, ಸಂಸ್ಥೆಗಳಿಗಾಗಲಿ, ವ್ಯಕ್ತಿಗಳಿಗಾಗಲಿ ನಡೆದುಕೊಳ್ಳಬೇಕಾಗುತ್ತದೆ.

ಆದುದರಿಂದ ಮುನಿಸಿಪಾಲಿಟಿ ಕಮಿಟಿಯವರು ಮೊದಲೊಮ್ಮೆ ಕೊಟ್ಟ ಮತವನ್ನೆ ಇನ್ನೂ ಕಟ್ಟಿಕೊಳ್ಳಬೇಕೆಂಬ ಆಗ್ರಹವನ್ನು ಹಿಡಿದರೆ ಅದು ಬರೇ ಆಗ್ರಹವೇ ಸರಿ! ಪ್ರತಿನಿಧಿಗಳ ಸಂಖ್ಯೆಯಲ್ಲಿ ನ್ಯೂನಾಧಿಕ್ಯವನ್ನು ಮಾಡುವುದು ಅಗತ್ಯವಿಲ್ಲೆಂತ ಹೇಳುವುದರಲ್ಲಿ ಪರಿಸ್ಥಿತಿಯ ಕಾರಣವೇ ಬಲವತ್ತಾಗಿದೆ. ನಮ್ಮ ಮಂಗಳೂರ ಮುನ್ಸಿಪಾಲಿಟಿಯಲ್ಲಿ ಜನಸಂಖ್ಯೆ, ತೆರಿಗೆಯ ಉತ್ಪನ್ನ, ವೋಟರುಗಳ ನಿಜವಾದ ಪಾತ್ರತೆ ಈ ಮೂರು ಸಂಗತಿಗಳು ಹಿಂದುಗಳ ಕಡೆಗೆಯೇ ಇರುವುದರಿಂದ ಕೌನ್ಸಿಲಿನಲ್ಲಿ ಅವರ ಪ್ರತಿನಿಧಿಗಳೇ ಹೆಚ್ಚಿರಬೇಕಾದುದು ನ್ಯಾಯ್ಯವು. ಆದರೆ ಆಗಲಿಕ್ಕಿದ್ದ ವ್ಯವಸ್ಥೆಯಂತೆ ಹಿಂದು ಪ್ರತಿನಿಧಿಗಳು ಕಡಿಮೆಯಾಗುವ ಸಂಭವವಿದೆ. ಪ್ರತಿನಿಧಿಗಳನ್ನು ಜಾತಿ ಅಥವಾ ಮತದ ಪ್ರಕಾರ ಚುನಾಯಿಸುವ ಹಕ್ಕು ಸರಕಾರವು ಕೊಡಲಿಲ್ಲ. ಮತ್ತು ಅದನ್ನು ಜನರೂ ಕೇಳುವುದಿಲ್ಲ. ವಾರ್ಡುಗಳ ತತ್ವದಿಂದ ಪ್ರತಿನಿಧಿಗಳನ್ನು ಆರಿಸಿಕೊಡಬೇಕಾಗುತ್ತದೆ. ಹೀಗಿರುವಾಗ ಹಿಂದು ಪ್ರತಿನಿಧಿಗಳು, ತದಿತರ ಪ್ರತಿನಿಧಿಗಳು ಎಂಬದಾಗಿ ಹೊಸ ಭೇದಗಳನ್ನು ಹುಟ್ಟಿಸುವುದು ಯಾಕೆ? ಎಂತ ತಟಸ್ಥರಾದ ಗೃಹಸ್ಥರಿಗೆ ಒಂದುವೇಳೆ ಕಾಣಬಹುದು. ಆದರೆ ನಮ್ಮ ಮಂಗಳೂರ ಮುನ್ಸಿಪಾಲಿಟಿಯ ಸಾಧಾರಣವಾಗಿ ಸುರುವಿನಿಂದ ಎಲ್ಲ ಇತಿಹಾಸವನ್ನು ನೋಡಿದರೆ—ಮುನ್ಸಿಪಲ ರಿಕಾರ್ಡಿನಲ್ಲಿಯಾಗಲಿ ಅಥವಾ ಸರಕಾರಿ ನಿಯಮಗಳಲ್ಲಿಯಾಗಲಿ—ಈ ತರದ ಭೇದಗಳು ನಿರ್ದೇಶಿಸಲ್ಪಡದಿದ್ದರೂ ಇದ್ದ ಪ್ರತಿನಿಧಿಗಳ ಸಂಖ್ಯೆಯನ್ನು ಜಾತಿ ಪ್ರಕಾರ ವಿಂಗಡಿಸುವಾಗ ಯಾವ ಉತ್ತರವು ಬರುತ್ತದೆಂಬುದನ್ನು ಮುನ್ಸಿಪಾಲಿಟಿಯಲ್ಲಿ ಸ್ವಲ್ಪಮಟ್ಟಿಗಾದರೂ ಕೆಲಸ ಮಾಡುವ ಗೃಹಸ್ಥರಿಗೆ ಬೇರೆ ಹೇಳಬೇಕಾದ ಅಗತ್ಯವಿಲ್ಲ. ಮುನ್ಸಿಪಾಲಿಟಿಯು ಅವರಿಗೇ ಇವರಿಗೇ ಖಂತಿಲ್ಲ. ನಾಗರಿಕರೆಲ್ಲರಿಗೆ ಅದರ ಪ್ರಯೋಜನವೂ ಹಕ್ಕೂ ಇರಬೇಕಾದುದು. ಮತ್ತು ಹಾಗೆಯೇ ಇದೆ. ಆದರೂ ಜನಸಂಖ್ಯೆ, ತೆರಿಗೆ ವೋಟುಗಳು ಇವು, ಅರ್ಥಾತ್ ಯಾರ ಕಡೆಗೆ ಹೆಚ್ಚು ಇರುವವೋ ಅವರ ಪ್ರತಿನಿಧಿಗಳು ಹೆಚ್ಚಿರಬೇಕೆಂಬುದು ನೀತಿಗೂ, ನ್ಯಾಯಕ್ಕೂ ಸರಿಯಾದ ಮಾತಾಗಿದೆ. ಈ ಮಾತಿನಲ್ಲಿ ಯಾರ ಹೊಟ್ಟೆ ಕಿಚ್ಚೂ ಇಲ್ಲ, ಇಲ್ಲವೇ ಸ್ವಾರ್ಥವೂ ಇಲ್ಲ.

ಹೀಗಿರುವಾಗ ಮೊನ್ನೆಯ ಮೀಟಿಂಗಿನಲ್ಲಿ ಅಧ್ಯಕ್ಷರಾಗಿದ್ದ ಡಾ. ವರ್ಗೀಸರವರು ತಮಗಿರುವ ಹೆಚ್ಚಿನದೊಂದು ವೋಟಿನ ಹಕ್ಕನ್ನು ಪಟ್ಟಣದ ಹಿತದ ಕಡೆಗೆ ಉಪಯೋಗಿಸದೆ ಇನ್ನೊಂದು ಪಕ್ಷಕ್ಕೆ ಕೊಟ್ಟು ಆ ಹಕ್ಕನ್ನು ಸರಿಯಾಗಿ ಉಪಯೋಗಿಸಲಿಲ್ಲ. ಇದು ನಾಗರಿಕರ ಕಡೆಯಿಂದ ಹೇಳುವುದಾದರೆ ವಿಷಾದಕರವೇ ಸರಿ. ಇದಕ್ಕಾಗಿಯೇ ನಾವು ಕೇಳುವುದೇನೆಂದರೆ, ನಮ್ಮ ಮುನ್ಸಿಪಾಲಿಟಿಯ ರಥವು ಈಗ ಹ್ಯಾಗೆ ನಡೆಯುತ್ತಿದೆ?

ಇಂಡಿಯಾ ಸರಕಾರದ ನ್ಯಾಯ ನಿರ್ಮಾಣ ಸಭೆ.

(ವ್ಹಾಯಸರಾಯ ಪ್ರಭುಗಳ ಪ್ರಥಮ ಭಾಷಣ.)

ಅಧಿಕಾರಿಗಳು ತಮ್ಮ ಪದವಿಯಲ್ಲಿರುವಾಗ ಆಡಿದ ಮಾತುಗಳನ್ನು ಪ್ರಜಾಜನರು ಟೀಕಿಸಿ ಆ ಮಾತುಗಳಲ್ಲಿ ಎಂಥ ಸೂಚನೆಗಳಿರುವವು ಮತ್ತು ಈ ಸೂಚನೆಗಳಿಗೆ ಅನುಸಾರವಾಗಿ ಏನೇನು ಕಾರ್ಯ ವಿವರಗಳು ನಡೆಯಲು ಅನುಕೂಲತೆಗಳು ಮುಂದಕ್ಕೆ ತೋರಿಬರುವವೆಂತ ನಿರೀಕ್ಷಿಸಿಕೊಂಡು ಅಧಿಕಾರಸ್ಥರ ಮನೋಗತದ ಮಾನವನ್ನು ನಿರ್ಣಯಿಸುವ ಕುತೂಹಲವು ಪ್ರಜಾ ಜನರಿಗೆ ಸಾಮಾನ್ಯವಾಗಿದೆ. ಚೆಮ್ಸ್‌ಫರ್ಡ ಪ್ರಭುಗಳು ಹಿಂದೂಸ್ಥಾನದ ವ್ಹಾಯಸರಾಯ ಪದವಿಯನ್ನು ವಹಿಸಿಕೊಂಡಂದಿನಿಂದ ಕಳದ ಆರು ತಿಂಗಳ ಕಾಲದಲ್ಲಿ ಪ್ರಜೆಗಳಿಗೆ ಪ್ರಭುಗಳ ಮಾತುಗಳನ್ನು ಈ ರೀತಿ ಲಕ್ಷ್ಯಕ್ಕೆ ತಂದುಕೊಳ್ಳುವ ಸಂದರ್ಭವು ಪ್ರಥಮ ಸರ್ತಿಗೆ ಕಳೆದ ತಾ. ೫ರಲ್ಲಿ ಕೂಡಿದ ವರಿಷ್ಠ ನ್ಯಾಯನಿರ್ಮಾಣ ಸಭೆಯಲ್ಲಿ ದೊರಕಿರುವದು. ಚೆಮ್ಸಫರ್ಡ ಪ್ರಭುಗಳವರು ಈ ರಾಜ್ಯದಾಡಳಿತೆಯನ್ನು ಸ್ವೀಕರಿಸಿದನಂತರ ವರಿಷ್ಠ ನ್ಯಾಯನಿರ್ಮಾಣ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡದ್ದು ಇದೇ ಪ್ರಥಮ ಸಲವಾಗಿರುವದು. ಆದುದರಿಂದ ಪ್ರಭುಗಳವರ ಆಡಳಿತೆಯ ಪ್ರಾರಂಭದ ಪೀಠಿಕೆಯು ಹ್ಯಾಗೆ ಸೂಚಿಸೋಣಾಗಿದೆಂಬದನ್ನು ಅವರ ಭಾಷಣ ಮೂಲಕ ತಿಳಕೊಳ್ಳಬಹುದು.

ಲೋಕ ಮತವನ್ನು ಮನ್ನಿಸಿ ನಡೆಯುವದು, ಅಥವಾ ಇದು ಹೇಗಿದ್ದರೂ ತಮಗೆ ಯುಕ್ತ ಕಂಡದ್ದನ್ನು ಮಾಡುವದು, ಅಧಿಕಾರಿಗಳಲ್ಲಿ ಈ ಎರಡು ತರದ ಸಿದ್ಧಾಂತಗಳನ್ನು ಅನುಸರಿಸುವವರಿದ್ದಾರೆ. ಪ್ರಭುಗಳ ಭಾಷಣವನ್ನು ಯಾವ ರೀತಿಯಲ್ಲಿ ಪರಿಶೀಲಿಸಿ ನೋಡಿದರೂ ಇವರು ಎಂಥಾ ಸಿದ್ಧಾಂತವನ್ನು ಅನುಸರಿಸುವಂಥರೆಂಬುವದನ್ನು ಸ್ಪಷ್ಟವಾಗಿ ತಿಳಿಯುವದು ಕಷ್ಟಸಾಧ್ಯವಾಗಿದೆ. ಏಕಂದರೆ ಭಾಷಣದಲ್ಲಿ ಮುಂದಿನ ಮಾರ್ಗ ಸೂಚನೆಗಳಿಗೆ ಬದಲಾಗಿ ಗತಕಾಲದಲ್ಲಿ ನಡದ ಕಾರ್ಯ ವಿವರದ ವರದಿಯೇ ಬಹಳ ವಿಸ್ತಾರವಾಗಿರುವದು. ಇತ್ತಲಾಗೆ ಲೋಕಮತವು ಎದುರಿಗೆ ತಂದ ಹಲವು ವಿಷಯಗಳಿದ್ದರೂ ಪ್ರಭುಗಳ ಭಾಷಣದಲ್ಲಿ ಇವುಗಳ ವಿಷಯ ಸ್ಪಷ್ಟ ಅಥವಾ ಖಂಡಿತವಾದ ಅಭಿಪ್ರಾಯಗಳು ಕಂಡುಬಾರವು. ತಮ್ಮ ನ್ಯಾಯನಿರ್ಮಾಣ ಸಭೆಯಲ್ಲಿ ಸರಕಾರದ ಕಡೆಯಿಂದ ಮೆಂಬರರನ್ನು ಅಧಿಕ ಸಂಖ್ಯೆಯಲ್ಲಿ ನೇಮಿಸುವ ಪ್ರಶ್ನೆಯು ಯೋಚಿಸತಕ್ಕದ್ದಾಗಿದೆಂದು ಭಾಷಣದ ಪ್ರಾರಂಭದಲ್ಲಿದೆ. ಸರಕಾರದ ನೇಮಕದ ಮೂಲಕ ನ್ಯಾಯವಿಧಾಯಕ ಸಭೆಗೆ ಬರುವ ಮೆಂಬರರ ಸಂಖ್ಯೆಯನ್ನು ಕಡಿಮೆ ಮಾಡಿ ಪ್ರಜೆಗಳ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಚಳವಳವು ದೇಶದ ಎಲ್ಲಾ ಭಾಗಗಳಿಂದಲೂ ಕೇಳಿಸುತ್ತಿರುವಾಗ ಪ್ರಭುಗಳ ಈ ವಚನಗಳು ಪ್ರಜಾ ವರ್ಗದಲ್ಲಿ ರುಚಿಸವು. ಈ ಯುದ್ಧ ಸಂದರ್ಭದಲ್ಲಿ ಹಿಂದೂಸ್ಥಾನದ ಫೌಜಿನವರ ಉಪಕಾರಸ್ಮರಣೆಯನ್ನೂ ಈ ಫೌಜಿನವರಿಗೆ ಹಿಂದೂಸ್ಥಾನವು ಹ್ಯಾಗೆ ಕೃತಜ್ಞತಾ ಬದ್ಧವಾಗಿರುವದೆಂಬದನ್ನೂ ಮನಸ್ಸಿಗೆ ತಂದುಕೊಂಡು ವರಿಷ್ಠ ನ್ಯಾಯನಿರ್ಮಾಣ ಸಭೆಗೆ ಫೌಜಿಗೆ ಸಂಬಂಧಪಟ್ಟ ಸುಭೆದಾರ್ ಮೇಜರ್ ಮತ್ತು ಒನರೆರಿ ಕೆಪ್ಟನ್ ಅಜಾಖಾನ್ ಸರದಾರ ಬಹದ್ದೂರ್ ಐ. ಒ. ಎಮ್. ಎಂಬವರನ್ನು ನೇಮಿಸಿದೆನು. ಈ ನೇಮಕದ ಕಾರಣದಿಂದ ಇತರ ಸಮುದಾಯಗಳ ಪ್ರತಿನಿಧಿಗಳನ್ನು ಸಭೆಗೆ ನೇಮಿಸಲು ಅನುಕೂಲವಾಗಲಿಲ್ಲವೆಂತ ಹೇಳಿರುತ್ತಾರೆ. ಫೌಜಿನವರನ್ನು ಈ ರೀತಿ ಮನ್ನಿಸುವದಕ್ಕಿಂತ ಇವರಿಗೆ, ಹಿಂದೀ ಫೌಜಿನವರಿಗೆ ಆಂಗ್ಲ ಫೌಜಿನವರೊಡನೆ ಇರಬೇಕಾದ ಸಮಾನತ್ವದ ಪದವಿಗಳನ್ನು ಕೊಟ್ಟು ಮನ್ನಿಸುವದು ಯುಕ್ತವಾಗಿತ್ತು. ಅಜಾಖಾನ್ ಸರದಾರ ಬಹದ್ದೂರರನ್ನು ಈ ರೀತಿ ನೇಮಿಸಿದರ ಮೂಲಕ ಹಿಂದೀ ಫೌಜಿನವರಿಗೆ ಇಂಥಾ ಪದವಿಗಳನ್ನು ಆಗಿಂದಾಗ್ಯೆ ಕೇಳಿಕೊಳ್ಳಲು ಅನುಕೂಲವಾಗುವದೇನೋ?

ಪ್ರಭುಗಳ ಭಾಷಣದ ಉಳಿದ ಭಾಗದಲ್ಲಿ ಸಭೆಯು ಕಳೆದ ಅಧಿವೇಶನದಲ್ಲಿ ಮಂಜೂರಾದ ನಿರ್ಣಯಗಳ ಜ್ಯಾರಿಯನ್ನು ಸರಕಾರದವರು ಹೇಗೆ ಮಾಡಿರುತ್ತಾರೆಂಬ ವಿವರವಿದೆ. ನಿರಾಶ್ರಿತ ಜನರ ಉದ್ಧರಣೆಯ ಪರವಾದ ನಿರ್ಣಯದ ಕುರಿತು ಸಂಸ್ಥಾನಿಕ ಸರಕಾರಗಳೊಡನೆ ಪರ್ಯಾಲೋಚನೆಯು ನಡದಿರುವದು; ಯುನಾನಿ ಮತ್ತು

ಆಯುರ್ವೇದ ಶಾಸ್ತ್ರಗಳ ಶೋಧನೆಯನ್ನು ಶಾಸ್ತ್ರರೀತ್ಯಾ ನಡಿಸಬೇಕೆಂದೂ ಹಳ್ಳಿ ಪ್ರಾಂತ್ಯಗಳಲ್ಲಿ ಸಹ ಜನರ ಚಿಕಿತ್ಸೆಗೆ ಅನುಕೂಲವಾಗುವಂತೆ ದೇಶಭಾಷೆಗಳಲ್ಲಿ ವೈದ್ಯಕ ಶಿಕ್ಷಣವನ್ನು ಕೊಡಬೇಕೆಂದೂ ಮಂಜೂರಾದ ನಿರ್ಣಯಗಳ ಪ್ರಕಾರ ಯಾವ ಏರ್ಪಾಡುಗಳನ್ನು ಕೈಕೊಳ್ಳಬಹುದೆಂಬ ವಿಷಯದಲ್ಲಿ ಸಂಸ್ಥಾನಿಕ ಸರಕಾರಗಳ ಆಲೋಚನೆಗಳನ್ನು ಕೇಳುತ್ತಿರುವರು. ಮತ್ತೊಂದು ನಿರ್ಣಯದ ಪ್ರಕಾರ ಸರ್ ತೋಮಸ್ ಹೊಲ್ಲಂಡರವರ ಕೈಕೆಳಗೆ ನೇಮಿಸಲ್ಪಟ್ಟ ಇಂಡಸ್ಟ್ರಿಯಲ್ ಕಮಿಶನಿನ ವಿವರವು ವಾಚಕರಿಗೆ ಗೊತ್ತಿರುವದು. ಈ ನಿರ್ಣಯಗಳ ಪ್ರಸ್ತಾಪಗಳ ಹೊರತು ವಿದೇಶಸ್ಥ ಕೋಲೊನಿಗಳಿಗೆ ಈ ದೇಶದಿಂದ ಒದಗಿಸಲ್ಪಡುವ ಕೂಲಿಗಳ ಸರಬರಾಯಿಯ ವಿಷಯ ಕಾನೂನು ಮಸೂದೆ, ರೈಲ್ವೆ, ವ್ಯಾಪಾರ, ಕೃಷಿ, ವಿದ್ಯೆ ಈ ಇಲಾಖೆಗಳನ್ನು ಪ್ರಸ್ತಾಪಿಸಿ ಮಾತಾಡಿದ್ದರು. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಒಳಪಟ್ಟ ಸರಕಾರದ ಒಗ್ಯೆ ಕಟ್ಟೋಣಗಳ ದುರುಸ್ತಿ, ಕಟ್ಟೋಣಗಳನ್ನು ಕಟ್ಟಿಸುವದು, ಮಾರ್ಗಗಳನ್ನು ಹಾಕಿಸುವದು, ಈ ಕಾಮಗಾರಿಗಳನ್ನು ಇಲಾಖೆಯವರ ಮೂಲಕವೇ ಮಾಡಿಸುವದಕ್ಕಿಂತ ಖಾಸಗಿ ಜನರಿಂದ ಇವುಗಳನ್ನು ಮಾಡಿಸುವ ಹಂಚಿಕೆಯನ್ನು ಏರ್ಪಡಿಸುವ ಆಲೋಚನೆಯು ಸರಕಾರದಲ್ಲಿದೆ ಎಂಬುದಾಗಿ ಭಾಷಣದಲ್ಲಿ ಸೂಚಿಸೋಣಾಗಿರುವದು. ದೇಶದ ಜನರಿಗೆ ವೃತ್ತಿಗಳು ಸರಿಯಾಗಿ ಇಲ್ಲದಂಥಾ ಈ ಕಾಲದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ಏರ್ಪಾಡು ಬಹಳ ಉಪಯುಕ್ತವಾಗುವದು. ಯುದ್ಧದಲ್ಲಿ ಹಿಂದೂಸ್ಥಾನದ ಆಶ್ರಿತ ರಾಜರೂ ಇತರ ಪ್ರಜಾ ವರ್ಗಗಳೂ ಮಾಡಿದ ಸಹಾಯ ಮತ್ತು ಇಂಡಿಯಾ ಸರಕಾರದವರು ವಹಿಸಿಕೊಂಡಿರುವ ಜವಾಬ್ದಾರಿಯನ್ನು ಪ್ರಭುಗಳವರು ತಮ್ಮ ಭಾಷಣದಲ್ಲಿ ಸಮರ್ಪಕವಾಗಿ ವಿವರಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿರುತ್ತಾರೆ.

ಮಗರ್ ಪೀರ್.

ಕರಾಚಿಯಿಂದ ಸುಮಾರು ಹತ್ತು ಮೈಲುಗಳ ದೂರದಲ್ಲಿ ಮಗರ್ ಪೀರ್ ಎಂದು ಕರೆಯಲ್ಪಡುವ ಒಂದು ಸಣ್ಣ ಹಳ್ಳಿಯು ಇರುವುದು. ಸಣ್ಣ ಸಣ್ಣ ಗುಡ್ಡಗಳಿಂದ ಸುತ್ತಲ್ಪಟ್ಟು ಮಧ್ಯದಲ್ಲಿರುವ ಈ ತಗ್ಗು ಸ್ಥಳದಲ್ಲಿ ಕೆಲವು ಬಡ ಮುಸಲ್ಮಾನರ ಮನೆಗಳು ಇರುತ್ತವೆ. ಇಲ್ಲಿ ಒಂದು ಚಿಕ್ಕ ಮಸೀದಿಯೂ ಇದೆ. ಈ ಮಸೀದಿಯಿಂದ ಸುಮಾರು ಇಪ್ಪತ್ತು ಗಜ ದೂರದಲ್ಲಿ ಇಪ್ಪತ್ತು ಅಡಿ ಚಚ್ಚೌಕದ ಒಂದು ಸಣ್ಣ ಕೆರೆಯು ಇರುವುದು. ಇದು ಸುಮಾರು ಮೂರು ಅಡಿ ಆಳವಿರಬಹುದು. ಈ ಕೆರೆಯು ಮೂರು ಅಡಿ ಎತ್ತರದ ಒಂದು ಸಣ್ಣ ಮಣ್ಣಿನ ಗೋಡೆಯಿಂದ ಸುತ್ತಲ್ಪಟ್ಟಿದೆ. ಕೆರೆಯ ನೀರು ಕೆಸರಿನಿಂದ ಪಚ್ಚೆವರ್ಣದ್ದಾಗಿದೆ. ಈ ಕೆರೆಯಲ್ಲಿ ತುಂಬಾ ಸುಮಾರು ೬೦ ಮೊಸಳೆಗಳು ಇರುತ್ತವೆ. ಈ ಪೈಕಿ ಸುಮಾರು ಮೂವತ್ತು ಮೊಸಳೆಗಳು ೧೨-೧೫ ಅಡಿ ಉದ್ದವಾಗಿರುತ್ತವೆ. ಈ ಮೊಸಳೆಗಳು ಇಲ್ಲಿಯ ಮುಹಮ್ಮದೀಯರಿಂದ ಪೂಜ್ಯವೆಂದು ಭಾವಿಸಲ್ಪಡುವದರಿಂದ ಇಲ್ಲಿಗೆ ದಿನ ದಿನವೂ ಬಹು ಮಂದಿ ಯಾತ್ರಿಕರು ಬರುತ್ತಾರೆ. ಯಾತ್ರಿಕರಿಗೆ ಉಳಕೊಳ್ಳಲಿಕ್ಕೆ ಚಿಕ್ಕ ಮನೆಗಳೂ, ಛತ್ರಗಳೂ ಇರುತ್ತವೆ. ಈ ಯಾತ್ರಿಕರು ಮಾಂಸವನ್ನು ತಂದು ಈ ಮೊಸಳೆಗಳಿಗೆ ಆಹಾರವಾಗಿ ಕೊಡುವ ಪದ್ಧತಿಯೂ ಅದೆ. ಮೊಸಳೆಗಳು ಬಹಳ ಸಾಧುವಾಗಿ ತೋರುತ್ತವೆ. ಮಾಂಸವನ್ನು ಕೊಡುವ ಒಬ್ಬ ಫಕೀರನು ಕೆರೆಯೊಳಗೆ ಇಳಿದರೂ ಏನೂ ತೊಂದರೆ ಮಾಡುವದಿಲ್ಲ. ಆ ಫಕೀರನು ಕೆರೆಯೊಳಗೆ ಇಳಿದೊಡನೆ ಎಲ್ಲಾ ಮೊಸಳೆಗಳೂ ಆತನು ಇದ್ದಲ್ಲಿಗೆ, ಆತನು ಕೊಡುವ ಮಾಂಸವನ್ನು ಭಕ್ಷಿಸಲಿಕ್ಕೆ ಓಡಿ ಬಂದು ಬಾಯಿಯನ್ನು ಅಗಲವಾಗಿ ತೆರೆದು ಕೂತುಕೊಳ್ಳುತ್ತಿವೆ. ಈ ಮೊಸಳೆಗಳಿಗೆ ಕಲ್ಲು ಹೊಡಿಯಲಿಕ್ಕೂ ಅಥವಾ ಬೇರೆ ಯಾವ ರೀತಿಯಿಂದ ಬಾಧಿಸಲಿಕ್ಕೂ ಇಲ್ಲಿಯ ಮುಸಲ್ಮಾನರು ಬಿಡುವುದಿಲ್ಲ. ಈ ಮೊಸಳೆಗಳು ಇಲ್ಲಿ ಇರುವ ಕಾರಣ ಈ ಹಳ್ಳಿಗೆ ಮಗರ್ ಪೀರ್ ಎಂಬ ಹೆಸರು ಬಂದಿರುತ್ತದೆ. ಮೊಸಳೆಗೆ ಹಿಂದೀ ಭಾಷೆಯಲ್ಲಿ ಮಗರ್ ಅನ್ನುತ್ತಾರೆ.

ಇಲ್ಲಿಯೇ ಸುಮಾರು ಅರ್ಧ ಮೈಲು ದೂರದಲ್ಲಿ ಬೇರೆ ಐದು ಯಾ ಆರು ಕೆರೆಗಳು ಇರುತ್ತವೆ. ಕದ್ರಿ, ಬಪ್ಪೆ ಮೊದಲಾದ ಸ್ಥಳಗಳಲ್ಲಿ ಸ್ವಾಭಾವಿಕವಾಗಿ ಬಂಡೆಕಲ್ಲುಗಳ ಎಡೆಯಿಂದ ಯಾವಾಗಲೂ ಹರಿದು ಬರುವ ನೀರಿನಿಂದ ಚಿಕ್ಕ ಚಿಕ್ಕ ಕೆರೆಗಳು ಉತ್ಪನ್ನವಾದ ಹಾಗೆಯೇ, ಈ ಕೆರೆಗಳೂ ಉತ್ಪನ್ನವಾಗಿವೆ. ಆದರೆ ಇಲ್ಲಿಯ ನೀರು ಸ್ವಾಭಾವಿಕವಾಗಿ ಬಿಸಿಯಾಗಿರುತ್ತದೆ. ಈ ನೀರು ಯಾವತ್ತೂ ಬಿಸಿಯಾಗಿಯೇ ಇರುತ್ತದೆ. ಶೆಖೆಕಾಲವಾಗಲೀ, ಮಳೆಕಾಲವಾಗಲೀ, ಅಥವಾ ಛಳಿಕಾಲವಾಗಲೀ ಈ ಕೆರೆಗಳ ನೀರು ಏಕಪ್ರಕಾರ ಬಿಸಿಯಾಗಿಯೇ ಇದೆ. ಈ ಕೆರೆಗಳು ಬೇರೆ ಬೇರೆ ಎರಡು ಪಂಗಡಗಳಾಗಿವೆ. ಒಂದು ಪಂಗಡದಲ್ಲಿ ನೀರು ಸಾಧಾರಣ ೧೧೦ ಡಿಗ್ರಿಗಳಷ್ಟು ಬಿಸಿಯಾಗಿದೆ. ಮತ್ತೊಂದು ಪಂಗಡದಲ್ಲಿ ನೀರು ಸಾಧಾರಣ ೧೧೨ ಡಿಗ್ರಿಗಳಷ್ಟು ಬಿಸಿಯಾಗಿದೆ. ಇಲ್ಲಿ ಅನೇಕ ಜನರು ಸ್ನಾನಕ್ಕೋಸ್ಕರ ಬರುತ್ತಾರೆ. ಯೂರೋಪ್ ಖಂಡದಲ್ಲಿ ಕಾರ್ಲ್ಸಬಾಡ್, ಹುನ್ಯಾಡಿ, ಕೊಂಟ್ರೆಕ್ಸವಿಲ್ಲಿ, ವಿಶೀ, ವಿರ್ಪಲ್, ಮೊದಲಾದ ಮಿನರಲ್ ಸ್ಪಿಂಗ್ಸ್ ಇದ್ದಲ್ಲಿಗೆ ಅನಾರೋಗಿಗಳು ಹೋಗಿ ಆ ನೀರನ್ನು ಪಾನಮಾಡುವುದರಿಂದ ಆರೋಗ್ಯವನ್ನು ಹೊಂದುವ ಹಾಗೆಯೇ, ಇಲ್ಲಿಯ ನೀರನ್ನೂ ಪಾನಮಾಡಿ ಆರೋಗ್ಯವನ್ನು ಹೊಂದುವುದಕ್ಕೆ ಅನೇಕ ಅನಾರೋಗ್ಯಸ್ಥರು ಬಂದು ಈ ಕೆರೆಗಳ ಸಮೀಪದಲ್ಲಿ ವಾಸಿಸುವ ಪದ್ಧತಿಯೂ ಇದೆ. ಇಲ್ಲಿ ಒಂದು ಕುಷ್ಠರೋಗಿಗಳ ಆಸ್ಪತ್ರೆಯೂ ಇರುತ್ತದೆ. ಪಟ್ಟಣದಿಂದ ದೂರವಾಗಿರಬೇಕೆಂಬ ಸಂಬಂಧದಿಂದ ಈ ಆಸ್ಪತ್ರೆಯನ್ನು ಇಲ್ಲಿ ಕಟ್ಟಿರುತ್ತಾರೋ ಅಥವಾ ಈ ನೀರನ್ನು ಪಾನಮಾಡುವುದರಿಂದ ಕುಷ್ಠರೋಗಿಗಳಿಗೆ ಪ್ರಯೋಜನವಾಗುವುದರಿಂದಲೋ ತಿಳಿಯಲಿಲ್ಲ. ಆದರೆ ಬೇರೆ ಜನರು ಉಪಯೋಗಿಸುವ ಕೆರೆಗಳ ಸಮೀಪಕ್ಕೆ ಈ ಕುಷ್ಠರೋಗಿಗಳಿಗೆ ಹೋಗಗೊಡುವುದಿಲ್ಲ. ಇವರ ಪ್ರಯೋಜನಾರ್ಥವಾಗಿ ದೂರದಲ್ಲಿ ಬೇರೆಯೇ ಕೆರೆಗಳು ಇರುತ್ತವೆ. ಸಾಧಾರಣ ಜನರು ಉಪಯೋಗಿಸುವ ಕೆರೆಗಳಿಗೂ, ಕುಷ್ಠರೋಗಿಗಳ ಕೆರೆಗಳಿಗೂ ಏನೂ ಸಂಬಂಧವಿರುವುದಿಲ್ಲ.

ಇಲ್ಲಿಂದ ಸುಮಾರು ಐವತ್ತು ಮೈಲುಗಳ ದೂರದಲ್ಲಿ ಲಕ್ಕಿ ಎಂಬ ಸ್ಥಳದಲ್ಲಿಯೂ ಇದೇ ರೀತಿಯ ಬಿಸಿನೀರಿನ ಕೆರೆಗಳು ಇರುತ್ತವೆ. ಇಲ್ಲಿಯೂ ಅನೇಕ ಜನರು ಹೋಗಿ ವಾಸಿಸುತ್ತಾರೆ. ಇಲ್ಲಿ ಎಲ್ಲಾ ತರದ ಜನರಿಗೂ ಬೇಕಾದ ನಮೂನೆಯ ಮನೆಗಳೂ ಬಂಗ್ಲೆಗಳೂ ಇರುತ್ತವೆ. ಅನೇಕ ಯುರೋಪಿಯನರೂ ಇಲ್ಲಿಗೆ ಹೋಗಿ ಉಳಕೊಳ್ಳುತ್ತಾರೆ ಎಂತ ಇಲ್ಲಿಯ ಜನರು ಹೇಳುತ್ತಾರೆ.

ಹರದ್ವಾರದಲ್ಲಿಯೂ ಬಿಸಿನೀರಿನ ಕೊಳಗಳು ಇರುತ್ತವೆಯೆಂತ ಅನೇಕ ಯಾತ್ರಿಕರು ಹೇಳುತ್ತಾರೆ.

KARACHI,
3rd Sept, 16

N. R

ಪತ್ರವ್ಯವಹಾರ.

ಗೋರಕ್ಷಣೆ ಸಭೆ.

ಅಯ್ಯಾ ಪತ್ರಿಕಾಕರ್ತರೇ,

ನಾನು ಪ್ರವಾಸಿಯಾಗಿ ಮಂಗಳೂರಿಗೆ ಬಂದವನು ಕೆಲವು ತಿಂಗಳು ಇಲ್ಲಿಯೇ ಇರಬೇಕಾಗಿ ಬಂದಿತು. ನಾನು ಇಲ್ಲಿ ಇದ್ದಾಗಲೇ ಗೋರಕ್ಷಣೆಯ ಸಭೆಯೆಂಬುದೊಂದು, ಒಂದು ತಿಂಗಳ ಹಿಂದೆ ಕೆನರಾ ಹ್ಯಾಸ್ಕೂಲಿನ ಸಭಾ ಮಂದಿರದಲ್ಲಿ ಏರ್ಪಟ್ಟು, ಅಂದಿನ ಸಭೆಯಲ್ಲಿ ಗೋರಕ್ಷಣೆಯ ವಿಚಾರದ ಕುರಿತು ಅಂಶಗಳನ್ನು ಸೂಕ್ಷ್ಮವಾಗಿ ವಿಚಾರಿಸಲು ಒಂದು ಸಬ್ ಕಮಿಟಿಯನ್ನು ಆರಿಸಬೇಕೆಂದೂ, ಆ ಸಬ್ ಕಮಿಟಿಯವರು ಒಂದು ತಿಂಗಳೊಳಗೆ ಸಂಗತಿಗಳನ್ನೆಲ್ಲ ಯೋಚಿಸಿ ಎರಡನೆಯ ಸಮಾವೇಶದ ಮುಂದಿಡಬೇಕೆಂದೂ ನಿರ್ಧಾರವಾಯಿತು. ಮೊದಲನೆಯ ಸಮಾವೇಶದಲ್ಲಿ ತೋರಿಸಿದ ಉತ್ಸಾಹಕ್ಕೂ, ಎರಡನೆಯ ಸಮಾವೇಶದಲ್ಲಿ ಸಬ್ ಕಮಿಟಿಯವರು ತಮ್ಮ ಕಾರ್ಯಸಾಧನಗಳನ್ನು ಸಭಿಕರ ಎದುರಿಗೆ ಇಡಲು ಬಂದಾಗ, ಸಭಾಮಂದಿರದಲ್ಲಿ ಕುರ್ಚಿ ಬೆಂಚುಗಳಲ್ಲದೆ ವಿಶೇಷ ಸಭಿಕರಿಲ್ಲದುದಕ್ಕೂ ವಿಶೇಷ ಅಂತರವಿದ್ದು "ಆರಂಭೆ ಶೂರಾಃ ಖಲು ದಾಕ್ಷಿಣಾತ್ಯಾಃ" ಎಂಬ ಗಾದೆಗೆ ಬಲವಾದ ಉದಾಹರಣೆಯು ಇಲ್ಲಿಯೇ ದೊರೆತಂತಾಯಿತು.

ಇಷ್ಟೇ ಅಲ್ಲ; ದೇಶದ ಇತರ ಕಡೆಗಳಲ್ಲಿ ಧರ್ಮಲುಪ್ತರಾದವರು ಅನೇಕರಿದ್ದರೂ, ಈಗಿನ ನಾಗರಿಕರು ಸ್ವಲ್ಪ ಸ್ವಲ್ಪ ತಮ್ಮ ವಿದ್ಯಾಪ್ರಾಚುರ್ಯದಿಂದ, ನಿದ್ದೆಯಿಂದೆದ್ದು ಅರೆಗಣ್ಣಿನವರಂತೆ ಧರ್ಮದ ಕಡೆಗೆ ಲಕ್ಷ್ಯವಿಡುತ್ತಿದ್ದಾರೆ. ಪರಂತು, ಈ ಊರಿನವರಂತೆ ಧರ್ಮ ವಿಷಯದಲ್ಲಿ ಗಾಢನಿದ್ರೆಯಲ್ಲಿಲ್ಲ.

ಪ್ರಪಂಚದಲ್ಲಿ ಅರ್ಥ, ಕಾಮ, ಇವೆರಡು ಪುರುಷಾರ್ಥಗಳೆಯೋ ಅಥವಾ ಧರ್ಮಾದಿ ಪುರುಷಾರ್ಥ ಚತುಷ್ಟಯಗಳಿವೆಯೋ? ಎರಡೇ ಆಗಿದ್ದರೆ, ಈ ರೀತಿಯ ನಡತೆಯು ಪ್ರಶಸ್ತವೇ. ಆರಂಭದಲ್ಲಿ ನೋಡುವಾಗ, ಚತುರ್ವಿಧ ಪುರುಷಾರ್ಥಗಳ ಕಡೆಗೆ ಜನರ ಲಕ್ಷ್ಯವಿದೆಂದು ನನಗೆ ತೋರಿತು. ಆದರೆ ಒಂದು ತಿಂಗಳೊಳಗಾಗಿಯೇ ಇದ್ದ ಯಥಾರ್ಥ ಅಂಶವು ಹೊರಬಿದ್ದಂತೆ ತೋರುತ್ತದೆ. ಇವರು ಈ ಗೋರಕ್ಷಣಾ ಕಾರ್ಯವನ್ನು ಆರಂಭಿಸದೆ ಇದ್ದರೇನೇ ಚೆನ್ನಾಗಿತ್ತು. ಆರಂಭಿಸಿದ ಮೇಲೆ ಅದನ್ನು ಕೊನೆಗಾಣಿಸುವ ವಿಧಾನವನ್ನಾದರೂ ಕೈಕೊಳ್ಳಬೇಕಾಗಿತ್ತು. ಆರಂಭಿಸಿ, ಸಬ್ ಕಮಿಟಿಯವರನ್ನೇರ್ಪಡಿಸಿ, ಅವರು ಮಾಡಿದ ವ್ಯವಸ್ಥೆಯನ್ನೇ ಕಿವಿಕೊಟ್ಟು ಕೇಳು

ವವರೇ ದಿಕ್ಕಿಲ್ಲದಲ್ಲಿ [illegible]ನು ಗತಿ! ಸಭ್ ಕಮಿಟಿಯವರು ಏನು ಕೋರುತ್ತಾರೆ, ಮಹಾ ಜನರಿಂದ ಏನು ಸಹಾಯವನ್ನು ಕೇಳುತ್ತಾರೆ ಎಂಬುದನ್ನು ಕುರಿತು ಅಲ್ಲಿಂದ ಕುರ್ಚಿ ಬೆಂಚುಗಳ ಮುಂದೆ ಹೇಳಿಕೊಳ್ಳಬೇಕಲ್ಲದೆ ಮತ್ತೊಂದಿಲ್ಲ.

ಇನ್ನು ಮುಂದಿನ ಮೂರನೆಯ ಸಮಾವೇಶಕ್ಕಾದರೂ ಆರಂಭಿಸಿದ ಕಾರ್ಯವು ಮುಂದರಿಯುವಂತೆಯಾದರೂ ಮಾಡಿಯಾರೆಂಬ ನಿರೀಕ್ಷಣೆಯಲ್ಲಿರುವ,

ಮಂಗಳೂರು, 6–9–1916 — ಪ್ರವಾಸಿ.

ಚೊಕ್ಕಾಡಿ ನಾರಣಕಜೆ ರಸ್ತೆ.

ಈ ರಸ್ತೆಯು ಉಪ್ಪಿನಂಗಡಿ ತಾಲೂಕಿನ ಅಮರ ಪಡ್ನೂರು ಬೋರ್ಡು ಶಾಲೆಯ ಸಮೀಪ ಚೊಕ್ಕಾಡಿ ರಸ್ತೆಯಿಂದ ಪೂರ್ವಕ್ಕೆ ತಿರುಗಿ ಅಮರ ಮುಡ್ನೂರು ಗ್ರಾಮಕ್ಕಾಗಿ ಜಾಲಸೂರು ಸುಬ್ರಹ್ಮಣ್ಯ ಭಾಟಾರಸ್ತೆಯ ೯ನೇ ಮೈಲು ಕಲ್ಲಿನ ಸಮೀಪ ಸದರಿ ರಸ್ತೆಗೆ ಸೇರಿರುತ್ತದೆ. ಈ ರಸ್ತೆಯು ಅಮರ ಪಡ್ನೂರು, ನಲ್ಲೂರು ಕೆಂಪ್ರಜೆ, ದೇವಚಳ್ಳ, ಗುತ್ತಿಗಾರು ವಗೈರೆ ಗ್ರಾಮಸ್ಥರಿಗೂ, ಗವರ್ನಮೆಂಟು ಸರ್ಕೀಟು ಆಫೀಸರರಿಗೂ ಬಹಳ ಉಪಯೋಗವಿದ್ದು ಗಾಡಿಗಳು ಹೆಚ್ಚು ಚಲಾವಣೆಯಾಗುತ್ತಿರುವದಾದರೂ ಎದುರು ಬರುವ ಗಾಡಿಗಳು ಸಾರಾಗುವಷ್ಟು ರಸ್ತೆಯು ಅಗಲವಿಲ್ಲದ್ದರಿಂದಲೂ ಸಂಕಪಿತ್ತಿಲು, ಪೇರ್ಕಜೆ, ಕುಂಟುಕಾನ, ಈ ಮೂರು ಚಡಾವುಗಳನ್ನು ಈ ವರೇಗೆ ತಗ್ಗಿಸದೇ ಇರುವದರಿಂದ ಕೂಡ ಗಾಡಿ ಚಲಾವಣೆಗೆ ಬಹಳ ಅಭ್ಯಂತರವೂ, ಅಪಾಯವೂ ಸಂಭವಿಸುತ್ತಿರುವದರಿಂದ ಸಮ್ಮಂಧಪಟ್ಟ ಮೇಲಾಫೀಸರರವರು ಸದರಿ ಅಭ್ಯಂತರಗಳನ್ನು ದುರುಸ್ತಿ ಮಾಡಿಸಿ ಜನೋಪಕಾರಾರ್ಥವಾಗಿ ತೆರೆಯೋಣಾದ ರಸ್ತೆಯನ್ನು, ಉಪಕಾರಾರ್ಥವಾಗಿಯೇ ಪರಿಣಮಿಸುವಂತೆ ನಿಗಾ ಕೊಟ್ಟು ತಕ್ಕ ವ್ಯವಸ್ಥೆ ಮಾಡಿಸುವರಾಗಿ ನಂಬಿರುವೆನು. ಮಳೆಕಾಲವು ಸಮಾಪ್ತಿಯಾಗುತ್ತಾ ಬರುವ ಸಮಯವಾದ್ದರಿಂದ ಬೇಗನೇ ದುರುಸ್ತಿ ಮಾಡಿಸೋಣಾದರೆ ಜನಸಾಮಾನ್ಯರು ಚಾಲ್ತಿ ವರುಷದಲ್ಲಿಯೇ ಸದರಿ ರಸ್ತೆಯ ದುರಸ್ತಿಯ ಫಲವನ್ನು ಅನುಭವಿಸಿದಂತಾಗುತ್ತಿತ್ತು. ಚಾಲ್ತಿ ವರುಷದಲ್ಲಿ ದುರಸ್ತಿಯಾಗದಿದ್ದರೆ ಗತವರುಷಗಳ ಯಾತನಾ ಕ್ರಮವನ್ನೇ (ಎಂದರೆ ಎದ್ದೋ, ಬಿದ್ದೋ, ಮುರಿದೋ) ಅನುಸರಿಸಬೇಕಾಯಿತು.

ಬಡ ಗಾಡಿಗಾರ.

ಉಪ್ಪೂ ಬೇಸಾಯಗಾರರೂ.

ಅಯ್ಯಾ,

ಉಪ್ಪಿನ ಕ್ರಯವು ದಿನ ಹೋದ ಹಾಗೆ ಏರುತ್ತಾ ಬರುವುದಾದ ಕಾರಣ ನಮ್ಮ ಕನ್ನಡಾ ಜಿಲ್ಲೆಯ ಕೃಷಿಗಾರರು ತಮ್ಮ ಭತ್ತದ ಗದ್ದೆಗಳಿಗೂ ತೆಂಗಿನ ತೋಟಗಳ ಮರಗಳಿಗೂ ಉಪ್ಪು ಉಪಯೋಗಿಸುವದೇ ಇಲ್ಲ. ಮಾತ್ರವಲ್ಲ; ತಮ್ಮ ಹಟ್ಟಿಗಳಲ್ಲಿರುವ ದನಕರುಗಳಿಗೂ ಎತ್ತುಕೋಣಗಳಿಗೂ ಹಾಕುವುದೇ ಇಲ್ಲ. ಈ ಸಂಬಂಧ ಗದ್ದೆಗಳಿಂದ ಸಿಕ್ಕುವ ಭತ್ತವೂ ತೆಂಗು ತೋಟಗಳ ಮುನಾಫೆಯೂ ಕಡಿಮೆಯಾಗುತ್ತಾ ಬರುತ್ತದೆ. ಮತ್ತು ಹಟ್ಟಿಯಲ್ಲಿರುವ ಜಾನುವಾರಗಳ ದೇಹಸ್ಥಿತಿಯು ಹೀನಗತಿ ಹೊಂದುತ್ತದೆ. ಇದನ್ನೆಲ್ಲಾ ಆಲೋಚನೆಗೆ ತೆಗದುಕೊಂಡು ಮುಂಬಾಯಿ ಇಲಾಖಾ ಸರಕಾರದವರು ತಮ್ಮ ಸಂಸ್ಥಾನದ ಕರಾವಳಿ ಜಿಲ್ಲೆಗಳಲ್ಲಿ ಭತ್ತದ ಗದ್ದೆಗಳ ಮತ್ತು ತೆಂಗು, ಮಾವು, ಹಲಸು ಮುಂತಾದ ತೋಟದ ಮರಗಳ ಕೂಡಾ ಉಪಯೋಗದ ಬಗ್ಗೆ ಉಪ್ಪನ್ನು ಜನರ ಉಪಯೋಗಕ್ಕೆ ನಾಲಾಯಖ್ ಪಡಿಸಿ ಅದನ್ನು ಬಹು ಕಮ್ಮಿ ದರದಲ್ಲಿ ಕೊಡುತ್ತಾರಾದದರಿಂದ ನಮ್ಮ ಮದರಾಸು ಸರಕಾರದವರು ಕೂಡಾ ಈ ಕುರಿತು ತಾತ್ಪರ್ಯಕೊಟ್ಟು ನಮ್ಮ ಜಿಲ್ಲೆಯ ಗದ್ದೆ ಬೇಸಾಯಗಾರರಿಗೂ ತೆಂಗು ವಗೈರೆ ಮರಗಳ ತೋಟಗಾರರಿಗೂ ಉಪ್ಪನ್ನು ಬಹು ಕಮ್ಮಿ ದರದಲ್ಲಿ ಸಾಗುವಳಿ ಉಪಯೋಗದ ಬಗ್ಗೆ ಕೊಡುವ ವಿಲೆವಾರಿ ಮಾಡ್ಲುವಂತೆ ನಮ್ಮ ಜಿಲ್ಲೆಯ ರೈತರೆಲ್ಲಾ ಮದರಾಸಿಗೆ ಮೆಹರಬಾನ್ ಜಿಲ್ಲಾ ಕಲೆಕ್ಟರ ಸಾಹೇಬರ ಮುಖಾಂತರ ಹೇಳಿಕೊಂಡಲ್ಲಿ ಕಮ್ಮಿ ಕ್ರಯದಲ್ಲಿ ಉಪ್ಪು ಸಿಗಲಿಕ್ಕೆ ಏನೂ ಅಡ್ಡಿ ಇಲ್ಲವೆಂತ ತೋರುತ್ತದೆ. ಈ ಕುರಿತು ನಮ್ಮ ಊರಿನ ಕೃಷಿಕರು ಮುಂದರಿಸಬಹುದಾಗಿ ಕೋರುತ್ತೇನೆ. ಉಪ್ಪಿನ ಉಪಯೋಗದಿಂದ ಪೈರುಗಳ ಮತ್ತು ಜಾನುವಾರುಗಳ ಜಾಡ್ಯನಿವಾರಣೆಯಾದೀತು.

ಬಿಜಾಪುರ. ತಾ. 3–9–16. — ಎಲ್ಲೂರ್ ಸುಬ್ಬರಾವ್.

ನಡಿಸಾಲು ಗ್ರಾಮದ ಬೆಂಚು ಕೋರ್ಟು.

ಅಯ್ಯಾ,

ನಡಿಸಾಲು ಗ್ರಾಮವು ಬಡು, ತೆಂಕ, ಪಾದೆಬೆಟ್ಟು, ಪಲ್ಲಾರು, ನಂದಿಕೂರು, ಎಲ್ಲೂರು ಈ ೬ ಗ್ರಾಮಗಳಿಗೆ ಮಧ್ಯಸ್ಥಳವಾಗಿದ್ದು ಸದರಿ ಗ್ರಾಮದ ಹೆಚ್ಚಿನ ಸಾಹುಕಾರರಿಗೆ ಲೇವಾದೇವಿಗಳು ಈ ಗ್ರಾಮಗಳಲ್ಲಿ ಇರುತ್ತಾ ಬಡಾ, ನಂದಿಕೂರು, ಎಲ್ಲೂರು ಗ್ರಾಮಗಳನ್ನು ಇಲ್ಲಿಯ ಬೆಂಚು ಕೋರ್ಟಿಗೆ ಸೇರಿಸದೆ ಇರಲು ಕಾರಣವೇನು? ಸೇರಿಸಿದ್ದಾದರೆ ಹೆಚ್ಚಿನ ಅನುಕೂಲ ಜನರಿಗೆ ಆಗುವಂತಿದೆ. ಇದೂ ವಿನಹ ನಡಿಸಾಲು ಗ್ರಾಮದಲ್ಲಿಯೇ ಒಂದು ಕಟ್ಟೋಣವನ್ನು ಸರಕಾರಿ ಸ್ಥಳದಲ್ಲಿ ಈ ಕೋರ್ಟಿನ ಕೆಲಸದ ಉದ್ದೇಶ ಕಟ್ಟಿಸುವ ಆಲೋಚನೆ ಇದೆಯಾಗಿ ಕೇಳುತ್ತೇವೆ. ಸರ್ವೆ ನಂಬ್ರ $\frac{57}{1A}$, 47, $\frac{167}{1}$ ರಲ್ಲು ಯೋಗ್ಯತರವಾದ ಸರಕಾರಿ ಸ್ಥಳವಿರುತ್ತಾ, ಬಡಜನರ ಮನೆಗಳಿರುವ, ಮಸೀದಿ ಸಮೀಪವಿರುವ, ದಾರಿಗರ ದೃಷ್ಟಿಗೆ ಬಾರದ, ಅಯೋಗ್ಯ ಸ್ಥಳವಾದ ಸರ್ವೆ ನಂಬ್ರ ೪೭ನೇ ಸ್ಥಳವನ್ನು ಕಟ್ಟೋಣ ಕಟ್ಟಿಸಲು ಆರಿಸಿದ್ದು ತಾಲೂಕು ತಹಸಿಲ್‌ದಾರರವರ ಯಾವ ನ್ಯಾಯ? ಉಡ್ಪಿಗೆ ಹೋಗುವ ಕರಾವಳಿ ರಸ್ತೆಯ ೬೧-೬ ಮೈಲುಕಲ್ಲಿನ ಸಮೀಪ, ರಸ್ತೆಯ ಮಧ್ಯಸ್ಥಳದಿಂದ ೨೨ ಗಜ ಹೊರ ಬಿಟ್ಟು ಇರುವ, ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರ ಹೆಸರಲ್ಲಿ ಬೇರೇಜು ಆಗಿರುವ ಸರ್ವೆ ನಂಬ್ರ $\frac{57}{1A}$ ಸ್ಥಳವು ಕಟ್ಟೋಣಕ್ಕೆ ಅತೀ ಉತ್ತಮ ಸ್ಥಳವೆಂಬದು ನಿಸ್ಸಂದೇಹದ ಮಾತಾಗಿದೆ. ಇನ್ನಾದರೂ ಈ ವಿಷಯ ಮಾನ್ಯ ಕಲೆಕ್ಟರವರು ಸ್ಥಳಗಳನ್ನು ಸ್ವತಹಾ ಸಂದರ್ಶಿಸಿ ಯೋಗ್ಯ ಸ್ಥಳವನ್ನು ಆರಿಸಿ ಕಟ್ಟೋಣ ಕಟ್ಟಿಸುವ ಆಲೋಚನೆ ಮಾಡಿದ್ದಲ್ಲಿ ತುಂಬಾ ಉಪಕಾರವಾಗುವದು. ಇತಿ,

ನಡಿಸಾಲು ಗ್ರಾಮಸ್ಥರಲ್ಲೊಬ್ಬ.

ಚಿಲ್ಡ್ರನ್ಸ್ ಕೋ-ಒಪರೇಟಿವ್ ಸೊಸೈಟಿ ಕಿನ್ನಿಕಂಬಳ.

ಸನ್ ೧೯೧೪ನೇ ಇಸವಿಯ ಆರಂಭದಲ್ಲಿ ಕಿನ್ನಿಕಂಬಳ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳಿಗೆ ಪರಸ್ಪರ ಸಹಾಯಕ ಸಂಘದ ಉಪಕಾರಗಳನ್ನು ಪ್ರತ್ಯಕ್ಷವಾಗಿ ತೋರಿಸುವಗೋಸ್ಕರ ಮೇಲಿನ ದರ್ಜೆಗಳಲ್ಲಿ ಕಲಿಯುವ ಮಕ್ಕಳಲ್ಲಿ ಮನಸ್ಸುಳ್ಳವರಿಂದ ಒಂದೊಂದಾಣೆಯಂತೆ ವಂತಿಗೆ ವಸೂಲು ಮಾಡಿ ಆರಂಭಿಸಿದ ಪರಸ್ಪರ ಸಹಾಯಕ ಸಂಘವು ೧೯೧೬ನೇ ಇಸವಿಯಲ್ಲಿ ಹೊಸ ರೂಪವನ್ನು ಕೈಕೊಂಡಿತು. ಉಪಾಧ್ಯಾಯರು ಸಂಘದ ಸರ್ವ ಆಡಳಿತೆಯನ್ನು ಶಾಲಾ ಮಕ್ಕಳ ಸುಪರ್ದಿಗೆ ಒಪ್ಪಿಸಿಬಿಟ್ಟರು. ಅಂದಿನಿಂದ ಸಂಘದ ಯಾವತ್ತು ಕೆಲಸಗಳು, ಆ ಸಂಘಕ್ಕೆ ಸೇರಿದ ಮಕ್ಕಳ ಕೂಟದಲ್ಲಿ ನಿರ್ಣಯವಾದ ಕ್ರಮಗಳಿಗನುಸಾರವಾಗಿ, ಅವರಿಂದ ನೇಮಿಸಲ್ಪಟ್ಟ ಉದ್ಯೋಗಸ್ಥರಿಂದ ನಡಿಸಲ್ಪಡುತ್ತವೆ. ಮಕ್ಕಳಲ್ಲಿ ಮನಸುಳ್ಳವರು ಪಾಲಿಗೆ ನಾಲ್ಕಾಣೆಯಂತೆ ವಂತಿಗೆ ಹಾಕಿ ಕೂಡಿಸಿದ ಹಣದಿಂದ ತಮಗುಪಯುಕ್ತವಾದ ಸ್ಟೇಶನರಿ ಸಾಮಾನುಗಳನ್ನು ತಂದಿಟ್ಟುಕೊಂಡು ಮೆಂಬರರಿಗೆ ರಿಯಾಯತಿಯ ದರದಲ್ಲಿಯೂ ಇತರರಿಗೆ ಬಾಜಾರು ದರಲ್ಲಿಯೂ ಮಾರುವ ಹಂಚಿಕೆ ಮಾಡಿಕೊಂಡದ್ದರಿಂದ ಮನಸ್ಸುಳ್ಳವರಿಗೆ ಒಳ್ಳೇ ಸಾಮಾನು ಅಗ್ಗ ಕ್ರಯದಲ್ಲಿ ಸಿಕ್ಕುವದಲ್ಲದೆ ಸಂಘಕ್ಕೆ ಮೆಂಬರರು ಹೆಚ್ಚಾಗುವರೆ ಅನುಕೂಲವೂ ಆಗಿದೆ. ಇಷ್ಟುಮಾತ್ರವಲ್ಲ; ಇದೇ ಇಸವಿ ಅಗೋಸ್ತು ತಾ. ೬೧ಕ್ಕೆ ಅಂತ್ಯವಾದ ವರ್ಷದಲ್ಲಿ ಉಳಿದ ಲಾಭದಲ್ಲಿ ಸೇಕಡಾ ೬|ರಂತೆ ಡಿವಿಡೆಂಟ್ ಹಂಚೋಣಾಯಿತು. ಸಂಘದ ಮೂಲಧನವು ಈಗ ಸುಮಾರು ೭೫ ರೂಪಾಯಿಯಾಗಿದೆಯೆಂದು ಕೇಳುತ್ತೇವೆ.

ಆಯಾ ಮೆಂಬರನು ಕೊಟ್ಟ ಹಣವು ಅವನು ಶಾಲೆಯನ್ನು ಬಿಟ್ಟುಹೋಗುವ ಕಾಲದಲ್ಲಿ ಅವನಿಗೆ ಹಿಂದೆ ಕೊಡಲ್ಪಡುವದು. ಈ ನಿಯಮಗಳಿಂದ ನಮ್ಮ ನೆರೆಯ ಇಬ್ಬರು ಹುಡುಗರು ಗೇರುಬೀಜಗಳನ್ನು ಹೆಕ್ಕಿ ಮಾರಿ ಸಂಪಾದಿಸಿದ ನಾಲ್ಕುನಾಲ್ಕಾಣೆಗಳನ್ನು ಈ ಸಂಘಕ್ಕೆ ಒಪ್ಪಿಸಿ ಅದರ ಮೆಂಬರರಾಗಿದ್ದಾರೆ ಎಂಬ ಸಂಗತಿಯನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಮಾಧವ.

ಯೂರೋಪದ ಮಹಾ ಯುದ್ಧ.

ರುಮೇನಿಯವು ಮಿತ್ರರಾಷ್ಟ್ರಗಳ ಪಕ್ಷ ಸೇರಿದ್ದರಿಂದ ಮಿತ್ರರಾಷ್ಟ್ರದವರಿಗೆ ಯುದ್ಧಸಾಧನೆಗೆ ಹೆಚ್ಚಿನ ಅನುಕೂಲವಾದಂತಾಗಿ ಬಾಲ್ಕಾನ್ ಮತ್ತು ಪೂರ್ವ ರಣರಂಗಗಳನ್ನು ಒಂದೇ ಸಂಕೋಲಿಯಿಂದ ಕಟ್ಟಿದಂತೆ ಆಯಿತು. ಇದರಿಂದ ಈ ಘೋರ ಯುದ್ಧದ ಅವಧಿಯು ಬಹುಶ್ಯಾ ಇನ್ನು ಹೆಚ್ಚು ಸಮಯವಿರದು ಎಂತ ಹೇಳಬಹುದು. ಮಿತ್ರರಾಷ್ಟ್ರಗಳ ಸೇನಿಕರ ಸಂಖ್ಯೆಯು ಈ ಮೊದಲೇ ಶತ್ರುರಾಷ್ಟ್ರಗಳ ಸೇನಾ ಬಲಕ್ಕಿಂತ ಹೆಚ್ಚಿನದಾಗಿತ್ತು. ಅದರಲ್ಲಿಯೂ ಈಗತಾನೇ ರುಮೇನಿಯವು ಈ ಪಕ್ಷ ಸೇರಿದ್ದರಿಂದ ಮಿತ್ರರಾಷ್ಟ್ರಗಳ ಸೇನಿಕರ ಸಂಖ್ಯೆಯು ಮತ್ತೂ ಹೆಚ್ಚಿದಂತಾಯಿತು. ಸಂಖ್ಯೆ ಹೆಚ್ಚಿದ ಮಾತ್ರದಿಂದ ಏನು ಪ್ರಯೋಜನವೆಂದು ಯಾರಾದರೂ ಹೇಳಬಹುದು. ಆದರೆ ಚೆನ್ನಾಗಿ ಶರ್ಬೇತು ಹೊಂದಿ, ತಕ್ಕ ಆಯುಧ ಸಾಮಾಗ್ರಿಗಳಿರುವ, ಈ ವರೆಗೆ ಸುಮ್ಮನೆ ಕುಳಿತಿದ್ದ ರುಮೇನಿಯ ಸೇನೆಯು ಶತ್ರುಗಳ ಸೇನೆಯ ಬಲಗುಂದಿರುವ ಈ ಕಾಲದಲ್ಲಿ ಮಿತ್ರರಾಷ್ಟ್ರಗಳವರಿಗೆ ಸೇರಿದ್ದರಿಂದ ಪ್ರಯೋಜನ ಕಂಡುಬರುವದರಲ್ಲಿ ಏನೇನೂ ಅನುಮಾನವಿರುವದಿಲ್ಲ. ಇನ್ನು ರುಮೇನಿಯ ದೇಶವನ್ನೇ ನೋಡುವದಾದರೆ ಇದು ಯುದ್ಧಸಾಧನೆಗೆ ತಕ್ಕುದಾದ ಪ್ರದೇಶವಾಗಿದೆ. ರುಮೇನಿಯವು ಟ್ರಾನ್ಸಿಲ್‌ವೇನಿಯಾ ಆಲ್ಪ್ ಪರ್ವತಗಳನ್ನು ದಾಟಿದಾಕ್ಷಣ ಹಂಗೇರಿಯದ ಮೈದಾನವು ರುಮೇನಿಯನರಿಗೆ ತೆರೆದು ಕೊಟ್ಟಂತಾಗುವದು. ಹೀಗೆ ಹಂಗೇರಿಯಕ್ಕೆ ರುಮೇನಿಯರು ನುಗ್ಗಿದಾಕ್ಷಣ ಈ ಮಹಾ ಯುದ್ಧವನ್ನು ಕಡೆಗಣ್ಣಿನಿಂದ ಕಾಯುತ್ತಿರುವ ಹಂಗೇರಿಯನರು ಆಸ್ಟ್ರಿಯಾ-ಜರ್ಮನಿಯನರಿಗೆ ಮಲಿತು ಬೀಳುವದೇನೋ ನಿಜ. ಇನ್ನೊಂದು ಕಡೆಯಲ್ಲಿ ನೋಡುವದಾದರೆ ರುಮೇನಿಯವು ಈ ಮಿತ್ರರಾಷ್ಟ್ರಗಳವರಿಗೆ ಸೇರಿದ್ದರಿಂದ ರುಶ್ಯಾ ರಣರಂಗ ಮತ್ತು ಬಾಲ್ಕಾನ್ ರಣರಂಗಗಳು ಒಂದಕ್ಕೊಂದು ಕೂಡಿದಂತಾಗಿ ರುಶ್ಯನರ ಎಡಬಲದಲ್ಲಿರುವ ಸೇನೆಯು ಭದ್ರವಾಯಿತು. ರುಶ್ಯನರ ಈ ಕಡೆಯ ಸೇನೆಯು ಈ ವರೆಗೆ ರುಮಾನೋ—ಬಕೋವಿನ ಸರಹದ್ದಿನಲ್ಲಿತ್ತು. ಆದರೆ ಈಗ ಈ ಪ್ರಾಂತ್ಯದಲ್ಲಿರುವ ಪರ್ವತಾವಳಿಯಿಂದ ಸರ್ವಿಯಾ, ಹಂಗೇರಿಯಾ ಮತ್ತು ರುಮೇನಿಯ ಸರಹದ್ದಿಗೆ ವಿಸ್ತರಿಸಬಹುದಾಯಿತು. ಇತ್ತಕಡೆ ರುಮೇನಿಯದವರು ಬಕೋವಿನದಿಂದ ಒರ್ಸ್ವಾವದವರೆಗೆ ವಿಸ್ತರಿಸಿಕೊಂಡು ಬಹುಬೇಗನೇ ಮುಂದರಿದು ಒರ್ಸ್ವೋವವನ್ನು ಸ್ವಾಧೀನಮಾಡಿಕೊಂಡರೆಂಬ ವಾರ್ತೆ ಬಂದದೆ. ಅತ್ತಕಡೆ ಜರ್ಮನರೂ ಬಲ್ಗೇರಿಯನರೂ ಟ್ರಾನ್ಸಿಲ್‌ವೇನಿಯಾದ ಉದ್ದವಾದ ಸರಹದ್ದನ್ನು ಕಾಪಾಡಿಕೊಳ್ಳಲಿಕ್ಕೆ ಬೇಕಾದಷ್ಟು ಸೇನೆಯನ್ನು ತಂದೊಡ್ಡಲು ಅಶಕ್ತರಾಗಿದ್ದಾರೆ. ಅದಲ್ಲದೆ ಈಗ ಜರ್ಮನರೂ ಬಲ್ಗೇರಿಯನರೂ ಇರುವ ಸ್ಥಳವು ನುಗ್ಗಿಹೋಗಿ ಕದನಮಾಡಲಿಕ್ಕೆ ಅನುಕೂಲವಾಗಿಲ್ಲ. ಅವರು ಹಲ್ಲೆಮಾಡಲು ಆರಿಸಿಕೊಂಡ ಸ್ಥಳವು ೨ನೇ ಬಾಲ್ಕಾನ್ ಯುದ್ಧವಾದನಂತರ ರುಮೇನಿಯದವರು ಬಲ್ಗೇರಿಯನರಿಗೆ ಬಿಟ್ಟುಕೊಟ್ಟ ಡೊಬುರುಡ್ಜ ಎಂಬದಾಗಿದೆ. ಇದು ಯುದ್ಧಸಾಧನೆಗೆ ಹೆಚ್ಚಿನ ಪ್ರಯೋಜನವಿಲ್ಲದ ಸ್ಥಳವಾಗಿದೆ. ರುಮೇನಿಯನರು ಎಂದಿನಂತೆ ಮುಂದರಿದರೆ ಬೇಗನೇ ಕಾರ್ಪಥೇನಿಯದಲ್ಲಿ ಇರುವ ರುಶ್ಯರೊಡನೆಯೂ ಸಲೋನಿಕದಲ್ಲಿರುವ ಮಿತ್ರರೊಡನೆಯೂ ಆಲ್ಬಾನಿಯದಲ್ಲಿರುವ ಇಟಲಿಯನರೊಡನೆಯೂ ಸೇರಿಕೊಳ್ಳಲಿಕ್ಕೆ ಸಾಧ್ಯವಾಗುವದು. ಹೀಗಾದಲ್ಲಿ ಶತ್ರುಗಳು ಬಲೆಯಲ್ಲಿ ಸಿಕ್ಕಿಕೊಂಡಂತಾಗುವದಲ್ಲದೆ ಈ ಬಲೆಯಿಂದ ತಪ್ಪಿಸಿಕೊಳ್ಳಲು ಅವರಿಗೆ ಅಸಾಧ್ಯವಾಗಿ ಯುದ್ಧವು ಬೇಗನೇ ಮುಗಿಯುವ ಸಂಭವವಾಗುವದು.

ಪಶ್ಚಿಮ ರಣರಂಗ.

ಈ ರಣರಂಗವನ್ನು ನೋಡುವದಾದರೆ ಇಲ್ಲಿಯೂ ಮಿತ್ರರಾಷ್ಟ್ರಗಳವರು ಪ್ರತಿ ಸ್ಥಳದಲ್ಲಿ ಮುಂದರಿಯುತ್ತಲಿದ್ದಾರೆ. ಫಾಫ್ ಮೊಂಟಫಾರ್ಮ ಮತ್ತು ಲಿಯೂಜ್ ಅರಣ್ಯ ಮತ್ತು ಅಲ್ಲಿಂದ ಗಿನ್ನಿಯ ಅಜುಬಾಜನಲ್ಲಿ ಬ್ರಿಟಿಷರು ಎಲ್ಲಾ ಸ್ಥಳಗಳನ್ನು ಗೆದ್ದುಕೊಂಡು ಕೆಲವು ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಲುಜೆ ಅರಣ್ಯದ ಎಲ್ಲಾ ಭಾಗವು ಬ್ರಿಟಿಷರಿಗೆ ಸ್ವಾಧೀನವಾಗಿದೆ.

ಸೊಮ್ಮೆಯಲ್ಲಿ ಫ್ರೆಂಚರು ಮುಂದರಿಯುತ್ತಲಿದ್ದಾರೆ. ಸೊಮ್ಮೆ ನದಿಯ ಉತ್ತರದ ಮತ್ತು ದಕ್ಷಿಣದಲ್ಲಿರುವ ಸೇನೆಗೆ ಫ್ರೆಂಚರ ಮುಖ್ಯ ಸೇನೆಯು ಹೋಗಿ ಕೂಡಿರುತ್ತದೆ. ಸಪ್ಟಂಬರ ತಾ. ೩ರಿಂದ ಇಲ್ಲಿ ಫ್ರೆಂಚರು ೩೦ ಫಿರಂಗಿಗಳನ್ನೂ, ೬೬೫೦ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ಫ್ಲುರೆಯಲ್ಲಿ ಮೇಲ್ಹಾಯ್ದ ಶತ್ರುಗಳು ಹಿಮ್ಮೆಟ್ಟಿರುವರು.

ಗಿಂಚಿಯಲ್ಲಿ ಶತ್ರುಗಳಿಗೂ ಬ್ರಿಟಿಷರಿಗೂ ಕಠಿಣ ಕಾಳಗವು ನಡೆದಿರುತ್ತದೆ. ಕೊರ್ಸ್ಲೆಟ್ಟೆಯಿಂದ ಬ್ರಿಟಿಷರ ಮೇಲ್ಹಾಯುವರೆ ಬರುತ್ತಿದ್ದ ಶತ್ರುಗಳ ಸೇನಿಕರನ್ನು ಬ್ರಿಟಿಷರ ತೋಪುಗಳು ಚದರಿಸಿಬಿಟ್ಟಿರುತ್ತವೆ. ೫೦ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುತ್ತಾರೆ. ಲೂಜೆ ಅರಣ್ಯದಲ್ಲಿ ಶತ್ರುಗಳಿಗೂ ಬ್ರಿಟಿಷರಿಗೂ ಕೈದುಡುಕಿನ ಕಾಳಗವು ನಡೆದು ಶತ್ರುಗಳು ಹಿಮ್ಮೆಟ್ಟಿರುತ್ತಾರೆ.

ಸೊಮ್ಮೆಯಲ್ಲಿ ಕೆಲವು ಪ್ರಾಮುಖ್ಯ ಸ್ಥಳಗಳನ್ನು ಫ್ರೆಂಚರು ಗೆದ್ದುಕೊಂಡಿರುತ್ತಾರೆ. ಶತ್ರುಸೇನಿಕರೂ ಯಂತ್ರಚಾಲಿತ ಫಿರಂಗಿಗಳೂ ಫ್ರೆಂಚರಿಗೆ ದೊರೆತಿರುತ್ತವೆ. ಸೊಮ್ಮೆಯ ದಕ್ಷಿಣದಲ್ಲಿ ಕಠಿಣ ಕಾಳಗವು ನಡೆದು ವಿಶೇಷ ರಕ್ತಪಾತವಾದನಂತರ ಕೆಲವು ಮುಖ್ಯ ನೆಲೆಗಳು ಫ್ರೆಂಚರ ಸ್ವಾಧೀನವಾಗಿರುವವು. ೪೦೦ ಸೇನಿಕರು ಫ್ರೆಂಚರ ಸೆರೆಬಿದ್ದಿರುತ್ತಾರೆ.

ಜುಲಾಯಿ ತಾ. ೧೨ರಿಂದ ಫ್ರೆಂಚರು ಮತ್ತು ಬ್ರಿಟಿಷರು ಜರ್ಮನರ ಸ್ವಾಧೀನವಿದ್ದ ೩೯ ಸ್ಥಳಗಳನ್ನು ಬಿಡಿಸಿಕೊಂಡಿರುತ್ತಾರೆ.

ಗಿಂಚಿ ಗ್ರಾಮವೆಲ್ಲವೂ ಲೂಜೆ ಅರಣ್ಯಕ್ಕೆ ಹೋಗುವಲ್ಲಿರುವ ಸ್ಥಳವೂ ಬ್ರಿಟಿಷರ ಸ್ವಾಧೀನವಾಗಿದೆ. ಇಲ್ಲಿ ಅತಿ ರೋಷಾವೇಶದಿಂದ ಕದನ ನಡೆದು ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು. ವಾಯುನಾವೆಗಳ ಕದನಗಳೂ ನಡೆದಿರುತ್ತವೆ. ಹೈವೂಡಿನಲ್ಲಿ ತೀಕ್ಷ್ಣವಾದ ಕೈಮುಡಿಕಿನ ಕಾಳಗ ನಡೆದು ಒಂದು ಕಂದಕವು ಬ್ರಿಟಿಷರ ಸ್ವಾಧೀನವಾಗಿದೆ. ಕೆಲವು ಶತ್ರು ಸೇನಿಕರೂ ಬ್ರಿಟಿಷರ ಸೆರೆಬಿದ್ದಿರುತ್ತಾರೆ. ಒಂದು ವಾರದ ಕದನಗಳಲ್ಲಿ ಬ್ರಿಟಿಷರ ನೆಲೆಯು ೩೦೦ ಗಜದಿಂದ ೩೦೦೦—೬೦೦೦ ಗಜ ವಿಸ್ತರಿಸಿರುತ್ತದೆ.

ಫ್ರೆಂಚರು ವರ್ಡನಿನಲ್ಲಿ ಜಯಪ್ರದರಾಗುತ್ತಿದ್ದಾರೆ. ಜರ್ಮನರು ಥೊವಾಮೊಂಟಿನಲ್ಲಿ ತಯಾರಿಸಿದ್ದ ಕಂದಕಗಳ ಮೇಲೆ ಫ್ರೆಂಚರು ದಾಳಿಮಾಡಿ ಅವರ ಕೆಲಸವನ್ನೆಲ್ಲಾ ಹಾಳುಪಡಿಸಿರುವರು. ಅನೇಕ ಶತ್ರು ಸೇನಿಕರನ್ನು ಸೆರೆಹಿಡಿದಿರುವರು. ವೆರ್ಡನಿನಲ್ಲಿ ಕಾಳಗ ಪ್ರಾರಂಭವಾಗಿ ೨೦೦ ದಿವಸಗಳು ದಾಟಿದವು. ಇಲ್ಲಿ ಶತ್ರುಗಳಿಗೆ ಜಯ ಹೊಂದುವ ಆಶೆಯು ಕಡಿಮೆಯಾಗುತ್ತಾ ಬಂದದೆ. ೨೫೦ ಸೇನಿಕರು ಸೊಮ್ಮೆಯಲ್ಲಿಯೂ ೧೦೦ ಸೇನಿಕರು ವೆರ್ಡನಿನಲ್ಲಿಯೂ ಫ್ರೆಂಚರ ಸೆರೆಬಿದ್ದಿರುವರು.

ಪೂರ್ವ ರಣರಂಗ.

ರುಶ್ಯನರು ಹೆಲಿಸ್ಜನ ಅಜುಬಾಜಿನಲ್ಲಿ ೪೫೦೦ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಈ ಪೈಕಿ ೨೦೦೦ ಜರ್ಮನರು. ಕಾರ್ಪಥೇನಿಯದಲ್ಲಿ ಹಲವು ಅರಣ್ಯಗಳನ್ನು ರುಶ್ಯನರು ಸ್ವಾಧೀನಮಾಡಿಕೊಂಡಿರುತ್ತಾರೆ. ರುಶ್ಯನರು ಹೆಲಿಸ್ಜ ಸೆಮಿಕೊವ್ಸ—ವೊಡ್‌ನಿಕಿ ರೈಲ್ವೇ ಲ್ಯಾನುಗಳನ್ನು ಸ್ವಾಧೀನಮಾಡಿಕೊಂಡು ಹೆಲಿಸ್ಜಗೆ ತೋಪು ಹಾರಿಸುತ್ತಲಿದ್ದಾರೆ. ಹೆಲಿಸ್ಜ ಉರಿಯುತ್ತಿದೆ.

ಕಾರ್ಪಥೇನಿಯದ ಹವ್‌ನೊವ್ ಎಂಬಲ್ಲಿ ರುಶ್ಯನರು ಕೆಲವು ದಿನ್ನೆಗಳನ್ನು ಸ್ವಾಧೀನಮಾಡಿಕೊಂಡು ೫೦೦ ಸೇನಿಕರನ್ನೂ ೫ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿದಿರುವರು. ಆಗೊಸ್ಟ ತಾ. ೩೦ರಿಂದ ಸಪ್ಟಂಬರ ತಾ. ೬ರವರೆಗೆ ಈ ಪ್ರಾಂತ್ಯದಲ್ಲಿ ರುಶ್ಯನರು ೧೫೫ ಆಫೀಸರರನ್ನೂ ೧೮೪೯ ಸೇನಿಕರನ್ನೂ ೨ ಫಿರಂಗಿಗಳನ್ನೂ ಇನ್ನು ಬಹಳ ಯುದ್ಧ ಸಾಮಾಗ್ರಿಗಳನ್ನೂ ಹಿಡಿದಿರುತ್ತಾರೆ.

ಬಾಲ್ಕಾನಾ.

ರುಮೇನಿಯನರಿಗೂ ಶತ್ರುಗಳಿಗೂ ಉತ್ತರ ಸರಹದ್ದಿನಲ್ಲಿ ಕದನ ನಡೆದು ರುಮೇನಿಯನರು ಶತ್ರುಗಳ ೭ ಆಫೀಸರರನ್ನೂ ೬೩೦ ಸೇನಿಕರನ್ನೂ ಆಹಾರ ಸಾಮಾಗ್ರಿಗಳು ತುಂಬಿದ ೫೦೦ ರೈಲ್ವೇ ಗಾಡಿಗಳನ್ನೂ ಹಿಡಿದಿರುತ್ತಾರೆ. ದಕ್ಷಿಣದಲ್ಲಿ ಶತ್ರುಗಳು ಟೂರ್ಟುಕಾಯ ಸೇತುವೆಯ ಮೇಲೆ ೧೦ ಸಾರಿ ಹಲ್ಲೆಮಾಡಿ ಹಿಮ್ಮೆಟ್ಟಿರುವರು.

ಜರ್ಮನರೂ ಬಲ್ಗೇರಿಯನರೂ ಟುರ್ಟುಕಾಯ ಪ್ರಾಂತ್ಯದಲ್ಲಿ ರುಮೇನಿಯದ ಮೇಲೆ ಹಲ್ಲೆಮಾಡುತ್ತಿದ್ದಾರೆಂತ ರುಶ್ಯನರು ಪ್ರಕಟಿಸಿದ ವಾರ್ತೆಯಿಂದ ತಿಳಿದುಬರುತ್ತದೆ.

ರುಮೇನಿಯನರು ಒರ್ಸೋವ ಮತ್ತು ಹರ್ಮನ್‌ಸ್ಟಾಡನ್ನು ಗೆದ್ದುಕೊಂಡಿರುತ್ತಾರೆಂಬ ವಾರ್ತೆ ಬಂದದೆ.

ಟುರ್ಟುಕಾಯಿಯಲ್ಲಿ ರೋಷಾವೇಶದಿಂದ ಕಾಳಗವು ನಡೆಯುತ್ತಿದೆ. ಉಭಯ ಪಕ್ಷದಲ್ಲಿಯೂ ಅತಿರೇಕ ನಷ್ಟವಾಗಿರುವದು. ರುಮೇನಿಯರು ಟುರ್ಟುಕಾಯಿಯನ್ನು ಬಿಟ್ಟು ಹಿಂದೆ ಸರಿದಿರುವರು ಎಂತ ರುಶ್ಯನರು ಪ್ರಕಟಿಸಿದ್ದಾರೆ. ಅತ್ತಕಡೆ ಆಸ್ಟ್ರಿಯನರು ಹಾರ್ಜಟ್ಸ್ ಎಂಬ ಘಟ್ಟದಿಂದ ಹಿಂದೆ ಸರಿದಿರುತ್ತಾರೆ.

ಸ್ಟ್ರುಮ ಮತ್ತು ಡೈರಾನ್ ರಣರಂಗದಲ್ಲಿ ಮಿತ್ರ ಸೇನಿಕರಿಗೂ ಶತ್ರುಗಳಿಗೂ ತೋಪು ಕಾಳಗವು ನಡೆಯುತ್ತಿದೆ.

ರುಶ್ಯನರು ಬಲ್ಗೇರಿಯ ಸರಹದ್ದಿನಲ್ಲಿ ಬಿಡ್ಡಾಕ್ ಕರಾವಳಿಯ ಮೇಲೆ ತೋಪು ಹಾರಿಸುತ್ತಲಿದ್ದಾರೆ.

ಗ್ರೀಕರ ಅರಸರಾದ ಕನ್‌ಸ್ಟಂಟಿನವರಿಗೆ ಗುಣವಾಗಿರುತ್ತದಾದರೂ ಪ್ರಧಾನ ಮಂತ್ರಿಯಾದ ಎಮ್. ಜೈಮಿಸರು ವೆಂಜಲಿಸ್ಟರ ಸಭೆಯಲ್ಲಿ ಆದ ನಿರ್ಣಯಗಳನ್ನು ಅರಸರಿಗೆ ಕಳುಹಿಸಿಕೊಟ್ಟಿರುವದಿಲ್ಲ. ಅರಸರ ಆರೋಗ್ಯವು ಪೂರ್ಣ ನೆಟ್ಟಗಿಲ್ಲದೆ ಇರುವದೇ ಕಾರಣ.

ಗ್ರೀಕ ವಲಂಟಿಯರ್ ಸೇನಿಕರು ಕವಲ್ಲಾವನ್ನು ಬಲ್ಗೇರಿಯನರಿಂದ ಬಿಡಿಸಿಕೊಂಡಿರುವರು ಎಂಬ ವಾರ್ತೆ ಬಂದದೆ.

ಇಟಲಿ.

ಈ ರಣರಂಗದಿಂದ ಈ ವಾರದಲ್ಲಿ ವಿಶೇಷ ವರ್ತಮಾನಗಳು ಬಂದಿರುವದಿಲ್ಲ. ಸುಗ್ಗಾ ಕಣಿವೆಯಲ್ಲಿ ಮೇಲ್ಹಾಯ್ದ ಶತ್ರುಗಳನ್ನು ಇಟಲಿಯನರು ಹಿಂದಕಟ್ಟಿರುತ್ತಾರೆ.

ರುಶ್ಯಾ—ಟರ್ಕಿ.

ಕಾಕಾಸಸಿನ ಒಗ್ನೊಟ್ ಪ್ರಾಂತ್ಯದಲ್ಲಿ ರುಶ್ಯನರು ತುರ್ಕೀ ಸೇನೆಯಲ್ಲಿ ವಿಶೇಷ ನಷ್ಟಪಡಿಸಿರುತ್ತಾರೆ.

ಮೆಸಪಟಾಮಿಯ.

ಈ ರಣರಂಗದಲ್ಲಿ ವಿಶೇಷ ಬದಲಾವಣೆಗಳಾಗಲಿಲ್ಲ ಎಂತ ಪ್ರಕಟವಾಗಿದೆ.

ಈಜಿಪ್ಟ.

ಸೀನಾಯಿಯಲ್ಲಿ ಈಚೆಗೆ ನಡೆದ ಕದನದಲ್ಲಿ ಬ್ರಿಟಿಷ ಸೇನೆಯಲ್ಲಿ ಒಟ್ಟಿಗೆ ೯೦೦ ಮಂದಿಗೆ ಮಾತ್ರ ಪ್ರಾಣಾಪಾಯ ಸಂಭವಿಸಿರುತ್ತದೆ. ಈ ಕದನದ ತೀಕ್ಷ್ಣತೆಯನ್ನು ನೋಡುವದಾದರೆ ಈ ನಷ್ಟವು ಅತಿ ಅಲ್ಪವಾಗಿದೆ. ಬ್ರಿಟಿಷರಿಗೆ ಶತ್ರುಗಳ ೪ ಫಿರಂಗಿಗಳೂ, ೮ ಯಂತ್ರಚಾಲಿತ ಫಿರಂಗಿಗಳೂ, ೧೬೦೦ ರೈಫಲ್ ಕೋವಿಗಳೂ ಒಂದು ಮಿಲಿಯಕ್ಕಿಂತಲೂ ಹೆಚ್ಚಿನ ಕೋಟೆಗಳೂ ಸಿಕ್ಕಿರುತ್ತವೆ. ಸೆರೆಬಿದ್ದ ತುರ್ಕ ಸೇನಿಕರನ್ನು ಕೈರೋ ನಗರಕ್ಕೆ ತಂದಿರುತ್ತಾರೆ.

ಪೂರ್ವ ಆಫ್ರಿಕ.

ಈವರೆಗೆ ಪೂರ್ವ ಆಫ್ರೀಕದಲ್ಲಿ ಶತ್ರುಗಳು ಕಿಲ್‌ವಾಕಿವಿಂಡ್ಜೆ ಮತ್ತು ಕಿಲ್ವಾಕಿಸಿವಾನಿ ಬಂದರಗಳನ್ನು ಬ್ರಿಟಿಷರಿಗೆ ಒಪ್ಪಿಸಿಕೊಟ್ಟಿರುತ್ತಾರೆ. ಡರ್-ಎಸ್-ಸಾಲೆಮ್ ಸಹಾ ಪೂರ್ಣವಾಗಿ ಬ್ರಿಟಿಷರಿಗೆ ಸ್ವಾಧೀನವಾಗಿರುತ್ತದೆ.

ಪೂರ್ವ ಆಫ್ರಿಕದ ಮುಕ್ಕಾಲು ಅಂಶ ಬ್ರಿಟಿಷರಿಗೆ ಸ್ವಾಧೀನವಾಗಿರುವದೆಂತ ತಿಳಿದುಬರುತ್ತದೆ.

ಜಲಾಂತರ್ಗಾಮಿ ನಾವೆಗಳು.

ಈ ವಾರದಲ್ಲಿ ಬ್ರಿಟಿಷರ "ಟೆಂಡ್ಸ" ಎಂಬ ನಾವೆಯು ಜರ್ಮನರ ಜಲಾಂತರ್ಗಾಮಿ ನಾವೆಗೆ ತುತ್ತಾಗಿರುತ್ತದೆ. ೧೯ ನಾವಿಕರು ರಕ್ಷಿಸಲ್ಪಟ್ಟಿರುವರು. ಉಳಿದವರು ಮುಣುಗಿ ಹೋಗಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಇದೇ ತಾ. ೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೫೩೩೮ ಮಂದಿಗೆ ಪ್ಲೇಗಬೇನೆಯು ಸೋಂಕಿ ೩೫೨೯ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೩೮೭; ಮದ್ರಾಸ್ ೧೭೭; ಬಿಹಾರ್ ಮತ್ತು ಒರಿಸ್ಸ ೫೭; ಸಂಯುಕ್ತ ಸಂಸ್ಥಾನ ೧೩೫; ಪಂಜಾಬು ೭; ಬರ್ಮ ೫೭; ಮಧ್ಯಸಂಸ್ಥಾನ ೩೦೧; ಮೈಸೂರು ೪೨೪; ಹೈದರಾಬಾದ್ ೯೩೧; ಮಧ್ಯ ಹಿಂದೂಸ್ಥಾನ ೧೨ ಮರಣಗಳಾಗಿರುವವು.

ಕಳೆದ ಬುಧವಾರ ಆಯುಧಪಾಣಿಗಳಾದ ಸುಮಾರು ೨೦ ಢಕಾಯಿತರು ಬಂಗಾಳದ, ಸೆರಂಪುರಕ್ಕೆ ಸೇರಿದ ಅಲ್ಲೋನ ಗ್ರಾಮದ ಎನ್. ಘೋಷರ ಮನೆಯನ್ನು

ನುಗ್ಗಿದರು. ಘೋಷರವರು ಕಿಡಿಕಿಯಿಂದ ಹಣಕಿ ನೋಡಿ ತನ್ನ ಕೋವಿಯನ್ನು ದಕಾಯಿತರಿಗೆ ತೋರಿಸಿದರು. ಆದರೆ ದಕಾಯಿತರು ದೊಣ್ಣೆಯಿಂದ ಘೋಷರವರಿಗೆ ಹೊಡೆಯ ಬಂದದ್ದರಿಂದ ಘೋಷರು ಕೂಡಲೇ ಕೋವಿ ಸುಟ್ಟರು. ಇದರಿಂದ ಒಬ್ಬ ದಕಾಯಿತನು ಕೆಳ ಬಿದ್ದನು. ಇತರ ದಕಾಯಿತರು ತಕ್ಷಣ ದೀವಟಿಗೆಗಳನ್ನು ನೊಂದಿಸಿ ಕೆಳಬಿದ್ದ ದಕಾಯಿತನನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದರು. ಆದರೆ ಘೋಷರು ಪುನಃ ಗುಂಡು ಹಾರಿಸಿದ್ದರಿಂದ ದಕಾಯಿತರು ಹೆದರಿ ಓಡಿ ಹೋದರು. ನಂತರ ಘೋಷರು ಕೆಳಗೆ ಬಂದು ನೆಲದ ಮೇಲೆ ಹೊರಳಾಡುತ್ತಿದ್ದ ದಕಾಯಿತನಿಗೆ ನೀರು ಕುಡಿಸಿದರು. ಆದರೆ ಅವನು ಸತ್ತುಹೋದನು.

~~~~

ರಾವಲಪಿಂಡಿಯ ಬಂದಿಖಾನೆಯಲ್ಲಿದ್ದ ಒಬ್ಬ ಬಂದಿವಾನನು ಇತರ ೩ ಮಂದಿಯ ಸಹಾಯದಿಂದ ಬಂದಿಖಾನೆಯೊಳಗೆ ಇದ್ದುಕೊಂಡು ಬೊಂಬುಗಳನ್ನು ತಯಾರಿಸುವದೆ ಸನ್ನಾಹವಮಾಡುತ್ತಿದ್ದನು ಎಂಬ ವಾರ್ತೆಯು ಬಂದಿರುವದು. ಬಂದಿಖಾನೆಯ ಜೈಲರನಿಗೆ ಈ ವಾರ್ತೆಯು ಸಿಕ್ಕಿದೊಡನೆ ಜೊವಾಲಸಿಂಘನೆಂಬ ಬಂದಿವಾನನು ಇದ್ದ ಅಠೆಯನ್ನು ಶೋಧಿಸಿದಲ್ಲಿ ಕೆಲವು ಸಿಡಿಯುವ ಪದಾರ್ಥಗಳು ಸಿಕ್ಕಿದವು. ಈ ವಿಷಯ ಹೆಚ್ಚಿನ ವಿಚಾರ ನಡಿಸಿದ್ದಲ್ಲಿ ಬಂದಿಖಾನೆಯ ವಾರ್ಡರರಾದ ಸುಂದರಸಿಂಘ್, ಜಿವಾನ್‌ಸಿಂಘ್ ಮತ್ತು ಖಾನ್ ಜಾಮಾನ್ ಎಂಬವರು ಈ ಪದಾರ್ಥಗಳನ್ನು ಆ ಬಂದಿವಾನನಿಗೆ ಕೊಟ್ಟಿದ್ದರೆಂದೂ ಬಂದಿಖಾನೆಯ ಸುಪರಿಂಟೆಂಡೆಂಟು ಮತ್ತು ಜೈಲರನ ಮೇಲೆ ಬೊಂಬುಗಳನ್ನು ಬಿಸಾಡಬೇಕೆಂಬ ಇರಾದೆಯಿಂದ ಸದರಿ ವಾರ್ಡರರು ಈ ಪಿತೂರಿ ನಡಿಸಿದರೆಂದೂ ಗೊತ್ತಾಯಿತು. ಈ ಮೊಕದ್ದಮೆಯ ವಿಚಾರಣೆ ನಡೆದು ಜೊವಾಲಸಿಂಘ್, ಸುಂದರಸಿಂಘ್, ಮತ್ತು ಜಿವಾನ್ ಸಿಂಘನಿಗೆ ಐದೈದು ವರ್ಷಗಳ ಸಜಾ ವಿಧಿಸಲ್ಪಟ್ಟಾಯಿತು. ಖಾನ್ ಜಾಮಾನನ ಮೇಲೆ ತಕ್ಕ ರುಜುವಾತಿಲ್ಲದ್ದರಿಂದ ಮೇಜಿಸ್ಟ್ರೇಟರು ಅವನನ್ನು ಖುಲಾಸಪಡಿಸಿರುತ್ತಾರೆ.

~~~~

ಬಂಗಾಳದಲ್ಲಿ ಏರ್ಪಡುತ್ತಿರುವ ವಂಗೀಯ ಸೇನೆಗೆ ಸೇರಿದ ಸುಮಾರು ೧೦೦ ಮಂದಿಯನ್ನು ತರ್ಬೀತು ಬಗ್ಗೆ ವಾಯುವ್ಯ ಸರಹದ್ದಿಗೆ ಕಳುಹಿಸುವ ಸಂದರ್ಭದಲ್ಲಿ ಅವರಿಗೆ ಪ್ರೋತ್ಸಾಹ ವಚನವನ್ನು ಕೊಡುವದೆ ಕಲ್ಕತ್ತೆಯ ಪಟ್ಟಣ ಸಭಾಸದನದಲ್ಲಿ ಒಂದು ಮಹಾ ಸಭೆಯು ಕೂಡಿಬಂದಿತ್ತು. ಬಂಗಾಳ ಗವರ್ನರರವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದು ಈ ವಂಗೀಯ ಸೇನಿಕರಿಗೆ ಧನ್ಯವಾದವನ್ನಿತ್ತು ಅವರನ್ನು ಪ್ರೋತ್ಸಾಹಗೊಳಿಸಿದರು.

~~~~

ಜಾಮನಗರದ ರಾಜರ ಜನನ ದಿನದ ಬಹುಮಾನಾರ್ಥವಾಗಿ ರಾಜರವರು ತನ್ನ ದೇಶವಲ್ಲೆಲ್ಲಾ ಸೆಕಂಡರಿ ವಿದ್ಯಾಭ್ಯಾಸವನ್ನು ಮುಫತ್ತಾಗಿ ಕೊಡಿಸುವ ಏರ್ಪಾಡು ಮಾಡಿರುವರೆಂಬ ವರ್ತಮಾನವು ಬಂದಿರುವದು. ಜಾಮನಗರದ ರಾಜರು ಸಿಂಹಾಸನಾರೂಢರಾದಂದಿನಿಂದ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಪ್ರೋತ್ಸಾಹವುಳ್ಳವರಾಗಿ ವಿದ್ಯಾಭ್ಯಾಸದ ಬಗ್ಗೆ ಪ್ರತಿ ವರ್ಷವೂ ಧಾರಾಳ ಹಣ ಖರ್ಚು ಮಾಡುತ್ತಲಿದ್ದಾರೆ. ೧೯೧೪ನೇ ಇಸವಿ ಮಾರ್ಚಿ ತಿಂಗಳಿಂದ ತನ್ನ ರಾಜ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಫಿಯಾಗಿ ಕೊಡಿಸುವ ಏರ್ಪಾಡು ಮಾಡಿಸಿದರು. ಆದ್ದರಿಂದ ೪ ವರ್ಷಗಳಾಗುವಷ್ಟರೊಳಗೆ ಸೆಕಂಡರಿ ವಿದ್ಯಾಭ್ಯಾಸವನ್ನೂ ಮಾಫಿಯಾಗಿ ಕೊಡಿಸುವ ಏರ್ಪಾಡು ಮಾಡಿದ್ದು ಒಂದು ಮಹತ್ವದ ವಿಷಯವಾಗಿದೆ.

~~~~

ಮುಂಬಾಯಿಯ ಡಿ. ವಿ. ದೇಶಾಯಿಯವರು ಯೂರೋಪಿಯನರಿಗೆ ರಿಜರ್ವ್ ಮಾಡಿದ ಕಂಪಾರ್ಟಮೆಂಟಿನಲ್ಲಿ ಕುಳಿತುಕೊಂಡದ್ದರಿಂದ ರೈಲ್ವೇ ಗಾರ್ಡ ಮೊದಲಾದವರು ಸದರಿ ದೇಶಾಯಿಯವರನ್ನು ಬಂಧಿಸಿ ಹಿಂಸೆಪಡಿಸಿದ ವಾರ್ತೆಯನ್ನು ಹಿಂದೆ ತಿಳಿಸಿದ್ದೇವಷ್ಟೆ. ಈಗ ದೇಶಾಯಿಯವರು ಫ್ರಾಂಕ್ಲಿನ್ ಎಂಬ ಗಾರ್ಡನ ಮೇಲೆಯೂ ೩ ಪೋಲೀಸರ ಮೇಲೆಯೂ ಒಬ್ಬ ವಾಚ್‌ಮ್ಯಾನನ ಮೇಲೆಯೂ ಮುಂಬಾಯಿ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಲ್ಲಿ ಫಿರ್ಯಾದಿ ಕೊಟ್ಟಿರುತ್ತಾರೆ. ಮೇಜಿಸ್ಟ್ರೇಟರು ಅಪಾದಿತರೆಲ್ಲರನ್ನು ಚಾರ್ಜುಮಾಡಿರುತ್ತಾರೆ.

~~~~

ಕರಾಚಿಗೆ ಸೇರಿದ ಮಗರ್-ಪೀರ್ ಎಂಬಲ್ಲಿ ಕಳ್ಳರು ಸೂರೆಸುಲಿಗೆ ಮಾಡುತ್ತಿದ್ದಾರೆ ಎಂದು ಕರಾಚಿ ಪೋಲೀಸ್ ಇನ್ಸ್‌ಪೆಕ್ಟರರಿಗೆ ತಿಳಿದು ಬಂದು ಕಳ್ಳರನ್ನು ವಿಚಿತ್ರ ವಿಧಾನದಿಂದ ಹಿಡಿದಿರುತ್ತಾರೆ. ಇನ್ಸ್‌ಪೆಕ್ಟರರು ಒಂದು ದಿನ ಬೆಳಿಗ್ಯೆ ಒಂದು ಎತ್ತಿನ ಗಾಡಿಯನ್ನು ಬಾಡಿಗೆಗೆ ಮಾಡಿಕೊಂಡು ಒಬ್ಬ ಪೋಲಿಸನಿಗೆ ಗಾಡಿಗಾರನ ಉಡುಪನ್ನೂ ಇತರ ೩ ಪೋಲೀಸರಿಗೆ ಹೆಂಗಸರ ಉಡುಪನ್ನೂ ತೊಡಿಸಿ ಗಾಡಿಯಲ್ಲಿ ಕೂತುಕೊಳ್ಳಿಸಿ ೩-೪ ಮೈಲು ದೂರ ಹೋಗುತ್ತಲೇ ಗಾಡಿಯ ಹಿಂದಿನಿಂದ ೩ ಮಂದಿ ದಕಾಯಿತರು ಬಂದು ಗಾಡಿಗಾರನನ್ನು ಬೆದರಿಸಿ ಕೂಡಲೇ ಗಾಡಿ ನಿಲ್ಲಿಸಬೇಕೆಂದೂ ಹೆಂಗಸರ ಆಭರಣ ಇತ್ಯಾದಿಗಳನ್ನು ಕೊಡಬೇಕೆಂದೂ ಬೆದರಿಸಿದರು. ಗಾಡಿಯಲ್ಲಿ ಹೆಂಗಸರ ಉಡುಪು ಹಾಕಿಕೊಂಡಿದ್ದ ಪೋಲೀಸಿನವನು ಗಾಡಿಯಿಂದ ಇಳಿದು ಹೆಂಗಸರ ಉಡುಪನ್ನು ತೆಗೆದಿಟ್ಟು ಕಳ್ಳನನ್ನು ಹಿಡಿದು ಬಿಟ್ಟನು. ಗಾಡಿಯಲ್ಲಿದ್ದ ಇತರ ವೇಶಧಾರಿಗಳಾದ ಪೋಲೀಸಿನವರೂ ಸೇರಿ ಇತರ ಕಳ್ಳರನ್ನೂ ಹಿಡಿದರು. ಈ, ಕಳ್ಳರ ವಿಚಾರಣೆ ನಡೆದು ಒಬ್ಬೊಬ್ಬರಿಗೆ ಎರಡೆರಡು ವರ್ಷಗಳ ಸಜಾ ವಿಧಿಸಿದರು.

~~~~

ಲಾಹೋರಿನ ಡಿಸ್ಟ್ರಿಕ್ಟಿನ ಇಬ್ಬರು ಮಹಮ್ಮದೀ ಜಮೀನ್ದಾರರ ಕೂಡೆ ಸರಕಾರದವರ ತೋಟೆಗಳು ಇದ್ದುದರಿಂದ ಅವರಿಬ್ಬರನ್ನೂ ಒಬ್ಬ ಸಿಪಾಯಿಯನ್ನೂ ಕೈದುಮಾಡಿರುತ್ತಾರೆ. ಈ ತೋಟೆಗಳಲ್ಲಿ ಕೆಲವು ಫಿರೋಜಪುರದ ಆಯುಧ ಶಾಲೆಯಲ್ಲಿಯೂ, ಕೆಲವು ಪೂನೆಯ ಆಯುಧ ಶಾಲೆಯಲ್ಲಿಯೂ ಮತ್ತು ಕೆಲವು ಇಂಗ್ಲಾಂಡಿನ ಆಯುಧ ಶಾಲೆಗಳಲ್ಲಿಯೂ ತಯಾರಿಸಲ್ಪಟ್ಟವುಗಳು. ಈ ವಿಷಯ ಹೆಚ್ಚಿನ ತನಕಿ ನಡಿಯುತ್ತಿದೆ.

~~~~

ಲಾಹೋರಿನಲ್ಲಿ ಪ್ರಕಟವಾಗುವ ಉರ್ದುಭಾಷೆಯ "ಬುಲೆಟಿನ್" ಎಂಬ ಪತ್ರಿಕೆಯಿಂದ ಪ್ರೆಸ್ ಆಕ್ಟಿಗನುಸಾರವಾಗಿ ಲಾಹೋರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ೧೦೦೦ ರೂಪಾಯಿ ಜಾಮೀನು ಕೇಳಿರುತ್ತಾರೆ.

~~~~

ದಕ್ಷಿಣ ಹಿಂದೂಸ್ಥಾನ.

ವಿಶಾಖ ಪಟ್ಟಣದ ರಾಣಿಯವರು ಯುದ್ಧದ ಬಗ್ಗೆ ಮದ್ರಾಸಿನ ಹೆಂಗಸರು ಕೂಡಿಸಿರುವ ಫಂಡಿಗೆ ೩೦೦೦ ರೂಪಾಯಿಯು ದಾನಮಾಡಿರುತ್ತಾರೆ.

~~~~

ಮೈಸೂರು ದಸರಾ ಪ್ರಾರಂಭವು ಇದೇ ತಾ. ೨೮ರಲ್ಲು. ಮೈಸೂರು ಕೊ-ಓಪರೇಟಿವ್ ಕನ್ಫರೆನ್ಸಿನೊಂದಿಗೆ ಆಗತಕ್ಕದಿದೆ. ಈ ಕನ್ಫರೆನ್ಸ್ ಮಿ| ಎ. ಆರ್. ಬೆನರ್ಜಿಯವರ ಅಧ್ಯಕ್ಷತೆಯಲ್ಲಿ ಮೂರು ದಿನ ಜರಗುವದು. ದಸರಾ ವಸ್ತು ಪ್ರದರ್ಶನವು ಒಕ್ಟೋಬರ ತಾ. ೩ರಲ್ಲು ಪ್ರಾರಂಭವಾಗಿ ೧೫ ದಿವಸಗಳ ವರೆಗೆ ಇರುವದು.

~~~~

ಮಿಸೆಸ್ ಬಿಸೆಂತರವರು ನ್ಯೂ ಇಂಡಿಯಾ ಪತ್ರಿಕೆಯ ಪರವಾಗಿ ಕಟ್ಟಿದ ೨೦೦೦ ರೂಪಾಯಿಗಳನ್ನು ಸರಕಾರಕ್ಕೆ ಸೇರಿಸಿಕೊಂಡಿದ್ದರಷ್ಟೆ. ಈ ಸಂಬಂಧ ಮಿಸೆಸ್ ಅನ್ನಿ ಬಿಸೆಂತರವರು ಹೈಕೋರ್ಟಿಗೆ ಮಾಡಿಕೊಂಡ ಮನವಿಯ ತನಕಿಯು ಇದೇ ತಿಂಗಳ ತಾ. ೨೭ಕ್ಕೆ ಪ್ರಾರಂಭವಾಗುವದು.

~~~~

ತಂಜಾವೂರಿನ ವಿಕ್ಟೋರಿಯಾ ಹೈಸ್ಕೂಲಿನ ಕಾರಸ್ಪಂಡೆಂಟರಾಗಿದ್ದ ರಾ. ಸಿ. ಎಸ್. ಕೃಷ್ಣಸ್ವಾಮಿ ಐಯ್ಯರ್ ಎಂಬವರು ೧೯೧೩-೧೪ನೇ ಇಸವಿಯ ಶಾಲೆಯ ಖರ್ಚಿನ ಸುಳ್ಳು ಲೆಕ್ಕಪತ್ರಗಳನ್ನು ಇಟ್ಟು ವಿದ್ಯಾ ಇಲಾಖೆಯವರಿಗೆ ಮೋಸಪಡಿಸಿದರೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಈ ಮೊಕದ್ದಮೆಯ ವಿಚಾರಣೆ ನಡೆದು ಅಪಾದಿತನು ಇ. ಪಿ. ಕೋಡಿನ ೪೧೭ ಮತ್ತು ೪೨೦ನೇ ಪ್ರಕರಣದ ಮೇಲೆ ತಪ್ಪಿತಸ್ಥನೆಂದು ಮೇಜಿಸ್ಟ್ರೇಟರು ಅಭಿಪ್ರಾಯಪಟ್ಟು ಅಪಾದಿತನಿಗೆ ೧೦೦೦ ರೂಪಾಯಿಗಳ ಜುಲುಮಾನೆ ಮತ್ತು ಕೋರ್ಟು ಬರಕಾಸ್ತು ಆಗುವ ವರೆಗೆ ಸಜಾ ವಿಧಿಸಿದರು.

~~~~

ಮದ್ರಾಸ್ ಲಾ ಕಾಲೇಜಿಯ (ಎಫ್. ಎಲ್., ಎಸ್. ಎಲ್., ಮತ್ತು ಬಿ. ಎಲ್. ಕ್ಲಾಸುಗಳ) ವಿದ್ಯಾರ್ಥಿಗಳು ಇದೇ ತಾ. ೨೮ಲ್ಲು ಮುಷ್ಕರ ಹಾಕಿರುತ್ತಾರೆ. ಈ ಕಾಲೇಜಿಗೆ ಹೆಚ್ಚಿಗೆ ಪ್ರೊಫೆಸರರನ್ನು ನೇಮಿಸಿದಂದಿನಿಂದ ಕಾಲನಿಯಮಕ ಪಟ್ಟಿಯಲ್ಲಿ ಆದ ಬದಲಾವಣೆಗಳನ್ನು ಸರಿಪಡಿಸಬೇಕೆಂದು ಈ ವಿದ್ಯಾರ್ಥಿಗಳು ಕಾಲೇಜಿಯ ಪ್ರಿನ್ಸಿಪಾಲರನ್ನು ಕೇಳಿಕೊಂಡರಂತೆ. ಆದರೆ ಅವರು ತಕ್ಕ ಏರ್ಪಾಡು ಮಾಡದ್ದರಿಂದ ವಿದ್ಯಾರ್ಥಿಗಳ ಪ್ರತಿನಿಧಿ ಕೌನ್ಸಿಲಿನವರ ಮೂಲಕ ಒಂದು ವಿಜ್ಞಾಪನೆಯನ್ನು ಪ್ರಿನ್ಸಿಪಾಲರಿಗೆ ಕಳುಹಿಸಿಕೊಟ್ಟಲ್ಲಿ ಪ್ರಿನ್ಸಿಪಾಲರು ಆ ಕೌನ್ಸಿಲಿನವರನ್ನು ಬೆದರಿಸಿ, ವಿಜ್ಞಾಪನೆಯಲ್ಲಿ ಪ್ರಯೋಗಿಸಿದ ಭಾಷೆಯು ತೀಕ್ಷ್ಣವಾಗಿದೆಂದು ಹೇಳಿ ಕೌನ್ಸಿಲಿನವರಿಂದ ಕ್ಷಮಾಪಣೆ ಕೇಳಿಸಿದರು. ಮರುದಿನ ಕೌನ್ಸಿಲಿನ ಮೆಂಬರರು ರಾಜಿ ಕೊಟ್ಟಲ್ಲಿ ಪ್ರಿನ್ಸಿಪಾಲರು ರಾಜಿನಾಮೆಯನ್ನು ಸ್ವೀಕರಿಸದೆ ಕಾಲೇಜಿಯಲ್ಲಿ ಏನಾದರೂ ಸಂಭವಿಸಿದರೆ ಈ ಕೌನ್ಸಿಲಿನವರೇ ಜವಾಬ್ದಾರರು ಎಂದು ಹೇಳಿ ಕೌನ್ಸಿಲಿನ ಸೆಕ್ರೆಟರಿಯಾದ ರಾ| ಸಂಜೀವ ಕಾಮತರನ್ನು ಈ ಒನರರಿ ಕೆಲಸದಿಂದ ಅವಮಾನತು ಮಾಡಿದರಂತೆ. ಈ ಕಾರಣದಿಂದ ಕಾಲೇಜು ವಿದ್ಯಾರ್ಥಿಗಳು ಮರುದಿನ ಕ್ಲಾಸಿಗೆ ಹಾಜರಾಗಲಿಲ್ಲ. ಪ್ರಿನ್ಸಿಪಾಲರು ವಿದ್ಯಾರ್ಥಿಗಳು ಹಾಜರಾಗದನ್ನು ನೋಡಿ ಕಾಲೇಜು ವಠಾರವನ್ನು ಬಿಟ್ಟು ಹೋಗಬೇಕೆಂದು ಹೇಳಿದ್ದರಿಂದ ವಿದ್ಯಾರ್ಥಿಗಳು ಹೊರಗೆ ಹೊರಟು ಹೋದರೆಂತಲೂ ಕಾಲೇಜು ಗೇಟಿಗೆ ಪೋಲಿಸ್ ಕಾವಲಿ ಇಟ್ಟರೆಂತಲೂ ವಾರ್ತೆ ಬಂದದೆ. ಕಾಲೇಜಿಗೆ ಹಾಜರಾಗದ ವಿದ್ಯಾರ್ಥಿಗಳು ಲಾ ಕಾಲೇಜು ಕೌನ್ಸಿಲಿನ ಪ್ರೆಸಿಡೆಂಟರಾದ ಜಸ್ಟಿಸ್ ಅಬ್ದುಲ ರಹಿಮ್‌ರವರಿಗೆ ತಮ್ಮ ಹಾಲಹವಾಲಿಗಳನ್ನು

ಹೇಳಿಕೊಳ್ಳಲು ಮೂರು ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟರು. ಜಸ್ಟಿಸ್ ಅಬ್ದುಲ ರಹಿಮ್‌ರವರು ತನಗೆ ಕಾಲೇಜು ಕ್ರಮ ಪದ್ಧತಿಯ ವಿಷಯ ಕೈಹಾಕಲಿಕ್ಕಾಗುವದಿಲ್ಲವೆಂದೂ ವಿದ್ಯಾರ್ಥಿಗಳ ಅರ್ಜಿಯು ಕಾಲೇಜು ಕೌನ್ಸಿಲಿಗೆ ಕಳುಹಿಸಲ್ಪಟ್ಟರೆ ಆ ವಿಷಯ ತಕ್ಕ ಆಲೋಚನೆ ಮಾಡಲಾದೀತೆಂದೂ ಹೇಳಿ, ವಿದ್ಯಾರ್ಥಿಗಳಿಗೆ ಕಾಲೇಜಿಗೆ ಹಾಜರಾಗಬೇಕೆಂದು ಬುದ್ಧಿವಾದವನ್ನಿತ್ತು ಕಳುಹಿಸಿದರು. ತಾ. ೧೧ನೇ ಬೆಳಗ್ಗೆ ವಿದ್ಯಾರ್ಥಿಗಳು ಕಾಲೇಜಿಗೆ ಹಾಜರಾಗಿರುತ್ತಾರೆ. ಪ್ರಿನ್ಸಿಪಾಲರು ಕೊಟ್ಟ ನೋಟೀಸಿನ ಪ್ರಕಾರ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಕ್ಷಮಾಪಣೆ ಕೇಳಿರುವರು.

ಮದ್ರಾಸಿನಲ್ಲಿರುವ ಹೆಂಗಸರ ಕಾಲೇಜಿಗೆ "ಇಂಡಿಯನ್ ಸೋಶ್ಯಲ್ ರಿಫೋರ್ಮರ್" ಎಂಬ ಪತ್ರಿಕೆಯ ಎಡಿಟರರಾದ ಮ. ಕೆ. ನಟರಾಜನ್‌ರವರ ಮಗಳಾದ ಮಿಸ್. ಕೆ. ನಟರಾಜನ್, ಬಿ. ಎ. ರವರು ಇತಿಹಾಸ ಪ್ರೊಫೆಸರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮದ್ರಾಸಿನ ಫೋರ್ಟು ರೈಲ್ವೇ ಸ್ಟೇಶನಿನಲ್ಲಿ ಯೂರೋಪಿಯನ ಮತ್ತು ಆಂಗ್ಲೋ ಇಂಡಿಯನರಿಗಾಗಿ ರಿಜರ್ವ್ ಮಾಡಲ್ಪಟ್ಟ ಕಂಪಾರ್ಟಮೆಂಟಿನ ಸಂಬಂಧ ಕೆಲವು ಹಿಂದೀ ವಿದ್ಯಾರ್ಥಿಗಳಿಗೂ ಕೆಲವು ಆಂಗ್ಲೋ ಇಂಡಿಯನರಿಗೂ ಆದ ದೊಂಬೀ ಮೊಕದಮೆಯು ಈಗತಾನೇ ಮದ್ರಾಸ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಿಕಿಗೆ ಪ್ರಾರಂಭವಾಗಿದೆ. ಈ ಮೊಕದಮೆಯಲ್ಲಿ ವೆಂಕಟರಮಣ ರೆಡ್ಡಿ ಎಂಬವರಿಗೆ ಕೆಲವು ಆಂಗ್ಲೋ ಇಂಡಿಯನರು ಹೊಡೆದಿದ್ದರೆಂಬ ಮೊಕದಮೆಯು ಪ್ರಥಮತಾ ತನಿಕಿಗೆ ತಕ್ಕೊಳ್ಳಲ್ಪಟ್ಟಿರುವದು.

ವಿ. ಎಸ್. ಅಮಿರ್ತನಾಥ ಅಯ್ಯರ್ ಎಂಬ ಹೆಸರಿನ ಮದ್ರಾಸ್ ವೆಸ್ಲಿ ಕಾಲೇಜಿಯ VI ಫಾರ್ಮಿನ ವಿದ್ಯಾರ್ಥಿಯೊಡನೆ ಭವಾನಿ ಅಮ್ಮಾಳ್ ಎಂಬ ಒಬ್ಬ ಹುಡುಗಿಯು ಕೆಟ್ಟ ಕೆಲಸಕ್ಕೆ ಒಡಂಬಡದ್ದರಿಂದ ಅವನು ಅವಳ ಮೇಲೆ ನೈಟ್ರಿಕ್ ಎಸಿಡ್ ಎಂಬ ದ್ರಾವಕವನ್ನು ಬಿಸಾಡಿ ಅವಳ ರೂಪವನ್ನು ಕೆಡಿಸಿದ್ದನೆಂತ ಮದ್ರಾಸಿನ IV ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಅವನಿಗೆ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ೧೦೦ ರೂಪಾಯಿ ಜುಲುಮಾನೆ ವಿಧಿಸಿದರು. ಜುಲುಮಾನೆ ಕೊಡತಪ್ಪಿದರೆ ೧ ತಿಂಗಳ ಸಾಧಾರಣ ಸಜಾ ಎಂತೆ ತೀರ್ಮಾನ ಕೊಟ್ಟಿದ್ದರು. ಅಪಾದಿತನಿಗೆ ಕೊಟ್ಟ ಈ ಶಿಕ್ಷೆಯು ಕಡಿಮೆ ಆದುದರಿಂದ ಈ ಮೊಕದಮೆಯು ಹೈಕೋರ್ಟಿನಲ್ಲಿ ರಿವಿಜನ್ ಆಗಬೇಕೆಂದು ಸರಕಾರ ಕಡೆಯ ವಕೀಲರು ಹೈಕೋರ್ಟಿನಲ್ಲಿ ವಾದಿಸಿದಲ್ಲಿ ಹೈಕೋರ್ಟ ಜಡ್ಜರು ಸದರಿ ವಿದ್ಯಾರ್ಥಿಗೆ ೩ ತಿಂಗಳ ಸಾಧಾರಣ ಸಜೆಯನ್ನು ವಿಧಿಸಿ ಜುಲುಮಾನೆಯನ್ನು ೫೦. ರೂಪಾಯಿಗೆ ತಗ್ಗಿಸಿರುತ್ತಾರೆ.

ಮದ್ರಾಸ್ ಕ್ರಿಸ್ಚಿಯನ್ ಕಾಲೇಜಿಯ ವಿದ್ಯಾರ್ಥಿಗಳು ಸದರಿ ಕಾಲೇಜಿಯ ಮೂಲಕ ನಡಿಸಲ್ಪಡುವ ಪಂಚಮರ "ಫ್ರೀ ನ್ಯಾಟ್‌ಸ್ಕೂಲ್" ವಿದ್ಯಾರ್ಥಿಗಳನ್ನು ತಾ. ೯ರಲ್ಲು ಊಟಕ್ಕೆ ಆಮಂತ್ರಿಸಿ ಸಹಪಂಕ್ತಿ ಭೋಜನವನ್ನು ಮಾಡಿದರು. ಒಟ್ಟಿಗೆ ಸುಮಾರು ೧೦೦ ಮಂದಿ ಆಮಂತ್ರಿಸಲ್ಪಟ್ಟು ಭೋಜನಕ್ಕೆ ಬಂದಿದ್ದರು. ಬ್ರಾಹ್ಮಣರು, ವಲ್ಲಾಲ, ಮುದಲಿಯರ್, ನ್ಯಾಡು ಮತ್ತು ಕಾಲೇಜಿಯ ಇತರ ಮೇಲುಜಾತಿಯ ವಿದ್ಯಾರ್ಥಿಗಳು ಈ ಭೋಜನಕ್ಕೆ ಬಂದು ೩೬ ಪಂಚಮ ವಿದ್ಯಾರ್ಥಿಗಳೊಡನೆ ಊಟಮಾಡಿದರು. ಊಟಮಾಡಿದರೆಂದರೆ ಪಂಚಮರನ್ನು ಪ್ರತ್ಯೇಕ ಮೂಲೆಯಲ್ಲಿ ಕೂತುಕೊಳ್ಳಿಸಿ ಅಲ್ಲ; ಎರಡು ಮೇಲು ಜಾತಿಯ ಬ್ರಾಹ್ಮಣರ ಮಧ್ಯೆ ಒಬ್ಬ ಪಂಚಮನಂತೆ ಕುಳ್ಳಿರಿಸಿ ಊಟಮಾಡಿದರು. ಈ ದೇಶದಲ್ಲಿ ಹೀಗೆ ಹಿಂದೆ ಎಂದೂ ನಡೆದುದಿಲ್ಲ. ಈ ಎಲ್ಲಾ ವ್ಯವಸ್ಥೆ ವಿದ್ಯಾರ್ಥಿಗಳಿಂದಲೇ ಏರ್ಪಾಡಾಗಿತ್ತು.

ದಕ್ಷಿಣ ಕನ್ನಡ.

WANTED.

An assistant teacher of the Secondary grade for the Puttur Secondary School, from the 15th September 1916.

Salary:—For a trained teacher Rs. 25. 2. 35. & for untrained teacher Rs. 15 to 20 according to service or experience.

Apply with testimonials to:—

Rai Bahadur M Raghunatha Rao,

Chairman of the Governing Body of the Puttur Secondary School.

ನೋಟೀಸು.

ಮಂಗಳೂರು ತಾಲೂಕಿನಲ್ಲಿರುವ ಬಾಸೆಲ್ ಮಿಶ್ಯನಿನವರ ಎಲ್ಲಾ ಸ್ಥಿರಾಸ್ತಿಗಳ ಗೇಣಿ ವಸೂಲಿ ವಗೈರೆ ಆಡಳಿತೆ ನೋಡುವರೆ ಒಬ್ಬ ಮುತಾಲಿಕರು ಆಗತ್ಯ ಇರುವದರಿಂದ ಸ್ಥಿರಾಸ್ತಿಗಳ ಆಡಳಿತೆ ನೋಡಿ ಒಳ್ಳೆ ಮಾಹೀತಿಯುಳ್ಳ ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಈ ತಿಂಗಳ ತಾರೀಕು 30ರ ಒಳಗೆ ಬರಕೊಳ್ಳುವದು. ಸದರಿ ಕೆಲಸವು ಪ್ರಕೃತ ಒಂದು ವರುಷಕ್ಕೆ ಮಾತ್ರ; ಮತ್ತು ಸಂಬಳ ತಿಂಗಳು 1ರ ರೂಪಾಯಿ 25 ಆಗಿರುತ್ತದೆ. ಉಮೇದ್ವಾರರಿಗೆ ತಕ್ಕಮಟ್ಟಿನ ಇಂಗ್ಲಿಷಿನ ಮಾಹಿತಿ ಕೂಡಾ ಇರಬೇಕಾಗಿರುತ್ತದೆ.

ಎಮ್. ಸುಬ್ರಾಯಪೈ.
ಮಿಶ್ಯನ್ ವಕೀಲ,
ಮಂಗಳೂರು.

ಕಾಪು:— ಅಕ್ಕಿಯ ಧಾರಣೆ ಏರುತ್ತಾ ಬಂದಿದೆ. ಬಡಜನರ ಗೋಳನ್ನು ಹೇಳಿ ತೀರದು. ಅಕ್ಕಿ ಮುಡಿಗೆ ರೂ. ೭—೦—೦ ಧಾರಣೆ ಇರುವ ಈ ಸಮಯ ಬಡಜನರ ಉಪಯೋಗವಾಗಿ ಮಲ್ಲಾರು ಪಟೇಲರು, ರಾ। ಕಾಂತಪ್ಪ ಸೆಟ್ಟರು, ಕಸಬಾ ಪಟೇಲರಾದ ರಾ। ಶ್ರೀಧರ ಶ್ಯಾನುಭಾಗರು, ರಾ। ಸಾಹುಕಾರ್ ಕಾರ್ನಾಡು ನಾರಾಯಣರಾವ್ ಮುಂತಾದ ಹಲವು ಮಾನ್ಯ ಗೃಹಸ್ಥರು ಚಂದಾವೆತ್ತಿ ಪ್ರತಿ ಒಬ್ಬ ಬಡಜನಕ್ಕೆ ದಿನ ೧ರ ೧ ಸೇರು ಅಕ್ಕಿಗೆ ೦—೨—೦ ದರದಲ್ಲಿ ಮಾರಾಟ ಮಾಡುವದೆಂತ ನಿಶ್ಚೈಸಿ ಗ್ರಾಮ ಚಾವಡಿಯಲ್ಲಿ ತಕ್ಕ ಏಲೆವಾರಿ ಮಾಡಿರುತ್ತಾರೆ.

ಬೋರ್ಡು ಶಾಲಾ ಉಪಾಧ್ಯಾಯರುಗಳು ಇನ್ನು ಮುಂದೆ ಇತರರ ದಸ್ತಾವೇಜು, ಡಿಮಾಂಡು ನೋಟು, ಕರಾರು ಇತ್ಯಾದಿಗಳನ್ನು ಬರೆದು ಕೊಡುವದಾಗಲಿ, ಸಾಕ್ಷಿ ಹಾಕುವದಾಗಲಿ, ಕೂಡದೆಂಬದಾಗಿ ಹುಕುಂ ಆಗಿದೆಯಾಗಿ ಕೇಳುತ್ತೇನೆ. ಒಟ್ಟಾರೆ ಅಲ್ಪ ಸಂಬಳದ ನೌಕರರಾಗಿದ್ದು ಮಂಗಾಯಿ ಭತ್ತೆಯೂ ಕೊಡಾ ಸಿಕ್ಕಲು ದುರ್ದೆಶೆಯುಳ್ಳ ಉಪಾಧ್ಯಾಯರುಗಳು ಇತರ ಯಾವ ವೃತ್ತಿಯನ್ನೂ ಅನುಸರಿಸದಂತಾಯಿತು.

ಕಳೆದ ತಿಂಗಳ ತಾ. ೨೬-೮-೧೬ರಲ್ಲು ನಡೆಯಬೇಕಾಗಿದ್ದ ಉಪಾಧ್ಯಾಯರುಗಳ ಸಭೆಯು ಇದೇ ತಿಂಗಳ ತಾ. ೨-೯-೧೬ರಲ್ಲು ಮಟ್ಟು ಶಾಲೆಯಲ್ಲಿ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ಮ। ರಾ। ಕೋಟೆಕಾರ್ ರಾಮರಾಯರವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಸಬ್ ರೇಂಜಿನ ಸುಪರ್‌ವೈಜರವರೂ ೫೦ ಮಂದಿ ಉಪಾಧ್ಯಾಯರುಗಳೂ ಊರ ಹಲವು ಮಾನ್ಯ ಗೃಹಸ್ಥರೂ ನೆರೆದಿದ್ದರು. ಪ್ರಾರಂಭ ಗತಮೀಟಿಂಗಿನ ರಿಪೋರ್ಟನ್ನು ಸೆಕ್ರೆಟರಿಗಳು ಓದಿದರು. ಅನಂತರ ಕಾಪು ಕನ್ನಡ ಶಾಲೆಯ ೧ನೇ ಸಹಾಯಕ ಉಪಾಧ್ಯಾಯರಾದ ಎಮ್. ಆನಂದರಾಯರು "ಶಾಲೆಗಳಲ್ಲಿ ಹುಡುಗಿಯರಿಗೆ ಕಲಿಸಬಹುದಾದ ವಿಷಯಗಳ" ಕುರಿತು ಒಂದು ಉಪನ್ಯಾಸವನ್ನು ಓದಿದರು. ಈ ಉಪನ್ಯಾಸದ ಮೇಲೆ ಕೆಲವು ಚರ್ಚೆಗಳು ನಡೆದ ನಂತರ ಅಧ್ಯಕ್ಷರು ಇಂಥಾ ಸಭೆ ಕೂಡುವ ಉದ್ದೇಶ ಇತ್ಯಾದಿಗಳನ್ನು ಕುರಿತಾದ ಸುರಸ ಭಾಷಣವನ್ನು ಮಾಡಿದರು.

ಮಂಗಳೂರು.

ಇದೇ ೧೩ನೇ ಬುಧವಾರ ೬ ಗಂಟೆಗೆ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಡಿಸ್ಟ್ರಿಕ್ಟ ಕಲೆಕ್ಟರರವರು ಡ್ಯೂಪಿಟಿ ಕಲೆಕ್ಟರವರಾದ ರಾವ್ ಬಹದ್ದೂರ್ ಸಿ. ಗೋಪಾಲನ್ ನಾಯರರಿಗೆ ದಿವಾನ್ ಬಹದ್ದೂರ್ ಎಂಬ ಬಹುಮಾನದ ಸನ್ನದನ್ನು ತೊಡಿಸುವ ಬಗ್ಗೆ ಒಂದು ದರ್ಬಾರನ್ನು ನಡಿಸಿದ್ದರು. ದರ್ಬಾರಿಗೆ ಸರಕಾರಿ ಉದ್ಯೋಗಸ್ಥರಲ್ಲಿ ಸೆಶ್ಶನ್ಸ್ ಜಡ್ಜರವರೂ, ಡಿಸ್ಟ್ರಿಕ್ಟ ಪೋಲೀಸ್ ಸುಪರಿಂಟೆಂಡರವರೂ, ಡ್ಯೂಪಿಟಿ ಸುಪರಿಂಟೆಂಡೆಂಟರವರೂ, ಡಿಸ್ಟ್ರಿಕ್ಟ ಸರ್ಜನರೂ, ತಹಸೀಲದಾರ ಮೇಜಿಸ್ಟ್ರೇಟರೇ ಮೊದಲಾದವರೂ ಪಟ್ಟಣದ ಮಾನ್ಯಗೃಹಸ್ಥರಲ್ಲಿ ದಿವಾನ್‌ಬಹದ್ದೂರ್ ಎ. ವೆಂಕಟ್ರಮಣ ಪೈ, ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ। ಸುಜೀರ ರಘುನಾಥರಾಯರು, ರಾವ್‌ಬಹದ್ದೂರ್ ಎನ್. ಸುಬ್ಬರಾವರು, ಮ। ರಾ। ನಲ್ಲಿಕಾಯಿ ವೆಂಕಟರಾಯರು, ಮ। ರಾ। ವರ್ಕಾಡಿ ರಾಮರಾಯರು, ಇನ್ನು ಪಟ್ಟಣದ ಅನೇಕ ವಕೀಲರೂ, ಮಾನ್ಯ ಗೃಹಸ್ಥರೂ, ಸಾಹುಕಾರರೂ ಹಿತ್ತೈಸಿದ್ದರು. ಕಲೆಕ್ಟರ ದೊರೆಗಳವರು ೬ ಗಂಟೆಗೆ ೫ ನಿಮಿಷವಿರುವಾಗ ಕಾಲೇಜು ಮುಂದುಗಡೆಯಲ್ಲಿ ಬಂದು ಗಾಡಿಯಿಂದ ಇಳಿದು ಅಲ್ಲಿದ್ದ ರಿಜರ್ವ್ ಪೋಲಿಸ ಫೌಜನ್ನು ಸಂದರ್ಶಿಸಿ, ಪೋಲಿಸ ಫೌಜು ಸಹಿತ ಸರಿಯಾಗಿ ೬ ಗಂಟೆಗೆ ಕಾಲೇಜು ಸಭಾಸದನವನ್ನು ಪ್ರವೇಶಿಸಿದೊಡನೆ ಪೋಲಿಸ ಫೌಜಿನವರು ಸಭಾಸದನದ ಸುತ್ತಲೂ ನಿಂತು ಸವಾತು ಮಾಡಿದರು. ಅನಂತರ ಡಿಸ್ಟ್ರಿಕ್ಟ ಕಲೆಕ್ಟರವರು ಈ ದರ್ಬಾರು ಕೂಡಿದ ಉದ್ದೇಶವನ್ನು ಸಭಿಕರಿಗೆ ತಿಳಿಯ ಹೇಳಿ. ರಾವ್‌ಬಹದ್ದೂರ್ ಗೋಪಾಲನ್ ನಾಯರರು ೧೮೭೬ನೇ ಇಸವಿಯಲ್ಲಿ ಸರಕಾರಿ ಉದ್ಯೋಗ ಪ್ರಾರಂಭಿಸಿದಂದಿನಿಂದ ಸರಕಾರದ ಮನ್ನಣೆಗೆ ಪಾತ್ರರಾಗಿ ಮಾಡಿದ ಕೆಲಸಗಳನ್ನು ವಿವರಿಸಿ ಈ ಕಾರಣ

ದಿಂದ ೧೮೯೯ನೇ ಇಸವಿಯಲ್ಲಿ ರಾವ್‌ಬಹದ್ದೂರ್ ಎಂಬ ಬಿರುದು ಕೊಡೋಣಾಯಿತೆಂದೂ ಈಗತಾನೇ ಸರಕಾರಿ ಕೆಲಸಕ್ಕೆ ಸೇರಿದ ಈ ೪೦ನೇ ವರ್ಷದಲ್ಲಿ ದಿವಾನ್ ಬಹದ್ದೂರ್ ಎಂಬ ಬಿರುದು ಕೊಡೋಣಾಗುತ್ತದೆಂದೂ ಹೇಳಿ ಕಾಲೋಚಿತ ಮಾತುಗಳಿಂದ ದಿವಾನ್ ಬಹದ್ದೂರ್ ಗೋಪಾಲನ್ ನಾಯರರಿಗೆ ದಿವಾನ್ ಬಹದ್ದೂರ್ ಎಂಬ ಬಿರುದಿನ ಪದಕವನ್ನು ಕೊರಳಿಗೆ ಹಾಕಿ ವಂದಿಸಿದರು. ಬಳಿಕ ದಿವಾನ್ ಬಹದ್ದೂರ್ ಗೋಪಾಲನ್ ನಾಯರರು ಕಲೆಕ್ಟರ ದೊರೆಗಳನ್ನು ವಂದಿಸಿ, ೪೦ ವರ್ಷಗಳಿಂದ ತಾನು ಸರಕಾರಿ ಉದ್ಯೋಗಸ್ಥನಾಗಿ ಮಾಡಿದ ಕೆಲಸಗಳ ಮತ್ತು ತನ್ನ ಕುಟುಂಬದ ಇತಿಹಾಸವನ್ನು ಸಭಿಕರಿಗೆ ತಿಳಿಯ ಹೇಳಿ, ಸರಕಾರದವರು ತನ್ನ ಕೆಲಸವನ್ನು ಮನ್ನಿಸಿ ಈ ಬಿರುದನ್ನು ಕೊಟ್ಟದ್ದಕ್ಕೋಸ್ಕರ ಸರಕಾರದವರನ್ನು ವಂದಿಸಿದರು. ಕಡೆಗೆ ಕಲೆಕ್ಟರ ದೊರೆಗಳವರು ದಿವಾನ್ ಬಹದ್ದೂರ್ ಗೋಪಾಲನ್ ನಾಯರರ ಹೆಸರಲ್ಲಿ ಧನ್ಯವಾದವನ್ನಿತ್ತು ದರಬಾರನ್ನು ಸಮಾಪ್ತಿಗೊಳಿಸಿದರು.

ದರಬಾರು ನಡೆದು ೧೦ ನಿಮಿಷಗಳ ಸಂತರ ಅದೇ ಸಭಾಸದನದಲ್ಲಿ ಪಟ್ಟಣದ ಬಡ ಜನರ ಉಪಕಾರದ ಮತ್ತೊಂದು ವಿಶೇಷ ಸಭೆಯು ಕೂಡಿ ಬಂತು. ದರಬಾರಿಗೆ ಕೂಡಿಬಂದಿದ್ದ ಹೆಚ್ಚುಕಡಿಮೆ ಎಲ್ಲಾ ಗೃಹಸ್ಥರು ಈ ಸಭೆಗೂ ಹಾಜರಿದ್ದರು. ತಾಲೂಕು ಬೋರ್ಡು ಪ್ರೆಸಿಡೆಂಟರಾದ ಸಾಹುಕಾರ ರಘುನಾಥಯ್ಯನವರು ಎದ್ದು ನಿಂತು ಪ್ರಥಮತಃ ಈ ಸಭೆ ಕೂಡಿಸುದರ ಕಾರಣವನ್ನೂ, ಉದ್ದೇಶವನ್ನೂ ವಿವರಿಸಿ, ಅಕ್ಕಿ ಧಾರಣೆಯು ಹೆಚ್ಚಿರುವ ಈ ಕಾಲದಲ್ಲಿ ಬಡವರ ಕಷ್ಟ ನಿವಾರಣೆ ಮಾಡುವದು ಅಗತ್ಯವೆಂಬದನ್ನೂ ಉಡುಪಿಯಲ್ಲಿ ಖಾನ್‌ಬಹದ್ದೂರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಂ ಸಾಹೇಬ ಬಹದ್ದೂರರವರು ಬಡವರಿಗೆ ಸೇರಿಗೆ ೨ ಆಣೆ ದರದಲ್ಲಿ ಅಕ್ಕಿ ಮಾರುತ್ತಿರುವ ಹಾಗೆಯೇ ಇಲ್ಲಿಯೂ ಸಹ ಅಂಥ ಏರ್ಪಾಡು ಮಾಡುತ್ತಿದ್ದರೆ ಒಳ್ಳೇದಿತ್ತೆಂದೂ ಹೇಳಿ, ಈ ಸಭೆಗೆ ಜಿಲ್ಲಾ ಕಲೆಕ್ಟರ ದೊರೆಗಳನ್ನು ಅಧ್ಯಕ್ಷರಾಗಿ ಆರಿಸಬೇಕೆಂತ ಸೂಚಿಸಿದರು. ಇವರ ಸೂಚನೆಯು ಸಭಿಕರಿಂದ ಆದರಿಸಲ್ಪಟ್ಟನಂತರ ಜಿಲ್ಲಾ ಕಲೆಕ್ಟರ ದೊರೆಗಳವರು ಸಭಾಧ್ಯಕ್ಷರಾಗಿ ಎದ್ದು ನಿಂತು, ಅರ್ಥಗರ್ಭಿತವಾದ ಭಾಷಣ ಕೊಟ್ಟು, ಜನರೊಳಗೆ ಸಹಕಾರ ಮತ್ತು ಸಹಾನುಭಾವ ಎಂಬೀ ಎರಡು ಗುಣಗಳಿದ್ದರೆ ಈಗ ಅಕ್ಕಿಯ ಧಾರಣೆ ಏರಿದ್ದರಿಂದ ಉಂಟಾಗುವ ಆಪತ್ತಿನ ಪರಿಣಾಮವು ಕಡಮೆಯಾಗುತ್ತಿತ್ತೆಂದೂ ಮತ್ತು ಇಂಥಾ ಆಪತ್ತಿನ ಸಂದರ್ಭದಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಕಮ್ಮಿ ಮುನಾಫೆಯಲ್ಲಿ ಅಕ್ಕಿ ಇತ್ಯಾದಿ ಜೀನಸುಗಳನ್ನು ಮಾರಬಹುದಿತ್ತೆಂದೂ ಹೇಳಿ ಈಗಲಿರುವ ರೂಪಾಯಿ ಸಾಲ ಕೊಡುವ ಸಹಕಾರ ಸಂಘಗಳಂತೆಯೇ ಜೀನಸುಗಳ ಸಹಕಾರ ಸಂಘವನ್ನು ಪಟ್ಟಣದ ಮಾನ್ಯರು ಸ್ಥಾಪಿಸಿಕೊಂಡು ಪಟ್ಟಣದ ಬಡಜನರ ಏಳಿಗೆಯನ್ನು ಚಿಂತಿಸಬೇಕೆಂದು ಪಟ್ಟಣದ ಮಾನ್ಯರನ್ನು ವಿಜ್ಞಾಪಿಸಿಕೊಂಡರು. ಅನಂತರ ರಾವ್ ಬಹದ್ದೂರ್ ಎನ್. ಸುಬ್ಬರಾಯರು ಅಧ್ಯಕ್ಷರ ಮಾತುಗಳನ್ನು ಆದರಿಸಿಕೊಂಡು ಮಾಡಬೇಕಾದ ಕೆಲಸವನ್ನು ಮಾಡದೆ ಹೋಗಿ ಈಗ ಚಿಂತಿಸಿ ಫಲವಿಲ್ಲವೆಂದೂ ಇನ್ನಾದರೂ ಇಂಥಾ ಸಹಕಾರಸಂಘಗಳನ್ನು ಸ್ಥಾಪಿಸಿಕೊಳ್ಳುವದು ಅವಶ್ಯವೆಂದೂ ಹೇಳಿ, ಈಗ ಬಡಜನರಿಗೆ ಬಂದಿರುವ ಕಷ್ಟ ನಿವಾರಣಾರ್ಥವಾಗಿ ತಾತ್ಕಾಲಿಕ ಏರ್ಪಾಡುಗಳನ್ನು ಮಾಡುವ ನಿಮಿತ್ತ ಒಂದು ಕಮಿಟಿಯನ್ನು ನೇಮಿಸುವದು ಹಿತವೆಂದೂ ಸೂಚಿಸಿದರು. ಇವರ ಸೂಚನೆಯನ್ನು ಮ। ರಾ। ವರ್ಕಾಡಿ ರಾಮರಾಯರು ಅನುಮೋದಿಸಿ ರಾವ್ ಬಹದ್ದೂರ್ ಎನ್. ಸುಬ್ಬರಾವ್, ಮ। ರಾ। ಎಸ್. ರಘುನಾಥಯ್ಯ, ಡಾಕ್ಟರ್ ಫೆರ್ನಾಂದಿಸ್, ಮ। ರಾ। ನೆಲ್ಲಿಕಾಯಿ ವೆಂಕಟರಾವ್, ಮಿ. ಮಾರ್ಟಿನ್ ಪ್ಯಾಸ್, ಮ। ರಾ. ದೇವಪ್ಪ ಪೂಂಜ, ಮ। ರಾ। ಟಿ. ಭವಾನಿರಾವ್, ಮಿ. ಎ. ಜೆ. ಲೋಬೋ ಮೊದಲಾದ ೩೦ ಜನರು ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಹೇಳಿದರು. ಈ ಸೂಚನೆಯೂ ಅನುಮೋದಿಸಲ್ಪಟ್ಟು ಈ ಬಗ್ಗೆ ತೆರೆಯಲಿಕ್ಕಿರುವ ಫಂಡಿಗೆ ಮ। ರಾ। ಸಾಹುಕಾರ ನಾಗಪ್ಪನಾಯ್ಕರವರು ಖಜಾಂಚಿಯಾಗಿಯೂ ಸೆಕ್ರೆಟರಿಯಾಗಿಯೂ ಆರಿಸಲ್ಪಟ್ಟರು. ಕೂಡಿದ ಸಭೆಯಲ್ಲಿ ವಂತಿಗೆ ಪಟ್ಟಿಯನ್ನು ತೆರೆದಲ್ಲಿ ರೂ ೧೦೯೦ ವಾಗ್ದಾನವಾಯಿತಲ್ಲದೆ ರಾ। ಹ್ಯೂಗೆ ಬಜಾರ್ ಅಬ್ದುಲ್ಲ ರಹಿಮಾನ್ ಕೊರಗಪ್ಪನವರ ಕಡೆಯಿಂದ ೧೦೦೦ ಮುಡಿ ಅಕ್ಕಿಯನ್ನೂ ಮ। ರಾ। ಸಾಹುಕಾರ ನಾಗಪ್ಪನಾಯ್ಕ ಮತ್ತು ಉಳ್ಳಾಲ ವಾಸುದೇವಮಲ್ಯರವರು ೫೦೦ ಮುಡಿ ಅಕ್ಕಿಯನ್ನೂ ಸೇರಿಗೆ ೨ ಆಣೆ ದರದಲ್ಲಿ ಮಾರುತ್ತೇವೆಂದೂ ವಾಗ್ದಾನ ಮಾಡಿರುವರು. ಹೀಗೆ ಆ ದಿನದ ಸಭೆಯು ಅಂತ್ಯವಾಯಿತು. ಹೆಚ್ಚಿನ ಏರ್ಪಾಡು ಈ ದಿನದ ಸಭೆಯಲ್ಲಿ ಸ್ಥಾಪಿಸೋಣಾದ ಕಮಿಟಿಯವರಿಂದ ಮಾಡೋಣಾಗುವದು.

ಇಲ್ಲಿಯ ಡಿವಿಜನಲ್ ಆಫೀಸರರಾದ ಖಾನ್‌ಸಾಹೇಬ ಪಿ. ಎ. ಅಮ್ಮು ಸಾಹೇಬ ಬಹದ್ದೂರರವರು ಗುರುಪುರತ್ತಕಡೆ ಸರ್ಕೀಟಿಗೆ ಹೋಗಿರುತ್ತಾರೆ.

ಮದ್ರಾಸ್ ಯುನಿವರ್ಸಿಟಿ ಸಿಂಡಿಕೇಟಿನವರು ಸೆಕೆಂಡ್ ಗ್ರೇಡ್ ಕಾಲೇಜುಗಳನ್ನು ಸಂದರ್ಶಿಸಿ ಈ ಕಾಲೇಜುಗಳ ಸ್ಥಿತಿಗತಿಗಳನ್ನು ವಿಚಾರಿಸುವರೆ ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ. ಈ ಕಮಿಟಿಯವರು ಈ ತಿಂಗಳ ಅಂತ್ಯವಾರದಲ್ಲಿ ಕೊಯಮುತ್ತೂರು, ಪಾಲ್ಘಾಟ್, ಸೇಲಮ್, ಕಲಿಕೋಟೆಯಲ್ಲಿರುವ ಕಾಲೇಜುಗಳನ್ನು ಸಂದರ್ಶಿಸಿ, ನಂತರ ಇಲ್ಲಿಗೂ ಒಂದು ಇಲ್ಲಿಯ ಗವರ್ನಮೆಂಟ್ ಮತ್ತು ಸೈಂಟ್ ಎಲೋಶಿಯಸ್ ಕಾಲೇಜುಗಳನ್ನು ಸಂದರ್ಶಿಸುವರು ಎಂತ ತಿಳಿದುಬಂದದೆ.

ಮೂಳೂರು ಗ್ರಾಮದ ಗುರುಪುರ ಬಂಗ್ಲೆಯ ಸಮೀಪದ ಕಾಡಿನಲ್ಲಿ ಸೊಪ್ಪು ಹೆಕ್ಕುತ್ತಿದ್ದ ಪೂವು ಎಂಬ ಹೆಂಗಸಿನ ಮೇಲೆ ಇದ್ದ ಆಭರಣಗಳನ್ನು ಕೆ. ಡಿ. ಗುರುವ ಸೆಟ್ಟಿ ಎಂಬವನು ಅಪಹರಿಸಿಕೊಂಡು ಹೋದನೆಂದು ವಿಚಾರಣೆಗೆ ಗುರಿಯಾಗಿದ್ದನು. ಈ ಮೊಕದಮೆಯ ತನಿಕೆ ನಡೆದು ಡ್ಯುಪಿಟಿ ಮೇಜಿಸ್ಟ್ರೇಟರು ಅಪಾದಿತನಿಗೆ ೨ ವರ್ಷಗಳ ಕಠಿಣ ಸಜಾ ವಿಧಿಸಿದರು.

ಇಲ್ಲಿಯ ಮೆಸ್ಸರ್ಸ್ ಪೆರ್ಲ್ ಎಂಡ್ ಸನ್ಸರ ವಿಲಾಯತಿ ಸಾಮಾನು ಅಂಗಡಿಯಲ್ಲಿ ಕೆಲಸಕ್ಕಿದ್ದ ಕೊಗ್ಗನಾಯ್ಕನೆಂಬವನು ಸದರಿ ಪೆರ್ಲರರಿಗೆ ರೂ. ೨೪೬-೧೦-೦ಯ ದಗೆ ಮಾಡಿದನೆಂಬದಾಗಿ ಇ. ಪಿ. ಕೋಡಿನ ೪೦೮ನೇ ಪ್ರಕರಣದ ಮೇಲೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಈ ಮೊಕದಮೆಯ ವಿಚಾರಣೆ ನಡೆದು ಆಪಾದಿತನಿಗೆ ೨ ತಿಂಗಳ ಕಠಿಣ ಸಜಾ ವಿಧಿಸೋಣಾಗಿರುತ್ತದೆ.

ಕುಂದಾಪುರದ ಕೃಷ್ಣರಾಯ ಕೊಡ್ಗಿ ಮತ್ತು ಇತರ ೪ ಮಂದಿ ದರೋಡೆ ಕಳವು ಮಾಡಿದರೆಂಬದಾಗಿ ಸುಳ್ಳು ಪಿರ್ಯಾದಿ ಕೊಟ್ಟ ಅನಂತ ಕೊಡಗಿ ಎಂಬವನನ್ನು ಕುಂದಾಪುರ ಸ್ಟೇಶನರಿ ಮೇಜಿಸ್ಟ್ರೇಟರು ಸೆಶ್ಶನ್ಸಿಗೆ ಕಮಿಟ್ ಮಾಡಿದರು. ಸೆಶ್ಶನ್ಸಿನಲ್ಲಿ ಈ ಮೊಕದಮೆಯು ತನಿಕೆ ನಡೆದು ಆಪಾದಿತನಿಗೆ ೧ ವರ್ಷದ ಕಠಿಣ ಸಜಾ ಮತ್ತು ೧೫೦ ರೂಪಾಯಿ ಜುಲುಮಾನೆ ವಿಧಿಸೋಣಾಗಿದೆ.

ಕಳೆದ ತಾ. ೧೦ನೇ ಆದಿತ್ಯವಾರ ದಿನ ಹಗಲು ಘಂಟೆ ೧೧ಕ್ಕೆ ಸಮುದ್ರದಲ್ಲಿ ಬಹು ತೀವ್ರವಾದ ಒಂದು ಬಿರುಗಾಳಿಯು ಶುರುವಾಗಿ ಕ್ಷಣದಲ್ಲಿಯೇ ಭಯಂಕರವಾದ ತೆರೆಗಳು ಏಳತೊಡಗಿದವು. ಆಗ ಮೀನ ಬೇಟೆಗೆಂದು ಹೋಗಿದ್ದ ಅನೇಕ ದೋಣಿಗಳು ಮುಳುಗಿಹೋದವು. ಕರೆಯಲ್ಲಿದ್ದವರ ಸಹಾಯವು ತಕ್ಕ ಸಮಯದಲ್ಲಿ ಸಿಕ್ಕದೆ ಹೋಗದ್ದರೆ ಎಷ್ಟೋ ಪ್ರಾಣಗಳೂ ದೋಣಿಗಳೂ ಘಾತಿಯಾಗುತ್ತಿದ್ದವು. ಆದರೂ ತಣ್ಣೀರುಬಾವಿಯ ೩ ಜನರು ಕಾಣದೆ ಹೋದರು! ಇವರಲ್ಲಿಬ್ಬರ ಹೆಣಗಳು ಮಾತ್ರ ಮೂರು ದಿವಸದ ಮೇಲೆ ಬೋಳೂರಿನ ಸಮುದ್ರ ದಡದಲ್ಲಿ ಬಿದ್ದಿದ್ದವು. ಈ ಶವಗಳ ಮೇಲಿದ್ದ ಚಿನ್ನಾಭರಣಗಳನ್ನೆಲ್ಲಾ ಯಾರೋ ಘಾತುಕರು ಕಡಿದು ತೆಗೆದಿದ್ದರು.

ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯ ಪ್ರಥಮ ಸ್ಟೀಮರು ಇದೇ ಬರುವ ತಾ. ೨೫ಕ್ಕೆ ಬೊಂಬಾಯಿಂದ ಹೊರಟು ತಾ. ೨೮ನೇ ಗುರುವಾರ ದಿವಸ ಇಲ್ಲಿಗೆ ತಲಪುವದಾಗಿ ತಿಳಿಯುತ್ತೇವೆ

ವರು ೬ ಹೀಗೆ ಪ್ರತಿನಿಧಿಗಳ ಸಂಖ್ಯೆಯು ೨೪ಕ್ಕೆ ಬರುತ್ತದೆ. ಆಗಲೇ ಮೇಲೆ ಹೇಳಿದ ಎರಡೂ ಏರ್ಪಾಡುಗಳನ್ನು ಮಾಡಬಹುದಿತ್ತು. ಆದರೆ ಅಧ್ಯಕ್ಷರವರು ಮಧ್ಯದಲ್ಲಿಯೇ ಮೇಲಿನ ಅವಸರವನ್ನು ಮಾಡಿ ಪಟ್ಟಣಕ್ಕೆ ಯಾವ ಹಿತದ ಪರ್ವತದ ಮೇಲೆ ಕೂಡ್ರಿಸುವವರಿದ್ದಾರೊ ಇದು ತಿಳಿಯದು.

ಇರಲಿ. ಗವರ್ನಮೆಂಟ ಫೋರ್ಮ್ಯುಲದ ವಿಷಯವು ಕೌನ್ಸಿಲಿನಲ್ಲಿ ಚರ್ಚೆಗೆ ಬಂದಾಗ ಕೌನ್ಸಿಲಿನ ಕೆಲವು ಮೆಂಬರುಗಳು ಮೇಲಿನ ಸಂಗತಿಗಳನ್ನಾಧರಿಸಿಕೊಂಡು ವಿವಾದಿಸಿದರೆಂದು ನಾವು ಕೇಳುತ್ತೇವೆ. ಮೆಂಬರುಗಳ ಈ ಸತರ್ಕವಾದ ವಿವಾದಕ್ಕೆ ಉಚಿತ ಸಮಾಧಾನವನ್ನು ಹೇಳುವುದು ಅಧ್ಯಕ್ಷ ಮಹಾಶಯರಿಗೆ ಶಬ್ದತಃ ಅಸಾಧ್ಯವಾದರೂ ಅವರು ತಮ್ಮ ಎರಡು ಓಟುಗಳನ್ನು ಕೊಡುವ ಕಾರ್ಯದಿಂದಲೇ ಈ ರೀತಿಯಿಂದ ವಾದಿಸುವ ಪ್ರತಿನಿಧಿಗಳ ಬಾಯನ್ನು ಮುಚ್ಚಿಸಿರಬಹುದೆಂದು ನಾವು ನೆನಸುತ್ತೇವೆ! ಮತ್ತು ನಿಜವಾಗಿ ನೋಡಿದರೆ ಇದೇ ಈಗ ಬುದ್ಧಿವಂತಿಕೆಯ ಮಾರ್ಗವು!! ಮೆಂಬರುಗಳ ಬಹುಮತ, ಪಟ್ಟಣದ ಹಿತ ಈ ಸಂಗತಿಗಳನ್ನು ನೋಡುತ್ತ ಕುಳಿತರೆ ಪ್ರೆಸಿಡೆಂಟರಿಗೆ ಒಂದು ಹೆಜ್ಜೆಯನ್ನಾದರೂ ಮುಂದೆ ಇಡಲು ಈ ಜನರು ಬಿಟ್ಟಾರೆ? ಆದುದರಿಂದ ಪ್ರಾಜ್ಞಶಾಲಿಗಳಾದ ವರ್ಗಿಸರು ತಮ್ಮ ಸ್ವಂತ ಆಲೋಚನೆಯಿಂದಲೇ ಈ ಲೋಕೋಪಯುಕ್ತ ಕೆಲಸವನ್ನು ಮಾರ್ಪಡಿಸಿರುವರೆಂತ ಹೇಳಿದರೆ ಅದು ಅವರ ಮಿಥ್ಯಾಸ್ತುತಿಯಾಗಲಿಕ್ಕಿಲ್ಲ! ಪತ್ರಕಾರರಾದ ನಮಗೆ ಅವರದೇ ಎಂತಲ್ಲ, ಯಾವ ವ್ಯಕ್ತಿಯದಾದರೂ ವೃಥಾಸ್ತುತಿ ಮತ್ತು ವೃಥಾನಿಂದೆಯನ್ನು ಮಾಡುವ ಅಗತ್ಯವಿಲ್ಲ. ಡಾ. ವರ್ಗಿಸರ ವ್ಯಕ್ತಿಯೇನು, ಬೇರೆ ಸರಕಾರಿ ಉದ್ಯೋಗಸ್ಥರ ವ್ಯಕ್ತಿಗಳೇನು ನಮಗೆ ಅವು ಪೂಜ್ಯವೇ ಹೌದು. ಆದರೆ ಸಾರ್ವಜನಿಕ ಹಿತದ ಪ್ರಶ್ನೆಯನ್ನು ಕುರಿತು ಆಲೋಚಿಸುವಾಗ ಆ ಸಾರ್ವಜನಿಕ ಹಿತವೇ ನಮಗೆ ಎಲ್ಲಕ್ಕೂ ಅತಿಪೂಜ್ಯವಾಗಿರುತ್ತದೆ. ಇದನ್ನು ಮಾತ್ರ ಯಾರೂ ಮರೆಯಕೂಡದು. ಮುನ್ಸಿಪಾಲಿಟಿಯಂಥ ಸ್ಥಾನಿಕ ಸ್ವರಾಜ್ಯದ ಸಂಗತಿಯು ಪಟ್ಟಣಿಗರಿಗೆ ಸಂಪೂರ್ಣವಾಗಿ ತಿಳಿದಿರುವುದು ಅಗತ್ಯವೆಂದು ಕಂಡು ಬಂದದರಿಂದ ಈ ಸಾರ್ವಜನಿಕ ಹಿತದ ಪ್ರಶ್ನೆಯನ್ನು ನಾವು ಈ ಎರಡು ಸಂಚಿಕೆಗಳಲ್ಲಿ ವಾಚಕರಿಗೆ ಆದಷ್ಟು ವಿವರಣದಿಂದ ತಿಳಿಸಿದ್ದೇವೆ. ಈ ಎಲ್ಲ ವಿವೇಚನೆಯನ್ನು ಓದಿದ ಮೇಲೆ ನಾವು ವಾಚಕರಿಗೆ ಕೇಳುವುದೇನೆಂದರೆ-ನಮ್ಮ ಮುನ್ಸಿಪಾಲಿಟಿಯ ರಥವು ಈಗ ಹ್ಯಾಗೆ ನಡಿಯುತ್ತಿದೆ?

ವ್ಯಾಪಾರದ ಶಿಕ್ಷಣೆಗೆ ಕಲಕತ್ತಾ ಯುನಿವರ್ಸಿಟಿಯ ಉತ್ತೇಜನೆ.

'ಯುನಿವ್ಹರ್ಸಿಟಿ' ಅಥವಾ 'ವಿಶ್ವವಿದ್ಯಾಲಯ'ವೆಂಬೀ ಹೆಸರೇ ಶಿಕ್ಷಣದ ಎಲ್ಲ ಶಾಖೆಗಳನ್ನು ಬೋಧಿಸುತ್ತದೆ. ವಾಙ್ಮಯ, ಇತಿಹಾಸ, ಶಾಸ್ತ್ರ, ಕಲೆ ಇವೇ ವಿಷಯಗಳನ್ನು ಮಾತ್ರ ತೆಕ್ಕೊಂಡು ವ್ಯಾಪಾರ, ಕೈಗಾರಿಕೆಯಂಥ ಅತ್ಯುಪಯುಕ್ತವಾದ ವಿಷಯವನ್ನು ಬಿಟ್ಟರೆ ಅದು ವಿಶ್ವವಿದ್ಯಾಲಯವೆಂಬ ಹೆಸರಿಗೆ ಪಾತ್ರವಾದೀತೆ? ಇದೊಂದು ಪ್ರಶ್ನಾರ್ಹ ವಿಷಯವೇ ಸರಿ. ವಿಶ್ವವಿದ್ಯಾಲಯದ ಆದರಕ್ಕೆ ಒಳಪಡದ ವಿಷಯವು ಕಿಂಬಹುನಾ ಯಾವ ವಿಷಯಕ್ಕೆ ಯುನಿವ್ಹರ್ಸಿಟಿಯಲ್ಲಿ ಪ್ರವೇಶವಿರುವುದಿಲ್ಲವೊ ಆ ವಿಷಯವು ದ್ರವ್ಯಾರ್ಜನೆಗೆ ಅತಿ ಸಾಧಕವಾಗಿದ್ದರೂ ವಿದ್ಯಾರ್ಥಿಗಳಿಗೆ ಅಪೇಕ್ಷಣೀಯವಾಗುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಯುನಿವ್ಹರ್ಸಿಟಿಯ ಮುದ್ರೆಯೂ ಬಹುಮಾನದ ಒಂದೆರಡು ಅಕ್ಷರಗಳೂ ಯಾವ ವಿಷಯಕ್ಕೆ ಸಿಗಲಾರವೊ ಅದರ ಕಡೆಗೆ ನಮ್ಮ ವಿದ್ಯಾರ್ಥಿ ವರ್ಗದವರು ಕಣ್ಣೆತ್ತಿ ಕೂಡ ನೋಡುವುದಿಲ್ಲ. ಹೀಗಿರಲು ಆ ವಿದ್ಯಾರ್ಥಿಗಳ ಸಾಮಾನ್ಯವಾದ ಪ್ರವೃತ್ತಿಯು 'ಆರ್ಟ್ಸ' ಕಾಯಿದೆ, ವೈದ್ಯಕ ಮೊದಲಾದ ವಿಷಯಗಳಲ್ಲಿಯೇ ಉಂಟಾಗುವುದು ಸಹಜವೆ. ಆದರೆ ಇದು ದೇಶದ ಊರ್ಜಿತಾವಸ್ಥೆಗೆ ತೀರ ಅಪಾಯಕರವೇ ಸರಿ. ಆರ್ಟ್ಸ, ಕಾಯಿದೆ ಇಲ್ಲವೆ ವೈದ್ಯಕ ಇವು ದೇಶದ ವೃದ್ಧಿಗೆ ಹಲವು ಬಗೆಗಳಿಂದ ಕಾರಣವಾದರೂ ಅದರ ಆರ್ಥಿಕ ಜೀವಿತವು ಮುಖ್ಯವಾಗಿ ವ್ಯಾಪಾರ ಕೈಗಾರಿಕೆಗಳ ಮೇಲೆಯೇ ಆಧರಿಸಿಕೊಂಡಿದೆಂಬುದು ನಿರ್ವಿವಾದ ಸಂಗತಿಯು. ಪೂರ್ವಾಪರ ಸಂಸ್ಕಾರಗಳನ್ನು ಸರಿಯಾಗಿ ಮಾಡಿಸುವ ಪ್ರಜ್ಞೆ ಮತ್ತು ಅಭ್ಯಾಸವಿರುವ ಒಬ್ಬ ಪುರೋಹಿತನಿಗಾದರೂ, ಅವನ ಮನೆಯಲ್ಲಿಯ ಸಂಸ್ಕಾರಗಳಿಗೆ ಹೇಗೆ ಬೇರೊಬ್ಬ ಪುರೋಹಿತನು ಅವಶ್ಯವೋ ಹಾಗೆಯೇ ವ್ಯಾಪಾರ ಕೈಗಾರಿಕೆಗಳು ಧನೋತ್ಪಾದಕವಾದ ಸಾಧನಗಳೆಂದು ನಮ್ಮ ಯುವಕರಿಗೆ ಚೆನ್ನಾಗಿ ತಿಳಿದಿದ್ದರೂ ಆ ವಿಷಯಗಳಲ್ಲಿ ಅವರಿಗೆ ಸರಕಾರಿ ಮಾನ್ಯತೆಯೆಂಬ ಪುರೋಹಿತನು ಬೇಕಾಗುತ್ತಾನೆ! ಸರಕಾರವು ದೇಶದೊಳಗಿನ ಎಲ್ಲ ಸಂಗತಿಗಳ ಗುತ್ತೆಯನ್ನು ಪಡಕೊಂಡಲ್ಲಿ ಜನರಾದರೂ ಪ್ರತಿ ಒಂದು ವಿಷಯದ ಕುರಿತು ಸರಕಾರದ ಮಾನ್ಯತೆಯನ್ನೂ ವಿದ್ಯಾಪೀಠದ ಅನುಮತಿಯನ್ನೂ ನಿರೀಕ್ಷಿಸುತ್ತಿರುವುದು ಆಶ್ಚರ್ಯವಲ್ಲೆಂತಲೇ ಹೇಳಬೇಕಾಗುತ್ತದೆ. ಆದುದರಿಂದ ನಮ್ಮ ದೇಶದ ವಿದ್ಯಾರ್ಥಿಗಳ ಪ್ರವೃತ್ತಿಯು ವ್ಯಾಪಾರ ಮುಂತಾದ ಉಪಯುಕ್ತ ವಿಷಯದಲ್ಲಿ ಉಂಟಾಗದೆ ಮೇಲೆ ಹೇಳಿದಂತೆ ಅನ್ಯ ವಿಷಯಗಳಲ್ಲಿ ಸಂಭವಿಸುತ್ತದಾದರೆ ವಿದ್ಯಾರ್ಥಿಗಳ ಈ ವರ್ತನೆಗೆ ಇಲ್ಲಿಯ ಯುನಿವ್ಹರ್ಸಿಟಿಗಳು ವ್ಯಾಪಾರ ಶಿಕ್ಷಣದ ಸಮಾವೇಶವನ್ನು ಮಾಡದೆ ಇದ್ದದ್ದೆ ಮುಖ್ಯ ಕಾರಣವೆಂದು ಈಗ ಸಾಮಾನ್ಯ ಎಲ್ಲರಿಗೆ ಗೊತ್ತಾಗಿದೆ.

ಈ ಸಂಗತಿಯು ಜನರಿಗೆ ಮಾತ್ರ ತಿಳಿದಿದೆಂತಲ್ಲ. ಯುನಿವರ್ಸಿಟಿಗಳಿಗೂ ತಿಳಿಯ ಹತ್ತಿದೆ. ಮತ್ತು ಹೀಗೆ ತಿಳಿದುಕೊಂಡು ಮುಂಬಯಿ ಯುನಿವರ್ಸಿಟಿಯು ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಒಂದು ಬಗೆಯ ಚರಿತಾರ್ಥತೆಯನ್ನು ಮೊದಲೇ ಕೊಟ್ಟಿದೆ. ಈಚೆಗೆ ಕಲಕತ್ತಾ ಯುನಿವ್ಹರ್ಸಿಟಿಯ ಲಕ್ಷ್ಯದಲ್ಲಿಯೂ ಈ ಕೊರತೆಯು ಕಂಡು ಬಂದಿದೆಂದು ತೋರುತ್ತದೆ. ವ್ಯಾಪಾರ ಶಿಕ್ಷಣದ ವಿಷಯದಲ್ಲಿ ಅಲ್ಲಿಯ ವಿಶ್ವವಿದ್ಯಾಲಯಕ್ಕೆ ಪ್ರೊ. ಸುಭೇದಾರ ಎಂಬವರು ಒಂದು ಸ್ಮರಣಲೇಖ (Memorandum) ವನ್ನು ಕಳುಹಿಸಿದ್ದಕ್ಕೆ ಆ ವಿಶ್ವವಿದ್ಯಾಲಯದ ವೈಸ-ಚಾನ್ಸಲರುಗಳಾದ ಡಾ. ಸರ್ವಾಧಿಕಾರಿ ಎಂಬವರು ಬರಿಯುವದೇನೆಂದರೆ:—

(ವ್ಯಾಪಾರದ ರಂಗಭೂಮಿಯಲ್ಲಿ) ಸೊಕ್ಕಚರು, ಮಾರ್ವಾಡಿಯರು, ಪಾರ್ಸಿಯರು, ಭಾಟಿಯಾ ಜನರು ತಮ್ಮ ಕೆಲಸವನ್ನು ಬಹು ನಿಪುಣತೆಯಿಂದ ಸಾಧಿಸುತ್ತಾರೆ. ಇದು ಒಂದೇ ದಿವಸದ ಪರಿಶ್ರಮದ ಫಲವಲ್ಲ; ಇವಕ್ಕೆ ಅನೇಕ ವರ್ಷಗಳು ಹೋಗಿವೆ. ವ್ಯಾಪಾರಿಗಳ ಮಕ್ಕಳಾದ ಯೌವನಸ್ಥರಿಗೆ ಸುತ್ತುಮುತ್ತಲಿನ ಪರಿಸ್ಥಿತಿಯಿಂದ ಹೆಚ್ಚಿನ ಲಾಭವುಂಟಾಗುತ್ತದೆಂಬದು ನಿಜ. ಕಾರಣವೇನೆಂದರೆ, ಈ ಯುವಕರು ಪೂರ್ವ ಪರಂಪರೆಯಿಂದಲೂ ಆಯಾ ಪರಿಸ್ಥಿತಿಯಿಂದಲೂ ವ್ಯಾಪಾರ ಕೈಗಾರಿಕೆ ಮುಂತಾದ ಸಂಗತಿಗಳಲ್ಲಿಯೇ ಬೆಳೆದವರಾಗಿರುತ್ತಾರೆ. ಆದರೆ ಪೂರ್ವ ಪರಂಪರೆ ಮತ್ತು ಪರಿಸ್ಥಿತಿ ಈ ಎರಡು ಸಂಗತಿಗಳು ವ್ಯಾಪಾರಾಭಿವೃದ್ಧಿಗೆ ಸಹಕಾರಿಗಳಾಗಿದ್ದವೆಂಬುದು ನಿಜವಾದರೂ ಈ ಅನುಕೂಲತೆಗಳಿಲ್ಲದವರು ವ್ಯಾಪಾರಕ್ಕೆ ಅಯೋಗ್ಯರೆಂದು ಹೇಳುವುದು ಮಾತ್ರ ಎಂದೂ ಯೋಗ್ಯವಾಗಲಾರದು. ಇಂಥಾ ವ್ಯಾಪಾರದ ಪ್ರಶ್ನೆಯನ್ನು ಕೈಕೊಳ್ಳುವುದು ಸುಲಭವಲ್ಲ. ಈ ಪ್ರಶ್ನೆಯಿಂದ ಎಷ್ಟೋ ಜನರಲ್ಲಿ ಹೇಯತೆ, ವಿರೋಧ ಅಥವಾ ನಿರಾಶೆ ಮುಂತಾದವು ಹುಟ್ಟಬಹುದು. ಪರಂತು, ಕೆಲಸಕ್ಕೆ ಕೈಹಾಕುವಾಗ ಯಶಸ್ಸಿನ ಭಾಗಕ್ಕಿಂತ ಸಂಕಷ್ಟಗಳೇ ಹೆಚ್ಚಾಗಿರುವವೆಂದು ನಮಗೆ ಮುಖ್ಯವಾಗಿ ತೋರುತ್ತದೆ. ಈ ಇಂಥಾ ಸಂಕಷ್ಟಗಳು ಬಂದಾವೆಂದು ನಾವು ನೆನಸಿದರೆ ಅವುಗಳಿಗೆ ಸರಿಯಾಗಿ ಬಲವತ್ತಾದ ಸ್ಪರ್ಧೆ, ಸ್ವಾವಲಂಬನ; ಹೆಚ್ಚು ಹೆಚ್ಚು ಪರಿಶ್ರಮದಿಂದಲೂ ಜಾಗೃತೆಯಿಂದಲೂ ಮಾಡುವ ಪ್ರಯತ್ನ ಈ ಪ್ರತಿಕೂಲ ಸಂಗತಿಗಳನ್ನು ನಾವು ಕೈಕೊಳ್ಳಬೇಕಾದೀತು. ಕಲಾಶಾಸ್ತ್ರಗಳಲ್ಲಿ ಮೊದಲಿನಿಂದಲೇ ಅಭಿವೃದ್ಧಿಯನ್ನು ತಾತ್ವಿಕ ಮತ್ತು ವ್ಯವಹಾರಿಕ ಈ ಎರಡು ಬಗೆಗಳಿಂದ ಮಾಡಿಕೊಂಡಿರುವವರಿಗೆ ಈ ವ್ಯಾಪಾರ ಶಿಕ್ಷಣವೆಂದೂ ಕಷ್ಟವಾಗಲಿಕ್ಕಿಲ್ಲ.

ಡಾ. ಸರ್ವಾಧಿಕಾರಿಯವರ ಈ ಅಭಿಪ್ರಾಯವನ್ನು ನೋಡುವಾಗ ವ್ಯಾಪಾರ ಶಿಕ್ಷಣದ ಕಡೆಗೆ ಯುನಿವರ್ಸಿಟಿಗಳೆ— ಕನಿಷ್ಟಪಕ್ಷಕ್ಕೆ ಕಲ್ಕತ್ತೆಯ ಯುನಿವರ್ಸಿಟಿಯ ಗಾಳಿಯು ಅನುಕೂಲವಾಗಿ ಬೀಸಹತ್ತಿದೆಂತ ತೋರುತ್ತದೆ. ಮತ್ತು ಹಾಗೆ ನಿಜವಾಗಿ ಬೀಸಿದ್ದಾದರೆ ಅದೊಂದು ನಮ್ಮ ಸುದೈವವೇ ಸರಿ. ಬೇರೆ ಯುನಿವರ್ಸಿಟಿಯ ಬೇರೆ ಬೇರೆ ಸಂಗತಿಗಳನ್ನು ಮನಸ್ಸಿಗೆ ತಂದು ನಮ್ಮ ಸುದೈವವನ್ನು ಚಿಂತಿಸುವಾಗ ನಮ್ಮ ಮದ್ರಾಸು ಯುನಿವರ್ಸಿಟಿಯ ಮಹಾ ನಿದ್ರೆಯನ್ನು ಕಂಡು ದುರ್ದೈವದ ಸ್ಮರಣೆಯೂ ಆಗದೆ ಇರದು! ಮುಂಬಾಯಿ ಯುನಿವರ್ಸಿಟಿಯಲ್ಲಿ ವ್ಯಾಪಾರಕ್ಕೆ ಸ್ಥಾನ ಸಿಕ್ಕಿತು; ಕಲ್ಕತ್ತೆಯಲ್ಲಿ ಎಡೆಯುಂಟಾಗುತ್ತಿದೆ; ನಮ್ಮ ಮದ್ರಾಸಿನಲ್ಲಿ ಇನ್ನೂ ತಡೆಯೇ ಇದೆ! ಇದು ಶೋಚನೀಯವಲ್ಲವೇ?

ಸೌಂದರ್ಯಾಭಿವೇಶವು ದೇಶಾಭಿಮಾನಕ್ಕೆ ಒಂದು ಕಾರಣ.

ಅನೇಕರಿಗೆ ತಮ್ಮ ಸ್ಥಳದಲ್ಲಿರುವ ಸೌಂದರ್ಯವು ತಮಗೆ ತಿಳಿಯುವುದಿಲ್ಲ; ಹಾಗೆಯೇ ಅದರಲ್ಲಿರುವ ವಿಕಾರಗಳೂ ಸಹಾ ತಿಳಿಯುವುದಿಲ್ಲ. ಇದಕ್ಕೆ ಕಾರಣವೇನು? "ಸಲಿಗೆಯು ಗೌರವವನ್ನು ಹೋಗಲಾಡಿಸುವುದು" ಎಂಬುದೊಂದು ಮುಖ್ಯ ಕಾರಣವೆಂದು ತೋರುವುದು. ಕುಂಟನೂ, ಕುರುಡನೂ, ರೋಗಿಷ್ಟನೂ ಆದ ಮನುಷ್ಯನೊಬ್ಬನನ್ನು ದಾರಿಯಲ್ಲಿ ಮೊದಲೊಂದಾವರ್ತಿ ನೋಡಿದಾಗ್ಗೆ ಬಹಳ ಕನಿಕರವೂ ಪರಿತಾಪವೂ ಉಂಟಾಗುವುದು. ಹಾಗೆಯೇ ಕೆಲವು ದಿವಸಗಳು ಅವನನ್ನು ನೋಡುತ್ತಾ ಬರುವಾಗ ಅಂತಹ ಸಮಯಗಳಲ್ಲಿ ತಮ್ಮ ಸಂಗತಿಯನ್ನೇ ತಾವು ಯೋಚಿಸಿಕೊಳ್ಳುತ್ತಿರುವುದರಿಂದ ಅವನ ಕಷ್ಟ ದುಃಖಹಿಂಸೆಗಳಲ್ಲಿರುವ ಅನುತಾಪವು ಬರ

ಬಹು ಕಡಮೆಯಾಗುತ್ತಾ ಕೊನೆಗೆ ಅದೂ ಸಹ ದಿನಚರಿಯದ ಇತರ ವಿಷಯಗಳಂತೆ ಸಹಜವಾಗಿ ಬಿಡುವುದು. ಮತ್ತು ಕೆಲವು ಸಂದರ್ಭಗಳಲ್ಲಿ ಅದು ಸಹಜವಾಗಿ ಉದಾಸೀನತೆ ಹುಟ್ಟುವುದಕ್ಕೆ ಬದಲು ಅದನ್ನು ಕಂಡರೆ ಬೇಸರವೂ, ಜಿಹಾಸೆಯೂ, ಅಸಹ್ಯವು ಕೂಡ ಹುಟ್ಟುವುದುಂಟು. ಅದರಂತೆ ಸುಂದರವಾದ ವಸ್ತುಗಳನ್ನು ಮೊದಲು ನೋಡಿದಾಗ್ಗೆ ಉಂಟಾಗುವ ಹರ್ಷವು ಬರಬರ ವಾಡಿಕೆಯಿಂದ ಕಡಮೆಯಾಗುವುದು ಸಹಜವು. ಅಂದರೆ ಆ ವಸ್ತುವಿನಲ್ಲಿರುವ ಸೌಂದರ್ಯವು ಕಡಮೆಯಾಯಿತೆಂದು ಅಲ್ಲ. ಅದನ್ನು ನೋಡುವವನ ಮನಸ್ಸಿನಲ್ಲಿದ್ದ ಸೂಕ್ಷ್ಮತೆಯು ಕಡಮೆಯಾಗಿ ಅದು ಒರಟಾಯಿತೆಂದು ಹೇಳಬಹುದು. ಒಂದು ದೇಶದಲ್ಲಿನ ಸೌಂದರ್ಯ ವಿಕಾರಗಳೂ ಸಹ ಹಾಗೆಯೇ. ಆದರೆ ದಿನವಹಿ ನೋಡುವ ವಸ್ತುಗಳನ್ನೇ ಪ್ರತಿ ದಿನವೂ, ಪ್ರತಿ ಸಲವೂ ಹೆಚ್ಚು ಆಸಕ್ತಿಯಿಂದ ಗಮನವಿಟ್ಟು ನೋಡುತ್ತಾ ಬಂದರೆ ದಿನ ದಿನಕ್ಕೆ ಅದರ ಸೌಂದರ್ಯವು ಹೆಚ್ಚು ಹೆಚ್ಚಾಗಿ ಕಾಣುತ್ತಾಬರುವುದು. ಅಸೌಂದರ್ಯವೂ ಕೂಡ ಹಾಗೆಯೇ. ಆದ್ದರಿಂದ ಒಂದಾವರ್ತಿ ಅತ್ಯಂತ ಸುಂದರವಾಗಿ ಕಂಡುಬಂದ ವಸ್ತುವಿನಲ್ಲಿರುವ ಸೌಂದರ್ಯವನ್ನು ಪದೇ ಪದೇ ಪರೀಕ್ಷಿಸುವುದರಿಂದ ಅದರ ಸೌಂದರ್ಯವು ನಮ್ಮ ಮನಸ್ಸಿನಲ್ಲಿ ವೃದ್ಧಿಯಾಗುವುದು. ಹಾಗೆಯೇ ನಮ್ಮ ದೇಶದ ಸೌಂದರ್ಯವನ್ನು ನಾವು ಆಗಾಗ್ಗೆ ಜ್ಞಾಪಿಸಿಕೊಳ್ಳುವುದರಿಂದ ನಮ್ಮ ಮನಸ್ಸಿನಲ್ಲಿ ಅದರ ಸೌಂದರ್ಯವು ಹೆಚ್ಚುವುದು. ಸುಂದರವಾದ ವಸ್ತುಗಳಲ್ಲಿರುವ ಸೌಂದರ್ಯವನ್ನು ಮತ್ತೂ ವಿಶೇಷವಾಗಿ ಗ್ರಹಿಸಿ ಸಂತೋಷಿಸುವ ಶಕ್ತಿಯು ನಮ್ಮಲ್ಲಿ ಹೆಚ್ಚುವುದು. ಅಲ್ಲದೆ ಯಾವುದರ ಸೌಂದರ್ಯದಲ್ಲಿ ನಮ್ಮ ಮನಸ್ಸು ನೆಲೆಗೊಳ್ಳುವುದೋ ಆ ವಸ್ತುವಿನಲ್ಲಿ ಪ್ರೇಮವು ಹುಟ್ಟುವುದು. ಯಾವುದರಲ್ಲಿ ಪ್ರೇಮವು ಹುಟ್ಟುವುದೋ ಅದರ ಮೇಲಾಗಾಗಿ ನಮ್ಮ ತಪ್ಪುಗಳನ್ನು ಎಣಿಸದೆ ನಮ್ಮ ಕೈಲಾಗುವಷ್ಟು ಆತ್ಮಯತ್ನವನ್ನು ಸಂತೋಷದಿಂದ ಮಾಡಲು ಯತ್ನಿಸುವೆವು. ಇದರಿಂದ ದೇಶಾಭಿಮಾನವು ಬೆಳೆಯುವುದು. ಆದ್ದರಿಂದ ಈ "ಸ್ವದೇಶಾಭಿಮಾನಿಯು" ವಾಚಕರಿಗೆ ನಿಜವಾದ ದೇಶಾಭಿಮಾನವು ಹೆಚ್ಚಿ ದೇಶಸೇವಾನಿರತತೆಯು ಹೆಚ್ಚಲು ಈ ಲೇಖನವು ಕೊಂಚಮಟ್ಟಿಗಾದರೂ ಅನುಕೂಲಿಸಿದ ಪಕ್ಷದಲ್ಲಿ ಲೇಖನದ ಉದ್ದೇಶವು ಸಫಲವಾಗುವುದು. ದೃಷ್ಟಾಂತಕ್ಕಾಗಿ ಕಾಸರಗೋಡೊಂದನ್ನು ತೆಗೆದುಕೊಳ್ಳುವ. ಈ ಜಿಲ್ಲೆಯನ್ನು ರೈಲುದ್ವಾರ ಪ್ರವೇಶಿಸುತ್ತಲೇ ಮೊದಲು ಸಿಕ್ಕುವ ಕಾಸರಗೋಡು ಸ್ಟೇಶನಿನ ಬಳಿ ನಿಂತು ಸುತ್ತಲೂ ತಿರುಗಿ ನೋಡಿದರೆ ಮನಸ್ಸಿಗೆ ಎಂತಹ ಆನಂದ! ಪಶ್ಚಿಮ ಕಡೆ ನೋಡಿದರೆ ಬಿಡನೆಯ ಸಾಯಂಕಾಲದ ವೇಳೆ; ಸೂರ್ಯನು ಮುಳುಗಲು ಇನ್ನೂ ಸಾವಕಾಶ; ತಂಗಾಳಿಯಿಂದ ಸಮುದ್ರದಲ್ಲಿ ಸಳ ಸಳ ಶಬ್ದದಿಂದ ದಡಕ್ಕೆ ಹೊಳೆಯುತ್ತಿರುವ ಅಲೆಗಳು, ಅವುಗಳಲ್ಲಿ ಒಡಕು ಒಡಕಲಾಗಿ ಫಳಫಳನೆ ಹೊಳೆಯುವ ಸೂರ್ಯನ ಪ್ರತಿಬಿಂಬ; ಅದರ ಹೊಳಪಿನ ಕಾಂತಿ; ಮೇಲ್ಗಡೆ ನೀಲವಾದ ಅಗಾಧವಾದ ಆಕಾಶ; ಅದರಲ್ಲಿ ನಿರ್ಮಲವಾದ ಆಗಸನ ಮಡಿಗಿಂತ ಅನೇಕ ಮಡಿ ಶುಭ್ರವಾದ ಬಿಳಿಯ ಮೋಡ; ಅದರ ಪ್ರಭೆಯು ಗಾಳಿಗೆ ತೂಗಾಡುತ್ತಿರುವ ಹಸುರೆಲೆಗಳ ಮೇಲೆ ಬೀಳುವುದರಿಂದುಂಟಾಗುವ ಹೊಳಪು. ಇನ್ನೊಂದು ಕಡೆ ತಿರುಗಿದರೆ ನಾನಾ ವರ್ಣದ ಚಿತ್ರವಿಚಿತ್ರ ಉಡುಪುಗಳಿಂದ ಮೆರೆಯುವ ಜನರ ಸಂದಣಿ; ಮರಗಳ ಅಂದ; ರೈಲು ರಸ್ತೆಯ ಓಣಿ; ಮೇಲಿನ ಸೇತುವೆ; ಹಾಗೆಯೇ ತಿರುಗಿ ನೋಡಿದರೆ ಗುಡ್ಡದಂತೆ ತಗ್ಗಿನಿಂದ ಮೇಲಕ್ಕೆ ಏರುವ ಭೂಮಿ; ಗುಡ್ಡದಿಂದ ಕೆಳಗಡೆಗೆ ಇಳಿಯುವ ತಗ್ಗು. ಊರುಗಳಲ್ಲಿ ಹೊರಟರೆ ದಿವ್ಯವಾದ ವೃಕ್ಷ ಸಮೂಹಗಳಿಂದ ಅತ್ಯಂತ ಮನೋಹರವಾದ ತೋಟಗಳ ಮಧ್ಯೆ ಇರುವ ಮನೆಗಳೂ, ಮನೆಯಿಂದ ಮನೆಗೆ ಹೋಗಲು ಹಾವಿನಂತೆ ಅಂದವಾಗಿ ತಿರುಗುವ ಓಣಿಗಳೂ, ಊರನ್ನು ಬಿಟ್ಟು ಹೊರಗೆ ಹೊರಟರೆ ಗುಡ್ಡಗಳೂ, ಗಿಡಗಳೂ ಬಳ್ಳಿಗಳೂ, ದೊಡ್ಡ ಮರಗಳೂ, ಚಿಕ್ಕ ದೊಡ್ಡ ನಾನಾ ಬಗೆಯ ಹೊಳೆಗಳೂ, ಅವುಗಳಲ್ಲಿ ಮನೋಹರವಾಗಿ ಧ್ವಜಪತಾಕೆಗಳಿಂದ ಕೂಡಿ ಓಡ್ಯಾಡುತ್ತಿರುವ ದೋಣಿಗಳೂ, ಗುಡ್ಡಗಳ ಮಧ್ಯದಲ್ಲಿರುವ ಕಣಿವೆಗಳೂ, ತಗ್ಗು ಪ್ರದೇಶಗಳೂ, ಅದರಲ್ಲಿ ಕಂಡುಬರುವ ಹಸರು ತುಂಬಿದ ಗದ್ದೆಯ ಬೈಲುಗಳೂ, ಗುಡ್ಡದ ಮೇಲೆ ನಿಂತು ನೋಡಿದರೆ ಸುತ್ತಲೂ ಕಾಣುವ ಗುಡ್ಡಗಳೂ, ಹಳ್ಳಗಳೂ, ಊರುಗಳೂ, ಜನಗಳೂ, ನದಿಗಳೂ, ಸಮುದ್ರ, ಆಹಾ! ನಿಜವಾಗಿಯೂ ಇಲ್ಲಿ ವಾಸಿಸುವ ಜನಗಳ ಪುಣ್ಯವು ಎಂಥಾದ್ದೆಂದು ಒಂದೊಂದುವೇಳೆ ತೋರುವುದು.

ಈ ದಕ್ಷಿಣಕನ್ನಡಾ ಜಿಲ್ಲೆಯಲ್ಲಿರುವ ಲೆಕ್ಕವಿಲ್ಲದಷ್ಟು ಅನೇಕ ಸೌಂದರ್ಯಗಳನ್ನು ವರ್ಣಿಸಿ ಹೇಳಬೇಕೆಂಬುದು ಅಷ್ಟಾಗಿ ಈ ಲೇಖನದ ಉದ್ದೇಶವಲ್ಲ. ಆದರೆ ವಾಚಕರಲ್ಲಿ ಸೌಂದರ್ಯಾಭಿವೇಶವುಳ್ಳವರಲ್ಲಿ ತಮ್ಮ ದೇಶದ ಸೌಂದರ್ಯಗಳಲ್ಲಿ ಪ್ರೇಮ ಹೆಚ್ಚಿ, ಅದರ ಮೂಲಕ ದೇಶಾಭಿಮಾನವು ವೃದ್ಧಿಯಾಗಿ, ದೇಶದಲ್ಲಿ ಇತರರಲ್ಲಿಯೂ ಆ ಪ್ರೇಮವು ಹರಡಿ, ಎಲ್ಲರೂ ಮಾತೃ ಭೂಮಿಯ ಸೇವೆಯನ್ನು ಮಾಡುವುದರಲ್ಲಿ ಹೆಚ್ಚು ಉತ್ಸಾಹಶೀಲರಾಗುವಂತೆ ಅನುಗ್ರಹಿಸಲಿ!

ದೇಶಸೌಂದರ್ಯಾಭಿಮಾನಿ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಮುಂಬಾಯಿ ಇಲಾಖೆಯಲ್ಲಿ ಬಾಳೆಗಿಡದ ಸಾಗುವಳಿಯ ಕುರಿತು ಒಂದು ಲೀಫ್ಲೆಟನ್ನು ಗವರ್ನಮೆಂಟಿನವರು ಇತ್ತೀಚೆಯಲ್ಲಿ ಹೊರಡಿಸಿದ್ದಾರೆ. ಇದರಲ್ಲಿರುವ ಕೆಲವು ಅನುಭವವನ್ನು ನಿಮ್ಮ ವಾಚಕರ ಅವಗಾಹನೆಯ ಬಗ್ಗೆ ಈ ಕೆಳಗೆ ಉತ್ತರಾಯಿಸಿದ್ದೇನೆ.

ಸಾಧಾರಣವಾಗಿ ನೀರಿನ ಅನುಕೂಲತೆ ಇದ್ದ ಎಲ್ಲಾ ಭೂಮಿಗಳಲ್ಲಿ ಇದು ಚನ್ನಾಗಿ ಬೆಳೆಯುತ್ತದೆ. ಆದರೆ ಭೂಮಿಯು ಜವಳು ಹತ್ತದಂಥಾದ್ದೂ ಸಾಕಷ್ಟು ಕಸುವಿನದೂ ಇರಬೇಕು. ಸೆಗಣಿ ಗೊಬ್ಬರ ಹಾಕುವದರಿಂದಲೂ ಗುರೆಳ್ಳು ಅಥವಾ ಸಣಬು ಬಿತ್ತಿ ಹೂವಿಗೆ ಬಂದಮೇಲೆ ನೆಲದಲ್ಲಿ ಹೊತೆಯುವದರಿಂದಲೂ ಭೂಮಿಯ ಕಸುವು ಹೆಚ್ಚಾಗುತ್ತದೆ. ... ... ಗಿಡಗಳನ್ನು ಹಚ್ಚಲಿಕ್ಕೆ ತಗ್ಗುಗಳನ್ನು ಕಡಿಯಬೇಕು. ಇವು ೨ ಫೂಟ್ ಉದ್ದ, ೨ ಫೂಟ್ ಅಗಲ ಮತ್ತು ೨ ಫೂಟ್ ಆಳವಿರಬೇಕು. ಇವುಗಳ ನಡುವಿನ ಅಂತರವು ಎಷ್ಟಿರಬೇಕೆಂಬುದು ಇನ್ನೂ ಗೊತ್ತಾಗಿಲ್ಲ. ... ... ಪ್ರಯೋಗದಿಂದ ಗೊತ್ತಾಗುವ ತನಕ ಅಂತರವನ್ನು ೧೦ ಫೂಟ್ ಇಡಲಿಕ್ಕೆ ಅಡ್ಡಿ ಇಲ್ಲ. ... ... ಸಸಿಗಳನ್ನು ಮಳೆಗಾಲದ ಪ್ರಾರಂಭಕ್ಕೆ ನಡಬೇಕು. ಅವು ದೊಡ್ಡವೂ ಮತ್ತು ಚನ್ನಾಗಿ ಬೆಳೆದವೂ ಇರಬೇಕು. ವೆಸ್ಟ ಇಂಡಿಯದಲ್ಲಿ ಎಂಟು ತಿಂಗಳ ಸಸಿಗಳನ್ನು ಹಚ್ಚುವ ಪರಿಪಾಟವುಂಟು. ಸಸಿಗಳನ್ನು ತಾಯಿಮರದಿಂದ ಜಾಗ್ರತೆಯಾಗಿ ಅಪಾಯವಾಗದಂತೆ ಕಡಿದು, ಅವುಗಳ ಹಳೇ ಬೇರುಗಳನ್ನು ಮತ್ತು ೮ ಇಂಚಿನ ವರೆಗೆ ಬಿಟ್ಟು ಉಳಿದ ಬೊಡ್ಡೆಯ ಮೇಲಿನ ಭಾಗವನ್ನು ಕೊಯಿದು ಬಿಡಬೇಕು. ಸೆಗಣಿಗೊಬ್ಬರ ಮತ್ತು ಮಣ್ಣು ಇವನ್ನು ಸಮಭಾಗ ತಕ್ಕೊಂಡು ಮಿಶ್ರ ಮಾಡಿ ತಗ್ಗಿನಲ್ಲಿ ಹಾಕಿ ಆ ಮೇಲೆ ಸಸಿಗಳನ್ನು ನಡಬೇಕು. ... ... ಬಾಳೇ ಮರಿಗಳಿಗೆ ಗೊಬ್ಬರವು ಬಹಳೇ ಬೇಕು. ಹಿಂದೂಸ್ಥಾನದಲ್ಲಿ ವಿಶೇಷವಾಗಿ ಹ್ಯೂಮಸ್ (ಸತ್ತಪ್ರಾಣಿ ಮತ್ತು ವನಸ್ಪತಿಗಳು ಕೊಳೆತು ಮಣ್ಣಿನಲ್ಲಿ ಕೂಡಿದ ಪದಾರ್ಥ) ಎಂಬದು ಭೂಮಿಯಲ್ಲಿ ಬಹಳೇ ಕಡಿಮೆ ಇರುವದರಿಂದ ಸೆಗಣಿಯ ಗೊಬ್ಬರ ಮತ್ತು ಮೇಲೆ ಹೇಳಿದ ಗ್ರೀನ್ ಮೆನ್ಯೂರ್ ಇವು ಹಾಕಿದಷ್ಟು ಬೇಕೇ ಬೇಕು. ವಸಯಿಯ ಬಾಜುಕ್ಕೆ ದರ ಒಂದು ಗಿಡಕ್ಕೆ ೧೦ ಪೌಂಡು ಮೀನದ ಗೊಬ್ಬರ ಮತ್ತು ಎರಡು ಸಾರಿ ಮೂರು ಮೂರು ಪೌಂಡಿನಂತೆ ಹಿಂಡಿಗೊಬ್ಬರ ಒಂದೊಂದು ತಿಂಗಳ ನಂತರದ ಮೇಲೆ ಹಾಕುತ್ತಾರೆ. ವಿಶಾಸದ ಗೊಬ್ಬರವನ್ನು ಮರಹಚ್ಚಿದ ಕೂಡಲೇ ಕೊಡುತ್ತಾರೆ. ಈ ಪದ್ಧತಿಯನ್ನು ಎರಡನೇ ಕಡೆ ಅನುಕರಿಸಿ ನೋಡಬಹುದು. ಅನ್ಯದೇಶಗಳಲ್ಲಿ ಗ್ರೀನ್ ಮೆನ್ಯೂರವು ಬಹಳೇ ಉಪಯೋಗವುಳ್ಳದ್ದೆಂಬು ಕಂಡುಬಂದದೆ. ಅದನ್ನು ಇಲ್ಲಿ ಉಪಯೋಗಿಸಿ ನೋಡಬಹುದು. ಮಾಡುವ ಕೃತಿ ಹ್ಯಾಗೆಂದರೆ:— ಬಾಳೆತೋಟದಲ್ಲಿ ಮಳೆಗಾಲದ ಪ್ರಾರಂಭಕ್ಕೆ ಸಣಬು ಬಿತ್ತಿ ಒಂದುವರೆ ತಿಂಗಳಿಗೆ ಅದನ್ನು ರೆಂಟೆಯಿಂದ ನೆಲದಲ್ಲಿ ಹೊತೆಯಬೇಕು. ಮತ್ತು ನೆಲದ ಮೇಲೆ ಒಣಗಿದ ಹಳೇ ಬಾಳೇ ಎಲೆಗಳನ್ನೂ ಚಿಕ್ಕ ಕಸಕಡ್ಡಿಯನ್ನೂ ಹರವಬೇಕು. ಹೀಗೆ ಮಾಡುವದರಿಂದ ನೆಲದೊಳಗಿನ ಹಸಿಯು ಬೇಗ ಆರುವುದಿಲ್ಲ. ಕೈಕುಂಟೆ, ಕುರುಪಿಗಳನ್ನು ಆಡಿಸಿ ನೆಲವನ್ನು ಪೊಳ್ಳು ಮಾಡುವದರಿಂದಲೂ ಹಸಿಯು ಆರಿಹೋಗುವದಿಲ್ಲ. ಇದರಿಂದ ಮತ್ತೊಂದು ಲಾಭವೇನೆಂದರೆ ಬೇರುಗಳಿಗೆ ಹವೆಯು ಸಿಗುತ್ತದೆ. ಈ ಕ್ರಮವನ್ನು ದರಸಾರೆ ನೀರುಹಾಯಿಸಿದ ನಂತರ ನೆಲ ಗಟ್ಟಿಯಾಗುವದಕ್ಕಿಂತ ಪೂರ್ವದಲ್ಲಿ ಮಾಡಬೇಕು.

ಮರವು ದೊಡ್ಡದಾಗಿ ಬೆಳೆದು ಈಯುವ ತನಕ ಅದರ ಮರಿಗಳನ್ನು ಬೆಳೆಯಗೊಡಬಾರದು. ನಂತರ ಒಂದು ಅಥವಾ ಎರಡಕ್ಕಿಂತ ಹೆಚ್ಚಿನ ಮರಗಳನ್ನು ತೆಗೆದು ಬಿಡಬೇಕು. ತೋಟವನ್ನು ಇದ್ದ ಸ್ಥಳದಲ್ಲಿಯೇ ಎಷ್ಟು ವರುಷಗಳ ವರೆಗೆ ಇಡಬೇಕೆಂಬುವದು ಇನ್ನೂ ಗೊತ್ತಾಗಿಲ್ಲ. ಪ್ರತಿ ವರುಷವೇನೂ ಬದಲುಮಾಡುವ ಕಾರಣವಿಲ್ಲ. ಚನ್ನಾಗಿ ಜೋಪಾಸನೆ ಮಾಡಿದರೆ ಆರು ವರುಷಗಳ ವರೆಗೂ ಇಡಬಹುದು. ಪರಂತು, ದರ ಒಂದು ಬಡ್ಡಿಗೆ ಎರಡರಕ್ಕಿಂತಲೂ ಹೆಚ್ಚಿಗೆ ಮರಿಗಳನ್ನಿಡಬಾರದು.

ಬಾಳೆಯು ಫಲಿಸುವ ವೇಳೆಯು ಅದರ ಜಾತಿ ಮತ್ತು ಜೋಪಾಸನೆಯ ಮೇಲೆ ಅವಲಂಬಿಸಿರುತ್ತದೆ. ಸಾಧಾರಣವಾಗಿ ಗಿಡವು ಈಯಲಿಕ್ಕೆ ೧೦ರಿಂದ ೧೫ ತಿಂಗಳುಗಳು ಬೇಕು. ಹಣ್ಣಿಗೆ ಬಂದ ಕೊನೆಯನ್ನು ಕಾಳಜಿಯಿಂದ ಕೊಯಿದು ಫಲಗಳನ್ನು ಅಪಾಯವಾಗದಂತೆ ಇಡಬೇಕು. ಕೊನೆಕೊಯಿದ ಗಿಡವನ್ನು ಇದ್ದ ಸ್ಥಳದಲ್ಲಿಯೇ

ಬಿಟ್ಟು ಒಣಗಿದ ನಂತರ ಕಿತ್ತು ನೆಲದ ಮೇಲೆ ಹರವಬೇಕು. ಅಂದರೆ ಅದು ಕೊಳೆತು ಗೊಬ್ಬರವಾಗುವದು.

ಈ ಜಿಲ್ಲೆಯಲ್ಲಿ ಬಿಳೇ ಎಳ್ಳನ್ನು ಹೆಚ್ಚು ಪೈದಾಸ್ತು ಮಾಡುತ್ತಾರೆ. ಇದರಿಂದ ಜಾಸ್ತಿ ಎಣ್ಣೆ ಹುಟ್ಟುತ್ತದೆಂಬ ಅಭಿಪ್ರಾಯವಿದೆ. ನಮ್ಮ ಜಿಲ್ಲೆಯಲ್ಲಿ ಕರೀ ಎಳ್ಳೇ ಬಿತ್ತುವ ಕ್ರಮ. ಮುಂಬಾಯಿ ಇಲಾಖೆಯಲ್ಲಿ ಈ ಎರಡು ಎಳ್ಳು ಅಲ್ಲದೆ—ಕೆಂಪು ಎಳ್ಳು, ಹಚ್ಚೆ ಎಳ್ಳು, (brown) ಬೂದಿಬಣ್ಣದ ಎಳ್ಳು ವಗೈರೆ ಬೇರೆ ಬೇರೆ ಬಣ್ಣದ ಎಳ್ಳು ಪೈದಾಸ್ತು ಮಾಡುತ್ತಾರೆ.

ಬಿಜಾಪುರ.
ತಾ. 10—9—1916. } ಎಲ್ಲೂರ ಸುಬ್ಬರಾವ್.

ಅಯ್ಯಾ ಸ್ವದೇಶಾಭಿಮಾನಿ ಪತ್ರಾಧಿಪರೇ,

ಮಂಗಳೂರು ಶಹರಿನಲ್ಲಿ ಚಲೋ ಬಂಗಲೆಯಲ್ಲಿ ಮೇಜು ಖುರ್ಚಿ ಹಾಕಿಕೊಂಡು ಸದಾ ಮಡಿಬಟ್ಟೆಗಳನ್ನು ತೊಟ್ಟು ಆಗಾಗ್ಯೆ ಅವಸರದಂತೆ ಚಾ, ಕಾಫಿ, ಕೋಕೋ ಇತ್ಯಾದಿ ಪಾನಗಳನ್ನು ಬಿಸಿಬಿಸಿಯಾಗಿ ಕುಡಿದು ವಿಶ್ರಾಂತಿ ಬೇಕಾದರೆ ಮಗ್ಗುಲಲ್ಲಿದ್ದ ಆರಾಮ ಖುರ್ಚಿಯ ಮೇಲೆ ಕಾಲನ್ನು ಚಾಚಿಕೊಂಡಿರುವುದು ಒಂದು ಸುಖ. ನಾವು ಈ ನಮ್ಮ ದಕ್ಷಿಣಾ ಕನ್ನಡ ಜಿಲ್ಲೆಯ ಉತ್ತರ ಕೊನೆಯ ಕುಂದಾಪುರ ತಾಲೂಕಿನ ಪೂರ್ವಭಾಗದಲ್ಲಿ ಮಳೆ ಛಳಿಗಾಳಿಯನ್ನದೆ ನಮ್ಮ ಲೋಕಲ್ ಫಂಡು ರಸ್ತೆಗಳ ಮೇಲೆ ನಡೆಯುವದೋ ಅಥವಾ ಚಕ್ರ ಲಾಗಹೊಡಿಯುವದೋ ನಮ್ಮಗಿನ್ನು ಇನ್ನೊಂದು ಸುಖ! ಹೀಗೆ ಕಷ್ಟಪಡುವದನ್ನು ನೀವೆಂದಿಗೂ ಅರಿತಿರುವಿರಾ? ಜೂನು ಜುಲಾಯಿ ಆಗಸ್ಟು ತಿಂಗಳುಗಳಲ್ಲಿ ನಮಗೆ ಮುಂಗಾರು ಮಳೆ; ರೋಡುಗಳ ದುರುಸ್ತಿ (ದುರ+ಸ್ತಿ) ಅಲ್ಲಲ್ಲಿ ರಸ್ತೆಯ ಮೇಲೆ ಒಂದೆರಡು ಅಡಿ ಆಳದಲ್ಲಿ ಮಣ್ಣು ಕಲಸಿ ಹಾಕಿದಂತೆ ಹರಡಿಸಿಟ್ಟಿದೆ. ರಸ್ತೆ ಬಿಟ್ಟು ಆಚೆ ಈಚೆ ನಡೆಯುವಾ ಅಂದರೆ ಕಲ್ಲು ಮುಳ್ಳುಗಳಿಂದ ತುಂಬಿವೆ. ಕೆಲವು ಕಡೆಗಳಲ್ಲಿ ನಡೆಯುವಾಗ್ಯೆ—ಪುನಹಾ ನಡೆಯುವದೆಂಬ ಶಬ್ದವು ಗಮನದ ವಾಡಿಕೆಯಿಂದ ಉಪಯೋಗಿಸಿದ್ದಲ್ಲದೆ ನಾವು ಮಾಡುವದು ಸರ್ಪ ಗಮನ:—ನಿಮ್ಮ ಆಫೀಸಿನಿಂದ ಈ ಮೂಲೆಯಲ್ಲಿ ಗಮಿಸದೆ ನಮ್ಮನ್ನು ನೋಡುವರೆ ಸಾಧ್ಯವಾಗುವ ಒಂದು ದೂರದರ್ಶಕ ಯಂತ್ರವಿದ್ದರೆ—(ಸರ್ವದಾ ನಿಮ್ಮಂಥಾ ಮಹನೀಯರನ್ನು ಸ್ವತಹಾ ಇಲ್ಲಿಗೆ ಸುಖದ ದೆಸೆಯಿಂದಲೂ ಪ್ರೀತಿಯ ದೆಸೆಯಿಂದಲೂ ಬರಮಾಡಲಾರೆವು)—ಅದಕ್ಕೆ ಕಣ್ಣುಹಾಕಿ ನಮ್ಮನ್ನು ನೀವು ಈಕ್ಷಿಸಿದರೆ ಈ ರಸ್ತೆಗಳ ಮೇಲೆ ಗಮಿಸುವ ನಮ್ಮ ಕೈಕಾಲು ತಲೆ ಮುಂತಾದ ಅವಯವಗಳು ತಪ್ಪಾದ ಜಾಗೆಯಲ್ಲಿ ನಮ್ಮ ದೇಹಕ್ಕೆ ಜೋಡಣೆಯಾಗಿದ್ದಾವೋ ಎಂದು ನೀವು ಸಂಶಯಪಡುವಿರಿ. ರಸ್ತೆಗಳು ಮನುಷ್ಯ ಮೃಗ ಗಾಡಿ ಇವುಗಳ ಚಲಾವಣೆ ಬಗ್ಯೆಯಾಗಿರುತ್ತವೋ ಅಥವಾ "ರಿಪೇರಿ" ದುರುಸ್ತಿ ಬಗ್ಯೆ ಮಾತ್ರ ಮಾಡಿವೆಯೋ ಎಂಬ ಪ್ರಶ್ನೆಗೆ ಅವಕಾಶವುಂಟಾಗುತ್ತದೆ. ಯಾಕಂದರೆ ಮಳೆಗಾಲದಲ್ಲಿ ಈ ರಸ್ತೆಗಳ ಮೇಲೆ ಸುರಿಯುವದೆಂದರೆ ಮನೆ ಕಟ್ಟುವರೆ ಕಲೆಸಿದ ಮಣ್ಣನ್ನು ಹದಮಾಡುವ ರೀತಿಯಾಗುವದು. ಬೇಸಿಗೆಯ ಅವಸ್ಥೆ ನೋಡಿದರೆ ಈ ಮಣ್ಣು ಒಣಗಿ ಹುಡಿಯಾಗಿ ಒಂದೆರಡು ಅಡಿ ಆಳದಲ್ಲಿ ಧೂಳಾಗಿ ಹರಡಿಯಂತೂ ಬೇರೊಂದು ವಿಧದ ಅಭ್ಯಂತರವನ್ನು ಉಂಟುಮಾಡುವದು. ಬೇಸಿಗೆಗೂ ಮಳೆಗೂ ನಡೆಯುವರೆ ತೊಂದರೆಯುಂಟುಮಾಡುವ ಈ ರಸ್ತೆಗಳು "ರಿಪೇರಿ" ಬಗ್ಯೆಯೇ ಇವೆಯೋ ಎಂಬಂತೆ ತೋರುತ್ತದೆ. ಈಗ ನಮ್ಮ ಜಿಲ್ಲೆಗೆ ಬಂದಿರುವ ಈ ಜಿಲ್ಲೆಯ ಅಭಿಮಾನಿಗಳಾದ ಇಂಜಿನಿಯರ್ ಸಾಹೇಬ ಮ| ರಾ| ಸಂಜೀವ ರಾಯರು ತುಸ ಇತ್ತಕಡೆ ಚಿತ್ತೈಸಿದರೆ ನಾವು ಕೆಲವು ಸಲ ತಲೆ ಕೈಕಾಲುಗಳಿಂದ ನಡೆಯುವದಕ್ಕೆ ಯತ್ನಿಸುವದು ತಪ್ಪಿ ದೇವರು ನಡೆಯುಕ್ಕೆ ಇಟ್ಟ ಅವಯವಗಳಿಂದ ಮಾತ್ರ ನಡೆಯುವಂತೆಯಾಗುವದು. ಹೆಚ್ಚಿಗೆ ಬರೆಯಲಾರೆ. ದೂಷಣೆಯೆಂತೆ ತಿಳಿಯದಿರಿ.

ಹೊಸಂಗಡಿ, ಕುಂದಾಪುರ,
ತಾ. 16—9—1916. } ಪಥಿಕರ ಹಿತಕಾಂಕ್ಷಿ.

ಭೋಜನ ತತ್ವ.

ಅಯ್ಯಾ ಸಂಪಾದಕರೆ,

ತಮ್ಮ ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿದ್ದ, ಮದ್ರಾಸು ಕ್ರಿಶ್ಚಿಯನ್ ಕೊಲೇಜಿಯ ವಿದ್ಯಾರ್ಥಿಗಳು ಅದೇ ಕೊಲೇಜಿಯ 'ಫ್ರೀ ನ್ಯಾಟ ಸ್ಕೂಲಿನ ಪಂಚಮರೊಂದಿಗೆ ಸಹಪಙ್ತಿ ಭೋಜನ ಮಾಡಿದರೆಂಬ ವಾರ್ತೆ ನನಗೆ ಬಹಳ ರಸಿಕವಾಗಿ ತೋರಿತು. 'ಊಟ ಮಾಡಿದರೆಂದರೆ ಪಂಚಮರನ್ನು ಒಂದು ಮೂಲೆಯಲ್ಲಿ ಕೂತುಕೊಳ್ಳಿಸಿ ಅಲ್ಲ. ಎರಡು ಮೇಲು ಜಾತಿಯ ಬ್ರಾಹ್ಮಣರ ಮಧ್ಯೆ ಒಬ್ಬ ಪಂಚಮನಂತೆ ಕುಳ್ಳಿರಿಸಿ ಊಟ ಮಾಡಿದರು. ಈ ದೇಶದಲ್ಲಿ ಹೀಗೆ ಹಿಂದೆ ಎಂದೂ ನಡೆದದಿಲ್ಲ.

ಅದೆಲ್ಲವೂ ಸರಿಯೆ, ಆದರೆ ಇಂತಹ ಊಟದಿಂದ ಪ್ರಯೋಜನವೇನಂತೆ? ಜಾತಿಯ ಕಟ್ಟನ್ನು ಕಡಿದುಕೊಂಡೇ ಹಿಂದುಸ್ಥಾನವು ಒಂದು ಜನಾಂಗವಾಗಬೇಕೆಂದೆನ್ನುವವರಿಗೆ ಇದೊಂದು ಕೊಂಡಾಡತಕ್ಕ ವಿಷಯವೆಂದು ತೋರಬಹುದು. ಹೀಗೆ ಊಟ ಮಾಡುವುದರಿಂದ ಅವರೊಳಗೆ ಅನುರಾಗವುಂಟಾಗುವುದು, ಅವರೆಲ್ಲರೂ ಒಡಹುಟ್ಟಿದವರಂತೆ ತಿಳಿದು ಒಂದೇಯಾಗುವರು—ಆದುದರಿಂದ ಇಂತಹ ಊಟಗಳು ಇನ್ನೂ ಆಗಲಿ ಎಂದು ಬಹುಶಃ ಅವರು ಕೋರಿಯಾರು. ಆದರೆ ನನಗೆ ಅವುಗಳಲ್ಲಿ ಎಳ್ಳಿನಷ್ಟು ಭರವಸೆಯಿಲ್ಲ. ಮತ್ತು ಆ ಭೋಜನಗಳನ್ನು ಏರ್ಪಾಡು ಮಾಡುವವರಿಗೆ ವರ್ತಮಾನ ಪತ್ರಗಳಿಗೆ ವರದಿಗಳನ್ನು ಕಳುಹಿಸುವುದರ ಮೇಲಾಗಿ ಬೇರೆ ಉದ್ದೇಶವಿರುತ್ತದೆಂದು ನನಗೆ ಕಾಣುವುದಿಲ್ಲ.

ಹಿಂದುಳಿದ ಪಂಚಮರನ್ನು ವಿದ್ಯೆ ಮೊದಲಾದವುಗಳಿಂದ ಮುಂದಕ್ಕೆ ತರುವದೇನೋ ಆಗತ್ಯವಾದ ಕೆಲಸ. ಇದಕ್ಕೆ ಬೇಕಾಗಿ 'ಫ್ರೀನ್ಯಾಟ ಸ್ಕೂಲನ್ನು' ತೆರೆದು ಸಾಹಸಪಡುವ ಕ್ರಿಶ್ಚಿಯನ್ ಕೊಲೇಜಿಯವರನ್ನು ಎಷ್ಟು ಹೊಗಳಿದರೂ ತೀರದು. ಆದರೆ ಪಂಚಮರೊಡನೆ ಬೆರೆತು ಊಟ ಮಾಡಲವಸರವಿಲ್ಲ. ನಾಲ್ಕೂರಿಗೆ ವರ್ತಮಾನ ಹೋಗುವಂತೆ ಸಹಪಙ್ತಿ ಭೋಜನವನ್ನು ಒಂದು ದಿನ ಮಾಡಿದರಾಗಲಿಲ್ಲ; ಜನರ ಹೊಗಳಿಕೆ ಸಿಕ್ಕುತ್ತದೆಂದು ಏನೂ ಮಾಡಿ 'ಬಿಡಬಹುದು.' ಮುಖ್ಯವಾಗಿ ಬೇಕಾದುದು ಸರಳವಾದ ಪ್ರೀತಿ.

ಊಟ ಮಾಡಿ ಪ್ರೀತಿ ಆಗುವುದೋ—ಪ್ರೀತಿ ಬಿದ್ದು ಊಟ ಮಾಡುವುದೋ? ಅಥವಾ, ಈ ಊಟಗಳಲ್ಲಿ ಜನರನ್ನು ಒಂದಾಗಿರಿಸುವ ಸಾಮರ್ಥ್ಯವೆಷ್ಟುಂಟು. ಪ್ರತಿದಿನವೂ ಸಹಪಙ್ತಿಯಲ್ಲಿಯೇ ಊಟ ಮಾಡುವ ಸಂಬಂಧಿಕರನ್ನು ಇವು ಎಷ್ಟು ಒಂದೇಯಾಗಿರಿಸುವವು? ಒಂದೇ ಮನೆಯೊಳಗೆ ಹುಟ್ಟಿ ಬೆಳೆದ ಅಣ್ಣತಮ್ಮಂದಿರೇ ಅನೇಕ ವೇಳೆ ಒಬ್ಬರೊಬ್ಬರನ್ನೊಲ್ಲದೆ ಇರುತ್ತಾರೆಂಬುದನ್ನು ವಿಚಾರಿಸಿದರೆ ಈ ಊಟ ಉಪಚಾರಗಳಲ್ಲಿ ಡಂಭಾಚರವಲ್ಲದೆ ಗಾಂಭೀರ್ಯವೇನೂ ಇಲ್ಲವೆಂಬುದು ಸ್ಪಷ್ಟವಾದೀತು.

ಮಂಗಳೂರು;
ತಾ. 19—9—16. } ಇತಿ, ಒಬ್ಬ ಬ್ರಾಹ್ಮಣ.

ಮುಹಮ್ಮದೀ ಶಾಲೆಗಳ ಸುಪರ್‌ವೈಜರರು.

ಸ್ವಾಮಿ, ಸಾಠಕ ಮಹಾಶಯರೇ,

ಈ ಲೋಕದಲ್ಲಿ ನಡೆಯುವ ಎಷ್ಟೋ ಕಾರ್ಯಗಳಿಗೆ ಸರಿಯಾದ ಕಾರಣಗಳು ನೋಟಕರ ಮನಸ್ಸಿಗೆ ಫಕ್ಕನೇ ಹೊಳೆಯುವದಿಲ್ಲ. ಕಾರ್ಯವೂ ಕಾರಣವೂ ಸರಿಯಾಗಿ ತೋರುವಲ್ಲಿ ವಿಶೇಷ ಯೋಚನೆಗೆ ಅವಕಾಶವೂ ಇರುವುದಿಲ್ಲ. ಆದರೆ ಪ್ರತ್ಯಕ್ಷವೆಂದು ತೋರುವ ಸಂದರ್ಭಗಳಲ್ಲಿ ಏನೇನೂ ಸಂಬಂಧವಿಲ್ಲದ ಜನರು ಸಹ ವಿಚಾರಿಸಲು ಅವಕಾಶವಾಗುತ್ತದೆ. ಇಂಥಾದೊಂದು ಸಂಭವವು ಈಚೆಗೆ ನಮ್ಮ ತಿಳುವಳಿಕೆಗೆ ಬಂದಿದೆ.

ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಮುಹಮ್ಮದೀ ಶಾಲೆಗಳ ಬಗ್ಗೆ ಒಬ್ಬ ಮುಸಲ್ಮಾನ ಸುಪರ್‌ವಾಯ್ಜರ್ ಇರುವ ಪದ್ಧತಿಯು ಇದೆಯಲ್ಲ. ಈ ಉದ್ಯೋಗವು ಈ ಜಾತಿಯವರಿಗೇ ದೊರೆಯಬೇಕೆಂದು ಇರುವ ನಿಯಮದ ಕಾರಣವು ಉರ್ದು ಭಾಷೆಯು ಕಲಿಸಲ್ಪಡುವ ಶಾಲೆಗಳನ್ನು ಪರೀಕ್ಷಿಸುವ ಸುಪರ್‌ವೈಜರನು ಉರ್ದು ಬಲ್ಲವನಾಗಬೇಕೆಂಬುದೇ ಎಂದು ನನ್ನ ಅಭಿಪ್ರಾಯ. ಹೀಗಿರುತ್ತಾ ಪ್ರಕೃತ ಉದ್ಯೋಗ ಹೊಂದಿದ ಪುಣ್ಯಾತ್ಮನು ಉರ್ದು ಬರಹದಲ್ಲಿ ಶೂನ್ಯಜ್ಞಾನ ಉಳ್ಳವನೆಂದು ಅನೇಕರ ಬಾಯಿಯಿಂದ ಕೇಳಿ ಇದು ನಿಜವಾದರೆ ಈ ಅಪ್ರಯೋಜಕ ನೇಮಕಕ್ಕೆ ಕಾರಣವೇನೆಂಬುದನ್ನು ತಿಳಿಯಲು ಕುತೂಹಲವುಳ್ಳವನಾಗಿದ್ದೇನೆ. ಇದರ ಆಗತಿನಿರ್ಗತಿಗಳಿಂದ ನಮಗೇನೂ ಆಗಹೋಗತಕ್ಕದಿಲ್ಲ. ಆದರೂ ಸಂಬಂಧಪಟ್ಟವರ ತಿಳುವಳಿಕೆಗೆ ಯಥಾರ್ಥ ಸಂಗತಿಯು ಬಾರದ ಕಾರಣದಿಂದ ಅಂದರೆ "ಎಮ್ಮೆ ಕರುವಿಗೆ ಈಜು ಕಲಿಸಬೇಕೇ?" ಎಂಬೀ ತರದ ನಂಬಿಕೆಯಿಂದ ಈ ನೇಮಕವು ಆದದ್ದಾದರೆ ಇದರಿಂದ ಉಂಟಾಗುವ ದುಷ್ಪರಿಣಾಮಗಳು ಆದಷ್ಟು ಶೀಘ್ರದಲ್ಲಿ ಪರಿಹಾರವಾಗಲಿ ಎಂಬ ಆಶೆಯಿಂದ ಇದನ್ನು ಬರೆದದ್ದಾಗಿರುತ್ತದೆ. ವಾಮನ.

ನೂತನ ಪ್ರಬಂಧ! ಅದ್ಭುತ ಪತ್ತೆದಾರಿಯ ಕಥೆ!

ಕಳವಾದ ಇನ್ಸ್‌ಪೆಕ್ಟರ್.

ಕಲ್ಕತ್ತಾ ನಗರದ ಪ್ರಸಿದ್ಧ ಪತ್ತೆದಾರನಿಗೂ ಒಬ್ಬ ಚೋರಾಗ್ರೇಸರನಿಗೂ ನಡೆಯುವ ಬುದ್ಧಿಚಾತುರ್ಯದ ಭಯಂಕರ ಹೋರಾಟ. ಆರಂಭದಿಂದ ಅಂತ್ಯದವರೆಗೂ ಒಂದೇ ಸಮನಾದ ಆಸಕ್ತಿಯನ್ನುಂಟುಮಾಡುವುದಲ್ಲದೆ ಇನ್ಸ್‌ಪೆಕ್ಟರ್ ಅಧಿಕಾರವು ಚೋರನ ಕೈವಶವಾಗುವುದೂ, ಹೊಗೇಬಂಡಿಯಲ್ಲಿ ಕಳ್ಳನಿಂದ ವಿರಚಿಸಲ್ಪಡುವ ಕೌಶಲೋಪಾಯವೂ, ವಿಲಾಯತಿ ಸರದಾರರ ಆಭರಣಗಳಿಗಾಗಿ ಪ್ರಯತ್ನಿಸುವ ಅದ್ಭುತ ಸಾಹಸವೂ ಅಸಮಾನವಾದವುಗಳಾಗಿರುತ್ತವೆ. ಬೆಲೆ ೧೦ ಆಣೆ.

ವಿಳಾಸ:— ಛಾಂಪಿಯನ್ ಏಜನ್ಸಿ,
ಅವೆನ್ಯು ರೋಡ್, ಬೆಂಗಳೂರು ಸಿಟಿ.

ಯೂರೋಪದ ಮಹಾ ಯುದ್ಧ.

ಪ್ರತಿ ಒಂದು ರಣರಂಗಗಳಲ್ಲಿಯೂ ಮಿತ್ರರಿಗೆ ಜಯದ ಮೇಲೆ ಜಯವಾಗುತ್ತಲಿದೆ. ಬ್ರಿಟಿಷರೂ ಫ್ರೆಂಚರೂ ಏನೂ ಧೈರ್ಯಗುಂದದೆ ಹೊಸ ಆಸಕ್ತಿಯಿಂದ ಮುಂದುವರಿದು ಶತ್ರುಗಳು ಯುದ್ಧಾರಂಭದಲ್ಲಿ ವಶಮಾಡಿಕೊಂಡು ಕಳೆದ ಎರಡು ವರ್ಷಗಳಲ್ಲಿ ಬಲಕಾಯಿಸಿಕೊಂಡಿದ್ದ ಒಂದೊಂದೇ ಗ್ರಾಮವನ್ನು ಗೆದ್ದುಕೊಳ್ಳುತ್ತಲಿದ್ದಾರೆ. ಜರ್ಮನ ಸೇನೆಯಲ್ಲಿ ಆಗೋಸ್ತು ತಿಂಗಳಾಂತ್ಯದವರೆಗೆ ಪಶ್ಚಿಮ ರಣರಂಗ ಒಂದರಲ್ಲೇ ೪,೪೭೬,೧೩೪ ಮಂದಿ ಪ್ರಾಣಾಪಾಯ ಹೊಂದಿರುವರು. ಈ ಪೈಕಿ ೮೦೦,೦೦೦ ಮಂದಿ ಹತರಾಗಿರುವರೆಂಬ ಮಾತ್ರದಿಂದ ಮಿತ್ರಸೇನಿಕರ ಧೈರ್ಯಸಾಹಸಗಳನ್ನು ವಾಚಕರ ಮುಂದಿಟ್ಟಂತೆ ಆಗುವದು. ಅತ್ತಕಡೆ ರುಶ್ಯನರೂ, ರುಮೇನಿಯನರೂ, ಇಟಲಿಯನರೂ ಶತ್ರುಗಳನ್ನು ಹತಬಡೆದು ಮುಂದರಿಯುತ್ತಲಿದ್ದಾರೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ನಮ್ಮ ಮಿತ್ರರಾಷ್ಟ್ರಗಳವರು ಬಹು ಬೇಗನೇ ಜಯಪತಾಕೆಯನ್ನು ಹಿಡಿದು ನೀತಿಯನ್ನು ಕಾಪಾಡುವದರಲ್ಲಿ ಏನೇನೂ ಸಂದೇಹವಿಲ್ಲ.

ಪಶ್ಚಿಮ ರಣರಂಗ.

ಈ ರಣರಂಗದಲ್ಲಿ ಭೀಕರವಾದ ಕದನಗಳು ನಡಿಯುತ್ತಿವೆ. ಬರ್ನ ಮತ್ತು ಚೌಲ್ನೆಸ್‌ನ ಮಧ್ಯೆ ಮೇಲ್ಪಾಯಿದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಫ್ರೆಂಚರ ವಾಯುನಾವೆಗಳು ಜರ್ಮನರ ಪ್ರಾಮುಖ್ಯ ಮಿಲಿಟರಿ ಸ್ಟೇಶನುಗಳ ಮೇಲೆ ಬೊಂಬುಗಳನ್ನು ಹಾಕಿ ಸುರಕ್ಷಿತವಾಗಿ ಹಿಂತಿರುಗಿ ಬಂದಿರುವವು.

ಗಿಂಚಿಯಲ್ಲಿ ಬ್ರಿಟಿಷರಿಗೂ ಶತ್ರುಗಳಿಗೂ ಕಠಿಣ ಕೈಕಾಳಗ ನಡೆದಿರುತ್ತವೆ. ಇಲ್ಲಿ ಇನ್ನೂರಕ್ಕಿಂತಲೂ ಹೆಚ್ಚಿನ ಶತ್ರುಸೇನಿಕರು ಬ್ರಿಟಿಷರ ಶೆರೆಬಿದ್ದಿರುತ್ತಾರೆ.

ಫ್ರೆಂಚರು ಬೊಚವೆಸ್‌ನೆಸ್ ಗ್ರಾಮದ ಬಳಿ ಜರ್ಮನರನ್ನು ಸೋಲಿಸಿ ಸೇನಿಕರನ್ನೂ ಬಹಳ ಯುದ್ಧಸಾಮಾಗ್ರಿಗಳನ್ನೂ ಶೆರೆ ಹಿಡಿದಿರುತ್ತಾರೆ. ಸೊಮ್ಮೆಯಲ್ಲಿ ವಾಯುನಾವೆಗಳ ೧೭ ಕದನಗಳು ನಡೆದಿರುತ್ತವೆ. ಫ್ರೆಂಚರ ವಾಯುನಾವೆಗಳು ಶತ್ರುಗಳ ಕೆಲವು ರೈಲ್ವೆಸ್ಟೇಶನುಗಳ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಆ ಗ್ರಾಮವೆಲ್ಲಾ ಫ್ರೆಂಚರ ಸ್ವಾಧೀನವಾಗಿರುವವು. ಸೊಮ್ಮ ಮತ್ತು ವಾಶ್ ಅರಣ್ಯದಲ್ಲಿ ಮೇಲ್ಪಾಯಿದ ಶತ್ರುಗಳು ಸೋತು ಹಿಮ್ಮೆಟ್ಟಿರುತ್ತಾರೆ. ಫ್ರೆಂಚರ ನೆಲೆಯು ಕೊಂಬೆಲ್ಸಿನ ಬಳಿಗೆ ವಿಸ್ತರಿಸಲ್ಪಟ್ಟಿರುತ್ತದೆ. ಪ್ರಿಯರಿ ಫಾರ್ಮಿನ ಬಳಿ ಫ್ರೆಂಚರು ಶತ್ರುಗಳ ಗಾಯಪಡೆಯದ ೭೯೦೦ ಮಂದಿಯನ್ನು ಶೆರೆಹಿಡಿದಿರುತ್ತಾರೆ. ದಿನವೆಲ್ಲಾ ಕಠಿಣಕಾಳಗ ನಡೆದಿರುತ್ತದೆ. ಶತ್ರುಗಳು ರೋಷಾವೇಶದಿಂದ ಹಲ್ಲೆಮಾಡಿ ಫ್ರೆಂಚರು ಗೆದ್ದುಕೊಂಡ ಸ್ಥಳಗಳನ್ನು ಹಿಂತೆಗೆದುಕೊಳ್ಳಲು ಪ್ರಯತ್ನಿಸಿ ಬಹಳ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ.

ಬ್ರಿಟಿಷ ಸೇನಿಕರು ಪುನಃ ನುಗ್ಗಿಹೋಗಿ ರೋಷಾವೇಶದಿಂದ ಕದನಮಾಡುತ್ತಲಿದ್ದಾರೆ. ಥಿಪಾವಲಿನ ಬಳಿ ಬ್ರಿಟಿಷರು ಶತ್ರುಗಳ ೧೦೦೦ ಗಜ ಕಂದಕಗಳನ್ನು ಹಿಡಿದಿರುತ್ತಾರೆ. ಇತರ ಕೆಲವು ಕಡೆಗಳಲ್ಲಿ ೩೦೦೦-೪೦೦೦ ಗಜಗಳಷ್ಟು ದೂರಕ್ಕೆ ಬ್ರಿಟಿಷರು ಮುಂದರಿದಿರುತ್ತಾರೆ. ಚೌಲನ್ಸಿನಿಂದ ಬಾಪ್ಯೂಮ್ ದಾರಿಯ ಮಧ್ಯೆ ೬ ಮೈಲುಗಳ ವಿಸ್ತೀರ್ಣದಲ್ಲಿ ಬ್ರಿಟಿಷ ಸೇನಿಕರು ಮುಂದರಿದು ಹೆಚ್ಚಿನ ಜಯಹೊಂದಿರುತ್ತಾರೆ. ವಾಯುನಾವೆಗಳ ಕದನಗಳು ನಡೆದು ಶತ್ರುಗಳ ನಾಲ್ಕು ವಾಯುನಾವೆಗಳನ್ನು ಬ್ರಿಟಿಷರು ಕೆಳಗಿಳಿಸಿರುವರು.

ಜುಲಾಯಿ ತಾ. ೧ರಿಂದ ವೆರ್ಡನ್ ಮತ್ತು ಸೊಮ್ಮೆಯಲ್ಲಿ ಜರ್ಮನರು ೩೬೦ ಫಿರಂಗಿಗಳು, ೬೪೭ ಯಂತ್ರಚಾಲಿತ ಫಿರಂಗಿಗಳು, ೫೪,೦೦೦ ಸೇನಿಕರನ್ನು ಕಳಕೊಂಡಿರುವರು.

ಪಶ್ಚಿಮ ರಣರಂಗದಲ್ಲಿ ಕಠಿಣ ಕಾಳಗಗಳು ನಡೆದಿರುವವೆಂದೂ ಶತ್ರುಗಳಿಗೆ ವಿಶೇಷ ನಷ್ಟ ಉಂಟಾಗಿರುವವೆಂದೂ ಕಡೆಗೆ ಬಂದ ವಾರ್ತೆಯಿಂದ ತಿಳಿದುಬರುತ್ತದೆ. ಫ್ರೆಂಚರೂ ಬ್ರಿಟಿಷರೂ ನುಗ್ಗಿ ಹೋಗಿ ರೋಷಾವೇಶದಿಂದ ಭೀಕರ ಕಾಳಗ ಮಾಡಿ ಶತ್ರುಗಳ ಕೆಲವು ಕಂದಕಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಬೆರ್ನೆಯಲ್ಲಿ ಶತ್ರುಗಳ ೪ ಕಂದಕಗಳು ಫ್ರೆಂಚರ ಸ್ವಾಧೀನವಾಗಿರುವವು. ೩೦೦ ಸೇನಿಕರು ಶೆರೆಬಿದ್ದಿರುವರು. ಕೆಲವು ಪ್ರಾಂತ್ಯಗಳಲ್ಲಿ ವಾಯುನಾವೆಗಳ ಕದನವೂ ಅತಿ ತೀಕ್ಷ್ಣತೆಯಿಂದ ನಡೆಯುತ್ತಿದೆ. ಮಿತ್ರರ ವಾಯುನಾವೆಗಳು ಜರ್ಮನರ ಸ್ವಾಧೀನವಿದ್ದ ಹಲವು ರೈಲ್ವೇ ಸ್ಟೇಶನುಗಳ ಮೇಲೆ ಬೊಂಬುಗಳನ್ನು ಹಾಕಿ ಈ ಸ್ಟೇಶನ್ನುಗಳನ್ನು ಹಾಳುಮಾಡಿರುತ್ತವೆ.

ಫ್ರೆಂಚರು ಗೆದ್ದುಕೊಂಡ ಸ್ಥಳಗಳನ್ನು ಬಲಕಾಯಿಸುತ್ತಲಿದ್ದಾರೆ. ಫ್ಲೇರಿ ಮತ್ತು ಬೆರ್ನೆಯಲ್ಲಿ ದಾಳಿಮಾಡಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ಜರ್ಮನರ ೨೨ ವಾಯುನಾವೆಗಳನ್ನು ಫ್ರೆಂಚರು ಕೆಳಗೆದೊಬ್ಬಿರುತ್ತಾರೆ. ಸೊಮ್ಮೆಯಲ್ಲಿ ೭೦೦ ಶತ್ರುಸೇನಿಕರು ಫ್ರೆಂಚರ ಶೆರೆಬಿದ್ದಿರುತ್ತಾರೆ.

ಬ್ರಿಟಿಷರಿಗೂ ಶತ್ರುಗಳಿಗೂ ಕಠಿಣ ಕಾಳಗ ನಡೆದು ಕೊಂಬ್ಲೆಸ್ ಮತ್ತು ಪೋಜಿಯರ್ಸಿನ ಮಧ್ಯೆ ಇದ್ದ ದಿನ್ನೆ ಸ್ಥಳಗಳೆಲ್ಲಾ ಬ್ರಿಟಿಷರ ಸ್ವಾಧೀನವಾಗಿದೆ. ೨೪೦೦ ಶತ್ರುಸೇನಿಕರು ಬ್ರಿಟಿಷರ ಶೆರೆಬಿದ್ದಿರುತ್ತಾರೆ. ಶತ್ರುಗಳ ಕೆಲವು ವಾಯುನಾವೆಗಳನ್ನು ಬ್ರಿಟಿಷರ ವಾಯುನಾವೆಗಳು ಕೆಳದೊಬ್ಬಿರುವವು.

ಬ್ರಿಟಿಷರು ಅಂಕ್ರೆಯಲ್ಲಿ ೬ ಮೈಲು ವಿಸ್ತೀರ್ಣದ ರಣರಂಗದಲ್ಲಿ ೧—೨ ಮೈಲುಗಳ ಹಾಗೆ ಮುಂದರಿದು ೧೯೦೦ ಶತ್ರುಸೇನಿಕರನ್ನು ಶೆರೆಹಿಡಿದಿರುತ್ತಾರೆ. ಈ ಪೈಕಿ ೫೧ ಆಫೀಸರರು. ೨ ದಿವಸಗಳಲ್ಲಿ ಬ್ರಿಟಿಷರ ಶೆರೆಬಿದ್ದ ಶತ್ರುಗಳ ಸಂಖ್ಯೆ ೪೦೦೦ಕ್ಕೆ ಮಿಕ್ಕಿದೆ. ಈ ಪೈಕಿ ೧೧೬ ಆಫೀಸರರು. ರಾಶಿ ರಾಶಿ ಯುದ್ಧಸಾಮಾಗ್ರಿಗಳೂ ಬ್ರಿಟಿಷರ ಸ್ವಾಧೀನವಾಗಿವೆ. ಕೊರ್ಸೆಲೆಟ್ಟೆಯಲ್ಲಿ ೧೦೦೦ ಗಜಕ್ಕಿಂತಲೂ ಹೆಚ್ಚಿನ ವಿಸ್ತೀರ್ಣದ ಪ್ರಾಂತ್ಯವು ಬ್ರಿಟಿಷರ ಕೈಸೇರಿವೆ. ಬ್ರಿಟಿಷ ಸೇನಿಕರು ಧೈರ್ಯಸಾಹಸದಿಂದ ಶತ್ರುಗಳ ಮೇಲ್ಪಾಯಿದು ಅವರನ್ನು ದಿಗಿಲಗೊಳಿಸುತ್ತಲಿದ್ದಾರೆ.

ಪೂರ್ವ ರಣರಂಗ.

ಈ ರಣರಂಗದ ರಿಗಾ ಮತ್ತು ಡ್ವಿನಾ ಪ್ರಾಂತ್ಯದಲ್ಲಿ ಮೇಲ್ಪಾಯಿದ ಶತ್ರುಗಳನ್ನು ರುಶ್ಯನರು ಅಟ್ಟಿರುತ್ತಾರೆ.

ಬಾಲ್ಕಾನ್.

ರುಮೇನಿಯನರಿಗೂ ಶತ್ರುಗಳಿಗೂ ಕಠಿಣ ಕಾಳಗ ನಡೆಯುತ್ತಿದೆ. ಶತ್ರುಗಳು ಒಲ್ಟಾ ಕಣಿವೆಯ ಮಾರ್ಗವಾಗಿ ಹಿಂದೆ ಸರಿಯುತ್ತಿದ್ದಾರೆ. ರುಮೇನಿಯನರು ಹೆಲಿಂಬಾರ್ ಎಂಬ ಸ್ಥಳವನ್ನು ಗೆದ್ದುಕೊಂಡಿರುತ್ತಾರೆ. ಮೆರಿಸೊರ್ ಎಂಬಲ್ಲಿ ರುಮೇನಿಯನರ ಮೇಲ್ಪಾಯಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ರುಮೇನಿಯನರು ನುಗ್ಗಿ ಹೋಗಿ ೨ ಫಿರಂಗಿಗಳನ್ನೂ, ಯಂತ್ರಚಾಲಿತ ಫಿರಂಗಿಗಳನ್ನೂ, ೪೦೦ ಸೇನಿಕರನ್ನೂ ಶೆರೆಹಿಡಿದಿರುವರು. ಡ್ಯಾನುಬ್ ರಣರಂಗದಲ್ಲಿ ಕಠಿಣ ಕೈಕಾಳಗ ನಡೆಯುತ್ತಿದೆ. ಡೊಬ್ರುಡ್ಜಾದಲ್ಲಿಯೂ ಕಾಳಗ ನಡೆಯುತ್ತಿದೆ.

ಟರ್ಕಿಯು ರುಮೇನಿಯದ ಮೇಲೆ ಯುದ್ಧ ಸಾರಿರುವದಿಲ್ಲವಾದರೂ ಡೊಬ್ರುಡ್ಜಾದಲ್ಲಿ ತುರ್ಕಿ ಸೇನಿಕರು ಕಾಣಿಸಿಕೊಂಡಿರುವರು. ಟುರ್ಟಕಾಯಿ ಎಂಬಲ್ಲಿ ೨೫,೦೦೦ ಜರ್ಮನ್ಸ್, ೪೦,೦೦೦ ಬಲ್ಗೇರಿಯನರು, ೧೦ ೦೦೦ ತುರ್ಕಿ ಸೇನಿಕರಿದ್ದಾರೆಂತ ತಿಳಿದು ಬಂದದೆ.

ರುಮೇನಿಯನರು ಒರ್ಸೋವವನ್ನು ಸ್ವಾಧೀನ ಮಾಡಿಕೊಂಡದ್ದರಿಂದ ಮೇಲಿನ ಡೆನ್ಯೂಬಿನಲ್ಲಿರುವ ಆಸ್ಟ್ರಿಯನರ ಯುದ್ಧ ಹಡಗಗಳಿಗೆ ಒತ್ತಾಪದ ಕೆಳಗಿರುವ ಆಸ್ಟ್ರಿಯನ ಸೇನೆಗೆ ಸಹಾಯ ಮಾಡುವದು ಕಷ್ಟಸಾಧ್ಯವಾಗಿದೆ.

ರುಮೇನಿಯನರ ನೆಲೆಯ ಬಲಗಡೆಯಲ್ಲಿದ್ದ ಆಸ್ಟ್ರಿಯನರ ಸೇನೆಯು ಹಿಂದೆ ಸರಿದಿರುವದು ಎಂತ ವಿಯೆನ್ನಾದಿಂದ ವಾರ್ತೆ ಬಂದದೆ. ಕಾರ್‌ಪಥೇನಿಯದಲ್ಲಿಯೂ ರುಶ್ಯನರು ರೋಷಾವೇಶದಿಂದ ಮುಂದುವರಿಯುತ್ತಿದ್ದಾರೆಂತ ವಾರ್ತೆ ಇದೆ.

ಸಲೋನಿಕದಲ್ಲಿರುವ ಬ್ರಿಟಿಷ ಸೇನಿಕರು ಸ್ಟ್ರುಮ ನದಿಯನ್ನು ಕೆಲವು ಕಡೆಗಳಲ್ಲಿ ದಾಟಿರುತ್ತಾರೆ. ಕಠಿಣ ಕಾಳಗ ನಡೆದು ಶತ್ರುಗಳು ನೆವೊಲ್ಯನ್ ಮತ್ತು ಇತರ ಗ್ರಾಮಗಳಿಗೆ ಓಡಿರುತ್ತಾರೆ. ಸರ್ವಿಯನರು ಕೊವಲಿನ ವಾಯುವ್ಯದಲ್ಲಿ ಪ್ರಾಮುಖ್ಯವಾದ ನೆಲೆಯೊಂದನ್ನು ಗೆದ್ದುಕೊಂಡು ಶತ್ರು ಸೇನೆಯಲ್ಲಿ ವಿಶೇಷ ನಷ್ಟಪಡಿಸಿರುವರು. ಒಸ್ಟ್ರೋವೋ ಸರೋವರದ ಆಚುಬಾಜಿನಲ್ಲಿಯೂ ಭೀಕರ ಕದನ ನಡೆಯುತ್ತಿದೆ. ಸರ್ವಿಯನರು ವಾರ್ದರಿನ ಪೂರ್ವದಲ್ಲಿ ಮುಂದರಿದು ಕೊವಿಲ್ ಮತ್ತು ವೆಟರ್ನಿಕ್ ಮಧ್ಯೆ ಇದ್ದ ಬಲ್ಗೇರಿಯನರ ಕಂದಕಗಳನ್ನು ಹಿಡಿದಿರುತ್ತಾರೆ. ಸರ್ವಿಯನರು ಸೊರ್‌ವಿಚ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವರು ಎಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ. ಸರ್ವಿಯನರಿಗೆ ಪ್ರೆಟ್ರಿಸ್ಟ್ ಪ್ರಾಂತ್ಯದಲ್ಲಿ ಜಯವಾಗುತ್ತಿರುವದರಿಂದ ಗ್ರೀಕ ಮತ್ತು ಬಲ್ಗೇರಿಯನರಿಗೆ ವ್ಯವಹಾರ ನಡೆಯದಿರುವ ಸಂಭವವಿದೆ. ಬಲ್ಗೇರಿಯನರು ಕೆಲವು ಕಡೆಗಳಲ್ಲಿ ಹಿಂದೆ ಸರಿದಿರುತ್ತಾರೆ.

ಸ್ಟ್ರುಮ್ಮಾದಲ್ಲಿ ಬ್ರಿಟಿಷರು ಮೂರುಸಾರಿ ದಾಳಿಮಾಡಿ ಕೆಲವು ಗ್ರಾಮಗಳನ್ನು ಸ್ವಾಧೀನಮಾಡಿಕೊಂಡಿರುವರು. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು.

ಗ್ರೀಸ್.

ಗ್ರೀಸ್ ದೇಶದ ಪ್ರಧಾನ ಮಂತ್ರಿಯಾದ ಎಮ್. ಜೈಮಿಸ್ ರವರು ರಾಜಿನಾಮೆಕೊಟ್ಟಿರುತ್ತಾರೆ. ಡಿಮಿತ್ರ ಕೊಕುಲಸ್‌ರವರು ಪ್ರಧಾನ ಮಂತ್ರಿಯಾಗಿ ನೇಮಿಸಲ್ಪಡುವರೆಂಬ ವರ್ತಮಾನವಿತ್ತು. ಆದರೆ ಇವರು ಒಡಂಬಡದ್ದರಿಂದ ಎಮ್. ಕೆಲೋಜೆರೊಪೊಲಸ್ ರವರು ಪ್ರಧಾನ ಮಂತ್ರಿಯಾಗಿ ಮಂತ್ರಿಸಭೆಯನ್ನು ನಿರ್ಮಿಸಿರುತ್ತಾರೆ.

ಇಟಲಿ.

ಇಟಲಿಯನರು ವೆಲೋನೆ ನದಿಯ ಪಶ್ಚಿಮದಲ್ಲಿ ಮುಂದರಿದು ಹೋಗಿ ೨೦೦೦ಕ್ಕಿಂತಲೂ ಹೆಚ್ಚಿಗೆ ಶತ್ರುಸೇನಿಕರನ್ನೂ ಯಂತ್ರಚಾಲಿತ ಫಿರಂಗಿಗಳನ್ನೂ ಬಹಳ ಯುದ್ಧಸಾಮಾಗ್ರಿಗಳನ್ನೂ ಶೆರೆಹಿಡಿದಿರುತ್ತಾರೆ. ಗೊರಿಟ್ಸದಲ್ಲಿರುವ ಶತ್ರುಗಳ ನೆಲೆಗೆ ಇಟಲಿಯನರು ಭೀಕರವಾಗಿ ಗುಂಡುಹಾರಿಸುತ್ತಲಿದ್ದಾರೆ.

ಸ್ಟೆಮೆ ಕಣಿವೆಯಲ್ಲಿದ್ದ ಮೊಂಟಿಕೊರಿಯಲ್ ಎಂಬ ಪರ್ವತಶಿಖರವನ್ನು ಇಟಲಿಯನರು ಗೆದ್ದುಕೊಂಡಿರುವರು. ವಾಲ್‌ಸುಗಾನ ಮತ್ತು ರಿಯೊಫೆಲಿಜೊನ್ ಎಂಬಲ್ಲಿ ಹಲ್ಲೆಮಾಡಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ಇಲ್ಲಿ ಇಟಲಿಯನರು ೧೧೦೦ ಶತ್ರುಸೇನಿಕರನ್ನು ಶೆರೆಹಿಡಿದಿರುವರು.

ಕಾರ್ಸೊ ಸರಹದ್ದಿನಲ್ಲಿಯೂ ಇಟಲಿಯನರು ಜಯಪ್ರದರಾಗುತ್ತಿದ್ದಾರೆ. ಇಲ್ಲಿ ಹೆಚ್ಚಿಗೆ ೭೦೦ ಶತ್ರುಸೇನಿಕರು ಇಟಲಿಯನರ ಶೆರೆ ಸಿಕ್ಕಿರುವರು.

ರುಶ್ಯಾ—ಟರ್ಕಿ.

ಕೌಕಾಶಸಿನಲ್ಲಿ ರುಶ್ಯನರು ದಿನೇ ದಿನೇ ಮುಂದರಿದು ತುರ್ಕರನ್ನು ತಲ್ಲಣಗೊಳಿಸುತ್ತಿರುವರು. ಬಿಟ್ಲಿಸ್‌ನಲ್ಲಿದ್ದ ತುರ್ಕಸೇನಿಕರನ್ನು ರುಶ್ಯನರು ಓಡಿಸಿರುತ್ತಾರೆ. ಕಲ್ಕಿಸ್ ಎಂಬಲ್ಲಿಂದ ನುಗ್ಗಿ ಬರುತ್ತಿದ್ದ ತುರ್ಕಸೇನಿಕರನ್ನೂ ರುಶ್ಯನರು ಹಿಂದಕ್ಕಟ್ಟಿರುತ್ತಾರೆ.

ಈಜಿಪ್ಟ್.

ಸೀನಾಯಿಯಿಂದ ಹೆಚ್ಚಿನ ವಾರ್ತೆ ಬಂದಿರುವದಿಲ್ಲ. ಶತ್ರುಗಳು ಹಿಂದೆ ಸರಿದಿರುವದರಿಂದ ಪುನಃ ಮುಂದೆನುಗ್ಗಿ ಬ್ರಿಟಿಷಸೇನಿಕರೊಡನೆ ಯುದ್ಧಕ್ಕೆ ನಿಲ್ಲುವರೆಂಬ ನಿರೀಕ್ಷೆ ಇಲ್ಲ. ಕಾಟಿಯಾ ರೋಮಾನಿ ಡಿಸ್ಟ್ರಿಕ್ಟುಗಳಲ್ಲಿ ನಡೆದ ಕದನಗಳ ನಿಜಸ್ಥಿತಿಯು ಈ ರೀತಿಯಾಗಿರುವದು. ಇಲ್ಲಿ ೧೮,೦೦೦ ತುರ್ಕಿಸೇನಿಕರು ಇದ್ದರು. ಅವರಿಗೆ ಈ ಕದನದಲ್ಲಾದ ನಷ್ಟ ೯೦೦೦ ಆಗಿರಬಹುದು. ೪೯೪೦ ತುರ್ಕಿಸೇನಿಕರು ಸೆರೆಬಿದ್ದಿರುವರು. ಈ ಪೈಕಿ ೪೯ ಆಫೀಸರರು, ೨೫ ಜರ್ಮನರು, ೧೨೫೧ ತುರ್ಕಿಸೇನಿಕರು ಹತರಾಗಿರುವರು. ಮದ್ದುಗುಂಡುಗಳ ೪೦ ಪೆಟ್ಟಿಗೆಗಳು, ೨೪೦೦ ರೈಫಲ್ ಕೋವಿಗಳು, ೧,೦೦೦,೦೦೦ ತೋಟೆಗಳು, ಇನ್ನು ಅನೇಕ ಇತರ ಯುದ್ಧಸಾಮಾಗ್ರಿಗಳು, ೧೦೦ ಕುದುರೆಗಳು, ೫೦೦ ಒಂಟೆಗಳು, ಇತ್ಯಾದಿಗಳು ಬ್ರಿಟಿಷರ ಶೆರೆಬಿದ್ದಿರುವವು. ಬ್ರಿಟಿಷರಿಗೆ ಈ ಕದನದಲ್ಲಿ ಆದ ಜನನಷ್ಟ ೧೧೪೦. ಈ ಪೈಕಿ ೧೯೨ ಮಂದಿ ಹತರಾಗಿರುವರು, ೮೮೨ ಮಂದಿ ಗಾಯಪಟ್ಟಿರುವರು, ೪೬ ಮಂದಿ ಕಾಣೆಯಾಗಿರುವರು.

ಬ್ರಿಟಿಷರ ನೌಕಾವಳಿಯಲ್ಲಿದ್ದ ವಾಯುನಾವೆಗಳು ಪಲೆಸ್ಟೀನದ ರೈಲ್ವೆ ಸ್ಟೇಶನುಗಳ ಮೇಲೆ ಬೊಂಬುಹಾಕಿರುವರು. ಕೆಲವು ರೈಲ್ವೇಸ್ಟೇಶನುಗಳು ಹಾಳಾಗಿರುವವು.

ಪೂರ್ವ ಆಫ್ರಿಕ.

ಈ ರಣರಂಗದಲ್ಲಿ ಬ್ರಿಟಿಷರಿಗೆ ಜಯದ ಮೇಲೆ ಜಯವಾಗುತ್ತಲಿದೆ. ಹತ್ತು ದಿನಗಳ ಕದನಮಾಡಿ ಬೆಲ್ಜಿಯನ ಸೇನಿಕರು ಈ ರಣರಂಗದ ಟಬೋರ ಎಂಬ ಪ್ರಾಮುಖ್ಯ ಸ್ಥಳವನ್ನು ಗೆದ್ದುಕೊಂಡಿರುವರು.

ಜಲಂತರ್ಗಾಮಿ ನಾವೆಗಳು.

ನಾಲ್ಕು ದಿವಸಗಳೊಳಗೆ ನೋರ್ವೆದೇಶದವರ ೭ ಹಡಗಗಳು ಶತ್ರುಗಳ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

ಉತ್ತರ ಹಿಂದೂಸ್ಥಾನ.

ಇದೇ ತಿಂಗಳ ತಾ. ೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೫೭೭೯ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೩೮೫೫ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ೧೬೨೭, ಮದ್ರಾಸ್ ೨೨೯; ಬಿಹಾರ್ ಮತ್ತು ಒರಿಸ್ಸ ೪೦, ಸಂಯುಕ್ತ ಸಂಸ್ಥಾನ ೮೬, ಪಂಜಾಬು ೧೦; ಬರ್ಮ ೩೪; ಮಧ್ಯ ಸಂಸ್ಥಾನ ೫೦೪; ಮೈಸೂರು ೩೪೨; ಹೈದರಾಬಾದ್ ೯೧೦; ಮಧ್ಯಹಿಂದೂಸ್ಥಾನ ೧೬ ಮರಣಗಳಾಗಿರುವವು.

ಪಾಟ್ನ ಕಾಲೇಜಿಯ ವಿದ್ಯಾರ್ಥಿಗಳಲ್ಲಿ ಸುಮಾರು ೩೦೦ ಮಂದಿಗಿಂತಲೂ ಹೆಚ್ಚಿನವರು ಮುಷ್ಕರ ಹಾಕಿರುವರೆಂಬ ವಾರ್ತೆ ಬಂದದೆ. ಕಾಲೇಜಿ ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಹಾಲಹವಾಲೆಗಳಿಗೆ ಕಿವಿಕೊಡತಲಿಲ್ಲವೆಂಬುದೇ ಈ ಮುಷ್ಕರಕ್ಕೆ ಕಾರಣವಂತೆ. ಕಾಲೇಜಿಯು ಹೊಸ್ಟೆಲಿನ ಕೆಲವು ಸಂಕಷ್ಟಗಳನ್ನು ಪ್ರಿನ್ಸಿಪಾಲರ ಮುಂದೆ ತಂದರೂ ಅವರು ಲಕ್ಷ್ಯ ಕೊಡತಲಿಲ್ಲವಾದುದರಿಂದ ಕಾಲೇಜಿಯ ನಾಲ್ವತ್ತು ವಿದ್ಯಾರ್ಥಿಗಳ ವಿನಹಾ ಎಲ್ಲರೂ ಮುಷ್ಕರ ಹಾಕಿದರು. ಕಾಲೇಜಿ ಕಮಿಟಿಯ ಮೆಂಬರರಾದ ಮಿ. ಎಸ್. ಸಿನ್ಹ ಮೊದಲಾದವರು ವಿದ್ಯಾರ್ಥಿಗಳು ಕಾಲೇಜಿಗೆ ಹೋಗುವಹಾಗೆ ಅವರಿಗೆ ಬುದ್ಧಿವಾದವನ್ನಿತ್ತರು. ಆದರೆ ಪ್ರಯೋಜನ ಬರಲಿಲ್ಲ.

ಜಿ. ಐ. ಪಿ. ರೈಲ್ವೇಯ ಮಾತುಂಗ ವರ್ಕ್ಸ್ ಶೋಪಿನ ೬೦೦೦ ಕೆಲಸಗಾರರು ತಾ. ೧೫ರಲ್ಲು ಕೆಲಸಕ್ಕೆ ಮುಷ್ಕರಹಾಕಿ, ವಿಕ್ಟೋರಿಯ ಟರ್ಮಿನಸ್ ರೈಲ್ವೇ ಸ್ಟೇಶನಿಗೆ ಬಂದು ಅಲ್ಲಿದ್ದ ರೈಲ್ವೇ ಏಜಂಟರಿಗೆ ತಮ್ಮ ಹಾಲಹವಾಲೆಗಳನ್ನು ಹೇಳಿಕೊಂಡರು. ಸಂಬಳದ ದಿನ ಖಜ್ಜಾನ್ಸಿಯಿಂದ ಸಂಬಳ ಸಿಕ್ಕಿದನಂತರ ಪ್ರತಿಒಬ್ಬ ಕೆಲಸಗಾರನಿಗೆ ತಂತಮ್ಮ ಮನೆಗೆ ಹೋಗಲು ಬಿಡಬೇಕೆಂಬದೇ ಈ ರೈಲ್ವೇ ಕೆಲಸಗಾರರ ವಿಜ್ಞಾಪನೆಯಾಗಿತ್ತು. ಏಜಂಟರು ಕೆಲಸಗಾರರಿಗೆ ತೃಪ್ತಿಕರವಾದ ಉತ್ತರ ಕೊಟ್ಟದ್ದರಿಂದ ಮರುದಿನ ಕೆಲಸಗಾರರೆಲ್ಲರೂ ಕೆಲಸಕ್ಕೆ ಹಾಜರಾಗಿರುತ್ತಾರೆ.

ಕಲ್ಕತ್ತೆಯ ದಿನೇಂದ್ರಚಂದ್ರ ರೋಯಿ ಎಂಬವರಿಗೆ ಸರಕಾರದವರು ರನ್‌ಪುರದಲ್ಲಿಯೇ ಇರಬೇಕೆಂಬ ಇಂಟರ್ನ್‌ಮೆಂಟ್ ಆರ್ಡರು ಕೊಟ್ಟಿದ್ದರು. ಈ ಆರ್ಡರಿಗೆ ರೋಯಿಯವರು ಅವಿಧೇಯರಾಗಿ ನಡೆದುದರಿಂದ ಅವರಿಗೆ ೩ ತಿಂಗಳ ಕಠಿಣ ಸಜೆ ಮತ್ತು ೫೦ ರೂಪಾಯಿ ಜುಲುಮಾನೆ ವಿಧಿಸೋಣಾಗಿರುತ್ತದೆ.

ಸೆನಿಟೇಶನ್ ಮತ್ತು ಎಜ್ಯುಕೇಶನ್ ಸೊಸ್ಯಾಟಿ ಎಂಬ ಒಂದು ಸಂಘವು ಬಾರಿಸಾಲಿನಲ್ಲಿ ಸ್ಥಾಪಿಸೋಣಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ. ಗ್ರಾಮುಗ್ರಾಮುಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಬ್ಬಿಸುವದೂ ಜನರು ಆರೋಗ್ಯವಂತರಾಗಿರುವ ಹಾಗೆ ತಕ್ಕ ಮಾಹಿತಿ ಕೊಡುವದೂ ಈ ಸಂಘದ ಉದ್ದೇಶವಾಗಿದೆ. ಬಾಬು ಅಶ್ವಿನಿಕುಮಾರ ದತ್ತರವರು ಈ ಸಂಘದ ಅಧ್ಯಕ್ಷರಾಗಿರುವರು. ಸಂಘದ ಆಡಳಿತೆಯಲ್ಲಿ ಈಗಲೇ ೩೦ ಶಾಲೆಗಳಿವೆ. ಅಶ್ವಿನಿಕುಮಾರದತ್ತರು ಈ ಸಂಘಕ್ಕೆ ವರ್ಷಕ್ಕೆ ೩೦೦ ರೂಪಾಯಿ ಕೊಡುವರೆ ವಾಗ್ದಾನ ಮಾಡಿರುವರು. ಸಂಘದ ಇತರ ಮೆಂಬರರು ಪ್ರತಿ ವರ್ಷ ೨೫ ರೂಪಾಯಿ ವಂತಿಗೆ ಕೊಡಬೇಕಾಗಿದೆ.

ಲಾಹೋರಿನ ರಿಫಾಹ್-ಇ-ಆಮ್ ಪ್ರೆಸ್ಸನ್ನು ಸಿಮ್ಲಾ ಪೋಲಿಸ್ ಸುಪರಿಂಟೆಂಡೆಂಟರವರು ಜಪ್ತಿಮಾಡಿ ಉರ್ದು ಭಾಷೆಯ ಕೆಲವು ವಹಿಗಳನ್ನು ಹಿಡಿದು ಸದರಿ ಪ್ರೆಸ್ಸಿನ ಪ್ರೊಪ್ರೈಟರರಾದ ಅಬ್ದುಲ್ಲ ಹೇಕುರವರನ್ನು ಕೈದು ಮಾಡಿರುತ್ತಾರೆ ಕಾಶ್ಮೀರದಲ್ಲಿದ್ದ ಅವರ ಹಿರಿಯರ ಮನೆಯನ್ನೂ ಜಪ್ತಿಮಾಡಿರುತ್ತಾರೆ. ಅದೇ ಸಂದರ್ಭದಲ್ಲಿ ಸೂಫಿ ಮಸೀದಿಯ ಮುಹಮ್ಮದ್ ಅಹಮ್ಮದ್ ಇಮಾಮ್ ಎಂಬವರನ್ನೂ ಕೈದುಮಾಡಿರುತ್ತಾರೆ. ಪೋಲಿಸಿನವರು ಉರ್ದು ಭಾಷೆಯ ವಹಿಗಳನ್ನು ೨ ಪೆಟ್ಟಿಗೆಗಳನ್ನೂ ಪ್ರೆಸ್ಸಿಗೆ ಸೇರಿದ ಒಂದು ರೈಫಲನ್ನೂ ಕೊಂಡು ಹೋಗಿರುತ್ತಾರೆ.

ಡಕ್ಕಾದಲ್ಲಿ ತಾ. ೧೪ರಲ್ಲು ಪೋಲಿಸಿನವರು ೬೨ ಮನೆಗಳನ್ನು ಜಪ್ತಿಮಾಡಿ ೭೫ ಮಂದಿಯನ್ನು ಅನುಮಾನದ ಮೇಲೆ ಕೈದುಮಾಡಿರುತ್ತಾರೆ. ಕೈದುಮಾಡಲ್ಪಟ್ಟವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು, ಉಪಾಧ್ಯಾಯರು, ವಕೀಲರು ಮತ್ತು ಕ್ಲಾರ್ಕರು.

ಬಂಗಾಳದಲ್ಲಿ ಏರ್ಪಡುತ್ತಿರುವ ಪಂಗಿಯ ಸೇನೆಗೆ ಸೇರಿಕೊಂಡ ಯುವಕರು ತರ್ಬೀತು ಒಗ್ಯೆ ವಾಯುವ್ಯ ಸರಹದ್ದಿಗೆ ಹೋಗುವಾಗ ಅಲ್ಲಹಾಬಾದ್, ಡಿಲ್ಲಿ, ಲಾಹೋರ್, ಮೊದಲಾದ ರೈಲ್ವೇ ಸ್ಟೇಶನುಗಳಲ್ಲಿ ಬಹಳ ಮಂದಿ ಬಂಗಾಳಿಗಳು ಕೂಡಿ ಈ ಯುವಕರಿಗೆ ಧನ್ಯವಾದವನ್ನಿತ್ತು ಫಲಹಾರಗಳಿಂದ ಸತ್ಕರಿಸಿದರು.

ತನ್ನ ಗಂಡನು ಮಹಮ್ಮದೀಯ ಮತಾವಲಂಬನೆ ಮಾಡಿದುದರಿಂದ ತನ್ನ ಮಕ್ಕಳನ್ನು ತನ್ನ ಸ್ವಾಧೀನಕ್ಕೆ ಕೊಡಬೇಕೆಂದು ಹಿಂದೂ ಸ್ತ್ರೀಯೊಬ್ಬಳು ಹೈದರಾಬಾದಿನ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ದಾವಾ ತಂದಿದ್ದಳು. ಮಕ್ಕಳ ಮೇಲೆ ತಂದೆಗೆ ಸಂಪೂರ್ಣ ಹಕ್ಕಿರುವದೆಂದು ಜಡ್ಜಿಯವರು ತೀರ್ಮಾನಮಾಡಿ, ಕೋರ್ಟು ಖರ್ಚನ್ನು ಆಕೆಯೇ ಕೊಡಬೇಕೆಂದು ಅಪ್ಪಣೆಮಾಡಿರುವರು.

ರಾಜಕೀಯ ತಕ್ಸೀರುಗಳನ್ನು ಮಾಡಿದ ಅಪರಾಧಿಗಳನ್ನು ಶಿಕ್ಷಿಸುವದಕ್ಕಾಗಿ ಕಲ್ಕತ್ತೆಯಲ್ಲಿ ಹಲವು ಏರ್ಪಾಟುಗಳು ಮಾಡಲ್ಪಟ್ಟಿರುವುವಷ್ಟೆ. ಈಚೆಗೆ ಮತ್ತೊಂದು ಉಪಾಯವು ಮಾಡಲ್ಪಟ್ಟಿದೆ. ಬೆಂಕಿಯ ಅನಾಹುತವಾಗಲೀ ರಾಜಕೀಯ ತಕ್ಸೀರುಗಳಾಗಲೀ ನಡೆದಾಗ ಎಷ್ಟು ಗಾಢ ನಿದ್ರೆಯಲ್ಲಿದ್ದರೂ ಪೋಲಿಸು ಅಧಿಕಾರಿಗಳೂ ಇತರರೂ ಎಚ್ಚರಗೊಳ್ಳುವಷ್ಟು ಗಟ್ಟಿಯಾದ ಶಬ್ದವನ್ನು ಮಾಡುವ ಯಂತ್ರವೊಂದು ನಿರ್ಮಿಸೋಣಾಗಿದೆ. ಇದರ ಸಹಾಯದಿಂದ ಅಪರಾಧಿಗಳನ್ನು ಹಿಡಿಯಲು ಸಾಧ್ಯವಾಗಿದೆ.

ಕಲ್ಕತ್ತೆಯ ಶಿವಪುರದ ಇಂಗ್ಲೀಷ್ ಹೈಸ್ಕೂಲಿನ ಬಹುಮಾನ ಹಂಚುವ ಸಮಾರಂಭದಲ್ಲಿ ಅಧ್ಯಕ್ಷರಾಗಿದ್ದ ಬಂಗಾಳ ವಿದ್ಯಾಭ್ಯಾಸ ಇಲಾಖೆಯ ಡಿರೆಕ್ಟರರಾದ ಮಿ| ಡಬ್ಲ್ಯು. ಡಬ್ಲ್ಯು. ಹಾರ್ನೆಲರವರು ಈ ಅಭಿಪ್ರಾಯವನ್ನು ಸೂಚಿಸಿರುತ್ತಾರೆ:—ಶಾಲೆಗಳಲ್ಲಿ ಮತಬೋಧನೆಗೆ ಅವಕಾಶ ಕೊಡುವದರಿಂದ ಅನಾಯಕ ಪುಂಗಡದವರ ಹಾವಳಿಯು ನಿಂತುಹೋಗುವದು. ಹಿಂದೂಗಳು ಸ್ವಭಾವಿಕವಾಗಿ ಶಾಂತಶೀಲರು. ಇದ್ದುದರಲ್ಲಿಯೇ ಸಂತೃಪ್ತರಾಗುವವರು. ಆದರೆ ಈಗ ಹಿಂದೂ ಬಾಲಕರಲ್ಲಿ ಅಶಾಂತತೆಯೂ ಅತೃಪ್ತಿಯೂ ಹುಟ್ಟಿರುವದು ಆಶ್ಚರ್ಯವಾಗಿದೆ. ಶಾಲೆಗಳಲ್ಲಿ ಮತಬೋಧನೆಯನ್ನು ಕೊಡುವ ಏರ್ಪಾಡು ಮಾಡುವದರಿಂದ ಅರಾಜಕ ವ್ಯಾಪಾರಗಳನ್ನಡಗಿಸಬಹುದು.

ದಕ್ಷಿಣ ಹಿಂದೂಸ್ಥಾನ.

ಕಲ್ಲಿಕೋಟೆಯ ಪಳ್ಳಿಪುರದ ಬಳಿ ತೀಯ್ಯ ಮತ್ತು ಚೆರುವ ಜಾತಿಯವರಿಬ್ಬರು ಕಾಯಿಪಲ್ಯಗಳ ಹೊಲದಲ್ಲಿ ಗಿಡಗಳನ್ನು ಕೀಳುತ್ತಿರುವಾಗ ಬಂಗಾರದ ವರಹಗಳು ತುಂಬಿದ ಎರಡು ಪಾತ್ರೆಗಳು ಸಿಕ್ಕಿದವು. ಅವುಗಳ ಒಟ್ಟು ಬೆಲೆಯು ಸುಮಾರು ೨೮,೦೦೦ ರೂಪಾಯಿಗಳಾಗಬಹುದು. ಅವರಿಬ್ಬರೂ ಆ ಪಾತ್ರೆಯನ್ನು ಅಲ್ಲಿಯೇ ಬಚ್ಚಿಟ್ಟು ಒಬ್ಬೊಬ್ಬರು ಒಂದೊಂದು ವರಹವಂತೆ ತೆಗೆದುಕೊಂಡು ವೆಚ್ಚಮಾಡುತ್ತಿದ್ದರು. ಒಂದು ದಿನ ಅವರಲ್ಲೊಬ್ಬನು ಒಂದು ವರಹವನ್ನು ಹೆಂಡದಂಗಡಿಯಲ್ಲಿ ಚಿಲ್ಲರೆ ಮಾಡಿಸುತ್ತಿದ್ದಾಗ ಅನುಮಾನದ ಮೇಲೆ ಪೋಲಿಸಿನವರು ಅವನನ್ನು ದಸ್ತಗಿರಿಮಾಡಿದರು. ಆಗ ನಿಜವಾದ ಸಂಗತಿಯೆಲ್ಲವೂ ಹೊರಗೆ ಬಿತ್ತು. ಈಗ ಆ ಪಾತ್ರೆಗಳು ಸರಕಾರದವರ ವಶವಾಗಿದೆ. ಅವರಿಬ್ಬರೂ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ.

ಮದರಾಸಿನ ತಿರುವಲಕೇಣಿಯಲ್ಲಿ ಶುದ್ಧೀ ಸಭಾದವರಿಂದ ಒಂದು ಮಹಮ್ಮದೀಯ ಕುಟುಂಬವು ಪ್ರಾಯಶ್ಚಿತ ಮೂಲಕ ಹಿಂದೂ ಮತಕ್ಕೆ ಸೇರಿಸಲ್ಪಟ್ಟಿತೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆ ಸಮಯದಲ್ಲಿ ಅನೇಕ ಹಿಂದೂ ದೊಡ್ಡ ಮನುಷ್ಯರು ಬಂದು ಸೇರಿದ್ದರು. ಆ ಕುಟುಂಬಕ್ಕೆ ಸೇರಿದ ೬ ಮಂದಿ ಮಹಮ್ಮದೀಯರಲ್ಲಿ ಮೂವರಿಗೆ ಯಜ್ಞೋಪವೀತವು ಹಾಕಲ್ಪಟ್ಟಿತ್ತೆಂತಲೂ ಕುಟುಂಬದ ಯಜಮಾನನಿಗೆ ಬಾಬು ಬಾಲೇಶ್ವರವೆಂತಲೂ ಆತನ ಹೆಂಡತಿಗೆ ಲಲಿತದೇವಿಯೆಂತಲೂ, ಹಿರಿಯ ಮಗನಿಗೆ ಕೃಷ್ಣಚಂದ್ರನೆಂತಲೂ, ಎರಡನೇಯ ಮಗನಿಗೆ ಧರ್ಮವೀರನೆಂತಲೂ, ೩ನೇ ಮಗನಿಗೆ ರಾಮಚಂದ್ರನೆಂತಲೂ, ಮೊಮ್ಮಗನಿಗೆ ಲಕ್ಷ್ಮಣನೆಂತಲೂ ನಾಮಕರಣ ಮಾಡಲ್ಪಟ್ಟಿತೆಂತ ತಿಳಿದು ಬಂದದೆ. ಪ್ರಾಯಶ್ಚಿತ ಕರ್ಮಗಳೆಲ್ಲವೂ ಮುಗಿದ ಮೇಲೆ ೧೫ ದಿನಗಳ ಹಿಂದೆ ಹಿಂದೂ ಮತಕ್ಕೆ ಸೇರಿಸಿಕೊಳ್ಳಲ್ಪಟ್ಟ ಸುಶೀಲದೇವಿ ಎಂಬಾಕೆಯು ವೈದಿಕ ಧರ್ಮದ ಶ್ರೇಷ್ಠತೆಯನ್ನು ಕುರಿತು ಉಪನ್ಯಾಸ ಮಾಡಿದಳಂತೆ.

ಇದೇ ಅಕ್ಟೋಬರ ತಾ. ೩ನೇಯ ತಾರೀಕಿನಿಂದ ತಾ. ೧೪ನೇಯ ವರೆಗೆ ಮೈಸೂರಲ್ಲಿ ನಡೆಯುವ ದಸರಾ ಪ್ರದರ್ಶನಕ್ಕೆ ಸಂಬಂಧಿಸಿದಂತೆಯೇ ಮೈಸೂರು ಸಂಸ್ಥಾನದಲ್ಲಿರುವ ಪಾಠಶಾಲೆಗಳಿಂದ ನಾನಾ ಬಗೆಯ ಪ್ರದರ್ಶನದ ವಸ್ತುಗಳನ್ನು ಸೇರಿಸಿ ಪ್ರದರ್ಶಿಸಬೇಕೆಂದು ಉದ್ದೇಶಿಸಲ್ಪಟ್ಟದೆ.

ಮದ್ರಾಸ್ ಸರಕಾರದ ಆಡಳಿತೆಯಲ್ಲಿರುವ ಸಿಂಕೋನ ಇಲಾಖೆಯಿಂದ ಈ ವರ್ಷ ಸರಕಾರದವರಿಗೆ ೯,೫೧,೬೨೫

ರೂಪಾಯಿಗಳ ನಷ್ಟೆ ಹುಟ್ಟಿಬಂದಿರುತ್ತದೆ. ಹಿಂದಿನ ವರ್ಷ ಇದರಿಂದ ೩,೭೧,೪೮೮ ರೂಪಾಯಿಗಳ ನಷೆ ಮಾತ್ರ ದೊರಕಿತ್ತು. ಸರಕಾರದ ತೋಟಗಳಲ್ಲಿದ್ದ ಸಿಂಕೋನ ಮರಗಳ ಚೆಕ್ಕೆಗಳಿಗೆ ಕ್ರಯ ಹೆಚ್ಚಿದ್ದೇ ಈ ಲಾಭಕ್ಕೆ ಕಾರಣವಾಯಿತು.

~~~~~

ಮಲಬಾರಿಗೆ ಸೇರಿದ ಪೊನ್ನಾನಿ ತಾಲೂಕಿನಲ್ಲಿ ಆಯುಧ ಪಾಣಿಗಳಾದ ಏಳು ಮಾಪಿಳ್ಳೆಯರು ರಾತ್ರಿಕಾಲ ನದಿಯಲ್ಲಿದ್ದ ಮಂಜಿಯ ಮೇಲೆ ಬಿದ್ದು ಅದರ ತಾಂಡೇಲನನ್ನೂ ಕಲಾಶಿಗಳನ್ನೂ ಹೆದರಿಸಿ ೬೦೦ ರೂಪಾಯಿಗೂ ಮಿಕ್ಕಿದ ಸೊತ್ತುಗಳನ್ನು ಅಪಹರಿಸಿಕೊಂಡು ಹೋಗಿದ್ದರು. ಪೋಲಿಸಿನವರು ಈ ನಕಾಯಿತರನ್ನು ತಲಾಸಿಯಿಂದ ಹಿಡಿದು ವಿಚಾರಣೆಗೆ ಗುರಿಮಾಡಿದಲ್ಲಿ ಕಲಿಕೋಟೆಯ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರು ಒಬ್ಬೊಬ್ಬ ಅಪಾದಿತನಿಗೆ ಏಳೇಳು ವರ್ಷಗಳ ಕಠಿಣ ಸಜಾ ವಿಧಿಸಿರುವರು.

~~~~~

ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಬಹುಮಾನಪಟ್ಟ ಸರ್ ಹೆರೋಲ್ಡ ಸ್ಟುವಾರ್ಟರವರು ಕೆಲಸದಿಂದ ನಿವೃತ್ತರಾಗುವದರಿಂದ ರೆವಿನ್ಯೂ ಬೋರ್ಡಿನ IV ಮೆಂಬರರಾಗಿರುವ ಮಿ| ಎಚ್. ಎಫ್. ಡಬ್ಲ್ಯು. ಗಿಲ್ಲ್‌ಮ್ಯಾನರು ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

~~~~~

ದಕ್ಷಿಣ ಕನ್ನಡ.

~~~~~

ನೋಟೀಸು.

~~~~~

ಮಂಗಳೂರು ತಾಲೋಕಿನಲ್ಲಿರುವ ಬಾಸೆಲ್ ಮಿಶ್ಯನಿನವರ ಎಲ್ಲಾ ಸ್ಥಿರಾಸ್ತಿಗಳ ಗೇಣಿ ವಸೂಲಿ ವಗೈರೆ ಆಡಳಿತೆ ನೋಡುವರೆ ಒಬ್ಬ ಮುತಾಲಿಕರು ಅಗತ್ಯ ಇರುವದರಿಂದ ಸ್ಥಿರಾಸ್ತಿಗಳ ಆಡಳಿತೆ ನೋಡಿ ಒಳ್ಳೆ ಮಾಹೀತಿಯುಳ್ಳ ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಈ ತಿಂಗಳ ತಾರೀಕು 30ರ ಒಳಗೆ ಬರಕೊಳ್ಳುವದು. ಸದರಿ ಕೆಲಸವು ಪ್ರಕೃತ ಒಂದು ವರುಷಕ್ಕೆ ಮಾತ್ರ; ಮತ್ತು ಸಂಬಳ ತಿಂಗಳು 1೦ ರೂಪಾಯಿ 25 ಆಗಿರುತ್ತದೆ. ಉಮೇದ್ವಾರರಿಗೆ ತಕ್ಕಮಟ್ಟಿನ ಇಂಗ್ಲಿಷಿನ ಮಾಹಿತಿ ಕೂಡಾ ಇರಬೇಕಾಗಿರುತ್ತದೆ.

ಎಮ್. ಸುಬ್ರಾಯಪೈ.
ಮಿಶ್ಯನ್ ವಕೀಲ,
ಮಂಗಳೂರು.

~~~~~

ಸುರತ್‌ಕಲ್:— ಇಲ್ಲಿಯ "ಹಿಂದೂ ಪುರಾಣ ಸಮಾಜ" ವೆಂಬುವ ವಾಚಕಮಂದಿರದಲ್ಲಿ ಕಳೆದ ಒಂದು ವರುಷದ ಲಾಗಾಯಿತು ಪ್ರತಿ ನಿತ್ಯವೂ ನೆರವೇರುತ್ತಿದ್ದ ಶ್ರೀ ಮಹಾಭಾರತ ವಾಚಕದ ಮಂಗಲೋತ್ಸವವು ಇದೇ ತಾ. ೧೧ನೇ ಸೋಮವಾರ ದಿನ ಸಂತೋಷದಿಂದ ಆಚರಿಸಲ್ಪಟ್ಟಿತು. ಈ ದಿನ ಮಧ್ಯಾಹ್ನ ಪುರಾಣ ಶ್ರವಣಾಸಕ್ತರಾದ ಶ್ರೋತೃಗಳ ಖರ್ಚಿನಿಂದ ಶ್ರದ್ಧಾಪೂರ್ವಕ ಬ್ರಾಹ್ಮಣ ಸಮಾರಾಧನೆಯೂ, ತರುವಾಯ ವಾಚಕ ಸಮಾಪ್ತಿ ಕಾಲದಲ್ಲಿ ವಾದ್ಯಘೋಷದೊಡನೆ ಮಂಗಳಾರತಿ ಸಮರ್ಪಿಸಲಾಯಿತು. ಈ ಸುಸಮಯದಲ್ಲಿ ಸಮಾಜದ ಕಟ್ಟಡದ ಮ್ಹಾಲೀಕರಾದ ರಾ| ಎ. ಮಹಾಬಲಯ್ಯರು ಪುರಾಣ ಓದುತ್ತಿದ್ದ ವಾಚಕಮಹನೀಯರಿಗೂ, ತದರ್ಥವನ್ನು ಸರಳವಾಗಿ ಬೋಧಿಸುತ್ತಿದ್ದ ಸದರಿ ಸಮಾಜದ ಕಾರ್ಯದರ್ಶಿ ಮ| ರಾ| ಎಚ್. ವೆಂಕಟರಮಣಯ್ಯರಿಗೂ ಮತ್ತು ಮಂಗಲಕಾಲದಲ್ಲಿ ಪೂಜಾದಿ ಸತ್ಕಾರ್ಯಗಳನ್ನು ಮಾಡಿದ ವೇದಜ್ಞ ದ್ವಿಜವರ್ಯರಿಗೂ ವಸನರೂಪವಾದ ಬಹುಮಾನಾರ್ಥದ ಉಡುಗರೆಯನ್ನು ಸಂತೋಷದಿಂದ ಕೊಟ್ಟರು. ಬಳಿಕ ನೆರೆದ ಶ್ರೋತೃಗಳೇ ಮೊದಲಾದ ಸಮಸ್ತರಿಗೂ ಏತತ್ಪುರಾಣದ ಕಥಾನಾಯಕನಾದ ಶ್ರೀ ಕೃಷ್ಣಪರಮಾತ್ಮನ ಪ್ರಸಾದರೂಪವಾದ ಪಂಚಕಜ್ಜಾಯ ಹಂಚಿ ಸಭೆಯನ್ನು ಬಹು ವಿಜೃಂಭಣೆಯಿಂದ ಸಮಾಪ್ತಿಗೊಳಿಸಲಾಯಿತು.

~~~~~

ಪೊಳಲಿ:— ಕಳೆದ ಸಂಚಿಕೆಯಲ್ಲಿ ಮಂಗಳೂರು ತಾಲೂಕು ಬೋರ್ಡು ಮೆಂಬರರಾಗಿ ಶ್ರೀಯುತ ಪೊಳಲಿ ಕಟ್ಟೆಮಾರು ರಘುಚಂದ್ರ ಬಲ್ಲಾಳರನ್ನು ನೇಮಿಸಿದರೆಂಬ ಸಂತೋಷ ವಾರ್ತೆಯು ತಲಪಿದೊಡನೆ ಪೊಳಲಿ ಎಸ್. ಪಿ. ರಾಜಾಕಂಪೆನಿಯ ಮೆನೇಜರ್ ಬಿ. ಎಸ್. ಪರಮೇಶ್ವರಯ್ಯನವರು ಇದೇ ತಾ. ೯ರಲ್ಲು ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಬಹಳ ವಿಜೃಂಭಣೆಯಿಂದ ಸಕ್ಕರೆ, ಸಕ್ಕರೆಪಾನಕ ವಗೈರೆ ಅನೇಕ ಜನರಿಗೆ ಹಂಚಿ ಈ ಸಂತೋಷ ವಾರ್ತೆಯನ್ನು ಪ್ರಕಟಪಡಿಸಿರುತ್ತಾರೆ. ಶ್ರೀಯುತ ಮಾನ್ಯ ಬಲ್ಲಾಳರವರಾದರೂ ಈ ಬಡಜನರ ಕಷ್ಟನಷ್ಟಗಳನ್ನು ಪರಿಹರಿಸಬೇಕೆಂದು ಕಳೆದ ೨೫ ವರ್ಷಗಳಿಂದಲೂ ಪ್ರಯತ್ನದಲ್ಲಿರುವ ಬಂಟ್ವಾಳ, ಗುರುಪುರ, ಪೊಳಲಿ ರಾಜರಸ್ತೆಯ ವಿಷಯ ಪ್ರಜಾ ಮುಂದಾಳುಗಳಿಗೆ ಸೂಚಿಸಿ, ಬಡರೈತರ ಕಷ್ಟನಷ್ಟಗಳನ್ನು ತಪ್ಪಿಸಿ ಲೋಕೋಪಕಾರ ಕೀರ್ತಿಯನ್ನು ಸಂಪಾದಿಸುವರಾಗಿ ನಂಬುತ್ತೇವೆ. ಸದರಿ ರಸ್ತೆಯನ್ನು ಆದಷ್ಟು ಬೇಗನೆ ಸರಕಾರದವರು ಮಾಡಿಸುವರೆಂದು ವರ್ತಮಾನ ಸಹಾ ಕೇಳುತ್ತೇವೆ. ಆದರೂ ರಸ್ತೆಗಿಂತ ಮೊದಲು ಇಲ್ಲಿ ಒಂದು ಟಪ್ಪಾಲು ಆಫೀಸು ಅತ್ಯಗತ್ಯವಾಗಿ ತೆರೆದು ಕೊಡಬೇಕಾಗಿ ಹಲವು ಸರ್ತಿ ಮೇಲಾಫೀಸರರಿಗೆ ಬರದರೂ, ಈ ವರೆಗೂ ಉತ್ತರವಿಲ್ಲದೆ ಇರುವದರಿಂದ ಬಹಳ ವ್ಯಸನ ಪಡುತ್ತೇವೆ.

~~~~~

ಕುಂಬಳೆ:— ಇಲ್ಲಿ ಚರ್ಮದ ವ್ಯಾಪಾರ ಮಾಡುತ್ತಿದ್ದ ಕಾಸರಗೋಡು ಮಮ್ಮದೆಬ್ಯಾರಿ ಎಂಬವನು ಕೆಲವು ದಿವಸದ ಹಿಂದೆ ಜುಮಾ ಮಸೀದಿ ಬಳಿ ರಾತ್ರಿ ರಸ್ತೆಯಿಂದ ಬರುತ್ತಾ ನಾಗರ ಹಾವು ಕಚ್ಚಿ ಮೃತವಾದನು. ಇದೇ ಸ್ಥಳದಲ್ಲಿ ಕಳೆದ ವರ್ಷ ರೈಲ್ವೆ ಕೂಲಿಯವನೊಬ್ಬನನ್ನು ಅದೇ ಹಾವು ಕಚ್ಚಿ ಕೊಂದಿತ್ತು. ಸದರಿ ಹಾವು ರಾತ್ರಿ ಹಗಲು ಅಲ್ಲೇ ಸುಳಿದಾಡುವದರಿಂದ ಜನರು ಬಹು ಜಾಗರೂಕತೆಯಿಂದಿರಬೇಕು.

ಇಲ್ಲಿಯ ಮೀನು ಮಾರ್ಕೆಟು ಸುತ್ತಲೂ ಲೋಕಲ್ ಫಂಡಿನಿಂದ ಅಂಗಡಿಗಳನ್ನು ಕಟ್ಟಿಸಿಕೊಡುವಂತೆ ವ್ಯಾಪಾರಸ್ತರನೇಕರು ತಾಲೂಕು ಬೋರ್ಡು ಪ್ರೆಸಿಡೆಂಟರವರಿಗೆ ಮನವಿ ಮಾಡಿಕೊಂಡಿರುವರು. ಅದಲ್ಲದೆ ಈ. ಕೈೂಪಾಡಿ, ಎಡನಾಡ ಗ್ರಾಮಗಳ ಗಡಿಯಾದ ಸೂರಂಬೈಲು ಎಂಬಲ್ಲಿ ನೀರಿನ ಕೊರತೆ ಇರುವದರಿಂದ ಅಲ್ಲಿಯ ರಸ್ತೆ ಕಿನಾರೆಯಲ್ಲಿ ಒಂದು ಸರಕಾರಿ ಬಾವಿ ಅಗತ್ಯ ತೆಗಿಸುವಂತೆ ಅಲ್ಲಿಯ ಆಸಪಾಸ ನಿವಾಸಿಕರ ಅರ್ಜಿಯಾಗಿರುವದಾಗಿ ಕೇಳುವದರಿಂದ ಈ ಅರಿಕೆಗಳಿಗೆ ಮಾನ್ಯ ಪ್ರೆಸಿಡೆಂಟರವರು ತಕ್ಕ ನಿಗಾ ಕೊಡುವರಾಗಿ ನಂಬುತ್ತೇನೆ.

ಈ ಮೊದಲು ಸಪ್ಟಂಬರ ವ ಆಕ್ಟೋಬರ ಶುರುವಿನಿಂದ ವಂತ ಕೊಡೋಣಾದ ನೋಟೀಸುಗಳನ್ನು ರದ್ದು ಪಡಿಸಿ ಬರುವ ದಶಂಬರ ತಿಂಗಳ ಲಾಗಾಯಿತು ರೈಲ್ವೇ ಟ್ರೇನುಗಳ ಸಮಯ ತಬ್ದೀಲಿ ಮಾಡೋಣಾದೀತೆಂತ ಇಲಾಖೆಯವರು ಇದೇ ತಾ. ೧೪ರಲ್ಲು ೩ನೇ ದಪೆ ಪ್ರಕಟಿಸಿರುವರು

ತಾ. ೧೭ನೇ ರಾತ್ರಿ ಇಲ್ಲಿಯ ಒಂದು ಅಂಗಡಿಯಲ್ಲಿ ಕನ್ನ ಕಳವಾಗಿ ಕೆಲವು ಚಿಲ್ಲರೆ ಸಾಮಾನು ಹೋಗಿರುವದು. ಈ ಕುರಿತು ಯಾವ ತನಕಿಯೂ ಪತ್ತೆಯೂ ಇಲ್ಲದಿರುವದು ಆಶ್ಚರ್ಯ!

~~~~~

ಪುತ್ತೂರು:— ಗ್ರಾಮ ಉದ್ಯೋಗಸ್ಥರ ಸ್ಪೆಶ್ಯಲ್ ಟೆಸ್ಟ್ ಯಾನೆ ವಿಶೇಷ ನಿರಖು ಪರೀಕ್ಷೆಯು ಇದೇ ತಾ. ೧೯೧೬ನೇ ಇಸವಿ ನವಂಬರ ತಾರೀಕು ೨೦ನೇ ಸೋಮವಾರ ದಿವಸ ಕುಂದಾಪುರ, ಪುತ್ತೂರು ಮತ್ತು ಮಂಗಳೂರಿನಲ್ಲಿ ನಡಿಯೋಣಾಗುವದು. ಪರೀಕ್ಷೆಗೆ ದಾಖಲಾಗುವ ಒಗ್ಯೆ ಮಾಡತಕ್ಕ ಅರ್ಜಿಗಳನ್ನು ಬರುವ ಆಕ್ಟೋಬರ ೧೫ನೇ ತಾರೀಕಿನೊಳಗೆ ಉಮೇದ್ವಾರನು ವಾಸವಾಗಿರುವ ಡಿವಿಜನಿನ ಡಿವಿಜನಲ್ ಆಫೀಸರರಿಗೆ ಮಾಡತಕ್ಕದ್ದು. ಪರೀಕ್ಷೆಗೆ ದಾಖಲುಮಾಡಿಕೊಳ್ಳುವ ಫೀಸು ರೂಪಾಯಿ ೪ ಆಗಿರುತ್ತದೆ. ಪರಂತು ಜಿಲ್ಲೆಯಲ್ಲಿ ಕೆಲಸದ ಮೇಲೆ ಇರುವ ಒಬ್ಬ ಪಟೇಲನ ಯಾ ಶ್ಯಾನುಭಾಗನ ರಕ್ತಸಂಬಂಧಿಯಾದ ಉಮೇದ್ವಾರರಾದರೆ ತೆರತಕ್ಕ ಫೀಸು ಆಣೆ ಹನ್ನೆರಡು ಎಂತ ಪ್ರಕಟವಾಗಿದೆ.

ಇದೇ ಬರುವ ದಶಂಬರ ತಾರೀಕು ೩೧ಕ್ಕೆ ಅಂತ್ಯವಾಗುವ ಲೈಸನ್ಸುಗಳುಳ್ಳ ಈ ಜಿಲ್ಲೆಯ ಕೋವಿ ಲೈಸನ್ಸುದಾರರೆಲ್ಲರೂ ಬರುವ ಜನವರಿ ೧ನೇ ತಾರೀಕಿನೊಳಗೆ ಅವರಿಗೆ ತಲಪುವಂತೆ ಲೈಸನ್ಸುಗಳನ್ನು ವಾಪಾಸುಮಾಡುವರೆ ಅನುಕೂಲವಾಗುವಹಾಗೆ ಬೇಗನೇ ತಮ್ಮ ಅರ್ಜಿಗಳೊಡನೆ ಲೈಸೆನ್ಸುಗಳನ್ನು ಕಳುಹಿಸಬೇಕೆಂದು ಪ್ರಕಟವಾಗಿದೆ. ಬರುವ ೧೯೧೭ನೇ ಇಸವಿ ಜನವರಿ ತಾರೀಕು ೧ಕ್ಕೆ ತಮ್ಮ ಊರ್ಜಿತಪಡಿಸಿದ ಲೈಸನ್ಸುಗಳನ್ನು ವಾಪಾಸು ಪಡೆಯದವರು ವಿಳಂಬವಿಲ್ಲದೆ ಹತ್ತರ ಪೋಲೀಸ್ ಸ್ಟೇಶನಿನಲ್ಲಿ ತಮ್ಮ ಕೋವಿಗಳನ್ನು ಅಮಾನತ್ತು ಇಡಬೇಕಾಗುವದು. ಹೀಗೆ ಮಾಡದವರು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗುವರು. ಮತ್ತು ಅವರ ಲೈಸನ್ಸುಗಳು ಊರ್ಜಿತಪಡಿಸಲಿಕ್ಕಿಲ್ಲ.

ಇಲ್ಲಿಯ ವಕೀಲ ಮ| ರಾ| ಬೈಂದೂರು ರಾಮರಾಯರ ಬಾಬ್ತು ಎಮ್ಮೆಯನ್ನು ಇಲ್ಲಿಯ ಸ್ಟೇಶನಿನ ೨ ಜನ ಪೋಲೀಸಿನವರು ಹಿಡಿದು ಎಳೆದು ಹೊಡೆದು ಜಕಂ ಪಡಿಸಿದ್ದಾಗಿ ಕೊಟ್ಟ ಫಿರಿಯಾದಿ ಸಂಬಂಧ ಇಲ್ಲಿಯ ತಾಲೂಕು ಮೇಜಿಸ್ಟ್ರೇಟರಾದ ಮ| ರಾ| ಬಿ. ಮಂಜುನಾಥ ಬಾಳಿಗರವರು ಪೋಲೀಸಿನವರಿಗೆ ಪ್ರತಿ ಒಬ್ಬಗೆ ರೂಪಾಯಿ ೪ರಂತೆ ಜುಲುಮಾನೆ ಮತ್ತು ಮುದ್ದೈಯ ಖರ್ಚು ರೂಪಾಯಿ ೩ ತೆರಬೇಕೆಂತ ಕೊಟ್ಟ ತೀರ್ಪಿನ ಮೇಲೆ ಪೋಲೀಸಿನವರು ಇಲ್ಲಿಯ ಡಿವಿಜನ್ ಡಿಪ್ಯುಟಿ ಮೇಜಿಸ್ಟ್ರೇಟರಲ್ಲಿ ದಾಖಲುಮಾಡಿದ ಅಪೀಲು ತನಕಿ ನಡದು ಮೂಲ ತೀರ್ಪು ರದ್ದುಪಡಿಸಿ ಜುಲುಮಾನೆ ವಾಪಾಸು ಕೊಡುವರೆ ಹುಕುಂ ಮಾಡಿ ಮುದ್ದೈಆಲೆಯನ್ನು ವಿಮೋಚನೆಪಡಿಸಿರುವದಾಗಿ ತಿಳಿಯುತ್ತೇವೆ.

ಈವರೆಗೆ ನಮ್ಮಲ್ಲಿ ಛಾಪಖಾನೆ ಇದ್ದಿಲ್ಲ. ಬಂಟ್ವಾಳ ಸುಬ್ರಾಯ ಕಮ್ತಿಯವರೆಂಬವರು ಶ್ರೀ ರಾಮನಾಥ ಮುದ್ರಾಲಯ ಯಂತ್ರವನ್ನು ಇಲ್ಲಿಗೆ ತಂದು ಕೆಲಸ ಆರಂಭಿಸಿರುವರು.
~~~~~

ಇತ್ತಕಡೆ ಅಕ್ಕಿಯ ಕ್ರಯವೆಂತೂ ವಿಪರೀತವಾಗಿ ಏರಿರುವದು. ಈಗಲೆಂತೂ ಮುಡಿ ೧ರ ರೂಪಾಯಿ ೬||. ಶೇರು ೧ರ ೬|| ದುಡ್ಡಿಗೆ ಕಮ್ಮಿ ಅಕ್ಕಿ ಸಿಕ್ಕದೇ ಸಿಕ್ಕದು. ಬಡಬಗ್ಗರ ಗೋಳು ಎಂತೂ ಹೇಳತಕ್ಕದ್ದಿಲ್ಲ. ಹಳ್ಳಿ ಪ್ರಾಂತ್ಯದಲ್ಲಿದ್ದ ಅಕ್ಕಿ ಎಂತೂ ಹೆಂಪ್ಯ ಅತ್ತಕಡೆ ಸಾವಕಾರರು ಸಾಚಿಮಾಡಿ ಮಂಗಳೂರಿಗೆ ಕಳುಹಿಸುವ ಕೆಲಸದಲ್ಲಿ ಅಮರಿರುವರು. ಮಳೆ ಎಂತೂ ಮಳೆಗಾಲ ದಂತೆ ಎಡೆಬಿಡದ ಸುರಿಯುವದರಿಂದ ಬೆಳೆದ ಬೆಳೆ ಎಂದೂ ಕೊಯ್ಯಲಿಕ್ಕಾಗದೆ ಗದ್ದೆಯಲ್ಲಿ ಕೊಳೆಯುತ್ತಿರುವದು. ಕೂಲಿ ಕೆಲಸದವರೆಂತೂ ಮಳೆದೆಸೆಯಿಂದ ಕೆಲಸಮಾಡಿ ಹೊಟ್ಟೆ ತುಂಬಿಸಲಿಕ್ಕೆ ಉಪಾಯವಿಲ್ಲದೆ ಗೋಳಾಡುತ್ತಿರುವರು. ನಮ್ಮ ಜಿಲ್ಲೆಯ ಇತರ ತಾಲೂಕುಗಳ ಮಾನ್ಯ ಗೃಹಸ್ಥರು ವ ಸಾವಕಾರರು ಬಡಜನರ ಗೋಳು ಪರಿಹರಿಸುವದಕ್ಕೆ ಅಕ್ಕಿಯನ್ನು ಕಮ್ಮಿ ದರದಲ್ಲಿ ವಿಕ್ರಯಿಸುವರಾಗಿ ಕೇಳುತ್ತೇವೆ. ನಮ್ಮಲ್ಲಿಯ ಮಾನ್ಯ ಗೃಹಸ್ಥರು ಹೀಗೆಯೇ ಮಾಡುತ್ತಿದ್ದರೆ ಬಡಜನರು ಈ ಬರಗಾಲದಲ್ಲಿ ಬದುಕಿಕೊಳ್ಳಬಹುದಿತ್ತು.

~~~~

ಮಂಗಳೂರು.

ಸ್ವೀಕಾರ.

"ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ" ಇದರ ಎರಡು ಸಂಚಿಕೆಗಳು ನಮಗೆ ಬಂದಿರುತ್ತವೆ. ಈ ಪತ್ರಿಕೆಯು ತನ್ನ ಹೆಸರಿಗೆ ತಕ್ಕಂತೆ ಉತ್ತಮ ಮತ್ತು ಮಹತ್ವದ ಲೇಖಗಳನ್ನು ಒಳಕೊಂಡಿದೆ. ಧಾರವಾಡ ಮತ್ತು ಮೈಸೂರ ಕನ್ನಡ ನುಡಿಗಳಲ್ಲಿರುವ ತಾರತಮ್ಯಗಳು ಇದರಲ್ಲಿ ವ್ಯಕ್ತವಾಗುತ್ತದೆ. ಧಾರವಾಡ ಮತ್ತು ಮೈಸೂರ ಸೀಮೆಯವರದೇ ಲೇಖನಗಳು ಇದರಲ್ಲಿ ಕಂಡುಬರುತ್ತವಲ್ಲದೆ ದಕ್ಷಿಣಕನ್ನಡದ ಕನ್ನಡಿಗರದೇನೂ ಕಂಡುಬರುವುದಿಲ್ಲ. ಇದು ಶೋಚನೀಯವು! ಇದರಿಂದ ಪರಿಷತ್ತನ್ನಾಗಲಿ ಪತ್ರಿಕೆಯನ್ನಾಗಲಿ ದೂರಲಿಕ್ಕೆ ಎಡೆಯಿಲ್ಲ. ಇರಲಿ, ಇದನ್ನು ಕಳುಹಿಸಿದ್ದಕ್ಕಾಗಿ ಪತ್ರಿಕಾಕರ್ತರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ಹೆಚ್ಚಿನ ವಿಷಯಗಳನ್ನು ಯಥಾವಕಾಶ ವಿಮರ್ಶಿಸುವೆವು.

ಆನಂದವನದಲ್ಲಿ ಪ್ರಕಟವಾಗುವ "ಸದ್ಬೋಧಚಂದ್ರಿಕೆ" ಎಂಬ ಕನ್ನಡ ಮಾಸಪತ್ರಿಕೆ ಮತ್ತು ಬೆಂಗಳೂರು ಸಿಟಿ, ಬಸವನಗುಡಿಯಲ್ಲಿ ಪ್ರಕಟವಾಗುವ "ಭಕ್ತ ಸಂದೇಶ" ಎಂಬ ಮಾಸಪತ್ರಿಕೆಗಳು ನಮಗೆ ಬಂದಿರುತ್ತವೆ. ಅವನ್ನು ಆತ್ಯಾದರದಿಂದ ಸ್ವೀಕರಿಸಿರುವೆವು. ಭಾಷಾ ಸೇವೆಯನ್ನೂ ಆದರೊಡನೆ ದೇಶಾ ಸೇವೆಯನ್ನೂ ಕೈಕೊಳ್ಳುವ ಉದ್ದೇಶದಿಂದ ಪ್ರಕಟವಾಗುತ್ತಿರುವ ಈ ಪತ್ರಿಕೆಗಳಿಗೆ ಮಹಾಜನರು ಆಶ್ರಯ ಕೊಡಬೇಕೆಂದು ಅಪೇಕ್ಷಿಸುತ್ತೇವೆ.

ನಿನ್ನೆಯ ವರೆಗೆ ಇಲ್ಲಿ ೧೦೦ ಇಂಚು ಮಳೆ ಬಿದ್ದಿರುತ್ತದೆ. ಕಳೆದ ವರ್ಷ ಇಷ್ಟೇ ಸಮಯಕ್ಕೆ ೮೭ ಇಂಚು ಮಳೆ ಮಾತ್ರ ಬಿದ್ದಿತ್ತು.

ಇದೇ ತಾ. ೧೯ನೇ ರಾತ್ರಿ ಇಲ್ಲಿಯ ಅಜುಬುದ್ದೀನ ರೋಡಿಗೆ ತಾಗಿರುವ ಮೆಸರ್ಸ್ ಎಸ್. ನಾಗಪ್ಪ ನ್ಯಾಕ, ಕೊಂಚಾಡಿ ಅಪ್ಪಯ್ಯ ಶ್ಯಾನುಭಾಗ ಮತ್ತು ಕಂಪೆನಿಯ ಜವುಳಿ ಅಂಗಡಿಯಲ್ಲಿ ಇಲ್ಲಿಯ ಸಾಹುಕಾರರೆಲ್ಲರನ್ನು ತಲ್ಲಣಗೊಳಿಸುವ ಒಂದು ಕಳವು ನಡೆದಿರುವದು. ರಾತ್ರಿಕಾಲ ಯಾರೋ ಈ ಅಂಗಡಿಯ ಬಾಗಲಿಗೆ ಹಾಕಿದ್ದ ಕಬ್ಬಿಣದ ಸರಳನ್ನೇ ಮುರಿದು ಒಳಗಿನ ಕವಾಟಿನಲ್ಲಿದ್ದ ಕೆಲವು ಶರ್ಟಿಂಗ್ ವಸ್ತ್ರಗಳನ್ನೂ, ಜಟ್ಟಿಗಳನ್ನೂ, ಶ್ಯಾಲುಗಳನ್ನೂ ಜರಿಯ ಟೊಪ್ಪಿಗಳನ್ನೂ ಕಳವು ಮಾಡಿರುವರು. ಒಟ್ಟಿಗೆ ಸುಮಾರು ೫೦೦-೬೦೦ ರೂಪಾಯಿ ಕ್ರಯ ಬಾಳುವ ವಸ್ತ್ರಗಳು ಕಳವು ಆಗಿ ಹೋಗಿರುತ್ತವೆ. ಕಳವು ಆದ ಸ್ಥಳವು ಪಟ್ಟಣದ ಮಧ್ಯೆ ಪ್ರಾಮುಖ್ಯ ಜವುಳಿ ವ್ಯಾಪಾರಗಳು ನಡಿಯುವ ಸ್ಥಳ; ನೂರಾರು ಜನರು ಅತ್ತಿತ್ತ ಹೋಗಿ ಬರುವಂಥಾ ಪ್ರಾಂತ್ಯವಾಗಿದೆ. ಇಂಥಾ ಸ್ಥಳದಲ್ಲಿ ಕಬ್ಬಿಣದ ಸರಳು ಮುರಿದು ಕಪಾಟಿನೊಳಗಿದ್ದ ವಸ್ತ್ರ ಇತ್ಯಾದಿಗಳನ್ನು ಕೊಂಡುಹೋದುದೆಂದರೆ ಇನ್ನು ಮುಂದೆ ಸಾಹುಕಾರರು ತಂತಮ್ಮ ಕೆಲಸ ತೀರಿಸಿ, ಅಂಗಡಿಗಳ ಬಾಗಲು ಮುಚ್ಚಿ, ಮನೆಗೆ ಹೋಗಿ ವಿಶ್ರಾಂತಿಯಿಂದ ನಿದ್ದೆಮಾಡುವದು ಅಸಾಧ್ಯವೆಂತಾಯಿತು. ಅದಲ್ಲದೆ ಈ ಬಾಗಲು ಮುರಿದ ಕಳ್ಳರಿಗೆ ಹೇಗೂ ಕನಿಷ್ಟ ಪಕ್ಷಕ್ಕೆ ಕಬ್ಬಿಣದ ದಪ್ಪವಾದ ಸರಳು ಮುರಿಯಲಿಕ್ಕೆ ಅರ್ಧಗಂಟೆ ಬೇಕಾದೀತು. ಒಳಗಿನ ೨-೩ ಕಬಾಟಿನ ಸಾಮಾನುಗಳನ್ನು ಗಂಟು ಕಟ್ಟಿಕೊಂಡು ಹೋಗಲು ಒಂದು ಅರ್ಧ ಗಂಟೆ. ಹೀಗೆ ಸುಮಾರು ಒಂದು ಗಂಟೆ ಮಧ್ಯಕಾಲದಲ್ಲಿ ಪಟ್ಟಣದ ಮಧ್ಯ ಸ್ಥಳದಲ್ಲಿ ಆದ ಕಳವು ಯಾರಿಗಾದರೂ, ಮುಖ್ಯವಾಗಿ ಬೀಟಿನ ಪೋಲಿಸರಿಗಾಗಲೀ ತಿಳಿಯದೆ ಹೋಗಿರುವದನ್ನು ಆಲೋಚಿಸುವಾಗ ಆ ರಾತ್ರಿ ಈ ರಸ್ತೆಯಲ್ಲಿ ಪೋಲಿಸ ಬೀಟು ಇತ್ತೊ ಇಲ್ಲವೋ ಎಂಬ ಸಂದೇಹವು ಉಂಟಾಗುತ್ತಿದೆ. ಹೇಗೂ ಇರಲಿ; ನಿನ್ನೆಯ ದಿನ ನಮ್ಮ ಪೋಲಿಸರಿಗೆ ಈ ಕಳವಾದ ಮಾಲುಗಳು ಕುದ್ರೋಳಿ ಉಂಞ ಬ್ಯಾರಿ ಮನೆಯಲ್ಲಿದೆ ಎಂತ ತಿಳಿದು ಬಂದದರಿಂದ ಪೋಲಿಸರು ಆ ಮನೆಗೆ ಹೋಗಿ ಜಪ್ತಿಮಾಡಿದ್ದಲ್ಲಿ ಒಬ್ಬ ರೋಗಿಯು ಮಲಗಿದ್ದ (ಕಲಂಬಿ) ಪೆಟ್ಟಿಗೆಯೊಳಗೆ ಕಳವಾದ ಸುಮಾರು ಮುಕ್ಕಾಲಂಶ ಮಾಲುಗಳು ಸಿಕ್ಕಿದವೆಂತಲೂ ಪೋಲಿಸರು ಉಂಞ ಎಂಬ ಹೆಸರಿನ ಮಾಪಿಳ್ಳೆಯರಿಬ್ಬರನ್ನು ಈ ಸಂದರ್ಭದಲ್ಲಿ ಕೈದುಮಾಡಿರುವರೆಂದೂ ತಿಳಿಯುತ್ತೇವೆ.

ಕೆ. ಡಿ. ರಾಮ ಯಾನೆ ಶ್ಯಾಮ ಎಂಬವನಿಗೆ ಡೆಪ್ಯುಟಿ ಕಲೆಕ್ಟರರವರು ಒಳ್ಳೇ ನಡತೆಯ ಬಗ್ಗೆ ಒಂದು ವರ್ಷದ ಕಠಿಣ ಸಜಾ ವಿಧಿಸಿರುತ್ತಾರೆ.

ಇಲ್ಲಿಯ ಟೌನ್ ಪೋಲಿಸ ಸಬ್ ಇನ್ಸ್‌ಪೆಕ್ಟರರಾದ ಮೆ| ಚಮ್ನಾಡರವರು ಕಾಸರಗೋಡಿನ ಆಕ್ಟಿಂಗ್ ಸರ್ಕಲ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೆ| ಡಿ. ಮತ್ಯಾಸಖವರ ಬೋಳೂರು ಹಂಚು ಕಾರ್ಖಾನೆಯಲ್ಲಿ ಇಂಜಿನ್ ನಡಿಸುವ ಲೂಯಿಸ್ ಪಸಾಂಞ ಎಂಬವನು ನಿನ್ನೆಯ ದಿನ ಸದರಿ ಕಾರ್ಖಾನೆಯ ಹಿತ್ತಾಳೆಯ ಇಂಜಿನ್ ಸ್ಪಾಪಿನ್‌ನನ್ನು ಕಳವು ಮಾಡಿ ವಸ್ತ್ರದಲ್ಲಿ ಸುತ್ತಿ ಪೇಟೆಗೆ ಮಾರಾಟಕ್ಕೆ ತಂದಿದ್ದಾಗ ತಾಲೂಕು ಸ್ಟೇಶನ್ ಹೆಡ್ ಕನ್‌ಸ್ಟೇಬಲ್ ಎಮ್. ಐತಪ್ಪ ಎಂಬವರು ಅನುಮಾನದ ಮೇಲೆ ಅವನನ್ನು ವಿಚಾರಿಸಿದಲ್ಲಿ ಅದು ಕಳವು ಮಾಲೆಂತ ತಿಳಿದುಬಂದುದರಿಂದ ಅವನನ್ನು ಕೈದು ಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಇದೇ ತಿಂಗಳ ತಾ. ೨೮ಕ್ಕೆ ನಡೆಯುವದು. ಲೋಕಲ್‌ಫಂಡ್ ರಸ್ತೆಗಳು, ಟ್ರಾವಲರ್ಸ್ ಬಂಗ್ಲೆ, ಕೆಲವು ಕಡವುಗಳು ಇವುಗಳ ದುರುಸ್ತಿ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಿಂದ ಕಳುಹಿಸೋಣಾದ ಅಂದಾಜುಪಟ್ಟಿಯು ಮಂಜೂರು ಬಗ್ಗೆ ಈ ಮೀಟಿಂಗಿನಲ್ಲಿ ಇಡೋಣಾಗುವದು.

ಮಂಗಳೂರು ತಾಲೂಕು ಬೋರ್ಡಿಗೆ ಮಂಗಳೂರು ಸರ್ಕಲಿನಿಂದ ಒಬ್ಬ ಮೆಂಬರರನ್ನು ಚುನಾಯಿಸುವ ಸಂದರ್ಭದಲ್ಲಿ ಉಮೇದ್ವಾರರಾಗಿದ್ದ ಮ| ರಾ| ಕಟ್ಟೆಮಾರು ರಘುಚಂದ್ರ ಬಲ್ಲಾಳರು ಮತ್ತು ಮ. ರಾ. ಜೊತ್ತಮನೆ ಶೇಸು ಸೆಟ್ಟಿಯವರಲ್ಲಿ ಮ. ರಾ. ರಘುಚಂದ್ರ ಬಲ್ಲಾಳರಿಗೆ ಹೆಚ್ಚಿನ ಓಟುಗಳು ಸಿಕ್ಕಿದುದರಿಂದ ಮ. ರಾ. ರಘುಚಂದ್ರ ಬಲ್ಲಾಳರು ತಾಲೂಕು ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುವರೆಂತ ತಿಳಿಸಿದ್ದೆವಷ್ಟೆ. ಈ ಚುನಾವಣೆಯು ಕೆಲವು ಸಬಬಿನ ಮೇಲೆ ಆಕ್ಷೇಪಕರವೆಂತ ಮ. ರಾ. ಶೇಸು ಸೆಟ್ಟರು ಈಗ ಆಕ್ಷೇಪಣೆ ಅರ್ಜಿಯನ್ನು ಮಾಡಿರುತ್ತಾರೆಂತ ಕೇಳುತ್ತೇವೆ.

ಮಂಗಳೂರು ತಾಲೂಕಿಗೆ ಸೇರಿದ ಮೂಡುಪೆರಾರ ಗ್ರಾಮದಲ್ಲಿ ತಾ. ೧೮-೮-೧೯೧೬ರಲ್ಲು ಬಯ್ಯು ಎಂಬ ಹೆಂಗಸನ್ನು ಬಬ್ಬು ಎಂಬವನು ಖೂನಿ ಮಾಡಿದ್ದನೆಂದು ತಿಳಿಸಿದ್ದೆವಷ್ಟೆ. ಈ ಮೊಕದ್ದಮೆಯ ತನಿಕಿಯು ತಾಲೂಕು ಮೇಜಿಸ್ಟ್ರೇಟರಲ್ಲಿ ಬರುವ ತಿಂಗಳ ತಾ. ೪ಕ್ಕೆ ನಡೆಯತಕ್ಕದಿದೆ.

ಜ್ಞಾನಾನಂದ ಸರಸ್ವತಿ ಎಂಬ ಹೆಸರಿನಲ್ಲಿ ಈ ಪಟ್ಟಣದಲ್ಲಿ ಪರಿಚಿತಿಯನ್ನು ಮಾಡಿಕೊಂಡ ಸನ್ಯಾಸಿಯು ಉಡುಪಿನಿಂದಿರುವ ಇತ್ತಲಾಗೆ ಮಂಗಳೂರಿಗೆ ಎರಡು ಮೂರು ಸಲ ಬಂದಿದ್ದಂಥಾ ಸಾಧುವಿನಿಂದ ಗೋಕರ್ಣ ಮಠದ ರಾಘವೇಂದ್ರ ಆಚಾರ್ಯನೆಂಬವನಿಗೆ ಪುನಹ ಬ್ರಾಹ್ಮಣ ಸಮುದಾಯಕ್ಕೆ ಮತಾಂತರವಾಯಿತೆಂಬದಾಗಿ ತಿಳಿಯುತ್ತೇವೆ. ಈ ಪ್ರಕಾರ ಕಲಿಕೋಟೆಯಲ್ಲಿ ಕ್ರೈಸ್ತಮತವನ್ನು ಸೇರಿದ ಇಬ್ಬರು ಗೌಡ ಸಾರಸ್ವತರನ್ನು ತಿರಿಗಿ ಬ್ರಾಹ್ಮಣನ್ನಾಗಿ ಮಾಡಿರುವೆನೆಂತ ಜ್ಞಾನಾನಂದ ಸರಸ್ವತಿಯವರು ಹೇಳುತ್ತಾರೆ. ಈ ಸಾಧುವಿನ ವೃತ್ತಾಂತವು ನಾವು ವಿಚಾರಿಸಿ ತಿಳಕೊಂಡಲ್ಲಿ ಈ ರೀತಿಯಾಗಿರುವದು:— ಈ ಸಾಧುಗಳು ರಾಮಕೃಷ್ಣಾ ಮಿಶ್ಯನಿಗೆ ಸೇರಿದವರೂ ಅಲ್ಲ, ಅಥವಾ ಇವರು ಹೆಸರಿನಿಂದ ಕಂಡುಬರುವಂತೆ ಆರ್ಯಸಮಾಜಕ್ಕೆ ಸೇರಿದವರೂ ಅಲ್ಲ. ಗತಿಸಿಹೋದ ಸ್ವಾಮಿ ರಾಮತೀರ್ಥರೊಂದಿಗೆ ಎರಡು ತಿಂಗಳ ಕಾಲ ಸಂಚರಿಸಿಕೊಂಡು ತಮ್ಮ ಪೂರ್ವಾಶ್ರಮವನ್ನು ಬಿಟ್ಟು ಸನ್ಯಾಸ್ಯವನ್ನು ಕೈಕೊಂಡೆನೆಂದು ಹೇಳುತ್ತಾರೆ. ಪೂರ್ವಾಶ್ರಮದಲ್ಲಿ ಇವರು ಸ್ಮಾರ್ಥ ಗೌಡಸಾರಸ್ವತರು. ಇವರ ಹುಟ್ಟಿದ ಊರು ಬಡೋದೆ. ಇವರ ಗೋತ್ರ ಕಾಶ್ಯಪ, ವಯಸ್ಸು ೩೬. ಕಳದ ೮ ವರುಷಗಳಿಂದ ವೇದಧ್ಯಯನವನ್ನು ಮಾಡುತ್ತಿರುವೆನೆಂತಲೂ ಕಳದ ಎಂಟು ವರುಷಗಳಿಂದಲೇ ಮತಪ್ರಸಂಗಗಳನ್ನು ಅಲ್ಲಲ್ಲಿ ಮಾಡಲು ಪ್ರಾರಂಭಿಸಿರುವೆನೆಂತಲೂ ಹೇಳಿರುವರು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗುಮರಣವಿತ್ತು.

~~~~

ಜೇನಸು ಧಾರಣೆ.

(ರಖಂ).

ಮಸ್ಕತಿ ಅಕ್ಕಿ		6—14—0ರಿಂದ	7— 4—0
ಗುಡ್ಡು	,, ,,	6— 6—0	6—12—0
ಊಟು ಸುಗ್ಗಿ	,,	6— 8—0	6—12—0
ಗಾಡಿ ರಾಶಿ	,,	6— 2—0	6— 4—0
ಅವ್ವಲ್ ಬೆಳ್ತಿಗೆ	,,	6— 8—0	7— 0—0
ಗುಡ್ಡು ಬೆಳ್ತಿಗೆ	,,	5—12—0	6— 4—0
ರಂಗೂನು ಬೆಳ್ತಿಗೆ ಗೋಣಿ ೧ರ		9—12—0	10— 0—0
ಗೋಧಿ ಗೋಣಿ ೧ರ		11—12—0	12— 0—0
ಹುರುಳಿ ಗೋಣಿ ೧ರ		6— 2—0	6— 6—0
ಕಡಲೆ ಗೋಣಿ ೧ರ ಬೊಂಬ್ಬೈ		8—12—0	10— 8—0
ತೊಗರಿ ಗೋಣಿ ೧ರ			11— 4—0
ತೊಗರಿ ಬೇಳೆ ಗೋಣಿ ೧ರ		12— 8—0	14— 8—0
ಉದ್ದು ಗೋಣಿ ೧ರ		10— 8—0	11— 4—0
ಊರುಬೆಲ ಖಂಡಿ ೧ರ			50— 0—0
ಉಪ್ಪು ಗೋಣಿ ೧ರ		4— 8—0	4—14—0
ಕೊಬ್ರಿ ಖಂಡಿ ೧ರ		95— 0—0	105—8—0
ಬೆಟ್ಟಹಿಂಡಿ ಖಂಡಿ ೧ರ			20— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬೈ		25— 0—0	32— 8—0
ಕೊಬ್ರಿ ಎಣ್ಣೆ ಮಣ ೧ರ		7— 0—0	7— 8—0
ಎಳ್ಳೆಣ್ಣೆ ಮಣ ೧ರ (ಕುರಾಸನ)			4—10—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		6— 0—0	6—11—0
ಮೋರಿಸ್ ಸಕ್ಕರೆ ಮಣ ೧ರ			5— 4—0
ಕಾಫಿ ಖಂಡಿ ೧ರ		225— 0—0	235—0—0
ಹೊಸಅಡಕೆಗೋಟು ಖಂಡಿ೧ರ		82— 0—0	85— 0—0
ಹೊಸ ಗೇರುಬೀಜ ಮುಡಿ ೧ರ			2—10—0
ಕಬ್ಬಿಣ ಖಂಡಿ ೧ರ			75— 0—0
ತಾಂಬ್ರ ತಗಡು ಮಣ ೧ರ		26— 0—0	27— 0—0
ತಾಂಬ್ರ ಪಾತ್ರೆಗಳು ಮಣ ೧ರ			28— 0—0
ಚೀನಿ ಬೆಳ್ಳಿ ಶೇರು ೧ರ			24— 0—0
ಹಚ್ಚೆಹೆಸರು ಮುಡಿ ೧ರ		5— 4—0	5— 6—0

~~~~
~~~~

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮಿನ ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು. ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.
ಪೋಸ್ಟ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯದಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0,

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡಿಗೆ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ, ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇವಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ. ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ. ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇವಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗೆಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಕಪ್ಪು ಶಾಯಿಪುಡಿಯ

ಪೊಟ್ಟಣಗಳು.

ಅತ್ಯುತ್ತಮವಾದುದು! ವಿ. ಪಿ. ಯಲ್ಲಿ ತರಿಸಿ, ಮಾರುವುದು ವಿಶೇಷ ಲಾಭಕರ!! ಸುಲಭ ದರ!!! 50ಕ್ಕೆ 0—4—0, 100ಕ್ಕೆ 0—6—0, 300ಕ್ಕೆ ರೂ. 1—0—0, 1,000ಕ್ಕೆ 2—8—0, 3,000ಕ್ಕೆ 6—0—0. ಅಂಚೆ, ಪೆಟ್ಟಿ, ಪ್ಯಾಕಿಂಗ್, ವಗೈರೆ ಖರ್ಚುಗಳು ಬೇರೆ.

ನಮ್ಮ ವಿಳಾಸ:—
ವಿ. ಪಿ. ಡಿಪೋ, ಕೋಲಾರ್.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅದು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ವಾಜೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆರೆಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರಹಾರಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕಠ್ಯಾವಾರ್, ಬಸ್ರದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತು ರೂ. 1—8—0. ಅಂಚೆ ಹಾಸಲು ಆಣೆ 6.

ವಿಳಾಸ:—

J. M. D. Vas, Kankanady. S. C.

ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆತದ ಬಣ್ಣ ಚಿಕ್ಕ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

296 ಪುಟಗಳು! ಕಾಗದದ ಬೆಲೆ ಮಾತ್ರ!!

ಅರ್ಧ ಬೆಲೆ.

ಶ್ರೀಯುತ ಎನ್. ಎ. ಶ್ರೀನಿವಾಸ ಹೆಗ್ಡೆರಿಂದ ರಚಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟು ಎಂಬ ನೂತನ ಸಂಗ್ರಹದ ನವೀನ ಪ್ರತಿಯು ಅನೇಕ ಮಹನೀಯರ ಅಭಿಪ್ರಾಯ ಪ್ರಕಾರ ಬರುವ ಸಪ್ಟಂಬರ ಆಖೈರಿ ವರೇಗೆ 2 ಪ್ರತಿಗಳಿಗೆ ರೂ. 1—8—0ಗೆ ದೊರಕುವದು. ವಿದ್ಯಾ ಇಲಾಖೆಯವರಿಗೆ 2ಕ್ಕೆ ರೂ. 1—4—0 ದರದಲ್ಲಿ ಕೊಡುವೆವು. ಸಪ್ಟಂಬರ ಸಂತರ ಪ್ರತಿ ಒಂದಕ್ಕೆ ರೂ. 1—8—0ಗಿಂತ ಕಡಿಮೆ ಶಿಕ್ಕಲಾರದು.

ಅಂಕೆಗಳಿಂದಲೇ ಬರೆಯುವ, ಶಿಲಾಶಾಸನ ತಾಮ್ರಶಾಸನಗಳನ್ನು ಸುಲಭವಾಗಿ ಓದುವ ನೂತನ ತರದ ಶ್ರೀನಿವಾಸ ಲಿಪಿ ಎಂಬ ಪುಸ್ತಕವು ತ್ವರ್ಯ ತಯಾರಾಗುವುದು. ಪ್ರತಿ 1ಕ್ಕೆ 0—2—6. ವಿದ್ಯಾ ಇಲಾಖೆಯವರಿಗೆ 0—2—0. ಒಂದೇ ತಾಸಿನೊಳಗೆ ಸರಿಯಾಗಿ ಅರಿಯಬಹುದು.

ವಿಳಾಸ:—
ಎನ್. ಎ. ಶ್ರೀನಿವಾಸ ಹೆಗ್ಡೆ,
ಕುಶಲ ಮಂದಿರ,
ಪೊಳಲಿ, ದ. ಕ.

S. P. RAJA & Co.,
Car Street,
POLALY, S. C.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಶಾಸ್ತ್ರೋಕ್ತ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಘ್ರಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

Estd. 1888. **K. B. RELE & Cos.,—BOMBAY** ಸ್ಥಾಪನೆ 1888.

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಸ್ವಾ ಹಳಸ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೇ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೧೦—೧೫ ವರ್ಷಗಳ ಹಳತ, ಪ್ರಯಾಸ ಮಾಡಿದಂಥ ಗಜಕರ್ಣವಿದ್ದರೂ ಇದರಿಂದ ನಾಶವಾಗುವದು ನಿಶ್ಚಯ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ೩ ಆಣೆ.

ವಿಶೇಷ ಸೂಚನೆ.—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಪ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಯಾವುದೊಂದು ಒಣ ವಿಷಯದಲ್ಲಿ ಜಿಜ್ಞಾಸವನ್ನು ಮಾಡಿ ತಮ್ಮ ಪಾಂಡಿತ್ಯವನ್ನು ತೋರ್ಪಡಿಸುವುದೇ ಇಲ್ಲಿಯ ವಿದ್ವತ್ ಜನರ ಧ್ಯೇಯವೆಂದು ಅವರೇ ಕಂಠೋಕ್ತವಾಗಿ ಒಪ್ಪಿದ ಮೇಲೆ ನಾವು ಅದನ್ನು ಬೇರೆ ಚರ್ಚಿಸಬೇಕಾಗಿಲ್ಲ. ಆದರೆ ಸ್ಕೂಲ್ ಮ್ಯೂಜಿಯಮ್ (ವಸ್ತು ಸಂಗ್ರಹ, ಶಾಲಾತೋಟ, ಕೈಚಾಲಕದ ವೃತ್ತಿಗಳನ್ನು ಏರ್ಪಡಿಸುವುದಕ್ಕೆ ಈಗ ಸಿಕ್ಕುವ ರೀತಿಯ (ತಿಂಗಳಿಗೆ ೩॥ ರೂಪಾಯಿ) ಗ್ರೆಂಟು ಎಷ್ಟರ ಮಟ್ಟಿಗೆ ಸಹಕಾರಿಯಾದೀತು ಎಂಬ ಪ್ರಶ್ನೆಗೆ ಸರ್. ಶಿವಸ್ವಾಮಿ ಅಯ್ಯರು ಹಣ ಒದಗಿಸಿದಾಗ ಸರಕಾರದವರು ಈ ವಿಷಯದಲ್ಲಿ ಕೈಹಾಕಬೇಕೆಂದೇ ಒಮ್ಮತವಾಗಿರುವುದಾಗಿ ತಿಳಿಸುತ್ತಾರೆ. ಅಂಥಾ ಸುಕಾಲವು ಒದಗುವ ವರೆಗೆ ಈ ಪ್ರಯತ್ನವು 'ನೀರಿನಲ್ಲಿ ಹೋಮವಿಟ್ಟಂತೆ' ಆಗದೇ ? ಒಬ್ಬ ವೇದೆಗೆ ಸಿಕ್ಕುವಷ್ಟು ಹುಟ್ಟು ಇಲ್ಲದ ಸಂದರ್ಭದಲ್ಲಿ ಖಾಸಗಿ ಶಾಲಾ ಉಪಾಧ್ಯಾಯರು ಇಂಥ ಸೌಕರ್ಯಗಳನ್ನು ಹೇಗೆ ಒದಗಿಸಬಹುದು ? ಇದಲ್ಲದೆ 'ದರಿದ್ರನಿಗೆ ಕೂರೆ ಹೆಚ್ಚು' ನಮಗೆ ಖಾಸಗಿ ಶಾಲೆಗಳೇ ಹೆಚ್ಚು. ತಾಲೂಕು ಬೋರ್ಡುಗಳೂ ಮ್ಯೂನಿಸಿಪಾಲಿಟಿಗಳೂ ಇಂಥ ಶಾಲೆಗಳನ್ನು ವಹಿಸಿಕೊಳ್ಳುವುದಕ್ಕೆ ಅಸಮರ್ಥವಾಗಿದ್ದು ಸರಕಾರದಿಂದ ದ್ರವ್ಯಸಹಾಯವನ್ನು ವರ್ಷಂಪ್ರತಿ ಹೊಂದುತ್ತವೆ. ಅಂಥ ಬೋರ್ಡುಗಳು ಉಪಾಧ್ಯಾಯರ ಸಂಘಗಳಿಗೆ ಗ್ರೆಂಟುಕೊಡಬೇಕೆಂದು ಸರ್. ಶಿವಸ್ವಾಮಿ ಅಯ್ಯರು ಹೇಳುವ ಮಾತುಗಳ ಅಭಿಪ್ರಾಯವಾಗುವುದಿಲ್ಲ. ಸರಕಾರವೇ ಈ ಕೆಲಸಕ್ಕೆ ಕೈಹಾಕಲು ಈಗ ದ್ರವ್ಯಾನುಕೂಲವಿಲ್ಲವೆಂದು ಹೇಳುವಾಗ ಲೋಕಲ್ ಬೋರ್ಡುಗಳು ಇದಕ್ಕೆ ಸಹಾಯಮಾಡಬೇಕೆಂತ ಹೇಳುವುದು ಹೇಗೆ ?

ಅದಿರಲಿ. ಇಷ್ಟು ಕಡಿಮೆ ಸಂಬಳ ಅಥವಾ ಗ್ರೆಂಟುಹೊಂದಿ ಯಾವಾಗಲೂ ಬಡತನದಿಂದಲೆ ಹೊರಳಾಡುವ ಉಪಾಧ್ಯಾಯರು ಮಕ್ಕಳ ಕಣ್ಣನ್ನು ಸೃಷ್ಟಿಜ್ಞಾನದ ಕಡೆಗೆ ತಿರುಗಿಸಲಿಲ್ಲವೆಂದು ಈಗ ನಾವು ಕೊರಗಿ ಪ್ರಯೋಜನವಿಲ್ಲ. ಇಲ್ಲಿ ಇಂಗ್ಲಿಷ ರಾಜ್ಯಭಾರವು ನೆಲೆಗೊಂಡಾಗ ವಿದ್ಯಾಭ್ಯಾಸಕ್ರಮವನ್ನು ಯಾವ ಧ್ಯೇಯದಿಂದ ಪ್ರಚುರಗೊಳಿಸಬೇಕೆಂದು ಯತ್ನಿಸಿದರೊ ಆ ಧ್ಯೇಯವು ಈಗಲೂ ಪ್ರಚಾರದಲ್ಲಿದೆ. ಸರಕಾರೀ ಪತ್ರವ್ಯವಹಾರವನ್ನು ಇಂಗ್ಲಿಷಭಾಷೆಯಿಂದ ನಡೆಯಿಸುವುದಕ್ಕೆ ಸಮರ್ಥರಾದ ಗುಮಾಸ್ತೆಯರ ಸಂಖ್ಯೆಯನ್ನು ಯೂನಿವರ್ಸಿಟಿಗಳು ತಯಾರಿಸುತ್ತಲಿರುವಾಗ, ಅಂಥಾ ಗುಮಾಸ್ತೆಯರಾಗಲೀ ಅಥವಾ ಶುಷ್ಕವಾದ ಪಂಡಿತರಾಗಲೀ ನಮಗೆ ದೊರಕುವರಲ್ಲದೆ ಸೃಷ್ಟಿಜ್ಞಾನವಿಶಾರದರು ನಮ್ಮಲ್ಲಿ ಜನ್ಮವೆತ್ತುವುದು ಹೇಗೆ? ಎಮ್ಮೆಕರುವು ಈದರೆ ಆನೆಮರಿಯಾಗಲಾರದು. ಇಂಥ ಎಮ್ಮೆಕರುವನ್ನು ಸಾಕುವುದನ್ನು ಬಿಟ್ಟು ಆನೆಗಳನ್ನು ಪಳಗಿಸುವ ಪ್ರಯತ್ನಮಾಡಬೇಕಾದರೆ ನಮ್ಮ ಸಾಹಿತ್ಯಸಂಗ್ರಹವು ಬದಲಾಗಬೇಕು. ಅದಕ್ಕೆ ಹೇರಳ ದ್ರವ್ಯಾನುಕೂಲವನ್ನು ಸರಕಾರದವರೂ ಅದರಂತೆಯೇ ಜನರೂ ಒದಗಿಸಿಕೊಡಬೇಕು. ಮತ್ತು ಶಾಲೆಗಳೂ ಯೂನಿವರ್ಸಿಟಿಗಳೂ ಗುಮಾಸ್ತೆಯರನ್ನೂ ಒಣವಾಗ್ಮಿಗಳನ್ನೂ ತಯಾರಿಸುವ ಯಂತ್ರಾಲಯವಾಗಬಾರದು. ಹೀಗೆ ಧ್ಯೇಯವಲ್ಲಟವಾಗಿ ನೂತನ ದೃಷ್ಟಿಯಿಂದ ನಾವು ವಿದ್ಯಾಶಾಲೆಗಳನ್ನು ಏರ್ಪಡಿಸಿದ ಕಾಲದಲ್ಲಿ ನಮ್ಮ ವಿದ್ಯಾರ್ಥಿಗಳ ಲಕ್ಷ್ಯವೂ ಮಾರ್ಪಡಿಸದಿದ್ದರೆ ನಾವು ಅವರಿಗೆ ದೂಷಿಸಬೇಕಲ್ಲದೆ ಈಗ ಅವರನ್ನು ತಾತ್ಸಾರಮಾಡುವುದು ಸರಿಯಲ್ಲ.

ನಮ್ಮ ಧ್ಯೇಯಗಳು ಬಹು ನಿಧಾನವಾಗಿ ಬಡಬಾಯಿಸುತ್ತ ಬರುತ್ತಿವೆ. ಹೀಗಿರುವಾಗ ಅದಕ್ಕೆ ಬೇಕಾದಷ್ಟು ದ್ರವ್ಯಾನುಕೂಲವು ಒದಗದೆ ಇರುವಾಗ ಪ್ರದರ್ಶನಗಳನ್ನೂ ಲೆಕ್ಚರುಗಳನ್ನೂ ಮಾಡಿ ಉಪಾಧ್ಯಾಯರನ್ನು ಕೆಲವು ದಿನಗಳ ವರೆಗೆ ಮಾತ್ರವೇ ಕೂಡಹಾಕಿ ಅವರವರ ಊರಿಗೆ ಅಟ್ಟಿಬಿಡುವುದು "ಬರೇ ಗುಲ್ಲು" ಎಂದು ಹೇಳಿದರೆ ಕಂಡದ್ದನ್ನು ಹೇಳಿದಂತಾಗುವುದು. ನೂರಾರು ಶಾಲೆಗಳಿಂದ ಬಂದ ಸಾಹಿತ್ಯ ಸಾಮಾಗ್ರಿಗಳಲ್ಲಿ ಯಾವುದು ಶಿಕ್ಷಣಕ್ಕೆ ಅಗತ್ಯ, ಯಾವುದು ಅನಗತ್ಯ, ಯಾವುದನ್ನು ಹೇಗೆ ಉಪಯೋಗಿಸಬೇಕು, ಅವುಗಳನ್ನು ಉಪಯೋಗಿಸುವ ಉದ್ದೇಶವೇನು ಎಂಬುದನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಒಂದೆರಡು ವಾರಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗುತ್ತದೆಂದು ನಂಬುವುದಾದರೆ ತಿರುಚಿನಾಪಳ್ಳಿಯ ಪ್ರಾಥಮಿಕ ಶಾಲಾ ಉಪಾಧ್ಯಾಯರು ನಾವು ಕಂಡು ತಿಳಿದ ಉಪಾಧ್ಯಾಯರಿಗಿಂತ ವಿಶೇಷ ರೀತಿಯ ಪಾಂಡಿತ್ಯವುಳ್ಳವರಾಗಿರಬೇಕು. ಅವರು ನಮ್ಮ ಜಿಲ್ಲೆಯ ಉಪಾಧ್ಯಾಯರಂತೆಯೇ ಇದ್ದುದಾದರೆ ಅವರಿಗೆ ಈ ದೊಡ್ಡ ತಮಾಷೆಯಿಂದುಂಟಾಗುವ ಪ್ರಯೋಜನಗಳು ಎಷ್ಟೆಂದು ಬೇರೆ ವರ್ಣಿಸಬೇಕಾದ್ದಿಲ್ಲ. ಅಂತೂ ಉಪಾಧ್ಯಾಯನ ಸಾಮಾಜಿಕ ಸ್ಥಿತಿಯನ್ನು ಉಚ್ಚತೆಗೆ ತಾರದೆ ಈ ರೀತಿಯಲ್ಲಿ ಅವನಿಗೆ ಮೇಲೆ ಹೇಳಿದ ವಿಷಯಗಳಲ್ಲಿ ಉಪನ್ಯಾಸಗಳಿಂದ ಬೋಧನೆಕೊಡುವುದು ಪ್ರಯೋಜನವಿಲ್ಲ. ಸತ್ತ ಎಮ್ಮೆಕರುವನ್ನು ಕುಕ್ಕೆಯಲ್ಲಿಟ್ಟು ತಲೆಯ ಮೇಲೆ ಹೊತ್ತುಕೊಂಡು ಹೋಗುವವನ ಬಾಯಿಂದ ಬರುವ 'ರೊಯಿಂ ರೊಯಿಂ' ಎಂಬ ಸ್ವರವನ್ನು ಕೇಳಿ ಅದು ತನ್ನ ಕರುವಿನ ಕೂಗು ಎಂದು ಭ್ರಮೆಯಿಂದ ಕುಕ್ಕೆಯವನನ್ನು ಬೆಂಬತ್ತಿ ಹೋಗುವ ಮುದಿ ಎಮ್ಮೆಯಂತೆ ಹಳ್ಳಿ ಶಾಲೆಗಳ ಉದ್ಧರಣ ಕಾರ್ಯವನ್ನು ತಮ್ಮ ತಲೆಯ ಮೇಲೆ ಇಟ್ಟುಕೊಂಡಂತೆ ತೋರಿಸಿ 'ಉಫ್ ಉಫ್' ಎಂದು ಘೋಷಿಸುತ್ತಿರುವ ಇನ್ಸ್‌ಪೆಕ್ಟಿಂಗ್ ಆಫಿಸರರ ಗುಲ್ಲುಗಲಭೆಗೆ ಮರುಳಾಗಿ ಗೊತ್ತುತಿಳಿಯದೆ ಮುಂದೊತ್ತುವ ಉಪಾಧ್ಯಾಯರ ಸ್ಥಿತಿಯು ಕನಿಕರವನ್ನೂ ಉಪಹಾಸ್ಯವನ್ನೂ ಉಂಟುಮಾಡುತ್ತಿವೆ.

ಮಾರಾಟದ ಬಗ್ಗೆ ಅರಿಶಿಣವನ್ನು ತಯಾರಮಾಡುವ ರೀತಿಯು.

ಅನೇಕ ಸ್ಥಳಗಳಲ್ಲಿ ಸ್ವಲ್ಪ ಪ್ರಮಾಣದ ಮೇಲೆ ಅರಿಶಿಣವನ್ನು ಬೆಳೆದುಕೊಳ್ಳುತ್ತಾರೆ. ಆದರೆ ಅಲ್ಲಿಯ ಜನರಿಗೆ ಮಾರಾಟವಾಗುವಂತೆ ಹ್ಯಾಗೆ ಮಾಲು ತಯಾರಮಾಡಬೇಕೆಂಬುವದು ಗೊತ್ತಿರದ್ದರಿಂದ ಹಸಿ ಅರಿಶಿಣವನ್ನೇ ಕೈಗೆ ಬಂದಂತೆ ಕಡಿಮೆ ದರದಿಂದ ಮಾರಬೇಕಾಗುತ್ತದೆ. ಯಾಕಂದರೆ ಹಸಿ ಅರಿಶಿಣವನ್ನು ಬಹಳ ದಿವಸ ಇಡಲಿಕ್ಕೆ ಬರುವದಿಲ್ಲ; ಮತ್ತು ಇಡುವದರಿಂದ ತೂಕದಲ್ಲಿಯೂ ಕಡಿಮೆಯಾಗುತ್ತದೆ. ಆದ್ದರಿಂದ ಅರಿಶಿಣದ ಸಾಗುವಳಿಯನ್ನು ಮಾಡತಕ್ಕಂಥವರಿಗೆ ಇದನ್ನು ತಯಾರಮಾಡುವ ಪದ್ಧತಿಯು ತಿಳಿದರೆ ಒಳ್ಳೇ ದರವು ಬರುವವರಿಗೆ ಕೆಡದಂತೆ ಇಡಲಿಕ್ಕೆ ಬರುವದು. ಮತ್ತು ಹೆಚ್ಚು ದರವು ಬರುವಂಥ ಸ್ಥಳಗಳಿಗೆ ಕಳುಹಿಸಲಿಕ್ಕಾದರೂ ಬರುವದು.

ಮಾರಾಟದ ಬಗ್ಗೆ ತಯಾರು ಮಾಡಲಿಕ್ಕೆ ಗೊತ್ತಿಲ್ಲದಂಥ ಅರಿಶಿಣವನ್ನು ಬೆಳೆಯುವ ರೈತರಿಗೆ ಕೆಳಗೆ ಬರೆದ ಸೂಚನೆಗಳು ಉಪಯೋಗ ಬೀಳಬಹುದು.

ಭೂಮಿಯೊಳಗಿಂದ ಅರಿಶಿಣವನ್ನು ಅಗಿದು ತೆಗೆದುಕೊಂಡ ನಂತರ ಬೀಜದ ಸಲುವಾಗಿ ಉತ್ತಮ ಬೇರುಗಳನ್ನು ಆರಿಸಿಕೊಂಡು, ಉಳಿದವುಗಳ ಮೇಲಿನ ಮಣ್ಣು ತೊಳೆದು, ಸಣ್ಣ ಸಣ್ಣ ಬೇರುಗಳನ್ನು ತೆಗೆದು ನೀರಿನಲ್ಲಿ ಕುದಿಸಬೇಕು.

ಕಬ್ಬಿನ ಭೂಮಿಯಲ್ಲಿ ಪರಿವರ್ತನೆಯಿಂದ ಅರಿಶಿಣವನ್ನು ವಿಶೇಷವಾಗಿ ಬೆಳೆಯುತ್ತಾರೆ. ಇಂಥ ಸ್ಥಳಗಳಲ್ಲಿ ಆಲೆಯ ಒಲೆ ಮತ್ತು ಕಬ್ಬಿಣದ ಕೊಪ್ಪರಿಗೆಗಳು ಇದ್ದೇ ಇರುತ್ತವೆ. ಇವುಗಳಲ್ಲಿಯೇ ಅರಿಶಿಣವನ್ನು ಕುದಿಸಬಹುದು.

ಒಲೆಯ ಮೇಲೆ ಕೊಪ್ಪರಿಗೆಯನ್ನಿಟ್ಟು, ಅದರಲ್ಲಿ ಅರಶಿಣದ ಹಸಿ ಅಥವಾ ಒಣ ಎಲೆಗಳನ್ನು ಹರವಬೇಕು. ಮೇಲೆ ಅರಶಿಣದ ಹಸಿ ಬೇರುಗಳನ್ನು ಹಾಕಿ, ಕೊಪ್ಪರಿಗೆಯ ಅಂಚಿಗೆ ೩ ಇಂಚು ಬಿಡುವವರಿಗೆ ನೀರನ್ನು ಸುರುವಬೇಕು.

ಅರಿಶಿಣದ ರಾಸಿಯನ್ನು ಅದರ ಎಲೆಗಳಿಂದ ಅಥವಾ ಕಬ್ಬಿಣ ಸೋಗೆಗಳಿಂದ ಚನ್ನಾಗಿ ಮುಚ್ಚಬೇಕು. ಬೇರುಗಳು ಕುದಿಯುವಾಗ್ಗೆ ಉಗಿಯು ಹೊರಗೆ ಹೋಗಬಾರದೆಂದು ಮೇಲೆ ಸೆಗಣಿಯಿಂದ ಚನ್ನಾಗಿ ಸಾರಿಸಬೇಕು. ನಂತರ ಒಲೆಯ ಕೆಳಗೆ

ಸಣ್ಣ ಉರಿಯಿಂದ ಬೇರುಗಳನ್ನು ಕುದಿಸಬೇಕು. ಮತ್ತು ಆರುವವರೆಗೆ ಕೊಪ್ಪರಿಗೆಯನ್ನು ಒಲೆಯ ಮೇಲೆಯೇ ಬಿಡಬೇಕು. ಕುದಿಸುವದಕ್ಕೆ ೩-೪ ತಾಸುಗಳು ಬೇಕಾಗುತ್ತವೆ. ಆರಿದನಂತರ ಮೇಲಿನ ಸೆಗಣಿಯನ್ನು ತೆಗೆಯಬೇಕು. ನೀರನ್ನು ಚಲ್ಲಬೇಕು. ಬೇರುಗಳನ್ನು ಸುಮಾರು ೧೫ ದಿವಸ ಬಿಸಿಲಲ್ಲಿ ಒಣಗಿಸಬೇಕು. ಪ್ರತಿ ದಿವಸ ರಾತ್ರಿ ಬೇರುಗಳನ್ನು ಕೂಡಿಸಿ, ಮೇಲೆ ಏನಾದರೂ ಮುಚ್ಚಬೇಕು. ಅಂದರೆ ಮಂಜಿನಿಂದ ಏನಾದರೂ ಅಪಾಯವಾಗಲಿಕ್ಕಿಲ್ಲ. ಒಣಗಲಿಕ್ಕೆ ಅರಿಶಿಣವನ್ನು ಹಾಕಿದಾಗ್ಗೆ ದಿವಸದಲ್ಲಿ ೨-೩ ಸಾರೆ ಕೈಯಾಡಿಸಬೇಕು. ಪೂರ್ಣವಾಗಿ ಒಣಗಿದ ಮೇಲೆ ಅವುಗಳನ್ನು ಹುರುಕ ಬರುಕಿರುವ ಕಲ್ಲು ಹಾಸಿಗೆಯ ಮೇಲೆ ಇಟ್ಟು ಕಾಲಿನಿಂದ ತಿಕ್ಕಬೇಕು. ಇದರಿಂದ ಮೇಲಿನ ತೊಗಟೆಯು ಉದುರಿ ಹೋಗುವದು. ಬೇರುಗಳಿಗೆ ಹಳದೀ ಬಣ್ಣವು ಬರುವದು. ಆಗ ಅವುಗಳು ಮಾರಲಿಕ್ಕೆ ಬರುತ್ತವೆ. ಒ. ಸ.

ಪತ್ರವ್ಯವಹಾರ.

ಮಹಿಳಾ ಸೇವಾ ಸಮಾಜ, ಬೆಂಗಳೂರು.

ತೃತೀಯ ವರ್ಷದ ಮಹೋತ್ಸವವು.

ಬೆಂಗಳೂರಿನಲ್ಲಿರುವ ಸಹೋದರಿಯರ ಶ್ರೇಯೋವೃದ್ಧಿಗಾಗಿ ಈ ಮಹಿಳಾ ಸೇವಾ ಸಮಾಜವು ೧೯೧೩ನೇ ಅಕ್ಟೋಬರ ೧ನೇ ತಾರೀಕಿನ ದಿನ ಸ್ಥಾಪಿಸಲ್ಪಟ್ಟಿತು. ಈ ಸಲ ಇದರ ವರ್ಷ ವರ್ಧಂತಿಯು ಸಪ್ಟಂಬರ ೨೦ನೇ ತಾರೀಕು ಸಾಯಂಕಾಲ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜ್ಞಿಯವರಾದ ಶ್ರೀಮತಿ ಕೆಂಪಚೆಲುವಾಜಮ್ಮಣ್ಣಿಯವರು ಅಗ್ರಾಸನವನ್ನು ವಹಿಸಿದ್ದರು. ಸುಮಾರು ೪೦೦ ಮಂದಿ ಲಲನಾಮಣಿಯವರು ನೆರೆದಿದ್ದರು. ೮-೧೦ ಮಂದಿ ಪಾಶ್ಚಾತ್ಯ ಸ್ತ್ರೀಯರೂ ಬಂದಿದ್ದರು. ಶ್ರೀಮದ್ಯುವರಾಣಿಯವರ ಮೋಟರ್ ಬಂಡಿಯು ಬರುವಾಗ್ಗೆ ಬಾಲಿಕೆಯರು ಸ್ವಾಗತ ಗೀತಗಳನ್ನು ಉಲ್ಲಾಸದಿಂದ ಹಾಡಿದರು. ಬಳಿಕ ಸಮಾಜದ ಪ್ರೆಸಿಡೆಂಟರವರಾದ ಶ್ರೀಮತಿ ಪಾರ್ವತಮ್ಮನವರು (ಮಿಸೆಸ್. ಕೆ. ಎಸ್. ಚಂದ್ರಶೇಖರಯ್ಯರವರು) ಸಮಾಜದ ಮೆಂಬರುಗಳೊಡನೆ ಅಗ್ರಾಸನಾಧಿಪತಿಗಳಿಗೆ ಸ್ವಾಗತವನ್ನಿತ್ತರು.

ಸಮಾಜದ ಸೆಕ್ರೆಟರಿಯವರಾದ ಶ್ರೀಮತಿ ರಂಗನಾಯಕಮ್ಮನವರು (ಮಿಸೆಸ್. ಜಿ. ಆರಾಮುದೈಯ್ಯಂಗಾರವರು) ಕನ್ನಡದಲ್ಲಿ ವಿಜ್ಞಾಪನಾ ಪತ್ರಿಕೆಯನ್ನು ಓದಿದರು. ಅನಂತರ ಇಂಗ್ಲಿಷಿನಲ್ಲಿ ಶ್ರೀಮತಿ ನಂಜಮ್ಮನವರಿಂದಲೂ, ಕನ್ನಡದಲ್ಲಿ ಶ್ರೀಮತಿ ರಂಗಮ್ಮನವರಿಂದಲೂ ವಾರ್ಷಿಕ ವರದಿ (ರಿಪೋರ್ಟ್) ಓದಲ್ಪಟ್ಟಿತು. ಶ್ರೀಮದ್ಯುವರಾಜ್ಞಿಯವರು ಪ್ರೀತಿಯುಕ್ತವಾಗಿಯೂ ಸಮಯೋಚಿತವಾಗಿಯೂ ಭಾಷಣಮಾಡಿದರು. ಬಳಿಕ ಪ್ರೆಸಿಡೆಂಟರವರಾದ ಶ್ರೀಮತಿ ಪಾರ್ವತಮ್ಮನವರೂ ರಾಜಕುಟುಂಬದವರೂ ಇಂತಹ ಕಾರ್ಯಗಳಲ್ಲಿ ಹೀಗೆ ಪ್ರೋತ್ಸಾಹ ಕೊಡುವುದರಿಂದ ನಮ್ಮ ಮಹಿಳೆಯರ ಏಳಿಗೆಗೆ ಇದು ಕೇವಲ ಸಹಾಯಕಾರಿಯೆಂದೂ ಮುಂದಿನ ಕೆಲಸಗಳಿಗೆ ಶುಭಶೋಭನೆ ಎಂದೂ ಹೇಳಿ ಸಭೆಯ ಪರವಾಗಿ ಅಗ್ರಾಸನಾಧಿಪತಿಗಳಿಗೆ ಧನ್ಯವಾದನಗಳನ್ನು ಅರ್ಪಿಸಿ ಹೂವಿನ ಮಾಲಿಕೆಯನ್ನು ಹಾಕಿದರು. ಬಳಿಕ ಸಮಸ್ತ ಜನರಿಗೂ, ಪ್ರಪಂಚಕ್ಕೂ, ಮಹಾರಾಜರವರಿಗೂ, ಚಕ್ರವರ್ತಿ ಸಾರ್ವಭೌಮರವರಿಗೂ ಮಂಗಳಗಳು ಹಾಡಲ್ಪಟ್ಟವು. ಅರಿಶಿನ, ಕುಂಕುಮ, ಗಂಧ, ಪುಷ್ಪತಾಂಬೂಲಗಳು ಎಲ್ಲರಿಗೂ ಹಂಚಲ್ಪಟ್ಟವು. ನೂತನ ಪದ್ಧತಿಗಳಲ್ಲಿರುವ/ಉತ್ತಮಾಂಶಗಳೂ ಪುರಾತನ ಪದ್ಧತಿಯಲ್ಲಿರುವ ಉತ್ತಮಾಂಶಗಳೂ ಕಲೆತರೆ ಹೇಗೆ ಅತ್ಯುತ್ತಮವಾದ ಫಲವನ್ನು ಕೊಡುವುದೆಂಬುದಕ್ಕೆ ಇದೊಂದು ದರ್ಶನವು. ಇಂತಹ ಮಹೋತ್ಸವಗಳಿಂದ ಕೆಲಸ ಮಾಡಿದವರಿಗೆ ಇನ್ನು ಚೆನ್ನಾಗಿ ಮಾಡಲು ಪ್ರೋತ್ಸಾಹವೂ, ಇತರರಿಗೆ ತಾವು ಏನಾದರೂ ಕೊಂಚವಾದರೂ ಮಾಡಬೇಕೆಂಬ ಆಸಕ್ತಿಯು ಹೆಚ್ಚಿ ಎಲ್ಲರಿಗೂ ಪರಮೋಪಕಾರವಾಗುವುದು.

ಕೆ. ವರಹರಿಶಾಸ್ತ್ರಿ.

ಬೆಳೆ ಕಟಾವು.

ಅಯ್ಯಾ ಪತ್ರಕರ್ತರೇ,

ಈ ದಕ್ಷಿಣ ಕನ್ನಡಾ ಜಿಲ್ಲೆಯ ಅನೇಕ ಕಡೆಗಳಲ್ಲಿ ಹುಲ್ಲಿನ ಸಮೇತ ಭತ್ತದ ಪೈರನ್ನು ಕೊಯ್ಯುವದೇ ಸಾಂಪ್ರದಾಯವಾಗಿರುತ್ತದೆ. ಈ ಪ್ರಕಾರ ಕೊಯ್ದ ಪೈರನ್ನು ಒಣಗಿಸಲಿಕ್ಕೆ ಹೆಚ್ಚು ಜಾಗೆ ಬೇಕಾಗಿರುವದರಿಂದ ಗದ್ದೆಗಳಲ್ಲ್ಯಾಗಲೀ ಅಂಗಳದಲ್ಲ್ಯಾಗಲೀ ಒಣಗಿಸುವ ವಾಡಿಕೆಯಾಗಿರುತ್ತದೆ. ಬಿಸಿಲು ಇರುವ ಸಮಯದಲ್ಲಿ ಈ ಕ್ರಮವು ಒಳ್ಳೆದೇ ಸೈ. ಮಳೆ ಇರುವ ಸಮಯದಲ್ಲಿ ಈ ಪ್ರಕಾರ ಬೆಳೆಕೊಯ್ದರೆ ಮಳೆಯಲ್ಲಿ ಒದ್ದೆಯಾಗಿ ಬೆಳೆಯ ಹೆಚ್ಚಿನ ಅಂಶವು ಕೊಳೆತುಹೋಗಿ ನಷ್ಟವಾಗುವ ಸಂಭವ ಉಂಟು. ಇದಲ್ಲದೆ ಬೆಳೆಯು ಕೊಯ್ಯಲಿಕ್ಕೆ ತಯಾರಾದರೂ ಮಳೆಯು ಬಿಟ್ಟನಂತರ ಬೆಳೆ ಕೊಯ್ಯುವಾ ಎಂತ ಕೆಲವು ವ್ಯವಸಾಯಗಾರರು ಸುಮ್ಮನೆ ಇರುವರು. ಮಳೆಯಿಲ್ಲದಿದ್ದರೆ ಹೆಚ್ಚು ಭತ್ತವು ಉದುರಿಹೋಗಿ ನಷ್ಟವಾಗಲಿಕ್ಕೆ ಕಾರಣ ಉಂಟು. ಈ ನಷ್ಟಗಳನ್ನು ತಪ್ಪಿಸಿಕೊಳ್ಳಲಿಕ್ಕೆ ಸುಲಭ ಉಪಾಯ ಇಲ್ಲುಂಟು. ಹುಲ್ಲನ್ನು ಕೊಯ್ಯದೆ ಭತ್ತದ ಕದಿರುಗಳನ್ನು ಕೊಯ್ದು ಕೊಯ್ದ ಹಾಗೆ ಗೋಣಿಚೀಲಗಳಲ್ಲಿ ತುಂಬಿಸಿದರೆ ಈ ಚೀಲಗಳನ್ನು ಕೂಡಲೇ ಮನೆಗೆ ಕೊಂಡುಹೋಗಿ ಚಾವಡಿಯಲ್ಲ್ಯಾಗಲೀ ಕೋಣೆಗಳಲ್ಲ್ಯಾಗಲೀ ಭತ್ತವನ್ನು ಒಣಗಿಸುವದು ಸುಲಭವಾಗಿರುತ್ತದೆ. ಒಣಗಿಸುವದಕ್ಕೆ ಅಗತ್ಯಕಂಡರೆ ಅಗುಷ್ಟಿಯನ್ನು ಉಪಯೋಗಿಸಬಹುದು. ಮಳೆ ಬಿಟ್ಟಾಗ್ಯೆ ಭತ್ತವನ್ನು ಅಂಗಳದಲ್ಲಿ ಒಣಗಿಸಬಹುದು, ಮತ್ತು ಹುಲ್ಲನ್ನು ಕೊಯ್ಯಬಹುದು. ಈ ಪ್ರಕಾರ ಮಾಡಿದರೆ ಭತ್ತವೂ ಹುಲ್ಲೂ ಹಾಳಾಗಲಿಕ್ಕಿಲ್ಲಾ ಎಂತ ನನಗೆ ಕಾಣುತ್ತದೆ. ಭತ್ತವನ್ನು ಮಾತ್ರ ಕೊಯ್ಯುವ ಕ್ರಮವು ನಮ್ಮ ಜಿಲ್ಲೆಯ ದಕ್ಷಿಣ ಪ್ರಾಂತ್ಯದಲ್ಲಿರುವ ಕುಮರಿಗಳಲ್ಲಿ ವಾಡಿಕೆಯಲ್ಲಿರುತ್ತದೆ. ಈ ಪತ್ರವನ್ನು ಬಹುಜನರ ಉಪಯೋಗಾರ್ಥವಾಗಿ ಪ್ರಕಟಿಸುವಿರಿ ಎಂತ ನಂಬುತ್ತೇನೆ.

ಕಾರ್ಕಳ.
ತಾ. 20-9-1916.

ಯಂ. ರಾಘವೇಂದ್ರರಾವ್,
ಕಾರ್ಕಳ ಸಬ್ ಮೇಜಿಸ್ಟ್ರೇಟ್.

ಮಂಗಳೂರ ಅರಸಿಕೆರೆ ರೈಲ್ವೆ.

ಅಯ್ಯಾ,

ಮಂಗಳೂರ ಅರಸಿಕೆರೆ ರೈಲಿನ ಗಲಾಟೆಯು ಇತ್ತಿತ್ತ ಕೇಳುವುದರಲ್ಲಿ ಬರುವುದಿಲ್ಲ. ಕಾರಣವೇನು? "ಅರಸಿಕೆರೆ ರೈಲಿನ ಗಲಾಟೆ"ಯೆಂದರೆ ಟಪ್ಪಾಲು, ಜನರು, ಸಾಮಾನು ಸರಕುಗಳ ದೊಡ್ಡ ದೊಡ್ಡ ಗೋಣಿಗಳೂ, ಪೆಟ್ಟಿಗೆಗಳೂ ಇವುಗಳನ್ನೆಲ್ಲ ಹೊತ್ತುಕೊಂಡು ಹೋಗುವ ರೈಲಗಾಡಿಗಳ ಓಡ್ಯಾಟ, ಅಲ್ಲಲ್ಲಿ ಸ್ಟೇಶನುಗಳಲ್ಲಿ ಅರ್ಭಟ ಮೊದಲಾದ್ದೆಂಬ ಅರ್ಥವಲ್ಲ. ಈ ತರದ ಗಲಾಟೆಯಾಗಬೇಕಾದರೆ ಮೊದಲು ರೈಲಾಗಬೇಕಾಯಿತು. ಅದೇ ಇಷ್ಟರ ವರೆಗೆ ಸೊನ್ನೆ! ಆದರೂ ಕೆಲವು ಸಮಯದ ಹಿಂದೆ, ನಾನು ಕೇಳಿದ್ದ, ತಾವು ಒಮ್ಮೆ ಬರೆದಷ್ಟೂ ನೆನಪು ಬರುತ್ತದೆ, ಅರಸಿಕೆರೆಯಿಂದ ಮಂಗಳೂರಿಗೆ ರೈಲು ಬರುವದಿದೆ. ಅದರ ಮಾರ್ಗವಾಗಬೇಕಾದರೆ ಮೊದಲಾಗಬೇಕಾದ ಪಾಹಣಿಗಳು—ಸರ್ವೆಗಳು ಆಗುತ್ತಿವೆ, ಆಗಿವೆ, ಮೈಸೂರಿನ ದಿವಾನರು ಈ ಪಟ್ಟಣವನ್ನೂ ಉಡುಪಿ ಕ್ಷೇತ್ರವನ್ನೂ ಸಂದರ್ಶಿಸಿ ಹೋಗಿರುವರು, ಇಲ್ಲಿಯ ಬೋರ್ಡಿನವರು ಈ ಕೆಲಸಕ್ಕೆ ವಿರೋಧಿಗಳಿಲ್ಲ. ಇಂಥ ಅನೇಕ ಸಂಗತಿಗಳು ಕೆಲವು ಸಮಯದ ಹಿಂದೆ ತಮ್ಮ ಪತ್ರಿಕೆಗಳ ಕೊಲುಮುಗಳಲ್ಲಿಯೂ ದೊಡ್ಡ ಮನುಷ್ಯರ ಬಾಯಿಯಲ್ಲಿಯೂ ಪ್ರಚಾರದಲ್ಲಿದ್ದವು. ಈಚೆಗೆ ಈ ವಿಷಯದಲ್ಲಿ ಯಾವ ವಾರ್ತೆಯೂ ಕಂಡುಬರುವುದಿಲ್ಲ. ಯಾಕೆ? ಈ ಪ್ರಶ್ನೆಯ ಅವಸ್ಥೆ ಏನು? ಆಗಬಹುದೆಂತಲೋ? ಇಲ್ಲವೆ ಮೂಲೆಗೆ ಬಿತ್ತೋ?

ಅಥವಾ ಈ ಪ್ರಶ್ನೆಯನ್ನು ಬಿಟ್ಟು ಮೈಸೂರಿನವರು ಭಟಕಳದ ಕಡೆಗೆ ರೈಲನ್ನು ಕೊಂಡುಹೋಗುವ ಆಲೋಚನೆಯಲ್ಲಿದ್ದಾರೆಂಬದೊಂದು ವರ್ತಮಾನವಿದೆ. ಅದುದರಿಂದ ಇದರ ಅವಸ್ಥೆ ಏನು?

ಮಂಗಳೂರು,
ತಾ. 26-9-16.

ಒಬ್ಬ ವ್ಯಾಪಾರಿ.

ನೂತನ ಪ್ರಬಂಧ! ಅದ್ಭುತ ಪತ್ತೆದಾರಿಯ ಕಥೆ!

ಕಳ್ಳನಾದ ಇನ್ಸ್‌ಪೆಕ್ಟರ್.

ಕಲ್ಕತ್ತಾ ನಗರದ ಪ್ರಸಿದ್ಧ ಪತ್ತೆದಾರನಿಗೂ ಒಬ್ಬ ಚೋರಾಗ್ರೇಸರನಿಗೂ ನಡೆಯುವ ಬುದ್ಧಿಚಾತುರ್ಯದ ಭಯಂಕರ ಹೋರಾಟ. ಆರಂಭದಿಂದ ಅಂತ್ಯದವರೆಗೂ ಒಂದೇ ಸಮನಾದ ಆಸಕ್ತಿಯನ್ನುಂಟುಮಾಡುವುದಲ್ಲದೆ ಇನ್ಸ್‌ಪೆಕ್ಟರ್ ಅಧಿಕಾರವು ಚೋರನ ಕೈವಶವಾಗುವುದೂ, ಹೊಗೇಬಂಡಿಯಲ್ಲಿ ಕಳ್ಳನಿಂದ ವಿರಚಿಸಲ್ಪಡುವ ಕೌಶಲೋಪಾಯವೂ, ವಿಲಾಯತಿ ಸರದಾರರ ಆಭರಣಗಳಿಗಾಗಿ ಪ್ರಯತ್ನಿಸುವ ಅದ್ಭುತ ಸಾಹಸವೂ ಅನಮಾನವಾದವುಗಳಾಗಿರುತ್ತವೆ. ಬೆಲೆ ೧೦ ಆಣೆ.

ವಿಳಾಸ:— ಥಾಂಪ್ ಯನ್ ಏಜನ್ಸಿ,
ಅವೆನ್ಯು ರೋಡ್, ಬೆಂಗಳೂರು ಸಿಟಿ.

ಯೂರೋಪದ ಮಹಾ ಯುದ್ಧ.

ಈಚೆಗೆ ಕೆಲವು ದಿವಸಗಳಿಂದ ಪಶ್ಚಿಮ ರಣರಂಗದಲ್ಲಿ ಪುನಃ ಯುದ್ಧ ಕಾರ್ಯಗಳು ಚಟುವಟಿಕೆಯಿಂದ ನಡೆಯುತ್ತಿವೆ. ಮುಖ್ಯವಾಗಿ ಬ್ರಿಟಿಷ ಮತ್ತು ಫ್ರೆಂಚ ಸೇನಿಕರು ಒಂದುಗೂಡಿ ಸೊಮ್ಮ ನದಿಯ ಉತ್ತರ ಮತ್ತು ದಕ್ಷಿಣದಲ್ಲಿ ಮುಂದೆ ಸಾಗುತ್ತಿದ್ದಾರೆ. ಇಲ್ಲಿ ನಡೆದ ಕದನಗಳಲ್ಲಿ ೧೦೦೦ಕ್ಕೆ ಮಿಕ್ಕಿದ ಶತ್ರು ಸೇನಿಕರು ಮಿತ್ರರ ಕೈಸೆರೆ ಬಿದ್ದಿರುತ್ತಾರೆ. ಜರ್ಮನರ ಸೇನೆಯಲ್ಲಿ ಆದ ಪ್ರಾಣಹಾನಿಯು ಬಹಳ ವಿಶೇಷವಾಗಿರುತ್ತದೆ. ಅಷ್ಟೇ ಅಲ್ಲ; ಮಿತ್ರರು ಬಹು ಸುಲಭವಾಗಿ ಹೆಚ್ಚಿನ ಪ್ರಯಾಸವಿಲ್ಲದೆ ಮುಂದೆ ಸಾಗಿ ಹೋಗುತ್ತಿದ್ದಾರೆ. ಜರ್ಮನರು ಬಹಳ ದಣಿದವರಾಗಿ ಮಿತ್ರರನ್ನು ತಡೆಯಲು ಅಶಕ್ತರಾಗಿದ್ದಾರೆ. ಜರ್ಮನರು ಇತರ ರಣರಂಗಗಳಿಂದ ಸಾಧ್ಯವಿದ್ದಷ್ಟು ಸೇನಿಕರನ್ನು ಈ ಸೊಮ್ಮ ಪ್ರಾಂತ್ಯಕ್ಕೆ ಕರಿಸಿ ಯುದ್ಧ ಕೊಡುತ್ತಿರುವರಾದರೂ ಏನೂ ಪ್ರಯೋಜನ ತೋರಿ ಬರುವದಿಲ್ಲ, ಮಾತ್ರವಲ್ಲ; ಮಿತ್ರರು ಆ ಸ್ಥಳದಲ್ಲಿ ಇಟ್ಟುಕೊಂಡಿರುವ ಉದ್ದೇಶಗಳನ್ನು ಬಹು ಬೇಗನೇ ಸಾಧಿಸಶಕ್ಯವರಿದ್ದಾರೆ. ಶರಣಾಗತರಾಗುವ ಜರ್ಮನ ಸೇನಿಕರ ಸಂಖ್ಯೆ ಮತ್ತು ಈ ಸೇನಿಕರು ಮಿತ್ರರಮೇಲೆ ಬೀಳುವಾಗ ಅವರಲ್ಲಿ ತೋರಿಬರುವ ಚಂಚಲತ್ವವನ್ನು ಆಲೋಚಿಸುವದಾದರೆ ಮಿತ್ರರ ಅಪಾರವಾದ ಶಕ್ತಿಯೂ ಜರ್ಮನರ ಅಶಕ್ತಿಯೂ ಎಷ್ಟಿದೆಂಬದು ತಿಳಿದುಬರುತ್ತದೆ. ಈಚೆಗೆ ನಡೆದ ಈ ಕದನಗಳಲ್ಲಿ ಜರ್ಮನರಲ್ಲಿ ತೋರಿಬರುವ ಈ ಅಶಕ್ತಿಯು ಅತಿ ಮಹತ್ವದ ವಿಷಯವಾಗಿದೆ. ಯಾಕಂದರೆ ಮಿತ್ರರು ಜುಲಾಯಿ ತಿಂಗಳಿಂದ ಶತ್ರುಗಳನ್ನು ಪ್ರತಿಕಡೆಯಲ್ಲಿಯೂ ಹಿಂದೆ ಒತ್ತಿ ಆಯಾ ಸ್ಥಳಗಳಲ್ಲಿ ಅವರಿಗೆ ತಕ್ಕುದಾದ ಪೆಟ್ಟನ್ನು ಕೊಟ್ಟು ಶತ್ರುಸೇನೆಯಲ್ಲಿ ಅಪಾರವಾದ ನಷ್ಟಪಡಿಸಿರುವರೆಂಬದು ಇದರಿಂದ ಖಾತ್ರಿಯಾಗುತ್ತದೆ. ಯುದ್ಧ ಮಾಹಿತಿಯನ್ನರಿಯದವರು ಭಾವಿಸುವಂತೆ ಸ್ಥಳಗಳನ್ನು ಗೆದ್ದುಕೊಳ್ಳುವದು ಮಾತ್ರ ಮಿತ್ರರ ಮುಖ್ಯ ಉದ್ದೇಶವಲ್ಲ; ಜರ್ಮನರ ಬಲವನ್ನು ಕುಂದಿಸುವದೇ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವು ಈಡೇರಿದರೆ ಸ್ಥಳಗಳನ್ನು ಗೆದ್ದುಕೊಳ್ಳುವದು ಒಂದು ಮಹತ್ವದ ವಿಷಯವಲ್ಲ. ಮಿತ್ರರು ಇಟ್ಟುಕೊಂಡಿರುವ ಈ ಉದ್ದೇಶವು ಈಗಲೀಗ ಈಡೇರುತ್ತಾ ಬರುತ್ತಿದೆ. ಈ ಉದ್ದೇಶವು ಕೈಗೂಡಿ ಬಂದುದರಿಂದಲೇ ಮಿತ್ರರು ಜರ್ಮನರ ೩ನೇ ಸಾಲಿನ ಕಂದಕಗಳನ್ನು ಥಿಪಾವೆಲಿಸಿಂದ ಕೊಂಬ್ಲೆಸ್‌ವರೆಗೆ ಒಡೆದುಬಿಟ್ಟು ಎರಡು ಕಡೆಗಳಲ್ಲಿ ಅಲ್ಲದೆ ಇತರ ಎಲ್ಲಾ ಕಡೆಗಳಲ್ಲಿ ಅವನ್ನೆಲ್ಲಾ ಸ್ವಾಧೀನಮಾಡಿಕೊಂಡಿರುತ್ತಾರೆ. ಜರ್ಮನರು ಕಳಕೊಂಡ ಈ ನೆಲೆಗಳ ಬದಲಾಗಿ ಹೊಸ ನೆಲೆಗಳನ್ನು ಕಲ್ಪಿಸಿಕೊಳ್ಳುತ್ತಿದ್ದಾರೆಂಬ ಪಕ್ಷಕ್ಕೆ ಸಂದೇಹವಿಲ್ಲ. ಆದರೆ ಈ ಹೊಸ ನೆಲೆಗಳು ಮಿತ್ರ ಸೇನಿಕರ ತೋಫುಗಳ ಗುಂಡು ಹಾರುತ್ತಿರುವಾಗಲೇ ಅವಸರದಿಂದ ಕಲ್ಪಿಸಲ್ಪಟ್ಟವುಗಳಾದುದರಿಂದ ಮಿತ್ರರು ಮುಂದೆ ನುಗ್ಗಿ ಹೋಗುವಾಗ ಶತ್ರುಗಳು ಅವಸರದಿಂದ ಮಾಡಿಕೊಂಡ ಈ ಕಂದಕಗಳನ್ನು ಕಾಗದದ ಚೂರಿನಂತೆ ಹುದುಬಿಡುವದರಲ್ಲಿ ಅನುಮಾನವೇ ಇಲ್ಲ. ಥಿಪಾವೆಲಿಸಿಂದ ಕೊಂಬ್ಲೆಸವರೆಗಿನ ಶತ್ರುಗಳ ನೆಲೆಗಳಲ್ಲಿ ಎರಡು ಮಾತ್ರ ಶತ್ರುಗಳ ಸ್ವಾಧೀನವಿವೆ ಎಂತ ಮೇಲೆ ಹೇಳಿದೆವು. ಆದರೆ ಈ ನೆಲೆಗಳು ಜರ್ಮನರು ಥಿಪಾವೆಲಿನಲ್ಲಿ ಬಲಕಾಯಿಸಿಕೊಂಡಿರುವ ಕೋಟೆಗಳಾಗಿವೆ. ಇದನ್ನು ಮಿತ್ರರು ಮೂರು ಕಡೆಯಲ್ಲಿ ಮುತ್ತಿರುವದರಿಂದ ಅವುಗಳು ಕೂಡಾ ಬೇಗನೇ ಮಿತ್ರರ ಕೈಸೇರುವವು. ಇವು ಮಿತ್ರರ ಕೈಸೇರಿದಾಕ್ಷಣ ಜರ್ಮನರು ಎರಡು ವರ್ಷಗಳಿಂದ ಬಲಕಾಯಿಸಿಕೊಂಡಿದ್ದ ಮೂಲ ಕಂದಕಗಳ ಮೂರನೇ ಸಾಲು ಪೂರಾ ಮಿತ್ರರ ಸ್ವಾಧೀನವಾದಂತಾಯಿತು. ಅದಲ್ಲದೆ ಫ್ರೆಂಚರು ಮುಂದರಿದು ಶತ್ರುಗಳನ್ನು ಪೆರೊನ್ನೆ-ಬಪಾಯುಮ ದಾರಿಯ ಹಿಂದೆ ಅಟ್ಟಿರುವದರಿಂದಲೂ ಕೊಂಬ್ಲೆಸ್ ಫ್ರೆಂಚರ ಸ್ವಾಧೀನವಾಗಿರುವದರಿಂದಲೂ ಫ್ರೆಂಚರಿಗೆ ಸುಲಭವಾಗಿ ಮುಂದೆ ಸಾಗಲು ಅನುಕೂಲವಾಗುವದು. ಹೀಗೆ ಪೆರೊನ್ನೆಯ ದಕ್ಷಿಣದ ಸೊಮ್ಮ ಪ್ರಾಂತ್ಯದಲ್ಲಿ ಶತ್ರುಗಳು ಬಹು ಶ್ರಮದಿಂದ ಮಾಡಿಕೊಂಡ ನೆಲೆಗಳೆಲ್ಲಾ ಫ್ರೆಂಚರ ಸ್ವಾಧೀನವಾದಂತಾಗುವದು. ಈ ನೆಲೆಗಳು ಈ ತನಕ ಜರ್ಮನರಿಗೆ ಕೆಂಬ್ರಾಯಿ, ಸೆಂಟ್‌ಕ್ವೆಂಟಿನ್, ವೆಲನ್ಸಿಯೆನ್ಸ್ ಪ್ರಾಂತ್ಯ ಮೊದಲಾದ ಕಡೆಗಳಿಗೆ ವ್ಯವಹಾರ ನಡೆಯಿಸುವಂಥಾ ಪ್ರಾಮುಖ್ಯ ನೆಲೆಗಳಾಗಿದ್ದವು. ಈ ನೆಲೆಗಳೆಲ್ಲಾ ಮಿತ್ರರ ಸ್ವಾಧೀನವಾದಕೂಡಲೆ ಜರ್ಮನರಿಗೆ ಪಶ್ಚಿಮ ರಣರಂಗದಿಂದ ಒಂದೇ ಸಲ ಹಿಂದೆ ಸರಿಯದೆ ಉಪಾಯವಿಲ್ಲ.

ಪಶ್ಚಿಮ-ರಣರಂಗ.

ಎಂಕ್ರೆ, ಕೊರ್ಸೆಲೆಟ್ಟೆ, ಫ್ಲೋಲೆರ್ಸ್ ಅರಣ್ಯ ಮತ್ತು ಗಿಂಚಿ ಮೊದಲಾದ ಪ್ರಾಂತ್ಯಗಳಲ್ಲಿ ನಡೆದ ಕದನಗಳಲ್ಲಿ ಬ್ರಿಟಿಷರು ಮುಂದರಿದು ಶತ್ರುಗಳ ೭ ಯಂತ್ರಚಾಲಿತ ಫಿರಂಗಿಗಳನ್ನೂ ಅನೇಕ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ. ತಾ. ೮ರಲ್ಲಿ ೫ ಭಾರವಾದ ಹೊವಿಟ್ಜರ್ಸ್ ಫಿರಂಗಿಗಳೂ, ೩ ದೊಡ್ಡ ಫಿರಂಗಿಗಳೂ ಅನೇಕ ಯಂತ್ರಚಾಲಿತ ಫಿರಂಗಿಗಳೂ ೧೦ ಜರ್ಮನ ಆಫೀಸರರೂ ೫೦೦ ಸೇನಿಕರೂ ಬ್ರಿಟಿಷರ ಸೆರೆಬಿದ್ದಿರುತ್ತಾರೆ. ಶತ್ರುಗಳ ಕೆಲವು ವಾಯುನಾವೆಗಳನ್ನು ಬ್ರಿಟಿಷರು ಓಡಿಸಿರುವರು. ಬ್ರಿಟಿಷರ ನಾಲ್ಕು ವಾಯುನಾವೆಗಳು ಕಾಣದೆಹೋಗಿರುವವು.

ಬೆರ್ನಿಯ ಪೂರ್ವ ಮತ್ತು ಡೆನ್‌ಕೋರ್ಟಿನ ದಕ್ಷಿಣದಲ್ಲಿ ಫ್ರೆಂಚರು ಶತ್ರುಗಳ ಕೆಲವು ಕಂದಕಗಳನ್ನು ಗೆದ್ದುಕೊಂಡು ಶತ್ರುಗಳಲ್ಲಿ ವಿಶೇಷ ನಷ್ಟಪಡಿಸಿರುತ್ತಾರೆ. ಇಲ್ಲಿ ತಾ. ೧೮ರಲ್ಲಿ ೧೩೦೦ ಸೇನಿಕರೂ ೧೦ ಯಂತ್ರಚಾಲಿತ ಫಿರಂಗಿಗಳೂ ಬ್ರಿಟಿಷರ ಸೆರೆಬಿದ್ದಿರುವವು. ಜರ್ಮನರ ಕೆಲವು ಸೇನಾಂಗಗಳೇ ಬೆರ್ನಿಯಲ್ಲಿ ನಡೆದ ಕದನಗಳಲ್ಲಿ ನಿರ್ನಾಮವಾಗಿ ಹೋಗಿರುತ್ತವೆ. ಕೊಂಬ್ಲೆಸಿಗೆ ೩೦೦ ಗಜ ದಕ್ಷಿಣದಲ್ಲಿ ಭೀಕರ ಕಾಳಗವು ನಡೆಯುತ್ತಿದೆ. ಫ್ರೆಂಚರು ಡೆನೆಕೋರ್ಟ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುವದಲ್ಲದೆ ಈ ಗ್ರಾಮದ ಆಗ್ನೇಯ ದಿಕ್ಕಿನಲ್ಲಿರುವ ಮೂರು ಅರಣ್ಯಗಳನ್ನೂ ನೈರುತ್ಯ ದಿಕ್ಕಿನಲ್ಲಿರುವ ಕೆಲವು ಕಂದಕಗಳನ್ನೂ ಗೆದ್ದುಕೊಂಡಿರುತ್ತಾರೆ. ೧೬೦೦ಕ್ಕೆ ಮಿಕ್ಕಿದ ಗಾಯುಪರ [illegible] ಶತ್ರುಸೇನಿಕರು ೩ ದಿವಸಗಳ ಕದನಗಳಲ್ಲಿ ಫ್ರೆಂಚರ ಸೆರೆಬಿದ್ದಿರುವರು. ಈ ಪೈಕಿ ೨೫ ಆಫೀಸರರು.

ಶಂಪೇನೆಯಲ್ಲಿ ಮೋಲ್ಡಾಯಿದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ವೊಕರ್ಮ್ಮೆಯ ಮೇಲೆ ಶತ್ರುಗಳು ಎರಡಾವರ್ತಿ ದಾಳಿಮಾಡಿ ಪೂರ್ಣವಾಗಿ ಸೋತುಹೋಗಿರುತ್ತಾರೆ. ಅರ್ರಾಸಿನ ದಕ್ಷಿಣದಲ್ಲಿ ಬ್ರಿಟಿಷರು ಶತ್ರುಗಳ ೩೦೦ ಗಜ ಕಂದಕಗಳನ್ನು ಗೆದ್ದುಕೊಂಡಿರುತ್ತಾರೆ. ಸೊಮ್ಮೆಯ ಉತ್ತರದಲ್ಲಿ ಜರ್ಮನರು ಕಳಕೊಂಡ ಪ್ರಾಂತ್ಯಗಳನ್ನು ಪುನಃ ಗೆದ್ದುಕೊಳ್ಳಲು ತಾ. ೩ರಲ್ಲಿ ಭಗೀರಥ ಯತ್ನನಡಿಸಿದರು. ಈ ಕದನವು ಬೆಳಗ್ಗೆ ೯ ಗಂಟೆಯಿಂದ ರಾತ್ರಿಕಾಲದ ವರೆಗೆ ನಡೆಯಿತು. ಆದರೆ ಫ್ರೆಂಚರು ರೋಷಾವೇಷದಿಂದ ಕದನಮಾಡಿ ಅವರನ್ನು ಹಿಂದಕ್ಕಟ್ಟಿದರು. ಫ್ರೆಂಚರು ತಮ್ಮ ನೆಲೆಗಳಲ್ಲಿ ಯಾವದನ್ನೂ ಬಿಟ್ಟುಕೊಡಲಿಲ್ಲ. ಇಲ್ಲಿ ನಡೆದ ಕದನಗಳಲ್ಲೆಲ್ಲಾ ಜರ್ಮನರಿಗೆ ವಿಪರೀತ ನಷ್ಟವುಂಟಾಗಿರುವದು. ಜುಲಾಯಿ ತಾ. ೧ರಿಂದ ಮಿತ್ರರು ೪೯೦,೦೦೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಐನೆಯಲ್ಲಿ ಜರ್ಮನರ ಸೇನಾಂಗಗಳು ಮಿತ್ರಸೇನಿಕರ ಮೇಲೆ ನುಗ್ಗಿ ಕದನಕ್ಕೆ ನಿಂತು ಕಡೆಗೆ ಹಿಂದೆ ಸರಿದಿರುತ್ತವೆ. ೩೦೦ಕ್ಕೆ ಮಿಕ್ಕಿದ ಶತ್ರುಸೇನಿಕರು ಫ್ರೆಂಚರ ಸೆರೆಬಿದ್ದಿರುತ್ತಾರೆ. ಇತರ ಕೆಲವು ಗ್ರಾಮಗಳಲ್ಲಿಯೂ ಬ್ರಿಟಿಷರಿಗೂ ಫ್ರೆಂಚರಿಗೂ ಜಯದ ಮೇಲೆ ಜಯವಾಗುತ್ತಲಿದೆ.

ಪೂರ್ವ ರಣರಂಗ.

ಈ ರಣರಂಗದಲ್ಲಿ ನರಾಯುವ್ಕ ನದೀಪ್ರಾಂತ್ಯದಲ್ಲಿ ಭೀಕರ ಕಾಳಗ ನಡೆಯುತ್ತಿದೆ. ರುಶ್ಯನರ ಮೇಲೆ ಹಲ್ಲೆಮಾಡಿದ ಶತ್ರುಗಳು ಪ್ರತಿ ಒಂದು ಕಡೆಯಲ್ಲಿಯೂ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು. ಕರ್‌ಪಥೇನಿಯದ ಶಿವೆನಿಪ್ರೇವಾ ಪ್ರಾಂತ್ಯದ ಕೆಲವು ಗುಡ್ಡಪ್ರದೇಶಗಳು ರುಶ್ಯನರ ಕೈಸೇರಿವೆ. ನರಾಯುವ್ಕ ನದೀಪ್ರಾಂತ್ಯದಲ್ಲಿ ೩ ದಿವಸಗಳಲ್ಲಿ ಕದನ ನಡೆದಿರುವದು. ರುಶ್ಯನರು ಕೈದುಡುಕಿನ ಕಾಳಗ ಮಾಡಿ ಆಗಾಗ್ಗೆ ನುಗ್ಗಿಬಂದು ರುಶ್ಯನರ ಮೇಲೆ ಬಿದ್ದ ಶತ್ರುಗಳನ್ನು ಹಿಮ್ಮೆಟ್ಟಿರುವರು. ಈ ನದಿಯ ಪೂರ್ವದಲ್ಲಿದ್ದ ಸಿವಿಸ್ಟಲನಿಕೆ ಗ್ರಾಮವು ಒಂದು ಸಾರಿ ಜರ್ಮನರಿಗೂ ಮತ್ತೊಂದು ಸಾರಿ ರುಶ್ಯನರಿಗೂ ಹೀಗೆ ಆರುಸಾರಿ ಅವರಿವರ ಸ್ವಾಧೀನವಾಗಿ ಕಡೆಗೆ ರುಶ್ಯನರಿಗೇನೇ ದೊರಕಿತು. ಇತರ ವಿಶೇಷ ವರ್ತಮಾನಗಳು ಈ ರಣರಂಗದಿಂದ ಬಂದಿರುವದಿಲ್ಲ.

ಬಾಲ್ಕಾನ್.

ಸಲೋನಿಕದಲ್ಲಿ ಇರುವ ಮಿತ್ರಸೇನಿಕರು ಫ್ಲೋರಿನವನ್ನು ಗೆದ್ದುಕೊಂಡಿರುತ್ತಾರೆ. ತಾ. ೧೭-೧೮ರಲ್ಲಿ ರುಶ್ಯನರೂ ಫ್ರೆಂಚರೂ ಇಲ್ಲಿ ರೋಷಾವೇಶದಿಂದ ಕಾಳಗಮಾಡಿ ಬಲ್ಗೇರಿಯನರನ್ನು ಸೋಲಿಸಿ ಆ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುವರು. ಸರ್ವಿಯನರು ಪ್ರತಿಕಡೆಯಲ್ಲಿಯೂ ಬಲ್ಗೇರಿಯನರನ್ನು ಸೋಲಿಸುತ್ತಲಿರುವರು. ಸರ್ವಿಯನರ ಒಂದು ಸೇನೆಯು ಮೊನಸ್ಟಿರಿನ ಉತ್ತರಕ್ಕೆ ಮುಂದರಿಯುತ್ತಿದೆ. ಪೂರೊಜ್ ಪ್ರಾಂತ್ಯದಲ್ಲಿ ಇಟೆಲಿಯನರಿಗೂ ಬಲ್ಗೇರಿಯನರಿಗೂ ಕದನ ನಡಿಯುತ್ತಿದೆ. ಫ್ಲೋರಿನದ ಪೂರ್ವದಲ್ಲಿರುವ ಬ್ರೊಡ್ ನದಿಯ ಬಳಿ ಬಲ್ಗೇರಿಯನರು ಪುನಃ ಕದನಕ್ಕೆ ನಿಂತು ಸೋತುಹೋದರು. ಫ್ರೆಂಚರ ವಾಯುನಾವೆಗಳು ಮೊನಸ್ಟಿರಿನ ಮೇಲೆ ಬೊಂಬುಗಳನ್ನು ಎಸೆದಿರುವವು. ಫ್ಲೋರೀನ ಪ್ರಾಂತ್ಯದಲ್ಲಿ ಜರ್ಮನರಿಗೆ ವಿಶೇಷ ನಷ್ಟವುಂಟಾಗಿರುವದು. ಕಜ್ಮಾಕ್ಚೆನ್ ಎಂಬಲ್ಲಿ ಸರ್ವಿಯನರಿಗೂ ಬಲ್ಗೇರಿಯನರಿಗೂ ಕಠಿಣ ಕಾಳಗ ನಡಿಯುತ್ತಿದೆ. ಬಲ್ಗೇರಿಯನರು ಈ ಗುಡ್ಡ ಶಿಖರವನ್ನು ಸರ್ವಿಯನರಿಂದ ಕಿತ್ತುಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲಾ ನಿರರ್ಥಕವಾಗಿರುವವು. ಬಲ್ಗೇರಿಯನರು ಫ್ಲೋರೀನವನ್ನು ಬಿಟ್ಟುಹೋಗುವ ಮೊದಲು ಪಟ್ಟಣದ ಒಂದು ಭಾಗಕ್ಕೆ ಬೆಂಕಿ ಕೊಟ್ಟು ಹೋಗಿರುವರು.

ಡೊಬ್ರುಡ್ಜಾದಲ್ಲಿ ರುಮೇನಿಯನರಿಗೂ ಶತ್ರುಗಳಿಗೂ ಕಾಳಗವು ನಡಿಯುತ್ತಿದೆ. ರುಶ್ಯನರೂ ರುಮೇನಿಯರೂ ಹಲ್ಲೆಮಾಡುತ್ತಿರುವ ಶತ್ರುಗಳ ಸೇನೆಗಳಲ್ಲಿ ವಿಶೇಷ ನಷ್ಟಪಡಿಸಿರುತ್ತಾರೆ. ಇಲ್ಲಿ ತಾ. ೧೫ರಲ್ಲಿ ಕಾಳಗ ಪ್ರಾರಂಭವಾಗಿ ತಾ. ೩೦ಕ್ಕೆ ಅಂತ್ಯವಾಗಿರುತ್ತದೆ. ರುಮೇನಿಯನರು ಶತ್ರುಗಳನ್ನು ಡೊಬ್ರುಡ್ಜಾದಿಂದ ಓಡಿಸಿರುತ್ತಾರೆ. ಶತ್ರುಗಳು ಓಡಿಹೋಗುವಾಗ ಗ್ರಾಮವನ್ನು ಸುಟ್ಟು ಓಡಿಹೋಗಿರುತ್ತಾರೆ. ತಾ. ೧೯ರಲ್ಲು ಕಠಿಣ ಕಾಳಗವಾಗಿ ತಾ. ೨೦ರಲ್ಲು ಶತ್ರುಸೇನಿಕರು ಹಿಂದರಿದರು. ಬ್ರಾಸೊ ಎಂಬಲ್ಲಿಗೆ ೫೦ ಮೈಲು ನೈರುತ್ಯದಲ್ಲಿರುವ ಸಿಟಿಕ್ಯುರುವಾಡ್ಲೆ ಎಂಬ ಪ್ರದೇಶವೂ ರುಮೇನಿಯನರಿಗೆ ಸ್ವಾಧೀನವಾಗಿದೆ.

ಇಟಲಿ.

ಈ ರಣರಂಗದಿಂದ ಈ ವಾರದಲ್ಲಿ ವಿಶೇಷ ವರ್ತಮಾನಗಳು ಬಂದಿರುವದಿಲ್ಲ.

ಪೂರ್ವ ಆಫ್ರಿಕ.

ಪೋರ್ಚುಗೀಸರ ಸೇನೆಯು ರೊವೂಮ ನದಿಯನ್ನು ದಾಟಿ ಜರ್ಮನ್ ಪೂರ್ವ ಆಫ್ರೀಕದಲ್ಲಿ ೩ ಮೈಲುಗಳ ವಿಸ್ತೀರ್ಣದ ಜಾಗೆಯನ್ನು ಸ್ವಾಧೀನಮಾಡಿಕೊಂಡಿರುವದು.

ಜಲಾಂತರ್ಗಾಮಿ ನಾವೆಗಳು.

ಜರ್ಮನರು ಡಚ್ಚರ "ಪ್ರಿನ್ಸ್ ಹೆಂಡ್ರಿಕ್" ಎಂಬ ಹಡಗವನ್ನು ಹಿಡಿದು ಜೀಬ್ರುಗೆಗೆ ಕೊಂಡು ಹೋಗಿ ೩೪ ಪ್ರಯಾಣಿಕರನ್ನು ಹಡಗದಿಂದ ಇಳಿಸಿ ಹಡಗವನ್ನು ಹೋಗಬಿಟ್ಟಿರುತ್ತಾರೆ.

ವಾಯುನಾವೆಗಳ ದಾಳಿ.

ಶತ್ರುಗಳ ವಾಯುನಾವೆಗಳು ಇಂಗ್ಲಾಂಡಿನ ಪೂರ್ವ ಕರಾವಳಿಯ ಮೇಲೆ ಹಾರಿಸಿಕೊಂಡು ಕೆಲವು ಬೊಂಬುಗಳನ್ನು ಎಸೆದಿರುತ್ತವೆ. ಶತ್ರು ವಾಯುನಾವೆಗಳು ಲಿಂಕೊನ್‌ಶಯರ್, ಪೂರ್ವ ಪ್ರದೇಶಗಳು ಮತ್ತು ಲಂಡನಿನ ಆಜುಬಾಜಿನಲ್ಲಿ ಬೊಂಬುಗಳನ್ನು ಎಸೆದಿರುತ್ತವೆ. ಲಂಡನಿನ ಆಗ್ನೇಯ ಮತ್ತು ಈಶಾನ್ಯ ದಿಕ್ಕಿನಲ್ಲಿ ದಾಳಿ ಮಾಡಲು ಬಂದ ವಾಯುನಾವೆಗಳನ್ನು ಬ್ರಿಟಿಷರ ವಾಯುನಾವೆಗಳು ಹಿಂದಕ್ಕಟ್ಟಿರುತ್ತವೆ. ಎಸೆಕ್ಸ್‌ನಲ್ಲಿ ಬ್ರಿಟಿಷರು ಶತ್ರುಗಳ ಒಂದು ವಾಯುನಾವೆಯನ್ನು ಕೆಳದೊಬ್ಬಿರುವರು. ಮತ್ತೊಂದು ವಾಯುನಾವೆಯು ಎಸೆಕ್ಸ್ ಕರಾವಳಿಯಲ್ಲಿ ಕೆಳಬಿದ್ದಿರುವದು ಎಂತ ವಾರ್ತೆ ಇದೆ. ಬ್ರಿಟಿಷರು ಒಂದು ಜೆಪೆಲಿನ್ ನಾವೆಯನ್ನು ಕೆಳಗಿಳಿಸಿ ೨೨ ಮಂದಿಯನ್ನು ಸೆರೆ ಹಿಡಿದಿರುವರು. ಈ ದಾಳಿಯಲ್ಲಿ ೧೪-೧೫ ವಾಯುನಾವೆಗಳು ಸೇರಿರಬೇಕೆಂದು ಅಂದಾಜಾಗಿಯದೆ. ಕೆಲವು ಮನೆಗಳು ಈ ದಾಳಿಯಿಂದ ಹಾಳಾಗಿರುತ್ತವೆ. ೨ ಕಾರ್ಖಾನೆಗಳಿಗೂ ಹಾನಿಯಾಗಿಯವೆ. ಕೆಲವು ಖಾಲಿ ರೈಲ್ವೆಗಾಡಿಗಳು ನಾಶವಾಗಿ ಹೋಗಿರುತ್ತವೆ. ಲಂಡನಿನಲ್ಲಿ ೧೭ ಗಂಡಸರು, ೮ ಹೆಂಗಸರು, ೩ ಮಕ್ಕಳು ಹತರಾಗಿರುವರು. ೪೫ ಗಂಡಸರು ೩೭ ಹೆಂಗಸರು ಮತ್ತು ೧೭ ಮಕ್ಕಳಿಗೆ ಜಖಂ ಆಗಿಯದೆ ಎಂತ ತಿಳಿದು ಬರುತ್ತದೆ.

ಗ್ರೀಸ್.

ಗ್ರೀಕರಿಗೆ ಸೇರಿದ ಕ್ರೇತ ದ್ವೀಪದಲ್ಲಿರುವ ಗ್ರೀಕ ಜನರು ದಂಗೆ ಎದ್ದು ಅಲ್ಲಿ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿಕೊಂಡಿರುತ್ತಾರೆ ಎಂಬ ವಾರ್ತೆ ಬಂದದೆ.

ಸಲೋನಿಕದಲ್ಲಿ ಗ್ರೀಕರಿಗೆ ವಿರೋಧವಾಗಿ ಸ್ವತಂತ್ರಾಧಿಕಾರವನ್ನು ಸಾರಿದ ಗ್ರೀಕ ಸೇನಿಕರು ಬಲ್ಗೇರಿಯರನ್ನು ಗ್ರೀಕ ದೇಶದಿಂದ ಓಡಿಸುವ ಉದ್ದೇಶದಿಂದ ರಣರಂಗಕ್ಕೆ ಹೊರಡುವರೆ ಸನ್ನದ್ಧರಾಗಿದ್ದಾರೆ.

ವಿದೇಶ ವೃತ್ತಾಂತ.

ಬ್ರಿಟಿಷರೂ ಫ್ರೆಂಚರೂ ಜುಲಾಯಿ ತಾ. ೧ರಿಂದ ಸೊಮ್ಮೆಯಲ್ಲಿ ೫೫೮೦೦ ಜರ್ಮನರನ್ನು ಸೆರೆಹಿಡಿದಿರುತ್ತಾರೆ.

ರಣರಂಗಕ್ಕೆ ಹೋದ ಕೆನಡಾ ದೇಶದ ಸೇನಿಕರಲ್ಲಿ ಆಗೋಸ್ತು ತಾ. ೩೧ರ ವರೆಗೆ ೮೩೪೪ ಮಂದಿ ಹತರಾರುವರು. ೨೭೨೧೨ ಮಂದಿ ಗಾಯ ಒಡೆದಿರುವರು. ೨೦೦೫ ಮಂದಿ ಕಾಣೆಯಾಗಿರುವರು.

ಕಿಚನರ್ ಪ್ರಭುಗಳ ಸ್ಮರಣ ಫಂಡಿಗೆ ಈ ವರೆಗೆ ೩೦೦,೦೦೦ ಪವನುಗಳು ಕೂಡಿರುತ್ತವೆ.

ಜಾವಾದ್ವೀಪದಲ್ಲಿ ೪ ಸಾರಿ ಭೂಕಂಪವಾದುದರಿಂದ ೫೦೦ ಮನೆಗಳು ಬಿದ್ದು ಹಾಳಾದವು. ಪ್ರಜೆಗಳ ಆಸ್ತಿಗೆ ಬಹಳ ನಷ್ಟ ತಟ್ಟಿತು.

- ಬ್ರಿಟಿಷರ ಪ್ರಧಾನ ಮಂತ್ರಿಯಾದ ಮೆ। ಆಸ್ಕ್ವಿತರವರ ೪ ಮಂದಿ ಮಕ್ಕಳೂ ಮಿಲಿಟರಿ ಉದ್ಯೋಗದಲ್ಲಿರುವರು. ಹಿರೇ ಮಗ ಲೆಫ್ಟನೆಂಟ ಆಸ್ಕ್ವಿತರವರು ಈಚೆಗೆ ತಾನೇ ರಣರಂಗದಲ್ಲಿ ಹತರಾದರು.

ಈಗಣ ಯುದ್ಧದ ಪ್ರಥಮ ವರ್ಷದಲ್ಲಿ ಸುಮಾರು ೭೦,೦೦೦ ಯುವಕರು ಕೊಲ್ಲಲ್ಪಟ್ಟಿರಬೇಕೆಂದು ಫ್ರೈಡ್‌ಹಾಂ ಬಿಷಾಪರು ಹೇಳಿರುತ್ತಾರೆ.

ಪೆಟ್ರೊಗ್ರೇಡಿನಲ್ಲಿ ಸರ್ಜನರಾಗಿರುವ ಡಾಕ್ಟರ್ ವಾಟರ್ ಹೌಸ್ ಎಂಬವರು ಗುಂಡಿನೇಟನ್ನು ತಿಂದ ಒಬ್ಬ ರುಶ್ಯಾ ಸಿಪಾಯಿಯ ತಲೆಬುರುಡೆಯನ್ನು ಕೊರೆದು ಒಳಗಿದ್ದ ಗುಂಡನ್ನೂ ಮಿದುಳನ್ನೂ ತೆಗೆದುಹಾಕಿ ಪುನಃ ಬೇರೆ ಮಿದುಳನ್ನು ಅಲ್ಲಿಗೆ ಸೇರಿಸುವರೆಂದೂ ಈಗ ಅವನು ಆರೋಗ್ಯವಾಗಿರುವನೆಂದೂ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ಸಪ್ಟಂಬರ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ೪೯೧೭ ಮಂದಿಗೆ ಪ್ಲೇಗಬೇನೆಯು ಸೋಂಕಿ ೩೯೪೪ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್ ೧೪೯೩; ಮದ್ರಾಸ್ ಸಂಸ್ಥಾನ ೧೭೯; ಬಿಹಾರ್ ಮತ್ತು ಒರಿಸ್ಸ ೨೯; ಸಂಯುಕ್ತ ಸಂಸ್ಥಾನ ೬೨; ಪಂಜಾಬು ೨೯; ಬರ್ಮ ೪೩, ಮಧ್ಯ ಸಂಸ್ಥಾನ ೫೦೬; ಮೈಸೂರು ೪೦೫, ಹೈದರಾಬಾದ್ ೮೧೨; ಮಧ್ಯ ಹಿಂದೂಸ್ಥಾನ ೨೧; ರಜಪುತಾನ ೧ ಮರಣಗಳಾಗಿರುವವು.

ಲಾಹೋರಿಗೆ ಸೇರಿದ ಲೈಲಾಪುರದಲ್ಲಿ ಸಬ್ ಜಡ್ಜರಾಗಿದ್ದ ಎಮ್. ಬರ್ಕಾಟ್ ಅಲಿ ಎಂಬವರಿಗೆ ಈಚೆಗೆ ಇ. ಪಿ. ಕೋಡಿನ ೧೭೧ನೇ ಪ್ರಕರಣದ ಮೇಲೆ ೨ ವರ್ಷಗಳ ಸಜಾ ಮತ್ತು ಜುಲುಮಾನೆ ಆಗಿತ್ತಷ್ಟೆ. ಆಪಾದಿತನು ಪಂಜಾಬ್ ಚೀಫ್ ಕೋರ್ಟಿನಲ್ಲಿ ಅಪೀಲುಮಾಡಿಕೊಂಡದ್ದರಿಂದ ಅವನನ್ನು ಜಾಮೀನಿನ ಮೇಲೆ ಬಿಟ್ಟಿದ್ದರು. ಈಗತಾನೇ ಪಂಜಾಬ್ ಚೀಫ್ ಕೋರ್ಟಿನಲ್ಲಿಯೂ ಮೂಲ ತೀರ್ಮಾನವೇ ಕಾಯಂ ಆಯಿತು. ಈ ವರ್ತಮಾನವನ್ನು ಕೇಳಿ ಆಪಾದಿತನು ತಲೆತಪ್ಪಿಸಿಕೊಂಡಿರುವನು. ಇವನನ್ನು ಹಿಡಿದುಕೊಟ್ಟವರಿಗೆ ೧೦೦೦ ರೂಪಾಯಿಗಳ ಬಹುಮಾನ ಕೊಡೋಣಾಗುವದೆಂತ ಸರಕಾರದವರು ಪ್ರಕಟಿಸಿರುತ್ತಾರೆ.

ಬಂಗಾಳದಲ್ಲಿ ಸ್ಥಾಪಿಸೋಣಾದ ಬಂಗೀಯ ಸೇನೆಗೆ ಸೇರಿಕೊಂಡ ೫ನೇ ಪಂಗಡದ ೩೫ ಮಂದಿ ತರಬೇತಿ ಬಗ್ಗೆ ಇದೇ ತಾ. ೨೨ರಲ್ಲು ವಾಯುವ್ಯ ಸರಹದ್ದಿಗೆ ಹೊರಟುಹೋದರು. ಇವರಲ್ಲಿ ಕಲ್ಕತ್ತೆ ಹೈಕೋರ್ಟಿನ ವಕೀಲರಾದ ಮ। ರಾ। ಕೆ. ಮುಜುಮುದಾರರವರೂ ಇನ್ನು ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿದ ಅನೇಕ ಯುವಕರೂ ಇದ್ದರು.

ಇದೇ ತಾ. ೨೨ರಲ್ಲು ವರಿಷ್ಠ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಮಾನ್ಯ ಸರ್ ಸಿ. ಶಂಕರನ್ ನಾಯರರವರು ವೈಸರಾಯ ಪ್ರಭುಗಳವರನ್ನು ಆತಿಥ್ಯೋಪಚಾರಗಳಿಂದ ಸತ್ಕರಿಸಿದರು. ಈ ಸಂದರ್ಭದಲ್ಲಿ ಅನೇಕ ಯುರೋಪಿಯನರೂ ಸರ್ ಸತ್ಯೇಂದ್ರನಾಥ ಸಿನ್ಹರವರೂ ಮ। ರಾ। ಬಾಸು ಮೊದಲಾದ ಮಾನ್ಯರೂ ಆಮಂತ್ರಿಸಲ್ಪಟ್ಟಿದ್ದರು.

ಗೋಖಲೆಯವರ ಸ್ಮರಣಾರ್ಥ ಫಂಡಿಗೆ ಈವರೆಗೆ ಬಡ್ಡಿ ಕೂಡಿ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿ ಕೂಡಿಬಂದಿರುತ್ತದೆ. ಈ ಹಣದಲ್ಲಿ ಮಾನ್ಯ ಗೋಖಲೆಯವರ ಒಂದು ಶಿಲಾ ಪ್ರತಿಮೆಯನ್ನು ಮಾಡುವರೆ ೨೦,೦೦೦ ರೂಪಾಯಿ ತೆಗೆದಿಟ್ಟು ಉಳಿದ ಹಣವು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ಕೊಡೋಣಾಗುವದು. ಈ ಹಣದ ಬಡ್ಡಿಯನ್ನು ಮಾತ್ರ ಸೊಸೈಟಿಯವರು ಪ್ರಯೋಗಿಸಬಹುದು.

ಬಹುಮಾನವಟ್ಟೆ ಸರ್. ಎಸ್. ಪಿ. ಸಿನ್ಹರವರು ಬಂಗಾಳ ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮುಂಬಾಯಿ ಮ। ರಾ। ದೇಶಾಯಿಯವರಿಗೂ ರೈಲ್ವೇ ಗಾರ್ಡ ಮೊದಲಾದವರಿಗೂ ಯುರೋಪಿಯಾನರಿಗೆ ರಿಜರ್ವ ಮಾಡಿದ ಕಂಪಾರ್ಟಮೆಂಟಿನ ಸಂಬಂಧ ನಡೆದ ದಾವೆಯ ಇತ್ಯರ್ಥವು ಇದೇ ತಾ. ೨೧ರಲ್ಲು ಆಗಿರುತ್ತದೆ. ಮೆಜಿಸ್ಟ್ರೇಟರು ಈ ಮೊಕದಮೆಯನ್ನು ವಿಚಾರಿಸಿ ರೈಲ್ವೇ ಕಂಪೆನಿಯವರಿಗೆ ಕಂಪಾರ್ಟಮೆಂಟುಗಳನ್ನು ರಿಜರ್ವ ಮಾಡುವ ಸ್ವಾತಂತ್ರ್ಯವಿದೆ ಎಂದೂ ಮುದ್ದೈಯು ಬೇಕೆಂತಲೇ ಗಾರ್ಡನು ತನ್ನ ಕರ್ತವ್ಯವನ್ನು ಮಾಡದ ಹಾಗೆ ಅಭ್ಯಂತರಿಸಿದನೆಂತಲೂ ಮುದ್ದೈಗೆ ಯಾರೂ ಹೊಡೆದುದಿಲ್ಲವೆಂದೂ ಅಭಿಪ್ರಾಯಪಟ್ಟು ಮುದ್ದೈಯಾಲೆಯರನ್ನು ಖುಲಾಸುಪಡಿಸಿದರು. ಮುದ್ದೈಯಾಲೆಯರು ಮುದ್ದೈ ಮೇಲೆ ಕೊಟ್ಟ ಫಿರ್ಯಾದಿಯೂ ಹಿಂದೆಗೆಯೋಣಾಗಿದೆ.

ಕಲ್ಕತ್ತೆಯಲ್ಲಿಯೂ ಆಜುಬಾಜು ಪ್ರಾಂತ್ಯದಲ್ಲಿಯೂ ತಾ. ೨೧ರಲ್ಲು ಸುಂಟರ ಗಾಳಿಬೀಸಿ ಅನೇಕ ಅನಾಹುತಗಳು ನಡೆದಿರುತ್ತವೆ. ಕಲ್ಕತ್ತೆಯಲ್ಲಿ ಕೆಲವು ಮನೆಗಳು ಬಿದ್ದುಹೋದವು. ಮೈದಾನು ಮತ್ತು ಬೀದಿ ಬದಿಯಲ್ಲಿದ್ದ ಅನೇಕ ಮರಗಳು ನೆಲಸಮವಾದವು. ಟೆಲಿಗ್ರಾಮ್ ಟ್ರೇಮ್‌ವೇಗಳು ನಿಂತುಹೋದವು. ನದಿಯಲ್ಲಿ ಇದ್ದ ದೋಣಿಗಳಿಗೆ ವಿಶೇಷ ನಷ್ಟವಾಗಿರುವದು. ಸಾಮಾನು ತುಂಬಿದ್ದ ೩೭ ದೋಣಿಗಳೂ ಎರಡು ಸ್ಟೀಮ್ ಲಾಂಚುಗಳೂ ಒಂದು ಪೋಲಿಸ್ ದೋಣಿಯೂ ಮುಣುಗಿಹೋದವು. ಮುಣುಗಿಹೋದ ೩೭ ದೋಣಿಗಳಿಂದ ೭। ಲಕ್ಷ ರೂಪಾಯಿಗಳ ನಷ್ಟವಾಗಿದೆಂತ ಅಂದಾಜಾಗಿಯದೆ.

ಸರಕಾರಿ ದಾಖಲೆಗಳಲ್ಲಿ ಹೆಬ್ಬೆಟ್ಟಿನ ಗುರುತನ್ನು ತಕ್ಕೊಳ್ಳುವದರಿಂದ ಉಂಟಾಗುವ ಪ್ರಯೋಜನವು ಕೆಲವು ದಿವಸಗಳ ಹಿಂದೆ ಕಲ್ಕತ್ತೆಯಲ್ಲಿ ನಡೆದ ಒಂದು ದಕಾಯಿತಿಯಿಂದ ತಿಳಿದುಬಂದಿರುತ್ತದೆ. ಈ ದಕಾಯತಿಯಲ್ಲಿ ದಕಾಯುತರು ೫ ಮಂದಿಯನ್ನು ಕೊಂದು ೫ ಮಂದಿಗೆ ಗಾಯಪಡಿಸಿದ್ದರು. ದಕಾಯಿತರಲ್ಲಿ ಒಬ್ಬನನ್ನು ಗ್ರಾಮದ ಜನರು ಹಿಡಿದಿದ್ದರು. ಆದರೆ ಈ ದಕಾಯಿತನು ಈ ಕಲಹದಲ್ಲಿ ಪಟ್ಟ ಗಾಯಗಳಿಂದ ಸತ್ತುಹೋದನು. ಸತ್ತನಂತರ ಅವನ ಹೆಬ್ಬೆಟ್ಟಿನ ಗುರುತು ತಕ್ಕೊಂಡದ್ದರಿಂದ ಅವನು ಕಳೆದ ಜುಲಾಯಿ ತಿಂಗಳಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇಲೆ ಟಾನೋರ್ ರಾಜಶಾಯಿಯಲ್ಲಿ ಇಂಟರ್ನ್ ಮಾಡಲ್ಪಟ್ಟು ತಲೆತಪ್ಪಿಸಿಕೊಂಡ ಪ್ರಬೋಧ ಭಟ್ಟಾಚಾರ್ಜಿ ಎಂತ ಕಂಡುಹಿಡಿಯಬಹುದಾಯಿತು.

ಬಕ್ಸಾರ್ ಸಬ್‌ಡಿವಿಜನಿಗೆ ಸೇರಿದ ಸುಮಾರು ೩೯೭ ಗ್ರಾಮಗಳು ಗಂಗಾನದಿಯ ವಿಶೇಷ ಪ್ರವಾಹದಿಂದ ನಿರ್ನಾಮವಾಗಿ ಹೋದುವೆಂದು ತಿಳಿದುಬಂದಿರುತ್ತದೆ.

ಭಾರತಾಭಿಮಾನಿಗಳಾದ ಸರ್. ವಿಲಿಯಂ ವೆಡರ್ ಬರ್ನರವರು ಸೀಮೆಯಿಂದ ೩೦೯ ರೂಪಾಯಿಗಳನ್ನು ಪೂನೆಯ ಪ್ರೊಫೆಸರ್ ಕರ್ವೆಯವರ ವಶಕ್ಕೆ ಕಳುಹಿಸಿಕೊಟ್ಟು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಪ್ರೊ। ಕರ್ವೆಯವರು ಮಾಡುತ್ತಿರುವ ಸ್ವತಂತ್ರ ಪ್ರಯತ್ನವನ್ನು ಶ್ಲಾಘಿಸಿ ಅದಕ್ಕೆ ತಾವೂ ಸಹಾಯಕರಾಗಿರುವದಾಗಿ ಅಭಿವಚನವಿತ್ತು ಸ್ತ್ರೀ ವಿದ್ಯಾಭಿವೃದ್ಧಿ ವಿಷಯದಲ್ಲಿ ಉಚಿತವೆಂದು ತೋರಿದ ಕೆಲಸಕ್ಕೆ ಈ ಹಣವನ್ನು ವಿನಿಯೋಗಿಸಬೇಕೆಂದು ತಿಳಿಯಪಡಿಸಿದ್ದಾರೆ.

ಪೇಶಾವರದ ಬಳಿ ಇಬ್ಬರು ಬಾಲಿಕೆಯರು ಆಟವಾಡುತ್ತಿರುವಾಗ ಪರಸ್ಪರ ಕಲಹಮಾಡಿಕೊಂಡು ತಂತಮ್ಮ ಹೆತ್ತವರಿಗೆ ತಿಳಿಸಿದರೆಂದೂ ಆಗ ಉಭಯ ಬಾಲಿಕೆಯರ ತಂದೆಗಳಿಬ್ಬರು ಅವರವರ ಬಂಧುಗಳೊಡನೆ ಜಗಳಮಾಡಿಕೊಂಡು ಕೊನೆಗೆ ಆ ಕಲಹದಲ್ಲಿ ಇಬ್ಬರು ಕೊಲೆಯಾದರೆಂದೂ ವಾರ್ತೆಬಂದದೆ.

ಮುಂಬಾಯಿಯ ಯುದ್ಧಸಹಾಯಕ ಸಭೆಯ ಸ್ತ್ರೀಶಾಖೆಯವರು ಯುದ್ಧಫಂಡಿಗೆ ಚಂದಾಹಣವನ್ನು ಹೊಸ ಮಾದರಿಯಲ್ಲಿ ಶೇಕರಿಸುತ್ತಿರುವರು. ಮುಂಬಾಯಿಯ ಒಂದು ಸುಂದರವಾದ ಚಿತ್ರವನ್ನೊಳಗೊಂಡ ಅರ್ಧಾಣೆಯ ಅಂಚೆಯ ತಲೇ ಚೀಟಿಯಗಲವುಳ್ಳ ಸ್ಟ್ಯಾಂಪುಗಳು ತಯಾರು ಮಾಡಲ್ಪಟ್ಟಿರುವವು. ಅವುಗಳನ್ನು ಅರ್ಧಾಣೆಗೊಂದರಂತೆ ಕೊಂಡುಕೊಳ್ಳುವವರು ಯುದ್ಧಫಂಡಿಗೆ ಶಕ್ತ್ಯನುಸಾರ ಸಹಾಯಮಾಡಿದಂತಾಗುವದಲ್ಲದೆ ಆ ಯುದ್ಧದ ಸ್ಟ್ಯಾಂಪನ್ನು ತಾವು ಬರೆಯುವ ಕಾಗದದ ಹಿಂಭಾಗದಲ್ಲಿ ಅಂಟಿಸಿದರೆ ಅರಗಿನಿಂದ ಮೊಹರುಮಾಡಿದಂತೆ ಕಾಗದಕ್ಕೆ ಅಲಂಕಾರವಾಗಿ ಕಾಣುವದು.

ಹೈದರಾಬಾದಿನಲ್ಲಿ "ಶ್ರೀ ಜೀವರಕ್ಷಾಜ್ಞಾನ ಪ್ರಚಾರಿಣೀ ಸಭಾ" ಎಂಬ ಸಂಘವು ಸ್ಥಾಪಿಸಲ್ಪಟ್ಟಿರುವದು. ದಿನವಹಿ ಹಿಂದೂಸ್ಥಾನದಲ್ಲಿ ಆಹಾರಕ್ಕಾಗಿ ಕೊಲ್ಲಲ್ಪಡುತ್ತಿರುವ ದನ ಕುರಿ ಮುಂತಾದ ಪ್ರಾಣಿಗಳನ್ನು ಕಾಪಾಡುವದು, ಮದ್ಯಪಾನ ಮತ್ತು ಮಾಂಸಾಹಾರ ಮಾಡುವದರಿಂದುಂಟಾಗುವ ಕೆಡಕುಗಳನ್ನು ಜನಗಳಿಗೆ ತೋರಿಸು

ವದು, ಮದ್ಯ ಮಾಂಸ ಭಕ್ಷಣೆಯು ನಿಷಿದ್ಧವಾದುದೆಂಬುದನ್ನು ತೋರಿಸುವ ಗ್ರಂಥಗಳನ್ನು ಅಮೇರಿಕಾ ಮತ್ತು ಇಂಗ್ಲಾಂಡು ದೇಶಗಳಿಂದ ತರಿಸಿ ಜನರಿಗೆ ಉಚಿತವಾಗಿ ಕೊಡುವದು, ಮೂಕ ಜಂತುಗಳನ್ನು ಕಾಪಾಡಿ ಸಸ್ಯಾಹಾರದ ಪ್ರಯೋಜನಗಳನ್ನು ಜನಗಳಿಗೆ ಶಾಸ್ತ್ರೀಯವಾದ ಉದಾಹರಣೆಗಳಿಂದ ತೋರಿಸುವದೂ ಇವೇ ಈ ಸಂಘದ ಮುಖ್ಯ ಉದ್ದೇಶಗಳಾಗಿರುವವು.

ಮುಂಬಾಯಿ ತಾತಾಕಂಪೆನಿಯವರು ಇನ್ನು ಕೆಲವು ನೂತನ ಪರಿಶ್ರಮಗಳನ್ನು ಇಷ್ಟರಲ್ಲೇ ಆರಂಭಿಸತಕ್ಕವರಿದ್ದಾರೆ. ಅವುಗಳಲ್ಲೆಲ್ಲಾ ಮೊದಲನೇಯದು "ಹೈಡ್ರೋ ಎಲೆಕ್ಟ್ರಿಕ್ ಯಂತ್ರಾಲಯ" ಆಗಿರುತ್ತದೆ. ಈ ಕಂಪೆನಿಯವರು ಇದಕ್ಕೆ ಮೊದಲೇ ಲೋನಾಳಿಯ ಹತ್ತರ ಮಹತ್ತರವಾದ ಜಲಾಶಯವನ್ನು ನಿರ್ಮಿಸಿ ಅದರಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ಮುಂಬಾಯಿ ಪಟ್ಟಣದ ಅನೇಕ ಯಂತ್ರಾಲಯಗಳಿಗೂ ದೀಪಗಳಿಗೂ ಒದಗಿಸುತ್ತಾರೆ. ಈಗ ೨ ಕೋಟಿಯ ಮೇಲೆ ವೆಚ್ಚ ಮಾಡಿ ಮತ್ತೊಂದು ವಿದ್ಯುಚ್ಛಕ್ತಿ ಜಲಾಶಯವನ್ನು ಕಟ್ಟಿಸಿ ೬೦ ಸಾವಿರ ಕುದುರೆ ಬಲದ ವಿದ್ಯುಚ್ಛಕ್ತಿಯನ್ನು ಹುಟ್ಟಿಸುವವರಾಗಿದ್ದಾರೆ. ಇದು ಅಂದೇರಿ ಎಂಬ ಕಡೆ ನಿರ್ಮಿಸಲ್ಪಡುತ್ತದೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಗವರ್ನರ ಪ್ರಭುಗಳವರು ಮಲಬಾರಿನ ಕಾನೂರು ಮತ್ತು ಬೇಪುರದಲ್ಲಿರುವ ಸರಕಾರದ ಮೀನು ಕಾರ್ಖಾನೆಗಳನ್ನು ಸಂದರ್ಶಿಸುವ ಸಂದರ್ಭದಲ್ಲಿ ಬಹುಮಾನಪಟ್ಟ ಕಾವಲಪುರ ಮೂಪಿಲ್ ನಾಯರರು ಗವರ್ನರ ಪ್ರಭುಗಳನ್ನು ತನ್ನ "ಕೊಟ್ಟಾರಾಮ್" ಬಂಗ್ಲೆಗೆ ಆಮಂತ್ರಿಸುತ್ತಾರೆ.

ಇದೇ ತಾ. ೨೩-೨೪ರಲ್ಲು ತಂಜಾವೂರಿನ ಡಿಸ್ಟ್ರಿಕ್ಟ್ ಕಾನ್ಫರೆನ್ಸ್ ಮದ್ರಾಸ್ ಹೈಕೋರ್ಟು ವಕೀಲರಾದ ಮ| ರಾ| ಸಿ. ಪಿ. ರಾಮಸ್ವಾಮಿ ಅಯ್ಯರರ ಅಧ್ಯಕ್ಷತೆಯಲ್ಲಿ ಕೂಡಿಬಂದಿರುತ್ತದೆ. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮ| ರಾ| ಬಿ. ಎಸ್. ನಟರಾಜ ಶಾಸ್ತ್ರಿಯವರು ಸ್ವಾಗತ ಭಾಷಣದಲ್ಲಿ ಮಿಶ್ಯನ್ ಶಾಲೆಗಳು ಹೆಚ್ಚಾಗಿಹೋಗಿರುವ ಈ ಕಾಲದಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸುವರೆ ಖಾಸಗಿ ಕಮಿಟಿಯವರಿಗೆ ಇರುವ ಕಷ್ಟಗಳನ್ನೂ ಕನ್ನಂಬಾಡಿ ಜಲಾಶಯ, ತಂಜಾವೂರಿನಲ್ಲಿ ತಿರಿಗಿ ಆಗಲಿಕ್ಕಿರುವ ಸೆಟ್ಲ್‌ಮೆಂಟ ಮತ್ತು ರೈಲ್ವೇ ಪ್ರಯಾಣಿಕರಿಗಾಗುವ ತೊಂದರೆ ಇತ್ಯಾದಿಗಳನ್ನೂ ಕಾಲೋಚಿತ ಮಾತುಗಳಿಂದ ತಿಳಿಯಪಡಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಹಿಂದೂಸ್ಥಾನದಲ್ಲಿ ಹಿಂದೆ ಇದ್ದ ಪಂಚಾಯತಿ ಪದ್ಧತಿಯನ್ನು ಪುನರುಜ್ಜೀವಿಸುವ ಅವಶ್ಯಕತೆಯನ್ನೂ ತಂಜಾವೂರಿನಲ್ಲಿ ಗ್ರಾಮಗಳಲ್ಲಿ ತಕ್ಕ ರಸ್ತೆಗಳಿಲ್ಲದೆ ಇರುವದರಿಂದ ಜನರಿಗೆ ಉಂಟಾಗುವ ಕಷ್ಟ ನಷ್ಟಗಳನ್ನೂ ಕಾಲೋಚಿತ ಮಾತುಗಳಿಂದ ವಿವರಿಸಿದರು. ಮರುದಿನದ ಸಭೆಯಲ್ಲಿ ಲೋಕಲ್ ಬೋರ್ಡು, ಪೋಲಿಸ್ ಇಲಾಖೆ, ರೈಲ್ವೇ ಸಂಬಂಧವಾಗಿ ಪ್ರಯಾಣಿಕರಿಗಿರುವ ತೊಂದರೆಗಳು, ಮುನ್ಸಿಪಾಲ್ ಖಾತೆಯಲ್ಲಿರುವ ಕೆಲವು ಬದಲಾವಣೆಗಳು, ವಿದ್ಯಾಭ್ಯಾಸ,—ಈ ಮೊದಲಾದ ವಿಷಯಗಳಲ್ಲಿ ಕೆಲವು ನಿರ್ಣಯಗಳು ಉಂಟಾದವು.

ದಕ್ಷಿಣ ಕನ್ನಡ.

ಕಟಪಾಡಿ:— ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಎಲಿಮೆಂಟರಿ ಶಾಲೆಯಲ್ಲಿ ೨೩-೯-೧೬ರಲ್ಲು ಕಾರ್ಕಳ ಸಬ್ ರೇಂಜ್ ಶಾಲೆಗಳ ಪೈಕಿ ಈ ಸೆಂಟರಿನ ಉಪಾಧ್ಯಾಯರ ಸಭೆಯು ಕೂಡಿತು. ಈ ಸಭೆಯ ಉದ್ದೇಶವಾಗಿ ಬಂದ ಕಾರ್ಕಳ ಸಬ್ ರೇಂಜಿನ ಶಾಲೆಗಳ ಸುಪರ್‌ವೈಸರರಾದ ಮ| ರಾ| ರಾಮಚಂದ್ರ ಕಾಮತ್ ರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಕಾಪು ಶಾಲೆಯ ಹೆಡ್‌ಮಾಸ್ತರರವರು ಕಳೆದ ಸಭೆಯ ವರದಿಯನ್ನು ಓದಿದರು. ಆ ದಿನದ ಸಭೆಯಲ್ಲಿ ಎತ್ತಬೇಕಾದ ಸಂಗತಿಗಳಲ್ಲಿ ೨ ಸಂಗತಿಗಳು ಪ್ರಾಮುಖ್ಯವಾದವುಗಳು. ಬಾಲಕ ದರ್ಜೆಯ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಹ್ಯಾಗೆ ಮಾಡುವದು, ಆ ದರ್ಜೆಯಲ್ಲಿ ಮಕ್ಕಳು ವರ್ಷದಲ್ಲಿ ಪ್ರತಿ ತಿಂಗಳಲ್ಲಿ ಎಂಬಂತೆ ಅಗ್ಗಾಗ್ಯೆ ಸೇರುವದರಿಂದ ಅವರಿಗೆ ಹೇಗೆ ಕಲಿಸಬಹುದು, ಮತ್ತು ಬಾಲಕ ದರ್ಜೆ ಮಕ್ಕಳಿಗೆ ಮೊದಲು ಸ್ವರಾಕ್ಷರಗಳು ಮತ್ತು ವ್ಯಂಜನಾಕ್ಷರಗಳು ಕಲಿಸುವದು ಸುಲಭವೋ? ಯಾ ಈಗಿನ ವಾಚದ ಪುಸ್ತಕಗಳಲ್ಲಿರುವಂತೆ ವಸ್ತುಗಳನ್ನು ತೋರಿಸಿ ಕಲಿಸುವದು ಸುಲಭವೋ ಎಂಬದು ಒಂದು. ಲೈಬ್ರೇರಿ ಪುಸ್ತಕಗಳನ್ನು ಉಪಾಧ್ಯಾಯರು ಹ್ಯಾಗೆ ಉಪಯೋಗಿಸಬಹುದು ಎಂಬದು ಮತ್ತೊಂದು. ಈ ೨ ಸಂಗತಿಗಳಲ್ಲಿ ೧ನೇ ಸಂಗತಿಯನ್ನು ಕಾಪು ಶಾಲೆಯ ಮುಖ್ಯ ಉಪಾಧ್ಯಾಯರೂ ಕಟಪಾಡಿ ಶಾಲೆಯ ಮುಖ್ಯ ಉಪಾಧ್ಯಾಯರೂ ತಾವು ಬರೆದು ತಯಾರಿಸಿದ ನೋಟ್ಸುಗಳನ್ನು ಓದಿಹೇಳಿದರು. ಅದನ್ನು ಕುರಿತು ಅಟಬಾಡಿ ಮಿಶ್ಯನ್, ಪಾದುರು ಮಿಶ್ಯನ್, ಪಾಂಗಾಳ ಹಿಂದು, ಕಟಪಾಡಿ ಗರ್ಲ್ಸ್ ಈ ಸ್ಕೂಲುಗಳ ಮುಖ್ಯ ಉಪಾಧ್ಯಾಯರು ತಮಗೆ ತೋರಿದ ಸಂಗತಿಗಳನ್ನು ಚರ್ಚೆ ಮೂಲಕ ದೃಢೀಕರಿಸಿದರು. ನಂತರ ಅಧ್ಯಕ್ಷರು ಎದ್ದುನಿಂತು ಅಕ್ಷರಗಳನ್ನು ಮಕ್ಕಳಿಗೆ ಕಲಿಸುವ ಸಮಯದಲ್ಲಿ ಪ್ರಾಕೃತ ಕ್ರಮವಾದ ಹ್ಯಾಗೆಯಲ್ಲಿ ಕಲಿಸುವದು ಚಲೋದು, ಈ ಕ್ರಮದಿಂದ ಬರಹವು ಒಳ್ಳೆಯದಾಗುವದೆಂದೂ ಬಾಲಕ ದರ್ಜೆಯ ಮಕ್ಕಳಿಗೆ ಅಕ್ಷರಗಳು ಕಲಿಸಿದರ ಕುರಿತು ಒಂದು ಡೈರಿಯನ್ನು ತಯಾರಿಸುವದು ಉಚಿತವೆಂತಲೂ ತಮ್ಮ ಅರ್ಥಗರ್ಭಿತವಾದ ಭಾಷಣದಲ್ಲಿ ಹೇಳುವವರಾದರು. ಈ ವಿಷಯಗಳು ಸಂಪೂರ್ಣವಾಗಿ ಚರ್ಚಿಸುವರೆ ಬರುವ ತಾ. ೪-೧೧-೧೬ನೇ ದಿವಸ ಕಾಪು ಬೋರ್ಡು ಶಾಲೆಯಲ್ಲಿ ಸಭೆ ಸೇರಬೇಕಾದಿಯೂ ಆ ದಿವಸ ಸಭೆಗೆ ಉಡುಪಿ ರೇಂಜಿನ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರವರೇ ಅಧ್ಯಕ್ಷಸ್ಥಾನವನ್ನು ಅಲಂಕರಿಸುವ ಹಾಗೆ ಅವರನ್ನು ವಿಜ್ಞಾಪಿಸಿಕೊಳ್ಳಬೇಕೆಂತಲೂ ಬಹಳ ದೂರವಿರುವ ಉಪಾಧ್ಯಾಯರ ವಿಷಯದಲ್ಲಿ ೨ ಸೆಂಟರುಗಳಾಗಿ ಏರ್ಪಡಿಸುವ ಏಲೆವಾರಿಯನ್ನು ಮಾಡಬೇಕಾಗಿಯೂ ಸಭೆಯಲ್ಲಿ ಸೂಚಿಸೋಣಾಗಿ ಈ ದಿನದ ಸಭೆಯು ಅಂತ್ಯವಾಯಿತು.

ಮಂಗಳೂರು.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಕಳೆದ ತಿಂಗಳಲ್ಲಿ ೩೭೭೧ ಜನನವೂ ೨೪೮೮ ಮರಣವೂ ಆಗಿರುವದು. ಈ ಪೈಕಿ ಜನನ—ಉಡುಪಿ ತಾಲೂಕು ಗಂಡು ೩೮೩; ಹೆಣ್ಣು ೩೮೭=೭೭೦; ಕುಂದಾಪುರ ತಾಲೂಕು ಗಂಡು ೨೧೨; ಹೆಣ್ಣು ೨೧೨=೪೨೪; ಕಾರ್ಕಳ ಗಂಡು ೧೬೯; ಹೆಣ್ಣು ೧೯೯=೩೬೮; ಮಂಗಳೂರು ಗಂಡು ೩೩೪; ಹೆಣ್ಣು ೩೫೦=೬೮೪; ಉಪ್ಪಿನಂಗಡಿ ಗಂಡು ೨೭೪; ಹೆಣ್ಣು ೨೫೩=೫೨೭; ಕಾಸರಗೋಡು ಗಂಡು ೪೨೨; ಹೆಣ್ಣು ೪೦೮=೮೩೦; ಮಂಗಳೂರು ಮುನಿಸಿಪಾಲಿಟಿ ಗಂಡು ೮೭; ಹೆಣ್ಣು ೮೧=೧೬೮; ಒಟ್ಟು ಜನನ—ಗಂಡು ೧೯೦೧; ಹೆಣ್ಣು ೧೮೭೦=೩೭೭೧. ಮರಣ ಸಂಖ್ಯೆ—ಮಂಗಳೂರು ತಾಲೂಕು ಗಂಡು ೨೦೪; ಹೆಣ್ಣು ೧೭೩=೩೭೭; ಉಡುಪಿ ಗಂಡು ೨೧೭; ಹೆಣ್ಣು ೧೮೦=೩೯೭; ಕುಂದಾಪುರ ಗಂಡು ೧೯೫; ಹೆಣ್ಣು ೧೪೭=೩೪೨; ಕಾರ್ಕಳ ಗಂಡು ೧೫೮; ಹೆಣ್ಣು ೧೭೫=೩೩೩; ಉಪ್ಪಿನಂಗಡಿ ಗಂಡು ೨೨೫; ಹೆಣ್ಣು ೨೨೧=೪೪೬; ಕಾಸರಗೋಡು ಗಂಡು ೨೦೨; ಹೆಣ್ಣು ೧೮೩=೩೮೫; ಮುನಿಸಿಪಾಲಿಟಿ ಗಂಡು ೫೩; ಹೆಣ್ಣು ೬೪=೧೧೭; ಒಟ್ಟು ಮರಣ ಗಂಡು ೧೩೫೫; ಹೆಣ್ಣು ೧೧೩೩=೨೪೮೮.

ಆಗೋಸ್ತು ತಿಂಗಳಲ್ಲಿ ಮದ್ರಾಸ್ ಆಸ್ಪತ್ರಿ ಹಡಗ ಫಂಡಿಗೆ ಮ| ರಾ| ರಾವ್ ಬಹದ್ದೂರ್ ಎನ್ ಸುಬ್ಬರಾವ್ ರೂ. ೮; ಮ| ರಾ| ಎ. ಶ್ರೀನಿವಾಸ ಪೈ ರೂ. ೪; ಮ| ರಾ| ಎಮ್. ಮುಕುಂದರಾವ್ ಮತ್ತು ಎಮ್. ಎನ್. ಪ್ರಭು ರೂ. ೩; ಮ| ರಾ| ಕೆ. ಪಿ. ರಾಮರಾವ್ ರೂ. ೨; ಮ| ರಾ| ಎಮ್. ನೌರೋಜಿ ರೂ. ೫; ಮ| ರಾ| ಗೋಲ್ಲರಕೇರಿ ಕೃಷ್ಣರಾವ್ ರೂ. ೧; ಮ| ರಾ| ರಾವ್ ಬಹದ್ದೂರ್ ಆರ್ ರಾಮರಾವ್ ರೂ. ೧; ಮ| ರಾ| ಎನ್. ಜಿ ಸುವರ್ಣ ರೂ. ೧; ಈ ಪ್ರಕಾರ ವಂತಿಗೆ ಕೊಟ್ಟಿರುವರು.

ಮಧುರೆಯಲ್ಲಿ ಆಸಿಸ್ಟಾಂಟ ಸರ್ಜನರಾಗಿದ್ದ ಮ| ರಾ| ಡಾಕ್ಟರ್ ಕೆ. ವಿಟ್ಟಲ್‌ರಾವ್ ಎಲ್. ಎಮ್. ಎಸ್ ರವರು ಇದೇ ತಾ. ೬ರಲ್ಲು ಪ್ಲೇಗುಬೇನೆಯಿಂದ ಮೃತರಾದರೆಂತ ತಿಳಿದು ವಿಷಾದಿಸುತ್ತೇವೆ. ಇದೇ ತಾ. ೧೧ ರಲ್ಲು ಸೀಲೋನಿನಿಂದ ಮಧುರೆಗೆ ಬಂದಿದ್ದ ೩೦ ವರ್ಷದ ಹೆಂಗಸು ಮಧುರಾ ಮುನ್ಸಿಪಾಲ್ ಆಸ್ಪತ್ರಿಯ ಒಳರೋಗಿಯಾಗಿ ಸೇರಿಸಲ್ಪಟ್ಟಳು. ಅವಳ ತೊಡೆಯ ಮೇಲೆ ಒಂದು ಬಾವು ಇತ್ತು. ಆದರೆ ಅದು ಪ್ಲೇಗು ಎಂತ ಅನುಮಾನಪಡಲು ಆ ಹೆಂಗಸಿಗೆ ಜ್ವರವಾಗಲೀ ಇತರ ಯಾವ ಚಿನ್ಹೆಗಳಾಗಲೀ ಇರಲಿಲ್ಲ. ಅವಳನ್ನು ಆಸ್ಪತ್ರಿಗೆ ಸೇರಿಸಿಕೊಂಡ ನಂತರ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರಾದ ಮೇಜೊರ್ ಡಿ. ಜಿ. ರಾಯಿ. ಐ. ಎಮ್. ಎಸ್‌ರವರು ಅವಳನ್ನು ಪರೀಕ್ಷಿಸಿ ಅವಳಲ್ಲಿ ಪ್ಲೇಗಿನ ಕುರುಹುಗಳು ಕಾಣುವದಿಲ್ಲವಾದರೂ ಬಹುಶ್ಯಾ ಅದು ಪ್ಲೇಗು ಆಗಿರಬಹುದೆಂತ ಅಭಿಪ್ರಾಯಪಟ್ಟು ಅವಳನ್ನು ಅತಿ ಜಾಗರೂಕತೆಯಿಂದ ನೋಡಿಕೊಳ್ಳಲು ಲೇಡಿ ದಾಕ್ತರರಿಗೆ ಆಜ್ಞಾಪಿಸಿದರು. ಹಾಗೆಯೇ ಅವಳನ್ನು ಬಹಳ ಜೋಪಾಸನೆಯಿಂದ ನೋಡಿಕೊಂಡರು. ದಿನವೆಲ್ಲಾ ಜ್ವರವಿರಲಿಲ್ಲ. ಸಾಯಂಕಾಲ ಮಾತ್ರ ಸ್ವಲ್ಪ ಜ್ವರ ಇತ್ತು. ಮರುದಿನ ಬೆಳಿಗ್ಗೆ ಅವಳು ರಕ್ತಕಾರಿದಳು. ಆದರೆ ಅವಳು ತಾನು ಹಿಂದೆಯೂ ರಕ್ತಕಾರಿದ್ದೇನೆಂತ ಹೇಳಿದಳು. ಡಾಕ್ಟರ್ ರಾಯಿರವರು ಕೂಡಲೇ ಅವಳನ್ನು ಶೆಡ್ಡಿಗೆ ಕಳುಹಿಸಿಕೊಟ್ಟರು. ಅವಳು ಕೆಲವು ತಾಸಿನ ನಂತರ ಸತ್ತುಹೋದಳು. ಅವಳು ಯಾವ ಕಾರಣದಿಂದ ಮರಣಹೊಂದಿದಳೆಂಬದನ್ನು ಪರೀಕ್ಷಿಸುವ ಉದ್ದೇಶದಿಂದ ಡಾಕ್ಟರ್ ಕೆ. ವಿಟ್ಟಲ್‌ರಾವ್‌ರವರು ಅವಳ

ಶವಕ್ಕೆ ಡಿಸ್ಟ್ರಿಕ್ಟ್ ಸರ್ಜನರ ಎದುರಿನಲ್ಲಿ ಶಸ್ತ್ರಪ್ರಯೋಗ ಮಾಡಿ ಬಾವನ್ನು ತೆಗೆದು ಪರೀಕ್ಷಿಸಿದ್ದಲ್ಲಿ ಪ್ಲೇಗು ರೋಗಾಣುಗಳು ಅದರಲ್ಲಿ ಇದ್ದವು ಎಂತ ತಿಳಿದು ಬಂತು. ದೈವವಶಾತ್ ಮರುದಿನ ಡಾಕ್ಟರ್ ವಿಟ್ಟಲ್‌ರಾವರಿಗೆ ಜ್ವರ ಹಿಡಿಯಿತು. ೫ನೇ ದಿವಸದಲ್ಲಿ ಜ್ವರ ಸ್ವಲ್ಪ ಗುಣವಾಗುವಂತೆ ತೋರಿತು. ಆದರೆ ಆರನೇ ದಿವಸದಲ್ಲಿ ಜ್ವರ ಕಠಿಣವಾಗಿ ತಾ.೨೦ನೇ ಬೆಳಿಗ್ಗೆ ಕಾಲವಾದರು. ಡಾಕ್ಟರ್ ವಿಟ್ಟಲ್‌ರಾವರವರು ನಮ್ಮ ಜಿಲ್ಲೆಯವರು. ೧೯೧೧ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದರು. ಅವರಿಗೆ ೩೫ ವರ್ಷ ವಯಸ್ಸು. ವೈದ್ಯವಿದ್ಯೆಯಲ್ಲಿ ನಿಪುಣರಾಗಿ ಜನಪ್ರೀತರಾಗಿದ್ದರು. ಅವರಿಗೆ ಮುದೀ ಹೆತ್ತವರೂ, ಯೌವನಸ್ಥೆಯಾದ ಪತ್ನಿಯೂ ಇಬ್ಬರು ಮಕ್ಕಳೂ ಇದ್ದಾರೆ. ಮೆಜರ್ ರಾಯರವರೂ ರೆವಿನ್ಯೂ ಡಿವಿಜನಲ್ ಆಫೀಸರರಾದ ಡಿ. ಆನಂದರಾಯರೂ ಶವಸಂಸ್ಕಾರಕ್ಕೆ ಹಾಜರಿದ್ದರು. ಡಾಕ್ಟರರ ಆಕಸ್ಮಿತ ಮರಣಕ್ಕಾಗಿ ವಿಷಾದಪಡುವ ಪತ್ನಿ ಪುತ್ರರೊಡನೆ ನಾವೂ ಸಹಸಂತಾಪ ಪಡುತ್ತೇವೆ.

ಇಲ್ಲಿಯ "ಯಂಗ್ ಮೆನ್ಸ್ ಯೂನ್ಯನ್ ಜಿಮ್ನಾಸಿಯಂ" ಯುವಕ ತಾಲೀಮ್‌ಖಾನೆಯವರು ಇದೇ ಬರುವ ಒಕ್ಟೋಬರ ತಾ. ೧ನೇ ಆದಿತ್ಯವಾರ ಹಗಲು 3 ಘಂಟೆಯಿಂದ 6 ಘಂಟೆಯ ತನಕ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ತಮ್ಮ ಪ್ರಕೃತಿ ಶಕ್ತಿಯನ್ನು ಪ್ರದರ್ಶಿಸತಕ್ಕವರಿದ್ದಾರೆ. ಈ ಯುವಕ ತಾಲೀಮುಖಾನೆಯವರು ತಮ್ಮ ಕಳೆದ ವಾರ್ಷಿಕೋತ್ಸವ ದಿನ ತಮ್ಮ ಪ್ರಕೃತಿ ಶಕ್ತಿಯನ್ನು ಪ್ರದರ್ಶಿಸಿ ಜನಸಾಮಾನ್ಯರ ಹೊಗಳಿಕೆಗೆ ಪಾತ್ರರಾಗಿದ್ದ ವಿಷಯವು ಸರ್ವರಿಗೂ ತಿಳಿದಿದೆ. ಈಗ ತಾನೇ ಈ ತಾಲೀಮ್‌ಖಾನೆಯವರು ಹೊಸ ಹೊಸ ಕಸರತುಗಳನ್ನು ಮುಖ್ಯವಾಗಿ ಪ್ರಕೃತಿ ಶಕ್ತಿಯನ್ನು ಮತ್ತೂ ಹೆಚ್ಚಿಸಿಕೊಂಡು ತಮ್ಮ ತಾಲೀಮ್‌ಖಾನೆಯನ್ನೂ ಅದರೊಡನೆ ಪಟ್ಟಣಿಗ ಯುವಕರ ದೇಹಶಕ್ತಿಯನ್ನೂ ಅಭಿವೃದ್ಧಿ ಮಾಡಬೇಕೆಂದಿರುವದರಿಂದ ಪಟ್ಟಣಿಗರು ಈ ಸಂಸ್ಥೆಗೆ ತಮ್ಮ ಉದಾರಾಶ್ರಯವನ್ನು ಕೊಡಬೇಕಾಗಿ ವಿಜ್ಞಾಪಿಸೋಣಾಗಿದೆ. ಈ ಸಂಸ್ಥೆಗೆ ಮ| ರಾ| ಎಸ್. ಸುವರ್ಣ ಬಿ. ಎ., ಬಿ. ಎಲ್‌ರವರು ಒನರರಿ ಸೆಕ್ರಟರಿಗಳಾಗಿರುವರು.

ಸೆಕೆಂಡ್ ಗ್ರೇಡ್ ಕಾಲೇಜುಗಳನ್ನು ಸಂದರ್ಶಿಸಿ ವಿಚಾರ ನಡಿಸುವದಕ್ಕೆ ಮದ್ರಾಸ್ ಸೆಂಡಿಕೇಟಿನವರಿಂದ ನೇಮಿಸಲ್ಪಟ್ಟ ಕಮಿಷನಿನವರು ನಿನ್ನೆಯ ದಿನ ಮೈಲಿನಲ್ಲಿ ಇಲ್ಲಿಗೆ ಚಿತ್ತೈಸಿರುವರು. ಈ ಕಮಿಷನಿಗೆ ಮೆ| ಮಾರ್ಕ ಹಂಟರರವರು ಚೇಯರ್ಮೇನರಾಗಿ ಇರುವರು. ರೆವರೆಂಡ್ ಮೆಕ್‌ಫೈಲ್, ರೆವರೆಂಡ್ ಡಬ್ಲ್ಯು. ಮೆಸ್ಟನ್, ರೆವರೆಂಡ್ ಪ್ರುಷೆಟ್, ಮ| ರಾ| ಎಸ್. ಜಿ. ಕೆ. ರಾಮುಣ್ಣಿ ಮೆನೂನ್, ಮ| ರಾ| ಸಿ. ಅನಂತ ಪದ್ಮನಾಭರಾವ್, ಮ| ರಾ| ಎಮ್. ಶೇಷಗಿರಿ ಪ್ರಭು,—ಇವರು ಈ ಕಮಿಷನಿನ ಮೆಂಬರರಾಗಿರುತ್ತಾರೆ.

ರೆವಿನ್ಯೂ ಬೋರ್ಡಿನ IV ಮೆಂಬರರಾಗಿದ್ದ ಮೆ| ಗಿಲ್‌ಮ್ಯಾನರು ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟದ್ದರಿಂದ ಮೆ| ಕೌಚ್‌ಮೇನ್ ದೊರೆಗಳವರು ರೆವಿನ್ಯೂ ಬೋರ್ಡಿನ IV ಮೆಂಬರರಾಗಿ ನೇಮಿಸಲ್ಪಡಲಿಕ್ಕಿದ್ದಾರೆಂತ ತಿಳಿದುಬರುತ್ತದೆ.

"ಕೊರೊನೇಶನ್ ಕಪ್ಸ್" ಇದರ ಕ್ರಿಕೆಟ ಪಂದ್ಯಾಟವು ಪ್ರಾರಂಭವಾಗಿ ಎಕ್ಸ್ ಎಲೋಸಿಯನ್ ಪಂಗಡದವರನ್ನು ಹಿಂದೂ ಪಂಗಡದವರು ಸೋಲಿಸಿರುವರು. ಪ್ರಕೃತ ಪಂದ್ಯಾಟವು ಹಿಂದೂ ಪಂಗಡದವರಿಗೂ ಎಮ್. ಸಿ. ಸಿ. ಪಂಗಡದವರಿಗೂ ನಡಿಯುತ್ತಿರುವದು.

ಇಲ್ಲಿಯ ಬಾಸೆಲ್ ಮಿಶ್ಯನ್ ಶಾಲೆಯಲ್ಲಿ ಈ ಶಾಲೆಯ ಉಪಾಧ್ಯಾಯರಾದ ಮ| ರಾ| ವಿ. ನಟರಾಜನ್, ಬಿ. ಎ. ಯವರ ಮೇಲ್ವಿಚಾರದಲ್ಲಿ ಅಕ್ಷರಹೀನರಾದ ಕೂಲಿಕೆಲಸದವರಿಗೂ ಇತರರಿಗೂ ಸಾಯಂಕಾಲ ಗಂಟೆ ೬-೩೦ರಿಂದ ಶಿಕ್ಷಣವನ್ನು ಉಚಿತವಾಗಿ ಕೊಡೋಣಾಗುವ ಏರ್ಪಾಡು ಮಾಡಿರುವರೆಂಬುದಾಗಿ ತಿಳಿಯುತ್ತೇವೆ ಈ ಏರ್ಪಾಡಿನಿಂದ ಜನರಿಗೆ ಪ್ರಯೋಜನವು ದೊರಕುವಂತೆ ವಿದ್ಯಾಪ್ರೋತ್ಸಾಹಿಗಳು ಪ್ರೋತ್ಸಾಹವನ್ನು ಕೊಡಬೇಕಾಗಿ ವಿಜ್ಞಾಪಿಸೋಣಾಗಿರುವದು.

ಬರುವ ಜನವರಿ ತಿಂಗಳ ಪ್ರಾರಂಭಕಾಲದಲ್ಲಿ ಈ ಜಿಲ್ಲೆಯ ವಿದ್ಯಾರ್ಥಿಗಳ ಪರಿಷತ್ತು ಕೂಡುವದೆಂಬುದಾಗಿ ತಿಳಿಯುತ್ತೇವೆ. ಪರಿಷತ್ತಿಗೆ ಬೇಕಾದ ವ್ಯವಸ್ಥೆಯನ್ನು ಜಿಲ್ಲೆಯ ವಿದ್ಯಾರ್ಥಿಗಳು ನಡಿಸಲು ಪ್ರಾರಂಭಿಸಿರುವರು. ರಾ| ಕೆ. ಗೋಪಾಳಕೃಷ್ಣರಾವ್ ಮತ್ತು ರಾ| ಬಿ. ನಾರಾಯಣ ಬಾಳಿಗರವರು ಈ ಒಗ್ಗೆ ಕಾರ್ಯದರ್ಶಿಗಳಾಗಿಯೂ ರಾ| ಎಮ್. ನರಸಿಂಹ ಕಿಣಿಯವರು ಟ್ರೆಜರರಾಗಿಯೂ ಆರಿಸಲ್ಪಟ್ಟಿರುವರು. ಇಲ್ಲಿರುವ ಶಾಲಾ ಕಾಲೇಜುಗಳ ಮುಖ್ಯ ಉಪಾಧ್ಯಾಯರುಗಳನ್ನು ಮತ್ತು ಮ| ರಾ| ಕಾರ್ನಾಡ ಸದಾಶಿವರಾವ್, ಮ| ರಾ| ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರ, ಡಾಕ್ಟರ್ ವರ್ಗೀಸ್, ರಾ| ರಾವ್ ಬಹದ್ದೂರ್ ಎನ್. ಸುಬ್ಬರಾವ್, ರಾ| ಅ. ಶ್ರೀನಿವಾಸ ಪೈ, ರಾ| ಎಮ್. ಮಾಧವರಾವ್, ರಾ| ಎ. ಬಾಲಕೃಷ್ಣ ಸೆಟ್ಟಿ, ರಾ| ಸಿ. ಎಲ್. ಕಲಾಸೊ. ಡಾಕ್ಟರ್ ಎಲ್. ಪಿ. ಫೆರ್ನಾಂದೀಸರು ಇನ್ನೂ ಹಲವು ಗ್ರಹಸ್ಥರನ್ನು ಈ ಪರಿಷತ್ತಿನ ಎಡ್ವೈಸರಿ ಬೋರ್ಡಿನ ಮೆಂಬರರಾಗಬೇಕೆಂದು ವಿಜ್ಞಾಪಿಸಿಕೊಳ್ಳಲು ನಿಶ್ಚಯಿಸಿರುವರು. ಈ ಪಟ್ಟಣದಲ್ಲಿಯೂ ಜಿಲ್ಲೆಯ ಇತರ ಕಡೆಗಳಲ್ಲಿಯೂ ಇದಕ್ಕೆ ಬೇಕಾದ ಚಂದಾ ಎತ್ತಲು ವಿದ್ಯಾರ್ಥಿಗಳ ಕಮ್ಮಿಟಿಗಳು ಏರ್ಪಡಿಸಲ್ಪಟ್ಟಿರುವವು. ರಾ| ಕೆ. ಗೋಪಾಲಕೃಷ್ಣರಾವ್ ಮತ್ತು ರಾ| ಉಪೇಂದ್ರ ಕಿಣಿಗಳು ಉಡುಪಿ ಮತ್ತು ಕುಂದಾಪುರ ಕಡೆಗಳಿಗೆ ಚಂದಾ ಹಣವನ್ನು ಕೂಡಿಸಲು ಸದ್ಯದಲ್ಲಿಯೇ ಹೊರಟು ಹೋಗುವರು.

ರಾ| ಡಾಕ್ಟರ್ ಎಲ್. ಪಿ. ಫೆರ್ನಾಂದಿಸ್ ಮತ್ತು ರಾ| ಬಿ. ಮಹಾಬಲ ಹೆಗ್ಗಡೆ ಈ ಮುನ್ಸಿಪಲ್ ಕೌನ್ಸಿಲರುಗಳ ಸಹಿಗಳಿಂದ ಚೇಯರ್‌ಮೇನ್ ಪದವಿಗೆ ಡಾಕ್ಟರ್ ರಾವ್‌ಸಾಹೇಬ್ ವರ್ಗೀಸರ ಒಂದೇ ಒಂದು ಉಮೇದ್ವಾರಿಕೆಯು ಇರುವುದೆಂಬುದಾಗಿ ತಿಳಿಯುತ್ತೇವೆ.

ಉಡುಪಿಯಲ್ಲಿ ಬುಧವಾರ ಮಧ್ಯರಾತ್ರೆ ಉಡುಪಿ ಅಷ್ಟಮಠಗಳ ಶ್ರೀಪಾದಂಗಳಲ್ಲೊಬ್ಬರಾದ ಶ್ರೀ ಶೀರೂರು ಮಠದವರು ಮುಕ್ತರಾದರು. ಈ ಮಠಕ್ಕೆ ಬೇಕಾದ ಆಶ್ರಮವು ಕೊಡೋಣಾಗದ್ದರಿಂದ ಸೋದೆ ಶ್ರೀಪಾದಂಗಳವರು ಈ ಮಠದ ವಿಚಾರವನ್ನು ಸಹ ವಹಿಸಿಕೊಳ್ಳುವರು.

ಇಲ್ಲಿಯ ಬ್ರಹ್ಮಸಮಾಜದವರ ನಾಲ್ವತ್ತಾರನೆಯ ವರ್ಷೋತ್ಸಹವು ಇದೇ ಬರುವ ಅಕ್ಟೋಬರ ತಿಂಗಳ ತಾ. ೧ನೇ ಆದಿತ್ಯವಾರದಿಂದ ಪ್ರಾರಂಭವಾಗಿ ೮ನೇ ಅಕ್ಟೋಬರ ಆದಿತ್ಯವಾರ ದಿನ ಅಂತ್ಯವಾಗುವದು. ಈ ಮಹೋತ್ಸವಕ್ಕೆ ಸರ್ವರಿಗೂ ಸುಸ್ವಾಗತವನ್ನಿತ್ತು ಆಮಂತ್ರಣ ಪತ್ರಗಳು ಕೊಡೋಣಾಗಿರುವವು.

ಹಿಂದು ಟ್ರಾನ್ಸಿಟ್ ಕಂಪೆನಿಯವರ ಮೋಟರ್ ಬಸ್ ಸರ್ವಿಸ್ ಮಂಗ್ಲೂರಿನಿಂದ ಬಂಟ್ವಾಳಕ್ಕೂ ಬಂಟ್ವಾಳದಿಂದ ಮಂಗ್ಲೂರಿಗೂ ದಿನಕ್ಕೆ ಎರಡಾವರ್ತಿ ಇದೇ ಬರುವ ಅಕ್ಟೋಬರ ತಿಂಗಳ ಪ್ರಥಮ ವಾರದಲ್ಲಿ ಪ್ರಾರಂಭವಾಗುತ್ತದೆಂತ ನಾವು ಕೇಳುತ್ತೇವೆ.

ಮೆ| ಡಿ. ಮತಾಯಸರವರ ಬೋಳೂರು ಹಂಚುಕಾರ್ಖಾನೆಯಿಂದ ಹಿತ್ತಾಳೆಯ ಇಂಜಿನ್ ಸ್ಕ್ರಾಪಿನನ್ನು ಕಳವು ಮಾಡಿ ಪೇಟೆಗೆ ಮಾರಲಿಕ್ಕೆ ತಂದಿದ್ದ ಲುಯಿಸ್ ಪಸಾಂಞಾನಿಗೆ ೩ ವಾರಗಳ ಕಠಿಣ ಸಜಾವಿಧಿಸೋಣಾಗಿರುತ್ತದೆ.

ನೋಟೀಸು.

ಬರುವ ಶುಕ್ರವಾರ "ನವರಾತ್ರಿ" (ವಿದ್ಯಾದಶಮಿ) ಸಂಬಂಧ ಸ್ವದೇಶಾಭಿಮಾನಿ ಆಫೀಸಿಗೆ ರಜೆ ಇರುವದರಿಂದ ಬರುವ ವಾರದ "ಸ್ವದೇಶಾಭಿಮಾನಿ" ಪ್ರಕಟಿಸೋಣಾಗುವದಿಲ್ಲ.

ನೋಟೀಸು.

ಕಾಸರಗೋಡಿನಲ್ಲಿರುವ ಇಸ್ಲಾಮಿಯ ಟೈಲ್ ಕಂಪೆನಿಯವರು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—ಸದರಿ ಹಂಚಿನ ಕಾರ್ಖಾನೆಯಲ್ಲಿ ಅಸಿಸ್ಟಾಂಟ್ ಮೆನೇಜರರಾಗಿದ್ದ "ಎಸ್. ಜೀವೋತ್ತಮ" ಎಂಬವರನ್ನು ಇದೇ ತಾ. 5—9—16ರಿಂದ ಸದರಿ ಕೆಲಸದಿಂದ ಕೆನ್‌ಸಿಲ್ ಮಾಡಿರುತ್ತದೆ.

ಮಂಗಳೂರು, ತಾ. 27-9-16 | C. ABDURAHIMAN & CORAGAPPA. *Managing Proprietors.*

ಜೀನಸು ಧಾರಣೆ.

(ರೂ)

ಮುಸ್ಕುಲಿ ಅಕ್ಕಿ	6—14—0ರಿಂದ	7— 4—0
ಗುಡ್ಡ ,, ,,	6— 6—0	6—12—0
ಊಡು ಸುಗ್ಗಿ ,,	6— 8—0	6—12—0
ಗಾಡಿ ರಾಶಿ ,,	6— 0—0	6— 1—0
ಅವ್ವಲ್ ಬೆಳ್ತಿಗೆ ,,	6— 8—0	7— 0—0
ಗುಡ್ಡ ಬೆಳ್ತಿಗೆ ,,	5—12—0	6— 4—0
ರಂಗೂನು ಬೆಳ್ತಿಗೆ ಗೋಣಿ ೧ರ	9— 6—0	9— 8—0
ಗೋದಿ ಗೋಣಿ ೧ರ	11—12—0	12— 0—0
ಹುರುಳಿ ಗೋಣಿ ೧ರ	6— 2—0	6— 5—0
ಕಡಲೆ ಗೋಣಿ ೧ರ ಬೊಂಬೈ	8—12—0	10— 8—0
ತೊಗರಿ ಗೋಣಿ ೧ರ		11— 4—0
ತೊಗರಿ ಬೇಳೆ ಗೋಣಿ ೧ರ	12— 8—0	14— 8—0
ಉದ್ದು ಗೋಣಿ ೧ರ	10— 8—0	11— 4—0
ಊದುಬೆಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ	4— 8—0	4—14—0
ಕೊಬ್ಬರಿ ಖಂಡಿ ೧ರ	95— 0—0	105—8—0
ಕೊಬ್ಬರಿಹಿಂಡಿ ಖಂಡಿ ೧ರ		20— 0—0
ಎಳ್ಳಿಂಡಿ ಖಂಡಿ ೧ರ ಬೊಂಬೈ	25— 0—0	30—0 —0
ಕೊಬ್ಬರಿ ಎಣ್ಣೆ ಮಣ ೧ರ	7— 0—0	7— 8—0
ಎಳ್ಳೆಣ್ಣೆ ಮಣ ೧ರ(ಕುರಾಸನ)		4—10—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಶಸ್ ಸಕ್ಕರೆ ಮಣ ೧ರ		5— 4—0
ಕಾಫಿ ಖಂಡಿ ೧ರ	225— 0—0	235—0—0
ಹೊಸಬೀಗೋಟು ಖಂಡಿ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—11—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	26— 0—0	27— 0—0
ತಾಂಬ್ರ ಪಾತ್ರೆಗಳು ಮಣ ೧ರ		28— 0—0
ಚೀನಿ ಬೆಳ್ಳಿ ಶೇರು ೧ರ		24— 0—0
ಹಳೆ ಹೆಸರು ಮುಡಿ ೧ರ	5— 4—0	5— 8—0

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ಬಿಕರಿಗೆ ಸಿದ್ಧವಾಗಿರುವದು!!!

ವಿಟ್ಲ ಸಬ್ ರಜಿಸ್ಟ್ರಾರ ಆಫೀಸಿನ ಕ್ಲಾರ್ಕ ಬೋಳಾರ ವಾಸುದೇವಯ್ಯನವರಿಂದ ರಚಿಸಲ್ಪಟ್ಟ

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ಬಿಕರಿಗೆ ಸಿದ್ಧವಾಗಿರುತ್ತವೆ. ಕ್ರಯ ಪ್ರತಿ 1ಕ್ಕೆ 4 ಅಣೆ.

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾದೀತು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಯಲ್ಲಿ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಆದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ। ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ. ಚಾಂಪಿಯನ್ ಅಥ್ಲೆಟಿಕ್ ಏಜನ್ಸಿ, ಮೈಸೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦ ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದ್ವಿಯಂ ರೂಪಾಯಿ ೧ಕ್ಕೆ ೮ ತೊಲೆ, ತೃತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೩ ತೊಲೆ.

ಇದಲ್ಲದೆ ಬೇರೆ ಬೇರೆ ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ಇನಾಮಾಗಿ ಕಳುಹಿಸಲಾದೀತು. ಪೋಸ್ಟು ಕಾರ್ಡ ಬರೆಯಿರಿ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay, BENARES CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇವನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರೆ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರಿ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು, ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ.1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾ[illegible]

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕುವಾಕಿಗೂ ವೈದ್ಯರ ಸಮಯವನು ಕಾದು ಕೊರೆಯಿದುವುದು ನಿಜವಾಗಿಯೂ ತಪ್ಪುವುದು.

ಪಿತ್ತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಟೀನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

SREE SITHA RAGHAVA VAIDYA SALA MYSORE

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಡಬ್ಬಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವ್ಯ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ, 2. ಮೋಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮದರಲ್ಲಿ ಸ್ತ್ರೀಯರ ಋತುಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ಸದಿನಕಟ್ಟಿರಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಶಾಪುಗಳಲ್ಲಿ ದೊರಕುವದು.

ಸಬ್ ಏಜಂಟರು ಬೇಕಾಗಿವೆ.

STANY BROTHERS
Sole Agents,
C. M. C's. Toothache Specific, Mangalore.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ ! ಕಲೆಯಿಲ್ಲ !! ಉರಿಯಿಲ್ಲ !!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡ

ತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಛಳಿಕಾಲ! **(Best Shwals)** ಭಯವಿಲ್ಲ !!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿ

ಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈ ಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಡುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0 ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— ವ್ಯಾರಂ ಅಂಡು ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ!!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ-ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳಿಗೂ ಜಾಡ್ಯಗಳಿಗೂ "ಟೂರಕಬ್" ಇದು ಸಿದ್ಧೌಷಧವಾಗಿರುವದು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಆದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯ ಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಒಂದೇ ಮಾತಿನಿಂದ ಹೇಳುವದಾದರೆ ಊರಕಬ್ಬಿನಲ್ಲಿ ಸವಿ ಒಂದೇ ಇದ್ದರೆ ಈ "ಟೂರಕಬ್ಬಿನಲ್ಲಿ" ಅಮೃತದಷ್ಟು ಸಾಮರ್ಥ್ಯವಿರುವುದು. ಒಂದು ತಿಂಗಳಿಗೆ ಸಾಕಾಗುವ ಈ ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು.

Can be had at—**Electro Homeopathic Dispensary,**
Hampankatta, Mangalore.

"ಅನೇಕಾಂಜನಗಳು ಪ್ರತಿಸೃಷ್ಟಿಯಾಗಿರುವವು."
ಪಂಚಭಾಷೆಗಳಲ್ಲಿರುವ ಚೀಟಿಯನ್ನು ನೋಡಿಕೊಂಡರೆ ಮೋಸವಾಗಲಾರದು.

ಅಮೃತಾಂಜನವೇ ದಿವ್ಯಾಂಜನ.

ಅಮೃತಾಂಜನ ಎಲ್ಲಾ ನೋವಿಗೂ ಸಿದ್ಧೌಷಧ. ತಲೆನೋವು, ಕೀಲುಹೊಡತ, ವಾಯುನೋವು, ಪಕ್ಷವಾತಕ್ಕೆ, ಚಳುಕು, ಊದು, ಪಕ್ಕೆನೋವು, ಚೇಳುಕಡಿತ, ಉಬ್ಬಸ, ಕೆಮ್ಮಲು, ಸೀತ್ಕ, ಹುಣ್ಣು ಮತ್ತು ಎಲ್ಲಾ ತರದ ಜಖಂಗಳಿಗೆ ಅಮೃತಾಂಜನವೇ ಪರಮೌಷಧ. ಸಾವಿರಾರು ಮಂದಿ ಹೊಗಳಿ ಬರಿಯುತ್ತಾರೆ. ಸೊಗಸಾದ ಡಬ್ಬಿ ಸಹಿತ ಕ್ರಯ 0—8—0. 12 ಡಬ್ಬಿಗಳಿಗೆ ಕ್ರಯ ರೂ. 5—0—0. ಪರಸ್ಥಳಗಳಿಗೆ ವಿ. ಪಿ ಯಿಂದಲೂ ರವಾನಿಸುತ್ತೇವೆ.

ಗಜಕರ್ಣ ಮುಲಾಮು ಡಬ್ಬಿ 1ರ ಬೆಲೆ 0—6—0.
ದಂತಮಂಜನ ಡಬ್ಬಿ 1ರ ಬೆಲೆ 0—2—0.

ರಖಮಾಗಿಯೂ ಚಿಲ್ಲರೆಯಾಗಿಯೂ ದೊರೆಯುವ ಸ್ಥಳ—

ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಉಚಿತ! ಕ್ರಯ 5 ರೂ. ಉಳ್ಳ ಇಂಗ್ಲಿಷ್ ವಾಚು. ಉಚಿತ!



ಈ ನಕ್ಷೆಯಲ್ಲಿ ಕಂಡ ಇಂಕೆ ಅದ್ದದೆ ಬರೆಯುವ ಫೌಂಟೆನ್ ಪೇನಾ ಇದಕ್ಕೆ ಹಾಕುವ 1 ಬಾಟ್ಲಿ ಇಂಕೆ ಸಹಿತ ರೂ. 2—2—0. ಇದನ್ನು ತರಿಸಿಕೊಳ್ಳುವವರಿಗೆ ಮೇಲೆ ಹೇಳಿದ 5 ರೂ. ವಾಚು ಸ್ವಲ್ಪ ಕಾಲದವರೆಗೆ ಉಚಿತವಾಗಿ ಕೊಡಲ್ಪಡುತ್ತೆ.

ವಿಳಾಸ:— ಶಂಕರ್ ಕಂಪೆನಿ,
ಸೈದಾಪೇಟೆ, ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮೇಹರಣ ತೈಲ:—ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ರಣಗಳ ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂಠಮಾಲೆ, ಗಡ್ಡೆಗಳು, ಕುಸುಮ ರೋಗ ವ್ರಣಗಳು, ಆಸನ ಪವುತ್ರಗಳು, ಯೋನಿ ವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಘಾಯಗಳು ಅವುಗಳಲ್ಲಿ ಹುಟ್ಟುವ ಹುಳವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಕಲೆ ಸಹ ಪರಿಸಾಫಿ ಚೆನ್ನಾಗಿ ಬೆಳೆಯುವಂತೆ ಮಾಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 3 ಸೀಸೆವರಿಗೂ 5 ಆಣೆ.

ಮಧುರಧ್ವನಿ ಮಾತ್ರೆ:—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಪಷ್ಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಸಾವಿರಾರೆ ಕೇಳಿಗಿಂದಾಗುವಂತೆ ಧ್ವನಿಯು ಹೊರಡುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರೆವಿಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ.—ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಹುಡುಗರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ, ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪು ಹುಟ್ಟಿ ತಂಪನ್ನುಂಟುಮಾಡುವದು. ಅದಲ್ಲದೆ ದೇಹವನ್ನೆಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ 8 ಆಣೆ ವಿ. ಪಿ. ಚಾರ್ಜುಗಳು 2 ಪೆಟ್ಟಿಗೆಗಳವರಿಗೂ 5 ಆಣೆ.

ಸಂಜೀವನ ಮಾತ್ರೆಗಳು:—ಮಕ್ಕಳಿಗೆ ಜ್ವರ, ನರಗಳ ಸೆಳತ, ನಿದ್ರೆ ಬಾರದಿರುವುದು, ಅಧಿಕವಾಗಿ ಹೋಸುವದು, ಭೇಳಿ, ಕೆಮ್ಮಲು, ತಲೆನೋವು, ನೆಗಡಿ ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು: ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ 1ಕ್ಕೆ 10 ಆಣೆ. 1 ಮೊದಲು 6 ಸೀಸೆವರಿಗೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು.

ಮಹಾಗೋರಜನ ಮಾತ್ರೆ:—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮ, ಶಂಕೆ, ಅತಿಸಾರ, ನರಗಳ ಎಳತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು, ಭೇಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರಮಾಡುವುದು. ಸೀಸೆ 1ಕ್ಕೆ 10 ಆಣೆ. ವಿ. ಪಿ. 9 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ,ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲಾ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನದಿ, ತಂಜಾವೂರು.

YOUR CHOICE PLEASE!

ಅನಾರೋಗ್ಯವು ಜೀವನವನ್ನು ದುಃಖಮಯಮಾಡುತ್ತದೆ.

ಯಾವಾಗಲೂ ಯಾವುದಾದರೊಂದು ಕಾಯಿಲೆ ಇರುವುದು, ಜ್ಞಾಪಕಶಕ್ತಿ ಇಲ್ಲದಿರುವುದು, ಶಾರೀರಕಶಕ್ತಿ ಇಲ್ಲದಿರುವುದು, ಶರೀರವು ಬಹು ಕೃಷವಾಗಿರುವುದೇ ಮುಂತಾದುವು ನಮ್ಮನ್ನು ದುಃಖಿತರನ್ನಾಗಿ ಮಾಡುವುದಿಲ್ಲವೇ?

ಜೀವನಾನಂದವಿದ್ದರೆ

ಅದೇ ದುಃಖಮಯ ಜೀವನವನ್ನು ಆನಂದಮಯ ಮಾಡುವುದು. ಅದು ಕೊಡ ಲೀವರ್ ಆಯಿಲ್ಲಿಗಿಂತ 16 ಪಾಲು ಬಲಕೊಡುವಂಥಾದ್ದು. ಅದು ಬಲಹೀನ ಸ್ಥೂಲ ಶರೀರವನ್ನು ಮಾಡುವುದಿಲ್ಲ—ಶಕ್ತಿಮಯ ಮಾಂಸ ಪೇಶಿಗಳನ್ನು ನಿರ್ಮಾಣಮಾಡಿ ಶರೀರಕ್ಕೆ ಅಧಿಕವಾದ ಬಲಕೊಡುತ್ತದೆ. ಅದನ್ನು ರೋಗಿಗಳು, ರೋಗವಿಲ್ಲದವರು; ಮುದುಕರು, ಮಕ್ಕಳು; ಗಂಡಸರು, ಹೆಂಗಸರು; ಕ್ಷೀಣದೇಹಿಗಳೇ ಮುಂತಾದ ಪ್ರತಿಯೊಬ್ಬರೂ ಉಪಯೋಗಿಸಬಹುದು.

ರೋಗವಿಲ್ಲದವರಿಗೆ ಅದು

ಆರೋಗ್ಯವಂತರನ್ನಾಗಿ ಮಾಡಿ ಜ್ಞಾಪಕಶಕ್ತಿ, ಶಾರೀರಕಶಕ್ತಿಯೇ ಮುಂತಾದುವನ್ನುಂಟುಮಾಡಿ ಬೇರೆ ರೋಗಗಳು ಬಾರದ ಹಾಗೆ ಮಾಡುತ್ತದೆ. ಅದು

ರೋಗವಿದ್ದವರಿಗೆ

ಕೆಮ್ಮು, ಉಬ್ಬಸ, ಕ್ಷಯ, ಮೂತ್ರರೋಗಗಳು, ಬಾಲಗ್ರಹ, ನಪುಂಸಕತ್ವ, ಶ್ವಾಸಕೋಶದ ರೋಗಗಳು, ಅನ್ನಕೋಶದ ರೋಗಗಳು, ಅಜೀರ್ಣ, ಮಲಬದ್ಧತೆ, ಮನಸ್ಸಿಗೆ ಬೇಸರವೆನಿಸುವುದು, ಧಾತು ನೀರಾಗುವಿಕೆ, ಚಳಿಜ್ವರ, ದೃಷ್ಟಿ ಮಂದವಾಗುವುದೇ ಮುಂತಾದುವನ್ನೆಲ್ಲ ನಿರ್ನಾಮಮಾಡುತ್ತದೆ.

ಒಂದು ತಿಂಗಳ ಔಷಧಿಗೆ (ಮಕ್ಕಳಿಗಾದರೆ 4 ತಿಂಗಳಿಗಾಗುತ್ತದೆ) ರೂ. 3.
48 ದಿನದ ಔಷಧಿಗೆ (192 ದಿನಗಳಿಗಾಗುತ್ತದೆ) ರೂ. 5.

ಎಲ್ಲೆಲ್ಲೂ ಏಜಂಟರು ಬೇಕು.

ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ನಮ್ಮ ಔಷಧಿಗಳ ಗುಣಗಳು ಎಲ್ಲರಿಗೂ ತಿಳಿಯಲೆಂದು ಅಕ್ಟೋಬರ ತಿಂಗಳ ವರೆಗೆ

ಅಮೃತವಟಿಯನ್ನು

ಸೆಂಪಲ್ ಪೋಸ್ಟು ಮೂಲಕ 2½ ಆಣೆ ಸ್ಟಾಂಪುಗಳನ್ನು ಕಳುಹಿಸಿದವರಿಗೆ ಕಳುಹಿಸುತ್ತೇವೆ. ಅದು ಕೆಮ್ಮು, ಉಬ್ಬಸ, ಶೀತರೋಗಗಳು, ಮುಟ್ಟಿನ ತೊಂದರೆಗಳು, ವಿಷಜಂತುಗಳ ಕಡಿತವೇ ಮುಂತಾದುವಕ್ಕಾಗುತ್ತದೆ. ಆಯಾಸವಿಲ್ಲದೆ ಸುಖಭೇದಿಯನ್ನುಂಟುಮಾಡುತ್ತದೆ. ಒಂದು ಡಬ್ಬಿಗೆ 8 ಆಣೆ ಮಾತ್ರ. ನೀವು ಒಂದು ಸೆಂಪಲ್ ಡಬ್ಬಿಯನ್ನೇಕೆ ತರಿಸಕೂಡದು? ಅದರಿಂದ ನಮ್ಮ ಔಷಧಿಗಳ ಗುಣಾವಗುಣಗಳು ತಿಳಿಯುವದಿಲ್ಲವೇ?

ಒಂದು ಡಬ್ಬಿ ದಂತ ಸಂಜೀವಿಯನ್ನುಪಯೋಗಿಸಿದರೆ

ಅದು ಯಾವ ಪ್ರಕಾರ ಹಲ್ಲುಗಳನ್ನು ಹೊಳೆಯುವಂತೆ ಮಾಡಿ ಗಟ್ಟಿ ಪಡಿಸುತ್ತದೆಂಬುದೂ, ಹಲ್ಲುನೋವು, ಹಲ್ಲಿನಿಂದ ರಕ್ತ ಸುರಿಯುವಿಕೆ, ಬಾಯಿಯ ದುರ್ಗಂಧವೇ ಮೊದಲಾದುವನ್ನು ನಾಶಪಡಿಸುತ್ತದೆಂಬುದು ಗೊತ್ತಾಗುತ್ತದೆ.

ಅಂದಿನಿಂದ

ನೀವು ದಂತಸಂಜೀವಿಯನ್ನಲ್ಲದೆ ಬೇರೆ ಔಷಧೋಪಯೋಗಮಾಡುವುದಿಲ್ಲ. ಏಕೆಂದರೆ ಬೇರೆ ಔಷಧಿಗಳಿಗೆ ಮೇಲೆ ಹೇಳಿದ ಗುಣಗಳಲ್ಲಿ ಯಾವುದಾದರೂ ಒಂದೇ ಗುಣಸಿಕ್ಕುತ್ತದೆ. ದಂತಸಂಜೀವಿಯಲ್ಲಿ ಮೇಲೆ ಹೇಳಿದ ಎಲ್ಲಾ ಗುಣಗಳೂ ಮೂರ್ತಿಮತ್ತಾಗಿವೆ.

ಕ್ರಯವು ಬಹು ಕಡಿಮೆ ಡಬ್ಬಿಗೆ ಐದೇ ಆಣೆ.

ಔಷಧಗಳಿಗೆ ಕಾಗದ ಬರೆದು ಔಷಧ ಬಾರದಿದ್ದರೆ ನಮಗೆ ಆ ಕಾಗದ ತಲಪಲಿಲ್ಲವೆಂದು ತಿಳಿಯಬೇಕು.

ಈ ದಿನ ಬರೆಯಿರಿ!

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರಪೇಟೆ, (ಕೊಡಗು).

ಅತ್ತರು ಮತ್ತು ಸುರಭಿಗಳಲ್ಲಿ ಮುಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.

Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು: ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.,
177 ಚೀನಾ ಬಜಾರ ರಸ್ತೆ, ಮದ್ರಾಸು.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ. ೨೦—೨೫ ವರ್ಷಗಳ ಹಳೆ, ಮೈತುಂಬ ವ್ಯಾಪಿಸಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಪ್ರತಿ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಐದಾಣೆ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಕ್ಕಿಗಳೂ, ಜಜುವುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯು ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈ ಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಶನ್.

ಕೆ. ಬಿ. ರೇಳೆ ಆಣ್ಣ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.

ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿರುವುದು. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.



ವಿಳಾಸ:— ರಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ ಸಾಲಾಬ್‌ಮಿಸ್ರಿ ಮುರಬ್ಬಾವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಕ್ಷಯ ರೋಗವಾದರೂ. ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿ ಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು — ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವದು. ಬಜಾರಿನಲ್ಲಿ ದೊರಿಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತ ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು.

ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳು 6, ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೋಗಳು 6, ಸುವಾಸನೆ ಅತ್ತರು ಬುರುಡಿ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರೋಸ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ಪಿ. ಎ. ಎಸ್. ಪಾಣಾ,
3. ಇರುಳಪ್ಪನ್ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾ ರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,
ಮಂಗಳೂರು.

ಸುಲಭ ಬೆಲೆ! ಸದ್ಬೋಧಕ ಗ್ರಂಥಮಾಲೆ: ೧. ಸುಲಭ ಬೆಲೆ!!

ದೈವ ಭಕ್ತಿ.

ಭಗವದ್ಭಕ್ತಿಯನ್ನು ಚೆನ್ನಾಗಿ ಬೋಧಿಸುವ ವಿಶಿಷ್ಟ ಮುದ್ದಾದ ಪುಸ್ತಕ!! ಬೆಲೆ: ಒಂದಾಣೆ ಮಾತ್ರ!!! ೧೦ಕ್ಕೆ ೧ ಉಚಿತ.

ಅಚ್ಚಿನಲ್ಲಿದೆ! ಸದ್ಬೋಧಕ ಗ್ರಂಥಮಾಲೆ: ೨. ಬೇಗ ಬರೆಯಿರಿ!!

ಸುಮಿತ್ರಾ.

ಈ ಹೆಸರಿನ ಮನೋಹರ ಕಾದಂಬರಿಯು ಬೇಗನೆ ಪ್ರಕಾಶಿಸಲ್ಪಡುವುದು. ಬೆಲೆ: ಮೂರಾಣೆ. ಆಗೋಸ್ಟು ತಿಂಗಳೊಳಗೆ ಹೆಸರನ್ನು ದಾಖಲು ಮಾಡಿಕೊಳ್ಳುವವರಿಗೆ: ಎರಡು ಆಣೆ ಮಾತ್ರ.

ನಮ್ಮಲ್ಲಿ ದೊರೆಯುವ ಇತರ ಕನ್ನಡ ಗ್ರಂಥಗಳು.

ಭಾರತೀಯವಿದ್ಯಾರ್ಥಿಯ ಆಳಿಯಕಟ್ಟು ೧-೪-೦. ಆಹ್ನಿಕಮಂಜರೀ (ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕ) ೧-೦-೦ ಜಯವಿಜಯ. (ಅದ್ಭುತ ನವರಸ ಭರಿತವಾದ ಮನೋಹರ ಕಾದಂಬರಿ) ೦-೧೨-೦. ಗೋವಿನ ಚರಿತ್ರೆ. (ಹೊಸ ಪುಸ್ತಕ) ೦-೨-೦.

ಇವುಗಳಲ್ಲದೆ ಬೇರೆ ಬಗೆಬಗೆಯ ಗದ್ಯ ಪದ್ಯಗಳ ಪುಸ್ತಕಗಳು; ಯಕ್ಷಗಾನ, ನಾಟಕ, ಕಾದಂಬರಿ, ಕಥೆ ಮೊದಲಾದ ಪುಸ್ತಕಗಳೂ; ಶಾಲಾ ಬಾಲಕರಿಗೆ ಬೇಕಾದ ಪಾಠಪುಸ್ತಕಗಳೂ; ಬರವಣಿಗೆ ಸಾಮಗ್ರಿಗಳೂ; ನಾಲಗೆಗೆ ರುಚಿಕರವಾದ ಅತ್ಯುತ್ತಮ ತಿಂಡಿಯ ಪದಾರ್ಥಗಳೂ; ಅಮೃತಾಂಜನ, ಡೋಂಗರೆಯವರ ಬಾಲಾಮೃತ, ಕಸ್ತೂರಿ ಮಾತ್ರೆ ಮೊದಲಾದ ಪೇಟೆಂಟ್ ಔಷಧಿಗಳೂ; ಉತ್ತಮ ತರದ ಸುಗಂಧ ದ್ರವ್ಯಗಳೂ; ತರ ತರದ ಸಾಬೂನುಗಳು, ಅನೇಕ ನಮೂನೆಯ ಅಂಗಿ ಗುಂಡಿಗಳು, ಜಿಂತಾನ, ದಂತಮಂಜನ, ಪೊಮೆಡ್ ವೆಸ್ಲಿನ್ ವಗೈರೆ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್, ಸುರತ್‌ಕಲ್, ದ. ಕ.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥವನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮೊದಲಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾನೊಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ಗುಣಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕಂಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ 13ನೇ ಒಕ್ಟೋಬರ ಶುಕ್ರವಾರ 1916. | ಸಂಚಿಕೆ 40

Tissue Remedies & Homœpathic Medicines.
ಟಿಸ್ಯು ಮತ್ತು ಹೊಮಿಯೊಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರ ಹೋಗ ಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.
ಸಾಮಾನ್ಯವಾಗಿ, ಸರ್ವ ಔಷಧಿಗಳ ಸಂಗ್ರಹವು ನಮ್ಮಲ್ಲಿರುವದು.

ಯುಕಲಿಪ್ಟಸ್ ಓಯಿಲ್ ಎಂಬುವ ನೀಲಿಗಿರಿ ಎಣ್ಣೆ.

ಇದೇ ಮಾದರಿಯ ಎಣ್ಣೆ ಎಂತ ತಪ್ಪಾಗಿ ತಿಳಕೊಳ್ಳುವಂಥಾ ಇತರ ಕೆಲವು ಎಣ್ಣೆಗಳಂತೆ ಇದು ನಕಾರಿಯೂ ಅಲ್ಲ ರಕಾರಿಯೂ ಅಲ್ಲ. ಹಲವು ಬೇನೆಗಳಿಗೆ ಗುಣಕಾರಿಯಾಗಿರುವಂಥಾದ್ದು. ಸೀಸೆ ಒಂದಕ್ಕೆ ಆಣೆ ೫. ಇದರ ಅನುಪಾನ ಪತ್ರದಲ್ಲಿ ಎಣ್ಣೆಯ ಪೂರ್ಣ ಉಪಯೋಗ ಕ್ರಮಗಳು ಇರುವವು.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.
ಗವರ್ನಮೆಂಟ ಟ್ರೇನ್ಸ್‌ಲೇಟರಾದ ಮ॥ ರಾ॥ ಬೆನಗಲ್ ರಾಮರಾವ್‌ರವರಿಂದ
ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫೈನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕ ವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಹಾರ ವಿವೇಚನೆ ಬೆಲೆ 2 ಆಣೆ ಇತರ ಪ್ರಬಂಧನೆಗಳು — ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲೆ 3 ಆಣೆ, ಇತ್ಯಾದಿ.

ಬೆಳೆಯು ಕಟಾವಿಗೆ ಸಿದ್ಧವಿರುವಕಾಲ ಗೇಣಿಚೀಟುಗಳನ್ನು ವಕ್ಕಲುಗಳಿಂದ ಬರಿಸಿಕೊಳ್ಳುವರು. ಈ ಬಗ್ಗೆ ಬೇಕಾಗುವ ಗೇಣಿಚೀಟು ಫೊರ್ಮುಗಳು ಮತ್ತು ಇತರ ಫೊರ್ಮುಗಳು, ಲೆಕ್ಕ ಬರೆಯುವ ಬಗ್ಗೆ ಬೇಕಾದ ಪುಸ್ತಕಗಳು ಬಿಕರಿಗೆ ಸಿದ್ಧವಿರುತ್ತವೆ.

ಮುದ್ರಣ ಕೆಲಸವಿರುವವರು — ದೊಡ್ಡ ದೊಡ್ಡ ಗ್ರಂಥಗಳಿಂದ ಸಣ್ಣ ಸಣ್ಣ ಲೇಬಲು ಯಾ ಚೀಟುಗಳ ಕೆಲಸಗಳು ಸಹ ನಮ್ಮ ಛಾಪಖಾನೆಯ ಕೈಕೊಳ್ಳುವದೆಂಬದನ್ನು ತಿಳಕೊಳ್ಳಬೇಕಾಗಿದೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 „ .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಚಿಕ್ಕವರಿಗೂ, ದೊಡ್ಡವರಿಗೂ,
ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಸರ್ವರಿಗೂ
ಪ್ರಯೋಜನವಾದವುಗಳು!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.

ಕೆ. ...ಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂ...

Registered No. M. 488

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರುಷ ಗಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ 13ನೇ ಒಕ್ಟೋಬರ ಶುಕ್ರವಾರ 1916. | ಸಂಚಿಕೆ 40

Tissue Remedies & Homœpathic Medicines.

ಟಿಸ್ಯು ಮತ್ತು ಹೊಮಿಯೊಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರ ಹೋಗ ಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಷಿಯೇಶನ್,

(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಸಾಮಾನ್ಯವಾಗಿ, ಸರ್ವ ಔಷಧಿಗಳ ಸಂಗ್ರಹವು ನಮ್ಮಲ್ಲಿರುವದು.

ಯುಕಲಿಪ್ಟಸ್ ಒಯಿಲ್ ಎಂಬುವ ನೀಲಿಗಿರಿ ಎಣ್ಣೆ.

ಇದೇ ಮಾದರಿಯ ಎಣ್ಣೆ ಎಂತ ತಪ್ಪಾಗಿ ತಿಳಕೊಳ್ಳುವಂಥಾ ಇತರ ಕೆಲವು ಎಣ್ಣೆಗಳಂತೆ ಇದು ನಕಾರಿಯೂ ಅಲ್ಲ ರಕಾರಿಯೂ ಅಲ್ಲ. ಹಲವು ಬೇನೆಗಳಿಗೆ ಗುಣಕಾರಿಯಾಗಿರುವಂಥಾದ್ದು. ಸೀಸೆ ಒಂದಕ್ಕೆ ಆಣೆ ೫. ಇದರ ಅನುಪಾನ ಪತ್ರದಲ್ಲಿ ಎಣ್ಣೆಯ ಪೂರ್ಣ ಉಪಯೋಗ ಕ್ರಮಗಳು ಇರುವವು.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರನ್ಸ್‌ಲೇಟರಾದ ಮ। ರಾ। ಬೆನಗಲ್ ರಾಮರಾವ್‌ರವರಿಂದ ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಹಾರ ವಿವೇಚನೆ ಬೆಲೆ 2 ಆಣೆ ಇತರ ಪ್ರಬಂಧನೆಗಳು — ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲೆ 3 ಆಣೆ, ಇತ್ಯಾದಿ.

ಬೆಳೆಯು ಕಟಾವಿಗೆ ಸಿದ್ಧವಿರುವಕಾಲ ಗೇಣಿಚೀಟುಗಳನ್ನು ವಕ್ಕಲುಗಳಿಂದ ಬರಿಸಿಕೊಳ್ಳುವದು. ಈ ಬಗ್ಗೆ ಬೇಕಾಗುವ ಗೇಣಿಚೀಟು ಫೊರ್ಮುಗಳು ಮತ್ತು ಇತರ ಫೊರ್ಮುಗಳು, ಲೆಕ್ಕ ಬರೆಯುವ ಬಗ್ಗೆ ಬೇಕಾದ ಪುಸ್ತಕಗಳು ಬಿಕರಿಗೆ ಸಿದ್ಧವಿರುತ್ತವೆ.

ಮುದ್ರಣ ಕೆಲಸವಿರುವವರು — ದೊಡ್ಡ ದೊಡ್ಡ ಗ್ರಂಥಗಳಿಂದ ಸಣ್ಣ ಸಣ್ಣ ಲೇಬಲು ಯಾ ಚೀಟುಗಳ ಕೆಲಸಗಳು ಸಹ ನಮ್ಮ ಛಾಪಖಾನೆಯ ಕೈಕೊಳ್ಳುವದೆಂಬದನ್ನು ತಿಳಕೊಳ್ಳಬೇಕಾಗಿದೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ **ಲೋಕ** ಪ್ರಖ್ಯಾತವಾದ ಮತ್ತು ಈಗಿನ **ಕಾಲ** ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು **ಕೈ** ವಸ್ತ್ರದಲ್ಲಿ ತಾಗಿಸಿದೇ ಆದರೆ 8 **ದಿವಸ** ಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಚಿಕ್ಕವರಿಗೂ, ದೊಡ್ಡವರಿಗೂ, ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಸರ್ವರಿಗೂ ಪ್ರಯೋಜನವಾದವುಗಳು!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.

ಕೆ. ದಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತೆಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.
ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.
ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ವಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಒರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಖರ್ಚು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

S. P. RAJA & Co.,
Car Street,
POLALY, S. C.

296 ಪುಟಗಳು! ಕಾಗದದ ಬೆಲೆ ಮಾತ್ರ!!

ಅರ್ಧ ಬೆಲೆ!

ಶ್ರೀಯುತ ಎನ್. ಎ. ಶ್ರೀನಿವಾಸ ಹೆಗ್ಡೆರಿಂದ ರಚಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟು ಎಂಬ ನೂತನ ಸಂಗ್ರಹದ ನವೀನ ಪ್ರತಿಯು ಅನೇಕ ಮಹನೀಯರ ಅಭಿಪ್ರಾಯ ಪ್ರಕಾರ ಬರುವ ಸೆಪ್ಟಂಬರ ಅಖೈರಿ ವರೇಗೆ 2 ಪ್ರತಿಗಳಿಗೆ ರೂ. 1—8—0ಗೆ ದೊರಕುವವು. ವಿದ್ಯಾ ಇಲಾಖೆಯವರಿಗೆ 2ಕ್ಕೆ ರೂ. 1—4—0 ದಂದಲ್ಲಿ ಕೊಡುವೆವು. ಸೆಪ್ಟಂಬರ ನಂತರ ಪ್ರತಿ ಒಂದಕ್ಕೆ ರೂ. 1—8—0ಗಿಂತ ಕಡಿಮೆ ಶಿಕ್ಕಲಾರದು.

ಅಕ್ಷರಗಳಿಂದಲೇ ಬರೆಯುವ, ಶಿಲಾಶಾಸನ ತಾಮ್ರಶಾಸನಗಳನ್ನು ಸುಲಭವಾಗಿ ಓದುವ ನೂತನ ತರದ ಶ್ರೀನಿವಾಸ ಲಿಪಿ ಎಂಬ ಪುಸ್ತಕವು ತ್ವರ್ಯ ತಯಾರಾಗುವುದು. ಪ್ರತಿ 1ಕ್ಕೆ 0—2—6. ವಿದ್ಯಾ ಇಲಾಖೆಯವರಿಗೆ 0—2—0. ಒಂದೇ ತಾಸಿನೊಳಗೆ ಸರಿಯಾಗಿ ಕಲಿಯಬಹುದು.

ವಿಳಾಸ:—
ಎನ್. ಎ. ಶ್ರೀನಿವಾಸ ಹೆಗ್ಡೆ,
ಕುಶಲ ಮಂದಿರ,
ಪೊಳಲಿ, ದ. ಕ.

ಕಪ್ಪು ಶಾಯಿಪುಡಿಯ

ಪೊಟ್ಟಣಗಳು.

ಅತ್ಯುತ್ತಮವಾದುದು! ವಿ. ಪಿ. ಯಲ್ಲಿ ತರಿಸಿ, ಮಾರುವುದು ವಿಶೇಷ ಲಾಭಕರ!! ಸುಲಭ ದರ!!! 50ಕ್ಕೆ 0—4—0, 100ಕ್ಕೆ 0—6—0, 300ಕ್ಕೆ ರೂ. 1—0—0, 1,000ಕ್ಕೆ 2—8—0, 3,000ಕ್ಕೆ 6—0—0. ಅಂಚೆ, ಪೆಟ್ಟಿ, ಪ್ಯಾಕಿಂಗ್ ವಗೈರೆ ಖರ್ಚುಗಳು ಬೇರೆ.

ನಮ್ಮ ವಿಳಾಸ:—
ವಿ. ಪಿ. ಡಿಪೋ, ಕೋಲಾರ್.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅದು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ವಾಜೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆರೆಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರಹಾರಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕತ್ಯಾವಾರ್, ಒಸ್ರದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತ್ತು ರೂ. 1—8—0. ಅಂಚೆ ಹಾಸಲು ಆಣೆ 6.

ವಿಳಾಸ:—

J. M. D. Vas, Kankanady, S. C.

ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಿಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:— ಮಿ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣಾ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೋಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಂದ್ರ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಬೇಕೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.

ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಂವ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್,

ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡ್ರು 1ಕ್ಕೆ 0—1—0. **ಬಾಲಗ್ರಹ**ರೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇವಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸುಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರ, ಮೈಸೂರು.

ಆರ್. ಮಾರ್ಟಿನ್ನರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಪೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ವಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ESTABLISHED: JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	... ...	300,000—0—0
Issued Capital	... ...	225,000—0—0
Subscribed Capital	... ...	225,000—0—0
Paid up Capital	... ...	200,000—0—0
Deposits	... ...	357,116—5—4
Reserve Fund	... ...	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28 485/- have been invested in Government Paper of the face value of Rs. 29,300/-.

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st. October 1916.

ನಿಯಮಿತ ಮೂಲ ಧನವು ರೂಪಾಯಿ	... ...	300,000—0—0
ಹುಟ್ಟಿಬಂದ ಮೂಲ ಧನವು ,,	... ...	225,000—0—0
ಪ್ರತಿಜ್ಞಾತ ಮೂಲ ಧನವು ,,	... ...	225,000—0—0
ಆಗತ ಮೂಲ ಧನವು ,,	... ...	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	357,116—5—4
ರಕ್ಷಿತ ಧನವು	... ...	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಪಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಟ್ಟೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಕೊಳ್ಳಲಾಗಿತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತದೆ.

P. Gopal Naik,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಶ್ರೀಂಕರಾರವಿಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಬಹಳ ಬೆಲೆಯ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೩ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦

೩. ವಿಂಡಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪ್ರಶಸ್ತವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಪಾಂಡುರೋಗದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ವಟಿಕೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಕ್ಷಯ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ಬಲತೆಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಾವು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಾಗುವದಿಲ್ಲ. ಸುವಾಸಿಕವಾಗಿದೆ. ಡಬಿಗೆ ೪ ಆಣೆ.

೧೩. ಸಪ್ತಾಮೃತಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳೂ ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗನ್ನು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲೀಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಆಶ್ವಿನ ಬ. ೨ ಶುಕ್ರವಾರ.

ನಮ್ಮ ಜಿಲ್ಲೆಯ ಹಾಲಹವಾಲೆಗಳು.

(ಮಂಗಳೂರ ಅರಸಿಕೆರೆ ರೈಲ್ವೇಯು).

ಸಾಮಾನ್ಯವಾಗಿ ಒಂದು ಜಿಲ್ಲೆಯೊಳಗಿನ ಹಾಲಹವಾಲೆಗಳನ್ನು ಹೇಳುವುದೆಂದರೆ ಅವು ಬೇಗನೆ ಮುಗಿಯಲಾರವು. ಪಂಜಾಬಿಯು ಅಥವಾ ಮಾರವಾಡಿಯು ಮುಂಡಾಸವನ್ನು ಬಿಚ್ಚಲು ಪ್ರಾರಂಭಿಸಿದರೆ ಅದು ಬಿಚ್ಚಿದಷ್ಟೂ ಹೇಗೆ ಇನ್ನೂ ಉಳಿಯುವುದೋ ಇಲ್ಲವೆ ಮಂತ್ರಗಾರನು ಒಂದು ಚಿಕ್ಕ ಪೆಟ್ಟಿಗೆಯೊಳಗಿಂದ ಕಾಗದದ ಸುರುಳಿಯನ್ನು ಹೊರಡಿಸುವಾಗ ಅದು ಹೇಗೆ ಉದ್ದವೋ ಉದ್ದವಾಗಿಕೊಂಡು ಹೋಗುವುದೊ ಹಾಗೆಯೇ ಜಿಲ್ಲೆಯೊಳಗಿನ ಹಾಲಹವಾಲೆಗಳು ಹೇಳಿದಷ್ಟು ಇನ್ನೂ ಉಳಿಯುವವು. ನಿಜವಾಗಿ ನೋಡಿದರೆ ಒಂದು ಜಿಲ್ಲೆಯೊಳಗಿನ ಹಾಲಹವಾಲೆಗಳ ಪ್ರವಾಹಕ್ಕೆ ಪಂಜಾಬಿ ಗೃಹಸ್ಥನ ಮುಂಡಾಸದ್ದಾಗಲಿ, ಮಂತ್ರಗಾರನ ಕಾಗದದ ಸುರಳಿಯದ್ದಾಗಲಿ ಕೊಟ್ಟ ದೃಷ್ಟಾಂತಗಳು ಅಷ್ಟು ಸಮರ್ಪಕವಲ್ಲ. ಬಡವೈದಿಕರ ಗೃಹಕೃತ್ಯದಲ್ಲಿ ಯಜಮಾನನ ಕೂಡ ಮನೆಯಮ್ಮನ ಊಟಕ್ಕೆ ಅಕ್ಕಿ ಇಲ್ಲ, ಮಕ್ಕಳಿಗೆ ಎಣ್ಣೆ ಇಲ್ಲ, ಒಲೆಗೆ ಕಟ್ಟಿಗೆ ಇಲ್ಲ ಈ ರೀತಿಯಿಂದ ವಿಧ ವಿಧದ ಹಾಲಹವಾಲೆಗಳು ಪ್ರತಿದಿನ ಹೇಗೆ ನಡೆಯುತ್ತಲಿರುವವೋ ಹಾಗೆಯೇ ಜಿಲ್ಲೆಯೊಳಗಿನ ಕಷ್ಟನಷ್ಟಗಳು ಎಂದೆಂದೂ ಇದ್ದೇ ಇರುವವು. ಕಷ್ಟನಷ್ಟಗಳು ಅಥವಾ ಹಾಲಹವಾಲೆಗಳು ಯಾವಾಗಲೂ ಇರುವವೇ ಎಂಬದರಿಂದ ಅವುಗಳಿಂದ ಜನತೆಗೆ ಉಂಟಾಗುವ ಪೆಟ್ಟು, ಹಾನಿ ಮತ್ತು ಈ ಕಾರಣದಿಂದ ಅವುಗಳಿಗೆ ಬಂದಿರುವ ಮಹತ್ವ ಈ ಮೂರು ಸಂಗತಿಗಳನ್ನು ಮಾತ್ರ ಯಾರೂ ಅಲ್ಲಗಳೆಯಕೂಡದು. ಸಲಿಗೆಯಿಂದ ಆದರವು ನಿಲ್ಲುವುದಿಲ್ಲ (ಅತಿ ಪರಿಚಯಾದವಜ್ಞಾ) ಎಂಬ ಮಾತಿನಂತೆ ಈ ಹಾಲುಹವಾಲೆಗಳ ನಿತ್ಯ ಸಂಘಟನೆಯಿಂದ ಜನರಿಗೆ ಅವುಗಳ ಉಗ್ರಸ್ವರೂಪದ ಬಾಧೆಯುಂಟಾಗುವುದಿಲ್ಲೆಂದು ಯಾರಾದರೂ ತಮ್ಮಷ್ಟಕ್ಕೆ ಸಮಾಧಾನ ಪಡುವವರಿದ್ದರೆ ಪಡಲಿ, ನಾವಂತು ಇಂಥವರನ್ನು ಸೃಷ್ಟಿನಿಯಮದ ಅಜ್ಞಾನಿಗಳಲ್ಲಿಯೇ ಸೇರಿಸುವೆವು. ಅನೇಕ ವರ್ಷಗಳಿಂದ ದೂಮಪ್ಪನು ರೋಗದಲ್ಲಿಯೇ ಇದ್ದಾನೆ; ಅವನಿಗದೊಂದು ದೊಡ್ಡ ಸಂಗತಿಯಲ್ಲ. ಔಷಧ ಕೊಟ್ಟರೇನು, ಬಿಟ್ಟರೇನು? ಗುಣವಾದರೇನು, ಆಗದೆ ಇದ್ದರೇನೆಂದು ಹೇಳಿ ದೂಮಪ್ಪನ ರೋಗವನ್ನು ಉಪೇಕ್ಷಿಸುವುದು ಹೇಗೆ ಅಯುಕ್ತವೋ ಹಾಗೆಯೇ ಮೇಲಿನಂಥ ಯುಕ್ತಿವಾದವನ್ನಾಡುವುದು ಅಸಂಗತವಾಗಿರುವುದು. ಮನಸ್ಸಿನಲ್ಲಿ ಸ್ವಲ್ಪ ಜಾಣತೆ, ತಿಳಿವು, ಸಾರಾಸಾರ ವಿಚಾರವಿರುವವರು ಇಂಥ ಹಳೆಕಾಲದ ಹಾಲಹವಾಲೆಗಳನ್ನು ಇಷ್ಟು ಸಮಯದ ವರೆಗೆ ತುಂಬಿತರದೆ ಹಾಗೆಯೇ ಇರಗೊಟ್ಟದ್ದು ಶುದ್ಧ ಅಪ್ರಬುದ್ಧತನವೆಂತಲೇ ಹೇಳುವರು. ಆದುದರಿಂದ ಅವುಗಳ ತೀವ್ರತೆಯಾಗಲಿ ಉಗ್ರಸ್ವರೂಪವಾಗಲಿ, ಅನುಭವಿಸುವವರಿಗೆ—ಅವು ಬಹಳ ಸಮಯದವೆಂಬ ಕಾರಣದಿಂದ—ಎಂದೂ ಕಡಿಮೆಯಾಗಲಾರವು.

ಇರಲಿ; ಈ ಪ್ರಸ್ತಾವನೆಯಿಂದ ನಮ್ಮ ವಾಚಕರು ಒಂದು ಸಂಗತಿಯನ್ನು ಊಹಿಸಬಹುದು. ಏನೆಂದರೆ ನಾವು ಈ ಲೇಖದಲ್ಲಿ ನಮ್ಮ ಜಿಲ್ಲೆಯೊಳಗಿನ ಹಾಲಹವಾಲೆಗಳ ಸಹಸ್ರನಾಮಗಳನ್ನು ಕನಿಷ್ಠ ಪಕ್ಷಕ್ಕೆ ಅಷ್ಟೋತ್ತರಶತವನ್ನು ಹೇಳುವವರಿದ್ದೇವೆ. ಇಲ್ಲ. ಇಂದಿಗೆ ನಮ್ಮ ಸಂಕಲ್ಪವು ಸಹಸ್ರನಾಮದ್ದಾಗಲಿ ಅಷ್ಟೋತ್ತರದ್ದಾಗಲಿ ಇಲ್ಲ. ಮಂಗಳೂರ —ಅರಸಿಕೆರೆ ರೈಲಿನ ಒಂದೇ ಸಂಗತಿಯನ್ನು ಈ ಹೊತ್ತು ಪ್ರಸ್ತಾಪಿಸುತ್ತೇವೆ. ಈ ಪ್ರಸ್ತಾಪಕ್ಕೆ ಒಂದು ವಿಧದಿಂದ ಆಹ್ವಾನೆಯೇ ಬಂದಿದೆಂದು ಹೇಳಲು ಅಡ್ಡಿ ಇಲ್ಲ. ಕಳೆದ ಸಂಚಿಕೆಯಲ್ಲಿ ಒಬ್ಬ ವ್ಯಾಪಾರಿಯು ಇದೇ ಪ್ರಶ್ನೆಯನ್ನು ಜನರ ನೆನಪಿಗೆ ತಂದುದು ವಾಚಕರು ಮರೆತಿರಲಾರರು. ಅಲ್ಲದೆ, ಕಳೆದ ವರ್ಷ ಇದೇ ಪ್ರಶ್ನೆಯನ್ನು ಕುರಿತು ನಾವು ಒಂದೆರಡುಸಾರಿ ಚರ್ಚಿಸಿರುವೆವು. ಮಂಗಳೂರ—ಅರಸಿಕೆರೆ ರೈಲಿನ ಪ್ರಶ್ನೆಯು ಅನ್ನೊಂದು ನಾಜೂಕಲ್ಲೆಂಬುದು ನಿಜವಾದರೂ ನಮ್ಮ ಜಿಲ್ಲೆಯವರಿಗೆ ಅದು ಬಹಳ ಮಹತ್ವದ್ದಾಗಿದೆ. ಮೈಸೂರ ಸೀಮೆಗೂ ನಮ್ಮ ಜಿಲ್ಲೆಗೂ ಈಚೆಗೆ ಮಾತ್ರವಲ್ಲ ಎಷ್ಟೋವರ್ಷಗಳ ಹಿಂದಿನಿಂದಲೇ ವ್ಯಾಪಾರ ಸಂಬಂಧವು ನಡೆದು ಬಂದಿದೆ. ಈಗ ಉಪಯೋಗದಲ್ಲಿರುವ ಸರಕಾರಿ ಅಥವಾ ಲೋಕಲ್ ಬೋರ್ಡು ಮಾರ್ಗಗಳು ತಯಾರಾಗುವದಕ್ಕಿಂತ ಮುಂಚೆಯೇ ಮೈಸೂರ ಸೀಮೆಯಿಂದ ಹೊರದ್ವೀಪಗಳಿಗೂ ದೇಶಗಳಿಗೂ ಹೋಗತಕ್ಕ ಜೀನಸುಗಳು ಎತ್ತು ಮುಂತಾದವುಗಳ ಮೇಲೆ ಇಲ್ಲಿಗೆ ಬರುತ್ತಿದ್ದವು; ಮತ್ತು ಇಲ್ಲಿಂದ ಮುಂದೆ ಹೋಗುತ್ತಿದ್ದವು. ಎತ್ತುಗಳ ಈ ದಾರಿಯ ಗುರುತಿನಿಂದಲೆ ಈಗಿನ ಮಾರ್ಗಗಳಾಗಿರುವವು. ಮೊದಲೊಮ್ಮೆ ಹೈದರ ಟಿಪ್ಪುಗಳ ಕಾಲದಲ್ಲಿ ಮೈಸೂರಿಗೂ ಈ ಜಿಲ್ಲೆಗೂ ರಾಜಕೀಯ ಸಂಬಂಧ ಕೂಡ ಇತ್ತು. ಆದರೆ ಅದು ನಷ್ಟವಾಯಿತು. ಆದುದರಿಂದ ಗೌಣವಾದ ಈ ರಾಜಕೀಯ ಸಂಬಂಧದ ಸಂಗತಿಯನ್ನು ಬಿಟ್ಟರೂ ಈ ಎರಡು ಪ್ರಾಂತಗಳಿಗೆ ಆ ರಾಜಕೀಯ ಸಂಬಂಧಕ್ಕಿಂತಲೂ ಎಷ್ಟೋ ಪೂರ್ವದಿಂದಲೇ ರೂಢಿಯಲ್ಲಿ ಬಂದಿದ್ದ ವ್ಯಾಪಾರ ಸಂಬಂಧವು ಇನ್ನೂ ನಿಂತುಹೋಗಲಿಲ್ಲ. ಇದು ಸುದೈವದ ಮಾತೇ ಸರಿ. ಈ ಸಂಬಂಧ ಪರಂಪರೆಯನ್ನು ಆಧರಿಸಿಕೊಂಡೇ ಮಂಗಳೂರ-ಅರಸಿಕೆರೆ ರೈಲಿನ ಪ್ರಶ್ನೆಯನ್ನು ಚರ್ಚಿಸುವುದು ವಿಹಿತವಾಗಿದೆ. ಸುಮಾರು ಎರಡು ಮೂರು ಶತಕಗಳ ಹಿಂದಿನಿಂದಲೂ ಈ ಎರಡು ಪ್ರಾಂತಗಳ ಪರಸ್ಪರ ವ್ಯಾಪಾರದ ಹೊಕ್ಕುಬಳಿಕೆ ಇರುವುದರಿಂದ ಮಂಗಳೂರ ಅರಸಿಕೆರೆ ರೈಲಿನ ಪ್ರಶ್ನೆಯು ಉತ್ಪನ್ನವಾಗಿದೆ.

ಆದರೆ ಈ ರೀತಿಯಿಂದ ಉತ್ಪನ್ನವಾದ ಈ ಪ್ರಶ್ನೆಗೆ ಮೂರ್ತಸ್ವರೂಪಬರುವುದಕ್ಕಿಂತ ಮೊದಲೆ ಅದು ಒಳಗಿಂದೊಳಗೆ ಜೀರ್ಣವಾಗುವುದೋ ಏನೋ ಎಂಬದೊಂದು ಸಂಶಯವು ಈಚೆಗೆ ಬರುತ್ತಿದೆಂದು ನಮ್ಮ 'ವ್ಯಾಪಾರಿ' ಬಾತಮಿದಾರನ ಪತ್ರದಿಂದ ಕಾಣುತ್ತದೆ. ಹಾಗಾಗುವ ಪಕ್ಷದಲ್ಲಿ ನಮ್ಮ ಜಿಲ್ಲೆಗೆ ಈ ರೈಲುಮಾರ್ಗದ ಅಭಾವದಿಂದ ಯಾವ ತೊಡಕುಗಳು ಸಂಭವಿಸುವವೆಂಬುದನ್ನು ತಕ್ಕ ಕಾಲದಲ್ಲಿಯೇ ಜನರ ನಿದರ್ಶನೆಗೆ ತಂದುಕೊಡುವುದು ನಮ್ಮ ಕರ್ತವ್ಯವಾಗಿದೆ.

ಒಂದು ಪಟ್ಟಣದಲ್ಲಿ ಅನೇಕ ವರ್ಷಗಳಿಂದ ವ್ಯಾಪಾರ ಸಂಬಂಧವು ನಡೆದುಕೊಂಡಿದ್ದು ಅದಕ್ಕೊಂದು ತರದ ಊರ್ಜಿತ ಸ್ಥಿತಿಯು ಬಂದಮೇಲೆ ಫಕ್ಕನೆ ಅಲ್ಲಿಯ ವ್ಯಾಪಾರವನ್ನು ನಿಲ್ಲಿಸುವುದರಿಂದ ಸ್ವತಃ ಆ ಪಟ್ಟಣದ ಮತ್ತು ಅದು ಯಾವ ಜಿಲ್ಲೆಗೆ ಹೊಂದಿರುವುದೋ ಅದರ ಸ್ಥಿತಿಯು ಹೇಗಾಗುತ್ತದೆ ಮತ್ತು ಏನಾಗುತ್ತದೆಂಬುದನ್ನು ನೋಡಬೇಕಾದರೆ ಉತ್ತರ ದಿಕ್ಕಿನಲ್ಲಿ ನಮ್ಮ ಜಿಲ್ಲೆಯಿಂದ ಬಹಳ ದೂರದಲ್ಲಿರದ ಕುಮಟೆಯ ಸದ್ಯಃ ಸ್ಥಿತಿಯನ್ನು ನಿರೀಕ್ಷಿಸಬಹುದು. ಹತ್ತಿ, ಮೆಣಸಿನಕಾಳು; ಅಡಿಕೆ, ಏಲಕ್ಕಿ, ಮೆಣಸು ಮುಂತಾದ ಗಟ್ಟದ ಉತ್ಪತ್ತಿಯು ಕುಮಟೆಗೆ ಬಂದು ಅಲ್ಲಿಂದ ಮುಂದೆ ರಫ್ತ ಆಗುತ್ತಿತ್ತು. ಆ ಸಂದರ್ಭದಲ್ಲಿ ಆ ಪಟ್ಟಣದ ಮತ್ತು ಆ ಜಿಲ್ಲೆಯ ಊರ್ಜಿತ ಸ್ಥಿತಿಯು ಎಷ್ಟಿತ್ತೆಂಬುದನ್ನು ಈಗ ವರ್ಣಿಸಿದರೆ ಅದೊಂದು ಅಬದ್ಧಪುರಾಣವೆಂದು ಕಂಡುಬಂದೀತು. ವ್ಯಾಪಾರದ 'ವಹಿವಾಟು' ಪ್ರಬಲವಾದ ತರಗತಿಯಲ್ಲಿರುವಾಗ ಜನರು, ಕಟ್ಟೋಣಗಳು, ಮಾಲುಜೀನಸುಗಳು, ಧನಧಾನ್ಯಗಳು ತುಂಬಿಹೋಗಿರುವುದರಿಂದ ಅದರ ಊರ್ಜಿತ ಸ್ಥಿತಿಯನ್ನು ಏನೆಂತ ವರ್ಣಿಸಬಹುದು! ಆದರೆ ಅದೇ ಕುಮಟೆಯು ಈಗ ಶೂನ್ಯಾವಸ್ಥೆಗೆ ಬಂದಿದೆ. ಮರ್ಮಾಗೋವೆಯಲ್ಲಿ ರೈಲಾಗಿ ಆ ಮಾರ್ಗವಾಗಿಯೇ ಗಟ್ಟದ ವ್ಯಾಪಾರವೆಲ್ಲ ಹೊರಗೆ ಹೋಗಹತ್ತಿದರಿಂದ ಮೊದಲು ಕುಮಟೆಗೆ ಹರಿದುಬರುವ ಈ ವ್ಯಾಪಾರದ ಪ್ರವಾಹವು ಈಚೆಗೆ ೪೦—೫೦ ವರ್ಷಗಳಿಂದ ನಿಂತುಹೋಗಿದೆ. ಮತ್ತು ಅದಕ್ಕೆ ಈಗ ಮೇಲೆ ಹೇಳಿದಂತೆ ಹೀನಾವಸ್ಥೆಯು ಬಂದು ಒದಗಿದೆ. ೫೦—೬೦ ವರ್ಷಗಳ ಹಿಂದೆ ಕುಮಟೆಯಲ್ಲಿ ಜೀವಿಸಿದ ಒಬ್ಬ ಗೃಹಸ್ಥನ ಜೀವಾತ್ಮವು ಈ ದಿವಸಗಳಲ್ಲಿ ಕುಮಟೆಯ ಆಕಾಶಮಂಡಲದಲ್ಲಿ ಬಂದು ಕೆಳಗೆ ಹಣಕಿನೋಡಿದರೆ ಅದಕ್ಕೆ ಈಗ ಅಲ್ಲಿ ಯಾವ ಗುರುತು ಸಿಗುವಹಾಗಿದೆ! ಮಂಗಳೂರಿಗಾದರೂ ಇದೇ ಪಾಡು ಒದಗದೆ ಇರದು. ಮೈಸೂರ ಸರಕುಗಳ ಓಘವು ಅರಸಿಕೆರೆಯ ಮಾರ್ಗವಾಗಿ ಇಲ್ಲಿಗೆ ಇಳಿಯದೆ ಬೇರೆ ಕಡೆಗಳಲ್ಲಿ ಎಂದರೆ ಉತ್ತರಕ್ಕೆ ಭಟಕಳದಲ್ಲಿ ಅಥವಾ ದಕ್ಷಿಣಕ್ಕೆ ತಲಚೇರಿಯಂಥ ಕಡೆಯಲ್ಲಿ ಇಳಿದರೆ ನಮ್ಮ ಪಟ್ಟಣದ ಸೌಭಾಗ್ಯಕ್ಕೆ ಹಾನಿಬಾರದೆ ಇದ್ದೀತೆ? ಮೇಲೆ ಹೇಳಿದಂತೆ ಮೈಸೂರಿಗೂ ನಮಗೂ ಇರುವ ವ್ಯಾಪಾರದ ಸಂಬಂಧವು ಇಂದಿನದಲ್ಲ, ನಿನ್ನೆದಲ್ಲ. ಹತ್ತು ಇಪ್ಪತ್ತು ವರ್ಷಗಳದಲ್ಲ, ನೂರಿನ್ನೂರು ವರ್ಷಗಳಿಂದ ನಡೆದುಬಂದಿರುವುದು. ಅದನ್ನು ನಿಲ್ಲಿಸುವುದರಿಂದ ಮಂಗಳೂರಿನ ಬಂದರವೂ, ವ್ಯಾಪಾರವೂ, ಸಾಹುಕಾರರೂ ಅವರ ಪೆಂಡಸಾಲೆಗಳೂ ಬಹುಪಕ್ಷ ವ್ಯರ್ಥವಾದಾವು.

ಮಂಗಳೂರ ಅರಸಿಕೆರೆ ರೈಲಿನ ಪ್ರಶ್ನೆಯನ್ನು ಆಲೋಚಿಸುವಾಗ ದಕ್ಷಿಣ ಕನ್ನಡದವರ ಲಾಭ ಅಥವಾ ಊರ್ಜಿತಾವಸ್ಥೆಯನ್ನು ಮಾತ್ರ ಆಲೋಚಿಸಿದರೆ ಸಾಲದು.

ಈ ಆಲೋಚನೆಯು ಒಪ್ಪಿಗೆನೇ ಮೈಸೂರಿನವರ ಸೌಕರ್ಯವನ್ನು ಕೂಡ ಮನಸ್ಸಿನಲ್ಲಿ ತರುವುದು ವಿಹಿತವಾಗಿದೆ. ಸಮೀಪದ ಮತ್ತು ಪ್ರಶಸ್ತವಾದ ರೇವು ಮೈಸೂರಿನವರಿಗೆ ಸಿಗುವುದೇ ಅವರ ವ್ಯಾಪಾರದ ಸೌಕರ್ಯವು. ಈ ಸೌಕರ್ಯದ ಉತ್ತರಾರ್ಧದಲ್ಲಿ ರೈಲು ಮಾರ್ಗದ ಅನುಕೂಲತೆಯು ಬರುತ್ತದೆ. ಇದೇ ಅಭಿಪ್ರಾಯವನ್ನು ಕೆಲವು ಮಾತುಗಳಿಂದಲೇ ಹೇಳುವುದಾದರೆ, ಮೈಸೂರ ಸೀಮೆಗೆ ಸಮೀಪವಾಗಿರುವ ಒಂದು ನಿರಪಾಯವಾದ ಬಂದರವು ಸಿಗುವಂತಿದ್ದರೆ ಬಂದರಕ್ಕೂ ಆ ಸೀಮೆಗೂ ಹೆಚ್ಚಿನ ಅಂತರ ವಿಲ್ಲಾದುದರಿಂದ ರೈಲು ಮಾರ್ಗದ ಖರ್ಚು ಕಡಿಮೆಯಾಗಿ ಆ ಮೂಲಕ ಮೈಸೂರಿನ ವ್ಯಾಪಾರವು ಬಹು ಸುಲಭದಿಂದ ಹೊರಗೆ ಹೋಗಬಹುದು. ಇದೇ ಅವರ ಸೌಕರ್ಯವು ಈ ಸೌಕರ್ಯವನ್ನು ಸಾಧಿಸುವುದಕ್ಕಾಗಿ ಅವರು—ಮೈಸೂರ ಸರಕಾರದವರು ಮದ್ರಾಸ್ ಹಾರ್ಬರ ವರ್ಕ್ಸ ಪ್ರೆಸಿಡೆಂಟರಾದ ಸರ್ ಫ್ರಾನ್ಸಿಸ್ ಸ್ಪಿಂಗ ಎಂಬವರನ್ನು ಅನುಕೂಲ ಬಂದರದ ಶೋಧನೆಗೆ ನೇಮಿಸಿರುವರು. ಭಟಕಳವು ಮೈಸೂರ ಸಂಸ್ಥಾನದ ಗಡಿಗೆ ಬಹು ಸಮೀಪವಾದರೂ ಆ ಬಂದರದ ಸ್ಥಿತಿಯು ಸಮಾಧಾನಕರವೋ ಹೇಗೆ ಎಂಬದು ಇನ್ನೂ ನಿರ್ಣಯವಾಗಲಿಲ್ಲ. ಸರ್ ಫ್ರಾನ್ಸಿಸ ಸ್ಪಿಂಗ್ ದೊರೆಗಳನ್ನು ರೇವಿನ ಶೋಧನೆಗೆ ನೇಮಿಸಿರುವಂತೆ ಸಂಸ್ಥಾನದವರು ರೈಲ ಮಾರ್ಗದ ಅನುಕೂಲತೆಯನ್ನು ನಿರ್ಣಯಿಸುವುದಕ್ಕಾಗಿ ರೈಲ್ವೇ ಬೋರ್ಡಿನ ಕನ್ಸಲ್ಟಿಂಗ್ ಇಂಜಿನಿಯರುಗಳಾದ ಮಿ. ರಿಚರ್ಡ್ಸ್ ಎಂಬವರನ್ನು ಯೋಜಿಸಿರುವರು. ಇವರು ಕೂಡ ತಲಚೇರಿ, ಮಂಗಳೂರು, ಮಲಪೆ ಮುಂತಾದ ಕಡೆಗಳಲ್ಲಿ ಬಂದು ಗಟ್ಟ ಪ್ರದೇಶ, ಅಂತರ, ಖರ್ಚು ಮುಂತಾದ ಸಂಗತಿಗಳನ್ನು ಆಯಾ ಬಂದರ ಸ್ಥಳಗಳಿಗೂ ಸಂಸ್ಥಾನದ ಗಡಿಗೂ ಹೋಲಿಸಿ ಅವರಲ್ಲಿ ಅನುಕೂಲವಾದ ಸಂಗತಿಗಳು ಇಂಥಿಂಥವೆಂಬುದನ್ನು ತಮ್ಮ ರಿಪೋರ್ಟಿನಲ್ಲಿ ನಿರ್ಧರಿಸುವವರಿದ್ದಾರೆಂದು ಕೇಳುತ್ತೇವೆ. ಈ ಎಲ್ಲ ಸಂಗತಿಗಳ ಅರ್ಥವೇನೆಂದರೆ, ಬರೇ ಬಂದರದ ಸೌಕರ್ಯವೇ ಸಾಲದು, ಮಾರ್ಗದ ಅನುಕೂಲತೆಯೂ ಬೇಕು. ಹಾಗೆಯೇ ಮಾರ್ಗದ ಅನುಕೂಲತೆ ಮಾತ್ರ ಇದ್ದರಾಗಲಿಲ್ಲ, ಅದರ ಜೋಡಿಗೆ ಬಂದರದ ಅನುಗ್ರಹವು ಬೇಕು. ಅದರೆ ಬಂದಿದ್ದಲ್ಲಿ ಇನ್ನೊಂದಿಲ್ಲ ಇಂಥ ಸಂಗತಿಯು ದುರ್ದೈವದಿಂದ ಘಟಿಸಿದರೆ ಮುಂದೆ ಏನು ಮಾಡುವುದಾಯಿತು ಎಂಬದೊಂದು ಪ್ರಶ್ನೆಯು ಇಲ್ಲಿ ಬರುವುದು. ಆದರೆ ನಮ್ಮ ಬುದ್ಧಿಗೆ ತೋರುವುದೇನೆಂದರೆ, ಇಂಥ ಪ್ರಸಂಗದಲ್ಲಿ ಮಾರ್ಗದ ಅನುಕೂಲ್ಯಕ್ಕಿಂತಲೂ ಬಂದರದ—ರೇವಿನ—ಭದ್ರತೆಯೇ ಸಂಸ್ಥಾನದವರಿಗೆ ವಿಶೇಷ ಆದರಣೀಯವಾದೀತು. ಈ ದೃಷ್ಟಿಯಿಂದ ನೋಡುವಾಗ ಮಂಗಳೂರ ಬಂದರವು-ಈಗಿನ ಸ್ಥಿತಿಯಲ್ಲಿ ಕೊಂಚ ಅನನುಕೂಲವಾಗಿ ಕಂಡರೂ ರೇವನ್ನು ಕಟ್ಟಿದರೆ ಅದು ಭದ್ರವೇ ಸರಿ. ಆಗ ಮಂಗಳೂರ—ಅರಸಿಕೆರೆ ರೈಲಿನ ಪ್ರಶ್ನೆಗೆ ಉತ್ತರ ಬಂದತೆಯೇ ಆಗುವುದು.

ಈಗಿನ ಸ್ಥಿತಿಯಲ್ಲಿಯೇ ಹೆಚ್ಚಿನ ಅನುಕೂಲವಾದ ಬಂದರವು ಸಂಸ್ಥಾನದವರಿಗೆ ಬೇಕಾದರೆ ಮಲಪೆಯು ಬಂದರವು ಬಹು ಪ್ರಶಸ್ತವಾಗಿರುವುದು. ಗಟ್ಟದ ಕಡೆಯಿಂದ ಮಲಪೆಗೆ ಸರಳವಾಗಿ ರೈಲನ್ನು ಕೊಂಡುಹೋಗಲು ಸಾಧ್ಯವಿದ್ದರೆ ಕೊಂಡುಹೋಗಬಹುದು, ಅಥವಾ ಅರಸಿಕೆರೆಯಿಂದ ಇಲ್ಲಿಗೆ ತಂದು ಇಲ್ಲಿಂದ ಮಲಪೆಗೆ ಹೋಗಬಹುದು. ಈ ಎರಡು ಪಕ್ಷಗಳಲ್ಲಿ ಇಲ್ಲಿಂದ ಮಲಪೆಗೆ ರೈಲನ್ನು ಕೊಂಡುಹೋಗುವುದು ನಮ್ಮ ಬೋರ್ಡಿನವರ ಕರ್ತವ್ಯವಾಗಿದೆಂದು ಮಾತ್ರ ಮರೆಯಕೂಡದು. ಮೈಸೂರಿನ ರೈಲು ಪರಸ್ಪರವಾಗಿಯೇ ಮಲಪೆಗೆ ಬಂದರೆ ಮಲಬಾರಿನಿಂದ ಇಲ್ಲಿ ಒಂದು ವಿಶ್ರಮಿಸುತ್ತಿದ್ದ ರೈಲ ಮಾರ್ಗಕ್ಕೆ ಉಡುಪಿಕೃಷ್ಣನ ದರ್ಶನವನ್ನು ಕೊಡಿಸುವುದು ಬೋರ್ಡಿನವರ ಕರ್ತವ್ಯವಾಗಿರುವುದರಿಂದ ಮೈಸೂರಿನ ಸರಕುಗಳು ಮಲಪೆಗೆ ಬಂದಿಳಿದರೂ ನಮ್ಮ ಜಿಲ್ಲೆಯ ವ್ಯಾಪಾರಕ್ಕಾಗಲಿ ಇಲ್ಲಿಯ ಬಂಡಸಾಲೆಗಳಿಗಾಗಲಿ ಏನೊಂದು ಹಾನಿಯಿಲ್ಲ. ಆದರೆ ಕಳೆದ ಸಂಚಿಕೆಯಲ್ಲಿ ನಮ್ಮ 'ವ್ಯಾಪಾರಿ'ಯು ಶಂಕಿಸಿದಂತೆ ಬಟಕಳ ಕಡೆಗೆ ಈ ಮಾರ್ಗವು ಹೋದರೆ ಮಾತ್ರ ಈ ಜಿಲ್ಲೆಗೆ ಅದೊಂದು ದೊಡ್ಡ ಹಾನಿಯೇ ಸರಿ!

ಮಾರ್ಗದ ಅಂತರವು ಮೈಸೂರು ಸಂಸ್ಥಾನದವರಿಗೆ ಬಟಕಳ ಬಂದರದಲ್ಲಿ ಅಷ್ಟು ಬೀಳದಿದ್ದುದರಿಂದ ಖರ್ಚಿನ ದೃಷ್ಟಿಯಿಂದ ಸುಲಭವಾಗುತ್ತಿದ್ದರೂ ಮೈಸೂರಿನವರ ಖರ್ಚನ್ನು ಉಳಿಸುವುದಕ್ಕಾಗಿ ನಮ್ಮ ಜಿಲ್ಲೆಯ ಬೋರ್ಡಿನವರು ಈ ಜಿಲ್ಲೆಯೊಳಗಿನ ಮಾರ್ಗದ ಖರ್ಚನ್ನು ಸಹಿಸಲು ಉದ್ಯುಕ್ತರಾದರೆ ಸಂಸ್ಥಾನದವರ ಈ ತೊಂದರೆಯೂ ಹೋಗುವದಾಗಿದೆ. ಕೊಡಗಿನಲ್ಲಿ ಕಾಫಿತೋಟಗರ ಸೌಕರ್ಯಕ್ಕಾಗಿ ಮೊದಲೊಮ್ಮೆ ಇಲ್ಲಿಂದ ರೈಲನ್ನು ಕೊಂಡುಹೋಗಬೇಕೆಂಬ ಪ್ರಸ್ತಾಪ ಹೊರಟು ಪಾಣೆಮಂಗಳೂರಿನವರೆಗೆ ಸರ್ವೆ ಕೂಡ ಆಗಿತ್ತು. ಆದರೆ ಈ ನಿರರ್ಥಕವಾದ ಪ್ರಯತ್ನದಲ್ಲಿ ಬೋರ್ಡಿನವರು ಮನಸ್ಸುಹಾಕದೆ ಮೈಸೂರಿನವರೊಡನೆ ಮೇಲಿನ ಪ್ರಶ್ನೆಯ ಕುರಿತು ತಮ್ಮ ಸಹಕಾರ್ಯವನ್ನು ತೋರಿಸಿದ್ದರೆ ಈ ಜಿಲ್ಲೆಗೆ ಹೆಚ್ಚಿನ ಪ್ರಯೋಜನವುಂಟಾಗುವುದು. ನಮಗೆ ಕೊಡಗಿನ ರೈಲು ಈಗ ಅಗತ್ಯವಿಲ್ಲ.

ಇರಲಿ, ನಮ್ಮ ಜಿಲ್ಲೆಯ ಹಾಲಹವಾಲೆಗಳಲ್ಲಿ ಈ ರೈಲಿನ ಪ್ರಶ್ನೆಯು ಅತಿ ಮುಖ್ಯವಾದುದರಿಂದ ಅದನ್ನು ಇಷ್ಟು ಉದ್ದವಾಗಿ ಪ್ರಸ್ತಾಪಿಸಿದ್ದೇವೆ. ಇದೇ ಪ್ರಶ್ನೆಗೆ ಸಂಬಂಧಪಟ್ಟ ಇನ್ನೂ ಕೆಲವು ಸಂಗತಿಗಳನ್ನೂ ಬೇರೆ ಕೆಲವು ಹಾಲುಹವಾಲೆಗಳನ್ನೂ ಯಥಾವಕಾಶವಾಗಿ ವಾಚಕರಿಗೆ ತಿಳಿಯಪಡಿಸುವೆವು.

ಪ್ರಾಥಮಿಕ ಶಿಕ್ಷಣ ಪ್ರಚಾರದಲ್ಲಿ ಮುನ್ಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಅಧಿಕಾರ.

ಕೆಲವು ವರ್ಷಗಳ ಹಿಂದೆ ಡಿಸೆಂಟ್ರಲಾಯ್ಜೇಷನ್ ಕಮಿಷನ್ನಿನವರು ಈ ವಿಷಯವಾಗಿ ಕೊಟ್ಟ ಸೂಚನೆಗಳನ್ನು ಆಧರಿಸಿ ಈಚೆಗೆ ಕೆಲವು ದಿನಗಳ ಹಿಂದೆ ಬಹುಮಾನಪಟ್ಟ ಇಂಡಿಯಾ ಗವರ್ನಮೆಂಟಿನವರು ಎಲ್ಲಾ ಸಂಸ್ಥಾನಗಳ ಅಧಿಕಾರಿಗಳಿಗೆ ಒಂದು ಸರ್ಕಿಲಾರ್ ಹುಕುಮನ್ನು ಕಳುಹಿಸಿರುವರು. ಡಿಸೆಂಟ್ರಲಾಯ್ಜೇಷನ್ ಕಮಿಷನ್ನಿನವರ ಸೂಚನೆಗಳಲ್ಲಿ ಮುನ್ಸಿಪಾಲಿಟಿಗಳಿಗೂ ಲೋಕಲ್ ಬೋರ್ಡುಗಳಿಗೂ ಈಗ ಇರುವ ಅಧಿಕಾರಗಳಿಗಿಂತ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕಾಗಿ ಖಂಡಿತವಾಗಿ ಸೂಚಿಸಿರುವರು. ಅವುಗಳನ್ನು ತಿಳಿದುಕೊಳ್ಳಬೇಕಾದರೆ ಈಗ ಇಂಥಾ ಬೋರ್ಡುಗಳಿಗೆ ಇರುವ ಅಧಿಕಾರಗಳನ್ನು ಸಂಕೋಚವಾಗಿ ವಿವರಿಸಬೇಕಾಗುವುದು. ಲೋಕಲ್ ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ವರ್ಷಾವಧಿಯ ಖರ್ಚಿನ ಅಂದಾಜು ಪಟ್ಟಿಯನ್ನು ತಯಾರಿಸಿ ಆಯಾ ಸ್ಥಳೀಯ ಸಂಸ್ಥಾನಿಕ ಗವರ್ನಮೆಂಟಿನವರ ಮಂಜೂರಾತಿಗೆ ಕಳುಹಿಸುವರು. ಒಂದು ಸಲ ಹೀಗೆ ಮಂಜೂರಾದ ಪಟ್ಟಿಯಲ್ಲಿ ಯಾವುದೊಂದು ಖಾತೆಯ ಬಗ್ಗೆ ವಿಂಗಡಿಸಿಟ್ಟ ಹಣಕ್ಕಿಂತ ಹೆಚ್ಚಿಗೆ ಹಣವನ್ನು ವೆಚ್ಚ ಮಾಡುವುದಾಗಲೀ ಅಥವಾ ಒಂದು ಖಾತೆಯಲ್ಲಿ ಖರ್ಚಾಗದೆ ಉಳಿದ ಹಣವನ್ನು ಇನ್ನೊಂದು ಖಾತೆಯಲ್ಲಿ ಉಪಯೋಗಿಸುವದಾಗಲೀ ಈ ಲೋಕಲ್ ಬೋರ್ಡುಗಳಿಗೆ ಅಧಿಕಾರವಿಲ್ಲ. ಇದ್ದ ಸಿಬಂದಿ ಹೆಚ್ಚಿಸುವುದು ಅಥವಾ ಕಡಿಮೆ ಮಾಡುವುದು, ಹೆಚ್ಚು ಖರ್ಚು ಮುಟ್ಟುವ ಕಾಮಗಾರಿಗಳನ್ನು ಮಾಡಿಸುವುದು ಮುಂತಾದ ವಿಲೆವಾರಿಗಳನ್ನು ಸರಕಾರದವರು ಮಂಜೂರು ಮಾಡಿದ ನಂತರವೇ ಬೋರ್ಡಿನವರು ಕೈಕೊಳ್ಳಬೇಕು. ಬೋರ್ಡುಗಳಲ್ಲಿ ತಮ್ಮ ಅವಶ್ಯಕತೆಗಳನ್ನು ಪೂರೈಸುವಷ್ಟು ಹಣಸಂಚಯವು ಇಲ್ಲದ ಕಾರಣ ಸರಕಾರದವರು ಆಗಾಗ ಶಾಲೆಗಳ ಸಂಖ್ಯೆ, ಸಿಬಂದಿ, ವೃದ್ಧಿ ಸಲಿಕ್ಕೂ ಜಲಾಶಯಗಳ ಅನುಕೂಲತೆ, ಕೊಳಸೀರು ಚರಂಡಿಗಳನ್ನು ಅಗಿಸುವುದು, ಸಾಂಕ್ರಮಿಕ ರೋಗ ನಿವಾರಣೆಯ ಏರ್ಪಾಡುಗಳು, ವೈದ್ಯ ಜನಸಹಾಯ ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸುವ ವಿಲೆವಾರಿ ಇವುಗಳಿಗೆಲ್ಲ ಅನುಕೂಲವಿದ್ದಷ್ಟು ದ್ರವ್ಯಾನುಕೂಲ ಒದಗಿಸಿಕೊಡುವುದರಿಂದ ಈ ರೀತಿಯ ಅಂಕುಶವನ್ನು ಸರಕಾರದವರು ತಮ್ಮ ಕೈಯೊಳಗನೆ ಇಟ್ಟುಕೊಂಡಿದ್ದರು. ಇಂಡಿಯಕ್ಕೆ ಹಲವು ವರ್ಷಗಳ ಹಿಂದೆ ವೈಸರಾಯಿಗಳಾಗಿ ಬಂದಿದ್ದ ಕೀರ್ತಿ ಶೇಷರಾದ ರಿಪನ್ ಪ್ರಭುಗಳು ಈ ಸ್ವಕೀಯ ರಾಜ್ಯಭಾರದ ಸಂಸ್ಥೆಗಳನ್ನು (ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿ) ಪ್ರಚಾರಕ್ಕೆ ತಂದಂದಿನಿಂದ ಪ್ರಜಾಜನಗಳು ಅಲ್ಲಲ್ಲಿ ಈ ಕಾರ್ಯನಿರ್ವಾಹದಲ್ಲಿ ಸರಕಾರದವರ ಈ ಅಂಕುಶದ ತೀಕ್ಷ್ಣತೆಯನ್ನು ಕಡಿಮೆ ಮಾಡಬೇಕೆಂದರೂ, ಇಂಥ ಸ್ವಕೀಯ ರಾಜ್ಯಭಾರದಲ್ಲಿ ಪ್ರಜಾಜನಗಳನ್ನು ಸಾಕಷ್ಟು ತಿದ್ದಿ ಇರುವಾಗ ಪ್ರಜಾಜನಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡದಿರುವುದು ಅವರ ಮೇಲಣ ಅಪನಂಬುಗೆಯನ್ನು ತೋರ್ಪಡಿಸುತ್ತದೆಂದೂ ಚರ್ಚೆಗಳು ಆಗಾಗ ಬರುತ್ತಲಿದ್ದವು. ಇಂಥ ಚರ್ಚೆಗಳು ರಾಷ್ಟ್ರೀಯ ಮತ್ತು ಸಂಸ್ಥಾನಿಕ ಸಭೆಗಳಲ್ಲಿ ಬಹಳ ಉಘಡವಾಗಿ ತೋರಿಕೊಳ್ಳುತ್ತಿದ್ದವು. ಹೀಗೆ ಪ್ರಜಾಜನಗಳು ಚರ್ಚಿಸಲಿಕ್ಕೆ ತಕ್ಕ ಮಟ್ಟಿಗೆ ಕಾರಣಗಳೂ ಇದ್ದವು. ಲೋಕಲ್‌ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಪ್ರಜಾಜನರ ಸ್ಥಳೀಯ ಪ್ರತಿನಿಧಿಗಳ ಸಭೆಗಳು ಎಂಬಂತೆ ಇದ್ದರೂ ವರ್ಷಾವಧಿ ಆಯವ್ಯಯಗಳ ಮೇಲೆ ಸರಕಾರದವರು ಇಟ್ಟುಕೊಂಡಿರುವ ಅಧಿಕಾರ ವಿನಾ, ಆಯಾಯ ಖಾತೆಗಾಗಿ ವಿಂಗಡಿಸಿಟ್ಟ ಹಣವನ್ನು ವಿನಿಯೋಗಿಸುವುದರಲ್ಲಿಯೂ ಈ ಬೋರ್ಡುಗಳಿಗೆ ಸರಕಾರಿ ಇಲಾಖಾ ಆಫಿಸರರು ಆಲೋಚನಾಕರ್ತರಾಗಿ ಇನ್ನೊಂದು ಬಗೆಯ ಅಂಕುಶವಿತ್ತು. ಶಾಲೆಗಳ ಬಗ್ಗೆ ವಿದ್ಯಾಇಲಾಖಾ ಆಫೀಸರರು, ಆಸ್ಪತ್ರೆ ಮತ್ತು ಆರೋಗ್ಯಖಾತೆಯ ಬಗ್ಗೆ ಜಿಲ್ಲಾ ಮೆಡಿಕಲ್ ಆಫಿಸರರು, ಕಾಮಗಾರಿಗಳ ಅಂದಾಜಿನ ಬಗ್ಗೆ ಎಕ್ಜೆಕ್ಯೂಟಿವ ಇಂಜನಿಯರು ಮೊದಲಾದ ಆಫಿಸರರು ಆಲೋಚನಾಕರ್ತರು. ಇವರ ಪೈಕಿ ಕೆಲವರು ಇಂಥ ಬೋ

ರ್ಡುಗಳ ಮೆಂಬರುಗಳಾಗಿಯೂ ಇರಬೇಕಾಗಿತ್ತು. ಹೀಗಾಗಿ ಇವರು ಆಯಾಯ ಇಲಾಖೆಯ ಕೆಲಸವನ್ನೂ ಮೇಲ್ವಿಚಾರಣೆಯನ್ನೂ ಮಾಡುವ ಉಪಾಸಕರು (experts) ಎಂಬ ಭಾವನೆಯಿಂದ ಇವರ ಅಭಿಪ್ರಾಯವನ್ನು ತಳ್ಳಿಹಾಕಲಿಕ್ಕೆ ಬೋರ್ಡುಗಳು ಮುಂದರಿಸಲಾರದೆ ಹೋದುವು. ಹೀಗಾಗಿ ಈ ಸರಕಾರಿ ನವುಕರರೇ ಬೋರ್ಡುಗಳ ಹೆಚ್ಚಿನ ಕೆಲಸಗಳನ್ನು ನಿರ್ವಹಿಸುತ್ತಿದ್ದ ಕಾರಣ ಅವರ ಮೇಲೆ ಯಾವುದೊಂದು ತರದ ಅಧಿಕಾರವಿಲ್ಲದ ಬೋರ್ಡುಗಳು ಅವರ ಸೂಚನೆಗಳಿಗೆ(ಹುಕುಮುಗಳಿಗೆ?)'ಗೋವಿನ್ದ ಗಣೇಶನ ರುಜು' ಹಾಕಬೇಕಾಗಿ ಬಂತು. ಹೀಗಾಗಿ ಬಾಹ್ಯದಲ್ಲಿ ಪ್ರಜಾಪ್ರತಿನಿಧಿಗಳು ಠರಾವುಗಳನ್ನು ಮಾಡಿದಂತೆ ತೋರಿದರೂ ಅಂಥಾ ಠರಾವುಗಳು ಮೇಲೆ ಹೇಳಿದ ಉಪಾಸಕರ ಸೂಚನೆಗಳನ್ನು ಮಂಜೂರು ಮಾಡಬೇಕಾಯಿತು. ಅವರು ಅದಕ್ಕೆ ವ್ಯತಿರಿಕ್ತವಾಗಿ ನಡೆದಾಗ ಆಯಾಯ ಸಂಸ್ಥಾನಿಕ ಸರಕಾರದವರ 'ಒದೆ' ಗಳನ್ನು ತಾಳುವ ಪ್ರಸಂಗ ಬಿತ್ತು. ಇದಲ್ಲದೆ ಮ್ಯೂನಿಸಿಪಾಲಿಟಿಗಳಲ್ಲಿ ಸರಕಾರೀ ನವುಕರರಲ್ಲದವರು ಅಧ್ಯಕ್ಷರಾಗಿದ್ದರೂ ಅವರ ಆಡಳಿತೆಯನ್ನು ರೆವಿನ್ಯೂ ಡಿವಿಜನ ಆಫಿಸರರೂ ಕಲ್ಲೆಕ್ಟರರೂ ವಿಮರ್ಶಿಸಿ ಈ ಮ್ಯೂನಿಸಿಪಾಲಿಟಿಗಳ ಕೈ ಅಡ್ಡಗಟ್ಟುವ ಸಂದರ್ಭಗಳೂ ಇದ್ದುವು. ಡಿಸ್ಟ್ರಿಕ್ಟ ಮತ್ತು ತಾಲೂಕು ಬೋರ್ಡುಗಳಲ್ಲಿ ಕಲ್ಲೆಕ್ಟರರೂ ರೆವಿನ್ಯೂ ಡಿವಿಜನ್ ಆಫಿಸರರೂ ಅಧ್ಯಕ್ಷರಾಗಿದ್ದು ಪ್ರಜಾಪ್ರತಿನಿಧಿಗಳು ಅವರ ನಿರ್ಣಯಗಳಿಗೆ ತಲೆದೂಗಬೇಕಾಯಿತು. ಈ ರೀತಿಯ ಸ್ವಕೀಯ ರಾಜ್ಯಭಾರವು ಬರೆ 'ತೆಂಗಿನಕಾಯಿಯ ಕಣ್ಣಿನಂತೆ' ಎಂದು ಜನರಲ್ಲಿ ಮುಖಂಡರ ಅಭಿಪ್ರಾಯವಾಯಿತು. ಇಂಥ ಅಭಿಪ್ರಾಯವು ಎಷ್ಟು ಮಟ್ಟಿಗೆ ವಾಸ್ತವವಾಗಿದೆ, ಅದು ದುರುಸ್ತಾಗುವ ಬಗೆ ಹೇಗೆ ಎಂಬುದನ್ನು ಸೂಚಿಸುವ ಕೆಲಸವನ್ನು ಡಿಸೆಂಟ್ರಲಾಯ್ಜೇಷನ್ ಕಮ್ಮಿಟಿಯವರು ವಹಿಸಿಕೊಂಡಿದ್ದರು. ಅಂಥಾ ಸೂಚನೆಗಳನ್ನು ಆಧರಿಸಿ ಮೇಲೆ ಹೇಳಿದ ಸರ್ಕಿಲಾರು ಹೊರಟಿರುವುದು.

ಈ ಸರ್ಕಿಲ್ಯಾರ ಮೇರೆಗೆ ನೂತನ ಇಸಂಗಳನ್ನು ಸೆಂಕ್ಷನ ಮಾಡುವುದು, ತಮ್ಮ ನವುಕರರನ್ನು ಶಿಕ್ಷಿಸುವುದು, ಕೆಲಸದಿಂದ ತಳ್ಳಿಹಾಕುವುದು ಮುಂತಾದ ಅಧಿಕಾರಗಳಲ್ಲಿ ಈಗ ಬೋರ್ಡುಗಳಿಗೆ ಪೂರ್ಣಸ್ವತಂತ್ರವು ಸಿಕ್ಕುವಂತಿದೆ. ಹೊಸ ಶಾಲೆಗಳನ್ನು ತೆರಿಯುವುದು, ನಿಷ್ಪ್ರಯೋಜನಕರವೆಂದು ಕಾಣುವ ಶಾಲೆಗಳನ್ನು ಮುಚ್ಚುವುದು ಮುಂತಾದ ಕೆಲಸಗಳಲ್ಲಿ ಬೋರ್ಡುಗಳ ಸ್ವತಂತ್ರಕ್ಕೆ ಯಾರ ನಿರ್ಬಂಧವೂ ಇನ್ನು ಇರಲಾರದು. ಆದರೆ ಅಗತ್ಯವೆಂದು ಕಾಣುವ ಸ್ಥಳಗಳಲ್ಲಿ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಆಯಾ ಜಿಲ್ಲೆಯ ಕಲ್ಲೆಕ್ಟರುಗಳು ಬೋರ್ಡುಗಳಿಗೆ ಆಜ್ಞಾಪಿಸಬಹುದಾಗಿ ನಿಯಮವಿದೆ. ಯಾವುದೊಂದು ಶಾಲೆಯನ್ನು ಮುಚ್ಚುವ ಸಂದರ್ಭದಲ್ಲಿ ಡಿರೆಕ್ಟರರ ಅಥವಾ ಕಲ್ಲೆಕ್ಟರರ ಅಭಿಪ್ರಾಯವನ್ನು ಕೇಳುವುದು ಅಗತ್ಯವೆಂದು ಸಂಸ್ಥಾನಿಕ ಸರಕಾರದವರ ಮತವಿದ್ದರೆ ಆ ರೀತಿಯಾಗಿ ಅವರು ಕ್ರಮಗಳನ್ನು ಏರ್ಪಡಿಸಬಹುದು ಎಂತಲೂ ಆ ಸರ್ಕಿಲಾರಿನಲ್ಲಿ ಕಾಣುತ್ತದೆ.

ಇದರಿಂದ ವಿದ್ಯಾಇಲಾಖೆಯ ಆಫಿಸರುಗಳ ಸೂಚನೆಗಳನ್ನೆ ಬೋರ್ಡುಗಳು ಮನ್ನಿಸಬೇಕು. ಅದಕ್ಕೆ ವಿರೋಧವಾಗಿ ವರ್ತಿಸಬಾರದಾಗಿ ಈ ವರೆಗೆ ಜಾರಿಯಲ್ಲಿರುವ ನಿಯಮಕ್ಕೆ ವಾಸ್ತವವಾಗಿ ತಿಲಾಂಜಲಿಯಾಯಿತು. ವಿದ್ಯಾಇಲಾಖಾ ಆಫಿಸರರು ಶಿಫಾರಸು ಮಾಡಿದವನನ್ನೆ ಬೋರ್ಡಿನವರು ನೇಮಿಸಬೇಕು, ಅವರು ಹೇಳಿದ್ದಲ್ಲಿಯೇ ಶಾಲೆಗಳನ್ನು ಸ್ಥಾಪಿಸಬೇಕು ಎಂಬ ನಿರ್ಬಂಧವು ಈಗ ಇನ್ನು ಹೋಗುವುದು. ಬೋರ್ಡಿನವರಿಗೆ ಈ ರೀತಿ ಪೂರ್ಣಸ್ವತಂತ್ರವನ್ನು ಕೊಡಲು ಮುಂದರಿಸಿದ ಸರ್ ಸಿ. ಶಂಕರನ್ನಾಯರವರ ಪ್ರೌಢಿಮೆಯನ್ನೂ ಮನೋದಾರ್ಢ್ಯವನ್ನೂ ನಾವು ಕೊಂಡಾಡುವೆವು. ಪ್ರಜಾಜನಗಳ ಕೋರಿಕೆಯು ಸಫಲವಾದುದು ನಮಗೆ ತುಂಬಾ ಸಂತೋಷವೇ ಸರಿ.

ಆದರೆ ಬಡವನಿಗೆ 'ಕಡುಬು ಕಂಡರೆ ಇಷ್ಟ, ತಿಂದರೆ ಸುಖ' ಎಂದು ಮಿತಿಮೀರಿ ತಿಂದರೆ ಜೀರ್ಣ ಮಾಂದ್ಯದ ರೋಗಗಳು ತಲೆದೋರುವುವು. ಹಾಗೆಯೇ ಬಹಳ ಕಾಲದಿಂದ ಪೇಚಾಡಿ ಹೊಂದಿದ ಈ ಅಧಿಕಾರವನ್ನು ಪ್ರಯೋಗಿಸುವುದರಲ್ಲಿ ವಿವೇಚನಾಶಕ್ತಿಯು ಬಹಳ ಬೇಕಾಗಿರುವುದು. ಈ ಕುರಿತು ಮುಂದಿನ ಸಂಚಿಕೆಗಳಲ್ಲಿ ಚರ್ಚಿಸುವೆವು.

ಅರ್ಜುನನ ವಿಜಯಾ ದಶಮಿ!

(ಪ್ರೇಷಿತ)

ಮಹಾಭಾರತದ ಯುದ್ಧವು ಹಳ್ಳಿಯವರಿಗೂ ಕೂಡ ಗೊತ್ತಿರುವುದು. ಈ ಯುದ್ಧವು ಪ್ರಾರಂಭವಾಗಬೇಕಾದರೆ ಮೊದಲು ಐದು ಜನ ಪಾಂಡವರೂ ಮತ್ತು ಅರಸಿಯವಳಾದ ದ್ರೌಪದಿ ಇವರು ವಿರಾಟನ ಮನೆಯಲ್ಲಿ ತಮ್ಮ ವೇಷವನ್ನೂ ಹೆಸರುಗಳನ್ನೂ ಬದಲಾಯಿಸಿಕೊಂಡು ಒಂದು ವರ್ಷದ ತನಕ ಯಾರಿಗೂ ಗೊತ್ತಾಗದ ಹಾಗೆ ಕಾಲಕ್ಷೇಪವನ್ನು ಮಾಡುತ್ತಿದ್ದರು. ಏತನ್ಮಧ್ಯದಲ್ಲಿ ಕೌರವರಿಗೆ ಪಾಂಡವರು ಎಲ್ಲಿದ್ದಾರೆಂಬುದನ್ನು ತಿಳಿದುಕೊಳ್ಳುವುದು ಬಹು ಆತುರವಿತ್ತು. ಅದಕ್ಕಾಗಿ ಅವರು ಎಲ್ಲ ಕಡೆಗಳಲ್ಲಿ ದೂತರನ್ನು ಕಳುಹಿಸಿಕೊಟ್ಟಿದ್ದರು. ಹೇತುವೇನಿತ್ತೆಂದರೆ, ಪಾಂಡವರ ಅಜ್ಞಾತವಾಸದ ಒಂದು ವರ್ಷವು ಅಜ್ಞಾತ ಸ್ಥಿತಿಯಲ್ಲಿ ಹೋಗಬಿಡದೆ ಅವರನ್ನು ಬಹಿರಂಗಕ್ಕೆ ತಂದು ತಿರಿಗಿ ೧೨ ವರ್ಷ ಕಾಡಿಗೆ ಅಟ್ಟುವುದು. ಆದರೆ ಕೌರವರ ಈ ಹೇತುವು ಸಫಲವಾಗಲಿಲ್ಲ. ಒಂದು ಸಂಗತಿ ಮಾತ್ರ ಅವರಿಗೆ ದೂತರ ಮುಖದಿಂದ ತಿಳಿದುಬಂತು:—ವಿರಾಟನ ಸೇನಾಪತಿಯಾದ ಕೀಚಕನನ್ನೂ ಅವನ ೧೦೫ ಜನ ತಮ್ಮಂದಿರನ್ನೂ ಗಂಧರ್ವರು ಕೊಂದಿರುವರು. ಈ ವಾರ್ತೆಯನ್ನು ಕೇಳಿ ಕೌರವರು ಸಂಶಯಗೊಂಡರು. ಶೂರನಾದ ಕೀಚಕನನ್ನು ವಧಿಸಲು ಸಾಮಾನ್ಯರಿಂದಾದುದಲ್ಲ. ಪಾಂಡವರಲ್ಲಿ ಭೀಮನೇ ಈ ಕೆಲಸವನ್ನು ಮಾಡಿರಬೇಕು. ಈ ಸಂಶಯವು ಕೌರವರಲ್ಲಿ ಮೂಡುತ್ತಿದ್ದಾಗ ತ್ರಿಗರ್ತದ ಅರಸನಾದ ಸುಶರ್ಮನು ಕೀಚಕನ ಪೂರ್ವ ವೈರವನ್ನು ತೀರಿಸಲು ಇದೇ ಸಮಯವೆಂದು ತಿಳಿದು ಮತ್ಸ್ಯ ದೇಶವನ್ನಾಕ್ರಮಿಸುವ ಉದ್ದೇಶದಿಂದ ಕೌರವರೊಡನೆ ಸೇರಿದನು. ಅವರಿಗೂ ಅದೇ ಬೇಕಿತ್ತು. ಪಾಂಡವರು ಗುಪ್ತರೂಪದಿಂದಿದ್ದರೆ ಅವರನ್ನು ಈ ಪ್ರಸಂಗದಲ್ಲಿ ಹೊರಪಡಿಸಬಹುದು; ಇಲ್ಲವೆ ಆ ದೇಶದ ಕೆಲವು ಭಾಗವನ್ನಾದರೂ ತಮ್ಮದಕ್ಕೆ ಕೂಡಿಸಬಹುದು. ಅಂತು ಇಬ್ಬರು ಒಟ್ಟಾದರು. ಸುಶರ್ಮನು ಮತ್ಸ್ಯ ದೇಶಕ್ಕೆ ತೆಂಕು ಪಾರ್ಶ್ವದಿಂದ ಮುತ್ತಿಗೆ ಹಾಕಿದನು, ಕೌರವರು ಪಡುದಿಕ್ಕಿನಿಂದ.

ವಿರಾಟನ ಮನೆಯಲ್ಲಿರುವಾಗ ಅರ್ಜುನನು "ಬೃಹನ್ನಡೆ" ಎಂಬ ಹೆಸರನ್ನು ಧರಿಸಿ ಸ್ತ್ರೀ ವೇಷದಿಂದ ಹುಡುಗಿಯರಿಗೆ ಸಂಗೀತ ವಿದ್ಯೆಯನ್ನು ಕಲಿಸಿಕೊಂಡಿದ್ದನು. ನಗರದ ಉತ್ತರ ದಿಕ್ಕಿನಲ್ಲಿ ಕೌರವರು ವಿರಾಟನ ದನಗಳನ್ನು ಹಿಡಿದು ದಂಗೆ ಎಬ್ಬಿಸಹತ್ತಿದರು. ವಿರಾಟನೂ ಅವನ ಸೈನಿಕರೂ ತೆಂಕು ಕಡೆಯಲ್ಲಿ ಸುಶರ್ಮನ ಪಾರಿಪತ್ಯದಲ್ಲಿ ತೊಡಗಿದ್ದರು. ಕೌರವರ ಕಡೆಗೆ ಯಾರೂ ಇದ್ದಿಲ್ಲ. ಸಾರಥಿಯ ಕೆಲಸವನ್ನು ಬೃಹನ್ನಡೆಯ ಕೈ ಒಪ್ಪಿಸಿ ವಿರಾಟನ ಮಗನಾದ ಉತ್ತರನು ಈ ಕೆಲಸಕ್ಕೆ ಸೊಂಟ ಕಟ್ಟಿದನು. ಇಬ್ಬರು ಹೊರಟರು. ಹೋರಾಟವು ಪ್ರಾರಂಭವಾಯಿತು. ಆದರೆ ಹುಡುಗನೇ ಅವನು! ಅವನಿಂದೇನಾದೀತು! ಸಾರಥಿಯು ಹೇಳುವ ಕ್ಷತ್ರ ಧರ್ಮವನ್ನಾಗಲಿ, ಉಪದೇಶವನ್ನಾಗಲಿ ಕೇಳಲೊಲ್ಲನು! ಅಲ್ಲಿಂದ ತಪ್ಪಿದರೆ ಅವನಿಗೆ ಸಾಕಾಗಿತ್ತು. ಆದರೆ ಬೃಹನ್ನಡೆಯು ಆಗ್ರಹದಿಂದ—ಬರೆ ಆಗ್ರಹದಿಂದಲ್ಲ, ದುರಾಗ್ರಹದಿಂದ—ಕೌರವರೊಡನೆ ಕಾದಾಡಲು ಒಪ್ಪಿಕೊಂಡನು. ಯೋದ್ಧನಾಗಿ ಅಲ್ಲ, ಸಾರಥಿಯಾಗಿ ಉತ್ತರನು ಈ ಮಾತಿಗೆ ಒಪ್ಪಿದನು. ಕೂಡಲೆ ಬೃಹನ್ನಡೆಯು ರಥವನ್ನು ಆ ನಗರದ ಸ್ಮಶಾನದ ಕಡೆಗೆ ತಿರುಗಿಸಿದಳು. ಅವಳ ಆಜ್ಞೆಯಿಂದ ಉತ್ತರನು ಶಮೀ ಮರಕ್ಕೆ ತೂಗುಹಾಕಿದ ಪಾಂಡವರ ಶಸ್ತ್ರಗಳನ್ನು ಕೆಳಗಿಳಿಸಿದನು. ಅರ್ಜುನನು ಬೃಹನ್ನಡೆಯ ತನ್ನ ವೇಷದ ಮತ್ತು ಬೇರೆ ಸಹೋದರರ ವೇಷ ಹೆಸರುಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಉತ್ತರನಿಗೆ ಸೂಚಿಸಿ ಅವನ ಶಂಕೆಯನ್ನು ಪರಿಹರಿಸಿದನು.

ವಿಜಯಾ ದಶಮಿಯ ದಿವಸ. ಅರ್ಜುನನು ಶುಚಿರ್ಭೂತನಾಗಿ ಉತ್ತರನು ಇಳಿಸಿದ ಶಸ್ತ್ರಗಳಿದ್ದಲ್ಲಿಗೆ ಹೋಗಿ ಪೂರ್ವಾಭಿಮುಖನಾಗಿ ತನ್ನ ಎಲ್ಲ ದಿವ್ಯಾಸ್ತ್ರಗಳನ್ನು ಸ್ಮರಿಸಿ ಮೂವತ್ತೆರಡುವರೆ ವರುಷಗಳ ತನಕ ಕೈಯಲ್ಲಿ ಉಪಭೋಗಿಸಿ ಒಂದು ವರ್ಷದ ರಜೆಯಲ್ಲಿ ಇಟ್ಟಿದ್ದ ಪ್ರಸಿದ್ಧವಾದ ಗಾಂಡೀವ ಧನುಸ್ಸನ್ನು ಕೈಯಲ್ಲಿ ತಕ್ಕೊಂಡು ಅದರ ಟಣತ್ಕಾರದಿಂದ ಹತ್ತು ದಿಕ್ಕುಗಳನ್ನು ತುಂಬಿಸಿಬಿಟ್ಟನು! ಈ ಗಾಂಡೀವವನ್ನು ಪುನಃ ಸ್ವೀಕರಿಸುವಾಗ ಅರ್ಜುನನು ಆತ್ಮಗತವಾಗಿ ಆಯಾ ದೇವತೆಗಳನ್ನು ಪ್ರಾರ್ಥಿಸಿದನು. ಆ ಪ್ರಾರ್ಥನೆಯು ಬಹಳ ದೊಡ್ಡದಿದೆ. ಅದರ ಸಾರಾಂಶವು ಮಾತ್ರ ಕೆಳಗೆ ಕೊಡಲ್ಪಡುತ್ತದೆ.

"ವಿಜಯಾದಶಮಿಯ ದಿವಸವಿದು! ಈ ಶಮೀ ಹಾಗೂ ಅನ್ಯ ವೃಕ್ಷಗಳಲ್ಲಿಯೂ ಇರುವ ವನದೇವತೆಯೇ, ಇಂದಿಗೆ ನನಗತಿಪ್ರಿಯವಾದ ಈ ಗಾಂಡೀವವನ್ನು ಧರಿಸುವೆನು. ದಿಗ್ದೇವತೆಗಳೇ, ಒಂದು ವರುಷದ ವರೆಗೆ ಮಲಗಿಕೊಂಡಿದ್ದ ಈ ಧನುಸ್ಸನ್ನು ವಿಜಯಾದಶಮಿಯ ಸುಮುಹೂರ್ತದಲ್ಲಿ ತೆಕ್ಕೊಳ್ಳುವೆನು. ಪಂಚ ಮಹಾ ಭೂತಗಳಿಗೆ ಆಶ್ರಯವಾಗಿರುವ ದೇವತೆಗಳೇ, ಸಪ್ತರ್ಷಿ ಮಂಡಲದ ಸ್ವಾಮಿಗಳೇ, ಸ್ವರ್ಗಲೋಕದಲ್ಲಿರುವ ಇಂದ್ರಾದಿ ದೇವತೆಗಳೇ, ಈ ಬಿಲ್ಲನ್ನು ತಿರಿಗಿ ಹಿಡಿಯುವೆನು! ನಿಮ್ಮೆಲ್ಲ ದೇವತೆಗಳ ಸಾಮರ್ಥ್ಯವೂ, ವೀರ್ಯವೂ, ತೇಜಸ್ಸೂ ಈ ನನ್ನ ಗಾಂಡೀವದಲ್ಲಿ ಒಟ್ಟು ಸೇರಲಿ! ನ್ಯಾಯ್ಯವಾದ ನಮ್ಮ ರಾಜ್ಯಭಾಗವನ್ನು ಕೊಡದೆ ನಮ್ಮನ್ನು ಕಾಡಿಗೆ ಅಟ್ಟಿದ ಕೌರವರರ ಮೇಲೆ ಪ್ರಯೋಗಿಸುವಾಗ ಈ ಬಿಲ್ಲಿನಲ್ಲಿಯೂ ಈ ಅಂಬಿನಲ್ಲಿಯೂ ನಿಮ್ಮ ಆಶೀರ್ವಾದವಿರಲಿ! ಸ್ವಕೀಯ ರಾಷ್ಟ್ರದ ಪ್ರೀತಿಯು ಎಷ್ಟು ಅನಿವಾರ್ಯವಾದುದು, ಸಹಜವಾದುದು ಇದು ಇಂದ್ರಾದಿ ದೇವತೆಗಳೇ, ನಿಮಗೆ ಗೊತ್ತಿಲ್ಲದ ಸಂಗತಿಯಲ್ಲ.

ದಾನವರೂ, ಅಸುರರೂ ನಿಮ್ಮ ಸ್ವರ್ಗಲೋಕವನ್ನು ಆಕ್ರಮಿಸಿ ನಿಮ್ಮನ್ನು ಗತಿಗೇಡು ಮಾಡಿದಾಗ ನಿಮಗಾದ ದುಃಖವನ್ನೂ, ಬಂದ ಆಪತ್ತನ್ನೂ ಮತ್ತು ಸಂಭವಿಸಿದ ಕಷ್ಟಗಳನ್ನೂ ದೇವತೆಗಳೇ, ನೀವು ಮರೆತಿರುವಿರಾ? ಇದೇ ಸ್ಥಿತಿಯು ಈಗ ನಮ್ಮ ಪಾಂಡವರಿಗೆ ಘಟಿಸಿದೆ. ನಿಮ್ಮ ಆಶೀರ್ವಾದವೂ ಬೆಂಬಲವೂ ವರದ ಹಸ್ತವೂ ನಮಗೆ ಬೇಕಲ್ಲವೇ? ಅದುದರಿಂದ ಈ ಗಾಂಡೀವವನ್ನು ನಿಮ್ಮ ವರದ ಹಸ್ತದಿಂದ ಆಶೀರ್ವದಿಸಿರಿ!

"ಪ್ರಿಯ ಗಾಂಡೀವಧನುಸ್ಸೇ, ಸಂಕಟ ಸಮುದ್ರದಲ್ಲಿ ಬಿದ್ದು ಮುಳುಗುವ ಈ ಪಾಂಡವರಿಗೆ ನೀನು ಅಚ್ಛಿದ್ರವಾದ ಒಂದು ಹಡಗಲ್ಲವೇ? ಈ ಒಂದು ವರ್ಷದ ವಿಯೋಗವೇ ಸಾಕು! ಇನ್ನು ಮುಂದೆ ಅದನ್ನು ಸಹಿಸಲಾರೆ! ಬಾ! ಪ್ರಿಯ ಗಾಂಡೀವಾ! ಬಾ! ನಿನ್ನ ಸ್ಪರ್ಶದಿಂದ ಈ ನನ್ನ ಕೈಗಳನ್ನು ಪುನಃ ಪವಿತ್ರಿಸುವೆನು! ಈ ಕೈಗಳಿಗೆ ಇದೀಗ ವೀರಾಭರಣ! ನಿನಗೆ ನಮಸ್ಕಾರವಿರಲಿ! ನಮ್ಮ ಸತ್ಯವೂ, ಯಶಸ್ಸೂ, ಕೀರ್ತಿಯೂ, ಗಾಂಡೀವಾ! ನಿನ್ನಲ್ಲಿಯೇ ಇದೆ. ಬಾ! ಇಗೋ ನಿನಗೆ ಕಿರಿಗಿ ವಂದನೆ!"

ವಾಚಕರೇ, ವಿಜಯಾದಶಮಿಯ ಸಮುಹೂರ್ತದಲ್ಲಿ ವಿಜಯನು ತನ್ನ ಧನಸ್ಸನ್ನು ಪುನಃ ಕೈಕೊಂಡು ಯಾವ ಕಾರ್ಯವನ್ನು ಮಾಡಿರುವನು. ಇದನ್ನು ನಾವು ಹೇಳಬೇಕಾದುದಿಲ್ಲ. ಭಾರತವೇ ಹೇಳುತ್ತಿದೆ.

~~~~~

ಮಾರಾಟದ ಬಗ್ಗೆ ಅರಿಸಿಣವನ್ನು ತಿಕ್ಕಿ ತಯಾರ ಮಾಡತಕ್ಕ ಸುಲಭವಾದ ರೀತಿಯು.

~~~~~

ಅರಿಸಿಣವು ದಕ್ಷಿಣ ಪ್ರಾಂತದಲ್ಲಿ ತೋಟದೊಳಗೆ ಬೆಳೆಯುತಕ್ಕ ಮಹತ್ವದ ಪೈರುಗಳ ಪೈಕಿ ಒಂದು ಪೈರು ಅದೆ. ಉತ್ಪನ್ನ ದೃಷ್ಟಿಯಿಂದ ಇದು, ಕಬ್ಬಿನ ಕೆಳಗಿನ ನಂಬರಿನೇದು, ಎನ್ನಬಹುದು. ಈ ಬೆಳೆಯು ಬರಬೇಕಾದರೆ ಅಜಮಾಸು ೮ ತಿಂಗಳು ಬೇಕಾಗುವದು. ಅಂದರೆ ಬೇಸಿಗೆಯಲ್ಲಿ ಕೆರೆಯ ಇಲ್ಲವೆ ಬಾವಿಯ ನೀರಿನ ಕೊರತೆ ಬರುವ ಪೂರ್ವದಲ್ಲಿಯೇ ಬೆಳೆಯು ಬರುತ್ತದೆ.

ಅರಿಸಿಣವು ಬಂದನಂತರ, ಅದರ ಎಲ್ಲ ಗಡ್ಡೆಗಳನ್ನು ಅಗಿದು ತೆಗೆದು, ಮೇಲಿನ ಮಣ್ಣನ್ನು ಸ್ವಚ್ಛವಾಗಿ ತೆಗೆಯಬೇಕಾಗುತ್ತದೆ. ನಂತರ ಮುಂದಿನ ವರ್ಷದಲ್ಲಿ ಬಿತ್ತಲಿಕ್ಕೆ ಸಾಲುವಷ್ಟು ಬೀಜಗಳನ್ನು ಇಟ್ಟುಕೊಂಡು, ಉಳಿದ ಗಡ್ಡೆಗಳನ್ನು ಮಾರಬೇಕಾಗುವದು.

ಮಾರಾಟದ ಬಗ್ಗೆ ಅರಿಸಿಣವನ್ನು ತಯಾರ ಮಾಡುವದೆಂದರೆ, ಮೊದಲು ಅದನ್ನು ಕುಚ್ಚಿ ಒಣಗಿಸಬೇಕು; ತರುವಾಯ ತಿಕ್ಕಿ ಸ್ವಚ್ಛಮಾಡಬೇಕು.

ಅರಿಸಿಣವನ್ನು ತಿಕ್ಕುವ ಉದ್ದೇಶವೇನಂದರೆ:—ಅದರ ಮೇಲೆ ನೀರಿಗೆ ಗಟ್ಟಿದ ತೊಗಟೆಯನ್ನು ತೆಗೆದು ಅರಿಸಿಣಕ್ಕೆ ಬಣ್ಣ ಬರುವಂತೆ ಮಾಡುವದಿರುತ್ತದೆ. ಇದನ್ನು ತಯಾರ ಮಾಡುವ ವಾಡಿಕೆಯಾದ ಪದ್ಧತಿಯು ಬಹು ಶ್ರಮದ್ದಿರುತ್ತದೆ. ಸಾತಾರಾ ಜಿಲ್ಲೆ ಮತ್ತು ಅದರ ಸಮೀಪದ ಸಂಸ್ಥಾನಗಳಲ್ಲಿ ಹೆಚ್ಚು ಪ್ರಮಾಣದಿಂದ ಅರಿಸಿಣವು ಬೆಳೆಯುತ್ತದೆ. ಅಲ್ಲಿ ಈ ಕೆಲಸವನ್ನು ಯಂತ್ರದ ಸಹಾಯದಿಂದ ಮಾಡಹತ್ತಿದ್ದಾರೆ. ಆದರೆ ಸ್ವಲ್ಪ ಪ್ರಮಾಣದ ಮೇಲೆ ಬೆಳೆಯುವ ಪ್ರದೇಶಗಳಲ್ಲಿ ಈ ತಿಕ್ಕುವ ಕೆಲಸವನ್ನು ಕೂಲಿಕಾರರ ಕಡೆಯಿಂದ ಮಾಡಿಸಬೇಕಾಗುತ್ತದೆ. ಈ ಕೂಲಿಕಾರರು ಕೆಳಗೆ ಕೂತು ಅರಿಸಿಣ ಬೇರುಗಳಿಗೆ ಹಳದೀ ಬಣ್ಣ ಬರುವವರೆಗೆ, ಕಾಲಿನಿಂದ ತಿಕ್ಕುತ್ತಾರೆ. ಹೀಗೆ ಮಾಡುವದಕ್ಕಿಂತ ಹೆಚ್ಚು ಸೋವಿಯಾಗುವಂತೆ ಕೆಳಗೆ ಬರೆದಂತೆ ಯಂತ್ರರಚನೆಯನ್ನು ಮಾಡಿರುತ್ತದೆ.

ನಿಮ್ಮ ಕಡೆ ಯಾವಾಗಲೂ ಸೀಮೆಂಟ (ನಯ ಗಚ್ಚು ಮಾಡತಕ್ಕ ಪುಡಿ) ಕಟ್ಟಿಗೆಯ ಪೀಪಾಯಿಗಳಲ್ಲಿ ತುಂಬಿ ಬರುವದು. ಅಂಥ ಪೀಪಾಯಿಗಳಲ್ಲಿ - ತೆರವಾದ ಪೀಪಾಯಿಯನ್ನು ತೆಗೆದುಕೊಂಡು, ಅದರ ಎರಡೂ ಮಗ್ಗಲಿನ ಬಾಯಿ ಮುಚ್ಚಬೇಕು. ಆ ಮೇಲೆ ಅದರ ಮಧ್ಯ ಗರ್ಭದೊಳಗೆ ಒಂದು ಅಚ್ಚು ಹಾಕಬೇಕು. (ಕಬ್ಬಿಣದಿದ್ದರೆ ಒಳ್ಳೇದು) ಈ ಪೀಪಾಯಿಯು ಒಂದು ಮಗ್ಗಲಿಗೆ ೯ ಇಂಚು ಉದ್ದ ಮತ್ತು ೬ ಇಂಚು ಅಗಲವಾದ ಒಂದು ಬಾಯಿ ಮಾಡಬೇಕು. ತರುವಾಯ ಆ ಪೀಪಾಯಿಯನ್ನು ಎರಡು ಬಾಯಿಗಳ ನಡುವೆ ಕೂಡಿಸಬೇಕು. ಈ ಪೀಪಾಯಿಯಲ್ಲಿ ಒಣಗಿದ ಅರಶಿಣ ಬೇರುಗಳನ್ನು ಅರ್ಧ ಭಾಗ ತುಂಬಿ, ಪೀಪಾಯಿಯ ಬಾಯಿ ಮುಚ್ಚಬೇಕು. ಮತ್ತು ಅಚ್ಚಿನ ತುದಿಗೆ ಒಂದು ಕಡೆ ಕೂಡಿಸಿದ ಕೈಯಿಂದ ದುಂಡಗೆ ಅಥವಾ ಅರ್ಧ ವರ್ತುಳವಾದ ಗತಿಯಿಂದ ಪೀಪಾಯಿ ತಿರುಗಿಸಬೇಕು. ವರ್ತುಳವಾಗಿ ತಿರುಗಿಸುವದರಿಂದ ಮನುಷ್ಯನು ಬೇಗನೆ ದಣಿಯುತ್ತಾನೆ. ಒಳಗೆ ಹಾಕಿದ ಅರಶಿಣ ಬೇರುಗಳಲ್ಲಿ ಸ್ವಲ್ಪ ಸಣ್ಣ ಕಲ್ಲುಗಳನ್ನು ಕೂಡಿಸಿದರೆ, ತಿಕ್ಕುವ ಕೆಲಸವು ಬೇಗನೆ ಆಗುತ್ತದೆ. ಈ ಪೀಪಾಯಿಯ ಸುತ್ತಲು ¾ ಇಂಚು ವ್ಯಾಸವುಳ್ಳ ತೂತುಗಳನ್ನು ೪-೬ ಇಂಚುಗಳ ಅಂತರದ ಮೇಲೆ ಮಾಡಿದರೆ, ಅವುಗಳೊಳಗಿಂದ ತಿಕ್ಕುವಾಗ್ಗೆ ಹೊರಡುವ ಅರಿಶಿಣದ ಮೇಲಿನ ಹುಡಿಯು ಹೊರಟು ಹೋಗುವದು.

ಬೇರಿನ ಬಣ್ಣ ನೆಟ್ಟಗೆ ಕಾಣಬೇಕೆಂದು ಅರಿಶಿಣದ ನೀರನ್ನು ಉಗ್ಗುವ ರೂಢಿ ಇರುತ್ತದೆ. ಆದರೆ ಈ ಕೆಲಸ ಕೇವಲ ನೀರಿನಿಂದಲೇ ಸಾಗುತ್ತದೆ. ಅರಿಶಿಣ ಗಾಣವು (ತಿರುಗಿಸುವ ಕೆಲಸ) ತಯಾರ ಆಗಲಿಕ್ಕೆ ಬಂದಿತೆಂದರೆ, ಒಂದು ತಪ್ಪೇಲಿ ನೀರನ್ನು ಅದರಲ್ಲಿ ಸಿಂಪಡಿಸಬೇಕು.

ತಿಕ್ಕುವ ಪದ್ಧತಿ	ಒಂದು ಗಾಣಕ್ಕೆ ತೆಗೆದುಕೊಂಡ ಅರಿಶಿಣ ಪೌಂಡು.	ಕೂಲಿಯು — ಗಂಡಸು	ಕೂಲಿಯು — ಹೆಂಗಸು	ವೇಳೆ — ತಾಸು	ವೇಳೆ — ಮಿ.	ಒಂದು ಮಣ (೮೦ ಪೌಂಡು) ಅರಿಶಿಣವನ್ನು ತಿಕ್ಕುವ ಖರ್ಚು.
						ರು. ಆ. ಪೈ.
ಹಳೇ ಪದ್ಧತಿ	೪೦	೪	೦	೧	೦	೦—೫—೦
ಪೀಪಾಯಿಯಲ್ಲಿ ತಿಕ್ಕುವದು (ಹೊಸ ಪದ್ಧತಿ)	೨೦	೦	೧	೧	೦	೦—೧—೩

ಹಳೆ ಮತ್ತು ಹೊಸ ಪದ್ಧತಿಯಲ್ಲಿ ಅರಿಶಿಣವನ್ನು ತಿಕ್ಕಿ ತಯಾರ ಮಾಡಬೇಕಾದರೆ, ತಗಲುವ ಕೂಲಿ, ವೇಳೆ ಮತ್ತು ಖರ್ಚು, ಇವುಗಳ ತೂಲನಾತ್ಮಕ ಅಂಕಿಗಳನ್ನು ಮೇಲಿನ ಕೋಷ್ಟಕದಲ್ಲಿ ಕೊಟ್ಟಿರುತ್ತದೆ.

ಮೇಲಿನ ಅಂಕಿಗಳ ಮೇಲಿಂದ ಕಂಡು ಬರುವದೇನಂದರೆ. ಹೊಸ ಪದ್ಧತಿಯಿಂದ ಖರ್ಚು ಹಳೇ ಪದ್ಧತಿಯ ಖರ್ಚಿನ ¼ ತಗಲುತ್ತದೆ; ಮತ್ತು ಈ ತಿಕ್ಕುವ ಕೆಲಸವು ಹೆಂಗಸರಿಂದಲೇ ಸಾಗುವದು. ಅರಿಶಿಣವನ್ನು ತಿಕ್ಕಿ ತಯಾರ ಮಾಡುವ ಪೀಪಾಯಿಯನ್ನು ಹಳ್ಳಿಯ ಬಡಿಗರ ಕಡೆಯಿಂದ ಸಹ ಮಾಡಿಸಲಿಕ್ಕೆ ಬರುವದು. ಆದರೆ ಇದು ಯಾರಿಗಾದರೂ ಮಾರಲಿಕ್ಕೆ ಬೇಕಾಗಿದ್ದರೆ ಸುಪೆರಿಂಟೆಂಡೆಂಟ ಧಾರವಾಡ ಫಾರ್ಮ ಇವರ ಕಡೆ ಬರೆದರೆ 2½ ರೂಪಾಯಿಗಳಿಗೆ ಅವರು ಕಳಿಸಿಕೊಡುವ ವ್ಯವಸ್ಥೆ ಮಾಡುವರು.

ಓ. ಸ. ಪ.

~~~~~

ಪತ್ರವ್ಯವಹಾರ.

ಬೆಳೆಕಟಾವು.

~~~~~

ಅಯ್ಯಾ,

ತಮ್ಮ ತಾ. ೨೯—೯—೧೬ನೇ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸೋಣಾದ ಕಾರ್ಕಳ ಸಬ್ ಮೇಜಿಸ್ಟ್ರೇಟರವರ "ಬೆಳೆಕಟಾವು" ಎಂಬ ಲೇಖನವನ್ನು ಓದಿ ನೋಡಿ ಬಹಳ ಸಂತೋಷವಾಯಿತು. ತಮ್ಮ ಕೋರ್ಟಿಗೆ ಬರಬಹುದಾದ ನಂಪ್ರಗಳನ್ನು ತೀರ್ಮಾನಿಸಿ ಪ್ರಜೆಗಳನ್ನು ನ್ಯಾಯ್ಯಕ್ಕೆ ಗುರಿಪಡಿಸುವ ಕೆಲಸದಲ್ಲಿ ಇರುವ ಯಂ. ರಾಘವೇಂದ್ರರಾಯರವರಿಗೆ ರೈತರ ಬೆಳೆಕಟಾವಿನ ವಿಶಯದಲ್ಲಿ ಇರುವ ತೊಂದರೆಗಳ ನಿವಾರಣೆ ಬಗ್ಗೆ ತಮಗೆ ತೋರಿಬಂದ ಅಭಿಪ್ರಾಯವನ್ನು ಪ್ರಕಟಿಸುವ ಮನಸ್ಸು ಹುಟ್ಟಿದ್ದು ಅತ್ಯೀ ಶ್ಲಾಘನೀಯವಾದ ಕಾರ್ಯವೇ ಸರಿ. ಕಳೆದ ವರ್ಷದ ಕಾಲಸ್ಥಿತಿ ಕೆಟ್ಟುಹೋದದ್ದರಿಂದ. ಈ ವರ್ಷದಲ್ಲಿ ರೈತರು ಪಡಬೇಕಾದ ಸಂಕಷ್ಟಗಳನ್ನು ನೋಡಿ ಎಂಥಾ ಕಠಿಣ ಹೃದಯದವರಿಗಾದರೂ ಮನಸ್ಸು ಕರಗಲೇ ಬೇಕು. ಹೀಗಿರುವಲ್ಲಿ ಮುಂಚೆಯೇ ದಯಾಳುಭಾವರಾದ ನಮ್ಮ ಯಂ. ರಾಘವೇಂದ್ರರಾಯರವರಿಗೆ ರೈತರ ಕಷ್ಟನಿವಾರಣೆ ಅಭಿಪ್ರಾಯವನ್ನು ಪ್ರಕಟಿಸುವರೇ ಹುಟ್ಟಿದ ಮನಸ್ಸು ಆಶ್ಚರ್ಯವಲ್ಲ.

ನಮ್ಮ ಜಿಲ್ಲೆಯಲ್ಲಿ ಗೋವುಗಳ ಸಂರಕ್ಷಣೆಯು ಬಹಳ ನಿಕೃಷ್ಟ ತರದ್ದಾಗಿರುತ್ತದೆ. ಅವುಗಳು ತಮ್ಮಿಂದ ತಾವೇ ತಮ್ಮ ಉದರವನ್ನು ತುಂಬಿಸಿಕೊಂಡು ತಮ್ಮ ಕೊರಳಿಗೆ ಬಂದನಂತರ ನಾವು ಅವುಗಳಿಗೆ ಹಾಕುವ ತೀನಿಯು ಒಣಹುಲ್ಲಿನ ೨—೩ ಸೂಡಿಗಳ ಹೊರತು ಹೆಚ್ಚು ಕಡೆಗಳಲ್ಲಿ ಬೇರೇನೂ ಇರುವದಿಲ್ಲ. ಆದುದರಿಂದ ನಾವು ಬೆಳಿಸುವ ಭತ್ತದ ಪೈರಿನಲ್ಲಿ ಭತ್ತವು ನಮ್ಮ ಬಗ್ಗೆ ಎಷ್ಟರಮಟ್ಟಿಗೆ ಅವಶ್ಯವಿರುತ್ತದೋ ಅಷ್ಟೇ ಅಗತ್ಯವು ಹುಲ್ಲಿನಿಂದ ನಮ್ಮ ಜಾನುವಾರುಗಳಿಗೆ ಇರುತ್ತದೆ. ಭತ್ತವಾಗಲಿ, ಹುಲ್ಲಾಗಲಿ ಯಾವದೂ ಹಾಳಾಗದಂತೆ ಬೆಳೆಕಟಾಯಿಸುವದು ರೈತನ ಉದ್ದೇಶವಲ್ಲದೆ ಭತ್ತವನ್ನು ಕಟಾವು ಮಾಡಿ ಹುಲ್ಲು ಹಾಳಾದರೆ ಆಗಲಿ ಎಂತ ಬಿಟ್ಟುಬಿಡುವ ಮನಸ್ಸು ರೈತನಲ್ಲಿ ಇಲ್ಲ. ಬೇರೆ ಜಿಲ್ಲೆಗಳಲ್ಲಿ ಜೋಲ, (Sorghum) ರಾಗಿ ವಗೈರೆ ಧಾನ್ಯಗಳನ್ನು ಕದಿರು ಮಾತ್ರ ಕೊಯಿದು ಗೋಣಿಚೀಲಗಳಲ್ಲಿ ತುಂಬಿಸಿ ಮನೆಗೆ ಸಾಗಿಸಿದ ನಂತರ ದಂಟುಗಳನ್ನು ಕೊಯ್ಯುವ ವಾಡಿಕೆ ಇರುತ್ತದೆ. ಭತ್ತದ ಪೈರನ್ನು ಆ ರೀತಿ ಕೊಯ್ಯುವರೇ ಸಾಧ್ಯವಿಲ್ಲ. ಯಾಕಂದರೆ ಬಿರುಗಾಳಿ ಮಳೆ ಸಮಯದಲ್ಲಿ ಒಂದರ ಕದಿರು ಇನ್ನೊಂದರ ದಂಟಿನ ಮಧ್ಯದಲ್ಲಿ ಇನ್ನೊಂದು ದಂಟು ಮತ್ತೊಂದರ ನಡುವಿನಲ್ಲಿ ಈ ರೀತಿಯಾಗಿ ಶಿಕ್ಕು (Entangled) ಬಿದ್ದುಕೊಂಡು ಕದಿರನ್ನು ಮಾತ್ರ ಕೊಯ್ಯುವ ಆಲೋಚನೆಯಿಂದ ಗದ್ದೆಗೆ ಶೇರಿದರೆ ಹೆಚ್ಚಿನ ಕದಿರುಕೊನೆಗಳು ಕಾಲಡಿಯಲ್ಲಿ ಶಿಕ್ಕಿ ಉದುರಿಹೋದೀತು.. ಕದಿರನ್ನು ಮಾತ್ರ ಕಟಾವುಮಾಡುವ ಕೆಲಸವು ಹೇಳಲಿಕ್ಕೆ ಸುಲಭ ಎಂತ ತೋರಿದರೂ ಮಾಡಲಿಕ್ಕೆ ಅಷ್ಟು ಸುಲಭವಾದ್ದಲ್ಲ. ಹ್ಯಾಗಾದರೂ ಆಗಲಿ ಎಂತ ಕದಿರನ್ನು ಮಾತ್ರ ಕಟಾವು ಮಾಡದರೆ, ನಳಿಗೆಯಂತೆ ಇರುವ ಭತ್ತದ ಗಿಡದ ದಂಟಿನೊಳಗೆ ನೀರು ಸೇರಿಕೊಂಡು ಹುಲ್ಲನ್ನು ತೀರಾ ಹಾಳುಮಾಡಿಬಿಟ್ಟೀತು. ಆದುದರಿಂದ ಕದಿರನ್ನೂ ದಂಟನ್ನೂ ಈಗಿನ ಪದ್ಧತಿ ಮೇರೆಗೆ ಒಟ್ಟಿಗೆ ಕಟಾವುಮಾಡುವದೇ ಒಳ್ಳೇದು ಎಂತ ತೋರಿಬರುವ ನನ್ನ ಅಭಿಪ್ರಾಯವನ್ನು ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸೋಣಾಗಲಿ.

Belanji.
3—10—1916.

B. Shinappa Tolar.
Land-holder.

ಯೂರೋಪದ ಮಹಾ ಯುದ್ಧ

.o.

ಕಳೆದ ಸಾರಿ ಯುದ್ಧ ವಾರ್ತೆಯು ಪ್ರಕಟವಾದನಂತರ ಪಶ್ಚಿಮ ರಣರಂಗದಲ್ಲಿ ಹಲವು ವಿಶೇಷ ಯುದ್ಧಕಾರ್ಯಗಳು ನಡೆದುಹೋದವು. ಮಿತ್ರರು ಮುಂದರಿದು ಕೋಟೆಕೊತ್ತಲುಗಳಿಂದ ಶತ್ರುಗಳು ಬಲಕಾಯಿಸಿಕೊಂಡಿದ್ದ ಥಿಪಾವೆಲ್ ಮತ್ತು ಕೋಂಬ್ಲಸ್ ಎಂಬೀ ಎರಡು ಪ್ರಾಮುಖ್ಯ ಗ್ರಾಮಗಳನ್ನು ಹಿಡಿದು, ಇನ್ನೂ ಮುಂದರಿದು ಜರ್ಮನ ನೆಲೆಯ ಮುಖ್ಯ ಸ್ಥಾನಕ್ಕೆ ೪ ಮೈಲು ದೂರದಲ್ಲಿರುವ ಕೆಲವು ಸ್ಥಳಗಳನ್ನು ಗೆದ್ದುಕೊಂಡರು. ಥಿಪಾವೆಲ್ ಮತ್ತು ಕೋಂಬ್ಲಸ್ ಎಂಬ ೨ ಗ್ರಾಮಗಳು ಎಂಕ್ರೆ ಮತ್ತು ಸೊಮ್ಮೆಯ ಮಧ್ಯೆ ಜರ್ಮನರು ಬಲಕಾಯಿಸಿಕೊಂಡಿದ್ದ ನೆಲೆಗಳ ಕೇಂದ್ರ ಸ್ಥಾನಗಳು. ಅವುಗಳ ಮೇಲೆ ಸೀದಾ ಅಭಿಯೋಗಮಾಡುವದು ಮಿತ್ರರಿಗೆ ಕಷ್ಟಸಾಧ್ಯವಾಗಿದ್ದುದರಿಂದ ಮಿತ್ರರು ಈ ಗ್ರಾಮಗಳ ಪಾರ್ಶ್ವದ ದಾರಿಗಳನ್ನು ಒಂದೊಂದೇಯಾಗಿ ಕಡಿಯುತ್ತಾ ಬಂದು ನಂತರ ಒಮ್ಮೇಲೆ ಬಿದ್ದು ಈ ಗ್ರಾಮಗಳನ್ನು ಧೀರತನದಿಂದ ಸ್ವಾಧೀನಮಾಡಿಕೊಂಡರು. ಈ ಗ್ರಾಮಗಳಲ್ಲಿ ಬಹಳ ಯುದ್ಧ ಸಾಮಗ್ರಿಗಳೂ ಬಹಳ ಮಂದಿ ಸೇನಿಕರೂ ಮಿತ್ರರ ಸೆರೆಬಿದ್ದರು. ಮಿತ್ರರಿಗೆ ಆದ ನಷ್ಟ ಅಕ್ಕಲ್ಪವಾಗಿರುವದು. ಬ್ರಿಟಿಷ ಸೇನೆಯಲ್ಲಿ ಈ ಕದನಗಳಲ್ಲಿ ಬಹುಶಃ ೩೦,೦೦೦ ಪ್ರಾಣಾಪಾಯ ಸಂಭವಿಸಿರಬಹುದು. ಈ ಸಂಖ್ಯೆಯನ್ನೂ ಬ್ರಿಟಿಷರು ಗೆದ್ದುಕೊಂಡ ಈ ಸ್ಥಳಗಳ ಮಹತ್ವವನ್ನೂ ಲೆಕ್ಕಿಸುವದಾದರೆ ಬ್ರಿಟಿಷರ ನಷ್ಟವು ಬಹಳ ಕಡಿಮೆಯೆಂದೇ ಹೇಳಬೇಕಾಗಿದೆ. ಜರ್ಮನರಿಗೆ ಈ ಕದನದಲ್ಲಿ ಅಪರಿಮಿತವಾದ ನಷ್ಟವಾಗಿದೆಯೆಂಬುವದಕ್ಕೆ ಏನೇನೂ ಸಂದೇಹವಿರುವುದಿಲ್ಲ. ಮಿತ್ರರಿಗೆ ಆದ ಈ ಜಯದಿಂದ ಹಿಗ್ಗಿಕೊಳ್ಳಲು ಅನೇಕ ಕಾರಣಗಳಿವೆ. ಜರ್ಮನರು ಹೆಚ್ಚುಕಡಿಮೆ ತಮ್ಮ ಎಲ್ಲಾ ಬಲವನ್ನು ಈ ಪಶ್ಚಿಮ ರಣರಂಗದಲ್ಲಿ ತಂದೊಡ್ಡಿ ಮಿತ್ರರನ್ನು ಹತಬಡಿಯಬೇಕೆಂತ ಮಾಡಿದ ಪ್ರಯತ್ನಗಳು ಮಿತ್ರರಿಗಾದ ಈ ಜಯದಿಂದ ನಿರರ್ಥಕವಾದವು. ಸೊಮ್ಮೆ ರಣರಂಗದೊಂದರಲ್ಲೇ ಜರ್ಮನರ ೬೦,೦೦೦ ಸೇನಿಕರು ಮಿತ್ರರ ಸೆರೆಬಿದ್ದಿರುತ್ತಾರೆ. ಶತ್ರು ಸೇನೆಯಲ್ಲಿ ಆದ ಪ್ರಾಣಾಪಾಯವು ಕನಿಷ್ಟ ಪಕ್ಷಕ್ಕೆ ೨೦೦--೩೦೦ ಸಾವಿರಗಳಾಗಬಹುದು. ಅತ್ತಕಡೆ ಪೂರ್ವ ರಣರಂಗವನ್ನು ನೋಡುವದಾದರೆ ಆಸ್ಟ್ರೀಯನರ ಶಕ್ತಿಯು ಕುಂದಿದಂತೆ ತೋರಿಬರುತ್ತದೆ. ಜರ್ಮನರು ಆಸ್ಟ್ರಿಯನರಿಗೆ ಹೆಚ್ಚಿನ ಸಹಾಯ ಮಾಡದೆ ನಿರ್ವಾಹವಿಲ್ಲ. ರುಮೇನಿಯರು ಯುದ್ಧಕ್ಕೆ ಸೇರಿದ್ದರಿಂದ ಜರ್ಮನರಿಗೆ ಪುನಃ ೩೦೦ ಮೈಲು ವಿಸ್ತೀರ್ಣದ ರಣರಂಗವು ಹೆಚ್ಚಿದಂತಾಯಿತು. ನಮ್ಮ ವಾಚಕರು ಯುದ್ಧದ ನಕಾಶೆ ನೋಡಿದರೆ ರುಮೇನಿಯ ರಣರಂಗವು ಡೆನ್ಯೂಬು ನದಿಯಿಂದ ಪ್ರಾರಂಭವಾಗಿ ಬಕೋವಿನದ ಕಡೆಗೆ ಒಂದು ಅಂಕೋಲದಂತೆ ಕಾಣುವದು. ಟ್ರಾನ್ಸಿಲವಾನಿಯವು ಪರ್ವತ ಪ್ರದೇಶವಾಗಿದ್ದು ಹಂಗೇರಿಯದ ಗಡಿಯಲ್ಲಿದೆ. ಡೆನ್ಯೂಬಿನಿಂದ ಬಕೋವಿನಕ್ಕೆ ಕಮಾನಿನ ಆಕಾರದ ಒಂದು ಗೆರೆ ಎಳೆದರೆ ಬಕೋವಿನದ ಪೂರ್ವ ಗಡಿಯಂತೆ ತೋರುವದು. ರುಮೇನಿಯನರು ಈಗ ಈ ಪ್ರದೇಶದ ನಾಲ್ಕನೇ ಒಂದು ಅಂಶವನ್ನು ಸ್ವಾಧೀನಮಾಡಿಕೊಂಡಿರುವದರಿಂದ ಈಗ ಅವರ ನೆಲೆ ರುಮೇನಿಯನರ ಪ್ರಾಚೀನ ಸರಹದ್ದಿನಿಂದ ವಲ್ಕಾನ್ ಕಣಿವೆಗೆ ಮುಂದರಿದಿರುವದು. ಹೀಗೆ ರುಮೇನಿಯನರು ಯುದ್ಧಕ್ಕೆ ಸೇರಿದ್ದರಿಂದ ಜರ್ಮನ್, ಆಸ್ಟ್ರೀಯ, ಬಲ್ಗೇರಿಯ, ಟರ್ಕಿ ರಾಜ್ಯಗಳಿಗೆ ಸರಾಗವಾಗಿ ವ್ಯವಹಾರ ನಡಿಸಲು ಈಗ ಕಷ್ಟಸಾಧ್ಯವಾಗಿದೆ. ಆದುದರಿಂದ ಶತ್ರುಗಳು ರುಮೇನಿಯನರ ಮೇಲೆ ಎರಡು ಪಾರ್ಶ್ವಗಳಲ್ಲಿಯೂ ಬಿದ್ದು ಬುಕಾರೆಸ್ಟಿಗೆ ಮುಂದರಿಯಬೇಕೆಂದಿದ್ದು ಡೊರ್‌ಬುಡ್ಜದಿಂದ ಮುಂದರಿದು ಸೆರ್ನಾವೋಡ ಸೇತುವೆಯನ್ನು ಹಿಡಿಯಪ್ರಯತ್ನಿಸಿದರು. ಜರ್ಮನರ ಈ ಸಂಕಲ್ಪವು ಸ್ವಲ್ಪಕಾಲ ಸಫಲವಾಗುವಂತೆ ತೋರಿಬಂತು. ಡೊರುಬುಡ್ಜದ ಬಳಿ ಸೇರಿದ ರುಮೇನಿಯನರು ಒಮ್ಮೆ ಹಿಂದೆ ಸರಿದರು. ಆದರೆ ಕೂಡಲೇ ಪುನಃ ಶತ್ರುಗಳ ಮೇಲೆ ಹಿಂದೆ ಪ್ರತ್ಯಭಿಯೋಗಮಾಡಿ ಶತ್ರುಗಳನ್ನು ಬಹಳ ದೂರಕ್ಕೆ ಅಟ್ಟಿರುತ್ತಾರೆ. ಹೀಗೆ ಜರ್ಮನರ ಈ ಹಂಚಿಕೆಯು ನಿರರ್ಥಕವಾಯಿತು. ಜರ್ಮನರ ಎರಡನೇ ಹಂಚಿಕೆಯು ವಲ್ಕಾನ್ ಮತ್ತು ರೊಥರ್‌ಸ್ಥರ್ಮ್ ಕಣಿವೆಗಳಿಂದ ಬುಕಾರೆಸ್ಟಿನ ಕಡೆಗೆ ಮುಂದರಿಯುವದಾಗಿತ್ತು. ಆದರೆ ಈ ಕಣಿವೆಗಳು ಕೋಟೆಗಳಿಂದ ಬಲಕಾಯಿಸಿಕೊಂಡವುಗಳಾಗಿರುವದರಿಂದ ಜರ್ಮನರ ಈ ಹಂಚಿಕೆಯು ತನ್ನಷ್ಟಕ್ಕೆನೇ ನಿರರ್ಥಕವಾಗುವಂತಿದ್ದರೂ ಡೊರ್‌ಬುಡ್ಜದಲ್ಲಿ ನಡೆದ ಕದನದ ಸಂದರ್ಭದಲ್ಲಿ ಇಲ್ಲಿ ಶತ್ರುಗಳಿಗೆ ಸ್ವಲ್ಪ ಜಯ ಸಿಕ್ಕುವಂತಾಗಿ ರುಮೇನಿಯನರು ಪೆಟ್ರೊಸೆನಿ ಮತ್ತು ಹೆರ್ಮನ್‌ಸ್ಟಡ್ ಪ್ರಾಂತ್ಯದಲ್ಲಿ ಸ್ವಲ್ಪ ಹಿಂದೆ ಸರಿಯಬೇಕಾಯಿತು. ಆದರೆ ಈಗ ನೋಡುವಾಗ ಟ್ರಾನ್ಸಿಲವಾನಿಯದ ಹೆಚ್ಚಿನ ಅಂಶವು ಇನ್ನೂ ರುಮೇನಿಯನರ ಸ್ವಾಧೀನವಿವೆ. ಹೀಗೆ ರುಮೇನಿಯನರನ್ನು ಹತಬಡಿಯುವರೆ ಜರ್ಮನರು ಮಾಡಿಕೊಂಡ ಹಂಚಿಕೆಗಳೆಲ್ಲವೂ ನಿರರ್ಥಕವಾದಂತೆ ಕಾಣುತ್ತದೆ.

ಪಶ್ಚಿಮ ರಣರಂಗ.

ಈ ರಣರಂಗದ ಹಲವು ಪ್ರಾಂತ್ಯಗಳಲ್ಲಿ ಕದನಗಳು ನಡೆಯುತ್ತಲೇ ಇವೆ. ಶತ್ರುಗಳ ಸೇನಿಕರೂ ಕಂದಕಗಳೂ ಮಿತ್ರರ ಕೈಸೇರುತ್ತಲಿವೆ.

ವೆರ್ಡನ್ ಪ್ರಾಂತ್ಯದಲ್ಲಿ ತೋಪು ಕಾಳಗಗಳು ನಡೆದಿರುವವು. ಥಿಪಾವೆಲ್ ಪ್ರಾಂತ್ಯದಲ್ಲಿ ಶತ್ರುಗಳು ಎರಡು ಸಾರಿ ಹಲ್ಲೆಮಾಡಿ ಹಿಮ್ಮೆಟ್ಟಿರುತ್ತಾರೆ. ಜುಲಾಯಿ ೧ರಿಂದ ಸಪ್ಟಂಬರ ತಾ. ೩೦ರವರೆಗೆ ಸೊಮ್ಮೆಯಲ್ಲಿ ಬ್ರಿಟಿಷರಿಗೆ ೨೯ ದೊಡ್ಡ ಫಿರಂಗಿಗಳೂ ೯೨ ಫಿರಂಗಿಗಳೂ ೧೦೩ ಕಂದಕಗಳನ್ನು ಒಡೆಯುವ ಫಿರಂಗಿಗಳೂ ೩೯೭ ಯಂತ್ರಚಾಲಿತ ಫಿರಂಗಿಗಳೂ ದೊರಕಿರುತ್ತವೆ.

ಪೂರ್ವ ರಣರಂಗ.

ಈ ರಣರಂಗದ ಹೆಲಿಕ್ಸ್ ಪ್ರಾಂತ್ಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಶತ್ರುಗಳು ರೋಷಾವೇಷದಿಂದ ಕಾದಾಡುತ್ತಿದ್ದಾರೆ. ಮೂರು ದಿವಸಗಳ ಕದನಗಳಲ್ಲಿ ರುಶ್ಯನರು ೫೦೦೦ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಈ ಪೈಕಿ ೬೦೦ ಜರ್ಮನರು.

ರುಶ್ಯನರ ಸೇನೆಯು ಗೆಲೀಸಿಯದ ಜೋಲ್ಟಲಿಪಾ ನದಿಯ ಬಳಿ ಮೂರು ದಿವಸಗಳ ಕಠಿಣಕಾಳಗ ಮಾಡಿ ಬ್ರಿಜನಿ ಪಟ್ಟಣದ ದಕ್ಷಿಣದಲ್ಲಿ ಜೋಲ್ಟಲಿಪಾ ನದಿಯನ್ನು ದಾಟಿ ಪಟ್ಟಣಕ್ಕೆ ಗುಂಡು ಹಾರಿಸುತ್ತಲಿರುವರು. ಲೆಂಬರ್ಗ್ ಪಟ್ಟಣದ ಪಶ್ಚಿಮ ಮತ್ತು ದಕ್ಷಿಣ ಪ್ರಾಂತ್ಯಗಳಲ್ಲಿ ಕಠಿಣಕಾಳಗ ನಡೆಯುತ್ತಿದೆಂತಲೂ ಶತ್ರುಗಳು ಜೋಲ್ಟಲಿಪಾ ನೆಲೆಯಲ್ಲಿ ಭಯಂಕರವಾಗಿ ಎದುರಾಡುತ್ತಿರುವರೆಂತಲೂ ರುಶ್ಯನರು ಪ್ರಕಟಿಸಿರುತ್ತಾರೆ. ಬ್ರಾಡಿಗೆ ೨೦ ಮೈಲು ದಕ್ಷಿಣದಲ್ಲಿರುವ ಜ್ಲೋಕೊ ಪ್ರಾಂತ್ಯದಲ್ಲಿ ಕಠಿಣಕಾಳಗವು ನಡೆಯುತ್ತಿದೆ. ರುಶ್ಯನರು ೫೫೦ ಶತ್ರುಸೇನಿಕರನ್ನು ಸೆರೆಹಿಡಿದಿರುವರು. ಬ್ರಿಜನಿಯ ದಕ್ಷಿಣದಲ್ಲಿ ರುಶ್ಯನರು ಶತ್ರುಗಳ ಕೆಲವು ನೆಲೆಗಳನ್ನು ಹಿಡಿದಿರುತ್ತಾರೆ.

ಬಾಲ್ಕಾನ್.

ರುಮೇನಿಯನರು ರಸ್ಟಚಕ್ ಮತ್ತು ಟುಟ್ರಕಿಯದ ಮಧ್ಯೆ ಡೆನ್ಯೂಬ್ ನದಿಯನ್ನು ದಾಟಿರುತ್ತಾರೆ. ಡೊರುಬ್ರುಡ್ಜಾದ ಎಲ್ಲಾ ರಣರಂಗಗಳಲ್ಲಿ ರುಮೇನಿಯನರು ಹಲ್ಲೆಮಾಡುತ್ತಿದ್ದಾರೆ. ರುಮೇನಿಯನರ ಜನರಲ್ ಜಿಟಿಯೆನರ ಕೈಕೆಳಗಿನ ಸೇನೆಯು ಡೆನ್ಯೂಬ್ ನದಿಯನ್ನು ದಾಟಿ, ಬಲ್ಗೇರಿಯನರ ಪ್ರಾಂತ್ಯದೊಳಗೆ ನುಗ್ಗಿ ಬಲ್ಗೇರಿಯನರ ಸೇನೆಯನ್ನು ನಿರ್ನಾಮ ಮಾಡುತ್ತಿದೆ.

ಟ್ರಾನ್ಸಿಲವಾನಿಯ ಸರಹದ್ದಿನಲ್ಲಿ ಜರ್ಮನರಿಗೆ ಜಯವಾಗಿದೆಂಬ ವಾರ್ತೆಯನ್ನು ರುಮೇನಿಯನರು ಅಲ್ಲಗಳೆದಿರುತ್ತಾರೆ. ಸಪ್ಟಂಬರ ತಾ. ೨೯ರಲ್ಲು ರುಮೇನಿಯನರು ಹಿಂದೆಸರಿಯುವಾಗ ೩೦೦ ಶತ್ರುಸೇನಿಕರನ್ನೂ ೫ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆ ಹಿಡಿದಿರುವರು. ಮತ್ತು ಈಗ ಪುನಃ ಪರ್ವತದ ಪ್ರಾಂತ್ಯದಲ್ಲಿ ಶತ್ರುಗಳ ಮೇಲೆ ನುಗ್ಗಿಹೋಗಿರುತ್ತಾರೆ. ಒರ್ಸಾವದಲ್ಲಿ ನುಗ್ಗಿಬಂದ ಶತ್ರುಗಳನ್ನೂ ರುಮೇನಿಯನರು ಹಿಂದಕ್ಕಟ್ಟಿರುತ್ತಾರೆ. ಶತ್ರುಗಳು ವಲ್ಕಾನ್ ಕಣಿವೆಯ ಮೇಲೆ ಭೀಕರವಾಗಿ ಹಲ್ಲೆಮಾಡುತ್ತಿದ್ದಾರೆ. ಟ್ರಾನ್ಸಿಲವಾನಿಯದಲ್ಲಿ ರುಮೇನಿಯನರು ಶತ್ರುಗಳನ್ನು ಕೆಲವು ಕದನಗಳಲ್ಲಿ ಸೋಲಿಸಿ ೨೦೦೦ಕ್ಕೆ ಮಿಕ್ಕಿದ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಡೊಬ್ರುಡ್ಜದಲ್ಲಿ ರುಮೇನಿಯನರು ಒಂದು ನೆಲೆಯನ್ನು ಗೆದ್ದುಕೊಂಡು ೭ ಫಿರಂಗಿಗಳನ್ನೂ ೧೦೦೦ಕ್ಕೆ ಮಿಕ್ಕಿದ ಶತ್ರುಗಳನ್ನೂ ಯತೇಷ್ಟ ಯುದ್ಧಸಾಮಗ್ರಿಗಳನ್ನೂ ಸೆರೆಹಿಡಿದಿರುವರು.

ಮೆಸೆಡೋನಿಯದಲ್ಲಿದ್ದ ಮಿತ್ರಸೇನಿಕರು ಕಜ್ಮಕಲಾನ್ ಮತ್ತು ಫ್ಲೋರಿನದ ಮಧ್ಯೆ ಮುಂದರಿದು ಬಲ್ಗೇರಿಯನರು ಬಲಕಾಯಿಸಿಕೊಂಡಿದ್ದ ನೆಲೆಗಳನ್ನು ಮುರಿದು ಮೊನಸ್ಟಿರಿಗೆ ೧೦ ಮೈಲು ದೂರದಲ್ಲಿರುವ ಕೆನಾಲಿ ಎಂಬಲ್ಲಿಗೆ ತಲಪಿರುತ್ತಾರೆ. ನೆಪೋಲ್ಟನ್ ಪ್ರಾಂತ್ಯವು ಮಿತ್ರರ ಸ್ವಾಧೀನವಾಗಿದೆ.

ಶತ್ರುಗಳನ್ನು ಸ್ಟ್ರುಮಾದಲ್ಲಿ ಬ್ರಿಟಿಷರು ಹಿಂದೆ ಅಟ್ಟಿರುತ್ತಾರೆ. ಮುಗ್ಗೆಲಿ, ಕೆನಾಲಿ, ಗ್ರೇಡ್‌ಸಿನಿಕ್ ಮತ್ತು ಸೆರ್ನಪ್ರಾಂತ್ಯದಲ್ಲಿ ಕಠಿಣಕಾಳಗ ನಡೆಯುತ್ತಿದೆ.

ಗ್ರೀಸ್.

ಗ್ರೀಸ್ ದೇಶದ ಮಂತ್ರಿಸಭೆಯು ಪುನಃ ರಾಜಿನಾಮೆಕೊಟ್ಟಿರುತ್ತದೆ. ಗ್ರೀಸ್ ದೇಶವು ಮಿತ್ರರಪಕ್ಷ ಸೇರಬೇಕೆಂಬದಾಗಿ ಮಂತ್ರಿಸಭೆಯ ಮೆಂಬರರಲ್ಲಿ ಹೆಚ್ಚಿನವರು ಕೊಟ್ಟ ಅಭಿಪ್ರಾಯಕ್ಕೆ ಗ್ರೀಕ ಅರಸರು ಒಪ್ಪದಿದ್ದದ್ದೇ ಈ ರಾಜಿನಾಮೆಗೆ ಕಾರಣವಾಗಿದೆಂಬ ವಾರ್ತೆ ಬಂದದೆ.

ಇಟಲಿ.

ಇಟಲಿ ರಣರಂಗದಲ್ಲಿ ಇಟಲಿಯನರಿಗೆ ಹೊಸ ಹೊಸ ಜಯಗಳು ಆಗುತ್ತಲಿವೆ. ಇಟಲಿಯನರು ೮೨೦೦ ಅಡಿ ಎತ್ತರವಿರುವ ಒಂದು ಪರ್ವತ ಶಿಖರವನ್ನು ಗೆದ್ದುಕೊಂಡಿರುತ್ತಾರೆ. ಕಾರ್ನಿಯದಲ್ಲಿ ೮೫೦೦ ಅಡಿ ಎತ್ತರವಿರುವ ಒಂದು ಪರ್ವತಶಿಖರವು ಇಟಲಿಯನರ ಸ್ವಾಧೀನವಾಗಿದೆ.

ರುಶ್ಯ — ಟರ್ಕಿ.

ಕಾಕಾಸಸಿನ ಕರಾವಳಿ ಪ್ರಾಂತ್ಯದಲ್ಲಿ ಕರಬೂರ್ನ ನದಿಯ ಬಳಿ ತುರ್ಕರು ಬಲಕಾಯಿಸಿಕೊಂಡಿದ್ದ ಸ್ಥಳಗಳನ್ನು ರುಶ್ಯನರು ಗೆದ್ದುಕೊಂಡು ಮುಂದರಿಯುತ್ತಲಿದ್ದಾರೆ.

ಉತ್ತರ ಹಿಂದೂಸ್ಥಾನ.

ಸಪ್ಟಂಬರ ತಾ. ೨೩ ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೫೨೯೦ ಮಂದಿಗೆ ಪ್ಲೇಗು ಬೇನೆಯು ಸೋಂಕಿ ೪೦೫೯ ಮರಣಗಳಾಗಿರುವವು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೬೯೦; ಮದ್ರಾಸು ೨೭೪; ಬಿಹಾರ್ ಮತ್ತು ಓರಿಸ್ಸ ೩೭೦; ಸಂಯುಕ್ತ ಸಂಸ್ಥಾನ ೩೯; ಪಂಜಾಬು ೪೬; ಬರ್ಮ ೬೧; ಮಧ್ಯ ಸಂಸ್ಥಾನ ೫೬೭; ಮೈಸೂರು ೪೩೧; ಹೈದರಾಬಾದ್ ೯೧೬; ಮಧ್ಯ ಹಿಂದೂಸ್ಥಾನ ೪೫ ಮರಣಗಳಾದವು.

ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಮಿರ್ಜಾಪುರದಲ್ಲಿ ಭಾರಿ ನೆರೆ ಬಂದು ಸುಮಾರು ೩೦೦೦ ಮನೆಗಳು ಬಿದ್ದು ಹೋಗಿರುತ್ತವೆ. ಲಕ್ನೋದಲ್ಲಿಯೂ ವಿಶೇಷ ಮಳೆ ಸುರಿಯುತ್ತಿದೆ. ಕೆಲವು ಗ್ರಾಮಗಳಿಗೆ ಸರಕಾರದವರು ಕಂದಾಯ ಮಾಫಿಮಾಡಬೇಕಾಗಿ ಬಂದಿದೆ.

ಲಾಹೋರಿನ ತಹಸೀಲದಾರರಾಗಿದ್ದ ಮಾಲಿಕ್ ಫಥಾಖಾನರವರು ಒಂದು ಮೋಕದಮೆ ತನಿಕೆ ಮಾಡುವಾಗ ಮಹಮ್ಮದೀ ಹೆಂಗಸೊಬ್ಬಳಿಗೆ ಹೊಡೆದರೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಲಾಹೋರಿನ ಡೆಪ್ಯುಟಿ ಕಮಿಷನರವರು ಸದರಿ ತಹಸೀಲದಾರರನ್ನು ಕೆಲಸದಿಂದ ಅಮಾನತು ಮಾಡಿರುತ್ತಾರೆ. ಹೆಚ್ಚಿನ ತನಿಕೆ ನಡೆಯುತ್ತಿದೆ.

ಬಾಬು ಅಂಬಿಕಚರಣ ಮುಜುಮುದಾರರವರು ಈ ವರ್ಷದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

೧೯೧೦ನೇ ಇಸವಿಯ ಪ್ರೆಸ್ ಆಕ್ಟನ್ನು ರದ್ದುಪಡಿಸಬೇಕೆಂಬದಾಗಿ ವೈಸರಾಯ ಪ್ರಭುಗಳವರನ್ನು ಕೇಳಿಕೊಳ್ಳುವರೆ ನೇಮಿಸೋಣಾದ ಪ್ರತಿನಿಧಿ ಮಂಡಲಿಯವರು ಬರುವ ಜನವರಿ ತಿಂಗಳಲ್ಲಿ ವೈಸರಾಯ ಪ್ರಭುಗಳವರಲ್ಲಿಗೆ ಹೋಗುವರೆಂತ ತಿಳಿದು ಬಂದಿದೆ.

ದಕ್ಷಿಣ-ಹಿಂದೂಸ್ಥಾನ.

ಮಿಸೆಸ್ ಅನ್ನಿಬಿಸೆಂತರವರಿಂದ ಪ್ರಕಟಿಸೋಣಾಗುವ "ನ್ಯೂ ಇಂಡಿಯಾ" ಪತ್ರಿಕೆಯಿಂದ ಮದ್ರಾಸ್ ಜೇಲ್

ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ೨೦೦೦ ರೂಪಾಯಿ ಬಧ್ರತೆ ತಕ್ಕೊಂಡ ಮತ್ತು ಆ ಭದ್ರತೆ ಹಣವನ್ನು ಸರಕಾರದವರು ಸರಕಾರಕ್ಕೆ ಸೇರಿಸಿಕೊಂಡ ಸಂಬಂಧ ಮಿಸೆಸ್ ಬಿಸೆಂತರವರು ಮದ್ರಾಸ್ ಹೈಕೋರ್ಟಿನಲ್ಲಿ ಮಾಡಿಕೊಂಡ ಅಪೀಲು ತನಕಿಯು ಇದೇ ಕಳದ ಸಪ್ಟಂಬರ ತಾ. ೨೭ರಲ್ಲು ಮದ್ರಾಸ್ ಹೈಕೋರ್ಟಿನಲ್ಲಿ ತನಕಿಗೆ ಪ್ರಾರಂಭವಾಯಿತು. ಮಿಸೆಸ್ ಬಿಸೆಂತರು ತಾನೇ ಕೋರ್ಟಿಗೆ ಹಾಜರಾಗಿ ವ್ಯವಹರಿಸಿದರು. ಸರಕಾರದವರ ಪರವಾಗಿ ಎಡ್ವೊಕೇಟ್ ಜನರಲರಾದ ಮಾನ್ಯ ಎಸ್. ಶ್ರೀನಿವಾಸ ಐಯ್ಯಂಗಾರ, ಪಬ್ಲಿಕ್ ಪ್ರೊಶಿಕ್ಯೂಟರರಾದ ಮೆ| ಇ. ಆರ್. ಒಸ್ಬರ್ನ್, ಗವರ್ನಮೆಂಟ ಸೊಲಿಸಿಟರರಾದ ಮೆ| ಬ್ರೈಟ್‌ವೆಲ್‌ರವರು ವ್ಯವಹರಿಸಿದರು. ಈ ಮೊಕದಮೆ ತನಕಿಯು ಇದೇ ತಾ. ೩೦ರ ವರೆಗೆ ನಡೆದು ತೀರ್ಮಾನವನ್ನು ಬಾಕಿ ಇಟ್ಟಿರುತ್ತಾರೆ. ಮೇಜಿಸ್ಟ್ರೇಟರು ನ್ಯೂ ಇಂಡಿಯಾ ಪತ್ರಿಕೆಯಿಂದ ೨೦೦೦ ರೂಪಾಯಿ ಭದ್ರತೆ ಕೇಳಿದ್ದು ನ್ಯಾಯವಲ್ಲವೆಂತಲೂ ಅದನ್ನು ರದ್ದು ಪಡಿಸಬೇಕಾಗಿಯೂ ಚಾರ್ಟರ್ ಆಕ್ಟಿನ ಅಧಾರದಿಂದ ಮಿಸೆಸ್ ಬಿಸೆಂತರವರು ಹೈಕೋರ್ಟಿನಲ್ಲಿ ಮಾಡಿಕೊಂಡ ಮನವಿಯ ತನಕಿಯು ಕೆಳದ ಕ್ರಮವಾರದಿಂದ ನಡೆಯುತ್ತದೆ. ಮಿಸೆಸ್ ಬಿಸೆಂತರ ಪರವಾಗಿ ಮ| ರಾ| ಸಿ. ರಾಮಸ್ವಾಮಿ ಐಯ್ಯರು ವ್ಯವಹರಿಸುತ್ತಿದ್ದಾರೆ. ಸರಕಾರದ ಪರವಾಗಿ ಎಡ್ವೊಕೇಟ್ ಜನರಲರೇ ಮೊದಲಾದವರು ವ್ಯವಹರಿಸುತ್ತಿರುವರು.

~~~~~

ಮೈಸೂರಲ್ಲಿ ಎಂದಿನಂತೆ ನವರಾತ್ರಿ ಉತ್ಸವವು ಅತಿ ವಿಜೃಂಭಣೆಯಿಂದ ನೆರವೇರಿರುತ್ತದೆ. ಈ ಉತ್ಸವ ಕಾಲದ ಮೊದಲಾಗಿ ಮೈಸೂರು ಸಂಸ್ಥಾನದ ಸಹಕಾರ ಸಂಘಗಳ ಸಮ್ಮೇಳನವು ನಡೆಯಿತು. ಈ ಸಭೆಗೆ ಶ್ರೀಮದ್ಯುವರಾಜರವರೂ ದಿವಾನರವರೂ ಸಂಸ್ಥಾನದ ಇತರ ಅಧಿಕಾರಿಗಳೂ ಹಾಜರಿದ್ದರು. ದಿವಾನ್ ಬಹದ್ದೂರ್ ಜೆ. ಎಸ್. ಚಕ್ರವರ್ತಿಯವರು ಸಭಾಧ್ಯಕ್ಷರಾಗಿದ್ದರು. ಶ್ರೀಮದ್ಯುವರಾಜರವರು, ಈ ಸಂದರ್ಭದಲ್ಲಿ ಕೊಟ್ಟ ಭಾಷಣದಿಂದ ಮೈಸೂರು ದೇಶದಲ್ಲಿ ಸಹಕಾರ ಸಂಘಗಳು ಬಹಳ ಅಭಿವೃದ್ಧಿಗೆ ಬಂದಿರುತ್ತದೆಂದೂ ಸಂಸ್ಥಾನದಲ್ಲಿ ಒಟ್ಟು ೮೫೫ ಸಹಕಾರ ಸಂಘಗಳೂ, ೬೫,೦೦೦ ಮೆಂಬರುಗಳೂ, ೪೫,೦೦,೦೦೦ ರೂಪಾಯಿಗಳ ಬಂಡವಾಳದಿಂದ ಕಾರ್ಯ ನಿರ್ವಾಹವಮಾಡುತ್ತಿವೆಯೆಂದೂ ಈ ಸಂಘಗಳು ಈ ವರ್ಷ ೨,೨೦,೦೦೦ ರೂಪಾಯಿಗಳ ನಿವ್ವಳ ಆದಾಯವನ್ನು ಪಡೆದು ಆಪದ್ಧನಕ್ಕಾಗಿ ೧,೬೦,೦೦೦ ರೂಪಾಯಿಗಳನ್ನು ತೆಗೆದಿಟ್ಟು ಮೆಂಬರುಗಳ ಸಾಲದ ಮೇಲೆ ೩,೬೫,೦೪೦ ರೂಪಾಯಿಗಳನ್ನು ಒಡ್ಡಿಯ ರೂಪದಿಂದ ಸಂಗ್ರಹಿಸಿರುವದು ಎಂತಲೂ ತಿಳಿದುಬರುತ್ತದೆ. ನವರಾತ್ರಿ ಸಂಬಂಧ ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ಪ್ರದರ್ಶನವು ಈ ಸಲವೂ ನಡೆದಿರುತ್ತದೆ. ವಸ್ತು ಪ್ರದರ್ಶನವನ್ನು ಯುವರಾಜರವರು ತೆರೆದು ಕಾಲೋಚಿತ ಭಾಷಣದಿಂದ ಇಂಥಾ ಪ್ರದರ್ಶನಗಳಿಂದ ಉಂಟಾಗುವ ಪ್ರಯೋಜನಗಳನ್ನು ಕೂಡಿದ್ದ ಜನಸಂದಣಿಗೆ ತಿಳಿಯಪಡಿಸಿರುವರು. ಪ್ರದರ್ಶನಕ್ಕೆ ಈ ಸಾರಿ ಆಯಾ ತರದ ಧಾನ್ಯಗಳೂ, ವ್ಯವಸಾಯ ಸಾಮಾಗ್ರಿಗಳು, ಗೊಬ್ಬರಗಳೂ, ವಿವಿಧ ತರದ ಹತ್ತಿಗಳೂ, ಛತ್ರರಾಗ್ರಿಗಳೂ ಬರೋಡೆ, ಕೊಚ್ಚಿ, ಮೈಸೂರು ಮತ್ತು ಇತರ ಪ್ರಾಂತ್ಯಗಳಿಂದ ಬಂದಿದ್ದವು.

~~~~~

ಮೈಸೂರು ಯುನಿವರ್ಸಿಟಿಯ ಮೊದಲನೇ ಸೆನೆಟ್ ಮೀಟಿಂಗ್ ಮೈಸೂರಲ್ಲಿ ಇದೇ ತಾ. ೧೨ರಲ್ಲು ಕೂಡಿ ಬಂದಿರುತ್ತದೆ.

~~~~~

ದಕ್ಷಿಣ ಕನ್ನಡ.

ನೋಟೀಸು.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು, ದಕ್ಷಿಣಕನ್ನಡ.

ಇದೇ ಬರುವ ನವಂಬರ ತಾರೀಕು ೧ರ ಲಾಗ್ಯಾತು ಈ ಬೇಂಕಿನಲ್ಲಿ ಅಂಗೀಕರಿಸೋಣಾಗಬಹುದಾದ ಯಾವಾಯಿದೆ ಮುಂದರಿಸಬಹುದಾದ ಯಾವತ್ತು ಠೇವಣಾತಿಗಳ ಮೇಲಣ ಬಡ್ಡಿಯ ದರಗಳು ಈ ಕೆಳಗೆ ಕಾಣಿಸಿದ ಮೇರೆಗೆ ಬದಲಾಯಿಸಲ್ಪಟ್ಟಿವೆ ಎಂಬ ಸಂಗತಿಯನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಒಂದು ವರುಷಕ್ಕೆ ಕಡಿಮೆಯಾದ ವಾಯಿದೆಗೆ ಇಡುವ ಠೇವಣಾತಿಗಳ ಮೇಲೆ ಶೇಕಡಾ
ರೂ. 5—0—0

ಒಂದು ವರುಷ ಯಾ ಎರಡು ವರುಷಗಳಿಗೆ ಕಡಿಮೆಯಾದ ವಾಯಿದೆಗೆ ಇಡುವ ಠೇವಣಾತಿಗಳ ಮೇಲೆ ಶೇಕಡಾ ರೂ. 5—8—0

ಎರಡು ವರುಷಗಳು ಯಾ ಅದಕ್ಕೆ ವಿಸ್ತಾರಿದ ವಾಯಿದೆಗೆ ಇಡುವ ಠೇವಣಾತಿಗಳ ಮೇಲೆ
ಶೇಕಡಾ ರೂ. 6—0—0

ಪರಸ್ಪರ ಸಹಾಯಕ ಸಂಘಗಳಿಂದ ಬರಬಹುದಾದ ಠೇವಣಾತಿಗಳ ಮೇಲೈ (ಎಷ್ಟು ವಾಯಿದೆಗಾದರೂ) ಶೇಕಡಾ ರೂ. 6—4—0

ತಾ. 1—10—1916. **ಮ. ಅನಂತರಾವ್.**
ಕಾರ್ಯದರ್ಶಿ.

~~~~~

ದರಬಾರು ಇನಾಮು ಪರೀಕ್ಷೆ, ಪುತ್ತೂರು.

ಉಪ್ಪಿನಂಗಡಿ ತಾಲೂಕಿನ ಮಂಜೂರಾದ ಶಾಲಾ ವಿದ್ಯಾರ್ಥಿಗಳಿಗೋಸ್ಕರ ಏರ್ಪಡಿಸಿದ ಈ ಪರೀಕ್ಷೆಯು ಬರುವ ನವಂಬರ ತಾರೀಕು ೧೮ನೇ ಶನಿವಾರ ದಿವಸ (೧) ಪುತ್ತೂರು, (೨) ವಿಟ್ಲ, (೩) ಸುಳ್ಯ, (೪) ಉಪ್ಪಿನಂಗಡಿ, (೫) ಬೆಳ್ತಂಗಡಿ, (೬) ಪಂಜಾ, (೭) ಬೆಳ್ಳಾರೆ, ಈ ಸ್ಥಳಗಳಲ್ಲಿ ಬೋರ್ಡು ಶಾಲಾ ಕಟ್ಟೋಣಗಳಲ್ಲಿ ಬೆಳಿಗ್ಯೆ ೧೦ ಗಂಟೆಯಿಂದ ೧ ಘಂಟೆ, ಮಧ್ಯಾಹ್ನ 2 ಗಂಟೆಯಿಂದ 4 ಗಂಟೆ ವರೇಗೆ ನಡಿಸೋಣಾದೀತು.

ಪರೀಕ್ಷೆಗೆ ದಾಖಲು ಮಾಡುವ ಅರ್ಜಿಯು ಛಾಪಾ ಫೋರ್ಮಿನಲ್ಲಿ ಆಗಬೇಕೆಂತಿಲ್ಲ! ಕೈ ಫೋರ್ಮಿನಲ್ಲಿ ಆಗಬಹುದು. ಫುಲ್‌ಸ್ಕೇಪು ಕಾಗದದಲ್ಲಿ ಒಂದೇ ಬದಿ ಬರಿಯಬೇಕು. ಅರ್ಜಿಯಲ್ಲಿ (೧) ವಿದ್ಯಾರ್ಥಿಯ ಸಂಪೂರ್ಣ ಹೆಸರು, (೨) ತಂದೆ ಯಾ ರಕ್ಷಕನ ಹೆಸರು, (೩) ವಿದ್ಯಾರ್ಥಿಯ ಪ್ರಾಯ, (೪) ಪಾಠಶಾಲೆಯ ಹೆಸರು ಮತ್ತು ಯಾವ ಕ್ಲಾಸು, (೫) ಕಳೆದ ವರುಷದ ಸಪ್ತಂಬರ ಲಾಗ್ಯಾತು ಈ ವರ್ಷದ ಅಗೋಸ್ತು ಆಖೈರು ವರೆಗೆ ಶಾಲಾ ನಡದ ದಿನಗಳು, (೬) ವಿದ್ಯಾರ್ಥಿ ಹಾಜರಿದ್ದ ದಿನಗಳು, (೭) ಪರೀಕ್ಷೆಗೆ ಹಾಜರಾಗುವ ಸ್ಥಳ, (೮) ವಿದ್ಯಾರ್ಥಿಯ ದಸ್ಕತು. ತಾರೀಕು ವಗೈರೆ (೯) ಮೇಲಿನ ಖತ್ಯಾತಗಳು ಶಾಲಾ ರಿಜಿಸ್ತ್ರಿಗೆ ಸರಿಯಾಗಿದೆ ಎಂದು ಮುಖ್ಯ ಉಪಾಧ್ಯಾಯನ ದಸ್ಕತು ಸಹಿತ ಒಂದು ದೃಢಪತ್ರಿಕೆ, ಇಷ್ಟು ತಪಶೀಲುಗಳು ಕಾಣಿಸಿ ಈ ಕೆಳಗೆ ದಸ್ಕತು ಮಾಡಿದವರಿಗೆ ಇದೇ ಅಕ್ಟೋಬರ ತಿಂಗಳ ಆಖೈರಿನ ಒಳಗೆ ತಲಪುವಂತೆ ತ್ವರ್ಯದಲ್ಲಿ ಕಳುಹಿಸತಕ್ಕದ್ದು.

ಪರೀಕ್ಷೆಯು ೩ನೇ ವರೇಗಿನ ಮತ್ತು ೪ನೇ ದರ್ಜೆಯವರಿಗೆ ಮಾತ್ರ. ಒಂದೊಂದು ಶಾಲೆಯಿಂದ ಒಂದೇ ದರ್ಜೆಯಿಂದ ೩ ಜನರಿಗಿಂತಲೂ ಹೆಚ್ಚಿಗೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕಳುಹಿಸಕೂಡದು.

ಪರೀಕ್ಷೆಯ ನಾಲ್ಕು ಭಾಗಗಳು:—(೧) ಸಾಮಾನ್ಯ ತಿಳುವಳಿಕೆ, (೨) ಕನ್ನಡ ಭಾಷಾಜ್ಞಾನ, (೩) ಗಣಿತ, (೪) ಶಾಸ್ತ್ರ ವಿಷಯ ಇವುಗಳಲ್ಲಿ ೩ನೇ ವರೆಗಿನ ಮತ್ತು ೪ನೇ ದರ್ಜೆಯವರಿಗೆ ಪ್ರತ್ಯಪ್ರತ್ಯೇಕ ಸವಾಲು ಕಾಗದಗಳು ಇರುವುವು.

ಬಹುಮಾನ ಪದಕವು ಮತ್ತು ಇನಾಮುಗಳು ಬರುವ ದಶಂಬರ ತಾ. ೧೨ನೇ ಮಂಗಳವಾರ ಮಧ್ಯಾಹ್ನ ಪುತ್ತೂರು ಬೋರ್ಡು ಶಾಲೆಯಲ್ಲಿ ಹಂಚೋಣಾದಾವು.

ಪುತ್ತೂರು ವರ್ತದಾರರ ಸಂಘದ ಆಫೀಸು; ಪುತ್ತೂರು. ತಾ. 1—10—16	**ಬೈಂದೂರು ಅನಂದರಾವ್.** ಕಾರ್ಯದರ್ಶಿ ಬಗ್ಗೆ.

~~~~~

ಪುತ್ತೂರು:—ಇಲ್ಲಿಯ ತಾಲೂಕು ಶಿರೆಸ್ತೆದಾರ ಯು. ವೆಂಕಪ್ಪನವರು ಒಂದು ತಿಂಗಳ ರಜೆ ಪಡಕೊಂಡು ಇರುವದರಿಂದ ಅವರ ಛಾರ್ಜನ್ನು ಡಿವಿಜನಲ್ ಆಫೀಸ್ ಕ್ಲಾರ್ಕ ಕೆ. ರಾಮಚಂದ್ರ ಭಂಡಾರಿಗಳವರು ವಹಿಸಿಕೊಂಡಿರುವರು.

ನಮ್ಮಲ್ಲಿ ಚಿಲ್ಲರೆ ಚಿಲ್ಲರೆ ಕಳವು ಮುಂತಾದ್ದು ಗುಪ್ತದಲ್ಲಿ ನಡಿಸಿ ಪೋಕ್ರಿ ಸ್ವಭಾವದಿಂದ ನಡಿಯುತ್ತಿದ್ದ ಉಗ್ರಾಣಿ ಅಣ್ಣುಗೌಡ ಎಂಬವನನ್ನು ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ಮ| ರಾ| ಸದಾಶಿವರಾಯರು ಜಾಮಿನ ಪಿತ್ತೆ ಬಗ್ಯೆ ಕಮಿಟು ಮಾಡಿದ್ದಲ್ಲಿ ಇಲ್ಲಿಯ ಡಿವಿಜನೆ ಡಿಪ್ಯುಟಿ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ಮೊಕದಮೆ ತನಕಿ ನಡೆದು ಮುದ್ದೈಅಲೆಗೆ ೧ ವರ್ಷ ಸಜಾ ವಿಧಿಸಲ್ಪಟ್ಟಿರುವದು.

ಇಲ್ಲಿ ಅಕ್ಕಿಯು ಪ್ರಿಯವಾದುದರಿಂದ ಬಡಬಗ್ಗರ ಗೋಳು ಶಾಂತಪಡಿಸುವ ಬಗ್ಯೆ ಇಲ್ಲಿಯ ಮಾನ್ಯಗೃಹಸ್ಥರು ವ ಸಾವಕಾರರು ಸಭೆಕೂಡಿ ಇದೇ ತಾ. ೨೪ರ ಲಾಗ್ಯಾಯಿತು ಅಕ್ಕಿಗೆ ಶೇರು ೧ರ ಆಣೆ ೨ರ ದರದಲ್ಲಿ ಇಲ್ಲಿಯ ಸಾವಕಾರ ಗುರುಪುರ ನರಸಿಂಹ ಪೈ ಮತ್ತು ವೆಂಕಟರಮಣ ಪೈಗಳವರ ಅಂಗಡಿಯಲ್ಲಿ ವಿಕ್ರಯಿಸಲಿಕ್ಕೆ ಆರಂಭಿಸಿರುವರು. ಇದಕ್ಕೆ ಮ| ರಾ| ಸಾವಕಾರ ಗುರುಪುರ ವೆಂಕಟರಮಣ ಪೈ, ನರಸಿಂಹ ಪೈಗಳವರು, ಪೆರಾಜೆ ಪುರುಷೋತ್ತಮ ಪೈಗಳವರು, ಹೆಂಪ್ಯ ಸಾವಕಾರ ರುಕ್ಮಯ್ಯ ಪೈ, ಮಾಳಪ್ಪಯ್ಯ ಯಾನೆ ಸುಬ್ರಾಯ ಪೈ, ಮುಕುಂದ ಕ್ಯಾನಥಾಗರು, ದಾಸಪ್ಪ ಕ್ಯಾನಥಾಗರು, ವಕೀಲ ಮ| ರಾ| ಮೊಳಹಳ್ಳಿ ಶಿವರಾವ್, ದುರ್ಗ ಗಣಪತಿರಾವ್, ಬೈಂದೂರ ರಾಮರಾವ್, ಸವೂರು ನಾರಾಯಣರಾವ್, ಮಾಜಿ ಸಬ್ ರಿಜಿಸ್ತ್ರರ ಮ. ಲಕ್ಷ್ಮಣರಾವ್, ಇವರು ಪ್ರತಿ ಒಬ್ಬರು ರೂಪಾಯಿ ೧೦ರಂತೆ ವಂತಿಗೆ ಕೊಟ್ಟಿರುವರಾಗಿ ತಿಳಿಯುತ್ತೇವೆ.

ಇದೇ ತಾ. ೨೬ನೇ ಮಂಗಳವಾರ ಇಲ್ಲಿಯ ಕಾಫಿ ಹೊಟೇಲ ಸಾವಕಾರ ರಾ| ಮ. ಶ್ರೀನಿವಾಸ ಭಂಡಾರಿ
~~~~~

ಗಳವರ ಹೆಂಡತಿ ಬಾವಿಯಿಂದ ನೀರು ತೆಗಿಯುವರೆ ಹೋಗಿ ಬಾಟೆಯಲ್ಲಿ ಸಿಕ್ಕಿದ ಹಗ್ಗವನ್ನು ತೆಗಿಯುವರೆ ಅಡ್ಡ ಮರದಲ್ಲಿ ನಿಂತು ತೆಗಿಯುವಾಗ್ಯೆ ಮರ ಮುರಿದು ಅವರು ಬಾವಿಗೆ ಬಿದ್ದದ್ದನ್ನು ಇಲ್ಲಿಯ ಕಲಾಯಿ ಕೆಲಸದ ತಿಮ್ಮಯ್ಯ ಎಂಬವನು ಕಂಡು ಬಾವಿಗೆ ಹಾರಿ ಬಾವಿಗೆ ಬಿದ್ದ ಹೆಂಗಸನ್ನು ಮೇಲಕ್ಕೆ ತೆಗೆದು ಪ್ರಾಣ ಉಳಿಸಿದನು. [illegible]ಲ್ಲವೇ ಧೀರತನ!

~~~~~

ಕುಂಬಳೆ:— ೨ ವರ್ಷಗಳಿಂದ ಇಲ್ಲಿಯ ರಸ್ತೆ ಕಿನಾರೆಯಲ್ಲಿ ಅಂಗಡಿಗಳ ಬಗ್ಗೆ ಸ್ಥಳ ಅಪೇಕ್ಷಿಸುತ್ತಾ ನಿರಾಶೆಯಾಗಿ ಮಾರ್ಕೆಟಿನ ಸುತ್ತಲಾದರೂ ಅಂಗಡಿಗಳನ್ನು ಕಟ್ಟಿಸಿಕೊಡುವಂತೆ ಬರಕೊಂಡ ಅರ್ಜಿಗೆ ತಾಲೂಕು ಬೋರ್ಡಿನವರು ಕಬೂಲುಪಡದ ಕಾರಣ ಮನನೊಂದ ವ್ಯಾಪಾರಸ್ಥರನೇಕರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ ದೊರೆಗಳವರಿಗೆ ಅಪೀಲು ಮನವಿ ಬರಕೊಂಡಿರುವರು. ಸರಕಾರಕ್ಕೆ ಹೇರಳ ಮುನಾಫೆಯೂ, ಬಡ ಪ್ರಜೆಗಳಿಗೆ ಉಪಕಾರವೂ, ಲಾಭವೂ ಇರುವ ಈ ಕಟ್ಟೋಣಗಳನ್ನು ಮಾನ್ಯ ದೊರೆಗಳವರು ಅವಶ್ಯವಿರುವ ತನಿಕೆಯಿಂದ ಕಟ್ಟಿಸದೆ ಇರಲಾರರೆಂತ ಇಲ್ಲಿಯವರು ಪೂರ್ಣ ನಂಬಿರುವರು.

ಇಲ್ಲಿಯ ಶಹಾರ ರಸ್ತೆಯ ಪೈಕಿ ರೈಲ್ವೆ ಕಲ್ವರ್ಟಿನ ಬಳಿ ದೊಡ್ಡ ಹೊಂಡಗಳಾಗಿ ಹಗಲು ಆಮದರಷ್ಟೇ ಕಷ್ಟವಾಗಿರುತ್ತಾ ರಾತ್ರಿಕಾಲದ ಸ್ಥಿತಿ ವರ್ಣಿಸಿ ತೀರದು. ಈ ಕುರಿತು ಈ ಪತ್ರಿಕೆಯಲ್ಲಿ ಈ ಮೊದಲು ಪ್ರಕಟಿಸಿದ್ದು ನಿರರ್ಥಕವಾಗಿದ್ದರೂ ಇನ್ನಾದರೂ ಮೇಲಾಫೀಸರರು ನಿಗಾಕೊಡಬಾರದೇ!

~~~~~

ಬೈಂದೂರು:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳದ ತಾ. ೨೩—೯—೧೬ ರಲ್ಲು. ಮ| ರಾ| ರಾ| ಕುಂದಾಪುರ ಸಬ್‌ರೇಂಜ್ ಶಾಲೆಗಳ ಸೂಪರ್‌ವ್ಯಾಜರ್ ಪದ್ಮನಾಭಯ್ಯನವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಕೂಟವು ನೆರವೇರಿತು. ಈ ಸಭೆಯಲ್ಲಿ ಸುಮಾರು ೨೬ ಮಂದಿ ಉಪಾಧ್ಯಾಯರು ಕೂಡಿದ್ದರು. ಸಭೆಯಲ್ಲಿ ಕೂಡಿದ ಉಪಾಧ್ಯಾಯರ ಪೈಕಿ ಕೆಲವರು ಮಾದರಿ ಪಾಠಗಳನ್ನೂ ಉಪನ್ಯಾಸಗಳನ್ನೂ ಕೊಟ್ಟರು. ನಂತರ ಅಧ್ಯಕ್ಷರು ಹೂವುಗಳ ಭಾಗಗಳ ವಿಷಯ ಮತ್ತು ಅವುಗಳ ಕಾರ್ಯದ ವಿಷಯ ಚೆನ್ನಾಗಿ ವಿವರಿಸಿ ಹೇಳಿದರು. ಬರುವ ಸಭೆಯು ಉಪ್ಪುಂದ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡುವದಾಗಿ ನಿಶ್ಚಯಿಸೋಣಾಗಿದೆ.

~~~~~

ಮಂಗಳೂರು.

~~~~~

ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ಕಳದ ತಿಂಗಳ ತಾ. ೨೮ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಕೂಡಿಬಂತು. ಸಭೆಯಲ್ಲಿ ಸಬ್ ಕಲೆಕ್ಟರರಾದ ಮೆ| ಆರ್. ಎಫ್. ಎಲ್. ಗುಪ್ಪಿ, ರಾವ್ ಬಹದ್ದೂರ್ ಎನ್. ಸುಬ್ಬರಾವ್, ಹಾಜಿ ಪಿ. ಕುಂಞಿಸೆಯನ್ ಬಹದ್ದೂರ್, ಖಾನ್ ಸಾಹೇಬ್ ಪಿ. ಎ. ಅಮ್ಮುಸಾಹೇಬ್, ಬಹುಮಾನಪಟ್ಟ ಕೆ. ಸದಾಶಿವ ಭಟ್ಟ ಮೊದಲಾದ ಕೆಲವು ಬೋರ್ಡು ಮೆಂಬರರು ಹಾಜರಿದ್ದರು. ಸುಲ್ತಾನ್ ಬತ್ತೇರಿಯ ಬಳಿ ಇರುವ ಕಡವಿಗೆ ದಕ್ಕೆ ಕಟ್ಟಿಸುವರೆ ರೂ. ೧೬೫, ಮಂಗಳೂರಿನಿಂದ ಕಾರ್ಕಳಕ್ಕೆ ಹೋಗುವಾಗ ಸಿಕ್ಕುವ ರಸ್ತೆಯ ಬದಿಯಲ್ಲಿ ರಸ್ತೆಗಳ ದುರುಸ್ತಿ ಬಗ್ಯೆ ಕಲ್ಲುಗಳನ್ನು ಗುಪ್ಪೆ ಹಾಕಿಸುವ ಉದ್ದೇಶದಿಂದ ರಸ್ತೆಗಳನ್ನು ಅಗಲಮಾಡಿಸುವರೆ ರೂ. ೧೬೦೦; ಉದ್ಯಾವರ ಕಡವು, ಮಾಬುಕಳ ಕಡವು, ಕಲ್ಯಾಣಪುರ ಕಡವುಗಳ ಬಗ್ಯೆ ರೂ. ೬೦೦, ರೂ. ೧೦೦೦, ರೂ. ೧೫೫೦, ಇನ್ನೂ ಕೆಲವು ರಸ್ತೆಗಳ ದುರುಸ್ತಿ ಬಗ್ಯೆ ಹಲವು ನೂರು ರೂಪಾಯಿಗಳೂ ಬೋರ್ಡು ಮೀಟಿಂಗಿನಲ್ಲಿ ಸೆಂಕ್ಷನ್ ಆಗಿರುತ್ತವೆ.

ಇಂಡಸ್ಟ್ರಿಯಲ್ ಕಮಿಷನಿನವರು ನಮ್ಮ ಜಿಲ್ಲೆಗೆ ಬರುವದಿಲ್ಲವಾದುದರಿಂದ ಅವರನ್ನು ನಮ್ಮ ಜಿಲ್ಲೆಗೆ ಬರುವ ಹಾಗೆ ವಿಜ್ಞಾಪಿಸಿಕೊಳ್ಳಬೇಕೆಂದು ಬಹುಮಾನಪಟ್ಟ ಕೆ. ಸದಾಶಿವ ಭಟ್ಟರು ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಂದೆ ಒಂದು ಸೂಚನೆಯನ್ನು ತಂದಿದ್ದರು. 'ಇಂಡಸ್ಟ್ರಿಯಲ್ ಕಮಿಷನಿನವರು ಈ ಜಿಲ್ಲೆಯನ್ನು ಸಂದರ್ಶಿಸುವಹಾಗೆ ಸರಕಾರದವರು ತಕ್ಕ ಏರ್ಪಾಡು ಮಾಡಬೇಕೆಂತ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವು ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಆಗಿರುತ್ತದೆ.

ಪುತ್ತೂರು ಸ್ಟೇಶನಿನ ಪಾಸಲೆಯಲ್ಲಿರುವ ಕರೋಪಾಡಿ ಗ್ರಾಮದ ಈಶ್ವರ ಎಂಬವನು ಕಾಸರಗೋಡು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಿಂದ ಇ. ಪಿ. ಕೋಡಿನ ೪೫೭, ೩೮೦, ೪೧೧ನೇ ಪ್ರಕರಣಗಳ ಮೇಲೆ ಸೆಶ್ಶನಿಗೆ ಕಮಿಟ್ ಮಾಡಲ್ಪಟ್ಟಿದ್ದನು. ಸದರಿ ಈಶ್ವರನು ಇದೇ ಕಳದ ಸಪ್ಟಂಬರ ತಾ ೨೯ನೇ ಶುಕ್ರವಾರ ಮಧ್ಯಾಹ್ನ ಇಲ್ಲಿಯ ಸಬ್‌ಸಿಡಿಯರಿ ಜೈಲಿನಿಂದ ಪರಾರಿಯಾಗಿರುವನು.

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಇದೇ ತಿಂಗಳ ತಾ. ೨೩ನೇ ಸೋಮವಾರ ದಿನ ಕೂಡಿಬರುವದು.

ಡ್ಯುಪಿಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಾದ ಮೆ| ಪಿ. ಬಿ. ಥೋಮ್ಸನರವರು ಇದೇ ತಾ. ೭ನೇ ಶನಿವಾರ ಇಲ್ಲಿಗೆ ಚಿತ್ತೈಸಿ ಇಲ್ಲಿಯ ಪೋಲೀಸ್ ಆಫೀಸ್ ಪೋಲೀಸ್ ಸಿಬಂದಿ ಇತ್ಯಾದಿಗಳನ್ನು ತನಿಕೆ ನಡಿಸುತ್ತಲಿದ್ದಾರೆ. ತನಿಕೆ ತೀರಿದನಂತರ ಸೀರಾಡಿಯುತ್ತಕಡೆ ಸಿಕಾರಿಗೆ ಹೋಗುವರೆಂತ ತಿಳಿದುಬಂದದೆ.

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ತಾ. ೧೧ರಲ್ಲು ಮೂಡಬಿದ್ರಿಯುತ್ತಕಡೆ ಸರ್ಕೀಟಿಗೆ ಹೋಗಿ ತಾ. ೧೪ರಲ್ಲು ಹಿಂತಿರುಗುವರು ಎಂತ ತಿಳಿಯುತ್ತೇವೆ.

ಜಪ್ಪಿನಲ್ಲಿ ವಾಸಿಸುತ್ತಿದ್ದ ಲುಥರ್ ವೇದಮುತ್ತು ಎಂಬವನು ಇದೇ ತಾ. ೫ನೇ ಬೃಹಸ್ಪತಿವಾರ ರಾತ್ರಿ ಮನೆಯಿಂದ ಕಾಣೆಯಾಗಿದ್ದನೆಂತಲೂ ಮರುದಿನ ಅವನ ಹೆಣವು ಬಾವಿಯಲ್ಲಿ ಸಿಕ್ಕಿತೆಂತಲೂ ಕೇಳುತ್ತೇವೆ. ದಾಕ್ತ್ರರು ಶವ ಪರೀಕ್ಷೆಮಾಡಿ ಸದರಿ ಲುಥರವೇದಮುತ್ತನು ತಾನಾಗಿ ಮುಣುಗಿ ಸತ್ತಿರಬೇಕೆಂತ ಅಭಿಪ್ರಾಯಪಟ್ಟಿರುವರೆಂತ ತಿಳಿಯುತ್ತೇವೆ.

ಮಂಗಳೂರು ತಾಲೂಕು ಆಕ್ಟಿಂಗ್ ತಹಸೀಲದಾರರಾದ ಮೆ ಮರಿಯನ್ ಎಸ್. ಪ್ಯಾಸರವರು ದಶಂಬರ ತಾ. ೨೩ರ ವರೆಗೆ ರಜೆ ತಕ್ಕೊಂಡಿರುತ್ತಾರೆ.

III ಗ್ರೇಡ್ ತಹಸೀಲದಾರರಾದ ಮ| ರಾ| ಬಿ. ಮಂಜುನಾಥ ಬಾಳಿಗರವರಿಗೆ ಇದೇ ತಾ. ೧೬ರಿಂದ ೧ ತಿಂಗಳ ಪ್ರಿವಿಲೆಜ್ ರಜೆ ಕೊಡೋಣಾಗಿರುವದರಿಂದ ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾದ ಮ| ರಾ| ಪಿ. ಎನ್. ಕೃಷ್ಣರಾಯರು ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿಯೂ ಮೆ| ಮರಿಯನ್ ಎಸ್. ಪ್ಯಾಸರವರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿಯೂ V ಗ್ರೇಡ್ ತಹಸೀಲದಾರರಾಗಿರುವ ಮ| ರಾ| ಟಿ. ಭವಾನಿಶಂಕರರಾಯರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿಯೂ ಸ್ಟೇಶನರಿ ಸಬ್ ಮೇಜಿಸ್ಟ್ರೇಟ್ ಮತ್ತು ಡ್ಯುಪಿಟಿ ತಹಸೀಲದಾರರಾಗಿರುವ ಮ| ರಾ| ಎಸ್. ಬಾಬುರಾಯರು ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿಯೂ ನೇಮಿಸಲ್ಪಟ್ಟಿರುವರು.

ಮ| ರಾ| ಎಸ್. ಬಾಬುರಾಯರು ಮ| ರಾ| ಮಂಜುನಾಥ ಬಾಳಿಗರಿಂದ ತಾ. ೧೬ರಲ್ಲು ಚಾರ್ಜು ತಕ್ಕೊಳ್ಳುವರು.

ಮೆ| ಮರಿಯನ್ ಎಸ್. ಪ್ಯಾಸರವರು ರಜೆ ತಕ್ಕೊಂಡಿರುವದರಿಂದ ಕಲೆಕ್ಟರ ಆಫೀಸಿನ ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕರಾದ ಮ| ರಾ| ಕೆ. ರಾಮನ್ ನಾಯರರು ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟು ಮೆ| ಪ್ಯಾಸರಿಂದ ಚಾರ್ಜು ತಕ್ಕೊಳ್ಳುವರು.

ಮ| ರಾ| ಕೆ. ರಾಮನ್ ನಾಯರರ ಬದಲಿಗೆ ಮ| ರಾ| ಎಸ್. ಬಾಬುರಾಯರು ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು. ಆದರೆ ಎಸ್. ಬಾಬುರಾಯರು ಆಕ್ಟಿಂಗ್ ತಹಸೀಲದಾರರಾಗಿ ಮ| ರಾ| ಮಂಜುನಾಥ ಬಾಳಿಗರಿಂದ ಚಾರ್ಜು ತಕ್ಕೊಳ್ಳಬೇಕಾಗಿರುವದರಿಂದ I ಕಾರಸ್ಪಂಡೆಂಟ ಕ್ಲಾರ್ಕರಾಗಿರುವ ಮ| ರಾ. ಎಮ್. ಗಣೇಶರಾಯರು ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಮ| ರಾ| ಎಸ್. ಬಾಬುರಾಯರು ಆಕ್ಟಿಂಗ್ ತಹಸೀಲದಾರರಾಗಿ ನೇಮಿಸಲ್ಪಟ್ಟದ್ದರಿಂದ ಕಲೆಕ್ಟರ ಆಫೀಸಿನ ಆಕ್ಟಿಂಗ್ ೨ನೇ ಕಾರಸ್ಪಂಡೆಂಟ ಕ್ಲಾರ್ಕರಾಗಿರುವ ಮ| ರಾ| ಜಿ. ಮಾಧವ ಪ್ರಭುರವರು ಕಾಸರಗೋಡಿನ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟ ಮತ್ತು ಡ್ಯೂಪಿಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ತಾಲೂಕು ಬೋರ್ಡಿಗೆ ಶಂಕರನಾರಾಯಣ ಸರ್ಕಲಿನಿಂದ ಒಬ್ಬ ಮೆಂಬರರನ್ನು ಆರಿಸುವ ಸಂದರ್ಭದಲ್ಲಿ ಉಮೇದ್ವಾರರಾಗಿದ್ದ ಮ| ರಾ| ಎಚ್. ಲಕ್ಷ್ಮೀನಾರಾಯಣ ಕಾಮತರಿಗೆ ೬೫ ಓಟುಗಳೂ, ಮ| ರಾ| ಎಸ್. ಅಂತಯ ಸೆಟ್ರಿಗೆ ೬೭ ಓಟುಗಳೂ ದೊರಕಿದ್ದವು. ಆದರೆ ಮ| ರಾ| ಅಂತಯ್ಯ ಸೆಟ್ರಿಗೆ ದೊರಕಿದ ೨ ಹೆಚ್ಚಿನ ಓಟುಗಳು ಕುಂದಾಪುರ ಸರ್ಕಲಿನಲ್ಲಿ ಓಟು ಕೊಟ್ಟವರಿಂದ ದೊರಕಿದ್ದು ಎಂಬದಾಗಿ ಮ| ರಾ| ಕಾಮತರವರು ಆಕ್ಷೇಪ ತಂದದ್ದರಿಂದ ಸಬ್ ಕಲೆಕ್ಟರರು ತನಿಕೆ ನಡಿಸಿ ಒಟ್ಟಿಗೆ ೩ ಓಟುಗಳು ಅನುಮಾನಕರದ್ದು ಎಂಬ ಅಭಿಪ್ರಾಯಪಟ್ಟು ಮ| ರಾ| ಸೆಟ್ರಿಗೆ ೬೪ ಓಟುಗಳೆಂತಲೂ, ಮ| ರಾ| ಕಾಮತರಿಗೆ ೬೫ ಓಟುಗಳೆಂತಲೂ ತೀರ್ಮಾನಿಸಿದ್ದರು. ಈ ತೀರ್ಮಾನದ ಮೇಲೆ ಮ| ರಾ| ಅಂತಯ್ಯ ಸೆಟ್ರು ಜಿಲ್ಲಾ ಕಲೆಕ್ಟರ ದೊರೆಗಳಲ್ಲಿ ಅಪೀಲು ಮಾಡಿಕೊಂಡರು. ಜಿಲ್ಲಾ ಕಲೆಕ್ಟರ ದೊರೆಗಳು ತನಿಕೆ ನಡಿಸಿ, ಇಬ್ಬರಿಗೂ ಸರಿಸಮಾನವಾದ ಓಟು ಎಂತ ಅಭಿಪ್ರಾಯಪಟ್ಟು ಇನ್ನೊಂದು ಸಲ ಚುನಾವಣೆ ನಡೆಯಬೇಕಾಗಿ ತೀರ್ಮಾನಿಸಿರುತ್ತಾರೆಂತ ತಿಳಿಯುತ್ತೇವೆ.

ಮದ್ರಾಸ್ ಆಸ್ಪತ್ರೆ ಹಡಗ ಫಂಡಿಗೆ ಸಪ್ಟಂಬರ ತಿಂಗಳಲ್ಲಿ ಮ| ರಾ| ರಾವ್ ಬಹದ್ದೂರ್ ಎನ್ ಸುಬ್ಬರಾವ್ ರೂ. ೫; ಮ| ರಾ| ಟಿ. ಭವಾನಿರಾವ್ ರೂ. ೫; ಮ| ರಾ| ಎಮ್. ಎನ್. ಪ್ರಭು ಮತ್ತು ಎಮ್. ಮುಕುಂದರಾವ್ ರೂ. ೩; ಮ| ರಾ| ಎ. ಶ್ರೀನಿವಾಸಪೈ ರೂ ೨; ಮ| ರಾ| ಕೆ. ಪಿ. ರಾಮರಾವ್ ರೂ. ೨; ಮ| ರಾ| ಎಸ್. ರಘುನಾಥಯ್ಯ ರೂ. ೧; ಮ| ರಾ| ಎಲ್. ರಾಮರಾವ್ ರೂ. ೧; ಮ| ರಾ| ರಾವ್‌ಬಹದ್ದೂರ್ ಆರ್. ರಾಮ

ರಾವ್ ರೂ. ೧; ಮೆ| ರಾ| ಕಾರ್ನಾಡ ಸದಾಶಿವರಾವ್ ರೂ. ೧; ಮ| ರಾ| ಗೊಲ್ಲರಕೇರಿ ಕೃಷ್ಣರಾವ್ ರೂ. ೧; ಮ| ರಾ| ಎನ್. ಜಿ. ಸುವರ್ಣ ರೂ. ೧; ಮ| ರಾ| ಎಸ್. ನಾಗಪ್ಪನ್ಯಾಕ ರೂ. ೧; ಮ| ರಾ| ಆರ್. ಎಮ್ ರೇ ರೂ. ೧; ಮ| ರಾ| ಪಿ. ಸುಬ್ಬರಾವ್ ರೂ. ೧; ವಂತಿಗೆ ಕೊಟ್ಟಿರುತ್ತಾರೆ.

ಮ| ರಾ| ಉಳ್ಳಾಲ ಕೃಷ್ಣರಾಯರು ಸರಾಯಿನ ಲಕ್ಕೆ ಕೊಟ್ಟ ೫೦ ರೂಪಾಯಿಯ ನೋಟು ಸಹಿತ ಪರಾರಿಯಾಗಿದ್ದ ಸಾಂತಪ್ಪ ಎಂಬವನಿಗೆ ೩ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಮ| ರಾ| ವಕೀಲ ರಂಗಪ್ಪಭಂಡಾರಿಗಳವರ ಮನೆಯಿಂದ ಸುಮಾರು ೪೧ ರೂಪಾಯಿಗಳ ಬೆಲೆ ಬಾಳುವ ವಾಚು ಇತ್ಯಾದಿಗಳನ್ನು ಕಳವುಮಾಡಿದ ತುಕ್ರ ಯಾನೆ ಸೋಮ ಎಂಬವನಿಗೆ ಡೆಪ್ಯುಟಿ ಕಲೆಕ್ಟರರವರು ೧೫ ಕೊರಡೇ ಪೆಟ್ಟು ಕೊಡಿಸಿರುತ್ತಾರೆ.

ಮಂಗಳೂರು ತಾಲೂಕಿಗೆ ಸೇರಿದ ಮೂಡು ಪೆರಾರ ಗ್ರಾಮದಲ್ಲಿ ಬಸ್ಯ ಎಂಬ ಹೆಂಗಸನ್ನು ಖೂನಿಮಾಡಿದ್ದನಾಗಿ ಆಪಾದಿಸಲ್ಪಟ್ಟ ಬಗ್ಗ ಎಂಬವನನ್ನು ತಾಲೂಕು ಮೇಜಿಸ್ಟ್ರೇಟರು ಸೆಸ್ಸನ್ಸಿಗೆ ಕಮಿಟ್ ಮಾಡಿರುತ್ತಾರೆ.

ಬೆಂದೂರಲ್ಲಿ ಜಾಕಿಯುಸ್ ಫೆರ್ನಾಂಡಿಸನಿಗೆ ಚೂರಿ ಹಾಕಿದನೆಂಬದಾಗಿ ಆಪಾದಿಸಲ್ಪಟ್ಟ ಕಾಪಿಲ ಮಸ್ಕರೆಂಞನಿಗೆ ಡೆಪ್ಯುಟಿ ಕಲೆಕ್ಟರರವರು ೬ ತಿಂಗಳ ಸಜಾ ವಿಧಿಸಿರುತ್ತಾರೆ.

ಬೋಳೂರಿನ ಮಾರಿಗುಡಿಯಲ್ಲಿ ಇದೇ ತಾ. ೯ನೇ ರಾತ್ರಿ ಸುಮಾರು ೩೦೦ ರೂಪಾಯಿ ಕ್ರಯ ಬಾಳುವ ಬೆಳ್ಳಿಯ ಸಾಮಾನುಗಳು ಕಳವಾಗಿರುವವು ಎಂತ ತಿಳಿಯುತ್ತೇವೆ.

ಹಳೇ ಅಂಗಡಿ ಬ್ರೇಂಚ್ ಪೋಸ್ಟು ಮಾಸ್ಟರರಾಗಿದ್ದ ಶಿರೂಕಲಿ ಅಸಾದಿ ಎಂಬವರು ಮುಂಬಾಯಿಂದ ಹಳೇ ಅಂಗಡಿ ಪೋಸ್ಟಾಫೀಸಿಗೆ ಇನ್ಶೂರು ಮಾಡಿ ಬಂದಿದ್ದ ಕೆಲವು ಕರೆನ್ಸೀ ನೋಟುಗಳನ್ನು ದುರುಪಯೋಗಮಾಡಿದ್ದರೆಂದು ಆಪಾದಿಸಲ್ಪಟ್ಟು ಸೆಸ್ಸನ್ಸಿಗೆ ಕಮಿಟ್‌ಮಾಡಲ್ಪಟ್ಟಿದ್ದರಷ್ಟೆ. ಕಳೆದ ವಾರ ಈ ಮೊಕದಮೆ ತನಕೆಯು ಇಲ್ಲಿಯ ಸೆಶ್ಶನ್ ಕೋರ್ಟಿನಲ್ಲಿ ನಡೆದು ಡಿಸ್ಟ್ರಿಕ್ಟ್ ಜಡ್ಜರವರು ಆಪಾದಿತನಿಗೆ ೨೦೦ ರೂಪಾಯಿ ಜುಲುಮಾನೆ ಮತ್ತು ಕೋರ್ಟು ಬರಕಾಸ್ತು ಆಗುವ ವರೆಗೆ ಸಜಾ ವಿಧಿಸಿದರೆಂತ ತಿಳಿಯುತ್ತೇವೆ.

ಕಲಿಯುಗದ ಅರ್ಜುನನೆಂದು ಹೆಸರುಪಡೆದ ಪ್ರೊಫೆಸರ್ ಶಾಹರವರು ನಮ್ಮ ಜಿಲ್ಲೆಯ ಕೆಲವು ಪ್ರಾಂತ್ಯಗಳನ್ನು ಸಂದರ್ಶಿಸಿ ಅಲ್ಲಲ್ಲಿ ತನ್ನ ಅದ್ಭುತ ಸಾಹಸಗಳನ್ನು ಪ್ರದರ್ಶಿಸಿ ಪುನಃ ಇಲ್ಲಿಗೆ ಬಂದಿರುತ್ತಾರೆ. ಪ್ರೊಫೆಸರ್ ಶಾಹರವರು ಇದೇ ಬರುವ ಸೋಮವಾರ ಜಿಲ್ಲಾ ಕಲೆಕ್ಟರ ದೊರೆಗಳವರ ಪ್ರೋತ್ಸಾಹದಿಂದ ಅದ್ಭುತಕರವಾದ ಕೆಲವು ಯಕ್ಷಿಣೀ ವಿದ್ಯೆಗಳನ್ನು ಸಾರಸ್ವತ ಶಾಲೆಯ ಹಳೇ ಕಟ್ಟಡದಲ್ಲಿ ತೋರಿಸಲಿಕ್ಕಿದ್ದಾರೆಂತ ತಿಳಿಯುತ್ತೇವೆ.

ಈ ಪ್ರಾಂತ್ಯದ ಶಾಲೆಗಳ ಇನ್ಸ್‌ಪೆಕ್ಟರರಾದ ಮಿ| ಯೇಟ್ಸ್ ದೊರೆಗಳವರು ಇಲ್ಲಿಗೆ ಚಿತ್ತೈಸಿ ಇಲ್ಲಿಯ ಶಾಲೆಗಳನ್ನು ಪರೀಕ್ಷಿಸುತ್ತಲಿದ್ದಾರೆ.

ಮಿ| ಎ. ಸಿ. ಸೋನ್ನರವರು ಬಾಸೆಲ್ ಮಿಶ್ಶನಿನವರ ಎಲ್ಲಾ ಸ್ಥಿರಾಸ್ತಿಗಳ ಗೇಣಿ ವಸೂಲಿ ವಗೈರೆ ಆಡಳಿತೆ ನೋಡುವ ಮುತಾಲಿಕರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಿ| ಎಮ್. ಇ. ಕೌಚ್‌ಮೇನ್ ದೊರೆಗಳವರು ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕೊರೋನೇಷನ್ ಕ್ರಿಕೆಟ್ ಕ್ಲಬ್ ಮಂಗಳೂರು ಮತ್ತು ಯುನೈಟೆಡ್ ಕ್ರಿಕೆಟ್ ಕ್ಲಬ್ ಕನ್ನಾನ್ನೂರು. ಇವರೊಳಗೆ ಇದೇ ತಾ 9ಕ್ಕೆ ಕನ್ನಾನೂರಿನ ಮೈದಾನಿನಲ್ಲಿ ಬಹಳ ಕೌಶಲ್ಯದ ಕ್ರಿಕೆಟ್ ವಿನೋದಾಟವು ನಡೆಯಿತು. ಪ್ರಥಮ ಆಟವು ಮಂಗ್ಳೂರಿನವರಿಗೆ ದೊರಕಿತು. ಅಂತೋನಿ ಲೋಬರು ಮತ್ತು ಅಲೆಕ್ಸ್ಯ ಮೊಂತೇರರು ಇಬ್ಬರು ಕೂಡಿ ವಿನೋದಕರವಾಗಿ ಆಡಿದರು. 86 ರನ್ಸ್‌ಗಳಾದ ನಂತರ ಲೋಬೋ ಔಟಾದರು. ಅಬ್ದುಲ್ ರಹಿಮಾನರು ತಮ್ಮ ಅಪ್ರತಿಮ ಬಲದಿಂದ ಆಡತೊಡಗಿ ತನಗೆ ದೊರಕಿದ 87 ರನ್ಸ್‌ಗಳಲ್ಲಿ 4 ಫುಲ್‌ಪಿಚ್ ಬೌಂಡರಿ ಹೊಡೆದರು. ಮಂಗಳೂರು ಪಂಗಡದವರೆಲ್ಲಾ ಒಟ್ಟು 212 ರನ್ಸ್ ಪಡೆದರು. ಕನ್ನಾನೂರಿನ ಮೊದಲನೇ ಆಟವು ಪ್ರಾರಂಭಿಸಿತು. ಇವರ ಮೊದಲನೆ 4 ಮಂದಿ ಅಬ್ದುಲ್‌ರಹಿಮಾನರ ಮತ್ತು ಮೂರು ಮಂದಿ ಬ್ರಗಾನ್ಸರ ಕೈಯಿಂದ ಔಟಾದರು. ತರುವಾಯ ಆಡತೊಡಗಿದ ಚಾರ್ಲ್ಸ ಮೇಯರ್ಸ್ ಎಂಬವರು ಮಾತ್ರ 32 ರನ್ಸ್‌ಗಳನ್ನು ಪಡೆದರು. ಜೊತೆಯಾಟದ ಅಂತ್ಯದಲ್ಲಿ ಕನ್ನಾನೂರಿನ ಪಂಗಡದವರು 78 ರನ್ಸ್‌ಗಳನ್ನು ಹೊಂದಿದರು. ಹೀಗೆ ಕನ್ನಾನೂರಿನವರಿಗೆ 134 ರನ್ಸ್‌ಗಳಾಗಿ ಪರಾಜಿತರಾದರು ಎಂತ ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ.

ಹಿಂದೂ ಕ್ರಿಕೆಟ್ ಪಂಗಡದವರಿಗೂ ಸೈಂಟ್ ಎಲೋಶಿಯಸ್ ಕಾಲೇಜ್ ಕ್ರಿಕೆಟ್ ಪಂಗಡದವರಿಗೂ ಕೊರೊನೇಶನ್ ಕಪ್ಪ್ ಬಗ್ಗೆ ಕೊನೆಯ ಕ್ರಿಕೆಟ್ ಪಂದ್ಯಾಟವು ನಡೆಯುತ್ತಿದೆ.

ಶಾಲೆಗಳ ಇಂಟರ್ ಸ್ಕೂಲ್ ಜಮ್ನಾಸ್ಟಿನ ಬಗ್ಗೆ ನಡೆದ ಕ್ರಿಕೆಟ್ ಆಟಗಳಲ್ಲಿ ಜೂನಿಯರ್ ಪಂಗಡದವರಲ್ಲಿ ಕೆನರಾ ಹೈಸ್ಕೂಲಿನವರೂ ಸೀನಿಯರ್ ಪಂಗಡದವರಲ್ಲಿ ಸೆಂಟ್ ಆಲೋಶಿಯಸ್ ಕಾಲೇಜಿನವರೂ ಗೆದ್ದಿರುತ್ತಾರೆ.

ಇಲ್ಲಿಯ ಮುನ್ಸಿಪಲ್ ಚೇರ್ಮೇನರಾಗಿ ರಾವ್ ಸಾಹೇಬ ಡಾಕ್ಟರ್ ವರ್ಗೀಸರವರು ನೇಮಕ ಹೊಂದಿರುವರು.

ಇಲ್ಲಿಯ ಗಣಪತಿ ಶಾಲೆಯಲ್ಲಿ ವಿಜಯದಶಮಿ ದಿನವು ಇಷ್ಟು ವರುಷಗಳಲ್ಲಿ ಆಚರಿಸಲ್ಪಟ್ಟಂತೆ ವಿಶೇಷ ಸಂಭ್ರಮದಿಂದ ಕಳೆದ ತಾ ೬ನೇ ದಿನ ಆಚರಿಸಲ್ಪಟ್ಟಿತು. ಗವರ್ನಮೆಂಟ ಕೋಲೇಜಿನ ಪ್ರಿನ್ಸಿಪಾಲರಾದ ಮಿ| ಎನ್. ಆರ್. ಕೃಷ್ಣಮ್ಮಾರವರು ಆ ದಿನ ಅಧ್ಯಕ್ಷಸ್ಥಾನವನ್ನು ವಹಿಕೊಂಡಿದ್ದರು.

ಆನರೆರಿ ಮೇಜಿಸ್ಟ್ರೇಟರೂ, ತಾಲೂಕುಬೋರ್ಡು ಮೆಂಬರರೂ ಆಗಿರುವ ಮ| ರಾ| ರಾ| ನರಸಿಂಹ ಮರ್ಡಿ ಭಂಡಾರಿಗಳು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಅಕ್ಕಿ ಧಾರಣೆಯು ವಿಪರೀತ ಏರಿ ಹೋದದರಿಂದ ಉಂಟಾಗಿರುವ ಸಂಕಷ್ಟವನ್ನು ನಿವಾರಿಸುವ ಬಗ್ಯೆ ಇಲ್ಲಿ ಏರ್ಪಡಿಸಲ್ಪಟ್ಟಿರುವ ಡಿಸ್ಟ್ರೆಸ್ ರಿಲೀಫ ಕಮ್ಮಿಟಿಯವರು ಈ ತನಕ ಸುಮಾರು ರೂ. ೧೩೫೦ ಚಂದಾ ಕೂಡಿಸಿ ರೂ. ೧೧೦೦ನ್ನು ವಸೂಲುಮಾಡಿರುತ್ತಾರೆ. ಇದೇ ನಿವಾರಣೆಯ ಪ್ರಯತ್ನವನ್ನು ಸಾವುಕಾರರಲ್ಲಿ ಕೆಲವರು ಕೂಡಿಕೊಂಡು ಪ್ರತ್ಯೇಕವಾಗಿ ನಡಿಸುತ್ತಿರುವದರಿಂದ ರಿಲೀಫ ಕಮ್ಮಿಟಿಯವರಿಗೆ ಚಂದಾ ಎತ್ತುವ ಕೆಲಸವನ್ನು ವಿಸ್ತಾರವಾಗಿ ನಡಿಸಲು ಆಗಲಿಲ್ಲ. ದಿನವಹಿ ಸುಮಾರು ೧೫೦೦ ಜನರು ಅಕ್ಕಿಯನ್ನು ಪಡಕೊಳ್ಳಲು ಬರುತ್ತಿರುವರು.

~~~~~~

ಬಾತ್ಮೀದಾರರಿಗೆ ನೋಟೀಸು:— ಕುಂದಾಪುರದಿಂದ ಹೊಟ್ಟೆಯ ಗೋಳು, ನಾನು ಲೋಭಿ ಅಲ್ಲ — ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ಬಿಜೂರು ಶಾಲೆ, ಕಟಪಾಡಿ ಶ್ರೀವೆಂಕಟರಮಣ ಸ್ವಾಮಿ ಎಲಿಮೆಂಟರಿ ಶಾಲೆ, ಕಾರ್ಕಳ ಬೋರ್ಡು ಎಲಿಮೆಂಟರಿ ಶಾಲೆ— ಈ ಶಾಲೆಗಳಲ್ಲಿ ನಡೆದ ವಿಜಯದಶಮಿ ಸಮಾರಂಭಗಳ ವಿವರಗಳು ಬಂದು ತಲ್ಪಿರುತ್ತವೆ.

ಒಬ್ಬ ಮುಂಬಾಯಿ ಬಾತ್ಮೀದಾರರಿಂದ:—ಮುಂಬಯಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರ ಜಾತಿಯವರದೊಂದು ಲಗ್ನವು ಇದೇ ಭಾದ್ರಪದ ಶುದ್ಧ ೧೩ಯು (ತಾ. ೧೦-೯-೧೯೧೬) ರವಿವಾರ ರಾತ್ರಿ ೮|| ಘಂಟೆಗೆ ನೆರವೇರಿತು. ಲಗ್ನವು ಕುಲಾಚಾರ ಪದ್ಧತಿಯನ್ನು ಸರಿಸಿತ್ತು. ಆದರೆ ಹಿರಿಯ ಪದ್ಧತಿ ಮೇರೆಗೆ ವರನ ಕಡೆಯವರು ಹತ್ತು ಸಮಸ್ತರೊಡಗೂಡಿ ವಧುವಿನಲ್ಲಿಗೆ ಹೋಗುವ ದೆಕ್ಕೆಯು ಮನ್ನಾ ಪಡಿಸೋಣಾಗಿ ಬಂದ ದಿಬ್ಬಣಿಗರನ್ನು ಎದುರುಗೊಂಡು ಅಂದೇ ರಾತ್ರಿ ಧಾರೆಯಾಗಿ ಒಂದೇ ಭೋಜನದಿಂದ ಸತ್ಕರಿಸೋಣಾಗಿದೆ. ಈ ವಿಷಯವು ಮೊಗೇರ ಕುಲದ ಸರ್ವ ಜನರು ತಿಳಿಯತಕ್ಕದ್ದು. ಮತ್ತು ಮುಂದಕ್ಕಾದರೂ ಇದು ಸರ್ವ ಸಮ್ಮತದಿಂದ ಅನುಸರಿಸಲು ಯೋಗ್ಯವಾದುದೂ ಆಗಿರುತ್ತದೆ. ಇಲ್ಲಿ ಹೊಸದಾಗಿ ನೆರವೇರಿದ ಈ ಲಗ್ನದಲ್ಲಿ ನಡೆದ ವಿಶೇಷ ಸಂಗತಿಗಳೇನಂದರೆ—ತಮ್ಮ ಜಾತಿಕಟ್ಟು ನೀತಿಗಳಿಂದ ಬಹಿಷ್ಕೃತರಾಗಿದ್ದವರಿಗೂ ಇದಕ್ಕೆ ಪ್ರವೇಶವು ದೊರೆತು ಕಾಯಿಗಂಧ ತಾಂಬೂಲ, ಸಹಪಙ್ಕ್ತಿ ಭೋಜನಾದ್ಯುಪಚಾರಗಳ ಸತ್ಕಾರವು ಎಲ್ಲರಂತೆ ದೊರಕಿರುತ್ತದೆ;. ಇದಕ್ಕೆ ಮೂರು ಹೋಬಳಿಯ ಮೊಕ್ತೇಸ್ವರರೇ ಮೊದಲಾದ ಸಭಿಕರೆಲ್ಲರೂ ಕೂಡಿ ಬಂದಿದ್ದರು. ಆದರೆ ಈ ನೂತನ ಪದ್ಧತಿಯು ಗುದ್ದಿಕೊಪ್ಪ ಹತ್ತು ಸಮಸ್ತರು ಉಂಟುಮಾಡಿದರೋ ಅಥವಾ ಕುಲದ ಸರ್ವರೋ ಎಂಬ ಸಂದೇಹವಿದೆ. ನಮ್ಮತ್ತ ಕಡೆಯ ಮೊಗೇರ ಜಾತಿಯವರ ಲಗ್ನಕಾರ್ಯವು ಇಷ್ಟರ ತನಕ ಇಲ್ಲಿ ನೆರವೇರಿದ್ದೂ ಇಲ್ಲ ಮತ್ತು ಕುಲದ ಸರ್ವರ ಏಕಸಮ್ಮತದಿಂದ (ಹೋಬಳಿಯವರಿಂದ) ಬಹಿಷ್ಕೃತರಾಗಿದ್ದವರಿಗೆ ಸ್ವಜಾತಿಯ ಶುಭಶೋಭನಾದಿ(ಹತ್ತು ಸಮಸ್ತರಿದ್ದು ನಡಿಸತಕ್ಕ) ಕಾರ್ಯಗಳಿಗೆ ಈ ತನಕ ಪ್ರವೇಶ ಮತ್ತು ಪದ್ಧತಿಪ್ರಕಾರ ಮನ್ನಣೆಯು ದೊರೆತುದೂ ಇಲ್ಲ. ಹೀಗಿರುತ್ತಾ ಹೋಬಳಿಯ ಕಟ್ಟಿನಲ್ಲಿ (ಮನದಲ್ಲಿ)ರುವವರಿಗೆ ಸಭಾ ಪ್ರವೇಶಕ್ಕೆ ಇನ್ನಾವ ಅಭ್ಯಂತರವೂ ಇರಲಾರದೆಂದು ಈ ನೂತನ ಲಗ್ನಕ್ಕನುಸಾರವಾಗಿ ಹೇಳಿದರೆ ಹೆಚ್ಚಾಗದು.

~~~~~~

In the Court of the Dt. Munsiff of Coondapur.

O. P. NO 76/1916

Between

HUSEIN SAHEB, UMMER SAHEB } Minors by their Next friend Mavda Hassan Saheb. } *Petitioners*

and

SALIMA ALIAS MASA BIBI, WIDOW OF MAVDA AMIN SAHEB } *Counter Petitioner*

Take notice that the above named petitioners have applied for a succession certificate in their name to collect the debts of Rs. 2171-10-1 due to their deceased maternal grandfather Mavda Amin Saheb and that the petition has been posted to 26th October 1916 for hearing. Those who have any objections to make must appear and state their objections in the above court on or before the said date.

29-9-16. Coondapur. } **M. NARAYANA KAMATH** } *Pleader for petitioners.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟೆರಿ ಇನ್‌ಸ್ಟಿಟ್ಯೂಟ್, ಲೆಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2 ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟೆರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭಾಜನನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— **ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭನಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು.

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್		STANY BROTHERS
ಮತ್ತು	ಸಬ್ ಏಜಂಟರು	Sole Agents
ಹಂಪನ್‌ಕಟ್ಟೆ ಶೋಪುಗಳಲ್ಲಿ ದೊರಕುವದು.	ಬೇಕಾಗಿವೆ.	C. M. C's, Toothache Specific, Mangalore.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! **ಕಲೆಯಿಲ್ಲ!!** **ಉರಿಯಿಲ್ಲ!!!**

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಛಳಿಕಾಲ! **(Best Shwals)** ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಳ್ಳಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0 ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— **ವ್ಯಾರು ಅಂಡು ಕಂಪೆನಿ,**
3 ಇರುಳಪ್ಪನ ಬೀದಿ,
ಮದರಾಸು.

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ಬಿಕರಿಗೆ ಸಿದ್ಧವಾಗಿರುವದು!!!

ವಿಟ್ಲ ಸಬ್ ರಜಿಸ್ಟ್ರಾರ ಆಫೀಸಿನ ಕ್ಲಾರ್ಕ ಬೋಳಾರ ವಾಸುದೇವಯ್ಯನವರಿಂದ ರಚಿಸಲ್ಪಟ್ಟ

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ಬಿಕರಿಗೆ ಸಿದ್ಧವಾಗಿರುತ್ತವೆ. ಕ್ರಯ ಪ್ರತಿ 1ರ 4 ಆಣೆ.

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲ್ಪಡುವದು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಯಲ್ಲಿ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.
ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಶಾಖೆ 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ॥ ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ ಚಾಂಪಿಯನ್ ಆಫೀಸ್ ಏಜನ್ಸಿ ಮೈಸೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮ ತರಹ ೧ಕ್ಕೆ ರೂ. ೪—೦—೬.

ಕಾಬುಲಿ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ತೀಯಂ ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೇಷ್ಮೆ ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ಇನಾಮವಾಗಿ ಕಳುಹಿಸಲಾದೀತು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ, ಚೌಕಾಂಬಾ, ಕಾಶಿ.
SIROMANI NARAYANA CHARYA & CO,
Choukhambay, BENARES CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ!!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳಿಗೂ ಜಾಡ್ಯಗಳಿಗೂ "ಟೂರಕಬ" ಇದು ಸಿದ್ಧೌಷಧವಾಗಿರುವದು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಆದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲೆಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯ ಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಒಂದೇ ಮಾತಿನಿಂದ ಹೇಳುವದಾದರೆ ಊರಕಬ್ಬಿನಲ್ಲಿ ಸವಿ ಒಂದೇ ಇದ್ದರೆ ಈ "ಟೂರಕಬ್ಬಿನಲ್ಲಿ" ಅಮೃತದಷ್ಟು ಸಾಮರ್ಥ್ಯವಿರುವುದು. ಒಂದು ತಿಂಗಳಿಗೆ ಸಾಕಾಗುವ ಈ ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಸುಗಂಧವಿಲಾಸ,

ಮಂಗಳೂರು, ರಥಬೀದಿ, ಮಂಗಳೂರು.

Can be had at—**Electro Homeopathic Dispensary,**

Hampankatta, Mangalore.

"ಅನೇಕಾಂಜನಗಳು ಪ್ರತಿಸೃಷ್ಟಿಯಾಗಿರುವವು."

ಪಂಚಭಾಷೆಗಳಲ್ಲಿರುವ ಚೀಟಿಯನ್ನು ನೋಡಿಕೊಂಡರೆ ಮೋಸವಾಗಲಾರದು.

ಅಮೃತಾಂಜನವೇ ದಿವ್ಯಾಂಜನ.

ಅಮೃತಾಂಜನ ಎಲ್ಲಾ ನೋವಿಗೂ ಸಿದ್ಧೌಷಧ. ತಲೆನೋವು, ಕೀಲುಹೊಡತ, ವಾಯುನೋವು, ಪಕ್ಷವಾತಕ್ಕೆ, ಚಳುಕು, ಊದು, ಪಕ್ಕೆನೋವು, ಚೇಳುಕಡಿತ, ಉಬ್ಬಸ, ಕೆಮ್ಮಲು, ನೈತ್ಯ, ಹುಣ್ಣು ಮತ್ತು ಎಲ್ಲಾ ತರದ ಜಖಂಗಳಿಗೆ ಅಮೃತಾಂಜನವೇ ಪರಮೌಷಧ. ಸಾವಿರಾರು ಮಂದಿ ಹೊಗಳಿ ಬರೆಯುತ್ತಾರೆ. ಸೊಗಸಾದ ಡಬ್ಬಿ ಸಹಿತ ಕ್ರಯ 0—8—0. 12 ಡಬ್ಬಿಗಳಿಗೆ ಕ್ರಯ ರೂ. 5—0—0. ಪರಸ್ಥಳಗಳಿಗೆ ವಿ. ಪಿ ಯಿಂದಲೂ ರವಾನಿಸುತ್ತೇವೆ.

ಗಜಕರ್ಣ ಮುಲಾಮು ಡಬ್ಬಿ 1ರ ಬೆಲೆ 0—6—0.

ದಂತಮಂಜನ ಡಬ್ಬಿ 1ರ ಬೆಲೆ 0—2—0.

ಲಬಿವಾಗಿಯೂ ಚಿಲ್ಲರೆಯಾಗಿಯೂ ದೊರೆಯುವ ಸ್ಥಳ—

ದಿ ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಉಚಿತ! ಕ್ರಯ 5 ರೂ. ಉಳ್ಳ ಇಂಗ್ಲಿಷ್ ವಾಚು. ಉಚಿತ!



ಈ ನಕ್ಷೆಯಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಹಾಕುವ 1 ಬಾಟ್ಲಿ ಇಂಕಿ ಸಹಿತ ರೂ. 2—2—0. ಇದನ್ನು ತರಿಸಿಕೊಳ್ಳುವವರಿಗೆ ಮೇಲೆ ಹೇಳಿದ 5 ರೂ. ವಾಚು ಸ್ವಲ್ಪ ಕಾಲದವರೆಗೆ ಉಚಿತವಾಗಿ ಕೊಡಲ್ಪಡುತ್ತೆ.

ವಿಳಾಸ:— ಶಂಕರ್ ಕಂಪೆನಿ,

ಸೈದಾಪೇಟೆ, ಮದರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಚರ್ಮರೋಗಕ್ಕೆ ಔಷಧಿ:— ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ, ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾದಿಗಳು, ಸುಂಡು ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ, ಹೊರಗೆ ಹಚ್ಚುವದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ.

ಕೇಶ ಸುವಾಸಿನಿ:— ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೂಡುವಂಥಾದ್ದಾಗಿರುತ್ತದೆ. ಇದರಿಂದ ಕೂದಲು, ವಿಶಾಸಗಳು, ಕಣ್ಣುರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ. ತಲೆಗೂ, ಮೆದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ. ಬೋಳು ತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅತ್ಯುಮೆಚ್ಚಿನದ್ದಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ರೂ. 1. ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ.

ರಕ್ತಾಮೃತ:— ಕಾಪಿ, ಟೀ ಇವುಗಳಿಗೆ ಬದಲಾಗಿ ಉಪಯೋಗಿಸು ಚೂರ್ಣ ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ:— ಕಾಪಿ, ಟೀ, ಇವುಗಳಿಂದುಟಾಗುವ ಕೇಡುಗಳೊಂದೂ ಇಲ್ಲದೇ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯರೋಗ, ತಲೆನೋವು ಮುಂತಾದವನ್ನು ಹೋಗಲಾಡಿಸುವದು. ರಕ್ತಶುದ್ಧಿಯನ್ನು ಮಾಡಿ ನರಸಂಬಂಧವನ್ನು ಬಲಪಡಿಸುತ್ತದೆ. ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣಹೊಂದುವರು. ಜ್ವರದವರಿಗೂ, ಬಸಿರು ಬಾಣಂತಿಯರಿಗೂ, ವಾಂತಿಭೇದಿ ಮುಂತಾದ ರೋಗಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು. ವಿದ್ಯಾರ್ಥಿಗಳಿಗೂ ಉದ್ಯೋಗಸ್ಥರಿಗೂ ಅನಿಷ್ಟವಾದ ಕಾಪಿ, ಟೀ ಮುಂತಾದವುಗಳಿಗೆ ಬದಲಾಗಿ ಮಕ್ಕಳು ದೊಡ್ಡವರೆಲ್ಲರು ಉಪಯೋಗಿಸಬಹುದು. ಅರ್ಧ ತೊಲೆ ಚೂರ್ಣವು ಒಂದು ಬಟ್ಟಲು ಕಷಾಯಕ್ಕೆ ಸಾಕು. 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ 1ಕ್ಕೆ 6 ಆಣೆ. ವಿ. ಪಿ. ಚಾರ್ಜು 3 ಆಣೆ 8 ಆಣೆ ತಪಾಲಾ ಸ್ಟಾಂಪುಗಳನ್ನು ನಮಗೆ ಕಳುಹಿಸುವವರಿಗೆ 1 ಟಿನ್ ಮುಂದಾಗಿ ಹಾಸಲು ಕೊಟ್ಟು ಕಳುಹಿಸಲ್ಪಡುವದು.

ಸರ್‌ಬತ್ತುಗಳು:— ದ್ರಾಕ್ಷೆ, ಸುಗಂಧಸಾಲ, ಗುಲಾಬಿ ಬಾಳೆ, ನಿಂಬೆ, ಕಿತ್ತಲೆ, ಬಾದಮಿ, ಸೇಬು, ದಾಳಿಂಬೆ, ಸೊಂಟಿ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 5 ತೊಟ್ಟಿಯನ್ನು ಸೇರಿಸಿದರೆ 1 ಬಟ್ಟಲು ನೀರಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು. ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ. ಪಿ. ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟಿದೆ. ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು. ಸೀಸೆ 1ಕ್ಕೆ ಆಣೆ 8, ವಿ. ಪಿ. ಚಾರ್ಜು 3 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBBA ROY.	ಪಿ. ಸುಬ್ಬರಾಯ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಿಧಿ, ತಂಜಾವೂರು.

YOUR CHOICE PLEASE!

ಅನಾರೋಗ್ಯವು ಜೀವನವನ್ನು ದುಃಖಮಯವಮಾಡುತ್ತದೆ.

ಯಾವಾಗಲೂ ಯಾವುದಾದರೊಂದು ಕಾಯಿಲೆ ಇರುವುದು, ಜ್ಞಾಪಕಶಕ್ತಿ ಇಲ್ಲದಿರುವುದು, ಶಾರೀರಕಶಕ್ತಿ ಇಲ್ಲದಿರುವುದು, ಶರೀರವು ಬಹು ಕೃಶವಾಗಿರುವುದೇ ಮುಂತಾದುವು ನಮ್ಮನ್ನು ದುಃಖಿತರನ್ನಾಗಿ ಮಾಡುವುದಿಲ್ಲವೇ?

ಜೀವನಾನಂದವಿದ್ದರೆ

ಅದೇ ದುಃಖಮಯ ಜೀವನವನ್ನು ಆನಂದಮಯ ಮಾಡಬಹುದು. ಅದು ಕೊಡ ಲಿವರ್ ಆಯ್ಲಿಗಿಂತ 16 ಪಾಲು ಬಲಕೊಡುವಂಥಾದ್ದು. ಅದು ಬಲಹೀನ ಸ್ಥೂಲ ಶರೀರವನ್ನು ಮಾಡುವುದಿಲ್ಲ—ಶಕ್ತಿಮಯ ಮಾಂಸ ಖಂಡಗಳನ್ನು ನಿರ್ಮಾಣಮಾಡಿ ಶರೀರಕ್ಕೆ ಅಧಿಕವಾದ ಬಲಕೊಡುತ್ತದೆ. ಅದನ್ನು ರೋಗಿಗಳು, ರೋಗವಿಲ್ಲದವರು; ಮುದುಕರು, ಮಕ್ಕಳು; ಗಂಡಸರು, ಹೆಂಗಸರು; ಕ್ಷೀಣವೀರ್ಯರೇ ಮುಂತಾದ ಪ್ರತಿಯೊಬ್ಬರೂ ಉಪಯೋಗಿಸಬಹುದು.

ರೋಗವಿಲ್ಲದವರಿಗೆ ಅದು

ಆರೋಗ್ಯವಂತರನ್ನಾಗಿ ಮಾಡಿ ಜ್ಞಾಪಕಶಕ್ತಿ, ಶಾರೀರಕಶಕ್ತಿಯೇ ಮುಂತಾದುವನ್ನುಂಟುಮಾಡಿ ಬೇರೆ ರೋಗಗಳು ಬಾರದ ಹಾಗೆ ಮಾಡುತ್ತದೆ. ಅದು

ರೋಗವಿದ್ದವರಿಗೆ

ಕೆಮ್ಮು, ಉಬ್ಬಸ, ಕ್ಷಯ, ಮೂತ್ರರೋಗಗಳು, ಬಾಲಗ್ರಹ, ನಪುಂಸಕತ್ವ, ಶ್ವಾಸಕೋಶದ ರೋಗಗಳು, ಅನ್ನಕೋಶದ ರೋಗಗಳು, ಅಜೀರ್ಣ, ಮಲಬದ್ಧತೆ, ಮನಸ್ಸಿಗೆ ಬೇಸರವಾಗುವುದು, ಧಾತು ನೀರಾಗುವಿಕೆ, ಚಳಿಜ್ವರ, ದೃಷ್ಟಿ ಮಂದವಾಗುವುದೇ ಮುಂತಾದುವನ್ನೆಲ್ಲ ನಿರ್ನಾಮಮಾಡುತ್ತದೆ.

ಒಂದು ತಿಂಗಳ ಔಷಧಿಗೆ (ಮಕ್ಕಳಿಗಾದರೆ 4 ತಿಂಗಳಿಗಾಗುತ್ತದೆ) ರೂ. 3.
48 ದಿನದ ಔಷಧಿಗೆ (192 ದಿನಗಳಿಗಾಗುತ್ತದೆ) ರೂ. 5.

ಎಲ್ಲೆಲ್ಲೂ ಏಜಂಟರು ಬೇಕು.

ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್,
ಸೋಮವಾರಪೇಟೆ.

ನಮ್ಮ ಔಷಧಿಗಳ ಗುಣಗಳು ಎಲ್ಲರಿಗೂ ತಿಳಿಯಲೆಂದು

ಅಕ್ಟೋಬರ ತಿಂಗಳ ವರೆಗೆ

ಅಮೃತವಟಿಯನ್ನು

ಸೆಂಪಲ್ ಪೋಸ್ಟು ಮೂಲಕ 2½ ಆಣೆ ಸ್ಟಾಂಪುಗಳನ್ನು ಕಳುಹಿಸಿದವರಿಗೆ ಕಳುಹಿಸುತ್ತೇವೆ. ಅದು ಕೆಮ್ಮು, ಉಬ್ಬಸ, ಶೀತರೋಗಗಳು, ಮುಟ್ಟು ಸರಿಯಾಗದಿರುವಿಕೆ, ವಿಷಜಂತುಗಳ ಕಡಿತವೇ ಮುಂತಾದುವಕ್ಕಾಗುತ್ತದೆ. ಆಯಾಸವಿಲ್ಲದೆ ಸುಖಭೇದಿಯನ್ನುಂಟುಮಾಡುತ್ತದೆ. ಒಂದು ಡಬ್ಬಿಗೆ 8 ಆಣೆ ಮಾತ್ರ. ನೀವು ಒಂದು ಸೆಂಪಲ್ ಡಬ್ಬಿಯನ್ನೇಕೆ ತರಿಸಕೂಡದು? ಅದರಿಂದ ನಮ್ಮ ಔಷಧಿಗಳ ಗುಣಾವಗುಣಗಳು ತಿಳಿಯುವದಿಲ್ಲವೇ?

ಒಂದು ಡಬ್ಬಿ ದಂತ ಸಂಜೀವಿಯನ್ನುಪಯೋಗಿಸಿದರೆ

ಅದು ಯಾವ ಪ್ರಕಾರ ಹಲ್ಲುಗಳನ್ನು ಹೊಳೆಯುವಂತೆ ಮಾಡಿ ಗಟ್ಟಿ ಪಡಿಸುತ್ತದೆಂಬುದೂ, ಹಲ್ಲುನೋವು, ಹಲ್ಲಿನಿಂದ ರಕ್ತ ಸುರಿಯುವಿಕೆ, ಬಾಯಿಯ ದುರ್ಗಂಧವೇ ಮೊದಲಾದುವನ್ನು ನಾಶಪಡಿಸುತ್ತದೆಂಬುದು ಗೊತ್ತಾಗುತ್ತದೆ.

ಅಂದಿನಿಂದ

ನೀವು ದಂತಸಂಜೀವಿಯನ್ನಲ್ಲದೆ ಬೇರೆ ಔಷಧೋಪಯೋಗವಮಾಡುವುದಿಲ್ಲ. ಏಕೆಂದರೆ ಬೇರೆ ಔಷಧಿಗಳಿಗೆ ಮೇಲೆ ಹೇಳಿದ ಗುಣಗಳಲ್ಲಿ ಯಾವುದಾದರೂ ಒಂದೇ ಗುಣವಿರುತ್ತದೆ. ದಂತಸಂಜೀವಿಯಲ್ಲಿ ಮೇಲೆ ಹೇಳಿದ ಎಲ್ಲಾ ಗುಣಗಳೂ ಮೂರ್ತಿಮತ್ತಾಗಿವೆ.

ಕ್ರಯವು ಬಹು ಕಡಿಮೆ ಡಬ್ಬಿಗೆ ಐದೇ ಆಣೆ.

ಔಷಧಗಳಿಗೆ ಕಾಗದ ಬರೆದು ಔಷಧ ಬಾರದಿದ್ದರೆ ನಮಗೆ ಆ ಕಾಗದ ತಲಪಲಿಲ್ಲವೆಂದು ತಿಳಿಯಬೇಕು.

ಈ ದಿನ ಬರೆಯಿರಿ!

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನೆದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತೊಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.

Agents:—**Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು: ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೊ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳೆತ, ಪ್ರಯತ್ನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ— ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರೆಯಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯು ಸಂದು ನೋವೋಣ, ಕೈಕಾಲು ಬಿಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ. ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಅಣ್ಣ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.



ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.

ವಿಳಾಸ:— ದಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, **ಬೆಂಗಳೂರು ಸಿಟಿ.**

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು — ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗೆ 6, ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೋಗಳು 6, ಸುವಾಸನೆ ಅತ್ತರು ಪಿಲ್ಲೆ 1, ಗಂಧದ ಪಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರಾಸ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ಪಿ. ಎ. ಎಸ್. ಪಾಣ್ಯ,

3. ಇರುಳಪ್ಪನ್ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾ ರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,

ಮಂಗಳೂರು.

ಸುಲಭ ಬೆಲೆ! ಸದ್ಬೋಧಕ ಗ್ರಂಥಮಾಲೆ: ೧. - ಸುಲಭ ಬೆಲೆ!!

ದೈವಭಕ್ತಿ.

ಭಗವದ್ಭಕ್ತಿಯನ್ನು ಚೆನ್ನಾಗಿ ಬೋಧಿಸುವುದು! ಮುದ್ರಣದ ಪುಸ್ತ್ರ!! ಬೆಲೆ: ಒಂದಾಣೆ ಮಾತ್ರ!!! ೧೨ಕ್ಕೆ ೧ ಉಚಿತ.

ಅಚ್ಚಿನಲ್ಲಿದೆ! ಸದ್ಬೋಧಕ ಗ್ರಂಥಮಾಲೆ: ೨. ಬೇಗ ಬರೆಯಿರಿ!!

ಸುಮಿತ್ರ.

ಈ ಹೆಸರಿನ ಮನೋಹರ ಕಾದಂಬರಿಯು ಬೇಗನೆ ಪ್ರಕಾಶಿಸಲ್ಪಡುವುದು. ಬೆಲೆ: ಮೂರಾಣೆ ಆಗೋಸ್ತು ಅಖೈರಿಯೊಳಗೆ ಹೆಸರನ್ನು ದಾಖಲ್ಮಾಡಿಸಿಕೊಳ್ಳುವವರಿಗೆ: ಎರಡು ಆಣೆ ಮಾತ್ರ.

ನಮ್ಮಲ್ಲಿ ದೊರೆಯುವ ಇತರ ಕನ್ನಡ ಗ್ರಂಥಗಳು.

ಭೂತಾಳಪಾಂಡ್ಯರಾಯನ ಅಳಿಯಕಟ್ಟು ೧-೪-೦. ಆಹ್ನಿಕಮಂಜರೀ (ಋಗ್ವೇದೀಯ ನಿತ್ಯಕರ್ಮ ಪದ್ಧತಿ ಪುಸ್ತಕ) ೧-೦-೦. ಜಯವಿಜಯ. (ಅದ್ಭುತ ನವರಸ ಭರಿತವಾದ ಮನೋಹರ ಕಾದಂಬರಿ) ೦-೧೨-೦. ಗೋವಿನ ಚರಿತ್ರೆ. (ಹೊಸ ಪುಸ್ತಕ) ೦-೨-೦.

ಇವುಗಳಲ್ಲದೆ ಬೇರೆ ಬಗೆಬಗೆಯ ಗದ್ಯ ಪದ್ಯಗಳ ಪುಸ್ತಕಗಳು; ಯಕ್ಷಗಾನ, ನಾಟಕ, ಕಾದಂಬರಿ, ಕಥೆ ಮೊದಲಾದ ಪುಸ್ತಕಗಳೂ; ಶಾಲಾ ಬಾಲಕರಿಗೆ ಬೇಕಾದ ಪಾಠಪುಸ್ತಕಗಳೂ; ಬರವಣಿಗೆ ಸಾಮಗ್ರಿಗಳೂ; ನಾಲಗೆಗೆ ರುಚಿಕರವಾದ ಅತ್ಯುತ್ತಮ ತಿಂಡಿಯ ಪದಾರ್ಥಗಳೂ; ಅಮೃತಾಂಜನ, ದೊಂಗರೆಯವರ ಬಾಲಾಮೃತ, ಕಸ್ತೂರಿ ಮಾತ್ರೆ ಮೊದಲಾದ ಪೇಟೆಂಟ್ ಔಷಧಿಗಳೂ; ಉತ್ತಮ ತರದ ಸುಗಂಧ ದ್ರವ್ಯಗಳೂ; ತರ ತರದ ಸಾಬೂನುಗಳು, ಅನೇಕ ನಮೂನೆಯ ಅಂಗಿ ಗುಂಡಿಗಳು, ಜಂತಿಪಿನ, ದಂತಮಂಜನ, ಪೊಮೆಡ್ ವೆಸ್ಲಿನ್ ವಗೈರೆ ವಿವಿಧ ಸಾಮಾನುಗಳು ಮಿತವಾದ ಕ್ರಯಕ್ಕೆ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,

ಜನರಲ್ ಮರ್ಚಂಟ್ಸ್, ಸುರತ್ಕಲ್, ದ. ಕ.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥವುಗಳನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ್ಯಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನುಂಟುಮಾಡುವದು. 7. ಕಥಾಭಾಗದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುವು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,

ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 495

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪಾಲು ಹಾಸಲು ಸಹಿತ ರೂ. 2—1—0.

ಪುಸ್ತಕ X ಮಂಗಳೂರು ತಾ 20ನೇ ಒಕ್ಟೋಬರ ಶುಕ್ರವಾರ 1916. ಸಂಚಿಕೆ 41

Tissue Remedies & Homœpathic Medicines.

ಟಿಸ್ಸ್ಯು ಮತ್ತು ಹೊಮಿಯೊಪತಿಕ್

ಔಷಧಿಗಳ ಬಗ್ಯೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರ ಹೋಗ ಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾಧು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಸಾಮಾನ್ಯವಾಗಿ ಸರ್ವ ಔಷಧಿಗಳ ಸಂಗ್ರಹವು ನಮ್ಮಲ್ಲಿರುವದು.

ಯುಕಲಿಪ್ಟಸ್ ಒಯಿಲ್ ಎಂಬುವ ನೀಲಿಗಿರಿ ಎಣ್ಣೆ.

ಇದೇ ಮಾದರಿಯ ಎಣ್ಣೆ ಎಂತ ತಪ್ಪಾಗಿ ತಿಳಕೊಳ್ಳುವಂಥಾ ಇತರ ಕೆಲವು ಎಣ್ಣೆಗಳಂತೆ ಇದು ನಕಾರಿಯೂ ಅಲ್ಲ ಠಕಾರಿಯೂ ಅಲ್ಲ. ಹಲವು ಬೇನೆಗಳಿಗೆ ಗುಣಕಾರಿಯಾಗಿರುವಂಥಾದ್ದು. ಸೀಸೆ ಒಂದಕ್ಕೆ ಆಣೆ ೫. ಇದರ ಅನುಪಾನ ಪತ್ರದಲ್ಲಿ ಎಣ್ಣೆಯ ಪೂರ್ಣ ಉಪಯೋಗ ಕ್ರಮಗಳು ಇರುವವು.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರಾನ್ಸ್ಲೇಟರಾದ ಮ। ರಾ। ಬೆನಗಲ್ ರಾಮರಾವ್‌ರವರಿಂದ ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಚಾರ ವಿವೇಚನೆ ಬೆಲೆ 2 ಆಣೆ ಇತರ ಪ್ರಬಂಧನೆಗಳು — ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲೆ 3 ಆಣೆ, ಇತ್ಯಾದಿ.

ಬೆಳೆಯು ಕಟಾವಿಗೆ ಸಿದ್ಧವಿರುವಕಾಲ ಗೇಣಿಚೀಟುಗಳನ್ನು ವಕ್ಕಲುಗಳಿಂದ ಬರಸಿಕೊಳ್ಳುವರು. ಈ ಬಗ್ಯೆ ಬೇಕಾಗುವ ಗೇಣಿಚೀಟು ಫೋರ್ಮುಗಳು ಮತ್ತು ಇತರ ಫೋರ್ಮುಗಳು, ಲೆಕ್ಕ ಬರೆಯುವ ಬಗ್ಯೆ ಬೇಕಾದ ಪುಸ್ತಕಗಳು ಬಿಕರಿಗೆ ಸಿದ್ಧವಿರುತ್ತವೆ.

ಮುದ್ರಣ ಕೆಲಸವಿರುವವರು — ದೊಡ್ಡ ದೊಡ್ಡ ಗ್ರಂಥಗಳಿಂದ ಸಣ್ಣ ಸಣ್ಣ ಲೇಬಲು ಯಾ ಚೀಟುಗಳ ಕೆಲಸಗಳು ಸಹ ನಮ್ಮ ಛಾಪಖಾನೆಯ ಕೈಕೊಳ್ಳುವದೆಂಬದನ್ನು ತಿಳಕೊಳ್ಳಬೇಕಾಗಿದೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ಬಡವರಿಗೂ, ದೊಡ್ಡವರಿಗೂ, ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಸರ್ವರಿಗೂ ಪ್ರಯೋಜನವಾದವುಗಳು!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು,

ಬೀಸಣಿಗೆ ಇತ್ಯಾದಿಗಳು.

ಕೆ. ದಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನ, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಯು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಯು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಸ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road. BOMBAY.

ಏಜಂಟರು:—ಡಿ. ಊಲನ್ ಮಾರ್ಟ್,
ನಾಥನ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅದು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ವಾಜೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆರೆಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರಹಾರಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕತ್ಯಾವಾರ್, ಜಪ್ಪದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತು ರೂ. 1—8—0, ಅಂಚೆ ಹಾಸಲು ಆಣೆ 6.

ವಿಳಾಸ:—
J. M. D. Vas, Kankanady. S. C.
ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ನಿರ್ಣಯಸಾಗರಮುದ್ರಣಾಲಯದೊಳಗಿನ
ಕರ್ನಾಟಭಾಷಾತಾತ್ಪರ್ಯಸಹಿತವಾದ

ಭಗವದ್ಗೀತೆ.

ಮಹಾಜನರೇ!

ನಮ್ಮ ಹಿಂದೂ ಜನರಲ್ಲಿ ಭಗವದ್ಗೀತೆಯೆಂಬುವನ್ನು ಹೆಸರು ಮಾತ್ರವಾಗಿಯಾದರೂ ಕೇಳಿ ತಿಳಿಯದ ಕುಟುಂಬವಿರಲಾರದು. ಪ್ರಾಯಶಃ ದೈವಭಕ್ತಿಯುಳ್ಳ ಜನರೆಲ್ಲರೂ ಪರಲೋಕ ಮುಕ್ತಿಗಾಗಿ ಪಾರಾಯಣ ಮಾಡುತ್ತಿರುವುದೂ ಸಹಜವಾಗಿದೆ. ಮತ್ತು ನಮ್ಮ ಹಿಂದೂ ಮತಾಚಾರ್ಯರೆಲ್ಲರೂ ಒಪ್ಪಿಕೊಂಡು ಅನೇಕ ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ಮಾಡಿ ನಮ್ಮೆಲ್ಲರಿಗೂ ಶಿರೋಭೂಷಣ ಗ್ರಂಥವನ್ನಾಗಿ ಈ ಭಗವದ್ಗೀತೆಯನ್ನು ಕೊಂಡಾಡಿರುವರು. ಇಂತಹ ಸರ್ವೋತ್ತಮ ಗ್ರಂಥವನ್ನು 'ಅಭಿಪ್ರಾಯ ತಿಳಿಯದೆ ಸುಮ್ಮನೆ ಪಾರಾಯಣ ಮಾಡುತ್ತಿರುವೆವಲ್ಲಾ' ಎಂದು ಹಲವು ಮಂದಿ ಭಕ್ತಜನರು ಪರಿತಾಪ ಪಡುತ್ತಿರುವುದನ್ನು ನಮ್ಮ ಮುದ್ರಣಾಲಯಕ್ಕೆ ಅನೇಕ ಮಹನೀಯರು ತಿಳಿಸಿದರು. ಅದಕ್ಕಾಗಿ ಈ ಭಗವದ್ಗೀತೆಗೆ ಅತ್ಯಂತ ಸುಲಭವಾಗಿಯೂ ಬಹಳ ಲಲಿತವಾಗಿಯೂ ಇರುವ ಕನ್ನಡ ಭಾಷೆಯ ತಾತ್ಪರ್ಯವನ್ನು ಮೂಲಕ್ಕೆ ಸರಿಯಾಗಿ ಸಂಗ್ರಹವಾಗಿ ಬರೆಯಿಸಿ, ಇದರೊಡನೆ ಮೂಲವನ್ನು ಬೇರೆ ಬೇರೆ ಶ್ಲೋಕಗಳನ್ನಾಗಿ ಮುದ್ರಿಸಿ ಹೊರಪಡಿಸಿರುವೆವು.

ಈ ಸುಂದರವಾದ ಚಿಕ್ಕ ರೇಷ್ಮೆ ಬಾಯಿಂಡಿಂಗದ ಪುಸ್ತಕ೧ಕ್ಕೆ ಬೆಲೆ ರೂ. ೦-೧೨-೦ ಆಣೆ. ಸಾದಾ ೦-೧೦-೦ ಆಣೆ.

ಪುಸ್ತಕ ದೊರೆಯುವ ಠಿಕಾಣೆ:—

ನಿರ್ಣಯಸಾಗರ ಪ್ರೆಸ್,
ಕೋಲಭಾಟಲೇನ, ೨೩.
ಮುಂಬಯಿ, ನಂ. ೨.

ತುಕಾರಾಮ ಜಾವಜೀ,
ನಿರ್ಣಯಸಾಗರ ಮುದ್ರಣಾಲಯ ಮಾಲಕರು.

ಈ ಬುಕ್ಕು ಬಾಳಕೃಷ್ಣ ತುಕಾರಾಮ ಘರತ, ೧೬೩, ಠಾಕುರದ್ವಾರ ರೋಡ, ಮುಂಬಯಿ, ಇವರ ಕಡೆಗೆ ಸಿಗುವವು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಘಾತಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸು, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಬಾಯಿ ಸಾಮುಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಓನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

—ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.
ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸ್ಸೇನ ಡಾಕ್ಟರ್ ಸುರಗಾಂವ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12—0—0, 5—0—0, 3—0—0, 2—8—0, 1—4—0, 1—0—0

ಅರಗಜ ಮತ್ತು ಜಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧ ಕಾಡುಗ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೆ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಪೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮಾತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. Kately & Co.
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ESTABLISHED: JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	357,116—5—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%

Loans granted on proper securities and pledges.

Canara Bank Ltd.,
Mangalore, 1st. October 1916.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	357,116—5—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಪಾಲ್ಕಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗಿತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಬೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. ಕೆಮ್ಮು, ಗುರ್ಗುರ್ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗದಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಪ್ತಾಮೃತಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ತಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ತಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ತಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಆಶ್ವಿನ ಬ. ೯ ಶುಕ್ರವಾರ.

ನಮ್ಮ ಮುನ್ಸಿಪಾಲಿಟಿಯ ಕಳೆದ ವರ್ಷದ ವರದಿ.

ನಮ್ಮ ಮಂಗಳೂರ ಮುನ್ಸಿಪಾಲಿಟಿಯ ೧೯೧೫-೧೬ನೇ ವರ್ಷದ ವರದಿಯು ನಮ್ಮ ಕೈಸೇರಿರುವುದು. ಇಂಥ ವರದಿಗಳನ್ನು ವಿಮರ್ಶಿಸುವುದರಲ್ಲಿ ಎರಡು ವಿಧಗಳಿವೆ. ಮುನ್ಸಿಪಾಲಿಟಿಯ ಆರ್ಥಿಕ ಉತ್ಪತ್ತಿ, ಖರ್ಚು, ನಡೆದ ಎಲ್ಲ ತರದ ಕಾರಭಾರಗಳ ಯೋಗ್ಯಾಯೋಗ್ಯತೆ ಮೊದಲಾದ ಸಂಗತಿಗಳನ್ನು ಕುರಿತು ವಿಮರ್ಶಿಸುವುದು. ಈ ತರದ ವಿಮರ್ಶೆಯನ್ನು ನಾವು ಮೊದಲು ಎಷ್ಟೋ ಸಾರಿ ಹಿಂದಿನ ವರದಿಗಳನ್ನು ಪರಿಶೀಲಿಸುವಾಗ ಮಾಡುತ್ತಿದ್ದೆವು. ಆದರೆ ಮುನ್ಸಿಪಾಲಿಟಿಯ ಉತ್ಪನ್ನ ಅಥವಾ ಖರ್ಚಿನ ಅಂಕೆಗಳನ್ನು ಕೊಟ್ಟು ಅದರ ಸಾಂಪತ್ತಿಕ ಸ್ಥಿತಿಯನ್ನು ತೋರಿಸುತ್ತ ಕೂಡ್ರುವದಕ್ಕಿಂತ ಗತಿಸಿದ ವರ್ಷದಲ್ಲಿ ಪಟ್ಟಣದ ಹಿತದ ಯಾವ ಯಾವ ಕೆಲಸಗಳು ಎಷ್ಟೆಷ್ಟು ಆಗಿವೆ, ಇನ್ನು ಆಗಬೇಕಾದವುಗಳು ಯಾವವು, ಅಂಥ ನಾಗರಿಕ ಹಿತದ ಕೆಲಸಗಳ ಕಡೆಗೆ ಮುನ್ಸಿಪಾಲಿಟಿಯು ತತ್ಪರತೆಯಿಂದ ಮನಸ್ಸು ಕೊಡುವುದು ಹೇಗೆ ಅಗತ್ಯವಿದೆ ಇವೇ ಮುಂತಾದ ಪ್ರಶ್ನೆಗಳ ದೃಷ್ಟಿಯಿಂದ ವರದಿಯನ್ನು ಪರಿಶೀಲಿಸುವುದು ಯಾವ ಇನ್ನೊಂದು ವಿಧಾನವಿದೆಯೋ ಅದಕ್ಕನುಸಾರವಾಗಿ ನಮ್ಮ ಕೈಗೆ ಬಂದಿರುವ ಈ ವರದಿಯನ್ನು ಈ ಸಾರಿ ವಿಮರ್ಶಿಸಬೇಕೆಂದಿದ್ದೇವೆ. ಈ ವಿಮರ್ಶೆಯೊಡನೆಯೇ ಈ ವರದಿ ವಿಷಯವಾಗಿ ನಮ್ಮ ಮದ್ರಾಸ ಸರಕಾರದ ಅಭಿಪ್ರಾಯವನ್ನು ಕೂಡ ಸಂಗ್ರಹದಿಂದ ತೋರಿಸುತ್ತೇವೆ.

ಈ ವರದಿಯಿಂದ ಕಂಡು ಬರುವ ಮೊದಲನೆ ದೋಷವು ಯಾವುದೆಂದರೆ, ಲೋಕನಿಯುಕ್ತ ಪ್ರತಿನಿಧಿಗಳ ಹಾಜರಿಯು ಸಮಾಧಾನಕರವಿಲ್ಲ. ಮುನ್ಸಿಪಾಲಿಟಿಯು ಪಟ್ಟಣದ ಹಿತಕ್ಕಾಗಿರುವುದು. ಮತ್ತು ಆ ಹಿತವನ್ನು ಸಾಧಿಸುವುದು ಪ್ರತಿನಿಧಿಗಳ ಕೈಯಲ್ಲಿರುವುದು. ಆ ಪ್ರತಿನಿಧಿಗಳೇ ಮುನ್ಸಿಪಲ ಮೀಟಿಂಗುಗಳಲ್ಲಿ ಸರಿಯಾಗಿ ನಿಯಮದಿಂದ ಹಾಜರ ಇರದೆ ಇದ್ದರೆ ಪಟ್ಟಣದ ಹಿತವು ಹೇಗಾದೀತು? ಪ್ರತಿನಿಧಿತ್ವದ ಕೆಲಸವನ್ನು ಕೈಕೊಂಡ ಮೇಲೆ ಅದನ್ನು ತತ್ಪರತೆಯಿಂದ ಮಾಡುವುದೇ ಅವರ ಕರ್ತವ್ಯವಾಗಿರುತ್ತದೆ. ಹೀಗಿರಲು ಪ್ರತಿನಿಧಿಗಳು ಅನೇಕ ಮೀಟಿಂಗುಗಳಿಗೆ ಗೈರ ಹಾಜರಿರುವುದೆಂದರೆ ತಮ್ಮ ಸಾರ್ವಜನಿಕ ಹಿತದ ಔದಾಸೀನ್ಯವನ್ನು ತೋರಿಸಿಕೊಳ್ಳುವದಾಗಿದೆ. ಈ ವಿಧದ ಔದಾಸೀನ್ಯವನ್ನು ಮುನ್ಸಿಪಾಲಿಟಿಯೊಳಗಿನ ಪ್ರತಿನಿಧಿಗಳು ಮಾತ್ರ ತೋರಿಸಿಕೊಳ್ಳುತ್ತಾರೆಂತಲ್ಲ, ಈ ಮುನ್ಸಿಪಾಲಿಟಿಯ ವಿಷಯದಲ್ಲಿ ಇಲ್ಲಿಯ ಸುಶಿಕ್ಷಿತ ಮತ್ತು ಅಧ್ಯರಾದ ನಾಗರಿಕರಿಗೆ ಆದರವಾಗಲಿ ಪ್ರೇಮವಾಗಲಿ ಇದ್ದದ್ದು ಕಂಡು ಬರುವುದಿಲ್ಲ. ಮುನ್ಸಿಪಾಲಿಟಿಯು ಸ್ವರಾಜ್ಯದ ಶ್ರೀಗಣೇಶೆಯು, ಅದರ ಹೆಸರೇ ಸ್ಥಾನಿಕ ಸ್ವರಾಜ್ಯವೆಂದು, ಈ ಮುನ್ಸಿಪಾಲಿಟಿಯಲ್ಲಿ ಸ್ವರಾಜ್ಯದ ಪಸ್ತುಪಾಠವನ್ನು ಕಲಿಯಬಹುದಾಗಿದೆ. ಈ ತರದ ಆಲೋಚನೆಗಳು ನಮ್ಮ ನಾಗರಿಕರಲ್ಲಿ ಹುಟ್ಟಿದ್ದು ಕಂಡು ಬರುವುದಿಲ್ಲ. ನಮ್ಮ ಪಟ್ಟಣಿಗರಲ್ಲಿ ಬೇರೆ ಅನೇಕ ಶಿಕ್ಷಣವಿದ್ದರೂ ಸಾರ್ವಜನಿಕ ಕೆಲಸಗಳ ಶಿಕ್ಷಣವು ಇಲ್ಲೆಂತಲೇ ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ಈ ತರದ ಅಭಿಪ್ರಾಯವನ್ನು ನಾವು ಮಾತ್ರ ಪಡುತ್ತೇವೆಂದು ಯಾರೂ ನೆನೆಸಬಾರದು, ಸರಕಾರವೂ ಇದೇ ಸಂಗತಿಯನ್ನು ಈ ವರದಿಯಲ್ಲಿ ಸೂಚಿಸುತ್ತಿದೆ. ಲೋಕಪ್ರತಿನಿಧಿಗಳ ಏಳು ಜಾಗೆಗಳು ಖಾಲಿಯಾದಾಗ ಒಂದೊಂದು ಜಾಗೆಗೆ ಉಮೇದುವಾರನಾಗಿ ನಿಂತ ಗೃಹಸ್ಥನು ಒಬ್ಬನೇ. ಅಲ್ಲದೆ ಆ ಉಮೇದವಾರನೊಡನೆ ಸ್ಪರ್ಧಿಸಲು ಇನ್ನಾರೂ ನಿಂತಿಲ್ಲ! ಈ ಸಂಗತಿಯನ್ನು ತೋರಿಸಿ ಸರಕಾರವು ಮಂಗಳೂರ ನಿವಾಸಿಕರಲ್ಲಿ ಇದ್ದ ಸಾರ್ವಜನಿಕ ಹಿತಬುದ್ಧಿಯ ನ್ಯೂನತೆಯನ್ನು ('decline in public interest) ಪ್ರಕಾಶಪಡಿಸಿದೆ. ಪಟ್ಟಣಿಗರಿಗೆ ಮುನ್ಸಿಪಾಲಿಟಿಯ ಪ್ರಯೋಜನವು ಗೊತ್ತಾಗುವುದಿಲ್ಲ, ಅವರ ಪ್ರತಿನಿಧಿಗಳಿಗೆ ನಿಯಮದಿಂದ ಹಾಜರಾಗಲು ಅವಕಾಶವಿರುವುದಿಲ್ಲ! ಈ ಎರಡು ಸಂಗತಿಗಳು ಶೋಚನೀಯವೇ ಸರಿ! ಒಂದು ಸ್ಥಾನಕ್ಕೆ ಹಲವು ಉಮೇದುವಾರರು ನಿಂತುಕೊಳ್ಳಬೇಕು; ಅದರಿಂದ ಜನರಿಗೆ ಉಮೇದವಾರರ ಪಾತ್ರಾಪಾತ್ರತೆಯನ್ನು ಸರಿಯಾಗಿ ಹೋಲಿಸಿ ಯೋಗ್ಯರಾದವರನ್ನೇ ಆರಿಸಿ ಕೊಡಲು ಜನರಿಗೆ ಒಂದು ಸಂದರ್ಭವು ಸಿಗುತ್ತದೆಂದು ನಮ್ಮ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನದ ಪ್ರಶ್ನೆಯ ಪುನರುತ್ಥಾನವಾದಾಗ ನಾವು ಅಭಿಪ್ರಾಯಪಟ್ಟಿದ್ದೆವು. ಆಗ ಅದು ಕೆಲವರಿಗೆ ಇಷ್ಟವಾಗಿರಲಿಲ್ಲೆಂದು ತೋರುತ್ತದೆ. ಆದರೆ ಈಗ ನಮ್ಮ ಸರಕಾರವು ಒಬ್ಬ ಪ್ರತಿನಿಧಿಗೆ ಸ್ಪರ್ಧಾಳುವು ಯಾರೂ ಇಲ್ಲದೆ ಇರುವುದು ನಗರದ ಹಿತಕ್ಕೆ ತೊಡಕೆಂದು ಹೇಳುವುದನ್ನು ಕೇಳಿ ಆದರೂ ಅವರು ತಮ್ಮ ವಿಷಾದವನ್ನು ಬಿಟ್ಟುಬಿಟ್ಟಾರೆಂದು ನೆನೆಸುತ್ತೇವೆ. ಅಸ್ತು.

ಈ ವರದಿಯಲ್ಲಿ ವಿಶೇಷವಾಗಿ ಲಕ್ಷ್ಯಕ್ಕೆ ತರಬೇಕಾದ ಎರಡನೆಯ ಸಂಗತಿಯು ಯಾವುದೆಂದರೆ, ಮುನ್ಸಿಪಾಲಿಟಿ ಕಡೆಯಿಂದ ಮಾರ್ಗಗಳ ದುರುಸ್ತಿ ಬಗ್ಗೆ ಸಾಧಾರಣವಾಗಿ ಬೇಕಷ್ಟು ಹಣ ಖರ್ಚಾಗುತ್ತಿದ್ದರೂ ಅವುಗಳ ಸುಧಾರಣೆಯು ಮಾತ್ರ ಇನ್ನೂ ಬೇಕಷ್ಟು ಆಗಲಿಲ್ಲೆಂತಲೇ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಮೆ. ಕಲೆಕ್ಟರ ದೊರೆಗಳು ಇದೇ ಮಾತನ್ನು ತಮ್ಮ ರಿಮಾರ್ಕಿನಲ್ಲಿ ಸೂಚಿಸಿರುವರು. ಮಾರ್ಗಗಳ ದೋಷದ ಮೀಮಾಂಸೆಯನ್ನು ಮಾಡುವಾಗ ಕಲೆಕ್ಟರರು ಮೇಲ್ತನಿಕೆಯ ಅಥವಾ ಮಾರ್ಗಗಳಿಗೆ ಹಾಸುವ ಕಲ್ಲುಗಳ ಕೊರತೆಯನ್ನು ಧ್ವನಿಸಿರುವರು. ಮಾರ್ಗಗಳ ದುರುಸ್ತಿ ಬಗ್ಗೆ ಇಷ್ಟು ಹಣವು ಖರ್ಚಾಗುವುದಾಗಿಯೂ ಅವು ತೃಪ್ತಿಕರ ಸ್ಥಿತಿಯಲ್ಲಿ ಬಾರದ್ದನ್ನು ನೋಡಿ ಸರಕಾರವು ಬಹು ವಿಷಾದಪಡುತ್ತಿದೆ, ಅದರ ಕಡೆಗೆ ಮುನ್ಸಿಪಾಲಿಟಿಯು ಲಕ್ಷ್ಯ ಕೊಟ್ಟೀತೆ? ಈ ಮಾರ್ಗಗಳ ಪ್ರಸ್ತಾಪಿನಲ್ಲಿ ಕಲೆಕ್ಟರರಾಗಲಿ ಸರಕಾರವಾಗಲಿ ಸೂಚಿಸದೆ ಇದ್ದ ಇನ್ನೊಂದು ಸಂಗತಿಯನ್ನು ನಮಗೆ ಹೇಳಬೇಕಾಗಿದೆ. ಗೋಳಿಕಟ್ಟೆ ವಾರ್ಡಿನಲ್ಲಿ ಮಿ. ಅಜೀಜುದ್ದೀನ ಕಲೆಕ್ಟರರ ಕಾಲದಲ್ಲಿ ವಿಶಾಲವಾದ ಮಾರ್ಗಗಳು ಅಲ್ಲಲ್ಲಿ ಆಗಹತ್ತಿದರಿಂದ ಆ ವಾರ್ಡಿನಲ್ಲಿ ಪ್ಲೇಗ ಗಲಾಟೆಯು ಮೊದಲಿನಿಗಿಂತ ಕಡಿಮೆಯಾಗುತ್ತಿದೆ. ಅದರಂತೆಯೇ ಮಾರ್ಕೆಟ ಮತ್ತು ಸೆಂಟ್ರಲ ವಾರ್ಡುಗಳಲ್ಲಿಯೂ ಅಲ್ಲಲ್ಲಿ ವಿಶಾಲವಾದ ಮಾರ್ಗಗಳನ್ನು ಮಾಡಿದ್ದಾದರೆ ಪ್ರಕೃತ ಆ ವಾರ್ಡುಗಳಲ್ಲಿರುವ ಪ್ಲೇಗಿಗೆ ಹಬ್ಬಲು ಮಾರ್ಗವಾಗಲಿ ನಿಂತುಕೊಳ್ಳಲು ಆಶ್ರಯವಾಗಲಿ ದೊರಕಲಿಕ್ಕಿಲ್ಲ! ಆದರೆ ಇದ್ದ ಮಾರ್ಗಗಳೇ ದುರವಸ್ಥೆಯಲ್ಲಿರುವಾಗ ಈ ಮೇಲಿನ ನಮ್ಮ ಅಪೇಕ್ಷೆಯನ್ನು ಕಂಡು ಯಾರಾದರೂ 'ಇಷ್ಟ ಮಕ್ಕಳಿಗೆ ತ್ರಿಳಿ ಇಲ್ಲ, ಮತ್ತೆ ಕೊಡು ಸದಾಶಿವ' ಈ ಮಾತನ್ನು ನೆನಪಿಗೆ ತಂದು ಕೊಟ್ಟರೆ ಆಗ ನಾವು ನಿರುತ್ತರರೇ ಸರಿ!

ಮುನ್ಸಿಪಾಲಿಟಿಯು ತನ್ನ ಕೈಕೆಳಗಿರುವ ವೆನ್‌ಲೋಕ್ ಆಸ್ಪತ್ರೆಯನ್ನು ತಿರಿಗಿ ಕಟ್ಟಿಸುವುದಕ್ಕಾಗಿ ಸರಕಾರಕ್ಕೆ ಬರೆದುಕೊಂಡಿತ್ತು. ಆ ವಿಷಯದಲ್ಲಿ ಸರಕಾರದ ಆಶ್ವಾಸನೆಯು ಹೀಗಿರುವುದು:—ಆಸ್ಪತ್ರೆಯ ಹೊಸ ಕಟ್ಟೋಣಕ್ಕೆ ಸಾಧಾರಣವಾಗಿ ೧॥ ಲಕ್ಷ ರೂಪಾಯಿ ಬರುವುದು; ಈ ರಕ್ಕಮಿನಲ್ಲಿ ಸರಕಾರವು ಅರ್ಧವನ್ನು ದಾನವಾಗಿಯೂ, ಇನ್ನು ರೂ. ೬೦ ಸಾವಿರವನ್ನು ಸಾಲವಾಗಿಯೂ ಕೊಡಲು ಒಪ್ಪಿಕೊಂಡಿದೆ. ಆ ಕಟ್ಟೋಣದ ವಿವರವಾದ ಯೋಜನೆಯನ್ನೂ ಖರ್ಚಿನ ಅಂದಾಜನ್ನೂ ನಿರ್ಣಯಿಸಲು ಸರಕಾರವು 'ಪಬ್ಲಿಕ್ ವರ್ಕ್ಸ್' ಖಾತೆಯ ಕಡೆಗೆ ಒಪ್ಪಿಸಿದೆ. ಈ ವೆನ್ಲೋಕ್ ಆಸ್ಪತ್ರೆಯನ್ನು ತಿರಿಗಿ ಕಟ್ಟಿಸುವುದರಲ್ಲಿಯೇ ಹೆಚ್ಚು ಖರ್ಚು ಬರುತ್ತದಾದುದರಿಂದ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಹೊಸ ಜಾಗೆಯನ್ನು ತೆಕ್ಕೊಳ್ಳುವ ಪ್ರಶ್ನೆಯನ್ನು ತತ್ಕಾಲಕ್ಕೆ ಬಿಡಬೇಕಾಗಿ ಬಂದಿದೆ. ಸರಕಾರದ ಈ ಆಶಯವನ್ನು ನೋಡಿ ಕೊನೆಗೆ ಒಂದು ಮಾತನ್ನಾದರೂ ಹೇಳುವುದು ಅಗತ್ಯವಾಗಿದೆ. ವೆನ್ಲೋಕ ಆಸ್ಪತ್ರೆಗೆ ಉಚಿತವಾಗಿ ಕೊಡುವ ಅರ್ಧ ರಕ್ಕಮಿನೊಟ್ಟಿಗೆನೇ ೬೦ ಸಾವಿರ ರುಪಾಯಿಗಳನ್ನೂ ಸಹ ದಾನರೂಪದಿಂದಲೇ ಕೊಟ್ಟಿದ್ದಾದರೆ ಈ ದಾನಕ್ಕೆ ಪೂರ್ಣ ಧಾರ್ಮಿಕ ಸ್ವರೂಪವೇ ಬರುತ್ತಿತೆಂಬುದಕ್ಕೆ ಸಂದೇಹವಿಲ್ಲ. ಇನ್ನಾದರೂ ಈ ಉದಾರ ಬುದ್ಧಿಯನ್ನು ಸರಕಾರವು ತೋರಿಸೀತೆಂದು ನಾವು ನಂಬುತ್ತೇವೆ.

ಈ ನಮ್ಮ ಮುನ್ಸಿಪಾಲಿಟಿಯು ಮಾರ್ಗಗಳ ದುರುಸ್ತಿ, ಆರೋಗ್ಯ ಮುಂತಾದ ಸಂಗತಿಗಳಲ್ಲಿ ಕೈಬಿಚ್ಚಿದಷ್ಟು ವಿದ್ಯೆಯ ವಿಷಯದಲ್ಲಿ ಬಿಚ್ಚಿದ್ದು ಕಂಡು ಬರಲಿಲ್ಲೆಂಬುದರಿಂದ ಸರಕಾರದ ಮೊದಲಿನ ಸೂಚನೆಯ ಮೇರೆಗೆನೇ—ಮುನ್ಸಿಪಾಲಿಟಿಯ ಗಡಿಯೊಳಗೆ ಸೇರಿದ ಬೋಳಾರ ಎಲಿಮೆಂಟರಿ ಶಾಲೆಯಲ್ಲಿ ಕ್ಲಾಸುಗಳನ್ನು ಹೆಚ್ಚಿಸಲಿಕ್ಕೂ ಕಂಕನಾಡಿ ಶಾಲೆಯನ್ನು ತನ್ನ ಆಡಳಿತೆಯಲ್ಲಿ ತೆಕ್ಕೊಳ್ಳಲಿಕ್ಕೂ ಮುನ್ಸಿಪಾಲಿಟಿಯು ಉದ್ಯುಕ್ತವಾಗಿತ್ತು ಮತ್ತು ಇನ್ನೂ ಉದ್ಯುಕ್ತವಾಗಿದೆಂತಲೇ ಕಾಣುತ್ತದೆ.

ಆದರೆ ಮಧ್ಯದಲ್ಲಿ ಕಲೆಕ್ಟರ ಜೊರೆಗಳು ಈ ಪಟ್ಟಣದಲ್ಲಿ ವಿದ್ಯೆಯ ಅನುಕೂಲತೆಗಳು ಬೇಕಷ್ಟಿರುವುದರಿಂದ ಆ ಬಗ್ಗೆ ಮುನ್ಸಿಪಾಲಿಟಿಯು ಹೆಚ್ಚಿನ ಖರ್ಚು ಮಾಡುವುದು ಅಷ್ಟೊಂದು ಅಗತ್ಯ ತೋರುವುದಿಲ್ಲ; ಅದೇ ಹಣವನ್ನು ಇನ್ನೂ ಹೆಚ್ಚಿನ ಉಪಯುಕ್ತವಾದ ಕೆಲಸಗಳಲ್ಲಿ ಉಪಯೋಗಿಸಬಹುದೆಂದು ಒಂದು ಅಭಿಪ್ರಾಯವನ್ನು ತಮ್ಮ ಶರಹದಲ್ಲಿ ತೋರಿಸಿದರು. ಆದರೆ ಈ ಪಟ್ಟಣದೊಳಗಿನ ವಿದ್ಯಾ ಪ್ರಾಚುರ್ಯದ ನಿಜವಾದ ಸ್ಥಿತಿಯನ್ನು ಆಲೋಚಿಸಿದರೆ ಮೇಲಿನ ಈ ಅಭಿಪ್ರಾಯವು ಅನುಭವ ಪೂರ್ಣವಿದೆಂದು ಹೇಳಲಾಗುವುದಿಲ್ಲ. ವಿದ್ಯೆಯ ಅನುಕೂಲತೆ ಎಂದರೆ ಸೆಕೆಂಡರಿ ಶಾಲೆಗಳೂ ಕೊಲೇಜುಗಳೂ ಇರುವುದೆಂದು ಕಲೆಕ್ಟರರು ತಿಳಿದುಕೊಳ್ಳುತ್ತಾರೆಂತ ತೋರುತ್ತದೆ. ಈ ಪಟ್ಟಣದಲ್ಲಿ ಇಂಥ ಅನುಕೂಲತೆಗಳಿದ್ದರೂ ಎಲಿಮೆಂಟರಿ ಶಾಲೆಗಳ ಅನುಕೂಲತೆಯು ಇಲ್ಲ. ಮತ್ತು ಅದನ್ನೇ ಸಾಧಿಸುವುದಕ್ಕಾಗಿ ಮುನ್ಸಿಪಾಲಿಟಿಯು ಯತ್ನಿಸುತ್ತಿದೆ, ಸರಕಾರವು ಆಲೋಚನೆ ಕೊಡುತ್ತಿದೆ. ಹೊರತು ಮಿ. ಕಲೆಕ್ಟರರು ತಿಳಿದುಕೊಳ್ಳುವಂತೆ ಸೆಕೆಂಡರಿ ಶಾಲೆಗಳನ್ನು ಸ್ಥಾಪಿಸಲು ಅದರ ಹೇತುವಿಲ್ಲ. ಅಲ್ಲದೆ, ಇಲ್ಲಿರುವ ಸೆಕೆಂಡರಿ ಶಾಲೆಗಳಾದರೂ ಹೆಚ್ಚಿನ ಪಕ್ಷದಲ್ಲಿ ಮಿಶನರಿಗಳ ಸಂಸ್ಥೆಗಳಾದುದರಿಂದ ಸ್ಥಳಿಕ ಮುನ್ಸಿಪಾಲಿಟಿಯದೆಂದು ಹೇಳುವಂತೆ ಯಾವ ವಿದ್ಯಾ ಸಂಸ್ಥೆಯು ಇದೆ? ಈಗಿರುವ ಸೆಕೆಂಡರಿ ಶಾಲೆಗಳಲ್ಲಿ ಮೂಲ ವಿದ್ಯಾಭ್ಯಾಸದ ಸೌಕರ್ಯಗಳಿದ್ದರೂ ಅವುಗಳಲ್ಲಿಯ ಪ್ರಾಥಮಿಕ ಶಿಕ್ಷಣವು ಗೌಣ (ಅಮುಖ್ಯ) ವಾಗಿದೆ. ಮತ್ತು ಇದು ಹೀಗಾಗುವುದು ಅಸ್ವಾಭಾವಿಕವಲ್ಲ. ಆದುದರಿಂದ ಪ್ರಾಥಮಿಕ ಶಿಕ್ಷಣಕ್ಕೆನೇ ಮಹತ್ವ ಕೊಟ್ಟು ಎಲಿಮೆಂಟರಿ ಶಾಲೆಯನ್ನಾಗಲಿ ಹಾಯರ ಎಲಿಮೆಂಟರಿ ಶಾಲೆಯನ್ನಾಗಲಿ ಸ್ಥಾಪಿಸುವುದು ಅಥವಾ ಇಂಥಾದ್ದು ಪ್ರತ್ಯೇಕವಿದ್ದರೆ ಅದನ್ನೇ ತನ್ನ ಆಡಳಿತೆಯಲ್ಲಿ ತೆಕ್ಕೊಳ್ಳುವುದು ಮುನ್ಸಿಪಾಲಿಟಿಗೆ ಅಗತ್ಯವೆಂದು ಯಾರೂ ಹೇಳಬಲ್ಲರು. ವಿದ್ಯೆಗಿಂತ 'ಹೆಚ್ಚು ಅಗತ್ಯವಿರುವ ಸಾರ್ವಜನಿಕ ಸಂಗತಿಯು' (more real public needs) ಇನ್ನಾವದು?

ಆದುದರಿಂದಲೇ ವರಿಷ್ಠ ಸರಕಾರದವರು ಮಿ. ಕ. ಜೊರೆಗಳ ಮೇಲಿನ ಅಭಿಪ್ರಾಯದ ಮೇಲೆ ವಿಶೇಷ ಭಾರವಿಟ್ಟಂತೆ ಕಾಣುವುದಿಲ್ಲ. ಕಾರಣವೇನೆಂದರೆ, ಸರಕಾರದವರು ಹೇಳಿದ ಶಾಲೆಗಳಲ್ಲಿ ಎಂದರೆ ಬೋಳಾರ ಶಾಲೆಯಲ್ಲಿ ಕ್ಲಾಸುಗಳನ್ನು ಹೆಚ್ಚಿಸಲು ಮತ್ತು ಕಂಕನಾಡಿಯ ಶಾಲೆಯನ್ನು ತನ್ನ ಅಧಿಕಾರದೊಳಗೆ ತೆಕ್ಕೊಳ್ಳಲು ಮಾಡಬೇಕಾದ ಖರ್ಚು ವೆಚ್ಚಿನ ವ್ಯವಸ್ಥೆಯನ್ನು ತಿಳಿಸಲು ಮುನ್ಸಿಪಾಲಿಟಿಗೆ ಕೇಳಿರುವರು. ಇದು ಸಮಾಧಾನಕರವೇ ಸರಿ.

ಇರಲಿ; ಈ ಮುಖ್ಯ ಸಂಗತಿಗಳಲ್ಲದೆ, ಪಟ್ಟಣಕ್ಕಾಗಿ ನೀರಿನ ಪುರವಣಿ ಮುಂತಾದ ಬೇರೆ ವಿಷಯದಲ್ಲಿ ಸರಕಾರವು ತಕ್ಕ ಮಟ್ಟಿನ ಆಶ್ವಾಸನೆಯನ್ನು ಕೊಟ್ಟಿರುವುದು. ಸರಕಾರದ ಸಹಾನುಭೂತಿಯು ಈ ರೀತಿಯಿಂದ ಇರುವಾಗ ಮುನ್ಸಿಪಾಲಿಟಿಯು ತನ್ನ ಕರ್ತವ್ಯವನ್ನು ಕರ್ತವ್ಯ ಬುದ್ಧಿಯಿಂದ ಮಾಡುತ್ತಿದ್ದರೆ ನಾವು ಮೇಲೆ ಹೇಳಿದಂತೆ ಈ ಸ್ಥಾನಿಕ ಸ್ವರಾಜ್ಯವು ಜನರಿಗೆ ಸ್ವರಾಜ್ಯದ ವಸ್ತುಪಾಠವೇ ಆದೀತೆಂದು ನೆನಸಲು ಅಡ್ಡಿ ತೋರುವುದಿಲ್ಲ.

ಪ್ರಾಥಮಿಕ ಶಿಕ್ಷಣ ಪ್ರಚಾರದಲ್ಲಿ ಮ್ಯುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಅಧಿಕಾರ.

ಲೇಖಾಂಕ ೨.

ಈ ಸ್ಥಳೀಯ ಬೋರ್ಡುಗಳಿಗೆ ತಮ್ಮ ವಹಿವಾಟುಗಳನ್ನು ನಡೆಸುವುದರಲ್ಲಿ ಹೆಚ್ಚಿನ ಸ್ವತಂತ್ರವನ್ನು ಕೊಡುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ತೋರಿಸಿದ ಉದಾರತ್ವವನ್ನು ಕೊಂಡಾಡಿ ಹಿಂದಿನ ಸಂಚಿಕೆಯಲ್ಲಿ ಹೇಳಿದೆವು. ಇದನ್ನು ಜಾರಿಗೆ ತರುವುದಕ್ಕೆ ಮದ್ರಾಸು ಗವರ್ನಮೆಂಟಿನವರು ನಮ್ಮ ಸಂಸ್ಥಾನದಲ್ಲಿ ವ್ಯವಸ್ಥೆ ಮಾಡುವಾಗ ಗಮನ ಕೊಡಬೇಕಾದ ಕೆಲವು ಸಂಗತಿಗಳನ್ನು ಇಲ್ಲಿ ಸೂಚಿಸುವೆವು.

ಮ್ಯುನಿಸಿಪಾಲಿಟಿಗಳ ವಿಸ್ತೀರ್ಣವು ಸಣ್ಣದಾಗಿದ್ದು ಹೆಚ್ಚಾಗಿ ನೊನ್ ಒಫಿಶಿಯಲ್(ಸರಕಾರಿ ನವ್ಕರರಲ್ಲದ) ಪ್ರಸಿಡೆಂಟರು ಅವುಗಳ ವಹಿವಾಟನ್ನು ನೋಡುವುದರಿಂದ ಶಾಲೆಗಳಲ್ಲಿ ಇಸಮುಗಳನ್ನು ಹೆಚ್ಚಿಸುವುದು ಅಥವಾ ತಗ್ಗಿಸುವುದು, ಉಪಾಧ್ಯಾಯರನ್ನು ನೇಮಿಸುವುದು ಶಿಕ್ಷಿಸುವುದು ಮುಂತಾದ ಅಧಿಕಾರಗಳನ್ನು ಅವರು ಇಟ್ಟುಕೊಳ್ಳುವುದರಲ್ಲಿ ಹೆಚ್ಚಿನ ತೊಡಕಾಗಲಾರದು. ಆದರೆ ಇಂಥ ಸಂದರ್ಭಗಳಲ್ಲಿ ವಿದ್ಯಾ ಇಲಾಖೆಯವರ ಸೂಚನೆಗಳನ್ನು ಸಭೆಗಳಲ್ಲಿ ಸ್ಪಷ್ಟವಾಗಿ ವಿವರಿಸುವುದಕ್ಕೆ ಜಿಲ್ಲಾ ಅಸಿಸ್ಟಾಂಟ್ ಇನ್ಸ್‌ಪೆಕ್ಟರು, ಅಥವಾ ಒಂದೇ ಜಿಲ್ಲೆಯಲ್ಲಿ ಹೆಚ್ಚು ಮ್ಯುನಿಸಿಪಾಲಿಟಿಗಳಿದ್ದಾಗ ಅಲ್ಲಿಯ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರು ಆ ಸಭೆಯ ಒಫಿಶಿಯಲ್ ಮೆಂಬರರಾಗುವ ಏರ್ಪಾಡು ಇದ್ದೇ ತೀರಬೇಕು. ಈ ರೀತಿಯ ನಿಯಮವಿಲ್ಲದಿದ್ದರೆ ಮತ್ತು ಎಲಿಮೆಂಟರಿ ಶಾಲೆಗಳನ್ನು ಸಂದರ್ಶನೆ ಮಾಡುವುದು ತಮ್ಮ ಗೌರವಕ್ಕೆ ಕುಂದುಕವೆಂದು ಭಾವಿಸುವಂಥಾ ದೊಡ್ಡ ಮನುಷ್ಯರು ಮ್ಯುನಿಸಿಪಾಲಿಟಿಯ ಪ್ರಸಿಡೆಂಟರಾದರೆ ಶಾಲೆಗಳ ಮೇಲ್ವಿಚಾರವು ಇಲ್ಲದೆ ಶಾಲೆಗಳು ಬೇಗನೇ ಕೆಟ್ಟುಹೋಗುವವು. ಮತ್ತು ಇಂಥ ಶಾಲೆಗಳಿಗೆ ಹೆಚ್ಚಾಗಿ ಕೌನ್ಸಿಲರುಗಳ ಮಕ್ಕಳು ಹೋಗುವುದು ಅಪರೂಪವಾದುದರಿಂದಲೂ ಅಲ್ಲಿಗೆ ಮಕ್ಕಳನ್ನು ಕಳುಹಿಸುವ ಬಡಜನರು ತಮ್ಮ ಅಡಚಣೆಗಳನ್ನು ವಿವರಿಸುವಷ್ಟು ಸಾಮರ್ಥ್ಯವಿಲ್ಲದವರಾದುದರಿಂದಲೂ ವಿದ್ಯಾ ಇಲಾಖೆಯ ಆಫೀಸರರು ಅಂಥಾ ಬಡಜನರ ಪ್ರತಿನಿಧಿ ಎಂಬಂತೆ ಕೌನ್ಸಿಲಿನ ಮೆಂಬರರಾಗಿಯೇ ತೀರಬೇಕು. ನಮ್ಮ ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಈಚೆಗೆ ನಾಲ್ಕೈದು ವರ್ಷಗಳಿಂದ ವಿದ್ಯಾ ಇಲಾಖೆಯ ಮೆಂಬರರು ಇಲ್ಲ. ಈ ವಿಷಯವನ್ನು ಕೌನ್ಸಿಲಿನವರು ಕಲೆಕ್ಟರರಿಗೆ ಸೂಚಿಸುವುದೂ ಇಲ್ಲ. ಇದಕ್ಕೆ ಕಾರಣವೇನೆಂದು ಗೊತ್ತುಹಚ್ಚಲಾರೆವು. ಆದರೆ ವಿದ್ಯಾ ಇಲಾಖೆಯ ಆಫೀಸರರು ಕೌನ್ಸಿಲಿನ ಮೆಂಬರರಾಗಿರುತ್ತಿದ್ದರೆ ಮಂಗಳೂರಿನಲ್ಲಿ ಸಾಕಷ್ಟು ಖಾಸಗಿ ಶಾಲೆಗಳಿರುವುದರಿಂದ ಮ್ಯುನಿಸಿಪಾಲಿಟಿಯವರು ಹೊಸ ಶಾಲೆಗಳನ್ನು ಸ್ಥಾಪಿಸುವುದು ಅಗತ್ಯವಿಲ್ಲವೆಂಬ ಮಾತು ವರ್ಷಾವಧಿ ರಿಪೋರ್ಟನ್ನು ವಿಮರ್ಶಿಸಿದ ಕಲೆಕ್ಟರರ ಕಡೆಯಿಂದ ಹೊರಡುತ್ತಿರಲಿಲ್ಲ. ಮತ್ತು ಈ ಖಾಸಗಿ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆ ಕ್ರೈಸ್ತ ಶಾಲೆಗಳು ಆಗಿರುವುದರಿಂದ ಕ್ರೈಸ್ತ ಮತ ಪ್ರಚಾರವೇ ಹೇತುವಾಗಿರದ ಕೆಲವು ಶಾಲೆಗಳು ಹಿಂದುಳಿದ ಜಾತಿಯವರ ಬಗ್ಗೆ ಬೇಕಾಗಿವೆ ಎಂದು ಇರುತ್ತಿತ್ತು. ಇದಲ್ಲದೆ ಖಾಸಗಿ ಶಾಲೆಗಳಲ್ಲಿ ಫೀಸು ವಸೂಲಾಗುತ್ತದೆ; ಹಿಂದುಳಿದ ಜಾತಿಯವರಿಗೆ ಮ್ಯುನಿಸಿಪಾಲ್ ಶಾಲೆಗಳಲ್ಲಿ ಫೀಸು ಮಾಫಿಯಾಗಿರುವ ಪ್ರಯೋಜನವು ಈ ಹೊಸ ಶಾಲೆಗಳಿಂದ ದೊರಕುತ್ತಿತ್ತು.

ತಾಲೂಕು ಬೋರ್ಡುಗಳ ಅಧೀನದಲ್ಲಿರುವ ಪ್ರದೇಶವು ಬಹು ದೊಡ್ಡದು. ನಮ್ಮ ಜಿಲ್ಲೆಯಲ್ಲಿ ಎರಡೆರಡು ತಾಲೂಕುಗಳಿಗೊಂದು ಬೋರ್ಡು ಇದೆ. ಈಚೆಗೆ ಉಪಾಧ್ಯಾಯರ ಸಂಬಳದ ಬಿಲ್ಲುಗಳನ್ನು ತಯಾರಿಸುವ ಕೆಲಸವು ಶಾಲಾ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರ ಆಫೀಸಿನಿಂದ ತಾಲೂಕು ಬೋರ್ಡು ಆಫೀಸಿಗೆ ಸೇರಿಯದೆ. ಈಗ ಇಸಮುಗಳ ವಿಚಾರ, ಉಪಾಧ್ಯಾಯರ ಶಿಕ್ಷೆರಕ್ಷೆಯ ವಿಚಾರ, ಅವರ ನೇಮಕಗಳು ಇವೆಲ್ಲ ಬೋರ್ಡು ಆಫೀಸುಗಳ ಮೇಲೆ ಹೊಂದುವುದಾದರೆ ಈಗಿನ ಸಿಬ್ಬಂದಿ ಸಾಲದು. ಇದು ವಿನಾ ತಾಲೂಕು ಬೋರ್ಡಿನ ಕೈಕೆಳಗೆ ಅವರ ಸ್ವಂತ ಇಂಜಿನಿಯರ್ ಇಲಾಖೆ ಇದ್ದಂತೆ ಒಂದು ಬೇರೆ ವಿದ್ಯಾ ಇಲಾಖೆ ಇಲ್ಲ. ಆದ್ದರಿಂದ ಶಾಲಾ ಸಂದರ್ಶನೆಯ ಕೆಲಸವು ತೀರಾ ಸರಕಾರಿ ವಿದ್ಯಾ ಇಲಾಖೆಯವರಿಂದಲೆ ಮಾಡಲ್ಪಡುವುದು. ಈವರೆಗೆ ಬೋರ್ಡುಶಾಲೆಗಳ ಮೇಲ್ವಿಚಾರವು ನಾಮಪೂರ್ತಿಯಾಗಿ ಮಾತ್ರ ತಾಲೂಕು ಬೋರ್ಡಿನವರದಾಗಿತ್ತು; ಆದರೆ ನಿಜವಾದ ಜವಾಬ್ದಾರಿಯನ್ನು ಸರಕಾರಿ ವಿದ್ಯಾ ಇಲಾಖಾ ಆಫೀಸರರೇ ವಹಿಸಿ ಆ ಶಾಲೆಗಳು ತಮ್ಮ ಶಾಲೆಗಳೆಂಬಂತೆ ಭಾವಿಸುತ್ತಿದ್ದರು. ಇನ್ನೂ ಅಂಥಾ ಮಮತೆಯು ಆ ಆಫೀಸರರಿಗೆ ಇರದು. ಇತರ ಶಾಲೆಗಳನ್ನು ಸಂದರ್ಶಿಸಿದಂತೆ ಈ ಬೋರ್ಡು ಶಾಲೆಗಳನ್ನೂ ಪರೀಕ್ಷಿಸಿ ಅವುಗಳಲ್ಲಿನ ಕುಂದುಕೊರತೆಗಳನ್ನು ಹೊರಪಡಿಸಿದರೆ ತಮ್ಮ ಕೆಲಸ ಮುಗಿಯಿತೆಂದು ಅವರ ಭಾವನೆಯಾಗುವುದು. ಅಂಥಾ ಸಂದರ್ಭಗಳಲ್ಲಿ ಈಗಿನ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ ಮ॥ ರಾ॥ ಸುಜೀರ ರಘುನಾಥಯ್ಯನವರಂತೆ ಹಳ್ಳಿಮೂಲೆಯ ಶಾಲೆಗಳನ್ನು ನೋಡಿ ಅವುಗಳ ನಿಜಸ್ಥಿತಿಯನ್ನು ತಿಳಿದುಕೊಳ್ಳುವಷ್ಟು ಪ್ರಯಾಸಪಟ್ಟು ಮನಃಪೂರ್ವಕವಾಗಿ ಕಾರ್ಯಭಾರವನ್ನು ವಹಿಸುವ ಪ್ರೆಸಿಡೆಂಟರಿದ್ದರೆ ಎಲ್ಲವೂ ಸರಿಹೋಗುವುದು. ಇಲ್ಲವಾದರೆ ಶಾಲೆಗಳ ಮೇಲಿನ ಅಧಿಕಾರವೆಲ್ಲ ಯಾರ ಪಾಲಾಗುವುದೆಂದು ವಾಚಕರೇ ಊಹಿಸಬಹುದು. ಇದಲ್ಲದೆ ಇನ್ನೂ ಸರಕಾರದವರು ಪ್ರತಿ ಒಂದು ತಾಲೂಕು ಬೋರ್ಡಿಗೂ ನೊನ್ ಒಫಿಶಿಯಲ್ ಪ್ರೆಸಿಡೆಂಟರನ್ನು ನೇಮಕ ಮಾಡುವ ವಿಷಯವನ್ನು ಗಮನಿಸಲಿಲ್ಲ. ರೆವಿನ್ಯೂ ಡಿವಿಜನಲ್ ಆಫೀಸರರು ಈಗಿನಂತೆ ಪ್ರೆಸಿಡೆಂಟರಾದರೆ ಅವರಿಗೆ ಹಲವು ಅಧಿಕಾರಗಳಿಗೆ ಸಂಬಂಧಪಟ್ಟ ಕೆಲಸವು ಇರುವುದರಿಂದಲೂ ಶಾಲೆಗಳನ್ನು ಸಂದರ್ಶಿಸುವುದಕ್ಕೆ ಹೆಚ್ಚಿನ ಅವಕಾಶ ಅವರಿಗೆ ದೊರೆಯದುದರಿಂದಲೂ ಶಾಲೆಗಳು ದುರವಸ್ಥೆಗೆ ಬರಬಹುದು. ಇಂಥ ಕಡೆಗಳಲ್ಲಿ ಶಾಲೆಗಳ ಪೂರ್ಣ ಮೇಲ್ವಿಚಾರವನ್ನು ತಾಲೂಕು ಬೋರ್ಡ ವೈಸ ಪ್ರೆಸಿಡೆಂಟರಿಗೆ ಅಥವಾ ಅವರು ಮತ್ತು ಬೋರ್ಡು ಮೆಂಬರುಗಳಲ್ಲಿ ವಿದ್ಯಾ ಇಲಾಖಾ ಆಫೀಸರರು ಮತ್ತು ಇನ್ನೊಬ್ಬ ನೊನ್ ಒಫಿಶಿಯಲ್ ಉತ್ಸಾಹಭರಿತನಾದ ಮೆಂಬರರು ಈ ಮೂವರ ಕಮ್ಮಿಟಿಗಾದರೂ ಒಪ್ಪಿಸಿಕೊಡಬೇಕಾಗುವುದು. ಈಗಿನಂಥ ಸ್ಕೂಲ ಕಮ್ಮಿಟಿಗಳು ಬಹಳ ಪ್ರಯೋಜನಕಾರಿಯಾಗಲಾರವು.

ಕಲೆಕ್ಟರುಗಳು ಜಿಲ್ಲೆಯ ಅಧಿಕಾರಿಗಳಾಗಿದ್ದು ಆ ಜಿಲ್ಲೆಯೊಳಗಿನ ಪ್ರತಿಯೊಂದು ಇಲಾಖೆಯಿಂದ ತನಗೆ ಬೇಕಾದ ಮಾಹಿತಿಯನ್ನು ಪಡಕೊಳ್ಳುವುದಕ್ಕೆ ಅಧಿಕಾರ ಅವರಿಗೆ ಈ ಮೊದಲೇ ಹೊಂದಿರುವಾಗ ಅವರು ಅಗತ್ಯವಿದ್ದಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸುವುದನ್ನು ಕುರಿತು ತಾಲೂಕು ಬೋರ್ಡುಗಳಿಗೆ ಹುಕುಂ ಕೊಡಬಹುದೆಂದು ಸರ್ಕಿಲಾರಿನಲ್ಲಿ ಹೇಳಿದ ಕಾರಣವು ಗೊತ್ತಾಗುವುದಿಲ್ಲ. ಈ ಹೊಸ ನಿಬಂಧನೆಯನ್ನು ಸೇರಿಸಿಕೊಂಡದ್ದರಿಂದ ಒಂದು ಕಡೆಯಲ್ಲಿ ಬೋರ್ಡುಗಳಿಗೆ ಸ್ವತಂತ್ರ ಕೊಟ್ಟಾಗ ಇನ್ನೊಂದು ಕಡೆಯಲ್ಲಿ ನೂತನ ಅಂಕುಶವನ್ನು ಇಡುವ ಅಗತ್ಯವೇನು? ಸ್ವಭಾವಿಕವಾಗಿಯೇ ಕಲೆಕ್ಟರರು ಕೊಡುವ ಸೂಚನೆಗಳೆಂದರೆ ಹುಕುಮಿನಷ್ಟೆ ಭಾರವುಳ್ಳವುಗಳು. ಹೀಗಿರುವಾಗ ಬೇರೆ ಹುಕುಮುಗಳು ಕಲೆಕ್ಟರರ ಕಡೆಯಿಂದ ಬೇಕಾಗಿದ್ದಿಲ್ಲ.

ಇದ್ದ ಶಾಲೆಗಳನ್ನು ಮುಚ್ಚುವ ಅಗತ್ಯ ಕಂಡರೆ ಆ ಬಗ್ಗೆ ಕಲೆಕ್ಟರ ಅಥವಾ ಡಿರೆಕ್ಟರರ ಅನುಮತಿಯನ್ನು ಪಡೆಯಬೇಕಾಗುವುದು ಎಂದು ಈ ಸರ್ಕಿಲಾರಿನಲ್ಲಿ ಒಂದು ಸೂಚನೆ ಇದೆ. ಇದರಲ್ಲಿಯೂ ಕಲೆಕ್ಟರರ ಹೆಸರನ್ನು ಬೇರೆಯಾಗಿ ಸೇರಿಸಬೇಕಾಗಿದ್ದಿಲ್ಲ; ಡಿರೆಕ್ಟರರ ಅನುಮತಿ ಮಾತ್ರವೇ ಇದ್ದರೆ ಸಾಕಿತ್ತು.

ಬೋರ್ಡು ಶಾಲೆಗಳಲ್ಲಿ ಕಲಿಸುವ ವಿಷಯಗಳನ್ನು ಕುರಿತು ಹಲವು ಬಗೆಯ ಪಟ್ಟಿಗಳನ್ನು ವಿದ್ಯಾ ಇಲಾಖೆಯವರು ತಯಾರಿಸಿ ಅವುಗಳಲ್ಲಿ ಆಯಾಯ ಸ್ಥಳದ ಮತ್ತು ಜನರ ಯೋಗ್ಯತೆಗೆ ಸರಿಯಾದ ಪಟ್ಟಿಗಳನ್ನು ಬೋರ್ಡಿನವರು ಚುನಾಯಿಸಬಹುದೆಂದು ಈ ಸರ್ಕಿಲಾರು ಹೇಳುತ್ತಿದೆ. ಈಗಿನ ವಿದ್ಯಾಭ್ಯಾಸದ ಧ್ಯೇಯವು ಯಾವುದೆಂದು ಮೆಂಬರರು ತಿಳಿದುಕೊಳ್ಳಲಿಕ್ಕೆ ಪ್ರಯತ್ನಪಟ್ಟಲ್ಲಿ ಇಂಥ ಸೂಚನೆಯಿಂದ ಪ್ರಯೋಜನವು ಸಿಕ್ಕಬಹುದು. ಇಲ್ಲವಾದರೆ ವಿದ್ಯೆಯ ಪ್ರಚಾರಕ್ಕೂ ಅಭಿವೃದ್ಧಿಗೂ ತೊಡಕುಗಳು ಉಂಟಾಗುವುದು ನಿಶ್ಚಯ.

ಸರಕಾರದ ದ್ರವ್ಯ ಸಹಾಯವು ಸಿಕ್ಕುವ ಮುಂಚೆ ಈ ಬೋರ್ಡುಗಳು ಯಾವ ದಾಮಾಶಯದಲ್ಲಿ ಹಣವನ್ನು ಖರ್ಚುಮಾಡುತ್ತಿದ್ದವೋ ಅದಕ್ಕೆ ಕಡಿಮೆಯಾಗದಂತೆ ನಿರ್ಬಂಧವಿಟ್ಟು ಆ ಹಣವನ್ನು ಅವರು ವಿದ್ಯಾಭಿವೃದ್ಧಿಗಾಗಿ ವೆಚ್ಚಮಾಡುವುದಕ್ಕೆ ಪೂರ್ಣ ಸ್ವತಂತ್ರ ಕೊಡಬೇಕೆಂದು ಮಾಡಿದ ನಿರ್ಣಯವು ಚಲೋದು. ಆದರೆ ಬೇರೆ ಬೇರೆ ಬೋರ್ಡುಗಳು ಮೊದಲಿಂದಲೂ ಒಂದೇ ಬಗೆಯ ದಾಮಾಶಾಯವನ್ನು ಇಟ್ಟಿಲ್ಲ. ಕೆಲವು ಹೆಚ್ಚಿಗೆ ಹಣವನ್ನು ವಿದ್ಯಾಭಿವೃದ್ಧಿಗೆ ವಿನಿಯೋಗಿಸುತ್ತವೆ; ಕೆಲವು ಸ್ವಲ್ಪ ಲೋಭತ್ವವನ್ನು ತೋರ್ಪಡಿಸುತ್ತವೆ. ಆದ್ದರಿಂದ ಮ್ಯುನಿಸಿಪಾಲಿಟಿಯಾಗಲಿ ತಾಲೂಕು ಬೋರ್ಡಾಗಲಿ ತಮ್ಮ ಆದಾಯದಲ್ಲಿ ಸೇಕಡಾ ಇಂತಿಷ್ಟರ ಮೇರೆಗೆ ಕಡಿಮೆಯಾಗದಂತೆ ಖರ್ಚುಮಾಡಲೇ ಬೇಕೆಂಬ ನಿರ್ಬಂಧವನ್ನು ಇಡುವುದು ಒಳ್ಳೇದು.

ಈ ಸರ್ಕಿಲಾರಿನಲ್ಲಿ ಬೋರ್ಡ ಸೆಕೆಂಡರಿ ಶಾಲೆಗಳನ್ನು ಕಾಲಕ್ರಮದಲ್ಲಿ ಸರಕಾರಿ ಶಾಲೆಗಳಾಗಿ ಮಾಡಿ ಸೆಕೆಂಡರಿ ವಿದ್ಯಾಭ್ಯಾಸದ ಹೊರೆಯನ್ನು ಈ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳಿಂದ ತಪ್ಪಿಸಬೇಕೆಂಬುದು ವ್ಯಕ್ತವಾಗುತ್ತಲಿದೆ. ಈ ಬೋರ್ಡುಗಳಿಗೆ ಸರಕಾರದಿಂದ ದ್ರವ್ಯಾನುಕೂಲ ಸಿಕ್ಕದೆ ಇರುವುದರಿಂದ ಫೀಸಿನಿಂದಲೇ ಅವುಗಳು ಜೀವಿಸಬೇಕಾಗುತ್ತದೆ. ಹೀಗಾಗಿ ಅನೇಕ ಬೋರ್ಡು ಶಾಲೆಗಳಲ್ಲಿ ಬೇಕಾದ ಸಾಹಿತ್ಯ ಸಾಮಾಗ್ರಿಗಳ ಅನುಕೂಲತೆಯೇ ಇಲ್ಲ. ಆದ್ದರಿಂದ ಸರಕಾರದವರು ಅವುಗಳ ಭಾರವನ್ನು ನಮ್ಮ ಜಿಲ್ಲೆಯಲ್ಲಿ ವಹಿಸುವ ಸುಕಾಲವನ್ನು ನಾವು ತುಂಬಾ ಹಾರೈಸುತ್ತಲಿರುವೆವು.

ಬಂಗಾಳದೊಳಗಿನ 'ಧರ್ಮಗೋಳ'ಗಳು

ಹಿಂದಿನ ಹಿಂದೂದೇಶದ ಚರಿತ್ರೆಯನ್ನು ನೋಡಿದ್ದರೆ ಈ ದೇಶದೊಳಗೆ ಬರಗಾಲಗಳು ಬೀಳುವುದು ಬಹು ಕ್ವಚಿತವೇ ಇತ್ತು. ಎಂದರೆ ಮೊದಲಿನ ಕಾಲದಲ್ಲಿ ಬರಗಾಲದ ಏನೂ ಬಾಧೆಯಿಲ್ಲದೆ ದೇಶವು ಸರ್ವದಾ ಸುಭಿಕ್ಷೆಯಲ್ಲಿಯೇ ಇತ್ತೆಂಬರ್ಥವಲ್ಲ. ಬರಗಾಲವು ಬಂದರೂ ಅದು ಹೆಚ್ಚು ಸಮಯ ನಿಲ್ಲುತ್ತಿದ್ದಿಲ್ಲ; ಅದರ ಸ್ವರೂಪವು ಅಷ್ಟೇನು ಉಗ್ರವಿರುತ್ತಿದ್ದಿಲ್ಲ; ಮತ್ತು ಅಂಥ ಬರಗಾಲಾದರೂ ಬೇಗ ಬೇಗನೆ ಬರುತಿತ್ತೆಂತಲೂ ಇಲ್ಲ. ಆದರೆ ಸದ್ಯಃಕಾಲದಲ್ಲಿ ಹಿಂದುಸ್ಥಾನದೊಳಗೆ ಈ ತರದ ಬರಗಾಲಗಳ ಸುಭಿಕ್ಷೆಯೇ ಹೆಚ್ಚಾಗಿದೆ! ಈ ದೇಶದೊಳಗಿನ ಯಾವುದಾದರೊಂದು ಭಾಗವಾದರೂ ಬರಗಾಲದ ಆಪತ್ತಿಗೆ ಗುರಿಯಾಗದೆ ಎರಡು ಮೂರು ವರುಷಗಳು ದಾಟದವೆಂಬುದು ಬಹು ಅಪರೂಪ, ಇಲ್ಲೆಂತಲೇ ಹೇಳಬಹುದು. ಬರಗಾಲಕ್ಕೆ ಕಾರಣಗಳು ಒಂದೇ ಎಂತಿಲ್ಲ, ಅನಾವೃಷ್ಟಿ, ಹುಳಗಳ ಬಾಧೆ, ಅತಿವೃಷ್ಟಿ ಮುಂತಾದ ಕಾರಣಗಳಿಂದ ದೇಶದ ಧಾನ್ಯೋತ್ಪತ್ತಿಯು ನಾಶವಾಗಿ ಅದರಿಂದ ಬರುವ ಬರಗಾಲವು, ನಿಜವಾಗಿ ಹೇಳುವುದಾದರೆ, ಅದು ದೇಶದ ಅದೃಷ್ಟದ ಫಲ ಅಥವಾ ಪರಿಣಾಮವೆಂತ ಹೇಳಬಹುದು. ಮೇಲಿನ ಕಾರಣಗಳಲ್ಲಿ ಯಾವುದೂ ಇಲ್ಲಾದುದರಿಂದ ಧಾನ್ಯೋತ್ಪತ್ತಿಗೆ ವಿಶೇಷ ತೊಡಕಿಲ್ಲದಿರುವಾಗಲೂ ಪೇಟೆಯಲ್ಲಿ ಬಡಬಗ್ಗರಿಗೆ ಧಾನ್ಯವು ಸಿಗದಂತೆ ಆಗುವುದು. ಈ ಸ್ಥಿತಿಗೆ ನಿಜವಾದ ಬರಗಾಲವೆಂತ ಹೇಳುವುದು ಅಯುಕ್ತವಾದರೂ ಅದಕ್ಕೆ ಕೃತ್ರಿಮ ಬರಗಾಲವೆಂತ ಹೆಸರು ಕೊಡಬಹುದು. ಈ ತರದ ಕೃತ್ರಿಮ ಬರಗಾಲಗಳೇ ಈಚೆಗೆ ಮೇಲಿಂದ ಮೇಲೆ ಬರುತ್ತಿದ್ದಾವೆ. ಈ ಸಂಗತಿಯ ಕಾರಣಗಳ ಮೀಮಾಂಸೆಯನ್ನು ಪ್ರಕೃತ ಲೇಖದಲ್ಲಿ ನಾವು ಮಾಡುವುದು ಅಗತ್ಯವಿಲ್ಲಾದರೂ ಒಂದು ಸಂಗತಿಯನ್ನು ಇಲ್ಲಿ ವಾಚಕರಿಗೆ ತಿಳಿಸುವ ಹಾಗಿದೆ. ಈಗಿನ ಸಾಹುಕಾರ(?)ಗಳಿಗೆ ಕೃತ್ರಿಮವಾದ ಬೆಲೆಯನ್ನು ಕೊಟ್ಟಕಾರಣ ಈ ತರದ ಗೋಳಾಟಗಳು ಹೆಚ್ಚಾಗಿದ್ದಾವೆ. ಧಾನ್ಯವು ಸಾಧಾರಣವಾಗಿ ಮೊದಲಿನ ಪ್ರಮಾಣದಲ್ಲಿಯೇ ಬೆಳೆಯುತ್ತಿದ್ದರೂ ಬಡ ಗಿರಾಕಿಗಳಿಗೆ ಪೇಟೆಯಲ್ಲಿ ಪ್ರಿಯವಾದ ಧಾರಣೆಯಿಂದ ಅಕ್ಕಿಯನ್ನು ಪಡಕೊಳ್ಳುವುದೆಂದರೆ ಅವರು ಊಟಮಾಡಲಿಕ್ಕೂ ಇಲ್ಲ. ಊಟ ಮಾಡದೆ ಇರಲಿಕ್ಕೂ ಇಲ್ಲ. ಇಂಥಾ ಸ್ಥಿತಿಯು ಈಗ ಎಷ್ಟೋ ವರ್ಷಗಳಿಂದ ಈ ದೇಶಕ್ಕೆ ಬಂದಿದೆ.

ಇದಕ್ಕೆ ತಕ್ಕ ಪ್ರತಿಕಾರವು ಯಾವುದಾದರೂ ಇದ್ದುದಾದರೆ ಅದು ಸಾಹುಕಾರ(?)ಗಳ ಕೃತ್ರಿಮ ಬೆಲೆಯನ್ನು ತಗ್ಗಿಸುವುದೇ. ಆದರೆ ಇದು ಜನರ ಕೈಯೊಳಗಿನ ಕೆಲಸವಲ್ಲಾದುದರಿಂದ ಅದರ ವಿವೇಚನೆಯು ನಿರರ್ಥಕವೇ ಸರಿ. ಈ ಆಪತ್ತನ್ನು ನಿವಾರಿಸಲು ಸಾಹುಕಾರ(?)ಗಳ ಕೃತ್ರಿಮ ಧಾರಣೆಯನ್ನು ಇಳಿಸಲು ಸರಕಾರವು ಉದ್ಯುಕ್ತವಾಗಲಿಕ್ಕೆಂದು ಜನರು ಸುಮ್ಮನೆ ಕೂತುಕೊಳ್ಳುವುದು ಮಾತ್ರ ಉಚಿತವಲ್ಲ. ಜನರು ತಮ್ಮಿಂದ ಕೂಡಿದ ಉಪಾಯವನ್ನು ಈ ವಿಷಯದಲ್ಲಿ ಮಾಡಬಹುದು. ಬಡ ಬೇಸಾಯಗಾರರು ಸಾಹುಕಾರರ ಸಾಲಗಾರರಾಗಿ ಬಂದಕ್ಕೆ ಬಂದುವರೆಯಂತೆ ಬಡ್ಡಿಯ ಭಾರದಿಂದ ತಗ್ಗಿಹೋಗಿ ಕೊನೆಗೆ ತಮಗಿದ್ದ ಭೂಮಿಯ ಚಿಕ್ಕದೊಂದು ತುಂಡನ್ನು ಸಹ ಸಾಲದ ಪರಿಹಾರಕ್ಕೆ ಸಾಹುಕಾರರ ಕೈವಶಮಾಡಿ ತಾವು ಗತಿಗೆಟ್ಟು ಹೋಗುವರು. ಈ ಅಪಾಯವನ್ನು ಅವಷ್ಟು ಬಗೆಹರಿಸಲು ಈಗ ಎಷ್ಟೋ ವರ್ಷಗಳಿಂದ ಧನನಿಧಿಯ ಸಹಕಾರ ಸಂಘಗಳು ಈ ದೇಶದ ಎಲ್ಲ ಭಾಗಗಳಲ್ಲಿ ಏರ್ಪಟ್ಟಿವೆ. ಮತ್ತು ಈ ಸಂಘಗಳಿಂದ ಬಡ ಬೇಸಾಯಗಾರರಿಗೆ ಎಷ್ಟೋ ಪ್ರಯೋಜನವು ಆಗುತ್ತಿದೆ. ಇದೇ ತತ್ವವನ್ನು ಅನುಸರಿಸಿ 'ಧಾನ್ಯನಿಧಿ'ಗಳನ್ನು ದೇಶದ ಆಯಾ ಭಾಗಗಳಲ್ಲಿಯೂ ಹಳ್ಳಿಹಳ್ಳಿಗಳ ಮೂಲೆಗಳಲ್ಲಿಯೂ ಏರ್ಪಡಿಸಲ್ಪಟ್ಟರೆ ಅದರಿಂದ ಬಡವರ 'ಹೊಟ್ಟೆಯ ಗೋಳಾಟವು' ಎಷ್ಟೋ ಅಂಶದಿಂದ ಕಡಿಮೆಯಾದೀತೆಂಬುದಕ್ಕೇನೂ ಸಂಶಯವಿಲ್ಲ. ಇದೇ ಈಗ ನಾವು ಮೇಲೆ ಹೇಳಿದ ಜನರ ಕೈಯಲ್ಲಿರುವ ಉಪಾಯವು. ಇನ್ನಾವದಲ್ಲ.

'ಧಾನ್ಯನಿಧಿ'ಗಳ ಈ ಹೊತ್ತಿನ ಈ ಪ್ರಸ್ತಾಪಕ್ಕೆ ಬಂಗಾಳದ 'ಧರ್ಮಗೋಳ'ಗಳ ವೃತ್ತಾಂತವೇ ಕಾರಣವಾಗಿದೆಂದು ಬಹುಶಃ ವಾಚಕರಿಗೆ ತಿಳಿಯದೆ ಇರದು. ಹಿಂದೂಸ್ಥಾನದಲ್ಲಿ ಧಾನ್ಯೋತ್ಪತ್ತಿಯು ಅಷ್ಟೊಂದು ಕಡಿಮೆಪ್ರಮಾಣದಿಂದ ಆಗದಿದ್ದರೂ ಹಿಂದೂಸ್ಥಾನದ ಪೇಟೆಯು ಮಾತ್ರ ಧಾನ್ಯವನ್ನು ಬಹು ಪ್ರಿಯದಿಂದ ಮಾರುತ್ತದೆ. ಈ ಶೋಚನೀಯ ಸ್ಥಿತಿಯು ಬಂಗಾಲ ಪ್ರಾಂತದ ದಿನಾಜಪೂರ ಜಿಲ್ಲೆಯೊಳಗಿನ ಜಮೀನದಾರರಾದ ರಾಯಪಾರ್ವತೀ ಶಂಕರಚೌಧರಿ ಎಂಬ ಮಾನ್ಯ ಸದ್ಗೃಹಸ್ಥರ ಲಕ್ಷ್ಯಕ್ಕೆ ಬಂದು ಅವರು ಒಂದು "ಧರ್ಮಗೋಳ" ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದರ ವೃತ್ತಾಂತವನ್ನು ವಾಚಕರು ಸಂಕ್ಷೇಪದಿಂದಾದರೂ ತಿಳಿದುಕೊಳ್ಳುವ ಹಾಗಿದೆ. ಚೌಧರಿಗಳು ದಿನಾಜಪೂರ ಜಿಲ್ಲೆಯೊಳಗಿನ ಜಯಗಂಜ ಎಂಬ ಕಡೆಯಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿರುವರು. ಧರ್ಮಗೋಳದ ಮುಖ್ಯ ಉದ್ದೇಶವೇನೆಂದರೆ ಬತ್ತವನ್ನು ಸಂಗ್ರಹಿಸಿ ಅದನ್ನು ಆ ಸಂಸ್ಥೆಯ ಮೆಂಬರುಗಳಿಗೆ ಬೀಜ, ಅಕ್ಕಿ, ಜೀವನ ಈ ಕೆಲಸಗಳಿಗೆ ವಿನಿಯೋಗಿಸುವುದು. ಈ ಧಾನ್ಯದ ಉಗ್ರಾಣದಿಂದ ಕಡತಕೊಂಡವರು ಸ್ವಲ್ಪ ಹೆಚ್ಚು ಬಡ್ಡಿಕೂಡಿಸಿ (ಆ ಬಡ್ಡಿಯು ಧಾನ್ಯರೂಪದ್ದೆ ಸರಿ.) ಆ ಕಡದ ಬತ್ತ (ಮೊದಲಾದ ಧಾನ್ಯ)ವನ್ನು ಪುನಃ ಅದೇ ಸಂಸ್ಥೆಗೆ ತಂದುಕೊಡಬೇಕು. ಬರಗಾಲ, ಧಾನ್ಯದ ನ್ಯೂನತೆ ಮುಂತಾದ ಫಕ್ಕನೆ ಬರತಕ್ಕ ಆಪತ್ತುಗಳಿಗಾಗಿಯೂ ಈ ಉಗ್ರಾಣದಲ್ಲಿ ಬತ್ತವನ್ನು ಕಾದಿಡುವರು. ಈ ಸಂಸ್ಥೆಯ ಪ್ರತಿ ಒಬ್ಬ ಮೆಂಬರನು ಹಣದ ರೂಪದಿಂದಾಗಲಿ ಧಾನ್ಯದ ರೂಪದಿಂದಾಗಲಿ ಪ್ರವೇಶ ಸಂಬಳವನ್ನು ಕೊಡುವುದು ಅಗತ್ಯವಿದೆ. ಸಂಸ್ಥೆಯ ಎಲ್ಲಾ ಮೆಂಬರುಗಳ ಸರ್ವಸಾಧಾರಣ ಕೂಟದಲ್ಲಿ ಇದರ ಮುಖ್ಯಾಧಿಕಾರವು ಏರ್ಪಡಿಸೋಣಾಗಿದೆ. ಈ ಸಂಸ್ಥೆಯೊಳಗಿನ ಮೆಂಬರುಗಳು ಏಕಮತದಿಂದ ಕಾರ್ಯದರ್ಶಿ ಮತ್ತು 'ಗೋಳದಾರ' ಎಂಬ ಇಬ್ಬರು ಅಧಿಕಾರಿಗಳನ್ನು ನೇಮಿಸಿರುವರು. (ಈ ಅಧಿಕಾರಿಗಳಾದರೂ ಮೆಂಬರುಗಳೊಳಗಿನವರೇ ಆಗಿರುವರು.) ಈ ಗೋಳದಾರನು ಸಂಸ್ಥೆಯ ಲೆಕ್ಕಪತ್ರಗಳನ್ನಿಟ್ಟು ಬತ್ತದ ಖರ್ಚು ವೆಚ್ಚವನ್ನು ಮಾಡು

ವನು. ಇವನ ಅಪ್ಪಣೆಯಿಲ್ಲದೆ ಬತ್ತದ ಬಟವಾಡೆಯು ಆಗಲು ಸಾಧ್ಯವಿಲ್ಲ. ಧರ್ಮಗೋಳದ ಕಾರ್ಯಕ್ರಮವಾದರೂ ಜನಹಿತವನ್ನು ಅನುಸರಿಸಿ ನಡಿಯುವುದು. ರಾಯ ಪಾರ್ವತೀ ಶಂಕರ ಚೌಧರಿಗಳು ಇಂಥ ಸಂಸ್ಥೆಯ ಉಪಯುಕ್ತತೆಗಳನ್ನು ಮುಂದಿನಂತೆ ಹೇಳುತ್ತಾರೆ: "ಈ ಭತ್ತದ ಉಗ್ರಾಣದಲ್ಲಿ ಬತ್ತದ ಸಣ್ಣ ಸಣ್ಣ ರಕವುಗಳನ್ನು ಪ್ರತಿ ವರ್ಷ ಯಾರೂ ಇಡಬಹುದು—ಈ ರಕಮುಗಳು ಸಣ್ಣವಾದ ಕಾರಣ ಅವು ಯಾರಿಗೂ ಒಂದು ಹೊರೆಯಾಗಲಾರವು. ಹಣದ ಬೇಂಕುಗಳಲ್ಲಿ ಕತದ ಪ್ರಮಾಣವು ಹೆಚ್ಚಿರುವಂತೆ ಈ ಧಾನ್ಯದ ಬೇಂಕುಗಳಲ್ಲಿ ಅದು ಆಸ್ಥಿರಲಾರದು. ಇದರಲ್ಲಿ ಹಳೆಬತ್ತವು ಸಂಗ್ರಹದಲ್ಲಿರುವುದರಿಂದ—ಬೇರೆ ಉಪಾಯವಿಲದೆ ಹೊಸ ಅಕ್ಕಿಯನ್ನು ಊಟಮಾಡಿ ಅದರಿಂದ ರೋಗಗಳನ್ನೆಬ್ಬಿಸಿಕೊಳ್ಳುವವರು ತಮ್ಮ ಹೊಸ ಬತ್ತವನ್ನು ಈ ಉಗ್ರಾಣಕ್ಕೆ ಕೊಟ್ಟು ಅಲ್ಲಿಂದ ಹಳೆಬತ್ತವನ್ನು ಕೊಂಡುಹೋಗಬಹುದು." ಈ ಪ್ರಯೋಜನಗಳಲ್ಲದೆ, ಇನ್ನೊಂದು ಅತ್ಯುಪಯುಕ್ತವಾದ ಲಾಭವು ಈ ತರದ ಸಂಸ್ಥೆಯಿಂದ ದೇಶಕ್ಕೆ ಅಥವಾ (ಸಂಸ್ಥೆ ಇರುವ) ಹಳ್ಳಿಗೆ ಉಂಟಾಗುವದಾಗಿದೆ. ವ್ಯಾಪಾರದ ಸ್ಪರ್ಧೆಯಿಂದ ಒಂದೂರಿನಿಂದ ಇನ್ನೊಂದು ಊರಿಗೆ ಹೋಗುವ ಅಕ್ಕಿಯು ಈ ಸಂಸ್ಥೆಗಳಿರುವಲ್ಲಿಂದ ಬೇರೆಕಡೆಗೆ ಹೋಗಲಿಕ್ಕಿಲ್ಲ. ಮತ್ತು ಹೀಗಾಗುವುದರಿಂದ ಈಗಿನಂತೆ ಅಕ್ಕಿಗೆ ವಿನಾ ಕಾರಣ ಕ್ರಯವು ಹೆಚ್ಚಾಗಲಿಕ್ಕಿಲ್ಲ.

ಆದುದರಿಂದ ನಮ್ಮ ಜಿಲ್ಲೆಯೊಳಗಿನ ಮುಖ್ಯಸ್ಥರು ಅಥವಾ ಹಳ್ಳಿಗಳೊಳಗಿನ ಪ್ರಮುಖರು ಬಂಗಾಲದ ಕಡೆಗೆ ಪ್ರಾರಂಭವಾದ ಈ "ಧರ್ಮಗೋಳ"ದಂಥ ಸಂಸ್ಥೆಗಳನ್ನು ನಿರ್ಮಿಸಿ ಬಡಜನರ ಗೋಳಾಟವನ್ನು ಕೆಲವಂಶದಿಂದಾದರೂ ನಿಲ್ಲಿಸುವ ಶ್ರೇಯಸ್ಸನ್ನು ಪಡಕೊಂಡಾರೆಂದು ನಂಬುತ್ತೇವೆ.

ಪತ್ರವ್ಯವಹಾರ.

ಹೊಟ್ಟೆಯ ಗೋಳು.

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ದಿಕ್ಕಿನಲ್ಲಿ ಕುಂದಾಪುರವೆಂಬ ಪಟ್ಟಣವಿರುವುದು. ಇಲ್ಲಿ ಪ್ರತಿ ಶನಿವಾರವೂ ಒಂದು ಮಹತ್ತಾದ ಸಂತೆಯು ಕೂಡುವುದು.

ನಾನು ಒಂದು ಹಳ್ಳಿಯ ಬಡ ನಿವಾಸಿಕ; ಕುಂದಾಪುರ ಸಂತೆಯ ದರ್ಶನವನ್ನು ಸ್ವೀಕರಿಸುವುದು ಅಪರೂಪವಾಗಿತ್ತು. ಆದರೆ ಕೆಲವು ವಾರಗಳಿಂದಿತ್ತ, ಪಟ್ಟಣದವರಂತೆ ಪ್ರತಿ ಸಂತೆಗೂ ಭೇಟಿಕೊಡಬೇಕಾಗಿ ಬಂತು. ಹೀಗಾಗಲು ಕಾರಣವು ನನ್ನ ದುರಾದೃಷ್ಟದ ಹೊಟ್ಟೆಯೆಂದೇ ಹೇಳಬೇಕು.

ಇಷ್ಟು ವರುಷಗಳ ತನಕ ನಮ್ಮ ಹಳ್ಳಿಯಲ್ಲಿರುವ ಧನಿಕರಾದ ಮಹನೀಯರ ಪಾದಾರ್ದರ್ಶನದಿಂದ ಹೇಗಾದರೂ ಹೊಟ್ಟೆಯ ಬಾಧೆಯನ್ನು ನಿವಾರಿಸುತ್ತಿದ್ದೆನು. ಆದರೆ ಈ ವರುಷ ನಳಸಂವತ್ಸರದ ಮಹಾತ್ಮೆಯಿಂದಲೋ, ಹೊಟ್ಟೆಯ ದುರಾದೃಷ್ಟದಿಂದಲೋ! ಹಳ್ಳಿಯ ಧನಿಕರ ಉಗ್ರಾಣಗಳೆಲ್ಲಾ "ನೀವೆಲ್ಲಾ ಕುಂದಾಪುರ ಸಂತೆಗೆ ಹೋಗಿ" ಎಂದು ಹೇಳುತ್ತವೋ ಎಂಬಂತೆ ಬರಿದಾಗಿರುವುವು.

ಹೀಗಾದುದರಿಂದ ನಾನು ಹೊಟ್ಟೆಯ ಬಾಧೆಗೆ ತೃಪ್ತಿಯನ್ನುಂಟುಮಾಡಲಿಕ್ಕೆ ಸಂತೆಗನೇ ಹೋಗಬೇಕಾಯಿತು. ಸಂತೆಗೆ ಹೋಗಿ ಅಕ್ಕಿಮುಡಿಯ ಸಾಲುಗಳನ್ನು ನೋಡಿದ ಕೂಡಲೇ ನಮ್ಮ ಹಳ್ಳಿಯ ಒಡೆಯರ ಅಕ್ಕಿಯ ಉಗ್ರಾಣವೇ ಇಲ್ಲಿಗೆ ಒಯ್ಯಲ್ಪಟ್ಟಿದೆ ಎಂಬುದು ಖಚಿತವಾಗುವುದು. ಅದನ್ನು ನೋಡಿದ ಮಾತ್ರದಿಂದ 'ಹಸಿವು ಬಾಯಾರಿಕೆಗಳಿಂದ ಕಂಗೆಟ್ಟು ಮರುಭೂಮಿಯಲ್ಲಿ ಪ್ರಯಾಣಮಾಡುವವನಿಗೆ ನೀರು ಕುದುರೆಯನ್ನು ನೋಡಿದಾಗ ಎಷ್ಟು ಆನಂದವಾಗುವುದೋ' ತದ್ರೀತಿ ಸಂತೋಷದಿಂದ ಮುಂದರಿದು ಅಕ್ಕಿಯ ದರವನ್ನು ಕೇಳಿದಾಗ 'ಮೃಗಳು ಕಾಡಿನಲ್ಲಿ ನೀರಕುದುರೆಯು ಮೋಸಪಡಿಸುವಂತೆಯೇ' ಅಕ್ಕಿಮುಡಿಯ ದರವು ನನ್ನ ಹೊಟ್ಟೆಯ ಬಾಧೆಯನ್ನು ಇನ್ನೂ ಹೆಚ್ಚಿಸುವುದು.

ಆಗ ನಾನು ಹೊಟ್ಟೆಯ ಪೀಡೆಯಿಂದಲೂ, ಅಕ್ಕಿಮುಡಿಗೆ ಹೇಳಿದಷ್ಟು ಹಣವನ್ನು ಕೊಡುವ ತ್ರಾಣವಿಲ್ಲದುದರಿಂದಲೂ, ಬಾಯಲ್ಲಿ ನೀರಿಲ್ಲದವನಾಗಿ, ಅಕ್ಕಿಮುಡಿಯ ಸಾಲುಗಳನ್ನು ಬಿರಬಿರನೆ ನೋಡುತ್ತಾ, ನಿಷ್ಫಲಿಕ ನೇತ್ರಗಳುಳ್ಳವನಾಗಿ ಸಂತೆಯ ಮೂಲೆಯಲ್ಲಿ ಬಂದು ನನ್ನಂತೆಯೇ ಅಯ್ಯೋ! ಕುಯ್ಯೋ! ಮುರ್ರೋ! ಈ ಹೊಟ್ಟೆ ಹಾಳಾಗಿ ಹೋಗಲಿ! ಎಂದು ಗೋಳಾಡುತ್ತಿರುವ ಮಿತ್ರರೊಡಗೂಡಿ, ಅದರಲ್ಲಿ ನಾನು ಸಹ ಭಾಗಿಯಾಗಬೇಕಾಯಿತು. ಇದನ್ನು ಅತಿಶಯೋಕ್ತಿಯೆಂದು ಎಣಿಸದಂತೆ ಸಂತೆಯಲ್ಲಿ ಕಳೆದ ೨-೩ ವಾರಗಳಲ್ಲಿಯ ಅಕ್ಕಿಯ ದರವನ್ನು ಕೆಳಗೆ ಸೂಚಿಸುವೆನು.

ಇದೇ ತಿಂಗಳ ತಾ. ೨ನೇ ಶನಿವಾರದ ಸಂತೆಯಲ್ಲಿ ಅಕ್ಕಿ ಮುಡಿಗೆ ರೂ. ೬—೮—೦ ಇದ್ದದ್ದು ತಾ. ೯ನೇ ಶನಿವಾರ ಅದೇ ಮಾದರಿಯ ಅಕ್ಕಿಗೆ ರೂ. ೭ರಿಂದ ೭||ರ ವರೆಗೂ ಇತ್ತು. ತಾ. ೧೬ನೇ ದಿನ ಕೂಡಿಬಂದ ಸಂತೆಯಲ್ಲಿ ರಂಗೂನು ಅಕ್ಕಿಯು ಬಂದುದರಿಂದ ಬಡವರಾದ ನಾವೆಲ್ಲರೂ, ಊರಕ್ಕಿಗೆ ದರ ಕಮ್ಮಿಯಾದೀತೆಂದು ಭಾವಿಸಿ, ಸಂತೆ ನೆರೆಯುವ ಮುಂಚೆಯೇ ಬಾಗಿಲಲ್ಲಿ ಕಾದಿದ್ದೆವು. ಆದರೆ 'ಪಾಪಿ ಹೋದಲ್ಲಿ ಮೊಳಕಾಲುದ್ದ ನೀರು' ಎಂಬ ನಾಣ್ಣುಡಿಯಂತೆ ರಂಗೂನು ಅಕ್ಕಿಯ ಸೇರಿಗೆ ರೂ. ೦—೨—೩ ಮತ್ತು ಊರಕ್ಕಿ ಮುಡಿಗೆ ರೂ. ೭||| ಇತ್ತು. "ಅನಲಕ್ಕೆ ಘೃತಾಹುತಿ ಮಾಡಿದಾಗ ಯಜ್ಞೇಶ್ವರನ ಕಣ್ಣುಗಳು ಇನ್ನೂ ಕೆಂಪಾಗುವಂತೆ" ರಂಗೂನು ಅಕ್ಕಿಯ ಊರಕ್ಕಿಯ ದರವನ್ನು ಕಡಿಮೆ ಮಾಡುವುದರ ಬದಲಿಗೆ ಇನ್ನೂ ಹೆಚ್ಚಿಸಿತು.

ಸದರಿ ತಿಂಗಳ ೨೩ನೇ ಶನಿವಾರ ದಿನ ಕೂಡಿದ ಸಂತೆಯಲ್ಲಂತೂ, ರಂಗೂನು ಅಕ್ಕಿಯು ಮುಗಿದು ಹೋಗಿ, ಊರಕ್ಕಿಯ ದರವು ರೂ. ೮—೧೨—೦ಕ್ಕೆ ಏರಿದ್ದನ್ನು ನಮ್ಮಂತೆಯೇ ಬಡವರಾದವರೂ, ತಿಂಗಳೊಂದರ ರೂಪಾಯಿ ೫, ೬, ೮ ಅಥವಾ ೧೦ ತಲಪಿನ ನೌಕರರೂ ಹೇಗೆ ತಮ್ಮ ಕಿವಿಗಳಿಂದ ಕೇಳುವರು? ತಮ್ಮ ಉದರ ಭರಣವನ್ನು ಹೇಗೆ ಮಾಡಿಕೊಳ್ಳುವರು?

ದಕ್ಷಿಣಕನ್ನಡ ಜಿಲ್ಲೆಯ ಇತರ ತಾಲೋಕುಗಳ ಅಕ್ಕಿಯ ಧಾರಣೆಗೂ ಕುಂದಾಪುರ ತಾಲೋಕಿನ ಅಕ್ಕಿಯ ಧಾರಣೆಗೂ ಅಂತರವನ್ನು ನೋಡುವುದಾದರೆ, ಕುಂದಾಪುರ ತಾಲೋಕಿನ ಬಡಜನರಷ್ಟು ದುರಾದೃಷ್ಟರು ಬೇರೆ ಯಾವ ತಾಲೋಕಿನಲ್ಲಿಯೂ ಇಲ್ಲವೆಂಬುದು ವ್ಯಕ್ತವಾಗುವುದು.

ಧರ್ಮಿಷ್ಟರೂ ಮಾತ್ರವಲ್ಲದೆ ಐಶ್ವರ್ಯವಂತರೂ ಆದ ಕೆಲವು ಮಹನೀಯರು ಇದನ್ನೆಲ್ಲಾ ಯೋಚಿಸಿಕೊಂಡು ತಮ್ಮ ಯಥಾನುಶಕ್ತಿಯಿಂದ ದಿನಕ್ಕೊಂದು ಸಲ ಗಂಜಿಯನ್ನು ಮಾಡಿಸಿ ಆದರೂ ಬಡಬಗ್ಗರಲ್ಲಿ ತಮ್ಮ ಉದಾರ ಹಸ್ತದಿಂದ ಮುಂದರಿದಿರುವರು. ಇದು ಅಲ್ಪ ಸ್ವಲ್ಪ ಕಡೆಗಳಲ್ಲಿ ಮಾತ್ರ ಇರುತ್ತ ಈ ಧರ್ಮವೂ ಇಲ್ಲದ ಹಳ್ಳಿಗಳ ಬಡಜನರ ಪಾಡನ್ನು ಏನೆಂತ ಹೇಳಲಿ!

ಕಳೆದ ವರುಷ ಬೆಳೆಯು ಕಮ್ಮಿಯಾಗಿದ್ದರೂ ವಿಕಾರಿ ಸಂವತ್ಸರದಷ್ಟು ಅಲ್ಪವಾಗಲಿಲ್ಲ. ಆದರೂ ವಿಕಾರಿ ಸಂವತ್ಸರದ ಬೆಳೆಯನ್ನೂ, ಅಕ್ಕಿಯ ಧಾರಣೆಯನ್ನೂ, ಈ ಸಂವತ್ಸರದ ಬೆಳೆಯನ್ನೂ ಧಾರಣೆಯನ್ನೂ ಸರಿಹೋಲಿಸಿದ್ದಾದರೆ ವಿಕಾರಿ ಸಂವತ್ಸರದಲ್ಲಿ ದರವು ಇಷ್ಟು ಜಾಸ್ತಿಯಾಗಲಿಲ್ಲ.

ಧಾರಣೆಯು ಹೆಚ್ಚಾಗುವುದಕ್ಕೆ ಅಕ್ಕಿಯೇ ನಮ್ಮ ತಾಲೂಕಿನಲ್ಲಿಲ್ಲವೋ? ಅಕ್ಕಿಯು ಸಾಕಷ್ಟು ಇದೆ ಎಂದೇ ಹೇಳಬೇಕು. ಆದರೆ 'ಮುಪ್ಪಿನಲ್ಲೊಗದ ಸುತನಿಂದಲೂ' 'ಉಣದಿರುವಾಗ ಒದಗಿರದ ಧನದಿಂದಲೂ' 'ಪೈರಿಗೆ ಯೋಗ್ಯವಾದ ಕಾಲದಲ್ಲಿ ಬಾರದೆ ನಂತರ ಬಂದ ಮಳೆಯಿಂದಲೂ' ಎಷ್ಟು ಉಪಯೋಗವೋ, ನಮ್ಮೂರಲ್ಲಿ ಇದ್ದ ಅಕ್ಕಿಯಿಂದ ಬಡವರಿಗೆ ಅಷ್ಟೇ ಪ್ರಯೋಜನವು.

ಹಳ್ಳಿಯ ಬಡವರಿಗೆ ಪ್ರಾಣದಾಯಕವಾಗಿದ್ದ ಅಕ್ಕಿಯ ಕುತ್ತಾಟಗಳು ಹಳ್ಳಿಯಲ್ಲಿಯೆ ಇರುವ ಬಡವರಿಗೆ ಪಟ್ಟಣದಲ್ಲಿ ತಲೆದೋರಿರುವುವು. ಕುತ್ತಾಟಗಳನ್ನಿಟ್ಟಿದ್ದ ಗೃಹಸ್ಥರು ಹಿಂದು ಸಂಪ್ರತಿ ಅಕ್ಕಿಯನ್ನು ಹಳ್ಳಿಯ ಬಡವರಿಗೆ ಒಂದಕ್ಕೆ ಒಂದುವರೆಯ ದರದಲ್ಲಿ 'ಕಡ ಧಾರಣೆಯೆಂದು' ಕೊಟ್ಟು, ಅವರಿಂದ ಸಂದರ್ಭಾನುಸಾರ ಸ್ವಲ್ಪ ಸ್ವಲ್ಪ ಹಣವನ್ನು ವಸೂಲು ಮಾಡಿ, ತಮಗೆ ಬಾಹಾದ ಐವಜನ್ನು ಬಹಳ ಕಷ್ಟದಿಂದಲೂ, ಕೆಲವು ವೇಳೆ ನಷ್ಟದಿಂದಲೂ ಪಡೆಯುತ್ತಿದ್ದರು.

ಹೀಗೆ ಮಾಡುವುದರಿಂದ ತಮಗೆ ಏಕಗಂಟಿನಲ್ಲಿ ಹಣವು ಸಿಕ್ಕುವುದಿಲ್ಲವೆಂಬೊಂದೇ ಆಲೋಚನೆಯನ್ನು ಮಾಡಿಕೊಂಡರಲ್ಲದೆ, ಬಡವರ ಭವಿಷ್ಯವನ್ನು ಎಣಿಸದೆ, ಎಲ್ಲಾ ಅಕ್ಕಿಯನ್ನು ಬೇರೆಯವರಿಗೆ ಕೊಟ್ಟುಬಿಟ್ಟರು. ಅಕ್ಕಿ ಧಾರಣೆ ಏರಲಿಕ್ಕೆ ಇವರೇ ಮೊದಲನೆಯ ಕಾರಣಭೂತರಾಗಿರುವರು.

ಈ ಅಕ್ಕಿ ಸಾಟಿಗಾರರು ಆಸ್‌ಪಾಸ್ ಇರುವ ಪೂರ್ತಿ ಅಕ್ಕಿಯನ್ನು ಸಾಟಿಮಾಡಿಕೊಂಡು, ಮನಸ್ವಿಯಾಗಿ ಅಕ್ಕಿ ಮಾರಾಟ ಮಾಡಲಿಕ್ಕೆ ತೊಡಗಿ, ಧಾರಣೆ ಜಾಸ್ತಿಯಾಗಲು, ಎರಡನೇಯದಾಗಿ ಕಾರಣಭೂತರು ಎಂದು ನೆನೆಸಬೇಕು. ಇವರು ತಮ್ಮ ಹಣದ ರಾಶಿಯನ್ನು ದಿನೇ ದಿನೇ ವೃದ್ಧಿಸುವ ಅಪೇಕ್ಷೆಯಿಂದ ಅಕ್ಕಿ ಧಾರಣೆಯನ್ನು ಸಂದರ್ಭ ಸಿಕ್ಕಿದರೆ ಇನ್ನೂ ಏರಿಸುವುದರಲ್ಲಿಯೇ ಮನವಿಟ್ಟಿದ್ದರಲ್ಲದೆ ಬಡವರ ಸಂಕಷ್ಟಗಳ ಕಡೆಗೆ ದೃಷ್ಟಿ ಇಡಲೇ ಇಲ್ಲ. ಇವರಲ್ಲವೇ ನಿಜವಾದ ಸ್ವದೇಶವಾತ್ಸಲರು! ಬಡಬಗ್ಗರನ್ನುದ್ಧರಿಸುವಂಥವರು!

ತಾ. ೨೭—೯—೧೬ರಲ್ಲು ಇನ್ನೊಮ್ಮೆ ರಂಗೂನು ಅಕ್ಕಿಯು ಗಂಗೊಳ್ಳಿಯ ಬಂದರವನ್ನು ಪ್ರವೇಶಿಸಿದುದರಿಂದ 'ಉಪವಾಸ ಬಿದ್ದು ಮೃತ್ಯುವನ್ನು ಎದುರು ನೋಡುತ್ತಿರುವವರಿಗೆ ಉದಕವನ್ನು ಕೊಟ್ಟಂತೆಯೂ, ಕೊಚ್ಚಿಕೊಂಡು ಹೋಗುವ ನೀರಿನ ಪ್ರವಾಹದಲ್ಲಿ ಮುಣುಗಿ ಸಾಯುವವನಿಗೆ ಆಧಾರಕ್ಕಾಗಿ ಸಣ್ಣ ಗಿಡದ ಕೊಂಬೆ ಸಿಕ್ಕಿದಂತೆಯೂ, ಸಾಹಾಯವಾಗಿರುವುದು.

ಆದುದರಿಂದ ಕಾಲಕ್ಕೊದಗಿದ ಹುಲ್ಲೇ ಪರ್ವತ ಸಮಾನವಾದುದೆಂದು ಭಾವಿಸಿ ದುರ್ಲಭವಾದ ಕಾಲಕ್ಕೆ ಬಂದೊದಗಿದ ರಂಗೂನು ಅಕ್ಕಿಯೇ ನಿನಗೆ ಸಹಸ್ರ ಪ್ರಣಾಮಗಳನ್ನರ್ಪಿಸುವೆನು.

ಜಾಸ್ತಿ ವರುಷದ ಅಕ್ಕಿಧಾರಣೆಯನ್ನು ನೋಡಿ ಹಳ್ಳಿಯ ಕುತ್ತಾಟಗಳನ್ನಿಟ್ಟಿದ್ದ ಮಹನೀಯರಿಗೆ ಜಗದ್ರಕ್ಷಕನು ಇನ್ನು ಮೇಲಾದರೂ ಸುಬುದ್ಧಿಯನ್ನೀಯಲಿ ಎಂದು ಸದಾ ಪ್ರಾರ್ಥಿಸುವ,

ಹಳ್ಳಿಯ ಬಡ ನಿವಾಸಿಕ-

ಯೂರೋಪದ ಮಹಾ ಯುದ್ಧ.

ಈ ವಾರದಲ್ಲಿ ನಡೆದ ಕದನಗಳಲ್ಲಿ ಮುಖ್ಯವಾಗಿ ಬಾಲ್ಕನ್ ಸಂಸ್ಥಾನಗಳಲ್ಲಿ ನಡೆದ ಕದನಗಳ ಕಡೆಗೆ ಲಕ್ಷ್ಯಕೊಡಬೇಕಾಗಿದೆ. ಇಲ್ಲಿ ಈ ವಾರ ನಡೆದ ಕದನಗಳಿಂದ ಯುದ್ಧವು ಬೇಗನೇ ಕೊನೆಗಾಣುವದು ಎಂತ ಹೇಳಲಾಗುವದಿಲ್ಲವಾದರೂ ಶತ್ರುಗಳಿಗೆ ದೊಡ್ಡ ಪೆಟ್ಟಾಗಿರುವದೆಂತ ಧಾರಾಳವಾಗಿ ಹೇಳಬಹುದು. ಕಳೆದ ವರ್ಷ ಶತ್ರುಗಳು ರುಶ್ಯದಲ್ಲಿ ಮತ್ತು ಸರ್ವಿಯಾದಲ್ಲಿ ಮಾಡಿದ ಕದನಗಳಲ್ಲಿ ತಮ್ಮ ಉದ್ದೇಶಗಳನ್ನು ಸಾಧಿಸಿಕೊಂಡರು, ಇದರಿಂದ ಶತ್ರುಗಳಿಗೆ ಟರ್ಕಿಗೆ ಸುಲಭವಾಗಿ ಹೋಗಿ ಬರಲು ದಾರಿ ತೆರೆದುಕೊಟ್ಟಂತಾಯಿತು. ಮಿತ್ರರು ಗಲಿಪೊಲಿಯದ ಮೇಲೆ ಅಭಿಯೋಗ ಮಾಡುವದನ್ನು ಬಿಟ್ಟು ಹಿಂದೆ ಬರಲಿಕ್ಕೂ ಮೆಸಪಟೊಮಿಯದಲ್ಲಿ ಅಪಜಯ ಹೊಂದಲಿಕ್ಕೂ ಇದೇ ಪ್ರಾಮುಖ್ಯ ಕಾರಣ. ಕಳೆದ ವರ್ಷ ಶತ್ರುಗಳು ಈ ಛಳಿಗಾಲದಲ್ಲಿ ಸರ್ವಿಯನರನ್ನು ಹತಬಡೆಯುವ ಉದ್ದೇಶವನ್ನು ಇಟ್ಟುಕೊಂಡ ಹಾಗೆಯೇ ಈ ವರ್ಷ ರುಮೇನಿಯನರನ್ನು ಹತಬಡಿಯುವ ಉದ್ದೇಶದಿಂದಿರುವರು. ಆದರೆ ಕಳೆದ ವರ್ಷ ಸರ್ವಿಯನರಿಗೆ ಬಂದೊದಗಿದ ಅವಸ್ಥೆಯು ಈ ವರ್ಷ ರುಮೇನಿಯನರಿಗೆ ಆಗುವ ಹಾಗೆ ಇಲ್ಲವೆಂತ ಖಂಡಿತವಾಗಿ ಹೇಳಬಹುದಾಗಿದೆ. ಬ್ರಿಟಿಷ ಪ್ರಧಾನ ಮಂತ್ರಿಯಾಗಿರುವ ಅಸ್ಕ್ವಿತರವರು ಕೂಡಾ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಸರ್ವಿಯನರಿಗೂ ಬೆಲ್ಜಿಯನರಿಗೂ ಶತ್ರುಗಳಿಂದ ಉಂಟಾದ ಅವಸ್ಥೆಯು ರುಮೇನಿಯಕ್ಕೆ ಬರುವಹಾಗಿಲ್ಲ ಎಂತ ಖಂಡಿತವಾಗಿ ಹೇಳಿರುತ್ತಾರೆ. ಅದಲ್ಲದೆ ಕಳೆದ ವರ್ಷದ ಸ್ಥಿತಿಗೂ ಈ ವರ್ಷದ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಶತ್ರುಗಳು ಕಳೆದ ವರ್ಷ ಸರ್ವಿಯನರನ್ನು ಮೂರು ಕಡೆಯಿಂದ ಮುತ್ತಿದ್ದರು. ಸರ್ವಿಯನರ ಸೇನೆಗಿಂತ ಶತ್ರುಗಳ ಸೇನೆಯು ಮೂರಷ್ಟು ಹೆಚ್ಚಿಗೆ ಇತ್ತು. ಮಿತ್ರರಾಷ್ಟ್ರಗಳವರಿಗೆ ಸರ್ವಿಯನರಿಗೆ ಸಹಾಯಮಾಡುವ ಬಗೆಯೇ ಇದ್ದಿಲ್ಲ. ಆ ಸಮಯದಲ್ಲಿ ರುಶ್ಯನರಿಗೆ ಶತ್ರುಗಳಿಂದ ದೊಡ್ಡ ಪೆಟ್ಟು ಬಿದ್ದುದರಿಂದ ರುಶ್ಯಕ್ಕೆ ಕೈತುಂಬಾ ಕೆಲಸಗಳಿದ್ದವು. ಬ್ರಿಟಿಷರಿಗೆ ಆಯುಧಸಾಮಾಗ್ರಿಗಳಿಲ್ಲದೆ ತೊಂದರೆಗಳಿದ್ದವು. ಗ್ರೀಸ ದೇಶದವರಾದರೂ ಸರ್ವಿಯನರಿಗೆ ಸಹಾಯ ಮಾಡಬಹುದಿತ್ತು. ಆದರೆ ಅದು ಜರ್ಮನರ ಹಿಡಿಯೊಳಗೆ ಸಿಕ್ಕಿಹೋಗಿತ್ತು. ರುಮೇನಿಯವು ತಟಸ್ಥವಾಗಿತ್ತು. ಇಟಲಿಯನರು ಗೊರಿಜ್ಜದಲ್ಲಿ ಆಗ ತಾನೇ ದೊಡ್ಡ ಅಪಜಯವನ್ನು ಪಡೆದಿದ್ದರು. ಫ್ರೆಂಚರೂ ಬ್ರಿಟಿಷರೂ ಸರ್ವಿಯನರಿಗೆ ಆದಷ್ಟು ಸಹಾಯ ಮಾಡಲು ಪ್ರಯತ್ನಿಸಿದ್ದರು. ಆದರೆ ಆ ಸಮಯಕ್ಕೆ ಫ್ರೆಂಚರೂ ಬ್ರಿಟಿಷರೂ ಸರ್ವಿಯಕ್ಕೆ ಬಹಳ ದೂರದಲ್ಲಿದ್ದುದರಿಂದ ಈ ಕಾರ್ಯವು ಸಾಧ್ಯವಾಗಲಿಲ್ಲ. ಈಗಲಾದರೋ ಪರಿಣಾಮವು ಪೂರಾ ಬದಲಾಗಿಯದೆ. ಮಿತ್ರರು ವಿಶೇಷ ಸಮರ್ಥರಾಗಿರುತ್ತಾರೆ. ರುಶ್ಯನರು ಆಶ್ಚರ್ಯಕರವಾದ ರೀತಿಯಲ್ಲಿ ಪುನಃ ಬಲಹೊಂದಿ ಶತ್ರುಗಳಿಗೆ ತಡೆಯಲಾಗದ ಹೊಡತವನ್ನು ಕೊಟ್ಟಿರುತ್ತಾರೆ. ಶತ್ರುಗಳು ಈ ವರ್ಷ ನುಗ್ಗಿ ಬಂದ ಕಡೆಗಳಲ್ಲೆಲ್ಲಾ ಸೋತುಹೋಗುತ್ತಿದ್ದಾರೆ. ಬ್ರಿಟಿಷರಿಗೆ ಹೇರಳವಾದ ಯುದ್ಧಸಾಮಾಗ್ರಿಯನ್ನು ಒದಗಿಸಿಕೊಂಡಿದ್ದಾರೆ. ಶತ್ರುಗಳ ಅಪಾರವಾದ ಸೇನೆಯು ವೆರ್ಡನಿನಲ್ಲಿ ಸೋತುಹೋಗಿರುವದು. ಸೊಮ್ಮೆಯಲ್ಲಿ ಇನ್ನೂ ಘೋರಕಾಳಗವು ನಡೆಯುತ್ತಿದೆ. ಶತ್ರುಗಳು ಇಲ್ಲಿ ತಮ್ಮ ನೆಲೆಗಳನ್ನು ಕಾಪಾಡಿಕೊಳ್ಳಲು ಅಶಕ್ತರಾಗಿದ್ದಾರೆ. ಇಟಲಿಯನರು ತಮ್ಮ ರಣರಂಗದಲ್ಲೆಲ್ಲಾ ಜಯಪ್ರದರಾಗುತ್ತಿರುವರು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಶತ್ರುಗಳು ಈಗ ಎದೆಗುಂದಿದವರಾಗಿರುವರು. ಹೀಗೆ ಶತ್ರುಗಳು ರುಮೇನಿಯದ ಮೇಲೆ ತಮ್ಮ ಪೂರಾ ಬಲವನ್ನು ತಂದೊಡ್ಡಲು ಅಸಮರ್ಥರಾಗಿದ್ದಾರೆ. ರುಮೇನಿಯರಿಗೆ ೪೦,೦೦೦ ಸೇನಾಬಲವಿದೆ. ಅದಲ್ಲದೆ ರುಶ್ಯನರ ಸೇನೆಯು ಸಹಾಯವಾಗಿ ರುಮೇನಿಯಕ್ಕೆ ಸೇರಿಕೊಂಡಿದೆ. ರುಮೇನಿಯರ ಸೇನಿಕರು ಡೆನ್ಯೂಬು, ಟ್ರಾನ್ಸಿಲವಾನಿಯ ಮತ್ತು ಡೊಬ್ರುಡ್ಜದಲ್ಲಿ ಯುದ್ಧಕೊಡುತ್ತಿದ್ದಾರೆ. ರುಮೇನಿಯನರು ಪ್ರಥಮತಾ ಟ್ರಾನ್ಸಿಲವಾನಿಯದಲ್ಲಿ ಯುದ್ಧಮಾಡಲು ಪ್ರಾರಂಭಿಸಿದರು. ~~ಇದು ಪರ್ವತ ಪ್ರದೇಶ, ಬೇಕಾದ ದಾರಿಗಳು ಈ ಪ್ರಾಂತ್ಯದಲ್ಲಿಲ್ಲ.~~ ಇಲ್ಲಿಯ ಕೆಲವು ಕಣಿವೆ ದಾರಿಗಳನ್ನು ಹಿಡಿದು, ಡೆನ್ಯೂಬು ನದಿಯನ್ನು ದಾಟಿ, ಡೊಬ್ರುಡ್ಜದ ಮಾರ್ಗವಾಗಿ ಬಲ್ಗೇರಿಯಕ್ಕೆ ನುಗ್ಗಬೇಕೆಂದು ರುಮೇನಿಯನರು ಇಲ್ಲಿ ಬಹುಶ್ಯಾ ಯುದ್ಧ ತೊಡಗಿರಬಹುದು. ಆದರೆ ಮೇಲೆ ಹೇಳಿದಂತೆ ಈ ಪ್ರದೇಶವು ಪರ್ವತಮಯವಾದುದರಿಂದ ರುಮೇನಿಯನರು ಈಗ ದಕ್ಷಿಣ ಟ್ರಾನ್ಸಿಲವಾನಿಯದಿಂದ ಹಿಂದೆ ಸರಿದಿರುತ್ತಾರೆ. ಈಗ ಈ ರಣರಂಗದ ಸ್ಥಿತಿಯು ಬಹುಶ್ಯಾ ಹೀಗೆ ಇದೆ:— ರುಮೇನಿಯನರು ಹಂಗೇರಿಯದ ಮೇರೆಯಲ್ಲಿ ಸೇನೆಯನ್ನು ಒಟ್ಟುಹಾಕುವದನ್ನು ಬಿಟ್ಟು ಬಲ್ಗೇರಿಯದ ಮೇಲೆ ಯುದ್ಧ ಮಾಡಬೇಕೆಂತ ಹವಣಿಸುತ್ತಿದ್ದಾರೆ. ಶತ್ರುಗಳಿಗೆ ಡೆನ್ಯೂಬು ನದಿಯ ಒಂದು ದ್ವೀಪವು ಸ್ವಾಧೀನವಾಗಿದ್ದುದರಿಂದ ಡೆನ್ಯೂಬು ನದಿಯನ್ನು ದಾಟಿ ಮುಂದರಿಯಲು ಅವರಿಗೆ ಸಹಾಯ್ಯವಾದೀತೆಂತ ಅವರು ಹೇಳುತ್ತಿದ್ದಾರೆ. ಆದರೆ ಡೆನ್ಯೂಬಿನ ಉತ್ತರ ಪ್ರದೇಶವು ಬಹಳ ಜವುಗು ಪ್ರದೇಶವಾದುದರಿಂದ ಶತ್ರುಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಿಲ್ಲವಾಗಿದೆ. ಈಗ ಈ ರಣರಂಗದಲ್ಲಿ ಪ್ರಾಮುಖ್ಯಸ್ಥಾನವು ಡೊಬ್ರುಡ್ಜ. ಆದರೆ ಡೊಬ್ರುಡ್ಜದಲ್ಲಿ ರುಮೇನಿಯನರು ಜಯಪ್ರದರಾಗಬೇಕಾದರೆ ಸಲೋನಿಕದಲ್ಲಿರುವ ಮಿತ್ರಸೇನಿಕರ ಸಹಾಯ್ಯವಿಲ್ಲದೆ ಸಾಧ್ಯವಾಗದು. ಮಿತ್ರರು ಈ ರಣರಂಗದಲ್ಲಿ ಈಗ ಮುಂದರಿದು ಮೊನಾಸ್ಟಿರಿಗೆ ೮—೯ ಮೈಲು ದೂರದಲ್ಲಿರುವರು. ಬಲ್ಗೇರಿಯಕ್ಕೆ ನುಗ್ಗಲು ಮಿತ್ರರಿಗೆ ಇದೇ ದಾರಿ. ಮಿತ್ರರು ಹೀಗೆ ಮುಂದೊತ್ತಿ ಬಲ್ಗೇರಿಯವನ್ನು ನುಗ್ಗಿದರೆ ರುಮೇನಿಯನರು ಬಲ್ಗೇರಿಯನರನ್ನು ಆ ಕಡೆ ಸೋಲಿಸುವದಕ್ಕೆ ಸುಲಭವಾಗುವದು. ಹೀಗೆ ೧೯೧೬ನೇ ಇಸವಿಯ ಅಂತ್ಯದೊಳಗೆ ಮಿತ್ರರಿಗೆ ಮಹಾ ಜಯವಾಗುವದರಲ್ಲಿ ಸಂದೇಹವಿಲ್ಲ.

ಪಶ್ಚಿಮ ರಣರಂಗ.

ಈ ರಣರಂಗದಲ್ಲಿ ಬ್ರಿಟಿಷರು ಅಲ್ಲಲ್ಲಿ ನುಗ್ಗಿಹೋಗಿ ಶತ್ರುಗಳ ಕಂದಕಗಳನ್ನೂ ಸೇನಿಕರನ್ನೂ ಕೆರೆಹಿಡಿಯುತ್ತಿದ್ದಾರೆ. ಅರ್‍ರಾಸಿನಲ್ಲಿ ಬ್ರಿಟಿಷರು ಒಂದು ಠಾಣೆಕವನ್ನು ನುಗ್ಗಿ ೨೦೦ ಶತ್ರು ಸೇನಿಕರನ್ನು ಕೆರೆಹಿಡಿದಿರುವರು. ಗಿವೆಂಚಿಯ ದಕ್ಷಿಣದಲ್ಲಿರುವ ಕಂದಕಗಳನ್ನೂ ಶತ್ರುಗಳು ನುಗ್ಗಿ ಶತ್ರುಗಳಿಗೆ ವಿಶೇಷ ನಷ್ಟಪಡಿಸಿರುವರು. ಆಂಕ್ರೆಯ ದಕ್ಷಿಣ ಪ್ರದೇಶದಲ್ಲಿ ಬ್ರಿಟಿಷರು ಮಾಡಿಕೊಂಡ ಹೊಸ ನೆಲೆಯ ಬಳಿ ಶತ್ರುಗಳ ೨೬೩ ಸೇನಿಕರು ಬ್ರಿಟಿಷರ ಕೆರೆಬಿದ್ದಿರುತ್ತಾರೆ.

ಸೊಮ್ಮೆಯ ಉತ್ತರದಲ್ಲಿ ಕಠಿಣ ತೋಪುಕಾಳಗವು ನಡಿಯುತ್ತಿದೆ. ಅಬ್ಲೆನ್‌ಕೋರ್ಟು ಮತ್ತು ಚಾಲ್ನೆಸ್ ಅರಣ್ಯದ ಬಳಿ ೧೨೫೦ ಶತ್ರುಸೇನಿಕರು ಫ್ರೆಂಚರ ಸೆರೆಬಿದ್ದಿರುವರು. ಸೊಮ್ಮೆಯ ದಕ್ಷಿಣದಲ್ಲಿ ೧೬೦೨ ಶತ್ರುಸೇನಿಕರು ಸೆರೆಬಿದ್ದಿರುತ್ತಾರೆ.

ಬ್ರಿಟಿಷ ಪ್ರಧಾನ ಮಂತ್ರಿಯಾಗಿರುವ ಮಿ। ಅಸ್ಕ್ವಿತರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹೇಳಿದ ಮಾತುಗಳಿಂದ ಮಿತ್ರರಿಗೆ ಉಂಟಾಗುತ್ತಿರುವ ಜಯದ ಮಹತ್ವವು ತಿಳಿದುಬರುತ್ತಿದೆ. ಸೊಮ್ಮೆಯಲ್ಲಿ ಬ್ರಿಟಿಷರು ೯ ಮೈಲು ರಣರಂಗದಲ್ಲಿ ೭ ಮೈಲು ಮುಂದರಿದಿರುತ್ತಾರೆ. ಗೆದ್ದುಕೊಂಡ ಎಲ್ಲಾ ಸ್ಥಳಗಳನ್ನು ಬ್ರಿಟಿಷರು ಕಾಪಾಡಿಕೊಂಡಿರುತ್ತಾರೆ. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು. ವೆರ್ಡನಿನ ಮೇಲೆ ಅಭಿಯೋಗಮಾಡುವ ಕೆಲಸವನ್ನು ಶತ್ರುಗಳು ನಿಲ್ಲಿಸಿರುತ್ತಾರೆ. ಮಿತ್ರರಿಗೆ ಸೊಮ್ಮೆಯಲ್ಲಿ ಒಟ್ಟಿಗೆ ೬೦,೪೬೪ ಶತ್ರುಸೇನಿಕರೂ ೩೭೪ ಫಿರಂಗಿಗಳೂ ೧೦೩೦ ಯಂತ್ರಚಾಲಿತ ಫಿರಂಗಿಗಳೂ ದೊರಕಿರುತ್ತವೆ. ಬ್ರಿಟಿಷರು ವೈಪ್ರೆಸ್ ಮತ್ತು ಆರ್ಮೆಂಟಿಯರ್ಸಿನಲ್ಲಿ ಶತ್ರುಗಳ ಮೇಲೆ ನುಗ್ಗಿಹೋಗಿ ಶತ್ರು ಸೇನೆಯಲ್ಲಿ ವಿಶೇಷ ನಷ್ಟಪಡಿಸಿರುವರು. ವಾಯುನಾವೆಗಳ ಕದನಗಳೂ ಭೀಕರವಾಗಿ ನಡೆಯುತ್ತಿವೆ. ಬ್ರಿಟಿಷರು ಪುನಃ ನುಗ್ಗಿಹೋಗಿ ಕದನಮಾಡಲು ಪ್ರಾರಂಭಿಸಿದ್ದಾರೆ.

ಪೂರ್ವ ರಣರಂಗ.

ಈ ರಣರಂಗದಿಂದ ಈ ವಾರದಲ್ಲಿ ವಿಶೇಷ ವರ್ತಮಾನಗಳು ಬಂದಿರುವದಿಲ್ಲ.

ಬಾಲ್ಕಾನ್.

ಜರ್ಮನರೂ ಆಸ್ಟ್ರಿಯನರೂ ಡೆನ್ಯೂಬ್ ನದಿಯ ಒಂದು ದ್ವೀಪವನ್ನು ಹಿಡಿದಿರುವರು ಎಂತ ಜರ್ಮನರು ಪ್ರಕಟಿಸಿರುತ್ತಾರೆ.

ಬ್ರಾಸೋ ಡಿಸ್ಟ್ರಿಕ್ಟಿನಲ್ಲಿದ್ದ ರುಮೇನಿಯನರು ನಿರ್ವಾಹವಿಲ್ಲದೆ ಕರ್‌ಪಥೇನಿಯನ್ ಕಣಿವೆಗಳ ಉತ್ತರ ಕಡೆಗೆ ಸರಿದಿರುವರು ಎಂಬ ವಾರ್ತೆ ಬಂದದೆ. ಶತ್ರುಗಳು ಟ್ರಾನ್ಸಿಲವಾನಿಯದಲ್ಲಿ ಹಲವು ಕಡೆಗಳಿಂದ ಹಲ್ಲೆಮಾಡುತ್ತಿದ್ದಾರೆ. ಕಾರ್ಪೇನಿ ಮತ್ತು ~~ವಲ್ಕಾನ್ ಕಣಿವೆಗಳ ಪ್ರಾಂತ್ಯದಲ್ಲಿ ಹಲ್ಲೆಮಾಡಿದ ಶತ್ರುಗಳನ್ನು~~ ರುಮೇನಿಯನರು ಓಡಿಸಿರುತ್ತಾರೆ. ರುಮೇನಿಯನರು ವಿಡಿನ್ ಎಂಬ ಸ್ಥಳದ ಮೇಲೆ ಗುಂಡುಹಾರಿಸ ಪ್ರಾರಂಭಿಸಿರುವರು. ಬ್ರಾಸೊ ಪ್ರಾಂತ್ಯದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಮುಂದರಿಯುತ್ತಿರುವ ಆಸ್ಟ್ರಿಯನರನ್ನು ರುಮೇನಿಯನರು ತಡೆದಿರುವರು. ಡೊಬ್ರುಡ್ಜದಲ್ಲಿ ವಿಶೇಷ ಬದಲಾವಣೆಗಳಾಗಲಿಲ್ಲ.

ಬ್ರಿಟಿಷರು ಸಿರಸಿಗೆ ೪ ಮೈಲು ಪೂರ್ವದಲ್ಲಿರುವ ಕಲೇಂದ್ರವನ್ನು ಹಿಡಿದಿರುತ್ತಾರೆ. ಡ್ಯೊರಾನ್ ರಣರಂಗದಲ್ಲಿರುವ ಶತ್ರುಗಳ ಕಂದಕಗಳ ಮೇಲೆ ಬ್ರಿಟಿಷರು ಗುಂಡು ಹಾರಿಸುತ್ತಲಿದ್ದಾರೆ. ಬ್ರಿಟಿಷರು ಕಲೇಂದ್ರವನ್ನು ಗೆದ್ದುಕೊಂಡದ್ದರಿಂದ ಡೆಮಿರ್‌ಹಿಸಾರ್ ಸೆರೆಸ್ ರೈಲ್ವೇ ಲೈನು ಬಲ್ಗೇರಿಯನರ ಕೈತಪ್ಪಿದಹಾಗಾಯಿತು.

ಇಟಲಿಯನರ ಸೇನೆಯು ಅಲ್ಬಾನಿಯದಲ್ಲಿ ಕೆಲವು ಪ್ರದೇಶಗಳನ್ನು ಸ್ವಾಧೀನಮಾಡಿಕೊಂಡಿರುತ್ತದೆ.

ಸೆರ್ನದಲ್ಲಿ ಸರ್ವಿಯಾನರಿಗೂ ಬಲ್ಗೇರಿಯನರಿಗೂ ಕಠಿಣ ಕಾಳಗ ನಡೆದು ೮೧೬ ಬಲ್ಗೇರಿಯನ್ ಸೇನಿಕರು ಸರ್ವಿಯಾನರ ಸೆರೆಬಿದ್ದಿರುವರು. ಫ್ರೆಂಚರ ವಾಯುನಾವೆಗಳು ಮೊನಸ್ಟಿರ್ ಮತ್ತು ಪ್ರಿಲೆಪ್‌ಗೆ ಬೊಂಬುಗಳನ್ನು ಹಾಕಿ ಹಿಂದೆರಳಿರುತ್ತವೆ.

ಮಿತ್ರರು ಇದೇ ತಾ. ೧೦ರಿಂದ ತಾ. ೧೦ರವರೆಗೆ ೨೬೧೪ ಬಲ್ಗೇರಿಯನ ಸೇನಿಕರನ್ನು ಕೆರೆಹಿಡಿದಿರುತ್ತಾರೆ. ಬಲ್ಗೇರಿಯನರು ಮೊನಸ್ಟಿರನ್ನು ಬಿಟ್ಟು ಹೋಗಿರುವರೆಂತ ಫ್ರೆಂಚ ವಾಯುನಾವಿಕರು ತಿಳಿಸಿರುತ್ತಾರೆ.

ಗ್ರೀಸ್.

ಗ್ರೀಕ್ ಮಂತ್ರಿ ಸಭೆಯು ರಾಜಿನಾಮೆ ಕೊಟ್ಟದ್ದರಿಂದ ಪ್ರೊಫೆಸರ್ ಎಂಟ್ರೊಸರವರು ಮಂತ್ರಿ ಸಭೆಯನ್ನು ರೂಪಿಸಿರುವರು.

ಎಮ್. ವೆನ್ಜೆಲೊಸರವರು ತನ್ನ ಜೊತೆ ಮಂತ್ರಿಗಳೊಡನೆ ಸಲೋನಿಕಕ್ಕೆ ಬಂದು ತಲುಪಿರುತ್ತಾರೆ.

ಗ್ರೀಕ ಪ್ರಧಾನ ಮಂತ್ರಿಯು ಗ್ರೀಸಿನ ಸ್ಥಿತಿಯು ಬಹಳ ಅವ್ಯಾವಸ್ಥೆಯಲ್ಲಿದೆಂದೂ ಮಂತ್ರಿ ಸಭೆಯು ಕೂಡಿ ರಾತ್ರಿಕಾಲವೆಲ್ಲಾ ಚರ್ಚಿಸಿದರೂ ಯಾವದೊಂದು ನಿರ್ಣಯವಾಗಲಿಲ್ಲವೆಂದೂ ಹೇಳುತ್ತಾರೆ.

ಸಲೋನಿಕದಲ್ಲಿ ರೂಪಿಸಲ್ಪಟ್ಟ ತತ್ಕಾಲಿಕ ಸರಕಾರದವರು ಜನರಲ್ ಡೆಂಜಾರ್ಕಿಸರವರನ್ನು ಯುದ್ಧ ಮಂತ್ರಿಯನ್ನಾಗಿ ಮಾಡಿಕೊಂಡಿರುತ್ತಾರೆ.

ಎಡ್ಮಿರಲ್ ಫೋರ್ನೆಟರವರು ಗ್ರೀಕ ಸರಕಾರದವರಿಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟು ಗ್ರೀಕರ ಯುದ್ಧ ನಾವೆಗಳ ಪೈಕಿ "ಎವೆರೊಫ್" "ಲೆಮೊನ್ಸ್" ಮತ್ತು "ಕುಲ್ಕಿಸ್" ಇವುಗಳ ಹೊರತು ಮಿಕ್ಕ ಎಲ್ಲಾ ನಾವೆಗಳನ್ನೂ ಪಿರಾಯಸ್ ಲುರೀಸ ರೈಲ್ವೇ ಲೈನುಗಳನ್ನೂ ತನ್ನ ಸ್ವಾಧೀನ ಕೊಡಬೇಕೆಂದೂ "ಎವೆರೊಫ್" "ಲೆಮೊನ್ಸ್" ಮತ್ತು "ಕುಲ್ಕಿಸ್" ನಾವೆಗಳಿಂದ ಆಯುಧಗಳನ್ನು ತೆಗೆಯಬೇಕೆಂದೂ ತಿಳಿಸಿರುತ್ತಾರೆ. ಗ್ರೀಕ ಸರಕಾರದವರು ಇದಕ್ಕೆ ಒಪ್ಪಿರುತ್ತಾರೆಂತ ತಿಳಿದು ಬಂದದೆ.

ಇಟಲಿ.

ಈ ರಣರಂಗದಲ್ಲಿ ಕಠಿಣ ಕಾಳಗಗಳು ನಡಿಯುತ್ತಿವೆ. ಪಾಸುಬಿಯೋ ಪರ್ವತದಲ್ಲಿ ಇಟಲಿಯನರಿಗೆ ದೊಡ್ಡ ಜಯ ಉಂಟಾಗಿರುವದು. ಕಾರ್ಸೊ ರಣರಂಗದಲ್ಲಿ ಗುಡ್ಡಗಳಿಂದ ಮುತ್ತಲ್ಪಟ್ಟ ಕೆಲವು ಪ್ರದೇಶಗಳು ಇಟಲಿಯನರ ಸ್ವಾಧೀನವಾಗಿವೆ. ೫,೦೩೪ ಸೇನಿಕರೂ ಬಹಳ ಕೊಳ್ಳೆಯೂ ಇಟಲಿಯನರ ಕೆರೆಬಿದ್ದಿರುತ್ತದೆ. ನಂತರ ಬಂದ ವಾರ್ತೆಯಿಂದ ತಿರಿಗಿ ೧೭೭೧ ಸೇನಿಕರು ಇಟಲಿಯನರ ಕೆರೆಬಿದ್ದಿರುವರೆಂದೂ ಆಗೊಸ್ತು ತಾ. ೬ರಿಂದ ಒಟ್ಟಿಗೆ ೩೦,೪೮೧ ಆಸ್ಟ್ರಿಯನರು ಇಟಲಿಯನರ ಕೆರೆಬಿದ್ದಿರುವರೆಂದೂ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನದ ವೈಸರಾಯರಾಗಿದ್ದ ಹಾರ್ಡಿಂಜ ಪ್ರಭುಗಳ ಒಂದು ಸ್ಮಾರಕವನ್ನು ಮುಂಬಾಯಲ್ಲಿ ಎರ್ಪಡಿಸುವರೆ ಮುಂಬಾಯಲ್ಲಿ ವಂತಿಗೆ ಕೂಡಿಸಿರುತ್ತಾರೆ. ಈ ವರೆಗೆ ಒಂದು ಲಕ್ಷ ರೂಪಾಯಿ ಕೂಡಿರುತ್ತದೆ. ಈ ಬಗ್ಗೆ ಇನ್ನೂ ಹೆಚ್ಚಿನ ಹಣವು ಬೇಕೆಂತ ಸದರಿ ಕಮಿಟಿಯವರು ವಿಜ್ಞಾಪಿಸಿಕೊಂಡಿರುವರು.

ಲಕ್ನೌದಲ್ಲಿ ಜರಗಲಿಕ್ಕಿರುವ ಆಲ್ ಇಂಡಿಯಾ ಮುಸ್ಲಿಮ್ ಲೀಗ್ ಸಭೆಗೆ ಬಹುಮಾನಪಟ್ಟ ಜಿನ್ನಾರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಹಿಂದೂಸ್ಥಾನದಲ್ಲಿ ೧೮೫೯-೬೦ನೇ ಇಸವಿಯಲ್ಲಿ ೭೫೧ ಛಾಪಖಾನೆಗಳು ಇದ್ದವು. ೩೨೮ ವರ್ತಮಾನ ಪತ್ರಿಕೆಗಳೂ, ೩೨೨ ಮಾಸಪತ್ರಿಕೆಗಳೂ ಪ್ರಕಟವಾಗುತ್ತಿದ್ದವು. ಆ ಇಸವಿಯಲ್ಲಿ ೫೨೩ ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿಯೂ ೪೩೪೭ ಪುಸ್ತಕಗಳು ದೇಶಿಯ ಭಾಷೆಗಳಲ್ಲಿಯೂ ಪ್ರಕಟಿಸೋಣಾಗಿದ್ದವು. ಹತ್ತು ವರ್ಷಗಳ ನಂತರ ಛಾಪಖಾನೆಗಳ ಸಂಖ್ಯೆಯು ೧೪೭೯ಕ್ಕೆ ಹೆಚ್ಚಿತು. ವರ್ತಮಾನ ಪತ್ರಿಕೆಗಳು ೭೬, ಮಾಸಪತ್ರಿಕೆಗಳು ೩೦೨, ಇಂಗ್ಲಿಷ್ ಪುಸ್ತಕಗಳು ೯೧೭, ದೇಶಭಾಷಾ ಪುಸ್ತಕಗಳು ೬,೪೭೧ ಪ್ರಕಟವಾದವು. ೧೮೯೯-೧೯೦೦ನೇ ಇಸವಿಯಲ್ಲಿ ೨೧೯೩ ಛಾಪಖಾನೆಗಳು ಅಂದರೆ ೧೮೫೯ನೇ ಇಸವಿಯಲ್ಲಿದ್ದ ಸಂಖ್ಯೆಗಿಂತ ಮೂರಷ್ಟು ಹೆಚ್ಚಿತು. ವರ್ತಮಾನ ಪತ್ರಿಕೆಗಳು ೭೨೫, ಮಾಸಪತ್ರಿಕೆಗಳು ೪೭೬, ಇಂಗ್ಲಿಷ್ ಪುಸ್ತಕಗಳು ೧೧೬೪, ದೇಶಭಾಷಾ ಪುಸ್ತಕಗಳು ೯೩೦೪ ಪ್ರಕಟವಾದವು. ೧೯೦೯-೧೦ನೇ ಇಸವಿಯಲ್ಲಿ ಛಾಪಖಾನೆಗಳ ಸಂಖ್ಯೆ ೨,೭೩೬, ವರ್ತಮಾನ ಪತ್ರಿಕೆಗಳು ೭೨೬, ಮಾಸಪತ್ರಿಕೆಗಳು ೮೨೯, ಇಂಗ್ಲಿಷ್ ಪುಸ್ತಕಗಳು ೨,೧೧೨, ದೇಶಭಾಷೆಗಳ ಪುಸ್ತಕಗಳು ೯೯೩೪ ಪ್ರಕಟಿಸಲ್ಪಟ್ಟವು. ನಾಲ್ಕು ವರ್ಷಗಳ ನಂತರ ಅಂದರೆ ೧೯೧೩-೧೪ನೇ ಇಸವಿಯಲ್ಲಿ ಛಾಪಖಾನೆಗಳ ಸಂಖ್ಯೆ ೩೦೨೦, ವರ್ತಮಾನ ಪತ್ರಿಕೆಗಳು ೮೩೨, ಮಾಸಪತ್ರಿಕೆಗಳು ೨,೮೪೮, ಇಂಗ್ಲಿಷ್ ಪುಸ್ತಗಳು ೧,೪೭೩, ದೇಶಭಾಷೆಗಳ ಪುಸ್ತಕಗಳು ೧೦,೭೧೫ ಪ್ರಕಟವಾದವು. ಈ ಸಂಖ್ಯೆಗಳಿಂದ ಹಿಂದೂಸ್ಥಾನವು ಈ ವಿಷಯದಲ್ಲಿ ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂಬುದು ಸ್ಪಷ್ಟವಾಗುತ್ತದೆ.

~~~~~

ಮುಸಲ್ಮಾನರ ಬಕ್ರಿದ್ ಹಬ್ಬದ ದಿನ ಪಾಟ್ನ ಡಿಸ್ಟ್ರಿಕ್ಟಿನಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ದಾಂದಲೆ ನಡೆದು ಪೋಲಿಸಿನವರು ಕೋವಿ ಸುಟ್ಟು ಈ ಕಲಹವನ್ನು ನಿಲ್ಲಿಸಿದರೆಂಬ ವಾರ್ತೆ ಬಂದಿರುತ್ತದೆ. ಕಾಂಚನಪುರ ಗ್ರಾಮದಲ್ಲಿ ಈ ಸಂಬಂಧ ಹಿಂದೂಗಳಿಗೂ ಮುಸಲ್ಮಾನರಿಗೂ ಇದ್ದ ದ್ವೇಷವು ತಲೆದೋರಿತೆಂಬದರಿಂದ ಈ ಮೊದಲೇ ತಕ್ಕ ಪೋಲಿಸಿನವರ ಬಂದೋಬಸ್ತು ಇಡೋಣಾಗಿತ್ತು. ಆದರೆ ಹಿಂದೂಗಳು ಪೋಲಿಸಿನವರ ಮೇಲೆ ಬಿದ್ದು ಮೆರವಣಿಗೆಯನ್ನು ತಡೆಯ ನೋಡಿದರು. ಸುಮಾರು ೪೦೦೦ ಹಿಂದೂಗಳು ಇದ್ದುದರಿಂದ ಪೋಲಿಸಿನವರು ಈ ದಾಂದಲೆಯನ್ನು ನಿಲ್ಲಿಸ ಮಾಡಿದ ಪ್ರಯತ್ನವು ಸಾರ್ಥಕವಾಗದೆ ಕಡೆಗೆ ಕೋವಿ ಸುಡಬೇಕಾಯಿತು. ಕೆಲವರಿಗೆ ಪ್ರಾಣಾಪಾಯವಾಗಿದೆ. ಜಾಡಾಪುರ ಗ್ರಾಮದಲ್ಲಿಯೂ ಇದೇ ತರದ ದಾಂದಲೆಯು ನಡೆದಿರುವದು. ಇಲ್ಲಿಯೂ ಪೋಲಿಸಿನವರು ಕೋವಿ ಸುಟ್ಟು ಕಲಹವನ್ನು ನಿಲ್ಲಿಸಿದರು.

~~~~~

ಒಕ್ಟೋಬರ ತಾ. ೭ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೫೦೭ ಮಂದಿಗೆ ಪ್ಲೇಗಬೇನೆಯು ಸೋಂಕಿ ೪೧೦೭ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್‌ನಲ್ಲಿ ೨೪೯೭, ಮದ್ರಾಸ್ ೩೯೮, ಬಿಹಾರ್ ಮತ್ತು ಒರಿಸ್ಸ ೧೩, ಸಂಯುಕ್ತ ಸಂಸ್ಥಾನ ೪೭, ಪಂಜಾಬು ೪೭, ಬರ್ಮ ೩೨, ಮಧ್ಯ ಸಂಸ್ಥಾನ ೭೭೭, ಕೊಡಗು ೧, ಮೈಸೂರು ೩೬೮, ಹೈದರಾಬಾದ್ ೫೮೯, ಮಧ್ಯಹಿಂದೂಸ್ಥಾನ ೩೮ ಮರಣಗಳಾಗಿರುವವು.

~~~~~

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಗವರ್ನರ ಪ್ರಭುಗಳವರು ಪರಿವಾರ ಸಹಿತ ಉದಕಮಂಡಲದಿಂದ ಹೊರಟು ತಾ. ೧೬ಕ್ಕೆ ಮೇಟುಪಾಳ್ಯಕ್ಕೆ ಬಂದು ಅಲ್ಲಿಂದ ಅಂದೇ ಕಲಿಕೋಟೆಗೆ ಚಿತ್ತೈಸಿದರು. ತಾ. ೧೭ರಲ್ಲು ಕಲಿಕೋಟೆಯ ಸೋಪು ಕಾರ್ಖಾನೆಯನ್ನೂ ಕಾಸೂರಿನ ಮೀನಿನ ಎಣ್ಣೆಯ ಕಾರ್ಖಾನೆಯನ್ನೂ ಸಂದರ್ಶಿಸಿರುವರು.

~~~~~

ಬಳ್ಳಾರಿಯಲ್ಲಿ ಇದೇ ತಾ. ೨೧ರಲ್ಲು ಬಳ್ಳಾರಿ ಡಿಸ್ಟ್ರಿಕ್ಟ್ ಸಭೆಯ ತೃತೀಯ ಅಧಿವೇಶನವು ಕೂಡಿಬರುವದು.

~~~~~

ಸೀಲೋನಿಗೆ ಮತ್ತು ಮಲಯಾ ಸಂಸ್ಥಾನಗಳಿಗೆ ಹಿಂದೂಸ್ಥಾನದಿಂದ ಹೋಗುವ ಕೂಲಿಯಾಳುಗಳ ಸ್ಥಿತಿಗತಿಯನ್ನು ವಿಚಾರಿಸುವರೆ ಮದ್ರಾಸ್ ಸರಕಾರದವರು ಒಬ್ಬ ಐ. ಸಿ. ಎಸ್. ಆಫೀಸರರನ್ನು ಒಬ್ಬ ಭಾರತೀಯ ಗೃಹಸ್ಥರೊಡನೆ ಕಳುಹಿಸಿಕೊಡುವರು ಎಂತ ತಿಳಿದು ಬಂದದೆ.

~~~~~

ಮೈಸೂರು ಯುನಿವರ್ಸಿಟಿಯ ಸೆನೇಟ್ ಮೀಟಿಂಗ್ ಯುನಿವರ್ಸಿಟಿ ಚೇನ್ಸಲ್ಲರಾಗಿರುವ ಮೈಸೂರು ಮಹಾರಾಜರವರ ಅಧ್ಯಕ್ಷತೆಯಲ್ಲಿ ತಾ. ೧೩ರಲ್ಲು ಕೂಡಿಬಂತು. ಈ ಸಭೆಗೆ ಹೆಚ್ಚುಕಡಿಮೆ ಎಲ್ಲಾ ಸಭಾಸದರು ಹಾಜರಿದ್ದರು. ಮೈಸೂರು ರೆಸಿಡೆಂಟರಾದ ಬಹುಮಾನಪಟ್ಟ ಮಿ। ಕೆ. ವಿ. ಕೊಬ್ ಸಿ. ಎಸ್. ಐರವರೂ, ಬಹುಮಾನಪಟ್ಟ ರೆವರೆಂಡ್ ಪಿಟ್ಪೆಂಡ್ರಿಗ್, ರೆವರೆಂಡ್ ಫಾದರ್ ಲಾಬಾರ್ಥ್, ಸರ್ ಲೆಸ್ಲಿ ಮಿಲ್ಲರ್, ಮದ್ರಾಸ್ ಯುನಿವರ್ಸಿಟಿಯ ವ್ಹೈಸ್ ಚೇನ್ಸಲ್ಲರಾದ ಸರ್. ಪಿ. ಎಸ್. ಶಿವಸ್ವಾಮಿ ಐಯ್ಯರ್ ಮೊದಲಾದವರು ಈ ಸಭೆಗೆ ಚಿತ್ತೈಸಿದ್ದರು. ಯುನಿವರ್ಸಿಟಿ ರಿಜಿಸ್ತ್ರಾರರಾದ ಮಿ। ಟಿ. ಡೆನ್‌ಹಾಮರವರು ಈ ಯುನಿವರ್ಸಿಟಿ ಸ್ಥಾಪನೆಗೆ ಸಂಬಂಧಪಟ್ಟ ರಿಪೋರ್ಟನ್ನು ಓದಿಹೇಳಿ ಈ ಯುನಿವರ್ಸಿಟಿಯಲ್ಲಿ ಓದುವ ವಿದ್ಯಾರ್ಥಿಗಳಿಗೆ ಕೆಲವು ಮಾನ್ಯರಿಂದ ಕೊಡೋಣಾಗುವ ವೇತನ ಇತ್ಯಾದಿಗಳನ್ನು ತಿಳಿಯಪಡಿಸಿದರು. ಲೇಡಿ ಕೃಷ್ಣಮೂರ್ತಿಯವರು ಸಂಸ್ಕೃತ ವಿದ್ಯಾಭ್ಯಾಸಭಿವೃದ್ಧಿ ಬಗ್ಗೆ ರೂ. ೨೦,೦೦೦; ಪೊಲಿಟಿಕಲ್ ಇಕೊನಮಿಯಲ್ಲಿ ಮೇಲಾದವರಿಗೆ ಮ। ರಾ। ಡಿ. ಎಮ್. ನರಶಿಂಗರಾಯರು ರೂ. ೭೫೦೦ ಕೊಡುವರೆ ವಾಗ್ದಾನ ಮಾಡಿದ ವಿಷಯವು ಈ ವರದಿಯಲ್ಲಿ ಸೂಚಿಸೋಣಾಗಿತ್ತು. ಯುನಿವರ್ಸಿಟಿ ಸಂಬಂಧ ಕೆಲವು ಆಲೋಚನೆಗಳು ನಡೆದು ಮೈಸೂರು ಮಹಾರಾಜರು ಕಾಲೋಚಿತ ಭಾಷಣವನ್ನು ಕೊಟ್ಟು ಸಭೆಯನ್ನು ಮುಗಿಸಿದರು.

~~~~~

ತಾ. ೧೧ರಲ್ಲು ಟ್ರಿವಂಡ್ರಮಿನಲ್ಲಿ "ಲಕ್ಷ್ಮೀ ವಿಲಾಸ" ಎಂಬ ಬಸ್ ಕಂಪೆನಿಯಲ್ಲಿ ಒಂದು ದೊಡ್ಡ ಅವಗಡವು ನಡೆದಿರುತ್ತದೆ. ನಾಗರಕೋಯಿಲಿನಿಂದ ಜನತುಂಬಿ ಬರುತ್ತಿದ್ದ ಮೋಟರ್‌ಬಸ್ಸಿನ ಬ್ರೇಕ್ ಸರಿಇಲ್ಲದ್ದರಿಂದ ಒಂದು ಕಡೆಯಲ್ಲಿ ಬಸ್ಸ್ ಕವಚಿಬಿದ್ದು ೫ ಪ್ರಯಾಣಿಕರು ತಕ್ಷಣ ಸತ್ತುಹೋದರು. ಒಬ್ಬನು ಆಸ್ಪತ್ರಿಯಲ್ಲಿ ಸತ್ತನು. ೧೧ ಪ್ರಯಾಣಿಕರಿಗೂ ಡ್ರಾಯವರನಿಗೂ ಕಠಿಣ ಜಕಂ ಆಗಿದೆ. ಗಾಯಪಟ್ಟ ಕೆಲವರು ಆಸ್ಪತ್ರಿಯಲ್ಲಿ ಮೋದಂಡ ಸ್ಥಿತಿಯಲ್ಲಿದ್ದಾರೆ ಎಂಬ ವಾರ್ತೆ ಬಂದದೆ.

~~~~~

ದಕ್ಷಿಣ ಕನ್ನಡ.

ನೋಟೀಸು.

ನನ್ನ ಗಂಡ ರಾಮಚಂದ್ರಭಟ್ಟರ ಮಗ ಈಗ ಸ್ಥಳಕೆ ಮಂಗಳೂರಿನಲ್ಲಿರುವ ಅನಂತ ಭಟ್ಟರು ಯಾನೆ ಗುಂಡಭಟ್ಟರು ನನ್ನನ್ನೂ ನನ್ನ ಗಂಡು ಮಗು ಅಪ್ರಾಯಸ್ಥ ರಾಮಚಂದ್ರನನ್ನೂ, ವಿನೋದಿ ಬಾಯಿಯನ್ನೂ ತ್ಯಜಿಸಿ ನಮಗೆ ಅನ್ನವಸ್ತ್ರ ಕೊಡದೆ ಪ್ರತ್ಯೇಕವಾಗಿ ಇರುತ್ತಾ ನಮ್ಮ ಮೇಲೆ ನಿರ್ಮೋಹಿತನಾಗಿ ನಮಗೆ ಕಷ್ಟಕೊಡುವರೆ ಅವರ ಪಿತ್ರಾರ್ಜಿತ ಬಾಬ್ತು ಮಂಗಳೂರು ಶಹರು ಗದ್ದೆಕೇರಿಯಲ್ಲಿರುವ ಸರ್ವೆ ನಂಬ್ರ 13. A. ಬಾಗ್ಯಾತು ಅದರಲ್ಲಿರುವ ಮುನ್ಸಿಪಾಲ್ ನಂಬ್ರ 35ನೇ ಮನೆ ಕೂಡಾ ಖರ್ಚುಮಾಡುವರೆ ಆಲೋಚನೆಯಲ್ಲಿ ಇರುತ್ತಾರೆ. ಅವರ ಸಾಲವು ಅವರ ಅಂಶಕ್ಕಿನೆ ತಗಲುವುದಲ್ಲದೆ ನನ್ನ ಮ್ಯಾನರ ಮಗನ ಮತ್ತು ಮಗಳ ಹಕ್ಕಿಗೂ ನನ್ನ ಅಶನಾರ್ಥದ ಹಕ್ಕಿಗೂ ಏನೂ ಭಾಧಿಸತಕ್ಕದ್ದಲ್ಲವೆಂಬದಾಗಿ ಈ ಮೂಲಕ ಸರ್ವ–ಜನರಿಗೂ ತಿಳಿಸಿರುತ್ತೇನೆ.

(ದಸ್ಕತು) G. RAMA BAI.

(ಸಾಕ್ಷಿ) MULKI P. VITTAL SHANBHOGUE.

~~~~~

ಪುತ್ತೂರು ಸಹಕಾರ ಸಂಘ.

ಈ ಸಂಘದ ಸಪ್ತಮ ವರ್ಧಂತಿ ಮಹೋತ್ಸವವು ಇದೇ ತಿಂಗಳ ತಾ. ೨೫ನೇ ಬುಧವಾರ ಮಧ್ಯಾಹ್ನ ೪ ಘಂಟೆಗೆ ನಡೆಯಿಸಲ್ಪಡುವುದು.

ಜಿಲ್ಲಾ ಕಲ್ಲೆಕ್ಟರರವರಾದ ಮಿ। ಲಯೊನಲ್ ವ್ಯಾಬರ್ಟ್ ದೊರೆಗಳು ದಯೆಯಿಟ್ಟು ಅಗ್ರಾಸನವನ್ನು ವಹಿಸಿಕೊಳ್ಳುವರಲ್ಲದೆ, ಮಂಗಳೂರಿನ ಉಪಾಧ್ಯಾಯರ ಶಾಲೆಯ ಮ। ರಾ। ಉಳ್ಳಾಲ ಮಂಗೇಶರಾವ್, ಬಿ. ಎ. ಎಲ್. ಟಿ. ಯವರು "ಶಿಕ್ಷಣಕ್ಕೆ ಸಹಕಾರದ ಬೆಂಬಲ"ವೆಂಬ ಉಪನ್ಯಾಸ ಕೊಡುವರು. ಶಾಲಾ ಹುಡುಗರು "ಸಹಕಾರದ ಮಹತ್ವ"ವೆಂಬ ಚಿಕ್ಕ ನಾಟಕವನ್ನಾಡುವರು.

ಆದುದರಿಂದ ಈ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಮೆಂಬರರು ದಯಮಾಡಿ ಬಂದು ಈ ಉತ್ಸವ ಕಾರ್ಯವನ್ನು ನೆರವೇರಿಸುವುದರಲ್ಲಿ ಸಹಕಾರಿಗಳಾಗಬೇಕಾಗಿ ನನ್ನ ವಿನಂತಿ. ಪ್ರತ್ಯಪ್ರತ್ಯೇಕ ಆಮಂತ್ರಣ ಪತ್ರಗಳನ್ನು ಕಳುಹಿಸುವರೆ ಕಷ್ಟಸಾಧ್ಯವಾದುದರಿಂದ ಈ ಮೂಲಕ ವಿಜ್ಞಾಪಿಸಿಕೊಂಡಿದ್ದೇನೆ.

ಪುತ್ತೂರು. }
ತಾ. 16-10-16. } ಬೈಂದೂರು ಆನಂದರಾವ್.
ಅಧ್ಯಕ್ಷ.

~~~~~

ಮೂಲ್ಕಿ:—ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರಾದ ಮ। ರಾ। ಯು. ಸಂಜೀವರಾವ್, ತಾಲೂಕು ಓವರ್ಸಿಯರ್ ರುಜಾರಿಯೋ, ಸೆಕೆಂಡ್ ಗ್ರೇಡ್ ಓವರ್‌ಸೀಯರ್ ಕೆ. ಶಿವರಾವ್ ಇವರು ಮೂಲ್ಕಿಗೆ ಬಂದು ವಿಜಯ ದಶಮಿ ದಿವಸ ಬೋರ್ಡಿನವರಿಂದ ಬಾಲಕ ದರ್ಜೆಗೋಸ್ಕರ ಒದಗಿಸಿದ ಹೊಸ ಕಟ್ಟೋಣವನ್ನು ಚೆಕ್ಕ್ ಮೆಜರ್ ಮಾಡಿ ಶಾಲೆಯನ್ನು ಬಿಟ್ಟುಕೊಟ್ಟರು. ಮೂಲ್ಕಿ ಬೋರ್ಡು ಶಾಲೆಯ ಹೆಡ್‌ಮಾಸ್ತರವರು ಶುಭಮುಹೂರ್ತದಲ್ಲಿ ೯ನೇ ತಾರೀಕಿನ ದಿವಸ ಬೆಳಿಗ್ಯೆ ಸದರಿ ಶಾಲೆಯ ಪ್ರವೇಶ ಮಾಡಿ ಮಕ್ಕಳಿಗೆ ಸಕ್ಕರೆ ಹಂಚೋಣಾಯಿತು. ಸಂಜೆಗೆ

ಸುಮಾರು ೫ ಗಂಟೆಗೆ ಇಲ್ಲಿಯ ಮಾನ್ಯ ಸಬ್ ರಿಜಿಸ್ತ್ರಾರರವರೂ ಸದರಿ ಶಾಲೆಯ ಎಲ್ಲಾ ಉಪಾಧ್ಯಾಯರುಗಳೂ ಕೂಡಿ ಟೀಪಾರ್ಟಿ ವಗೈರೆ ಬಹಳ ಸಂತೋಷದಿಂದ ನಡೆಯಿತು. ಅದೇ ದಿವಸ ರಾತ್ರಿ ೧೦ ಗಂಟೆಗೆ ಯಕ್ಷಗಾನ ಸೌಭದ್ರಾ ಕಲ್ಯಾಣವೆಂಬ ಪ್ರಸಂಗವನ್ನು ಕಾರ್ನಾಡಿನಲ್ಲಿರುವ ರಾ। ಅಯ್ಯರಣ ಭಾಗವತರು ಪದ ಹೇಳಿದರು. ನೆರೆದ ಜನರಲ್ಲಿ ಕೆಲವರು ಬಹು ಸುರಸವಾಗಿ ಅರ್ಥ ವಗೈರೆ ಹೇಳಿ ೧೨ ಘಂಟೆಗೆ ಮುಕ್ತಾಯವಾಯಿತು. ನಂತರ ಮ। ರಾ। ವಿಟ್ಲ ಶಾನುಭೋಗರು ಬಹಳ ಸಂತೋಷದಿಂದ ನೆರೆದವರಿಗೆ ಫಲಾಹಾರವನ್ನು ಮಾಡಿಸಿದರು.

~~~~~

ಪುತ್ತೂರು:- ಉಪ್ಪಿನಂಗಡಿ ತಾಲೂಕು ಸುಬ್ರಮಣ್ಯ ಗ್ರಾಮದ ಕುಳಗುಂದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ ಇದೇ ಬರುವ ನವಂಬರ ತಾ. ೭ಕ್ಕೆ ಶುರುವಾಗಿ ತಾ. ೨೫ಕ್ಕೆ ಅಂತ್ಯವಾಗುವುದಾಗಿ ಪ್ರಕಟಿಸಿರುವರು.

ಶಾನಭೋಗರಿಗೆ ಮತ್ತು ಶಾನಭೋಗಿ ಉಮೇದ್ವಾರರಿಗೆ ಚೈನ್ ಸರ್ವೆ ತರಬೇತಿ ಬಗ್ಯೆ ಕಾಸರಗೋಡ ತಾಲೂಕು ಹೊಸದುರ್ಗದಲ್ಲಿ ೨ ಶಾಲೆಗಳು ಇದೇ ೧೯೧೬ನೇ ಇಸವಿ ನವಂಬರ ತಾ. ೬ರಿಂದ ದಶಂಬರ ೧೬ರ ವರೆಗೂ; ಮಂಗಳೂರು ತಾಲೂಕು ಗುರುಪುರದಲ್ಲಿ ಒಂದು ಶಾಲೆ ನವಂಬರ ೯ರಿಂದ ದಶಂಬರ ೨೦ನೇ ತಾರೀಕು ವರೆಗೂ ಮತ್ತೊಂದು ನಾಲ್ಕನೆ ಶಾಲೆ ಕುಂದಾಪುರ ತಾಲೂಕು ವಂಡ್ಸೆಯಲ್ಲಿ ನವಂಬರ ೧೩ರಿಂದ ದಶಂಬರ ೨೪ನೇ ತಾರೀಕು ವರೆಗೂ ತೆರಿಯೋಣಾಗುವದು.

ಇಲ್ಲಿಯ ಕಾಯಂ ತಹಸೀಲದಾರ ಮ। ರಾ। ರಾ। ಬಿ. ಮಂಜುನಾಥ ಬಾಳಿಗರು ಇದೇ ತಾ. ೧೬ರಲ್ಲು ತಹಸೀಲದಾರ ಚಾರ್ಜನ್ನು ಮ। ರಾ। ರಾ। ಸುಜೀರ ಬಾಬುರಾಯರಿಗೆ ಕೊಟ್ಟು ರಜೆಯ ಮೇಲೆ ಹೋಗಿರುವರು.

ಇತ್ತಕಡೆ ಜಾನುವಾರುಗಳ ಕಾಲುಕುಂಟ ರೋಗವು ಅತಿ ವಿಶೇಷವಾಗಿ ಹರಡಿಕೊಂಡಿರುವದು.

ಒಮ್ಮೆ ಬಿಟ್ಟ ಮಳೆ ಎಂತೂ ಇದೇ ತಾ. ೧೧ರ ಲಾಗಾಯಿತು ಪುನಹಾ ಆರಂಭಿಸಿರುವದು. ಇಳಿತ್ತಾರವಾಗಿ ಬಂದ ಅಕ್ಕಿ ಕ್ರಯವೆಂತೂ ಪುನಹಾ ಮೇಲಕ್ಕೇರಿರುವದು. ಹಳೆ ಅಕ್ಕಿಗೆ ಮುಡಿ ೧ರ ರೂ. ,೭, ಸೇರು ೧ರ ೮। ದುಡ್ಡು, ಹೊಸ ಅಕ್ಕಿ ಮುಡಿ ೧ರ ರೂ. ೫। ಸೇರು ೧ರ ೬॥ ದುಡ್ಡಿಗೆ ಕಮ್ಮಿ ಸಿಕ್ಕದು. ಮಳೆ ದೆಸೆಯಿಂದ ಬೆಳೆಕಟಾವಿನ ಕೆಲಸ ಬಾಕಿ ಇರುವದು. ತೀರಿಸಲಿಕ್ಕೆ ಉಪಾಯವೇ ಇಲ್ಲ.

ಇದೇ ತಾ. ೬ರಲ್ಲು ಇಲ್ಲಿಯ ಶಾರದ ವಾಚಕ ಮಂದಿರದಲ್ಲಿ ವಿಜಯದಶಮಿ ಪೂಜೆಯು ಶಾಮ ೪ ಗಂಟೆಗೆ ಬೇಂಡವಾದ್ಯದಿಂದ ಬಹಳ ಅಡಂಭರವಾಗಿ ನಡಿಯಿತು. ವಾಚಕ ಮಂದಿರವು ಧ್ವಜ ಪತಾಕೆಗಳಿಂದಲೂ ತೋರಣಗಳಿಂದಲೂ ಅಲಂಕರಿಸಿತ್ತು.

ಇದೇ ತಾ. ೮ರಲ್ಲು ಇಲ್ಲಿಯ ಶಾರದಾ ವಾಚಕ ಮಂದಿರದ ನವ ವರುಷದ ವರ್ಧಂತಿ ಸಮಾರಂಭವು ಇಲ್ಲಿಯ ಯೂನಿಯನ್ ಕ್ಲಬ್ ಹಾಲಿನಲ್ಲಿ ಕೂಡಿತ್ತು. ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಮ। ರಾ। ರಾ. ಸಿ. ಆರ್. ಕೃಷ್ಣರಾವ್ ಅವರ್ಗಳ್ ಬಿ. ಎ. ಬಿ. ಎಲ್‌ಯವರು ಸಭಿಕರ ಅನುಮತಿ ಮೇರೆಗೆ ಅಗ್ರಸ್ಥಾನವನ್ನು ವಹಿಸಿಕೊಂಡರು. ಕಾಯದರ್ಶಿಗಳಾದ ರಾ. ಪಿ. ನಾರಾಯಣ ನ್ಯಾಕರು ವೃತಾಂತವನ್ನು ಓದಿದರು. ಅನಂತರ ಮ। ರಾ। ಕೆನರಾ ಹ್ಯಾಸ್ಕೂಲ ಪಂಡಿತ ಯಂ. ತಿಮ್ಮಪ್ಪಯ್ಯನವರು ಕನ್ನಡದಿಂದ ಭಾಷಣ ಕೊಟ್ಟರು. ಅನಂತರ ಅಧ್ಯಕ್ಷರು ಕನ್ನಡದಿಂದ ಉಪನ್ಯಾಸವನ್ನು ಕೊಟ್ಟರು. ಕೊನೆಗೆ ಕೂಡಿದ ಸಭಿಕರಿಗೆ ಪುಷ್ಪ ತಾಂಬೂಲಾದಿಗಳನ್ನು ಹಂಚಿ ಸಭೆ ಮುಕ್ತಾಯವಾಯಿತು.

~~~~~

ಒಟ್ಟ ಕಲಿಕೋಟೆಯ ಬಾತ್ಮಿದಾರರಿಂದ:— ಇದೇ ತಾ. ೬ನೇ ಬುಧವಾರ, ಕಲಿಕೋಟೆಯ ಮೆಸ್ಸರ್ಸ್ ಯು ಪಿ. ದತ್ತಕಂಪೆನಿಯವರು ಕಲ್ಲಾಯಿಯಲ್ಲಿ ತೆರೆದ ಟಿಂಬರ್ ಸೋ ಮಿಲ್ಸ್ ಎಂಬ ಮರದ ಕಾರ್ಖಾನೆಯ ಆರಂಭೋತ್ಸವವು ಅತಿ ವಿಜೃಂಭಣೆಯಿಂದ ಜರಗಿತು. ಆರಂಭೋತ್ಸವದ ಹಿಂದಿನ ದಿನ ಸುಮಾರು ೨೦೦೦ ಬಡಬಗ್ಗರಿಗೆ ಊಟ ಉಪಚಾರಗಳು ಕೊಡೋಣಾಯಿತು. ಆರಂಭೋತ್ಸವದ ದಿನ ಕಟ್ಟೋಣ ಇತ್ಯಾದಿಗಳನ್ನು ಮಕರ ತೋರಣಗಳಿಂದ ಶೃಂಗರಿಸಿದ್ದರು. ಸುಮಾರು ೧೫೦೦ ಮಂದಿಗೆ ಆಮಂತ್ರಣವಿತ್ತು. ಈ ಕಾರ್ಖಾನೆಗೆ ಸುಮಾರು ಮುಕ್ಕಾಲು ಲಕ್ಷ ರೂಪಾಯಿಗಳ ಖರ್ಚಾಗಿಯದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಇದೇ ದೊಡ್ಡ ಕಾರ್ಖಾನೆ. ಯೂರೋಪ ಅಮೇರಿಕಾದಿಂದ ಯಂತ್ರಗಳನ್ನು ತರಿಸಿ ಕಂಪೆನಿಯ ಪ್ರೊಪ್ರ್ಯಾಟರ ಮಗೆ ಮೆಖಾನಿಕಲ್ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರ್ ಮ। ರಾ। ಯು. ಪಿ. ಗೋಪಾಲರವರು ಈ ಯಂತ್ರಗಳನ್ನು ಒಳ್ಳೇ ರೀತಿಯಿಂದ ಕೂಡಿಸಿರುತ್ತಾರೆ. ಕೂಡಿದ್ದ ಜನರೆಲ್ಲರೂ ಕಂಪೆನಿಯ ಪ್ರೊಪ್ರ್ಯಾಟರ್ ಮತ್ತು ಮಗನ ಈ ನೂತನ ಪರಿಶ್ರಮಗಳು ಸಫಲವಾಗಬೇಕೆಂದು ಧನ್ಯವಾದವನ್ನಿತ್ತರು.

~~~~~

ಮಂಗಳೂರು.

~~~~~

ಇಲ್ಲಿಯ ಯಂಗ್ ಮೆನ್ ಯೂನಿಯನ್ ಜಿಮ್ನಾಸಿಯಮ್‌ಗೆ ಸೇರಿದ ಯುವಕರು ಇದೇ ಕಳದ ಒಕ್ಟೋಬರ ತಾ। ೧ನೇ ಆದಿತ್ಯವಾರ ಹಗಲು ೩ ಗಂಟೆಯಿಂದ ೬ ಗಂಟೆಯ ತನಕ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ತಮ್ಮ ಪ್ರಕೃತಿ ಶಕ್ತಿಯನ್ನು ನೆರೆದ ಸಭಿಕ ಮಹಾಶಯರೆಲ್ಲರೂ ವಿಸ್ಮಯಗೊಳ್ಳುವಂತೆ ಬಹು ಚಟುವಟಿಕೆಯಿಂದ ಪ್ರದರ್ಶಿಸಿದ್ದರು. ಡಿಸ್ಟ್ರಿಕ್ಟ ಜಡ್ಜರು, ಡಿಸ್ಟ್ರಿಕ್ಟ ಸರ್ಜನರು, ಡಿಪ್ಯುಟಿ ಪೋಲಿಸು ಸುಪರಿಂಟೆಂಡೆಂಟರು, ಮುನ್ಸಿಪಾಲ್ ವೈಸ್ ಚೆಯರ್ಮೆನರು, ಹೆಡ್‌ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರವರು, ರಾವ್‌ಬಹದ್ದೂರ್ ಎನ್. ಸುಬ್ಬರಾಯರವರು ಮೊದಲಾದ ಅನೇಕ ಗೃಹಸ್ಥರು ಚಿತ್ತೈಸಿದ್ದರು. "ಈ ಯುನಿಯನ್‌ರವರು ತೋರಿಸಿದ ದೇಹಶಕ್ತಿ ಮತ್ತು ಇತರ ಗರಡೀ ಸಾಧನಗಳನ್ನು ನಾವು ನೋಡಿದಲ್ಲಿ ಉತ್ತಮ ಒಂದು ತರಗತಿಯ ಸರ್ಕಸಿನವರು ಪ್ರದರ್ಶಿಸುವ ದೇಖಾವೆಗಳನ್ನು ಮಾಡಲು ಈ ತಾಲೀಮ್‌ಖಾನೆಯವರು ಸಮರ್ಥರು" ಎಂಬದಾಗಿ ವೈಸ್ ಚೇಯರ್ಮೆನರಾದ ದಾಕ್ತರ್ ಎಲ್. ಪಿ. ಪೆರ್ನಾಂಡಿಸರವರು ತಮ್ಮ ಭಾಷಣದಲ್ಲಿ ಅಭಿಪ್ರಾಯಪಟ್ಟಿರುವರು. ಅಧೋಗತಿಯನ್ನೈದಿದ ಹಿಂದೀ ಗರಡೀ ಸಾಧನೆಗಳನ್ನು ಪುನರುಜ್ಜೀವನ ಮಾಡಿ ಈ ಪಟ್ಟಣದ ಯುವಕರನ್ನು ಕಾಯಪುಷ್ಟರನ್ನಾಗಿ ಮಾಡುವುದೇ ಈ ಸಂಸ್ಥೆಯ ಉದ್ದೇಶ. ಶಾಲಾ ವಿದ್ಯಾರ್ಥಿಗಳು ಕೂಡಾ ಈ ಹಿಂದೀ ಗರಡೀ ಸಾಧಕಗಳನ್ನು ಅಭ್ಯಾಸಿಸುವ ಏರ್ಪಾಡುಗಳನ್ನು ಶಾಲಾ ಮುತಾಲಿಕರು ಮಾಡಿದಲ್ಲಿ ಈ ಸಂಸ್ಥೆಯವರ ಉದ್ದೇಶವು ಪೂರೈಸಿ ಈ ಯೂನ್ಯನ್ ಮುಖಂಡರಾದ ರಾ। ಎನ್. ಸೇಂಡೊ ಶೀನಪ್ಪನವರ ಪರಿಶ್ರಮವು ಸಾಫಲ್ಯವಾಗುವಲ್ಲಿ ಸಂಶಯವಿಲ್ಲ. ಈ ಯೂನಿಯನಿಗೆ ಪಟ್ಟಣದ ಮುಖಂಡರು ಉದಾರಾಶ್ರಯವನ್ನು ಕೊಡಬೇಕಾಗಿ ಅಪೇಕ್ಷಿಸುವೆವು.

ಇದೇ ಬರುವ ದಶಂಬರ ತಿಂಗಳಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯ ವಿದ್ಯಾರ್ಥಿಗಳ ಪರಿಷತ್ತು ಕೂಡುವದೆಂದೂ ಜಿಲ್ಲೆಯ ವಿದ್ಯಾರ್ಥಿಗಳು ಈ ಬಗ್ಗೆ ತಕ್ಕ ವ್ಯವಸ್ಥೆ ನಡಿಸುತ್ತಲಿದ್ದಾರೆಂದೂ ತಿಳಿಸಿದ್ದೆವಷ್ಟೆ. ವಿದ್ಯಾರ್ಥಿಗಳ ಈ ಆಲೋಚನೆಗೆ ಜಿಲ್ಲೆಯ ಆಯಾ ಮಾನ್ಯ ಗೃಹಸ್ಥರು ತಕ್ಕ ಉತ್ತೇಜನವನ್ನು ಕೊಟ್ಟಿರುತ್ತಾರೆ. ಜಿಲ್ಲೆಯ ವಿದ್ಯಾರ್ಥಿಗಳನ್ನು ಒಂದುಗೂಡಿಸಿ, ಅವರೊಳಗೆ ಸಹಕಾರ, ಸಹಾನುಭೂತಿ, ಭ್ರಾತೃಭಾವ, ಒಗ್ಗಟ್ಟು ಮೊದಲಾದ ಗುಣಗಳನ್ನು ಹುಟ್ಟಿಸುವಂತೆ ಪ್ರಯತ್ನಿಸುವದು, ಜಿಲ್ಲೆಯ ದೇಶಭಾಷೆಯನ್ನು ವೃದ್ಧಿಗೆ ತರುವದು, ರಾಜಭಕ್ತಿ, ದೇಶಭಕ್ತಿಯು ವಿದ್ಯಾರ್ಥಿಗಳಲ್ಲಿ ರೂಢಮೂಲವಾಗುವಂತೆ ಪ್ರಯತ್ನಿಸುವುದು, ಈ ಮೊದಲಾದ ಉದ್ದೇಶಗಳನ್ನು ಇಟ್ಟುಕೊಂಡು ಸದರಿ ಪರಿಷತ್ತನ್ನು ಜರಗಿಸಬೇಕೆಂದು ಈ ಪರಿಷತ್ತಿನ ಮೆನೇಜಿಂಗ್ ಕಮಿಟಿಯವರು ನಿರ್ಣಯಿಸಿರುವರು. ರಾಜಕೀಯ ಮತ್ತು ಮತಸಂಬಂಧವಾದ ವಿಷಯಗಳು ಈ ಪರಿಷತ್ತಿಗೆ ಸೇರಿರುವದಿಲ್ಲ. ಮೆನೇಜಿಂಗ್ ಕಮಿಟಿಯವರು ಇಟ್ಟುಕೊಂಡ ಉದ್ದೇಶಗಳನ್ನು ಜಾರಿಗೆ ತರುವ ಬಗೆಯು ಪರಿಷತ್ತಿನಲ್ಲಿ ಚರ್ಚಿಸಲ್ಪಡುವವು. ಕ್ರಿಸ್ಮಸ್ ವಾರದಲ್ಲಿ ಈ ಕನ್ಫರೆನ್ಸ್ ಜರಗುವದು. ಕನ್ಫರೆನ್ಸಿಗೆ ಅಧ್ಯಕ್ಷರನ್ನಾಗಿ ಯಾರನ್ನು ಆರಿಸುವದೆಂಬದು ಇನ್ನೂ ನಿರ್ಣಯವಾಗಲಿಲ್ಲ. IV ಫೋರ್ಮಿಗೆ ಮೇಲ್ಪಟ್ಟ ಎಲ್ಲಾ ವಿದ್ಯಾರ್ಥಿಗಳು ಈ ಕನ್ಫರೆನ್ಸಿನ ಮೆಂಬರರಾಗಿ ಸೇರಬಹುದು. ಕನ್ಫರೆನ್ಸಿನ ಸಂಬಂಧವಾಗಿ ತಕ್ಕ ವ್ಯವಸ್ಥೆ ನಡಿಸುವ ಬಗ್ಯೆ ಕೆಲವು ಮಂದಿ ಉಡ್ಪಿ, ಕುಂದಾಪುರ, ಕಾರ್ಕಳ ಕಡೆ ಹೋಗಿ ಅಲ್ಲಲ್ಲಿ ಬ್ರೇಂಚ್ ಎಸೋಸಿಯೇಶನುಗಳನ್ನು ಸ್ಥಾಪಿಸಿ, ಅಲ್ಲಿಯೂ ಹಣ ಕೂಡಿಸುವರೆ ಪ್ರತಿನಿಧಿಗಳನ್ನು ನೇಮಿಸಿ ಬಂದಿರುತ್ತಾರೆ. ಜಿಲ್ಲೆಯ ಇತರ ಪ್ರಾಂತ್ಯಗಳಿಗೂ ಸದ್ಯದಲ್ಲೇ ಈ ಸಂಬಂಧ ಪ್ರತಿನಿಧಿಗಳು ಹೋಗತಕ್ಕವರಿದ್ದಾರೆಂತ ಈ ಸಂಸ್ಥೆಯವರು ತಿಳಿಸಿರುತ್ತಾರೆ. ವಿದ್ಯಾರ್ಥಿಗಳು ಕೈಕೊಂಡ ಈ ಕಾರ್ಯಕ್ಕೆ ಜಿಲ್ಲೆಯ ಮಾನ್ಯ ಗೃಹಸ್ಥರೆಲ್ಲರೂ ತಕ್ಕ ಪ್ರೋತ್ಸಾಹ ಕೊಡಬೇಕಾಗಿ ಹಾರೈಸುವೆವು.

ಮೆಸಪಟಾಮಿಯದಲ್ಲಿ ನಡೆಯುವ ಯುದ್ಧದ ಬಗ್ಗೆ ಹಣ ಕೂಡಿಸುವ ಆಲೋಚನೆಯಿಂದ ಇಲ್ಲಿಯ ಪೋಲಿಸ ಇಲಾಖೆಯವರು ಇದೇ ತಾ. ೨೩ನೇ ಸೋಮವಾರ ಗವರ್ನಮೆಂಟ ಕಾಲೇಜಿಯಲ್ಲಿ ಒಂದು ಇಂಗ್ಲಿಷ್ ಡ್ರಾಮವನ್ನು ಆಡಿ ತೋರಿಸಬೇಕೆಂದಿರುವರು.

ಇದೇ ತಾ. ೨೧ನೇ ಶನಿವಾರ ಇಲ್ಲಿಯ ಗವರ್ನಮೆಂಟ 'ಕಾಲೇಜ್ ಡೇ' ಸಂಭ್ರಮೋತ್ಸವವು ನಡೆಯುವದು.

ಬೋಳಾರ ಪಟೇಲರ ರಿಸಾಲ್‌ಸಾರ್ಕಾನೆ ಮಾಡುವ ಬಗ್ಯೆ ಕೊಂಡುಹೋದ ಹಣದಲ್ಲಿ ರೂ. ೨-೧೧-೦ನ್ನು ಉಗ್ರಾಣಿ ವೆಂಕಪ್ಪ ಶೆಟ್ಟಿ ಎಂಬವನು ಚೋರಿಸಿದನಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಡ್ಯುಪಿಟಿ ಮೇಜಿಸ್ಟ್ರೇಟರು ಸದರಿ ಉಗ್ರಾಣಿಗೆ ೨ ತಿಂಗಳ ಸಜಾ ವಿಧಿಸಿರುತ್ತಾರೆ.

ಬೋಳೂರು ಮಾರಿಗುಡಿಯಲ್ಲಿ ಸುಮಾರು ೨೦೦-೩೦೦ ರೂಪಾಯಿ ಕ್ರಯಬಾಳುವ ಬೆಳ್ಳಿ ಸಾಮಾನುಗಳು ಕಳವಾಯಿತೆಂದು ತಿಳಿಸಿದ್ದೆವಷ್ಟೆ. ಪೋಲಿಸಿನವರು ಸದರಿ ಗುಡಿಯ ಪಾತ್ರಿಯ ಮಗನನ್ನು ಅನುಮಾನದ ಮೇಲೆ ವಿಚಾರಿಸಿದ್ದಲ್ಲಿ ಸದರಿಯವನು ಕೊಳದಲ್ಲಿ ಬಚ್ಚಿಟ್ಟಿದ್ದ ಕಳವಾದ ಮಾಲುಗಳನ್ನು ತೆಗೆದುಕೊಟ್ಟನೆಂತಲೂ ಪೋಲಿಸಿನವರು ಅವನನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರೆಂತಲೂ ತಿಳಿಯುತ್ತೇವೆ.

ಕೆ. ಡಿ. ಮಂಜುನಾಥನಿಗೆ ಒಂದನೆ ಕಳವು ಮೊಕದಮೆಯಲ್ಲಿ ೧ ವರ್ಷದ ಕಠಿಣ ಸಜಾ ವಿಧಿಸೋಣಾಗಿರುತ್ತದೆ.

ಪೋಲಿಸಿನವರಿಗೆ ಕಳ್ಳರ ಪತ್ತೆಮಾಡಿ ಕೊಟ್ಟವರಿಗೆ ಅನೇಕ ಕಷ್ಟನಷ್ಟಗಳು ಬರುತ್ತಿವೆ ಎಂಬ ಭ್ರಮೆಯು ಜನಸಾಮಾನ್ಯರಲ್ಲಿ ಇರುವದರಿಂದಲೂ ಅನೇಕಾವರ್ತಿ ಪೋಲಿಸ ನೌಕರರು ಈ ಭ್ರಮೆಗೆ ಸರಿಯಾಗಿ ವರ್ತಿಸುವದರಿಂದಲೂ ಜನರು ಕಳ್ಳರ ಪತ್ತೆ ಇತ್ಯಾದಿಗಳನ್ನು ಪೋಲಿಸಿನವರಿಗೆ ಮಾಡಿಕೊಟ್ಟು ಅವರಿಗೆ ಸಹಾಯಮಾಡುವದರ ಬದಲಿಗೆ ಸುಮ್ಮನಿರುವದ ವಾಡಿಕೆಯಲ್ಲಿದೆ. ಆದರೆ ಈಚೀಚೆಗೆ ಇಲ್ಲಿಯ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ ದೊರೆಗಳವರು ಜನಸಾಮಾನ್ಯರಿಂದ ಈ ಭ್ರಮೆಯನ್ನು ಹೋಗಲಾಡಿಸುವ ಬಗ್ಯೆ ಕಳ್ಳರ ಪತ್ತೆ ಇತ್ಯಾದಿಗಳನ್ನು ಮಾಡಿಕೊಟ್ಟವರಿಗೆ ಇನಾಮು ಇತ್ಯಾದಿಗಳನ್ನು ಕೊಡಿಸುವ ಏರ್ಪಾಡು ಮಾಡಿರುವದು ಶ್ಲಾಘನೀಯವಾಗಿದೆ. ಈಚೆಗೆ ಮರಾಂಡ ಕಳವು ಮಾಡುತ್ತಿದ್ದ ಮಲಯಾಳಿ ಅಚ್ಯುತ್ತನ ಪತ್ತೆಮಾಡಿಕೊಟ್ಟ ರಿಟಾಯರ್ಡ್ ಹೆಡ್‌ಕನ್‌ಸ್ಟೇಬಲ ಕೊರಗಪ್ಪನವರಿಗೆ ರೂ. ೪; ಸದರಿ ಅಚ್ಯುತ್ತನು ಕಳವು ಮಾಲುಗಳನ್ನು ಇಟ್ಟಿದ್ದ ಸ್ಥಳದ ಪತ್ತೆಹೇಳಿದ ಜ್ಯೋನ್ ಲೋಪೆಸನಿಗೆ ರೂ. ೪; ರಾ| ಉಳ್ಳಾಲ ಕೃಷ್ಣರಾಯರ ನೋಟು ಇತ್ಯಾದಿಗಳನ್ನು ಕಳವು ಮಾಡಿ ಕೊಂಡು ಹೋದ ಸಾಂತ ರೈಯ ಗುರುತು ಹಚ್ಚಿಕೊಟ್ಟ ಸೈಕಲ್ ರಿಪೇರರ್ ಓಬೆದನಿಗೆ ರೂ. ೬; ಕೆ. ಡಿ. ಮಂಜುನಾಥನ ಪತ್ತೆ ಹೇಳಿಕೊಟ್ಟ ಕೆ. ಡಿ. ಶಾಮನಿಗೆ ರೂ. ೫; ಕೆ. ಡಿ. ಚಾಯಿರಿಯ ಪತ್ತೆಮಾಡಿದ ಕೆ. ಡಿ. ಅರಬಿಗೆ ರೂ. ೪; ಮೂಲ್ಕಿಯ ಒಂದು ಕಳವು ಮೊಕದಮೆಯಲ್ಲಿ ಪೋಲಿಸಿನವರಿಗೆ ಸಹಾಯ ಮಾಡಿದ ಪುದ್ದು ಮರಕಾಲನಿಗೆ ರೂ 3 ಈ ಪ್ರಕಾರ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ ದೊರೆಗಳವರು ಇನಾಂ ಕೊಡಿಸಿರುತ್ತಾರೆ.

ಸರ್ಜನ್ ಜನರಲ್ ದೊರೆಗಳವರು ನಿನ್ನೆಯ ದಿನ ಮೈಲ್ ಟ್ರೇನಿನಲ್ಲಿ ಇಲ್ಲಿಗೆ ಚಿತ್ತೈಸಿ ಈ ದಿನ ಇಲ್ಲಿಯ ಆಸ್ಪತ್ರೆಗಳನ್ನು ಸಂದರ್ಶಿಸಿರುವರು.

"ನ್ಯೂ ಇಂಡಿಯಾ" ಪತ್ರಿಕೆಯ ಪರವಾಗಿ ಮಿಸೆಸ್ ಅನ್ನಿಬಿಸೆಂಟರವರು ಮದ್ರಾಸ್ ಹೈಕೋರ್ಟಿನಲ್ಲಿ ಮಾಡಿಕೊಂಡ ಅಪೀಲು ಮತ್ತು ರಿವಿಜನ್ ಮನವಿಗಳೆರಡನ್ನೂ ತಾ. ೧೮ರಲ್ಲು ಹೈಕೋರ್ಟಿನ ಜಡ್ಜರವರು ತಳ್ಳಿಹಾಕಿರುವರು.

ಬೆಳ್ತಂಗಡಿಯಲ್ಲಿ ಕ್ರಿಸ್ಟಿಯನ್ ಮೆರೇಜು ಆಕ್ಟಿನ ಪ್ರಕಾರ ಆರೋನ್ನ ಎಂಬವನಿಗೆ ಲೈಸನ್ಸ್ ಇಲ್ಲದೆ ವಿವಾಹ ಮಾಡಿದ್ದನೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟ ಎಲ್. ಸುಮಿತ್ರನಿಗೆ ಸೆಶ್ಶನ್ಸ್ ಜಡ್ಜರು ಆರು ತಿಂಗಳ ಸಾಧಾರಣ ಸಜಾ ವಿಧಿಸಿರುತ್ತಾರೆ.

ದಿ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಮೋಟರ್ ಬಸ್ ಕಂಪೆನಿಯವರು ಪ್ರಯಾಣಿಕರ ಸೌಕರ್ಯ ಬಗ್ಗೆ ಸುರತ್‌ಕಲ್ಲಿನಲ್ಲಿ ೯ನೇ ಮೈಲುಕಲ್ಲು ಬಳಿ ಮತ್ತು ಅಡ್ಯಾರ ಕಣ್ಣೂರಲ್ಲಿ ೬ನೇ ಮೈಲು ಕಲ್ಲಿನ ಬಳಿ ಏಜನ್ಸಿಯನ್ನು ತೆರೆದಿರುತ್ತಾರೆ. ಮಂಗಳೂರಿಂದ ಸುರತಕಲ್ಲಿಗೆ ೧೦ ಆಣೆ. ಅಡ್ಯಾರ ಕಣ್ಣೂರಿಗೆ ೬ ಆಣೆ ಚಾರ್ಜು ಇಟ್ಟಿರುವರು ಎಂತ ತಿಳಿಯುತ್ತೇವೆ. ಸದರಿ ಕಂಪೆನಿಯವರು ಪಾವಂಜೆಯಿಂದ ಮೂಲ್ಕಿ ವರೆಗೆ ದಾರಿಯ ಅನಾನುಕೂಲತೆಯಿಂದ ಟ್ರಾನ್ಸಿಟು ಬಂಡಿಗಳಲ್ಲಿ ಪ್ರಯಾಣಿಕರನ್ನು ಕೊಂಡು ಹೋಗುತ್ತಿದ್ದರಷ್ಟೆ. ಆದರೆ ಇದರಿಂದ ಪ್ರಯಾಣಿಕರಿಗೆ ಬಂದೊದಗುವ ಅಡಚಣೆಗಳನ್ನು ತಪ್ಪಿಸುವರೆ ಈಗತಾನೇ ಆ ದಾರಿಗೂ ಮೋಟರ್ ಬಸ್ಸುಗಳನ್ನು ಕೊಂಡು ಹೋಗಿರುತ್ತಾರೆ. ಸದ್ಯಾ ಈ ಕಂಪೆನಿಯವರ ಮೋಟರ್ ಸರ್ವಿಸ್ ಕುಂದಾಪುರದ ವರೆಗೂ ನಡೆಯುವದು. ಈ ಬಗ್ಗೆ ಬೇಕಾದ ಬಸ್ಸುಗಳು ಇಲ್ಲಿಗೆ ಬಂದು ತಲ್ಪಿರುತ್ತವೆ ಎಂತ ತಿಳಿಯುತ್ತೇವೆ.

ಹಿಂದೂ ಟ್ರಾನ್ಸಿಟು ಕಂಪೆನಿಯವರ ಮೋಟರ್ ಬಸ್ ಸರ್ವಿಸ್ ಬಂಟ್ವಾಳಕ್ಕೆ ನಡಿಯು ಪ್ರಾರಂಭವಾಗಿದೆ.

ಕೊರೊನೇಶನ್ ಕಪ್ ಬಗ್ಗೆ ಕ್ರಿಕೆಟ್ ಪಂಗಡಗಳೊಳಗೆ ಕಳೆದ ಒಂದು ಪಕ್ಷದಲ್ಲಿ ನಡೆದ ಆಟಗಳು ಇಲ್ಲಿಯವರಿಗೆ ಕಳೆದವಾರದ ವಿಶೇಷ ಸಂಗತಿಗಳಲ್ಲಿ ಪ್ರಾಮುಖ್ಯವಾದದ್ದಾಗಿವೆ. ಮೊದಲನೇ ಸಾರಿ ಈ ಪಂದ್ಯಾಟವು ಹಿಂದೂ ಕ್ರಿಕೆಟ್ ಕ್ಲಬ್ಬಿನವರಿಗೂ ಎಕ್ಸ್ ಎಲೋಷಿಯಸ್ ಕ್ಲಬ್ಬಿನವರಿಗೂ ನಡೆಯಿತು. ಈ ಆಟದಲ್ಲಿ ಹಿಂದೂ ಕ್ಲಬ್ಬಿನವರು ೨೪೯ ರನ್ಸ್‌ಗಳನ್ನು ತೆಗೆದರು ಮ| ರಾ| ವಾಸುದೇವ ನ್ಯಾಕರೊಬ್ಬರೇ ೧೦೪ ರನ್ಸ್ ತೆಗೆದರು. ಎಕ್ಸ್ ಎಲೋಷಿಯಸ್ ಪಂಗಡದವರು ಒಟ್ಟಿಗೆ ೧೨೪ ರನ್ಸ್ ತೆಗೆದರು. ಈ ಪೈಕಿ ಡಾಕ್ಟರ್ ಅಬ್ರೆವೊರವರು ೨೪ ರನ್ಸ್ ತೆಗೆದ್ಧರು. ೨ನೇ ಆಟದಲ್ಲಿ ಹಿಂದೂ ಕ್ಲಬ್ಬಿನವರು ೫೭ ರನ್ಸ್‌ಗಳನ್ನು ಮಾತ್ರ ತೆಗೆದುದರಿಂದ ಎಕ್ಸ್ ಎಲೋಷಿಯಸ್ ಕ್ಲಬ್ಬಿನವರು ೨ನೇ ಆಟವನ್ನು ತಾವು ಗೆಲ್ಲುವದು ನಿಶ್ಚಯವೆಂಬ ಧೈರ್ಯದಿಂದಲೂ ವಿಶೇಷ ಚಟುವಟಿಕೆಯಿಂದಲೂ ಆಡಿದರು. ಆದರೆ ಇವರಿಗೆ ಒಟ್ಟಿಗೆ ೧೭೭ ರನ್ಸ್‌ಗಳು ಮಾತ್ರ ದೊರಕಿದುದರಿಂದ ಕೊನೆಗೆ ಹಿಂದೂ ಕ್ಲಬ್ಬಿನವರೇ ಜಯಶೀಲರಾದರು.

ಅನಂತರ ಹಿಂದೂ ಕ್ರಿಕೆಟ್ ಕ್ಲಬ್ಬಿನವರಿಗೂ ಮಂಗಳೂರು ಕ್ರಿಕೆಟ್ ಕ್ಲಬ್ಬಿನವರಿಗೂ ಪಂದ್ಯಾಟವು ನಡೆಯಿತು. ಈ ಆಟದಲ್ಲಿ ಹಿಂದೂ ಕ್ಲಬ್ಬಿನವರಿಗೆ ೨೦೪ ರನ್ಸ್‌ಗಳು ದೊರಕಿದವು. ಈ ಪೈಕಿ ಮ| ರಾ| ಕೆ. ಪಿ. ಕೇಶವರಾವ್‌ರವರು ೭೫ ರನ್ಸ್ ತೆಗೆದರು. ಮಂಗಳೂರು ಕ್ರಿಕೆಟ್ ಕ್ಲಬ್ಬಿನವರಿಗೆ ೧೭೧ ರನ್ಸುಗಳು ದೊರಕಿದವು. ಈ ಪೈಕಿ ಮ| ರಾ| ಎಮ್. ಎನ್ ಪ್ರಭುರವರು ೫೯ ರನ್ಸ್ ತೆಗೆದರು ೨ನೇ ಆಟದಲ್ಲಿ ಹಿಂದೂ ಕ್ಲಬ್ಬಿನವರು ೨೪೦ ರನ್ಸ್ ತೆಗೆದರು. ಈ ಆಟದಲ್ಲಿ ರಾ| ಕೇಶವರಾಯರು ೬೪ ರನ್ಸ್ ತೆಗೆದಿರುವರು. ೨ನೇ ಆಟದಲ್ಲಿ ಮಂಗಳೂರ ಕ್ರಿಕೆಟ್ ಕ್ಲಬ್ಬಿನವರಿಗೆ ೯೮ ರನ್ಸ್‌ಗಳ ಮಾತ್ರ ದೊರಕಿದ್ದರಿಂದ ಈ ಆಟದಲ್ಲಿಯೂ ಹಿಂದೂ ಕ್ಲಬ್ಬಿನವರೇ ಜಯಶೀಲರಾದರು.

ಬಳಿಕ ಹಿಂದೂ ಕ್ಲಬ್ಬಿನವರಿಗೂ ಸೈಂಟ್ ಅಲೋಷಿಯಸ್ ಕ್ರಿಕೆಟ್ ಕ್ಲಬ್ಬಿನವರಿಗೂ ಕೊನೆಯ ಆಟವು ೩ ದಿವಸಗಳ ಪರ್ಯಂತರ ನಡೆಯಿತು. ಈ ಆಟವನ್ನು ಹಿಂದೂ ಕ್ಲಬ್ಬಿನವರು ಸುಲಭವಾಗಿ ಗೆದ್ದುಕೊಳ್ಳಬಹುದೆಂದು ಎಲ್ಲರೂ ಭಾವಿಸಿದ್ದರು. ಆದರೆ ಅದು ಅಷ್ಟೊಂದು ಸುಲಭವಾಗಿರದೆ ತೀಕ್ಷ್ಣ ಕಾಳಗವೆಂಬಂತೆ ಇತ್ತು. ಈ ಆಟದಲ್ಲಿ ಕಾಲೇಜು ಪಂಗಡದವರಿಗೆ ೧೮೪ ರನ್ಸ್‌ಗಳೂ ಹಿಂದೂ ಪಂಗಡದವರಿಗೆ ೧೭೦ ರನ್ಸ್‌ಗಳೂ ದೊರಕಿದವು. ೨ನೇ ಆಟದಲ್ಲಿ ಕಾಲೇಜು ಪಂಗಡದವರು ೧೫೭ ರನ್ಸ್‌ಗಳನ್ನು ಪಡೆದರು. ಹೀಗೆ ಹಿಂದೂ ಕ್ಲಬ್ಬಿನವರು ಗೆಲ್ಲಬೇಕಾದರೆ ೧೭೨ ರನ್ಸ್‌ಗಳನ್ನು ೨ನೇ ಆಟದಲ್ಲಿ ಮಾಡಬೇಕಾಗಿ ಬಂದಿತು. ಹಿಂದೂ ಕ್ಲಬ್ಬಿನವರು ೨ನೇ ಆಟದಲ್ಲಿ ಅತಿ ಆಸಕ್ತಿಯಿಂದ ಆಡತೊಡಗಿ ೫ ಜನ ಆಡುವಷ್ಟರೊಳಗೆ ಬೇಕಾದ ರನ್ಸ್‌ಗಳನ್ನು ಮಾಡಿಯೇ ಬಿಟ್ಟರು. ಈ ಎರಡನೇ ಆಟದಲ್ಲಿ ರಾ| ವಾಸುದೇವ ನ್ಯಾಕರೊಬ್ಬರೇ ೭೯ ರನ್ಸ್‌ಗಳನ್ನು ತೆಗೆದು "ಬೇಟ್ ಇನ್ ಹೇಂಡ್" ಆಗಿ ನಿಂತರು. ಹೀಗೆ ಹಿಂದೂ ಕ್ಲಬ್ಬಿನವರು ಗೆದ್ದು ಕೊರನೇಶನ್ ಕಪ್ಪಿಗೆ ಪಾತ್ರರಾದರು. ಆಟವಾದ ನಂತರ ಗೆದ್ದ ಪಂಗಡದವರು ಊರ ಮಾನ್ಯ ಗೃಹಸ್ಥರೊಡನೆ ಬ್ಯಾಂಡ್‌ವಾದ್ಯದೊಡನೆ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಪೊಲಿಟನ್ ಕ್ಲಬ್ಬಿಗೆ ಹೋಗಿ ಫಲಹಾರ ಇತ್ಯಾದಿಗಳನ್ನು ತೀರಿಸಿ ಆ ದಿನದ ಸಂಭ್ರಮವನ್ನು ಮುಗಿಸಿದರು.

ಸ್ಟೂಡೆಂಟ್ಸ್ ಕನ್ಫರೆನ್ಸಿನ ಬಗ್ಗೆ ವಂತಿಗೆ ಕೊಟ್ಟವರ ಮತ್ತು ವಾಗ್ದಾನ ಮಾಡಿದವರ ಹೆಸರುಗಳೂ ಮೊಬಲಗುಗಳೂ:—ರಾ| ಕೆ. ಸದಾಶಿವರಾವ್ ರೂ. ೨೫; ರಾ| ಎನ್. ವೆಂಕಟರಾವ್ ರೂ. ೨೦; ರಾ| ಪಿ. ನಾನ್ವಿಸೇಟ್ ರೂ. ೧೦; ರಾ| ಎ. ಶ್ರೀನಿವಾಸಪೈ ರೂ. ೮; ರಾ| ಎಮ್. ಮಾಧವರಾವ್ ರೂ. ೬; ರಾ| ಎನ್. ಗಣಪತಿರಾವ್ ರೂ ೫; ರಾ| ಬಿ. ದೇವಪ್ಪ ಶೆಣ್ಯೆ ರೂ. ೫; ರಾ| ಪಿ. ಸುಬ್ಬರಾವ್ ರೂ. ೫; ರಾ| ಎ. ಐ. ಒಡೆಯರ್ ರೂ. ೫; ರಾ| ಎಮ್. ನೌರೋಜಿ ರೂ. ೫; ಮೆಸ್ಸರ್ಸ್ ಕೆ. ಸುಬ್ರಾಯ ಪೈ ಎಂಡ್ ಕೋ. ರೂ. ೫; ರಾ| ಟಿ. ದೇವರಾವ್ ರೂ. ೫; ರಾ| ನರಸಿಂಹ ಮುರ್ತುಭಂಡಾರಿ ರೂ. ೫; ಡಾಕ್ಟರ್ ಎಲ್. ಪಿ. ಫೆರ್ನಾಂದಿಸ್ ರೂ. ೫; ಮೆ| ಎಸ್. ಎಕ್ಸ್ ಸಾಲ್ಡಾಂಞಾ ರೂ. ೫; ಮೆಸ್ಸರ್ಸ್ ನಾಗಪ್ಪನ್ಯಾಕ ಎಂಡ್ ಕೋ. ರೂ. ೫; ಮೆಸ್ಸರ್ ಮಹೇಲ್ ಕೃಷ್ಣನ್ಯಾಕ ಎಂಡ್ ಸನ್ಸ ರೂ. ೫; ರಾ| ಎ. ಶ್ರೀನಿವಾಸರಾವ್ ರೂ. ೪; ರಾ| ಜಿ. ಕೃಷ್ಣರಾವ್ ರೂ. ೪; ಮೆಸ್ಸರ್ಸ್ ನಗರಕಾರ್ ಎಂಡ್ ಸನ್ಸ್ ರೂ. ೨; ಭಾರತಿ ಮಿಲ್ಸ್ ರೂ. ೨; ರಾ| ಯು. ಸುಬ್ರಾಯ ದಾಸಪ್ಪನ್ಯಾಕ ರೂ. ೨; ರಾ| ಕೆ. ರಾಮ ಗಣೇಶ ಕಾಮತ್ ರೂ. ೨; ರಾ| ಪಿ. ಎನ್. ವೈಜಪ್ಪ ಭಂಡಾರಿ ರೂ. ೨; ಮೆ| ಪಿ. ಎನ್. ಫೆರ್ನಾಂದಿಸ ರೂ. ೨; ರಾ| ಬಿ. ಸರ್ವೋತ್ತಮ ಪ್ರಭು ರೂ. ೧; ರಾ| ಕೆ. ನಾರಾಯಣರಾವ್ ರೂ. ೧; ರಾ| ಎಮ್. ಮಾಧವ ಮೆನೊನ್ ರೂ. ೧; ರಾ| ಕೆ. ವೇಣುಗೋಪಾಲರಾವ್ ರೂ. ೧; ರಾ| ಯು. ವಾಮನ ನ್ಯಾಕ ರೂ. ೧; ರಾ| ಎನ್. ಎಲ್. ಪಾಲ್ ರೂ. ೧; ಮೆಸ್ಸರ್ಸ್ ಕೆ. ವೆಂಕಟರಾವ್ ಎಂಡ್ ಸನ್ಸ್ ರೂ. ೨; ಜುಮುಲಾ ರೂ. ೧೫೭. ಈ ಪೈಕಿ ರೂ. ೫೭ ವಸೂಲು ಆಗಿರುತ್ತದೆ.

ಮಂಗಳೂರು.
ತಾ. 17-10-16.

ಬಿ. ನಾರಾಯಣ ಬಾಳಿಗ,
ಜ್ಯೊಂಟ್ ಒನರರಿ ಸೆಕ್ರೆಟರಿ
ಸ್ಟೂಡೆಂಟ್ಸ್ ಕನ್ಫರೆನ್ಸ್.

ಜಿನಸು ಧಾರಣೆ.

(ರಖಂ).

ಮಸ್ಕತಿ ಅಕ್ಕಿ	6-8-0ರಿಂದ	7-2-0
ಗುಡ್ಡ ,, ,,	6-6-0	6-12-0
ಊಟು ಸುಗ್ಗಿ ,,	6-10-0	6-13-0
ಗಾಡಿ ರಾಶಿ ,,	5-14-0	5-15-0
ಅವ್ವಲ್ ಬೆಳ್ತಿಗೆ ,,	6-8-0	7-0-0
ಗುಡ್ಡ ಬೆಳ್ತಿಗೆ ,,	5-12-0	6-4-0
ರಂಗೂನು ಬೆಳ್ತಿಗೆ ಗೋಣಿ ೧ರ	9-4-0	9-10-0
ಗೋಧಿ ಗೋಣಿ ೧ರ	11-12-0	12-0-0
ತುರುಳಿ ಗೋಣಿ ೧ರ	6-0-0	6-4-0
ಕಡಲೆ ಗೋಣಿ ೧ರ ಬೊಂಬೈ	8-12-0	9-8-0
ತೊಗರಿ ಗೋಣಿ ೧ರ		11-0-0
ತೊಗರಿ ಬೇಳೆ ಗೋಣಿ ೧ರ	12-8-0	14-8-0
ಉದ್ದು ಗೋಣಿ ೧ರ	10-8-0	11-4-0
ಊರುಬೆಲ ಖಂಡಿ ೧ರ		50-0-0
ಉಪ್ಪು ಗೋಣಿ ೧ರ	4-4-0	4-10-0
ಕೊಪ್ರ ಖಂಡಿ ೧ರ	95-0-0	105-8-0
ಕೊಪ್ರಹಿಂಡಿ ಖಂಡಿ ೧ರ		22-0-0
ಎಳ್ಳಿಂಡಿ ಖಂಡಿ ೧ರ ಬೊಂಬೈ	25-0-0	30-0-0
ಕೊಪ್ರಿ ಎಣ್ಣೆ ಮುಡಿ ೧ರ	7-0-0	7-4-0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		4-12-0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	6-0-0	6-11-0
ಮೋರಿಸ್ ಸಕ್ಕರೆ ಮುಡಿ ೧ರ		5-4-0
ಕಾಫಿ ಖಂಡಿ ೧ರ	225-0-0	235-0-0
ಹೊಸಅಡಕೆಗೋಟು ಖಂಡಿ೧ರ	82-0-0	85-[illegible]
ಹೊಸ ಗೇರುಬೀಜ ಮುಡಿ ೧ರ		2-14-6
ಕಬ್ಬಿಣ ಖಂಡಿ ೧ರ		75-0-0
ತಾಂಬ್ರ ತಗಡು ಮುಡಿ ೧ರ	26-0-0	27-0-0
ತಾಂಬ್ರ ಪಾತ್ರೆಗಳು ಮುಡಿ ೧ರ		28-0-0
ಚೀನಿ ಬಳ್ಳಿ ಶೀರು ೧ರ		24-0-0
ಹಳ್ಳಿ ಹೆಸರು ಮುಡಿ ೧ರ	5-1-0	5-2-0
ಕಾಳುಮೆಣಸು ಖಂಡಿ ೧ಕ್ಕೆ		260-0-0

ಈಗಲೇ ಅಚ್ಚಾಗಿರುವದು! ನವೀನ ಪುಸ್ತಕ!! ವಿಕರಿಗೆ ಸಿದ್ಧವಾಗಿರುವದು!!!
ವಿಟ್ಲ ಸಬ್ ರಿಜಿಸ್ಟ್ರಾರ ಆಫೀಸಿನ ಕ್ಲಾರ್ಕ ಬೋಳಾರ ವಾಸುದೇವಯ್ಯನವರಿಂದ ರಚಿಸಲ್ಪಟ್ಟ

ಕನ್ನಡ ಯಕ್ಷಗಾನ ಚಂದ್ರಮೌಳಿ ಕಾಳಗ.

ಈ ಪುಸ್ತಕವು ಸುಲಭವಾದ ಮತ್ತು ಮನೋರಂಜಕವಾದ ಯಕ್ಷಗಾನ ಪದಗಳಿಂದ ಒಳ್ಳೇ ಕಾಗದದಲ್ಲಿ ಸಕಲರಿಗೂ ತಿಳಿಯುವ ಹಾಗೆ ಛಾಪಾ ಮಾಡಲ್ಪಟ್ಟು ವಿಕರಿಗೆ ಸಿದ್ಧವಾಗಿರುತ್ತದೆ. ಕ್ರಯ ಪ್ರತಿ 1ರ 4 ಆಣೆ

ಹೆಚ್ಚು ಪ್ರತಿಗಳನ್ನು ಪಡಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾದೀತು.

ಇವುಗಳಲ್ಲದೆ ಅನೇಕ ಪುಸ್ತಕ ವಗೈರೆ ಸಾಮಾನುಗಳು ಸುಲಭ ಧಾರಣೆಗೆ ಸಿಕ್ಕುತ್ತವೆ.

ದಿ ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದಕ್ಷಿಣ ಕನ್ನಡ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸುವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮಕರವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸುವಲ್ಲಿ ಉತ್ತಮರಾಗುವಿರಿ.
ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

ಮೈಸೂರು ಏಜಂಟರು:—
ಮ। ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,
ದಿ ಚಾಂಪಿಯನ್ ಆಥಲೆಟಿಕ್ ಏಜನ್ಸಿ ಮೈಸೂರು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಪೆಟ್ಟಿ ೧ಕ್ಕೆ ೨-೦-೦. ದೊಡ್ಡ ಪೆಟ್ಟಿ ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೩ ತೊಲೆ.

ಇದಲ್ಲದೆ ಬೇರೆ ರೇಷ್ಮೆ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.
SIROMANI NARAYANA CHARYA & CO,
Choukhambay, BENARES CITY.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ.-1—8—0. ಟಪ್ಪಾಲು ಹಾಸಲು 4 ಆಣೆ

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ.1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಗೃಹಾರ್ಥಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

SREESITHA RAGHAVA VAIDYA SALA MYSORE

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ಪ್ರಿ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇಸ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ಷಾಮೋಷ್ಣ ... ಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ನಿಶ್ಚಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ... ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬುಂಬಾ ಆನಂದಭರಿತನಾಗಿದ್ದೇನೆ ... ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ... ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ.
ದಂತವೈದ್ಯರಿಂದ ಹಲ್ಲು ದವಡೆಗಳು ತೆಗೆಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್		STANY BROTHERS
ಮತ್ತು	ಸಬ್ ಏಜಂಟರು	Sole Agents
ಹಂಪನ್‌ಕಟ್ಟೆ ಶೋಪುಗಳಲ್ಲಿ	ಬೇಕಾಗಿವೆ.	C. M. C's, Toothache
ದೊರಕುವದು.		Specific, Mangalore.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ, ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮೀಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಛಳಿಕಾಲ! **(Best Shwals)** ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಶೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಧಡಾಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0 ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— ವ್ಯಾರಂ ಅಂಡು ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಸಿದ್ಧೌಷ ಪರೀಕ್ಷಿಸಿ ನೋಡಿರಿ !!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು.

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೆಡಿಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಆದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟೆ, ಕರುಳು, ಕಲಿಜೆಗಳಲ್ಲಿದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. ಟೂರಕಬ್ ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೋಕ, ಜನನೇಂದ್ರಿಯ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲಪ್ರರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ 1—12—0.

☞ ರಾಜಾ ಯುಕಲಿಪ್ಟಸ್ ತೈಲ ೩ ಆಣೆ. ಇಕ್ಸಿಪ್ಪ್ ಪ್ಲಾಂ ೩ ಆಣೆ; ಗಜಕರ್ಣದ ಮುಲಾಮು ೫. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರೆಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

Can be d at—**Electro Homeopathic Dispensary**, *Hampankatta, Mangalore.*

"ಲೇಕಾಂಜನಗಳು ಪ್ರತಿಸೃಷ್ಟಿಯಾಗಿರುವವು."

ಪಂಚಕರ್ಗಳಲ್ಲಿರುವ ಚೀಟಿಯನ್ನು ನೋಡಿಕೊಂಡರೆ ಮೋಸವಾಗಲಾರದು.

ಅಮೃತಾಂಜನವೇ ದಿವ್ಯಾಂಜನ.

ಅಮೃತಾಂಜನ ಎಲ್ಲಾ ನೋವಿಗೂ ಸಿದ್ಧೌಷಧ. ತಲೆನೋವು, ಕೀಲುಹೊಡತ, ವಾಯುನೋವು, ಪಕ್ಷವಾತಕ್ಕೆ, ಚಳುಕು, ಊದು, ಪಕ್ಕೆನೋವು, ಚೇಳುಕಡಿತ, ಉಬ್ಬಸ, ಕೆಮ್ಮಲು, ನೆಗಡಿ, ಹುಣ್ಣು ಮತ್ತು ಎಲ್ಲಾ ತರದ ಚರ್ಮರೋಗಗಳಿಗೆ ಅಮೃತಾಂಜನವೇ ಪರಮೌಷಧ. ಸಾವಿರಾರು ಮಂದಿ ಹೊಗಳಿ ಬರೆಯುತ್ತಾರೆ. ಸೊಗಸಾದ ಡಬ್ಬಿ ಸಹಿತ ಕ್ರಯ 0—8—0. 12 ಡಬ್ಬಿಗಳಿಗೆ ಕ್ರಯ ರೂ. 5—0—0. ಪರಸ್ಥಳಗಳಿಗೆ ವಿ. ಪಿ.ಯಿಂದಲೂ ರವಾನಿಸುತ್ತೇವೆ.

ಗಜಕರ್ಣ ಮುಲಾಮು ಡಬ್ಬಿ 1ರ ಬೆಲೆ 0—6—0.

ದಂತಮಂಜನ ಡಬ್ಬಿ 1ರ ಬೆಲೆ 0—3—0.

ರಖಮಾಗೂ ಚಿಲ್ಲರೆಯಾಗಿಯೂ ದೊರೆಯುವ ಸ್ಥಳ—

ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಉಚಿತ! ಕ್ರಯ 5 ರೂ. ಉಳ್ಳ ಇಂಗ್ಲಿಷ್ ವಾಚು. ಉಚಿತ!

ಈಕ್ಷೆಯಲ್ಲಿ ಕಂಡ ಇಂಕಿ ಇಲ್ಲದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಹಾಕುವಬಾಟ್ಲಿ ಇಂಕಿ ಸಹಿತ ರೂ. 2—2—0. ಇದನ್ನು ತರಿಸಿಕೊಳ್ಳುವವರಿಗೆ ಮೇಲೆ ಕಂಡ 5 ರೂ. ವಾಚು ಸ್ವಲ್ಪ ಕಾಲದವರೆಗೆ ಉಚಿತವಾಗಿ ಕೊಡಲ್ಪಡುತ್ತೆ.

ವಿಳಾಸ:— ಶಂಕರ್ ಕಂಪೆನಿ,
ಸೈದಾಪೇಟೆ, ಮದರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸುಗಂಧನಾಸಿಕಾ ಚೂರ್ಣ:— ಈ ನಾಸಿಕಾಚೂರ್ಣವು ಅತ್ಯುತ್ತಮವಾದ ಸುಗಂಧ ವಸ್ತುಗಳಿಂದ ತಯಾರಿಸಿದ್ದು. ಇದನ್ನು ಸಾಧಾರಣ ನಸ್ಯದೊಡನೇ ಕೊಂಚ ಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮೂಲಕವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು. ಇದು ತಲೆನೋವು, ಪಿತ್ತದಿಂದ ತಲೆ ತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವರ್ತಿ ಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವ್ರದು. ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1ಕ್ಕೆ 4 ಆಣೆ ಟಪ್ಪಾಲು ಚಾರ್ಜು 1 ಸೀಸೆಯಿಂದ 3 ಸೀಸೆವರಿಗೆ 3 ಆಣೆ 4 ಸೀಸೆಯಿಂದ 6 ಸೀಸೆವರಿಗೆ 5 ಆಣೆ, 7 ಸೀಸೆಯಿಂದ 12 ಸೀಸೆವರಿಗೆ 7 ಆಣೆ.

ಅಶೋಕಘೃತ:— ಸ್ತ್ರೀಗಳಿಗೆ ಕ್ರಮತಪ್ಪಿ ಬಹಿಷ್ಟೆಯಾಗೋಣ, ಮುಟ್ಟಾದ ಕಾಲದಲ್ಲಿ ಒಡಲು ನೋವುಂಟಾಗುವಿಕೆ, ಮುಟ್ಟು ಕಳೆಯುವರೆಗೂ ತೊಡೆಯ ಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವದು, ಹೊತ್ತು ಗೊತ್ತಿಲ್ಲದೆ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು, ಮಕ್ಕಳಿಲ್ಲದೆ ಬಹುಕಾಲ ಬಂಜೆಯಾಗಿರುವದು, ಪ್ರಾಡಿಕೆಯಾಗಿ ಗರ್ಭಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾತರದ ವ್ಯಾಧಿಗಳಿಗೂ ಅತ್ಯುತ್ತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು. ಸೀಸೆ 1ಕ್ಕೆ 1 ರೂಪಾಯಿ ಎರಡು ಸೀಸೆವರಿಗೆ ವಿ. ಪಿ. ಚಾರ್ಜು ೫ ಆಣೆ.

ಬೃಹತ್ ಚಂದ್ರೋದಯ ಮಕರಧ್ವಜ:— ನರಗಳ ದುರ್ಬಲತೆಗೂ, ಸತ್ವಗುಂದಿರುವುದಕ್ಕೂ, ಸ್ಪರ್ಶೇಂದ್ರಿಯವು ಕ್ಷೀಣಿಸಿರುವುದಕ್ಕೂ, ಜ್ಞಾಪಕಶಕ್ತಿಯು ಉಡುಗಿ ಹೋಗಿರುವುದಕ್ಕೂ ಮತ್ತು ಸ್ವಪ್ನ ಸ್ಖಲನಗಳಿಗೂ ಇದು ಅಮೂಲ್ಯ ಸಂಜೀವನವು. "ಮದ್ದು ಕುಡಿಯುತ್ತಲೆ ಎದ್ದು ಕುಳಿತುಕೊಂಡರು" ಎಂಬುದು ಮತ್ಯಾವ ಔಷಧಿಗಳಿಗೆ ಸಲ್ಲದಿದ್ದರೂ ನಮ್ಮ ಬೃಹತ್‌ಚಂದ್ರೋದಯ ಮಕರಧ್ವಜಕ್ಕೆ ಸಲ್ಲುವುದು. ಇಂದ್ರಜಾಲ ವಿದ್ಯೆಯೋ ಎಂಬಂತೆ ಇದನ್ನು ಸೇವನೆಮಾಡುತ್ತ ಬಂದ ಹಾಗೆಲ್ಲ ದಿನದಿನಕ್ಕೂ ವ್ಯಾಧಿಯನ್ನು ನೀಗಿ ಪಟುತ್ವವನ್ನು ಕೊಡುವ ವಿಷಯವು ಬಹು ಸ್ಪಷ್ಟವಾಗಿ ತಿಳಿಯುವುದರಿಂದ ನಾವೇ ವಿಶೇಷವಾಗಿ ಹೇಳಿ ಪ್ರಯೋಜನವಿಲ್ಲವು. ಚಿಕ್ಕಂದಿನಲ್ಲಿ ದುರ್ವ್ಯಾಪಾರಕ್ಕೆ ಬಿದ್ದ ಪುರುಷ ಶಕ್ತಿಯನ್ನೇ ಕೆಡಿಸಿಕೊಂಡಿರುವವರು ಇದನ್ನು ಉಪಯೋಗಮಾಡಿದಲ್ಲದೆ ಇದರ ಸರ್ವೋತ್ಕೃಷ್ಟತೆಯು ತಿಳಿಯುವುದು? ಬಹು ಸ್ವಲ್ಪಕಾಲದಲ್ಲಿಯೆ ಇಂದ್ರಿಯ ಪಟುತ್ವದವರನ್ನಾಗಿಮಾಡಿ ಸಂಪೂರ್ಣ ಪುರುಷ ಶಕ್ತಿಯನ್ನು ಕೊಡುವುದೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಒಂದು ವಾರದ ಮಟ್ಟಿಗೆ ಉಪಯೋಗವಾಗುವ ಔಷಧಕ್ಕೆ 5 ರೂಪಾಯಿ, ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರೆಯಬೇಕು.

MY ADDRESS.
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ! ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ, ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ. ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಹುಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,

"ರಿಂಗ್‌ವುಡ್," ಬೆಂಗಳೂರು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

.... । ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂಚಾಂಗವರ್ಧನಂ । ಕಾಸಶ್ವಾಸ ಕ್ಷಯ ವಿಶೇಷೇಣಾದಿಶ್ಯತೇ ॥
ಸ್ತ್ರೀಷುಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಂ ॥
ಜರಾಕೃತಂ ರೂಪಮಪಾಸ್ಯಸರ್ವಂ । ಬಿಭರ್ತಿರೂಪಂ ನವಯೌವನಸ್ಯ ।
ಜೀವನಾನಂದಸ್ಯ ಸ್ವಸನಂ ಪ್ರಯೋಗಾಲ್ಲಭೇತ ಜೀರ್ಣೋಪಿ ಕುಟೀಪ್ರವೇಶಾತ್ ॥

"..........ವಿಶ್ವತಸ್ಸರ, ಆನ್ನಕೋಶದ ರೋಗಗಳು, (ಅಜೀರ್ಣ ಮುಂತಾದ) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ, ಮುದುಕರಿಗೆ, ಮಕ್ಕಳಿಗೆ ದೇಹಪುಷ್ಟಿ ಬಲ ಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣಪಡಿಸುವುದು, ಶರೀರಕ್ಕೆ ಉದಯವನ್ನು ಕೊಡುವುದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿಸವಾಗುವಂತೆ ಮಾಡುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆರೋಗ್ಯವರ್ಧನ, ಧಾತುವನ್ನು ಗಟ್ಟಿಪಡಿಸುವುದೇ ಮುಂತಾದುವಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನು ಯೌವನಶರೀರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ಪಾಕ್ಷಾಲಂಪಟನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಮನುಷ್ಯನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿಯೊಬ್ಬರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅದರ ಸಂಗಡಲೇ ಜ್ವರ, ಕೆಮ್ಮು, ಎದೆನೋವು, ಶಿರಶ್ಶೂಲೆ ಸರ್ವ ರೋಗಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ

ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ (ಕೊಡಗು).

ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ಹಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗ?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಅಲ್ಬಿನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**

Sole Agents:—**MOHINI AGENCY,**

3 Fida Building, Jumma Musjid, BOMBAY.

Agents:—**Bhagavandas Choonilal & Co.,**

177 China Bazar Road, MADRAS.

ಪ್ರೊಪ್ರೈಟರರು: ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.

ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,

3 ಫಿಡಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬಾಯಿ.

ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,

177 ಚೀನಾ ಬಜಾರ ರಸ್ತೆ, ಮದ್ರಾಸು.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಕಾಲ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಕಾಲ, ಕ್ಷೇಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ವಾಸಿಯಾಗುವದು ನಿಶ್ಚಯವೇ. ಬೆಲೆ ಬಾಟ್ಲಿ ಒಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೩ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರದವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈ ಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.

ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.



ವಿಳಾಸ:— ರಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲ ವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಇಡುವದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು — ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸಲಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ನರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಪ್ಪಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವದೋ, ಬಜಾರಿನಲ್ಲಿ ದೊರೆಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಆ ಊರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಗೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳು 6, ವೈಭರಣೆ 1, ಅದ್ದಾ 1, ತಾಯಿತ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೋಗಳು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ವಾಸ್ ವಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3. ಇರುಳಪ್ಪನ್ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಷಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಹ ವ್ಯಕ್ತವಾಗುವದು. ಕನ್ನಡ ನುಡಿಯು ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಷಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,
ಮಂಗಳೂರು.

ಓದಿ ನೋಡಿರಿ! ಅಲಕ್ಷ್ಯ ಮಾಡಬೇಡಿರಿ!! ಬೇಗ ಬರೆಯಿರಿ!!!

ನೇಟಿವ್ ಡಾಕ್ಟರ್ ವಿ. ಎಸ್. ಕಾಮತ್‌ರವರ ಅನುಭವಸಿದ್ಧವಾದ

ಬಲಾಸಾರಿವಾದಿ ತೈಲವು.

ಇದು ವಾತ, ಪಿತ್ತ, ಶಿರೋಭ್ರಮಣ ಇತ್ಯಾದಿ ಸಮಸ್ತ ರೋಗಗಳಿಗೆ ದಿವ್ಯವಾದ ತೈಲವಾಗಿದೆ.

ಮಹಾಶಯರೇ! ದೇಹ ಬಾಹ್ಯ ಸುಖ ಕೊಡುವಂಥಾ ಇತರ 'ಸುಗಂಧಭರಿತ ತೈಲ'ಗಳಿಗೆ ಮನಸೋತು, ಧನವ್ಯಯ ಮಾಡಿಕೊಳ್ಳುತ್ತಿರುವದರ ಬದಲು ದೇಹದೊಳಗಣ ದೋಷಗಳಿಗೆ ಸುಖದಾಯಕವೂ ಗುಣಕಾರಿಯೂ ಆಗಿರುವ ಈ "ಬಲಾಸಾರಿವಾದಿ ತೈಲ"ದ ಒಂದೇ ಒಂದು ಸೀಸೆಯನ್ನು ತರಿಸಿ, ಉಪಯೋಗಿಸಿ ಇದರ ಗುಣವನ್ನು ತಮ್ಮ ಸ್ನೇಹಿತರಿಗೂ ಪ್ರಖ್ಯಾತಗೊಳಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ! ಸೀಸೆಯ ಬೆಲೆ: 0—8—0; ವಿ. ಪಿ. ಸಹಿತ 0—12—0; 3 ಸೀಸೆಗೆ ರೂ. 1—6—0; ವಿ. ಪಿ. ಚಾರ್ಜು ಪ್ರತ್ಯೇಕ.

☞ ಬೇಕು! ಎಲ್ಲೆಲ್ಲೂ ಏಜಂಟರು ಬೇಕು!! ಹೆಚ್ಚಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್, ಸುರತ್‌ಕಲ್, ದ. ಕ.

S. R. HEBBAR & Bros.,
Surathkal, S. Canara.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರಕ್ಕೇ ಮೇಲೆ ಹೇಳಿದ ವಿಷಯಗಳೆಲ್ಲ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೭ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಕಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 495

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ಮುಂಗಡ ಕೊಟ್ಟರೆ ರೂ. 1—4—0. ಕೊಡದಿದ್ದರೆ ರೂ. 2—1—0

ಪುಸ್ತಕ X — ಮಂಗಳೂರು ತಾ. 27ನೇ ಒಕ್ಟೋಬರ ಶುಕ್ರವಾರ 1916. — ಸಂಚಿಕೆ 42

Tissue Remedies & Homœpathic Medicines.

ಟಿಸ್ಯು ಮತ್ತು ಹೋಮಿಯೊಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರ ಹೋಗ ಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆಲ್ಲವನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ಸಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಸಾಮಾನ್ಯವಾಗಿ ಸರ್ವ ಔಷಧಿಗಳ ಸಂಗ್ರಹವು ನಮ್ಮಲ್ಲಿರುವದು.

ಯುಕಲಿಪ್ಟಸ್ ಒಯಿಲ್ ಎಂಬುವ ನೀಲಗಿರಿ ಎಣ್ಣೆ.

ಇದೇ ಮಾದರಿಯ ಎಣ್ಣೆ ಎಂತ ತಪ್ಪಾಗಿ ತಿಳಕೊಳ್ಳುವಂಥಾ ಇತರ ಕೆಲವು ಎಣ್ಣೆಗಳಂತೆ ಇದು ನಕಾರಿಯೂ ಅಲ್ಲ ಠಕಾರಿಯೂ ಅಲ್ಲ. ಹಲವು ಬೇನೆಗಳಿಗೆ ಗುಣಕಾರಿಯಾಗಿರುವಂಥಾದ್ದು. ಸೀಸೆ ಒಂದಕ್ಕೆ ಆಣೆ [illegible]. ಇದರ ಅನುಪಾನ ಪತ್ರದಲ್ಲಿ ಎಣ್ಣೆಯ ಪೂರ್ಣ ಉಪಯೋಗ ಕ್ರಮಗಳು ಇರುವವು.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರಾನ್ಸ್‌ಲೇಟರಾದ ಮ॥ ರಾ॥ ಬೆನಗಲ್ ರಾಮರಾವ್‌ರವರಿಂದ ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫೈನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕ ವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಚಾರ ವಿವೇಚನೆ ಬೆಲೆ 2 ಆಣೆ ಇತರ ಪ್ರಬಂಧನೆಗಳು — ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲೆ 3 ಆಣೆ, ಇತ್ಯಾದಿ.

ಬೆಳೆಯು ಕಟಾವಿಗೆ ಸಿದ್ಧವಿರುವಕಾಲ ಗೇಣಿಚೀಟುಗಳನ್ನು ಒಕ್ಕಲುಗಳಿಂದ ಬರಸಿಕೊಳ್ಳುವರು. ಈ ಬಗ್ಗೆ ಬೇಕಾಗುವ ಗೇಣಿಚೀಟು ಫೊರ್ಮುಗಳು ಮತ್ತು ಇತರ ಫೊರ್ಮುಗಳು, ಲೆಕ್ಕ ಬರೆಯುವ ಬಗ್ಗೆ ಬೇಕಾದ ಪುಸ್ತಕಗಳು ಬಿಕರಿಗೆ ಸಿದ್ಧವಿರುತ್ತವೆ.

ಮುದ್ರಣ ಕೆಲಸವಿರುವವರು — ದೊಡ್ಡ ದೊಡ್ಡ ಗ್ರಂಥಗಳಿಂದ ಸಣ್ಣ ಸಣ್ಣ ಲೇಬಲು ಮಾ ಚೀಟುಗಳ ಕೆಲಸಗಳು ಸಹ ನಮ್ಮ ಛಾಪಖಾನೆಯು ಕೈಕೊಳ್ಳುವದೆಂಬದನ್ನು ತಿಳಕೊಳ್ಳಬೇಕಾಗಿದೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೋ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೋ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಹುಡುಗರಿಗೂ, ದೊಡ್ಡವರಿಗೂ,
ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಸರ್ವರಿಗೂ
ಪ್ರಯೋಜನವಾದವುಗಳು!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.

ಕೆ. ದಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣುನಾಯಿ ಕುರುಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ನಿರ್ಣಯಸಾಗರಮುದ್ರಣಾಲಯದೊಳಗಿನ

ಕರ್ನಾಟಭಾಷಾತಾತ್ಪರ್ಯಸಹಿತವಾದ

ಭಗವದ್ಗೀತೆ.

ಮಹಾಜನರೇ!

ನಮ್ಮ ಹಿಂದೂ ಜನರಲ್ಲಿ ಭಗವದ್ಗೀತೆಯೆಂಬವನ್ನು ಹೆಸರು ಮಾತ್ರವಾಗಿಯಾದರೂ ಕೇಳಿ ತಿಳಿಯದ ಕುಟುಂಬವಿರಲಾರದು. ಪ್ರಾಯಶಃ ದೈವಭಕ್ತಿಯುಳ್ಳ ಜನರೆಲ್ಲರೂ ಪರಲೋಕ ಮುಕ್ತಿಗಾಗಿ ಪಾರಾಯಣ ಮಾಡುತ್ತಿರುವುದೂ ಸಹಜವಾಗಿದೆ. ಮತ್ತು ನಮ್ಮ ಹಿಂದೂ ಮತಾಚಾರ್ಯರೆಲ್ಲರೂ ಒಪ್ಪಿಕೊಂಡು ಅನೇಕ ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ಮಾಡಿ ನಮ್ಮೆಲ್ಲರಿಗೂ ಶಿರೋಭೂಷಣ ಗ್ರಂಥವನ್ನಾಗಿ ಈ ಭಗವದ್ಗೀತೆಯನ್ನು ಕೊಂಡಾಡಿರುವರು. ಇಂತಹ ಸರ್ವೋತ್ತಮ ಗ್ರಂಥವನ್ನು ಅಭಿಪ್ರಾಯ ತಿಳಿಯದೆ ಸುಮ್ಮನೆ ಪಾರಾಯಣ ಮಾಡುತ್ತಿರುವೆವಲ್ಲಾ ಎಂದು ಹಲವು ಮಂದಿ ಭಕ್ತಜನರು ಪರಿತಾಪ ಪಡುತ್ತಿರುವುದನ್ನು ನಮ್ಮ ಮುದ್ರಣಾಲಯಕ್ಕೆ ಅನೇಕ ಮಹನೀಯರು ತಿಳಿಸಿದರು. ಅದಕ್ಕಾಗಿ ಈ **ಭಗವದ್ಗೀತೆಗೆ** ಅತ್ಯಂತ ಸುಲಭವಾಗಿಯೂ ಬಹಳ ಲಲಿತವಾಗಿಯೂ ಇರುವ ಕನ್ನಡ ಭಾಷೆಯ ತಾತ್ಪರ್ಯವನ್ನು ಮೂಲಕ್ಕೆ ಸರಿಯಾಗಿ ಸಂಗ್ರಹವಾಗಿ ಬರೆಯಿಸಿ, ಇದರೊಡನೆ ಮೂಲವನ್ನು ಬೇರೆ ಬೇರೆ ಶ್ಲೋಕಗಳನ್ನಾಗಿ ಮುದ್ರಿಸಿ ಹೊರಪಡಿಸಿರುವೆವು.

ಈ ಸುಂದರವಾದ ಚಿಕ್ಕ ರೇಶ್ಮೆ ಬಾಯಿಂಡಿಂಗಿನ ಪುಸ್ತಕ ೧ಕ್ಕೆ ಬೆಲೆ ರೂ. ೧-೧೨-೦ ಆಣೆ. ಸಾದಾ ೦-೧೦-೦ ಆಣೆ.

ಪುಸ್ತಕ ದೊರೆಯುವ ಠಿಕಾಣೆ:—

ನಿರ್ಣಯಸಾಗರ ಪ್ರೆಸ,
ಕೋಲಭಾಟಲೇನ್ನ, ೨೩.
ಮುಂಬಯಿ, ನಂ. ೨.

ತುಕಾರಾಮ ಜಾವಜೀ,
ನಿರ್ಣಯಸಾಗರ ಮುದ್ರಣಾಲಯ ಮಾಲಕರು.

ಈ ಬುಕ್ಕು ಬಾಳಕೃಷ್ಣ ತುಕಾರಾಮ ಘರತ, ೮೬೩, ಠಾಕುರದ್ವಾರ ರೋಡ, ಮುಂಬಯಿ, ಇವರ ಕಡೆಗೆ ಸಿಗುವವು.

ಡಾಕ್ಟರ್ ನವರತ್ನರ

ಪರ್‍ಕ್ಯಾ ಕಲಾಪ್.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ.

5 ನಿಮಿಷದೊಳಗೆ ಕೂದಲು ಕಪ್ಪಾಗಿ ಸ್ಥಿರವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲ್ ಚಾರ್ಜು 0—4—0

Dr. Navaratna & Sons,
Kalbadevi Road. BOMBAY.

ಏಜಂಟರು:—**ಡಿ. ಊಲಪ್ ಮಾರ್ಟ್,**
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನ" ಇದು ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿಸ್ಸಂದೇಹವಾಗಿ ನಿರ್ಮೂಲಪಡಿಸುವದರಲ್ಲಿಯೂ ಅವು ಬಾರದ ಹಾಗೆ ತಡೆಕಟ್ಟುವದರಲ್ಲಿಯೂ ಅನುಪಮವಾದ ಔಷಧ. ಇದು ಮಲೆಜ್ವರಕ್ಕೆ ಪ್ರಖ್ಯಾತಿಪಟ್ಟ ಔಷಧಿಗಳ ಮತ್ತು ಇತರ ವಾಜೀಕರಣ ಗುಣವುಳ್ಳ ವನಸ್ಪತಿ ಜೀನಸ್ಸುಗಳಿಂದ ತಯಾರಿಸಲ್ಪಟ್ಟದ್ದಾಗಿದೆ. ಇಪ್ಪತ್ತು ವರ್ಷಗಳ ಪೂರ್ವದಿಂದ ನೆರೆಕರೆಯ ಮಲೆ ಪ್ರಾಂತ್ಯಗಳಲ್ಲೆಲ್ಲಾ ಬೇರೆ ಜ್ವರ ಹರಣಕಗಳಿಂದ ಗುಣವಾಗದಂಥಾ ಸಂಗತಿಗಳಲ್ಲಿ ಸಹ ತನ್ನ ಕರ್ತವ್ಯವನ್ನು ಯಾವಾಗಲೂ ಏಕಪ್ರಕಾರ ತಪ್ಪದೆ ನಡಿಸಿ ಮುಂಬಾಯಿಯ ಕತ್ಯಾವಾರ್, ಬಸ್ರದಲ್ಲಿ ಸಹ ತನ್ನ ಅಮೂಲ್ಯ ಗುಣಗಳನ್ನು ವಿಸ್ತರಿಸಿಯದೆ. ಬಾಟ್ಲಿ 1ರ ಕಿಮ್ಮತು ರೂ. 1—8—0. ಅಂಚೆ ಹಾಸಲು ಆಣೆ 6.

ವಿಳಾಸ:—

J. M. D. Vas, Kankanady. S. C.

ಜೆ. ಎಮ್. ಡಿ. ವಾಸ್, ಕಂಕನಾಡಿ, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚೆರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂಧರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನವಸ್ಥ ಮೆ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚ್ಯುಯರಿ:— ಮೆ| ಜೋಜ್‌ಗಿರಂಗ್ ಬಿಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0 2—8—0, 1—4—0, 1—0—0

ಅರಗಜ ಮತ್ತು ಛಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡ್ರು 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು. ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧॥ ಆಣೆ.
ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝುಫರಪುರ, ಬರಿಯುತ್ತಾರೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:— ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ."

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು, ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. Kately & Co.
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ESTABLISHED: JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು:

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	357,116—5—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-.

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st October 1916.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	225,000—0—0
ಸಂದ ಮೂಲ ಧನವು ,, ...	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	357,116—5—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸ್ಸೆದಾರರಿಂದ ಸೇರಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾ ಪತ್ರಗಳಲ್ಲಿ ಠೇವಣಾತಿ ಇರಿಸಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭಾಂಶವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮೇಲಿನ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡೆಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವಿದೆ. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುತ್ತದೆ. ಯೋಗ್ಯ ಜಾಮೀನು ಮೇಲೆ ಮತ್ತು ಆಧಾರದ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯು ಮೂತ್ರವನ್ನೂ ಶೀತಲೇಪನ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲಾ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಶಾಸ್ತ್ರೋಕ್ತವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಹುಜ್ಞಾನ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಬಗೆನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಅಪೂರ್ವ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಸನ್ನಿಪಾತ ಜ್ವರ ಮುಂತಾದ ಎಲ್ಲಾ ಜ್ವರಗಳನ್ನೂ ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಕ್ಷಯ, ಉಬ್ಬಸ, ಶ್ವಾಸಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಕಾಲ್ಯಾಣ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಚಾವನ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಾಗು, ವಾತ ಬಾವುಗಳನ್ನೂ ತಕ್ಷಣ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ಹುಳುಕಡ್ಡಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉತ್ತಮ ಪರಿಮಳ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸೌವೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಅಥವಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಸ್ವದೇಶಾಭಿಮಾನಿ

ಮಂಗಳೂರು ಶಕ ೧೮೩೮ ಕಾರ್ತಿಕ ಶು. ೧ ಶುಕ್ರವಾರ.

ಇದೇ ಬೇಕಾದುದು!

ಕಲಕತ್ತೆಯಲ್ಲಿಯ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಪರಮ ಪೂಜ್ಯರಾದ ಡಾ. ದಾದಾಭಾಯಿಯವರು ಸ್ವರಾಜ್ಯವೇ ಹಿಂದೀ ಜನರ ರಾಜಕೀಯ ಚಳವಳಿನ ಅಂತಿಮ ಧ್ಯೇಯವಾಗಿರಬೇಕೆಂದು ಹೇಳಿದಂದಿನಿಂದ ಹಿಂದೀ ಸುಶಿಕ್ಷಿತರಲ್ಲಿ ಸ್ವರಾಜ್ಯದ ಬಯಕೆಯು ಮೂಡಿದ್ದಾದರೂ ಪ್ರಜಾವತ್ಸಲರಾದ ಲೋರ್ಡ ಹಾರ್ಡಿಂಜ ದೊರೆಗಳು ವೈಸರಾಯರಾಗಿರುವಾಗ ಹಿಂದೀ ಜನರ ಈ ಆಕಾಂಕ್ಷೆಯನ್ನು ಯಾವಾಗ ಪ್ರೋತ್ಸಾಹಿಸಿದರೋ ಅಂದಿನಿಂದ ಸ್ವರಾಜ್ಯ ಅಥವಾ ಹೋಮರೂಲಿನ ವಿಷಯದಲ್ಲಿ ಸಾಮಾನ್ಯವಾಗಿ ನಮ್ಮ ಇಡೀ ಜನಾಂಗವು ಸಾತ್ವಿಕ ವೃತ್ತಿಯಿಂದ ಚರ್ಚಿಸುತ್ತಿದೆ, ರಾಜ್ಯಕರ್ತರೊಡನೆ ಅದನ್ನು ವಿನಯದಿಂದ ಕೇಳುತ್ತಿದೆ, ಅದಕ್ಕೆ ಬೇಕಾದ ಪಾತ್ರತೆಯನ್ನು ತನ್ನಲ್ಲಿ ತರಲು ಧೀರವೃತ್ತಿಯಿಂದ ಯತ್ನಿಸುತ್ತಿದೆ. ಹೋಮರೂಲಿನ ವಿಷಯವಾಗಿ ಮತ್ತು ಅದು ಹಿಂದುಸ್ಥಾನದ ಹೋಮರೂಲಿನ ವಿಷಯವಾಗಿ ಸ್ವಲ್ಪ ಪ್ರಸ್ತಾಪ ಎತ್ತಿದ ಕೂಡಲೆ ಎಷ್ಟೋ ಜನರು ಎಷ್ಟೋ ವಿಧದಿಂದ ಈ ಪ್ರಶ್ನೆಯ ಉಪಹಾಸ, ತಿರಸ್ಕಾರ ಮತ್ತು ದೂಷಣೆಗಳನ್ನು ಮಾಡುವುದುಂಟು. ಇಂಥ ಜನರಲ್ಲಿ ಎಂಗ್ಲೋ ಇಂಡಿಯನ್ನರೇ ಹೆಚ್ಚು. ನಮ್ಮವರಲ್ಲಿಯೂ ಹಲವರು ಇರುವರು. ಆದರೆ ಅವರು ಈ ಎಂಗ್ಲೋ ಇಂಡಿಯನ್ನರ ಬೆನ್ನನ್ನು ಹಿಡಿದು ಹಿಂದಿನಿಂದ ಕುಣಿಯುವವರಾದುದರಿಂದ ಇವರನ್ನು ಆ ಎಂಗ್ಲೋ ಇಂಡಿಯನ್ನರಲ್ಲಿ ಸೇರಿಸುವುದೇ ಒಳ್ಳೇದು. ಹಿಂದೀ ಹೋಮರೂಲಿನ ಮಂಗಲಾಚರಣೆಯನ್ನು ಅಥವಾ 'ಸೂತ ಉವಾಚ' ವನ್ನು ಮಾಡಿದ ಕೂಡಲೆ ಈ ಎಂಗ್ಲೋ ಇಂಡಿಯನ್ನರು ಹೇಳುವ ಮೊದಲನೆ ಮಾತು—ಹಿಂದುಸ್ಥಾನಕ್ಕೆ ಸ್ವರಾಜ್ಯ ಕೇಳುವವರಲ್ಲಿ ಯೋಗ್ಯರಾದವರು ಯಾರೂ ಇಲ್ಲ; ಇದನ್ನು ಕೇಳುವವರು ಯೋಗ್ಯವಾದ ಜವಾಬುದಾರಿಯಿದ್ದವರಲ್ಲ, ಸಮಯ ಹೋಗದ ವರ್ತಮಾನ ಪತ್ರಕಾರರು, ಉದ್ಯೋಗವಿಲ್ಲದ ಕೆಲವು ವಕೀಲರು ಅಲ್ಲದೆ ಯೋಗ್ಯರಾದವರು ಇದನ್ನು ಕೇಳುವುದಿಲ್ಲ. ಈ ಆಕ್ಷೇಪದೊಟ್ಟಿಗೆ ಅದೇ ಎಂಗ್ಲೋ ಇಂಡಿಯನ್ನರು ಇನ್ನೊಂದು ಅಡ್ಡಿಯನ್ನು ತೋರಿಸುವರು. ಆ ಅಡ್ಡಿಯಂತು ಬಹು ನಾಜೂಕಿದೆ. ಹಿಂದೀ ಜನರಿಗೆ ಸ್ವರಾಜ್ಯ ಕೊಟ್ಟರೆ ಸಾಕೆ? ಅದನ್ನು ನಡಿಸಿಕೊಂಡು ಹೋಗುವ ಪಾತ್ರತೆಯು ಬೇಕಾಯಿತಲ್ಲವೆ? ಅದು ಅವರಲ್ಲಿದೆಯೆ? ಹಿಂದೀ ಜನರಲ್ಲಿ ಅನೇಕ ಭೇದಗಳೂ ವಿರೋಧಗಳೂ ಇರುವಾಗ ಆ ಪಾತ್ರತೆಯಾದರೂ ಅವರಲ್ಲಿ ಹೇಗೆ ಬಂದೀತು? ಈ ರೀತಿಯಿಂದ ಎಂಗ್ಲೋ ಇಂಡಿಯನ್ನರು ನಮ್ಮ ಹೋಮರೂಲಿನ ಪ್ರಶ್ನೆಗೆ ಮುಖ್ಯವಾಗಿ ಎರಡು ಅಡ್ಡಿಗಳನ್ನು ತೋರಿಸುತ್ತಿದ್ದರು. ಆದರೆ ಇನ್ನು ಮುಂದೆಯಾದರೂ ಅವರ ಈ ಅಡ್ಡಿಗಳು ನಿಲ್ಲಲಿಕ್ಕಿಲ್ಲ, ಒಂದುವೇಳೆ ನಿಂತರೂ ಅವುಗಳ ಸೌಭಾಗ್ಯವು ಅಸ್ತವಾಯಿತೆಂತ ಹೇಳಬಹುದು.

ಕಾರಣವೇನೆಂದರೆ, ವರಿಷ್ಠನ್ಯಾಯವಿಧಾಯಕ ಸಭೆಯ ಹಿಂದೀ ಸಭಾಸದರು ಯುದ್ಧದ ಅನಂತರ ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ—ರಾಜಕೀಯ ಪರಿಸ್ಥಿತಿಯಲ್ಲಿ ಯಾವ ಯಾವ ಬದಲಾವಣೆಗಳು—ಸುಧಾರಣೆಗಳು ಆಗಬೇಕಾಗಿವೆಂಬುದರ ವಿಷಯದಲ್ಲಿ ಒಂದು ಮಸೂದೆಯನ್ನು ವೈಸರಾಯರ ಮುಖಾಂತರ ಸ್ಟೇಟ ಸೆಕ್ರೆಟರಿಗಳಿಗೆ ಕಳುಹಿಸಿಕೊಟ್ಟಿರುವರು. ಆ ಮಸೂದೆಯಲ್ಲಿ ನಿರ್ದಿಷ್ಟವಾದ ಮುಖ್ಯ ಮುಖ್ಯ ಸುಧಾರಣೆಗಳು ಯಾವವೆಂದರೆ—೧. ಪ್ರಾಂತಿಕ ಮತ್ತು ವರಿಷ್ಠ ಕಾಯಿದೆ ಕೌನ್ಸಿಲುಗಳಲ್ಲಿ—ಲೋಕನಿಯುಕ್ತ ಪ್ರತಿನಿಧಿಗಳ ಮತಾಧಿಕ್ಯವೇ ಸಂಪೂರ್ಣವಾಗಿರಬೇಕು. ೨. ಎಲ್ಲ ಕಾರ್ಯವಿಧಾಯಕ ಕೌನ್ಸಿಲುಗಳಲ್ಲಿ ಕಡಿಮೆ ಪಕ್ಷಕ್ಕೆ ಅರ್ಧವಾದರೂ ಹಿಂದೀ ಅಧಿಕಾರಿಗಳಿರಬೇಕು. ಮತ್ತು ಬಾಕಿ ಉಳಿದ ಅಧಿಕಾರಿಗಳು ಇಂಗ್ಲಂಡದೊಳಗಿನ ಮುತ್ಸದಿ ವರ್ಗಕ್ಕೆ ಸೇರಿದವರಾಗಿರಬೇಕು. ೩. ಜಮಾ ಖರ್ಚಿನ ವಿಷಯದಲ್ಲಿ ಯಾಗೆಲಿ, ಕರವನ್ನು ವಿಧಿಸುವುದರಲ್ಲಿ ಯಾಗಲಿ, ಹೆಚ್ಚು ಕಡಿಮೆ ಮಾಡುವುದರಲ್ಲಿ ಯಾಗಲಿ ಹಿಂದೀ ದೇಶಕ್ಕೆ ಪೂರ್ಣ ಸ್ವಾತಂತ್ರ್ಯವಿರಬೇಕು. ೪. ಪ್ರಾಂತದ ಆಡಳತೆಯು ಪೂರ್ಣವಾಗಿ ಪ್ರಾಂತದ ಅಧಿಕಾರಕ್ಕನೇ ಒಳಪಟ್ಟಿರಬೇಕು. ೫. ಮುನ್ಸಿಪಾಲಿಟಿ ಮತ್ತು ಲೋಕಲ್ ಬೋರ್ಡು ಇವುಗಳ ಎಲ್ಲ ಸಭಾಸದರು ಲೋಕನಿಯುಕ್ತ ಎಂದರೆ ಜನರಿಂದ ನೇಮಿಸಲ್ಪಟ್ಟವರಾಗಿರಬೇಕು ಮತ್ತು ಅಧ್ಯಕ್ಷನಾಗುವವನು ಅವರೊಳಗಿನವನೇ ಆಗಿರಬೇಕು. ೬. (ಈ ದೇಶಕ್ಕೆ) ಸ್ವಯಂ ಸೈನಿಕತ್ವದ ಹಕ್ಕು ಕೊಡಬೇಕು. ೭. ಸೈನ್ಯದೊಳಗಿನ ವರಿಷ್ಠ ಅಧಿಕಾರದ ಸ್ಥಾನಗಳು ಎತದ್ದೇಶೀಯರಿಗೆ ಸಿಗಬೇಕು. ೮. ಆಯುಧಗಳನ್ನು ಉಪಯೋಗಿಸಲು ಹಕ್ಕು ಕೊಡಬೇಕು. ೯. ಸಂಯುಕ್ತ ಪ್ರಾಂತ, ಪಂಜಾಬ ಮೊದಲಾದ ಭಾಗಗಳಿಗೆ ಒರತಕ್ಕ ಗವರ್ನರರು ವಿಲಾಯತಿಯಿಂದ ನೇಮಕಪಟ್ಟವರಾಗಿರಬೇಕು. ೧೦. ಸಾಮ್ರಾಜ್ಯ ಸಂಘದಲ್ಲಿ ಹಿಂದೀ ಪ್ರತಿನಿಧಿಗಳ ಪ್ರಮಾಣವು ಇತರ ಭಾಗಗಳಷ್ಟೆಯೇ ಇರಬೇಕು. ೧೧. ಸ್ಟೇಟ ಸೆಕ್ರೆಟರಿಯ ಕೌನ್ಸಿಲನ್ನು ಮುರಿದು ಹಾಕಿ ಅವನ ಸಂಬಳವನ್ನು ಇಂಗ್ಲಂಡದ ಖಜಾನೆಯಿಂದ ಕೊಡಬೇಕು. ೧೨. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರ ಸಂಖ್ಯೆಯು ೧೫೦, ಬಂಗಾಲ, ಮುಂಬಾಯಿ ಮತ್ತು ಮದ್ರಾಸು ಕೌನ್ಸಿಲುಗಳಲ್ಲಿಯ ಸಭಾಸದರ ಸಂಖ್ಯೆಯು ೧೦೦ ಮತ್ತು ಬಾಕಿ ಕೌನ್ಸಿಲುಗಳಲ್ಲಿ ಕನಿಷ್ಠ ಪಕ್ಷಕ್ಕೆ ೬೦ ಸಭಾಸದರು ಇರಬೇಕು.

ವರಿಷ್ಠ ಕಾಯಿದೆ ಕೌನ್ಸಿಲಿನ ಮೆಂಬರುಗಳ ಮಸೂದೆಯಲ್ಲಿ ತೋರಿಸಿರುವ ಈ ೧೨ ಕಲಮುಗಳನ್ನು ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿದರೆ ರಾಷ್ಟ್ರೀಯ ಅಥವಾ ಪ್ರಾಂತಿಕ ಸಭೆಗಳ ಸ್ವರಾಜ್ಯದ ನಿರ್ಣಯಕ್ಕೂ ಈ ಮಸೂದೆಗೂ ಹೆಚ್ಚಿನ ಅಂತರವನ್ನು ತೋರಿಸಲಾಗದು. ಹಿಂದೀ ಸಭಾಸದರ ಈ ೧೪ ಆಕಾಂಕ್ಷೆಗಳು ಫಲಿಸಿದ್ದಾದರೆ ಸ್ವರಾಜ್ಯದ ಮುಕ್ಕಾಲು ಅಂಶ ನೆರಗಿನಲ್ಲಿ ಬಿದ್ದೀತೆಂತ ಅನ್ನಬಹುದು. ಕಾಯಿದೆ ಕೌನ್ಸಿಲುಗಳಲ್ಲಿ 'ಲೋಕಪಕ್ಷದ ಮತಾಧಿಕ್ಯವು ತುಂಬಾ' ಇರಬೇಕೆಂದು ಮಾತ್ರ ಆ ಮಸೂದೆಯಲ್ಲಿ ಹೇಳಿದಲ್ಲದೆ ಆ ಮತಾಧಿಕ್ಯವು ಯಾವ ಪ್ರಮಾಣದಲ್ಲಿರಬೇಕೆಂಬುದನ್ನು ತೋರಿಸಲಿಲ್ಲ. ಆದರೆ ನಿಜವಾದ ಹೋಮರೂಲೆಂದರೆ ನ್ಯಾಯವಿಧಾಯಕ ಸಭೆಯಲ್ಲಿ ಲೋಕನಿಯುಕ್ತ ಮತ್ತು ಸರಕಾರ ನಿಯುಕ್ತ ಸಭಾಸದರ ಮಿಶ್ರಣವು ಇರುವದಲ್ಲ. ಈಗ ಕಾಯಿದೆಗಳನ್ನು ಮಾಡುವ ಕೆಲಸವು ಪೂರ್ಣವಾಗಿ ಜನರ ಕೈಗೆ ಒಪ್ಪಿಸುವುದು ಸರಕಾರಕ್ಕೆ ಇಷ್ಟ ತೋರದಿದ್ದರೆ ಈ ಕೌನ್ಸಿಲಿನ ಮೇಲೆ ಅಧಿಕಾರ ನಡಿಸಲು ಒಂದು 'ಸರದಾರ ಕೌನ್ಸಿಲ'ನ್ನು ನೇಮಿಸಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದಾದರೂ ಸಮಂಜಸವೇ ಸರಿ. ಪ್ರಕೃತ ಮಸೂದೆಯೊಳಗಿನ ಉಪಯುಕ್ತ ಮತ್ತು ಇಷ್ಟವಾದ ಸೂಚನೆಗಳಲ್ಲೊಂದಾವದೆಂದರೆ ವರಿಷ್ಠ ಹಾಗೂ ಪ್ರಾಂತಿಕ ಕೌನ್ಸಿಲುಗಳ ಸಭಾಸದರ ಸಂಖ್ಯೆಯನ್ನು ಹೆಚ್ಚಿಸುವುದು. ಈ ಸೂಚನೆಯಂತೆ ಸಭಾಸದರ ಸಂಖ್ಯೆಯನ್ನು ಹೆಚ್ಚಿಸುವದರಿಂದ ಮತದಾರ ಸಂಘದ ಮರ್ಯಾದೆಯನ್ನು ವಿಸ್ತೃತಪಡಿಸಲು ಸಂದರ್ಭವು ಒದಗುತ್ತದೆ. ಇದು ಹೋಮರೂಲಲೀಗಿನ ತತ್ವಕ್ಕೆ ಬಿಟ್ಟಿರುವುದಿಲ್ಲ. ಅಲ್ಲದೆ ಜಮಾ ಖರ್ಚಿನ ವಿಷಯದಲ್ಲಿ ಹಿಂದುಸ್ಥಾನ ಸರಕಾರಕ್ಕೂ ಮತ್ತು ಪ್ರಾಂತಿಕ ಸರಕಾರಗಳಿಗೂ ಆರ್ಥಿಕ ಸ್ವಾತಂತ್ರ್ಯವನ್ನು ಕಾದಿಡುವಂತೆ ವಿಧಿಸಿದ ಸೂಚನೆಗಳಾಗಲಿ, ಆಯುಧಗಳ ಪ್ರತಿಬಂಧವನ್ನು ತೆಗೆದುಹಾಕುವುದು, ಹಿಂದೀ ಜನರಿಗೆ ಸ್ವಯಂ ಸೈನಿಕತ್ವದ ಮತ್ತು ಸೈನ್ಯದೊಳಗಿನ ವರಿಷ್ಠ ಅಧಿಕಾರಗಳ ಜಾಗೆಗಳನ್ನು ಕೊಡುವುದು ಇವೇ ಮುಂತಾದ ಆಲೋಚನೆಗಳಾಗಲಿ ಸ್ವರಾಜ್ಯದ ತತ್ವವನ್ನು ಅವಲಂಬಿಸಿಕೊಂಡಿವೆ. ಈ ಮಸೂದೆಯಲ್ಲಿ ಸಾಮ್ರಾಜ್ಯದ ವ್ಯವಹಾರಗಳಲ್ಲದೆ ಬೇರೆ ಸಂಗತಿಗಳಲ್ಲಿ ಕಾಯದೆ ಕೌನ್ಸಿಲಿನ ಅಧಿಕಾರವೇ ಮುಖ್ಯವಾಗಿ ನಡೆಯಬೇಕೆಂತಲೂ, ಒಂದುವೇಳೆ ಅನಿಷ್ಟವಾಗಿ ತೋರುವ ಒಂದು ಕಾಯಿದೆಯನ್ನು ತೆಗೆದು ಹಾಕಲು ಹೆಚ್ಚೆಂದರೆ ಬಾದಶಹರ ಪ್ರತಿನಿಧಿಗಳಲ್ಲದೆ ಅನ್ಯರಿಗೆ ಅಧಿಕಾರವಿರಬಾರದೆಂತಲೂ ಒಂದು ಸಂಗತಿಯನ್ನು ಸಭಾಸದರು ಸೂಚಿಸಿರುವರು. ಅದು ಅತಿ ಮಹತ್ವದ್ದಾಗಿದೆ.

ಈ ಮಸೂದೆಯನ್ನು ಕಳುಹಿಸಿ ಕೊಟ್ಟವರು ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರುಗಳೆಂಬುದನ್ನು ಸಾಮಾನ್ಯವಾಗಿ ಮೇಲೆ ಹೇಳಿದ್ದೇವಾದರೂ ಆ ವಿಷಯದಲ್ಲಿ ಅದಿಷ್ಟು ವಿವರಣೆಯನ್ನು ಕೊಡುವುದು ಉಚಿತವಾಗಿದೆ. ವರಿಷ್ಠ ನ್ಯಾಯ ಸಭೆಯಲ್ಲಿ ಲೋಕನಿಯುಕ್ತ ಪ್ರತಿನಿಧಿಗಳು ೨೫ ಜನರಿರುವರು. ಅವರಲ್ಲಿ ಸಿಮ್ಲಾದಲ್ಲಿ ಆ ದಿನ ಮೂವರು ಹಾಜರಿರಲಿಲ್ಲ, ಹಾಜರಿದ್ದವರಲ್ಲಿ ಮೂವರು ಈ ಪತ್ರಕದ ಮೇಲೆ ಸಹಿ ಹಾಕಲಿಲ್ಲ, ಬಾಕಿ ೧೯ ಮಂದಿ ಸಭಾಸದರ ಸಹಿಯಿಂದ ಈ ಪತ್ರಕವು ವೈಸರಾಯರ ಕೈಗೆ ಸೇರಿರುವದು. ಈ ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಯೋಗ್ಯತೆಯನ್ನಾಗಲಿ ರಾಜಲೋಕಮಾನ್ಯತೆಯನ್ನಾಗಲಿ ನಾವು ರುಜು ಪಡಿಸುವುದೆಂದರೆ ಸೂರ್ಯನನ್ನು ಇಲೆಕ್ಟ್ರಿಕ್ ಲೆಂಪಿನಿಂದ ತೋರಿಸುವಷ್ಟೆ ಉಪಹಾಸಾಸ್ಪದವಾಗುವುದು!

ವರಿಷ್ಠ ನ್ಯಾಯವಿಧಾಯಕ ಮೆಂಬರುತನವು ಮೂರು ನಾಲ್ಕು ಯಂತ್ರಗಳಿಂದ ಗಾಳಿಸಲ್ಪಟ್ಟು ಅತಿಶುದ್ಧಾವಸ್ಥೆಗೆ ಬಂದದ್ದು. ಮುನ್ಸಿಪಲ ಮತ್ತು ಲೋಕಲ ಬೋರ್ಡು ಮೆಂಬರು ಸಾಮಾನ್ಯ ಲೋಕಮತದಿಂದ ಆರಿಸಲ್ಪಟ್ಟವರು. ಈ ಮೆಂಬರರಿಂದ ಆರಿಸಲ್ಪಟ್ಟವರು ಪ್ರಾಂತದ ಕೌನ್ಸಿಲುಗಳ ಸಭಾಸದರು. ಪುನಃ ಅವರಿಂದ ಆರಿಸಲ್ಪಟ್ಟವರು ಈ ವರಿಷ್ಠ ಸಭೆಯ ಮೆಂಬರುಗಳು. ಇಂಥವರ ಯೋಗ್ಯತೆಯ ವಿಷಯದಲ್ಲಿ ಅಥವಾ ಈ ಲೇಖದ ಆರಂಭದಲ್ಲಿ ಹೇಳಿದ್ದಂತೆ ಜವಾಬದಾರಿಯ ವಿಷಯದಲ್ಲಿ ಎಂಗ್ಲೊಇಂಡಿಯನ್ನರಾಗಲಿ ಸರಕಾರದ ಅಧಿಕಾರಿಗಳಾಗಲಿ ಆಕ್ಷೇಪಿಸಿದರೆ ಆ ಆಕ್ಷೇಪವು ಬರೆ ಬೆಲೆಯಿಲ್ಲದ್ದಾಗುವುದು. ಆದುದರಿಂದ ಸರಕಾರದ ಅಧಿಕಾರಿಗಳು ಈಗ ಇಂಥ ಆಕ್ಷೇಪಗಳನ್ನು ಎತ್ತುವುದೇ ಇಲ್ಲ ಮತ್ತು ಅದು ಸಮಂಜಸವೇ ಸರಿ. ಹಾಗೂ ಇದೇ ಕಾರಣದಿಂದ ಈಗಿನ ವೈಸರಾಯರು ಈ ತಮ್ಮ ಸ್ವಂತ ಕೌನ್ಸಿಲಿನವರ ಸೂಚನಾ ಪತ್ರಿಕೆಯನ್ನು, ಅವರ ಜವಾಬದಾರಿಯನ್ನೂ ಯೋಗ್ಯತೆಯನ್ನೂ ಅರಿತೇ ಮುಂದಕ್ಕೆ ಕಳುಹಿಸಿಕೊಟ್ಟಿದ್ದಾರೆಂಬುದಕ್ಕೆ ಪ್ರತ್ಯವಾಯವಿಲ್ಲ. ಆದರೆ ಎಂಗ್ಲೊಇಂಡಿಯನ್ನರು ಇನ್ನೂ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಮೊದಲಿನಂತೆ ಹೇಳುವುದಾದರೆ ಹೇಳಿಕೊಳ್ಳಲಿ! ಹೇತು, ಆಧಾರ, ಅನುಭವ ಮತ್ತು ಮುಖ್ಯವಾಗಿ ಸಮದೃಷ್ಟಿ ಹಾಗು ಸಹಾನುಭೂತಿ ಇವುಗಳಿಲ್ಲದೆ ವೃಥಾ ಬಾಯಿಗೆ ಬಂದಂತೆ ವಾದಿಸುವವರ—ಬಡಬಡಿಸುವವರ—ಬಾಯಿಗೆ ಯಾರು ಬೀಗ ಹಾಕುವರು? ಆದರೆ ವಿವೇಕಿಗಳಿಗೆ ಇನ್ನು ಮುಂದೆ 'ಜವಾಬದಾರರಾದವರು ಸ್ವರಾಜ್ಯವನ್ನು ಕೇಳುವುದಿಲ್ಲ'ವೆಂಬ ಮಾತನ್ನೆತ್ತಲು ಎಡೆಯಿರಲಿಕ್ಕಿಲ್ಲ. ಇದೇ ನಮಗೀಗ ಬೇಕಾದುದು!

ಬಹುಮಾನಪಟ್ಟ ಸಭಾಸದರ ಈ ಮಸೂದೆಯಿಂದ ಈಗ ಹೇಳಿದ ಆಕ್ಷೇಪ ಮಾತ್ರ ನಿರುತ್ತರವಾಗಿದೆಂತಲ್ಲ, ಹಿಂದುದೇಶದಲ್ಲಿ ವರ್ಣ, ಜಾತಿ, ಮತ ಮುಂತಾದ ಭೇದಗಳು ಧಾರಾಳವಾಗಿರುವುದರಿಂದ ಜನದೊಳಗೆ ಸಮ ಬುದ್ಧಿಯುಂಟಾಗುವುದು ಅಸಾಧ್ಯವೆಂದು ವಾದಿಸುವವರ ಯುಕ್ತಿವಾದವೂ ಅಯುಕ್ತವಾಗಿ ಹೋಗಿದೆ. ಈ ೧೯ ಜನ ಸಭಾಸದರಲ್ಲಿ ಹಿಂದು, ಮಹಮದಿ ಹಾಗು ಪಾರ್ಸಿ ಈ ಬೇರೆ ಬೇರೆ ಮತದವರಿರುವುದರಿಂದ ಇನ್ನು ಮುಂದೆ ಯಾರಿಗಾದರೂ ರಾಜಕೀಯ ಚಳವಳಿನ ಕ್ರೀಡಾ ಪಟದ ಮೇಲೆ ಈ ಜಾತಿಭೇದದ ಆಟವನ್ನು ಆಡಲು ಸಾಧ್ಯವಿದೆಯೆ? ಜಾತಿಮತಗಳ ಭೇದಗಳೂ ಕಿಂಬಹುನಾ ವಿರೋಧಗಳೂ ಎಷ್ಟಿದ್ದರೂ ಅವುಗಳನ್ನೆತ್ತಿಕೊಂಡು ರಾಜಕೀಯ ಹಿತದ ವಿಘಾತವನ್ನು ಮಾಡಿಕೊಳ್ಳುವಷ್ಟು ಬುದ್ಧಿವಂತಿಕೆಯು ಈ ಇಪ್ಪತ್ತನೆ ಶತಮಾನದಲ್ಲಿ ಯಾರಲ್ಲೂ ಇರಲಿಕ್ಕಿಲ್ಲ. ಸ್ವಾಭಾವಿಕವಾದ ಮತಭೇದಗಳೂ, ಜಾತಿಭೇದಗಳೂ ಇದ್ದರೂ ಅವು ಆಯಾ ಕೆಲಸಗಳಲ್ಲಿ ಮಾತ್ರವಲ್ಲದೆ ಎಲ್ಲ ಕಡೆಗಳಲ್ಲಿ ಅವುಗಳ ಸಂಪರ್ಕವನ್ನೂಹಿಸುವುದು ಸರಿಯಲ್ಲ. ಸ್ವರಾಜ್ಯವನ್ನುಪಭೋಗಿಸುತ್ತಿದ್ದ ಎಷ್ಟೋ ದೇಶಗಳಲ್ಲಿ ಇಂಥ ಸ್ವಾಭಾವಿಕ ಭೇದಗಳು ಇದ್ದೇ ಇವೆ. ಅವುಗಳಿಂದ ಅಲ್ಲಿಯ ಸ್ವರಾಜ್ಯಕ್ಕೆ ಯಾವ ತೊಡಕೂ ಇಲ್ಲ. ಹಿಂದುಸ್ಥಾನದಲ್ಲಿ ಮಾತ್ರ ಆ ಭೀತಿಯಿಂದ ಈ ಆಕ್ಷೇಪಕರು ನಡುಗುವುದೇಕೆ? ಬೇರೆಯವರನ್ನು ನಡುಗಿಸುವುದೇಕೆ? ಆದರೆ ಇವರ ಈ ಭಯ ಅಥವಾ ಭ್ರಮೆಯು ಭಿನ್ನ ಭಿನ್ನ ಮತ, ಜಾತಿ ಮತ್ತು ವರ್ಣದವರಾದ ಮಾನ್ಯ ಸಭಾಸದರು ಏಕಮತದಿಂದ ಸ್ವರಾಜ್ಯ ಕೇಳಿದ್ದನ್ನು ನೋಡಿ ಹೋದೀತೆಂದು ತೋರುತ್ತದೆ. ಕಾರ್ಯವೇ ಉತ್ತರವೆಂದು "ಕ್ರಿಯಾ ಕೇವಲ ಮುತ್ತರಮ್" ಈ ಸಂಸ್ಕೃತೋಕ್ತಿಯಲ್ಲಿ ಹೇಳಿರುವಂತೆ ಜಾತಿಭೇದಗಳ ತೊಂದರೆಯು ದೇಶದ ಐಕಮತ್ಯಕ್ಕೆ ವಿರೋಧಪಡಿಸಲಾರದೆಂದು ಸುಮ್ಮನೆ ಬಾಯಿಂದ ಹೇಳುತ್ತ ಕೂಡುವುದಕ್ಕಿಂತ ವರಿಷ್ಠ ಪ್ರತಿನಿಧಿಗಳು ಕಾರ್ಯತಃ ಈ ಕೆಲಸವನ್ನು ಮಾಡಿರುವರು. ಇದೇ ನಮಗೀಗ ಬೇಕಾದುದು!

ಸಾರಾಂಶ, ಈ ಸ್ವರಾಜ್ಯದ ಸಂಗತಿಯಲ್ಲಿ ನಮಗೆ ಸದ್ಯಃ ಬೇಕಾದ ಸಂಗತಿಗಳೆರಡು. ಒಂದು, ಅದನ್ನು ಕೇಳುವವರು ಯೋಗ್ಯರೂ ಜವಾಬದಾರರೂ ಆಗಿರಬೇಕು. ಇನ್ನೊಂದು, ವಿವಿಧಮತ, ಸಾವಿರಾರು ಜಾತಿ, ನಾನಾ ವರ್ಣ ಮುಂತಾದವುಗಳಿಂದ ತುಂಬಿ ಹೋದ ಈ ದೇಶದಲ್ಲಿ ಏಕಮತ್ಯದಿಂದ ಅದನ್ನು ಕೇಳಬೇಕು. ಈ ಎರಡು ಮಹತ್ವದ ಸಂಗತಿಗಳನ್ನು ನಮ್ಮ ವರಿಷ್ಠ ನ್ಯಾಯವಿಧಾಯಕ ಸಭೆಯ ಬಹುಮಾನಪಟ್ಟ ಲೋಕ ಪ್ರತಿನಿಧಿಗಳು ಮಾಡಿರುವದರಿಂದ ಕನ್ನಡಿಗರ ಪರವಾಗಿ ನಾವು ಸಂತೋಷದಿಂದ ಅವರ ಆಭಾರವನ್ನು ಪ್ರದರ್ಶಿಸದೆ ಇರಲಾರೆವು.

ಪುತ್ತೂರು ಸೆಂಟ್ರಲ್ ಬೇಂಕಿನ ವರ್ಷಾವಧಿ ರಿಪೋರ್ಟು.

ಪುತ್ತೂರು ಸೆಂಟ್ರಲ್ ಬೇಂಕಿನ ಮಹಾ ಸಭೆಯು ಇದೇ ತಿಂಗಳ ೨೧ನೇ ತಾರೀಕಿಗೆ ಮಂಗಳೂರಿನ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮಧ್ಯಾಹ್ನ ೨ ಗಂಟೆಗೆ ಜರಗಿತು. ಈ ಸಭೆಯಲ್ಲಿ ೧೯೧೬ನೆ ಜೂನು ಆಖೈರಿಗೆ ಅಂತ್ಯವಾಗುವ ಒಂದು ವರ್ಷದ ಜಮಾ ಖರ್ಚಿನ ರಿಪೋರ್ಟನ್ನು ಮಂಜೂರು ಮಾಡಿದ್ದಲ್ಲದೆ ಚಾಲ್ತಿ ವರ್ಷದ ಆಡಳಿತೆಯನ್ನು ನಡಿಸುವುದಕ್ಕೆ ಮೆಂಬರರ ಕಡೆಯಿಂದ ೪ ಪ್ರತಿನಿಧಿಗಳನ್ನೂ ಸಂಘಗಳ ಕಡೆಯಿಂದ ೫ ಪ್ರತಿನಿಧಿಗಳನ್ನೂ ಆಡಳಿತೆ ಸಭೆಗೆ ಆರಿಸಲಾಯಿತು. ಈ ವರ್ಷಾವಧಿ ರಿಪೋರ್ಟಿನಲ್ಲಿ ಕಾಣಬರುವ ಹಲವು ವಿಷಯಗಳು ಸಹಕಾರ ಸಮಾಜದವರು ಲಕ್ಷ್ಯವಿಡತಕ್ಕ ವಿಷಯಗಳಾಗಿದ್ದುದರಿಂದ ಈ ಕೆಳಗೆ ಅವನ್ನು ವಿಮರ್ಶಿಸುವೆವು.

ಗತವರ್ಷದಲ್ಲಿ ೩೪೯ ಪಾಲುಗಳು ಹೊಸತಾಗಿ ದಾಖಲಾದುವು. ಈ ಪೈಕಿ ೨೧೩ ಖಾಸಗಿ ಜನಗಳಿಂದಲೂ ೧೩೬ ಪಾಲುಗಳು ಸಂಘಗಳಿಂದಲೂ ತೆಗದುಕೊಳ್ಳಲ್ಪಟ್ಟುವು. ಹೀಗಾಗಿ ವರ್ಷದ ಆಖೈರಿಗೆ ೯೪ ಖಾಸಗಿ ಜನರ ೯೩೫ ಪಾಲುಗಳೂ ೫೫ ಸಂಘಗಳಿಂದ ೬೮೧ ಪಾಲುಗಳೂ ಬೇಂಕಿನಲ್ಲಿದ್ದುವು ಎಂದು ಗೊತ್ತಾಗುತ್ತದೆ. ಈ ಜಿಲ್ಲೆಯಲ್ಲಿ ಈ ವರೆಗೆ ರಿಜಿಸ್ತ್ರಿ ಆದ ೬೬ ಸಂಘಗಳಲ್ಲಿ ೧೧ ಮಾತ್ರ ಈ ಬೇಂಕಿನಲ್ಲಿ ಪಾಲುಗಳನ್ನು ಪಡಕೊಳ್ಳಲಿಲ್ಲವೆಂತಲೂ ಈ ಪೈಕಿ ೫ ಸಂಘಗಳು ವರ್ಷದ ಆಖೈರಿಗೆ ರಿಜಿಸ್ತ್ರಿ ಆಗಿದ್ದು ಇನ್ನೂ ತಮ್ಮ ಕೆಲಸವನ್ನು ಪ್ರಾರಂಭಿಸಲಿಲ್ಲವೆಂತಲೂ ತಿಳಿಯುತ್ತೇವೆ. ಉಳಿದ ೬ ಸಂಘಗಳು ತಾವು ಬೇಂಕಿನಿಂದ ಹಣ ಸಹಾಯ ಪಡಕೊಳ್ಳುವುದಿಲ್ಲವೆಂಬ ಕಾರಣದಿಂದಲೂ ಅಥವಾ ಇನ್ನಾವ ಕಾರಣದಿಂದಲೂ ಈ ಬೇಂಕಿಗೆ ಸೇರಲಿಲ್ಲ. ಇವು ಸಹಾ ಬೇಗನೇ ಸೇರುವುವೆಂದು ನಾವು ನಂಬುತ್ತೇವೆ.

ಬೇಂಕಿನ ಮೂಲಧನವು ಬರೇ ೧೩,೦೬೦ ರೂಪಾಯಿಗಳಾಗಿದ್ದರೂ ವರ್ಷದ ಆಖೈರಿಗೆ ೨,೪೮,೩೩೩—೪—೯ ಬೇಂಕಿನಲ್ಲಿ ಡಿಪೋಜಿಟಾಗಿತ್ತು ಎಂಬದು ತುಂಬಾ ಸಮಾಧಾನಕರ. ಇದು ಜನರಿಗೆ ಈ ಬೇಂಕಿನ ಮೇಲೂ ಇದರ ಆಡಳಿತೆಯ ಸಭೆಯವರ ಮೇಲೂ ಇದ್ದ ಪೂರ್ಣ ವಿಶ್ವಾಸವನ್ನು ತೋರ್ಪಡಿಸುತ್ತದೆ. ಆದರೆ ಇಷ್ಟು ದೊಡ್ಡ ಮೊಬಲಗನ್ನು ಚಲಾವಣೆ ಮಾಡುವ ಜವಾಬ್ದಾರಿಯನ್ನು ಹೊರುವುದಕ್ಕೆ ಬೇಂಕಿನ ಮೂಲಧನವು ಕಡಿಮೆಯಾಯಿತೆಂತಲೂ ಆ ಕುಂದುಕವನ್ನು ಹೋಗಲಾಡಿಸುವುದಕ್ಕೆ ಆಡಳಿತೆಯ ಸಭೆಯವರು ಪ್ರಯತ್ನವಿಟ್ಟಿರುವರೆಂತಲೂ ಸಂಘಗಳ ರಿಜಿಸ್ತ್ರಾರರು ತಮ್ಮ ಆಡಿಟ್ ರಿಪೋರ್ಟಿನಲ್ಲಿ ಬರೆದಿರುತ್ತಾರೆ. ಈ ಬೇಂಕು ಮುಖ್ಯವಾಗಿ ಸಂಘಗಳಿಗೆ ದ್ರವ್ಯಾನುಕೂಲವನ್ನು ಒದಗಿಸಿಕೊಡುವುದಕ್ಕೋಸ್ಕರ ಏರ್ಪಡಿಸಿರುವುದರಿಂದ ಮಾತೃ ಸಮಾನವಾದ ಈ ಬೇಂಕಿನ ಶ್ರೇಯಸ್ಸನ್ನು ಬಯಸಿ ಸಂಘಗಳು ತಮ್ಮ ವರ್ಷಾವಧಿ ಆದಾಯದಿಂದ ಬೇಂಕಿನಲ್ಲಿ ತಮಗಿರುವ ಪಾಲುಗಳನ್ನು ಹೆಚ್ಚಿಸಬೇಕೆಂದು ನಾವು ಸೂಚಿಸುವೆವು. ಹೀಗೆ ಹೆಚ್ಚಿಸುವುದಕ್ಕೆ ಪ್ರೋತ್ಸಾಹ ಹುಟ್ಟುವಂತೆ ಒಂದೊಂದು ಪಾಲಿನ ದಾಮಾಶಾಯದಲ್ಲಿ ಸಾಲಕೊಡುವುದಕ್ಕೆ ನಿರ್ಣಯಮಾಡಿದ ಮೊಬಲಗನ್ನು ಈಚೆಗೆ ತಗ್ಗಿಸಿದ್ದಾರೆ. ವರ್ಷಾಂತ್ಯದಲ್ಲಿ ಹೊರಗಿನಿಂದ ಬರತಕ್ಕ ಸಾಲಗಳಲ್ಲಿ ೧೮೭೯ ರೂಪಾಯಿ ಮಾತ್ರ ಖಾಸಗಿ ಮೆಂಬರರಿಂದ ಬರತಕ್ಕದು. ೬೭,೫೦೦ ರೂಪಾಯಿ ಇತರ ಸೆಂಟ್ರಲ್ ಬೇಂಕುಗಳಿಂದಲೂ ೧,೬೫೯,೧೨ ರೂಪಾಯಿ ಸಂಘಗಳಿಂದಲೂ ಬರಬೇಕಾಗಿದೆ.

ಗತವರ್ಷದಲ್ಲಿ ಸಿಕ್ಕಿದ ಮುನಾಫೆ ರೂ. ೨೮೬೫-೧೩-೧. ಇದರಲ್ಲಿ ಸೇಕಡಾ ೨೫ರ ಮೇರೆಗೆ ಆಗುವ ರೂಪಾಯಿ ೭೧೪-೩-೩ನ್ನು ರಿಜರ್ವ ಫಂಡಿಗೆ ಸೇರಿಸಿ ರೂ. ೬೫೭-೧-೮ ಷೈಯನ್ನು ಸುಪರ್ವಿಜನ್ ಫಂಡಿಗೆ ಕೂಡಿಸಿ, ರೂ. ೬೫೭-೧-೮ನ್ನು ಬೇಂಕಿನ ಕಾರ್ಯದರ್ಶಿಗಳಿಗೆ ಅವರ ಕೆಲಸದ ಪ್ರತಿಫಲವಾಗಿ ವಿಂಗಡಿಸಿ, ಸೇಕಡಾ ೯ರ ಮೇರೆಗೆ ಪಾಲುಗಳಿಗೆ ಮುನಾಫೆ ಹಂಚಲಿಕ್ಕೆ ಸಿಕ್ಕುತ್ತಿತ್ತು. ಆದರೆ ಆಡಳಿತೆ ಸಭೆಯವರು ಸೇಕಡಾ ೭ರಂತೆ ಹಂಚಬೇಕಾದರೂ ಉಳಿಯುವ ಹಣವನ್ನು ಡಿವಿಡೆಂಡ್ ಇಕ್ವಲಾಯ್ಜೇಶನ್ ಫಂಡು ಅಥವಾ ಮುನಾಫೆ ಕಡಿಮೆ ಆದ ವರ್ಷಗಳಲ್ಲಿಯೂ ಪಾಲುಗಾರರ ಹಣಕ್ಕೆ ಹೆಚ್ಚಿನ ಮುನಾಫೆ ಕೊಡುವುದಕ್ಕೆ ಏರ್ಪಡಿಸಿದ ಕ್ಷೇಮನಿಧಿಯಲ್ಲಿ ಸೇರಿಸಬೇಕೆಂದು ಸೂಚಿಸಿದ್ದರು. ಈ ರೀತಿಯ ಕ್ಷೇಮನಿಧಿಯನ್ನು ಏರ್ಪಡಿಸಿದ್ದು ದೀರ್ಘದರ್ಶಿತ್ವತೆಯನ್ನು ತೋರಿಸುತ್ತದೆ. ಒಂದು ವರ್ಷ ೯ರಂತೆ ಮುನಾಫೆಯನು ಹಂಚುವುದು ಇನ್ನೊಂದು ವರ್ಷ ಮುನಾಫೆ ಕಡಿಮೆಯಾದರೆ ಸೇಕಡಾ ೪ ಯಾ ೫ರಂತೆ ಹಂಚುವುದು ಹೀಗೆ ಮಾಡುವುದರಿಂದ ಮೆಂಬರರಿಗೆ ಇಂಥ ಬೇಂಕುಗಳ ಮೇಲಿನ ವಿಶ್ವಾಸವು ಕಡಿಮೆಯಾಗುತ್ತದೆ. ಅದ್ದರಿಂದ ಸಮಾಧಾನಕರವಾದ ಮುನಾಫೆಯು ಏಕಪ್ರಕಾರವಾಗಿ ಪ್ರತಿ ವರ್ಷದಲ್ಲಿಯೂ ಸಿಕ್ಕುವಂತೆ ಕ್ಷೇಮನಿಧಿಯನ್ನು ಇರಿಸುವುದು ಚೆಲೋದು. ಇಂಥ ಬೇಂಕುಗಳಲ್ಲಿ ಮುನಾಫೆ ಕಡಿಮೆಯಾಗುವುದಕ್ಕೆ ಕಾರಣವೇನು ಎಂದು ಒಂದು ಪ್ರಶ್ನೆ ಬರಬಹುದು. ಈಗ ಈ ಬೇಂಕಿನಲ್ಲಿ ಡಿಪೋಜಿಟುಗಳು ಸರಾಗವಾಗಿ ಬರುತ್ತಿವೆ. ಈ ಜಿಲ್ಲೆಯ ಸಂಘಗಳಿಗೆ ಬೇಕಾದಷ್ಟು ಸಾಲವನ್ನು ಕೊಟ್ಟರೂ ಸುಮಾರು ೬೭,೫೦೦ ರೂಪಾಯಿಯನ್ನು ಇಲ್ಲಿ ವಿನಿಯೋಗಿಸಲಾರದೆ ಬೇರೆ ಊರಿನ ಸೆಂಟ್ರಲ್ ಬೇಂಕುಗಳಿಗೆ ಸಾಲವಾಗಿ ಕೊಡಬೇಕಾಯಿತು. ಆ ಸೆಂಟ್ರಲ್ ಬೇಂಕು

ಗಳು ಸೇಕಡಾ ೬||ಗಿಂತ ಹೆಚ್ಚಿಗೆ ಬಡ್ಡಿ ಕೊಡುವುದಿಲ್ಲವಾದರೂ ಸ್ವಲ್ಪ ಮುನಾಫೆ ಈ ಬೇಂಕಿಗೆ ಉಳಿಯುತ್ತಿತ್ತು. ಮದ್ರಾಸಿನಲ್ಲಿ ಈಗ ಸ್ಥಾಪಿಸಲಿಕ್ಕಿದ್ದ ಪ್ರೊವಿನ್‌ಶಲ್ ಬೇಂಕನ್ನು ಸ್ಥಾಪಿಸಿದ ವೇಳೆ ಒಂದು ಸೆಂಟ್ರಲ್ ಬೇಂಕು ಇನ್ನೊಂದು ಸೆಂಟ್ರಲ್ ಬೇಂಕಿನೊಡನೆ ಲೇವಾದೇವಿಯನ್ನು ಮಾಡಬಾರದೆಂದು ನಿರ್ಬಂಧವುಂಟು. ಅನಂತರ ಅಂಥ ವಹಿವಾಟುಗಳೆಲ್ಲ ಆ ಪ್ರೊವಿನ್‌ಶಲ್ ಬೇಂಕಿನ ಮೂಲಕವೇ ಆಗಬೇಕು; ಅಂದರೆ ಇಲ್ಲಿ ಗಿರಾಕಿಯಿಲ್ಲದೆ ಉಳಿಯುವ ಹಣವನ್ನೂ ಆ ಬೇಂಕಿನಲ್ಲಿಟ್ಟುಬಿಡಬೇಕು. ಅವರು ಬೇರೆ ಬೇಂಕುಗಳಿಗೆ ಅದನ್ನು ಬೇಕಾದಾಗ ಸಾಲಕೊಡುವರು. ಇಂಥ ವಿಲೆವಾರಿಯಲ್ಲಿ ಈ ಸೆಂಟ್ರಲ್ ಬೇಂಕಿನ ಡಿಪೋಜಿಟುಗಳಿಗೆ ಸೇಕಡಾ ೬ ಅಥವಾ ೬| ಬಡ್ಡಿ ಮಾತ್ರವೇ ಸಿಕ್ಕುವುದು. ಅಷ್ಟೇ ಬಡ್ಡಿಯನ್ನು ಡಿಪೋಜಿಟರುಗಳಿಗೆ ಕೊಡುವ ಕಾರಣ ಸೆಂಟ್ರಲ್ ಬೇಂಕುಗಳಿಗೆ ಮುನಾಫೆ ಕಡಿಮೆಯಾಗುವ ಸಂಭವ ಇರಬಹುದು ಎಂದು ತಿಳಿದುಬರುತ್ತದೆ.

ಇದಕ್ಕೆ ಉಪಾಯವೇನು? ಇಲ್ಲಿಯ ಡಿಪೋಜಿಟುಗಳನ್ನು ಇದೇ ಜಿಲ್ಲೆಯಲ್ಲಿನ ಸಂಘಗಳು ವಿನಿಯೋಗಿಸಿದರೆ ಬೇಂಕುಗಳಿಗೂ ಅದರಲ್ಲಿ ಪಾಲುಹಾಕಿರುವ ಸಂಘಗಳಿಗೂ ಮುನಾಫೆಯು ತಪ್ಪದೆ ವೃದ್ಧಿಯಾಗಿ ಬರುವುದು. ಆದರೆ ಇಲ್ಲಿ ಹಣ ಉಳಿದಿದೆ ಎಂದು ಸಂಘಗಳ ಸ್ಥಿತಿಗತಿಗಳನ್ನೂ ಅಡಚಣೆಗಳನ್ನೂ ಕೂಲಂಕಷವಾಗಿ ಪರೀಕ್ಷಿಸದೆ ಸಾಲ ಕೊಡುವುದು ಸರಿಯಲ್ಲ. ಈ ವಿಚಾರವನ್ನು ಬೇಂಕಿನ ಆಡಳಿತೆಯ ಸಭೆಯವರು ಚೆನ್ನಾಗಿ ತಿಳಿದಿರುವರೆಂದು ಗೊತ್ತಾಗುತ್ತದೆ. ಪಾಯಿದೆ ತಪ್ಪಿದ ಸಾಲಗಳು ಮೂರೇ ಮೂರು; ಇಷ್ಟು ವಹಿವಾಟು ನಡೆಯುವಾಗ ಅದೊಂದು ವಿಶೇಷ ಸಂಗತಿಯಲ್ಲ.

ಆದರೆ ಒಂದು ಸಂಗತಿಯು ಇದರಲ್ಲಿ ನಮ್ಮ ಕಣ್ಣಿಗೆ ಹೊಳೆಯುತ್ತವೆ. ದ್ರವ್ಯ ತೃಷೆಯನ್ನು ಕಡಿಮೆಮಾಡಿ ಜನರನ್ನು ಸುಧಾರಣೆಗೆ ತರುವ ಕೆಲಸವು ಇನ್ನೂ ಮುಂದೊತ್ತಲಿಲ್ಲ. ಕುಂದಾಪುರ ತಾಲೂಕಿನಲ್ಲಿ ಸಂಘಗಳು ೬, ಕಾರ್ಕಳ ತಾಲೂಕಿನಲ್ಲಿ ೩, ಕಾಸರಗೋಡು ತಾಲೂಕಿನಲ್ಲಿ ೧೨, ಉಡುಪಿ ತಾಲೂಕಿನಲ್ಲಿ ೯, ಮಂಗಳೂರು ತಾಲೂಕಿನಲ್ಲಿ ೧೨, ಉಪ್ಪಿನಂಗಡಿ ತಾಲೂಕಿನಲ್ಲಿ ೨೪, ಒಟ್ಟಿಗೆ ೬೬ ಸಂಘಗಳು ಎಂದರೆ ಹೆಚ್ಚು ಕಡಿಮೆ ೮೦೦ ಹಳ್ಳಿಗಳಿರುವ ಈ ಜಿಲ್ಲೆಗೆ ವಿಶೇಷ ಆಧಾರವಾಗಲಿಕ್ಕಿಲ್ಲವೆಂದು ಹೇಳಲೇಬೇಕು. ಇನ್ನೂ ಹಲವು ಯೋಗ್ಯವಾದ ಹಳ್ಳಿಗಳು ಇವೆ; ಅವುಗಳಲ್ಲಿ ಹೊಸತಾಗಿ ಸಂಘಗಳನ್ನು ಏರ್ಪಡಿಸಲು ಸಾಧ್ಯವಿದೆ.

ಆದರೆ ಸೆಂಟ್ರಲ್ ಬೇಂಕಿನಲ್ಲಿ ಹಣವಿದೆ ಅದನ್ನು ವಿನಿಯೋಗಿಸಲಿಕ್ಕೆ ಸಂಘಗಳು ಬೇಕು, ಎಂದು ಅವನ್ನು ಜನನಕ್ಕೆ ತರುವುದು ಸರಿಯಾಗಲಾರದು. ಅವುಗಳ ಮೇಲ್ವಿಚಾರವು ಚೆನ್ನಾಗಿ ನಡೆಯದಿದ್ದರೆ ಡಿಪೋಜಿಟರುಗಳ ಹಣವು ದಿಕ್ಕಾಪಾಲಾಗಿ ಬಿತ್ತಿದಂತಾಗಿ ದುರ್ವ್ಯಯವಾಗಬಹುದು. ಅಥವಾ ಸಫಲಕ್ಕೆ ಬರಲಾರದು. ಇದಕ್ಕೋಸ್ಕರ ಸಂಘಗಳ ಮೇಲ್ವಿಚಾರಕ್ಕೆ ಸುಪರ್‌ವೈಜರ್‌ಗಳನ್ನು ನೇಮಿಸುವಂತೆಯೂ ಅಂಥ ಇಸಂಗಳು ವರ್ಷಂಪ್ರತಿ ಇರಗೊಡಿಸುವಂತೆಯೂ ಈ ಬೇಂಕು ಹಣವನ್ನು ಶೇಖರಿಸುತ್ತಲಿರುವುದು ತುಂಬಾ ಸಂತೋಷಕರ. ಈಗಿನ ಹಣದಿಂದ ೩ ಸುಪರ್‌ವೈಜರುಗಳನ್ನು ನೇಮಕ ಮಾಡುವುದಲ್ಲದೆ ಆ ಇಸಂಗಳು ಸ್ಥಿರವಾಗಿ ಇರುವಂತೆ ವರ್ಷಂಪ್ರತಿ ವಿಂಗಡಿಸಿಡುವ ಸುಪರ್‌ವಿಜನ್ ಫಂಡಿನಿಂದ ಸೇಕಡಾ ೨೦ರ ಮೇರೆಗೆ ಇನ್ನೊಂದು ಫಂಡನ್ನು ಮಾಡಿ ಅದರ ಬಡ್ಡಿಯನ್ನು ಮಾತ್ರ ಈ ಸುಪರ್‌ವಿಜನ್ ಫಂಡಿಗೆ ವರ್ಷಂಪ್ರತಿ ಕೊಡುವಂತೆಯೂ ವಿಂಗಡಿಸಿದ ಸೇಕಡಾ ೨೦ನ್ನು ಸುಪರ್‌ವಿಜನ್ ಫಂಡಿನ ಮೂಲಧನವಾಗಿರಿಸುವಂತೆಯೂ ವಿಲೆವಾರಿ ಮಾಡಿರುವರು.

ಸೆಕ್ರಿಟೆರಿಗಳಿಗೆ ಪ್ರತಿಫಲವಾಗಿ, ಕಳೆದ ವರ್ಷ ಕೊಟ್ಟ ಮೊಬಲಗು ಸುಮಾರು ೨೪೦ ರೂಪಾಯಿಯನ್ನು ಅವರು ತಾನು ಪಡಕೊಳ್ಳದೆ ಅದನ್ನು ಸುಪರ್‌ವಿಜನ್ ಫಂಡಿಗೆ ಸೇರಿಸಬೇಕೆಂತ ಬಿಟ್ಟು ಹಾಗೆಯೇ ಗತ ವರ್ಷದ ಬಗ್ಗೆ ಈಗ ಕೊಡಬೇಕಾದ ೩೫೭—೧—೮ನ್ನೂ ಆ ಫಂಡಿಗೆ ತಾನು ಉಚಿತವಾಗಿ ಬಿಟ್ಟೆನೆಂದು ಹೇಳಿದರು. ಮ. ರಾ. ಮಂಜೇಶ್ವರ ಅನಂತರಾಯರ (ಕಾರ್ಯದರ್ಶಿ) ಉದಾರತ್ವವನ್ನು ನಾವು ಕೊಂಡಾಡುತ್ತಲಿರುವೆವು.

ಗತ ವರ್ಷದಲ್ಲಿ ಸಹಕಾರ ಸಮಾಜದಲ್ಲಿ ಕಂಡು ಬಂದ ಇತರ ವಿಶೇಷ ಸಂಗತಿಗಳು ಯಾವವೆಂದರೆ:—

(೧) ಸಹಕಾರ ಸಮಾಜಕ್ಕೆ ಸೇರಿದ ಮ. ರಾ. ಸದಾಶಿವ ಭಟ್ಟರು ಮದ್ರಾಸಿನ ಲೆಜಿಸ್ಲೆಟಿವ್ ಕೌನ್ಸಿಲ್ (ನ್ಯಾಯವಿಧಾಯಕ ಸಭೆ)ಗೆ ಮೆಂಬರರಾಗಿ ಆರಿಸಲ್ಪಟ್ಟರು. ಇದು ಸಹಕಾರ ಸಂಘಗಳಿಗೆ ಒಂದು ಗೌರವ, ಮಾತ್ರವೇ ಅಲ್ಲ; ಬೆಂಬಲವೂ ಆಗಿದೆ.

(೨) ಪುತ್ತೂರು ಬೇಂಕಿನವರು ಹಳ್ಳಿಗರಿಗೆ ಧಂಯ್ಚಾ ಎಂಬ ಹುಲ್ಲಿನ ಬೀಜ, ಮೊರಿಸಿಯಸ್ ಕಬ್ಬಿನ ಬೀಜ ಮುಂತಾದ್ದನ್ನು ಸುಲಭ ಧಾರಣೆಯಲ್ಲಿ ತರಿಸಿಕೊಟ್ಟರು. ಬಡ ರೈತರು ಈ ರೀತಿಯಲ್ಲಿ ಇನ್ನೂ ಪ್ರಯೋಜನ ಹೊಂದಬೇಕೆಂದು ನಮ್ಮ ಆಸೆ.

(೩) ವ್ಯವಸಾಯ ಇಲಾಖೆಯ ಡಿರೆಕ್ಟರರೊಡನೆ ಪತ್ರವ್ಯವಹಾರ ನಡಿಸಿ, ಯಾವುದೊಂದು ಸಂಘವು ಬೀಜದ ಎತ್ತುಗಳನ್ನು ಸಾಕುವುದಾದರೆ ದ್ರವ್ಯ ಸಹಾಯ ಆ ಇಲಾಖೆಯಿಂದ ಸಿಕ್ಕೀತು ಎಂದು ಗೊತ್ತು ಮಾಡಿ ಪುತ್ತೂರಿನ ಪೇಟೆಯ ಸಂಘದವರು ಈ ರೀತಿಯಾಗಿ ಬೀಜದ ಎತ್ತುಗಳನ್ನು ಸಾಕುವುದಕ್ಕೆ ಏರ್ಪಾಡು ಮಾಡಿಯದೆ.

(೪) ಆರ್ಯಾಪು ಸಂಘದವರು ಮೆಂಬರರು ಆಗಾಗ ಬಂದು ಕೂಡುವುದಕ್ಕೆ ಸಂಘದ ಫಂಡಿನಿಂದಲೂ ಮೆಂಬರರ ವಂತಿಗೆಯಿಂದಲೂ ಒಂದು ಕಟ್ಟೋಣವನ್ನು ಏರ್ಪಡಿಸಿರುವರು.

ಇವೆಲ್ಲ ಅಭಿವೃದ್ಧಿಯ ಕುರುಹುಗಳನ್ನು ತೋರಿಸುವುದರಿಂದ ಇದಕ್ಕೆ ಪ್ರೋತ್ಸಾಹ ಕೊಟ್ಟು ನಿರಾಲಸ್ಯದಿಂದಲೂ ದೇಶಸುಧಾರಣೆಯ ಕಾಂಕ್ಷೆಯಿಂದಲೂ ಕೆಲಸ ಮಾಡಿದ ಬೇಂಕಿನ ಮೆನೆಜಮೆಂಟ ಕಮಿಟಿಯವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುವೆವು.

"ನ್ಯೂ ಇಂಡಿಯಾ"ದ ಅಪೀಲು ತಳ್ಳಿಹಾಕಲ್ಪಟ್ಟಿತು.

ಇದನ್ನು ನಾವು ಕಳೆದ ಸಂಚಿಕೆಯಲ್ಲಿ ವಾಚಕರಿಗೆ ವರ್ತಮಾನರೂಪದಿಂದ ತಿಳಿಸಿದ್ದೇವಷ್ಟೆ. ಇದನ್ನು ತಳ್ಳಿ ಹಾಕಿದ ಕಾರಣಗಳನ್ನು ಆಲೋಚಿಸಿದರೆ ಅವು ಅಷ್ಟೊಂದು ಸಮಾಧಾನಕರವಾಗಿ ತೋರುವುದಿಲ್ಲ. ನ್ಯೂ ಇಂಡಿಯಾ ಪ್ರೆಸ್ ಮತ್ತು ಈ ಪತ್ರಿಕೆಯನ್ನು ಹೊರಡಿಸುವಾಗ ಮೊದಲು ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಜಾಮೀನು ಬೇಡೆಂತ ಹೇಳಿ ತಿರಿಗಿ ಈಗ ರೂ. ೨೦೦೦ಗಳನ್ನು ಜಾಮೀನು ಕೇಳುವುದು ಉಚಿತವಲ್ಲೆಂದು ಮಿಸೆಸ್ ಬಿಝೆಂಟರ ಕಡೆಯಿಂದ ಸಮರ್ಪಕವಾಗಿ ವಾದಿಸೋಣಾಯಿತು. ನ್ಯಾಯಾಸನದಲ್ಲಿ ಕುಳಿತ ಮೂವರು ನ್ಯಾಯಮೂರ್ತಿಗಳು ತಮ್ಮ ತೀರ್ಪುಗಳನ್ನು ಭಿನ್ನ ಭಿನ್ನವಾಗಿ ಕೊಟ್ಟಿರುವರು. ಈ ತ್ರಿಮೂರ್ತಿಗಳಲ್ಲಿ ಮುಖ್ಯ ನ್ಯಾಯಾಧೀಶರು ಮತ್ತು ನ್ಯಾಯ ಮೂರ್ತಿಗಳಾದ ಶೇಷಗಿರಿ ಐಯರು—ಮೇಜಿಸ್ಟ್ರೇಟರು ಜಾಮೀನು ಕೇಳಿದ್ದು ಜುಡಿಸಿಯಲ್ ಎಕ್ಟಿನಂತೆ ಅಲ್ಲ, ಅಮ್ಮಲಬಜಾವಣೆಯ ಎಂದರೆ ಎಕ್ಸಿಕ್ಯೂಟಿವ ಎಕ್ಟಿನಂತೆಯಾಗಿರುತ್ತದೆ. ಮತ್ತು ಅದು ಕಾನೂನಿಗೆ ವಿರೋಧವಾಗಿದ್ದು ಮೇಜಿಸ್ಟ್ರೇಟರಿಗೆ ಇಂಥ ಆರ್ಡರನ್ನು ಕೊಡಲು ಅಧಿಕಾರವಿಲ್ಲೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಅದನ್ನು ರದ್ದು ಮಾಡಲು ಹೈಕೋರ್ಟಿಗೂ ಕೂಡ ಸಾಕಷ್ಟು ಅಧಿಕಾರವಿಲ್ಲ. ಮೇಜಿಸ್ಟ್ರೇಟರು ತಮ್ಮ ಅಧಿಕಾರಕ್ಕೆ ಹೊರಪಟ್ಟು ನಡಿಸಿದ ಈ ಹುಕುಮನ್ನು ರದ್ದುಪಡಿಸಲು ಎನಿಬಿಝೆಂಟರಿಗೆ ಬೇರೆ ಹಾದಿಗಳಿದ್ದವು ಎಂದು ಹೇಳಿರುವರು. ಮೇಲೆ ಹೇಳಿದ ನ್ಯಾಯಮೂರ್ತಿಗಳಿಬ್ಬರ ಈ ಅಭಿಪ್ರಾಯಕ್ಕೆ ಮೂರನೆ ನ್ಯಾಯಮೂರ್ತಿಗಳು ಸಮ್ಮತಪಡುವುದಿಲ್ಲ. ಅವರ ಆಶಯದಂತೆ ಮೆಜಿಸ್ಟ್ರೇಟರು ಜುಡಿಶಿಯಲ್ ಆಕ್ಟಿನಂತೆಯೇ ಜಾಮೀನು ಕೇಳಿದ್ದು ಮತ್ತು ಹಾಗೆ ಕೇಳುವ ಅಧಿಕಾರವೂ ಅವರಿಗಿದೆ. ಅಲ್ಲದೆ, ಮೆಜಿಸ್ಟ್ರೇಟರು ವಿಧಿಸಿದ ಈ ಕೆಲಸದಲ್ಲಿ ಹೈಕೋರ್ಟು ಪ್ರವೇಶಿಸುವುದು ಉಚಿತವಲ್ಲ.

ಇರಲಿ; ನ್ಯಾಯಮೂರ್ತಿಗಳ ತೀರ್ಮಾನಿನ ಬಹುಪಕ್ಷವನ್ನು ನೋಡಿದರೆ ಅವರಿಗೆ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ಮಾಡಿದ್ದು ತಪ್ಪೆಂತಲೇ ಕಾಣುತ್ತದೆ. ಮತ್ತು ಆದುದರಿಂದಲೇ ಬಿಝೆಂಟರವರ ಪ್ರೆಸ್ಸಿನ ಜಾಮೀನಿನ ೨೦೦೦ ರೂಪಾಯಿಗಳಿಗೆ ಇನ್ನು ಸರಕಾರದ ಖಜಾನೆಯಲ್ಲಿ ತ್ರಿಶಂಕುವಿನ ಅವಸ್ಥೆಯು ಪ್ರಾಪ್ತವಾಗಿದೆ.

ನ್ಯೂ ಇಂಡಿಯಾದೊಳಗಿನ ಆಕ್ಷಿಪ್ತಲೇಖಗಳಲ್ಲಿ ಕೆಲವು ಸದೋಷವಾಗಿಯೂ ಕೆಲವು ನಿರ್ದೋಷವಾಗಿಯೂ ಕಂಡುಬಂದುದರಿಂದ ನ್ಯಾಯಮೂರ್ತಿಗಳು ಈ ವಿಷಯದಲ್ಲಿ ಭಿನ್ನಾಭಿಪ್ರಾಯಿಗಳಾಗುವುದು ಅಪರಿಹಾರ್ಯವೇ ಸರಿ. ಆದುದರಿಂದ ಆ ವಿಷಯದ ನ್ಯಾಯಮೂರ್ತಿಗಳ ನಿರ್ಣಯವು ಬಿಝಾಂಟರವರಿಗೆ ಅನುಕೂಲವಾಗಿ ಸಿಗಲಿಲ್ಲ. ಆದರೂ ಒಂದು ಸಂಗತಿಯನ್ನು ಇಲ್ಲಿ ಹೇಳಲು ಸಂತೋಷಪಡಬೇಕಾಗಿದೆ. ಅದೇನೆಂದರೆ, ಮುಖ್ಯ ನ್ಯಾಯಾಧೀಶರು ಕೂಡ ಪ್ರಕೃತ ಪ್ರೆಸ ಎಕ್ಟಿನ ಬಲೆಯು ಬಹು ವಿಸ್ತಾರವಾದುದಕ್ಕೆ ಅಥವಾ ಈ ಅಕುಂಶದ ಮೊನೆಯು ಅತಿ ಸೂಕ್ಷ್ಮ ಮತ್ತು ಬಹುಮುಖವಾದುದಕ್ಕೆ ವಿಷಾದ ಪಟ್ಟಿರುವರು. ಇದೊಂದು ಸುಚಿಹ್ನವೇ ಸರಿ. ಲೋರ್ಡ ಚೇಮ್ಸ್‌ಫೋರ್ಡರ ಸನ್ನಿಧಿಗೆ ಹೋಗಲಿಕ್ಕಿದ್ದ ಪ್ರೆಸ್ ಎಕ್ಟಿನ ನಿಷೇಧಕ ಡೆಪ್ಯುಟೇಶನಿಗೆ ಈ ನ್ಯಾಯಮೂರ್ತಿಗಳ ಹೊಸ ಆಶ್ರಯವು ದೊರಕಿದಂತಾಗಿದೆ. ಇದಕ್ಕೆ ಹೊಸ ಆಶ್ರಯವೆಂತ ಹೇಳುವ ಕಾರಣವೇನೆಂದರೆ—ಮೊದಲು ಕಲಕತ್ತಾ ನ್ಯಾಯಮೂರ್ತಿಗಳಾದ ಲೋರೆನ್ಸ ಜೆಂಕಿನ್ಸ ದೊರೆಗಳು ಕೂಡ ಈ ಪ್ರೆಸ ಎಕ್ಟಿನ

ಸ್ವರೂಪಕ್ಕೆ ಬೇಸತ್ತುಹೋದದ್ದು ಸ್ವಲ್ಪ ಹಿಂದಿನ ಸಂಗತಿಯಾದರೂ ಯಾರೂ ಮರೆತ ದ್ದಿಲ್ಲ. ಹ್ಯಾಗೂ ಇರಲಿ, ಲೋರ್ಡ ಚೇಮ್ಸ್‌ಫೋರ್ಡರ ಅನುಗ್ರಹದಿಂದಾದರೂ ಈ ಹಿಂದೀ ಪ್ರೆಸ್ ಎಕ್ಟು ರದ್ದಾದೀತು ಮತ್ತು ಬಡ ಪತ್ರಕಾರರ ಮಾರ್ಗದೊಳಗಿನ ಈ ಪ್ರತಿಬಂಧವು ಹೋಗಲಾಡಿಸಲ್ಪಟ್ಟೀತೆಂದು ನಾವು ದೃಢವಾಗಿ ನಂಬಬೇಕಾಗಿದೆ.

ಪತ್ರವ್ಯವಹಾರ.

ತಾಣೂರಿಗೆ ಗವರ್ನರ ದೊರೆಗಳವರ ಆಗಮನ.

ಮದ್ರಾಸ್ ಗವರ್ನರ ದೊರೆಗಳವರು ಪಶ್ಚಿಮ ತೀರದ ಸರಕಾರದ ಮೀನು ಕೈಗಾರಿಕೆಯ ಕಾರಖಾನೆಗಳನ್ನು ಸಂದರ್ಶಿಸಲು ಸಕಲ ಪರಿವಾರದೊಡನೆ ಇದೇ ತಿಂಗಳ ತಾ. ೧೭ರಲ್ಲಿ ತಾಣೂರಿಗೆ ಚಿತ್ತೈಸಿದ್ದರು. ಈ ಸಂದರ್ಭದಲ್ಲಿ ಮಲಬಾರ್ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಮೀನುಗಾರರಾದ ಮುಕ್ಕುವನ್, ಪ್ರಸಲವನ್, ಮತ್ತು ಮೊಗೇರರ ಪ್ರತಿನಿಧಿಗಳು, ಗವರ್ನರ್ ಪ್ರಭುಗಳವರನ್ನು ಯೋಗ್ಯರೀತಿಯಿಂದ ಸತ್ಕರಿಸಲು ಅಲ್ಲಿ ಫಿಶರೀಶ್ ಇಲಾಖೆಯವರು ತಮ್ಮ ಕಾರಖಾನೆಯ ವಠಾರದಲ್ಲಿ ತಯಾರಿಸಿದ ಅಲಂಕೃತವಾದ ಸಭಾ ಮಂಟಪದಲ್ಲಿ ನೆರೆದು ಬಂದಿದ್ದರು. ಪ್ರಥಮತಾ ಇಂಗ್ಲಿಷ್ ರಾಜಗೀತವು ಹಾಡಲ್ಪಟ್ಟ ತರುವಾಯ, ಮಂಗಳೂರಿನ ಶ್ರೀ ಜ್ಞಾನೋದಯ ಸಮಾಜದ ಕಾರ್ಯದರ್ಶಿಯವರಾದ ಬಿ. ಮೋಹನಪ್ಪ ತಿಂಗಳಾಯರು ನೆರೆದು ಬಂದಿದ್ದ ಎಲ್ಲಾ ಮುಕ್ಕುವನ್, ಪ್ರಸಲವನ್, ಮತ್ತು ಮೊಗೇರ ಪ್ರತಿನಿಧಿಗಳ ಪರವಾಗಿ, ಇಂಗ್ಲಿಷಿನಲ್ಲಿ ಒಂದು ಸ್ವಾಗತ ಭಾಷಣಪತ್ರವನ್ನು ಓದಿ, ದೊರೆಗಳವರು ಪಶ್ಚಿಮ ತೀರದ ಮೀನು ಕೈಗಾರಿಕೆಯ ಅಭಿವೃದ್ಧಿಗಾಗಿ ಕೊಡುತ್ತಿರುವ ಉತ್ತೇಜನವನ್ನೂ, ಯುದ್ಧರಂಗದಲ್ಲಿ ಘಾಯಪಡುವ ಇಂಡಿಯದ ಸಿಪಾಯಿಗಳ ದುಃಖಶಮನಾರ್ಥವಾಗಿ ತಕ್ಕೊಳ್ಳುವ ಮಹಾ ಶ್ರಮವನ್ನೂ ವಿವರಿಸಿ ಈ ಬಗ್ಗೆ ತಾವೆಲ್ಲರೂ ಅತ್ಯಂತ ಕೃತಜ್ಞತೆಯಿಂದ ಪ್ರಭುಗಳ ಉಪಕಾರ ಸ್ಮರಿಸುತ್ತೇವೆಂದೂ ವಿಜ್ಞಾಪಿಸಿದರು. ಮತ್ತು ಇಂಡಿಯಾ ಸಿಪಾಯಿಗಳ ಸಂಕಷ್ಟ ನಿವಾರಣ ಫಂಡಿಗೆ ವಿನಿಯೋಗಿಸಬೇಕೆಂದು, ಅಂದು ಅಲ್ಲಿ ಜಮೆಯಾದ ಸುಮಾರು ಒಂದುಸಾವಿರ ರೂಪಾಯಿಗಳನ್ನು ಗವರ್ನರ್ ಪ್ರಭುಗಳವರಿಗೆ ಕೈವರ್ತಿಸಿದರು. ಇವಕ್ಕೆ ಪ್ರಭುಗಳವರು ಕಾಲೋಚಿತ ಭಾಷಣದಿಂದ ಉತ್ತರವನ್ನಿತ್ತು ಸರ್ವರಿಗೂ ಧನ್ಯವಾದವನ್ನು ಕೊಟ್ಟರು. ತರುವಾಯ ಫಿಶರೀಸ್ ಇಲಾಖೆಯ ಹೊನರರೀ ಡೈರೆಕ್ಟರರಾದ ಸರ್ ಫ್ರೆದರಿಕ್ ನಿಕೊಲ್ಸನರು ಹೊಸ ವಿಧಾನದಿಂದ ತಾನು ನಿರ್ಮಿಸಿದ ಮೀನಿನ ಕಾರ್ಯಗಳನ್ನೆಲ್ಲಾ ಸಪ್ರಯೋಗದ ಮೂಲಕ ಸರ್ವರಿಗೂ ತೋರಿಸಿದರು.

ಈ ಬಗ್ಗೆ ನಮ್ಮ ಜಿಲ್ಲೆಯಿಂದ ಹೋದ ಮತ್ತು ಯುದ್ಧ ಫಂಡಿಗೆ ವಂತಿಗೆ ಕೊಟ್ಟ ವರಹೆಸರು. ರಾ. ಕೆ. ಯಂ. ಸೋಮನವರು, ಮಲ್ಪೆ, ರೂ. ೧೫; ರಾ ಯಂ. ಕೆ. ಬಸಪ್ಪನವರು ಮೂಲ್ಕಿ ರೂ. ೧೫; ರಾ. ಬಿ. ಮೋಹನಪ್ಪ ತಿಂಗಲಾಯರು, ಮಂಗಳೂರು, ರೂ. ೧೫; ಫೊಲಿಪ್ಪು ಕೌಡನವರು ರೂ. ೩; ರಾ. ಫೊಲಿಪ್ಪು ಬೇಚನವರು ರೂ. ೨; ರಾ. ಬಿ. ರಾಮಪ್ಪನವರು ಒಪ್ಪನಾಡ ರೂ. ೨; ರಾ. ಲಕ್ಷ್ಮಣ ತಿಂಗಲಾಯರು ರೂ. ೧; ರಾ. ಮಾರಪ್ಪ ಸುವರ್ಣರು. ರೂ. ೧; ರಾ. ಎನ್. ಶ್ರೀನಿವಾಸ ಸಂಣಪ್ಪನವರು ಮಂಗಳೂರು, ರೂ ೧.

ಮಲಬಾರ ಜಿಲ್ಲೆಯ ಮೀನುಗಾರರ ಪ್ರತಿನಿಧಿಗಳು ಕೊಟ್ಟ ವಂತಿಗೆಯೂ ಕೂಡಿಬಂದ ಪ್ರತಿನಿಧಿಗಳ ಸಂಖ್ಯೆಯೂ ದೊಡ್ಡದೇ, ಅದರಲ್ಲಿಯೂ ವಿದ್ಯಾವಂತರ ಸಂಖ್ಯೆಯೂ ದೊಡ್ಡದೇ. ಆದರೆ ಕನ್ನಡ ಜಿಲ್ಲೆಯಿಂದ ಹೋದ ಪ್ರತಿನಿಧಿಗಳ ಸಂಖ್ಯೆಯೂ ಕೊಟ್ಟ ವಂತಿಗೆಯೂ ಅತ್ಯಲ್ಪವಾಯಿತೆಂದು ನಮಗೆ ಸ್ವಲ್ಪ ಅವಮಾನವಾದರೂ ಗವರ್ನರ್ ಪ್ರಭುಗಳಿಗೆ ಎಲ್ಲರ ಪರವಾಗಿ ಸ್ವಾಗತ ಪತ್ರವನ್ನೋದುವ ಬಹುಮಾನವೂ ಇಂಡಿಯಾ ಸಿಪಾಯಿಗಳ ಸಂಕಷ್ಟ ನಿವಾರಣೆಗೆ ಎಲ್ಲರೂ ಕೊಟ್ಟ ವಂತಿಗೆಯನ್ನು ಗವರ್ನರರ ಕೈವರ್ತಿಸುವ ಬಹುಮಾನವೂ, ನಮ್ಮ ಜಿಲ್ಲೆಯ ಪ್ರತಿನಿಧಿಗೆ ದೊರಕಿದುದಕ್ಕಾಗಿ ನಮಗೆಲ್ಲರಿಗೂ ಬಹು ಸಂತೋಷವೂ, ಅಭಿಮಾನವೂ ಉಂಟಾಯಿತು.

ಪ್ರೇಕ್ಷಕ.

ದಾರಿಗಳ ದುರುಸ್ತಿ.

ಅಯ್ಯಾ ಪತ್ರಕರ್ತರೇ,

ತಮ್ಮ ಪತ್ರಿಕೆಯ ಕಳದ ಸಂಚಿಕೆಯಲ್ಲಿ ಪ್ರಕಟವಾದ "ಮುನಿಸಿಪಾಲಿಟಿಯ ಕಳದ ವರ್ಷದ ವರದಿ"ಯ ಪರಿಶೀಲನೆಯಲ್ಲಿ ದಾರಿಗಳ ಸ್ಥಿತಿಯ ಕುರಿತು ಬರೆದ ಅಂಶವನ್ನು ನೋಡಿ ನನಗೂ ಈ ವಿಷಯ ಕಣ್ಣಾರೆ ಕಂಡ ಒಂದು ವಿಷಯವನ್ನು ಇಲ್ಲಿ ಸೂಚಿಸಬೇಕಾಗಿ ಬಂತು.

ನನಗೆ ಕಳದ ವಾರ ಇಲ್ಲಿಯ ಸೋಮಯಕರಣೀಕ ರಸ್ತೆಯನ್ನು ಹಾದುಹೋಗುವ ಪ್ರಸಂಗ ಬಿತ್ತು. ಮುನಿಸಿಪಾಲಿಟಿಯ ರಸ್ತೆಗಳಲ್ಲಿ "ಪುತ್ತುಪ್ರಭು ಓಣಿ" ಗದ್ದೆಕೇರಿ ರಸ್ತೆಗಳನ್ನು ದಾಟಿಹೋಗುವದು ಎಷ್ಟು ಅಸಹ್ಯಕರವೋ ಅದಕ್ಕಿಂತಲೂ ಹೆಚ್ಚಿನ ಕನಿಷ್ಠಾವಸ್ಥೆಯು ಈ ಸೋಮಯಕರಣೀಕ ರಸ್ತೆಗಿರುವದರಿಂದ ನಿರ್ವಾಹವಿಲ್ಲದೆ ನಾನು ಆ ದಾರಿಯನ್ನು ಹಾದುಹೋಗಬೇಕಾಯಿತು. ಆ ದಾರಿಗೆ ತಿರುಗುತ್ತಲೇ ಏಳೆಂಟು ಕೂಲಿಯಾಳುಗಳನ್ನು ಕಂಡೆನು. ಮಾರ್ಗ ದುರುಸ್ತಿ ಮಾಡುತ್ತಾರೆಂಬ ಭಾವನೆಯಾದುದರಿಂದ ಸಂತೋಷವೇ ಆಯಿತು. ಆದರೆ ಹತ್ತರ ಸಮೀಪಿಸುತ್ತಲೇ ನೋಡುವದೇನು? ಆ ಮಾರ್ಗದ ಎರಡು ಪಕ್ಕಗಳ ತೋಡುಗಳಲ್ಲಿದ್ದ ಕಪ್ಪು ಕಪ್ಪಾಗಿ ಕೊಳತುಹೋದ ಕೆಸರು ಮಾರ್ಗದ ಮೇಲೆ ಬಿದ್ದದೆ. ಕೆಸರು ನಾರುತ್ತಿದೆ. ಅದರ ಮೇಲೆ ನುಸಿನೊಣಗಳು ಗುಯಿಗುಯ್ಯೆನ್ನುತ್ತ ಹಾರುತ್ತಲಿವೆ. ಮಳೆಗಾಲದಲ್ಲಿ, ಮಾಡಿನಿಂದ ತೋಡಿಗೆ ಕೆಳಜಾರಿಬಿದ್ದ ಹಳೇ ಮಾದರಿಯ ಹಂಚಿನ ತುಂಡುಗಳು ಈ ಮಾರ್ಗದ ಮೇಲೆ ಪಸರಿಸಲ್ಪಟ್ಟವೆ. ಇಬ್ಬರು ಮೂವರು ಕೂಲಿಯಾಳುಗಳು ಈ ಕೆಸರುಮಣ್ಣನ್ನೂ ಕೆಸರುಮಣ್ಣಿನಿಂದ ತುಂಬಿದ ಈ ಹಂಚಿನ ತುಂಡುಗಳನ್ನೂ ಹಾರೆಯಿಂದ ಸರಿಪಡಿಸುತ್ತಿದ್ದಾರೆ. ಈ ಕೆಸರೂ ಹಂಚಿನ ತುಂಡುಗಳೂ ಕಣ್ಣಿಗೆ ಮರೆಯಾಗುವ ಹಾಗೆಯೋ ಏನೋ ಇಬ್ಬರು ಹೆಂಗಸರು ಸ್ವಲ್ಪ ದೂರದಿಂದ ಕೆಲವು ಪುಟ್ಟಿ ಕೆಂಪುಮಣ್ಣನ್ನು ತಂದುಹಾಕುತ್ತಲಿದ್ದಾರೆ. ಇದೇನು ದುರುಸ್ತಿಯೋ? ನನ್ನ ಕಾಲಲ್ಲಿ ಮೆಟ್ಟಿನ ಜೋಡು ವ "ಹಳೇ ಪಾಪಾಸು" ಇಲ್ಲದ್ದರಿಂದ ಈ ನಾರುತ್ತಿರುವ ಕೆಸರುಮಣ್ಣನ್ನು ಕಾಲಿನಿಂದ ಮೆಟ್ಟಿಕೊಂಡು ಹೋಗಲು ಹೇಸಿಗೆಯಾಗಿ ಹಿಂದೆಯೇ ತಿರುಗಿ ಬಂದೆ. ಇದೇ ನಮ್ಮ ಪಟ್ಟಣದ ಮಾರ್ಗ ದುರುಸ್ತಿ! ನನ್ನ ಮಾತು ಸತ್ಯವೋ ಮಿಥ್ಯವೋ ಎಂಬುದು ವಿಚಾರಿಸಿದರೆ ಆ ದಾರಿಯ ಅಚೆ ಈಚೆ ಇರುವ ಮನೆಯವರಿಂದ ತಿಳಿದುಬಂದೀತು. ಇಲ್ಲವೇ ಸಂಬಂಧ ಪಟ್ಟ ಅಧಿಕಾರಿಗಳು ಆ ದಾರಿಯ ಮೇಲೆ ಪಸರಿಸಿರುವ ಕೆಂಪುಮಣ್ಣನ್ನು ಬೂಟ್ಸಿನ ವ ಮೆಟ್ಟಿನ ತುದಿಯಿಂದ ಕೆಣಕಿಸಿದರೆ ಒಳಗೆ ಕಪ್ಪು ಕೆಸರುಮಣ್ಣೂ, ಇಟ್ಟಿಗೆಯ ತುಂಡೂ ಕಾಣದೆ ಇರವು.

ಸ್ವಾಮಿ, ಇನ್ನೊಂದು ಮಾತು,—ಇಂಥಾ ನಾರುತ್ತಿರುವ ಕೆಸರುಮಣ್ಣು ಮಾರ್ಗದ ಮೇಲೆ ಹಾಕಿ ದುರುಸ್ತಿಮಾಡುವದು ಪಟ್ಟಣದ ಆರೋಗ್ಯಕ್ಕೆ ತಪಿದಕು. ದಾರಿಗಳು ಹೀಗೆ "ರಿಪೇರಿ" ಆಗುವದರಿಂದ ಈ ಕೆಸರಿನಲ್ಲಿರುವ ರೋಗಾಣುಗಳನ್ನು ಮುನಿಸಿಪಾಲಿಟಿಯವರೇ ಅಡಿಯಿಂದ ತೆಗೆದು ಮೇಲಕ್ಕೆ ಬಿತ್ತಿದ ಹಾಗಾಯಿತು. ಹೀಗೆಯೇ ಎಲ್ಲಾ ರಸ್ತೆಗಳ ದುರುಸ್ತಿ ನಡೆದರೆ ಈ ಬಿತ್ತಿದ ಬೀಜಗಳು ಬೇಗನೇ ಮೊಳೆತು ಫಲವನ್ನು ಕೊಡುವದರಲ್ಲಿ ಸಂದೇಹವೇನು? ರಸ್ತೆಗಳ ದುರುಸ್ತಿ ನಡೆಯುವಾಗ ತೋರಿಬರುವ ಈ ಕೊರತೆಗಳು ದಾರಿಗರ ವ ಗಾಡಿ ಎತ್ತು ಕುದುರೆಗಳ ಸೌಕರ್ಯಕ್ಕೆ ಮಾತ್ರ ಅನಾನುಕೂಲವಲ್ಲ; ಪಟ್ಟಣಿಗರ ಅನಾರೋಗ್ಯಕ್ಕೂ ಕಾರಣವಾಗಬಹುದಾದ್ದರಿಂದ ಸಂಬಂಧ ಪಟ್ಟ ಅಧಿಕಾರಿಗಳು ಈ ವಿಷಯ ನಿಗಾ ಕೊಡಬೇಕಾಗಿ ವಿಜ್ಞಾಪಿಸುವ.

ಮಂಗಳೂರು
ತಾ. ೨೨-೧೦-೧೬.

ಪಟ್ಟಣ ಹಿತಚಿಂತಕ.

ಸ್ವಾಮಿ ಪತ್ರಕರ್ತರೇ,

ತಮ್ಮ ಪತ್ರಿಕೆಯಲ್ಲಿ ನನ್ನ ಕೆಲವು ಮಾತುಗಳಿಗೆ ಎಡೆಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ಇಲ್ಲಿಯ ಪರಸ್ಪರ ಸಹಾಯಕ ಸಂಘದ ವರ್ಷಾವಧಿ ರಿಪೋರ್ಟನ್ನು ಇಲ್ಲಿಯ ಎಲ್ಲಾ ಮೆಂಬರರಿಗೆ ತಿಳಿಯುವಂತೆ ವ ಹೊಸ ಪಂಚಾಯತರನ್ನು ಆರಿಸುವ ಬಗ್ಗೆ ವರ್ಷಕ್ಕೊಮ್ಮೆ ಮಹಾಸಭೆ ಜೂನ್ ವ ಜುಲ್ಯಾ ತಿಂಗಳಲ್ಲಿ ಕೂಡುವದಿತ್ತು. ಆ ಪ್ರಕಾರ ಸದರಿ ಮಹಾಸಭೆಯು ಈ ವರೆಗೆ ಕೂಡದೆ ಇರುವದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ನಿಗಾಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ವಿಟ್ಲ,
ತಾ 22-10-1616.

ಬಡ ಮೆಂಬರ.

ನೂತನ ಪ್ರಬಂಧ! ಅದ್ಭುತ ಪತ್ತೆದಾರಿಯ ಕಥೆ!

ಕಳವಾದ ಇನ್ಸ್‌ಪೆಕ್ಟರ್.

ಕಲ್ಕತ್ತಾ ನಗರದ ಪ್ರಸಿದ್ಧ ಪತ್ತೆದಾರನಿಗೂ ಒಬ್ಬ ಚೋರಾಗ್ರೇಸರನಿಗೂ ನಡೆಯುವ ಬುದ್ಧಿಚಾತುರ್ಯದ ಭಯಂಕರ ಹೋರಾಟ. ಆರಂಭದಿಂದ ಅಂತ್ಯದವರೆಗೂ ಒಂದೇ ಸಮನಾದ ಆಸಕ್ತಿಯನ್ನುಂಟುಮಾಡವುದಲ್ಲದೆ ಇನ್ಸ್‌ಪೆಕ್ಟರ್ ಅಧಿಕಾರವು ಚೋರನ ಕೈವಶವಾಗುವುದೂ, ಹೊಗೇಬಂಡಿಯಲ್ಲಿ ಕಳ್ಳನಿಂದ ವಿರಚಿಸಲ್ಪಡುವ ಕೌಶಲೋಪಾಯವೂ, ವಿಲಾಯತಿ ಸರದಾರರ ಆಭರಣಗಳಿಗಾಗಿ ಪ್ರಯತ್ನಿಸುವ ಅದ್ಭುತ ಸಾಹಸವೂ ಅಸಮಾನವಾದವುಗಳಾಗಿರುತ್ತವೆ. ಬೆಲೆ ೧೦ ಆಣೆ.

ವಿಳಾಸ:— ಛಾಂಪಿಯನ್ ಏಜನ್ಸಿ,
ಅವೆನ್ಯು ರೋಡ್, ಬೆಂಗಳೂರು ಸಿಟಿ.

ಯೂರೋಪದ ಮಹಾ ಯುದ್ಧ.

ರುಮೇನಿಯ ರಣರಂಗದಲ್ಲಿ ಶತ್ರುಗಳ ಟೇಂಕಾರವು ಪೂರ್ಣವಾಗಿ ಮಾಯವಾಗದಿದ್ದರೂ ಈ ರಣರಂಗದ ಸ್ಥಿತಿಯು ಈಗ ರುಮೇನಿಯನರಿಗೆ ಅನುಕೂಲವಾಗಿಯೇ ಇದೆ ಎಂತ ಹೇಳಬಹುದು. ರುಮೇನಿಯನರಿಗೆ ರುಶ್ಯನರ ಸಹಾಯವು ಬಂದು ಸೇರಿರುವದರಿಂದಲೂ ಮತ್ತೊಂದು ಕಡೆಯಲ್ಲಿ ಸಲೋನಿಕದಲ್ಲಿದ್ದ ಮಿತ್ರರು ಮುಂದೊತ್ತಿ ಮೊನಸ್ತಿರಿಂಗೆ ಹತ್ತಿರ ಸೇರಿರುವದರಿಂದಲೂ ರುಮೇನಿಯನರು ತಮ್ಮ ರಣರಂಗದಲ್ಲಿ ಶತ್ರುಗಳನ್ನು ತಡೆಯಲು ಶಕ್ತರಾಗಿರುವರು. ಇನ್ನೂ ಈ ರಣರಂಗಗಳಲ್ಲಿ ಭೀಕರ ಕದನಗಳು ನಡೆಯಲಿಕ್ಕೆ ಇವೆ. ಆದರೆ ಈ ವರ್ಷಾಂತ್ಯದೊಳಗೆ ಈ ರಣರಂಗದಲ್ಲಿ ಮಿತ್ರರು ಜಯಪತಾಕೆಯನ್ನು ಹಿಡಿಯುವದರಲ್ಲಿ ಅನುಮಾನವಿಲ್ಲ.

ಪಶ್ಚಿಮ ರಣರಂಗ.

ನ್ಯೂವಿಲ್ಲಿ, ಸ್ಮೈಂಟ್, ವಾಸ್ಪ್ ಮತ್ತು ವೈಪ್ರೆಸಿನ ಬಳಿ ಬ್ರಿಟಿಷರು ಶತ್ರುಗಳ ನೆಲೆಗಳ ಮೇಲೆ ಗುಂಡು ಹಾರಿಸಿರುವರು. ವಾಯುನಾವೆಗಳ ಹಲವು ಕದನಗಳೂ ನಡೆದಿರುತ್ತವೆ. ಶತ್ರುಗಳ ಮೂರು ವಾಯುನಾವೆಗಳನ್ನು ಬ್ರಿಟಿಷರು ನಾಶಮಾಡಿರುತ್ತಾರೆ. ಬ್ರಿಟಿಷರ ಒಂದು ವಾಯುನಾವೆಯು ಕೆಳಬೊಬ್ಬಲ್ಪಟ್ಟಿರುತ್ತದೆ. ಆರು ವಾಯುನಾವೆಗಳು ಹಿಂತಿರುಗಲಿಲ್ಲ. ಅಲ್ಬರ್ಟ್ ಬೆಪ್ಯೂಮ ದಾರಿಯಲ್ಲಿಯೂ ಬ್ರಿಟಿಷರು ಮುಂದರಿದಿರುತ್ತಾರೆ.

ಸೊಮ್ಮೆಯಲ್ಲಿ ವಾಯುನಾವೆಗಳ [illegible] ಕದನಗಳು ನಡೆದಿರುತ್ತವೆ. ಸೈಲ್ಲಿ ಸೆಲಿಸೆಲ್ ಎಂಬಲ್ಲಿ ಫ್ರೆಂಚರು ೯೦ ಶತ್ರುಗಳನ್ನು ಸೆರೆಹಿಡಿದಿರುತ್ತಾರೆ. ಶತ್ರುಗಳಿಗೆ ಇಲ್ಲಿ ವಿಶೇಷ ನಷ್ಟವಾಗಿರುವದು. ಪಶ್ಚಿಮ ರಣರಂಗದಲ್ಲಿ ಬ್ರಿಟಿಷರೂ ಫ್ರೆಂಚರೂ ಒಂದೊಂದೇ ಸ್ಥಳವನ್ನು ಹಿಡಕೊಂಡು ಅದನ್ನು ಬಲಕಾಯಿಸಿಕೊಂಡ ನಂತರ ತಿರಿಗಿ ನುಗ್ಗಿ ಹೋಗಿ ಕದನ ಮಾಡುತ್ತಿದ್ದಾರೆ. ಘೋರ ಕಾಳಗವು ನಡೆಯುತ್ತಿದೆ. ಸೊಮ್ಮೆಯಲ್ಲಿ ಜುಲಾಯಿ ತಾ. ೧[illegible]ರಿಂದ [illegible] ಮಂದಿ ಶತ್ರು ಸೇನಿಕರು ಸೆರೆಬಿದ್ದಿರುತ್ತಾರೆ.

ಬ್ರಿಟಿಷರು ಪುನಃ ನುಗ್ಗಿಹೋಗಿ ಕದನ ಮಾಡಲು ಪ್ರಾರಂಭಿಸಿದ್ದಾರೆ. ಕೊಬೆನ್ ಎಂಬಲ್ಲಿ ಬ್ರಿಟಿಷರು ಜರ್ಮನ ನೆಲೆಗಳ ಮೇಲೆ ಹಲ್ಲೆ ಮಾಡಿ [illegible] ಗಜ ಮುಂದರಿದಿರುವರು. [illegible] ಶತ್ರು ಸೇನಿಕರು ಬ್ರಿಟಿಷರ ಸೆರೆ ಬಿದ್ದಿರುವರು. ಕೊಬೆನ್ ಮತ್ತು ಲೆಸಾರ್ಸ್ನ ಮಧ್ಯೆ ಒಟ್ಟಿಗೆ ಒಂದು ದಿನದ ಕದನದಲ್ಲಿ [illegible] ಶತ್ರು ಸೇನಿಕರು ಬ್ರಿಟಿಷರ ಸೆರೆ ಬಿದ್ದಿರುತ್ತಾರೆ. ವಾಯುನಾವೆಗಳ ಕೆಲವು ಕದನಗಳು ನಡೆದು ಶತ್ರುಗಳಿಗೆ ವಿಶೇಷ ನಷ್ಟವಾಗಿರುತ್ತವೆ. ಸೊಮ್ಮೆಯಲ್ಲಿಯೂ ಫ್ರೆಂಚರಿಗೂ ಶತ್ರುಗಳಿಗೂ ವಿಶೇಷ ಕದನ ನಡೆಯುತ್ತಿದೆ. ಚೊಲ್ನೆಸ್ ಎಂಬಲ್ಲಿ ಶತ್ರುಗಳು ಬಹಳ ನಷ್ಟಪಟ್ಟು ಹಿಮ್ಮೆಟ್ಟಿರುವರು. ಬಹಳ ಮಂದಿ ಶತ್ರು ಸೇನಿಕರು ಫ್ರೆಂಚರ ಸೆರೆಬಿದ್ದಿರುತ್ತಾರೆ.

ಪೂರ್ವ ರಣರಂಗ.

ಕೊರಿಂತಿನ್ನ ಮತ್ತು ಬೊಲ್ಕೊವೈಸ್ ಬಳಿ ಭೀಕರ ಕಾಳಗವು ನಡೆಯುತ್ತಿದೆ. ಶತ್ರುಗಳು ರೋಷಾವೇಶದಿಂದ ಪುನಃ ಪುನಃ ಮೇಲೆ ಬಿದ್ದು ಕದನಮಾಡುತ್ತಿದ್ದಾರೆ. ಆದರೆ ಮೇಲೆ ಬಿದ್ದಲ್ಲೆಲ್ಲಾ ರುಶ್ಯನರು ಶತ್ರುಗಳನ್ನು ಹಿಂದೆ ಅಟ್ಟಿರುವರು. ಜೊರ್ನಾವಾತ್ರ ಎಂಬಲ್ಲಿಯೂ ಮೇಲೆ ಬಿದ್ದ ಶತ್ರುಗಳು ಹಿಮ್ಮೆಟ್ಟಿರುವರು. ಕಾರ್ಪಥೇನಿಯದಲ್ಲಿ ಹಿಮ ಬೀಳುತ್ತಲಿದೆ.

ಕೊವೆಲಿನ ಬಳಿ ಶತ್ರುಗಳು ವಿಷಗ್ಯಾಸನ್ನು ಪ್ರಯೋಗಿಸಿ ಕಠಿಣವಾಗಿ ಹೋರಾಡಿದರು. ಆದರೆ ರುಶ್ಯನರು ಅವರನ್ನು ಹಿಂದಕ್ಕೆ ಅಟ್ಟಿದರು.

ಕೊವೆಲಿಗೆ [illegible] ಮೈಲು ದಕ್ಷಿಣದಲ್ಲಿ ರುಶ್ಯನರಿಗೂ ಶತ್ರುಗಳಿಗೂ ಭೀಕರ ಕಾಳಗ ನಡೆಯುತ್ತಿದೆ

ರುಶ್ಯನರ ಜಲಂತರ್ಗಾಮಿನಾವೆಗಳು ತುರ್ಕರ [illegible] ನಾವೆಗಳನ್ನು ಮುಣುಗಿಸಿರುತ್ತವೆ.

ಬಾಲ್ಕಾನ್.

ವೈಟುಜ ತಗ್ಗಿನ ಬಳಿ ಶತ್ರುಗಳು ರುಮೇನಿಯನರ ಮೇಲೆ ಬಿದ್ದಿರುವರು. ಆದರೆ ರುಮೇನಿಯನರು ಅವರನ್ನು ಹಿಂದಕ್ಕೆ ಅಟ್ಟಿರುತ್ತಾರೆ. ರೊಟ್ಟೆಡ್ರಮ್ ಕಣಿವೆಯ ಬಳಿ ಶತ್ರುಗಳ ನೆಲೆಗಳನ್ನು ರುಮೇನಿಯನರು ಸ್ವಾಧೀನಮಾಡಿಕೊಂಡಿರುತ್ತಾರೆ. ಆದರೆ ತೆಗರ್ಚ್‌ಬುರ್ಗರ್ ದಾರಿಯ ಬಳಿ ಸಲ್ಪ ಹಿಂದೆ ಸರಿದಿರುವರು. ಪರ್ವತ ಸರಹದ್ದಿನಲ್ಲೆಲ್ಲಾ ರುಮೇನಿಯನರಿಗೂ ಶತ್ರುಗಳಿಗೂ ಭೀಕರ ಕಾಳಗ ನಡೆಯುತ್ತಿದೆ. ಪ್ರತಿ ಒಂದು ಕಡೆಯಲ್ಲಿಯೂ ಮೇಲ್ಬಾಯಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ಕೆಲವು ಕಡೆಗಳಲ್ಲಿ ಶತ್ರುಗಳನ್ನು ಸರಹದ್ದಿನ ಹೊರ ಭಾಗದವರೆಗೂ ಅಟ್ಟಿರುತ್ತಾರೆ. ಸರಹದ್ದಿನ ನೆಲೆಗಳು ಒಂದು ಸಾರಿ ರುಮೇನಿಯನರ ಕೈಸೇರುತ್ತವೆ. ಮತ್ತೊಂದು ಸಾರಿ ಶತ್ರುಗಳ ಕೈಸೇರುತ್ತವೆ. ಹೀಗೆ ಗಳಿಗೆ ಗಳಿಗೆ ಈ ರಣರಂಗದ ಸ್ಥಿತಿಯು ಬದಲಾಗುತ್ತಿದೆ.

ರುಮೇನಿಯನರು ರುಶ್ಯನರ ಸಹಾಯ್ಯದಿಂದ ನುಗ್ಗಿ ಹೋಗಿ ಶತ್ರುಗಳೊಡನೆ ಘೋರ ಕಾಳಗಮಾಡುತ್ತಿದ್ದಾರೆಂತ ತಿಳಿದುಬರುತ್ತದೆ. ಪ್ರತಿ ಕಡೆಯ ಕದನಗಳೂ ಅತಿ ತೀಕ್ಷ್ಣವಾಗಿರುವವು. ಟೊರೆಜ್‌ಬರ್ಗ್ ಪ್ರಾಂತ್ಯದಲ್ಲಿ ಶತ್ರುಗಳು ರುಮೇನಿಯ ಪ್ರಾಂತ್ಯದ [illegible] ಮೈಲು ಪಾಸಲಿಯೊಳಗಿದ್ದಾರೆ. ರುಮೇನಿಯನರು ಹೀಗೆಯೇ ಜಯಪ್ರದರಾಗುತ್ತಾ ಹೋದರೆ ವೆಟಿಯಸ್ ಎಂಬಲ್ಲಿರುವ ಶತ್ರುಗಳ ಸ್ಥಿತಿಯು ಭಯಂಕರವಾಗುವದು. ಅಗಾಸ್ ಬಳಿ ಇದ್ದ ಶತ್ರುಗಳನ್ನು ರುಮೇನಿಯನರು ಓಡಿಸಿ [illegible] ಮಂದಿಯನ್ನು ಸೆರೆ ಹಿಡಿದಿರುತ್ತಾರೆ.

ಡೋರಿಯನ್ ಪ್ರಾಂತ್ಯದಲ್ಲಿ ಬ್ರಿಟಿಷರು ಶತ್ರುಗಳ ದೊಡ್ಡ ಸೇನೆಯನ್ನು ಹಿಂದಕ್ಕಟ್ಟಿರುತ್ತಾರೆ. ಶತ್ರುಗಳು ಬಹಳ ಬಲವತ್ತಾಗಿ ಬಲಕಾಯಿಸಿಕೊಂಡಿದ್ದ ಬ್ರೆಂಡ್ ಗ್ರಾಮವನ್ನು ಸರ್ವಿಯನರು ಕಠಿಣ ಕಾಳಗ ಮಾಡಿ ಸ್ವಾಧೀನಮಾಡಿಕೊಂಡಿರುತ್ತಾರೆ. ಇದನ್ನು ಸ್ವಾಧೀನಮಾಡಿಕೊಂಡದ್ದರಿಂದ ಸರ್ವಿಯನರು ಶತ್ರುಗಳ ನೆಲೆಯ [illegible]ನೇ ಸಾಲನ್ನು ಹರಿದ ಬಿಟ್ಟಂತೆ ಆಯಿತು.

ಕರಸಫೋನಿಯನ್ ರಣರಂಗದಲ್ಲೆಲ್ಲಾ ಶತ್ರುಗಳು ರುಮೇನಿಯನರ ಮೇಲೆ ಹಲ್ಲೆಮಾಡುತ್ತಿದ್ದಾರೆ. ರುಮೇನಿಯನು ಶತ್ರುಗಳನ್ನು ಹಿಂದಕ್ಕೆ ಅಟ್ಟಿರುವರು. ಡೊಬ್ರುಡ್ಜದಲ್ಲಿಯೂ ರುಮೇನಿಯನರ ಮೇಲೆ ಶತ್ರುಗಳು ಹಲ್ಲೆಮಾಡಿರುವರು. ರುಮೇನಿಯನರು ಬ್ಯಾಟುಜ್ ಕಣಿವೆಯಲ್ಲಿದ್ದ ಶತ್ರುಗಳನ್ನು ಹಿಂದಕ್ಕೆ ಓಡಿಸಿರುವರು.

ಗ್ರೀಸ್.

ಇಟಲಿಯನರ ಮತ್ತು ಫ್ರೆಂಚರ [illegible] ಸೇನಿಕರು ಗ್ರೀಕರಿಗೆ ಸೇರಿದ ಪಿರಾಯಸ್ ಎಂಬಲ್ಲಿ ತಮ್ಮ ಸೇನಿಕರನ್ನು ಇಳಿಸಿ ಕೆಲವರನ್ನು ಬಂದರಿನ ಕಾವಲ ಬಗ್ಗೆಯೂ ಮತ್ತು ಕೆಲವರನ್ನು ಅಥೆನ್ಸಿಗೆ ನಡೆಯುವ ರೈಲ್ವೇ ವ್ಯವಹಾರವನ್ನು ಅಂಕೆಯಲ್ಲಿಡುವ ಬಗ್ಗೆಯೂ ನೇಮಿಸಿರುತ್ತಾರೆ.

ಮಿತ್ರರು ಪುನಃ ಗ್ರೀಕರ ಕೂಡೆ ಲಾರಿಸ್ಸಾ ರೈಲ್ವೇಯ [illegible] ಗಾಡಿಗಳನ್ನು ತಮಗೆ ಬಿಟ್ಟುಕೊಡಬೇಕೆಂದು ಕೇಳಿರುತ್ತಾರೆ. ಗ್ರೀಕರು ಗಾಡಿಗಳನ್ನು ಮಿತ್ರರಿಗೆ ಬಿಟ್ಟುಕೊಡಲು ಒಪ್ಪಿರುತ್ತಾರೆ ಆದರೆ ಅವರು ಕೇಳಿದಷ್ಟು ಗಾಡಿಗಳನ್ನು ಬಿಟ್ಟುಕೊಡುವದು ಅಸಾಧ್ಯವೆಂದು ತಿಳಿಸಿರುತ್ತಾರೆ.

ಜಲಂತರ್ಗಾಮಿ ನಾವೆಗಳು.

[illegible] ಟನ್ ಭಾರಾವಣೆಯ "ಆಲಾಯೂನಿಯ" ಎಂಬ ಹಡಗವು ಮುಣುಗಿರುತ್ತದೆ. [illegible] ಪ್ರಯಾಣಿಕರು ಸುರಕ್ಷಿತವಾಗಿ ದಡ ಸೇರಿರುವರು.

ವಿದೇಶ ವೃತ್ತಾಂತ.

ಕೆನಡಾ ದೇಶದ ಗವರ್ನರ ಜನರಲರಾಗಿದ್ದ ಕನ್ನಾಟ್ ಪ್ರಭುಗಳವರು ಕೆನಡಾ ದೇಶದಿಂದ ಇಂಗ್ಲಾಂಡಿಗೆ ಹಿಂತಿರುಗಿ ಬಂದಿರುತ್ತಾರೆ.

ಆಸ್ಟ್ರಿಯ ದೇಶದ ಪ್ರಧಾನ ಮಂತ್ರಿಯಾಗಿದ್ದ ಕೌಂಟು ಸ್ಟುವಾರ್ಕೆ ಎಂಬವರು ಹೊಟೇಲಿನಲ್ಲಿ ಭೋಜನಮಾಡುತ್ತಿರುವಾಗ ಯಾರೋ ಅವರನ್ನು ಗುಂಡುಹೊಡೆದು ಕೊಂದರು ಎಂಬ ವಾರ್ತೆ ಬಂದಿರುತ್ತದೆ.

ಯುದ್ಧ ಪ್ರಾರಂಭವಾದನಂತರ ಆಸ್ಟ್ರಿಯಾನರು [illegible] ಮಂದಿಯನ್ನು ಸೇನೆಗೆ ಸೇರಿಸಿಕೊಂಡರೆಂತಲೂ ಇನ್ನೂ ಸೇನೆಗೆ ಸೇರತಕ್ಕ ಸುಮಾರು [illegible] ಮಿಲಿಯ ಜನರು ಆಸ್ಟ್ರಿಯದಲ್ಲಿದ್ದಾರೆಂತಲೂ ವಾರ್ತೆ ಅದೆ.

ಆಸ್ಟ್ರಿಯ ದೇಶದ ಮಂತ್ರಿಯವರಿಗೆ ಗುಂಡುಹೊಡೆದು ಕೊಂದವನು ಡಾಕ್ಟರ್ ಫ್ರೆಡೆರಿಕ್ ಅಡ್ಲರ್ ಎಂಬವನೆಂತ ತಿಳಿದುಬಂದದೆ.

ಸಲೋನಿಕದಲ್ಲಿ ತತ್ಕಾಲಿಕ ಸರಕಾರವನ್ನು ಮಾಡಿಕೊಂಡ ಮಿ। ವೆನೆಜೊಲ್ಲಿಸರವರು ಬಲ್ಗೇರಿಯರಿಗೆ ಮೆಕೆದೋನಿಯವನ್ನು ಬಿಟ್ಟುಹೋಗಬೇಕೆಂಬ ಪತ್ರ ಕಳುಹಿಸಿಕೊಟ್ಟಿದ್ದಾರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸರ್. ವಿಲಿಯಂ ಬ್ರೈನ್ ಎಂಬವರು ಐರ್ಲಾಂಡಿನ ಉಪ ಸೆಕ್ರಟರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಇದೇ ತಾ. [illegible]ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ [illegible] ಮಂದಿಗೆ ಪ್ಲೇಗಬೇನೆಯು ಸೋಂಕಿ [illegible] ಮಂದಿ ಮೃತರಾದರು. ಈ ಪೈಕಿ ಬೊಂಬಾಯಿ ಸಂಸ್ಥಾನ ಮತ್ತು ಸಿಂಧ್ [illegible]; ಮದ್ರಾಸ್ [illegible]; ಬಿಹಾರ್ ಮತ್ತು ಒರಿಸ್ಸ [illegible]; ಸಂಯುಕ್ತ ಸಂಸ್ಥಾನ [illegible]; ಪಂಜಾಬು [illegible]; ಬರ್ಮ [illegible]; ಮಧ್ಯ ಸಂಸ್ಥಾನ [illegible]; ಮೈಸೂರು [illegible]; ಹೈದರಾಬಾದ್ [illegible]; ಮಧ್ಯ ಹಿಂದೂಸ್ಥಾನ [illegible]; ರಜಪುತಾನ [illegible] ಮರಣಗಳಾಗಿರುವವು.

ಮುಂಬಾಯಿ ಪ್ರಾಂತಿಕ ಸಭೆಯು ಇದೇ ತಾ. [illegible]ರಲ್ಲು ಅಹಮ್ಮದಾಬಾದಿನಲ್ಲಿ ಕೂಡಿಬಂದಿರುತ್ತದೆ. ಈ ಪ್ರಾಂತಿಕ ಸಭೆಗೆ ಮಾನ್ಯ ಜಿನ್ನಾರವರು ಅಧ್ಯಕ್ಷರಾಗಿದ್ದರು. ಈ ಸಭೆಗೆ ರಾಷ್ಟ್ರೀಯ ಪಕ್ಷದವರೂ ಚಿತ್ತೈಸಿದ್ದರು. ಮಾನ್ಯ ತಿಲಕರವರೂ ಮಾನ್ಯ ಶ್ರೀನಿವಾಸ ಶಾಸ್ತ್ರಿಯವರೂ ಸಭೆಗೆ ಪ್ರತಿನಿಧಿಗಳಾಗಿ ಬಂದಿದ್ದರು. ಒಟ್ಟಿಗೆ ಸುಮಾರು [illegible] ಪ್ರೇಕ್ಷಕರು ಸಭೆಗೆ ಚಿತ್ತೈಸಿದ್ದರು. ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣವಾದ ನಂತರ ಸಭಾಧ್ಯಕ್ಷರಾಗಿ ಆರಿಸಲ್ಪಟ್ಟ ಮಾನ್ಯ ಜಿನ್ನಾರವರು ಕಾಲೋಚಿತ ಭಾಷಣ ಕೊಟ್ಟು ಹಿಂದೂಸ್ಥಾನದಲ್ಲಿ ಈಗ ಅಂಕುರಿಸಿರುವ ಹೊಸಜೀವ, ಭಾರತೀಯರಿಗೆ ಭೂಸೇನೆಯಲ್ಲಿ ಮತ್ತು ನೌಕಾವಳಿಯಲ್ಲಿರಬೇಕಾದ ಪ್ರೆಸ್ ಆಕ್ಟು, ಡಿಫೆನ್ಸ್ ಒಫ್ ಇಂಡಿಯಾ ಆಕ್ಟು ಮೊದಲಾದ ವಿಷಯಗಳನ್ನು ಕುರಿತು ಭಾಷಣ ಕೊಟ್ಟರು. [illegible]ನೇ ಇಸವಿಯಲ್ಲಿ ಪ್ರೆಸ್ ಆಕ್ಟು ಜಾರಿಗೆ ಬಂದಂದಿನಿಂದ, ಇದರಿಂದ ಉಂಟಾದ ಕೆಲಸಗಳ ವಿಚಾರ ನಡಿಸುವರೆ ಆಫೀಸರರು ಮತ್ತು ನೊನ್ ಆಫೀಸರರು ಕೂಡಿದ ಒಂದು ಕಮಿಟಿಯನ್ನು ಸರಕಾರದವರು ಏರ್ಪಡಿಸುವದು ವಿಹಿತವೆಂದೂ ಡಿಫೆನ್ಸ್ ಆಫ್ ಇಂಡಿಯಾ ಆಕ್ಟು ಕೂಡಾ ಕಾರ್ಯನಿರ್ವಾಹಕರ ಕೈಯಲ್ಲಿಟ್ಟ ಅಪಾಯಕರವಾದ ಆಯುಧದಂತಿರುವದರಿಂದ ಇಂಗ್ಲಾಂಡಿನಲ್ಲಿ ಮಾಡಿರುವಂತೆ ಕಾರ್ಯನಿರ್ವಾಹಕರ ಆಜ್ಞೆಯನ್ನು ರಿವಿಜನ್ ಮಾಡುವ ಅಧಿಕಾರವಿರುವ ಒಂದು ಕಮಿಟಿಯನ್ನು ಇಲ್ಲಿಯೂ ರೂಪಿಸುವದು ಅಗತ್ಯವೆಂದೂ ಮಾನ್ಯ ಜಿನ್ನಾರವರು ಭಾಷಣದಲ್ಲಿ ಸೂಚಿಸಿರುತ್ತಾರೆ. ಹಿಂದೂಗಳೂ ಮಹಮ್ಮದೀಯರೂ ಐಕ್ಯಭಾವದಿಂದಿದ್ದು ದೇಶದ ಏಳಿಗೆಗೆ ಒಗ್ಗಟ್ಟಾಗಿ ಕೆಲಸಮಾಡಬೇಕೆಂದೂ ಇದೇ ದೇಶದ ಏಳಿಗೆಗೆ ಅತ್ಯಗತ್ಯವೆಂದೂ ಅಧ್ಯಕ್ಷರು ತನ್ನ ಭಾಷಣದಲ್ಲಿ ಒತ್ತಿಹೇಳಿರುತ್ತಾರೆ.

ಕೆಲವು ಸಮಯದ ಹಿಂದೆ ಲಾಹೋರು ಗವರ್ನಮೆಂಟ ಕಾಲೇಜು ವಿದ್ಯಾರ್ಥಿಗಳೊಳಗೆ ಆದ ದಾಂದಲೆಯಲ್ಲಿ ಅಲ್ಲಿಯ ಡ್ಯುಪಿಟಿ ಮೇಜಿಸ್ಟ್ರೇಟರು ಒಬ್ಬ ವಿದ್ಯಾರ್ಥಿಗೆ ೩ ತಿಂಗಳ ಸಜಾ ಮತ್ತು ೧೦೦೦ ರೂಪಾಯಿ ಜುಲುಮಾನೆಯನ್ನೂ ಉಳಿದ ೧೨ ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬನಿಗೆ ರೂ. ೨೫೦ರ ಪ್ರಕಾರ ಜುಲುಮಾನೆಯನ್ನೂ ವಿಧಿಸಿದ್ದರು. ಈ ತೀರ್ಮಾನದನಂತರ ಮುದ್ದೈ ಮತ್ತು ಮುದ್ದೈಯಾಲೆ ಕಡೆಯ ವಕೀಲರು ಈ ಮೊಕದ್ದಮೆಯನ್ನು ಒಪ್ಪಂದದಿಂದ ತೀರಿಸಿಕೊಳ್ಳುತ್ತೇವೆ ಎಂದು ಸೆಶ್ಶನ್ ಜಡ್ಜರಿಗೆ ಮನವಿಮಾಡಿಕೊಂಡದ್ದರಿಂದ ಸೆಶ್ಶನ್ ಜಡ್ಜರು ಎಲ್ಲಾ ವಿದ್ಯಾರ್ಥಿಗಳನ್ನು ಖುಲಾಸುಪಡಿಸಿದರು.

~~~~~

ಬಿಕಾನೀರ್ ಮಹಾರಾಜರವರು ತಮ್ಮ ಜನನ ದಿನದ ಜ್ಞಾಪಕಾರ್ಥವಾಗಿ ಯುದ್ಧದ ಖರ್ಚಿನ ಬಗ್ಗೆ ೨ ಲಕ್ಷ ರೂಪಾಯಿ ದಾನಮಾಡಿರುತ್ತಾರೆ.

~~~~~

ಡಿಫೆನ್ಸ್ ಅಫ್ ಇಂಡಿಯಾ ಆಕ್ಟಿನ ಪ್ರಕಾರ ಮಂಡಲಿಯಲ್ಲಿ ಮರಣ ಶಿಕ್ಷೆಯ ತೀರ್ಮಾನ ಹೊಂದಿದ ಬಸವನ ಸಿಂಘ್, ನರಂಜನ್ ಸಿಂಘ್ ಮತ್ತು ಪಾಲ್‌ಸಿಂಘ್ ಎಂಬವರು ಶಿಕ್ಷೆಯನ್ನು ಕಡಿಮೆಮಾಡಬೇಕೆಂದು ಗವರ್ನರ ಜನರಲರವರಿಗೆ ಮಾಡಿಕೊಂಡ ಮನವಿಯು ತಳ್ಳಿಹಾಕಲ್ಪಟ್ಟಿರುತ್ತದೆ.

~~~~~

ಈಚೆಗೆ ಹಿಂದೂಸ್ಥಾನದ ಬಂದಿಖಾನೆಗಳಲ್ಲಿದ್ದ ಒಳ್ಳೇ ನಡತೆಯ ಕೆಲವು ಕೈದಿಗಳನ್ನು ಶಿಕ್ಷೆಯನ್ನು ವಜಾಮಾಡುವ ಶರ್ತದ ಮೇಲೆ ಮೆಸಪಟಾಮಿಯಕ್ಕೆ ಕಳುಹಿಸಿಕೊಟ್ಟಿದ್ದರು. ಪರೀಕ್ಷಾರ್ಥವಾಗಿ ಮಾಡಿದ ಈ ಕಾರ್ಯವು ಸಫಲವಾದುದರಿಂದ ಈಗತಾನೇ ಹಿಂದೂಸ್ಥಾನದ ಬಂದಿಖಾನೆಗಳಲ್ಲಿರುವ ಕೈದಿಗಳಲ್ಲಿ ಹೆಚ್ಚಿನವರನ್ನು ಮೆಸಪಟಾಮಿಯಕ್ಕೆ ಕೆಲಸದ ಮೇಲೆ ಕಳುಹಿಸಿಕೊಡುವ ಹಾಗೆ ತಕ್ಕ ಏರ್ಪಾಡುಗಳು ನಡೆದಿರುತ್ತವೆ. ಬಂದಿಖಾನೆಗಳಲ್ಲಿರುವ ಅನೇಕ ಕೈದಿಗಳು ಅತ್ಯ ಸಂತೋಷದಿಂದ ಈ ಬಗ್ಗೆ ಏರ್ಪಡಿಸೋಣಾದ ಸೇನಾಂಗಕ್ಕೆ ಸೇರಿರುತ್ತಾರೆ. ಹೀಗೆ ಏರ್ಪಡಿಸೋಣಾಗುವ ಸೇನಾಂಗಗಳು ಮೆಸಪಟಾಮಿಯದ ನದಿಗಳಲ್ಲಿ ದೋಣಿಗಳಿಗೆ ಸಾಮಾನು ಹೊರಿಸುವದಕ್ಕೂ ಇಳಿಸುವದಕ್ಕೂ ದಾರಿ ಕಡಿಯಲಿಕ್ಕೂ ಗುಡಿಸಲು ಇತ್ಯಾದಿಗಳನ್ನು ಕಟ್ಟುವ ಕೆಲಸಕ್ಕೂ ಪ್ರಯೋಗಿಸಲ್ಪಡುವವಲ್ಲದೆ ರಣರಂಗದಲ್ಲಿ ಯುದ್ಧಮಾಡುವ ಬಗ್ಗೆ ಇವರನ್ನು ಪ್ರಯೋಗಿಸುವ ಆಲೋಚನೆಯು ಸರಕಾರದವರಿಗಿಲ್ಲ.

~~~~~

ಬ್ರಿಟಿಷ್ ರೆಡ್‌ಕ್ರೊಸ್ ಸೊಸ್ಯಾಟಿಗೆ ಜೋರ್ಜ ಚಕ್ರವರ್ತಿಯವರು ೫೦೦೦ ಪವನು, ಚಕ್ರವರ್ತಿನಿಯವರು ೧೦೦೦ ಪವನು, ಪ್ರಿನ್ಸ್ ಆಫ್ ವೇಲ್ಸರು ೧೦೦೦ ಪವನು, ಅಲೆಕ್ಸಾಂಡ್ರ ಮಹಾರಾಣಿಯವರು ೫೦೦ ಪವನು ವಂತಿಗೆ ಕೊಟ್ಟಿರುತ್ತಾರೆ.

~~~~~

ಅಲ್ಲಹಾಬಾದಿನಲ್ಲಿ ಚೆಡ್ಡಾ 'ಮಹಮ್ಮದ್ ಎಂಬ ಗಾರಡಿಗಾರನೊಬ್ಬನು ೧೦ ವರ್ಷ ವಯಸ್ಸಿನ ತನ್ನ ಮಗನನ್ನು ಕೊಂದುದರಿಂದ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಅಪಾದಿತನು ತನಗೆ ಶಿಷ್ಯ ಮಂಡಲಿಯವರು ಹೆಚ್ಚುವ ಹಾಗೆ ಮಗನನ್ನು ತಾನು ದೇವರಿಗೆ ಅರ್ಪಿಸಿದೆನೆಂತಲೂ ಅದು ದೇವರ ಅಪ್ಪಣೆಯಾಗಿತ್ತೆಂತಲೂ ವಾದಿಸಿದನು. ಜಡ್ಜರು ಅಪಾದಿತನಿಗೆ ಜೀವಾಂತ ಬಂಕೋಲಿ ಶಿಕ್ಷೆ ವಿಧಿಸಿದರು.

~~~~~

ಬರ್ದವಾನಿನಲ್ಲಿ ಈಚೆಗೆ ಬಂದ ನೆರೆಯಿಂದ ದಾಮೋದರ ನದಿಯು ಉಕ್ಕಿ ಬಂದು ೧೫೭ ಚಚೌಕ ಮೈಲು ವಿಸ್ತೀರ್ಣದ ಭೂಮಿಯು ಹಾಳಾಗಿದೆ. ಪ್ರಾಣಹಾನಿಯಾಗಲಿಲ್ಲ. ಮೃಗಪಶ್ವಾದಿಗಳು ಸ್ವಲ್ಪ ಸತ್ತಿರುವವು. ೩೦೦೦ ಮನೆಗಳು ಬಿದ್ದುಹೋಗಿರುವವು. ಪೈರು ಹಾಳಾಗಿ ಆದ ನಷ್ಟವು ೪ ಲಕ್ಷ ರೂಪಾಯಿಗಳದ್ದಾಗಿರಬಹುದು. ಬರ್ದವಾನಿನಲ್ಲಿ ೧೬೪ ಗ್ರಾಮಗಳು ಕೂಡಿದ ೧೫೦ ಚಚೌಕ ಮೈಲು. ಮತ್ತು ಬಿರ್ಭೂಮಿನಲ್ಲಿ ೧೩ ಗ್ರಾಮಗಳು ಕೂಡಿದ ೬೮ ಚಚೌಕ ಮೈಲು ವಿಸ್ತೀರ್ಣದ ಭೂಮಿಯು ಹಾಳಾಗಿದೆ. ೧೧೪ ಪಶುಗಳು ಮುಣುಗಿ ಸತ್ತಿವೆ. ೧೮,೧೧೪ ಮನೆಗಳು ನೆಲಸಮವಾಗಿವೆ. ಮಿಡ್ನಾಪುರ ಸಬ್ ಡಿವಿಜನಿಗೆ ಸೇರಿದ ಖಾಟಲ್ ಎಂಬಲ್ಲಿ ೨೦–೩೦ ಚಚೌಕ ಮೈಲು ಸ್ಥಳವು ನೆರೆಯಿಂದ ಹಾಳಾಗಿರುತ್ತದೆ. ಸರಕಾರದವರು ನಿರ್ಗತಿಕರಾದವರ ಬಗ್ಗೆ ೧ ಲಕ್ಷದ ೩೦ ಸಾವಿರ ರೂಪಾಯಿ ಸಾಲವಾಗಿಯೂ ೩೦ ಸಾವಿರ ರೂಪಾಯಿ ರಿಲೀಫ್ ಕೆಲಸದ ಬಗ್ಗೆಯೂ ಕೊಟ್ಟಿರುತ್ತಾರೆ.

~~~~~

ಕಳೆದ ಆದಿತ್ಯವಾರ ಮಧ್ಯಾಹ್ನದನಂತರ ಮುಂಬಾಯಿಯಲ್ಲಿ ಪ್ರಖ್ಯಾತರಾಗಿದ್ದ ಸರ್. ಜಾಕೋಬ ಸಸೂನರವರು ವಿಧಿವಶರಾದರು. ಸರ್. ಸಸೂನರವರು ದೇಶಸೇವೆ ಮಾಡಿ ವಿಶೇಷ ಕೀರ್ತಿಯನ್ನು ಹೊಂದಿದ ಗೃಹಸ್ಥರು. ವ್ಯಾಪಾರದೇಶದ ಕೈಗಾರಿಕೆಗಳ ಅಭಿವೃದ್ಧಿಯನ್ನು ಮಾಡುವದರಲ್ಲಿ ಬಹಳವಾಗಿ ಶ್ರೇಚಾಡಿ ಪಾಶ್ಚಾತ್ಯ ದೇಶಗಳಲ್ಲಿ ಕೂಡಾ ಹೆಸರನ್ನು ಪಡೆದಿದ್ದರು. ಸರ್. ಸಸೂನರವರಿಗೆ ಸಾಯುವಾಗ ೭೩ ವರ್ಷ ವಯಸ್ಸು. ೧೯೦೮ನೇ ಇಸವಿಯಲ್ಲಿ ಮುಂಬಾಯಿ ಗವರ್ನರರಾದ ಸಿಡ್ಡೆನ್‌ಹಾಮ್ ಪ್ರಭುಗಳ ಕಾಲದಲ್ಲಿ ಅವರಿಗೆ ಸರ್. ಎಂಬ ಬಹುಮಾನವು ದೊರಕಿತು.

~~~~~

ಬಂಗಾಳದ ಗವರ್ನರರಾಗಿರುವ ಕಾರ್ಮಿಖಯೇಲ ಪ್ರಭುಗಳ ಅವಧಿಯು ತೀರಿದ ನಂತರ ಸೀಲೋನಿನ ಗವರ್ನರರಾಗಿದ್ದ ಸರ್. ಚಾಮರ್ಸ ದೊರೆಗಳು ಬಂಗಾಳದ ಗವರ್ನರರಾಗಿ ನೇಮಿಸಲ್ಪಡುವರೆಂಬ ವಾರ್ತೆ ಎದ್ದಿರುವದರಿಂದ ಹಿಂದೂಸ್ಥಾನದ ವರ್ತಮಾನ ಪತ್ರಗಳು ಈ ನೇಮಕವು ಸರಿಯಲ್ಲವೆಂಬದಾಗಿ ಖಂಡಿಸುತ್ತಲಿವೆ.

~~~~~

ಇದೇ ತಾ. ೨೩ರಲ್ಲು ಅಹಮ್ಮದಾಬಾದಿನಲ್ಲಿ ಮುಂಬಾಯಿ ವಿದ್ಯಾಭ್ಯಾಸ ಪರಿಷತ್ತು ಮ| ರಾ| ಚಿಮನ್‌ಲಾಲ ಎಚ್, ಸೆಟಲವಾಡರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಈ ಪರಿಷತ್ತಿಗೆ ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆಗಳ ಅನೇಕ ಉಪಾಧ್ಯಾಯರೂ ಅನೇಕ ವಿದ್ಯಾವಿಶಾರದರೂ ಹಾಜರಿದ್ದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿ ಕೊಡುವ ಕಾಲವು ಹಿಂದೂಸ್ಥಾನಕ್ಕೆ ಬಂದದೆ, ಆದಷ್ಟು ಬೇಗ ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿ ಮಾಡುವದು ಒಳ್ಳೇದು ಎಂಬಿತ್ಯಾದಿ ವಿಷಯಗಳನ್ನೂ ಹಿಂದೂಸ್ಥಾನದ ವಿಶ್ವವಿದ್ಯಾಲಯಗಳಲ್ಲಿ ತೋರಿಬರುವ ಕುಂದುಕೊರತೆಗಳನ್ನೂ ಸೂಚಿಸಿ, ಅರ್ಥಗರ್ಭಿತವಾದ ಭಾಷಣವನ್ನು ಮಾಡಿದರು.

~~~~~

ಹಿಂದೂಸ್ಥಾನದ ಅಂಗಡಿಗಳಲ್ಲಿ ಮಾರುವ ಆಹಾರ ಪದಾರ್ಥಗಳಿಗೆ ಅಪದ್ರವ್ಯಮಿಶ್ರಮಾಡಿ ಮಾರುವ ಪದ್ಧತಿಯನ್ನು ನಿಲ್ಲಿಸುವ ಬಗ್ಗೆ ಒಂದು ಆಕ್ಟು ಸದ್ಯದಲ್ಲಿಯೇ ಜಾರಿಗೆ ಬರುವಹಾಗಿದೆ. ಈ ಸಂಬಂಧ ಇಂಡಿಯಾ ಸರಕಾರದವರು ಆಯಾ ಸಂಸ್ಥಾನಿಕ ಸರಕಾರಗಳಿಗೆ ಸರ್ಕಲಾರುಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

~~~~~

ದಕ್ಷಿಣ ಹಿಂದೂಸ್ಥಾನ.

ಇದೇ ತಾ. ೧೬ರಲ್ಲು ಸೇಲಮಿನಲ್ಲಿ ಅಕಸ್ಮತ್ತಾಗಿ ನೆರೆಬಂದು ವಿಶೇಷ ನಷ್ಟವಾಗಿರುವದು. ತಾ. ೧೬ನೇ ಮಧ್ಯಾಹ್ನ ಮತ್ತು ತಾ. ೧೭ನೇ ಬೆಳಿಗ್ಗೆ ೧೬ ಇಂಚು ಮಳೆ ಸುರಿದು ನದಿಯು ತುಂಬಿ ಪಟ್ಟಣದೊಳಗೆ ನೆರೆ ತುಂಬಿತು. ಅಕಸ್ಮತ್ತಾಗಿ ನೆರೆಬಂದುದರಿಂದ ಅನೇಕ ಮನೆಗಳ ಗೋಡೆಗಳು ಬೀಳುವವರೆಗೆ ಹೆಚ್ಚಿನವರಿಗೆ ನೆರೆಯು ಪಟ್ಟಣದೊಳಗೆ ನುಗ್ಗಿದ ವಿಷಯವು ತಿಳಿದು ಬರಲಿಲ್ಲ. ಈ ನೆರೆಯಿಂದ ಪ್ರಾಣಾಪಾಯವಾಗದಿದ್ದರೂ ಬಡವರ ಸುಮಾರು ೫೦೦ ಮನೆಗಳು ಬಿದ್ದುಹೋಗಿರುವವು. ಸುಮಾರು ಒಂದು ಸಾವಿರ ಕುಟುಂಬಗಳು ನಿರ್ಗತಿಕರಾಗಿರುವವು. ಉಂಟಾದ ಆಸ್ತಿ ನಷ್ಟದ ಅಂದಾಜು ೫೦,೦೦೦ ರೂಪಾಯಿಗಳದ್ದಾಗಿರಬಹುದು.

~~~~~

ಮದ್ರಾಸ್ ಸಂಸ್ಥಾನದ ಯೂರೋಪಿಯನ್ ಶಾಲೆಗಳ ಕಟ್ಟೋಣದ ಬಗ್ಗೆ ಸೆಂಕ್ಷನ್ ಆದ ಹಣವನ್ನು ಸದರಿ ಶಾಲೆಗಳ ಕರಸ್ಪೊಂಡೆಂಟರು ನಿಯಮಿತ ಬಿಲ್ ಫಾರ್ಮಿನಲ್ಲಿ ಬರಾಯಿಸಿ ಯೂರೋಪಿಯನ್ ಶಾಲೆಗಳ ಮತ್ತು ಟ್ರೈನಿಂಗ್ ಶಾಲೆಗಳ ಇನ್ಸ್‌ಪೆಕ್ಟರರ ವ ಡಿರೆಕ್ಟರ ದೊರೆಗಳ ದಸ್ಕತು ಇಲ್ಲದೆ ಹಣ ಪಡೆಯುವ ವಾಡಿಕೆ ಇತ್ತು. ಈ ವಾಡಿಕೆಯ ಪ್ರಕಾರ ಈಚೆಗೆ ಒಂದು ಯೂರೋಪಿಯನ್ ಶಾಲೆಯ ಕಾರಸ್ಪೊಂಡೆಂಟರು ಕಟ್ಟೋಣದ ಬಗ್ಗೆ ಸೆಂಕ್ಷನ್ ಆದ ಹಣವನ್ನು ಸರಕಾರದ ಮಂಜೂರಾತಿ ಸಿಕ್ಕುವ ಮೊದಲೇ ತೆಗೆದುಬಿಟ್ಟದ್ದರಿಂದ ಡೈರೆಕ್ಟರ ದೊರೆಗಳು ಈ ವಿಷಯ ಸರಕಾರಕ್ಕೆ ಬರಕೊಂಡು ಮುಂದಕ್ಕೆ ಇಂಥಾ ಅಕ್ರಮಗಳು ನಡೆಯದಂತೆ ಯೂರೋಪಿಯನರಲ್ಲದ ಶಾಲೆಗಳ ಕಟ್ಟೋಣದ ಬಗ್ಗೆ ಸೆಂಕ್ಷನ್ ಆದ ಹಣವನ್ನು ಪಡೆಯಬೇಕಾದರೆ ಹೇಗೆ ಬಿಲಿಗೆ ಡೈರೆಕ್ಟರ ದಸ್ಕತು ಅವಶ್ಯವೋ ಹಾಗೆಯೇ ಯೂರೋಪಿಯನ್ ಶಾಲೆಗಳ ಕಟ್ಟೋಣಗಳ ಬಗ್ಗೆ ಸೆಂಕ್ಷನ್ ಆದ ಹಣವನ್ನು ಪಡೆಯಬೇಕಾದರೆ ಬಿಲಿಗೆ ಡ್ಯುಪಿಟಿ ಡೈರೆಕ್ಟರರ ದಸ್ಕತು ಹಾಕಿಸಬೇಕೆಂಬ ನಿಯಮವನ್ನು ಮಾಡಿಸಿರುತ್ತಾರೆ.

~~~~~

ಮದ್ರಾಸ್ ಗವರ್ನರ ಪ್ರಭುಗಳವರು ಮಲಬಾರಿಗೆ ಚಿತ್ತೈಸಿದ ಸಂದರ್ಭದಲ್ಲಿ ಇದೇ ತಾ. ೧೭ರಲ್ಲು ಕಲಿಕೋಟೆಯ ಸೋಪು ಕಾರ್ಖಾನೆಯನ್ನು ಸಂದರ್ಶಿಸಿದರು. ಈ ಕಾರ್ಖಾನೆಗಳ ಅಧಿಕಾರಿಯಾದ ಸರ್ ನಿಕೊಲ್ಸನ್ ಫ್ರೆಡಿಕರವರು ಗವರ್ನರ ಪ್ರಭುಗಳವರನ್ನು ಸ್ವಾಗತಮಾಡಿಕೊಂಡು ಕಾರ್ಖಾನೆಯಲ್ಲಿ ತಯಾರಾದ ಉತ್ತಮ ನಮೂನೆಯ ಸೋಪುಗಳನ್ನು ಪ್ರಭುಗಳವರಿಗೆ ತೋರಿಸಿ ಕಡೆಗೆ "ಸರ್‌ಕಾರ್" ಎಂಬ ಹೆಸರಿನ ಸೋಪು ಪೆಟ್ಟಿಗೆಯನ್ನು ಪ್ರಭುಗಳವರಿಗೆ ಕೊಟ್ಟರು. ಅಲ್ಲಿಂದ ಪ್ರಭುಗಳವರು ಬೇಪೂರದಲ್ಲಿ ಮೀನುಗಳನ್ನು ತವರದ ಪೆಟ್ಟಿಗೆಯಲ್ಲಿ ಹಾಕಿ ಮುರಬ್ಬ ಮಾಡುವ ವಿಧಾನವನ್ನು ನೋಡಹೋದರು.
~~~~~

ಅಲ್ಲಿಂದ ತಾನೂರಿನಲ್ಲಿರುವ ಮೀನು ಒಣಗಿಸುವ ಮತ್ತು ಎಣ್ಣೆ ತೆಗೆಯುವ ಕೆಲಸಗಳನ್ನು ನೋಡಲು ಚಿತ್ತೈಸಿದರು. ತಾನೂರಿನಲ್ಲಿ ಮೀನುಗಾರರು ಪ್ರಭುಗಳವರಿಗೆ ಒಂದು ಬಹುಮಾನ ಪತ್ರವನ್ನು ಓದಿ ತಾವು ಕೂಡಿಸಿದ ೮೦೦ ರೂಪಾಯಿಗಳನ್ನು ಮದ್ರಾಸ್ ಯುದ್ಧ ಫಂಡಿಗೆ ಒಪ್ಪಿಸಿದರು. ತಾ. ೧೮ರಲ್ಲು ಪ್ರಭುಗಳು ಕಾವಲಪರಕ್ಕೆ ಬಂದು ತೊಪಿಲ್ ನಾಯರರ ಅಥಿತಿಗಳಾಗಿದ್ದರು.

~~~~~

ಮೈಸೂರಲ್ಲಿ ಕೂಡಿದ ಪ್ರಜಾ ಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಭಾಷಣದಲ್ಲಿ ಹೀಗೆ ಹೇಳಿರುವರು:—ಮೈಸೂರು ಅರಸೀಕೆರೆ ಲೈನಿನಲ್ಲಿ ರೈಲ್ವೇಯನ್ನು ಹಾಕಿಸುವ ಕೆಲಸವು ತೃಪ್ತಿಕರವಾಗಿ ನಡೆಯುತ್ತಾ ಇದೆ. ಈಗ ಕೆಲಸ ನಡಿಯುತ್ತಿರುವ ಸ್ಥಿತಿಯನ್ನು ನೋಡಿದರೆ ಮೈಸೂರಿಗೂ ಅರಸಿಕೆರೆಗೂ ೧೯೧೭ನೇ ಜೂನು ತಿಂಗಳ ಸುಮಾರಿನಲ್ಲಿ ಗಾಡಿಗಳನ್ನು ನಡಿಸಬಹುದಾಗಿ ತೋರುತ್ತದೆ. ಭಟ್ಕಳಿನಲ್ಲಿ ಒಂದು ರೇವನ್ನು ಏರ್ಪಡಿಸುವದು ಸಾಧ್ಯವೇ ಎಂಬ ವಿಷಯದಲ್ಲಿ ಪ್ರಾಥಮಿಕ ಪರಿಶೋಧನೆಯ ಕಾರ್ಯಗಳು ನಡಿಸಲ್ಪಟ್ಟು ಮುಂದೆ ನಡಿಸಬೇಕಾದ ತಪಸೀಲು ಪರಿಶೋಧನೆಯ ಕಾರ್ಯವನ್ನು ಆಲೋಚಿಸುತ್ತಾ ಇದೆ. ಕೋಗಾರುಗಾಟಿನಿಂದ ಭಟ್ಕಳಿಗೆ ರೈಲ್ವೇಯನ್ನು ಹಾಕುವದಕ್ಕಾಗಿ ಸರಿಯಾದ ಮಾರ್ಗವನ್ನು ಹುಡುಕಲು ಸರ್ವೇ ಕೆಲಸ ನಡಿಯುತ್ತಿದೆ. ಮೈಸೂರು ರೈಲ್ವೇ ಲ್ಯಾನುಗಳನ್ನು ಕೊಡಗಿಗೆ ಸೇಳುವದಕ್ಕಾಗಿ ಮೀಟರ್ ಗೇಜ್ ಲ್ಯಾನಿಗೋಸ್ಕರ ಪ್ರಾಥಮಿಕ ಸರ್ವೇ ಕೆಲಸವು ನಡೆದು ನಾಲ್ಕು ಮಾರ್ಗಗಳು ಚೆನ್ನಾಗಿ ಪರಿಶೋಧಿಸಲ್ಪಟ್ಟವು. ಇವುಗಳ ಪೈಕಿ ಯಾವದಾದರೂ ಒಂದು ಲ್ಯಾನನ್ನು ಚುನಾಯಿಸಿ ತಪಸೀಲ್ ಸರ್ವೇ ಕೆಲಸಗಳು ಸದ್ಯದಲ್ಲೇ ನಡಿಸಲಾಗುವದು ಎಂತ ಹೇಳಿರುತ್ತಾರೆ.

~~~~~

ದಕ್ಷಿಣ ಕನ್ನಡ.

~~~~~

ಪುತ್ತೂರು ಅಕ್ಟೋಬರ ೨೦ನೇ ತಾರೀಕಿನ ಪುತ್ತೂರು ಬಾತ್ಮಿಯಲ್ಲಿ "ಸುಬ್ರಮಣ್ಯ ಗ್ರಾಮದ ಕುಳಗುಂದದಲ್ಲಿ ವರುಷಂಪ್ರತಿ ಆಗುವ ಜಾನುವಾರು ಸಂತೆಯು ಇದೇ ನವಂಬರ ತಾ. ೨ಕ್ಕೆ ಶುರುಆಗಿ ತಾ. ೨೫ಕ್ಕೆ ಅಂತ್ಯವಾಗುವದು" ಎಂಬದರ ಬದಲಿಗೆ "ನವಂಬರ ತಾ. ೭ಕ್ಕೆ ಶುರುವಾಗಿ ತಾ. ೨೫ಕ್ಕೆ ಅಂತ್ಯವಾಗುವದು" ಎಂತ ದುರುಸ್ತಿಯಿಂದ ಓದಬೇಕು.

ರಿಜಿಸ್ಟ್ರಿ ಇಲಾಖೆಗಳ ಇನ್ಸ್‌ಪೆಕ್ಟರ್ ಜನರಲ್ ದೊರೆಗಳವರು ಇಲ್ಲಿಗೆ ತಲಪಿ ಇಲ್ಲಿಯ ಸಬ್ ರಿಜಿಸ್ಟ್ರಿ ಆಫೀಸು ತನಕಿ ನಡಿಸಿ ಹೋಗಿರುವರು.

ಪೋಲಿಸ್ ಇಲಾಖೆಯ ಡಿಪ್ಯುಟಿ ಇನ್ಸ್‌ಪೆಕ್ಟರ ಜನರಲರವರು ಮತ್ತು ಪೋಲಿಸ್ ಸುಪರಿಂಟೆಂಡೆಂಟ್ ದೊರೆಗಳವರು ಇದ್ದೇ ತಾ. ೨೦ರಲ್ಲು ಇಲ್ಲಿಗೆ ತಲಪಿ ಇಲ್ಲಿಯ ಪೋಲಿಸು ಸ್ಟೇಶನಿನ ತನಖಿ ನಡಿಸಿ, ಸಬ್‌ಜೈಲ ಸಂದರ್ಶಿಸಿ ಉಪ್ಪಿನಂಗಡಿಗೆ ಹೋಗಿರುವರು. ಅಲ್ಲಿಂದ ಬೆಳ್ತಂಗಡಿಗಾಗಿ ಮಂಗ್ಳೂರಿಗೆ ಹೋಗಿರುವರು.

~~~~~

ಬಂಟವಾಳ:— ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಕಡೆಯಿಂದ ನಡೆಸಿಬರುತ್ತಿರುವ ಸೆಕೆಂಡರಿ ಶಾಲೆಗೆ ಈ ವಾರದಲ್ಲಿ ಶಾಲಾ ಇನ್ಸ್‌ಪೆಕ್ಟರರಾದ ಮೆಟ್ಸ್ ದೊರೆಗಳವರು ಚಿತ್ತೈಸಿ ಇಷ್ಟು ಕಾಲ ಈ ಶಾಲೆಯಲ್ಲಿ ನಡೆದ ಕೆಲಸವನ್ನೆಲ್ಲ ಪರಾಮರ್ಶಿಸಿ, ಇದು ಸರಕಾರದ ಮಂಜೂರಾತಿಗೆ ಯೋಗ್ಯವೇ ಆದುದೆಂದು ದೃಢಾಭಿಪ್ರಾಯವನ್ನು ಪಡೆದು, ಅಂತೆಯೆ ಶಿಫಾರಸು ಬರೆದಿರುವರು. ಇದೇ ರೀತಿಯಲ್ಲಿ ಮೇಲಾಫೀಸರರಿಗೂ ಸೂಚಿಸಿಕೊಂಡಿರುವುದರಿಂದ ಮಂಜೂರಾತಿಯ (ರಿಕೊಗ್ನಿಶನ್) ವರ್ತಮಾನವೂ ಅಧಿಕಾರ, ಪತ್ರವೂ ಕೆಲವು ದಿವಸಗಳೊಳಗೆ ಇಲ್ಲಿಗೆ ಬರುವಂತಿದೆ.

ಈ ವರ್ತಮಾನವನ್ನು ನಿಮಗೆ ತಿಳಿಸುವ ಸಂದರ್ಭದಲ್ಲಿ ಮತ್ತೂ ಹೇಳಬಹುದಾದ ಇನ್ನೊಂದು ಸಂಗತಿ ಇದೆ. ಈ ಶಾಲೆಯು ಹಿಂದೂ ದೇವಾಲಯದ ಕಡೆಯಿಂದ ನಡೆಸಲ್ಪಡುವ ಒಂದೇ ಸೆಕೆಂಡರಿ ಶಾಲೆಯಾಗಿದೆ. ಎಷ್ಟೇ ಅನುಭವವಿಲ್ಲದ ಹಾಗೂ ಈ ವಿಷಯ ಹಿಂದುಳಿದ ಸಮಾಜದವರೇ ಇದನ್ನು ನಡಿಸಿದರೂ ಇದರಿಂದ ಸಫಲವಾದ ಸಂಗತಿಯನ್ನು ತಿಳಿದು, ಇನ್ನು ನಮ್ಮ ಹುಡುಗಿಯರ ಸಲುವಾಗಿಯೂ, ಹುಡುಗರ ಸಲುವಾಗಿಯೂ ಧರ್ಮಾರ್ಥ ವಿದ್ಯೆ ಕಲಿಸುವ ಶಾಲೆಗಳನ್ನು ಈ ದೇವಳ ಮುಖಾಂತರ ನಡಿಸಿಬರುವದಲ್ಲದೆ, ಸೆಕೆಂಡರಿ ಶಾಲೆಯನ್ನು ಹೈಸ್ಕೂಲು ತರಗತಿಗೆ ಏರಿಸಬೇಕೆಂದೂ ಅನೇಕ ಚಿತ್ರಾಯವೂ, ಕುತೂಹಲವೂ ಉಂಟಾಗಿದೆ. ಇದರಿಂದ ಅತುಲ ಧನಸಹಾಯವು ಅಗತ್ಯ. ಸ್ವಜಾತಿ ಬಾಂಧವರೂ ವಿದ್ಯಾಭಿಮಾನಿಗಳಾದ ಗೃಹಸ್ಥ ಗೃಹಸ್ಥೆಯರೂ ಈ ಒಗ್ಗೆ ಎಲ್ಲೆಲ್ಲಿಂದಲೂ ಸಹಾಯಮಾಡುವರಾಗಿ ನಂಬಿಕೆಯೂ ಇದೆ. ಫಂಡನ್ನು ಕೂಡಿಕೊಳ್ಳಲೂ ಹೊರಡುತ್ತಿದ್ದಾರೆ. ತಾನು ಮೊದಲೆಂದು ಹಣವನ್ನು ಕೊಡುವವರಿದ್ದಾರೆ. ಶ್ರೀದೇವರು ಈ ಕೆಲಸಗಳನ್ನೆಲ್ಲ ತ್ವರ್ಯದಲ್ಲೆ ಮಾಡಿಸಿಕೊಳ್ಳಲೆಂದು ಕೋರುತ್ತೇವೆ.

~~~~~

ಕಟಪಾಡಿ:— ಇಲ್ಲಿ ಕೈಯಿಗೆ ಬಂದ ಭತ್ತವನ್ನು ಮನೆಗೆ ಸಾಗಿಸುವದು ತುಂಬಾ ಕಷ್ಟವಾಗಿದೆ. ಮುಂಚಿನ ದಿಕ್ಕ ಕೊಯಿದ ಪೈರನ್ನು ಸಾಗಿಸುವ ಮುಂಚಿನ ದಿವಸವೆ ಗದ್ದೆಯಿಂದಲೇ ಕೈಯಿಂದ ಹೊಸೆದು ಭತ್ತವನ್ನು ಕೊಂಡುಹೋಗುವರು. ಬೇಸಾಯಗಾರರು ಮರುದಿವಸ ಬರಿ ಹುಲ್ಲನ್ನು ಮನೆಗೆ ಸಾಗಿಸುವ ಕಾಲಬಂದಿದೆ. ಈ ವಿಷಯಲ್ಲಿ ಉಡುಪಿ ಪೋಲಿಸಿನವರು ಕೆ. ಡಿ. ಬಿಕ್ಕಾರಿ ಪೂಜಾರಿಯನ್ನು ಕಳವಿನ ಭತ್ತ ಸಮೇತ ಹಿಡಿದಿರುವರೆಂತ ಕೇಳುತ್ತೇವೆ.

ಕೆಲವುದಿವಸಗಳ ಹಿಂದೆ ಇಲ್ಲಿ ಸಮೀಪ ಪಾಜೆ ಎಂಬಲ್ಲಿ ಒಬ್ಬ ಬ್ರಾಹ್ಮಣರ ಕುಲೀನ ತರುಣಿಯು ಬಾವಿ ನೀರು ಸೇದುವಾಗ ಕಾಲು ಜಾರಿ ಬಾವಿಯೊಳಕ್ಕೆ ಬಿದ್ದು ಮೃತಳಾದಳು. ಬಾವಿಗೆ ಆವರಣವಿಲ್ಲದಿರುವದೇ ಈ ಮರಣಕ್ಕೆ ಕಾರಣವಾಗಿರುತ್ತದೆ. ಇನ್ನಾದರೂ ಆವರಣ ಇಲ್ಲದ ಬಾವಿಗಳಿಗೆ ಆವರಣವನ್ನು ಕಡಿಮೆ ಖರ್ಚಿನಿಂದಾದರೂ ಹಾಕಿಸುವದುತ್ತಮವಲ್ಲವೇ.

ಬರುವ ನವಂಬ೬ನೇ ಶನಿವಾರ ಕಾಪು ಬೋರ್ಡು ಶಾಲೆಯಲ್ಲಿ ಉಡುಪಿ ರೇಂಜ್ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಸಭೆಯು ಜರಗುವದು. ಈ ಸಭೆಯಲ್ಲಿ ಕಲಿಸುವಿಕೆಯ ಕುರಿತು ಉಪಾಧ್ಯಾಯರಿಗೆ ಮಾಹಿತಿ ಕೊಡೋಣಾಗುವದು. ಎಲ್ಲಾ ಉಪಾಧ್ಯಾಯರಿಗೂ ಸುಸ್ವಾಗತವಿದೆ.

~~~~~

ಮಂಗಳೂರು.

~~~~~

ಇದೇ ಕಳದ ಸಪ್ಟಂಬರ ತಿಂಗಳಲ್ಲಿ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ೩೦೭೬ ಜನನ, ೨೧೧೬ ಮರಣಗಳಾಗಿರುವವು. ಈ ಪೈಕಿ ಆಯಾ ತಾಲೂಕುಗಳ ಜನನ ಸಂಖ್ಯೆ ಈ ರೀತಿಯಾಗಿರುವದು:—ಕುಂದಾಪುರ ಗಂಡು ೧೭೪ ಹೆಣ್ಣು ೧೬೬=೩೪೦; ಉಡುಪಿ ತಾಲೂಕು ಗಂಡು ೩೫೬ ಹೆಣ್ಣು ೩೦೨=೬೫೮; ಕಾರ್ಕಳ ತಾಲೂಕು ಗಂಡು ೧೪೩ ಹೆಣ್ಣು ೧೬೬=೩೦೯; ಮಂಗಳೂರು ತಾಲೂಕು ಗಂಡು ೩೧೦ ಹೆಣ್ಣು ೨೮೭=೫೯೭; ಉಪ್ಪಿನಂಗಡಿ ತಾಲೂಕು ಗಂಡು ೨೨೦ ಹೆಣ್ಣು ೧೭೪=೩೯೪; ಕಾಸರಗೋಡು ತಾಲೂಕು ಗಂಡು ೩೨೪ ಹೆಣ್ಣು ೩೫೮=೬೮೨; ಮಂಜೇಶ್ವರ ಗಂಡು ೭೮ ಹೆಣ್ಣು ೬೩=೧೪೧; ಒಟ್ಟು ಗಂಡು ೧೬೧೧; ಹೆಣ್ಣು ೧೪೬೫=೩೦೭೬. ಮರಣ ಸಂಖ್ಯೆ—ಕುಂದಾಪುರ ಗಂಡು ೨೧೧ ಹೆಣ್ಣು ೧೬೬=೩೭೭; ಉಡುಪಿ ಗಂಡು ೨೦೦ ಹೆಣ್ಣು ೧೮೪=೩೮೪; ಕಾರ್ಕಳ ತಾಲೂಕು ಗಂಡು ೧೨೫ ಹೆಣ್ಣು ೯೭=೨೨೨; ಮಂಗಳೂರು ಗಂಡು ೧೬೩ ಹೆಣ್ಣು ೧೨೫=೨೮೮; ಕಾಸರಗೋಡು ಗಂಡು ೧೫೬ ಹೆಣ್ಣು ೧೦೮=೨೬೪; ಉಪ್ಪಿನಂಗಡಿ ಗಂಡು ೧೬೩ ಹೆಣ್ಣು ೧೫೬=೩೧೯; ಮಂಜೇಶ್ವರ ಗಂಡು ೫೦ ಹೆಣ್ಣು ೪೬=೯೬; ಒಟ್ಟು ಗಂಡು ೧೦೬೩; ಹೆಣ್ಣು ೧೦೫೩=೨೧೧೬;

ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿರುವ ಪಿ. ಎಮ್. ಎಸ್. ಪ್ಯಾಸರವರು ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿಯೂ ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿರುವ ಮ. ರಾ. ಶ್ರೀ. ಪಿ. ಶಂಕರರಾಯರು ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿಯೂ V ಗ್ರೇಡ್ ತಹಸೀಲದಾರರಾದ ಮ. ರಾ. ಪಿ. ಕೃಷ್ಣಾಚಾರಿಯವರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಇದೇ ತಾ. ೨೩ನೇ ಸೋಮವಾರ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಪೋಲಿಸ ಇಲಾಖೆಯವರು ಯುದ್ಧ ಫಂಡಿಗೆ ಹಣ ಕೊಡಿಸುವ ಬಗ್ಯೆ ಒಂದು ಇಂಗ್ಲಿಷ್ ನಾಟಕವನ್ನು ಆಡಿ ತೋರಿಸಿದರು. ಈ ನಾಟಕಕ್ಕೆ ಜಿಲ್ಲಾ ಕಲೆಕ್ಟರ ದೊರೆಗಳವರೂ ಸಾನಿಯವರೂ ಹಲವು ಯೂರೋಪಿಯನ ಗೃಹಸ್ಥರೂ, ಸರಕಾರಿ ಹುದ್ದೆದಾರರೂ ಊರ ಮಾನ್ಯ ಗೃಹಸ್ಥರೂ ವಕೀಲರೂ ಸಾಹುಕಾರರೂ ಹಾಜರಿದ್ದರು. ಈ ನಾಟಕದ ಟಿಕೇಟು ಮಾರಿ ಸುಮಾರು ೬೫೦ ರೂಪಾಯಿಗಳು ಒಟ್ಟಾಯಿತೆಂತ ತಿಳಿಯುತ್ತೇವೆ.

ಇದೇ ತಾ. ೨೭ನೇ ರಾತ್ರಿ ಬೋಳಾರ ಮಾರಿಗುಡಿಯಿಂದ ಸುಮಾರು ೧೫೦೦ ರೂಪಾಯಿ ಕ್ರಯಬಾಳುವ ದೇವರ ಚಿನ್ನಾಭರಣಗಳು ಕಳವಾಗಿರುವವು. ಪೋಲಿಸಿನವರು ಪತ್ತೆಮಾಡುತ್ತಿದ್ದಾರೆ. ತಾ. ೨೮ನೇ ರಾತ್ರಿ ಕಳವಾದ ಸೊತ್ತುಗಳ ಪೈಕಿ ಬೆಳ್ಳಿಚಿನ್ನದ ಮುಖವನ್ನು ಮಾತ್ರ ಸದರಿ ಮಾರಿಗುಡಿಯ ಹೊರಗಿನ ಬಾಗಿಲ ಬದಿಯಲ್ಲಿ ಯಾರೋ ತಂದಿಟ್ಟಿರುವರು.

ಹಂಪನಕಟ್ಟೆಯ ಸಾಂತನ್ ಮೆನೇಜಿಸ್ ಬಾಯಿಯು ಸುಮಾರು ೧೧೪ ರೂಪಾಯಿ ಕ್ರಯ ಬಾಳುವ ವಸ್ತ್ರ ಮತ್ತು ನಗದಿ ರೂಪಾಯಿಗಳನ್ನು ಪೌಲು ಕೊಸ್ತ ಎಂಬವನು ಕಳವು ಮಾಡಿದ್ದನಾಗಿ, ಪೋಲಿಸರು ಅವನನ್ನು ಕೈದುಮಾಡಿರುತ್ತಾರೆ.
~~~~~

ಮಂಗಳೂರು ಡಿವಿಜನ್ ರೆವಿನ್ಯೂ ಡಿವಿಜನಲ್ ಆಫೀಸರರು ಇದೇ ತಾ. ೨೫ರಲ್ಲು ಮಂಗಳೂರು—ಪರಂಗಿಪೇಟೆ, ತಾ. ೨೬ರಲ್ಲು ಮಂಗಳೂರು—ಸುರತಕಲ್; ತಾ. ೩೦ ಸುರತಕಲ್—ಮಂಗಳೂರು, ನವಂಬರ ತಾ. ೬ ಮಂಗಳೂರು—ಪಾಣೆಮಂಗಳೂರು. ತಾ. ೯-೧೧ ಪಾಣೆಮಂಗಳೂರು. ತಾ. ೧೨ ಪಾಣೆಮಂಗಳೂರು—ಮಂಗಳೂರು ತಾ. ೧೩ ಮಂಗಳೂರು—ಕುಡ್ಪು, ತಾ. ೧೪-೧೫ ಕುಡ್ಪು. ತಾ. ೧೬ ಕುಡ್ಪು—ಮಂಗಳೂರು, ತಾ. ೧೭ ಮಂಗಳೂರು—ಹರೇಕಳ, ತಾ. ೧೮-೧೯ ಹರೇಕಳ, ತಾ. ೨೦ ಹರೇಕಳ—ಮಂಗಳೂರು, ಈ ರೀತಿ ಸರ್ಕೀಟು ಬೆಳೆಸುವರು.

೯ನೇ ಸರ್ಕಲಿನ ಶಾಲೆಗಳ ಆಕ್ಟಿಂಗ್ ಇನ್ಸ್‌ಪೆಕ್ಟರರಾಗಿರುವ ಮೆ। ಜೆ. ಎ. ಏಟ್ಸ್ ದೊರೆಗಳವರು ಈ ಸರ್ಕಲಿನ ಕಾಯಂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ

ಮ। ರಾ। ಪಿ. ಸುಬ್ಬಯ ಸೆಟ್ಟರವರು ಮ। ರಾ। ಕೆ. ಅಪ್ಪಾಜಿರಾಯರವರ ಮೇಲೆ ಇಲ್ಲಿಯ ಡಿವಿಜನಲ್ ಆಫೀಸರರಲ್ಲಿ ಹ್ಯಾಬಿಟ ಮಾನನಷ್ಟ ದಾವೆಯಲ್ಲಿ ಮುದ್ದೈ ಮತ್ತು ಮುದ್ದೈ ಕಡೆಯ ಸಾಕ್ಷ್ಯ ವಿಚಾರಣೆ ನಡೆದು ಮೆ। ಸ್ಪೈಂಟರ ದೊರೆಗಳವರು ಈ ದಾವೆಯನ್ನು ಮುದ್ದೈಯಾಳೆಯನ್ನು ಖುಲಾಸುಪಡಿಸಿದ್ದರೆಂತ ತಿಳಿಸಿದ್ದೆವಷ್ಟೆ. ಮೆ। ಸ್ಪೈಂಟರರವರ ಈ ತೀರ್ಮಾನದ ಮೇಲೆ ಮ। ರಾ। ಪಿ. ಸುಬ್ಬಯ ಸೆಟ್ಟರವರು ಸೆಶ್ಶನ್ಸ್ ಜಡ್ಜರಲ್ಲಿ ಮಾಡಿಕೊಂಡ ಕ್ರಿಮಿನಲ್ ರಿವಿಜನ್ ಅರ್ಜಿಯ ತನಕಿಯು ಇದೇ ತಾ. ೨೩ರಲ್ಲು ಸೆಶ್ಶನ್ಸ್ ಜಡ್ಜರಲ್ಲಿ ನಡೆಯಿತು. ಅರ್ಜಿದಾರರ ಕಡೆಯಿಂದ ಬೆರಿಷ್ಟರ್ ರೋಯಿರವರೂ, ರೆಸ್ಪೊಂಡೆಂಟರ ಕಡೆಯಿಂದ ಹೈಕೋರ್ಟ ವಕೀಲ ಮ। ರಾ। ಜಿ. ಕೃಷ್ಣರಾಯರೂ ವ್ಯವಹರಿಸಿದ್ದರು. ಕೆಳಕೋರ್ಟಿನ ತೀರ್ಮಾನದ ಮೇಲೆ ಪ್ರವೇಶವಾಗಲು ಕಾರಣ ತೋರುವದಿಲ್ಲವೆಂಬ ಸಬಬಿನ ಮೇಲೆ ಸೆಶ್ಶನ್ಸ್ ಜಡ್ಜರು ಈ ಅರ್ಜಿಯನ್ನು ತಳ್ಳಿಹಾಕಿರುವರು ಎಂತ ತಿಳಿಯುತ್ತೇವೆ.

ಉಡುಪಿ ೧ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ಮತ್ತು ಕುಂದಾಪುರದ ಆಕ್ಟಿಂಗ್ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾದ ಮ। ರಾ। ಕೆ. ನಾಗಪ್ಪಯ್ಯನವರು ಕುಂದಾಪುರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಮುಸಲ್ಮಾನ ಕ್ಲಬ್ಬಿನಲ್ಲಿ ಇದೇ ತಾ. ೨೪ನೇ ಮಂಗಳವಾರ ನಡೆದ ಕ್ಲಬ್ಬಿನ ಸದಸ್ಯರ ಸಭೆಯಲ್ಲಿ ಇಲ್ಲಿಯ ಡಿವಿಜನಲ್ ಆಫೀಸರರಾದ ಖಾನ್ ಸಾಹೇಬ್ ಪಿ. ಎ. ಅಮ್ಮೂ ಸಾಹೇಬ್ ಬಹದ್ದೂರ್‌ರವರು ಸದರಿ ಕ್ಲಬ್ಬಿನ ಪ್ರೆಸಿಡೆಂಟರಾಗಿಯೂ ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರರಾದ ಮೆ। ಅಬ್ದುಲಖಾದರ್ ಸಾಹೇಬರವರು ವೈಸ ಪ್ರೆಸಿಡೆಂಟರಾಗಿಯೂ ಆರಿಸಲ್ಪಟ್ಟಿರುತ್ತಾರೆಂತಲೂ ಲ್ಯಾನ್ ಮಸೀದಿಯ ಬಳಿ ಇರುವ ಮುಸಲ್ಮಾನರಿಗೆ ಸೇರಿದ ಸ್ಥಳದಲ್ಲಿ ಮುಸಲ್ಮಾನ ವಿದ್ಯಾರ್ಥಿಗಳ ಬಗ್ಯೆ ಒಂದು ಹೊಸ್ಟೆಲನ್ನು ಕಟ್ಟಿಸುವ ಆಲೋಚನೆಯು ಈ ದಿನದ ಸಭೆಯಲ್ಲಿ ನಡೆದು ಈ ಬಗ್ಗೆ ಚಂದಾ ಎತ್ತುವ ಏರ್ಪಾಡು ನಡೆದಿದೆ ಎಂತಲೂ ತಿಳಿಯುತ್ತೇವೆ.

ಕಂಕನಾಡಿ ಗ್ರಾಮದ ತಿಮ್ಮ ಪೂಜಾರಿಯ ಒಂದು ಕರುವನ್ನು ಅದೇ ಗ್ರಾಮದ ಕೋರಿ ಎಂಬವನು ೪ ತಿಂಗಳ ಹಿಂದೆ ಕಳವುಮಾಡಿ ಬಂಟ್ವಾಳ ಫಿರ್ಕ ಮೂಡ ಗ್ರಾಮದಲ್ಲಿ ಮಾರಾಟ ಮಾಡಿದ್ದನು. ತಾಲೂಕು ಸ್ಟೇಶನ್ ಹೆಡ್‌ಕನ್‌ಸ್ಟೇಬಲ ಐತಪ್ಪನವರು ತಲಾಸಿಯಿಂದ ಇದೇ ತಾ. ೨೪ರಲ್ಲು ಕರುವನ್ನು ಕಂಡುಹಿಡಿದು ಅಪಾದಿತನನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇಲ್ಲಿಯ ಗವರ್ನಮೆಂಟ ಕಾಲೇಜ್ ಡೇ ಸಂಭ್ರಮೋತ್ಸವವು ಇದೇ ತಾ. ೨೧ನೇ ಶನಿವಾರ ಜಿಲ್ಲಾ ಕಲೆಕ್ಟರರಾದ ಮೆ। ವೈಬರ್ಟ್ ದೊರೆಗಳ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿರುತ್ತದೆ. ಕಾಲೇಜು ವರದಿಯನ್ನು ಓದಿ ಆದನಂತರ ಅಧ್ಯಕ್ಷರು ಈ ಕಾಲೇಜಿಯ ಹಳೇ ವಿದ್ಯಾರ್ಥಿನಿ ಮತ್ತು ರಾವ್ ಸಾಹೇಬ್ ಎನ್. ಸುಬ್ಬರಾಯರ ಪತ್ನಿಯಾಗಿರುವ ಮಿಸೆಸ್ ಲಲಿತಾಬಾಯಿಯವರನ್ನು ಈ ದಿನದ ಸಮ್ಮಂಗಳಾಚರಣೆ ಮಾಡಲು ಕೇಳಿಕೊಂಡದ್ದರಿಂದ ಮಿಸೆಸ್ ಲಲಿತಾಬಾಯಿಯವರು ಅರ್ಥಗರ್ಭಿತವಾದ ಭಾಷಣವನ್ನು ಮಾಡಿ ಕೂಡಿಬಂದ ಸಭಿಕರನ್ನು ಸಂತೋಷಗೊಳಿಸಿ, ಈ ಕಾಲೇಜಿಯ ಪ್ರಿನ್ಸಿಪಾಲರಾಗಿದ್ದ ಮೆ। ಮೇರಿಮ್ ಮತ್ತು ಅವರ ಪತ್ನಿಯವರು ಕಾಲೇಜು ಬಗ್ಗೆ ಮಾಡಿದ ಕೆಲಸಗಳನ್ನು ಶ್ಲಾಘಿಸಿ ಸೀಮೆಯಿಂದ ಮೆ। ಮೇರಿಮರವರಿಂದ ಬಂದ ಪತ್ರದ ಸಾರಾಂಶವನ್ನು ಸಭಿಕರಿಗೆ ತಿಳಿಸಿ ಹೇಳಿದರು. ಮೆ। ಮೇರಿಮರವರು ಈಗ ಇಂಗ್ಲಾಂಡಿನಲ್ಲಿ ಒಡಗಿ ಕೆಲಸ ಮಾಡುತ್ತಿರುವರೆಂಬದು ಈ ಪತ್ರದಿಂದ ತಿಳಿಯಬಂದಿತು. ಈ ಕಾಲೇಜು ಜಿಲ್ಲೆಯ ಸ್ತ್ರೀಯರು ಕೂಡಾ ವಿದ್ಯಾಭ್ಯಾಸ ಮಾಡಲು ತಕ್ಕ ಸೌಕರ್ಯವನ್ನು ಒದಗಿಸಿಕೊಡುವದರಿಂದ ಇದು ಬಹಳ ಪ್ರಯೋಜನಕಾರಿಯಾದುದೆಂದೂ ಈ ಕಾಲೇಜನ್ನು I ಗ್ರೇಡ್ ಕಾಲೇಜಾಗಿ ಮಾಡಿದರೆ ಪರಸ್ಥಳಗಳಿಗೆ ಹೋಗಿ ಪ್ರೌಢ ವಿದ್ಯಾಭ್ಯಾಸ ಮಾಡಲು ಅನಾನುಕೂಲವಿರುವ ವಿದ್ಯಾರ್ಥಿನಿಯರಿಗೆ ಮತ್ತಷ್ಟು ಪ್ರಯೋಜನ ಉಂಟಾಗಿ ಇಲ್ಲಿಯ ಬಹಳ ಮಂದಿ ಸ್ತ್ರೀಯರು ಪ್ರೌಢ ವಿದ್ಯಾಭ್ಯಾಸವನ್ನು ಪಡೆಯುವ ಹಾಗಾಗುವದೆಂತಲೂ ಮಿಸೆಸ್ ಲಲಿತಾಬಾಯಿಯವರು ತನ್ನ ಭಾಷಣದಲ್ಲಿ ಒತ್ತಿ ಹೇಳಿರುವರು. ಅನಂತರ ಅಧ್ಯಕ್ಷರ ಕಾಲೋಚಿತ ಭಾಷಣದೊಂದಿಗೆ ಈ ದಿನದ ಸಂಭ್ರಮವು ಅಂತ್ಯವಾಯಿತು.

ಈಚೆಗೆ ಬೆಂದೂರಲ್ಲಿ ಪೋಸ್ಟ್‌ಮ್ಯಾನ್ ಮಾರ್ಕರಾಮಸ್ವಾಮಿ ಮಸ್ಕರೆಂಞಾನೆಂಬವನು ಜಟ್ಕಾ ಡ್ರೈವರ್ ಜೂಜೆ ರಸ್ಕಿಂಞನೆಂಬವನಿಗೆ ಚೂರಿಹಾಕಿ ೫ ಗಾಯಗಳನ್ನು ಮಾಡಿದ್ದನೆಂತ ಡೆಪ್ಯುಟಿ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟು ೨೦೦ ರೂಪಾಯಿ ಜುಲ್ಮಾನೆ ಮತ್ತು ಕೋರ್ಟು ಬರಕಾಸ್ತು ಆಗುವವರೆಗೆ ಸಜಾ ಹೊಂದಿದ್ದನೆಂತ ತಿಳಿಸಿತ್ತಷ್ಟೆ. ಈ ತೀರ್ಮಾನದ ಮೇಲೆ ಮಾರ್ಕ ಮಸ್ಕರೆಂಞಾನು ಸೆಶ್ಶನ್ ಜಡ್ಜರಲ್ಲಿ ಅಪೀಲುಮಾಡಿಕೊಂಡಲ್ಲಿ ಸೆಶ್ಶನ್ ಜಡ್ಜರು ಅಪೀಲು ತನಕಿ ನಡೆಸಿ ಕೆಳ ಕೋರ್ಟಿನ ತೀರ್ಮಾನವನ್ನು ರದ್ದುಪಡಿಸುತ್ತಾರೆ. ಪ್ರತಿವಾದಿ ಕಡೆಯಿಂದ ಮ। ರಾ। ತಲಚೆ ಭವಾನಿರಾಯರು ವ್ಯವಹರಿಸಿದ್ದರು. ಪ್ರೊಸಿಕ್ಯುಶನ್ ಕಡೆಯಿಂದ ಮೆ। ಲೋಬರವರು ವ್ಯವಹರಿಸಿದ್ದರು.

ಕೊಡಿಯಾಲಬೈಲ ಮ। ರಾ। ಕ್ಷ್ಣಸೆಲರಾಯರ ಮನೆಗೆ ಕನ್ನ ಹಾಕಿ ಸುಮಾರು ೨೦೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳೂ ೧೦ ರೂಪಾಯಿ ನಂತ್ಲೂ, ನೂರು ನೂರು ರೂಪಾಯಿಯ ೨ ನೋಟುಗಳೂ ಕಳವಾಗಿರುವವು. ಪೋಲಿಸರು ತನಕಿಯಿಂದ ಮೂಸೆ ಮ್ಯೊಲಿಯಾರ್, ತಿಮ್ಮಪ್ಪ, ಉರಗ ಸೆಟ್ಟಿ ಎಂಬವರನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಕಳವಾದ ಕೆಲವು ಮ್ಹಾಲುಗಳು ದೊರೆತಿತ್ತವೆ ಎಂತ ತಿಳಿಯುತ್ತೇವೆ.

ದಿ. ಹಿಂದೂ ಟ್ರಾನ್ಸಿಟ್ ಕಂಪೆನಿಯ ಮೋಟರ್ ಬಸ್‌ಗಳು ನವಂಬರ ತಿಂಗಳ ಶ್ಯಾನ ವಾರದಲ್ಲಿ ಮಂಗಳೂರಿನಿಂದ ಪುತ್ತೂರು ವರೆಗೆ ಚಲಾವಣೆಯಾಗುವದೆಂತ ತಿಳಿಯುತ್ತೇವೆ.

ಇದೇ ವರ್ಷ ಎಪ್ರೀಲ್ ತಿಂಗಳ ತಾ. ೧ರಿಂದ ಇದೇ ಒಕ್ಟೋಬರ ತಾ. ೨೩ರ ವರೆಗೆ ಇಲ್ಲಿ ೧೧೪ ಇಂಚು ೯೦ ಅಂಗುಲ ಮಳೆ ಬಿದ್ದಿರುವದು.

ಕಳೆದ ವಾರ ಮಂಗ್ಳೂರು ಮುನ್ಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಪರಿಷತ್ತಿಗೆ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ

ಉಡುಪಿ ತಾಲೂಕು.

ಖಾನ್ ಸಾಹೇಬ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ರೂ. ೧೫. ರಾ। ವಿ. ಶ್ರೀನಿವಾಸರಾವ್ ರೂ. ೧೦. ರಾ। ನಿ. ರಾಘವೇಂದ್ರರಾವ್ ರೂ. ೧೦. ರಾ। ಸಾಂತ್ಯಾರು ವೆಂಕಟಸುಬ್ಬ ಭಟ್ಟರು ರೂ. ೧೦. ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸ್ ರೂ. ೫. ರಾ। ಎಮ್. ವಿಟ್ಟಲ ಕಾಮತ್ ರೂ. ೫. ರಾ। ಎನ್. ಆನಂದರಾವ್ ರೂ. ೫. ರಾ। ಕೆ. ರಾಮನಾಥ ಪೈ ರೂ. ೩. ರಾ। ಕೆ. ಶಂಕರನಾರಾಯಣರಾವ್ ರೂ. ೫. ರಾ। ಅಬ್ದುಲ್ಲ ರಹಿಮಾನ್ ಹಾರನ್ ಶೇಟರು ರೂ. ೫. ರಾ। ಎಚ್. ವಾಸುದೇವ ಪೈ ರೂ. ೫. ರಾ। ಎಚ್. ರಾಮಣ್ಣ ಸೆಟ್ರು ರೂ. ೫. ರಾ। ದಾವೂದ್ ಆದಂ ಸಾಹೇಬ್ ರೂ. ೫. ರಾ। ಬಿ. ಸುಬ್ಬಣ್ಣಯ್ಯ ರೂ. ೪. ರಾ। ಯು. ರಾಮಚಂದ್ರರಾವ್ ರೂ. ೨. ರಾ। ವಿ. ನಾಗಮಾಣಿಕನ್ ಚೆಟ್ಟಿಯರ್ ರೂ. ೨. ರಾ। ಎಮ್. ಶ್ರೀನಿವಾಸರಾವ್ ರೂ. ೨. ರಾ। ಎ. ಲಕ್ಷ್ಮೀನಾರಾಯಣರಾವ್ ರೂ. . ರಾ। ಜಿ. ಶ್ರೀನಿವಾಸರಾವ್ ರೂ. ೩. ರಾ। ಎಮ್ ರಾಮಕೃಷ್ಣರಾವ್ ರೂ. ೨. ಹಿತಚಿಂತಕ ರೂ. ೨. ಹಿತಚಿಂತಕ ರೂ. ೨. ಸ್ನೇಹಿತ ರೂ. ೨. ಪ್ರಭಾಕರ ಮುದ್ರಾಲಯದವರು ರೂ. ೧. ಸದಾನಂದ ಮುದ್ರಾಲಯವರು ರೂ. ೧.

ಜೀನಸು ಧಾರಣೆ.

(ರಖಂ).

ಮಾರ್ಕಮಸ್ಕತಿ ಅಕ್ಕಿ	6—10—0ರಿಂದ	7— 2—0
ಗುಡ್ಡು ,, ,,	6— 8—0	6—14—0
ಊಟು ಸುಗ್ಗಿ ,,	6—10—0	6—13—0
ಗಾಡಿ ರಾಶಿ ,,	5—12—0	5—15—0
ಅವ್ವಲ್ ಬೆಳ್ತಿಗೆ ,,	6— 8—0	7— 0—0
ಗುಡ್ಡು ಬೆಳ್ತಿಗೆ ,,	5—12—0	6— 4—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	9—12—0
ಗೋದಿ ಗೋಣಿ ೧ರ	11—12—0	12— 0—0
ಹುರುಳಿ ಗೋಣಿ ೧ರ	6— 0—0	6— 4—0
ಕಡಲೆ ಗೋಣಿ ೧ರ ಬೊಂಬ್ಯ	8—12—0	9— 8—0
ತೊಗರಿ ಗೋಣಿ ೧ರ		11— 0—0
ತೊಗರಿ ಬೇಳೆ ಗೋಣಿ ೧ರ	12— 8—0	14— 8—0
ಉದ್ದು ಗೋಣಿ ೧ರ	10— 8—0	11— 4—0
ಊರುಬೆಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ.	4— 4—0	4—10—0
ಕೊಬ್ರಿ ಖಂಡಿ ೧ರ	95— 0—0	105—8—0
ಕೊಬ್ರಿಹಿಂಡಿ ಖಂಡಿ ೧ರ		22— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	25— 0—0	30—0 —0
ಕೊಬ್ರಿ ಎಣ್ಣೆ ಮುಡಿ ೧ರ.	7— 0—0	7— 4—0
ಎಳ್ಳೆಣ್ಣೆ ಮುಡಿ ೧ರ (ಕುರಾಸನ)		4—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಸ್ ಸಕ್ಕರೆ ಮುಡಿ ೧ರ		5— 4—0
ಕಾಫಿ ಖಂಡಿ ೧ರ	225— 0—0	235—0—0
ಹೊಸಅಡಕೆ ಖಂಡಿ ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ		2—15—6
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮುಡಿ ೧ರ	26— 0—0	27— 0—0
ತಾಂಬ್ರ, ಪಾತ್ರಗಳು ಮುಡಿ ೧ರ		28— 0—0
ಚೀನಿ ಬೆಳ್ಳಿ ಸೇರು ೧ರ		24— 0—0
ಪಚ್ಚೆಹೆಸರು ಮುಡಿ ೧ರ	5— 1—0	5— 2—0
ಕಾಳುಮೆಣಸು ಖಂಡಿ ೧ಕ್ಕೆ		260—0—0

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಉಡುಪಿ ತಾಲೂಕಿಗೆ ಸೇರಿದ ಪೆಡೂರ್ರಲ್ಲಿ ಬರುವ "ಧನುಶಂಕ್ರಮಣ" ಉತ್ಸವದ ಕಾಲ ಎಂದರೆ ಇದೇ ೧೯೧೬ನೇ ಇಸವಿ ದಶಂಬರ ತಾ, ೧೯ರಿಂದ ದಶಂಬರ ತಾ. ೨೬ರವರೆಗೆ ಜಾನುವಾರಗಳ ಸಂತೆ ನಡೆಯತಕ್ಕದಿದೆ ಎಂತ ಈ ಮೂಲಕ ಸರ್ವೇ ಜನರಿಗೆ ತಿಳಿಸೋಣಾಗುತ್ತದೆ.

ಸಂತೆಗೆ ತರುವ ಜಾನುವಾರುಗಳ ಬಗ್ಯೆ ಜಾನುವಾರು ವರ್ತಕರಿಂದ ಫೀಸು ತೆಗೆದುಕೊಳ್ಳುವದಿಲ್ಲ. ಮೊದಲಾಗಿ ಸಂತೆಗೆ ತರಲ್ಪಡುವ ೧೦೦೦ ಜಾನುವಾರುಗಳಿಗೆ ಮೊದಲನೇಯ ೩ ದಿವಸಗಳವರೆಗೆ ಮುಫತ್ತಾಗಿ ಹುಲ್ಲು ಒದಗಿಸಿ ಕೊಡೋಣಾದೀತು. ಈ ಉತ್ಸವಕ್ಕೆ ಹೋಗಲು ಯಾರಿಗೂ ನಿರ್ಬಂಧ ಇರಾವದಿಲ್ಲ.

ಮಂಗಳೂರು. } N. Subba Rao.
26-10-16. } *For Collector & President*
District Board, S. C.

ನೋಟೀಸು.

ನನ್ನ ಗಂಡ ರಾಮಚಂದ್ರಭಟ್ಟರ ಮಗ ಈಗ ಪಾಂಡೇಶ್ವರ ಮಂಗಳೂರಿನಲ್ಲಿರುವ ಅನಂತ ಭಟ್ಟರು ಯಾನೆ ಗುಂಡ ಭಟ್ಟರು ನನ್ನನ್ನೂ ನನ್ನ ಗಂಡು ಮಗು ಅಪ್ರಾಯಸ್ಥ ರಾಮಚಂದ್ರನನ್ನೂ, ವಿನೋದಿ ಬಾಯಿಯನ್ನೂ ತ್ಯಜಿಸಿ ಅನ್ನವಸ್ತ್ರ ಕೊಡದೆ ಪ್ರತ್ಯೇಕವಾಗಿ ಇರುತ್ತಾ ರೋಹಿತನೊಗಿ ನಮಗೆ ಕಷ್ಟಕೊಡುವರೆ ಮಾ। ರಾ। ಶ್ರೀ ಬಾಬ್ತು ಮಂಗಳೂರು ಶಹರು ಗದ್ದೆ ಎನ್ ... ಸ್ಟ್ರಿಕ್ಟಿರ್ಲೆ ನಂಬ್ರ 13. A. ಬಾಗ್ಯಾತು ... ಇನ್ಸ್ಟಿಟ್ಯೂಲ್ ನಂಬ್ರ 35ನೇ ಮನೆ ಕೂಡಾ ... ಪರ್ಯಾಲೋಚನೆಯಲ್ಲಿ ಇರುತ್ತಾರೆ. ಮದರಲ್ಲಿ ತ್ರಾಸ ... ಸಗಳನ್ನ ಅಂಶಕ್ಕನೆ ತಗಲುವದಲ್ಲದೆ ... ಜ್ವರ, ಪಿತ್ತಸಂಬಂಧ ... ತ್ತ ಮಗಳ ಹಕ್ಕಿಗೂ ನನ್ನ ... ಪ್ರತಿನಿತ್ಯಪೂ ... ನೂ ಭಾದಿಸತಕ್ಕದ್ದಲ್ಲವೆಂಬ ... ವಾಗಿ ಕೊಡಬೇಕೆಂ ...

ಮಾ। ರಾ। ಪಿ. ಎಸ್. ಅಚ್ಯು ... ನವರಿಗೂ ತಿಳಿಸಿರುತ್ತೇನೆ.
ಮೈಸೂರು ಗವರ್ನಮೆಂಟ್ ಇವರು ... RAMA BAI.
... ITTAL SHANBHOGUE.
... ಗುಣಗಳನ್ನು ಈ ...
... ವೈದ್ಯ ...
... ಔಷಧ ...

ನಮ್ಮ ... ೩೦-೧೦-೧೯೧೬ರಲ್ಲು ನಮ್ಮ ...ನೇ ಕ್ರವೆ. ... ಟಲಾಗು ಉಚ್ಚ್ಸಪೆಕ್ಟರವರಾದ ಮಿ। ಏಟ್ಸ ದೊರೆ ... ಟ ಇನ್ಸ್ಪೆಕ್ಟರವರೊಂದಿಗೆ ನಮ್ಮ ... ರಮಣಸ್ವಾಮಿ ಎಲಿಮೆಂಟರಿ ಶಾಲೆ ... ಸಿದರು. ಶಾಲಾ ಕಟ್ಟೋಣವೂ, ... ಗ್ರಿಗಳೂ ಯೋಗ್ಯವಾದ ಉಪಾಧ್ಯಾಯ ... ಗುಣವನ ... ತಾದ ಎಲ್ಲಾ ಪಾತ್ರತೆಗಳಿಂದ ಮೆರೆಯುವ ... ಎಲ್ಲಾ ಹಳ್ಳಿಶಾಲೆಗಳಲ್ಲಿ ಪ್ರಥಮ ಸ್ಥಾನ ... ಯಲು ಯೋಗ್ಯವಾಗಿದೆಂಬದಾಗಿ ಅಪ್ಪಣೆ ... ನೇ ದರ್ಜೆ ಇಡಲು ತನ್ನ ಪೂರ್ಣ ಸಮ್ಮತಿ ... ಕೊಡುವೆನೆಂಬದಾಗಿ ಅಭಯವಿತ್ತಿರುವರು.— ಈ ... ವರು ತಿಂಗಳುಗಟ್ಟಿಯು ಯಥಾನುಶಕ್ತಿ ಹಣ ... ವಯು ಕೊಟ್ಟು ಪ್ರೋತ್ಸಾಹಿಸುವದರಿಂದಲೂ ಮಾನ್ಯ ... ಯ್ಯರವರು ಈ ಶಾಲಾ ವಿಷಯದಲ್ಲಿ ಹೆಚ್ಚಿಗೆ ಶ್ರಮ ... ಹಿಸಿ ಎಲ್ಲಾ ಕೆಲಸಗಳನ್ನು ನಡಿಸುವದರಿಂದಲೂ ಶಾಲೆಯು ಮುಂದೆ ಅಭಿವೃದ್ಧಿಹೊಂದದೆ ಇರಲಾರದೆಂದು ತಾನು ನಂಬುವೆನು ಎಂತ ಅಪ್ಪಣೆವಿತ್ತು ಮಾನ್ಯ ನಾಯ್ಕರವರನ್ನು ಹೊಗಳಿದರು.

ಇಲ್ಲಿ ದಿನವಹಿ ಎಂಬಂತೆ ಕಳವುಗಳು ನಡಿಯುತ್ತಾ ಇವೆ. ಇಲ್ಲಿಯ ಸಂತೆಕಟ್ಟೆಯಲ್ಲಿ ಕಟ್ಟಿದ ಪೈರಿನವರ ಎತ್ತುಗಳಲ್ಲಿ ಒಂದು ಜೋಡು ಕಾಣೆಯಾಗಿ ಮರುದಿವಸ ಒಂದು ಭಂಡಸಾಲೆಯ ಒಳಗೆ ಸಿಕ್ಕಿತಂತೆ. ನಿನ್ನೆ ರಾತ್ರಿ ಮಟ್ಟಿಯಲ್ಲಿ ಒಬ್ಬ ಬ್ರಾಹ್ಮಣರ ಮನೆನುಗ್ಗಿ ಕಳವು ಆಗಿದೆ. ಭತ್ತವು ಕಳವು ಆಗಿ ಹೋದ್ದಕ್ಕೆ ಲೆಖ್ಖವೇ ಇಲ್ಲಾ. ಇನ್ನಾದರೂ ಸಂಬಂಧಪಟ್ಟ ಪೋಲಿಸ್ ಅಧಿಕಾರಿಗಳು ತಕ್ಕ ಪ್ರಯತ್ನ ಮಾಡಿಯಾರೆಂದು ಕೋರುತ್ತೇವೆ.

ಮಂಗಳೂರು.

ಒಕ್ಟೋಬರ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಕಳೆದ ವಾರ ಕೂಡಿಬಂತು. ಈ ಸಭೆಗೆ ರಾವ್ ಬಹದ್ದೂರ್ ಎನ್. ಸುಬ್ಬರಾಯರು, ದಿವಾನ್ ಬಹದ್ದೂರ್ ಸಿ. ಗೋಪಾಲನ್ ನಾಯರ್, ಹಾಜಿ. ಪಿ. ಕುಂಞಾಯನ್ ಬಹದ್ದೂರ್, ಖಾನ್ ಸಾಹೇಬ್ ಪಿ. ಎ. ಅಮ್ಮುಸಾಹೇಬ್ ಬಹದ್ದೂರ್, ಬಹುಮಾನಸಪಟ್ಟ ಕೆ. ಸದಾಶಿವ ಭಟ್ಟರು, ಖಾನ್ ಸಾಹೇಬ್ ಹಾಜಿ. ಕಾಶಿಂ ಸಾಹೇಬ್ ಬಹದ್ದೂರ್ ಮೊದಲಾದ ಪಲವು ಮೆಂಬರರು ಹಾಜರಿದ್ದರು. ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರಿಂದ ಕಳುಹಿಸೋಣಾದ ಕೆಲವು ಕಾಮಗಾರಿಗಳ ಖರ್ಚಿನ ಅಂದಾಜು ಪಟ್ಟಿಯು ಸಭೆಯ ಮುಂದೆ ಇಡೋಣಾಗಿ ಸಭಿಕರ ಸಮ್ಮತಿಯನ್ನು ಹೊಂದಿರುತ್ತದೆ. ಉಡುಪಿತಾಲೂಕು ಮತ್ತು ಕ್ಟೌನಿನಲ್ಲಿ ಕೆಲವು ದಾರಿಗಳನ್ನು ಅಗಲಮಾಡುವರೆ ಬೇಕಾದ ಸ್ಥಳವನ್ನು ಪಡೆಯಬೇಕೆಂದು ಈ ಸಭೆಯಲ್ಲಿ ನಿರ್ಣಯವಾಗುತ್ತದೆ.

ಬಿನಾರ್ಡಿನಿಂದ ಸಾತೂರಿಗೆ ದಾರಿಯನ್ನು ಕಡಿಯುವರೆ ರೆ. ೫೦೦೦; ಬಂಟ್ವಾಳದಿಂದ ಗುರುಪುರಕ್ಕೆ ದಾರಿಯನ್ನು ಕಡಿಯುವರೆ ರೂ. ४೦೦೧; ಮುಲ್ಕಿ ಕಡವಿನ ಉತ್ತರಭಾಗದಲ್ಲಿ ನೆರೆಯನ್ನು ತಡೆಯುವ ಕರಿಯ ಕಟ್ಟಿಸುವರೆ ರೂ. ೫೦೦; ಉಪ್ಪಿ ಅಬ್ಕಾರಿ ಆಫೀಸ್ಸಿನ ಬಳಿ ದಾರಿ ಅಗಲಮಾಡುವರೆ ರೂ. ೫೭೦; ಪುತ್ತೂರಲ್ಲಿ ಒಂದು ಛತ್ರ ಕಟ್ಟಿಸುವ ರೂ. ೯೦೦; ಈ ದಿನದ ಸಭೆಯಲ್ಲಿ ಸೆಂಕ್ಷನ್ ಆಗಿರುತ್ತೆ.

ಕಾರ್ಕಳ ತಾಲೂಕಿನಲ್ಲಿ ಯೂನಿಯನ್ ಮಾಡಬೇಕೋ ಬೇಡವೋ ಎಂಬುದರ ವಿಷಯ ಈ ದಿನದ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಯೂನಿಯನ್ ಸ್ಥಾಪಿಸುವದಕ್ಕೆ ಕಾರ್ಕಳ ತಾಲೂಕಿನ ಜನರ ಅನುಮೋದನೆಯು ಇಲ್ಲದಿರುವದರಿಂದ ಈ ವಿಷಯವನ್ನು ಅಲ್ಲಿಯೇ ನಿಲ್ಲಿಸಿ ಬಿಡಬೇಕೆಂತ್ತ ಸಭೆಯಲ್ಲಿ ನಿರ್ಣಯವಾಗಿರುತ್ತದೆ.

ನೇತ್ರಾವತಿಯ ಮೇಲೆ ಪಾಣೆಮಂಗಳೂರಿನಲ್ಲಿ ಕಟ್ಟಿಸುತ್ತಲಿರುವ ಸಂಕದ ಬಗ್ಗೆ ಬೇಕಾದ ಖರ್ಚಿನ ೨ನೇ ಅಂದಾಜು ಪಟ್ಟಿಯು ಮುಂದೆ ಇಡೋಣಾಗಿ ಈ ಬಗ್ಗೆ ೩,೮೩,೭೪೦ ರೂಪಾಯಿ ಸೆಂಕ್ಷನ್ ಆಗಿರುತ್ತದೆ.

ಇಂಡಸ್ಟ್ರಿಯಲ್ ಕಮಿಷನಿನವರು ನಮ್ಮ ಜಿಲ್ಲೆಗೆ ಬರುವ ಹಾಗೆ ಕೇಳಿಕೊಳ್ಳಬೇಕೆಂಬದಾಗಿ ಸಪ್ಟಂಬರ ತಿಂಗಳ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ನಿರ್ಣಯವಾಗಿರುತ್ತಷ್ಟೆ. ಈ ಕಮಿಷನಿನವರು ಮದ್ರಾಸ್ ಪಟ್ಟಣದ ಹೊರತು ...ಸ್ಥಾನದ ಯಾವ ಭಾಗವನ್ನೂ ಸಂದರ್ಶಿಸುವದಿಲ್ಲ, ಮದ್ರಾಸ್ ಪಟ್ಟಣದಲ್ಲಿ ತಕ್ಕ ವಿಚಾರ ನಡಿದನಂತರ ...ದುವೇಳೆ ಅವಶ್ಯವೆಂತ ಕಂಡರೆ ಮಾತ್ರ ಕೆಲವು ಮೆಂಬರನ್ನು ಕೈಗಾರಿಕೆಗಳ ಕೆಲವು ಪ್ರಾಮುಖ್ಯ ಸ್ಥಳಗಳಿಗೆ ಕಳುಹಿಸುವ ಏರ್ಪಾಡು ಮಾಡಲಾದೀತು, ಇಂಥಾ ಏರ್ಪಾಡು ನಡದರೆ ಕೈಗಾರಿಕೆ ಇಲಾಖೆಯ ಆಫೀಸರರು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರ ವಿಜ್ಞಾಪನೆಯನ್ನು ಕಮಿಷನಿನವರ ಚಿತ್ತಕ್ಕೆ ತರುವರು ಎಂಬ ಉತ್ತರವು ಸರಕಾರದಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಬಂದಿರುತ್ತದೆ.

ತಾ. ೩ರಲ್ಲು ತಾಲೂಕು ಬೋರ್ಡು ಮೀಟಿಂಗ್ ತಾಲೂಕು ಬೋರ್ಡು ಪ್ರೆಸಿಡೆಂಟರಾದ ಮಾ। ರಾ। ಎಸ್. ರಘುನಾಥಯ್ಯನವರ ಅಧ್ಯಕ್ಷತೆಯಲ್ಲಿ ಕೂಡಬಂದಿರುತ್ತದೆ. ಈ ಸಭೆಯಲ್ಲಿ ಕೆಲವು ಸಣ್ಣ ಕಾಮಗಾರಿಗಳ ಬಗ್ಗೆ ಹಣವು ಸೆಂಕ್ಷನ್ ಆಗಿರುತ್ತದೆ. ಬೋರ್ಡ ಶಾಲಾ ಉಪಾಧ್ಯಾಯರಿಗೆ ಮಂಗಾಯಿ ಭತ್ತೆಯು ಸಿಕ್ಕುವದಿಲ್ಲವೆಂಬದರ ಕುರಿತು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಪ್ರತಿಯನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ತಾಲೂಕು ಬೋರ್ಡಿನ ಅವಗಾಹನೆ ಬಗ್ಗೆ ಕಳುಹಿಸಿಕೊಟ್ಟಿದ್ದರು. ಸಭೆಯಲ್ಲಿ ಈ ಲೇಖನದ ವಿಚಾರ ನಡೆದು ತಾಲೂಕು ಬೋರ್ಡಿನವರು ಬೋರ್ಡು ಶಾಲಾ ಉಪಾಧ್ಯಾಯರಿಗೆ ಮಂಗಾಯಿಭತ್ತೆ ಕೊಡಬೇಕೆಂಬ ಅಭಿಪ್ರಾಯಪಟ್ಟಿರುವರು. ಆದರೆ ಈ ಮಂಗಾಯಿ ಭತ್ತೆ ಕೊಡಬೇಕಾದರೆ ಒಟ್ಟಿಗೆ ವರ್ಷ ಒಂದಕ್ಕೆ ೨೧೦೦ ರೂಪಾಯಿ ಬೇಕಾಗುವದು, ಆ ಹಣವನ್ನು ತಾಲೂಕು ಬೋರ್ಡಿನಿಂದ ಕೊಡಲು ಅಸಾಧ್ಯವಾಗಿರುವದರಿಂದ ಈ ಬಗ್ಗೆ ಬೇಕಾದ ರೂ. ೨೧೦೦ನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಒದಗಿಸಿ ಕೊಡುವಹಾಗೆ ಅವರನ್ನು ಕೇಳಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯವಾಗಿರುವದು.

ಕೋಟೆಕಾರ—ಪಾತೂರು ರಸ್ತೆಯ ಮೊದಲನೇ ೩ ಮೈಲುಗಳ ವರೆಗೆ ದುರುಸ್ತಿ ಬಗ್ಗೆ ತಾಲೂಕು ಬೋರ್ಡಿನಿಂದ ರೂ. ೫೦೦೦ ಸೆಂಕ್ಷನ್ ಆಗಿರುತ್ತದೆ.

ಮಂಗಳೂರು ಕ್ಷಾಮನಿವಾರಣಾ ಫಂಡಿನವರು ಇದೇ ಕಳೆದ ಸೆಪ್ಟಂಬರ ತಾ. ೧೬ರಿಂದ ಒಕ್ಟೋಬರ ೩೧ರ ವರೆಗೆ ದಿನಂಪ್ರತಿ ಸೇರಿಗೆ ೭ ಆಣೆಯಂತೆ ಬಡವರಿಗೆ ಅಕ್ಕಿ ಮಾರುತ್ತಿದ್ದರು. ಈಗ ತಾನೇ ಹೊಸ ಅಕ್ಕಿಯು ಸೇರಿಗೆ ೭ ಆಣೆಯಂತೆ ಸಿಕ್ಕುವದರಿಂದ ಇದೇ ನವಂಬರ ತಾ. ೧ರಿಂದ ಈ ಫಂಡಿನಿಂದ ಅಕ್ಕಿ ಮಾರುವ ಕೆಲಸವು ನಿಲ್ಲಿಸೋಣಾಗಿದೆ. ಈ ಫಂಡಿಗೆ ರೂ. ೧೫೭೦ ಮಂತಿಗೆ ಕೂಡಿರುತ್ತದೆ. ಈ ಪೈಕಿ ರೂ. ೧೩೭೦ ವಸೂಲಾಗಿದೆ. ಸೇರಿಗೆ ೭ ಆಣೆಯಂತೆ ಮತ್ತು ಬೈಲುಸುಗ್ಗಿಗೆ ಸೇರಿಗೆ ೦-೭-೩ಯಂತೆ ಮಾರಿ ಈ ವರೆಗೆ ರೂ. ೧೭೫೫-४-೦ ನಷ್ಟ ಈ ಫಂಡಿನಿಂದ ಕೊಡೋಣಾಗಿದೆ. ಇದಲ್ಲದೆ ಬಂದರದ ಅಕ್ಕಿಸಾಹುಕಾರರು ಪ್ರತ್ಯೇಕ ಒಂದು ಫಂಡು ಮಾಡಿ ಊರ ಅಕ್ಕಿಯನ್ನು ಸೇರಿಗೆ ೭ ಆಣೆಯಂತೆ ಮಾರಿ ಸುಮಾರು ೧೫೦೦ ರೂಪಾಯಿ ನಷ್ಟ ವಹಿಸಿಕೊಂಡಿದ್ದುತ್ತಾರೆ. ಇದೇ ತಾ. ४ನೇ ಶನಿವಾರ ಈ ಫಂಡಿನ ಲೆಕ್ಕ ಇತ್ಯಾದಿಗಳನ್ನು ನೋಡುವ ಸಭೆಯು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸಾಯಂಕಾಲ ೬ ಗಂಟೆಗೆ ಕೂಡಲಿಕ್ಕಿದೆ. ಕಮಿಟಿ ಮೆಂಬರರೆಲ್ಲರೂ ಈ ಸಭೆಗೆ ಬರತಕ್ಕದ್ದಾಗಿ ಬೇಕೆಂತ ಈ ಕ್ಷಾಮನಿವಾರಣಾ ಫಂಡಿನ ಸೆಕ್ರಟರಿ ಮತ್ತು ಟ್ರೆಜರರಾಗಿರುವ ಮಾ। ರಾ। ಸುಜೀರ ನಾಗಪ್ಪನಾಯಕರು ವಿಜ್ಞಾಪಿಸಿಕೊಂಡಿರುತ್ತಾರೆ. ಅಕ್ಕಿಯ ಧಾರಣೆಯು ಜಡಾವಾಗಿ ಬಡವರು ಸಂಕಷ್ಟಪಡುತ್ತಿರುವ ಈಕಾಲದಲ್ಲಿ ಊರಮಾನ್ಯಗೃಹಸ್ಥರ ಮತ್ತು ಸಾಹುಕಾರರ ಪ್ರೋತ್ಸಾಹದಿಂದ ಸ್ಥಾಪಿಸೋಣಾದ ಈ ರಿಲೀಫ್ ಫಂಡಿನಿಂದ ಬಡಜನರ ಸಂಕಷ್ಟವು ತಕ್ಕಷ್ಟು

ಶಾಂತವಾಯಿತು ಎಂತ ಧಾರಾಳವಾಗಿ ಹೇಳಬಹುದು. ಬಡವರ ಸಂಕಷ್ಟವು ತಮ್ಮದೆಂದು ನೆನಸಿ ಈ ಬಗ್ಗೆ ಸಹಾಯ ಮಾಡಿದ ಊರ ಮಾನ್ಯಗೃಹಸ್ಥರನ್ನೂ, ಫಂಡಿನ ಕಾರ್ಯವು ಸಾಂಗವಾಗಿ ಸಾಗುವಂತೆ ವಿಶೇಷ ಪ್ರಯತ್ನ ತಕ್ಕೊಂಡ ಈ ಫಂಡಿನ ಸೆಕ್ರೆಟರಿ ಮತ್ತು ಟ್ರೆಜರರಾಗಿರುವ ಮ॥ ರಾ॥ ಸುಜೀರ ನಾಗಪ್ಪನಾಯಕರನ್ನೂ ಬಡವರ ಪರವಾಗಿ ವಂದಿಸುವೆವು. ಪರಂತು, ಕಾಲಸ್ಥಿತಿಯನ್ನು ನೋಡುವಾಗ ಬಡವರ ಸಂಕಷ್ಟವು ಇಷ್ಟರಲ್ಲಿಯೇ ತೀರಿತೆಂತ ಇಲ್ಲ. ಜೀವನ ಹೋರಾಟವು ಸುಲಭವಾಗುವ ಸಂಭವವು ತೋರಿಬರುವದಿಲ್ಲ. ಆದುದರಿಂದ ಧಾನ್ಯದ ನ್ಯೂನತೆ ಮೊದಲಾದ ಆಪತ್ತುಗಳಿಗಾಗಿ ಒಂದು ಧಾನ್ಯನಿಧಿಯನ್ನು ಸ್ಥಾಪಿಸುವಂತೆ ನೋಡುವದು ಈ ಜಿಲ್ಲೆಯ ವ ಪಟ್ಟಣದ ಮುಖ್ಯಸ್ಥರ ಧರ್ಮವಾಗಿದೆಂದೂ ಹೀಗೆ ಮಾಡಿದರೆ ಥಕ್ಕನೇ ಬರತಕ್ಕ ಆಪತ್ತುಗಳಿಂದ ಬಡವರನ್ನು ಸುಲಭವಾಗಿ ರಕ್ಷಿಸಬಹುದೆಂದೂ ಈ ಮೂಲಕ ಸೂಚಿಸುವೆವು.

ಕಳೆದ ಶುಕ್ರವಾರ "ಧನಲಕ್ಷ್ಮೀ ಪೂಜೆ"ಯು ಇಲ್ಲಿ ಅತಿ ವಿಜೃಂಭಣೆಯಿಂದ ಸಾಂಗವಾಗಿ ಜರಗಿರುತ್ತದೆ. ಈ ವರ್ಷದ ಧನಲಕ್ಷ್ಮೀ ಪೂಜೆಯಲ್ಲಿ ಇಲ್ಲಿ ಹೇಳತಕ್ಕ ಒಂದು ಹೊಸ ವಿಷಯವು ನಡೆದಿರುತ್ತದೆ. ಈವರೆಗೆ ೭—೮ ವರುಷಗಳಿಂದ ಮಂಗಳೂರಲ್ಲಿ ನಡೆದು ಬರುವ "ವಿಚಿತ್ರ ಧನಲಕ್ಷ್ಮೀ ಪೂಜೆ" ಎಂದರೆ ಮಿಠಾಯಿ ಉಂಡೆಗಳ ತೊಟ್ಟೆಗಳನ್ನು ಇಲ್ಲಿಯ ಆಕ್ಕಿಸಾಹುಕಾರರು ಮನ್ನಾಮಾಡಿ, ಮುಂಬಾಯಿ ಸಾಹುಕಾರರ ರಿವಾಜಿಯನ್ನು ಇಲ್ಲಿಯೂ ಜಾರಿಗೆ ತಂದಿರುತ್ತಾರೆ. ಈ ಪದ್ಧತಿಯು ಅತಿ ಉತ್ತಮವಾದುದೆಂತ ಧಾರಾಳವಾಗಿ ಹೇಳುವೆವು. ಈ ಉತ್ತಮವಾದ ಪದ್ಧತಿಯನ್ನು ಇಲ್ಲಿಯ ಇತರ ಸಾಹುಕಾರರೂ ಅನುಸರಿಸಿದ್ದೇ ಆದರೆ "ಧನಲಕ್ಷ್ಮೀ ಪೂಜೆ"ಯು ಇನ್ನು ಮುಂದೆ "ಜುಲುಮಿನ ಧನಲಕ್ಷ್ಮೀ ಪೂಜೆ" ಎಂದೆನ್ನಿಸಿಕೊಳ್ಳದು ಮತ್ತು ಆ ದಿನ ಗಿರಾಕಿಗಳಿಗೆ ಅಪಮಾನವೂ ಉಂಟಾಗುವ ಸಂಭವವಿರದು. ಅಲ್ಲದೆ ಈ ದಿನ ಸಾಹುಕಾರರು ವೃಥಾ ಮಿಠಾಯಿ ಉಂಡೆಗಳಿಗೆ ಖರ್ಚುಮಾಡುವ ಹಣವನ್ನು ಯಾವದಾದರೂ ಧರ್ಮಕಾರ್ಯಗಳಿಗೆ ಪ್ರಯೋಗಿಸಿದರೆ ಇಹಪರಗಳೆರಡರಲ್ಲಿಯೂ ಕೀರ್ತಿಯನ್ನು ಸಂಪಾದಿಸಿ ಧನ್ಯರಾಗಬಹುದು.

ಬೋಳಾರದ ಮಾರಿಗುಡಿಯ ಚಿನ್ನಾಭರಣಗಳು ಕಳವಾಗಿತ್ತೆಂದು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಆದರೆ ಈಗ ತನಕಿಯಿಂದ ಮಾರಿಗುಡಿಯ ಚಿನ್ನಾಭರಣಗಳು ಕಳವಾಗಿರಲಿಲ್ಲವೆಂದೂ ಸದರಿ ಗುಡಿಯ ಮೊಕ್ತೇಸರರಲ್ಲಿ ಕೆಲವರೂ ಪಾತ್ರಿಯೂ ಆಭರಣಗಳನ್ನು ಹಿಂದೆಯೇ ಮಾರಿ ವ ಅಡವಿಟ್ಟು ಮುಂದಕ್ಕೆ ತಮಗೆ ಮೋಸವಾದೀತೆಂಬ ಭಯದಿಂದ ಈ ಸುಳ್ಳುಪಿರ್ಯಾದಿ ಕೊಟ್ಟಿದ್ದರೆಂತಲೂ ಆಭರಣಗಳು ಕಳವಾಗಿದೆಂದು ಸುಳ್ಳುಪಿರ್ಯಾದಿ ಕೊಟ್ಟ ಸಬಬಿನ ಮೇಲೆ ಪೋಲೀಸಿನವರು ಸದರಿ ಗುಡಿಯ ಮೊಕ್ತೇಸರರ ಪೈಕಿ ದಾಮರ್ಸ ಎಂಬವನನ್ನೂ ಪಾತ್ರಿ ವೆಂಕಟ್ರಮಣನನ್ನೂ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರೆಂದೂ ಇವರು ಮಾರಿದ ವ ಅಡವಿಟ್ಟ ಗುಡಿಯ ಕೆಲವು ಚಿನ್ನಾಭರಣಗಳು ಅಲ್ಲಲ್ಲಿ ಸಿಕ್ಕಿರುತ್ತವೆಂದೂ ತಿಳಿಯುತ್ತೇವೆ.

ಕೊಡಿಯಾಲಬೈಲಿನ ಮುತ್ತುಹೆಂಗಸಿನ ಮನೆಯ ಬಾಗಿಲು ಒಡೆದು ಅಕ್ರಮ ಪ್ರವೇಶ ಮಾಡಿದ್ದಾರಾಗಿ ಅಪಾದಿಸಲ್ಪಟ್ಟ ಚಂದುಸೆಟ್ಟಿ ಮತ್ತು ತ್ಯಾಂಪ ಆಳ್ವನಿಗೆ ಮೂರು ಮೂರು ತಿಂಗಳ ಕಠಿಣ ಸಜಾ ವಿಧಿಸೋಣಾಗಿರುತ್ತದೆ.

ಹಜೂರು ದಲಾಯಿತ ರಾಮು ಎಂಬವನ ತಾಂಬ್ರದ ಗುಡಾಣ ಕಳವುಮಾಡಿದ ಐತಪ್ಪನಿಗೆ ೬ ವಾರಗಳ ಕಠಿಣ ಸಜಾ ವಿಧಿಸೋಣಾಗಿರುತ್ತದೆ.

ಕಳೆದ ವಾರ ಕದ್ರಿ ಮಠಾದರ ಜವಳಿಅಂಗಡಿಗೆ ಯಾರೋ ಕಳ್ಳರು ಕನ್ನಹಾಕಿ ಸುಮಾರು ೩೦೦ ರೂಪಾಯಿ ಕ್ರಯಬಾಳುವ ವಸ್ತ್ರ ಇತ್ಯಾದಿಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ. ಕಳ್ಳರ ಪತ್ತೆಯಾಗಲಿಲ್ಲ.

ಸೆಶ್ಯನ್ಸ್ ತನಕಿಗೆ ತಂದಿದ್ದ ಈಶ್ವರನೆಂಬವನು ಇಲ್ಲಿಯ ಸಬ್‌ಸಿಡಿಯರಿ ಜೈಲಿನಿಂದ ಪರಾರಿಯಾಗಿರುವನೆಂದು ತಿಳಿಸಿತ್ತಷ್ಟೆ. ಈಶ್ವರನು ತಪ್ಪಿಸಿಕೊಳ್ಳಲಿಕ್ಕೆ ಸಹಾಯ್ಯ ಮಾಡಿದ ಅದೇ ಬಂದಿಖಾನೆಯಲ್ಲಿದ್ದ ಐತು ಎಂಬವನಿಗೆ ಡ್ಯಪಿಟಿ ಮೇಜಿಸ್ಟ್ರೇಟರು ಈ ತಕ್ಸೀರಿನ ಮೇಲೆ ೪ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ. ತಲೆತಪ್ಪಿಸಿಕೊಂಡ ಈಶ್ವರನ ಪತ್ತೆಯಾಗಲಿಲ್ಲ.

ಅಡ್ಯಾರ ತುಕ್ರ ಬೈದನ ಮನೆಗೆ ಇದೇ ಕಳೆದ ತಿಂಗಳ ತಾ. ೨೪ರಲ್ಲು ಯಾರೋ ಕಣ್ಣಹಾಕಿ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಇಲ್ಲಿಯ ತಾಲೂಕು ಸ್ಟೇಶನ್ ಹೆಡ್ ಕನ್‌ಸ್ಟೇಬಲ ಐತಪ್ಪನವರು ಕಂದಕದಲ್ಲಿರುವ ಕೆ. ಡಿ. ಕಾಂತಪ್ಪನನ್ನು ಅನುಮಾನದ ಮೇಲೆ ಕೈದು ಮಾಡಿದ್ದಲ್ಲಿ ಅವನಲ್ಲಿ ಅಡ್ಯಾರ ತುಕ್ರ ಬೈದನ ಮನೆಯಲ್ಲಿ ಕಳವಾದ ಚಿನ್ನಾಭರಣಗಳು ಸಿಕ್ಕಿರುವದೆಂತಲೂ ಕೆ.ಡಿ. ಕಾಂತಪ್ಪನನ್ನು ಸದ್ಯಾ ರಿಮಾಂಡಿನಲ್ಲಿಟ್ಟಿರುವರೆಂತಲೂ ತಿಳಿಯುತ್ತೇವೆ.

ಡ್ಯಪಿಟಿ ಕಲೆಕ್ಟರರಾಗಿದ್ದು ಈಗ ಸೆಟ್ಲಮೆಂಟ್ ಟ್ರೈನಿಂಗ್‌ನಲ್ಲಿದ್ದ ಮ॥ ರಾ॥ ಕೆ. ರಾಮವರ್ಮರಾಜರವರು ದಕ್ಷಿಣ ಕನ್ನಡ ಜಿಲ್ಲೆಯ ಜೆನರಲ್ ಡ್ಯೂಟಿ ಡ್ಯಪಿಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟು ಮೊನ್ನೆಯ ದಿನ ಚಾರ್ಜು ತಕ್ಕೊಂಡು ಟ್ರೆಜರಿ ಟ್ರೈನಿಂಗ್ ಪಡೆಯುವ ಬಗ್ಗೆ ಪುನಃ ಖಾನ್ ಸಾಹೇಬ್ ಪಿ. ಎ. ಅಮ್ಮೂಂಞವರಿಗೆಚಾರ್ಜು ಕೊಟ್ಟಿರುವರು.

ಇದೇ ನವಂಬರ ತಾ. ೫ರ ವರೆಗೆ ಇಲ್ಲಿ ೧೯ ಇಂಚು ೭೭ ಸೆಂಟು ಮಳೆಗರೆದಿರುತ್ತದೆ. ಕಳೆದ ವರ್ಷ ಇದೇ ತಿಂಗಳ ತಾ. ೫ರ ವರೆಗೆ ೯೮ ಇಂಚು ೪೧ ಸೆಂಟ್ಸು ಮಳೆ ಬಿದ್ದಿತ್ತು. ಕಳೆದ ಒಂದೆರಡು ವಾರಗಳಿಂದ ಇದ್ದ ಮಳೆಯು ಒಹಳವಾಗಿ ಬೀಳಲು ಪ್ರಾರಂಭಿಸಿಯದೆ.

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ಇದೇ ನವಂಬರ ತಾ. ೧ರಿಂದ ಎಲ್ಲಾ ಮೋಟರ್ ಬಸ್ ಲ್ಯಾನುಗಳಲ್ಲಿಯೂ ದರಗಳನ್ನು ಕಡಿಮೆಮಾಡಿರುತ್ತಾರೆ.

ಮದ್ರಾಸ್ ಆಸ್ಪತ್ರೆ ಹಡಗ ಫಂಡಿಗೆ ಕಳೆದ ತಿಂಗಳಲ್ಲಿ ರಾವ್ ಬಹದ್ದೂರ್ ಎನ್. ಸುಬ್ಬರಾವ್ ರೂ. ೫; ರಾ॥ ಟಿ. ಭವಾನಿರಾವ್ ರೂ. ೪; ರಾ॥ ಮ್. ಮುಕುಂದರಾವ್ ಮತ್ತು ಎಮ್. ಎನ್. ಪ್ರಭು ರೂ. ೩; ಮೆ॥ ಎಮ್. ನೌರೋಜಿ ರೂ. 2; ರಾ॥ ಕೆ.ಪಿ. ರಾಮರಾವ್, ರೂ. 2; ರಾ॥ ಎ. ಶ್ರೀನಿವಾಸ ಪೈ ರೂ. ೨; ರಾವ್ ಬಹದ್ದೂರ್ ಆರ್. ರಾಮರಾವ್ ರೂ. ೧; ರಾ॥ ಎಲ್. ರಾಮರಾವ್ ರೂ ೧; ಮೆ॥ ಜಿ. ಎಲ್. ಫಾಲಿಂಞ ರೂ. ೧, ರಾ॥ ಗೊಲ್ಲರಕೇರಿ ಕೃಷ್ಣರಾವ್ ರೂ. ೧; ರಾ॥ ಕಾರ್ನಾಡ ಸದಾಶಿವರಾವ್ ರೂ. ೧; ರಾ॥ ಅ. ಎಮ್. ರೇ ರೂ. ೧; ರಾ॥ ಎಸ್. ರಘುನಾಥಯ್ಯ ರೂ ೧; ರಾ॥ ಎಸ್. ಜಿ. ಸುವರ್ಣ ರೂ. ೧; ಈ ರೀತಿಯಾಗಿ ಕೊಟ್ಟಿರುವರು.

ಅಮ್ಮೆಂಬಳ ಸುಬ್ಬರಾವ್ ಪೈ ಮೆಮೋರಿಯಲ್ ಫಂಡು ಈ ಫಂಡಿನ ಪರವಾಗಿ ಸುಬ್ರಾಯ ಪೈಗಳವರ ಜನನ ದಿನ ಆಚರಣೆಯು ಇದೇ ನವಂಬರ ತಾ. ೧೯ನೇ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಆಚರಿಸಲ್ಪಡುವದು. ಫಂಡಿನ ಮೆಂಬರರೂ ಇತರರೂ ಈ ಬಗ್ಗೆ ದಯಮಾಡಿ ಬರಬೇಕೆಂದು ಫಂಡಿನ ಕಡೆಯಿಂದ ಸರ್ವರಿಗೂ ಆಮಂತ್ರಣವಿರುವದು.

ದಕ್ಷಿಣಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಪರಿಷತ್ತಿಗೆ ವಂತಿಗೆ ಕೊಟ್ಟವರ ಹೆಸರುಗಳೂ, ಮೊಬಲಗೂ.

ಕುಂದಾಪುರ ತಾಲೂಕು.

ರಾ॥ ಹಲಸನಾಡು ಮಾದಪ್ಪಯ್ಯ ರೂ. ೧೦. ರಾ॥ ಮೊಡೆರ ಹೊಬಳಿ ಸುಬ್ರಾಯ ಕಾರಂತ ರೂ. ೮. ರಾ॥ ಪಿ. ವೆಂಕಟರಮಣಯ್ಯ ರೂ. ೫. ಶ್ರೀ ಕೃಷ್ಣ ಟ್ರೇಡಿಂಗ್ ಏಸೋಸಿಯೇಶನ್ ರೂ. ೫. ರಾ॥ ಬಿ. ರಘುನಾಥಯ್ಯ ರೂ. ೪. ಬಿ. ಮಂಜಯ್ಯ ಶೆಟ್ಟಿ ಎಂಡ್ ಕೋ ರೂ. ೪. ರಾ॥ ಪಿ. ಮಹಾಬಲರಾವ್ ರೂ. ೪. ಕಾಮತ್ ಎಂಡ್ ಕೋ ರೂ. ೩. ಸ್ನೇಹಿತ ರೂ. ೩. ರಾ॥ ಎಮ್. ನಾರಾಯಣ ಕಾಮತ್ ರೂ. ೨. ರಾ॥ ವೆಂಕಟರಾವ್ ರೂ. ೨. ರಾ॥ ಕೆ. ವೆಂಕಪ್ಪ ಶೆಟ್ಟಿ ರೂ. ೨. ರಾ॥ ಕೆ. ಕೆ. ಭಂಡಾರಿ ರೂ. ೨. ರಾ॥ ಕೆ. ನರಸಿಂಹ ಕಾಮತ್ ರೂ. ೨. ರಾ॥ ನೇರಂಬಳ್ಳಿ ಸುಬ್ಬಣ್ಣಯ್ಯ ರೂ. ೨. ರಾ॥ ಉ. ... ೦ತಕ ರೂ. ... ನಾಥಯ್ಯ ರೂ. ೧. ರಾ॥ ಎಮ್. ಕೆ. ಸ್ವಾ. ೨. ಪ್ರಭಾಕರ ೧. ಹಿತಚಿಂತಕ ರೂ. ೧.

ದಾನಂದ ಮುದ್ರಾಲ

ಜೀನಸು ಧಾರಣೆ

(ರಖಂ). ಧಾರಣೆ.

ಮುಸ್ಕಿ ಅಕ್ಕಿ		7 —	(ಖಂ).	
ಗುಡ್ಡು	,,	6	6 — 10 — 0 ರಿಂದ	7 — 2 — 0
ಊಚು ಸುಗ್ಗಿ	,,	6	6 — 8 — 0	6 — 14 — 0
ಗಾತಿ ರಾತ	,,	5	6 — 10 — 0	6 — 13 — 0
ಅವ್ವಲ್ ಬೆಳಗೆ	,,	6	5 — 12 — 0	5 — 15 — 0
ಗುಡು ಬೆಳ್ತಿಗೆ	,,	5 —	6 — 8 — 0	7 — 0 — 0
ರಂಗೂನು ಬೆಳ್ತಿಗೆ ಗೋಣಿ ೧ರ		10	5 — 12 — 0	6 — 4 — 0
ಗೋಧಿ ಗೋಣಿ ೧ರ		11 —	9 — 8 — 0	9 — 12 — 0
ಹುರುಳಿ ಗೋಣಿ ೧ರ		6 —	11 — 12 — 0	12 — 0 — 0
ಕಡಲೆ ಗೋಣಿ ೧ರ ಬೊಂಬೈ		8 —	6 — 0 — 0	6 — 4 — 0
ತೊಗರಿ ಗೋಣಿ ೧ರ			8 — 12 — 0	9 — 8 — 0
ತೊಗರಿ ಬೇಳೆ ಗೋಣಿ ೧ರ		12 —		11 — 0 — 0
ಉದ್ದು ಗೋಣಿ ೧ರ		10 — 8 —	8 — 0	14 — 8 — 0
ಊರುಬೆಲ ಖಂಡಿ ೧ರ			8 — 0	11 — 4 — 0
ಉಪ್ಪು ಗೋಣಿ ೧ರ		4 — 4 —		50 — 0 — 0
ಕೊಬ್ರಿ ಖಂಡಿ ೧ರ		95 — 0 —	4 — 0	4 — 10 — 0
ಕೊಬ್ರಿಹಿಂಡಿ ಖಂಡಿ ೧ರ			0 — 0	105 — 8 — 0
ಎಳ್ಳಿಂಡಿ ಖಂಡಿ ೧ರ ಬೊಂಬೈ		25 — 0 — 0		22 — 0 — 0
ಕೊಬ್ರಿ ಎಣ್ಣೆ ಮಣ ೧ರ		7 — 0 — 0	— 0	30 — 0 — 0
ಎಳ್ಳೆಣ್ಣೆ ಮಣ ೧ರ (ಕುರುಸನ)			4 0	7 — 4 — 0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		6 — 0 — 0	6	4 — 12 — 0
ಮೋರಿಸ್ ಸಕ್ಕರೆ ಮಣ ೧ರ			5 —	6 — 11 — 0
ಕಾಫಿ ಖಂಡಿ ೧ರ		225 — 0 — 0	235 —	5 — 4 — 0
ಹೊಸಬೆಳಗೋಟು ಖಂಡಿ೧ರ		82 — 0 — 0	85 —	235 — 0 —
ಹೊಸ ಗೇರುಬೀಜ ಮುಡಿ ೧ರ			2 — 10	95 — 0 —
ಕಬ್ಬಿಣ ಖಂಡಿ ೧ರ			75 — 0	3 — 15 — 6
ತಾಂಬ್ರ ತಗಡು ಮಣ ೧ರ		26 — 0 — 0	27 — 0	— 0 — 0
ತಾಂಬ್ರ ಪಾತ್ರೆಗಳು ಮಣ ೧ರ			28 — 0 —	0 — 0
ಚೀನಿ ಬೆಳ್ಳಿ ಶೀರು ೧ರ			24 — 0 — 0	0 — 0
ಪಚ್ಚೆಹೆಸರು ಮುಡಿ ೧ರ		5 — 1 — 0	5 — 2 — 0	0 — 0
ಕಾಳುಮೆಣಸು ಖಂಡಿ ೧ಕ್ಕೆ			260 — 0 — 0	2 — 0 — 0 — 0

ಪಾಳ್ಗದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕುಮಾಕಿಗೂ ವೈದ್ಯರ ಸಮಾಯವನು ಕಾದು ತೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಬೆಂಗಳೂರು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಳ್ಳಿನ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ವಿಶೇಷವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ವರ್ತಮಾನಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಪಡುತ್ತೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮಾತ್ರೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವಿಲ್ಲ
ದೊಡ್ಡರಗಳ ಚಿಕಿತ್ಸೆ ವ ಉಪಕರಣಗಳ ಅವಶ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆ ತೆಗೆಸುವದು ಅನಾವಶ್ಯಕ
ಲಭವಾದ ಔಷಧಿ
ಕೊಳೆತ ವ ಹಲ್ಲುಗಳಿಗೆ ಇಗಿಸುವ ಔಷಧವಲ್ಲ
ಹಲ್ಲುನೋವಿಗೆ ಖಾತ್ರಿಯಾದ ಚಿಕಿತ್ಸೆ
ಹಾಕಿದೊಡನೆಲೇ ಗುಣಹೊಂದುವದು
ಇದನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಟಪಾಲು ಹಾಸಲು ಪ್ರತ್ಯೇಕ.

STANY BROTHERS
Sole Agents
C. M. C's, Toothache
Specific, Mangalore.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಪಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಕೊಡೇಕು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮೀಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೇ ಮೊದಲಾದ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಛಳಿಕಾಲ! **(Best Shwals)** ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಸೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಳುಕ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರಿಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

$1\frac{1}{2}$ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0
ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವಿಳಾಸ:— ವ್ಯಾರಂ ಅಂಡು ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ನೋಟಿಸು.

ಕಾರ್ಕಳ ಡಿಸ್ತ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮನಂಬ್ರ 458/916

ಹರಿಭಟ್ಟಾ ಸಹಾ ವಾದಿರು.
ಚೋಲ್ಪಾಡಿ ಉಪೇಂದ್ರ ಕಮ್ತಿ. ಪ್ರತಿವಾದಿ.

ವಾದಿರ ಕಡೆಯಿಂದ ಬರಕೊಂಡ ನೋಟೀಸು—

ಮಾಳಗ್ರಾಮದ ಎಡಪಾಡಿ ಪರಶುರಾಮದೇವರ ಭಂಡಾರಕ್ಕೆ ಪ್ರತಿವಾದಿಯು ಈಗ ಅನುಭವಿಸಿ ಬರುವ ಸದರಿ ಗ್ರಾಮದ ಮೂಲಿನಂಬ್ರ 9ನೇ ಬಾಬ್ತು ಪಟ್ಟಾ ನಂಬ್ರ 11ನೇ ಆಸ್ತಿಯ ಜವಾಬ್ದಾರಿಯಿಂದ ಕಳೆದ ವೈಶಾಖ ಶು. 15ರ ವರೇಗೆ ವರ್ಷ 1ರ ರೂಪಾಯಿ 6ರ ಮೇರೆಗೆ ಬಾಕಿ 6 ವರ್ಷಗಳ ಐವೇಜನ್ನು ಸದರಿ ಆಸ್ತಿಜವಾಬ್ದಾರಿಯಿಂದ ವಸೂಲು ಆಗುವ ಹಾಗೆ ಸದರಿ ದೇವರ ಭಂಡಾರದಗೋಸ್ಕರ ವಾದಿರ ಗುಣಕ್ಕೆ ಡಿಕ್ರಿ ಕೊಡಿಸಬೇಕಾಗಿ ಆ ದೇವಸ್ಥಾನದ ಮೊಕ್ತೇಸರರಾದ ಹರಿಭಟ್ಟಾ, ವಿಶ್ವೇಶ್ವರ ಭಟ್ಟಾ, ಜ್ಯೋತಿ ವಾಮನಭಟ್ಟಾ, ಸಹಾ 3 ಜನರು ವಾದಿರಾಗಿ ದೇವರ ಭಂಡಾರದ ಕಡೆಯಿಂದ ದಾವಾ ಮಾಡಿದ್ದಾರೆ. ಈ ದಾವೆಯಲ್ಲಿ ಕಕ್ಷಿಗೆ ಸೇರುವದ ಅಪೇಕ್ಷೆಯುಳ್ಳ ಆ ದೇವಸ್ಥಾನದ ಭಜಕ ಜನರು ಕಕ್ಷಿಗಳಾಗಿ ಸೇರಬಹುದು. ಸದರಿ ನಂಬ್ರದ ಪ್ರಥಮ ತನಖಿಯನ್ನು ಬರೇ ತಿಂಗಳ ತಾ. 20ಕ್ಕೆ ಇಡೋಣಾಗಿಯದೆ ಎಂತ ಈ ಮೂಲಕ ನೋಟೀಸು ಕೊಡೋಣಾಗಿಯದೆ.

Karkal. 16—10—16. **M Mukunda Kamath.**
Pleader for Plaintiffs.

DISTRIKT MUNSIFF'S COURT, Karkal, 19—10—1916. **T. BHUJANGA RAO.**
District Munsiff.

ನೋಟಿಸು.

ಕಾರ್ಕಳ ಡಿಸ್ತ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮನಂಬ್ರ 467/1916 R. I. A. NO 195/916

ಮರಿಯಂಬಿ ಸಹಾ ವಾದಿರು, ಅರ್ಜಿದಾರರು.

ಮತ್ತು

ಗುಲಾಂ ಮಹಮ್ಮದ ಯಾನೆ, ದಾದಾಮಿಯ ಸಾಹೇಬ } ಪ್ರತಿವಾದಿಯರು.

ಇವರೊಳಗೆ

ಕಾರ್ಕಳ ಕಸಬಾ ಗ್ರಾಮದ ಸರ್ವೆನಂಬ್ರ 78ಲ್ಲಿ 21ನೇ ಸಬ್‌ಡಿವಿಜನ್ ಸ್ಥಳದಲ್ಲಿ ಕಾರ್ಕಳ ಅನೆಕೆರೆಯ ಬಳಿಯಲ್ಲಿರುವ ಮಹಜೀದಿಯು ಹತ್ತು ಮಂದಿ ಹಕ್ಕಿನದ್ದೆಂತಲೂ ಅದರಲ್ಲಿ ಪ್ರತಿವಾದಿಯು ಆತನ ಸ್ವಂತ ಹಕ್ಕು ಹೇಳಕೂಡದೆಂತಲೂ ರಿವಾಜು ಮೇರೆಗೆ ಹತ್ತುಮಂದಿಯವರು ಹೋಗಿ ನಮಾಜುಮಾಡುವಲ್ಲಿ ದಫನ್ ಮಾಡುವಲ್ಲಿ ಮತ್ತು ಮಹಮ್ಮದಿಲ್ಲೋ ಪ್ರಕಾರ ಇತರ ಉಪಯೋಗ ಮಾಡುವಲ್ಲಿ ಪ್ರತಿವಾದಿ ಯಾ ಅವನ ಕಡೆಯವರು ಯಾವ ವಿಧದಿಂದಲೂ ಅತಕಿಸ ಕೂಡದೆಂತ ವಗೈರೆ ನಿವೃತ್ತಿ ಕೇಳಿ ವಾದಿರು ಹತ್ತು ಮಂದಿ ಕಡೆಯಿಂದ ಮೇಲ್ಪಡ ದಾವೆಯನ್ನು ಮಾಡಿರುವದಲ್ಲದೆ ಹತ್ತು ಮಂದಿ ಕಡೆಯಿಂದ ಸದರಿ ದಾವೆಯನ್ನು ವಾದಿರು ನಡಿಸುವದೆ ಅನುಜ್ಞೆ ಕೇಳಿ ಮೇಲ್ಕಂಡ ಅರ್ಜಿಯನ್ನು ಸಹಾ ದಾಖಲುಮಾಡಿರುತ್ತಾರೆ. ಈ ಕುರಿತು ಸಮ್ಮಂಧಪಟ್ಟ ಯಾರಾದರೂ ಹೇಳಲಿಕ್ಕಿರಬಹುದಾದ ಯಾವತ್ತು ಆಕ್ಷೇಪಣೆಗಳು ಕೋರ್ಟಿನವರು ತಾ. 14—11—1916ರಲ್ಲು ಮಧ್ಯಾಹ್ನ 12 ಘಂಟೆಗೆ ಕೇಳಿ ತನಕಿಯಿಂದ ತೀರ್ಮಾನಿಸುವರೆಂಬದು ಸಮ್ಮಂಧಪಟ್ಟ ಸರ್ವ ಜನರು ಈ ಮೂಲಕ ತಿಳದಿರಲಿ.

DISTRICT MUNSIFF'S COURT Karkal, 17—10—1916. **T. Bhujanga Iao,**
District munsif.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಿಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, BOMBAY.
***Agents*:—Bhagavandas Choonilal & Co.,**
177 China Bazar Road, MADRAS.

ಪ್ರೊಪ್ರೈಟರರು: ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

Estd, 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆ ಎರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ತ್ಯೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಡಬ್ಬಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಡಬ್ಬಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಗಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಸ್ನಾಯು ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ. ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಆಣ್ಡ ಕಂಪೆನಿ. ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.



ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.

ವಿಳಾಸ:— ರಾಸ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯನಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು—ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಖಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ನರ್ಮರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳಸುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳಸಬೇಕೆಂಬ ಉದ್ದೇಶವಾಗಿರುವದು. ಬಜಾರಿನಲ್ಲಿ ದೊರಿಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಆ ದಿನ ಸಿವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆಗಳು 6, ಪೈಘರಣಿ 1, ಅದ್ದ 1, ತಾಂಬೂಲ ಪಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೊಗಳು 6, ಸುವಾಸನೆ ಅತ್ತರು ಬಿಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರಿಸ್ಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ಸಿ. ಎ. ಎಸ್. ಸ್ವಾಮಿ,
3. ಇರುಳಪ್ಪನ ಬೀದಿ, ಮದರಾಸು.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾ ರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ಸ್ವಲ್ಪ ಓದಬಲ್ಲವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಯಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ಎಡ್ರೆಸನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿಯುವದು.

ಎಂ. ವಿ. ಶಾಸ್ತ್ರೀ, ಆಯುರ್ವೇದ ಭೂಷಣ,
ಮಂಗಳೂರು.

ಓದಿ ನೋಡಿರಿ! ಅಲಕ್ಷ್ಯ ಮಾಡಬೇಡಿರಿ!! ಬೇಗ ಬರೆಯಿರಿ!!!

ನೇಟಿವ್ ಡಾಕ್ಟರ್ ವಿ. ಎಸ್. ಕಾಮತ್‌ರವರ ಅನುಭವಸಿದ್ಧವಾದ

ಬಲಾಸಾರಿವಾದಿ ತೈಲವು.

ಇದು ವಾತ, ಪಿತ್ತ, ಶಿರೋಭ್ರಮಣ ಇತ್ಯಾದಿ ಸಮಸ್ತ ರೋಗಗಳಿಗೆ ದಿವ್ಯವಾದ ತೈಲವಾಗಿದೆ.

ಮಹಾಶಯರೇ! ದೇಹ ಬಾಹ್ಯ ಸುಖ ಕೊಡುವಂಥಾ ಇತರ 'ಸುಗಂಧಿತ ತೈಲ'ಗಳಿಗೆ ಮನಸೋತು, ಧನವ್ಯಯ ಮಾಡಿಕೊಳ್ಳುವದರ ಬದಲು ದೇಹದೊಳಗಣ ದೋಷಗಳಿಗೆ ಸುಖದಾಯಕವಾದ ಗುಣಕಾರಿಯಾಗಿರುವ ಈ 'ಬಲಾಸಾರಿವಾದಿ ತೈಲ'ದ ಒಂದೇ ಒಂದು ಸೀಸೆಯನ್ನು ತರಿಸಿ, ಉಪಯೋಗಿಸಿ ಇದರ ಗುಣವನ್ನು ತಮ್ಮ ಸ್ನೇಹಿತರಿಗೂ ಪ್ರಖ್ಯಾತಗೊಳಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ! ಸೀಸೆಯ ಬೆಲೆ 0—8—0; ವಿ. ಪಿ. ಸಹಿತ 0—12—0; 3 ಸೀಸೆಗಳಿಗೆ ರೂ 1—5—0; ವಿ. ಪಿ. ಚಾರ್ಜ ಪ್ರತ್ಯೇಕ.

☞ ಬೇಕು! ಎಲ್ಲೆಲ್ಲೂ ಏಜಂಟರು ಬೇಕು!! ಹೆಚ್ಚಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್, ಸುರತ್ಕಲ್, ದ. ಕ.

S. R. HEBBAR & Bros.,
Surathkal, S. Canara.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ಣಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿಯೂ, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆಯಲ್ಪಟ್ಟದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವಾಸಿಗಳಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗುವ ೧,೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾದ್ದರಿಂದ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವಾರ್ಷಿಕ ... — 4—0. ... 2—1—0.

ಪುಸ್ತಕ X | ಮಂಗಳೂರು ತಾ ...ನೇ ನವಂಬರ ಶುಕ್ರವಾರ 1916. | ಸಂಚಿಕೆ 43

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಯಾಜು 2 ಆಣೆ ಕ್ರಯದ
ಅವ್ವಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕವು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್

(ರಿಜಿಸ್ಟರ್ಡ.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದರೆ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 „	1	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಮುಖ್ಯ ವಿಜಂಟರು—:
ಎಚ್. ಆರ್. ಮೋಡಿ ಎಂಡ್ ಕೋ.
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princess Street, BOMBAY

ಬಡವರಿಗೂ, ದೊಡ್ಡವರಿಗೂ, ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಸರ್ವರಿಗೂ ಪ್ರಯೋಜನವಾದವುಗಳು!

ಜೇಬು ದೀಪಗಳು.

ದೀವಟಿಗೆಗಳು.



ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ, ಇತ್ಯಾದಿಗಳು.

ಕೈ. ದಯ್ಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಶತಧೌತ ಘೃತಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ, ಹುಚ್ಚುನಾಯಿ ಕಡಿತಗಳನ್ನೂ, ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ನಿರ್ಣಯಸಾಗರಮುದ್ರಣಾಲಯದೊಳಗಿನ

ಕರ್ನಾಟಭಾಷಾತಾತ್ಪರ್ಯಸಹಿತವಾದ

ಭಗವದ್ಗೀತೆ.

ಮಹಾಜನರೇ!

ನಮ್ಮ ಹಿಂದೂ ಜನರಲ್ಲಿ ಭಗವದ್ಗೀತೆಯೆಂಬವನ್ನು ಹೆಸರು ಮಾತ್ರವಾಗಿಯಾದರೂ ಕೇಳಿ ತಿಳಿಯದ ಕುಟುಂಬವಿರಲಾರದು. ಪ್ರಾಯಶಃ ದೈವಭಕ್ತಿಯುಳ್ಳ ಜನರೆಲ್ಲರೂ ಪರಲೋಕ ಮುಕ್ತಿಗಾಗಿ ಪಾರಾಯಣ ಮಾಡುತ್ತಿರುವುದೂ ಸಹಜವಾಗಿದೆ. ಮತ್ತು ನಮ್ಮ ಹಿಂದೂ ಮತಾಚಾರ್ಯರೆಲ್ಲರೂ ಒಪ್ಪಿಕೊಂಡು ಅನೇಕ ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ಮಾಡಿ ಸರ್ವಕ್ಕಿಗೂ ಶಿರೋಭೂಷಣ ಗ್ರಂಥವನ್ನಾಗಿ ಈ ಭಗವದ್ಗೀತೆಯನ್ನು ಕೊಂಡಾಡಿರುವರು. ಅಂತಹ ಸರ್ವೋತ್ತಮ ಗ್ರಂಥವನ್ನು ಅಭಿಪ್ರಾಯ ತಿಳಿಯದೆ ಸುಮ್ಮನೆ ಪಾರಾಯಣ ಮಾಡುತ್ತಿರುವೆವಲ್ಲಾ ಎಂದು ಹಲವು ಮಂದಿ ಭಕ್ತಜನರು ಪರಿತಾಪ ಪಡುತ್ತಿರುವುದನ್ನು ನಮ್ಮ ಮುದ್ರಣಾಲಯಕ್ಕೆ ಅನೇಕ ಮಹಾಶಯರು ತಿಳಿಸಿದರು. ಆದಕ್ಕಾಗಿ ಈ ಭಗವದ್ಗೀತೆಗೆ ಅತ್ಯಂತ ಸುಲಭವಾಗಿಯೂ ಬಹಳ ಲಲಿತವಾಗಿಯೂ ಇರುವ ಕನ್ನಡ ಭಾಷೆಯ ತಾತ್ಪರ್ಯವನ್ನು ಮೂಲಕ್ಕೆ ಸರಿಯಾಗಿ ಸಂಗ್ರಹವಾಗಿ ಬರೆಯಿಸಿ, ಇದರೊಡನೆ ಮೂಲವನ್ನು ಬೇರೆ ಬೇರೆ ಶ್ಲೋಕಗಳನ್ನಾಗಿ ಮುದ್ರಿಸಿ ಹೊರಪಡಿಸಿರುವೆವು.

ಈ ಸುಂದರವಾದ ಚಿಕ್ಕ ರೇಶ್ಮೆ ಬಾಯಿಂಡಿಂಗದ ಪುಸ್ತಕಕ್ಕೆ ಬೆಲೆ ರೂ. ೦-೧೨-೦ ಆಣೆ. ಟಪಾಲು ೦-೧-೦ ಆಣೆ.

ಪುಸ್ತಕ ದೊರೆಯುವ ಠಿಕಾಣೆ:—

ನಿರ್ಣಯಸಾಗರ ಪ್ರೆಸ, ಕೋಲಭಾಟಲೇನ, ೨೩. ಮುಂಬಯಿ, ನಂ. ೨. } ತುಕಾರಾಮ ಜಾವಜೀ, ನಿರ್ಣಯಸಾಗರ ಮುದ್ರಣಾಲಯ ಮಾಲಕರು.

ಈ ಬುಕ್ಕು ಬಾಳಕೃಷ್ಣ ತುಕಾರಾಮ ಘರತ, ೩೬೩, ಠಾಕುರದ್ವಾರ ರೋಡ, ಮುಂಬಯಿ, ಇವರ ಕಡೆಗೆ ಸಿಗುವವು.

ಡಾಕ್ಟರ್. ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ.

5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎಷ್ಟು ಇರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY.

ಏಜೆಂಟರು:—ಡಿ. ಬೂಲನ್ ಮಾರ್ಟ್,
ತೂರದ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ 22 ಬಾಟ್ಲಿಗಳು ಆದವು. ಅನೇಕ ಜನರು ಇದು ಎರಡು ಸರ್ತಿ ಕೊಟ್ಟು ಮಾತ್ರದಲ್ಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕಾಗಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ನೀವು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾತ್ಯಾವಾಡಿನ ವಿರವಳ್‌ನಿಂದ ಮು. ಜೆ. ರಸ್ಕಿನಾರು ಬರೆಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್‌ಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿ.

ವಿಳಾಸ:—

The Malariana Company,
Kunkanady S. C.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚಳಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ದೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಭಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ... ನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಹಣಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ದಾಖಲಾತನ್ನು ಸಲ್ಲಿಸಿ ಕೊಟ್ಟೊಡನೆ ಅದರ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಿಸಿದಂತೆ ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾಗಿದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅಗರು ... ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧ ಕಾಪೂರ 1ಕ್ಕೆ 0—1—0. **ಬಾಲಗ್ರಹ** ... 1ಕ್ಕೆ 0—5—0. **ಸುವಾಸನೇ ಸುಣ್ಣ** ... 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ... ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿ ಕಮಿಷಿಯಿಲ್ಲದೆ

ಧರ್ಮಾರ್ಥ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರ, ಮೈಸೂರು.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈ ಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.

ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುಗಾಹಿ, ಜಿಲ್ಲಾ ಮುಝಫರಪುರ, ಬರಿಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್ಸ್,

ಮಾಧವ ಬಿಲ್ಡಿಂಗ್ಸ್,

ಮಂಗಳೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

... ಮತ್ತು ... ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ... ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಇದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬೆಳ್ಳಗಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. **ಬೆಲೆ ಸೀಸೆ** ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ. ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	343,389—5—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 4% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 3½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%

Loans granted on proper securities and pledges.

Canara Bank Ltd.,

Mangalore, 1st. November 1916

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	225,000—0—0
ಪ್ರತಿಜ್ಞಾತ ಮೂಲ ಧನವು	225,000—0—0
[illegible] ಮೂಲ ಧನವು	200,000—0—0
ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು ...	343,389—5—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ [illegible]ಗಳಿಂದ [illegible] ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಪ್ರಾಮಿಸರಿ ನೋಟುಗಳಲ್ಲಿ ಠೇವಣಾತಿ [illegible]ಾಗಿ ಇಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು [illegible]ಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 4ರ ವರೆಗಿನ "ಬೋನಸ" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರದ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 3½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗುತ್ತದೆ. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜಾಮೀನಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

[illegible] ಔಷಧಗಳು.

[illegible] ಕೇಶವರ್ಧಕವೂ [illegible] ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ [illegible] ಅನೇಕ [illegible] ಪಡೆದಿದೆ. [illegible] ರೂ. ೧೦ ಆಣೆ.

೨. [illegible] [illegible] ಕೊಡುವುದು. [illegible]

೩. [illegible] ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷ[illegible] ತಪ್ಪದೆ ಗುಣಪಡಿಸುವುದು. [illegible]ಕ್ಕೆ ೨ ರೂ.

೪. [illegible] ಲೇಹ. [illegible] ಮೊಳೆಯ [illegible] ಕೃಶ್ಯವಾದ [illegible]ವಾಗಿದೆ. [illegible] ೨ ರೂ.

೫. [illegible] ಚೂರ್ಣ. ಒಂದು ತಿಂಗಳೊಳಗಾಗಿ [illegible] ಸಂಬಂಧವಾದ [illegible] ವಿಕಾರಗಳನ್ನೂ ಗುಣ[illegible]ಪಡಿಸುವುದು. [illegible] ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ[illegible] ಮುಂಬಯಿದಿಗಿಂತ್ಲೂ ಮೊಗಸಾದ ಹಲ್ಲು ಪುಡಿ. ಅನೇಕ [illegible]ಗಳಿಂದ ತಯಾರಿಸಿಯದೆ. ೧೦ ತೊಲಿಗೆ ೧೦ ಆಣೆ.

೭. [illegible] ಮಾತ್ರೆ. [illegible]ವನ್ನುಂಟುಮಾಡದ [illegible] ತೊಲಿಗೆ ೨ ರೂ.

೮. [illegible] ಲೇಹ. [illegible] ಸಾವನಲಿಗೆ ೨ ರೂ.

೧೦ [illegible] ಪಾಕ. [illegible] ಮೂತ್ರದಲ್ಲಿ [illegible] [illegible] ಸಾವನಲಿಗೆ ೨ ರೂ.

೧೧. ವಾತಮುರಾರಿ [illegible] ಕೈಕಾಲು, ಏಷ್ಠೇಲು, ಸೊಂಟ [illegible] ಬಾಧೆ [illegible] ಗೆಲ್ಲುವದು. [illegible] ೧ ರೂ. ೪ ಆಣೆ.

೧೨ ಗಜಕರ್ಣಾ ಕೇಸರಿ ಮುಲಾಮು. ತುರಿಕಜ್ಜಿ, ತುರಿಗಜ್ಜಿ ಮುಂತಾದ [illegible] ಗಳನ್ನು ಹಿಂದಿರದು ಲೇಪನದೊಳಗಾಗಿ ಗೆಲ್ಲುವದು. [illegible] ಸುವಾಸಿಕವಾಗಿದೆ. [illegible]

೧೩. ಸಮೀರಾಂಜನ (ಸುರುಮಾ). [illegible] ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, [illegible] ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಾ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. [illegible] ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲಿಗೆ ೨ ರೂ. ೮ ಆಣೆ

[illegible] ದೊಡ್ಡ ದೊಡ್ಡ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. [illegible] ಶಾಸ್ತ್ರೀಯ [illegible] ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ತಮ್ಮ ದೊಡ್ಡ ಕಷ್ಟದ ಕಾಲದಲ್ಲಿ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ಕನ್ನಡದಲ್ಲಿ ಅಥವಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ಹೆಚ್ಚು ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery, Post, MADRAS.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಕಾರ್ತಿಕ ಶು. ೮ ಶುಕ್ರವಾರ.

ಈ ಸಮಯವನ್ನು ಮೀರಲಾಗದು.

ವರಿಷ್ಠ ಕಾಯಿದೆ ಕೌನ್ಸಿಲಿನ ೧೯ ಜನ ಮಾನ್ಯ ಸಭಾಸದರು ಯುದ್ಧಾಂತ್ಯದಲ್ಲಿ ಹಿಂದುಸ್ಥಾನದ ರಾಜಕೀಯ ವಾತಾವರಣದಲ್ಲಿ ಯಾವ ಯಾವ ಸುಧಾರಣೆಗಳಾಗಬೇಕೋ ಅವುಗಳನ್ನು ಒಂದು ಮಸೂದೆಯಲ್ಲಿ ನಮೂದಿಸಿ ಆ ಮಸೂದೆಯ ಪತ್ರಕವನ್ನು ವೈಸರಾಯರ ಮುಖಾಂತರ ಸ್ಟೇಟ ಸೆಕ್ರೆಟರಿಗಳ ಸನ್ನಿಧಿಗೆ ಕಳುಹಿಸಿಕೊಟ್ಟಿರುವರೆಂಬುದನ್ನು ನಾವು ಕಳೆದ ಸಂಚಿಕೆಯ ಅಗ್ರಲೇಖದಲ್ಲಿ ಉಲ್ಲೇಖಿಸಿದ್ದೇವಷ್ಟೆ. ಅಲ್ಲದೆ, ಮಾನ್ಯ ಸಭಾಸದರು ಕೇಳಿರುವ ಸುಧಾರಣೆಗಳ ಯೋಗ್ಯತೆ, ಮಹತ್ವ ಮತ್ತು ಉಪಯುಕ್ತತೆಗಳ ವಿಷಯದಲ್ಲಿ ನಮ್ಮ ವಿಚಾರಗಳನ್ನು ಕೂಡ ವಾಚಕರಿಗೆ ಅಂದೇ ತಿಳಿಸಿದ್ದೇವೆ. ವರಿಷ್ಠ ಕೌನ್ಸಿಲಿನ ಮೆಂಬರುಗಳು ತಾವು ಈ ಸಮಯದಲ್ಲಿ ಯಾಕೆ ಈ ಸುಧಾರಣೆಗಳನ್ನು ಕೇಳುತ್ತಿದ್ದೇವೆಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಅದೇ ಮಸೂದೆಯಲ್ಲಿ ಕೊಟ್ಟಿರುವರು. ಅದನ್ನು ನಾವು ಗತಸಂಚಿಕೆಯಲ್ಲಿಯೇ ಹೇಳಬೇಕಿತ್ತು. ಆದರೆ ಕಳೆದ ಸಾರಿ ಸ್ಥಳ ಸಂಕೋಚವಾದ ಕಾರಣ ಬಾಕಿ ಉಳಿದ ಈ ವಿಷಯವನ್ನು ಈ ಹೊತ್ತು ಪ್ರಸ್ತಾಪಿಸಲು ಯೋಚಿಸಿದ್ದೇವೆ.

ನಾವು ದಾರ ಸಭಾಸದರು ಕೊಟ್ಟಿರುವ ಕಾರಣಗಳನ್ನು ತೋರಿಸುವುದಕ್ಕಿಂತ ಮುಂಚೆ ಪೂರ್ವಪಕ್ಷದ ಒಂದೆರಡು ಮಾತುಗಳನ್ನು ಹೇಳುವುದು ಉಚಿತವಾಗಿದೆ. ಹಿಂದೀ ರಾಷ್ಟ್ರದ ತರಗತಿ ಮತ್ತು ಯೋಗ್ಯತೆಯನ್ನು ಆಲೋಚಿಸಿಯೇ ಕೆಲವರ್ಷಗಳ ಹಿಂದೆ ಇಂಗ್ಲಂಡಿನೊಳಗಿನ ಮುತ್ಸದಿಗಳು ಗೋಖಲೆಯವರಂಥ ದೇಶಭಕ್ತರಿಗೂ ಸಹ ಒಪ್ಪುವಂಥ ಸುಧಾರಣೆಗಳನ್ನು ಕೊಟ್ಟಿರುವರು. ಇವೇ 'ಮೋರ್ಲೆ—ಮಿಂಟೋ' ಸುಧಾರಣೆಗಳು. ಈ ಸುಧಾರಣೆಗಳು ಬಂದು ಇನ್ನೂ ಹತ್ತು ವರ್ಷಗಳ ಅವಧಿ ದಾಟಲಿಲ್ಲ. ಅಷ್ಟರಲ್ಲಿ ಈ ಅವಸರವು ಯಾಕೆ? ಅವಸರದಿಂದ ತಿಂದ ರೊಟ್ಟಿಯಾಗಲಿ ಅಥವಾ ಬೇರೆ ಗಟ್ಟಿ ಪದಾರ್ಥವಾಗಲಿ ಜೀರ್ಣತೆಗೆ ಬರುವುದಿಲ್ಲ, ಅಂಥ ಪದಾರ್ಥಗಳನ್ನು ಆದಷ್ಟು ಮೆಲ್ಲ ಮೆಲ್ಲನೆ ಜಗಿದು ತಿನ್ನಬೇಕೆಂದು ಆಹಾರಶಾಸ್ತ್ರಿಗಳು ಹೇಳುತ್ತಾರೆ. ಹಾಗೆಯೇ ಕಾಯಿದೆ ಕೌನ್ಸಿಲಿನ ಸುಧಾರಣೆಗಳಾಗಲಿ ಇಲ್ಲವೆ ಪ್ರಾಂತ ದೇಶಗಳ ಯಾವತ್ತೂ ಒಳಗಿನ ಕಾರಭಾರದ ಅಧಿಕಾರದಂಥ ಬೇರೆ ಮಹತ್ವದ ತಿದ್ದುಪಾಟುಗಳಾಗಲಿ ಬೇಗನೆ ಪಚನೆಗೆ ಬರಲಾರವು. ಸೆರಗಿನಲ್ಲಿ ಬಿದ್ದ ಅಧಿಕಾರಗಳನ್ನು ಅಥವಾ ಸುಧಾರಣೆಗಳನ್ನು ಯೋಗ್ಯ ರೀತಿಯಿಂದ ಉಪಭೋಗಿಸಿ ಮುಂದಿನ ಸುಧಾರಣೆಗಳನ್ನು ನಿರೀಕ್ಷಿಸುತ್ತ ಕೂಡ್ರಬೇಕು. ಮತ್ತು ಹೀಗೆ ನಿರೀಕ್ಷಿಸುತ್ತ ಕೂತಲ್ಲಿ ರಾಜ್ಯಕರ್ತರೇ ತಾವಾಗಿ ಪ್ರಜೆಗಳ ಅರ್ಹತೆಯನ್ನು ನೋಡಿ ಮುಂದಿನ ಸುಧಾರಣೆಗಳನ್ನು ಕೊಡುವರು. ಆದುದರಿಂದ ಮಹನೀಯ ಸಭಾಸದರು ಈ ರೀತಿಯಿಂದ ಅವಸರ ಮಾಡಿದ್ದು—ಅದೂ ಈ ಯುದ್ಧದಂಥ ಇಕ್ಕಟ್ಟಿನಲ್ಲಿ—ಸರಿಯಾಗಲಿಲ್ಲ. ಪರಂತು, ಈ ಪೂರ್ವಪಕ್ಷವು ಬೇರೆ ಯಾವ ರಾಜನೀತಿಗೆ ಒಪ್ಪುವಂತಿಲ್ಲವಾದರೂ ಕಣಿಕನೀತಿಯ ಸೂತ್ರಕ್ಕೆ ಬಿಟ್ಟಿಲ್ಲೆಂಬುದು ಹೌದು. ಆದರೆ ಮಾನ್ಯ ಸಭಾಸದರು ತಮ್ಮ ಮಸೂದೆಯ ಪತ್ರಕದಲ್ಲಿ ಈ ಆಕ್ಷೇಪಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿರುವರು. ೧೮೩೩ನೆ ಇಸವಿಯಲ್ಲಿ ಚಾರ್ಟರ ಎಕ್ಟಿನಿಂದ ಹಿಂದುಸ್ಥಾನದ ರಾಜಕೀಯ ಪ್ರಗತಿಗೆ ಪ್ರಾರಂಭವಾಯಿತೆನ್ನಬಹುದು. ಆದರೆ ಅದು ೧೯೦೯ರ ವರೆಗೆ ಬಹಳೇ ಮೆಲ್ಲಗೆ ನಡಿಯುತ್ತಿತ್ತು. ಆ ಪ್ರಗತಿಯ ಹೆಜ್ಜೆಗಳು ಬಹು ಮಂದಸ್ಥಿತಿಯಲ್ಲಿದ್ದವು. ೧೯೦೯ರ ವರೆಗೆ ಹಿಂದುಸ್ಥಾನದ ರಾಜ್ಯಕಾರಭಾರವು ಅಹಿಂದೀ ಅಧಿಕಾರ ಮಂಡಲದ (ನೊನ್ ಇಂಡಿಯನ್ ಬಿರೊಕ್ರಸಿಯ) ಕೈಯಲ್ಲಿತ್ತು. ೧೯೦೯ನೇ ಇಸವಿಯಲ್ಲಿ ಆದ ಸುಧಾರಣೆಗಳ ದಿಕ್ಕು ಯೋಗ್ಯವಾದುದಿದ್ದರೂ ಆ ಸುಧಾರಣೆಗಳು ಬಹು ಸ್ವಲ್ಪವಿದ್ದವು. ಜನರು ಅವುಗಳನ್ನಾಗ ಮುಂಗಡ ಅಥವಾ ಸಂಚಕಾರವೆಂಬಂತೆ ಸ್ವೀಕರಿಸಿದರು. ಈ ಮೋರ್ಲೆ-ಮಿಂಟೋ ಸುಧಾರಣೆಗಳಿಂದ ಕೌನ್ಸಿಲುಗಳಲ್ಲಿ ಬಿನಸರಕಾರಿ (ನೊನ್-ಆಫೀಸಿಯಲ್) ಮೆಂಬರುಗಳ ಸಂಖ್ಯೆಯು ಸ್ವಲ್ಪ ಮಟ್ಟಿಗೆ ಹೆಚ್ಚಾಗಿ, ಅದರಿಂದ ಮೆಂಬರುಗಳ ವಾದವಿವಾದಕ್ಕೆ ಹೆಚ್ಚಿನ ಎಡೆ ಸಿಕ್ಕಿತಲ್ಲದೆ ಬೇರೆ ಯಾವ ಪ್ರಯೋಜನವೂ ಆಗಲಿಲ್ಲ. ವರಿಷ್ಠ ಕೌನ್ಸಿಲಿನಲ್ಲಂತೂ ಸರಕಾರದ ಬಹುಮತವೇ ಇಡಲ್ಪಟ್ಟಿದೆ. ಪ್ರಾಂತಿಕ ಕೌನ್ಸಿಲುಗಳಲ್ಲಿ ಬಿನಸರಕಾರಿ ಸಭಾಸದರ ಬಹುಮತವು ಹೆಸರಿಗೆ ತಕ್ಕಷ್ಟೇ ಇಡಲ್ಪಟ್ಟಿದೆ; ಆದರೆ ಇದೇ ಬಹುಮತದಲ್ಲಿ ಸರಕಾರ ನಿಯುಕ್ತ ಖಾಸಗಿ ಸಭಾಸದರ ಮತ್ತು ಯುರೋಪಿಯನ ಪ್ರತಿನಿಧಿಗಳ ಸಮಾವೇಶವು ಮಾಡೋಣಾಗಿದೆ. ಸರಕಾರಿ ಪ್ರತಿನಿಧಿಗಳು ಸರಕಾರದಿಂದ ನೇಮಿಸಲ್ಪಟ್ಟ ಕಾರಣ ಹಾಗೂ ಯುರೋಪಿಯನ್ ಪ್ರತಿನಿಧಿಗಳು ಯುರೋಪಿಯನ್ನರ ಹಿತ ಸಂಬಂಧವು (ಏತದ್ದೇಶೀಯದಕ್ಕಿಂತಲೂ) ಬೇರೆಯಾದುದರಿಂದ ಈ ಉಭಯ ಸಭಾಸದರು ಯಾವಾಗಲೂ ಸರಕಾರದ ಕಡೆಯಿಂದಲೇ ಮತಗಳನ್ನು ಕೊಡುತ್ತಾರೆ. ಎಂದ ಮೇಲೆ ಇದು ಬಹುಮತದ ಒಂದು ಪ್ರದರ್ಶನೆ ಮಾತ್ರವಲ್ಲದೆ ನಿಜವಾದ ಅಧಿಕಾರವು ಕೈಗೆ ಬರುವುದಿಲ್ಲ. ಇದರಿಂದ ಕೌನ್ಸಿಲುಗಳಿಗೆ ಬರೇ ಆಲೋಚನಾ ಮಂಡಲದ ಸ್ವರೂಪ ಬರುತ್ತದಲ್ಲದೆ ಪ್ರತ್ಯಕ್ಷ ಅಧಿಕಾರದಲ್ಲಿ ಜನರ ಪ್ರವೇಶವು ಕೊಂಚವಾದರೂ ಉಂಟಾಗಲಿಲ್ಲ. ಯಾವ ಹೇತುವಿನಿಂದ ಹಾಗು ಯಾವ ಉದ್ದೇಶದಿಂದ ೧೯೦೯ನೆ ಇಸವಿಯ ಸುಧಾರಣೆಗಳು ಬಂದಿದ್ದವೋ ಆ ಉದ್ದೇಶವಾಗಲಿ ಹೇತುವಾಗಲಿ ಇವುಗಳಿಂದ ಲವಮಾತ್ರವು ಸಾಧ್ಯವಾಗಲಿಲ್ಲೆಂತ ಹೇಳುವುದು ನಿಷ್ಠುರವಾಗಿ ತೋರಿದರೆ ಆ ಉದ್ದೇಶವು ಏನೂ ಕೈಗೂಡಲಿಲ್ಲೆಂತಲ್ಲವಾದರೂ ಹೇಳಬಹುದು. ಅಲ್ಲದೆ, ಈ ಸುಧಾರಣೆಗಳು, ಪೂರ್ಣವಾಗಿ ಸಾಧ್ಯಾವಸ್ಥೆಗೆ ಬಂದರೂ ಸೈನ್ಯದ ಖಾತೆಯೊಳಗಿನ ವರಿಷ್ಠ ಕೆಲಸಗಳು ಸ್ವಯಂ ಸೈನಿಕತ್ವದ ಪದ್ಧತಿ, ಆಯುಧಗಳ ಕಾಯಿದೆ ಮುಂತಾದ ಹಲವು ಸಂಗತಿಗಳಲ್ಲಿ ಹಿಂದೀ ಜನರಿಗೆ ಪ್ರತಿ ದಿನ ಯಾವ ಅನ್ಯಾಯಗಳು ಸಂಭವಿಸುತ್ತವೋ ಅವು ಆ ಸುಧಾರಣೆಗಳಿಂದ ತುಂಬಿ ಬರಲಾರವು. ಅನ್ಯದೇಶಗಳಲ್ಲಿ ಹಿಂದೀ ಜನರಿಗೆ "ಕೂಲಿಗಳೆ"ಂತಲೇ ತಿಳಿಯುತ್ತಾರೆ. ಈ ತಿಳಿವಾದರೂ ಈ ಸುಧಾರಣೆಗಳಿಂದ ಪರಿಮಾರ್ಜಿಸಲ್ಪಡುವಂತೆಯಾಗಿದೆಯೋ? ಅದೂ ಇಲ್ಲ. ನಮ್ಮ ದೇಶದೊಳಗಿನ ತರುಣರು ಈಗ ದೇಶದೇಶಗಳಲ್ಲಿ ಹೋಗುತ್ತಲಿದ್ದಾರೆ, ಸಂಚರಿಸುತ್ತಲಿದ್ದಾರೆ, ಅವರಿಗೆ ಪರದೇಶಗಳಲ್ಲಿ ಸಂಭವಿಸುವ ಈ ಅಪಮಾನವು ಶಲ್ಯದಂತೆ ಚುಚ್ಚುವುದು ಸಹಜವಾದ ಸಂಗತಿಯು. ಜನರಿಗೆ ಅಧಿಕಾರದಲ್ಲಿ ಸಾಕಷ್ಟು ಪ್ರವೇಶವಿರದು, ಸರಕಾರದ ವಿಶ್ವಾಸವು ಜನರ ಮೇಲೆ ಇರದು—ಇದೇ ಇದಕ್ಕೆಲ್ಲ ಕಾರಣ. ಆದರೆ ಅಂಥ ಅವಿಶ್ವಾಸಕ್ಕೆ ಏನೂ ಎಡೆಯಿಲ್ಲೆಂಬುದು ಪ್ರಕೃತ ಯುದ್ಧದಿಂದ ಸಿದ್ಧವಾಗಿದೆ. ಆದುದರಿಂದ ದಾಸ್ಯವು ಹೋಗಿ ಈಗ ಹಿಂದುಸ್ಥಾನಕ್ಕೆ ಸಮಭಾಗಿತ್ವದ ಹಕ್ಕು ಸಿಗಬೇಕಾದುದು ಅವಶ್ಯವಾಗಿದೆ. ರಾಜ್ಯವ್ಯವಸ್ಥೆಯು ಬರೆ ಚೊಕ್ಕಟವಾಗಿಯೂ ಭೀಷಣವಾಗಿಯೂ ಇದ್ದು ಪ್ರಯೋಜನವೇನು? ಅದು ಜನರಿಗೆ ಹೇಗೆ ಬೇಕೋ ಹಾಗೆಯೇ ಇರಬೇಕು. ಅಧಿಕಾರಿಗಳು ಲೋಕಮತಕ್ಕೆ ಜವಾಬುದಾರರಾಗಿರಬೇಕು. ಇಷ್ಟು ಸಂಗತಿಯು ಆದಲ್ಲಿಯೇ ಇಂಗ್ಲಂಡಿನ ನೋಟವು ಉದಾರವಾಗಿದೆ ಅದರ ದೃಷ್ಟಿಕೋಣವು ನಿಜವಾಗಿ ಬೇರೆಯಾಗಿದೆಂದು ಹಿಂದುಸ್ಥಾನವು ತಿಳಿದೀತು, ಇಲ್ಲವಾದರೆ ಹಾಗೆ ತಿಳಿಯಲಿಕ್ಕಿಲ್ಲ. ನಾಳೆ ಯುದ್ಧವು ಮುಗಿದ ಮೇಲೆ ನಾವು ಹೇಳುವ ಯಾವ ಸಂಗತಿಯೂ ಆಗದೆ ಇದ್ದರೆ ದೇಶದಲ್ಲಿ ನಿರಾಶೆಯೂ ಅಸಂತೋಷವೂ ಹಾಗೆಯೇ ಉಳಿಯುವವು.

ವರಿಷ್ಠ ಕೌನ್ಸಿಲಿನ ಮಾನ್ಯ ಸಭಾಸದರ ಪ್ರತಿ ಒಂದು ವಿಧಾನವು ಅಕ್ಷರಶಃ ನಿಜವಾದ್ದಿದೆ. ಅದರಲ್ಲಿ ಅತಿಯುಕ್ತಿಯೇನೂ ಇಲ್ಲ. ಮೋರ್ಲೆ-ಮಿಂಟೋ ಸುಧಾರಣೆಗಳು ಅಪೂರ್ಣವಿರುವ ಸಂಗತಿಯು ಸ್ವರ್ಗಸ್ಥ ಗೋಖಲೆಯವರಿಗೆ ಕೂಡ ಗೊತ್ತಿತ್ತು. ಈ ಸುಧಾರಣೆಗಳು ಬಂದ ಮೇಲೆ ಗೋಖಲೆಯವರು ಕೌನ್ಸಿಲಿನ ಭಾಷಣಗಳಲ್ಲಿಯೂ ಬೇರೆ ಕಡೆಗಳಲ್ಲಿಯೂ ಮಾಡಿದ ಕಂಠ ಶೋಷವು ಈ ಸುಧಾರಣೆಗಳ ವಿಷಯದಲ್ಲಿ ಗೋಖಲೆಯವರ ಸರ್ಟಿಫಿಕೇಟನ್ನು ತೋರಿಸುವವರಿಗೆ ಇಷ್ಟು ಬೇಗನೆ ಮರೆತು ಹೋಯಿತೆ? ಈ ಸುಧಾರಣೆಗಳಿಂದಲೇ ಹಿಂದುಸ್ಥಾನವು ಇನ್ನು ೫೦-೧೦೦ ವರ್ಷಗಳ ತನಕ ತೃಪ್ತಿಯಲ್ಲಿರಬೇಕೆಂಬ ಅಭಿಪ್ರಾಯವು ದೇಶಭಕ್ತರಾದ ಗೋಖಲೆಯವರದಿದ್ದಿದ್ದರೆ ಅವರ ಕಂಠ ಶೋಷಕ್ಕೆ ಅರ್ಥವೇನು? ಮಾತ್ರವಲ್ಲ, ಈಗಿನ ಮಸೂದೆಯಲ್ಲಿ ಆ ಗೋಖಲೆಯವರ ಮುಖ್ಯ ಶಿಷ್ಯರಾದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳ ಸಹಿಯು ಇದೆ. ಇದರ ಮೇಲಿಂದ ಗೋಖಲೆಯವರ ಮತವನ್ನು ಪೋಲಿನಂತೆ ನಿರ್ಣಯಿಸುವುದು ಅಸಾಂಪ್ರದಾಯಿಕವೆಂದು ಯಾರೂ ಹೇಳಬಲ್ಲರು. ಕೊಡುವಾಗ ಒಂದಿಷ್ಟು ಗಂಜಿಯನ್ನು ಕೊಟ್ಟು, ಆ ಸಾರವಿಲ್ಲದ ಗಂಜಿಗೆ ರೊಟ್ಟಿಯೆಂದು ಹೇಳಿ, ಸಾವಕಾಶದಿಂದಲೇ ಅದು ಕರಗಬೇಕು, ಅವಸರ ಮಾಡಬಾರದು, ಮಾಡಿದರೆ ಅಜೀರ್ಣವಾದೀತೆಂದು ಮುಂತಾದ ವೃಥಾ ಭೀತಿಯನ್ನು ಹುಟ್ಟಿಸುವುದಾಗಲಿ, ಕಣ್ಣು ಕಟ್ಟಿನ ಲಾಘವ ವಿದ್ಯೆಯನ್ನು ತೋರಿಸು

ವುದಾಗಲಿ ಎಂಗ್ಲೋ ಇಂಡಿಯನ್ನರಿಗೆ ಮಾತ್ರ ಒಪ್ಪಿತಲ್ಲದೆ ಅನ್ಯರ ವಿವೇಕಕ್ಕೆ, ಸಭ್ಯತೆಗೆ ಅಥವಾ ಉದಾರಬುದ್ಧಿಗೆ ಒಪ್ಪುವುದಿಲ್ಲ! 'ಮೋರ್ಲೆ-ಮಿಂಟೋ' ಸುಧಾರಣೆಯು ಕರಗದಂಥ ಗಟ್ಟಿಯಾದ ರೊಟ್ಟಿಯಲ್ಲ, ಅದು ನಾವು ಮೇಲೆ ಹೇಳಿದಂತೆ ಬರೆ ಗಂಜಿಯಾಗಿದೆಂಬುದನ್ನು ಮೆಂಬರುಗಳು ಸಪ್ರಮಾಣವಾಗಿ ತೋರಿಸಿರುವರು. ಹಾಗಾದರೆ 'ಮೋರ್ಲೆ-ಮಿಂಟೊ' ಸುಧಾರಣೆಯು ಅವತರಿಸಿದಾಗ ದೇಶವೆಲ್ಲ ಹೊಸ ಯುಗವು ಪ್ರಾರಂಭವಾಯಿತೆಂಬಂತೆ ಬಹು ಸಂತೋಷದಲ್ಲಿ ಮಗ್ನವಾಗಿ ಹೋಯಿತು. ಇದು ಯಾಕೆ? ಎಂಬದೊಂದು ಆಶಂಕೆಯು ಉಳಿಯುವುದು. ಇದರ ಉತ್ತರವನ್ನು ಹುಡುಕಬೇಕಾದರೆ ಈ ಸುಧಾರಣೆಗಳ ಅತಾರವಾಗುವುದಕ್ಕಿಂತ ಮುಂಚೆ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯು ಹೇಗಿತ್ತೆಂಬುದನ್ನು ನೋಡಬೇಕು. ಲೋರ್ಡ ಕರ್ಝನ ದೊರೆಗಳ ಆಳಿಕೆಯಿಂದ ಹಿಂದೀ ಜನರ ಆಕಾಂಕ್ಷೆಗಳು ಮುದುಗಿ ಹೋಗಿದ್ದವು, ವಿಕ್ಟೋರಿಯಾ ಮಹಾರಾಜ್ಞಿಯವರ ಸನದು ಅಶಕ್ಯ ಕೋಟಿಯಲ್ಲಿ ಸೇರಿ ಹೋಗಿತ್ತು, ಹಿಂದೀ ಜನರಿಗೂ ಅವರ ರಾಷ್ಟ್ರಕ್ಕೂ ಅಪ್ರಾಮಾಣಿಕತ್ವದ ಕಪ್ಪು ತಿಲಕವು ಹಚ್ಚಲ್ಪಟ್ಟಿತ್ತು. ಇವೇ ಮುಂತಾದ ಸಂಗತಿಗಳಿಂದ ತೃಪ್ತಿ ಹೊಂದದೆಯೋ ಎಂಬಂತೆ ಕರ್ಝನ ದೊರೆಗಳು ತಮ್ಮ ಪ್ರತಿಗಾಮಿ ಧೋರಣದ ರಾಜ್ಯವ್ಯವಸ್ಥೆಗೆ ಕೊನೆಗೆ ವಂಗಭಂಗದ ಕಿರೀಟವನ್ನೇರಿಸಿದರು! ಇಂಥ ಪರಿಸ್ಥಿತಿಯು ದಾಟಿ ಹೋಗಿ ಮೋರ್ಲೆ-ಮಿಂಟೊ ಇವರ ಸಹಾನುಭೂತಿಪ್ರೇರಿತ ರಾಜ್ಯಧೋರಣದಿಂದ ಕೆಲವು ಒಳ್ಳೆ ಸುಧಾರಣೆಗಳು ಬರುವಾಗ ಕೃತಜ್ಞತೆಯಿಂದ ಗೋಖಲೆಯವರಾಗಲಿ ಅವರ ಅನುಯಾಯಿಯಾದ ಈ ದೇಶವಾಗಲಿ ಆ ಸುಧಾರಣೆಗಳನ್ನು ಸ್ವಾಗತೀಕರಿಸಿದ್ದು ಆಶ್ಚರ್ಯಕರವೇ? ಸರಕಾರವು ತನ್ನ ಮೊದಲಿನ ಪ್ರತಿಗಾಮಿ ಧೋರಣವನ್ನು ಬಿಟ್ಟು ಪ್ರಜೆಗಳೊಡನೆ ಸಹಕಾರಿತ್ವವನ್ನು ಸಂಪಾದಿಸುವಾಗ ಜನರು ಆ ಸರಕಾರವನ್ನೂ ಅದರ ಸಹಕಾರಿತ್ವವನ್ನೂ ಆದರಿಸುವುದು ಅವರ ಕೃತಜ್ಞತೆಗೆ ಅನುರೂಪವೇ. ಅಲ್ಲದೆ ಮೊದಲಿನ ತೀವ್ರತೆಯನ್ನು ಬಿಟ್ಟು ಹತ್ತಿರ ಬಂದವನೊಡನೆ ಆಗಲೂ ಮೊದಲಿನ ಕಲ್ಮಷವನ್ನೆ ಇಟ್ಟುಕೊಳ್ಳುವುದೆಂದರೆ ಹಾಲಿನ ಪಾಯಸದಲ್ಲಿ ಒಂದಿಷ್ಟು ಉಪ್ಪು ಹಾಕಿ ಅದನ್ನು ಕೆಡಿಸುವಂತೆಯೆ ಸರಿ. ಇಂಥ ಕೆಲಸವನ್ನು ಹಿಂದೀ ಜನರು ಇಷ್ಟರ ವರೆಗೆ ಮಾಡಿದವರಲ್ಲ, ಇನ್ನು ಮುಂದೆ ಮಾಡುವವರೂ ಅಲ್ಲ. ಮತ್ತು ಇದೇ ದೃಷ್ಟಿಯಿಂದ 'ಮೋರ್ಲೆ-ಮಿಂಟೊ' ಸುಧಾರಣೆಗಳು ಬಂದಾಗ ಗೋಖಲೆಯವರೂ ಅವರ ಅನುಯಾಯಿಯಾದ ಈ ದೇಶವೂ ಆ ಸುಧಾರಣೆಗಳನ್ನು ಅಭಿನಂದಿಸಲು ತಪ್ಪಲಿಲ್ಲ. ಅಲ್ಲದೆ ಹತ್ತು ಸಿಗಬೇಕಾದಲ್ಲಿ ಒಂದೆರಡು ಲಭಿಸಿದ್ದರೆ ಅವು ತ್ಯಾಜ್ಯವೆ ಎಂಬ ಅರ್ಥವಲ್ಲ. ಅವುಗಳನ್ನು ಮುಂಗಡ ರೂಪದಿಂದ ಸ್ವೀಕರಿಸಲು ಅಡ್ಡಿಯಿಲ್ಲ. ಮತ್ತು ಆದುದರಿಂದಲೇ ಮಾನ್ಯ ಸಭಾಸದರು ಆ ಸುಧಾರಣೆಗಳನ್ನು ಸಂಚುಗಾರ ರೂಪದಿಂದ ದೇಶವು ಸ್ವೀಕರಿಸಿದೆಂದು ಹೇಳಿರುವರು.

ನಾವಾದರೆ ಮಾನ್ಯ ಸಭಾಸದರು ಹೇಳುವ ಸಂಚುಗಾರ ಅಥವಾ ಮುಂಗಡಕ್ಕೆ 'ಸ್ವರಾಜ್ಯದ ಮೊದಲನೆ ಕಂತು' ಈ ಹೆಸರನ್ನ ಕೊಟ್ಟೇವು. ನಮ್ಮದನ್ನೇ ನಮಗೆ ಕೊಡುವುದರಲ್ಲಿ ಯಾವುದು ಸ್ವಲ್ಪ ಕೊಡಲ್ಪಡುತ್ತದೊ ಅದು 'ಸಂಚುಗಾರ ಅಥವಾ ಮುಂಗಡ'ವಲ್ಲ, ಅದಕ್ಕೆ 'ಕಂತು' ಎಂಬ ಹೆಸರು ಬಹು ಸಮರ್ಪಕವಾಗಿ ತೋರುತ್ತದೆ. ಹೆಸರು ಯಾವುದೇ ಇರಲಿ, ನಮ್ಮ ಉನ್ನತಿಗೆ ಕಾರಣವಾದುದು ಅರ್ಥವೇ ಅಲ್ಲದೆ ಹೆಸರು ಅಲ್ಲ. ಅಸ್ತು. ಯುದ್ಧದಂಥ ಈ ಇಕ್ಕಟ್ಟಿನ ಸಮಯದಲ್ಲಿ ಇಂಥ ಪ್ರಶ್ನೆಯನ್ನು ಉಪಸ್ಥಿತ ಮಾಡಿದ್ದು ಉಚಿತವಾಗಲಿಲ್ಲೆಂದು ಸ್ವರಾಜ್ಯದ ಈ ಎರಡನೆ ಕಂತನ್ನು ಕೇಳಿದ್ದಕ್ಕೆ ಕೆಲವು ಔಚಿತ್ಯವಾದಿಗಳು ಅನುಚಿತವಾದ ಆಕ್ಷೇಪವನ್ನು ಮಾಡುವರು. ಆದರೆ ಇದು ಸರಿಯಲ್ಲ. ಈ ಯುದ್ಧಾಂತ್ಯದಲ್ಲಿ ಜಗತ್ತಿನ ಎಲ್ಲ ಭಾಗಗಳಲ್ಲಿಯು ರಾಜಕೀಯ, ಸಾಮಾಜಿಕ, ವ್ಯಾಪಾರ ವಿಷಯಕ ವ್ಯವಹಾರಗಳಲ್ಲಿ ಬೇರೆ ಬೇರೆ ಬದಲಾವಣೆಗಳು ಆಗದೆ ನಿಲ್ಲವು. ಆದುದರಿಂದ ಈ ಯುದ್ಧದಲ್ಲಿ ಸೇರಿದ ರಾಷ್ಟ್ರಗಳೂ ಸೇರದ ರಾಷ್ಟ್ರಗಳೂ ಈಗಿನಿಂದಲೇ ತಮ್ಮ ತಮ್ಮ ಭಾವಿಸ್ಥಿತಿಯನ್ನು ಕುರಿತು ಆಲೋಚಿಸುತ್ತಿವೆ. ಹೀಗಿರುವಾಗ ಹಿಂದುಸ್ಥಾನಕ್ಕೆ ಮಾತ್ರ ಈ ಉಪದೇಶವು ಯಾಕೆ? ಹಿಂದುಸ್ಥಾನದಂತೆಯೇ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿದ ವಸಾಹತುಗಳು ಈಗ ಏನು ಮಾಡುತ್ತಿವೆ? ಬೇಡ. ಸ್ವತಃ ಇಂಗ್ಲಂಡ ದೇಶವು ಒಂದು ಕೈಯನ್ನು ಯುದ್ಧದಲ್ಲಿ ತೊಡಗಿಸಿದರೂ ಇನ್ನೊಂದು ಕೈಯಿಂದ 'ಮುಂದಿನದೇನು?' ಈ ಪಂಚಾಕ್ಷರ ಮಂತ್ರವನ್ನು ಈಗಿನಿಂದಲೇ ಜಪಿಸುತ್ತಿದೆಲ್ಲವೆ? ತಂದೆಯು ಆಪತ್ತಿನಲ್ಲಿ ಬಿದ್ದಾಗ ಮಕ್ಕಳು ಪುತ್ರ ಕರ್ತವ್ಯದಂತೆ ಅವನಿಗೆ ಅಗತ್ಯವಾದ ಔಷಧೋಪಚಾರಗಳನ್ನೆಲ್ಲ ನಿಃಸ್ವಾರ್ಥ ಬುದ್ಧಿಯಿಂದಲೂ, ಶುಭಕಾಂಕ್ಷೆಯಿಂದಲೂ ಮಾಡಿ ಅವನ ಸುಸ್ಥಿತಿಯ ಆಶೆಯು ಮೂಡಿದ ಮೇಲೆ ಆ ಮಕ್ಕಳು ತಮ್ಮ ಅಪೇಕ್ಷೆಯನ್ನು—ಆಕಾಂಕ್ಷೆಯನ್ನು ತಂದೆಯೊಡನೆ ಹೇಳಿಕೊಂಡರೆ ಅದು ಔಚಿತ್ಯದ ಭಂಗವೇ? ಅದರಲ್ಲಿ ತಂದೆಗೆ ಬೇಸರ ಉಂಟೇ? ಹಾಗೆಯೇ ಯುದ್ಧದ ಅಂತ್ಯದಲ್ಲಿ ಇಂಥಿಂಥ ನಮ್ಮ ಆಕಾಂಕ್ಷೆಗಳನ್ನು ಸರಕಾರವು ಪೂರೈಸಿಕೊಡಬೇಕೆಂದು ಈಗಿನಿಂದಲೇ ಆಲೋಚಿಸಿ ಅವುಗಳನ್ನು ತಿಳಿಸಿದರೆ ಅದರಿಂದ ಯಾವ ಹಾನಿ? ಯುದ್ಧ ಮುಗಿದನಂತರ ತಕ್ಕ ಸಮಯದಲ್ಲಿ ನಾವು ಕೇಳುವುದೇನು? ಅವರು ಕೊಡುವುದೇನು? ಎಲ್ಲ ಗಲಿಬಿಲಿಯೇ ಸರಿ. ದೇವರ ತಪಶ್ಚರ್ಯೆಗೆ ಹೊರಡುವವನು ಮೊದಲೇ ತನ್ನ ಉದ್ದೇಶವನ್ನು ಗಟ್ಟಿಮಾಡಿಕೊಳ್ಳುವನು. ಕೇಳುವ ವರವು ಇಂಥದ್ದೇ ಎಂಬುದಾಗಿ ಮೊದಲೇ ನಿಶ್ಚಯಿಸಿಡುವನು. ಇದೇ ನ್ಯಾಯವು ಪ್ರಕೃತ ವಿಷಯಕ್ಕೂ ಅನ್ವಯಿಸುತ್ತದೆ. ಆದುದರಿಂದ ಮಾನ್ಯ ಸಭಾಸದರು ಈ ಸಮಯವನ್ನು ಮೀರಗೊಡದೆ ತಮ್ಮ ದೇಶದ ನ್ಯಾಯ್ಯವಾದ ಆಕಾಂಕ್ಷೆಗಳನ್ನು ಸ್ಪಷ್ಟ ಶಬ್ದಗಳಿಂದ ಬ್ರಿಟಿಷ್ ಮುತ್ಸದಿಗಳೆದುರಿನಲ್ಲಿಟ್ಟು ತಮ್ಮ ಪವಿತ್ರ ಕರ್ತವ್ಯವನ್ನ ಮಾಡಿದರೆಂಬುದಕ್ಕೆ ಸಂದೇಹವಿಲ್ಲ.

ಪುತ್ತೂರು ಸಹಕಾರ ಸಂಘದ ವರ್ಧಂತಿ.

ಈ ವರ್ಧಂತಿಯು ಕಳೆದ ತಿಂಗಳ ೨೫ನೆ ತಾರೀಕಿಗೆ ಪುತ್ತೂರಿನ ಕ್ಲಬ್ಬಿನಲ್ಲಿ ಸಾಯಂಕಾಲ ೪ ಗಂಟೆಗೆ ಜರಗಿತು. ಈ ಜಿಲ್ಲೆಯ ಕಲೆಕ್ಟರರಾದ ಮಿ| ಎಲ್. ವಾಯ್ಟರ್ರವರು ಅನಾರೋಗ್ಯದ ನಿಮಿತ್ತದಿಂದ ಅಧ್ಯಕ್ಷಸ್ಥಾನವನ್ನು ವಹಿಸಲು ಅನಾನುಕೂಲವಾಗಿದ್ದ ಅಲ್ಲಿಯ ಡಿಸ್ಟ್ರಿಕ್ಟ ಮುನ್ಸೀಫರಾದ ಮ| ರಾ| ಸಿ. ಆರ್. ಕೃಷ್ಣರಾವ್ ಬಿ. ಎ. ಬಿ. ಎಲ್. ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಾರ್ಯಾರಂಭದಲ್ಲಿ ಪುತ್ತೂರು ಸಂಘದ ಅಧ್ಯಕ್ಷರಾದ ಮ| ರಾ| ಬೈಂದೂರ ಅನಂದರಾಯರು ಗತವರ್ಷದ ವಹಿವಾಟಿನ ರಿಪೋರ್ಟನ್ನು ಓದಿದರು. ಇದರಲ್ಲಿ "ಸದರಿ ಸಂಘವು ೧೯೦೯ನೇ ವರ್ಷದಲ್ಲಿ ಆಗ್ಗೆ ಸಹಕಾರ ಸಂಘಗಳ ರಿಜಿಸ್ಟ್ರಾರರಾಗಿದ್ದ ಮ| ರಾ| ಆರ್. ರಾಮಚಂದ್ರರಾಯರ ಪ್ರೋತ್ಸಾಹದಿಂದ ಸ್ಥಾಪಿಸಲ್ಪಟ್ಟಿತೆಂದೂ, ಈ ಜಿಲ್ಲೆಯಲ್ಲಿ ಇದೇ ಸಹಕಾರದ ಪ್ರಥಮ ಸ್ಥಾಪನೆಯಾದ್ದರಿಂದ ಜನರಲ್ಲಿ ಅದರ ವಿಷಯವಾಗಿ ಮೊತ್ತ ಮೊದಲು ಬಗೆಬಗೆಯ ಸಂದೇಹವು ಉಂಟಾಗಿದ್ದರೂ ಅದು ಮೆಲ್ಲಮೆಲ್ಲಗೆ ದೂರವಾಗುತ್ತ, ಸ್ಥಾಪನೆಯಾದ ಎರಡನೆ ವರ್ಷದಲ್ಲಿಯೇ ಸಂಸ್ಥಾನದ ವರ್ಷಾವಧಿ ರಿಪೋರ್ಟನಲ್ಲಿ 'ಉಚ್ಚಸ್ಥಿತಿಯ ೪೪ ಸಂಘಗಳಲ್ಲಿ ಒಂದು' ಎಂಬದಾಗಿ ಭಾವಿಸಲ್ಪಟ್ಟಿತೆಂತೆ ಗೊತ್ತಾಗುತ್ತದೆ.

೧೯೧೬ನೆ ಜೂನ್ ೩೦ಕ್ಕೆ ಅಂತ್ಯವಾಗುವ ವರ್ಷದ ಆಖೈರಿಗೆ ೪೬೩ ಮೆಂಬರುಗಳಿದ್ದರು. ಈ ಪೈಕಿ ವ್ಯಾಪಾರಿಗಳು ೧೪೭, ಕೃಷಿಕರು ೮೪, ಪೇದೆಗಳು ೬೦, ಇತರ ಸರಕಾರಿ ನೌಕರರು ೩೪, ವರ್ಗದಾರರು ೨೩, ದರ್ಜಿಗಳು ೧೭, ವಕೀಲರು ೧೪, 'ಹೊಟೆಲು'ಗಳ ಮಾಲಿಕರು ೧೩, ವಕೀಲರ ಗುಮಾಸ್ತರು ೧೦, ಬಡಿಗಿಯವರು ೯, ಗಾಡಿಹೊಯುವವರು ೯, ಉಪಾಧ್ಯಾಯರು ೭ ಮಂದಿ ಇದ್ದರು. ಈ ರೀತಿಯಾಗಿ ಬಗೆಬಗೆಯ ವೃತ್ತಿಗಳನ್ನು ಅವಲಂಬಿಸಿದವರು ಈ ಸಂಘದ ಪ್ರಯೋಜನವನ್ನು ಹೊಂದಿದಂತೆ ಕಾಣುತ್ತದೆ. ಪುತ್ತೂರಿನ ಜನಸಂಖ್ಯೆ ಸುಮಾರು ೪೦೦೦ ಇರುವಾಗ ಇಷ್ಟು ಮೆಂಬರರು ಸೇರಿದ್ದರಿಂದ ಇನ್ನು ಸಂಖ್ಯೆ ಹೆಚ್ಚಾಗಲಿಕ್ಕೆ ಅವಕಾಶವಿಲ್ಲ. ಈಗ ಸೇರಿದವರೇ ಸರಿಯಾಗಿ ಇದರ ಪ್ರಯೋಜನ ಹೊಂದುತ್ತ ಬಂದರೆ ಊರು ಇನ್ನಷ್ಟು ವೃದ್ಧಿ ಬರುವುದೆಂತ ನಾವು ಹೇಳಬಹುದು. ಸಹಕಾರದ ಬೀಜವು ಮೊಳೆತು ಹುಲುಸಾಗಿ ಬೆಳೆಯಲಿಕ್ಕೆ ಪುತ್ತೂರಿನ ನೆಲವು ಸಾಕಷ್ಟು ಒಳ್ಳೆಯದಾಗಿದೆ ಎಂಬದು ಈಚೀಚೆಗೆ ಅಲ್ಲಿ ಕಾಣಬರುವ ಚಟುವಟಿಕೆಗಳಿಂದಲೆ ಗೊತ್ತಾಗುತ್ತದೆ. ನಮ್ಮ ಮಂಗಳೂರು ಈ ಜಿಲ್ಲೆಯ ಮುಖ್ಯ ಪಟ್ಟಣವಾಗಿದ್ದು ವಿದ್ಯಾವಂತರಿಂದಲೂ, ವರ್ತಕರಿಂದಲೂ, ಶ್ರೀಮಂತರಿಂದಲೂ ಕೂಡಿದ್ದರೂ ಜನೋಪಕಾರದ ಯಾವುದೊಂದು ಸಂಸ್ಥೆಯು ಈ ಜಿಲ್ಲೆಯಲ್ಲಿ ಕಾಲಿಡಬೇಕಾದರೆ ಪುತ್ತೂರಿನವರೇ ನಮಗೆ ದಾರಿತೋರಿಸಬೇಕಾಗುತ್ತದೆಂಬುದು ಸರ್ವ ವಿದಿತ. ನಮ್ಮ ಜಿಲ್ಲೆಯಲ್ಲಿ ಸಹಕಾರವನ್ನು ಬಿತ್ತಿದವರು ಅವರು. ನಮ್ಮ ಜಿಲ್ಲೆಯಿಂದ ಮದ್ರಾಸ ನ್ಯಾಯವಿಧಾಯಕ ಸಭೆಗೆ ಮೆಂಬರರು ಚುನಾಯಿಸಲ್ಪಡುವುದು ಅತಿ ಅಗತ್ಯವೆಂದು ಕಹಳೆ ಊದಿದವರು ಅವರು. ಫಾರೆಸ್ಟು ಇಲಾಖೆಯಿಂದ ಆಗುವ ತೊಂದರೆಗಳನ್ನು ಕುರಿತು ಫಾರೆಸ್ಟು ಕಮ್ಮಿಟಿಯವರಿಗೆ ಮನವಿ ಬರಕೊಂಡವರು ಅವರು. ಸಾರ್ವಜನಿಕ ಸಹಾಯ್ಯದಿಂದ ವಿದ್ಯಾಭಿವೃದ್ಧಿಗಾಗಿ ಸೆಕೆಂಡರಿ ಶಾಲೆಯನ್ನು ಸ್ಥಾಪಿಸಿದವರು ಅವರು. ನಮ್ಮ ಮಂಗಳೂರಿನಲ್ಲಿ 'ಬಿಲ್ಲಿಯಾರ್ಡ ಟೇಬಲ್' ಕ್ಲಬ್ಬುಗಳು, ಇಸ್ಪೀಟು ಆಟ, ಕ್ರಿಕೆಟು ಆಟದ ಕ್ಲಬ್ಬುಗಳು, ಜಾತಿಗೊಂದೊಂದು ಬಗೆಯ ಬುದ್ಧಿ, ಬಾಹ್ಯಾಡಂಬರ, ನಿಷ್ಪ್ರಯೋಜಕ ಕೆಲಸಗಳಲ್ಲಿ ಮುಸ್ಕರ, ಇವೇ

ನವಕ್ಕೆ ವಿದ್ವಜ್ಜನರ ಹೆಚ್ಚಿನ ಸಮಯಗಳನ್ನು ಸೂರೆಗೊಳ್ಳುವುದರಿಂದ ಅವರಲ್ಲಿ ಕಾರ್ಯಾಶಕ್ತಿಯೂ ಇಲ್ಲ; ಕೈಹಾಕಿದ ಕೆಲಸಗಳೆಲ್ಲ ನಿರರ್ಥಕವಾಗುವುವು ಅಥವಾ ಕಾರ್ಯಾರಂಭದಲ್ಲಿಯೇ ಎಂದರೆ ಯಾವುದೊಂದು ಸಂಸ್ಥೆಯ 'ರೂಲ್ಸು'ಗಳನ್ನು ಠರಾವಣೆ ಮಾಡುವಷ್ಟರಲ್ಲಿಯೇ ಜನರ ಉತ್ಸಾಹವು ತಗ್ಗಿಹೋಗುವುದು. ಇದು ವಿಷಾದಕರ ಸಂಗತಿ.

ಈ ಪುತ್ತೂರು ಸಂಘದಲ್ಲಿ ಗತವರ್ಷದಲ್ಲಿ ಸುಮಾರು ೨೫,೦೦೦ ರೂಪಾಯಿ 'ಡಿಪೋಜಿಟ' ಆಗಿತ್ತು ಎಂದು ಕಂಡುಬರುವುದು. ಇದಲ್ಲದೆ ಬಡ ಜನರ ಉದ್ಧರಣೆಗಾಗಿ ಕೆಲವು ಹೊಸ ನಮೂನೆಯ 'ಡಿಪೋಜಿಟ' ಕ್ರಮಗಳನ್ನು ಇವರು ಏರ್ಪಡಿಸಿರುವರೆಂದು ಕಾಣುತ್ತದೆ. ತಿಂಗಳಿಗೆ ೧ ರೂಪಾಯಿ ಮೇರೆಗೆ ೪೫, ೬೪, ಅಥವಾ ೧೨೨ ತಿಂಗಳುಗಳ ವರೆಗೆ ಹಣವನ್ನು ಕಟ್ಟುವ ಕ್ರಮವೊಂದು. ಇದು ಹೆಣ್ಣು ಮಕ್ಕಳ 'ದೇಣೆ' ಕೊಡುವುದಕ್ಕೆ ದ್ರವ್ಯ ಸಂಚಯದ ಅನುಕೂಲತೆಯನ್ನು ಒದಗಿಸುತ್ತದೆ. ಶಾಲಾ ಫ್ಹಾಸಲು ಠೇವಣಾತಿಗಳ ಕ್ರಮ ಇನ್ನೊಂದು. ಈ ಕ್ರಮವನ್ನು ಈ ಪತ್ರಿಕೆಯಲ್ಲಿ ಈ ಮೊದಲೇ ವಿವರಿಸಿಯದೆ. ಮೂರನೆಯದು ಡಬ್ಬಿಯ ಠೇವಣಾತಿ. ಇದರ ಮೇರೆಗೆ ಇಷ್ಟವಿದ್ದ ಮೆಂಬರನಿಗೆ ಸಂಘದಿಂದ ಬೀಗವಿರುವ ಒಂದು ಡಬ್ಬಿಯನ್ನು ಕೊಡಲ್ಪಡುವುದು. ದಿನಂಪ್ರತಿ ಅನುಕೂಲವಾದಷ್ಟು ಹಣವನ್ನು ಅದರಲ್ಲಿ ಹಾಕಿ ತಿಂಗಳಿಗೊಮ್ಮೆ ಆ ಡಬ್ಬಿಯನ್ನು ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿಯರು ಆ ಡಬ್ಬಿಯ ಯಜಮಾನನ ಸಮ್ಮುಖದಲ್ಲಿಯೇ ಬೀಗ ತೆಗೆದು ಅದರಲ್ಲಿದ್ದ ಹಣವನ್ನು ಅವನ ಹೆಸರಲ್ಲಿ ಜಮೆ ಬರಕೊಳ್ಳುವರು. ಪ್ರತಿ ತಿಂಗಳ ೪ನೆ ತಾರೀಕಿನೊಳಗೆ ಆ ಡಬ್ಬಿಯನ್ನು ತಂದರೆ ಆದೇ ತಿಂಗಳಿನಿಂದಲೂ ಆ ತಾರೀಕಿನ ನಂತರ ಮರು ತಿಂಗಳಿನಿಂದಲೂ ರೂಪಾಯಿಗೆ ತಿಂಗಳಿಗೆ ಮುಕ್ಕಾಲುಪೈ ಮೇರೆಗೆ ಬಡ್ಡಿ ಎಣಿಸಲ್ಪಡುವುದು. ಈ ರೀತಿಯಾಗಿ ಬಡ್ಡಿಯು ಒಂದು ವರ್ಷದ ವರೆಗೆ ಒಬ್ಬನು ಪ್ರತಿ ತಿಂಗಳಲ್ಲಿಯೂ ಡಿಪೋಜಿಟ ಮಾಡಿದರೆ ಮಾತ್ರವೇ ಸಿಕ್ಕುವುದು. ಯಾವುದೊಂದು ತಿಂಗಳಲ್ಲಿ ತಪ್ಪಿದರೆ ಅವನ ಲೆಕ್ಕಾಚಾರವನ್ನು ಮುಗಿಸಿ ಅವನ ಹಣವನ್ನು ನಿಬಡ್ಡಿಯಿಂದ ಅವನಿಗೆ ವಾಪಾಸು ಕೊಡಲ್ಪಡುವುದು. ಇವು ಬಡ ಜನರಿಗೆ ಮೆಲ್ಲಮೆಲ್ಲನೆ ದ್ರವ್ಯಸಂಗ್ರಹ ಮಾಡಲಿಕ್ಕೆ ಕಲ್ಪಿಸಿದ ವಿವಿಧ ಉಪಾಯಗಳು. ಇವನ್ನು ಬೇರೆ ಸಂಘಗಳೂ ಜಾರಿಗೆ ತರಬೇಕೆಂದು ನಾವು ಅವರಿಗೆ ಸೂಚಿಸುವೆವು.

ಸಂಘದಿಂದ ಎಲ್ಲಾ ಬಗೆಯ ಪ್ರಯೋಜನಕರವಾದ ಕೆಲಸಗಳಿಗೆ ಸಾಲಸಿಕ್ಕಿದಂತೆ ಕಾಣುವುದು. ಈ ರೀತಿಯಾಗಿ ಸುಮಾರು ೫೦೦೦ ರೂಪಾಯಿಗಳ ವಹಿವಾಟು ನಡದಿದೆ. ಇವುಗಳಲ್ಲಿ ಹೆಚ್ಚಿನ ಸಾಲಗಳು ೫೦ ರೂಪಾಯಿ ಒಳಗಿನವುಗಳು; ಎಂದರೆ, ಬಡ ಜನರ ಹಣದ ಅಡಚಣೆಯು ಬಹಳಮಟ್ಟಿಗೆ ಈ ಸಂಘದಿಂದ ಪರಿಹಾರವಾಗುತ್ತದೆಂಬುದು ಸ್ಪಷ್ಟವಾಗುವುದು.

೩೪ ಮಂದಿ ಸಾಲಪಡೆದಿರುವಾಗ ಏಳೆ ಜನರು ಮಾತ್ರ ವಾಯಿದೆ ತಪ್ಪಿಸಿದರು; ಇವರೂ ಕೂಡಾ ವರ್ಷಾಂತ್ಯದೊಳಗೆ ತಮ್ಮ ಸಾಲ ಪರಿಹಾರಮಾಡಿದ್ದು ತುಂಬಾ ಸಂತೋಷಕರ. ಇದು ಆಡಳಿತೆಯ ಕಮ್ಮಿಟಿಯವರ ಬುದ್ಧಿವಂತಿಕೆಯನ್ನೂ ಕಾರ್ಯನಿರ್ವಾಹ ಶಕ್ತಿಯನ್ನೂ ನಮ್ಮ ಕಣ್ಣೆದುರಿಗೆ ತಂದೊಡ್ಡುತ್ತದೆ. ಇವೆಲ್ಲ ಈ ಸಂಘದ ಉಚ್ಛ್ರಾಯ ಸ್ಥಿತಿಯನ್ನು ವಿಶದಗೊಳಿಸುತ್ತವೆ.

ಈ ರಿಪೋರ್ಟನ್ನು ಓದಿದ ಮೇಲೆ ಮ. ರಾ. ಉಳ್ಳಾಲ ಮಂಗೇಶರಾಯರು 'ಶಿಕ್ಷಣಕ್ಕೆ ಸಹಕಾರದ ಬೆಂಬಲ'ವೆಂಬ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷರು ಈಗಿನ ಸ್ಥಿತಿಯಲ್ಲಿ ಈ ಜಿಲ್ಲೆಯು ವಿದ್ಯಾಭ್ಯಾಸದ ಮಟ್ಟಿಗೆ ಬಹಳ ಹಿಂದುಳಿದಿಲ್ಲವೆಂದು ತಪ್ಪು ಗ್ರಹಿಕೆ ಮಾಡುವುದಾದರೂ ಶಾಲೆಗೆ ಹೋಗುವ ಪ್ರಾಯ ದಾಟಿ ಹೋದ ನಿರಕ್ಷರ ಕುಕ್ಷಿಗಳ ಸಂಖ್ಯೆ ತುಂಬಾ ಇರುವುದನ್ನು ಮರೆಯಬಾರದೆಂದೂ ಇಂಥವರಿಗೆ 'ನೈಟ್‌ಸ್ಕೂಲ್' ಮುಂತಾದುವುಗಳನ್ನು ಮಾಡಲು ಪ್ರಯತ್ನಪಟ್ಟರೂ ಈ ಕನ್ನಡ ಭಾಷೆಯ ಅಕ್ಷರಮಾಲೆಯನ್ನು ಕಲಿಯುವಷ್ಟು ಪ್ರಯತ್ನಪಡುವಷ್ಟರಲ್ಲಿಯೇ ಅವರು ಉತ್ಸಾಹಭಗ್ನರಾಗುವುದರಿಂದ ಅಂಥ ಪ್ರಬುದ್ಧರಿಗೆ ಸುಲಭ ರೀತಿಯಿಂದ ವಿದ್ಯಾಭ್ಯಾಸ ಮಾಡುವುದಕ್ಕೆ ಕ್ರಮಗಳನ್ನು ಹುಡುಕಿ ತೆಗೆಯುವುದು ಅವಶ್ಯಕವೆಂದೂ, ಹೆಚ್ಚು ಮಕ್ಕಳ ಸಂಖ್ಯೆ ವಿದ್ಯೆ ಕಲಿಯುವುದಕ್ಕೆ ಮುಂದೆ ಬಂದಂತೆ ತೋರಿಬಂದರೂ ಈಗಿನ ವಿದ್ಯಾಭ್ಯಾಸ ಕ್ರಮಗಳಲ್ಲಿ ಹಲವು ಬಗೆಯ ನ್ಯೂನತೆಗಳಿರುವುದರಿಂದ ಅವನ್ನು ಹೋಗಲಾಡಿಸಬೇಕೆಂದೂ ಮುಂತಾಗಿ ಸರಸವಾಗಿ ಭಾಷಣಮಾಡಿದರು.

ಅನಂತರ ಹೊಸತಾಗಿ ಸ್ಥಾಪನೆಯಾದ ಸೆಕೆಂಡರಿ ಶಾಲೆಯ ಕೆಲವು ಮಕ್ಕಳು 'ಸಹಕಾರದಿಂದುಂಟಾಗುವ ಪ್ರಯೋಜನ' ಎಂಬ ಒಂದು ನಾಟಕವನ್ನು ಆಡಿ ಸಭಿಕರಿಗೆ ಆನಂದಗೊಳಿಸಿದರು. ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರ.

ಮುಹರಮ್ ಹಬ್ಬ.

ಅಯ್ಯಾ ಪತ್ರಾಧಿಪರೇ,

ಇದು ಅಕ್ಕಿ ಪ್ರಿಯವಾಗಿ ಬೇಡುವವರ ಸಂಖ್ಯೆಯು ಹೆಚ್ಚಾದ ಸಮಯ. ಈ ವರ್ಷದಲ್ಲಿ ಮುಹರಮ್ ಹಬ್ಬಕ್ಕೆ ವೇಷಧಾರಿಗಳು ಬಹಳ ಮಂದಿ ಇರಬೇಕು. ತೋಳಗಳು ಕುರಿಗಳ ವೇಷವನ್ನು ಧರಿಸಿ ಕುರಿಗಳ ಆಹಾರವನ್ನು ಅಪಹರಿಸಲಿಕ್ಕೆ ಬಂದಂತೆ ಮನುಷ್ಯರು ಹುಲಿಗಳ ವೇಷವನ್ನು ಹಾಕಿ ಬಡಬೇಡುವವರಿಗೆ ದೊರಕುವ ಆಹಾರವನ್ನು ಕಸಕೊಳ್ಳಲಿಕ್ಕೆ ಮುಹರಮ್ ಹಬ್ಬವು ಒಂದು ಒಳ್ಳೇ ಸಂದರ್ಭವಾಗಿದೆ. ವಿದ್ಯಾವಂತರಾದವರೂ ಕೂಡ ಇಂಥಾ ಕಪಟಿಯರಾದ ಬಲಿಷ್ಠ ಬೇಡುವವರಿಗೆ ಧರ್ಮವನ್ನೀಡುತ್ತಾ ಉತ್ತೇಜನವನ್ನು ಕೊಡುತ್ತಾರಲ್ಲವೇ? ಪಾಪ! ಆ ವೇಶಧಾರಿಗಳಾದ ಬೇಡುವವರನ್ನು ನಾವೇಕೆ ದೂರಬೇಕು? ಮನುಷ್ಯ ವರ್ಗಕ್ಕೆ ಅನೇಕರು ಸೇರಿದ್ದರೂ ಆಕಾರದಲ್ಲಿ ಮಾತ್ರ ಆ ಜಾತಿಗೆ ಸೇರಿದ್ದಲ್ಲದೆ ಸ್ವಭಾವ, ಗುಣಗಳಲ್ಲಿ ಅನೇಕರು ಮೃಗ ಜಾತಿಗೆ ಸೇರಿದವರಾಗಿರುತ್ತಾರೆ. ಹೀಗಿರಲು ಅಂಥಾ ಮೂಕ ಪ್ರಾಣಿಗಳ ಸ್ವಭಾವವುಳ್ಳವರು ತಾವು ಮೃಗ ಜಾತಿಗೆ ಸೇರಿದ ಸಂಗತಿಯನ್ನು ಪಾದ್ಯ, ಬೇಂಡಿನ ಮೂಲಕ ಲೋಕಕ್ಕೆ ಪ್ರಕಟಿಸುವಾಗ ಮನುಷ್ಯರಾದ ನಾವು ಅವರಿಗಾಗಿ ಚಿಂತಿಸಬೇಕಲ್ಲದೆ ಸಂತೋಷಪಟ್ಟು ಅವರಿಗೆ ಹಣಕಾಸು ಕೊಡುವದು ಯಾವ ನ್ಯಾಯ?

ಬಹುಕಾಲದಿಂದಲೂ ಆಚರಿಸಲ್ಪಡುತ್ತಾ ಬರುವ ಈ ಪದ್ಧತಿಯನ್ನು ನಾವೇಕೆ ನಿಲ್ಲಿಸಬೇಕೆಂದು ಅನೇಕ ಬುದ್ಧಿವಂತರೂ ಕೂಡ ನೆನಸಬಹುದು. ಆದರೆ ಒಂದು ಕೆಟ್ಟ ಕೃತ್ಯವಾಗಲೀ, ದುಷ್ಟ ಪದ್ಧತಿಯಾಗಲೀ ಪುರಾತನ ಕಾಲದಿಂದಲೇ ರೂಢಿಯಾಗಿ ಬಂದರೆ ಅವುಗಳು ಒಳ್ಳೇ ಕೃತ್ಯವಾಗುವದಿಲ್ಲ. ಸತಿಸಹಗಮನ ಎಂಬ ಪದ್ಧತಿಯೂ, ಹೆಣ್ಣು ಕೂಸುಗಳನ್ನು ನದಿಯಲ್ಲಿ ಹಾಕುತ್ತಿದ್ದ ಪದ್ಧತಿಯೂ, ಬಹು ಪುರಾತನ ಪದ್ಧತಿಯಾದರೂ ಅವು ಕೆಟ್ಟದೆಂದು ಬುದ್ಧಿವಂತರಾದವರು ಕಂಡು ನಿಲ್ಲಿಸಿದಂತೆಯೇ ಈ ದುಷ್ಟ ಪದ್ಧತಿಯನ್ನು ಬುದ್ಧಿಯುಳ್ಳವರೂ ವಿದ್ಯಾವಂತರೂ ಯಾಕೆ ನಿಲ್ಲಿಸಕೂಡದು? ಜಾತಿ ಮತವನ್ನು ನೆನಸದೆ ಸರ್ವ ಜಾತಿಯವರೂ ಈ ದುರಾಚರಣೆಗೆ ಬೆಂಬಲವಿತ್ತು ವೃದ್ಧಿಗೊಳಿಸುವದು ಮಹಾಶ್ಚರ್ಯ. ಮುಹರಮ್ ಹಬ್ಬದ ಕಾಲದಲ್ಲಿ ವೇಶಗಳ ಪದ್ಧತಿಯ ದುರಾಚಾರದ ಮರವನ್ನು ಯಾರೋ ದುರಾಚಾರಿಗಳು ನಟ್ಟಿರುತ್ತಾರೆ. ಆದರೆ, ಈಗ ಆ ಮರವು ಎಲ್ಲಾ ಜಾತಿಯವರಿಂದಲೂ ನೀರೆರೆಯಲ್ಪಟ್ಟು ಪುಷ್ಟಿಯಾಗಿ ಬೆಳದದೆ. ಕೆಡಕಿನ ಮರಕ್ಕೆ ನೀರು ಹಾಕುವವರು ಕಮ್ಮಿ ಇಲ್ಲ.

ಇಸ್ಲಾಮ್ ಮತದ ಜನ್ಮಭೂಮಿಯಾದ ಅರಬಿ ದೇಶವು ಮುಹರಮ್ ಹಬ್ಬವು ಏನೆಂದರಿಯದು. ನಮ್ಮ ಮಹಾಪ್ರವಾದಿಯ ಮೊಮ್ಮಕ್ಕಳನ್ನು ಅತಿ ಕ್ರೂರ ರೀತಿಯಲ್ಲಿ ಕೊಂದ ಸಂಬಂಧ ಭೂಲೋಕದ ಎಲ್ಲಾ ಮುಸಲ್ಮಾನರು ದುಃಖಪಡುವ ಈ ೧೦ ದಿವಸಗಳಲ್ಲಿ, ಮುಹರಮ್ ಹಬ್ಬವನ್ನು ಇಲ್ಲಿ ಹ್ಯಾಗೆ ಆಚರಿಸುತ್ತಾರೆ? × ×

× × × × × × × × × ×

× × × × × × × × × ×

ಬುದ್ಧಿವಂತರೂ, ವಿದ್ಯಾವಂತರೂ ಆದ ಹಿಂದೂ ಮುಸಲ್ಮಾನರು ಈ ಕಪಟಿಗಳಾದ ಬಲಿಷ್ಠ ಬೇಡುವವರಿಗೆ ಧರ್ಮವನ್ನೀಯದಿದ್ದರೆ, ಈ ದುರಾಚಾರದ ಪದ್ಧತಿಯು ತನ್ನಷ್ಟಕ್ಕೆ ಸಾಯುವದೆಂತ ನಂಬುವೆನು.

ಮಂಗಳೂರು.
ತಾ. 2-11-16.

ಯಥಾರ್ಥ ಮುಸಲ್ಮಾನ.

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಪರಿಷದವು.

ಮೇಲೆ ಹೇಳಿದ ಪರಿಷದವನ್ನು ಜಿಲ್ಲೆಯಲ್ಲದೆಯ ನಿವಾಸಿಗಳ ಅವಗಾಹನೆಗೆ ತಂದು, ಅವರ ದಿವ್ಯಾನುಗ್ರಹವನ್ನೂ, ಪರಿಷತ್ತಿನ ಬಗ್ಗೆ ದ್ರವ್ಯಾನುಕೂಲವನ್ನೂ

ಸಂಪಾದಿಸಬೇಕೆಂಬ ಸದುದ್ದೇಶದಿಂದ ಉಡ್ಪಿ, ಕುಂದಾಪುರ ಅತ್ತಕಡೆ ನಿಯಮಿತರಾಗಿ ಕಳುಹಲ್ಪಟ್ಟ ಕಮಿಟಿಯವರ ವರದಿಯನ್ನು ಇಂದಿನ "ಸ್ವದೇಶಾಭಿಮಾನಿ"ಯ ಸಂಚಿಕೆಯಲ್ಲಿ ಸಂಕ್ಷೇಪವಾಗಿ ಸಮರ್ಪಿಸಿಬಿಡುವೆವು:

ನಾವು ಇಲ್ಲಿಂದ ಹೊರಟವರು ಮೊಟ್ಟಮೊದಲು ಉಡುಪಿಯನ್ನು ಸೇರಿದೆವು. ಅಲ್ಲಿಯ ಮಿಶನ್ ಹೈಸ್ಕೂಲಿನ ಉದಾರಶೀಲರಾದ ಹೆಡ್‌ಮಾಸ್ತರವರಿಂದ ಸಮ್ಮಾನಿಸಲ್ಪಟ್ಟು ಇವರ ಸಮಕ್ಷಮದಲ್ಲಿ ವಿದ್ಯಾರ್ಥಿಗಳಿಂದ ಅಪೇಕ್ಷಿತವಾದ ಸಭೆಯು ಮ| ರಾ| ವಿಠಲ ಕಾಮತರವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರುಗಿತು. ದೇಶಾಭಿವೃದ್ಧಿಗೆ ಕಾರಣಭೂತವಾದ ಇಂತಹ ಸಂಸ್ಥೆಯ ಆವಶ್ಯಕತೆಯನ್ನು ನೆರೆದು ಬಂದ ಸಭಿಕರಿಗೆ ತಿಳಿಸಿದನಂತರ ಆರುಮಂದಿಯಿಂದ ಕೂಡಿದ ಒಂದು ಉಪಶಾಖೆಯು ಅಲ್ಲಿ ಸ್ಥಾಪಿಸಲ್ಪಟ್ಟಿತು. ಇಲ್ಲಿನ ಮುಖ್ಯಸ್ಥರಲ್ಲಿ ಮೇಲಾಗಿ ಖಾನ್ ಸಾಹೇಬ್ ಹಾಜಿ ಅಬ್ದುಲ್ಲ ಹಾಜಿ ಕಾಸಿಮ್ ಸಾಹೇಬರವರೂ, ರಾ| ವಿಠಲ ಕಾಮತರವರೂ ಮತ್ತು ಹೆಡ್ ಮಾಸ್ತರರೂ ಈ ಸಂಸ್ಥೆಯ ಪೋಷಕರಾಗಿರುವರೆ ಸಮ್ಮತಿಸಿರುತ್ತಾರೆ. ಇಲ್ಲಿಯ ಸದ್ಗೃಹಸ್ಥರಿಂದ ಕೂಡಿಸಲ್ಪಟ್ಟ ಹಣ ರೂಪಾಯಿ ೧೧೪ ಆಗಿರುತ್ತದೆ.

ಉಡ್ಪಿಯ ಕಾರ್ಯವನ್ನು ಪೂರೈಸಿದ ಬಳಿಕ ಕುಂದಾಪುರಕ್ಕೆ ಪಯಣವನ್ನು ಬೆಳೆಸಿದೆವು. ದೇಹದಲ್ಲಿ ಶ್ವಾಸವಾಡುವವರೆಗೂ ವಿದ್ಯಾರ್ಥಿಗಳ ಹಿತಚಿಂತನೆಯಲ್ಲಿಯೇ ನಿಜವಾಗಿಯೂ ಮಗ್ನರಾಗಿರುವ ಹೆಡ್ ಮಾಸ್ತರು, ಶಾಲಾ ಉಪಾಧ್ಯಾಯರಿಂದಲೂ ವಿದ್ಯಾರ್ಥಿಗಳಿಂದಲೂ ಅಲಂಕೃತವಾದ ಸಭೆಯೊಂದನ್ನು ಕೂಡಿಸಿದುದಲ್ಲದೆ ಅಗ್ರಾಸನಾಸೀನರಾಗಿ, ಇಂತಹ ಪರಿಷದದ ಪ್ರಾಮುಖ್ಯತೆಯನ್ನು ಕುರಿತು ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟರು. ಇಲ್ಲಿಗೆ ಸಂಬಂಧಪಟ್ಟ ಕಮಿಟಿಯೇ ಮೊದಲಾದ ಕಾರ್ಯನಿರ್ವಾಹಗಳನ್ನು ಕ್ರಮೇಣ ಏರ್ಪಡಿಸುವರೆ ಅವರೇ ಕೈಕೊಂಡಿರುತ್ತಾರೆ. ಇಲ್ಲಿ ರೂಪಾಯಿ ೬೧ನ್ನು ಕೂಡಿಸಿದೆವು.

ಕಾರಣಾಂತರಗಳಿಂದ ಕಾರ್ಕಳದಲ್ಲಿ ಹೆಚ್ಚಿನ ಮಟ್ಟಿನ ದ್ರವ್ಯ ಸಹಾಯವು ದೊರಕದೆ ಇದ್ದರೂ ಈ ವರೆಗೆ ರೂಪಾಯಿ ೨೬ನ್ನು ಕೂಡಿಸಿದೆವು. ಆದರೆ ಉಳಿದ ಅಲ್ಲಿಯ ಗೃಹಸ್ಥರ ವಂತಿಗೆಯ ವಿಷಯದಲ್ಲಿ ತಮ್ಮಿಂದ ಕೈಲಾದ ಮಟ್ಟಿಗೆ ಪ್ರಯತ್ನವನ್ನು ಮಾಡುವೆವೆಂಬದಾಗಿ ಮಾನ್ಯ ಸದಾಶಿವ ಭಟ್ಟರವರೂ, ಮ| ರಾ| ಇತ್ಯಾ ವಾಸುದೇವರಾಯರೂ ಭರವಸವನ್ನು ಕೊಟ್ಟಿರುವರು.

ಈ ಪ್ರಾಂತ್ಯಗಳಲ್ಲೆಲ್ಲಾ ನಮಗೆ ಅನೇಕ ವಿಧದಲ್ಲಿ ಸಹಾಯ ಮಾಡಿದ ಸದ್ಗೃಹಸ್ಥರುಗಳಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ನಮ್ಮ ಪ್ರಯಾಣದ ಖರ್ಚಿನ ಅರ್ಧಾಂಶವನ್ನು ಇಲ್ಲಿಯ ಹಿಂದೂ ಪ್ರೆಸ್ಸಿಟ್ ಕಂಪೆನಿಯ ಪ್ರೊಪ್ರೈಟರರಾದ ರಾ| ಬೆಳ್ಳೆ ಸುಬ್ಬಯ್ಯ ಸೆಟ್ಟರವರು ಮಾಫಿ ಬಿಟ್ಟಿರುವರು. ಇದಕ್ಕಾಗಿ ಅವರಿಗೂ ನಾವು ಕೃತಜ್ಞರಾಗಿರುತ್ತೇವೆ.

ಮಂಗಳೂರು,
ತಾ. 26—10—16.

ಕೆ. ಗೋಪಾಲಕೃಷ್ಣರಾವ್,
ಕಾರ್ಯದರ್ಶಿ,
ಉ. ವೆಂಕಟರಾವ್,
ಎಚ್. ನಾರಾಯಣರಾವ್.

ದೀಪಾವಳಿಯ ಮಹೋತ್ಸವ.

ಪುತ್ತೂರು ಹೊಸ ಸೆಕೆಂಡರಿ ಶಾಲಾ ಮಕ್ಕಳ ಚಟುವಟಿಕೆ.

(ಒಬ್ಬ ಬಾತ್ಮೀದಾರರಿಂದ)

ಹಿಂದಿನ ಕಾಲದಲ್ಲಿ ಮಹಾನವಮಿಯ ಸಮಯ ಶಾಲಾ ಉಪಾಧ್ಯಾಯರು ಶಾಲಾ ಮಕ್ಕಳನ್ನೊಡಗೊಂಡು ಮನೆಮನೆಗೆ ಹೋಗಿ "ಮಹಾನವಮಿಯ ಪದ"ಗಳೆಂಬ ಹಾಡುಗಳನ್ನು ಹಾಡಿ ಸದ್ಗೃಹಸ್ಥರ ಮನಸ್ಸಿಗೆ ಸಂತೋಷವನ್ನುಂಟುಮಾಡಿ ಉಚಿತಗಳನ್ನು ಪಡೆದು ಹರಸಿ ಹೋಗುವ ವಾಡಿಕೆ ಇತ್ತಷ್ಟೇ. ಆ ರೂಢಿಯನ್ನು ಪುತ್ತೂರಿನ ಹೊಸ ಸೆಕೆಂಡರಿ ಶಾಲೆಯ ಮಕ್ಕಳಿಗೂ ಜಾರಿಯಲ್ಲಿ ತಂದು ಸಿಕ್ಕಿದ ಧನವನ್ನು ಬಡ ವಿದ್ಯಾರ್ಥಿಗಳಿಗೆ ವೇತನ ಮುಂತಾದ ತರದ ಸಹಾಯ ಮಾಡಲು ಉಪಯೋಗಿಸಬೇಕೆಂದು ಶಾಲೆಯ ಹಿತೈಷಿಗಳನೇಕರ ಮನಸ್ಸಿನಲ್ಲಿತ್ತು; ಆದರೆ ಆ ಬಗ್ಯೆ ಮಹಾನವಮಿಯ ವೇಳೆಯ ಬದಲಾಗಿ ಲೌಕಿಕ ವ್ಯವಹಾರಗಳಲ್ಲೆಲ್ಲಾ ಅತಿ ಮುಖ್ಯವಾಗಿರುವ ದೀಪಾವಳಿಯ ಹಬ್ಬದ ಸಮಯವನ್ನು ಉಪಯೋಗಿಸಬೇಕೆಂದು ನಿರ್ಣೈಸಿತ್ತು. ಆ ಆಲೋಚನೆಯನ್ನು ಶಾಲಾ ಮಕ್ಕಳಿಗೆ ಹೇಳಿದೊಡನೆ ಅವರು ಏಕಕಂಠದಿಂದ ಒಪ್ಪಿಕೊಂಡ ಮೇರೆಗೆ ಮೊನ್ನೆ ಧನಲಕ್ಷ್ಮೀ ಪೂಜೆಯ ದಿವಸದಲ್ಲಿ ಸಾಯಂಕಾಲಕ್ಕೆ ಶಾಲಾ ಉಪಾಧ್ಯಾಯರೆಲ್ಲರೂ ಮಕ್ಕಳೊಂದಿಗೆ ಸೇರಿ ಅಂಗಡಿ ಮೊದಲಾದವುಗಳಿಗೆಲ್ಲಾ ಹೋಗಲಿಕ್ಕೆ ಪ್ರಾರಂಭಿಸಿದರು. ಶಾಲೆಯ ಆಡಳಿತೆಗೆ ಸಂಬಂಧಪಟ್ಟ ಗೃಹಸ್ಥರೂ ಕೆಲವರು ಅವರ ಜತೆಯಲ್ಲಿದ್ದರು. ಪೂರ್ವದ ಮಹಾನವಮಿಯ ಹಾಡುಗಳನ್ನನುಸರಿಸಿ ದೀಪಾವಳಿ, ಧನಲಕ್ಷ್ಮೀ ಪೂಜೆ, ಬಲಿಪಾಡ್ಯ, ನರಕಚತುರ್ದಶಿ ಮೊದಲಾದ ಹಬ್ಬಗಳಿಗೆ ಸರಿತೋರುವಂತೆ ಕೆಲವು ಹಾಡುಗಳನ್ನು ರಚಿಸಿದ್ದುವುಗಳನ್ನು ಹಾಡುತ್ತ ಪ್ರತಿ ಒಬ್ಬರ ಅಂಗಡಿ ಯಾ ಮನೆಬಾಗಲುಗಳಿಗೆ ಹೋಗಿ ಅವರು ಕೊಟ್ಟ ಹಣಕಾಸುಗಳನ್ನೆಲ್ಲಾ ಒಂದು ಡಬ್ಬಿಯಲ್ಲಿ ಶೇಕರಿಸಿದರು. ಈ ಬಗ್ಯೆ ಒಂದು ಸಾಯಂಕಾಲದ ಹೊತ್ತು ಸಾಲದೆ ಅದರ ಮರುದಿನದ ಮಧ್ಯಾಹ್ನದಲ್ಲಿಯೂ ಕಡೆಗೆ ಅದೂ ಸಾಕಾಗದೆ ಮೂರನೆಯ ದಿವಸದಲ್ಲಿಯೂ ಕೂಡಾ ಹೋಗಬೇಕಾಯಿತು. ಹುಡುಗರು ತೋರಿಸಿದ ಉತ್ಸಾಹವನ್ನಾಗಲಿ ಪಟ್ಟ ಶ್ರಮವನ್ನಾಗಲಿ ಹೇಳಿ ತೀರದು. ಅದೇ ರೀತಿ ಊರಿನ ಮನೆತನದವರೆಲ್ಲರೂ ಸಾಹುಕಾರರೂ ಕೂಡಾ ಅತ್ಯಂತ ಆದರವನ್ನು ತೋರ್ಪಡಿಸಿ ಶಾಲೆಯನ್ನೂ, ಮಕ್ಕಳನ್ನೂ ಆಶೀರ್ವದಿಸಿ ಮನಃಪೂರ್ವಕವಾಗಿ ಯಥಾನುಶಕ್ತಿ ಧನಸಹಾಯವನ್ನೂ ದಯಪಾಲಿಸಿದ್ದುದೇ ಅಲ್ಲದೆ, ಹಲವು ಕಡೆಗಳಲ್ಲಿ ಬಂದವರಿಗೆಲ್ಲಾ ಭಕ್ಷ್ಯಭೋಜ್ಯಾದಿಗಳನ್ನು ಕೂಡಾ ಕೊಟ್ಟು ಸತ್ಕರಿಸಿದರು. ಕಡೆಯ ದಿನವಾದ ಮೊನ್ನೆಯ ಆದಿತ್ಯವಾರದಲ್ಲಿ ಸಂಜೆಯ ವೇಳೆ ಮಕ್ಕಳ ಹಿತೇಚ್ಛುಗಳು ಕೆಲವರು ಮಕ್ಕಳನ್ನೂ ಉಪಾಧ್ಯಾಯರನ್ನೂ ಟೌನ್ ಹೋಲಿಗೆ ಕರೆಸಿ ಫಲಾಹಾರಾದಿಗಳಿಂದ ಉಪಚರಿಸಿ ಒಟ್ಟಾರೆ ಸಂಪಾದಿಸಿದ ಹಣವನ್ನು ಪರಿಗಣಿಸಿ ನೋಡಲಾಗಿ ಪುತ್ತೂರಿನಂತಹ ಬರೇ ಚಿಕ್ಕ ಮತ್ತು ಹೀನಸ್ಥಿತಿಯಲ್ಲಿರುವ ಊರಿನಲ್ಲಿ ಕೂಡಾ ೧೮೦ರಷ್ಟು ರೂಪಾಯಿಗಳು ವಸೂಲಾಗಿದ್ದುವೆಂದು ತೋರಿಬಂದಿತು. ಆ ಹಣವನ್ನು ವಿನಿಯೋಗಿಸುವ ಉಪಾಯಗಳ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟು ಅದನ್ನು ಸಂಪಾದಿಸಿ ತಂದುದಕ್ಕೆ ಮಕ್ಕಳಿಗೆ ಮತ್ತು ಉಪಾಧ್ಯಾಯರಿಗೂ ಅದನ್ನು ದಯಪಾಲಿಸಿದುದಕ್ಕೆ ಪಟ್ಟಣಿಗರಿಗೂ ಅಭಿವಂದಿಸಿ ಮಕ್ಕಳು ನಡೆಸಿದ ಆ ಮಹೋತ್ಸವದ ಕುರಿತು ಒಂದೆರಡು ಬುದ್ಧಿವಾದಗಳನ್ನು ಕೂಡಿದವರಲ್ಲೊಬ್ಬಿಬ್ಬರು ತಿಳಿಯ ಹೇಳಿದರು. ಈ ಬಗೆಯ ಶುಭಕಾರ್ಯದಿಂದ ಬಡ ವಿದ್ಯಾರ್ಥಿಗಳಿಗೆ ಬಹುತರದ ಸಹಾಯ್ಯವಾಗುವುದೆಂಬದರಲ್ಲಿ ಏನೇನೂ ಸಂದೇಹವಿಲ್ಲ.

ಮುಲಂಗಿ ಗಿಡ.

ಅಯ್ಯಾ,

ಈ ಸಮಯ ಮಂಗಳೂರಲ್ಲಿ ಮುಲಂಗಿ ಗೆಡ್ಡೆಯು ಎಲೆಗಳೊಡನೆ ಮಾರಲಿಕ್ಕೆ ಬರುತ್ತವೆ. ಹೆಚ್ಚು ಜನರು ಇವನ್ನು ಗಡ್ಡೆಯ ಬಗ್ಗಾಗಿ ಕೊಂಡುಕೊಳ್ಳುತ್ತಾರೆ. ಯಾಕಂದರೆ ಇದನ್ನು ತಿಂದರೆ ಮೂಲವ್ಯಾಧಿ ರೋಗಕ್ಕೆ ಸ್ವಲ್ಪ ಪ್ರಯೋಜನ ಸಿಗುತ್ತದಾಗಿ ಜನರು ಹೇಳುತ್ತಾರೆ. ಮುಂಬಯಿ ಇಲಾಖೆಯ ಪೈಕಿ ಮುಲಂಗಿ ಬೆಳಸುವ ಪ್ರಾಂತ್ಯಗಳಲ್ಲಿ ಈ ಮುಲಂಗಿಯ ಗಡ್ಡೆಯನ್ನು ಒಂದು ಅರ್ಧ ಇಂಚಾದರೂ ಎಲೆಗಳಿಗೆ ಬಿಟ್ಟು ಬಾಕಿ ಗಡ್ಡೆಯ ಅಂಶವನ್ನು ಕೊಯಿದು ಪಲ್ಯಕ್ಕೆ ಉಪಯೋಗಿಸಿ ಬಾಕಿ ಉಳಿದ ಗಿಡವನ್ನು ನೆಟ್ಟರೆ ಈ ಗಿಡಕ್ಕೆ ಜೀವ ಹುಟ್ಟಿ ಎಲೆ ಹೂವು ಬಂದು ಸಣ್ಣ ಕೋಡುಗಳು ಬರುತ್ತವೆ. ಇವು ಹಸರು ಮೆಣಸಿನಕಾಯಿಯಷ್ಟು ದೊಡ್ಡದಿರುತ್ತವೆ, ಅವು ಬೆಳದ ನಂತರ ಕೊಯಿದು ಹಚ್ಚಿ ತೊಗ್ರಿ ಬೇಳೆ, ಕಡಲೆ ಬೇಳೆಯೊಡನೆ ಪಲ್ಯಮಾಡಿದರೆ ಬಹು ಹಿತಕರ ಮಾತ್ರವಲ್ಲ/ಇದು ನಮ್ಮ ಊರಲ್ಲಿ ಹೊಸ ನಮೂನೆಯ ಕಾಯಿಪಲ್ಯವಾದೀತು. ನಮ್ಮ ಊರಲ್ಲಿ ಇದು ಯಾರೂ ಬೆಳಸಲಿಲ್ಲ. ಆ ಸಂಬಂಧ ನಿಮ್ಮ ಪತ್ರಕ್ಕೆ ಬರಕೊಂಡಿದ್ದೇನೆ.

ಬಿಜಾಪುರ.
ತಾ. 29—10—16.

ಎಲ್ಲೂರು ಸುಬ್ಬರಾವ್.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು.

S. C. No. 703/1916

ಮಂಜುನಾಥ ಶೇರಿಗಾರ—ಚನ್ನಪ್ಪನ ವೆಂಕಟ್ರಮಣ ಶೇರಿಗಾರನ ಮಗ—ಕುಂದಾಪುರ ಕಸಬಾ ಗ್ರಾಮದ ಕೋಡಿ } **ವಾದಿ.**

ದೇವಪ್ಪ ಉಳ್ಳುರ—ಫಣಿಯಪ್ಪ ಉಳ್ಳುರನ ಮಗ—ಬಡಾಕೆರೆ ಗ್ರಾಮ—**ಪ್ರತಿವಾದಿ.**

ಪ್ರತಿವಾದಿಯು ವಾದಿಗೆ ಬರಕೊಟ್ಟ ಕರಾರಿನ ರೂ. 89—11—0 ಬರಮಾಡಿಕೊಳ್ಳಲಿಕ್ಕೆ ಸದರಿ ವಾದಿಯು ದಾಕಲು ಮಾಡಿದ ಸದರಿ ನಂಬ್ರವು ತಾ. 20—11—16ಕ್ಕೆ ತನಿಕೆಗೆ ಇಟ್ಟಿದೆ.

ಕುಂದಾಪುರ.
ತಾ. 31-10-16.

N. Subbannaya,
Plader for plaintiff.

ಯೂರೋಪದ ಮಹಾ ಯುದ್ಧ.

ಬಾಲ್ಕಾನ್ ರಣರಂಗದ ಸ್ಥಿತಿಯು ಮಿತ್ರರಿಗೆ ಅನುಕೂಲವಾಗಿದೆಂದು ಕಳೆದ ಸಂಚಿಕೆಯಲ್ಲಿ ತಿಳಿಸಿದ್ದೆವು. ಆದರೆ ಈ ವಾರದಲ್ಲಿ ಆ ರಣರಂಗದಲ್ಲಿ ನಡೆದ ಸ್ಥಿತಿಗತಿಗಳನ್ನು ನೋಡುವದಾದರೆ ರುಮೇನಿಯ ರಣರಂಗದ ಸ್ಥಿತಿಯು ತುಸ ಭಯಾಸ್ಪದವಾಗಿದೆ ಎಂದು ಹೇಳಲು ಪ್ರತ್ಯವಾಯವಿಲ್ಲ. ಬಲ್ಗೇರಿಯನರೂ ಜರ್ಮನರೂ ಡೊಬ್ರುಡ್ಜದಲ್ಲಿ ಒಂದು ಮಹತ್ವಾದ ಜಯವನ್ನು ಪಡೆದು ಮಿತ್ರರ ಮತ್ತು ರುಮೇನಿಯನರ ಯುದ್ಧ ಸಾಧನೆಗೆ ಅನಾನುಕೂಲತೆಯನ್ನು ಕಲ್ಪಿಸಿದ್ದಾರೆ. ಜರ್ಮನರು ಸೆರ್ನಾವೋಡ—ಕೊನ್‌ಸ್ಟ್ಯಾನ್ಜ ಲ್ಯಾನುಗಳನ್ನು ತಮ್ಮ ಸ್ವಾಧೀನಮಾಡಿಕೊಂಡದ್ದೇ ಮಿತ್ರರ ಮತ್ತು ರುಮೇನಿಯನರ ಯುದ್ಧಸಾಧನೆಯ ಈ ಅನಾನುಕೂಲತೆಗೆ ಕಾರಣವಾದ ಹಾಗಾಯಿತು. ರುಮೇನಿಯರಿಗೆ ಬಲ್ಗೇರಿಯದೊಳಗೆ ನುಗ್ಗಬೇಕಾದರೆ ಡೊಬ್ರುಡ್ಜವೇ ಸುಲಭ ದಾರಿಯಾಗಿತ್ತು. ಡೊಬ್ರುಡ್ಜವು ಕಪ್ಪು ಸಮುದ್ರ ಮತ್ತು ಡೆನ್ಯೂಬ್ ನದಿಯ ಮಧ್ಯೆ ಇರುವ ಇಕ್ಕಟ್ಟಾದ ಒಂದು ಸ್ಥಳವಾಗಿದ್ದರೂ ಅಲ್ಲಿ ತಕ್ಕಷ್ಟು ಸೇನೆಯನ್ನು ತಂದೊಡ್ಡಬಹುದಾಗಿತ್ತು. ಅಲ್ಲಿ ಸರಿಯಾದ ಮಾರ್ಗಗಳೆಲ್ಲಾ ಇದೆ. ಆದುದರಿಂದಲೇ ರುಮೇನಿಯನರು ಬಲ್ಗೇರಿಯಕ್ಕೆ ನುಗ್ಗಲು ಉತ್ತರದಲ್ಲಿ ಡೊಬ್ರುಡ್ಜವನ್ನು ಆಯ್ದುಕೊಂಡರು. ಡೆನ್ಯೂಬ್ ನದಿಯ ಉದ್ದಕ್ಕೆಲ್ಲಾ ಸರ್ವಿಯ ಸರಹದ್ದಿನಿಂದ ಸಮುದ್ರದವರೆಗೆ ಒಂದೇ ಒಂದು ಸೇತುವೆ ಮಾತ್ರ ಇದೆ. ಆ ಸೇತುವೆಯು ಇರುವ ಸ್ಥಳ ಸೆರ್ನಾವೋಡ. ನದಿಯ ಉದ್ದಕ್ಕೆಲ್ಲಾ ದಾಟಬಹುದಾದ ಇತರ ದಾರಿಗಳು ಇದ್ದರೂ ಅವೆಲ್ಲಾ ತೋಪುಗಳಿಂದ ಬಲಕಾಯಿಸಿಕೊಂಡವುಗಳು. ಇಂಥಾ ದಾರಿಗಳನ್ನು ದಾಟುವದು ಸುಲಭವಲ್ಲ. ಒಂದು ವೇಳೆ ದಾಟಲೆತ್ನಿಸಿದರೂ ಈ ಕೆಲಸವು ಅಪಾಯಕರವಾಗಿದೆ. ಆದರೆ ಈವರೆಗೆ ಸೆರ್ನಾವೋಡ ರುಮೇನಿಯನರ ವಶ ಇದ್ದುದರಿಂದ ಅವರು ಡೆನ್ಯೂಬನ್ನು ದಾಟಿ ಡೊಬ್ರುಡ್ಜಕ್ಕೆ ಸುಲಭವಾಗಿ ನುಗ್ಗಬಹುದಿತ್ತು. ಆದರೆ ಈಗ ಈ ಸೆರ್ನಾವೋಡವು ಜರ್ಮನರ ಕೈಸೇರಿದ್ದರಿಂದ ಮಿತ್ರರ ಬಲವು ಬಾಲ್ಕಾನಿನಲ್ಲಿ ಸ್ವಲ್ಪ ಕುಂದಿದಹಾಗಾಯಿತು ಎಂತ ಹೇಳಬಹುದಾಗಿದೆ. ಒಂದುವೇಳೆ ರುಮೇನಿಯನರು ಸೆರ್ನಾವೋಡವನ್ನು ಶತ್ರುಗಳಿಂದ ಪುನಃ ಕಿತ್ತುಕೊಂಡರೂ ಈ ಸೇತುವೆಯನ್ನು ತಿರಿಗಿ ಕಟ್ಟುವದರೊಳಗೆ ಬಾಲ್ಕನ್ ಯುದ್ಧವೇ ಮುಗಿದುಹೋಗುವದು. ಜರ್ಮನರ ಜನರಲ್ ಮೆಕೆನ್‌ಸನ್ ಈ ಡೊಬ್ರುಡ್ಜ ರಣರಂಗದಲ್ಲಿ ಮುಂದರಿದದ್ದು ಜೀವದ ಆಶೆ ಇಲ್ಲದೆ ಎಂದು ಹೇಳಬೇಕು. ಯಾಕಂದರೆ ಜೆನರಲ್ ಮಕೆನ್‌ಸನನು ಈ ಕಾರ್ಯದ ಸೋತುಹೋಗುತ್ತಿದ್ದರೆ ಬಹಳ ಅಪಾಯಕರ ಸ್ಥಿತಿಯಲ್ಲಿ ಬೀಳುತ್ತಿದ್ದನು. ಆದರೆ ಅವನ ಧೈರ್ಯವು ಸಫಲವಾಗಿ ಸೆರ್ನಾವೋಡ—ಕೊನ್‌ಸ್ಟ್ಯಾನ್ಜವು ಅವನ ಕೈಸೇರಿ ಬಲಕಾಯಿಸಿಕೊಳ್ಳಲು ಅಪೂರ್ವವಾದ ನೆಲೆಗಳು ಅವನಿಗೆ ಸಿಕ್ಕಿದವು. ಡೊಬ್ರಿಟ್ಜನಿಂದ ಮೆಡ್ಜಿಡ್ಯಾ ವರೆಗಿನ ಲ್ಯಾನುಗಳು ಅವನ ವಶವಾದುದರಿಂದ ಬಲ್ಗೇರಿಯನರೊಡನೆ ಅವನಿಗೆ ಇನ್ನು ಸುಲಭವಾಗಿ ವ್ಯವಹಾರ ನಡಿಸಬಹುದಾಗಿದೆ. ಬಲ್ಗೇರಿಯನರಿಗೆ ಇನ್ನು ಉತ್ತರದಲ್ಲಿ ರುಮೇನಿಯನರ ಭಾದೆ ಇಲ್ಲದುದರಿಂದ ಬಲ್ಗೇರಿಯನರು ತಮ್ಮ ಮುಖ್ಯ ಸೇನೆಯನ್ನು ಸಲೋನಿಕದಲ್ಲಿರುವ ಮಿತ್ರರೊಡನೆ ಯುದ್ಧಮಾಡಲು ತಿರುಗಿಸಬಹುದಾಗಿದೆ. ಹೀಗೆ ಬಾಲ್ಕನ್ ರಣರಂಗದಲ್ಲೆಲ್ಲಾ ಘೋರ ಯುದ್ಧವು ನಡೆಯುವದು. ಮುಖ್ಯವಾಗಿ ಸಲೋನಿಕದಲ್ಲಿ ಭೀಕರ ಕಾಳಗಗಳು ನಡೆಯುವವು. ಅತ್ತಕಡೆ ರುಮೇನಿಯನರಿಗೆ ರುಶ್ಯನರ ಸಹಾಯ್ಯವು ಬಂದು ಕೂಡಲಿಕ್ಕಿರುವದರಿಂದ ಈ ಭೇಕಾಲದಲ್ಲಿ ರುಮೇನಿಯನರಿಗೆ ಬಲಕಾಯಿಸಿಕೊಳ್ಳಲು ಸಾಧ್ಯವಾಗುವದು. ಹೀಗೆ ಈ ರಣರಂಗದ ಸ್ಥಿತಿಯನ್ನು ವಿಚಾರಿಸುವದಾದರೆ ರುಮೇನಿಯನರಿಗೆ ಸರ್ವಿಯನರ ಗತಿಯು ಪ್ರಾಪ್ತವಾದೀತು ಎಂದು ಭಾವಿಸಲು ಕಾರಣವಿರುವದಿಲ್ಲ. ಆದರೆ ರುಮೇನಿಯವು ಈಗ ಒಂದು ವಿಧದಲ್ಲಿ ಅಲ್ಲದಿದ್ದರೆ ಮತ್ತೊಂದು ವಿಧಾನದಲ್ಲಿ ಬಲ್ಗೇರಿಯನರನ್ನು ಹತಬಡಿಯದ ಹೋದರೆ ಅದು ತನ್ನನ್ನು ಬಲಕಾಯಿಸಿಕೊಳ್ಳದೆ ನಿರ್ವಾಹವಿಲ್ಲ. ಹೀಗೆ ಆದರೆ ರುಮೇನಿಯವು ಯುದ್ಧಕ್ಕೆ ಸೇರಿದ ಉದ್ದೇಶವು ಮಾತ್ರ ನಿಷ್ಫಲವಾದಂತೆ ಆಗುವದು.

ಪಶ್ಚಿಮ ರಣರಂಗ.

ಈ ರಣರಂಗದ ಕದನಗಳು ಮಿತ್ರರ ಅನುಕೂಲವಾಗಿಯೇ ನಡೆಯುತ್ತಿದೆ. ಸೊಮ್ಮಿಯ ಉತ್ತರದಲ್ಲಿ ಮಿತ್ರರು ಮೊರ್ವಾಲ್ ಎಂಬಲ್ಲಿಯೂ ದಕ್ಷಿಣದಲ್ಲಿ ಚೌಲ್ನೆಸ್ ಅರಣ್ಯದ ಪ್ರಾಂತ್ಯದಲ್ಲಿಯೂ ಯುದ್ಧ ಮಾಡುತ್ತಿದ್ದಾರೆ. ಸೈಲಿ—ಸೆಲ್ಲಿಸೆಲಿನೆಲ್ಲಿ ಕೆಲವು ಶತ್ರು ಸೇನಿಕರು ಮಿತ್ರರ ಸೆರೆಬಿದ್ದಿರುವರು. ಜರ್ಮನರ ವಾಯುನಾವೆಗಳು ಸಾಮ್ಸಿಯ ಮೇಲೆ ಬೊಂಬುಗಳನ್ನು ಒಗೆದಿರುವವು. ಆದರೆ ಇದರಿಂದ ಹೆಚ್ಚಿನ ಅಪಾಯವಾಗಲಿಲ್ಲ. ಬೈಟೆಸ್ ಮತ್ತು ಎಟ್ಲೆನ್ ಕೋರ್ಟಿನಲ್ಲಿ ತೋಪುಕಾಳಗಗಳು ನಡೆಯುತ್ತಿವೆ. ಶತ್ರುಗಳ ಮೂರು ವಾಯುನಾವೆಗಳನ್ನು ವೆರ್ಡನಿನಲ್ಲಿ ಮಿತ್ರರು ಕೆಳದೊಬ್ಬಿರುವರು.

ವೆರ್ಡನಿನಲ್ಲಿ ಫ್ರೆಂಚರು ನುಗ್ಗಿಹೋಗಿ ಶತ್ರುಗಳ ಮೇಲೆ ಕದನಮಾಡ ಪ್ರಾರಂಭಿಸಿದ್ದಾರೆ. ಫ್ರೆಂಚರು ಫಿರಂಗಿತೋಪುಗಳ ಯತೇಷ್ಟ ಸನ್ನಾಹಗಳನ್ನು ಮಾಡಿಕೊಂಡು ಮ್ಯೂಸ್ ನದಿಯ ಬಲಕಡೆಯಲ್ಲಿ ಶತ್ರುಗಳ ಮೇಲೆಬಿದ್ದು ಒಂದು ಗ್ರಾಮವನ್ನು ಡೊವಾಮೊಂಟ ಕೋಟೆಯನ್ನೂ ಶತ್ರುಗಳಿಂದ ಕಿತ್ತುಕೊಂಡಿರುತ್ತಾರೆ. ಎಡದಡದಲ್ಲಿ ಥಿಯಾನೋಂಟಿನಲ್ಲಿ ಫ್ರೆಂಚರು ಮುಂದರಿದಿರುತ್ತಾರೆ. ಶತ್ರುಗಳ ಬಹಳ ಮಂದಿ ಸೇನಿಕರು ಸೆರೆಬಿದ್ದಿರುತ್ತಾರೆ. ಈವರೆಗೆ ೩೫೦೦ ಸೇನಿಕರನ್ನು ಲೆಕ್ಕಮಾಡಿರುತ್ತಾರೆ. ಈ ಪೈಕಿ ೧೦೦ ಆಫೀಸರರು. ಫ್ರೆಂಚರ ಕೈಸೇರಿದ ಶತ್ರುಗಳ ಯಥೇಷ್ಟ ಯುದ್ಧಸಾಮಾಗ್ರಿಗಳ ಲೆಕ್ಕವು ಇನ್ನೂ ಆಗಲಿಲ್ಲ. ಶತ್ರುಗಳು ಪುನಃ ಫ್ರೆಂಚರ ಮೇಲೆ ಬಿದ್ದು ಅವರು ಪಡಕೊಂಡ ಸ್ಥಳಗಳನ್ನು ಹಿಂದಕ್ಕೆ ಪಡೆಯಲು ನೋಡಿದರು. ಆದರೆ ಸಾರ್ಥಕಹೊಂದಲಿಲ್ಲ. ಡೊವಾಮೊಂಟ್ ಕೋಟೆಯೆಲ್ಲಾ ಫ್ರೆಂಚರ ಸ್ವಾಧೀನವಾಯಿತು. ಕೋಟೆಯ ಕಮಾಂಡರನು ಫ್ರೆಂಚರ ಸೆರೆಬಿದ್ದಿರುವನು. ಶತ್ರುಗಳು ಡೊವಾಮೊಂಟ್ ಮತ್ತು ಹಡ್ರೊಮೊಂಟ್ ಪ್ರಾಂತ್ಯದಲ್ಲಿ ತಿರಿಗಿ ಫ್ರೆಂಚರ ಮೇಲೆ ಮೂರಾವರ್ತಿ ಹಲ್ಲೆಮಾಡಿದರು. ಒಂದುಸಾರಿಯೂ ಜರ್ಮನರಿಗೆ ಜಯವಾಗಲಿಲ್ಲ. ಫ್ರೆಂಚರು ತಮ್ಮ ಸ್ಥಾನಗಳನ್ನು ಕಾಪಾಡಿಕೊಂಡಿರುತ್ತಾರೆ. ಸುಮಾರು ೪೫೦೦ಕ್ಕೆ ಮಿಕ್ಕಿದ ಶತ್ರುಸೇನಿಕರು ಸೆರೆಬಿದ್ದಿರುತ್ತಾರೆ. ಶತ್ರುಗಳು ವಾಕ್ಸ್ ಮತ್ತು ಡೊವಾಮೊಂಟಿನ ಮೇಲೆ ಎಡೆಬಿಡದೆ ಗುಂಡು ಹಾರಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಕೈಸರರು ವೆರ್ಡನಿನ ಈ ಕಾಳಗ ನಡೆಯುವಾಗ ಇದ್ದರೆಂತ ವಾರ್ತೆ ಇದೆ. ವಾಕ್ಸ್‌ಕೋಟೆಯ ದಕ್ಷಿಣದಲ್ಲಿ ಫ್ರೆಂಚರು ಮುಂದರಿದು ೧೦೦ ಸೇನಿಕರನ್ನು ಸೆರೆಹಿಡಿದರು. ಫ್ರೆಂಚರ ೩ ಡಿವಿಜನ್ ಸೇನೆಗಳು ಈ ವೆರ್ಡನ್ ಕಾಳಗದಲ್ಲಿ ಸೇರಿದ್ದವು. ಫ್ರೆಂಚರಿಗೆ ಆದ ಸೇನಿಕರ ನಷ್ಟವು ಸುಮಾರು ೨೦೦೦ ಆಗಬಹುದು.

ಬ್ರಿಟಿಷ ರಣರಂಗದಲ್ಲಿಯೂ ಬ್ರಿಟಿಷರು ನುಗ್ಗಿಹೋಗಿ ಜರ್ಮನರಿಂದ ಒಂದರ ನಂತರ ಮತ್ತೊಂದು ಸ್ಥಳವನ್ನು ಕಿತ್ತುಕೊಂಡು ಬಲಕಾಯಿಸುತ್ತಿದ್ದಾರೆ.

ಪೂರ್ವ ರಣರಂಗ.

ಕಾರ್ಪಥೇನಿಯನ ಅಡವಿಗಳಲ್ಲಿ ಶತ್ರುಗಳ ೨ಕ್ಕಿಂತಲೂ ಹೆಚ್ಚಿನ ಬೆಟಲಿಯನ್ ಸೇನಾಂಗಗಳೂ ಆಸ್ಟ್ರಿಯಾನರ ಒಂದು ಡಿವಿಜನ್ ಸೇನೆಯೂ ಕೂಡಿ ಕಿರಲಿಬಾಬ ಎಂಬಲ್ಲಿಗೆ ಪೂರ್ವದಲ್ಲಿರುವ ಒಂದು ಶಿಖರವನ್ನು ತೆಗೆದುಕೊಳ್ಳುವ ಉದ್ದೇಶದಿಂದ ಭೀಕರ ಕಾಳಗ ಮಾಡಿದರು. ಆದರೆ ರುಶ್ಯನರು ಅವರನ್ನು ಸೋಲಿಸಿ ಹಿಂದಕ್ಕೆ ಅಟ್ಟಿದರು. ಶತ್ರುಗಳ ಒಂದು ಸೇನಾಂಗವೇ ನಿರ್ನಾಮವಾಗಿರುವದು. ೪೫೦ ಸೇನಿಕರಿದ್ದ ಮತ್ತೊಂದು ಸೇನಾಂಗದಲ್ಲಿ ೧೭೦ ಮಂದಿ ಮಾತ್ರ ಉಳಿದಿರುವರು.

ಬಾಲ್ಕಾನ್.

ಡೊಬ್ರುಡ್ಜದಲ್ಲಿ ಕಠಿಣಕಾಳಗ ನಡೆಯುತ್ತಿದೆ. ರುಮೇನಿಯಾನರ ಸೇನೆಯು ಸೆರ್ನಾವೋಡ—ಕೊನ್‌ಸ್ಟ್ಯಾನ್ಜ ರೈಲ್ವೆಯ ದಕ್ಷಿಣಕ್ಕೆ ಸಂದಿರುವರು ಎಂತ ರುಮೇನಿಯಾನರು ಪ್ರಕಟಿಸಿರುತ್ತಾರೆ.

ಟ್ರಾನ್ಸಿಲವಾನಿಯ ಪ್ರಾಂತ್ಯದಲ್ಲಿ ಶತ್ರುಗಳು ರುಮೇನಿಯನರನ್ನು ಉಜುಲ್‌ತಗ್ಗಿನಿಂದ ಓಡಿಸಲು ಪ್ರಯತ್ನಿಸಿದರು. ಆದರೆ ಸಫಲಹೊಂದಲಿಲ್ಲ. ಪ್ರೆಡೀಲ್ ಎಂಬಲ್ಲಿ ರುಮೇನಿಯನರು ಶತ್ರುಗಳನ್ನು ಓಡಿಸಿರುತ್ತಾರೆ. ಒಲ್ಟಾವ ಪ್ರಾಂತ್ಯದಲ್ಲಿ ಮೇಲ್ಗಾಯಿದ ಶತ್ರುಗಳನ್ನು ರುಮೇನಿಯಾನರು ಹಿಂದಕ್ಕಟ್ಟಿರುತ್ತಾರೆ.

ಶತ್ರುಗಳು ಕೊನ್‌ಸ್ಟ್ಯಾನ್ಜವನ್ನು ಸ್ವಾಧೀನಮಾಡಿಕೊಂಡದ್ದರಿಂದ ರುಮೇನಿಯನರು ಕರ್‌ಮುರಾಟ್ ಎಂಬಲ್ಲಿಗೆ ಸರಿದಿರುವರು. ಸೆರ್ನಾವೋಡದಲ್ಲಿದ್ದ ರುಮೇನಿಯನರು ಉತ್ತರಕ್ಕೆ ಸರಿದಿರುತ್ತಾರೆ. ಸೆರ್ನಾವೋಡದ ಸೇತುವೆಯನ್ನು ರುಮೇನಿಯನರು ಹಾರಿಸಿಬಿಟ್ಟಿರುತ್ತಾರೆ. ರುಶ್ಯನರೂ ರುಮೇನಿಯಾನರೂ ಸೆರ್ನಾವೋಡಕ್ಕೆ ೨೫ ಮೈಲು ದೂರದಲ್ಲಿರುವ ಹಿರ್ಸೋವ ಎಂಬಲ್ಲಿಗೆ ಸರಿದಿರುವರು. ವಲ್ಕಾನ್ ಕಣಿವೆಯ ಬಳಿ ಭೀಕರಕಾಳಗ ನಡಿಯುತ್ತಿದೆ.

ರುಶ್ಯ—ಟರ್ಕಿ.

ಕಾಕಾಕಸಿನಲ್ಲಿ ರುಶ್ಯನರು ಹಮದಾನಿಗೆ ಈಶಾನ್ಯದಲ್ಲಿರುವ ಬಿಡ್ಯಾರ್ ಎಂಬ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ.

ಇಟಲಿ.

ಈ ರಣರಂಗದಿಂದ ಈ ವಾರದಲ್ಲಿ ವಿಶೇಷ ವರ್ತಮಾನಗಳು ಬಂದಿರುವದಿಲ್ಲ.

ಜಲಂತರ್ಗಾಮಿ ನಾವೆಗಳು.

ಕಳೆದ ವಾರ ಜರ್ಮನರು ಬ್ರಿಟಿಷರಿಗೆ, ಡೇನಿಸರಿಗೆ, ಸ್ಪಾನಿಯರಿಗೆ, ನೋರ್ವೆಯವರಿಗೆ ಮತ್ತು ಡಚ್ಚರಿಗೆ ಸೇರಿದ ೩೦—೪೦ಕ್ಕೆ ಮಿಕ್ಕಿದ ವ್ಯಾಪಾರದ ಹಡಗಗಳನ್ನು ಮುಳುಗಿಸಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಬಂಕೀಪುರದಲ್ಲಿ ಪ್ರಕಟವಾಗುತ್ತಿದ್ದ "ಎಕ್ಸ್‌ಪ್ರೆಸ್" ಎಂಬ ದೈನಿಕ ಪತ್ರಿಕೆಯಿಂದ ಪ್ರೆಸ್ ಆಕ್ಟಿನ ಪ್ರಕಾರ ಯಾಕೆ ಭದ್ರತೆ ಕೇಳಕೂಡದೆಂಬದಾಗಿ ಸದರಿ ಪತ್ರಿಕೆಯ ಮ್ಯಾನೇಜರಿಗೆ ಸ್ಥಳಿಕ ಸರಕಾರದವರಿಂದ ನೋಟೀಸು ಕೊಡೋಣಾಗಿದೆಂತ ವಾರ್ತೆ ಬಂದಿರುತ್ತದೆ.

ಕಲ್ಕತ್ತೆಯಲ್ಲಿ ಇದೇ ಕಳೆದ ಒಕ್ಟೋಬರ ತಾ. ೨೫ರಲ್ಲು ಒಂದು ಹೊಸ ವಿಧಾನದ ದರೋಡೆಯು ನಡೆದಿರುತ್ತದೆ. ನರಸಿಂಗರೋಯಿ ಎಂಬವನು ರಾತ್ರಿ ಹಣ ಎಣಿಕೆಮಾಡುತ್ತಿರುವಾಗ ಯೂರೋಪಿಯನರಂತೆ ತೋರುತ್ತಿದ್ದ ಖಾಕಿ ಉಡುಪು ಹಾಕಿದ್ದ ಇಬ್ಬರು ಕೋಣೆಯೊಳಗೆ ನುಗ್ಗಿ ಕಿಶೆಯಿಂದ ರಿವೋಲ್ವರ್ ತೆಗೆದು ತೋರಿಸಿ ಅವನಲ್ಲಿದ್ದ ಹಣವು ಜುಗಾರಿ ಆಟದ ಹಣವೆಂದೂ ಅದನ್ನು ತಮಗೆ ಕೊಡಬೇಕೆಂದೂ ಹೆದರಿಸಿ, ಹಣವನ್ನು ತೆಗೆದುಕೊಂಡು ಅವನನ್ನು ಕತ್ತಲೆಯಲ್ಲಿ ಸ್ವಲ್ಪ ದೂರಕ್ಕೆ ಕರಕೊಂಡು ಹೋಗಿ ಅವನಿಗೆ ಒಂದು ಒದೆ ಕೊಟ್ಟು ಮಾಯವಾದರು. ಯೂರೋಪಿಯನರಂತೆ ತೋರುತ್ತಿದ್ದ ಆ ದರೋಡೆಗಾರರು ಯೂರೋಪಿಯನ್ ಉಡುಪು ಹಾಕಿದ ಬಂಗಾಳಿ ಅರಾಜಕ ಮಂಡಳಿಯವರಾಗಿರಬೇಕು ಎಂತ "ಇಂಗ್ಲಿಷ್ ಮೇನ್" ಎಂಬ ಪತ್ರಿಕೆಯು ಹೇಳುತ್ತದೆ.

೨೦ ಲಕ್ಷ ರೂಪಾಯಿಯ ಮೂಲಧನದಿಂದ ಮುಂಬಾಯಿಯಲ್ಲಿ ಒಂದು ಹೊಸ ಗಿರಣಿಯು ರಿಜಿಸ್ಟರ್ ಆಗಿರುತ್ತದೆ. ಮೆಸ್ಸರ್ಸ್ ಕರಿಂಭೋಯಿ ಇಬ್ರಾಹಿಮ್ ಮತ್ತು ಕಂಪೆನಿಯವರು ಈ ಗಿರಣಿಯ ಏಜಂಟರಾಗಿರುವರು. ಈ ಕಾರ್ಖಾನೆಗೆ "ಪ್ರಿಮಿಯರ್ ಮಿಲ್ಸ್ ಲಿಮಿಟೆಡ್" ಎಂಬ ಹೆಸರು ಕೊಡೋಣಾಗಿದೆ.

ಮೆಮನ್‌ಸಿಂಘ್‌ನಲ್ಲಿ ಆಯುಧಪಾಣಿಗಳಾದ ಕೆಲವು ದರೋಡೆಗಾರರು ಒಬ್ಬ ಜಮೀನ್ದಾರನ ಮನೆಗೆ ನುಗ್ಗಿ ಒಬ್ಬನನ್ನು ಕೊಂದು ಕೆಲವರನ್ನು ಗಾಯಪಡಿಸಿ ಸುಮಾರು ೫೦,೦೦೦ ರೂಪಾಯಿಗಳ ಕ್ರಯ ಬಾಳುವ ಒಡವೆಗಳನ್ನು ಸುಲಿಗೆಮಾಡಿರುವರು.

ಹಿಂದೂಸ್ಥಾನದ ಕೈಗಾರಿಕೆಯ ಸ್ಥಿತಿಗತಿಯನ್ನು ವಿಚಾರಿಸುವರೆ ನೇಮಿಸಲ್ಪಟ್ಟ ಕಮಿಷನಿನವರು ಈಗ ತಾನೇ ದಿಲ್ಲಿಯಲ್ಲಿ ವಿಚಾರ ನಡಿಸುತ್ತಲಿರುವರು.

ಅಲ್ಲಹಾಬಾದಿಗೆ ಸೇರಿದ ಮುರದಾಬಾದಿನಲ್ಲಿ ಠಾಕೂರವಾರದ ಟೌನ್ ಶಾಲೆಯ ಹೆಡ್‌ಮಾಸ್ತರನಿಗೆ ಅಲ್ಲಿಯ ಸೆಶ್ಶನ್ ಜಡ್ಜರು ೬ ತಿಂಗಳ ಸಜಾ ಮತ್ತು ೨೦೦ ರೂಪಾಯಿ ಜುಲ್ಮಾನೆ ವಿಧಿಸಿರುವರು. ಹೆಡ್‌ಮಾಸ್ತರನು ತನ್ನ ಶಾಲೆಯ ಹುಡುಗನೊಬ್ಬನಿಗೆ ಚೆನ್ನಾಗಿ ಹೊಡೆದನು. ಈ

ಪೆಟ್ಟಿನಿಂದ ಆ ಹುಡುಗನು ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿ ಡಾಕ್ಟರರ ಆರೈಕೆಯಲ್ಲಿದ್ದನು. ಹುಡುಗನು ಬದುಕಿಕೊಳ್ಳುವದು ಅಸಾಧ್ಯವೆಂದು ಹೆಡ್‌ಮಾಸ್ತರನಿಗೆ ತಿಳಿದಕೂಡಲೇ ಸದರಿ ಆಸ್ಪತ್ರೆಯ ಸಬ್ ಅಸಿಸ್ಟಾಂಟ ಸರ್ಜನನೊಡನೆ ಪಿತೂರಿ ನಡಿಸಿ ಹುಡುಗನಿಗೆ ಸಬ್ ಅಸಿಸ್ಟಾಂಟ ಸರ್ಜನರು ಅಫೀಮು ಕೊಡುವಹಾಗೆ ಮಾಡಿದನು. ಮರುದಿನ ಹುಡುಗನು ಸತ್ತುಹೋದನು. ಪೋಲಿಸಿನವರು ವಿಚಾರಣೆಯಿಂದ ಹೆಡ್‌ಮಾಸ್ತರನನ್ನೂ ಸಬ್ ಅಸಿಸ್ಟಾಂಟ ಸರ್ಜನನನ್ನೂ ವಿಚಾರಣೆಗೆ ಗುರಿಮಾಡಿಸಿದರು. ವೈದ್ಯ ಪರೀಕ್ಷೆಯಲ್ಲಿ ಹುಡುಗನು ಪೆಟ್ಟಿನಿಂದಲೂ ವಿಷ ಪ್ರಯೋಗದಿಂದಲೂ ಸತ್ತುಹೋದನೆಂತ ತಿಳಿದುಬಂತು. ಈ ಮೊಕದ್ದಮೆಯ ವಿಚಾರಣೆ ನಡೆದು ಜಡ್ಜರು ಸಬ್ ಅಸಿಸ್ಟಾಂಟ ಸರ್ಜನರನ್ನು ಖುಲಾಸು ಪಡಿಸಿ, ಹೆಡ್‌ಮಾಸ್ತರನಿಗೆ ಮೇಲೆ ಹೇಳಿದ ಶಿಕ್ಷೆಯನ್ನು ವಿಧಿಸಿದರು.

ಒಕ್ಟೋಬರ ತಾ. ೨೧ಕ್ಕೆ ಅಂತ್ಯವಾಗುವ ವಾರದಲಿ ಹಿಂದೂಸ್ಥಾನದಲ್ಲೆಲ್ಲಾ ೭೫೮೦ ಮಂದಿಗೆ ಪ್ಲೇಗಬೇನೆಯು ಸೊಂಕಿ ೫೭೮೮ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೨೬೭೪, ಮದ್ರಾಸ್ ೨೪೬೭, ಬಿಹಾರ್ ೬೬, ಸಂಯುಕ್ತ ಸಂಸ್ಥಾನ ೮೪, ಪಂಜಾಬು ೬೯, ಬರ್ಮ ೩೮, ಮಧ್ಯ ಸಂಸ್ಥಾನ ೧೦೧೩, ಮೈಸೂರು ೪೨೪, ಹೈದರಾಬಾದ್ ೮೩, ಮಧ್ಯ ಹಿಂದೂಸ್ಥಾನ ೧೦೭ ಮರಣಗಳಾಗಿರುವವು.

ದೀಪಾವಳಿ ರಾತ್ರಿ ಕರಾಚಿ ಪಟ್ಟಣದ ಭಾರೀ ವ್ಯಾಪಾರ ನಡೆಯುವ ಪೇಟೆಯಲ್ಲಿ ಬೆಂಕಿ ಉಂಟಾಗಿ ಪ್ರಾಮುಖ್ಯ ವಸ್ತ್ರದ ಅಂಗಡಿಗಳು ಸುಟ್ಟು ಸುಮಾರು ೭ ಲಕ್ಷ ರೂಪಾಯಿಗಳ ನಷ್ಟವಾಗಿರುತ್ತದೆ.

ದಕ್ಷಿಣ ಹಿಂದೂಸ್ಥಾನ.

ಸೀಲೋನಿನಲ್ಲಿರುವ ಹಿಂದೀ ಕೂಲಿಯಾಳುಗಳ ಸ್ಥಿತಿಗತಿಯನ್ನು ವಿಚಾರಿಸುವ ಬಗ್ಗೆ ಮೆ। ಎನ್. ಇ. ಮಜೋರಿಬೆಂಕ್ಸ್‌ರವರೂ ಬಹುಮಾನಪಟ್ಟ ಅಹಮ್ಮದ್ ತಂಬಿ ಮರಕಯರರೂ ನೇಮಿಸಲ್ಪಟ್ಟಿರುತ್ತಾರೆಂತ ತಿಳಿದು ಬರುತ್ತದೆ.

ಸೀಲೋನಿನಲ್ಲಿ ಕಳೆದ ವರ್ಷ ಆದ ದಾಂಧಲೆಯಲ್ಲಿ ಕೆಲವರನ್ನು ಗುಂಡುಹೊಡೆದು ಕೊಂದುಬಿಟ್ಟಿದ್ದರು. ಈ ಸಂಬಂಧ ತಕ್ಕ ತನಿಕಿ ನಡಿಸುವರೆ ಸೀಲೋನಿನ ಗವರ್ನರರವರು ಒಂದು ಕಮಿಷನ್ ನೇಮಿಸಿರುತ್ತಾರೆ.

ಈ ಕರಾವಳಿಯಲ್ಲಿ ಶತ್ರುಪಕ್ಷದವರಿಗೆ ಸೇರಿದ ಎಲ್ಲಾ ಕಾರ್ಖಾನೆಗಳನ್ನು ಮಾರಿಬಿಡುವರೆ ಸರಕಾರದವರು ಹುಕುಂ ಮಾಡಿರುವರೆಂತಲೂ ಬಲ್ಮಾಕೋಟ್‌ನಲ್ಲಿರುವ ಹಂಚುಕಾರ್ಖಾನೆಯು ಬೇಗನೇ ಮಾರಲ್ಪಡುವದೆಂದೂ ತಿಳಿದು ಬಂದದೆ. ಈ ಕಾರ್ಖಾನೆಯಲ್ಲಿ ಕ್ರೈಸ್ತರೂ ಕ್ರೈಸ್ತರಲ್ಲದವರೂ ಒಟ್ಟಿಗೆ ಸುಮಾರು ೩೦೦ ಮಂದಿ ಕೆಲಸ ಮಾಡುತ್ತಿದ್ದಾರೆ. ಹೀಗೆಯೇ ಪಶ್ಚಿಮ ಕರಾವಳಿಯಲ್ಲಿರುವ ಶತ್ರುಗಳಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಸರಕಾರದವರು ಮಾರತಕ್ಕವರಿದ್ದಾರೆ. ಈ ಕರಾವಳಿಯಲ್ಲಿ ವೀವಿಂಗ್ ಮತ್ತು ಟೈಲರಿಂಗ್ ಕಾರ್ಖಾನೆಗಳಲ್ಲದೆ ಮಲಬಾರು ಮತ್ತು ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಇತರ ಕಸಬುದಾರಿಕೆಯ ಇಂಥಾ ೬ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳಲ್ಲಿ ಕಡಿಮೆಯೆಂದರೆ ೪೦೦೦ ಜನರು ಕೆಲಸಮಾಡುತ್ತಿದ್ದಾರೆ. ಇವರಲ್ಲಿ ೩೦೦೦ ಮಂದಿ ಬಾಸೆಲ್ ಮಿಶ್ಯನಿಗೆ ಸೇರಿದ ಹಿಂದೀ ಕ್ರೈಸ್ತರು ಎಂತ "ಹಿಂದೂ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಳೆದ ಶನಿವಾರ ನೆಲ್ಲೂರು ಡಿಸ್ಟ್ರಿಕ್ಟ್ ಕನ್ಫರೆನ್ಸ್ ಮ। ರಾ। ಕೆ. ವೆಂಕಟರೆಡ್ಡಿ ನ್ಯಾಡುರವರ ಅಧ್ಯಕ್ಷತೆಯಲ್ಲಿ ಕೂಡಿ ಬಂದಿರುತ್ತದೆ. ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ಮ। ರಾ। ಎ. ನರಸಿಂಗರಾಯರ ಭಾಷಣವೂ ಅಧ್ಯಕ್ಷರ ಭಾಷಣವೂ ಇಡೀ ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ಹಲವು ಮಹತ್ವಾದ ವಿಷಯಗಳಿಂದ ಕೂಡಿದ್ದವು. ಅಧ್ಯಕ್ಷರು ಭಾಷಣದಲ್ಲಿ ಈ ಮಹಾ ಯುದ್ಧದ ಸಮಯ ಹಿಂದೂಸ್ಥಾನದವರು ಸಾಮ್ರಾಜ್ಯ ಸರಕಾರಕ್ಕೆ ಮಾಡಿದ ಜನ ಸಹಾಯವೂ ಧನ ಸಹಾಯವೂ ಇತರ ಬ್ರಿಟಿಷ ವಸಾಹತಿಗಳಿಗಿಂತ ಹೆಚ್ಚಾಗಿದೆಂಬದನ್ನು ಸಭಿಕರಿಗೆ ತಿಳಿಯಹೇಳಿದರು. ಶ್ರೇಷ್ಠ ನ್ಯಾಯವಿಧಾಯಕ ಸಭೆಯ ನೊನ್ ಆಫೀಸಿಯಲ್ ಮೆಂಬರರು ಸ್ಟೇಟ್ ಸೆಕ್ರೆಟರಿಗಳಿಗೆ ಕಳುಹಿಸಿಕೊಟ್ಟ ಮಸೂದೆಗಳಿಗನುಸಾರವಾಗಿ ಹಿಂದೀ ಜನರ ಸ್ವರಾಜ್ಯ ಸಂಬಂಧವಾದ ಆಕಾಂಕ್ಷೆಯು ಇರಬೇಕೆಂಬದನ್ನೂ ಬರುವ ರಾಷ್ಟ್ರೀಯ ಸಭೆಯು ಮತ್ತು ಮುಸ್ಲಿಮ್ ಲೀಗಿನ ಮಸೂದೆಗಳು ಇದೇ ಮೇಲ್ಪಂಕ್ತಿಯನ್ನನುಸರಿಸಿರಬೇಕೆಂಬದನ್ನೂ ಅಧ್ಯಕ್ಷರು ಭಾಷಣದಲ್ಲಿ ಸೂಚಿಸಿರುತ್ತಾರೆ. ಆಂಧ್ರ ಸಂಸ್ಥಾನಗಳನ್ನು ಒಟ್ಟಿಕೂಡಿಸಿ ಪ್ರತ್ಯೇಕ ಆಂಧ್ರ ಯೂನಿವರ್ಸಿಟಿಯೊಂದನ್ನು ಸ್ಥಾಪಿಸಿ ದೇಶಭಾಷೆಗೆ ಉತ್ತೇಜನ ಕೊಡಬೇಕೆಂಬ ಸಂಗತಿಯು ಅಧ್ಯಕ್ಷರ ಭಾಷಣದ ಮಹತ್ವಾದ ವಿಷಯವಾಗಿತ್ತು.

ದಕ್ಷಿಣ ಹಿಂದೂಸ್ಥಾನದ ಮುಸಲ್ಮಾನರ ಶಿಕ್ಷಣ ಪರಿಷತ್ತು ಕಳೆದ ಶನಿವಾರ ವನಿಯಂಬಾಡಿಯಲ್ಲಿ ಕೂಡಿ ಬಂದಿರುತ್ತದೆ. ನೈಜಾಮ್ ಸರಕಾರದ ಸೆಕ್ರೆಟರಿಯಾಗಿರುವ ಮೆ। ಹೈದಾರಿಯವರು ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಭಾಷಣದಲ್ಲಿ ಹಿಂದೂಸ್ಥಾನದ ಶಿಕ್ಷಣ ಕ್ರಮದಲ್ಲಿರುವ ಅನೇಕ ಕುಂದುಕೊರತೆಗಳನ್ನು ತೋರಿಸಿಕೊಟ್ಟಿರುತ್ತಾರೆ. ದೇಶಭಾಷೆಗೆ ಉತ್ತೇಜನ ಕೊಡಬೇಕೆಂದೂ ಎಲ್ಲಾ ಶಾಲೆಗಳಲ್ಲಿ ದೇಶಭಾಷೆಗೆ ಪ್ರಥಮಸ್ಥಾನವನ್ನು ಕೊಡಬೇಕೆಂಬೂ ಅಧ್ಯಕ್ಷರು ತನ್ನ ಭಾಷಣದಲ್ಲಿ ಸೂಚಿಸಿರುತ್ತಾರೆ. ಮದ್ರಾಸ್ ಸಂಸ್ಥಾನದಲ್ಲಿ ಪ್ರಾಥಮಿಕ, ಸೆಕಂಡರಿ, ಯುನಿವರ್ಸಿಟಿ ಶಿಕ್ಷಣ ಪಡೆದಿರುವ ಮುಹಮ್ಮದೀಯರ ಮತ್ತು ಹಿಂದೂಗಳ ಸಂಖ್ಯೆಯನ್ನು ಅಧ್ಯಕ್ಷರು ಭಾಷಣದಲ್ಲಿ ಸರಿಹೋಲಿಸಿ ಮುಹಮ್ಮದೀಯರು ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಮನಸ್ಸು ಕೊಡುವ ಹಾಗೆ ಕೂಡಿಬಂದ ಸಭಿಕರನ್ನು ವಿಜ್ಞಾಪಿಸಿಕೊಂಡಿರುತ್ತಾರೆ.

ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿಯಲ್ಲಿ ಪ್ರೊಫೆಸರರಾಗಿದ್ದ ಮ। ರಾ। ಎ. ಸುಬ್ರಮಣ್ಯ ಅಯ್ಯರರವರು ಕಳೆದ ವಾರ ಮದ್ರಾಸಿನಲ್ಲಿ ಕಾಲವಾದರು. ಇವರು ೧೮೬೯ನೇ ಇಸವಿಯಲ್ಲಿ ಪ್ರೆಸಿಡೆನ್ಸಿ ಕಾಲೇಜಿಯ ಅಸಿಸ್ಟಾಂಟ ಮಾಸ್ತರರಾಗಿ ಕೆಲಸ ಪ್ರಾರಂಭಿಸಿದ್ದರು. ಅನಂತರ ವಿದ್ಯಾ ಇಲಾಖೆಯಲ್ಲಿ ಆಯಾ ಕೆಲಸಗಳನ್ನು ಮಾಡಿ ೧೮೮೦ನೇ ಇಸವಿಯಲ್ಲಿ ಕಾಲೇಜಿಯ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ಕೆಲವು ವರ್ಷ ಯುನಿವರ್ಸಿಟಿ ಪರೀಕ್ಷಕರಾಗಿಯೂ ಇದ್ದುದಲ್ಲದೆ ೧೮೮೪ನೇ ಇಸವಿಯಲ್ಲಿ ಯುನಿವರ್ಸಿಟಿ ಫೆಲ್ಲೋ ಆಗಿ ನೇಮಿಸಲ್ಪಟ್ಟು ಸೆನೇಟ್ ಸಭೆಯಲ್ಲಿ ಶಿಕ್ಷಣ ಸಂಬಂಧವಾದ ಅನೇಕ ಬದಲಾವಣೆಗಳನ್ನು ಮಾಡಲು ಬಹಳ ಪ್ರೇರಿಸಿದ್ದರು.

ದಕ್ಷಿಣ ಕನ್ನಡ.

WANTED.

A SECOND CLERK
FOR THE
South Ganara Central Co-operative Bank, Ltd;
Puttur, South Canara.

Monthly pay Rs. 10 rising to Rs. 15.

Only candidates with a good working knowledge of English and Canarese need apply.

Applications should contain age and educational qualifications of the applicants and should be sent to the address of the undersigned so as to reach the Bank office on or before the 15th November 1916.

Specimens of English and Canarese writing should accompany application.

29—10—1916. M. Anantha Rao.
Secretary.

ನೋಟೀಸು.

ಚಾಲ್ತಿ ವರುಷದಲ್ಲಿ ಇದೇ ಬರುವ ದಶಂಬರ ಆಖ್ಯೆರ ವರೆಗೆ ಈ ಬೇಂಕಿನಲ್ಲಿ ಕೆಳಗೆ ನಮೂದಿಸಿದ ದಿವಸಗಳು ರಜೆಯ ದಿವಸಗಳಾಗಿ ಎಣಿಸಲ್ಪಡುವುವೆಂದು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ:—

ಎಲ್ಲಾ ಬುಧವಾರಗಳು.
ಮೊಹರಮ್ (ಕಡೇ ದಿನ)—ತಾರೀಕು ೭ನೇ ನವಂಬರ.
ಕ್ರಿಸ್ತಮಸ್ ದಿನ—ತಾರೀಕು ೨೫ನೇ ದಶಂಬರ.

ವರ್ಷದ ಕಡೇ ಎರಡು ದಿವಸಗಳು—ತಾರೀಕು ೩೦ ಮತ್ತು ೩೧ನೇ ದಶಂಬರ. ಆ ದಿವಸಗಳಲ್ಲಿ ನಡೆಯಿಸಬೇಕಾದ ಲೇವಾದೇವಿ ವಗ್ಯೆರೆ ಎಲ್ಲಾ ಕೆಲಸಗಳು ಮರು ದಿವಸಗಳಲ್ಲಿ ನಡೆಯಿಸೋಣಾದಾವು. ಆದರೆ ಇಂದಿಗೆ ಮೊದಲು ಅಂಗೀಕರಿಸಲ್ಪಟ್ಟ ನಿರಖು ಠೇವಣಾತಿಗಳು ಯಾವುದಾದರೂ ಆ ದಿವಸಗಳಲ್ಲಿ ಪಾವತಿಯಾಗಬೇಕಾದ ಸಂಗತಿಯಲ್ಲಿ ಆಯಾ ಠೇವಣಾತಿದಾರರು ಆಯಾ ದಿವಸಗಳಲ್ಲೇ ಬೇಕೆಂದು ಅಪೇಕ್ಷಿಸುವ ಪಕ್ಷಕ್ಕೆ ಆ ಮಟ್ಟಿನ ವ್ಯವಹಾರಗಳು ಮಾತ್ರ ಆಯಾ ರಜೆಯ ದಿವಸಗಳಲ್ಲಿ ಮಾಡೋಣಾದಾವು.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು, ತಾ. 29-10-16. } ಯಂ. ಅನಂತರಾವ್, ಕಾರ್ಯದರ್ಶಿ.

ಹಾಳ್ಗಡ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಾತುವಾಗಿಗೂ ವೈದ್ಯರ ಸಹಾಯವನು ಕಾದು ದೊರೆಯದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟರಕ್ತ, ವಾತ, ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

SREE SITHA RAGHAVA VAIDYA SHALA MYSORE

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 20 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗ್ಮೋರ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಮಶೀತಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವಂತ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧಗಳನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡ

ತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರನೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಒಂದು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪಾಲು ಖರ್ಚು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ಛಳಿಕಾಲ! (Best Shwals) ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಸೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿ

ಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಡುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರೆಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0. ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವ್ಯಾರಂ ಅಂಡು ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೆಡಿಸುವಂತೆ ಮಾಡುತ್ತಾರೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕಾಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ತಕ್ಕುದ್ದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಿಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಕಾಣೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ಕಕ್ಕದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸಂಯೋಗಿ ಬೇಗನೆ ವಾಗವಾದದಿಂದ ಅವನ್ನು ಸೇವಿಸುವವರಿಂದ ಆಪತ್ತಾದವು ಅನುಸರಿಸುತ್ತವೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ದೊರೆಯುವುದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್, ಮಂಗಳೂರು, ದ. ಕ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೩ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ತುಳುಕನ್ಯೋಪದೇಶ	0	2	0
ಹನುಮದ್ಭೀಮ ಮಧ್ವಾಸ್ತೋತ್ರ	0	2	0	ಆಚಾರದರ್ಪಣ	0	4	0

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

.... । ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂಚಾಂಗವರ್ಧನಃ । ಕಾಸಶ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತ ॥
ಸ್ತ್ರೀಷುಪ್ರಹರ್ಷಂ ಪರಮಗ್ನಿವೃದ್ಧಿಂ-ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ರೂಪಮಪಾಸ್ಯರೂಪಂ । ಬಿಭರ್ತಿರೂಪಂ ನವಯೌವನಸ್ಯ ।
ಜೀವನಾನಂದಸ್ಯಾಸ್ಯನರಃ ಪ್ರಯೋಗಾಲ್ಲಭೇತ ಜೀರ್ಣೋಽಪಿ ಕುಟೀಪ್ರವೇಶಾತ್ ॥

"........ವಿಕೃತಸ್ವರ, ಅನ್ನಕೋಶದ ರೋಗಗಳು, (ಅಜೀರ್ಣ ಮುಂತಾದ್ದು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ ಮುದುಕರಿಗೆ, ಮಕ್ಕಳಿಗೆ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣಪಡಿಸುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿಸುವಾಗುವಂತೆ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತುವನ್ನು ಪೂರ್ಣ ಗಟ್ಟಿಪಡಿಸುವುದೇ ಮುಂತಾದುವಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನು ನವಯೌವನತರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ವೇಶ್ಯಾಲ್ಯಂಪಟನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಆದರ ಸಂಗಡಲೇ ಜ್ವರ, ಕೆಮ್ಮು, ಎರೆಹುಳು, ಕಿವಿನೋವು ಸರ್ಪ ಕಡಿತಗಳಿಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,

ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).

ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿ ನಿಂದತಯಾರಾದವುಗಳು. ಮಕ್ಕಳ ಆಟಿಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಸೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು-ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ದುಯಂ ರೂಪಾಯಿ ೧ಕ್ಕೆ ೮ ತೊಲೆ, ತೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇವಲ್ಲದೆ ಬೇರೆ ರೇಶ್ಮಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ,

SIROMANI NARAYANA CHARYA & CO, ಚೌಕಾಂಬಾ, ಕಾಶಿ.
Choukhambay, BENARES CITY.

ಹಿಂದುಸ್ಥಾನ, ಬರ್ಮಾ, ಸೀಲೋನ್ ಮೊದಲಾದ ದೇಶಗಳಲ್ಲಿ ಪ್ರಖ್ಯಾತಿ ಪಡೆದ



ವೆಸ್ಟ್ ಎಂಡ್ ವಾಚು ಕಂಪೆನಿಯ ವಾಚುಗಳು.

ಸರಿಯಾದ ಟೈಮ್ ಕೊಡುತ್ತದೆ.

		ನಿಕ್ಕಲ್ ಬೆಳ್ಳಿ. ಸಣ್ಣ 16 ಸ್ಯಾಜು.			ಓಪನ್‌ಫೇಸ್. ಮಿಡಿಯಂ 18 ಸ್ಯಾಜು.		
ನಂಬ್ರ	1	12	0	0	11	0	0
,,	2	13	0	0	12	0	0
,,	3	9	0	0	8	4	0
,,	4×	10	0	0	10	0	0
,,	5 A ಫುಲ್ ಜುನಲ್ ...	14	0	0	14	0	0
,,	6 ಕಂಪಿಟಿಶನ್ ...	18	0	0	18	0	0
,,	7 ಸಿವಿಲ್	22	0	0	22	0	0
,,	8 ಕ್ವೀನ್ ಏನ್ ಪೋಕೆಟ್ ಸ್ಯಾಜು	15	8	0			
	ಮತ್ತು ರಿಸ್ಟ್ ವಾಚು ...	15	8	0			
,,	9 ರಿಸ್ಟ್ ವಾಚು ಬೆಳ್ಳಿ ಕೇಸು	30	0	0			
	ರೋಲ್ಡ್ ಗೋಲ್ಡ್ ಕೇಸ್	30	0	0			
	8 ಕೆರೆಟ್ ಗೋಲ್ಡ್	40	0	0			
	14 ,, ,, ...	50	0	0			
,,	10. ಬರೆಲ್ ಕೇಸ್ ರಿಸ್ಟ್ ವಾಚು ನ್ಯೂ ಪೇಟೆಂಟ್ ಲಿವರ್ ಮಶಿನ್						
	11 ಸ್ಯಾಜ್. ಬೆಳ್ಳಿ	46	0	0			
	18 ಕೆರೆಟ್ ಗೋಲ್ಡ್	150	0	0			

ಮೇಲೆ ಹೇಳಿದ ಚಿನ್ನ ಮತ್ತು ಬೆಳ್ಳಿ ವಾಚುಗಳಲ್ಲದೆ ಇನ್ನು ಹಲವು ತರದ ವಾಚುಗಳೂ ಅವುಗಳ ಸಾಮಾನುಗಳೂ ನಮ್ಮಲ್ಲಿ ರಕಂ ಆಗಿಯೂ ಚಿಲ್ಲರೆಯಾಗಿಯೂ ದೊರಕುವದು. ಪರಸ್ಥಳದ ಆರ್ಡರುಗಳು ವಿ. ಪಿ. ಮೂಲಕ ಕಳುಹಿಸಲಾಗುವದು. ವಿ. ಪಿ. 6 ಆಣೆ ಹೆಚ್ಚಿಗೆ. ಅರ್ಧ ಆಣೆಯ ಸ್ಟಾಂಪು ಕಳುಹಿಸಿದರೆ ಕ್ರಯ ಪಟ್ಟಿ ಕಳುಹಿಸಿಕೊಡಬಹುದು.

ವಿಳಾಸ:— N. GOPALJEE,
Watch maker.
JOOMA MASJID SHEIK MEMON STREET,
BOMBAY 2.

ಸಿದ್ಧೌಷಧ!   ಪರೀಕ್ಷಿಸಿ ನೋಡಿರಿ!!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.



ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಅದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೀ ಸೆರಗು ಹೋಗುವದು, ಬಿಳೀ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

☞ ತಾಜಾ ಯುಕಲಿಪ್ಟಸ್ ತೈಲ 6 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—   ಏಜಂಟರು:—

ಇಕ್ಲಿಪ್ಸ್ ಏಜನ್ಸಿ,   ಸುಗಂಧವಿಲಾಸ,

ಮಂಗಳೂರು,   ರಥಬೀದಿ, ಮಂಗಳೂರು.

~~Can be had at Electro Homeopathic Dispensary,~~

~~Hampankatta, Mangalore.~~

"ಅನೇಕಾಂಜನಗಳು ಪ್ರತಿಸೃಷ್ಟಿಯಾಗಿರುವವು."

ಪಂಚಭಾಷೆಗಳಲ್ಲಿರುವ ಚೀಟಿಯನ್ನು ನೋಡಿಕೊಂಡರೆ ಮೋಸವಾಗಲಾರದು.

ಅಮೃತಾಂಜನವೇ ದಿವ್ಯಾಂಜನ.

ಅಮೃತಾಂಜನ ಎಲ್ಲಾ ನೋವಿಗೂ ಸಿದ್ಧೌಷಧ. ತಲೆನೋವು, ಕೀಲುಹೊಡತ, ವಾಯುನೋವು, ಪಕ್ಷವಾತಕ್ಕೆ, ಚಳುಕು, ಊದು, ಪಕ್ಕೆನೋವು, ಚೇಳುಕಡಿತ, ಉಬ್ಬಸ, ಕೆಮ್ಮಲು, ನೆಗಡಿ, ಹುಣ್ಣು ಮತ್ತು ಎಲ್ಲಾ ತರದ ಜಖಂಗಳಿಗೆ ಅಮೃತಾಂಜನವೇ ಪರಮೌಷಧ. ಸಾವಿರಾರು ಮಂದಿ ಹೊಗಳಿ ಬರೆಯುತ್ತಾರೆ. ಸೊಗಸಾದ ಡಬ್ಬಿ ಸಹಿತ ಕ್ರಯ 0—8—0. 12 ಡಬ್ಬಿಗಳಿಗೆ ಕ್ರಯ ರೂ. 5—0—0. ಪರಸ್ಥಳಗಳಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ.

ಗಜಕರ್ಣ ಮುಲಾಮು ಡಬ್ಬಿ 1ರ ಬೆಲೆ 0—6—0.

ದಂತಮಂಜನ ಡಬ್ಬಿ 1ರ ಬೆಲೆ 0—2—0.

ರಖಮಾಗಿಯೂ ಚಿಲ್ಲರೆಯಾಗಿಯೂ ದೊರೆಯುವ ಸ್ಥಳ—

ದಿ ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:—   *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, ***Kalyanakaraka Bishagmandir.***

ಪೋಸ್ಟು ಪೊಳಲಿ, ದ. ಕ.   **POST POLALY, S. C.**

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಸಂತ ಕುಸುಮಾಕರ:—ನಮ್ಮ ವಸಂತಕುಸುಮಾಕರವು ಉರಿಮೂತ್ರ, ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲವಿರುವುದು, ಕೈಕಾಲುಗಳು ಉರಿಯೋಣ, ಆಯಾಸ, ಮೂರ್ಛೆ ಬೀಳುವಿಕೆ, ವಿಳುಪ್ತ ಮೊದಲಾದ ಮೇಹ ಬಾಧ್ಯಗಳು, ಮೂತ್ರ ವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯ ಸ್ಖಲನ, ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸೆ ಕೊಡುವೆವು. ಒಂದು ವಾರದಮಟ್ಟಿಗೆ ಸಾಕಾಗುವಷ್ಟು ಔಷಧ ಕ್ರಯ ರೂ. 5. ವಿ. ಪಿ. ಚಾರ್ಜು 5 ಆಣೆ.

ರಕ್ತಶುದ್ಧಿ:—ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರಭೂತವೆಂದು ಎಲ್ಲರೂ ಬಲ್ಲರು. ರಕ್ತವು ಕೆಟ್ಟುಹೋದ ಪಕ್ಷದಲ್ಲಿ ಬಾಯಿಯಲ್ಲಿ ಹುಣ್ಣು, ಪಣ್ಣುಗಳಲ್ಲಿ ಹುಣ್ಣು, ಕಣ್ಣುನೋವು, ಮೂಗಿನಲ್ಲಿ ಕ್ರಿಮಿಸೇರುವಿಕೆ, ಹಲ್ಲಿನಲ್ಲಿ ರಕ್ತ, ಕೀವುಸೋರುವುದು, ತುಟಿಗಳು ಹುಣ್ಣಾಗೋಣ, ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ, ತುರಿಸುಂಟಾದುವು, ವ್ರಣಗಳು, ಚರ್ಮದ ಬಣ್ಣ ಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಮೈಯೆಲ್ಲಾ ವಿಕಾರವಾಗಿ ಕಪ್ಪು ಚುಕ್ಕೆಗಳುಂಟಾಗುವಿಕೆ, ಚರ್ಮದ ಕಿತ್ತಿಗಳು, ಮೂಗು ಒಡೆಯುವಿಕೆ, ಮೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮಹೋದರ ರೋಗ, ತೊನ್ನು, ಪರೆಬಿದ್ದಿರುವುದು, ಕುಷ್ಠರೋಗ್ಯವು, ಕಂಕಳು ಮತ್ತು ಮೈಯೆಲ್ಲಾ ದುರ್ಗಂಧನೆಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ ಹಗಲು ರಾತ್ರಿ ತೆರೆದುಕೊಳ್ಳುವಂತೆ ನವೆಯಾಗುತ್ತಿರೋಣ ಇತ್ಯಾದಿ ನಾನಾವಿಧ ಬಾಧೆಗಳು ಜನಿಯಿಸುತ್ತವೆ. ಇಂಥಾ ಕೆಟ್ಟ ವಿಷವನ್ನು ರಕ್ತದೊಳಗಿನಿಂದ ನಿವಾರಿಸುವುದಕ್ಕೆ ಬಲವತ್ತರವಾದ ಅಮೃತಸಂಜೀವಿಯು ನಮ್ಮ ರಕ್ತಶುದ್ಧಿಯು ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. 20 ದಿವಸಗಳ ಉಪಯೋಗಕ್ಕೆ ಸಾಕಾಗುವಂತಹ ಪೆಟ್ಟಿಗೆ 1ಕ್ಕೆ ರೂ. 2. 1ರಿಂದ 2 ಪೆಟ್ಟಿಗೆಗಳ ವರೆಗೂ ವಿ. ಪಿ. ಚಾರ್ಜು 5 ಆಣೆ.

ಸಿದ್ಧ ಮಕರಧ್ವಜ:—ಇದು ಹಿಂದು ವೈದ್ಯಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು. ನಮ್ಮ ಸಿದ್ಧಮಕರಧ್ವಜವು ಎಲ್ಲಾ ವಿಧ ಜ್ವರಗಳನ್ನು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಹರಿವಾತಗಳನ್ನು ಗುಣಪಡಿಸುತ್ತದೆ. ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವರ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿ ಪ್ರಯೋಜನವೇನು? ಮೊತ್ತಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ. ನೋಡಿರಿ, ಎಣೆಯಿಲ್ಲದ ಈ ಸಿದ್ಧಮಕರಧ್ವಜವನ್ನು ಉಪಯೋಗಿಸಿದುದೇ ಆದರೆ ನಿಮ್ಮ ಶತಮಾನಪೂರ್ತಿ ಶಾಂತಿಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯದ ಉಮ್ಮೇದವೂ ಕೆಡುವುದಿಲ್ಲ. ಇದರ ಬೆಲೆ ತೊಲೆ 1ಕ್ಕೆ ರೂ. 80. ಒಂದು ವಾರಕ್ಕೆ ಸಾಕಾಗುವ ಔಷಧಕ್ಕೆ ರೂ. 3. ವಿ. ಪಿ. ಚಾರ್ಜು ಪ್ರತ್ಯೇಕವು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:—
P. SUBRA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಧಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು ?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.

Sole Agents:—MOHINI AGENCY,

3 Fida Building, Jumma Musjid, BOMBAY.

Agents:—Bhagavandas Choonilal & Co.,

177 China Bazar Road, MADRAS

ಪ್ರೊಪ್ರೈಟರರು: ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.

ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,

3 ಫಿದಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ.

ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,

177 ಚೀನಾ ಬಜಾರ್ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರ್ಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಒಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೋ ಪ್ರೆಸ್, ಬಳ್ಳಾರಿ.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಲೆ ಕಂಪೆನಿಕೃತ

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮಲಮು.

ಹಸ್ತ್ರೀ ಹಳತ, ಕರೆ ಮತ್ತು ಪಟಿಪ್ತಾರಿ ಗಜಕರ್ಣವು ಈ ಮಲಮಿನ ಒಂದೆ ಸಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಬ್ಯೆಮಾನೆ ಮಾಡಿಕೊಂಡಿದ್ದಂಥ ಗಜಕರ್ಣ ... ಇದರಿಂದ ವಾಸಿಯಾಗುವದು ... ಒಂದು ಡಬ್ಬಿಗೆ ... ಅಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ... ನಮ್ಮ ... ಬರೆದು ಕಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಕ್ಕೆಗಳೂ, ಜಖಮುಗಳೂ, ಬಾಯಿಗೆ ನತ್ತು ಅಂಗಳಿಗೆ ಹುಣ್ಣು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಸ್ನಾಯು ಸಂದು ನೋವೋಣ, ಕೈಕಾಲು ಬಿಷಿ ಯೋಣ, ಪ್ರಮೇಹ (ಪರಮಿ) ಯಿಂದ ಕೈಕಾಲುಗಳ ಸಂದುಗಳು ನೋವೋಣ, ಕಣೆ ಕೈ ಕಾಲುಗಳು ಬೀಳೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿ ಗಳು ನಷ್ಟವಾಗುತ್ತವೆ ... ಈ ಸಾರ್ಸಾಪರಿಲ್ಲೆಯು ... ಬಾಟ್ಲಿಗೆ ರೂ. ... ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಜಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಧಾರಾಳ ಕಮಿಷನ್.

ಕೆ. ಬಿ. ರೇಲೆ ಅಂಡ್ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.

ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆ



ಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿ ಕೊಳ್ಳಿ.

ವಿಳಾಸ:— ರಾಸ್ ವಾಚ್ ಕಂಪನಿ,
3 ಇರುಳಪ್ಪನ ವೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ – ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನ

ದೋಷ ವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಡನೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲ ವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರ್ಕಾರದ ಮೂಲಕ(ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗೆಟಕಿಸಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು— ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರೆದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ, ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ಇನಾಂ ಸಾಮಾನು 50. ಇನಾಂ ಸಾಮಾನು 50.

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರಿಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆಗಿಣೆ 6, ವೈಭರಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೊಗಳು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1.

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ವಾಚ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3. ಇರುಳಪ್ಪನ್ ಬೀದಿ, ಮದರಾಸು.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರುಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘ ಕಾಲದ ನೋವುಗಳಿಗೆ ಒಂದು ಪಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ-ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮುತ್ತು ಕಂಪನ್ ಕಟ್ಟಿ, ಶೋಪ್ಪಗಳಲ್ಲಿ ದೊರಕುವದು.

ಸಬ್ ಏಜಂಟರು ಬೇಕಾಗಿವೆ.

STANY BROTHERS
Sole Agents
C. M. C's. Toothache
Specific, Mangalore.

ಓದಿ ನೋಡಿರಿ! ಅಲಕ್ಷ್ಯ ಮಾಡಬೇಡಿರಿ!! ಬೇಗ ಬರೆಯಿರಿ!!!

ನೇಟಿವ್ ಡಾಕ್ಟರ್ ಎಸ್. ವಿ. ಕಾಮತ್‍ರವರ ಅನುಭವಸಿದ್ಧವಾದ

ಬಲಾಸಾರಿವಾದಿ ತೈಲವು.

ಇದು ವಾತ, ಪಿತ್ಥ, ಶಿರೋಭ್ರಮಣ ಇತ್ಯಾದಿ ಸಮಸ್ತ ರೋಗಗಳಿಗೆ ದಿವ್ಯವಾದ ತೈಲವಾಗಿದೆ.

ಮಹಾಶಯರೇ! ದೇಹ ಬಾಹ್ಯ ಸುಖ ಕೊಡುವಂಥಾ ಇತರ ‹ಸುಗಂಧಶಾಲಿ ತೈಲ'ಗಳಿಗೆ ಮನಸೋತು, ಧನವ್ಯಯ ಮಾಡಿಕೊಳ್ಳುವುದರ ಬದಲು ದೇಹದೊಳಗಣ ದೋಷಗಳಿಗೆ ಸುಖದಾಯಕವೂ ಗುಣಕಾರಿಯೂ ಆಗಿರುವ ಈ "ಬಲಾಸಾರಿವಾದಿ ತೈಲ"ದ ಒಂದೇ ಒಂದು ಸೀಸೆಯನ್ನು ತರಿಸಿ, ಉಪಯೋಗಿಸಿ ಇದರ ಗುಣವನ್ನು ತಮ್ಮ ಸ್ನೇಹಿತರಿಗೂ ಪ್ರಖ್ಯಾತಗೊಳಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ! ಸೀಸೆಯ ಬೆಲೆ: 0—8—0; ವಿ. ಪಿ. ಸಹಿತ 0—12—0; 3 ಸೀಸೆಗಳಿಗೆ ರೂ 1—5—0; ವಿ. ಪಿ. ಖರ್ಚು ಪ್ರತ್ಯೇಕ.

☞ ಬೇಕು! ಎಲ್ಲೆಲ್ಲೂ ಏಜಂಟರು ಬೇಕು!! ಹೆಚ್ಚಿನ ವಿಷಯಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ವಿಳಾಸ:— ಎಸ್. ಆರ್. ಹೆಬ್ಬಾರ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್, ಸುರತ್‍ಕಲ್, ದ. ಕ.

S. R. HEBBAR & Bros.,
Surathkal, S. Canara.

೧,೦೦೧ ರಾತ್ರಿ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶದವರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಪುಸ್ತಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು 6 ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 4[illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X ಮಂಗಳೂರು ತಾ 10ನೇ ನವಂಬರ ಶುಕ್ರವಾರ 1916. ಸಂಚಿಕೆ 44

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಸಾಳು 2 ಆಣೆ ಕ್ರಯದ
ಅವ್ವಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, . .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY

ಬಡವರಿಗೂ, ದೊಡ್ಡವರಿಗೂ,
ಪ್ರತೀ ಒಬ್ಬೊಬ್ಬನಿಗೂ,

ಯಾವಾಗಲೂ ತಯಾರಿದೆ!

ಸರ್ವರಿಗೂ
ಪ್ರಯೋಜನವಾದವುಗಳು!

ಈ ಕಾಲದ ಕೌತುಕಗಳನ್ನು ನಮ್ಮಲ್ಲಿ ಬಂದು ನೋಡಿರಿ!

ಜೇಬು ದೀಪಗಳು.

ದೀವಟಿಗೆಗಳು.

ಲಾಂದರುಗಳು.

ಓದುವ ದೀಪಗಳು.

ಬೀಸಣಿಗೆ ಇತ್ಯಾದಿಗಳು.

ಕೆ. ದಯಾ ಮತ್ತು ಕಂಪೆನಿ, ಹಂಪನಕಟ್ಟೆ, ಮಂಗಳೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜ. ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ.

ಅಗ್ನಿ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲ್ ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ಡಿ. ಜ್ಯೂಲಸ್ ಮಾರ್ಟಿಸ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವೆರೆಂಡ್ ಜೆ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತನ್ನವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾತ್ಯಾವಾಡಿನ ವಿಶವಲ್‌ನಿಂದ ಮ. ಜೆ. ರಸ್ಕಿನರು ಬರೆಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್ಸ್‌ಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿ.

ವಿಳಾಸ:—

The Malariana Company,
Kunkanady S. C.

ನಿರ್ಣಯಸಾಗರಮುದ್ರಣಾಲಯದೊಳಗಿನ

ಕರ್ನಾಟಭಾಷಾತಾತ್ಪರ್ಯಸಹಿತವಾದ

ಭಗವದ್ಗೀತೆ.

ಮಹಾಜನರೇ!

ನಮ್ಮ ಹಿಂದೂ ಜನರಲ್ಲಿ ಭಗವದ್ಗೀತೆಯೆಂಬವನ್ನು ಹೆಸರು ಮಾತ್ರವಾಗಿಯಾದರೂ ಕೇಳಿ ತಿಳಿಯದ ಕುಟುಂಬವಿರಲಾರದು. ಪ್ರಾಯಶಃ ದೈವಭಕ್ತಿಯುಳ್ಳ ಜನರೆಲ್ಲರೂ ಪರಲೋಕ ಮುಕ್ತಿಗಾಗಿ ಪಾರಾಯಣ ಮಾಡುತ್ತಿರುವುದೂ ಸಹಜವಾಗಿದೆ. ಮತ್ತು ನಮ್ಮ ಹಿಂದೂ ಮತಾಚಾರ್ಯರೆಲ್ಲರೂ ಒಪ್ಪಿಕೊಂಡು ಅನೇಕ ಭಾಷ್ಯಗಳನ್ನೂ ವ್ಯಾಖ್ಯಾನಗಳನ್ನೂ ಮಾಡಿ ನಮ್ಮೆಲ್ಲರಿಗೂ ಶಿರೋಭೂಷಣ ಗ್ರಂಥವನ್ನಾಗಿ ಈ ಭಗವದ್ಗೀತೆಯನ್ನು ಕೊಂಡಾಡಿರುವರು. ಇಂತಹ ಸರ್ವೋತ್ತಮ ಗ್ರಂಥವನ್ನು 'ಅಭಿಪ್ರಾಯ ತಿಳಿಯದೆ ಸುಮ್ಮನೆ ಪಾರಾಯಣ ಮಾಡುತ್ತಿರುವೆವಲ್ಲಾ' ಎಂದು ಹಲವು ಮಂದಿ ಭಕ್ತಜನರು ಪರಿತಾಪ ಪಡುತ್ತಿರುವುದನ್ನು ನಮ್ಮ ಮುದ್ರಣಾಲಯಕ್ಕೆ ಅನೇಕ ಮಹನೀಯರು ತಿಳಿಸಿದರು. ಅದಕ್ಕಾಗಿ ಈ **ಭಗವದ್ಗೀತೆಗೆ** ಅತ್ಯಂತ ಸುಲಭವಾಗಿಯೂ ಬಹಳ ಲಲಿತವಾಗಿಯೂ ಇರುವ ಕನ್ನಡ ಭಾಷೆಯ ತಾತ್ಪರ್ಯವನ್ನು ಮೂಲಕ್ಕೆ ಸರಿಯಾಗಿ ಸಂಗ್ರಹವಾಗಿ ಬರೆಯಿಸಿ, ಇದರೊಡನೆ ಮೂಲವನ್ನು ಬೇರೆ ಬೇರೆ ಶ್ಲೋಕಗಳನ್ನಾಗಿ ಮುದ್ರಿಸಿ ಹೊರಪಡಿಸಿರುವೆವು.

ಈ ಸುಂದರವಾದ ಚಿಕ್ಕ ರೇಶ್ಮೇ ಬಾಯಿಂಡಿಂಗದ ಪುಸ್ತಕ ೧ಕ್ಕೆ ಬೆಲೆ ರೂ ೦—೧೨—೦ **ಆಣೆ.** ಸಾದಾ ೦—೧೦—೦ **ಆಣೆ.**

ಪುಸ್ತಕ ದೊರೆಯುವ ಠಿಕಾಣೆ:—

ನಿರ್ಣಯಸಾಗರ ಪ್ರೇಸ್ಸು,
ಕೋಲಭಾಟಲೇನ, ೨೩.
ಮುಂಬಯಿ, ನಂ. ೨.

ತುಕಾರಾಮ ಜಾವಜೀ,
ನಿರ್ಣಯಸಾಗರ ಮುದ್ರಣಾಲಯ ಮಾಲಕರು.

ಈ ಬುಕ್ಕು ಬಾಳಕೃಷ್ಣ ತುಕಾರಾಮ ಘರತ, ೪೬೩, ಠಾಕುರದ್ವಾರ ರೋಡ, **ಮುಂಬಯಿ,** ಇವರ ಕಡೆಗೆ ಸಿಗುವವು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೊತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮೆ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತಕ್ಷ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ,

೦ ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:— "ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ, ಹೇಳುವದೇನಂದರೆ:— ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲ್ಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12—0—0, 5—0—0, 3—0—0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಪೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸುಗಳು**, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಚಿನ್ನದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಒಚ್ಚೊಂದ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಎಲೆ ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೫೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ, **R. D. Kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	343,389—5—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	343,389—5—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧನ್ಯತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

Canara Bank Ltd.,
Mangalore, 1st November 1916

P. Gopal Naik,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಆಮಲಕಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೬ ಬಾಟ್ಲಿಗೆ ೫ ರೂ. ೧೦ ಆಣೆ.

೨. ಪ್ರಮೇಹಹರಿಪು ಬಿಂದು. ಉರಿಯುವಾ ಗೀನನ್ನೂ ಕೂಡಲೇ ನಿಲ್ಲಿಸಿ ಅಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯಲ್ಲಿ ಅತ್ಯುತ್ತಮವು. ಪರೀಕ್ಷಿಸಲಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ನಾಲ್ಕು ವಿಧವಾದ ಪ್ಲೀಹ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಭಗನ್ಮೋಹನ ದಂತಮಂಜನ.- ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೩ ಸೀಸೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ಸೀಸೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್, ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಮರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ಸೀಸೆಗೆ ೨ ರೂ.

೯. ವಾಸಾವಲೇಹ. ದಮ್ಮು, ಗೂರ್ಲುಕೆಮ್ಮು, ಕಫ, ಕ್ಷಯಗಳ ಕೆಲಸ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ಹುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೇ ಇಲ್ಲ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸಪ್ತೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ಸೀಸೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಅಪಸ್ಮಾರ, ಅತಿಸ್ಮೃತಿ, ಬುದ್ಧಿಮಾಂದ್ಯ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವುದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ಪಾಕ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಕಾರ್ತೀಕ ಬ. ೧ ಶುಕ್ರವಾರ.

ಹಿಂದೀ ಸಂಸ್ಥಾನಿಕರ ಪರಿಷತ್ತು.

ನವಂಬರ ತಿಂಗಳಿನ ಮೊದಲನೆ ವಾರದಲ್ಲಿ ಹಿಂದೀ ಸಂಸ್ಥಾನಿಕರ ಮತ್ತು ಸರದಾರರ ಪರಿಷತ್ತು ದಿಲ್ಲಿ ರಾಜಧಾನಿಯಲ್ಲಿ ಸೇರಿತ್ತು. ನಮ್ಮ ಹಿಂದೂಸ್ಥಾನದಲ್ಲಿ ಸದ್ಯಃ ಸಾಧಾರಣವಾಗಿ ಎಲ್ಲ ತರದ ಜನರ ಬೇರೆ ಬೇರೆ ಪರಿಷತ್ತುಗಳಿವೆ. "ಸಂಘೇಶಕ್ತಿಃ ಕಲೌಯುಗೇ" ಎಂದರೆ ಕಲಿಯುಗದಲ್ಲಿ ಸಂಘದಲ್ಲಿ ಶಕ್ತಿಯಿರುವುದೆಂಬ ಅನುಭವದ ಮಾತಿನಂತೆ ಸಮುದಾಯವನ್ನು ಸೇರಿಸಿ ತಂತಮ್ಮ ಸ್ಥಿತಿಗತಿಗಳ ವಿಚಾರವನ್ನು ನಡಿಸಿಕೊಳ್ಳುವುದು ಉದಯೋನ್ಮುಖರಾದ ಪ್ರಾಜ್ಞರಿಗೆ ಕಾಲಪ್ರಾಪ್ತವೇ ಸರಿ. ಈ ನಿಯಮದಂತೆ ಹಿಂದೂಸ್ಥಾನದೊಳಗಿನ ಮಾಂಡಲಿಕ ಮಹಾರಾಜರೂ ಸರದಾರರೂ ೩೬೫ ದಿವಸಗಳ ಒಂದು ವರ್ಷದ ಅವಧಿಯಲ್ಲಿ ಕಡಿಮೆ ಎಂದರೆ ಒಂದೆರಡು-ದಿವಸಗಳಲ್ಲಿ ಯಾದರೂ ಒತ್ತಟ್ಟಿಗೆ ಸೇರುವುದು ವಿಹಿತವಿತ್ತು. ಆ ನ್ಯೂನತೆಯು ದಿಲ್ಲಿಯಲ್ಲಿ ಸೇರಿದ ಸಂಸ್ಥಾನಿಕರ ಮೊನ್ನೆಯ ಪರಿಷತ್ತಿನಿಂದ ಹೋಯಿತೆನ್ನಬಹುದು.

ಸರದಾರರ ಪರಿಷತ್ತಿನಲ್ಲಿ ಮೊದಲು ವೈಸರಾಯರ ಭಾಷಣವಾಯಿತು. ಈ ಪ್ರಾರಂಭದ ಭಾಷಣೆಗೆ ಬರೋಡದ ಮಹಾರಾಜರು ಉತ್ತರವಾಗಿ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಹಾಗೆಯೆ ಈ ಪರಿಷತ್ತಿನಲ್ಲಿ ಕೆಲವು ವಿಷಯಗಳು ಚರ್ಚೆಗೆ ಬಂದವು. ದೇಶೀಯ ಸಂಸ್ಥಾನಗಳಲ್ಲಿ ಸಿಂಹಾಸನಾರೋಹಣದ ಮತ್ತು ಅಧಿಕಾರ ಸಮರ್ಪಣೆಯ ಸಮಯದಲ್ಲಿ ಮಾಡತಕ್ಕ ವಿಧಿಗಳಿಗೂ ದರಬಾರಿಗೂ ಸಂಬಂಧಪಟ್ಟ ಪ್ರಶ್ನೆಗಳೂ, ಬ್ರಿಟಿಷ್ ಹಿಂದೂಸ್ಥಾನ ಮತ್ತು ಸಂಸ್ಥಾನಗಳಲ್ಲಿರುವ ದಿವಾಳಿಕೋರ್ಟುಗಳ ವಿಷಯದಲ್ಲಿ ಇರುವ ತೊಂದರೆಗಳೂ, ದಿಲ್ಲಿಯೊಳಗಿನ ಸರದಾರ ಕಾಲೇಜಿನ ಬಗ್ಗೆ ತಯಾರಿಸಿದ ಕೆಲವು ಪ್ಲೇನುಗಳೂ, ನಕ್ಷೆಗಳೂ, ಪರಿಷತ್ತಿನ ಅಧಿವೇಶನದಲ್ಲಿ ಚರ್ಚೆಗೆ ಬಂದವಲ್ಲದೆ ಒಂದು ಸಂಸ್ಥಾನದ ಅಧಿಕಾರಿಯು ಅಪ್ರಾಯಸ್ಥನಾಗಿರುವಾಗ ಅನುಕೂಲವಾದ ರಾಜ್ಯ ಕ್ರಮವು ಯಾವುದೆಂಬ ವಿಷಯವೂ ವಿಮರ್ಶಿಸೋಣಾಯಿತು. ಅಲ್ಲದೆ ಬ್ರಿಟಿಶ ಹಿಂದೂಸ್ಥಾನದ ಪ್ರದೇಶಗಳಿಂದ ಸಂಸ್ಥಾನಗಳಲ್ಲಿ ಅಥವಾ ಈ ಕ್ರಮಕ್ಕೆ ವಿರೋಧವಾಗಿ ಮೋಟರ ಮುಂತಾದ ವಾಹನ, ರೈಲು ಅದರ ವ್ಯವಸ್ಥೆ ಈ ಚಿಲ್ಲರೆ ಸಂಗತಿಗಳೊಟ್ಟಿಗೇನೇ ಔದ್ಯೋಗಿಕ ಸುಧಾರಣೆಯನ್ನು ಬಯಸುತ್ತಿರುವ ಸಂಸ್ಥಾನಕ್ಕೆ ಬ್ರಿಟಿಷ್ ಇಂಡ್ಯದೊಳಗಿನ ಔದ್ಯೋಗಿಕ ಕಮಿಷನು ಕೆಲವು ವಿಷಯಗಳ ಸಂಬಂಧವಾಗಿ ಸಹಾಯವನ್ನು ಕೊಡಬೇಕೆಂಬ ಮಾತು ಚರ್ಚೆಗೆ ಆಸ್ಪದವಾಗಿತ್ತು.

ಈ ಮೇರೆಗೆ ಪರಿಷತ್ತಿನ ಎರಡು ಮೂರು ದಿವಸಗಳಲ್ಲಿ ಸಂಸ್ಥಾನಿಕರ ಹಿತಕ್ಕೆ ಸಂಬಂಧಪಟ್ಟ ಸಾಮಾನ್ಯ ವಿಷಯಗಳು ಚರ್ಚೆಗೆ ಬಂದಿದ್ದವು. ಈ ವಿಷಯಗಳ ಪಟ್ಟಿಯನ್ನು ನೋಡುವಾಗ ಮತ್ತು ನಡೆದ ಸಂಗತಿಯನ್ನು ಆಲೋಚಿಸುವಾಗ ನಮ್ಮ ಬಂಧುಗಳಾದ ಮದ್ರಾಸಿನ 'ಹಿಂದು'ಕಾರರು ಅಭಿಪ್ರಾಯಪಡುವಂತೆ ಈ ಸಂಸ್ಥಾನಿಕರ ಮತ್ತು ಸರದಾರರ ಪರಿಷತ್ತಿನಲ್ಲಿ ವಿಶೇಷ ಮಹತ್ವದ ಕೆಲಸವೇನೂ ನಡೆಯಲಿಲ್ಲೆಂತ ಹೇಳಬೇಕಾಗುತ್ತದೆ. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಉದ್ಭವಿಸುತ್ತಿರುವ ಕೆಲವು ಮಹತ್ವದ ರಾಜಕೀಯ ಪ್ರಶ್ನೆಗಳ ವಿಷಯದಲ್ಲಿ ಸಂಸ್ಥಾನಿಕರ ಮತ್ತು ಸರದಾರರ ಅಭಿಪ್ರಾಯವನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ಈ ಪರಿಷತ್ತಿನ ಹೇತುವಿರಬಹುದೆಂತ ಕೆಲವರ ಅಭಿಪ್ರಾಯವಿತ್ತು. ಆದರೆ ವೈಸರಾಯರ ಮತ್ತು ಗಾಯಕವಾಡದ ಶ್ರೀ. ಸಯಾಜೀ ಮಹಾರಾಜರ ಭಾಷಣಗಳಿಂದ ಇಂಥ ಸಂದೇಹಗಳಿಗೆ ಎಡೆ ಇರಲಿಲ್ಲ.

ವೈಸರಾಯರು ತಮ್ಮ ಭಾಷಣದಲ್ಲಿ ಸಂಸ್ಥಾನಿಕರಿಗೆ ಹೇಳಿದ್ದೇನೆಂದರೆ, ನೀವು ಶಾಸನ ಕರ್ತೃಗಳಾದ ಅರಸರು. ಈ ವಿಷಯದಲ್ಲಿ ನಿಮಗೆ ಅಭಿಮಾನವಿರುವುದು ಸಹಜವು. ಹಿಂದೂಸ್ಥಾನದ ಚಕ್ರವರ್ತಿಗಳ ಆಧಿಪತ್ಯದಲ್ಲಿ ನೀವು ಮಾಂಡಲಿಕರಾಗಿರುವಿರಿ. ನಿಮ್ಮ ಸಂಸ್ಥಾನದ ಅಂತರ್ಗತ ಕೆಲಸಗಳಲ್ಲಿ ಕೈಹಾಕುವುದು ನನಗೆ ಸರಿಯಲ್ಲೆಂಬುದು ನಾನು ಹೇಳಬೇಕಾದಿಲ್ಲ. ಇದೇ ನ್ಯಾಯವು ನಿಮಗೂ ಸಂಬಂಧಿಸುತ್ತದೆ. ಎಂದರೆ ಬ್ರಿಟಿಷ್ ರಾಜ್ಯಭಾರದ ಅಂತರ್ಗತ ಕಾರಭಾರಗಳಲ್ಲಿ ತಲೆಹಾಕುವುದು ನಿಮಗೂ ಉಚಿತವಲ್ಲ." ವೈಸರಾಯರ ಈ ಮಹೋಪದೇಶಕ್ಕೆ ಶ್ರೀ ಸಯ್ಯಾಜಿ ಮಹಾರಾಜರಾದರೂ ಸಮರ್ಪಕವಾದ ಉತ್ತರವನ್ನೇ ಕೊಟ್ಟರು. "ನಮ್ಮ ದಾರಿಗೆ ಬಾರದವರ ಕಡೆಗೆ ನಾನಾಗಲಿ ಬೇರೆ ಸಂಸ್ಥಾನಿಕರಾಗಲಿ ಎಂದೂ ಹೋಗಲಿಕ್ಕಿಲ್ಲ." ಮತ್ತು ಈ ಮಾತನ್ನು ಯಾರೂ ಒಪ್ಪುವಹಾಗಿದೆ.

ಇರಲಿ. ಈ ಸಾರಿ ಈ ಪರಷತ್ತು ನವೀನವಾದುದರಿಂದ ಇದರಲ್ಲಿ ಹೇಳತಕ್ಕಂಥ ಸಂಗತಿಗಳು ನಡೆಯಲಿಲ್ಲೆಂಬುದು ನಿಜವಿದ್ದರೂ ಇವರ ಪರಿಷತ್ತು ಇದೇ ಕ್ರಮದಿಂದ ವರ್ಷಂಪ್ರತಿ ನಡೆದುದಾದರೆ ಇದರಿಂದ ಬಹಳ ಪ್ರಯೋಜನವಾಗುವಹಾಗಿದೆ. ಆದುದರಿಂದಲೇ ಪರಿಷತ್ತಿನ ಅಂತ್ಯದಲ್ಲಿ ಶ್ರೀ ಸಯಾಜಿ ಮಹಾರಾಜರು ಈ ಪರಿಷತ್ತು ಬರುವ ವರ್ಷವೂ ಜರಗಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಗೊಳಿಸಿದರು. ವೈಸರಾಯರಾದ ಚೇಮ್ಸಫರ್ಡರು ಮುಕ್ತಾಯ ಮಾಡುವಾಗ ಬರುವ ವರ್ಷದಲ್ಲಿಯೂ ಈ ಪರಿಷತ್ತಿನ ಅಧಿವೇಶನವನ್ನು ಜರಗಿಸುವುದಕ್ಕೆ ಅಭಿವಚನವನ್ನಿತ್ತು ಮುಂದೆ ಹೇಳಿದ್ದೇನೆಂದರೆ—"ಈ ಪರಿಷತ್ತಿನ ಅಭಿವೃದ್ಧಿಯು ಕೂಡಲೆ ಆದೀತೆಂದು ಹೇಳಲಾಗದು. ಕಾಲಾವಧಿಯು ಬೇಕು. ಆದರೂ ತ್ವರೆಯಿಂದ ಪರಂತು ಮೆಲ್ಲಮೆಲ್ಲನೆ ಇದರ ಅಭಿವೃದ್ಧಿಯನ್ನೂ ಕಾರ್ಯಕ್ಷಮತೆಯನ್ನೂ ನಿರೀಕ್ಷಿಸುವುದು ಉಚಿತವಾಗಿದೆ." ಈ ಭಾಷಣದಿಂದ ಪರಿಷತ್ತು ಮುಕ್ತಾಯ ಹೊಂದಿತು.

ನಾವು ಶುಭಕಾಂಕ್ಷೆಯಿಂದ ಸಂಸ್ಥಾನಿಕರ ಪರಿಷತ್ತಿನ ಉತ್ತರೋತ್ತರಾಭಿವೃದ್ಧಿಯನ್ನು ಹಾರೈಸಿ ಈ ಪರಿಷತ್ತಿನ ನೆವದಿಂದ ಉಂಟಾಗುವ ಹಿಂದೀ ಸಂಸ್ಥಾನಿಕರ ಒಗ್ಗಟ್ಟಿನಿಂದ ಸ್ವಂತ ಸಂಸ್ಥಾನಿಕರಿಗೂ ಮತ್ತು ಚಕ್ರವರ್ತಿಗಳಿಗೂ ಅನುಕೂಲವಾದ ಪ್ರಯೋಜನವೂ ಶ್ರೇಯಸ್ಸೂ ಉಂಟಾಗಲಿ ಎಂಬುದೇ ನಮ್ಮ ಕೊನೆಯ ಬಯಕೆ ವ್ಯಕ್ತಪಡಿಸಿ ಈ ಲೇಖವನ್ನು ಇಲ್ಲಿಗೆ ಮುಗಿಸುತ್ತೇವೆ.

ದೇಶಭಕ್ತಿ.

ಲೇಖಾಂಕ ೧.

ದೇಶಭಕ್ತಿಯೆಂದರೇನು?

ಭಕ್ತಿಯು ಅಂತಃಕರಣದ ಒಂದು ಧರ್ಮವು. ನಾರದಭಕ್ತಿಸೂತ್ರವೆಂಬ ಗ್ರಂಥದಲ್ಲಿ 'ಈಶ್ವರನಲ್ಲಿ ನಿರತಿಶಯವಾದ—ನಿಸ್ಸೀಮವಾದ—ಇಂತಿಷ್ಟೇ ಎಂದು ಮೇರೆಯಿಲ್ಲದ—ಅನುರಕ್ತಿಯೇ ಭಕ್ತಿಯು' ಎಂದು ಭಕ್ತಿಯ ಲಕ್ಷಣವು ಮಾಡಲ್ಪಟ್ಟಿದೆ. ಸಾಮಾನ್ಯವಾಗಿ ಎಲ್ಲ ತರಗತಿಯ ಮನುಷ್ಯರಲ್ಲಿ—ಉದಾಹರಣೆಗಾಗಿ, ತರುಣರಲ್ಲಿ, ವೃದ್ಧರಲ್ಲಿ, ಹುಡುಗರಲ್ಲಿ ಕೂಡಾ ಹಾಗೆಯೇ ಹೆಂಗಸರಲ್ಲಿ ಸಹ—ಮೇಲೆ ಹೇಳಿದ ಅನುರಕ್ತಿಯೆಂಬ ಅಂತಃಕರಣದ ಧರ್ಮವು ಇದ್ದೇ ಇರುವುದು. ಚಿಕ್ಕ ಹುಡುಗರು ತಮ್ಮ ಆಟದ ಒಡವೆಗಳನ್ನು ಪ್ರೀತಿಸುವರು; ಹುರಿಗಡಲೆ, ಹುರಿಯಕ್ಕಿ, (ಇತ್ತಿತ್ತಲಾಗೆ) ಬಿಸ್ಕುಟು ಮುಂತಾದ ತಿಂಡಿಗಳಲ್ಲಿ ಅನುರಕ್ತಿಯನ್ನಿಟ್ಟಿರುವರು. ಯುವಕರ ಪ್ರೀತಿರಸಕ್ಕೆ ಆಸ್ಪದವಾದ ವಿಷಯಗಳು ಅನೇಕ ಇರುವವು. ಮುದಿ ಪ್ರಾಯದಲ್ಲಿ, ಹೆಚ್ಚಾಗಿ ಹೇಳುವಂತೆ ದೇವರಲ್ಲಿ ಭಕ್ತಿಯು ಅಂಕುರಿಸುತ್ತದೆ. ಇದಲ್ಲವಾದರೂ ವೃದ್ಧರಿಗೆ ಅವರ ಮೂರನೆ ಕಾಲಾದ ದಂಟಿನ ಮೇಲಾದರೂ ಅನುರಕ್ತಿಯಿರುವದೆಂದು ಹೇಳಲಿಕ್ಕೆ ಹೆಚ್ಚಿನ್ನು ಆಲೋಚನೆ ಬೇಡ. ಅಶಿಕ್ಷಿತ ಸ್ತ್ರೀಯರಿಗೆ ವಸ್ತ್ರಾಲಂಕಾರಗಳ ಮೋಹವಿದ್ದರೆ ಸುಶಿಕ್ಷಿತ ಭಗಿನಿಯರಿಗೆ ಪುಸ್ತಕ ಮುಂತಾದವುಗಳ ಪ್ರೀತಿಯಿರುವುದು. ಸಾರಾಂಶ, ಮಾನವವ್ಯಕ್ತಿಯ ಅಂತಃಕರಣದಲ್ಲಿ ಪ್ರೀತಿ ಅಥವಾ ಅನುರಕ್ತಿಯೆಂಬ ಧರ್ಮವು ಸ್ವಾಭಾವಿಕವಾಗಿಯೇ ಇದೆ; ಒಂದೇ ಜೀವತತ್ವವು ಇರುವೆ-ಆನೆ, ದನ-ಹುಲಿ, ಮನುಷ್ಯ ಗಂಧರ್ವ ಮುಂತಾದ ಬೇರೆ ಬೇರೆ ಹೊರಗಿನ ಶರೀರಗಳನ್ನು ಹೊಂದಿ ವ್ಯಕ್ತ ಸ್ಥಿತಿಗೆ ಬರುವಂತೆ ಅಥವಾ ಈ ವೇದಾಂತದ ಉದಾಹರಣೆಯು ಬೇಡವಾದರೆ ಒಂದೇ ಜಲತತ್ವವು ಬೇರೆಬೇರೆ ತರದ ಮಣ್ಣಿನ ಉಪಾಧಿಯಿಂದ ಉಪ್ಪು, ಸವುಳು ಮೊದಲಾದ ವಿವಿಧ ವಿಧದಿಂದ ಅಭಿವ್ಯಕ್ತವಾಗುವಂತೆ ಪ್ರೀತಿಯೆಂಬ ಒಂದೇ ಅಂತಃಕರಣ ಧರ್ಮವು ಹೊರಗಿನ ಭಿನ್ನ ಭಿನ್ನ ವಿಷಯಗಳಿಂದ ಆಕರ್ಷಿಸಲ್ಪಟ್ಟು ಬಹಿರಂಗಕ್ಕೆ ಬರುತ್ತದೆ. ಈ ಅಂತಃಕರಣ ವೃತ್ತಿಯು ಒಬ್ಬನಲ್ಲಿ ಇದೆ, ಇನ್ನೊಬ್ಬನಲ್ಲಿ ಇಲ್ಲ, ಹೀಗಿಲ್ಲವೇ ಇಲ್ಲ. ಎಲ್ಲರಲ್ಲಿ

ವೃತ್ತಿಯು ಇದ್ದೇ ಇರುತ್ತದೆ. ಈ ರೀತಿಯಿಂದ ಎಲ್ಲರಲ್ಲಿ ಸ್ವಾಭಾವಿಕವಾಗಿಯೇ ಇದ್ದು, ಬೇರೆ ಬೇರೆ ಮುಖಗಳಿಂದ ಹರಿದುಕೊಂಡು ಹೋಗುವ ಈ ವೃತ್ತಿಗೆ—ಅನುರಕ್ತಿಗೆ—ದೇವರ ಕಡೆಗೆ ಕೊಂಡುಹೋಗಿ ನಾರದರು ಅದಕ್ಕೆ 'ಭಕ್ತಿ'ಯೆಂಬ ಹೆಸರನ್ನು ಕೊಟ್ಟಿರುವರು. ಇದರ ಮೇಲಿಂದ ದೇವರಲ್ಲಿರುವ ಪ್ರೀತಿಯೇ ಭಕ್ತಿಯು ಎಂಬ ಅರ್ಥವು ಸ್ಪಷ್ಟವಾಗುತ್ತದೆ. ಆದರೆ ಮೇಲಿನ ಉದಾಹರಣೆಗಳಲ್ಲಿ ತೋರಿಸಿರುವಂತೆ ಆಟದ ಒಡವೆಗಳ ಮೇಲೆ ಅಥವಾ ಹುರಿಗಡಲೆಯ ಮೇಲೆ ಹುಡುಗರಿಗೆ ಯಾವ ಪ್ರೀತಿಯಿರುವುದೊ ಅದು ಮಾತ್ರ 'ಭಕ್ತಿ'ಯೆಂಬ ಹೆಸರಿಗೆ ಪಾತ್ರವಾಗದು. ಈ ಎರಡು ಕಡೆಗಳಲ್ಲಿ ವೃತ್ತಿ ಒಂದಾದರೂ ಹೆಸರುಗಳು ಬೇರೆಯೇ. ಅಂಗಡಿ-ಬಂಡಸಾಲೆ, ವಕೀಲತನ-ಬೆರಿಸ್ಟರುತನ, ಅಥವಾ ಶಾಲೆ-ಕೊಲೇಜು ಮುಂತಾದ ಜೋಡುಗಳು ಸಾಮಾನ್ಯವಾಗಿ ಒಂದೊಂದೇ ಬಗೆಯವುಗಳಾದರೂ ಅವುಗಳಲ್ಲಿಯ ತರತಮ ಭಾವಗಳಿಂದ ಆಯಾ ಹೆಸರುಗಳು ಹೇಗೆ ಬೇರೆ ಬೇರೆಯೊ ಹಾಗೆಯೆ ಮೇಲಿನ ಸಂಜ್ಞೆಗಳು ಬಂದಿವೆ. ಎಂದರೆ ಅಣ್ಣ-ತಮ್ಮ, ಅಕ್ಕತಂಗಿ, ಗಂಡ-ಹೆಂಡತಿ, ಹಾಗೆಯೇ ಮೇಲೆ ಹೇಳಿದ ಆಟದ ಒಡವೆ ಮೊದಲಾದವುಗಳ ಮೇಲೆ ಇರುವ ಅಂತಃಕರಣದ ಅನುಕೂಲ ವೃತ್ತಿಗೆ 'ಪ್ರೀತಿ'ಯೆಂತಲೂ ಮತ್ತು ದೇವರ ಮೇಲೆ ಇರುವ ಇದೇ ವೃತ್ತಿಗೆ 'ಭಕ್ತಿ'ಯೆಂತಲೂ ವ್ಯವಹಾರಗಳು ಭಾಷೆಗಳಲ್ಲಿ ಹಿಂದಿನಿಂದಲೇ ಒಂದಿವೆ.

ದೇವರಲ್ಲಿರುವ ಪ್ರೀತಿಯು 'ಭಕ್ತಿ'ಯೆಂಬ ಹೆಸರನ್ನು ತೆಕೊಳ್ಳುವಂತೆ ದೇಶದ ಮೇಲಿರುವ ಪ್ರೀತಿಯು ಅದೇ ಸಂಜ್ಞೆಯನ್ನು ಪಡೆಯುವುದು. ನಾರದ ಮಹರ್ಷಿಗಳು ಈಶ್ವರನಲ್ಲಿ ಪರಾನುರಕ್ತಿಯೇ ಭಕ್ತಿಯೆಂದು ಹೇಳಿದಾಗ್ಯೂ ಈಶ್ವರನಷ್ಟೇ ಮಮತೆಗೆ—ಪರಾನುರಕ್ತಿಗೆ ಆಸ್ಪದವಾದ ದೇಶದ ಮೇಲೆ ಇಟ್ಟಿರುವ ಅಕೃತ್ರಿಮವಾದ ಅನುರಾಗವು ಭಕ್ತಿಯೆಂದೆನಿಸಲ್ಪಡಲು ಬಾಧಕವಿಲ್ಲ. ಹೀಗೆ ನಾವು ಮಾತ್ರ ಅಭಿಪ್ರಾಯಪಡುತ್ತೇವೆಂತಲ್ಲ. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಸ್ವದೇಶದ ವಿಷಯದಲ್ಲಿ ಯೋಗ್ಯವಾದ ಕರ್ತವ್ಯವನ್ನು ಮಾಡಲು ಉಪದೇಶಿಸಿರುವನು. ಗೀತೆಯ ಮಹಾ ಸಿದ್ಧಾಂತಗಳು ನಿಷ್ಕಾಮ ಕರ್ಮ, ದೇವಭಕ್ತಿ, ಆತ್ಮಜ್ಞಾನ ಮೊದಲಾದವುಗಳಾವವಿದ್ದರೂ ದೇಶಭಕ್ತಿಯ ಪಾಠವೇ ಅದರಲ್ಲಿದ್ದುದು ಕಂಡು ಬರುತ್ತದೆ. ಕೌರವರು ಅನ್ಯಾಯದಿಂದ ನಿಮ್ಮ ಅಂಶವನ್ನು ಕಸೆದು ನಿಮ್ಮನ್ನು ಕಾಡಿಗೆ ಅಟ್ಟಿದ್ದಾರೆ, ನೀನು ಯುದ್ಧ ಮಾಡಿ ನಿಮ್ಮ ಅಂಶವನ್ನು ಪಡಕೊಳ್ಳುವುದು ನಿನ್ನ ಕರ್ತವ್ಯವು, ನೀನು ಹೆಂಗಸಲ್ಲ, ಪೌರುಷವಿರುವ ಗಂಡಸು, ನಿಮ್ಮ ಭಾಗವನ್ನು ಸ್ವಾಧೀನಪಡಿಸಿಕೊ,'- ಭಗವಂತನ ಇವೇ ಆಲೋಚನೆಗಳು ಗೀತೆಯ ಗರ್ಭದಲ್ಲಿರುತ್ತವೆ. ಆದರೆ ಕೆಲವು ಕ್ಷುದ್ರ ದೃಷ್ಟಿಯರ ಸಮಾಧಾನಕ್ಕಾಗಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಗೀತೆಯಲ್ಲಿ ದೇಶಭಕ್ತಿಯಾಗಲಿ ಅಥವಾ ಅದಕ್ಕೆ ಪೋಷಕವಾದ ವಿಚಾರಗಳಾಗಲಿ ಉಂಟೆಂದು ಹೇಳುವುದರಿಂದ ಗೀತೆಯ ತಲೆಯ ಮೇಲೆ ಅರಾಜಕತ್ವದ ಪಾಪವನ್ನು ಯಾರಾದರೂ ಹೊರಿಸಲುದ್ಯುಕ್ತರಾದರೆ ಅದು ಕೇವಲ ಅವರ ಆಸುರೀ ಬುದ್ಧಿಯೆಂತಲೇ ಹೇಳಬೇಕು. ಗೀತೆಯು ಅರಾಜಕತ್ವವನ್ನು ಹೇಳುವುದಿಲ್ಲ, ಸ್ವದೇಶ ಭಕ್ತಿಯನ್ನು ಕಲಿಸುತ್ತದೆ.

ದೇಶವು ದೇವರಷ್ಟೇ ಅನುರಕ್ತಿಗೆ ಅರ್ಹವಾದುದೆಂದು ಮೇಲೆ ಹೇಳಿದೆ. ಇದನ್ನು ಸ್ವಲ್ಪಮಟ್ಟಿಗೆ ಸ್ಪಷ್ಟೀಕರಿಸೋಣ. ದೇವರು ಮಾನವನಿಗೆ ಜನ್ಮ ಕೊಡುವನು, ದೇಶವು ಅವನನ್ನು ಪೋಷಿಸುವುದು. ದೇವರಿಂದ ಬುದ್ಧಿಕಲೆಯು ಪ್ರಾಪ್ತವಾಗುವುದು, ದೇಶವು ಆ ಬುದ್ಧಿಕಲೆಯಲ್ಲಿ ಅಭಿಮಾನ, ಉತ್ಸಾಹ, ಶೌರ್ಯ ಇವುಗಳನ್ನು ಹುಟ್ಟಿಸುವುದು. ಆಯುಷ್ಯವು ದೇವರ ದಾನವು, ಆ ಆಯುಷ್ಯದ ಪ್ರಕಾಶವು ದೇಶದ ಅನುಗ್ರಹವು. ಕರ್ಮವು ದೇವರ ಸೂತ್ರವು, ಧರ್ಮವು (ಕರ್ತವ್ಯವು) ದೇಶದ ಸೂತ್ರವು. ದೇವರ ಮನೆಯಲ್ಲಿ ಭೇದವಿಲ್ಲ, ದೇಶದ ಸ್ವರ್ಗದಲ್ಲಿ ಪ್ರಪಂಚವಿಲ್ಲ. ಮುಕ್ತಿಗೆ ದೇವರು ಯಜಮಾನನು, ಆ ಮುಕ್ತಿ ಮಂದಿರದ ಮಾರ್ಗವನ್ನು ತೋರಿಸುವ ಏಜನ್ಸಿಯು ದೇಶದ ಕಡೆಗೇ ಇದೆ. ಈ ರೀತಿಯಿಂದ ದೇವರಿಗೂ ದೇಶಕ್ಕೂ ಇರುವ ಸಾಮ್ಯಗಳನ್ನು ನೋಡುವಾಗ ಇವರಿಬ್ಬರು ತಮ್ಮೊಳಗೆ ಸಹಕಾರ ಸಂಘಗಳನ್ನೇರ್ಪಡಿಸಿಕೊಂಡಿರುವರೊ ಎಂದು ಕೂಡ ತೋರುತ್ತದೆ. ಆದರೆ ಈ ತುಲನಾ-ದೃಷ್ಟಿಯನ್ನು ಸಾಮ್ಯದಲ್ಲಿಯೇ ಬಿಟ್ಟುಬಿಡದೆ ಅದಕ್ಕೆ ಆಧಿಕ್ಯಪರ್ಯವಸಾಯಿಗಳಾದ ವ್ಯತಿರೇಕಾಲಂಕಾರದ ದೇಶದ ಧರ್ಮಗಳನ್ನು ತೋರಿಸಿಕೊಟ್ಟರೆ ಆ ದೃಷ್ಟಿಯು ಕೃತಾರ್ಥವಾಗುವುದು. ದೇವರು ಮತ್ತು ದೇಶವು ಇವರಲ್ಲಿ ವ್ಯತಿರೇಕವನ್ನು ಹುಡುಕುವಾಗ ಮೊದಲೇ ಕಂಡುಬರುವುದೇನೆಂದರೆ, ದೇವರು ಅವ್ಯಕ್ತನು, ಪಂಚೇಂದ್ರಿಯಗಳಿಗೆ ಗೋಚರನಲ್ಲ, ಆದರೆ ದೇಶವು ವ್ಯಕ್ತವಾದುದು. ಎಲ್ಲ ಇಂದ್ರಿಯಗಳಿಗೆ ದೇಶದ ಅನುಭವವು ಕ್ಷಣಕ್ಷಣದಲ್ಲಿ, ಅಲ್ಲ, ಸದಾ ಸರ್ವದಾ ಬಂದೇ ಬರುವುದು. ದೇಶದೊಳಗಿನ ಮನೋಹರವಾದ ವನಶ್ರೀಯಿಂದ ಮನಸ್ಸು ಪ್ರಸನ್ನವಾಗುವುದು. ಅಮೃತತುಲ್ಯವಾದ ನೀರಿನಿಂದ ಅಂತರಾತ್ಮವು ತೃಪ್ತಿ ಹೊಂದುವುದು. ಜನ್ಮದ ತಂದೆತಾಯಿಗಳೂ, ಜನ್ಮದಾತನಾದ ದೇವರೂ ನಮ್ಮನ್ನು ಬಿಡುವಷ್ಟು ಒಂದು ವೇಳೆ ನಿಷ್ಠುರರಾದರೂ ನಮ್ಮ ದೇಶವು—ನಮ್ಮ ಭೂಮಾತೆಯು ನಮ್ಮನ್ನು ಎಂದೂ ಬಿಡುವಹಾಗಿಲ್ಲ. ನಾವು ಯಾವಾಗಲೂ ದೇಶಮಾತೆಯ ತೊಡೆಯ ಮೇಲೆಯೆ ಬಿದ್ದುಕೊಂಡಿರುವೆವು, ಮಲಗಿಕ್ಕೊಂಡಿರುವೆವು. ನಾವು ದುಃಖದಲ್ಲಿ ಬಿದ್ದು ಬೇಸರಪಡುವವರಾದರೆ ದೇಶಮಾತೆಯು ಮಂಜುಳಸ್ವರದಿಂದ ನಲ, ರಾಮ, ಯುಧಿಷ್ಠಿರಾದಿಗಳ ಚರಿತೆಗಳನ್ನು ಹಾಡಿ ನಮ್ಮನ್ನು ಕರ್ತವ್ಯಮಾರ್ಗಕ್ಕೆ ಹಚ್ಚಿಸುವಳು. ಶ್ರುತಿಮಧುರವಾದ ಪಕ್ಷಿಗಳ ಗಾಯನ, ಪವಿತ್ರವಾದ ಭೂತಲ್ಪದ ಸ್ಪರ್ಶ, ಮನೋಹರವಾದ ನೋಟಗಳು, ಸ್ವಾದುವಾದ ನಿರ್ಝರಗಳ ಜಲಪಾನ, ಕುಸುಮಿತ ವನಶ್ರೇಣಿಗಳ ಆಘ್ರಾಣ ಈ ಐದು ವಿಷಯಗಳಿಗೆ ತೃಪ್ತಿಪಡಿಸಿ ದುಃಖಮಯವಾದ ಈ ಪ್ರಪಂಚದಲ್ಲಿ ದೇಶಮಾತೆಯೆ! ನೀನಲ್ಲದೆ ಇನ್ನಾರು ಭಕ್ತನನ್ನು ಉದ್ಧರಿಸುವರು? ಸುಖಮಯವಾದ ಬೇರೆ ಬೇರೆ ಋತುಮಾನಗಳಿಂದ ಬಾಲಕರ ಯೋಗಕ್ಷೇಮವನ್ನೇ ನಡಿಸುವವಳು ನೀನಲ್ಲದೆ ಇನ್ನಾರು! ಇರಲಿ. ಈ ಪ್ರಕಾರ ವ್ಯತಿರೇಕ ಧರ್ಮಗಳನ್ನು ನೋಡಿದರೆ ದೇಶವೇ ತಂದೆ, ತಾಯಿ, ಗುರು, ಮಿತ್ರ ಮುಂತಾದವರ ಸ್ಥಾನದಲ್ಲಿ ಬರುತ್ತದೆ. ದೇವ-ದೇಶ ಈ ದ್ವಂದ್ವದ ವಿಷಯದಲ್ಲಿ ಸಮರ್ಪಕ ಮತ್ತು ಸರಸವಾದ ಕಲ್ಪನೆಯನ್ನು ವಾಚಕರೆದುರಿನಲ್ಲಿಡಬೇಕಾದರೆ ಹೀಗೆ ಹೇಳಬಹುದು:-ತತ್ವವು ಒಂದೆ, ಅವ್ಯಕ್ತಾವಸ್ಥೆಯಲ್ಲಿ ದೇವರು, ವ್ಯಕ್ತಸ್ಥಿತಿಯಲ್ಲಿ ದೇಶವು. ಎಂದರೆ ವ್ಯಕ್ತಸ್ಥಿತಿಯಲ್ಲಿದ್ದ ದೇಶದ ಉಪಾಸನೆಯನ್ನು ಮಾಡಿದರೆ ಅದು ಅವ್ಯಕ್ತ ದೇವರಿಗೆ ಅರ್ಪಿತವಾಗುವುದು. ಉಪನಿಷತ್ತುಗಳಲ್ಲಿ ದೇವರು ವಿರಾಟ್ ಪುರುಷನೆಂದು ಹೇಳಿದ್ದು ಈ ವಿರಾಟ್ ಸ್ವರೂಪಿಯಾದ ದೇಶದ ಉದ್ದೇಶದಿಂದಲೇ ಅಲ್ಲದೆ ಬೇರೆಯಲ್ಲ. ಇದರ ಮೇಲಿಂದ ದೇಶದ ಉಪಾಸನೆಯು—ಭಕ್ತಿಯು—ದೇವರ ಉಪಾಸನೆಯೆಂಬುದು ಸ್ಪಷ್ಟವಾಗುತ್ತದೆ.

ಇದರೊಡನೆಯೆ ಇನ್ನೊಂದು ಸಂಗತಿಯೂ ಸ್ಪಷ್ಟವಾಗುತ್ತದೆ. ದೇವಭಕ್ತಿಗೆ ಎಷ್ಟು ಮಹತ್ವವಿರುವುದೊ ಅಷ್ಟೇ ಕಿಂಬಹುನಾ ಸ್ವಲ್ಪ ಹೆಚ್ಚು ಮಹತ್ವವು ದೇಶಭಕ್ತಿಗಿರುವುದು. ಈ ಪ್ರತಿಪಾದನೆಯಿಂದ ದೇಶಭಕ್ತಿಯೆಂದರೇನೆಂಬುದು ಸಾಮಾನ್ಯವಾಗಿ ಗೊತ್ತಾದರೂ ಯಾವ ಯಾವ ಉಪಚಾರಗಳು ಅಥವಾ ಸಾಧನೆಗಳು ದೇಶಭಕ್ತಿಗೆ ಅವಶ್ಯವಿರುತ್ತವೆಂಬುದನ್ನು ತೋರಿಸದ ಹೊರತು ಆ ಮೇಲಿನ ಪ್ರಶ್ನೆಗೆ ಉತ್ತರವಾಗುವುದಿಲ್ಲ. ಅದನ್ನು ಬರುವ ಲೇಖಾಂಕದಲ್ಲಿ ವಿವರಿಸೋಣ.

ಅಹಮದಾಬಾದಿನಲ್ಲಿ ನೆರೆದ ಶಿಕ್ಷಣ ಪರಿಷತ್ತು.

ಮುಂಬಾಯಿ ಸಂಸ್ಥಾನದ ಪ್ರಾಂತಿಕ ಪರಿಷತ್ತು ಅಹಮದಾಬಾದಿನಲ್ಲಿ ಸೇರಿತ್ತು. ಅನಂತರ ಆ ಪ್ರಾಂತಿಕ ಪರಿಷತ್ತಿನ ಮಂಟಪದಲ್ಲಿಯೇ ಬಹುಮಾನಪಟ್ಟ ಸೆಟಲವಾಡರ ಅಧ್ಯಕ್ಷತೆಯಲ್ಲಿ ಶಿಕ್ಷಣ ಪರಿಷತ್ತು ನೆರೆಯಿತು. ಸ್ವಾಗತ ಮಂಡಲದ ಅಧ್ಯಕ್ಷರಾದ ಬೆರಿಸ್ಟರ ಜೀವನಲಾಲದೇಸಾಯಿ ಎಂಬವರು ತಮ್ಮ ಸ್ವಾಗತಪರಭಾಷಣದಲ್ಲಿ ಹಿಂದುಸ್ಥಾನದೊಳಗಿನ ಪ್ರಕೃತ ಶಿಕ್ಷಣದ ಸ್ಥಿತಿಯನ್ನು ಕುರಿತು ಮನನೀಯವಾದ ವಿಚಾರಗಳನ್ನು ಪ್ರಕಟಪಡಿಸಿದರು. ಅವರ ಭಾಷಣದ ಮುಖ್ಯ ಸಾರಂಶವೇನೆಂದರೆ:—'ಹಿಂದೂಸ್ಥಾನದಲ್ಲಿ ಸಾಕ್ಷರ ಜನರ ಸಂಖ್ಯೆಯು ಬಹಳೇ ಕಡಿಮೆ ಇದೆ. ಇದು ಬಹಳ ಶೋಚನೀಯವು. ಈ ವಿಷಾದಕರವಾದ ಸ್ಥಿತಿಯನ್ನು ದಾಟಲು ನಾವೆಲ್ಲರು ಉದ್ಯೋಗ ಮಾಡುವುದು ವಿಹಿತವು. ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರಾದ ಋಷಿಗಳು ತಮ್ಮ ಎಲ್ಲ ಸಮಯವನ್ನು ಬಂದ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕೊಡುವುದರಲ್ಲಿ ಕಳೆಯುತ್ತಿದ್ದರು. ಇದನ್ನು ನಾವು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈಗಿನ ಬಾದಶಹರು ಶಿಕ್ಷಣದ ಅಭಿವೃದ್ಧಿಯನ್ನು ಮಾಡುವ ವಿಷಯದಲ್ಲಿ ಅಭಿವಚನವನ್ನು ಕೊಟ್ಟಿರುವರು. ಇದು ಬಹು ಸ್ತುತ್ಯವಾಗಿದೆ. ಆದರೆ ಇಲ್ಲಿಯ ಅಧಿಕಾರಿಗಳು ಬಹುಮಾನಪಟ್ಟ ಗೋಖಲೆಯವರ ಶಿಕ್ಷಣದ ಮಸೂದೆಯನ್ನು ತಳ್ಳಿಹಾಕಿದರು. ಇದು ನಿಂದ್ಯವಲ್ಲವೆ? ಈಗಿನ ಕಾಲದಲ್ಲಿ ಶಾಲೆಯಲ್ಲಿ ಹೋಗಿ ವಿದ್ಯೆಯನ್ನು ಸಂಪಾದಿಸಬೇಕೆಂದಿರುವ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಅಥವಾ ಕೊಲೇಜುಗಳಲ್ಲಿ ಪ್ರವೇಶ ಸಿಗುವುದು ಬಹು ಶ್ರಮದ್ದಾಗಿದೆ. ಇದೊಂದು ಸಂಗತಿ, ಇನ್ನೊಂದಾವುದೆಂದರೆ, ಶಾಲೆಗಳಲ್ಲಿ ಸಿಗುವ ಶಿಕ್ಷಣವಾದರೂ ಉಪಯುಕ್ತವಿದೆಯೋ? ಅದೂ ಇಲ್ಲ. ಶಿಕ್ಷಣದ ಎಲ್ಲ ಭಾರವು ಬರೇ ವಾಙ್ಮಯದ ಮೇಲೆ! ಮತ್ತು ಅಂಥ

ಶಿಕ್ಷಣವನ್ನು ಕೂಡ ಕೊಡುವುದು ಪರಭಾಷೆಯಿಂದ!! ಇಂಗ್ಲೆಂಡದೊಳಗಿನ ವಿದ್ಯಾರ್ಥಿಗಳಿಗೆ ಫ್ರೆಂಚ ಭಾಷೆಯಲ್ಲಿ ಎಲ್ಲವನ್ನು ಅಧ್ಯಯನ ಮಾಡುವ ಪ್ರಸಂಗ ಬಂದರೆ ಅವರು ಅದನ್ನು ಸಹಿಸುವರೇ? ಎಂದೂ ಇಲ್ಲ. ಆದರೆ ನಮ್ಮ ಹಿಂದೂಸ್ಥಾನದಲ್ಲಿ ಮಾತ್ರ ಯಾವುದಕ್ಕೂ ಅಡ್ಡಿ ಇಲ್ಲ. ನಿಜವಾದ ಶಿಕ್ಷಣವೆಂದರೆ ಬೌದಿಕ ಶಿಕ್ಷಣಕ್ಕೆ ಕಲಾಶಿಕ್ಷಣದ ಸಹಾಯವು-ಜೊತೆಯು ಬೇಕು. ಶಾರೀರಿಕ ಶಿಕ್ಷಣದ ಈಗ ಯಾವ ದುಃಸ್ಥಿತಿ ವಸ್ಥೆ ಇರುವುದೋ ಅದು ಕೂಡ ಕ್ಷಮ್ಯವಲ್ಲ. ಸ್ತ್ರೀಯರ ಶಿಕ್ಷಣದ ವ್ಯವಸ್ಥೆಯು ಯೋಗ್ಯವಾದ ಕ್ರಮದಿಂದಲೇ ಆಗಬೇಕು. ಶಿಕ್ಷಣಕ್ಕೆ ಸಂಬಂಧಪಟ್ಟ ಈ ಎಲ್ಲ ಸುಧಾರಣೆಗಳು ಸಾಧ್ಯವಾಗಬೇಕಾದರೆ ವಿದ್ಯಾ ಇಲಾಖೆಯೊಳಗಿನ ವರಿಷ್ಟ ಅಧಿಕಾರಗಳು ಹಿಂದೀ ಜನರ ಕೈಸೇರಬೇಕು. ಆದರೆ ನಿಜವಾದ ಯೋಗ್ಯತೆ ಇದ್ದು ಪ್ರಸಿದ್ಧಿಗೆ ಬಂದ ಹಿಂದೀ ವಿದ್ವಾಂಸರಿಗೆ ಆ ವರಿಷ್ಠ ಅಧಿಕಾರಗಳು ಕೊಡಲ್ಪಡುವುದಿಲ್ಲ, ಇದು ಅತ್ಯಂತ ಅಶ್ಲಾಘ್ಯವೇ ಸರಿ.

ಸ್ವಾಗತ ಮಂಡಲದ ಅಧ್ಯಕ್ಷರ ಮೇಲಿನ ಅಭಿಪ್ರಾಯದ ಭಾಷಣವು ಮುಗಿದ ತರುವಾಯ ಮಾನ್ಯ ಸೆಟಲವಾಡರ ಭಾಷಣವಾಯಿತು. ಅವರು ತಮ್ಮ ಭಾಷಣದಲ್ಲಿ ವಿದ್ಯಾ ಇಲಾಖೆಯ ಮೊದಲಿನಿಂದ ಎಲ್ಲ ಚರಿತ್ರೆಯನ್ನು ವಿವರಿಸಿ ಹೇಳಿದರು. ೧೮೮೨ನೆ ಇಸವಿಯ ಕಮಿಷನಿನ ಉಲ್ಲೇಖಮಾಡಿದರು, ಈ ಕಮಿಷನ ಆದಂದಿನಿಂದ ಸರಕಾರದ ಧೋರಣವು ಬದಲಾಗಿ ಖಾಸಗಿ ಶಾಲೆಗಳ ವಿಷಯದಲ್ಲಿ ಅವರಿಗೆ ಹೇಗೆ ಹೇಗೆ ಅವಿಶ್ವಾಸವು ಹುಟ್ಟುತ್ತ ಹೋಯಿತು ಮುಂತಾದ ಸಂಗತಿಗಳನ್ನು ಸೋದಾಹರಣವಾಗಿ ವಿವರಿಸಿದರು. ನಾ| ತಯಬಜಿ ಮುಂತಾದವರು ಮೇಲ್ ವಿಚಾರಣೆಯಲ್ಲಿ ನಡೆಯುತ್ತಿದ್ದ ಲೋಕೊಲೇಜಿಗೂ ಮಂಜುರಾತಿಯು ಸಿಗಲಿಲ್ಲ. ಯುನಿವರ್ಸಿಟಿ ಎಕ್ಟಿನಿಂದ ವಿದ್ಯಾಸಂಸ್ಥೆಗಳಿಗೆ ಸರಕಾರಿ ಡಿಪಾರ್ಟಮೆಂಟಿನ ಸ್ವರೂಪವು ಬಂದಿದೆ. ಪ್ರಕೃತ ಶಿಕ್ಷಣದಲ್ಲಿ ಯಾವ ಯಾವ ಕೊರತೆಗಳಿವೆಂಬುದನ್ನು ನಿರ್ಧರಿಸಲು ಅವುಗಳಿಗೆ (ವಿದ್ಯಾಸಂಸ್ಥೆಗಳಿಗೆ) ಅಧಿಕಾರವಿಲ್ಲದೆ ಹೋಗಿದೆ. ಸಾಕ್ಷರತ್ವದ ಪ್ರಮಾಣವು ನೂರಕ್ಕೆ ಐದು ಇರುವುದು ಬಹು ಶೋಚನೀಯವೇ ಸರಿ. ಈಗ ಜಪಾನಿನಲ್ಲಿ ಮಾಡಿದಂತೆ ಇಲ್ಲಿಯೂ ಖಡ್ಡಾಯದ ಪದ್ಧತಿಯಿಂದ ಪ್ರಾಥಮಿಕ ಶಿಕ್ಷಣವನ್ನು ಸುರುಮಾಡುವುದು ಅತ್ಯಗತ್ಯವಾಗಿದೆ. ಈ ಖಡ್ಡಾಯದ ಶಿಕ್ಷಣವು ಮುಫತ್ತಾಗಿಯೇ ಸಿಗಬೇಕು. ಪ್ರಾಥಮಿಕ ಶಿಕ್ಷಣವು ಐದು ಕ್ಲಾಸುಗಳವರೆಗೆ ದೇಶೀಭಾಷೆಯಿಂದ ಕೊಡುವುದು ಅವಶ್ಯವು. ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಶೀಲವನ್ನು ಹುಟ್ಟಿಸುವಂಥಾದ್ದಿರಬೇಕು. ಈ ಕೆಲಸವು ಪುಸ್ತಕಗಳಿಂದ ಆಗದು. ಶಿಕ್ಷಣವು ರಾಜಕೀಯ ಅಸಂತೋಷಕ್ಕೆ ಕಾರಣವಾಗುವುದಿಲ್ಲ. ಶಿಕ್ಷಣದಿಂದಲೇ ರಾಜನಿಷ್ಠೆಯು ಬೆಳೆಯುತ್ತದೆ.

ಈ ಅಭಿಪ್ರಾಯದ ಅಧ್ಯಕ್ಷರ ಭಾಷಣವು ಮುಗಿಯುತ್ತಲೇ ಬೆರಿಷ್ಟರ್ ಗಾಂಧಿಯವರ 'ದೇಶೀಭಾಷೆಯಿಂದಲೇ ಶಿಕ್ಷಣವು ಅಗತ್ಯ'ವೆಂಬ ವಿಷಯದ ಒಂದು ಉಪನ್ಯಾಸವಾಯಿತು.

ಒಂದು ಮಾತು!

ಮೋಟರ್ ಬಸ್, ಜಡ್ಕಾ, ಟ್ರಾನ್ಸಿಟು ಬಂಡಿಗಳಲ್ಲಿ ಪ್ರಯಾಣ-ಮಾಡತಕ್ಕವರಿಗೆ ಇಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇವೆ. ಈ ಮಾತು ವಿಶೇಷವಲ್ಲವೆಂತ ನಮ್ಮ ವಾಚಕರಿಗೆ ಒಂದುವೇಳೆ ತೋರಬಹುದಾದರೂ ಮೋಟರ್ ಬಸ್ ಇತ್ಯಾದಿ ವಾಹನಗಳಲ್ಲಿ ಕುಳಿತು ಪ್ರಯಾಣ ಮಾಡತಕ್ಕವರಿಗೂ ಈ ಕಂಪೆನಿಗಳ ಮ್ಹಾಲಿಕರಿಗೂ ಇದು ಒಂದು ಮಹತ್ವವೇ ಆಗಿದೆಂದು ಹೇಳಲು ಪ್ರತ್ಯವಾಯ ತೋರುವದಿಲ್ಲ.

ಕೆಲವು ವಾರಗಳ ಹಿಂದೆ ಲಂಡನಿನಲ್ಲಿ ಹೋಗುತ್ತಿದ್ದ ಮೋಟರ್ ಬಸ್ಸಿನಲ್ಲಿ ಒಂದು ಭಯಂಕರವಾದ ಅನಾಹುತವು ನಡೆದಿರುವದು. ೧೭ ವರ್ಷದ ಒಬ್ಬ ಹುಡುಗಿಯು ಕೆಲವು ಪ್ರಯಾಣಿಕರೊಂದಿಗೆ ಒಂದು ಮೋಟರ್‌ಬಸಿನಲ್ಲಿ ಕುಳಿತು ಹೋಗುತ್ತಿರುವಾಗ ಅಜಾಗರೂಕನಾದ ಜತೆ ಪ್ರಯಾಣಿಕನೊಬ್ಬನು ಒಂದು ಸಿಗರೇಟಿನ ತುದಿಗೆ ಬೆಂಕಿಹಚ್ಚಿ ಬಾಯಲ್ಲಿಟ್ಟು ಬೆಂಕಿ ಕಡ್ಡಿಯನ್ನು ಆಚೇ ಬಿಸಾಡಿದನು. ಈ ಬೆಂಕಿಕಡ್ಡಿಯು ಹತ್ತಿರವಿದ್ದ ಆ ೧೭ ವರ್ಷ ವಯಸ್ಸಿನ ಹುಡುಗಿಯ ಮೇಲೆ ಬಿದ್ದು ಅವಳ ಉಡುಪಿಗೆ ಕೂಡಲೇ ಬೆಂಕಿ ತಗಲಿತು. ಈಗಿನ ಕಾಲದ ಹೆಂಗಸರ ಉಡುಪುಗಳೇನೂ ಹಿಂದಿನ ಕಾಲದವರಂತೆ ತಕ್ಷಣ ಬಿಚ್ಚಿ ತೆಗೆದು ಬಿಸಾಡತಕ್ಕವುಗಳಲ್ಲವಾದುದೆಂದು ಇಲ್ಲಿ ಪ್ರತ್ಯೇಕ ಹೇಳಬೇಕೆಂತಿಲ್ಲ. ಕೆಲವು ಸೆಕುಂದಗಳೊಳಗೆ ಬೆಂಕಿಯು ಹಬ್ಬಿ ಆ ಯುವತಿಯನ್ನು ಸುಟ್ಟುಬಿಟ್ಟಿತು. ಬೆಂಕಿಯನ್ನು ಆರಿಸುವ ಉಪಾಯ ಮಾಡಿದರೂ ಸಾಧ್ಯವಾಗದೆ ಆಕೆಯು ಸತ್ತು ಹೋದಳು. ಪಾಪ! ಈ ವಿಷಯದಲ್ಲಿ ನಮ್ಮ ಹೆಚ್ಚಿನ ವ್ಯಾಖ್ಯಾನ ಇಲ್ಲಿ ಬೇಡವೆಂದೆಣಿಸುತ್ತೇವೆ. ಅದರೂ ಒಂದು ಮಾತು ಅಗತ್ಯ. ಬೀಡಿ ಸಿಗರೇಟು ಸೇದುವವನನ್ನು ನಾಶ ಮಾಡುತ್ತದೆ ಮಾತ್ರವಲ್ಲ; ಇತರರನ್ನೂ ನಾಶ ಮಾಡುವಂಥಾದ್ದಾಗಿದೆ. ಇಂಥಾ ವಿನಾಶಕರವಾದ ಅಭ್ಯಾಸವನ್ನು ಬೀಡಿ ಸೇವಕರು ಮೋಟರ್ ಬಸ್, ಜಡ್ಕಾ, ಟ್ರಾನ್ಸಿಟುಗಳಲ್ಲಿ ಜಾರಿಗೆ ತಾರದ ಹಾಗೆ ನೋಡಿಕೊಳ್ಳುವದು ಇಲ್ಲಿಯೂ ಬಸ್ ಮ್ಹಾಲೀಕರ ಕರ್ತವ್ಯವಾಗಿದೆ. ಬೀಡಿ ಸೇದುವ ಅಭ್ಯಾಸದಿಂದ ಇಂಥಾ ಅನಾಹುತಗಳು ಮಾತ್ರವಲ್ಲ; ಅದರ ಬೂದಿಯು ಗಾಳಿಯಲ್ಲಿ ಹಾರಿ ಕಣ್ಣಿನೊಳಗೆ ಬೀಳುವದರಿಂದ ಕಣ್ಣಿಗೆ ಹಾನಿ ಸಂಭವಿಸುವದೂ ಉಂಟು. ಈ ಎಲ್ಲಾ ಕಾರಣಗಳಿಂದ ಮೋಟರ್ ಬಸ್‌ಗಳಲ್ಲಿ ಪ್ರಯಾಣಿಕರು ಬೀಡಿ ಸೀಗರೇಟು ಸೇದದಂತೆ ನೋಡಿಕೊಳ್ಳಬೇಕಾಗಿ ಅಪೇಕ್ಷಿಸುವೆವು. ಇದೇ ನಮ್ಮ ಒಂದು ಮಾತು!

ಪತ್ರವ್ಯವಹಾರ.

"ವಿಟ್ಲ ಪರಸ್ಪರ ಸಹಾಯಕ ಸಂಘ" ಈ ಸಂಘದ ವಾರ್ಷಿಕ ಸಭೆಯು ನಿನ್ನೆ ತಾರೀಕು ೫—೧೧—೧೯೧೬ರಲ್ಲು ವಿಟ್ಲ ಬೋರ್ಡು ಶಾಲಾ ಕಟ್ಟಡದಲ್ಲಿ ಎಂದಿನಂತೆ ಜರಗಿತು. ಸಭೆಗೆ ಸೇರಲ್ಪಟ್ಟ ಮೆಂಬರರ ಪೈಕಿ ಸುಮಾರು ೮೦ ಮೆಂಬರರೂ, ಪುತ್ತೂರಿನಿಂದ ಪುತ್ತೂರು ಕೊವೊಪರೇಟಿವ್ ಬೇಂಕಿನ ಪರವಾಗಿ ರಾ. ರಾ. ಮೊಳಹಳ್ಳಿ ಶಿವರಾಯರೂ ಕೊವೊಪರೇಟಿವ್ ಸೊಸ್ಯಾಟಿಗಳ ಇನ್ಸ್‌ಪೆಕ್ಟರವರೂ, ಹೊಸತಾಗಿ ನೇಮಿಸಲ್ಪಟ್ಟ ೩ ಜನ ಸುಪ್ರವ್ಯಾಜರರೂ ಸಭೆಗೆ ದಯಮಾಡಿಸ್ದರು. ವಿಟ್ಲದ ಸಬ್ ರಿಜಿಸ್ತ್ರಾರವರೂ, ಸ್ಕೂಲು ಸುಪ್ರವ್ಯಾಜರವರೂ, ಸಭೆಯಲ್ಲಿ ಹಾಜರಿದ್ದರು.

ಕೊವೊಪರೇಟಿವ್ ಇನ್ಸ್‌ಪೆಕ್ಟರವರು ಸೂಚಿಸಿದ ಮೇರೆಗೆ ರಾ. ರಾ. ಲಕ್ಷ್ಮೀನಾಥ ಸ್ವಾಮಿಜಿಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಹಾಗೆಯೆ ಸೊಸ್ಯಾಟಿಯ ಕಾರ್ಯದರ್ಶಿಯವರ ಪರವಾಗಿ ರಾ. ಶಿವರಾಯರು ಮೇಲಿನ ವರ್ಷದ ಆದಾಯ ವೆಚ್ಚದ ಲೆಖ್ಖವನ್ನು ವಿವರವಾಗಿ ಸಭೆಯಲ್ಲಿ ಓದಿ ಹೇಳಿದರು. ಈ ಸಂದರ್ಭದಲ್ಲಿ ಸಂಘದ ಮೆಂಬರುಗಳಲ್ಲಿ ಯಾರೂ ಠೇವಣಾತಿ ಹಣಗಳನ್ನು ಇದು ವರೆಗೆ ಇಡದೆ ಇರುವದರಿಂದ ಸೊಸ್ಯಾಟಿಯ ವಹಿವಾಟುಗಳೆಲ್ಲವೂ ಸಾಲವಾಗಿ ಬೇಂಕಿನಿಂದ ಹೊರಗಿನಿಂದ ಪಡೆಕೊಂಡ ಹಣದಿಂದಲೇ ನಡೆಯುವಂತೆ ಆದುದು ಯೋಗ್ಯವಲ್ಲವೆಂತಲೂ ಮೆಂಬರರು ತಮ್ಮ ತಮ್ಮ ಯಥಾನುಶಕ್ತಿ ಹಣವನ್ನು ಠೇವಣಾತಿಯಾಗಿ ಇಡುವ ಸಂಗತಿಯಲ್ಲಿ ಇನ್ನಾದರೂ ಆಲೋಚಿಸಬೇಕಾಗಿಯೂ ರಾ. ಶಿವರಾಯರು ಹೇಳಿದರು. ಇದು ವಾಸ್ತವ್ಯವಾದದ್ದೆ; ಆದರೆ ಮೆಂಬರರ ಪೈಕಿ ಹೆಚ್ಚಿನವರು ಬಹಳ ಗರಿಬರಾದ್ದರಿಂದ ಅವರಿಗೆ ಇದು ಸುಲಭಸಾಧ್ಯವಲ್ಲ ಮತ್ತು ಇಂಥಾ ಸಂಗತಿಗಳಲ್ಲಿ ಮುಖಂಡರೆನ್ನಿಸಿಕೊಳ್ಳುವ ಪಂಚಾಯತರೇ ಮೇಲುಪಂಕ್ತಿಯನ್ನು ಹಾಕದಿದ್ದರೆ ಪಾಪದ ಮೆಂಬರರನ್ನು ದೂರಿ ಪ್ರಯೋಜನವೇನು?

ಕಳೆದ ವರ್ಷದ ರಿಪೋರ್ಟಿನಿಂದ ತೋರಿದ ಮೇರೆಗೆ ಮೆಂಬರರು ಸೊಸ್ಯಾಟಿಯಿಂದ ಪಡೆದ ಹಣದ ವಸೂಲಿ ಬಗ್ಯೆ ವ್ಯಾಜ್ಯಗಳು ಮಾಡಬೇಕಾಗಿ ಬಂದದ್ದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಇದೇ ರೀತಿಯಲ್ಲಿ ಇನ್ನು ಮುಂದಕ್ಕೂ ಮೆಂಬರರು ತಮ್ಮ ಜವಾಬ್ದಾರಿಯನ್ನು ಎಣಿಸದೆ ನಡೆದುಕೊಂಡರೆ ಸೊಸ್ಯಾಟಿಯ ಪರಿಣಾಮವು ರಾ. ಶಿವರಾಯರು ಅಭಿಪ್ರಾಯಪಟ್ಟಂತೆ ಹಾಳಾಗುವದು ಎಂಬದಕ್ಕೆ ಸಂಶಯವಿಲ್ಲ. ಆದರೆ ಈ ರೀತಿಯಲ್ಲಿ ವ್ಯಾಜ್ಯಗಳು ಉಂಟಾಗಲಿಕ್ಕೆ ಕಾರಣವೇನಾಯಿತೆಂದು ಸ್ವಲ್ಪ ಮಟ್ಟಿಗೆ ಪರಿಶೋಧಿಸಿದರೆ ಸೊಸ್ಯಾಟಿಯೊಳಗೇನೇ ಪಂಚಾಯತರೊಳಗೂ, ಮೆಂಬರೊಳಗೂ ಇರತಕ್ಕ ಖಾಸಗಿ ದ್ವೇಷಗಳೇ ಇವಕ್ಕೆಲ್ಲಾ ಮೂಲಾಧಾರವೆನ್ನಬಹುದೋ? ಪಂಚಾಯತರು ಎಲ್ಲಾ ಮೆಂಬರರನ್ನು ನಿಷ್ಪಕ್ಷಪಾತದಿಂದ ನಡಿಸತಕ್ಕವರು, ಅವರಿಗೆ ಹಿತವಿಲ್ಲದವರನ್ನು ಅನ್ಯಾಯವಾಗಿ ಪೀಡಿಸದವರು ಆಗಿರಬೇಕು. ಸೊಸ್ಯಾಟಿಯ ಮೇಲ್ಪಟ್ಟವರು ಕ್ರಮಗಳಿಗೆ ವಿರೋಧವಾಗಿ ತಮಗೆ ಖುಶಿ ಬಂದಂತೆ ನಡದರೆ ಸೊಸ್ಯಾಟಿಯ ಆಡಳಿತೆಯೇ ಸಡಿಲು ಬೀಳುವಂತೆಯಾಗಿ ಅನೇಕ ತೊಂದರೆಗಳು ಉಂಟಾಗುವವು. ಈ ತೊಂದರೆಗಳಿಗೆ ಮೆಂಬರರನ್ನು ಮಾತ್ರ ಕೆಟ್ಟವರೆಂದು ದೂರಿ ಪಂಚಾಯತರನ್ನು ಹೊಗಳುವದು ಆಶ್ಚರ್ಯದ ಸಂಗತಿಯಾಗಿದೆ. ರಾ. ಶಿವರಾಯರು ಈ ವಿಷಯದಲ್ಲಿ ಮಾತಾಡುವಾಗ ಈ ನಮ್ಮ ವಿಟ್ಲ ಸೊಸ್ಯಾಟಿಗೆ ಕ್ಷಯರೋಗ ತಗಲಿದೆ ಎಂಬದಾಗಿ ಹೇಳಿದರು. ಕ್ಷಯರೋಗವು ಪ್ರಥಮದಲ್ಲಿ ಶ್ವಾಸಕೋಶಗಳಿಗೆ ತಗಲಿ ಕ್ರಮೇಣ ಇಡೀ ಶರೀರವನ್ನು ನಿರ್ಬಲವಾಗಿ ಮಾಡುತ್ತದೆಂಬುವದು ಎಲ್ಲವರಿಗೂ ಗೊತ್ತಿದ್ದದ್ದೆ. ಸೊಸ್ಯಾಟಿ ಎಂಬ ಶರೀರದ ಶ್ವಾಸಕೋಶಗಳೇ ಪಂಚಾಯತರಾದ್ದರಿಂದಲೂ ಪ್ರಥಮಾವಸ್ಥೆಯಲ್ಲಿಯೇ ಈ ರೋಗವನ್ನು ನಿವಾರಿಸಬೇಕಾದರೆ ಪಂಚಾಯತರಲ್ಲಿರುವ ಕುಂದು

ಕೊರತೆಗಳನ್ನು ಕಂಡು ಹಿಡಿದು ಅವನ್ನು ಚಿಕಿತ್ಸಾಮೂಲಕ ಸರಿಗೊಳಿಸುವ ಪ್ರಯತ್ನಗಳನ್ನು ರಾ. ಶಿವರಾಯರು ಮಾಡಿದರೆ ನಾವೆಲ್ಲರೂ ಅವರಿಗೆ ಕೃತಜ್ಞರಾಗುತ್ತಿದ್ದೆವು.

ಸೊಸ್ಯಾಟಿಯ ರಿಪೋರ್ಟು ಓದಿ ಆದನಂತರ ಸೊಸ್ಯಾಟಿ ಬಗ್ಗೆ ಹೊಸ ಕ್ರಮಗಳು ಏರ್ಪಡಿಸುವ ಸಂಗತಿಯಲ್ಲಿ ಕೆಲವು ಚರ್ಚೆಗಳು ನಡೆದು ಆಖೈರಿಗೆ ಹೇಗೂ ಹೊಸ ಪಂಚಾಯತರ ಚುನಾವಣೆ ನಡೆಯಿತು. ಈ ಚುನಾವಣೆಯು ಎಂದಿನಂತೆಯೇ ಬಹಳ ಗಲಿಬಿಲಿಯೊಡನೆ ನಡೆದು ಕಡೆಗೆ ಚುನಾವಣೆಯಾಯಿತು ಎಂತ ಹೇಳಬಹುದು. ಪರಂತು, ಮುಖ್ಯವಾಗಿ ಇಂಥಾ ಸಂಘಗಳಲ್ಲಿ ಲೋಕಹಿತವನ್ನೆ ಬಯಸಿ ಭಕ್ತಿಪೂರ್ವಕ ಕೆಲಸ ಮಾಡತಕ್ಕ ಪಂಚಾಯತರು ಇದ್ದರೆ ಮಾತ್ರ ಇಂಥಾ ಸೊಸ್ಯಾಟಿಗಳು ಕ್ರಮವಾಗಿ ನಡೆಯುವವು ಹೊರತು ಅನ್ಯಥಾ ಅಲ್ಲ ಎಂಬದನ್ನು ನಾನು ಇಲ್ಲಿ ಪ್ರತ್ಯೇಕ ಹೇಳಬೇಕೆಂತಿಲ್ಲ.

ವಿಟ್ಲ, 6–11–1916 ಮೆಂಬರರಲ್ಲೊಬ್ಬ.

ಜಾಲೀಕಾಯಿಗಳ ಉಪಯೋಗವು.

ಈಗ ಚರ್ಮಕ್ಕೆ ಬಣ್ಣ ಕೊಡುವದರ ಸಲುವಾಗಿ ಜಾಲಿಯ ತೊಗಟೆಯೊಂದನ್ನೇ ಉಪಯೋಗಿಸುತ್ತಾರೆ. ಸಂಯುಕ್ತ ಪ್ರಾಂತಗಳ "ಬೋರ್ಡ ಆಫ ಇಂಡಸ್ಟ್ರಿ"ಯ (ಉದ್ಯೋಗ ಸಂಘದ) ದ್ವಾರವಾಗಿ ಪ್ರಸಿದ್ಧಿಸಲ್ಪಟ್ಟ ಮಾಹಿತಿಯ ಮೇಲಿಂದ, ಜಾಲಿಯ ಕಾಯಿಗಳನ್ನು ಸಹ ಚರ್ಮಕ್ಕೆ ಬಣ್ಣ ಕೊಡುವ ಕೆಲಸದಲ್ಲಿ ಉಪಯೋಗಿಸಬಹುದೆಂದು ಕಂಡು ಬಂದಿದೆ. ಕಾನಪೂರದಲ್ಲಿ ಚರ್ಮಕ್ಕೆ ಬಣ್ಣ ಕೊಡುವ ಕಾರಖಾನೆಯಲ್ಲಿ ಕೇವಲ ಜಾಲಿಯ ತೊಗಟೆಯೊಂದನ್ನೇ ಉಪಯೋಗಿಸುತ್ತಾರೆ. ಯಾಕಂದರೆ ಕಾಯಿಗಳಿಂದ ಆಗುವ ಬಣ್ಣವು ಬೇಗನೇ ಕೆಡುತ್ತದೆ. ಆದರೂ ತೊಗಟೆಗಿಂತ ಕಾಯಿಗಳಲ್ಲಿಯೇ "ಟಾನಿಕ ಆಶ್ಯಿಡ (ಒಂದು ಬಗೆಯ ಒಗರು ಪದಾರ್ಥ) ಹೆಚ್ಚು ಇರುತ್ತದೆ. ಬೀಜ ತೆಗೆಯಲ್ಪಟ್ಟ ಕಾಯಿಗಳಲ್ಲಿ ನೂರಕ್ಕೆ ೧೮-೨೦ ಭಾಗ ಟಾನಿಕ ಆ್ಯಶಿಡ ಇರುತ್ತದೆ. ಆದರೆ ತೊಗಟೆಯಲ್ಲಿ ೧೬ಕ್ಕಿಂತ ಹೆಚ್ಚಿಗೆ ಎಂದೂ ಇರುವದಿಲ್ಲ. ಪ್ರತಿವರ್ಷ ಹಂಗಾಮಿನಲ್ಲಿ ಸ್ವಲ್ಪ ಶ್ರಮದಿಂದ ಬೇಕಾದಷ್ಟು ಕಾಯಿಗಳನ್ನು ಕೂಡಿಸಲಿಕ್ಕೆ ಬರುತ್ತದೆ. ಇವುಗಳ ಕಿಮ್ಮತ್ತೆಂದರೆ ಕೂಡಿ ಹಾಕುವ ಖರ್ಚೇ ಇರುವದು. ಕಾಯಿಗಳನ್ನು ಒಣಗಿಸಿ ಬೇಕಾದಷ್ಟು ದಿವಸ ಇಡಲಿಕ್ಕೆ ಬರುತ್ತದೆ. ಯಾಕಂದರೆ ಅವು ಒಣವು ಇರುವ ವರೆಗೆ ಕೆಡುವದಿಲ್ಲ. ಇದರ ಹೊರ್ತು ಚರ್ಮಕ್ಕೆ ಇವರಿಂದ ಹಾಕುವ ಬಣ್ಣವು ತೊಗಟೆಯಿಂದ ಹಾಕಿದ ಬಣ್ಣಕ್ಕಿಂತ ಹೊಳಪಿನದಾಗುತ್ತದೆ. ಈ ವರೆಗೆ ನಮ್ಮ ದೇಶದಲ್ಲಿಯ ಜಾಲಿಯ ಕಾಯಿಗಳನ್ನು ಸ್ವಲ್ಪ ಪ್ರಮಾಣದಿಂದ ಆಡಿಗೆ ಹಾಕುವದಲ್ಲದೆ ಎರಡನೆಯ ಉಪಯೋಗವನ್ನೇನೂ ಜನರು ಮಾಡಿಕೊಳ್ಳುವದಿಲ್ಲ. ಸಂಯುಕ್ತ ಪ್ರಾಂತಗಳ ಇಂಡಸ್ಟ್ರಿಯ ಡಾಯರೆಕ್ಟರರು ಜಾಲಿಯ ಕಾಯಿಗಳಿಂದ ಅಗ್ಗವಾಗಿಯೂ ಉಪಯುಕ್ತವಾಗಿಯೂ ಚರ್ಮಕ್ಕೆ ಬಣ್ಣ ಕೊಡಲಿಕ್ಕೆ ಬರುವ ವಿಷಯದಲ್ಲಿ ಬಹಳ ಶೋಧ ಮತ್ತು ಪರಿಶ್ರಮ ಮಾಡಿದ್ದಾರೆ.

ನೂಲಿಗೆ ಬಣ್ಣ ಕೊಡುವ ಕೆಲಸದಲ್ಲಿಯೂ ಇದರ ಉಪಯೋಗವಾಗುವದೆಂದು ಅವರ ಅಭಿಪ್ರಾಯವದೆ. ನೂಲಿಗೆ ಕೊಡುವ ಬಣ್ಣದಲ್ಲಿ ಇದನ್ನೇ ಮಿಶ್ರಮಾಡಿದರೆ ಪಕ್ಕಾ ಬಣ್ಣವಾಗುತ್ತದೆ. ಈ ಕೆಲಸದಲ್ಲಿ ತೊಗಟೆಯು ಉಪಯೋಗವಾಗುವದಿಲ್ಲ. ಯಾಕಂದರೆ ಅದು ಬಹಳ ಮಂದವಾಗಿ ಇರುತ್ತದೆ; ಮತ್ತು ಅದರಿಂದ ನೂಲಿಗೆ ಕೊಡತಕ್ಕ ಬಣ್ಣದ ತೇಜವಾಗುವದಿಲ್ಲ. ಸ. ಒ.

ಬಂಟ್ವಾಳದ ಶ್ರೀ ವೆಂಕಟ್ರಮಣ ದೇವಸ್ಥಾನ.

(ನಮ್ಮ ಬಾತ್ಮೀದಾರರಿಂದ.)

ಇದೇ ಶುದ್ಧದ್ವಾದಶಿಯಲ್ಲಿ, (ಉತ್ಥಾನದ್ವಾದಶಿ) ಶ್ರೀ ವೆಂಕಟರಮಣ ದೇವರ ಸ್ವಾರಿಯನ್ನು ತುಲಸೀ ವೃಂದಾವನದ ಬಳಿಯಲ್ಲಿ ತಂದಿರಿಸಿದ ಕೂಡಲೆ, ಕಳೆದ ವರ್ಷ ಉಂಟಾದ ಹೊಸ ಪದ್ಧತಿಯ ಮೇರೆಗೆ, ಆಡಳಿತೆದಾರ ಸಾವಕಾರ ನರಸಿಂಗ ಪ್ರಭುಗಳು ಹೋದ ವರ್ಷದಲ್ಲಿ ಶ್ರೀ ದೇವರ ಭಂಡಾರದ ಆಡಳಿತವನ್ನು ನಡೆಸಿದ ಖುಲಾಸಾ ವೃತ್ತಾಂತವನ್ನು ಓದಿ ಹೇಳುವುದಕ್ಕೆ ಮೊದಲಾಗಿಯೇ, ಒಂದು ಭಾಷಣವನ್ನು ಮಾಡಿದರು. ಅವರು ದೇಹಾಲಸ್ಯದಿಂದ ದುರ್ಬಲರಾಗಿದ್ದರೂ, ನಿಷ್ಠೆಯಿಂದ ತಮ್ಮ ಜವಾಬದಾರಿಯನ್ನು ತಿಳಿದುಕೊಂಡು ಕೆಲಸ ನಡೆಸಿದ್ದರೆಂದು, ಭಾಷಣದ ಸಮಯದಲ್ಲಿ ಶ್ರೀ ಸನ್ನಿಧಿಯ ಸನ್ಮುಖದಲ್ಲಿ ಅವರನ್ನು ಕಂಡವರಿಗೆ ಸುಲಭವಾಗಿ ಗೊತ್ತಾಯಿತು. ಹತ್ತು ಸಮಸ್ತರ ಸೂಚನೆಗಳನ್ನು ಕೈಗೊಂಡು, ಮೊಕ್ತೇಸರರ ಅಭಿಮತವನ್ನು ಮೀರದೆ, ಮಾಮೂಲು ಪ್ರಕಾರದ ಪದ್ಧತಿಗಳಿಗೂ ಈಗಣ ರೀತಿಗಳಿಗೂ ಜತೆ ಗಂಟು ಬೀಳುವ ಹಾಗೆ ಕ್ರಮವಾಗಿ ಆಡಳಿತವನ್ನು ನಡಿಸುವದು ಸಾಮಾನ್ಯವಾದ ಕೆಲಸವಾಗಿಲ್ಲ. ಪ್ರಭುಗಳ ಬಲಹೀನ ದೇಹಕ್ಕೆ ಇಷ್ಟು ದೊಡ್ಡ ಅಸಾಮಾನ್ಯ ಕೆಲಸವನ್ನು ವಹಿಸಿಕೊಳ್ಳುವ ಚೇತನವನ್ನು ಅವರಲ್ಲಿರುವ ಸಮಾಜಸೇವಾಭ್ಯಾಸವೂ ಮಹಾ ಜನಗಳ ವಿಶ್ವಾಸವೂ ಉಂಟುಮಾಡಿದ್ದುವೆಂದರೆ ಸುಳ್ಳಾಗದು. ಭಾಷಣದಲ್ಲಿ, ಪ್ರತಿಯೊಂದು ಭಾಗದಲ್ಲಿ, ಉಂಟಾಗಿರಬಹುದಾದ ಕೊರತೆಗಳನ್ನು ತಾವಾಗಿ ಒಪ್ಪಿಕೊಂಡು, ಶ್ಲಾಘನೆಗೆ ಪಾತ್ರವಾದ ವಿಷಯಗಳನ್ನು ಮಹಾ ಜನಗಳ ಸಹಕಾರಕ್ಕೆ ಕೃತಜ್ಞತೆಯಿಂದ ಅರ್ಪಿಸಿ, ಇನ್ನೂ ಮಾಡಬಹುದಾಗಿದ್ದ ಮಹಾ ಕಾರ್ಯಗಳನ್ನು ಮಾಡಲಿಕ್ಕಾಗದಂತಹ ಜಾಡ್ಯವು ತನಗುಂಟಾದುದಕ್ಕೆ ಕಳವಳವನ್ನು ಪ್ರಕಟಿಸುವಂತಹ ಮಾತುಗಳಿದ್ದುವು. ದೈವ ಪ್ರೇರಣೆಯೆ ತನ್ನ ಮುಖಾಂತರ ಯಾವತ್ತು ಕರ್ತವ್ಯಗಳನ್ನು ಸಮಾಜದ ಪುರೋಭಿವೃದ್ಧಿಗಾಗಿ ಮಾಡಿಕೊಳ್ಳುತ್ತಿದೆಯೆಂದು ಪ್ರಬಲವಾದ ವಿಶ್ವಾಸವು ಯಾರಲ್ಲಿದೆಯೊ ಅವರ ನಡೆನುಡಿಗಳು ಹೀಗೇ ಇರುವುದು ವಾಸ್ತವಿಕವಾಗಿದೆ. ಇಂತಹ ಗೃಹಸ್ಥರು ನಮ್ಮ ಸಮಾಜದಲ್ಲಿ ಹೆಚ್ಚುತ್ತಿರಲೆಂದು ಕೋರಬೇಕಾಗಿದೆ.

ಇವರೂ, ಇವರ ಜತೆಯಲ್ಲಿದ್ದು ಕೆಲಸದ ಭಾರವನ್ನು ಹೊತ್ತ ರಾಮಚಂದ್ರ ಲಕ್ಷ್ಮಣ ಬಾಳಿಗರೂ, ನಡೆಸಿದ ಕಳೆದ ವರ್ಷದ ಆಡಳಿತದಲ್ಲಿ ದೇವಾಲಯದ ಹುಟ್ಟುವಳಿಯು ೧೭॥ ಸಾವಿರ ರೂಪಾಯಿಗಳಷ್ಟು, ಸಿಲ್ಕು ೨೫೦ ರೂಪಾಯಿಗಳಷ್ಟು ಎಂದು ತೋರಿತು. ಅಕ್ಕಿಯ ಜಮಾ ಸುಮಾರು ಒಂದು ಸಾವಿರ ರೂಪಾಯಿಗಳಷ್ಟು ಮೀರಿತು. ದೇವಾಲಯಕ್ಕೆ ೨೧೩೨ ಮುಡಿ ಅಕ್ಕಿ ಗೇಣಿ ಬರುತ್ತಿದೆ. ಲೇವಾದೇವಿಗಳನ್ನು ಸಾಧ್ಯವಿದ್ದಲ್ಲಿ ವ್ಯಾಜ್ಯ ನಡೆಸದೆಯೇ ಸಾಧಿಸಿಕೊಂಡಿದೆ. ನಿತ್ಯಸಂತರ್ಪಣೆಯ ಬಾಬಿನಲ್ಲಿ ಕಳೆದ ವರ್ಷಕ್ಕಿಂತಲೂ ಒಂದು ಸಾವಿರ ಜನ ಬ್ರಾಹ್ಮಣರಿಗೆ ಹೆಚ್ಚಾದ ಅನ್ನದಾನ ಸಂದಿದೆ. ದೇವಳದ ಎಲ್ಲ ಆಸ್ತಿಗಳ ಕುಲಂಕುಷವಾದ ಸರ್ವೇ ಮಾಡಿಸಿರುವದರಿಂದ, ಜಾಗ್ರತೆ ತೆಕ್ಕೊಂಡಲ್ಲಿ ಆದಾಯವನ್ನು ಹೆಚ್ಚಿಸುವ ಏರ್ಪಾಡುಗಳನ್ನು ಮಾಡಿಕೊಳ್ಳಲು ಅನುಕೂಲವುಂಟಾಗಿದೆ.

ಶಾಲಾ ಸಂಸ್ಥೆಗಳ ಏರ್ಪಾಡಿನಲ್ಲಿ ವಿಶೇಷವಾದ ಸುಧಾರಣೆಗಳು ನಡೆದಿವೆ. ಎಲಿಮೆಂಟರಿ ತರಗತಿಗಳನ್ನು ಪುನಃ ದೇವಸ್ಥಾನಗಳಿಂದಲೇ ನಡೆಸಿ ಬರಲಾರಂಭಿಸಿದ್ದೂ, ಸೆಕೆಂಡರಿ ತರಗತಿಗಳ ಬಗ್ಗೆ ವಿದ್ಯಾಖಾತೆಯ ನಿಬಂಧನೆಗಳನ್ನು ಅನುಸರಿಸಿ ವಿಶೇಷ ಹೊಸ ಏರ್ಪಾಡುಗಳನ್ನು ಮಾಡಿ ಕಟ್ಟೋಣಗಳನ್ನು ವ ವಠಾರವನ್ನು ವಿಸ್ತೀರ್ಣಗೊಳಿಸಿದ್ದೂ ಸರಕಾರದ ಮಂಜೂರಾತಿಗೆ ದೊರೆಗಳವರು ಶಿಫಾರಸು ಮಾಡಿದ್ದೂ, ಇದಕ್ಕೆ ಮೊದಲೇ ಒಂದು ಸಂಚಿಕೆಯಲ್ಲಂತೂ ಸೂಚಿತವಾಗಿದೆ. ಈ ತಿಂಗಳ ಆರಂಭದಿಂದ ಶಾಲಾ ಫಂಡನ್ನು ನಿರ್ಮಾಣಗೊಳಿಸಿ, ಹಿಂದೆ ದೇವರ ಭಂಡಾರದಿಂದ ಪ್ರತ್ಯೇಕಿಸಿಟ್ಟ ಮೂಲಧನಕ್ಕೆ ಈಗ ಸ್ವಜಾತಿಯ ಗೃಹಸ್ಥರು ಕೊಡುವ ದಾನ, ವಂತಿಗೆಗಳನ್ನು ಸೇರಿಸಿಕೊಂಡು ತನ್ಮೂಲಕವಾಗಿ ಹುಟ್ಟುವ ಬಡ್ಡಿಯಿಂದ ಶಾಲಾ ಸಂಸ್ಥೆಗಳಿಗೆ ಯಾವುದೊಂದು ಕೊರತೆ ಬಾರದಂತೆ ದ್ರವ್ಯಾನುಕೂಲತೆಯುಂಟಾಗುವ ಹಾಗೆ ಈಗ ಹೊಸ ವ್ಯವಸ್ಥೆಯಾಗಿದೆ. ವಿಧವೆಯೂ ಬರಹ ಬಾರದವಳೂ ಆದ ಸ್ವಜಾತಿಯ ಸ್ತ್ರೀಯೊಬ್ಬಳು ಮೊನ್ನೆ ತಾನೆ ಈ ಫಂಡಿಗೆ ೫೦೦ ರೂಪಾಯಿಗಳನ್ನು ದಾನವಾಗಿ ಕೊಟ್ಟುದೂ ವರ್ತಕರು, ಜಮೀನ್ದಾರರು, ನೌಕರರು ತಾವಾಗಿ ತಮ್ಮ ಆದಾಯದ ಮೇಲೆ ತೆರಿಗೆ ಹಾಕಿಕೊಂಡು ದಿನಂಪ್ರತಿ ವಸೂಲು ಕೊಡುತ್ತಿರುವುದೂ, ಶುಭಶೋಭನಾದಿಗಳೂ ಜನನ ಶಾಲಾ ಪ್ರವೇಶ ಕಾಲಗಳಲ್ಲೂ ಶಾಲಾ ಫಂಡಿಗೆ ಉಪಹಾರವನ್ನು ಕೊಡುತ್ತಿರುವುದೂ ವಿನಿಯೋಗಗಳು ದೇವಾಲಯದಲ್ಲಿ ಮತ್ತಷ್ಟು ಸಾಂಗವಾಗಿ ನಡೆಯುವಂತೆ ಏರ್ಪಡಿಸಿಕೊಂಡು ಶಾಲೆಗಳನ್ನು ದೇವಾಲಯದಂತೆ ಭಾವಿಸಿ ಜನಗಳು ಭಕ್ತಿಯಿಂದ ಪ್ರೋತ್ಸಾಹ ಕೊಡುತ್ತಿರುವುದೂ ಈಗ ಇಲ್ಲಿ ಸರ್ವತ್ರವೂ ಕೇಳಿಬರುವ ಸುದ್ದಿಗಳು. ವೈದಿಕ ಸಂಸ್ಕೃತ ಪಾಠಶಾಲೆಯು ಇಲ್ಲಿ ಈಗ ಉಪಕ್ರಮಗೊಂಡಿದೆ. ದೇವಾಲಯವು ಭಕ್ತಿಯೋಗಕ್ಕೂ ಶಾಲೆಯು ಜ್ಞಾನಯೋಗಕ್ಕೂ ಬಂಡಸಾಲೆಯು ಕರ್ಮಯೋಗಕ್ಕೂ ಉಪಯುಕ್ತವಾದ ಆಶ್ರಯಗಳೆಂದೂ, ಪುರುಷಾರ್ಥ ಸಾಧನೆಗೆ ಇವುಗಳ ಸುವ್ಯವಸ್ಥೆಯೇ ಅಗತ್ಯವೆಂದೂ ಇಲ್ಲಿ ಹೇಳಬಹುದಾಗಿದೆ. ಇಂತಹ ಪ್ರತ್ಯಕ್ಷಯೋಗಾಭ್ಯಾಸದಲ್ಲಿ ಸರ್ವರೂ ಅಭಿಮಾನದಿಂದ ಏಕೀಭಾವದಿಂದ ವರ್ತಿಸುವುದು ಹೆಚ್ಚಿನ ಪ್ರಯೋಜನವನ್ನುಂಟುಮಾಡುವುದು. ಬರುವ ವರ್ಷದ ಆಡಳಿತವನ್ನು ರಾಮಚಂದ್ರ ಲಕ್ಷ್ಮಣ ಬಾಳಿಗರಿಗೂ ಬಾಬ ಕಮ್ತಿರವರಿಗೂ ವಹಿಸಿಕೊಟ್ಟಿದೆ. ಹಿಂದಣ ಆಡಳಿತೆದಾರರು ಪೂರ್ಣ ಮಾಡದೆ ಇಡಬೇಕಾಗಿ ಬಂದ ಅನೇಕ ಕೆಲಸಗಳೂ ಇನ್ನು ಸೂಚನೆ ಮಾಡಿರುವ ಮಹಾ ಕಾರ್ಯಗಳೂ ಹಲವು ಇವೆ. ಇವನ್ನು ದೈವಪ್ರೇರಣೆಯು ಇವರ ಹಸ್ತೇನಮಾಡಿಸಿಕೊಳ್ಳುವ ಹಾಗೆ, ಮಹಾ ಜನಗಳ ಸಹಕಾರವು ಕೂಡಿಬರುವ ಹಾಗೆ ಸಹಾ ಇವರಿಗೆ ಆಶೀರ್ವಾದವಿರಲಿ.

ಯೂರೋಪದ ಮಹಾ ಯುದ್ಧ.

———.೦.———

ಪಶ್ಚಿಮ ರಣರಂಗದಿಂದ ಕೆಲವು ಕಾಲ ವಿಶೇಷ ವರ್ತಮಾನಗಳು ಬಾರದ್ದರಿಂದ ಆ ರಣರಂಗದಲ್ಲಿ ಆಶಾ ಭಂಗವಾಯಿತೋ ಏನೆಂತ ಕೆಲವರು ಅನುಮಾನಪಟ್ಟಿರಬಹುದು. ಆದರೆ ಇಂಥಾ ಅನುಮಾನ ಪಡಲು ಆ ರಣರಂಗದಲ್ಲಿ ಯಾವ ಕಾರಣವೂ ಇದ್ದಿಲ್ಲ. ಕಾಲಸ್ಥಿತಿಯು ನೆಟ್ಟಗಿಲ್ಲದುದರಿಂದ ಮಾತ್ರ ಅಲ್ಲಿ ವಿಶೇಷ ಕದನಗಳು ನಡೆಯಲಿಲ್ಲ. ಅದಲ್ಲದೆ ಜರ್ಮನರು ಸೊಮ್ಮೆಯಲ್ಲಿ ಬ್ರಿಟಿಷ ಮತ್ತು ಫ್ರೆಂಚರ ದಾಳಿಯನ್ನು ತಡೆಯುವರೆ ಇತರ ರಣರಂಗದಿಂದ ಸಾಧ್ಯವಾಗಬಹುದಾದಷ್ಟು ಸೇನಿಕರನ್ನೂ ಯುದ್ಧ ಸಾಮಾಗ್ರಿಗಳನ್ನೂ ಸೊಮ್ಮೆಯಲ್ಲಿ ತಂದೊತ್ತಿ ಮಿತ್ರರ ಮುಂದರಿಯೋಣವನ್ನು ತಡೆಯ ಪ್ರಯತ್ನಿಸುತ್ತಿದ್ದರು. ಆದರೂ ಬ್ರಿಟಿಷರು ಮತ್ತು ಫ್ರೆಂಚರು ಈ ವಿಸ್ತಾರವಾದ ರಣರಂಗದಲ್ಲಿ ಜರ್ಮನರ ಮೂರು ಮೂಲ ನೆಲೆಗಳನ್ನು ಹರಿದು ಜರ್ಮನರಿಗೆ ವಿಶೇಷ ನಷ್ಟವನ್ನುಂಟು ಮಾಡಿರುತ್ತಾರೆ. ಜರ್ಮನರಿಗೆ ಇಲ್ಲಿ ಅರ್ಧ ಮಿಲಿಯಕ್ಕೆ ಮಿಕ್ಕಿದ ಜನ ನಷ್ಟವಾಯಿತೆಂದರೂ ಇದು ಸಂಯಾದ ಲೆಕ್ಕವಲ್ಲ. ಅವರಿಗೆ ಇದಕ್ಕಿಂತ ಎಷ್ಟೋ ಹೆಚ್ಚಿನ ನಷ್ಟವಾಗಿರುತ್ತದೆ. ಈ ನಷ್ಟವು ಜುಲಾಯಿ ತಾ. ೧ರಿಂದ ಈವರೆಗೆ ನಡೆದ ಕದನಗಳಲ್ಲಿ ಆದದ್ದಾಗಿರುತ್ತದೆ. ಹೀಗೆ ಈ ನಾಲ್ಕು ತಿಂಗಳ ಕದನಗಳಲ್ಲಿ ಮಿತ್ರರು ವಿಶೇಷ ಜಯವನ್ನು ಪಡೆದಿರುತ್ತಾರೆ. ಈ ನಾಲ್ಕು ತಿಂಗಳಲ್ಲಿ ನಡೆದ ಕದನಗಳಲ್ಲಿ ಮಿತ್ರರಿಗೆ ನಷ್ಟವಾಗಿಲ್ಲವೆಂತ ಯಾರೂ ಹೇಳುವದಿಲ್ಲ. ಅವರಿಗೂ ವಿಶೇಷ ನಷ್ಟವಾಗಿದೆ. ಆದರೆ ಜರ್ಮನರಿಗೆ ಆದಷ್ಟು ನಷ್ಟ ಮಿತ್ರರಿಗೆ ಆಗಲಿಲ್ಲವೆಂತ ಖಂಡಿತವಾಗಿ ಹೇಳಬಹುದಾಗಿದೆ. ಈಗ ಮಿತ್ರರು ಸೊಮ್ಮೆಯಲ್ಲಿ ನುಗ್ಗಿಹೋಗಿ ಕದನಮಾಡಿರುವದನ್ನು ನಿಲ್ಲಿಸಿರುತ್ತಾರೆ. ಅಲ್ಲಿಯ ವಾಯುಸ್ಥಿತಿಯು ನೆಟ್ಟಗಿಲ್ಲದಿರುವದೂ ಚಳಿಕಾಲದಲ್ಲಿ ನುಗ್ಗಿಹೋಗಿ ಕದನ ಮಾಡುವದು ಅತಿ ಕಷ್ಟವಾಗಿರುವದೂ ಇದಕ್ಕೆ ಕಾರಣವಾಗಿರುತ್ತದೆ. ಈಗ ಮಿತ್ರರು ತಾವು ಶತ್ರುಗಳಿಂದ ಕಿತ್ತುಕೊಂಡ ಸ್ಥಳಗಳನ್ನು ಬಲಕಾಯಿಸುತ್ತಿದ್ದಾರೆ. ಮತ್ತು ತಕ್ಕ ಸಮಯದಲ್ಲಿ ಶತ್ರುಗಳ ಮೇಲೆ ನುಗ್ಗಿಹೋಗಿ ಪುನಃ ಕದನಮಾಡುವರು. ಮತ್ತೊಂದು ಕಡೆಯಲ್ಲಿ ಫ್ರೆಂಚರು ನುಗ್ಗಿಹೋಗಿ ಜರ್ಮನರು ವೆರ್ದನಿನಲ್ಲಿ ಸ್ವಾಧೀನಮಾಡಿಕೊಂಡಿದ್ದ ಸ್ಥಳಗಳನ್ನು ಪುನಃ ಗೆದ್ದುಕೊಳ್ಳುತ್ತಿದ್ದಾರೆ.

ಪಶ್ಚಿಮ ರಣರಂಗ.

ಈ ರಣರಂಗದಲ್ಲಿ ಕಳೆದ ವಾರ ನಡೆದ ಸಂಗತಿಗಳನ್ನು ವಿವರವಾಗಿ ತಿಳಿಯಬೇಕಾದರೆ ಹೀಗೆ ಹೇಳಬಹುದು:—ಮಿತ್ರರ ತೋಪುಗಳು ಹೂಜೆನ್ ಜೊಲ್ಲರ್ನ್ ಮತ್ತು ಲಾಬಸ್ಸೆ ಕಾಲುವೆಯ ಬಳಿ ಶತ್ರುಗಳ ಮೇಲೆ ಹಲ್ಲೆ ಮಾಡಿರುತ್ತವೆ. ಸ್ಯಾಲಿಸಲೆಸಿನಲ್ಲಿ ೧೫ ಶತ್ರುಗಳ ಸೇನಿಕರು ನಮ್ಮವರ ಶೆರೆಬಿದ್ದಿರುತ್ತಾರೆ. ಇಲ್ಲಿ ಮೇಲಾಯುದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ.

ಕಳೆದ ತಾ. ೨೪ರಲ್ಲು ವೆರ್ದನಿನಲ್ಲಿ ಫ್ರೆಂಚರಿಗೆ ಆದ ಜಯವು ಅತಿ ಮಹತ್ವದಾಗಿದೆ. ಇಲ್ಲಿ ಫ್ರೆಂಚರು ಶತ್ರುಗಳನ್ನು ಮ್ಯೂಸ್ ನದಿಯ ಅತಿ ಉನ್ನತವಾದ ಸ್ಥಳಗಳಿಂದ ಹಿಂದಟ್ಟಿರುವದರಿಂದ ಫ್ರೆಂಚರಿಗೆ ಇಲ್ಲಿ ಸುಲಭವಾಗಿ ಶತ್ರುಗಳಿಗೆ ಕಾಣದಂತೆ ಯುದ್ಧ ಸನ್ನಾಹಮಾಡಬಹುದಾಗಿದೆ.

ಸೊಮ್ಮೆಯ ಉತ್ತರದಲ್ಲಿಯೂ ಮಿತ್ರರಿಗೆ ವಿಶೇಷ ಜಯ ಉಂಟಾಗಿರುವದು. ಶತ್ರುಗಳ ಎರಡು ಹೊಸ ಕಂದಕಗಳೂ, ೧೩೫ ಸೇನಿಕರೂ ಮಿತ್ರರ ಶೆರೆಬಿದ್ದಿರುವರು. ವೆರ್ದನ್ ಮತ್ತು ಡೊವಾಮೊಂಟಿನಲ್ಲಿ ತೋಪುಗಳ ಗರ್ಜನೆಯು ಅತಿ ತೀಕ್ಷ್ಣವಾಗಿರುತ್ತದೆ. ಒಕ್ಟೋಬರ ತಾ. ೨೪ರಿಂದ ೬೦೧೧ ಶತ್ರು ಸೇನಿಕರೂ, ೧೫೪ ಆಫೀಸರರೂ ಮಿತ್ರರ ಶೆರೆಬಿದ್ದಿರುವರು. ಇದಲ್ಲದೆ ದೊಡ್ಡ ಫಿರಂಗಿಗಳು ೧೫, ಕಂದಕಗಳನ್ನು ಒಡೆಯುವ ಫಿರಂಗಿಗಳು ೧೧, ಯಂತ್ರಚಾಲಿತ ಫಿರಂಗಿಗಳು ೧೪೪, ಇನ್ನು ಅನೇಕ ಯುದ್ಧ ಸಾಮಾಗ್ರಿಗಳೂ ಮಿತ್ರರಿಗೆ ದೊರಕಿರುತ್ತವೆ.

ವಾಕ್ಸ ಕೋಟೆಯ ಮೇಲೆ ಗರೆಯುತ್ತಿದ್ದ ಫ್ರೆಂಚರ ಫಿರಂಗಿಗಳ ಹೊಡತವನ್ನು ತಡೆಯಲಾರದೆ ವಾಕ್ಸ ಕೋಟೆಯಲ್ಲಿದ್ದ ಜರ್ಮನರು ಸದರಿ ಕೋಟೆಯನ್ನು ಬಿಟ್ಟುಹೋಗಬೇಕಾಯಿತೆಂತ ಜರ್ಮನ ಕಡೆಯಿಂದ ಪ್ರಕಟವಾಗಿದೆ. ಕಳೆದ ಒಂದು ಪಕ್ಷ ಸೊಮ್ಮೆಯಲ್ಲಿ ಮಿತ್ರರ ಶೆರೆಬಿದ್ದ ಶತ್ರು ಸೇನಿಕರ ಸಂಖ್ಯೆ ಒಟ್ಟಿಗೆ ೩೧,೧೩೭ ಎಂತ ಪ್ರಕಟವಾಗಿದೆ.

ಜರ್ಮನರ ಪ್ರಾಮುಖ್ಯ ಜನರಲರಾದ ಹಿಂಡೆನ್‌ಬರ್ಗರವರಿಗೆ ಪತ್ರಪ್ರತಿನಿಧಿಗಳು ಭೇಟಿಕೊಟ್ಟಲ್ಲಿ ಅವರು ಯುದ್ಧವು ಯಾವಾಗ ಮುಗಿಯುವದೆಂಬದನ್ನು ಹೇಳಲಿಕ್ಕೆ ನಿರಾಕರಿಸಿರುತ್ತಾರೆ. ೧೯೧೬ನೇ ಇಸವಿಯಲ್ಲಿ ಒಂದು ತಂಡತುಂಡಾದ ಕದನವು ನಡೆಯಬಹುದು. ಏನು ಸಂಭವಿಸಿದರೂ ಜರ್ಮನರು ಇಂಥಾ ಕಡಾಕಡಿಯ ಕದನವನ್ನು ಮಾಡಲು ಸಿದ್ಧರಾಗಿಯೇ ಇರುವರು ಎಂದು ಜನರಲ್ ಹಿಂಡೆನ್‌ಬರ್ಗರು ಹೇಳಿರುವರಲ್ಲದೆ ಸೊಮ್ಮೆಯಲ್ಲಿ ಫ್ರೆಂಚರಿಗೆ ಆದ ಜಯವು ದೊಡ್ಡದಲ್ಲವೆಂದೂ ಫ್ರೆಂಚರು ಬ್ರಿಟಿಷರ ಒತ್ತಾಯದಿಂದ ತಮ್ಮನ್ನು ತಾವೇ ಹಾಳುಮಾಡಿಕೊಳ್ಳುತ್ತಿದ್ದಾರೆಂದೂ ಹೇಳಿರುತ್ತಾರೆ.

ಸಲೆಸೆಲಿಸಿನಲ್ಲಿ ನಡೆದ ಕದನದಲ್ಲಿ ಒಟ್ಟಿಗೆ ೭೩೬ ಸೇನಿಕರು ಮಿತ್ರರ ಶೆರೆಬಿದ್ದಿರುತ್ತಾರೆ. ೧೨ ಯಂತ್ರಚಾಲಿತ ಫಿರಂಗಿಗಳು ಫ್ರೆಂಚರ ಸ್ವಾಧೀನವಾಗಿರುವವು.

ವಾಕ್ಸ ಕೋಟೆಯ ಮೇಲೆ ಕೆಲವು ದಿವಸಗಳಿಂದ ಫ್ರೆಂಚರು ಗುಂಡುಹಾರಿಸುತ್ತಿದ್ದದರಿಂದ ಕಾಲಾಳು ಸೇನೆಯು ಮುಂದರಿದು ಕೋಟೆಯ ಮೇಲೆ ಹಲ್ಲೆ ಮಾಡುವ ಮೊದಲೇ ಶತ್ರುಗಳು ಫಿರಂಗಿಗಳ ಹೊಡತವನ್ನು ತಡೆಯಲಾರದೆ ಕೋಟೆಯನ್ನು ಬಿಟ್ಟುಹೋಗಿರುವರು. ಕೋಟೆಯಲ್ಲಿ ದೊಡ್ಡ ಸಿಡಿತ ಉಂಟಾಗಿರುವದು. ಫ್ರೆಂಚರು ಯಾವ ನಷ್ಟವನ್ನೂ ಹೊಂದದೆ ರಾತ್ರಿಕಾಲ ಮಹತ್ತಾದ ಜಯವನ್ನು ಪಡೆದಿರುತ್ತಾರೆ. ವೆರ್ದನಿನ ಹೊರಭಾಗದ ಕೋಟೆಗಳನ್ನೆಲ್ಲಾ ಫ್ರೆಂಚರು ಕಿತ್ತುಕೊಂಡು ಸಂಪಡಿಸಿ ಕಾಪಾಡಿಕೊಂಡಿರುತ್ತಾರೆ. ಫ್ರೆಂಚರು ಶತ್ರುಗಳ ಎರಡು ವಾಯುನಾವೆಗಳನ್ನು ಕೆಳಗಿಳಿಸಿರುವರು.

ಫ್ರೆಂಚರು ವಾಕ್ಸ ಕೋಟೆಯನ್ನು ಸ್ವಾಧೀನಮಾಡಿಕೊಂಡ ನಂತರ ವಾಕ್ಸಿನ ಆಜುಬಾಜಿನ ಗ್ರಾಮಗಳನ್ನು ಗೆದ್ದುಕೊಂಡು ವಾಕ್ಸ ಸರೋವರದ ಬಳಿಗೆ ತಲ್ಪಿರುತ್ತಾರೆ. ಜರ್ಮನರಿಗೆ ಡೊವಾಮೊಂಟಿನಿಂದ ವಾಕ್ಸ ಕೋಟೆಗೆ ಅಂದರೆ ಸುಮಾರು ೨|| ಮೈಲು ಮುಂದರಿಯುವರೆ ೧೦೪ ದಿವಸಗಳ ಕಾಲ ಬೇಕಾಯಿತು. ಹೀಗೆ ಜರ್ಮನರು ಸ್ವಾಧೀನಮಾಡಿಕೊಂಡಿದ್ದ ೨ ಕೋಟೆಗಳನ್ನೂ ಫ್ರೆಂಚರು ಒಂಭತ್ತೇ ದಿವಸದ ಕದನ ಮಾಡಿ ಗೆದ್ದುಕೊಂಡರು.

ಪೂರ್ವ ರಣರಂಗ.

ಗೆಲೀಸಿಯದಲ್ಲಿ ಬ್ರೆಜ್‌ಜಾನಿಯ ದಕ್ಷಿಣ ಪ್ರಾಂತ್ಯದಲ್ಲಿ ಭೀಕರ ಕಾಳಗ ನಡಿಯುತ್ತಿದೆ. ನರೊಜ್ವೈ ನದಿಯ ಬಳಿ ಶತ್ರುಗಳು ಕೆಲವು ಕಡೆಗಳಲ್ಲಿ ಹಲ್ಲೆಮಾಡಿರುವರು. ಆದರೆ ಪ್ರತಿಕಡೆಯಲ್ಲಿಯೂ ಶತ್ರುಗಳು ಹಿಮ್ಮೆಟ್ಟಿರುತ್ತಾರೆ.

ಬಾಲ್ಕಾನ್.

ರುಮೇನಿಯನರು ಬುಕಾರೆಸ್ಟಿಗೆ ೭೫ ಮೈಲು ಉತ್ತರದಲ್ಲಿರುವ ರೋಸ್ಕ ಪರ್ವತವನ್ನು ಗೆದ್ದುಕೊಂಡು ಶತ್ರುಸೇನಿಕರನ್ನು ಶೆರೆಹಿಡಿದಿರುತ್ತಾರೆ. ವಾಲ್ಕ್ಯಾನ್ ಕಣಿವೆಯ ಬಳಿ ರುಮೇನಿಯನರು ಅತಿ ಜೋರಾವರಿಯಿಂದ ಶತ್ರುಗಳ ಮೇಲೆ ಕದನಮಾಡುತ್ತಿದ್ದಾರೆ. ಡ್ಯುಲ್ ನೆಂಬಲ್ಲಿ ೬೦೦ ಸೇನಿಕರೂ ಬಹಳ ಯುದ್ಧ ಸಾಮಾಗ್ರಿಗಳೂ ರುಮೇನಿಯನರಿಗೆ ದೊರಕಿರುತ್ತವೆ. ಆಲ್ಟ್ ನದಿಯ ಪೂರ್ವದಲ್ಲಿ ಕಠಿಣ ಕಾಳಗ ನಡಿಯುತ್ತಿದೆ. ಡ್ಯುಲಿನಲ್ಲಿ ರುಮೇನಿಯನರು ಶತ್ರುಗಳನ್ನು ಹಿಂದಟ್ಟುತ್ತಿದ್ದಾರೆ. ಡೊಬ್ರುಡ್ಜದಲ್ಲಿ ವಿಶೇಷ ಕದನಗಳು ನಡೆದಿರುವದಿಲ್ಲ. ರೊಟ್ಟೆರ್‌ಟ್ರೆಮ್ ಕಣಿವೆಯ ಬಳಿ ಕಠಿಣ ಕಾಳಗವು ನಡಿಯುತ್ತಿದೆ. ಶತ್ರುಗಳು ಬುಜೆನ್ ಕಣಿವೆಯ ಮೇಲೆ ಭೀಕರವಾಗಿ ಗುಂಡು ಹಾರಿಸುತ್ತಲಿದ್ದಾರೆ. ಬುಜೋ ನದಿಯ ಪಶ್ಚಿಮದಲ್ಲಿ ರುಮೇನಿಯನರು ಮುಂದರಿದು ಶತ್ರುಗಳ ಯುದ್ಧ ಸಾಮಗ್ರಿಗಳನ್ನು ಹಿಡಿದಿರುತ್ತಾರೆ. ಟಟ್ಲಬುಡ್ಡಿ ಎಂಬಲ್ಲಿ ೧೦೦ ಸೇನಿಕರೂ ಟೆಲಜಾನ ಕಣಿವೆಯಲ್ಲಿ ೨ ಯಂತ್ರಚಾಲಿತ ಫಿರಂಗಿಗಳೂ ವಲ್ಕ್ಯಾನ್ ಕಣಿವೆಯಲ್ಲಿ ೫೩೫ ಸೇನಿಕರೂ ೪ ಫಿರಂಗಿಗಳೂ ೨೦ ಯಂತ್ರಚಾಲಿತ ಫಿರಂಗಿಗಳೂ ರುಮೇನಿಯನರ ಶೆರೆ ಬಿದ್ದಿರುತ್ತವೆ.

ಸೆರ್ನದಲ್ಲಿ ಮಿತ್ರ ಸೇನಿಕರಿಗೂ ಬಲ್ಗೇರಿಯನರಿಗೂ ಕದನ ನಡೆದಿರುವದು. ಸರ್ವಿಯನರೂ ಅಲ್ಲಲ್ಲಿ ಬಲ್ಗೇರಿಯನರ ಮೇಲೆ ಬಿದ್ದು ಅವರನ್ನು ಹಿಂದಟ್ಟುತ್ತಿದ್ದಾರೆ.

ಗ್ರೀಸ್.

ಸಲೋನಿಕೆಕ್ಕೆ ೩೪ ಮೈಲು ದಕ್ಷಿಣದಲ್ಲಿರುವ ಎಕ್ಯಾರಿನಿ ಎಂಬ ಸ್ಥಳವನ್ನು ವೆಂಜಲಿಸ್ಟರ ಪಕ್ಷದವರು ಸ್ವಾಧೀನಮಾಡಿಕೊಂಡಿರುವದರಿಂದ ಗ್ರೀಕ ಸರಕಾರದವರು ತಮ್ಮ ಸೇನೆಯನ್ನು ಅಲ್ಲಿಗೆ ಕಳುಹಿಸಿರುತ್ತಾರೆ. ಸಲೋನಿಕದಲ್ಲಿರುವ ವೆಂಜಲಿಸ್ಟ ಪಕ್ಷದವರಿಗೆ ಹೋಗಿ ಸೇರುವ ಸೇನಿಕರನ್ನು ಇಲ್ಲಿದ್ದ ಗ್ರೀಕ ಪಾಳೆಯದವರು ತಡೆದುದರಿಂದ ವೆಂಜಲಿಸ್ಟ ಪಕ್ಷದವರು ಅದನ್ನು ಸ್ವಾಧೀನ ಮಾಡಿಕೊಳ್ಳಬೇಕಾಯಿತು. ಇಲ್ಲಿ ವೆಂಜಲಿಸ್ಟ ಪಕ್ಷದವರಿಗೂ ಗ್ರೀಕ ಸರಕಾರದ ಪಕ್ಷದವರಿಗೂ ನಡೆದ ಕದನದಲ್ಲಿ ವೆಂಜಲಿಸ್ಟರಲ್ಲಿ ೨೦ ಮಂದಿಯೂ ಗ್ರೀಕ ಸರಕಾರದ ಪಕ್ಷದವರಲ್ಲಿ ೧೩ ಮಂದಿಯೂ ಪ್ರಾಣಾಪಾಯ ಹೊಂದಿರುತ್ತಾರೆ.

ಇಟಲಿ.

ಇಟಲಿಯನರು ಗೊರಿಡ್ಜದ ಬಳಿ ಶತ್ರುಗಳ ಮೇಲೆ ಬಿದ್ದು ಟವೊಲಿ ಮತ್ತು ಸಾನ್‌ಮಾರ್ಕೆ ಬಳಿ ಇದ್ದ ಶತ್ರುಗಳ ಕೆಂದಕಗಳನ್ನು ಗೆದ್ದುಕೊಂಡಿರುತ್ತಾರೆ. ಕಾರ್ಸೊ ರಣರಂಗದಲ್ಲಿಯೂ ಇಟಲಿಯನರಿಗೆ ಮಹತ್ತಾದ ಜಯವಾಗಿರುತ್ತದೆ. ೪,೭೩೧ ಸೇನಿಕರೂ ೧೩೨ ಆಫೀಸರರೂ ಬಹಳ ಯುದ್ಧ ಸಾಮಾಗ್ರಿಗಳೂ ಇಟಲಿಯನರ ಶೆರೆಬಿದ್ದಿರುತ್ತವೆ.

ಇಟಲಿಯನರ ವಾಯುನಾವೆಗಳು ಸೆಬನಿಕೋ ಆಖಾತದಲ್ಲಿದ್ದ ಶತ್ರುಗಳ ನಾವೆಗಳ ಮೇಲೆ ೧೭ ಬೊಂಬುಗಳನ್ನು ಹಾಕಿ ಸುರಕ್ಷಿತವಾಗಿ ಹಿಂದೆರಳಿರುತ್ತವೆ.

ವೆಲಿಕಿಕ್ರಿಬಾಕ್ ಮತ್ತು ಪೆರೆನಿಕಾ ಪರ್ವತದ ಬಳಿ ಇಟಲಿಯನರು ಶತ್ರುಗಳ ಒಂದು ಬಲವಾದ ನೆಲೆಯನ್ನು ಕಿತ್ತುಕೊಂಡಿರುತ್ತಾರೆ. ಅಲ್ಲಿ ೩,೪೯೮ ಶತ್ರು ಸೇನಿಕರೂ ೧೧೭ ಆಫೀಸರರೂ ಅನೇಕ ಯುದ್ಧ ಸಾಮಾಗ್ರಿಗಳೂ ಇಟಲಿಯನರ ಶೆರೆಬಿದ್ದಿರುವವು.

ಒಕ್ಟೋಬರ ತಿಂಗಳಿಂದ ಆಸ್ಟ್ರಿಯನರಿಗೆ ಈ ರಣರಂಗದಲ್ಲಿ ೨೫,೦೦೦ ಸೇನಿಕರ ನಷ್ಟವಾಗಿರುವದೆಂತ ತಿಳಿಯಬರುತ್ತದೆ.

ಜ್ಯೂಲಿಯನ್ ರಣರಂಗದಲ್ಲಿ ನಡೆದ ಕದನದಲ್ಲಿ ಅಗೊಸ್ತು ತಾ. ೭ರಿಂದ ೪೦೩೭ ಶತ್ರುಸೇನಿಕರು ಇಟಲಿಯನರ ಶೆರೆಬಿದ್ದಿರುತ್ತಾರೆ. ಕಳೆದ ೪ ದಿವಸಗಳಲ್ಲಿ ಈ ರಣರಂಗದಲ್ಲಿ ೮೯೮೨ ಸೇನಿಕರು ಇಟಲಿಯನರ ಶೆರೆಬಿದ್ದಿರುತ್ತಾರೆ. ಈ ಪೈಕಿ ೨೭೦ ಆಫೀಸರರು.

ಜಲಾಂತರ್ಗಾಮಿ ನಾವೆಗಳು.

ಬ್ರಿಟಿಷ್ ಇಂಡಿಯಾ ಲ್ಯಾನಿಗೆ ಸೇರಿದ "ಮಾಂಟೋಲ" ಹಡಗವು ಉತ್ತರ ಸಮುದ್ರದಲ್ಲಿ ಸಿಡಿಮದ್ದಿನ ಗಣಿಗೆ ತಗಲಿ ಕರೆ ಸೇರಿರುತ್ತದೆ. ಬ್ರಿಟಿಷರ "ಮರೋಟು" "ಟೊರಿನಿಯೊ" "ಬೆಲ್ವಿಲಿ ಹಿಲ್" "ಗ್ಲೆನ್‌ಲೋಗನ್" "ಮಲಿಯಬ್ರೂಸ್" ಹಡಗಗಳೂ ನೋರ್ವೇಯವರಿಗೆ ಸೇರಿದ "ಫಾಕೆಪ್‌ಜೆಲ್" "ಟ್ರೊಸೊಡಾಲ್" "ಕಾಲ್ಲು" "ರಾವ್ನ" "ಡೆಲ್ಟ" "ಟ್ರೊಂಪ್" "ಸಟರ್ನ" "ಥೊರ್" "ಇವಾನ್ಹೊ" ಎಂಬ ಹಡಗಗಳೂ ಗ್ರೀಕರಿಗೆ ಮತ್ತು ಸ್ವೀಡನಿನವರಿಗೆ ಸೇರಿದ ಕೆಲವು ಹಡಗಗಳೂ ಜಲಾಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

~~~~~~

ಉತ್ತರ ಹಿಂದೂಸ್ಥಾನ.

~~~~~~

ಕಳೆದ ಸೆಪ್ಟಂಬರ ತಿಂಗಳೊಂದರಲ್ಲಿಯೇ ಹಿಂದೂಸ್ಥಾನದಲ್ಲಿ ೧೪ ಹೊಸ ಕಂಪೆನಿಗಳು ೮೮ ಲಕ್ಷ ರೂಪಾಯಿಗಳ ಮೂಲಧನದಿಂದ ಸ್ಥಾಪಿಸೋಣಾಗಿರುತ್ತವೆ. ಕಳೆದ ಎಪ್ರಿಲ್ ತಿಂಗಳಿಂದ ಸೆಪ್ಟಂಬರ ತಿಂಗಳವರೆಗೆ ಒಟ್ಟಿಗೆ ೬೫ ಕಂಪೆನಿಗಳು ೭ ಕೋಟಿ ೯೫ ಲಕ್ಷ ಮೂಲಧನದಿಂದ ಸ್ಥಾಪಿಸೋಣಾಗಿರುವವು.

~~~~~~

ಹಿಂದೂಸ್ಥಾನದ ಸರ್ವ ಸೇನಾಧಿಪತಿಯಾಗಿ ನೇಮಿಸಲ್ಪಟ್ಟ ಸೆರ್ ಚಾರ್ಲ್ಸ ಮುನ್ರೋರವರು ಮೆಸೊಪಟೇಮಿಯದಿಂದ ಇದೇ ತಾ. ೨ರಲ್ಲು ಮುಂಬಾಯಿ ಬಂದರದಲ್ಲಿ ಬಂದಿಳಿದಿರುತ್ತಾರೆ.

~~~~~~

ಬಂಗಾಳದ ಗುಪ್ತ ಪೋಲಿಸ ಇಲಾಖೆಯವರು ಕಲ್ಕತ್ತೆಯ ಢಕ್ಕಾ, ಬಾರಿಸಾಲ್ ಮೆಮನ್‌ಸಿಂಘ್, ಮೊದಲಾದ ಸ್ಥಳಗಳ ಕೆಲವು ಮನೆಗಳನ್ನು ಜಡ್ತಿಮಾಡಿ ಕೆಲವು ಯುವಕರನ್ನು ಕೈದುಮಾಡಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಮೇಲೆ ಅವರನ್ನು ಇಂಟರ್ನ ಮಾಡಿರುತ್ತಾರೆ. ಕೈದುಮಾಡಲ್ಪಟ್ಟವರಲ್ಲಿ ಹೆಚ್ಚಿನವರು ಮಾನ್ಯ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿಗಳು.

~~~~~~
~~~~~~

ಅಹಮ್ಮದಾಬಾದಿನಲ್ಲಿ ನಡೆದ ಮುಂಬಾಯಿ ಪ್ರಾಂತಿಕ ಸಭೆಯ ಮಂಟಪದಲ್ಲಿ ರತ್ನಸಿಂಗ್ ದೀಪ್ ಸಿಂಗನೆಂಬವನು ರಾಜದ್ರೋಹಕರವಾದ ನೋಟೀಸುಗಳನ್ನು ಹಂಚಿದ್ದನೆಂಬುದಾಗಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ದಾವ್ಜಿ ಕೊತ್ವಾಲ ಎಂಬವನು ಇವನನ್ನು ವಿಚಾರಣೆಗೆ ಗುರಿಮಾಡಿದ್ದನು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಈ ಮೊಕದ್ದಮೆಯ ವಿಚಾರ ನಡೆಸಿ ಆಪಾದಿತನು ೫೦೦ ರೂಪಾಯಿಗಳ ಭದ್ರತೆಯ ಪತ್ರ ಬರೆಸಿಕೊಡಬೇಕೆಂತಲೂ ಇದಕ್ಕೆ ತಪ್ಪಿದರೆ ೧ ವರ್ಷದ ಕಠಿಣ ಸಜಾ ಎಂತಲೂ ತೀರ್ಮಾನಿಸಿದರು. ಆಪಾದಿತನಿಗೆ ಭದ್ರತೆ ಕೊಡಲು ಅನಾನುಕೂಲವಾದುದರಿಂದ ಬಂದಿಖಾನೆಗೆ ಹೋದನು.

ಮಿಸೆಸ್ ಅನ್ನಿ ಬೆಸೆಂತರವರು ಮಧ್ಯ ಸಂಸ್ಥಾನ ಮತ್ತು ಬೇರಾರಿಗೆ ಹೋಗಕೂಡದೆಂತ ಅಲ್ಲಿಯ ಸರಕಾರದವರು ನಿರ್ಬಂಧ ಪಡಿಸಿರುತ್ತಾರೆ. ಮಧ್ಯ ಸಂಸ್ಥಾನಗಳ ಸರಕಾರದವರ ಈ ಹುಕುಮನ್ನು ವಿರೋಧಿಸುವ ಸಭೆಯು ಮದ್ರಾಸಿನ ಅಡ್ಯಾರಿನಲ್ಲಿರುವ ಥಿಯೋಸಫಿ ಸೊಸೈಟಿಯ ಸೆಂಟ್ರಲ್ ಹಾಲಿನಲ್ಲಿ ತಾ. [illegible]ರಲ್ಲಿ ಸರ್ ಸುಬ್ರಮಣ್ಯ ಅಯ್ಯರ್ ಕೆ. ಸಿ. ಐ. ಇ. ಎಲ್. ಎಲ್. ಡಿ. ಯವರ ಅಧ್ಯಕ್ಷತೆಯಲ್ಲಿ ಕೂಡಿಬಂದಿರುತ್ತದೆ. ಸೆಂಟ್ರಲ್ ಪ್ರಾವಿನ್ಸಿನಲ್ಲಿ ನಡೆಯಲಿಕ್ಕಿರುವ ಥಿಯೋಸಫಿ ಸೊಸೈಟಿಯ ಸಭೆಗೆ ಮಿಸೆಸ್ ಬೆಸೆಂತರು ಹೋಗಲಿಕ್ಕಿದ್ದುದರಿಂದ ಆ ಸರಕಾರದವರು ಈ ಆಜ್ಞೆಯನ್ನು ಕೊಟ್ಟಿದ್ದಿರಬಹುದೆಂದೂ ಇದು ವಿಕ್ಟೋರಿಯ ಮಹಾರಾಣಿಯವರು ದಯಪಾಲಿಸಿದ ಮತ ಸಂಬಂಧವಾದ ಸ್ವಾತಂತ್ರ್ಯಕ್ಕೆ ಭಂಗವನ್ನು ಉಂಟುಮಾಡುವ ಹುಕುಂ ಆಗಿರುವದರಿಂದ ಇಂಡಿಯಾ ಸರಕಾರದವರು ಮಧ್ಯ ಸಂಸ್ಥಾನಗಳ ಸರಕಾರದ ಈ ಹುಕುಮನ್ನು ರದ್ದುಮಾಡಬೇಕೆಂಬಿತ್ಯಾದಿ ನಿರ್ಧಾರಗಳು ಈ ಸಭೆಯಲ್ಲಿ ಆಗಿರುತ್ತವೆ.

ಅಕ್ಟೋಬರ ತಾ. ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ [illegible] ಮಂದಿಗೆ ಪ್ಲೇಗಬೇನೆಯು ತಗಲಿ [illegible] ಮಂದಿ ಮೃತಪಟ್ಟಿರುತ್ತಾರೆ. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ [illegible]; ಮದ್ರಾಸ್ [illegible]; ಬಿಹಾರ್ ಮತ್ತು ಒರಿಸ್ಸ [illegible]; ಸಂಯುಕ್ತ ಸಂಸ್ಥಾನ [illegible]; ಪಂಜಾಬು [illegible]; ಬರ್ಮ [illegible]; ಮಧ್ಯ ಸಂಸ್ಥಾನ [illegible]; ಮೈಸೂರು [illegible]; ಹೈದರಾಬಾದ್ [illegible]; ಮಧ್ಯ ಹಿಂದೂಸ್ಥಾನ [illegible]; ರಜಪುತಾನ ೧ ಮರಣಗಳಾಗಿರುವವು.

ಮೈಸೂರು ಮಹಾರಾಜರು ಕಲ್ಕತ್ತೆಯ ಪಶುಶಾಲಾ ಉದ್ಯಾನಕ್ಕೆ ಇನಾಮವಾಗಿ ಕೊಟ್ಟಿದ್ದ ಒಂದು ಹುಲಿಯನ್ನು ಮದ್ರಾಸ್ ಟ್ರೇನ್ ಬಂಡಿಯಲ್ಲಿ ಹಾಕಿ ಕಲ್ಕತ್ತೆಗೆ ಕಳುಹಿಸುತ್ತಿರುವಾಗ ಹೌರ ಸ್ಟೇಶನಿನಲ್ಲಿ ಈ ಹುಲಿಯು ಪೆಟ್ಟಿಗೆ ಗೂಡಿನಿಂದ ಹೊರಗೆ ಬಂದು ಮತ್ತೊಂದು ಗೂಡಿನಲ್ಲಿದ್ದ ದಕ್ಷಿಣ ಆಫ್ರಿಕದ ಜಾತಿಯ ಒಂದು [illegible] ತಿಂದುಬಿಟ್ಟಿತು. ಅನಂತರ ರೈಲ್ವೇ ಅಧಿಕಾರಿಗಳು ಬಹಳ ಕಷ್ಟದಿಂದ ಹುಲಿಯನ್ನು ಗೂಡಿನೊಳಕ್ಕೆ ಸೇರಿಸಿ ಕಲ್ಕತ್ತೆಯ ಉದ್ಯಾನಕ್ಕೆ ಕಳುಹಿಸಿಕೊಟ್ಟರು.

ನಾಗಪುರದ [illegible]ಯಲ್ಲಿ ಶಿಕ್ಷೆ ಹೊಂದಿ ಲಾಹೋರಿಗೆ ಸೇರಿದ ಜಲಂಧರ ಬಂದಿಖಾನೆಯಲ್ಲಿದ್ದ ದರೋಡೆಯವರ ಪೈಕಿ ಭಗವಾನ್, ದಲೀಪಸಿಂಗ್, ಮತ್ತು ಬಚನ ಎಂಬ ಈ ಮಂದಿ ತಪ್ಪಿಸಿಕೊಂಡು ಹೋಗಿರುತ್ತಾರೆ. ಇವರು ಇದ್ದ ಕೋಣೆಯ ಗೋಡೆಯ ಅಡಿಯಲ್ಲಿ ಕೊರೆದು ಆ ಮೂಲಕ ಹೊರಗೆ ತಪ್ಪಿಸಿಕೊಂಡು ಹೋಗಿರುವರೆಂತ ತಿಳಿದುಬಂದದೆ. ಆದರೆ ಬಂದಿಖಾನೆಯ ವಠಾರದಿಂದ ಹೊರಗೆ ಹ್ಯಾಗೆ ಹೋದರೆಂಬುದು ತಿಳಿದುಬರಲಿಲ್ಲ. ತಪ್ಪಿಸಿಕೊಂಡವರ ಪತ್ತೆಯೂ ಆಗಲಿಲ್ಲ.

ಕೂಲಿಯಾಳು ಸೇನಿಕರನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಮಾಡಿದರೆ ಅವರಿಗೆ ಬರುವ ಸ್ವಲ್ಪ ಸಂಬಳದಲ್ಲಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗುವದು ಕಷ್ಟವಾದುವದರಿಂದ ಇಂಥವರಿಗೆಲ್ಲಾ ರೈಲ್ವೇ ಪಾಸುಗಳನ್ನು ಕೊಡಿಸಬೇಕೆಂದು ಚೀಫ್ ಕಮ್ಮೀಷನರವರು ಕಳೆದ ಮೇ ತಿಂಗಳಲ್ಲಿ ಶಿಫಾರಸು ಮಾಡಿದರು. ಸರಕಾರದವರು ಅವರ ಶಿಫಾರಸನ್ನು ಅಂಗೀಕರಿಸಿರುತ್ತಾರೆ.

ಕಳೆದವಾರ ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳ ರಾಜರುಗಳು ದೆಹಲಿ ನಗರದಲ್ಲಿ ಸೇರಿ ಸ್ವಕೀಯ ಮತ್ತು ರಾಜಕೀಯ ವಿಚಾರಗಳನ್ನು ಕುರಿತು ಚರ್ಚೆ ಮಾಡುವಂತೆ ಏರ್ಪಾಡಾಗಿತ್ತು.

ಅಹಮ್ಮದ್ ನಗರದಲ್ಲಿ ಅನೇಕಾವರ್ತಿ ಪ್ಲೇಗ ರೋಗವು ಕಾಣಿಸಿಕೊಂಡರೂ ಅಲ್ಲಿಯ ೪ ಸಾವಿರ ಹಿಂದೀ ಕ್ರೈಸ್ತರಲ್ಲಿ ೮ ಮಂದಿ ಮಾತ್ರ ಇದುವರೆಗೂ ಕಾಲವಾಗಿರುವದು ಆಶ್ಚರ್ಯವೇ ಸರಿ. ಪ್ಲೇಗ ರೋಗವು ಹೆಚ್ಚಿದಾಕ್ಷಣ ಈ ಕ್ರೈಸ್ತರೆಲ್ಲರೂ ಒಂದಾಗಿ ಕೂಡಿ ಡೇರೆ ಹಾಕಿಸಿಕೊಳ್ಳುವದೇ ಹೀಗಾಗಲು ಕಾರಣ.

ಘನ್ನಾಲಾಲ್ ಘೋಷನೆಂಬ ಕಲ್ಕತ್ತೆಯ ಮೆಖಾನಿಕಲ್ ಇಂಜಿನಿಯರನು ಸೇನೆಗೆ ಸೇರಿ ಮೆಸಪಟಾಮಿಯಕ್ಕೆ ಹೋಗಿ ದೇಹಾರೋಗ್ಯದ ನಿಮಿತ್ತ ಕೆಲವು ಕಾಲದ ಮಟ್ಟಿಗೆ ಕಲ್ಕತ್ತೆಗೆ ಹಿಂತಿರುಗಿ ಬಂದನು. ಅಲ್ಲಿ ಲ್ಯಾನ್ಸ್ ಕಾರ್ಪೊರಲ್ ಎಂಬ ಸೈನಿಕನಾಗಿ ಸೇರಿಕೊಂಡಿದ್ದನು. ಈ ಕಂಪೆನಿಯನ್ನು ಸರಕಾರದವರು ಒಡೆದು ಸೈನಿಕರನ್ನೆಲ್ಲಾ ಕಳುಹಿಸಿದ ಮೇಲೆ ಘೋಷನು ಜೀವನಕ್ಕಾಗಿ ತನ್ನ ಕಸಬಿಗೆ ತಕ್ಕ ಕೆಲಸಮಾಡುತ್ತಿದ್ದನು. ಈಚೆಗೆ ಬಂಗಾಳದಲ್ಲಿ ಶಾರೀರಪುಷ್ಟರಾಗಿರತಕ್ಕವರನ್ನು ಸೇನೆಗೆ ಸೇರಿಸಿಕೊಳ್ಳುವಂತೆ ಸಾರಿಸಿದಾಗ ಘೋಷನೂ ಸೇರಬೇಕೆಂದು ಹೋದನು. ಡಾಕ್ಟರರು ಅವನಿಗೆ ಒಂದು ಕಣ್ಣು ಊನವಾಗಿದೆ ಎಂದು ತಿರಸ್ಕರಿಸಿದರು. ಅವನು ಔಷಧ ಹಾಕಿಸಿ ವಾಸಿಮಾಡಿಕೊಂಡು ಬಂದನು. ಡಾಕ್ಟರರು ಮತ್ತೂ ಪರೀಕ್ಷೆಮಾಡಿ ತಿರಸ್ಕರಿಸಿದರು. ಈ ಕಾರಣದಿಂದ ಘೋಷನು ತನ್ನ ಗ್ರಾಮಕ್ಕೆ ಹೋಗಿ ಅಫೀಮು ತಿಂದು ನೇಣುಹಾಕಿ ಆತ್ಮಹತ್ಯಮಾಡಿಕೊಂಡನು.

ಲೋ| ತಿಲಕರವರು ಸರ್ ವೆಲೆಂಟೈನ್ ಚಿರೋಲರ ಮೇಲೆ ಮಾಡಿರುವ ದಾವೆಯ ಸಂಬಂಧ ಇದೇ ಬರುವ ಜನವರಿ ತಿಂಗಳಲ್ಲಿ ಸೀಮೆಗೆ ಹೋಗತಕ್ಕವರಿದ್ದಾರೆಂತ ತಿಳಿದುಬರುತ್ತದೆ.

ಮುಂಬಾಯಿಯ ಕರಿಂಭೋಯ ಇಬ್ರಾಹಿಮ್ ಎಂಡ್ ಕಂಪೆನಿಯ ಆಡಳಿತೆಯೊಳಗಿರುವ ಒಂದು ಮಗ್ಗದ ಕಾರಖಾನೆಯ ನೇಯಿಗೆಯವರು ಹೆಚ್ಚು ಸಂಬಳ ಕೊಡಬೇಕೆಂಬ ಸಬಬಿನ ಮೇಲೆ ಕಳೆದ ವಾರ ಮುಷ್ಕರ ಹಾಕಿರುತ್ತಾರೆ.

ಬಸ್ರದಲ್ಲಿ ನಿಯಮಿತ ದರಕ್ಕಿಂತ ಹೆಚ್ಚಿಗೆ ದರದಲ್ಲಿ ಜೀನಸುಗಳನ್ನು ಮಾರುವ ಅಂಗಡಿಗಾರನಿಗೆ ರೂಪಾಯಿ ೫೦೦೦ರವರೆಗೆ ಜುಲುಮಾನೆ ವಿಧಿಸೋಣಾಗುವದೆಂತ ಅಲ್ಲಿಯ ಮಿಲಿಟರಿ ಗವರ್ನರರು ಹುಕುಂ ಮಾಡಿರುತ್ತಾರೆ.

"ಎಕ್ಸ್‌ಪ್ರೆಸ್" ಎಂಬ ಪತ್ರಿಕೆಯಿಂದ ಯಾಕೆ ಭದ್ರತೆ ಕೇಳಕೂಡದೆಂಬದಾಗಿ ಪಾಟ್ನದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ನೋಟೀಸು ಕೊಟ್ಟಿದ್ದರೆಂದು ತಿಳಿಸಿತ್ತಷ್ಟೆ. ಮೇಜಿಸ್ಟ್ರೇಟರ ಈ ಹುಕುಮು ಹಿಂದೆಗೆಯೋಣಾಗಿರುವದು ಎಂತ ಅಮೃತ ಬಜಾರ ಪತ್ರಿಕೆಯ ಬಂಕೀಪುರ ಬಾತ್ಮೀದಾರರು ತಿಳಿಸಿರುತ್ತಾರೆ.

ಹಿಂದೂಸ್ಥಾನದಲ್ಲಿ ದೊರಕುವ ಒಂದನೇ ತರಗತಿಯ ಕಲ್ಲಿದ್ದಲನ್ನು ಪರದೇಶಗಳಿಗೆ ಕಳುಹಿಸಕೂಡದೆಂತಲೂ ಎರಡನೇ ತರಗತಿಯ ಕಲ್ಲಿದ್ದಲನ್ನು ಕಸ್ಟಮ್ ಕಲೆಕ್ಟರರಿಂದ ದೊರಕುವ ಲೈಸನ್ಸು ಪಡಕೊಂಡು ಕಳುಹಿಸಬಹುದೆಂತಲೂ ಇಂಡಿಯಾ ಸರಕಾರದವರು ಪ್ರಕಟಿಸಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಸೇಲಮ್, ಗುಂಟೂರು, ಕರ್ನೂಲು ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ ವಿಶೇಷ ಮಳೆಗರೆದು ಬಡಜನರನೇಕರು ನಿರ್ಗತಿಕರಾಗಿರುತ್ತಾರೆ. ನಿರ್ಗತಿಕರನ್ನು ರಕ್ಷಿಸುವ ಉದ್ದೇಶದಿಂದ ಅಲ್ಲಲ್ಲಿ ಕಮಿಟಿಗಳು ಏರ್ಪಡಿಸೋಣಾಗಿವೆ.

ನೋಟೀಸು.

ಪುತ್ತೂರು ಕಸಬೆಯಲ್ಲಿರುವ ಬೆಳ್ತಂಗಡಿ ಗ್ರಾಮದ ಸೆಟ್ಟಿಗಳ ಪೇಟೆ ನೇಮಣ್ಣ ಶೆಟ್ರ ಸೊಸೆ ಪದ್ಮಾವತಿಯು ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ—

ನಮ್ಮ ಕುಟುಂಬದ ಬಾಬತು ಸದರಿ ಬೆಳ್ತಂಗಡಿ ಗ್ರಾಮದ ಪಟ್ಟಾ ನಂಬ್ರ 37, 64ನೇ ವಗೈರೆ ಆಸ್ತಿಗಳನ್ನು ಸದರಿ ನನ್ನ ಮಾವ ನೇಮಣ್ಣ ಸೆಟ್ರು ಕುದ್ದಲೆ ದಾಖಲೆಯಿಂದ ಅನುಭವಿಸಿ ಬರುತ್ತಾರೆ. ಸದರಿ ಆಸ್ತಿಗಳಿಗೆ ಎಷ್ಟನ್ನಾದರೂ ಸಾಲ ಇರುವದಿಲ್ಲ. ಸಾಲಮಾಡುವ ಗರ್ಜೂ ಇರುವದಿಲ್ಲ. ಆಸ್ತಿಗಳು ಹೆಚ್ಚು ಮುನಾಫೆ ಉಳ್ಳವುಗಳಾಗಿರುತ್ತವೆ. ಹೀಗಿರುವಲ್ಲಿ ಸದರಿ ನಮ್ಮ ಕುಟುಂಬದ ಆಸ್ತಿಗಳನ್ನು ಸದರಿ ನೇಮಣ್ಣ ಸೆಟ್ರು ಕುಟುಂಬಕ್ಕೆ ವಂಚಿಸಿ ಸಾಲ ವಗೈರೆ ಕಲ್ಪಿಸಿ, ಪರಾಧೀನ ಮೂಲಗೇಣಿ ವ್ಯಾದೆಗೇಣಿ ವಗೈರೆ ಮಾಡಿ ಕುಟುಂಬಕ್ಕೆ ನಷ್ಟಪಡಿಸುವ ಇರಾದೆಯಲ್ಲಿರುತ್ತಾರಾಗಿ ಕೇಳುತ್ತೇನೆ. ಅವರಿಗೆ ಅಂಥ ಪರಾಧೀನ ವಗೈರೆಗಳನ್ನು ಕುಟುಂಬದ ಎಲ್ಲಾ ಮೆಂಬರರ ಒಪ್ಪಿಗೆ ವಿನಹ ಮಾಡುವ ಯಾವ ಹಕ್ಕೂ ಇರುವದಿಲ್ಲ. ಆದುದರಿಂದ ನಮ್ಮೆಲ್ಲರ ಒಪ್ಪಿಗೆ ವಿನಹ ಅವರಿಂದ್ರ ಯಾವ ತರದ ದಸ್ತಾವೇಜುಗಳನ್ನು ಯಾರೊಬ್ಬರು ಮಾಡಿಸಿಕೊಂಡಲ್ಲಿ ಅವುಗಳು ರದ್ದಾಗತಕ್ಕವುಗಳು.

ಪುತ್ತೂರು.
ತಾ. 6–11–16. } ಪದ್ಮಾವತಿ ರುಜು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ $\frac{794}{1916}$

ನಾರಾಯಣ ಹೆಬ್ಬಾರ ಮಂಜ್ಯೆ ಹೆಬ್ಬಾರರ ಮಗ ಉಡ್ಪಿ ತಾಲೂಕು ಐರೋಡಿ ಗ್ರಾಮ } ವಾದಿ.

ಮೊಗೇರ ರಾಗ-ರುಕ್ಕುಹೆಂಗಸಿನ ಮಗ ಬಾಳ್ಕುದ್ರು ಗ್ರಾಮದ ಹಂಗಾರಕಟ್ಟೆಯಲ್ಲಿ ಕಲ್ಯಾಣಪುರ ರಾಮಚಂದ್ರ ಜಾಳಿಗರಲ್ಲಿ ಊಳಿಗಕ್ಕೆ ಇದ್ದಾನೆ. } ಪ್ರತಿವಾದಿ.

ವಾದಿಗೆ ಪ್ರತಿವಾದಿಯು ತಾ. 10—10—1913 ರಲ್ಲು ರೂ. 20ಕ್ಕೆ ಬರಕೊಟ್ಟ ಕರಾರಿನ ಬಾಬ್ತು ಅಸಲು ಬಡ್ಡಿ ರೂ. 30—10—4 ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಸಣ್ಣ ದಾವೆಯನ್ನು ತಾ. 20-11-16 ಕ್ಕೆ ತನಕಿಗೆ ಇಡೋಣಾಗಿರುವದರಿಂದ ಪ್ರತಿವಾದಿಯು ಶಕ್ಷೀರು ಉದಾಹರಣೆ ಇದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆ ಒಳಗೆ ಜ್ಯಾಹೀರು ಮಾಡತಕ್ಕದ್ದೆಂದು ಈ ಮೂಲಕ ಪ್ರಕಟಿಸಿಯದೆ.

ಕುಂದಾಪುರ. ತಾ. 2-11-16. } P. Mahabhala Rao, *Pleader for plaintiff.*

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. $\frac{411}{1916}$

ಕುಂದಾಪುರ ಕೃಷ್ಣಭಂಡಾರಿ—ವಾದಿ.

ಮತ್ತು

1. ಬಸವನಗುಡಿ ನಾಗಮ್ಮ-ಸುಬ್ರಾಯ ಶ್ಯಾನುಭಾಗನ ವಿಧವೆ.
2. ವೆಂಕಟ್ರಮಣ ಶ್ಯಾನುಭಾಗ.
3. ಅನಂತ ಶ್ಯಾನುಭಾಗ.
4. ಶ್ರೀನಿವಾಸ ಶ್ಯಾನುಭಾಗ.
5. ರಾಮಶ್ಯಾನುಭಾಗ ಕುಂದಾಪುರ, ಕಸಬೆಯಲ್ಲಿ ರುವವರು. ಹಾಲಿ ಬೊಂಬೈ ಶಹರಿನಲ್ಲಿ ರುತ್ತಾರೆ. } ಪ್ರತಿವಾದಿ.

ಇವರೊಳಗೆ ವಾದಿಗೆ 1—3ನೇ ಪ್ರತಿವಾದಿರು ಬರಕೊಟ್ಟ ಡಿಮಾಂಡ ನೋಟುಗಳು ಅಸಲುಬಡ್ಡಿ ರೂಪಾಯಿ 66-7-0 ಬರಮಾಡಿಕೊಡುವರೆ ತಂದ ಸದರಿ ವ್ಯಾಜ್ಯವು ತಾ. 27-11-16ಕ್ಕೆ ಅಖೈರ ತನ್ಕಿಗೆ ಸದರಿ ಕೋರ್ಟಿನಲ್ಲಿ ಇಟ್ಟಿರುತ್ತದೆ. ಸದರಿ ದಿವಸ ಪ್ರತಿವಾದಿರು ಸ್ವತಹಾ ಯಾ ವಕೀಲ ಮುಖಾಂತರ ಹಾಜರಾಗಿ ವ್ಯವಹರಿಸದೆ ಹೋದರೆ ಸದರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸೋಣಾದೀತೆಂಬದಾಗಿ ಕೋರ್ಟಿನವರು ಅಪ್ಪಣೆಕೊಟ್ಟ ಸಂಗತಿ ಸದರಿ ಪ್ರತಿವಾದಿರಿಗೆಲ್ಲರಿಗೂ ಈ ಮೂಲಕ ತಿಳಿಸೋಣಾಗಿಯದೆ.

ಕುಂದಾಪುರ. ತಾ. 7-11-16. } K. K. Bhandari, *Pleader.*

NOTICE.

೧೩. ನವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನೂ ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೩ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ಪರೀಕ್ಷೆಯು ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADARS

ಸ್ವದೇಶಾಭಿಮಾನಿ

ಮಂಗಳೂರು ಶಕ ೧೮೩೮ ಕಾರ್ತಿಕ ಬ. ೭ ಶುಕ್ರವಾರ.

ಲೋಕಮಾನ್ಯ ತಿಲಕರು ದೋಷಮುಕ್ತರಾದರು!

ಕಳೆದ ಮೇ ಜೂನ್ ತಿಂಗಳುಗಳಲ್ಲಿ ಬೆಳಗಾಂವ ಮತ್ತು ಅಹಮ್ಮದ ನಗರದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಕೊಟ್ಟ ಉಪನ್ಯಾಸಗಳು ರಾಜದ್ರೋಹದ ೧೨೪ ಅ. ಕಲಮಿಗೆ ಒಳಪಡುತ್ತವೆಂದು ಅವರಿಂದ ಪೂನೆಯ ಡಿ. ಮೆಜಿಸ್ಟ್ರೇಟರು ೪೦ ಸಾವಿರ ರೂಪಾಯಿಗಳ ಜಾಮೀನನ್ನು ತಕ್ಕೊಳ್ಳಬೇಕಾಗಿ ನಿರ್ಣಯಿಸಿದ್ದು ನಮ್ಮ ವಾಚಕರಿಗೆ ಹಿಂದೆಯೆ ತಿಳಿಸಿದ್ದೇವೆ. ಮೆಜಿಸ್ಟ್ರೇಟರ ಈ ಹುಕುಮಿನ ಮೇಲೆ ಮುಂಬಯಿ ಹೈಕೋರ್ಟಿನಲ್ಲಿ ಅಪೀಲು ನಡೆದು ನ್ಯಾಯಮೂರ್ತಿಗಳಾದ ಬೆಚಲರ ಮತ್ತು ಶಹಾ ಇವರು ಲೋ. ತಿಲಕರನ್ನು ನಿರ್ದೋಷಪಡಿಸಿ ಆ ಜಾಮೀನಿನಿಂದ ಅವರನ್ನು ಖುಲಾಸು ಮಾಡಿರುವರು ಎಂಬದನ್ನು ವಾಚಕರು ನಮ್ಮ ವರ್ತಮಾನಸಂಗ್ರಹದಲ್ಲಿ ನೋಡಿಕೊಳ್ಳಬಹುದು. ನ್ಯಾಯಮೂರ್ತಿಗಳ ಈ ನಿರ್ಣಯವನ್ನು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ಲೋಕಮಾನ್ಯರ ಮೇಲೆ ರಾಜದ್ರೋಹದ ಆರೋಪಣೆಯು ಇದು ಮೊದಲನೆಯದಲ್ಲ. ಮೊದಲು ಎರಡು ಸಾರಿ ಇದೇ ಆರೋಪಣೆಯಿಂದ ಅವರಿಗೆ ಒಂದಕ್ಕಿಂತ ಒಂದು ಕಠೋರವಾದ ಶಿಕ್ಷೆಯು ವಿಧಿಸೋಣಾಗಿತ್ತು. ಕಳೆದ ಈ ಎರಡೂ ಪ್ರಸಂಗಗಳಲ್ಲಿ ಹಿಂದುಸ್ಥಾನದ ವರಿಷ್ಠ ನ್ಯಾಯ ಕೋರ್ಟುಗಳಿಂದಂತೂ ಲೋ. ತಿಲಕರಿಗೆ ಬೇಕಾದ ನ್ಯಾಯವು ಸಿಗಲೇ ಇಲ್ಲ. ಕೊನೆಗೆ ಅವರಿಗೆ ಪ್ರಿವಿಕೌನ್ಸಿಲಿನ ಕಡೆಗೆ ಹೋಗಬೇಕಾಯಿತು. ಅಲ್ಲಿಯೂ ಅವಕಾಶ ದೊರಕಲಿಲ್ಲ. ಈ ರೀತಿಯಿಂದ ಮೊದಲಿನ ಎರಡೂ ಪ್ರಸಂಗಗಳಲ್ಲಿ ಸರಕಾರದವರು ಕೊಟ್ಟ ಶಿಕ್ಷೆಯನ್ನ ಅನುಭವಿಸುವುದು ಅವರಿಗೆ ಪ್ರಾಪ್ತವಾಗಿತ್ತು. ಆದರೆ ಈ ಸಾರಿ ದೇಶದ ಸುದೈವದಿಂದ ಇಲ್ಲಿಯ ವರಿಷ್ಠ ನ್ಯಾಯಾಸನದಿಂದ ಅವರಿಗೆ ಯೋಗ್ಯವಾದ ನ್ಯಾಯವು ಸಿಕ್ಕಿದೆ. ಹೀಗಾಗಿ ಅವರ ಮೇಲೆ ಬಂದ ರಾಜದ್ರೋಹದ ಆರೋಪವು ಮೇಲೆ ಹೇಳಿದಂತೆ ಇದು ಮೊದಲನೆ ಸಾರಿಯದಲ್ಲವಾದರೂ ಅವರು ಆರೋಪಮುಕ್ತರಾದುದು ಮಾತ್ರ ಇದೇ ಮೊದಲನೆ ಸಾರಿ. ಈ ದೃಷ್ಟಿಯಿಂದ ಈ ಜಾಮೀನು ಖಟ್ಲೆಯು ಮಹತ್ವದ್ದೆಂಬುದಕ್ಕೆ ಸಂದೇಹವಿಲ್ಲ. ಇನ್ನೊಂದು ದೃಷ್ಟಿಯಿಂದಲೂ ಈ ಖಟ್ಲೆಗೆ ಮಹತ್ವವು ಬಂದಿದೆ. ಇವ್ವರವರೆಗೆ ಹಿಂದುಸ್ಥಾನದಲ್ಲಿ ಆದ ರಾಜದ್ರೋಹದ ಖಟ್ಲೆಗಳಲ್ಲಿ ಲೋಕಪಕ್ಷಕ್ಕೆ ವಿಜಯವು ಇದ್ದೇ ಇಲ್ಲ. ಪ್ಲೇಗಿನ ಋತುವಿನಲ್ಲಿ ಇಲಿಯು ಬಿದ್ದುದಾದರೆ ಆ ಮನೆಯಲ್ಲಿ ಪ್ಲೇಗ್ ಕೇಸಾಗುವುದು ಹೇಗೆ ನಿಶ್ಚಿತವಾದ ಸಂಗತಿಯೋ ಹಾಗೆಯೆ ರಾಜದ್ರೋಹದ ಆರೋಪಣೆಯಿಂದ ಅಮಲದಾರರು ಒಬ್ಬನ ಮೇಲೆ ಖಟ್ಲೆಯನ್ನು ಪ್ರಾರಂಭಿಸುವುದೇ ಅವಕಾಶ, ಅವನಿಗೆ ನ್ಯಾಯಾಸನವು ಶಿಕ್ಷೆಯನ್ನ ವಿಧಿಸುವುದು ನಿಶ್ಚಿತವೇ ಇತ್ತು. ಆದರೆ ಮೇಲಿನ ನ್ಯಾಯಮೂರ್ತಿಗಳ ಈ ನಿರ್ಣಯದಿಂದ್ರ ಈ ತಪ್ಪು ತಿಳಿವಳಿಕೆಗೆ ಇನ್ನು ಮುಂದೆಯಾದರೂ ಅಷ್ಟೊಂದು ಎಡೆ ಇರಲಾರದೆಂದು ತೋರುತ್ತದೆ. ಈ ಸಂಗತಿಯನ್ನು ಆಲೋಚಿಸುವಾಗ ದೋಷಮುಕ್ತರಾದುದಕ್ಕೆ ಲೋ. ತಿಲಕರು ಅಭಿನಂದನೆಗೆ ಪಾತ್ರರಾಗಿದ್ದರೂ ಮುಂಬಯಿಯ ಹೈಕೋರ್ಟು ಯೋಗ್ಯವಾದ ನ್ಯಾಯವನ್ನ ಯಾರ ದಾಕ್ಷಿಣ್ಯವಿಲ್ಲದೆ ನಿರ್ಣಯಿಸಿದ್ದಕ್ಕಾಗಿ ಹೆಚ್ಚಿನ ಅಭಿನಂದನೆಗೆ ಪಾತ್ರವಾಗಿದೆಂದು ಯಾರೂ ಹೇಳಬಹುದಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ನಾವು ಲೋ. ತಿಲಕರನ್ನು ಮುಖ್ಯವಾಗಿ ಮೇಲಿನ ನ್ಯಾಯಮೂರ್ತಿಗಳನ್ನು ಅಭಿನಂದಿಸುತ್ತೇವೆ.

ಲೋ. ತಿಲಕರನ್ನಾಗಲಿ ಅವರನ್ನು ನಿರ್ದೋಷಪಡಿಸಿದ ನ್ಯಾಯಮೂರ್ತಿಗಳನ್ನಾಗಲಿ ನಾವು ಮಾತ್ರ ಅಭಿನಂದಿಸುತ್ತೇವೆಂತಲ್ಲ. ಹಿಂದುಸ್ಥಾನದೊಳಗಿನ ಎಲ್ಲ ದೇಶೀ ಪತ್ರಕಾರರೂ ಇದೇ ರೀತಿಯಿಂದ ಅವರನ್ನು ಪ್ರಶಂಸಿಸುತ್ತಿದ್ದಾರೆ. ಈ ಪ್ರಸಂಗದಲ್ಲಿ ಹೈಕೋರ್ಟಿನ ಜಡ್ಜರನ್ನು ಪ್ರಶಂಸಿಸುವುದು ಅಥವಾ ಅಭಿನಂದಿಸುವುದು ಏಕೆ? ಅವರು ಯಾವ ಆಸನದ ಮೇಲೆ ಕುಳಿತಿರುವರೋ ಆ ಪವಿತ್ರ ನ್ಯಾಯಾಸನದ ಕರ್ತವ್ಯದಂತೆಯೇ ಅವರು ನ್ಯಾಯವನ್ನು ಕೊಟ್ಟಿದ್ದಾದರೆ ಅದರಲ್ಲೇನು ವಿಶೇಷ? ಆ ಕೆಲಸಕ್ಕಾಗಿಯೇ ಅವರು ಅಲ್ಲಿರುವುದು. ಅದನ್ನು ಅವರು ಮಾಡಿದ್ದಾದರೆ ಆ ಬಗ್ಗೆ ಅವರ ಅಭಿನಂದನವೇಕೆ? ಎಂತ ಕೆಲವರು ತಿಳಿದಿರಬಹುದು. ಆದರೆ ಈ ಪ್ರಶ್ನೆಯು ಸಮರ್ಪಕವಲ್ಲ. ನ್ಯಾಯ ಬುದ್ಧಿಗೆ ಸರಿಯಾಗಿ ತೋರುವಂತೆ ತೀರ್ಮಾನಿಸಲು ಅವರು ಆ ಸ್ಥಾನದಲ್ಲಿ ಬಂದವರಾದರೂ ಹೊರಗಿನ ಪರಿಸ್ಥಿತಿಯಿಂದ ಎಷ್ಟೋ ಸಾರಿ, ಯಾಕೆ, ಪ್ರಾಯಶಃ ಇಂಥ ಪ್ರಸಂಗಗಳಲ್ಲಿ ಪ್ರತಿ ಒಂದು ಸಾರಿ, ನ್ಯಾಯಮೂರ್ತಿಗಳ ಕೈಯು ಕಟ್ಟಿಹೋಗುವುದು. ಹೀಗಿರುವಾಗ ಈ ಸಾರಿ ನ್ಯಾಯಮೂರ್ತಿಗಳು ಕಾಯಿದೆಯ ತತ್ವವನ್ನು ಬಿಡದೆ ಸತ್ಯಪ್ರಿಯತೆಯಿಂದಲೂ, ನ್ಯಾಯಬುದ್ಧಿಯಿಂದಲೂ ಸ್ವತಂತ್ರವಾದ ನಿರ್ಣಯವನ್ನು ಕೊಟ್ಟಿದ್ದು ನಿಜವಾಗಿ ಅಭಿನಂದನೀಯವಲ್ಲವೆ? ಅಷ್ಟುಮಾತ್ರವಲ್ಲ; ಮುಂಬಾಯಿ ಹೈಕೋರ್ಟಿನ ಮಾಜಿ ಸ್ಪೆಶ್ಯಲ್ ಜಡ್ಜರಾದ ಮಿ. - ಸ್ಟ್ರಾಚಿಯವರು 'ಅಪ್ರೀತಿ' ಎಂಬ ಶಬ್ದಕ್ಕೆ ಮಾಡಿರುವ ವ್ಯಾಖ್ಯೆಯನ್ನು ಸರಿಯಾಗಿ ತಿಳಿಯದೆ ಪೂನೆಯ ಡಿ. ಮೇಜಿಸ್ಟ್ರೇಟರು 'ಅಪ್ರೀತಿ' ಶಬ್ದಕ್ಕೆ ಅಪಮಿತ ವ್ಯಾಪಕತ್ವವನ್ನು ಕೊಟ್ಟು ಲೇಖನ ಮತ್ತು ವಾಕ್-ಸ್ವಾತಂತ್ರ್ಯವನ್ನು ಮುಷ್ಟಿಯಲ್ಲಿ ತಂದಿದ್ದರು. ಅದನ್ನು ಕೂಡ ಜ. ಬೆಚಲರ ದೊರೆಗಳು ಬಿಚ್ಚಿರುವರು. ಈ ಎಲ್ಲ ಸಂಗತಿಗಳಿಂದ ನ್ಯಾಯಮೂರ್ತಿಗಳು ಪ್ರಶಂಸಾಪಾತ್ರರೆಂಬುವುದಕ್ಕೇನೂ ಸಂದೇಹವಿಲ್ಲ.

ಲೋ. ತಿಲಕರ ದೋಷಮುಕ್ತತೆಗಾಗಿ ಇಡೀ ಹಿಂದುಸ್ಥಾನದಲ್ಲಿಯ ಲೋಕಪಕ್ಷದವರಿಗೆ ಸಂತೋಷವಾಗುವುದು ಸಹಜವೇ. ಮತ್ತು ಹಾಗೆ ಎಲ್ಲವರಿಗೆ ಸಂತೋಷವೂ ಆಗಿದೆ. ಆದರೆ ಇಂಥ ಸಾರ್ವಜನಿಕ ಸಂತೋಷ ಪ್ರಸಂಗದಲ್ಲಿ ಕೂಡ ಕೆಲವು ಆಂಗ್ಲೋ ಇಂಡಿಯನರಿಗೆ ಹೊಟ್ಟೆಶೂಲವೆದ್ದುದು ಮಾತ್ರ ವಿಷಾದಕರವೇ ಸರಿ. ನಮ್ಮ ಪ್ರಾಂತದೊಳಗಿನ ಎಂಗ್ಲೋ ಇಂಡಿಯನ ಶಿಖಾಮಣಿಯಾದ 'ಮದ್ರಾಸ್ ಮೇಲ್'ಗಂತೂ ಉದರ ಶೂಲದ ವ್ಯಾಧಿಯು ಪರಮಾವಧಿಗೆ ಹೋಗಿ ಯದ್ವಾ ತದ್ವಾ ಕೂಗಲಿಕ್ಕೆ ಪ್ರಾರಂಭಿಸಿದೆ. ತಿಲಕರ ಪೂರ್ವ ಚರಿತ್ರೆಯನ್ನು ನಿರೀಕ್ಷಿಸುವ ನೆವದಿಂದ ಪೂನೆಯ ಮಾಜಿ ಕಲೆಕ್ಟರರಾದ ಮಿ. ರೇಂಡ ಮತ್ತು ಲೇ. ಆಯರ್ಸ್ಟರ ಹಾಗೂ ನಾಸಿಕದ ಮಾಜಿ ಕಲೆಕ್ಟರರಾದ ಜೆಕ್‌ಸನ್ ದೊರೆಗಳ ಕೊಲೆಗಳಿಗೆ ಬಹು ಚಾತುರ್ಯದಿಂದ ತಿಲಕರ ಉಪದೇಶದ ಸಂಬಂಧವನ್ನು ಜೋಡಿಸುವ ನಿಂದ್ಯ ಪ್ರಯತ್ನವನ್ನು ಪತ್ರಿಕೆಯು ಮಾಡುತ್ತಿದೆ. ಇದೇ ತರದ ಅಶ್ಲಾಘ್ಯ ಪ್ರಯತ್ನವನ್ನು ನಡಿಸಿದಕ್ಕಾಗಿ ತಿಲಕರ ದಾಯವಾದಿತ್ವವನ್ನು ವಹಿಸಿಕೊಂಡಂಥ ಮುಂಬಯಿಯ 'ಟೈಮ್ಸ್' ಪತ್ರಿಕೆಯೂ ಇಂಗ್ಲಂಡದೊಳಗಿನ 'ಗ್ಲೋಬ' ಎಂಬ ಸುಪ್ರಸಿದ್ಧ ಪತ್ರಿಕೆಯೂ ಮೊದಲೊಮ್ಮೆ ಕೋರ್ಟುಗಳಲ್ಲಿ ಲೋ. ತಿಲಕರ ಕ್ಷಮೆಯನ್ನು ಕೇಳಿಕೊಂಡಿದ್ದವು. ಇಂಥ ಪ್ರಸಂಗವು ನಮ್ಮ 'ಮೇಲ್'ಗೆ ಬರುವದಾದರೆ ಬಂದುಕೊಳ್ಳಲಿ ಎಂದರೆ ಸ್ವತಃ ತಿಲಕರ ಮೇಲೆ ಹೊರಿಸಿದ ಆರೋಪಣೆಗಾಗಿ ನಾವು—ಅನ್ಯರು ಉತ್ತರ ಕೊಡಬೇಕಾದ ಅಷ್ಟೊಂದು ಅವಶ್ಯಕತೆ ಇಲ್ಲ. ಆದರೂ ತಿಲಕರ ನಿಂದೆಗಾಗಿ ಮಾಡಿದ ನಿಂದ್ಯ ಪ್ರಯತ್ನದಲ್ಲಿಯೇ ಈ 'ಮೇಲು' ಚಿತ್ಪಾವನ ಬ್ರಾಹ್ಮಣರ ಹೆಸರಿಗೆ ವೃಥಾ ಕಲ್ಲುಗಳನ್ನು ಬಿಸಾಡುವ ಅತಿ ನಿಂದ್ಯವಾದ ದುಷ್ಟ ಪ್ರಯತ್ನವನ್ನು ಮಾಡಲಾರಂಭಿಸಿದೆ. ಮೇಲೆ ಹೇಳಿದ ಯೂರೋಪಿಯನ ಅಮಲದಾರರನ್ನು ಕೊಂದವರು ದುರ್ದೈವದಿಂದ ಚಿತ್ಪಾವನ ಜಾತಿಗೆ ಸಂಬಂಧಪಟ್ಟವರೆಂಬ ಕಾರಣದಿಂದ ಇಡೀ ಜಾತಿಯನ್ನು ದಂಡಿಸಬಹುದೇ? ಅಥವಾ ಆ ಜಾತಿಯವನಾದ ಪ್ರತಿ ಒಬ್ಬನು ಅದೇ ಆರೋಪಣೆಗೆ ಪಾತ್ರನಿರುವನೇ! ನ್ಯಾಯಮೂರ್ತಿಗಳಾದ ರಾನಡೆಯವರು ಮತ್ತು ಮಾನ್ಯರಾದ ಗೋಖಲೆಯವರು ಅದೇ ಚಿತ್ಪಾವನ ಜಾತಿಯವರಲ್ಲವೇ? ಕ್ಲೈವನಂಥ ಸುಳ್ಳು ದಸ್ತವೇಜುಗಳನ್ನು ತಯಾರಿಸುವ ಅಥವಾ ಮುಂಬಯಿ ಪ್ರಾಂತದ ದಕ್ಷಿಣ ಭಾಗದ ಕಮಿಷನರಾದ ಕ್ರಾಫರ್ಡನಂಥ ಲಂಚ ತಿನ್ನುವ ಇಂಗ್ಲಿಷಮೆನ್ನನು ಇದೇ ಇಂಗ್ಲಿಷ ಜಾತಿಯಿಂದ ಉದಯಕ್ಕೆ ಬಂದವನಲ್ಲವೇ? ಈ ದೃಷ್ಟಾಂತಗಳ ಮೇಲಿಂದ ಎಲ್ಲಾ ಇಂಗ್ಲಿಷರು ಅದೇ ಸ್ವಭಾವದವರೆಂದು ವಾದಿಸಿದರೆ ಆ ವಾದಿಗೆ ಶುದ್ಧ ಮೂರ್ಖರ ಕೋಟಿಯಲ್ಲಿ ಸೇರಿಸಬೇಕಾದೀತು. ಕಾರಣ ಲೋರ್ಡ ರಿಪನ್, ಮೋರ್ಲಿ, ಮಿಂಟೋ, ಹಾರ್ಡಿಂಜ ಮೊದ

ಲಾದ ಉದಾರಧಿಗಳು ಆ ಇಂಗ್ಲಿಷ ಜನಾಂಗದಲ್ಲಿಯೇ ಉದ್ಭವಿಸಿದವರು. ಸ್ವಾರಾಂಶ ಅಲ್ಪ ದೃಷ್ಟಾಂತಗಳ ಮೇಲಿಂದ ಇಂಥ ಭಯಂಕರ ಆರೋಪಣೆಗಳನ್ನು ಹೊರಿಸುವುದು ಬರಿ ಅಲ್ಪತನವಾದುದು. ಇಂಥ ಅಲ್ಪತನವು ಈ "ಮೇಲು" ಯಾಕೆ ತಂದುಕೊಳ್ಳುತ್ತದೆಂದು ಗೊತ್ತಾಗುವುದಿಲ್ಲ. ಈ ಪತ್ರಿಕೆಯ 'ಪೂರ್ವ ಚರಿತ್ರೆ' ಬೇಡ, ಇದೇ ವರ್ಷ ಕೆಲವು ದಿವಸಗಳ ಹಿಂದೆ ಹಿಂದೀ ಜನರಿಗೆ ಚೇಷ್ಟಾಪರವಾದ ಒಂದು ಅಪ್ರಬುದ್ಧತನದ 'ನೋಟಿಸ'ನ್ನು ಪ್ರಕಟಿಸಿ ಕೆಲವರ ಮನಸ್ಸನ್ನು ವಿನಾಕಾರಣ ನೋಯಿಸಿಬಿಟ್ಟಿತು. ಆಗ ಕೆಲವು ಕಡೆಗಳಲ್ಲಿ ಈ ಪತ್ರಿಕೆಗೆ ಬಹಿಷ್ಕಾರವನ್ನು ಕೂಡಹಾಕಿದ್ದಾರೆ! ಹೀಗಿರುವಾಗ ಇದು ಆದಷ್ಟು ಎಚ್ಚರದಿಂದ ನಡದುಕೊಳ್ಳುವದು ಅದಕ್ಕೇ ಒಳ್ಳೇದು.

ದೇಶ ಭಕ್ತಿ.

ಲೇಖಾಂಕ ೨.

ಸಾಧನೆಗಳು.

'ಪ್ರೀತಿ' 'ಭಕ್ತಿ' ಇವು ಸಾಮಾನ್ಯವಾಗಿ ಒಂದೆಯಾಗಿದ್ದರೂ ಪ್ರೀತಿಗಿಂತ ಭಕ್ತಿಯು ತರಗತಿಯು ಸ್ವಲ್ಪ ಮೇಲಿನದು, ಆದುದರಿಂದ ದೇವಭಕ್ತಿ, ದೇಶಭಕ್ತಿ ಎಂಬ ಹೆಸರುಗಳು ಬಂದಿವೆ, ಪ್ರೀತಿಯ ಶ್ರೇಷ್ಠಾವಸ್ಥೆಯೇ ಭಕ್ತಿಯು ಮುಂತಾದ ವಿಷಯಗಳನ್ನು ಹಿಂದಿನ ಸಾರಿ ಹೇಳಿದ್ದೇವೆ. 'ಪ್ರೀತಿ' 'ಭಕ್ತಿ' ಈ ಎರಡು ಶಬ್ದಗಳ ವಿಷಯದಲ್ಲಿ ವಾಚಕರು ಮುಖ್ಯವಾಗಿ ನೆನಿಸತಕ್ಕದ್ದೇನೆಂದರೆ, ಸಮಾನವಾದ ಅಥವಾ ಸಾಮಾನ್ಯವಾದ ವಸ್ತುವಿನಲ್ಲಿ ಅಥವಾ ವ್ಯಕ್ತಿಯಲ್ಲಿ ಉಂಟಾಗುವ ಅನುಕೂಲ ಭಾವವು ಪ್ರೀತಿಯು. ಉದಾಹರಣೆ:—ಹುರಿಗಡಲೆಯ ಪ್ರೀತಿ, ಬಂಧು ಪ್ರೀತಿ ಇತ್ಯಾದಿ. ಅಸಾಮಾನ್ಯವಾದ ಅಥವಾ ವಿಶೇಷವಾದ ವಸ್ತುವಿನಲ್ಲಿ ಇಲ್ಲವೆ ವ್ಯಕ್ತಿಯಲ್ಲಿ ಉಂಟಾಗುವ ಪೂಜ್ಯ ಬುದ್ಧಿಯು ಭಕ್ತಿಯು, ಉದಾಹರಣೆ: ದೇವಭಕ್ತಿ, ದೇಶಭಕ್ತಿ, ಗುರುಭಕ್ತಿ ಇತ್ಯಾದಿ ಈ ಭೇದಗಳನ್ನೂ ಉದಾಹರಣೆಗಳನ್ನೂ ತಿಳಿದುಕೊಂಡತೆ ಹಿಂದಿನ ಲೇಖವು ವಾಚಕರ ಅವಗಾಹನೆಗೆ ಬಂದೀತೆಂದು ತಿಳಿಯಬಹುದು. ದೇಶಭಕ್ತಿಯ ಲಕ್ಷಣವನ್ನು ಸಂಕ್ಷೇಪದಿಂದ ಹೇಳುವುದಾದರೆ, ಉಪಾಸಕನು-ದೇಶವೇ ತನ್ನ ಸರ್ವಸ್ವ, ದೇಶೋದ್ಧರಣೆಗಿಂತ ಪರಮ ಪುರುಷಾರ್ಥವು ಬೇರೆ ಇಲ್ಲ. ದೇಶವೇ ತಾನು ಎಂದು ತಿಳಿದು ಆ ದೇಶಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವುದೇ ದೇಶಭಕ್ತಿಯು. ಕಳೆದ ಸಂಚಿಕೆಯೊಳಗಿನ 'ದೇಶಭಕ್ತಿಯೆಂದರೇನು?' ಈ ಪ್ರಶ್ನೆಯ ಉತ್ತರವು ಇದೇ ಸರಿ. ದೇಶಕ್ಕಾಗಿ ಆತ್ಮಾರ್ಪಣೆಯನ್ನು ಮಾಡಿಕೊಳ್ಳುವುದಕ್ಕೆ ದೇಶಭಕ್ತಿಯೆಂಬ ಹೆಸರಿನೊಡನೆಯೇ ಕೆಲವರು ದೇಶಪ್ರೀತಿ, ದೇಶವಾತ್ಸಲ್ಯ, ದೇಶನಿಷ್ಠೆ ಮುಂತಾದ ಬೇರೆ ಹೆಸರುಗಳನ್ನು ಕೊಡುವರು. ಇವೆಲ್ಲ ಹೆಸರುಗಳು ಬೇರೆಯಾದರೂ ದೇಶ ಭಕ್ತಿಯ ಅರ್ಥವನ್ನೇ ವ್ಯಕ್ತಗೊಳಿಸುತ್ತವೆ. ಆದುದರಿಂದ ಅವುಗಳಲ್ಲಿ ಭೇದವಿಲ್ಲ.

ದೇಶಭಕ್ತಿಯೆಂದರೇನೆಂಬುದನ್ನು ಹೇಳಿದ ಮೇಲೆ ಅದರ ಸಾಧನೆಗಳಾವವು ಈ ಪ್ರಶ್ನೆಯನ್ನು ವಿವರಿಸುವುದು ಈಗ ಕ್ರಮಪ್ರಾಪ್ತವಾಗಿದೆ. ದೇವರ ಕೆಲಸಕ್ಕಾಗಿಯೂ ದೇಶದ ಕೆಲಸಕ್ಕಾಗಿಯೂ ತನ್ನನ್ನು ಅರ್ಪಿಸಿಕೊಳ್ಳುವದು ಕ್ರಮವಾಗಿ ದೇವಭಕ್ತಿ ಮತ್ತು ದೇಶಭಕ್ತಿಯೆಂಬುದನ್ನು ಮೇಲೆಯೇ ನೋಡಿಯಾಗಿದೆ. ಈ ಎರಡು ಕಡೆಗಳಲ್ಲಿ 'ಆತ್ಮಾರ್ಪಣೆ'ಯು ಮುಖ್ಯ ಸಾಧನವಾಗಿದ್ದುದು ಕಂಡು ಬರುತ್ತದೆ. ಆತ್ಮಾರ್ಪಣೆ ಮಾಡುವುದೆಂಬುದರ ಅರ್ಥವು—ಹೂವನ್ನಾಗಲಿ ಹಣ್ಣನ್ನಾಗಲಿ ಕೈಯಿಂದ ಎತ್ತಿ ಸ್ನೇಹಿತನಿಗೆ ಅರ್ಪಿಸುವಂತೆ ಆತ್ಮವನ್ನು ದೇವರ ಚರಣಗಳಲ್ಲಿ ಅಥವಾ ದೇಶಮಾತೆಯ ಮಡಿಲಿನಲ್ಲಿ ಅರ್ಪಿಸುವುದೆಂತಲ್ಲ. ಕಾರಣ, ಆತ್ಮವು ಸಾಕಾರವಾದ ಮತ್ತು ವ್ಯಕ್ತಿಮತ್ತಾದ ವಸ್ತುವಲ್ಲ. ಅದು ದೇಹೇಂದ್ರಿಯಗಳನ್ನು ಅವಲಂಬಿಸಿ ಚೇಷ್ಟಿಸುತ್ತಿರುವುದು. ಈ ಭಾಷೆಯು ಅಧ್ಯಾತ್ಮ ಶಾಸ್ತ್ರದ ಸಂಪ್ರದಾಯಕ್ಕೆ ಹಿಡಿದಿಲ್ಲೆಂಬುದನ್ನು ಪ್ರಾಜ್ಞರು ತಿಳಿದಿರಬೇಕು. ಇರಲಿ. ಆತ್ಮದ ಅವಲಂಬಿಗಳಾದ ಶರೀರೇಂದ್ರಿಯಗಳನ್ನು ಅರ್ಪಿಸುವುದೇ ಆತ್ಮಾರ್ಪಣೆಯಾಗಿದೆ. ಇದೇ ಅದರ ಅರ್ಥವು. ಈ ಆತ್ಮಾರ್ಪಣೆಗೆನೇ ಶ್ರೀ ಭಾಗವತಕಾರರು 'ಆತ್ಮನಿವೇದನ'ವೆಂದು ಹೆಸರು ಕೊಟ್ಟು ನವವಿಧಾ ಭಕ್ತಿಗಳಲ್ಲಿ ಇದರ ಶ್ರೇಷ್ಠಸ್ಥಾನವನ್ನು ತೋರಿಸುವುದಕ್ಕಾಗಿ ಇದನ್ನು ಕೊನೆಯಲ್ಲಿ ಇಟ್ಟಿರುವರು.

ಆತ್ಮ ಸಮರ್ಪಣೆ—ದೇಹೇಂದ್ರಿಯಗಳ ಸಮರ್ಪಣೆ— ಎಂಬೀ ಮಹತ್ತಾದ ಮತ್ತು ಶ್ರೇಷ್ಠವಾದ ಸಾಧನೆಯನ್ನು ಯಾವ ವಿಧದಿಂದ ಪ್ರಯೋಗಿಸುವುದು ಇದನ್ನು ನೋಡೋಣ. ದೇಶಕ್ಕಾಗಿ ತಮ್ಮ ಶರೀರಗಳನ್ನು ವೆಚ್ಚ ಮಾಡುವವರು ದೇಶದೊಳಗಿನ ಕ್ಷಾತ್ರವೃತ್ತಿಯವರು. ಬೆಲ್ಜಮ ದೇಶದ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ ಅಲ್ಲಿಯ ಬಂಟರು ತಮ್ಮ ಶರೀರಗಳನ್ನು ಯುದ್ಧ ಕುಂಡದಲ್ಲಿ ಅರ್ಪಿಸಿದರು, ಇನ್ನೂ ಅರ್ಪಿಸುತ್ತಲೇ ಇದ್ದಾರೆ. ಇಂಥ ಉದಾಹರಣೆಗಳು ಇತಿಹಾಸದಲ್ಲಿ ಅನೇಕ ಇವೆ. ಮೊದಲು ಮೊದಲು ನಮ್ಮ ಹಿಂದುಸ್ಥಾನದಲ್ಲಿ ಮೊಗಲರ ಪ್ರವೇಶವಾಗುತ್ತಿದ್ದಾಗ ಇಲ್ಲವೆ ಕೊಂಚ ಮಟ್ಟಿಗೆ ಪ್ರವೇಶವಾದ ಮೇಲೆ ಮೊಗಲ-ಮಹಮ್ಮದರ ಕಾಟವನ್ನು ತಗ್ಗಿಸಲು ಯತ್ನಿಸಿದ ರಜಪೂತರು—ತಮ್ಮ ಶರೀರಗಳನ್ನು ಇದಕ್ಕಾಗಿ ಅರ್ಪಿಸಿದ ರಜಪೂತರು—ನಿಜವಾಗಿ ಆತ್ಮಾರ್ಪಣೆ ಮಾಡಿದವರೇ. ಆತ್ಮಾರ್ಪಣೆಯಲ್ಲಿ ಈ ಬಗೆಯಾಗಿ ಶರೀರವನ್ನು ಅರ್ಪಿಸುವಂತೆಯೇ ಬುದ್ಧಿಯನ್ನು ಅರ್ಪಿಸುವುದೂ ಇದೆ. ಈ ಕೆಲಸವು ಹೆಚ್ಚಾಗಿ ಮುತ್ಸದ್ದಿಗಳದ್ದಾಗಿದೆ. ಹೀಗೆ ಹೇಳುವುದಕ್ಕಿಂತ ದೇಶದ ಪರಿಸ್ಥಿತಿಯು ಹೇಗಿರುವುದು, ಆ ಪರಿಸ್ಥಿತಿಗೆ ಅನುಕೂಲ ಮತ್ತು ಸಾಧಕವಾದ ಉಪಾಯಗಳಾವವು, ಹೆಸರಿಗೆ ತಕ್ಕ ಉಪಾಯಗಳಾದರೆ ಸಾಲದು, ಅವು ವ್ಯವಹಾರ್ಯವೋ ಹೇಗೆ, ಅವು ವ್ಯವಹಾರ್ಯವಲ್ಲಾದರೆ ಅಂಥ ಉಪಾಯಗಳು ಬೇರೆ ಯಾವವು ಇವೇ ಮೊದಲಾದ ಪ್ರಶ್ನೆಗಳನ್ನು ಚೆನ್ನಾಗಿ ಆಲೋಚಿಸಿ ಕಾರ್ಯದಲ್ಲಿ ತೊಡಗುವವರು ಮತ್ತು ಬೇರೆಯವರನ್ನು ತೊಡಗಿಸುವವರು ಇವರೇ ಮುತ್ಸದ್ದಿಗಳು. ಎಂದರೆ ಮುತ್ಸದ್ದಿತನವು ಜನ್ಮಪ್ರಾಪ್ತವಲ್ಲ. ಗುಣ-ಕರ್ಮಪ್ರಾಪ್ತವು. ಗ್ಲೆಡ್‌ಸ್ಟನರು ಹುಟ್ಟುವಾಗಲೇ ಮುತ್ಸದ್ದಿಗಳ ಕುಲದಲ್ಲಿ ಹುಟ್ಟಿದವರಲ್ಲ, ಕರ್ತೃತ್ವದಿಂದ ಅವರಿಗೆ ಮುತ್ಸದ್ದಿಯೆಂಬ ಹೆಸರು ಬಂತು. ಪೇಶವೆಯವರ ಆಳಿಕೆಯಲ್ಲಿ ನಾನಾಫಡನವಿಸ ಎಂಬವರು ಮೊದಲು ಒಬ್ಬ 'ಕಾರಕೂನ'ರಾಗಿದ್ದರು. ಆದರೆ ಮುಂದೆ ಅಸಾಮಾನ್ಯ ಬುದ್ಧಿಮತ್ತೆಯಿಂದಲೂ, ಕರ್ತೃತ್ವದಿಂದಲೂ ಮತ್ತು ಮುಖ್ಯವಾಗಿ ದೇಶವಾತ್ಸಲ್ಯದಿಂದಲೂ ಶ್ರೇಷ್ಠ ಮುತ್ಸದ್ದಿಪದವಿಗೆ ಏರಿದರು. ನಮ್ಮ ದೇಶದಲ್ಲಿ ನಾನಾ ಫಡನವಿಸರಂತಹರ ಉದಾಹರಣೆಗಳು ವಿರಳ. ಆದರೂ ಈಗಿನ ಕಾಲದ ಮುತ್ಸದ್ದಿಮಾಲಿಕೆಯೊಳಗಿನ ಒಂದು ಹೆಸರನ್ನೆತ್ತಿ ಹೇಳುವುದಾದರೆ ಮಾನ್ಯ ಗೋಖಲೆಯವರ ಸ್ಮರಣೆಯೆ ಸಾಕಾಗಿದೆ.

—ದೇಶದ ಉಪಾಸನೆಯಲ್ಲಿಯಾಗಲಿ ಇಲ್ಲವೆ ದೇವರ ಉಪಾಸನೆಯಲ್ಲಿ ಆಗಲಿ ಆತ್ಮಾರ್ಪಣೆಯೆಂಬುವುದು ಫಕ್ಕನೆ ಸಾಧ್ಯವಾಗತಕ್ಕ ಸಂಗತಿಯಲ್ಲ. ಇದು ಜಗಲಿಯಲ್ಲ, ಗಗನವು. ಆತ್ಮಾರ್ಪಣೆಯ ಮೆಟ್ಟಿಗೆ ಹತ್ತಬೇಕಾದರೆ ಮೊದಲು ಏರಬೇಕಾದ ಎಷ್ಟೋ ಮೆಟ್ಟುಗಳಿವೆ. ಹಿರಿಯರ ಕ್ರಮದಂತೆ ಹೇಳುವುದಾದರೆ ಶ್ರವಣವು ಈ ಭಕ್ತಿಪ್ರಾಸಾದದ ಮೊದಲನೆ ಮೆಟ್ಟು. ನಿಜವಾಗಿ ಇದೀಗ ಮೊದಲನೆ ಮೆಟ್ಟೆನ್ನಬಹುದು. ಪ್ರಕೃತ ವರ್ಣ್ಯವಾದ ದೇಶಭಕ್ತಿಯನ್ನೆ ಉದಾಹರಣೆಗಾಗಿಟ್ಟುಕೊಳ್ಳೋಣ. ದೇಶದ ವಿಷಯದಲ್ಲಿ ಮೊದಲು ಚನ್ನಾಗಿ ಕೇಳಬೇಕು. ಕೆಲವರು—ನಿಮ್ಮ ದೇಶವು ಬಹಳ ಕೆಟ್ಟದ್ದು, ನಿಮ್ಮ ಪೂರ್ವಜರು ಅಜ್ಞಾನಿಗಳಿದ್ದರು, ನಿಮ್ಮ ಪೂರ್ವಪರಂಪರೆಯು ಶುದ್ಧವಿಲ್ಲ, ಈ ಬಗೆಯಿಂದ ಹೇಳುವಾಗ ಕೆಲವರು—ನಿಮಗೀಗ ಯಾವುದರ ಕೊರತೆಯೂ ಇಲ್ಲ, ಬೇಕಷ್ಟು ತಿನ್ನಲಿಕ್ಕಿರುವುದು, ಸಾಕಷ್ಟು ಕೊಡಲಿಕ್ಕಿರುವುದು, ನಿಮ್ಮ ಐಶ್ವರ್ಯವು ದೇವೇಂದ್ರನ ಐಶ್ವರ್ಯವೇ ಸರಿ, ಇವೇ ಮುಂತಾದ ಆಲೋಚನೆಗಳನ್ನು ಒಂದು ಜನಾಂಗದವರೆದುರಿನಲ್ಲಿಟ್ಟರೆ ಆ ಜನಾಂಗದವರು ಈ ಮೇಲಿನ ನಿಂದಾಸ್ತುತಿಗಳು ಎಷ್ಟರ ಮಟ್ಟಿಗೆ ಪ್ರಾಮಾಣಿಕವಿರುತ್ತವೆಂಬುದನ್ನು ಈ ಶ್ರವಣವೆಂಬ ಸಾಧನದಿಂದಲೇ ತಿಳಿದುಕೊಳ್ಳಬೇಕಾಗಿದೆ. ಮೇಲಿನಂತಹ ನಿಂದೆಯು ನಿಜವಾದ್ದೊ ಇಲ್ಲವೇ ಕರ್ಣನ ಉತ್ಸಾಹವನ್ನು ಮುರಿದುಬಿಡುವುದಕ್ಕಾಗಿ ಶಲ್ಯನು ಮಾಡಿದ ಅವನ ನಿಂದೆಯಂತೆ ಸ್ವಾರ್ಥದ್ದೊ ಈ ವಿಷಯವನ್ನು ನಿಂದೆಯನ್ನು ಕೇಳುವಾಗ ಆಲೋಚಿಸಬೇಕು. ಹಾಗೆಯೆ ಸ್ತುತಿಯನ್ನು ಕೇಳುವಾಗ ಕೂಡ ಈ ಸ್ತುತಿಯು ಇಸ್ಸೋಪನ ನರಿಯು ಮಾಡಿದ ಕಾಗೆಯ ಸ್ತುತಿಯಂತೆಯೆ ಠಕ್ಕಿನದೊ ಇದನ್ನೂ ಚನ್ನಾಗಿ ಆಲೋಚಿಸಬೇಕು. ಈ ಸಂಗತಿಗಳನ್ನು ಆಲೋಚಿಸಬೇಕಾದರೆ ಶ್ರವಣವೇ ಮೊದಲನೇ ಸಾಧನವಾಗಿದೆ. ಅಲ್ಲದೆ, ದೇಶದ ಪೂರ್ವೇತಿಹಾಸವನ್ನು ಕೇಳುವುದರಿಂದ ಮುಂದಿನ ಉನ್ನತಿಯನ್ನು ಹೇಗೆ ಹೇಗೆ ಸಾಧಿಸಬೇಕೆಂಬುದು ಗೊತ್ತಾಗುತ್ತದೆ. ಮಹಾರಾಷ್ಟ್ರರಾಜ್ಯಸಂಸ್ಥಾಪಕನಾದ ಶಿವಾಜಿಯು ಆರ್ಯಶ್ರೇಷ್ಠನಾಥ ಶ್ರೀ ರಾಮಚಂದ್ರನ ಚರಿತ್ರೆಯನ್ನು ಕೇಳಿಯೇ ಕರ್ತವ್ಯದ ಗದ್ದೀಮನೆಯಲ್ಲಿ ಇಳಿದನು. ದೇವರ ಗುಣಗಳನ್ನೂ ಲೀಲೆಗಳನ್ನೂ ಶ್ರವಣ ಮಾಡಿ ಹೇಗೆ ಅನೇಕ ಭಕ್ತ ಶಿಖಾಮಣಿಗಳು ಆತ್ಮಸಾರ್ಥಕ್ಯವನ್ನು ಹೊಂದಿರುವರೋ ಹಾಗೆಯೇ ದೇಶದ ಪೂರ್ವೇತಿಹಾಸವನ್ನು ಕೇಳಿ ಶಿವಾಜಿಯಂಥ ದೇಶಭಕ್ತ ಶಿರೋಮಣಿಗಳು ಆಯಾ ಪರಿಸ್ಥಿತಿಗೆ ಅನುಗುಣವಾದ ದೇಶಭಕ್ತಿಯಿಂದ ತಮ್ಮ ಜನ್ಮವನ್ನು ಕೃತಾರ್ಥಗೊಳಿಸುವರು. ಇದರ ಮೇಲಿಂದ ಶ್ರವಣವೆಂಬ ಭಕ್ತಿಯು ಎಷ್ಟೋ ಮಹತ್ವದ್ದಿದೆಂಬುದನ್ನು ಬೇರೆ ಹೇಳಬೇಕಾದ್ದಿಲ್ಲ. ಶ್ರವಣವು ಸಾಪೇಕ್ಷವಾಗಿದೆ. ಎಂದರೆ ಕೇಳುವುದೆಂದ ಮೇಲೆ ಹೇಳಿಕೆಯಿಲ್ಲದೆ ಅದು ಸಾಧ್ಯವಿಲ್ಲ, ಅರ್ಥಾತ್ ಶ್ರವಣಕ್ಕೆ ಹೇಳಿಕೆಯು ಬೇಕು; ಹೇಳಿದ್ದನ್ನು ಕೇಳುವುದು. ಇದೇ ಮೇಲೆ ಹೇಳಿದ ಸಾಪೇಕ್ಷತೆ. ಆದುದರಿಂದ ಶ್ರವಣವಾದ ಕೂಡಲೆನೇ ಎರಡನೆ ಮೆಟ್ಟಾಗಿ ಕೀರ್ತನವನ್ನಿಟ್ಟಿರುವರು. ಮೂರನೆದರ ಸ್ಥಾನದಲ್ಲಿ ಸ್ಮರಣವನ್ನು ಯೋಜಿಸಿರುವರು. ದೇಶದ ಪೂರ್ವ ಚರಿತ್ರೆಯನ್ನೂ, ಪೂರ್ವ ವೈಭವವನ್ನೂ, ಪೂರ್ವಿಕರ

ಗುಣಗಳನ್ನೂ ಉತ್ಕೀರ್ತಿಸಿ ಹೊಗಳಿ-ಅವುಗಳನ್ನೇ ಯಾವಾಗಲೂ ಸ್ಮರಿಸುತ್ತಿರುವುದರಿಂದ ಕೀರ್ತನ ಮತ್ತು ಸ್ಮರಣ ಈ ಎರಡು ಸಾಧನಗಳು ಸಾಂಗವಾಗುವುವು. ಈ ಆರ್ಯಮಾತೆಯು ಎಷ್ಟೋ ಸತ್ಪುತ್ರರು ಮೊದಲು ವಿಶ್ವಜಿತ್, ಅಶ್ವಮೇಧ ಮೊದಲಾದ ಯಜ್ಞಗಳನ್ನು ಮಾಡಿ ಲೋಕವಲ್ಲೆಲ್ಲ ಶಾಂತತೆಯ ಸಾಮ್ರಾಜ್ಯವನ್ನು ಹಬ್ಬಿಸಿರಲಿಲ್ಲವೆ? ಈ ಆರ್ಯಭೂಮಿಗೆ 'ಸುವರ್ಣಭೂಮಿ' ಯೆಂಬ ಹೆಸರು ಬಿದ್ದಿರುವುದರಿಂದಲೇ ಇದರ ಪೂರ್ವವೈಭವವು ಎಷ್ಟಿರಬೇಕಿತ್ತು; ಇದನ್ನು ತಿರಿಗಿ ಹೇಳಬೇಕಾದುದುಂಟೇ? ಚುಂಬಕದ ಕಡೆಗೆ ಸೂಜಿಯು ಓಡಿಬರುವಂತೆ ಎಷ್ಟೋ ಪರದೇಶಿಯರು ಈ ಸುವರ್ಣಭೂಮಿಯ ವೈಭವವನ್ನು ಕೇಳಿ ಇಲ್ಲಿಗೆ ಓಡಿಬರುತ್ತಿದ್ದರಲ್ಲವೆ? ಪೂರ್ವಿಕರ ಗುಣಗಳಿಗೆ ಆರ್ಯಸಂಸ್ಕೃತಿಯೇ ಸಾಕ್ಷಿಯಾಗಿದೆ. ಘನವಾದ ತತ್ವಜ್ಞಾನ, ತರ್ಕಸಮ್ಮತವಾದ ಶಾಸ್ತ್ರವಿವೇಚನ, ಸುವ್ಯವಸ್ಥಿತವಾದ ರಾಜ್ಯಶಾಸನ ಮತ್ತು ಶೌರ್ಯ, ಧೈರ್ಯ, ಸತ್ಯ-ಪ್ರೀತಿ ಮುಂತಾದ ಗುಣಸಮುದಾಯಗಳು ಹಿಂದೊಮ್ಮೆ ಈ ದೇಶದಲ್ಲಿದ್ದಂತೆ ಬೇರೆ ಎಲ್ಲಿಯೂ ಇದ್ದುದು ಕಂಡುಬರುವುದಿಲ್ಲ. ದೇಶದ ಪೂರ್ವಚರಿತ್ರೆಯನ್ನು ಈ ಕ್ರಮದಿಂದ ಹೊಗಳುವುದೂ ಅದನ್ನು ಸ್ಮರಿಸುವುದೂ ಮೇಲೆ ಹೇಳಿದಂತೆ ಈ ಎರಡು ಸಾಧನಗಳು. ಈ ಎರಡು ಸಾಧನೆಗಳಲ್ಲಿ ದೇಶದ ಪೂರ್ವಚರಿತ್ರೆ ಮುಂತಾದ ಗತ ವಿಷಯವನ್ನೆ ಹೊಗಳುವುದೇ ಸ್ಮರಿಸುವುದೇ ಎಂತ ಯಾರೂ ತಿಳಿಯಬಾರದು. ದೇಶದ ವಿದ್ಯಮಾನಕಾಲದ ಅಭಿಮಾನಾಸ್ಪದ ಮತ್ತು ಶ್ಲಾಘ್ಯವಾದ ವಿಷಯಗಳನ್ನು ತಕ್ಕಸ್ವರೂಪದಿಂದ ವರ್ಣಿಸುವುದೂ ಸ್ಮರಿಸುವುದೂ ಅನೇ ಸಾಧನೆಗಳಲ್ಲಿ ಬರುತ್ತವೆ. ಆದರೆ ಕೆಲವರಿಗೆ ವಿಕಾರವಶತೆಯಿಂದ 'ನಮ್ಮಲ್ಲಿ ಯಾವ ಗುಣವೂ ಇಲ್ಲ, ನಾವು ಬರೆ ಮೂಢರು' ಎಂತ ತೋರುತ್ತದೆ. ಈ ತಿಳಿವು ಆತ್ಮಘಾತಕವಾದುದು. ಆತ್ಮವಿಶ್ವಾಸವನ್ನು ಹುಟ್ಟಿಸಿಕೊಳ್ಳುವುದಕ್ಕಾಗಿ ತಮ್ಮ ಯೋಗ್ಯವಾದ ತರಗತಿಯನ್ನು ತಿಳಿದಿರಬೇಕು, ತಮ್ಮನ್ನು ಗೌರವಿಸಿಕೊಳ್ಳಬೇಕು, ವೃಥಾ ಹೀನೈಸಿಕೊಳ್ಳಬಾರದು. ಆದರಿಂದ ದೇಶದ ಕಾಲುಗಳು ಇನ್ನಷ್ಟು ಕೆಳಕೆಳಗೆ ಹೋಗುವವು. ಆದುದರಿಂದ ಕೀರ್ತನ ಮತ್ತು ಸ್ಮರಣ ಈ ಎರಡು ಸಾಧನೆಗಳು ಆವಶ್ಯಕವಾಗಿವೆ. ಇವು ಸ್ವಾಭಿಮಾನೋತ್ತೇಜಕವಾದ ಸಂಗತಿಗಳು. ಬ್ರಿಟಿಷರ ರಾಷ್ಟ್ರಗೀತವನ್ನು ಉಚ್ಚರಿಸಿದ ಕೂಡಲೆ ಪ್ರತಿ ಒಬ್ಬ ಬ್ರಿಟಿಷನಿಗೆ ಮೈಯಲ್ಲಿ ವೀರಶ್ರೀಯು ಸಂಚರಿಸುವುದು, ಬ್ರಿಟಿಷಸೋಲ್ಜರನು ಆ ತಮ್ಮ ರಾಷ್ಟ್ರಗೀತವನ್ನು ಕೇಳಿದ ಕೂಡಲೆ ಕೈಯಲ್ಲಿ ಧ್ವಜವನ್ನು ಹಿಡಿದುಕೊಂಡು ಶತ್ರುಗಳ ವಕ್ಷಸ್ಥಲದಲ್ಲಿ ಗುಂಡನ್ನು ಹಾಕದೆ ಇರನು! ಇದೇ ಶ್ರವಣ, ಕೀರ್ತನ, ಮತ್ತು ಸ್ಮರಣಗಳ ಫಲವು. ಎಂದರೆ ಒಬ್ಬ ಬ್ರಿಟಿಷನಿಗೆ ಅವನ ದೇಶದ ಚರಿತ್ರೆಯನ್ನು ಕೇಳಿದ ಕೂಡಲೆ ಅವನಲ್ಲಿ ಸ್ವಾಭಿಮಾನವು ಉದ್ದೀಪಿತವಾಗುವುದೆಂಬ ಅರ್ಥವು. ಹೊರತು ಆ ಬ್ರಿಟಿಷನು ಈ ಅಭಿಮಾನವು ಪ್ರಕಾಶಿತವಾದ ಕೂಡಲೆ ಶತ್ರುಗಳ ಮೇಲೆ ಗುಂಡನ್ನು ಹಾಕುವನೆಂಬ ಅರ್ಥವಲ್ಲ. ಆದರೆ ಮೇಲೆ ಹಾಗೆ ಸಂದರ್ಭ ತಂದು ತೋರಿಸಿದ್ದು 'ಇದು ಯುದ್ಧಕಾಲವಾದುದರಿಂದ ಜರ್ಮನಾದಿ' ಶತ್ರುಗಳ ಮೇಲೆ ಬ್ರಿಟಿಷಸೋಲ್ಜರನು ಶಸ್ತ್ರ ನಡಿಸುವುದು, ಸ್ವರಾಷ್ಟ್ರಭಕ್ತಿಯುದ್ಯೋತಕವೆಂದು ಸೂಚಿಸುವುದಕ್ಕಾಗಿ. ಇರಲಿ, ಈ ಪ್ರಕಾರ ದೇಶಭಕ್ತಿ ಪ್ರಸಾದದ ಮೂರು ಮೆಟ್ಲುಗಳ ಸ್ವರೂಪವು ಸಂಕ್ಷೇಪದಿಂದ ವಾಚಕರಿಗೆ ಶ್ರುತಪಡಿಸಿದ್ದೇವೆ.

ಔದ್ಯೋಗಿಕ ಕಮಿಷನು.

(ಕೆಲವು ಸಾಕ್ಷಿಗಳು.)

ಒಕ್ಟೋಬರ ತಾ. ೨೮ರಿಂದ ಈ ಔದ್ಯೋಗಿಕ ಕಮಿಷನಿನ ಕೆಲಸಕ್ಕೆ ದಿಲ್ಲೀಯಲ್ಲಿ ಪ್ರಾರಂಭವಾಗಿದೆ. ಇದರ ಅಧ್ಯಕ್ಷರು ಸರ್ ಥೋಮಸ್ ಹೊಲ್ಲಂಡ ಮತ್ತು ಸರ್ ಎಫ್. ಸ್ಟುಆರ್ಟ, ಸರ್ ಫಾಜಿಲ್ ಭಾಯಿ, ಪಂಡಿತ ಮಾಲವೀಯ, ಸರ್ ಆರ್. ಮುಕರ್ಜಿ, ಸರ್ ದೊರಾಬಜಿ ಟಾಟಾ, ಡೊ. ಹೊಕಿನ್ಸನ್ ಮತ್ತು ಮಿ. ಚಟರ್ಟನ್ ಇಷ್ಟು ಸಭಾಸದರು ಹಾಜರಿದ್ದರು. ಈ ಕಮಿಷನಿನ ಮುಂದೆ ಆದ ಸಾಕ್ಷಿಗಳಲ್ಲಿ ಮಹತ್ವದ ಎರಡು ಸಾಕ್ಷಿಗಳನ್ನು ಕೆಳಗೆ ಕೊಡುತ್ತೇವೆ.

೧. ಪಂಜಾಬು ಚೆಂಬರ ಆಫ್ ಕೊಮರ್ಸಿನ ಅಧ್ಯಕ್ಷರಾದ ಬಹುಮಾನಪಟ್ಟಿ ಕರೀ ಎಂಬವರು ತಮ್ಮ ಸಾಕ್ಷಿಯಲ್ಲಿ 'ಹೇಳಿದ್ದೇನೆಂದರೆ—:ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವುದಕ್ಕಾಗಿ ಎಂತ ಅಲ್ಲ, ತಜ್ಞರಾದವರಿಗೆ ಹೊಸ ಹೊಸ ಸಂಗತಿಗಳನ್ನು ಶೋಧಿಸಲು ಎಡೆ ಸಿಗುವಂತೆ ಒಂದು ಮಧ್ಯವರ್ತಿಯಾದ 'ರಿಸರ್ಚ್ ಇನ್‌ಸ್ಟಿಟ್ಯೂಟ'ನ್ನು ಸರಕಾರವು ಏರ್ಪಡಿಸಬೇಕು. ಈ ಸಂಸ್ಥೆಯಲ್ಲಿ ದೇಶದೊಳಗಿನ ಸುಪ್ರಸಿದ್ಧರಾದ ರಸಾಯನ ಶಾಸ್ತ್ರಜ್ಞರನ್ನು ಶಾಸ್ತ್ರೀಯ ಶೋಧದ ಕೆಲಸದ ಮೇಲೆ ನೇಮಿಸಬೇಕು. ಈ ಸಂಸ್ಥೆಯೊಳಗಿನ ತಜ್ಞರಾದ ವ್ಯಾಪಾರಿಗಳು ಖಾಸಗಿ ಕಾರಖಾನೆಯ ಮಾಲಿಕರಿಗೆ ಯೋಗ್ಯವಾದ ಆಲೋಚನೆಗಳನ್ನು ಕೊಟ್ಟು ಹೊಸ ಕೈಗಾರಿಕೆಯ ವಿಷಯದಲ್ಲಿ ಯಶಸ್ವಿಯಾದ ಯೋಗ್ಯ ಸೂಚನೆಗಳನ್ನು ಕೊಡಬೇಕು. ಹಿಂದೂಸ್ಥಾನದೊಳಗಿನ ಸಾಧಾರಣವಾಗಿ ಎಲ್ಲಾ ಕಾರಖಾನೆಗಳು ನಗದು ಭಂಡವಾಲದ ಬಲವಿಲ್ಲಾದುದರಿಂದ ನಿಂತುಹೋಗುವವು. ಇದನ್ನು ತಪ್ಪಿಸುವುದಕ್ಕೆ ಸರಕಾರದ ಸಹಾಯದಿಂದ ನಡಿಯುವಂಥ ಮಧ್ಯವರ್ತಿ ಬೇಂಕನ್ನು ತೆರೆದು ಅದರ ಶಾಖೆಗಳನ್ನು ಅಲ್ಲಲ್ಲಿ ಸ್ಥಾಪಿಸತಕ್ಕದ್ದು; ದೊಡ್ಡ ದೊಡ್ಡ ಕಾರಖಾನೆಗಳಿಗೆ ಯೋಗ್ಯವಿಚಾರ್ವಮಾಡಿ, ಈ ಬೇಂಕುಗಳಿಂದ ಮದತು ಸಿಗಬೇಕು. ಚಿಲ್ಲರೆ ಕೈಗಾರಿಕೆಗಳಿಗೆ ಸಹಕಾರಿ ಸಂಘಗಳಿಂದ ಮದತಾಗಬೇಕು. ಪ್ರಮುಖ ಪಟ್ಟಣಗಳಲ್ಲಿ ದೇಶೀ ವಸ್ತುಗಳ ಸಂಗ್ರಹಾಲಯಗಳೂ, ಪ್ರದರ್ಶನಾಲಯಗಳೂ ಇರಬೇಕು. ಸರಕಾರವು, ತನಗೆ ಬೇಕಾದ ಸಾಮಾನುಗಳನ್ನು ಇಲ್ಲಿಯ ಕಾರಖಾನೆಗಳಿಂದಲೇ ಕೊಂಡುಕೊಳ್ಳಬೇಕು. ರೈಲಿನ ಅಭಿವೃದ್ಧಿಯೂ ಪ್ರಸಾರಣೆಯೂ ಅದಷ್ಟು ಬೇಕಾಗಿಯೇ ಇದೆ. ರಸಾಯನಿಕ ವಸ್ತುಗಳನ್ನೂ ಔಷಧಗಳನ್ನೂ ಈ ದೇಶದಲ್ಲಿಯೇ ತಯಾರಿಸಲ್ಪಡುವ ಹಾಗಿವೆ. ಪ್ರತಿಒಂದು ಮುನಿಸಿಪಾಲಿಟಿಯು ತನಗೆ ಬೇಕಾದ ಚಿಲ್ಲರೆ ಸಾಮಾನುಗಳಿಗಾಗಿಯೂ, ರಿಪೇರಿ ಕೆಲಸಕ್ಕಾಗಿಯೂ ಒಂದು ಮರದ ಕೆಲಸದ ಮತ್ತು ಕಬ್ಬಿಣ ಕೆಲಸದ ಅಂಗಡಿಯನ್ನಿಟ್ಟು, ಅದರಲ್ಲಿ ಉಮೇದ್ವಾರರನ್ನು ಶಿಕ್ಷಣೆ ಕೊಡುವದು. ಈ ಕೆಲಸದಲ್ಲಿ ಸರಕಾರವೂ ಮುನಿಸಿಪಾಲಿಟಿಗಳಿಗೆ ಮದತು ಮಾಡುವುದು ಯುಕ್ತವಾಗಿದೆ.

ಇದೇ ಕಮಿಷನಿನ ಸಾಕ್ಷಿಗಳೊಳಗಿನ ಇನ್ನೊಂದು 'ಚಿತ್ರ'ವನ್ನು ವಾಚಕರು ನೋಡುವ ಹಾಗಿದೆ.

೨. 'ದಿಲ್ಲಿ ನೊಟಿಫಾಯಡ್ ಏರಿಯಾ'ದ ವೈಸಪ್ರೆಸಿಡೆಂಟರಾದ ಮಿ. ಎಫ್. ಸೀ. ಫೊಲರರು ತಮ್ಮ ಸಾಕ್ಷಿಯಲ್ಲಿ ಚೆಲ್ಲಿದ ಮುತ್ತುಗಳಾವವೆಂದರೆ:—ಮೆಂಚಸ್ಟರ ವಸ್ತ್ರಗಳನ್ನೂ ಬೇರೆ ಪರದೇಶಿ ಮಾಲುಗಳನ್ನೂ ತರಿಸುವುದು ನನ್ನ ವ್ಯಾಪ್ತಿಯಾಗಿದೆ. ಈ ಕೆಲಸದ ಅನುಭವವು ನನಗೆ ಇದೆ. ಹಿಂದುಸ್ಥಾನ ದೇಶವು ಗದ್ದೆ ಬೇಸಾಯದಾಗಿದ್ದು ಈ ದೇಶದ ಉನ್ನತಿಯು ಬರೇ ಬೇಸಾಯದ ಮೇಲೂ ಖನಿಜಗಳ ಉತ್ಪತ್ತಿಯ ಮೇಲೂ ಹೊಂದಿಕೊಂಡಿದೆ. ಬೆಳೆಯು ಉತ್ತಮವಾಯಿತೆಂದರೆ ಈ ದೇಶದಲ್ಲಿ ಸಮೃದ್ಧಿಯುಂಟಾಗುತ್ತದೆ; ಆದುದರಿಂದ ರೈಲುಗಳನ್ನೂ, ಕಾಲುವೆಗಳನ್ನೂ ಬೆಳಸುವುದು ಯೋಗ್ಯವೆಂತಲು ತೋರುತ್ತದೆ. ನೇಗಿಲು, ಗೊಬ್ಬರ, ಬಾವಿಯೊಳಗಿಂದ ನೀರನ್ನು ಸೇದುವ ಯಂತ್ರ ಇವುಗಳನ್ನು ಉಪಯೋಗಿಸುವುದು ಹೇಗೆಂಬುದರ ಶಿಕ್ಷಣವನ್ನು ಕೊಡುವುದಕ್ಕಾಗಿ ಒಂದು ಆದರ್ಶವಾಗಿ ಶಿಕ್ಷಣ ಸಂಸ್ಥೆ ಇದ್ದರೆ ಅದೆ ಹೆಚ್ಚಾಯಿತು! ಇಲ್ಲಿಯವರು ಸಗಣಿಯನ್ನು ಕಟ್ಟಿಗೆಯ ಬದಲಾಗಿ (ಸವುದೆಯಂತೆ) ಒಲೆಗೆ ಉಪಯೋಗಿಸುತ್ತಾರೆ; ಅದರ ಬದಲು ಅವರಿಗೆ ಬೇರೆ ತರದ ಸವುದೆಯನ್ನು ಏರ್ಪಡಿಸಿ ಕೊಟ್ಟರೆ ಸಗಣಿಯನ್ನು ಗೊಬ್ಬರಕ್ಕಾಗಿ ಉಪಯೋಗಿಸಬಹುದು. ಯಾವ ಕೈಗಾರಿಕೆಗಳು ಹಿಂದೀ ಜನರಿಗೆ ಸ್ವಾವಲಂಬನೆಯಿಂದ ಸಾಧ್ಯವಾಗಲಾರವೋ ಅವುಗಳ ವಿಷಯದಲ್ಲಿ ಅವರಿಗೆ ಮದತುಮಾಡಿ ಪ್ರಯೋಜನವೇನು? ಕೆಲವು ಸಮಯದ ಹಿಂದೆ ನಾನು ಒಂದು ವಸ್ತ್ರದ ಗಿರಣಿಯ ಡಿರೆಕ್ಟರನಾಗಿದ್ದೆ; ಅದರ ಮೆನೇಜರನು ಒಬ್ಬ ಯೂರೋಪಿಯನ ಗೃಹಸ್ಥನಿದ್ದನು. ಆ ಗಿರಣಿಯೊಳಗಿಂದ ಯೂರೋಪಿಯನರು ತಮ್ಮ ಕಾಲನ್ನು ಹೊರಗೆ ತೆಗೆದ ಕೂಡಲೆ ಆ ಕಾರಖಾನೆಯು ನಿಂತಿತು. ಮತ್ತು ಶೇರುದಾರರು ಮುಣುಗಿ ಹೋದರು! ಸರಕಾರಕ್ಕೆ ದೇಶೀಕೈಗಾರಿಕೆಗಳಿಗೆ ಮದತು ಮಾಡುವುದೇ ಇದ್ದರೆ ಚರ್ಮವನ್ನು ಹದಮಾಡುವ ಕೈಗಾರಿಕೆಗೆ ಉತ್ತೇಜನ ಕೊಡಬಹುದು. ಎಲ್ಯುಮಿನಿನ ಪಾತ್ರೆ, ಟ್ರಂಕು, ಬೀಗ, ಹಿತ್ತಾಳಿಯ ದೀಪ, ಗಾಜಿನ ಸಾಮಾನು, ಹೊಲಿಗೆಯ ಸಾಮಾನು, ಅಲ್ಪ ಕ್ರಯದ ಕಾಗದ, ಬೆಂಕಿ ಪೆಟ್ಟಿಗೆ ಮುಂತಾದ ಹಲವು ಕೈಗಾರಿಕೆಗಳಿವೆ, ಅವುಗಳಿಗೆ ಒಂದುವೇಳೆ ಉತ್ತೇಜನೆ ಕೊಡಬಹುದು; ಆದರೆ ಯಾವ ಸಾಮಾನುಗಳು ಇಂಗ್ಲಂಡದಿಂದಲೇ ಇಲ್ಲಿಗೆ ಬರುವವೋ ಅಂಥ ಸಾಮಾನುಗಳ ಕಾರಖಾನೆಗಳಿಗೆ ಉತ್ತೇಜನ ಕೊಡುವುದಾಗಲಿ, ಮದತು ಮಾಡುವುದಾಗಲಿ ನಿಂದ್ಯವಾದ ಕೆಲಸವೆಂದು ನಾನು ತಿಳಿಯುವೆನು! ಯುದ್ಧವಾಗುವುದಕ್ಕಿಂತ ಮುಂಚೆ ಯಾವ ವಸ್ತುಗಳು ಜರ್ಮನಿ ಮತ್ತು ಒಸ್ಟ್ರಿಯದಿಂದ ಇಲ್ಲಿಗೆ ಬರುತ್ತಿದ್ದವೊ ಅವುಗಳಿಗೆ-ಬೇಕಾದರೆ ಪ್ರೋತ್ಸಾಹವನ್ನು ಕೊಡಬಹುದು, ಈ ವಿಷಯದಲ್ಲಿ ನನ್ನ ಪೂರ್ಣ ಸಮ್ಮತಿ ಇದೆ!!

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಕಳೆದ ತಿಂಗಳ ತಾ. ೨೮ರಲ್ಲಿ ಕೂಡಿಬಂದ ಮಂಗಳೂರು ತಾಲೂಕು ಬೋರ್ಡ ಮೀಟಿಂಗಿನಲ್ಲಿ ಬೋರ್ಡ ಶಾಲಾ ಉಪಾಧ್ಯಾಯರಿಗೆ ಮಂಗ್ರಾಯಿಭತ್ತೆಯನ್ನು ಕೊಡುವದರ ಕುರಿತು ನಿರ್ಣಯಿಸೋಣಾಗಿಯದೆಂತ ಈ ತಿಂಗಳ ತಾ. ೩ನೇ ಸಂಚಿಕೆಯಲ್ಲಿ ಪ್ರಕಟವಾದ್ದನ್ನು ನೋಡಿ ಆನಂದಪಟ್ಟೆನು.

ಬೋರ್ಡ ಶಾಲಾ ಉಪಾಧ್ಯಾಯರಿಗಿಂತ ಕಡಿಮೆ ತಲಬಿನಿಂದ ಅಂದರೆ ಹೆಚ್ಚಾಗಿ ತಿಂಗಳು ೧೮ ರೂ. ೮, ೧೦, ೧೨ರಂತೆ ತಲಬು ಪಡಕೊಂಡು ರಾತ್ರಿಹಗಲೂ ಮಳೆ, ಬಿಸಿಲು ಎಂಬದನ್ನು ನೋಡದೆ ಕೆಲಸ ಮಾಡಿ ಬಳಲುವ ಬಡ ಶ್ಯಾನುಭಾಗರಿಗೆ ಬತ್ತೆ ಅಥವಾ ಬೇರೆ ಯಾವದೊಂದು ವಿಧದ ಭತ್ತೆ ಕೊಡುವದರ ವಿಷಯವಾಗಿ ಅವರ ಮೇಲಣ ವಿಚಾರ ನೋಡುವ ರೆವಿನ್ಯು ಇಲಾಖೆಯ ಅಧಿಕಾರಿಗಳು

ವರೆಗೆ ಆಲೋಚಿಸೋಣಾಗದೆ ಇರುವಂಥಾದ್ದು ಶ್ಯಾನುಭೋಗರ ದುರಾದೃಷ್ಟವೆಂತ ತಿಳಕೊಳ್ಳಬೇಕಾಗುವದು. ಶ್ಯಾನಭೋಗರಿಗೆ ಇತರ ಸರಕಾರ ಉದ್ಯೋಗಸ್ಥರಂತೆ ಇಡೀ ದಿವಸ ಕೆಲಸವಿಲ್ಲವೆಂತ ತೋರಿಕೆಗೆ ಮಾತ್ರ ಒಂದು ಅಭಿಪ್ರಾಯವಿರುವದು. ಆದರೆ ಅವರಿಗೆ ದಿವಸದಲ್ಲಿ ೧೮ ಗಂಟೆಗಳು ಕೆಲಸಮಾಡಿದರೂ ಅವರ ಕೆಲಸಗಳು ಮುಗಿಯುವದೇ ಇಲ್ಲ. ದೈವವಶಾತ್ ಎಲ್ಯಾದರೂ ಕಾಯಿಲೆಯಲ್ಲಿ ಬಿದ್ದರೆ ತಲಬು ಇಲ್ಲದೆ ರಜೆಪಡಿಯಬೇಕು. ಆ ಕಾಲದಲ್ಲಿ ಬೇರೆ ಅನುಕೂಲತೆ ಇಲ್ಲದ ಶ್ಯಾನಭೋಗರ ಕುಟುಂಬಕ್ಕೆ ಸವಿಾಪದ ಬಾವಿಯು ನೀರೆ ಗತಿ. ಇತರ ಸರಕಾರಿ ಉದ್ಯೋಗಸ್ಥರಂತೆ ಅವರಿಗೆ ೧ ತಿಂಗಳಾದರೂ ರಜೆಯಿಲ್ಲ. ಭತ್ತೆಕೊಡುವ ಬದಲಿಗೆ ಅವರ ಉದ್ಯೋಗ ಪ್ರಯುಕ್ತವಾದ ಕೆಲಸಗಳನ್ನು ಸರಿಯಾಗಿ ನಿರ್ವಹಿಸುವರೆ ಬೇಕಾದ್ದಷ್ಟು ಸ್ಟೇಶನರಿಯೇ ಸಿಕ್ಕುವದಿಲ್ಲ. ಮೇಲುದ್ಯೋಗಸ್ಥರಿಂದ ಇವರ ಕೆಲಸಗಳು ಸಮಾಧಾನಕರದ್ದು ಎಂತ ಶಿಪ್ಹಾರಸುಪಡಿಯಬೇಕಾದರೆ ಒಳ್ಳೇ ಶಾಯಿ, ಪೇನು, ಸ್ಲೇಲು, ಪೆನ್ಸಿಲು, ನೂಲು, ಬ್ಲೋಟಿಂಗ ವಗೈರೆಯನ್ನು ಕೈಯಿಂದ ಹಣ ಕೊಟ್ಟು ಪಡದು ರಿಕಾರ್ಡುಗಳು ತಯಾರಿಸಬೇಕು. ಇಷ್ಟುಮಾತ್ರವಲ್ಲ; ಲೆಂಡ ರಿಕಾರ್ಡ್ಸರ್, ಪೋಲಿಸ್, ಪೋಲೀಸ್, ಅಬಕಾರಿ ಮತ್ತು ಅವರ ರೆವಿನ್ಯ ಇಲಾಖೆಯ ಉದ್ಯೋಗಸ್ಥರ ಮೇಲ್ವಿಚಾರವು ಅವರ ಮೇಲಿರುವ್ವದರಿಂದ ಅವರೆಲ್ಲರಿಗೂ ವಿಧೇಯರಾಗಿ ನಡಕೊಳ್ಳಬೇಕು. ಇಷ್ಟು ಜನರ ಪೈಕಿ ಯಾವದೊಂದು ಇಲಾಖೆಯಲ್ಲಿ ಕೆಲಸ ನೋಡಿ ಅಲ್ಪ ತಲಬಿನಿಂದ ಜೀವಿಸುವ ಯಾವನೊಬ್ಬ ಒಳ ನೌಕರ ಯಾ ಉದ್ಯೋಗಸ್ಥನಾದರೂ ಈ ಶ್ಯಾನಭೋಗರ ಮೇಲೆ ಅಸಮಾಧಾನಪಟ್ಟು ಏನಾದರೂ ಕಿಂಚಿತ ದೋಷಗಳನ್ನು ಆರೋಪಿಸಿ ಅವರ ಮೇಲಾಧಿಕಾರಿಗಳಿಗೆ ಬರದ್ದಾದರೆ ಇದರಲ್ಲಿ ಎಷ್ಟರ ಮಟ್ಟಿನ ಸಮಾಧಾನಕರವಾದ ಉದಾಹರಣೆ ಕೊಟ್ಟರೂ ಅದನ್ನು ಮನ್ನಿಸದೆ, ಒಳನೌಕರರ ರಿಪೋರ್ಟನ್ನೆ ಆದರಿಸಿ, ಅದಕ್ಕಾಗಿ ದಂಡಿಸಿಯೇ ಬಿಡುವರು. ಅವರ ಕೆಲಸಗಳ ಮತ್ತು ಅಧಿಕಾರಿಗಳ ಮಟ್ಟಿಗೆ ಸಾಕಾದ ಜವಾಬದಾರಿಯು ಅವರ ಮೇಲೆ ಮುಂದಾಗಿಯೇ ಇರುವದು. ಆದರೂ ಈ ಪೈಕಿ ಕುಟುಂಬವಂತನಾದ ಶ್ಯಾನಭೋಗನು ಎಲ್ಯಾದರೂ ಅವನಿಗೆ ಸಿಕ್ಕುವ ಸಮಯಗಳಲ್ಲಿ ಕಸುರಿಯಿಂದ ಅವನ ಕುಟುಂಬ ಪೋಷಣೆಗಾಗಿ ಬೇರೇನಾದರೂ ವೃತ್ತಿಗಳು ಮಾಡಿದ್ದಾದರೆ, ಅಂಥಾ ಸಂಗತಿಗಳು ಅವರ ಸವಿಾಪದ ಮೇಲುದ್ಯೋಗಸ್ಥರ ತಿಳುವಳಿಕೆಗೆ ಬಂದದ್ದಾದರೆ ಅಂಥಾದ್ದು ಖಂಡಿತವಾಗಿ ಆಕ್ಷೇಪಿಸಲ್ಪಡುವವು. ಇವರಿಗೆ ಸಿಕ್ಕುವ ತಲಬು ೨ ಮುಡಿ ಕುಚ್ಚಲು ಅಕ್ಕಿಯ ಕ್ರಯಷ್ಟೇ ಪೂರಾ ಆಗುವದಿಲ್ಲ. ಎಲ್ಲಾದರೂ ಅಪರೂಪವಾಗಿ ಕೋರ್ಟು ಕಚೇರಿಗಳಿಗೆ ಸಾಕ್ಷಿಗೆ ಹೋದ್ದಾದರೆ ಮೊದಲು IIನೇ ಕ್ಲಾಸ್ ಭತ್ತೆ ಸಿಕ್ಕುತ್ತಿತ್ತು. ಅದು ಜಾಸ್ತಿ ಆಗುವದೆಂತ ಯಾರೋ ಪುಣ್ಯಾತ್ಮರು ಆಕ್ಷೇಪಿಸಿದ್ದರಿಂದ ಈಗ IIIನೇ ಕ್ಲಾಸ್ ಬತ್ತೆ ಕೊಡೋಣಾಗುವದು. ಎಲ್ಲಾ ಇಲಾಖೆಗಳ ಮೇಲುದ್ಯೋಗಸ್ಥರ ಲಾಗಾಯಿತು ಪೇದೆಗಳವರೆಗೂ ಅವರವರ ಹುದ್ದೆಗಳಿಗೆ ಅನುಸಾರವಾಗಿ ಭತ್ತೆಗಳೂ ಕೊಡೋಣಾಗುವದು. ಎಲ್ಲಾ ಇಲಾಖೆಗಳಿಕ್ಕಿಂತಲೂ ಮುಖ್ಯ ಇಲಾಖೆಯಾದ ಈ ರೆವಿನ್ಯ ಇಲಾಖೆಯ ಮೂಲಸ್ಥಾನದಲ್ಲಿದ್ದು ರಾತ್ರಿ ಹಗಲೂ ಕೆಲಸ ಮಾಡಿ ಬಳಲುವ ಶ್ಯಾನಭೋಗರ ಯೋಗ್ಯತೆಯಲ್ಲಿ ಯಾವ ವಿಧದ ಬೇರೆ ರಿಯಾತಿಗಳನ್ನಾದರೂ ಪಡಿಯುವ ಸಂಭವವು ಇದ್ದಹಾಗೆ ತೋರುವದಿಲ್ಲ. ಆದ್ದರಿಂದ ಉಪಾಧ್ಯಾಯರ ವಿಷಯದಲ್ಲಿ ಯಾವ ರೀತಿಯಲ್ಲಿ ಆಲೋಚಿಸೋಣಾಗಿಯದೋ ಅದರಂತೆ ಕುಟುಂಬ ಪೋಷಣೆಗೆ ಪೂರಾ ಸಾಕಾಗದೆ ಕಷ್ಟದಿಂದ ಜೀವಿಸುವ ಬಡ ಶ್ಯಾನಭೋಗರಿಗೆ ಸಹಾ ಕಿಂಚಿತ್ತಾದರೂ ಭತ್ತೆಕೊಡುವದರ ಕುರಿತು ಅವರ ಮೇಲಧಿಕಾರಿಗಳೂ ಈಗಿನ ನಮ್ಮ ದಯಾಳುವಾದ ಜಿಲ್ಲಾ ಕಲೆಕ್ಟರ ದೊರೆಗಳವರೂ ಆಲೋಚಿಸಿ ಶ್ಯಾನಭೋಗರ ಕಷ್ಟಗಳನ್ನು ನಿವಾರಿಸುವದಾದರೆ ಶ್ಯಾನಭೋಗರೂ ಅವರ ಬಡ ಕುಟುಂಬಗಳೂ ಧನ್ಯರಾದಾರು.

ಬಡ ಶ್ಯಾನಭಾಗ.

ಗುರುವಾಯನಕೆರೆ ಪೇಟೆಯ ರಸ್ತೆಗಳು.

ಅಯ್ಯಾ ಪತ್ರಕರ್ತರೇ,

ಈ ಗುರುವಾಯನಕೆರೆ ಪೇಟೆಯಿಂದ ವೇಣೂರಿಗೆ ಹೋಗುವ ಸರಕಾರಿ ರಾಜ ರಸ್ತೆಯಲ್ಲಿ ೨೦ ಮತ್ತು ೨೧ನೇ ಮೈಲುಕಲ್ಲುಗಳ ಮಧ್ಯದಲ್ಲಿ ಸಾಧಾರಣ ॥। ಮೈಲು ವರೆಗೂ ಈ ಪೈಕಿ ಹೆಚ್ಚಾಗಿ ರಾ। ರಾಮಚಂದ್ರಪೈಗಳ ಅಂಗಡಿಯಿಂದ ಮ। ರಾ। ಮಲ್ಯರ ಅಂಗಡಿ ಪರಿಯಂತರವೂ, ರಸ್ತೆಯು ಬಹಳ ನಾದುರಸ್ತಿಯಾಗಿದೆ. ಇದರಿಂದ ಗಾಡಿ ಹೋಗಲಿಕ್ಕೆ ಸಾಧ್ಯವಿಲ್ಲ, ಮಾತ್ರವಲ್ಲ; ಶಾಲೆಗೆ ಹೋಗುವ ಸಣ್ಣ ಮಕ್ಕಳು ಮೇಲೆ ನಡಕೊಂಡು ಹೋದರೆ ರಸ್ತೆಯಲ್ಲಿರುವ ಕೆಸರಿನಲ್ಲಿ ಹುಗಿಲಕ್ಕೆ ಎತ್ತಿ ಹಾಕಲಿಕ್ಕೆ ಬೇರೆಯವರು ಹೋಗುವ ಅಗತ್ಯವಾದೀತೆಂಬ ಭೀತಿಯಿಂದ ಕೆಲವರು ಶಾಲೆಗೆ ಹೋಗುವದೇ ಇಲ್ಲ. ಕೆಲವರು ಬೇರೆ ದಾರಿಗಳಿಂದ ಹೋಗುವರು. ಆಮದು ರಪ್ತಾಗುವ ಜನರು ರಸ್ತೆಗೆ ಸವಿಾಪವಾಗಿ ಸ್ವಲ್ಪ ಫಾಸಿಲೆ ವರೇಗೆ ಇರುವ ಗುಡ್ಡೆಯಿಂದಲೂ, ಮಿಕ್ಕ ಕಡೆಯಲ್ಲಿ ರಸ್ತೆಯ ಎಡ ಬಲಪಾರ್ಶ್ವಗಳಲ್ಲಿ ಸ್ವಲ್ಪಮಟ್ಟಿಗೆ ನಡದು ಹೋಗಲಿಕ್ಕೆ ಅನುಕೂಲವಿರುವ ಸ್ಥಳದಿಂದಲೂ ಹಗಲು ಹೊತ್ತಿನಲ್ಲಿ ಬಹಳ ಪ್ರಯಾಸದಿಂದ ಹೋಗುವದೂ ಬರುವದೂ ಉಂಟು. ಮೋಟರಗಾಡಿಗಳೂ, ಕುದುರೆಗಾಡಿಗಳೂ, ಸೈಕಲ್‌ಗಳೂ ಈ ರಸ್ತೆಯಿಂದ ಕೊಂಡುಹೋಗುವಂಥಾದ್ದನ್ನು ಸ್ಮರಿಸಲಿಕ್ಕೆಸೇ ಸಾಧ್ಯವಿಲ್ಲ. ರಸ್ತೆ ಸಂಗತಿ ಅರಿಯದವರು—ಹೊಸತಾಗಿ ಈ ರಸ್ತೆಯಲ್ಲಿ ರಾತ್ರಿಕಾಲ ಕತ್ತಲೆಯಲ್ಲಿ ನಡಕೊಂಡು ಹೋಗುವವರು-ಬಲದಿಕ್ಕಿನಲ್ಲಿ ಹೋದರೆ ನೀರು ತುಂಬಿರುವ ಕೆರೆಗೂ, ಎಡದಿಕ್ಕಿನಲ್ಲಿ ಹೋದರೆ ತಗ್ಗಿನಲ್ಲಿರುವ ಗದ್ದೆಗಳಿಗೂ ಕಾಲುಜಾರಿ ಬಿದ್ದು ಶರೀರಕ್ಕೆ ಅಪಾಯ ಬರುವಂಥಾ ಸಂಗತಿಗಳು ಇರುತ್ತವೆ. ಇಷ್ಟುಮಾತ್ರವಲ್ಲ; ರಸ್ತೆಯ ಮಧ್ಯದಿಂದ ಹೋದದ್ದಾದರೆ ಕೆಸರಿನಲ್ಲಿ ಕಾಲುಗಳು ಹೂಳಲ್ಪಟ್ಟು ಮತ್ತೊಬ್ಬರ ಸಹಾಯ ವಿನಹಾ ಸುರಕ್ಷಿತವಾಗಿ ಹಿಂದೆ ಮುಂದೆ ಹೋಗಲಾರರು. ಬೆಳ್ತಂಗಡಿಗೆ ಸರ್ಕಿಟಿಗೆ ಬಂದಿದ್ದ ಪೋಲಿಸ್ ಇಲಾಖೆಯ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ದೊರೆಗಳವರು ರಸ್ತೆಯ ದುರವಸ್ಥೆಯನ್ನು ನೋಡಿ ಮೂಡಬಿದ್ರೆಗೆ ಹೋಗುವ ಅವರ ಪ್ರಯಾಣವನ್ನು ನಿಲ್ಲಿಸಿ, ಬಂಟ್ವಾಳಕ್ಕೆ ಹೋಗುವವರಾದರಂತೆ. ಇದೇ ರೀತಿಯಲ್ಲಿ ಈ ಗುರುವಯನ ಕೆರೆಯಿಂದ ಮೂಡಬಿದ್ರಿ ವರೆಗೂ ಉಪ್ಪಂಗಡಿಯಿಂದ ಗುರುವಯನ ಕೆರೆಯ ವರೆಗೂ ಇರುವ ರಸ್ತೆಗಳು ಅನೇಕ ಕಡೆಗಳಲ್ಲಿ ನಾದುರುಸ್ತಿಯಲ್ಲಿರುತ್ತವೆ. ವರುಷಂಪ್ರತಿಯಲ್ಲಿಯೂ ಈ ರಸ್ತೆಗಳ ದುರುಸ್ತಿಗಳ ವಗೈರೆ ಕಾಮಗಾರಿಗಳ ಬಗ್ಗೆ ಸರಕಾರದಿಂದ ಕೊಡೋಣಾಗುವ ಹಣಗಳಿಗಿಂತ ಈ ವರುಷ ಕೊಡೋಣಾದ ಹಣ ಕಡಿಮೆಯಾಗಿರುವದೊ ಅಥವಾ ಸಾಕಾದಷ್ಟು ಹಣ ಕೊಟ್ಟರೂ ಕಂಟ್ರಾಕ್ಟರರು ಅದನ್ನು ಅವರ ಕಂಟ್ರಾಕ್ಟು ಪ್ರಕಾರ ಮಾಡಬೇಕಾದ ದುರುಸ್ತಿ ವಗೈರೆ ಕೆಲಸಗಳ ಬಗ್ಗೆ ಸರಿಯಾಗಿ ಖರ್ಚುಮಾಡದೆ ಹೋದರೇ? ಅಥವಾ ಕಂಟ್ರಾಕ್ಟರರು ಮಾಡುವ ಕೆಲಸಗಳ ಮೇಲ್ವಿಚಾರ ನೋಡುವ ಲೋಕಲ್‌ಫಂಡ ಇಲಾಖೆಯ ಒಳ ಉದ್ಯೋಗಸ್ಥರು ಕಂಟ್ರಾಕ್ಟರರು ಮಾಡಿಸುವ ಕೆಲಸಗಳ ಮೇಲೆ ಅವರು ತೆಗೆದುಕೊಳ್ಳಬೇಕಾದ ಜಾಗ್ರತೆಯನ್ನೂ ಕಡಿಮೆ ಮಾಡಿರುವರೊ ಎಂಬುದು ಗೊತ್ತಾಗುವದಿಲ್ಲ. ಆದ್ದರಿಂದ ನಮ್ಮ ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳವರೂ, ಮತ್ತು ಡಿಸ್ಟ್ರಿಕ್ಟ್ ಬೋರ್ಡ ಇಂಜೆನಿಯರ ದೊರೆಗಳವರೂ ಈ ರಸ್ತೆಯ ದುಸ್ಥಿತಿಯ ವಿಷಯದಲ್ಲಿ ತ್ವರ್ಯ ತಾತ್ಪರ್ಯ ಕೊಟ್ಟು ಸದರಿ ರಸ್ತೆಯಲ್ಲಿ ಆಮದು ರಪ್ತಾಗುವ ಪ್ರಯಾಣಿಕರ ಸಂಕಷ್ಟಗಳನ್ನು ದೂರಪಡಿಸುವರೆ ತಕ್ಕ ಏರ್ಪಾಡುಗಳು ಮಾಡ್ಯಾರೆಂದು ನಂಬಿದ್ದೇನೆ.

ಪ್ರತ್ಯಕ್ಷದರ್ಶಿ.

ಇದ್ದೇನು ಭಂಗ!

ಅಯ್ಯಾ ಪತ್ರಕರ್ತರೇ,

ಮಲಬಾರು ಜಿಲ್ಲೆಯನ್ನು ವಿಭಜಿಸುವ ಸಂಬಂಧದಲ್ಲಿ ಮಲಬಾರ ಜಿಲ್ಲೆಯ ಕಲೆಕ್ಟರರವರು ಅಲ್ಲಿಯ ಲೋಕಮತವನ್ನು ಕೇಳಿರುತ್ತಾರೆಂತ ತಮ್ಮ ಪತ್ರಿಕೆಯ ಕಳದ ಸಂಚಿಕೆಯಲ್ಲಿ ತಿಳಿದು ತುಂಬಾ ಆಶ್ಚರ್ಯಪಡುತ್ತೇನೆ. ಮಲಬಾರು ಜಿಲ್ಲೆಯನ್ನು ವಿಭಜನೆ ಮಾಡುವದರಿಂದ ಆಶ್ಚರ್ಯವಾಗಲೀ ವಿಷಾದವಾಗಲೀ ಪಡಲು ದಕ್ಷಿಣ ಕನ್ನಡ ಜಿಲ್ಲೆಯವನಾದ ನನಗೆ ವಿಶೇಷ ಕಾರಣವಿಲ್ಲ. ಪರಂತು, ನಮ್ಮ ಜಿಲ್ಲೆಗೆ ಸೇರಿದ ಕಾಸರಗೋಡು ತಾಲೂಕಿನ ಒಂದಂಶವನ್ನು ಮಲಬಾರ್ ಜಿಲ್ಲೆಗೆ ಸೇರಿಸುವ ಸೂಚನೆಯು ಈ ಪ್ರಸ್ತಾಪದಲ್ಲಿರುವದರಿಂದ "ಇದೇನು ಭಂಗ" ಎಂದು ಕೇಳಲು ಆಸ್ಪದವಾಯಿತು.

ಸ್ವಾಮಿಾ, ನಾಲ್ಕೈದು ತಿಂಗಳ ಹಿಂದೆ ಇದೇ ಪ್ರಸ್ತಾಪದ ಗಾಳಿಯು ಈಕಡೆ ಬಡೆದ ಕೂಡಲೇ ಇಲ್ಲಿ ಉಂಟಾದ ಚಳವಳದ ಬಿರುಸುತನವು "ಜಿಲ್ಲೆಯ ವಿಭಜನೆಯ ಕುರಿತು ಸರಕಾರದಿಂದ ತನ್ನ ಬಳಿಗೆ ಯಾವ ಪ್ರಸ್ತಾಪಗಳಾದರೂ ಇದುವರೆಗೆ ಬರಲಿಲ್ಲ" ಎಂಬ ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳವರ ಮಾತಿನಿಂದ ನಿಂತುಹೋಯಿತು ಎನ್ನಬಹುದು. ಆದರೆ ಈಗ ಪುನಃ ಮಲಬಾರಿನಲ್ಲಿ ಈ ಪ್ರಸ್ತಾಪವು ಉದಯಕ್ಕೆ ಬಂದಿದೆ. ಅಲ್ಲಿಯ ಜಿಲ್ಲಾ ಕಲೆಕ್ಟರ ದೊರೆಗಳವರು ಅಲ್ಲಿಯವರ ಲೋಕಮತವನ್ನು ಕೇಳಿದ್ದಾರೆ. ಕಾಸರಗೋಡಿನ ದಕ್ಷಿಣ ಪ್ರಾಂತ್ಯದ ಒಂದಂಶವು ಮಲಬಾರು ಜಿಲ್ಲೆಗೆ ಸೇರಿಸುವ ಸೂಚನೆಯು ಈ ಪ್ರಸ್ತಾಪದಲ್ಲಿದೆ. ಈ ವರ್ತಮಾನಗಳು ನಿಜವೋ, ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಈ ಪ್ರಸ್ತಾಪವು ಈಗಲಾದರೂ ಬಂದಿದೆಯೋ? ಏನು ಎಂಬಿತ್ಯಾದಿ ವಿಷಯಗಳನ್ನು ತಿಳಕೊಳ್ಳುವದು ನಮ್ಮ ಕರ್ತವ್ಯ. ಒಂದುವೇಳೆ ಈ ಪ್ರಸ್ತಾಪವು ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳಿಗೆ ಬಂದಿದ್ದರೆ ಅವರು ಈ ವಿಷಯದಲ್ಲಿ ಇಲ್ಲಿಯವರ ಲೋಕಮತವನ್ನು ಕೇಳಿ, ನಂತರ ತನ್ನ ಅಭಿಪ್ರಾಯವನ್ನೂ ಲೋಕಮತವನ್ನೂ ಪ್ರಕಟಕ್ಕೆ ಹಾಕಿ ಈ ವಿಷಯ ಸರಕಾರಕ್ಕೆ ಬರಕೊಳ್ಳಬೇಕಾಗಿ ಈ ಮೂಲಕ ವಿಜ್ಞಾಪಿಕೊಂಡಿದ್ದೇನೆ.

ಮಂಗಳೂರು,
ತಾ. 15—11—16.

ಪಟ್ಟಣಿಗ.

ಯೂರೋಪದ ಮಹಾ ಯುದ್ಧ.

—— .೦. ——

ಬಾಲ್ಕಾನ್ ರಣರಂಗದಲ್ಲಿ ಹವಾಸ್ಥಿತಿಯು ನೆಟ್ಟಗಿಲ್ಲದಿರುವದರಿಂದ ಅಲ್ಲಿ ವಿಶೇಷ ಸಂಗತಿಗಳೇನೂ ನಡೆದಂತೆ ತೋರಿಬರುವದಿಲ್ಲ. ರುಮೇನಿಯನರು ಜರ್ಮನರ ನುಗ್ಗಾಟವನ್ನು ತಮ್ಮ ಸರಹದ್ದಿನಲ್ಲಿ ಇನ್ನೂ ತಡೆದಿರುತ್ತಾರೆ. ಜರ್ಮನರು ಯಾವ ಉದ್ದೇಶದಿಂದ ರುಮೇನಿಯನರ ಮೇಲೆ ನುಗ್ಗಿ ಹೋಗಲು ತೊಡಗಿರುವರೋ ಆ ಉದ್ದೇಶವು ಇನ್ನೂ ಪೂರ್ಣವಾಗಲಿಲ್ಲ. ರುಮೇನಿಯರಿಗೆ ರುಶ್ಯನರ ಸಹಾಯ್ಯವು ತಕ್ಕ ಕಾಲದಲ್ಲಿ ಬಂದು ಕೂಡಿದರೆ ಜರ್ಮನರ ಉದ್ದೇಶವು ಸಾಧ್ಯವಾಗುವ ಹಾಗೆಯೂ ಇಲ್ಲ. ಅತ್ತಕಡೆ ಇಟಲಿಯನರು ಕಾರ್ಸೋದಲ್ಲಿ ಶತ್ರುಗಳನ್ನು ಒತ್ತುತ್ತಿದ್ದಾರೆ. ಕಳೆದ ವಾರದಲ್ಲಿ ಇಟಲಿಯನರು ಆಸ್ಟ್ರಿಯನರು ಬಲಕಾಯಿಸಿಕೊಂಡಿದ್ದ ೨ನೇ ಸೇನಾಸಾಲನ್ನು ಒಡೆದು ೧೦,೦೦೦ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ. ಅತ್ತಕಡೆ ಸಲೋನಿಕದಲ್ಲಿರುವ ಮಿತ್ರರ ಸೇನಿಕರು ನುಗ್ಗಿ ಹೋಗಿ ಯುದ್ಧ ಮಾಡಲು ಹವಣಿಸುತ್ತಿದ್ದಾರೆ. ಹೀಗೆ ಇಟಲಿಯಲ್ಲಿಯೂ, ಸಲೋನಿಕದಲ್ಲಿಯೂ, ರುಶ್ಯಾದಲ್ಲಿಯೂ ಶತ್ರುಗಳ ಮೇಲೆ ಒತ್ತಾಟವು ಹೆಚ್ಚಾದರೆ ರುಮೇನಿಯನರಿಗೆ ಯಾವ ಭಯವೂ ಇಲ್ಲದಂತಾಗುವದು.

ಪಶ್ಚಿಮ ರಣರಂಗ.

ಜುಲಾಯಿ ತಾ. ೧ರಿಂದ ನವಂಬರ ತಾ. ೧ರ ವರೆಗೆ ಸೋಮ್ಮಿ ರಣರಂಗದಲ್ಲಿ ಶತ್ರುಗಳ ೭೧,೫೩೨ ಸೇನಿಕರೂ ೧೪೪೯ ಆಫೀಸರರೂ ೧೭೩ ದೊಡ್ಡ ಫಿರಂಗಿಗಳೂ ೧೩೦ ತೋಪುಗಳೂ, ೨೧೫ ಕಂದಕಗಳ ತೋಪುಗಳೂ ೯೮೧ ಯಂತ್ರಚಾಲಿತ ಫಿರಂಗಿಗಳೂ ಬ್ರಿಟಿಷರ ಸೆರೆ ಬಿದ್ದಿರುತ್ತವೆ. ಈ ಪೈಕಿ ಫ್ರೆಂಚರ ಕೈಸೆರೆ ಬಿದ್ದವು ೪೦,೭೯೬ ಸೇನಿಕರು, ೮೦೯ ಆಫೀಸರರು, ೭೭ ದೊಡ್ಡ ಫಿರಂಗಿಗಳು, ೧೦೪ ಕಂದಕಗಳ ತೋಪುಗಳು, ೫೩೫ ಯಂತ್ರ ಚಾಲಿತ ಫಿರಂಗಿಗಳು.

ಸೋಮ್ಮಿಯಲ್ಲಿ ಇನ್ನೂ ಬ್ರಿಟಿಷರು ಮೆಲ್ಲ ಮೆಲ್ಲನೆ ನುಗ್ಗಿ ಹೋಗಿ ಶತ್ರುಗಳ ಸೇನಾಬಲವನ್ನು ಮುರಿಯುತ್ತಿದ್ದಾರೆ. ಸ್ಯಾಂಟ್ ಪಿಯ್ರೆ ವಾಸ್ಟ್ ಅರಣ್ಯದಲ್ಲಿ ೬೦೦ಕ್ಕೆ ಮಿಕ್ಕಿದ ಶತ್ರು ಸೇನಿಕರು ಬ್ರಿಟಿಷರ ಸೆರೆ ಬಿದ್ದಿರುತ್ತಾರೆ. ವೆರ್ಡನ್, ಡೊವಾಮೊಂಟ್, ವಾಕ್ಸ್ ಪ್ರಾಂತ್ಯಗಳಲ್ಲಿ ತೋಪುಗಳ ಗರ್ಜನೆಯು ಭೀಕರವಾಗಿರುತ್ತದೆ. ಸೋಮ್ಮಿಯಲ್ಲಿ ಲೆಸ್‌ಬೋಫ್ಸ್ ಮತ್ತು ಸೈಲಿಸಿಲಿಸೆಲ್‌ನ ಮಧ್ಯೆ ಮಿತ್ರರು ಮುಂದರಿದಿರುತ್ತಾರೆ. ಮಿತ್ರರ ಹೊಸ ನೆಲೆಯಾದ ಏಬ್ಲೈನ್ ಕೋರ್ಟಿನ ಮೇಲೆ ಶತ್ರುಗಳು ಬೊಂಬು ಹಾಕಿರುತ್ತಾರೆ. ಶತ್ರುಗಳ ೨ ವಾಯುನಾವೆಗಳನ್ನು ಮಿತ್ರರು ಕೆಳಗಿಳಿಸಿರುತ್ತಾರೆ. ಮಿತ್ರರ ೮ ವಾಯುನಾವೆಗಳು ಒಂದು ಟನ್ ಬೊಂಬುಗಳನ್ನು ಬೆಂಪ್ಲೆಯಲ್ಲಿರುವ ಜರ್ಮನರ ಮಿಲಿಟರಿ ಸ್ಟೇಶನ್ ಮೇಲೆ ಬಿಸಾಡಿರುತ್ತವೆ.

ಜರ್ಮನ ಸೇನೆಯ ಪ್ರಾಣಾಪಾಯ ಹೊಂದಿದವರ ಪಟ್ಟಿಯಿಂದ ಒಕ್ಟೋಬರ ತಿಂಗಳಲ್ಲಿ ೧೯೯, ೬೭೬ ಮಂದಿ ಪ್ರಾಣಾಪಾಯ ಹೊಂದಿರುವರು, ಈ ಪೈಕಿ ೩೨೫೪೪ ಮಂದಿ ಹತರಾಗಿರುವರು ಎಂತ ತಿಳಿದು ಬರುತ್ತದೆ. ಹೀಗೆ ಈ ಸಂಖ್ಯೆಯನ್ನು ಕೂಡಿಸಿದರೆ, ಒಟ್ಟಿಗೆ ೩,೭೫೫,೬೯೩ ಮಂದಿ ಪ್ರಾಣಾಪಾಯ ಹೊಂದಿರುವರು, ಈ ಪೈಕಿ ೮೫೫,೮೧೭ ಮಂದಿ ಹತರಾಗಿರುವರು ಎಂತ ತಿಳಿದುಬರುತ್ತದೆ.

ಬ್ರಿಟಿಷ ರಣರಂಗದಲ್ಲಿ ವಾಯುನಾವೆಗಳ ಕದನಗಳು ಎಡೆಬಿಡದೆ ನಡೆಯುತ್ತಿವೆ. ಬ್ರಿಟಿಷರ ೩೦ ವಾಯುನಾವೆಗಳು ಶತ್ರುಗಳ ೩೫೦ ವಾಯುನಾವೆಗಳೊಡನೆ ಕಾದಾಡಿ ಶತ್ರುಗಳ ನಾವೆಗಳನ್ನು ಓಡಿಸಿ ೩ ನಾವೆಗಳನ್ನು ಕೆಳಗೆ ದೊಬ್ಬಿರುತ್ತವೆ. ಅಲ್ಲಲ್ಲಿ ನಡೆದ ಕದನಗಳಲ್ಲಿ ಬಹಳ ಮಂದಿ ಶತ್ರುಸೇನಿಕರು ಬ್ರಿಟಿಷರ ಸೆರೆಬಿದ್ದಿರುತ್ತಾರೆ.

ಸೋಮ್ಮಿಯ ಉತ್ತರದಲ್ಲಿ ಫ್ರೆಂಚರಿಗೂ ಶತ್ರುಗಳಿಗೂ ನಡೆದ ಕದನಗಳಲ್ಲಿ ಸೆಲಿಸೆಲಿಗೆ ಸೇರಿದ ಹರ್ಬಿನ್ನ ಗ್ರಾಮಗಳು ಫ್ರೆಂಚರ ಕೈಸೇರಿರುವವು. ಶತ್ರುಗಳು ಮೇಲೆಬಿದ್ದಲ್ಲೆಲ್ಲಾ ಹಿಂದಕ್ಕಟ್ಟಲ್ಪಟ್ಟಿರುತ್ತಾರೆ.

ಪೂರ್ವ ರಣರಂಗ.

ಕಾರ್ಪಥೇನಿಯದಲ್ಲಿ ಶತ್ರುಗಳು ರುಶ್ಯನರ ಮೇಲೆ ಬಿದ್ದು ಹಿಮ್ಮೆಟ್ಟಿರುತ್ತಾರೆ. ರುಶ್ಯನರು ಕೆಲವು ಪರ್ವತ ಶಿಖರಗಳನ್ನೂ ೩೦೬ ಸೇನಿಕರನ್ನೂ ಸೆರೆ ಹಿಡಿದಿರುವರು. ಜರ್ಮನರ ಕಿರ್ಲಿಬಾಬದ ಪೂರ್ವಕ್ಕಿರುವ ಬಿದುಲ ಪರ್ವತವನ್ನು ಬಿಟ್ಟು ಹಿಂದೆ ಸರಿದಿರುತ್ತಾರೆ. ಡೊರ್ನಾವಾತ್ರದಲ್ಲಿ ರುಶ್ಯನರು ಜಯಶ್ರದರಾಗಿ ೮೧೫ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ.

ಬಸ್ಸುವಲೊಸ್ ಪ್ರಾಂತ್ಯದಲ್ಲಿ ಮೇಲ್ಪಾಯಿದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ರುಶ್ಯನರು ಡೊರ್ನಾವಾತ್ರೆಯ ದಕ್ಷಿಣದಿಂದ ಬಿಸ್ಟ್ರಿಟ್ಜ ಬೆಲ್ಬೊರ್ ಕಣಿವೆಗಳನ್ನು ದಾಟಿ ಹೊಲ್ಸ್ ವರೆಗೆ ಮುಂದರಿದಿರುತ್ತಾರೆ.

ಬಾಲ್ಕ್ಯಾನ್.

ಪ್ರವೋಯ ಕಣಿವೆಯಲ್ಲಿ ರುಮೇನಿಯನರ ಮೇಲೆ ಬಿದ್ದ ಶತ್ರುಗಳು ಹಿಮ್ಮೆಟ್ಟಿರುತ್ತಾರೆ. ವಲ್ಕ್ಯಾನ್ ಕಣಿವೆಯ ಬಳಿ ಜರ್ಮನರಿಗೆ ಬೆಂಬಲ ಸೇನೆಯು ಬಂದು ಕೂಡಿರುವದರಿಂದ ರುಮೇನಿಯನರು ಶತ್ರುಗಳನ್ನು ಹಿಂದಟ್ಟುವ ಕೆಲಸವನ್ನು ನಿಲ್ಲಿಸಿರುವರು. ಡೆನ್ಯೂಬು ಪ್ರಾಂತ್ಯದಲ್ಲೆಲ್ಲಾ ತೋಪುಗಳ ಗರ್ಜನೆಯು ಕೇಳಿಸುತ್ತಲಿದೆ. ಡೊಬ್ರುಡ್ಜದಲ್ಲಿ ಶತ್ರುಗಳು ಸ್ವಲ್ಪ ಹಿಂದೆ ಸರಿದಿರುತ್ತಾರೆ. ಶತ್ರುಗಳು ಹಿಂದೆಸರಿಯುವಾಗ ನಾಲ್ಕು ಪಟ್ಟಣಗಳಿಗೆ ಬೆಂಕಿಕೊಟ್ಟಿರುತ್ತಾರೆ.

ರುಮೇನಿಯನರಿಗೆ ರುಶ್ಯನರಿಂದಲೂ ಇತರ ಮಿತ್ರರಾಜ್ಯಗಳಿಂದಲೂ ಯಥೇಷ್ಟ ಸಹಾಯ್ಯವು ದೊರಕುತ್ತಿರುವದರಿಂದ ಭಯಪಡಲು ಕಾರಣವಿಲ್ಲ ಎಂದು ತಿಳಿದು ಬರುತ್ತದೆ.

ಡೊಬ್ರುಡ್ಜಕ್ಕೆ ರುಶ್ಯನರ ಜನರಲ್ ಶಕರೊಫರೂ ರುಶ್ಯನರ ಸೇನೆಯೂ ಬಂದಂದಿನಿಂದ ಅಲ್ಲಿದ್ದ ಶತ್ರುಗಳು ೧೩ ಮೈಲು ಹಿಂದೆ ಸರಿದಿರುವರು. ರುಶ್ಯನರ ನೌಕಾವಳಿಯು ಕೊನ್‌ಸ್ಟಾನ್ಜದ ಮೇಲೆ ತೋಪು ಹಾರಿಸಿ ವಿಶೇಷ ನಷ್ಟವನ್ನುಂಟುಮಾಡಿರುತ್ತದೆ ಎಂತ ಬಲ್ಗೇರಿಯಾನರು ಪ್ರಕಟಿಸಿರುತ್ತಾರೆ.

ರುಮೇನಿಯನರು ಬುಜಿಯೊ ಕಣಿವೆಯ ಬಳಿ ಜರ್ಮನರನ್ನು ಹಿಂದಟ್ಟಿ ೧೦೦ ಮಂದಿ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ. ಜ್ಯೂಲ್ ಕಣಿವೆಯ ಬಳಿಯೂ ಶತ್ರುಗಳು ಹಿಮ್ಮೆಟ್ಟಿರುವರು. ಶತ್ರುಗಳು ಫೆರ್ಗೊಪೋದ ಗ್ರಾಮಗಳನ್ನು ಸುಟ್ಟುಹಾಕಿರುತ್ತಾರೆ.

ರುಮೇನಿಯ ರಣರಂಗದಲ್ಲಿ ರುಮೇನಿಯನರೂ ರುಶ್ಯನರೂ ಶತ್ರುಗಳ ಮೇಲೆ ನುಗ್ಗಿಹೋಗಿ ಕದನಮಾಡ ಪ್ರಾರಂಭಿಸಿರುತ್ತಾರೆ. ಎಲ್ಲಾ ಪ್ರಾಂತ್ಯದ ಕದನಗಳು ರುಮೇನಿಯನರ ಅನುಕೂಲವಾಗಿ ಇದೆ.

ಪ್ರವೋವ ತಗ್ಗಿನಲ್ಲಿ ಭೀಕರ ಕಾಳಗವು ನಡೆಯುತ್ತಿದೆ. ಆಲ್ಟ್ ಡಿಸ್ಟ್ರಿಕ್ಟಿನಲ್ಲಿ ಕಾಳಗವು ತೀಕ್ಷ್ಣವಾಗಿರುವದು. ವಲ್ಕ್ಯಾನಿನ ಸ್ಥಿತಿಯು ಬದಲಾಗಲಿಲ್ಲ. ಆಲ್ಟ್‌ನದಿಯ ಬಳಿ ಶತ್ರುಗಳು ಸೇನೆಯನ್ನು ಇಳಿಸಲು ಪ್ರಯತ್ನಿಸಿದರು, ಆದರೆ ರುಮೇನಿಯನರು ಅವರನ್ನು ಹಿಂದಟ್ಟಿರುತ್ತಾರೆ. ಮೊಲ್ಡಾವಿಯನ್ ತಗ್ಗಿನಲ್ಲಿ ಮೂರಾವರ್ತಿ ದಾಳಿಮಾಡಿದ ಶತ್ರುಗಳನ್ನು ರುಮೇನಿಯನರು ಹಿಂದಕ್ಕಟ್ಟಿರುತ್ತಾರೆ. ಪ್ರವೋವ ತಗ್ಗಿನಲ್ಲಿ ರುಮೇನಿಯನರು ಶತ್ರುಸೇನಿಕರಲ್ಲಿ ವಿಶೇಷ ರಕ್ತಪಾತವನ್ನುಂಟುಮಾಡಿ ಹಿಂದೆ ಅಟ್ಟಿರುತ್ತಾರೆ.

ಜಿಟ್ರುಟಸ್ ಕಣಿವೆಯ ಬಳಿ ರುಮೇನಿಯನರು ಲುಮಿಸ್ ಪರ್ವತದ ಮೇಲೆ ಹಲ್ಲೆಮಾಡಿ ಆ ಪರ್ವತವನ್ನು ಗೆದ್ದುಕೊಂಡಿರುತ್ತಾರೆ. ಬ.ಜಿನ್ ಕಣಿವೆಯ ಬಳಿ ನಡೆದ ಕದನದಲ್ಲಿ ಶತ್ರುಗಳು ೩ ಮೈಲು ಹಿಂದೆಸರಿದಿರುತ್ತಾರೆ. ಡೆನ್ಯೂಬು ಬಳಿ ರುಶ್ಯನರು ೨ ಗ್ರಾಮಗಳನ್ನು ಗೆದ್ದುಕೊಂಡು ಡೊಬ್ರುಡ್ಜದ ದಕ್ಷಿಣದಲ್ಲಿ ಮುಂದರಿದಿರುತ್ತಾರೆ. ರುಶ್ಯನರ ನೌಕಾವಳಿಯು ಕೊನ್‌ಸ್ಟಾನ್ಜ ಮತ್ತು ಮಂಗಾಲಿಯದ ಮೇಲೆ ಗುಂಡುಹಾರಿಸಿ ವಿಶೇಷ ನಷ್ಟವನ್ನುಂಟುಮಾಡಿರುತ್ತದೆ.

ಪ್ರೆಸ್‌ಪಾ ಸರೋವರದ ಬಳಿ ಫ್ರೆಂಚರ ಮೇಲ್ಪಾಯಿದ ಬಲ್ಗೇರಿಯನರನ್ನು ಫ್ರೆಂಚರು ಹಿಂದಕ್ಕಟ್ಟಿರುತ್ತಾರೆ. ಮೊನಾಸ್ಟಿರಲ್ಲಿ ಫ್ರೆಂಚರು ಶತ್ರುಗಳ ಒಂದು ವಾಯುನಾವೆಯನ್ನು ಕೆಳದೊಬ್ಬಿರುತ್ತಾರೆ. ಸೆರ್ನಾದಲ್ಲಿ ಸರ್ವಿಯನರ ಮೇಲೆ ಬಲ್ಗೇರಿಯನರು ಮೂರಾವರ್ತಿ ಹಲ್ಲೆಮಾಡಿ ಹಿಮ್ಮೆಟ್ಟಿರುತ್ತಾರೆ. ಇಲ್ಲಿ ಸರ್ವಿಯನರಿಗೆ ವಿಶೇಷ ಜಯವುಂಟಾಗಿರುತ್ತದೆ.

ಗ್ರೀಸ್.

ಮಿತ್ರಸೇನಿಕರು ಎಕ್ಸಾರಿನಿಯನ್ನು ಸ್ವಾಧೀನಮಾಡಿಕೊಂಡದ್ದರಿಂದ ಗ್ರೀಕ ಸರಕಾರದವರು ಥೆಸಲ್ಲೆಯಲ್ಲಿರುವ ಗ್ರೀಕ ಸೇನಿಕರನ್ನು ಹಿಂದ ಕರೆಯುವ ಏರ್ಪಾಡು ಮಾಡಿರುತ್ತಾರೆ. ಮಿತ್ರಸೇನಿಕರು ಗ್ರೀಕರ ನೌಕಾವಳಿ ಮತ್ತು ಯುದ್ಧಸಾಮಗ್ರಿಗಳ ಕೊಠಡಿಗಳಿರುವ ಲೆರೊಸ್ ದ್ವೀಪವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಸಲೋನಿಕದಲ್ಲಿರುವ ವೆಂಕಲಿಸ್ಟರ ಸೇನೆಯು ರಣರಂಗಕ್ಕೆ ಹೊರಡಲು ಸಿದ್ಧವಾಗಿದೆ.

ಇಟಲಿ.

ಈ ರಣರಂಗದಲ್ಲಿ ಇಟಲಿಯನರಿಗೂ ಶತ್ರುಗಳಿಗೂ ಈಚೆಗೆ ನಡೆದ ಕದನದಲ್ಲಿ ಶತ್ರುಗಳಿಗೆ ಕಮ್ಮಿ ಎಂದರೆ ೨೫,೦೦೦ ಸೇನಿಕರ ನಷ್ಟವಾಗಬಹುದೆಂಬ ಅಂದಾಜಾಗಿಯದೆ. ಆಸ್ಟ್ರಿಯನರು ಈ ರಣರಂಗಕ್ಕೆ ಸೇನೆಯನ್ನು ತರಿಸುತ್ತಲಿದ್ದಾರೆ. ಇಲ್ಲಿ ಅತಿವೃಷ್ಟಿ ಆಗಿರುವದರಿಂದಲೂ ಹಿಮ ಬೀಳುತ್ತಿರುವದರಿಂದಲೂ ಈ ವಾರದಲ್ಲಿ ವಿಶೇಷ ಕದನಗಳು ನಡೆದಿರುವದಿಲ್ಲ.

ಜಲಾಂತರ್ಗಾಮಿ ನಾವೆಗಳು.

ಕಳೆದ ವಾರದಲ್ಲಿಯೂ ಜರ್ಮನರ ಜಲಾಂತರ್ಗಾಮಿ ನಾವೆಗಳು ನೋರ್ವೆಯರ, ಬ್ರಿಟಿಷರ ಕೆಲವು ಹಡಗಗಳನ್ನು ಮುಳುಗಿಸಿರುತ್ತವೆ. ಈ ಪೈಕಿ ಹಿಂದೂಸ್ಥಾನ, ಆಸ್ಟ್ರೇಲಿಯ ಮೊದಲಾದ ಪ್ರಾಂತ್ಯಗಳಿಂದ ಟಪ್ಪಾಲು ಮತ್ತು ಪ್ರಯಾಣಿಕರನ್ನು ವೈಯುತ್ತಿದ್ದ "ಅರಾಬಿಯ" ಹಡಗವು ಮುಳುಗಿಸಲ್ಪಟ್ಟಿರುತ್ತದೆ.

ವಿದೇಶ ವೃತ್ತಾಂತ.

ಬೆವೇರಿಯದ ಪ್ರಿನ್ಸ್ ಹೈನ್ರಿಕ್‌ರವರು ಯುದ್ಧದಲ್ಲಿ ಪಡೆದ ಗಾಯಗಳಿಂದ ಮೃತರಾದರು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇಂಗ್ಲಾಂಡಿನಲ್ಲಿ ಕಾಗದದ ಬೆಲೆಯು ಬಹಳವಾಗಿ ಏರಿರುವದರಿಂದ "ಟೈಮ್ಸ್" ಪತ್ರಿಕೆಯ ಬೆಲೆಯು ಇದೇ ತಾ. ೨೦ರಿಂದ ಮೂರು ಅರ್ಧ ಪೆನ್ನಿಗೆ ಹೆಚ್ಚುವದೆಂತಲೂ ಇತರ ಪತ್ರಿಕೆಗಳ ಚಂದಾ ಹಣವೂ ಹೆಚ್ಚುವ ಹಾಗಿದೆಂತಲೂ ತಿಳಿದುಬಂದಿದೆ.

ಬಡಿಗೀ ಕೆಲಸದ ಬಗ್ಗೆ ಇಂಗ್ಲಾಂಡಿನಿಂದ ೨೦೦-೩೦೦ ಹೆಂಗಸರು ಕೂಡಲೇ ಫ್ರಾನ್ಸಿಗೆ ಹೋಗತಕ್ಕವರಿದ್ದಾರೆ.

ಇಂಗ್ಲಾಂಡಿನಲ್ಲಿ ಜಾರಿಗೆ ಬಂದಿರುವ ಮಿಲಿಟರಿ ಸರ್ವಿಸ್ ಆಕ್ಟು ಹಿಂದೂಸ್ಥಾನದಲ್ಲಿರುವ ಎಲ್ಲಾ ಯೂರೋಪಿಯನರಿಗೂ, ಆಂಗ್ಲೋ ಇಂಡಿಯನರಿಗೂ ಜಾರಿಗೆ ತರಬೇಕೆಂತ ಮಿ। ಯೇಟ್ಸರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಮಾಡಿದ ಪ್ರಸ್ತಾಪಕ್ಕೆ ಸ್ಟೇಟ ಸೆಕ್ರೆಟರಿಯವರು ಈ ಆಕ್ಟು ಬ್ರಿಟನಿನ ಹೊರಗೆ ಇರುವವರಿಗೆ ಲಗಾವಾಗುವದಿಲ್ಲವೆಂಬ ಉತ್ತರ ಕೊಟ್ಟಿರುತ್ತಾರೆ.

ಹಿಂದೂಸ್ಥಾನದಿಂದ ಪ್ರೀವಿ ಕೌನ್ಸಿಲಿಗೆ ಹೋಗುವ ದಾವೆಗಳು ಇತ್ಯರ್ಥವಾಗುವರೆ ಬಹಳ ವಿಳಂಬವಾಗುವದರಿಂದ ಇಂಥಾ ವಿಳಂಬವಾಗದ ಹಾಗೆ ಏನುಮಾಡಬೇಕೆಂಬದಾಗಿ ಹಿಂದೂಸ್ಥಾನದ ಹೈಕೋರ್ಟಿನವರ ಆಲೋಚನೆಯನ್ನು ಕೇಳಬೇಕಾಗಿ ಇಂಡಿಯಾ ಸರಕಾರದವರಿಗೆ ಮೇ ತಿಂಗಳಲ್ಲಿ ಬರಕೊಂಡಿರುತ್ತೇನೆಂತ ಸ್ಟೇಟ ಸೆಕ್ರೆಟರಿಯವರು ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಅಮೇರಿಕೆದ ಸಂಯುಕ್ತ ಸಂಸ್ಥಾನಗಳ ಬಗ್ಗೆ ಪ್ರೆಸಿಡೆಂಟರ ಚುನಾವಣೆಯಲ್ಲಿ ಉಮೇದ್ವಾರರಾಗಿದ್ದ ಡಾಕ್ಟರ್ ವಿಲ್ಸನ್ ಮತ್ತು ಜಡ್ಜ ಹೂಜೆಸ್‌ರವರ ಚುನಾವಣೆಯು ನಡೆದು ಡಾಕ್ಟರ ವಿಲ್ಸನರವರು ಪುನಃ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರೆಂಬ ವಾರ್ತೆ ಬಂದದೆ.

ಉತ್ತರ ಹಿಂದೂಸ್ಥಾನ.

ಊಟ ಮಾಡುವ ಅಕ್ಕಿಯ ಸಂಬಂಧ ಮಿ। ಡಾ। ಜಿತೇಂದ್ರನಾಥ ಸೆನ್ ಎಮ್. ಎ; ಎಫ್. ಸಿ. ಎಸ್‌ರವರು

ಪರಿಶೋಧನೆ ನಡಿಸಿ ಕಂಡುಕೊಂಡ ವಿಷಯಗಳು ಈ ನವನಾಗರಿಕತೆಯ ಕಾಲದ ಜನರಿಗೆಲ್ಲರಿಗೂ ಅತಿ ಪ್ರಯೋಜನವಾಗಿದೆ. ಮ। ರಾ। ಸೆನ್‌ರವರು ಒಳ್ಳೇ ಮಸ್ಕತಿ ಮತ್ತು ಕಚಿ ಅಕ್ಕಿಯಲ್ಲಿ ಕೂಡಿರುವ ಆಹಾರ ಪದಾರ್ಥಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸಿ, ಮಸ್ಕತಿ ಅಕ್ಕಿಯಲ್ಲಿ ಕೂಡಿರುವ ಆಹಾರ ಪದಾರ್ಥಗಳು ಕಚಿ ಅಕ್ಕಿಯಲ್ಲಿರುವ ಆಹಾರ ಪದಾರ್ಥಗಳಿಗಿಂತ ಕೆಳತರಗತಿಯವು ಎಂದು ಹೇಳಿರುತ್ತಾರೆ. ಮಸ್ಕತಿ ಅಕ್ಕಿಯಲ್ಲಿ ಅಂಗಾರಕವು ಸ್ವಲ್ಪ ಹೆಚ್ಚಿದ್ದರೂ ಇತರ ಎಲ್ಲಾ ಪದಾರ್ಥಗಳು ಕಡಿಮೆಯಾಗಿರುವವು. ಅಕ್ಕಿಯಲ್ಲಿ ಸಹಜವಾಗಿ ಇರಬೇಕಾದ ಎಣ್ಣೆಯ ಅಂಶವು ಮಸ್ಕತಿ ಅಕ್ಕಿಯಲ್ಲಿ ಅರ್ಧಕ್ಕಿಂತಲೂ ಕಡಿಮೆಯಾಗಿರುವದು. ಲೋಳೆ ಪದಾರ್ಥವೂ ಕಡಿಮೆಯಾಗಿರುವದು. ಮಸ್ಕತಿ ಅಕ್ಕಿಯಲ್ಲಿ ಸಾರ- ಮೂರು ನಾಲ್ಕನೇ ಅಂಶವನ್ನು, ಧಾತು ಅರ್ಧಾಂಶವನ್ನು ಕಡಿಮೆಯಾಗುವದು. ಹೀಗೆ ಅಕ್ಕಿಯನ್ನು ಶುದ್ಧ ಮಾಡುವಾಗ ತೆಗೆದ ತವುಡಿನಲ್ಲಿ ಎಲ್ಲಾ ಆಹಾರ ಪದಾರ್ಥಗಳು ಅಕ್ಕಿಯಲ್ಲಿರುವದಕ್ಕಿಂತಲೂ ಅಧಿಕವಾಗಿರುತ್ತವೆ. ತಾನು ಪರೀಕ್ಷಿಸಿದ ಎಲ್ಲಾ ವಿಧದ ಕಚಿ ಅಕ್ಕಿಯು ಮಸ್ಕತಿ ಅಕ್ಕಿಗಿಂತ ಒಳ್ಳೇದಾಗಿತ್ತು. ಆದರೆ ಎಲ್ಲಾ ವಿಧದ ಮಸ್ಕತಿ ಅಕ್ಕಿಯು ಊಟಕ್ಕೆ ಯೋಗ್ಯವಾದವು ಎಂದು ಮ। ಸೆನ್‌ರವರು ಹೇಳಿರುತ್ತಾರೆ. ಅಕ್ಕಿಯ ಎಲ್ಲಾ ತವುಡು ಹೋಗುವವರೆಗೆ ತೊಳೆಯುವದೂ ಈ ಪ್ರಾಂತ್ಯದ ಪದ್ಧತಿ. ಈ ತವುಡು ಇತ್ಯಾದಿಗಳಲ್ಲಿ ಎಣ್ಣೆ ಮತ್ತು ಲೋಳೆ ಪದಾರ್ಥಗಳು ಬಹಳವಿರುತ್ತವೆ. ಆದುದರಿಂದ ಹೀಗೆ ತೊಳೆಯುವದೂ ಸರಿಯಲ್ಲ. ಅಕ್ಕಿ ಬೇಯಿಸಿದ ಗಂಜಿ ನೀರಿನಲ್ಲಿ ಕೂಡಾ ಆಹಾರ ಪದಾರ್ಥಗಳು ಬಹಳವಿರುವದರಿಂದ ಅದನ್ನು ಬಿಸಾಡುವದೂ ಒಳ್ಳೇದಲ್ಲ ಎಂಬದಾಗಿ ಮ। ಸೆನ್‌ರವರು ಪರಿಶೋಧನೆಯಿಂದ ತಿಳಕೊಂಡಿದ್ದಾರೆ.

~~~~~

ಬಂಗಾಳಕ್ಕೆ ಸೇರಿದ ಮೆಮನ್ ಸಿಂಘ್, ಚಂದಪುರ ಮೊದಲಾದ ಪ್ರಾಂತ್ಯಗಳಲ್ಲಿ ಆಯುಧಪಾಣಿಗಳಾದ ದರೋಡೆಯಿತರು ಕೆಲವರ ಮನೆ ನುಗ್ಗಿ ಮನೆಯವರನ್ನು ಗುಂಡು ಹೊಡೆದುಕೊಂದು ಸೂರೆಸುಲಿಗೆ ಮಾಡಿದ ವರ್ತಮಾನವು ಬಂದಿರುತ್ತದೆ. ಈ ದರೋಡೆಯಿಂದ ಗಾಯ ಒಡೆದವರು ಆಸ್ಪತ್ರಿಯಲ್ಲಿ ಶೈತೋಪಚಾರ ಹೊಂದುತ್ತಿದ್ದಾರೆ.

~~~~~

ಪೂನೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಲೋ। ತಿಲಕರವರಿಗೆ ೪೦ ಸಾವಿರ ರೂಪಾಯಿಯ ಹೊಣೆ ಕಟ್ಟಬೇಕೆಂದು ಮಾಡಿದ ತೀರ್ಮಾನದ ಮೇಲೆ ತಿಲಕರು ಮುಂಬಾಯಿ ಹೈಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿದ್ದರು. ಈ ಅಪೀಲು ತನಿಕಿಯನ್ನು ಇದೇ ತಾ. ೯ರಲ್ಲು ಜಸ್ಟಿಸ್ ಬೆಚ್ಲರ್ ಮತ್ತು ಷಾಹರವರು ನಡಿಸಿದರು. ಲೋ। ತಿಲಕರ ಕಡೆಯಿಂದ ಬಹುಮಾನಪಟ್ಟ ಬ್ಯಾರಿಷ್ಟರ್ ಜಿನ್ನಾರವರೂ ಪ್ರತಿಪಕ್ಷ್ಯದಲ್ಲಿ ಅಡ್ವೋಕೇಟ ಜನರಲರೂ ಇತರ ಇಬ್ಬರು ಯೂರೋಪಿಯನ ಬ್ಯಾರಿಷ್ಟರುಗಳೂ ವಾದಿಸಿದರು. ತಿಲಕರ ಪಕ್ಷದವರು ಮಾಡಿದ ವಾದದಲ್ಲಿ ತಿಲಕರು ಮಾಡಿದ ಮೂರು ಉಪನ್ಯಾಸಗಳಲ್ಲಿ ರಾಜದ್ರೋಹವೇನಾದರೂ ಇದ್ದೀತೇ ಎಂದು ಪರಿಶೀಲಿಸಬೇಕು. ಆಂಗ್ಲ ಪ್ರಭುತ್ವವು ಭರತ ಖಂಡದಲ್ಲಿ ಇರಲೇ ಕೂಡದೆಂತ ತಿಲಕರು ಯಾವದೊಂದು ಉಪನ್ಯಾಸದಲ್ಲಿ ಹೇಳಿಲ್ಲ. ಈ ಪ್ರಭುತ್ವದಿಂದ ಈ ದೇಶಕ್ಕೆ ಲಾಭವೇ ಇರುವದೆಂದು ಹೇಳಿರುವರು. ತಿಲಕರವರ ಅಭಿಪ್ರಾಯವು ಅಧಿಕಾರ ವರ್ಗದ ನಿರಂಕುಶತ್ವವನ್ನು ಖಂಡಿಸುವದಾಗಿಯೇ ಹೊರತು ಆಂಗ್ಲ ಪ್ರಭುತ್ವವನ್ನೇ ನಿಷೇಧಿಸುವದಾಗಿಲ್ಲ. ಸ್ವರಾಜ್ಯವು ಲಭಿಸಬೇಕೆಂದು ತಿಲಕರವರು ಉಪನ್ಯಾಸದಲ್ಲಿ ಹೇಳಿದ್ದರೂ ಪಾಶ್ಚಾತ್ಯರನ್ನು ಬಹಿಷ್ಕರಿಸಬೇಕೆಂದು ಅವರ ಅಭಿಪ್ರಾಯವಲ್ಲ. ಚಕ್ರವರ್ತಿಯವರಿಗೂ ಪಾರ್ಲಿಮೆಂಟಿನವರಿಗೂ ಈ ದೇಶದ ಅಧಿಕಾರಿಗಳ ನಿರಂಕುಶ ಕ್ರಮವನ್ನು ನಿವೇದಿಸಿ ಸರಿಪಡಿಸಬೇಕೆಂಬದೇ ತಿಲಕರ ಬೋಧೆಯೂ ಮುಖ್ಯ ಅಭಿಪ್ರಾಯವೂ ಎಂದು ಮೊದಲಾಗಿ ವಾದಿಸಿದರು. ಈ ವಾದದ ಮೇಲೆ ಎಡ್ವೊಕೇಟ್ ಜನರಲರವರು ಪ್ರಭುತ್ವದ ಪ್ರತಿನಿಧಿಯನ್ನು ಆಕ್ಷೇಪಿಸುವದೆಂದರೆ ಪ್ರಭುತ್ವವನ್ನೇ ಆಕ್ಷೇಪಿಸಿದಂತೆ ಆಯಿತು. ಚಕ್ರವರ್ತಿಯವರನ್ನೂ ಪಾರ್ಲಿಮೆಂಟನ್ನೂ ಬಿಟ್ಟು ಉಳಿದವರೆಲ್ಲರನ್ನು ಸ್ಟೇಟ್ ಸೆಕ್ರೆಟರಿ, ವೈಸರಾಯ ಮೊದಲಾದವರನ್ನೆಲ್ಲಾ ತಿಲಕರು ಆಕ್ಷೇಪಿಸಿರುತ್ತಾರೆ. ಇಂಥವರನ್ನೆಲ್ಲಾ ಕುರಿತು ಆಡುವ ಮಾತು ಆಂಗ್ಲ ಪ್ರಭುತ್ವವನ್ನೇ ಕುರಿತು ಆಡಿದಂತಾಯಿತು. ಪ್ರಭುತ್ವದವರು ಭಾರತೀಯರಿಗೆ ತಕ್ಕ ಅಧಿಕಾರವನ್ನು ಕೊಡುವದಿಲ್ಲವೆಂದು ಹೇಳಿರುವದರಿಂದ ಅವರು ಪ್ರಜೆಗಳನ್ನು ಮೋಸಪಡಿಸಿದರೆಂದು ಹೇಳಿದ ಹಾಗಾಯಿತು. ಆದುಕಾರಣ ಮೇಜಿಸ್ಟ್ರೇಟರ ಶಿಕ್ಷೆಯು ನ್ಯಾಯವಾದುದು ಎಂದು ಮೊದಲಾಗಿ ವಾದಿಸಿದರು. ಆಳುವಿಕೆಯ ಕ್ರಮವು ಸರಿಯಾಗಿಲ್ಲವೆಂದು ಆಕ್ಷೇಪಿಸುವದಕ್ಕೆ ಪ್ರಜೆಗಳಿಗೆ ಸ್ವಾತಂತ್ರ್ಯವಿದೆ ಎಂದು ಜಡ್ಜಿಯವರು ಸೂಚಿಸಿ ತಿಲಕರ ಮೇಲೆ ಮೇಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯು ನ್ಯಾಯವಲ್ಲವೆಂತ ಹೇಳಿ ತಿಲಕರವರಿಂದ ಕಟ್ಟಿಸಿಕೊಂಡಿದ್ದ ಹೊಣೆಯನ್ನು ಹಿಂತಿರುಗಿ ಕೊಟ್ಟುಬಿಡಬೇಕೆಂದು ಆಜ್ಞಾಪಿಸಿರುತ್ತಾರೆ.

~~~~~

ಹಿಂದೂಸ್ಥಾನ, ಆಸ್ಟ್ರೇಲಿಯ, ಸೀಲೋನ್ ಪ್ರಾಂತ್ಯಗಳಿಂದ ಟಪ್ಪಾಲು ಮತ್ತು ಪ್ರಯಾಣಿಕರನ್ನು ವೈಯುತ್ತಿದ್ದ "ಅರೇಬಿಯ" ಹಡಗವು ಶತ್ರುಗಳ ಜಲಂತರ್ಗಾಮಿ ನಾವೆಗೆ ತುತ್ತಾಗಿ ಮುಣುಗಿಸಲ್ಪಟ್ಟದೆಂಬ ವರ್ತಮಾನ ಬಂದಿರುತ್ತದೆ. ಈ ಹಡಗದಲ್ಲಿ ಕಲಾಸಿಗಳೂ ಪ್ರಯಾಣಿಕರೂ ಸೇರಿ ಸುಮಾರು ೭೫೧ ಪ್ರಯಾಣಿಕರೂ ಅಮೂಲ್ಯವಾದ ಸರಕುಗಳೂ ಇದ್ದುವು. ಈ ಹಡಗದಲ್ಲಿದ್ದ ಪ್ರಯಾಣಿಕರಲ್ಲಿ ಹೆಚ್ಚಿನವರು ಆಸ್ಟ್ರೇಲಿಯನರು. ಮುಂಬಾಯಿಯ ಸರ್ ರತನ್‌ತಾತ ಮತ್ತು ಅವರ ಪತ್ನಿ, ಎನ್. ಎನ್. ವಾಡ್ಯ ಅವರ ಪತ್ನಿ ಮತ್ತು ಅವರ ೩ ಮಂದಿ ಮಕ್ಕಳೂ ಮದ್ರಾಸಿನ ಕೆಲವು ಯುರೋಪಿಯನರೂ ಇದ್ದರು. ಎಲ್ಲಾ ಪ್ರಯಾಣಿಕರು ರಕ್ಷಿಸಲ್ಪಟ್ಟಿರುವರೆಂಬ ವಾರ್ತೆ ಇದೆ. "ಅರೇಬಿಯ" ಹಡಗಕ್ಕೆ ಸೋಮವಾರ ದಿನ ಬೆಳಿಗ್ಯೆ ೧೧ ಗಂಟೆ ೭ ನಿಮಿಷಕ್ಕೆ ಟೋರ್ಪೆಡೋ ಬಡೆಯಿತು. ಕಲಾಸಿಗಳೂ ಪ್ರಯಾಣಿಕರೂ ಕೂಡಲೇ ದೋಣಿಗಳನ್ನು ಹತ್ತಿದರು. ಒಂದು ತಾಸಿನೊಳಗೆ ಹಡಗವು ಮುಣುಗಿಹೋಯಿತು. "ಸಿಟಿ ಆಫ್ ಮಾರ್ಸೆಲಿಸ್" ಎಂಬ ಹಡಗವು ಇನ್ನೊಂದು ಹಡಗವೂ ಇತರ ಮೂರು ಟ್ರಾವಲರ್ಸ್‌ಗಳೂ ಈ ಪ್ರಯಾಣಿಕರನ್ನೆಲ್ಲಾ ಎತ್ತಿಕೊಂಡು ಪೋರ್ಟ್ ಸಯ್ಡ್, ಮಾಲ್ಟ, ಮೊದಲಾದ ಬಂದರಗಳಲ್ಲಿ ಇಳಿಸಿರುತ್ತವೆ.

~~~~~

ಮಧ್ಯ ಸಂಸ್ಥಾನಗಳ ೫ನೇ ಪರಿಷತ್ತು ಇದೇ ತಾ. ೫, ೬, ಮತ್ತು ೭ರಲ್ಲು ನಡೆದುಬಂತು. ಬಹುಮಾನಪಟ್ಟ ಎಮ್. ವಿ. ಜೋಶಿಯವರು ಈ ಪರಿಷತ್ತಿನ ಸ್ವಾಗತ ಭಾಷಣವನ್ನು ಕೊಟ್ಟು ಭಾಷಣದಲ್ಲಿ ಮಧ್ಯಸಂಸ್ಥಾನದ ಸರಕಾರದವರು ಮಿಸೆಸ್ ಅನ್ನಿ ಬಿಸೆಂತರು ಈ ಸಂಸ್ಥಾನಕ್ಕೆ ಬಾರದಹಾಗೆ ನಿರ್ಬಂಧಪಡಿಸಿದ್ದು ನ್ಯಾಯವಲ್ಲವೆಂಬದಾಗಿ ಹೇಳಿದರು. ಈ ಪರಿಷತ್ತಿನಲ್ಲಿ ಈ ಸರಕಾರದವರು ಮಿಸೆಸ್ ಅನ್ನಿ ಬಿಸೆಂತರವರಿಗೆ ಕೊಟ್ಟ ಆಜ್ಞೆಯನ್ನು ಖಂಡಿಸುವ ಮಸೂದೆಗಳು ಆಗಿರುತ್ತವೆ. ಪರಿಷತ್ತಿಗೆ ಸುಮಾರು ೧೭೦೦ ಪ್ರತಿನಿಧಿಗಳು ಹಾಜರಿದ್ದರು.

~~~~~

ದಕ್ಷಿಣ ಆಫ್ರೀಕದ ಭಾರತೀಯರ ಹಿತಚಿಂತಕರಾದ ಶ್ಲೋಬ್ಬರಾದ ಮಿ। ಪೊಲಕರವರು ದಕ್ಷಿಣ ಆಫ್ರೀಕದಿಂದ ಹಿಂತಿರಿಗಿ ಮುಂಬಾಯಿಗೆ ಬಂದಿರುತ್ತಾರೆ. ಇವರು ಪುನಃ ದಕ್ಷಿಣ ಆಫ್ರೀಕಕ್ಕೆ ಹೋಗುವದಿಲ್ಲವೆಂದೂ ರಾಷ್ಟ್ರೀಯ ಸಭೆಯ ಕಾರ್ಯಗಳು ಮುಗಿದ ನಂತರ ಇಂಗ್ಲಾಂಡಿಗೆ ಹೋಗಿ ಅಲ್ಲಿಯೇ ಇದ್ದುಕೊಳ್ಳುವರೆಂದೂ ತಿಳಿದುಬಂದಿದೆ.

~~~~~

ನವಂಬರ ತಾ. ೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೭೮೦೯ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೬೦೩೬ ಮಂದಿ ಮೃತರಾಗಿರುವರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್‌ಸಂಸ್ಥಾನದಲ್ಲಿ ೨೯೦೭, ಮದ್ರಾಸ್ ೨೭೩, ಬಿಹಾರ್ ಮತ್ತು ಒರಿಸ್ಸ ೪೯, ಸಂಯುಕ್ತ ಸಂಸ್ಥಾನ ೧೭೦, ಪಂಜಾಬು ೫೧, ಬರ್ಮ ೩೨, ಮಧ್ಯಸಂಸ್ಥಾನ ೪೯, ಮೈಸೂರು ೩೧೨, ಮಧ್ಯ ಹಿಂದೂಸ್ಥಾನ ೧೦೭, ರಾಜಪುತಾನಾ ೧ ಮರಣಗಳಾಗಿರುವವು.

~~~~~

ದಕ್ಷಿಣ ಹಿಂದೂಸ್ಥಾನ.

ಕಲಿಕೋಟೆಯ ಜಮೂರಿನ್ ಕಾಲೇಜಿಯ IV ಫಾರ್ಮಿನ ವಿದ್ಯಾರ್ಥಿಯೊಬ್ಬನನ್ನು ಸದರಿ ಕಾಲೇಜಿಯ ಪ್ರಿನ್ಸಿಪಾಲರವರು ಶಾಲೆಯಿಂದ ತೆಗೆದು ಹಾಕಿದ್ದರಿಂದ ಆ ವಿದ್ಯಾರ್ಥಿಯು ಪ್ರಿನ್ಸಿಪಾಲರು ತನ್ನನ್ನು ಅನ್ಯಾಯವಾಗಿ ಶಾಲೆಯಿಂದ ತೆಗೆದು ಹಾಕಿದ್ದರೆಂಬ ಸಬಬಿನ ಮೇಲೆ ಫಿರ್ಯಾದಿ ಕೊಟ್ಟಿರುವನೆಂದು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~

ಕೊಲೊಂಬೋ ಗವರ್ನರರು ಜಾಫ್ನ ಅರ್ಧದ್ವೀಪದಲ್ಲಿ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರುವ ಹಂಚಿಕೆ ಮಾಡಿರುತ್ತಾರೆ.

~~~~~

ಮದ್ರಾಸ್ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರುವ ಸರ್. ಪಿ. ಎಸ್. ಶಿವಸ್ವಾಮಿ ಅಯ್ಯರರವರ ಕೆಲಸದ ಅವಧಿಯು ಇದೇ ಬರುವ ೧೯೧೭ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ತೀರುವದರಿಂದ ಇವರ ನಂತರ ಈ ಸಂಸ್ಥಾನಕ್ಕೆ ಸೇರಿದ ಬಿನ್‌ಸರಕಾರ ಮೆಂಬರರನ್ನು ಈ ಉದ್ಯೋಗಕ್ಕೆ ನೇಮಿಸಬೇಕೆಂಬದಾಗಿ ಸೂಚಿಸುವ ಸಭೆಗಳು ಮದ್ರಾಸಿನಲ್ಲಿ ನಡೆಯುತ್ತಿರುವವು.

~~~~~

ಸೇನೆಗೆ ಸೇರಿಕೊಳ್ಳಲು ಹುಕುಂ ಕೊಡಬೇಕೆಂದು ಬರ್ಮ ದೇಶಿಯರು ಇಂಡಿಯಾ ಗವರ್ನಮೆಂಟಿನವರನ್ನು ಕೇಳಿಕೊಂಡದ್ದರಿಂದ ಸರಕಾರದವರು ಬರ್ಮಿಯರ ಒಂದು ಸೇನಾಂಗವನ್ನು ರೂಪಿಸಬಹುದೆಂಬ ಹುಕುಂ ಕೊಟ್ಟಿರುತ್ತಾರೆ.

~~~~~
~~~~~

ಸರ್. ವಿಲಿಯಂ ರೀಸ್ ಡೇವಿಸ್ ಕೆ. ಸಿ. ಯವರು ಸೀಲೋನಿನ ಚೀಫ್ ಜಸ್ಟಿಸರಾಗಿ ನೇಮಿಸಲ್ಪಟ್ಟಿರುವರು. ೧೯೧೨ನೇ ಇಸವಿಯಿಂದ ಇವರು ಹೊಂಕೊಂಗಿನಲ್ಲಿ ಚೀಫ್ ಜಸ್ಟಿಸರಾಗಿದ್ದರು.

ದಕ್ಷಿಣ ಕನ್ನಡ.

ಕಾಪು:— ತಾ. ೫—೧೧—೧೬ನೇ ದಿನ ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಉಪಾಧ್ಯಾಯರ ಸಮ್ಮೇಳನವು ಆಗಿದ್ದಾಯಿತು. ಉಡ್ಪಿ ರೇಂಜುಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರಾದ ಮ| ರಾ| ಕೋಟೆಕಾರ ರಾಮರಾಯರವರೂ ಕಾರ್ಕಳ ಸಬ್ ರೇಂಜಿನ ಸುಪರ್‌ವ್ಯಾಜರರಾದ ರಾಮಚಂದ್ರ ಕಮ್ತಿಯವರೂ ಸುಮಾರು ೬೦ ಮಂದಿ ಉಪಾಧ್ಯಾಯರೂ ನೆರೆದು ಬಂದಿದ್ದರು. ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರೇ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಸಭಾ ಪ್ರಾರಂಭ ಸದರಿ ಶಾಲೆಯ ಬಾಲಕಿಯರು ದೇವರ ಪ್ರಾರ್ಥನೆಯ ಹಾಡುಗಳನ್ನು ಸೊಗಸಾಗಿ ಹಾಡಿದರು. ನಂತರ ಗತ ಸಭೆಯ ರಿಪೋರ್ಟನ್ನು ಹೆಡ್ ಮಾಸ್ತರರಾದ ರಾ| ಪಿ. ವೀರಭದ್ರರಾಯರು ಓದಿದರು. ಬಳಿಕ ಸಭಿಕರಲ್ಲಿ ಹಲವರು ಬಾಲಕ ದರ್ಜೆಗೆ ಅಕ್ಷರಾಭ್ಯಾಸಗಳನ್ನು ಕಲಿಸುವ ಕ್ರಮದ ಕುರಿತು ಚರ್ಚಿಸಿದನಂತರ ಅಧ್ಯಕ್ಷರು ಎದ್ದು ನಿಂತು "ಶಾಲೆಗಳಲ್ಲಿ ಬಾಲಕದರ್ಜೆಯನ್ನು ಕಲಿಸುವದು ಈ ಜಿಲ್ಲೆಯಲ್ಲಿ ಮಾತ್ರ ಬಲು ಪ್ರಯಾಸಕರವಾಗಿದೆ. ಇತರ ಜಿಲ್ಲೆಗಳಲ್ಲಾದರೋ ಶಾಲೆಗಳಲ್ಲಿ ಉಪಯೋಗಿಸುವ ಮಾತುಗಳೇ ಹುಡುಗರ ಮಾತೃಭಾಷೆಯೇ ಆಗಿರುತ್ತದೆ. ಈ ಜಿಲ್ಲೆಯಲ್ಲಿ ತರತರದ ಭಾಷೆಗಳು ಉಪಯೋಗಿಸುವದಾದ್ದರಿಂದ ಶಾಲೆಗಳಲ್ಲಿ ಉಪಾಧ್ಯಾಯರು ಆದಷ್ಟು ಮಾತೃಭಾಷೆಯನ್ನು ಉಪಯೋಗಿಸಬೇಕು. ಪ್ರಥಮತಃ ಸೊನ್ನೆಯನ್ನು ಬಿಡಿಸಲಿಕ್ಕೆ ಮಕ್ಕಳಿಗೆ ಕಲಿಸಿ, ಅದರಿಂದ ಮಾಡಬಹುದಾದ ಅಕ್ಷರಗಳನ್ನು ಉಪಾಧ್ಯಾಯನು ಕಲಿಸಬೇಕು. ಅಲ್ಲದೆ ೪-೫ ಅಕ್ಷರಗಳನ್ನು ಕಲಿಸಿದನಂತರ ಶಬ್ದಗಳನ್ನು ಉಪಾಧ್ಯಾಯನು ಸ್ವತಹಾ ತಯಾರಿಸಿ ಅವುಗಳ ಕುರಿತು ಸಂಭಾಷಣೆ ಮಾಡುತ್ತಾ ಬರಿಸಬೇಕಾಗಿದೆ. ಈ ರೀತಿ ಕಲಿಸುವಾಗ ಬಾಲಶಿಕ್ಷೆ ವ ಮೂಲಪಾಠಕದ ಪಾಠಗಳಿಗನುಸಾರವಾಗಿ ವಸ್ತುಗಳನ್ನು ತೋರಿಸಿ ಸಂಭಾಷಿಸಿ ಪುಸ್ತಕ ಓದಿಸಬೇಕು. ಈ ರೀತಿ ಇಡೀ ಪುಸ್ತಕ ಓದಿಸುವಾಗ ಎಲ್ಲಾ ಅಕ್ಷರಗಳು ಮಕ್ಕಳಿಗೆ ಬಂದಂತಾಗುವವು. ಹಿಂದಿನ ಪದ್ಧತಿಯಂತೆ ಸ್ವರ, ವ್ಯಂಜನ, ಒತ್ತಕ್ಷರ ಆದಿಗಳನ್ನು ಕ್ರಮಾಗತವಾಗಿ ಮಾಡಿ ವೃಥಾ ಕಾಲಹರಣಮಾಡುವದು ಸರಿಯಲ್ಲವೆಂದು ನನ್ನ ಅಭಿಪ್ರಾಯ"ವೆಂದು ಸಭಿಕರಿಗೆ ತಿಳಿಸಿದರಲ್ಲದೆ ಇನ್ನೂ ಕೆಲವು ಬುದ್ಧಿವಾದಗಳನ್ನು ಹೇಳಿದರು. ಬರುವ ತಿಂಗಳ ಸಭೆಯು ದಶಂಬರ ತಾ. ೯ಕ್ಕೆ ಎರ್ಮಾಳ ಬೋರ್ಡು ಶಾಲೆಯಲ್ಲಿ ಜರಗಬೇಕಾಗಿಯೂ ಶಾಲೆಗಳಲ್ಲಿ ಕಥೆಗಳನ್ನು ಯಾವ ರೀತಿ ಕಲಿಸಬೇಕು ಎಂಬುದರ ವಿಷಯ ಚರ್ಚಿಸಬೇಕಾಗಿಯೂ ನಿರ್ಣಯವಾಗಿ ಉಪಾಧ್ಯಾಯರಿಂದ ರಾಜಗೀತ ಹಾಡಲ್ಪಟ್ಟು ಸಭೆ ಮುಕ್ತಾಯಗೊಂಡಿತು.

ಪುತ್ತೂರು:— ಇಲ್ಲಿ ಜೂನು ಮಳೆಗಾಲದಂತೆ ಕಳೆದ ಅಕ್ಟೋಬರ ತಾ. ೧೧ರ ಲಾಗಾಯಿತು ಆರಂಭಿಸಿದ ಮಳೆ ಎಡೆಬಿಡದೆ ಬರತೊಡಗಿದ್ದರಿಂದ ಅಂಗಡಿಗಳಲ್ಲಿ ಹಳೆ ಅಕ್ಕಿಯಾಗಲಿ ಹೊಸ ಅಕ್ಕಿಯಾಗಲಿ ಇಲ್ಲದೆಯೂ ಬೇಸಾಯಗಾರರಿಗೆ ಮಳೆದೆಸೆಯಿಂದ ಅಕ್ಕಿ ಮಾಡಲಿಕ್ಕೆ ಉಪಾಯವಿಲ್ಲದೆಯೂ ಊಟಕ್ಕೆ ದುಡ್ಡು ಕೊಟ್ಟರೂ ಅಕ್ಕಿ ಸಿಕ್ಕದೆ ಅನೇಕ ಜನರಿಗೆ ಬಹಳ ಕಷ್ಟವಾಯಿತು. ಕಡೆಗೆ ಮುಡಿ ಪಡಕೊಳ್ಳುವವರಿಗೆ ತಾ. ೬ರಲ್ಲು ಶೇರು ಕೊಂಡು ಹೋಗುವ ಕಾಲ ಒದಗಿತು. ಈಗಲೆಂತು ಸಾಹುಕಾರರು ಮಾರಾಟಕ್ಕೆ ಇಟ್ಟ ಹಳೆ ಅಕ್ಕಿಗೆ ಮುಡಿ ೧ರ ರೂ. ೭|; ಹೊಸ ಅಕ್ಕಿಗೆ ಶೇರಿಗೆ ೭| ವ ಲ ದುಡ್ಡು ಕ್ರಯ ಇರುತ್ತದೆ.

ಇಲ್ಲಿಯ ಸಾಹುಕಾರ ಬರ್ಪಳಿಗೆ ಮ್ಯೊದಿನ ಬ್ಯಾರಿಗಳವರು ಇಲ್ಲಿಯ ಮಶೀದಿ ಬಳಿಯು ಕಟ್ಟಿದ ಮಹಮ್ಮದಿ ಶಾಲೆಯಲ್ಲಿ ಇದೇ ತಾ. ೫ರಲ್ಲು ಪ್ರವೇಶವಾಯಿತು. ಇಲ್ಲಿಯ ಡಿವಿಜನ ಡಿಪ್ಯುಟಿ ಕಲೆಕ್ಟರರಾದ ಮೆ| ಕುಂಞಾಯಿನ ಸಾಹೇಬ ಬಹದ್ದೂರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಒಂದು ಭಾಷಣ ಮಾಡಿದರು.

ಇಲ್ಲಿಯ ತಾಲೂಕು ತಹಶೀಲದಾರವರು ಸಿಬಂದಿ ಸಮೇತ ಸುಬ್ರಮಣ್ಯಕ್ಕೆ ಹೋಗಿರುವರು.

ಕಾರ್ಕಳ:— ಇದೇ ತಾ. ೧೪ರಲ್ಲು ಕಾರ್ಕಳದಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿಬಂತು. ಈ ಸಭೆಗೆ ಬಹುಮಾನಪಟ್ಟ ಕೆ. ಎಸ್. ಭಟ್ಟರವರು ಅಧ್ಯಕ್ಷರಾಗಿದ್ದರು. ಮಿಸೆಸ್ ಅನ್ನಿಬಿಸೆಂಟರವರನ್ನು ಸೆಂಟ್ರಲ್ ಪ್ರೊವಿನ್ಸ್ ಮತ್ತು ಬಿರಾರಿಗೆ ಹೋಗದ ಹಾಗೆ ಅಲ್ಲಿಯ ಸರಕಾರದವರು ನಿರ್ಬಂಧ ಪಡಿಸಿರುವದನ್ನು ವಿರೋಧಿಸುವದೇ ಈ ಸಭೆಕೂಡಿದುದರ ಉದ್ದೇಶವಾಗಿತ್ತು. ಸಭೆಯಲ್ಲಿ ಕಾಲೋಚಿತ ಭಾಷಣವಾದ ನಂತರ "ಸೆಂಟ್ರಲ್ ಮತ್ತು ಬಿರಾರ್ ಪ್ರೊವಿನ್ಸುಗಳಲ್ಲಿ ನಡೆಯತಕ್ಕ ಥಿಯೋಸಫಿ ಸೊಸ್ಯಾಟಿಯ ಸಭೆಗೆ ಹೋಗಲಿಕ್ಕಿದ್ದ ಮಿಸೆಸ್ ಬಿಸೆಂತರನ್ನು ಆ ಪ್ರೊವಿನ್ಸಿಗೆ ಹೋಗದ ಹಾಗೆ ನಿರ್ಬಂಧ ಪಡಿಸಿದ್ದು ಮತಸ್ವಾತಂತ್ರ್ಯಕ್ಕೆ ಭಂಗವನ್ನುಂಟುಮಾಡಿದ ಹಾಗಾಗುವದರಿಂದ ಆ ಪ್ರೊವಿನ್ಸುಗಳ ಚೀಫ್ ಕಮಿಷನರವರ ಹುಕುಮನ್ನು ಇಂಡಿಯಾ ಸರಕಾರದವರು ರದ್ದುಪಡಿಸುವ ಹಾಗೆ ಇಂಡಿಯಾ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವು ಈ ಸಭೆಯಲ್ಲಿ ಆಗಿರುತ್ತದೆ.

ಮಂಗಳೂರು.

ಸ್ವೀಕಾರ:-ಬೆಂಗಳೂರಿಂದ ಹೊರಡುವ "ಶ್ರೀ ಕೃಷ್ಣ" ಮಾಸಪತ್ರಿಕೆಯನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಈ ಚಿಕ್ಕ ಮಾಸಪತ್ರಿಕೆಯಲ್ಲಿ ಅಡಗಿಕೊಂಡಿರುವ ವಿಷಯಗಳು ಅತ್ಯುಪಯುಕ್ತವಾದುದೆಂಬುದಕ್ಕೆ ಪ್ರತ್ಯವಾಯ ತೋರುವದಿಲ್ಲ. ಇದರ ವರ್ಗಣಿ ಅಂಚೆ ವೆಚ್ಚ ಸೇರಿ ರೂ. ೧—೪—೦

ತಿದ್ದುಪಡಿ:—ತಾ. ೧೦—೧೧—೧೬ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ಸ್ಮಾಲ ನಂಬ್ರ $\frac{794}{1916}$ನೇ ವ್ಯಾಜ್ಯದ ನೋಟೀಸಿನಲ್ಲಿ ಪ್ರತಿವಾದಿ "ರಾಗ" ಎಂತ ತಪ್ಪಾಗಿ ಕಾಣಿಸಿಯದೆ. ಅದನ್ನು ವಾಚಕರು ಪ್ರತಿವಾದಿ "ರಾಗ" ಎಂತಲ್ಲ; "ನಾಗ" ಎಂತ ಓದಿ ತಿಳುಕೊಳ್ಳಬೇಕಾಗಿ ಈ ಮೂಲಕ ಸೂಚಿಸುತ್ತೇವೆ.

ಪಟ್ಟಣದಲ್ಲಿ ಹುಚ್ಚರನ್ನು ತಿರುಗಾಡ ಬಿಡುವದು ಹಿತವಲ್ಲವೆಂಬುದು ಮೊನ್ನೆ ತಾನೇ ನಡೆದ ಒಂದು "ಸಂಗತಿಯಿಂದ ತಿಳಿದುಬಂದಿದೆ. ಕಳೆದ ವಾರ ೧೬-೧೮ ವರ್ಷ ವಯಸ್ಸಿನ ಒಬ್ಬ ಯುವತಿಯು ಹಗಲು ೧೦-೧೧ ಗಂಟೆಯ ಹೊತ್ತಿಗೆ ಗೋಲ್ಲರಕೇರಿಯ ದಾರಿಯಲ್ಲಿ ರೈವ ತನ್ನ ಮನೆಗೆ ಹೋಗುತ್ತಿರುವಾಗ ಆ ದಾರಿಯಲ್ಲಿ ತಿರುಗಾಡುತ್ತಿದ್ದ ಒಬ್ಬ ಹುಚ್ಚನು ಹಿಂದಿನಿಂದ ಫಕ್ಕನೇ ಅವಳ ಮೇಲೆ ಹಾರಿ ಅವಳನ್ನು ಗಪ್ಪನೇ ಹಿಡಿದುಬಿಟ್ಟನು. ಅವಳು ಹೆದರಿ ಚೆನ್ನಾಗಿ ಕೂಗಿಕೊಂಡದ್ದರಿಂದ ದಾರಿಯಲ್ಲಿ ಹೋಗುತ್ತಿದ್ದ ಇತರರು ಸಹಾಯ್ಯಮಾಡಿ ಅವಳನ್ನು ಹುಚ್ಚನ ಕೈಯಿಂದ ಬಿಡಿಸಿದರೆಂತ ತಿಳಿದುಬಂದಿದೆ. ಹೀಗೆ ಹುಚ್ಚರು ಮನಸ್ಸೋಇಚ್ಛೆ ತಿರುಗಾಡುವದರಿಂದ ಒಂದೊಂದುವೇಳೆ ಶಾಲೆಗೆ ಹೋಗುವ ಮಕ್ಕಳಿಗೂ ಇತರರಿಗೂ ಅನೇಕ ತೊಂದರೆಗಳು ಸಂಭವಿಸಬಹುದಾದ್ದರಿಂದ ಪಟ್ಟಣದಲ್ಲಿ ತಿರುಗಾಡುವ ಹುಚ್ಚರನ್ನು ಹುಚ್ಚರ ಭಿತ್ತಿಗೆ ಕಳುಹಿಸುವ ಏರ್ಪಾಡನ್ನು ಸರಕಾರದವರು ಮಾಡುತ್ತಿದ್ದರೆ ಒಳ್ಳೇದಿತ್ತು.

ಮಂಗಳೂರು ತಾಲೂಕಿಗೆ ಸೇರಿದ ಮೂಡುಪೆರಾರ ಗ್ರಾಮದಲ್ಲಿ ಒಯ್ಯು ಎಂಬ ಹೆಂಗಸನ್ನು ಖೂನಿಮಾಡಿದ್ದನಾಗಿ ಆಪಾದಿಸಲ್ಪಟ್ಟ ಬಬ್ಬುಗೌಡನ ಮೇಲಿನ ಮೊಕದ್ದಮೆಯ ತನಕಿಯು ಇಲ್ಲಿಯ ಸೆಶ್ಶನ್ಸ್ ಕೋರ್ಟಿನಲ್ಲಿ ನಡೆದು ಸೆಶ್ಶನ್ಸ್ ಜಡ್ಜರು ಆಪಾದಿತನಿಗೆ ಜೀವಾಂತ ಬಂಕೋಲೆ ಶಿಕ್ಷೆಯನ್ನು ವಿಧಿಸಿದರು.

ತೆಂಕಬೆಳ್ಳೂರು ಗ್ರಾಮದ ಮಾನುವೇಲ್ ಕುತ್ತಿಂಞನ ಮಗ ಕಾಶ್ಮೀರ ಕುತ್ತಿಂಞನು ಪಜೀರ ಗ್ರಾಮದಲ್ಲಿರುವ ತನ್ನ ಭಾವನೆಂಟನಾದ ಸಂತಾನ್ ಸಾಲ್ದಾಂಞನಿಗೂ ಮಾವ ನಿಕ್ಲಾಸ್ ಸಾಲ್ದಾಂಞನಿಗೂ ತಾ. ೪-೧೧-೧೬ನೇ ರಾತ್ರಿ ೭ ಗಂಟೆ ಸಮಯ ಚೂರಿ ಹಾಕಿದ್ದಾಗಿ ಪೋಲೀಸಿನವರು ಅವನನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಚೂರಿಯಿಂದ ಗಾಯಪಟ್ಟವರ ಪೈಕಿ ಸಂತಾನ ಸಲ್ದಾಂಞನು ಆಸ್ಪತ್ರಿಯಲ್ಲಿ ಮೋದಂಡ ಸ್ಥಿತಿಯಲ್ಲಿದ್ದು ಇದೇ ತಾ. ೧೧ರಲ್ಲು ಕಾಲವಾದನು.

ತಾಲೂಕು ಸ್ಟೇಶನ್ ಸಬ್ ಇನ್ಸ್‌ಪೆಕ್ಟರರಾಗಿದ್ದ ರಾ| ಎನ್. ನಾರಾಯಣರಾಯರಿಗೆ ಪುತ್ತೂರಿಗೆ ವರ್ಗವಾದುದರಿಂದ ರಾ| ಯು. ಎನ್. ಕೃಷ್ಣರಾಯರು ತಾಲೂಕು ಸ್ಟೇಶನ್ ಸಬ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಇದೇ ನವಂಬರ ತಾ. ೧೨ನೇ ಆದಿತ್ಯವಾರ "ಮಂಗಳೂರಿನ ಭೀಮ"ನೆಂದು ಕರೆಯಲ್ಪಡುವ ಮಾ| ರಾ| ಶೇಷಪ್ಪನವರು ಅದ್ಭುತಕರವಾದ ತನ್ನ ಪರಾಕ್ರಮವನ್ನು ಪ್ರದರ್ಶಿಸಿ; ಮಂಗಳೂರಿನವರು ಕೂಡಾ ಸಾಧಿಸಿದರೆ ಕಲಿಯುಗದ ಭೀಮ ಎಂಬ ಹೆಸರನ್ನು ಪಡೆಯಬಹುದೆಂಬದನ್ನು ಮದ್ರಾಸ್ ಬೇಂಕ್ ಏಜಂಟರಾದ ಮೆ| ಡೇವಿಸ ದೊರೆಗಳವರು ಓಡಿಸುತ್ತಿದ್ದ ೧೮ ಕುದುರೆಗಳ ಬಲದ ಒಂದು ಮೋಟರ್ ಬಂಡಿಯನ್ನು ನಿಲ್ಲಿಸಿ ಖಚಿತಪಡಿಸಿದರು. ರಾ| ಶೇಷಪ್ಪನವರು ಪ್ರದರ್ಶಿಸಿದ ಇತರ ೧೦-೧೮ ದೇಖಾವೆಗಳೂ ಪ್ರೇಕ್ಷಕರಲ್ಲಿ ಆಶ್ಚರ್ಯವನ್ನು ಹುಟ್ಟಿಸುವಂಥಾವಾಗಿದ್ದವು. ನಮ್ಮ ಕನ್ನಡ ನಾಡಿನವರಾದ ರಾ| ಶೇಷಪ್ಪನವರು ಬಹಳ ಸಾಹಸಪಟ್ಟು ಈಗ ತಾನೇ ಅಪ್ರತಿಮ ಸಾಹಸಕೃತ್ಯಗಳನ್ನು ಪ್ರದರ್ಶಿಸಲು ಸಮರ್ಥರಾದುದು ನಮಗೆ ತುಂಬಾ ಸಂತೋಷವಾಗಿದೆ. ಇವರು ಯಂಗ್ ಮೇನ್ ಯೂನ್ಯನಿನ ಪರವಾಗಿ ಹಣ ಕೂಡಿಸುವ ಉದ್ದೇಶದಿಂದ ಕನ್ನಡಾ ಜಿಲ್ಲೆಯ ಇತರ ಪ್ರಾಂತ್ಯಗಳಿಗೂ ಹೋಗಿ ತಮ್ಮ ಭೀಮ ಬಲವನ್ನು ಪ್ರದರ್ಶಿಸತಕ್ಕವರಿದ್ದಾರೆಂತ ತಿಳಿ

ಯುತ್ತೇವೆ. ಇವರಿಗೆ ನಮ್ಮ ಜಿಲ್ಲೆಯ ಇತರ ಪ್ರಾಂತ್ಯಗಳವರೂ ತುಂಬಾ ಪ್ರೋತ್ಸಾಹ ಕೊಡುವರೆಂಧು ನಂಬಿದ್ದೇವೆ.

ಉಳಿಪಾಡಿ ಗ್ರಾಮದಲ್ಲಿ ರೋಮನ್ ಕೆಥೋಲಿಕ ಸಮಾಜಕ್ಕೆ ಸೇರಿದ ಪೌಲೀನ ಎಂಬ ಹೆಂಗಸು ಮೊನ್ನೆಯು ರಾತ್ರಿ ಆತ್ಮಹತ್ಯ ಮಾಡಿಕೊಂಡಿರುವಳೆಂಬ ವಾರ್ತೆ ಬಂದಿರುತ್ತದೆ.

ಕಣ್ಣೂರ ಗ್ರಾಮದ ದೇವುಸೆಟ್ಟಿ ಎಂಬವನು ತಾ. ೧೨ನೇ ದಿವಸ ಕಾಣೆಯಾಗಿದ್ದನೆಂತಲೂ ತಾ. ೧೩ನೇ ದಿನ ಕುತ್ತಿಗೆ ಕಡದ ಅವನ ಶವವು ಪಂಜಿಮಾರು ಎಂಬಲ್ಲಿಯ ಬಾವಿಯಲ್ಲಿ ಸಿಕ್ಕಿರುವದೆಂತಲೂ ತಿಳಿಯುತ್ತೇವೆ. ಈ ವಿಷಯ ಪೋಲಿಸ್ ತನಖಿ ನಡೆಯುತ್ತಿದೆ.

ಕಳೆದ ಆದಿತ್ಯವಾರ ಇಲ್ಲಿಯ ಮಹಿಳಾ ಸಭೆಯಲ್ಲಿ ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರಿಯ ಮಿಸೆಸ್ ಜಾನಕಿಯವರು ಮಕ್ಕಳ ಪೋಷಣೆಯ ಕುರಿತಾಗಿ ಇಲ್ಲಿಯ ಹೆಂಗಸರಿಗೆ ಅವಶ್ಯಕವಾದ ಸೂಚನೆಗಳನ್ನೊಳಕೊಂಡಿರುವ ಒಂದು ಭಾಷಣವನ್ನು ಕೊಟ್ಟಿರುತ್ತಾರೆ. ಮಿಸೆಸ್ ಜಾನಕಿಯವರು ಇನ್ನೂ ಈ ಸಂಬಂಧ ಹಲವು ಭಾಷಣಗಳನ್ನು ಕೊಡಲಿಕ್ಕಿದ್ದಾರೆಂದು ತಿಳಿದುಬರುವದರಿಂದ ಹೆಂಗಸರಿಗೆ ಅತ್ಯವಶ್ಯವಾಗಿರುವ ಇಂಥಾ ಭಾಷಣಗಳನ್ನು ಮಹಿಳಾ ಸಭೆಗೆ ಸಂಬಂಧ ಪಡದ ಹೆಂಗಸರೂ ಕೇಳುವ ಏರ್ಪಾಡು ಮಹಿಳಾ ಸಭೆಯವರು ಮಾಡುವದಾದರೆ ವಿಶೇಷ ಪ್ರಯೋಜನವಾಗುವದೆಂಬದಕ್ಕೆ ಪ್ರತ್ಯವಾಯ ತೋರುವದಿಲ್ಲ.

ಬೊಬ್ಬಿಲಿಯ ಕುಮಾರರಾಜ, ರಾಜಶ್ರೀ ರಾವ್ ವೆಂಕಟಕುಮಾರ ಕೃಷ್ಣರಂಗರಾವ್ ಬಹದ್ದೂರರವರನ್ನು ಮದ್ರಾಸ್ ಗವರ್ನರ ಪ್ರಭುಗಳವರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ನೇಮಿಸಿರುತ್ತಾರೆ.

ಈ ವಾರದಲ್ಲಿಯೂ ಒಂದೆರಡು ದಿನ ರಾತ್ರಿ ಇಲ್ಲಿ ಮಳೆ ಗರೆದಿರುತ್ತದೆ. ಅಕ್ಕಿಯ ಕ್ರಯವು ಇನ್ನೂ ಇಳಿತರವಾಗಲಿಲ್ಲ. ಹಳೇ ಮಸ್ಕತಿ ಅಕ್ಕಿಯ ಕ್ರಯ ಮುಡಿ ೧ಕ್ಕೆ ರೂ. ೮—೧೨—೦ರ ವರೆಗೂ, ಹೊಸ ಮಸ್ಕತಿಯ ಅಕ್ಕಿಯ ಕ್ರಯ ಮುಡಿ ೧ರ ರೂ. ೬—೧೨—೦ರ ವರೆಗೂ ಇದೆ. ಈ ವರ್ಷ ಅಕ್ಕಿಯ ಕ್ರಯ ಏರಿದ್ದಷ್ಟು ಹಿಂದೆ ಏರಿದ್ದಿಲ್ಲವೆಂತ ಜನರು ಆಡಿಕೊಳ್ಳುತ್ತಿದ್ದಾರೆ. ಹೀಗೆ ಅಕ್ಕಿಯ ಕ್ರಯ ಚಡಾವಾಗಿರುವುದರಿಂದ ಬಡಜನರದ್ದು ಮಾತ್ರವಲ್ಲ; ಮಧ್ಯಮ ತರಗತಿಯ ಜನರ ಜೀವನದ ಹೋರಾಟವೂ ಕಷ್ಟತರವಾಗಿ ಬಂದಿದೆ.

ರಿಟಾಯರ್ಡ ಜಿಲ್ಲಾ ರಿಜಿಸ್ಟ್ರಾರರಾದ ಮ| ರಾ| ರಾ| ಪಣಂಬೂರು ರಾಮಕೃಷ್ಣಯ್ಯನವರು ಶುಕ್ರವಾರ ದಿನ ವಿನಾ ಇತರ ದಿನ ಪೂರ್ವಾಹ್ನ ೭ ಘಂಟೆಯಿಂದ ೧೦ ಘಂಟೆ ತನಕ ಬರುವ ರೋಗಿಗಳಿಗೆ ಧರ್ಮಾರ್ಥವಾಗಿ ಆಯುರ್ವೇದಾನುಸಾರ ಚಿಕಿತ್ಸಾನುಭವ ಕೊಡುವರೆ ಸಿದ್ಧವಿರುವಂತಾಗಿ ಪ್ರಕಟಿಸಿರುವರು.

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಪ್ರಾಕ್ಟಿಸಿಂಗ್ ಶಾಲೆಯ ಹೆಡ್ ಮಾಸ್ತರರಾದ ರಾ| ಎಸ್. ರಘುನಾಥರಾವ್‌ರವರು ಒಂದು ತಿಂಗಳ ಪ್ರಿವಿಲೇಜ್ ರಜೆ ತಕ್ಕೊಂಡಿರುವದರಿಂದ ಸದರಿ ಶಾಲೆಯ I ಅಸಿಸ್ಟಾಂಟರಾದ ರಾ| ಯು. ಮಂಗೇಶರಾಯರು ಆಕ್ಟಿಂಗ್ ಹೆಡ್ ಮಾಸ್ತರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟ ಫೋರೆಸ್ಟ ಆಫೀಸರರಾದ ಮೆ| ಜೆ. ಎಚ್. ಲೊಂಗ್‌ರಿಗರವರು ೨೩ ದಿವಸಗಳ ರಜೆ ತಕ್ಕೊಂಡಿರುವದರಿಂದ ಮಂಗಳೂರು ಉತ್ತರದ ಡಿಸ್ಟ್ರಿಕ್ಟ ಫೋರೆಸ್ಟ ಆಫೀಸರರಾದ ರಾ| ಜೆ. ಸದಾಶಿವ ಅಯ್ಯರರು ಮೆ| ಲೊಂಗ್‌ರಿಗರ ಚಾರ್ಜನ್ನೂ ನೋಡಬೇಕಾಗಿರುವದು.

ಇದೇ ತಾ. ೯ನೇ ಬ್ರಹಸ್ಪತಿವಾರ ಇಲ್ಲಿಂದ ಮೈಲ್ ಟ್ರೇನು ಹೊರಡುವ ಹೊತ್ತಿಗೆ ಒಂದು ಅನಾಹುತವು ನಡೆಯಿತು. ಟ್ರೈನಿನ ಬೊಯ್ಲರಿನ ಗುಡದಿಯು ಹಾರಿ ಕುದಿಯುತ್ತಿದ್ದ ಸೀಸವು ಹೊರಗೆ ಬಂದು ಟ್ರೇನಿನಲ್ಲಿ ಕೆಲಸಕ್ಕಿದ್ದ ಪೋಕ್ಕರ್ ಎಂಬ ಮಾಪಿಳ್ಳಾ ಲ್ಯಾಟರನಿಗೆ ತಗಲಿತು. ಅವನು ತಕ್ಷಣ ಮೂರ್ಛೆ ಹೊಂದಿದನು. ಅವನನ್ನು ಶೈತೋಪಚಾರ ಬಗ್ಗೆ ಆಸ್ಪತ್ರಿಗೆ ಕೊಂಡುಹೋದರು. ಮರುದಿನ ಅವನು ಸತ್ತುಹೋದನು. ಟ್ರೇನಿನ ಫಾಯರ್ ಮೇನ್ ರಾಮಣ್ಣ ಎಂಬವರಿಗೂ ಈ ಉರಿಯುವ ಸೀಸದಾಗಿ ಜಕಂ ಆಗಿರುತ್ತದೆ. ಆದರೆ ದೈವವಶಾತ್ ಅಪಾಯವಾಗಲಿಲ್ಲ. ಹೀಗೆ ಆ ದಿನ ಮಂಗಳೂರಿಂದ ಟ್ರೈನ್ ಹೊರಡುವಾಗ ಅರ್ಧ ಗಂಟೆ ವಿಳಂಬವಾಯಿತು.

ಕಳೆದ ಶನಿವಾರ ಶಾಲೆಗಳ ಜಿಮ್ನ್ಯಾಸ್ಟಿಕ್ ಮೇಲಾಟವು ನಡೆಯಿತು. ಸೀನಿಯರ್ ವಿದ್ಯಾರ್ಥಿಗಳಲ್ಲಿ ಗವರ್ನಮೆಂಟ ಕಾಲೇಜಿಯವರೂ, ಜೂನಿಯರ್ ವಿದ್ಯಾರ್ಥಿಗಳಲ್ಲಿ ಇಲ್ಲಿಯ ಗಣಪತಿ ಸೆಕಂಡರಿ ಶಾಲೆಯವರೂ ಗೆದ್ದರು. ಈ ಸಾರಿ ಉಡ್ಪಿ ಶಾಲೆಯ ಜೂನಿಯರ್ ವಿದ್ಯಾರ್ಥಿಗಳೂ ಈ ಜಿಮ್ನ್ಯಾಸ್ಟಿಕ್ ಮೇಲಾಟಕ್ಕೆ ಉಡ್ಪಿಯಿಂದ ಬಂದಿದ್ದರು. ಈ ಪೈಕಿ ೯ ವರ್ಷ ವಯಸ್ಸಿನ ಇಬ್ಬರು ವಿದ್ಯಾರ್ಥಿಗಳು ಆಡಿ ತೋರಿಸಿದ ಜಿಮ್ನ್ಯಾಸ್ಟಿಕ್ ಆಟಗಳು ಪ್ರೇಕ್ಷಕರನ್ನು ಆಶ್ಚರ್ಯಗೊಳಿಸುವಂಥಾವಾಗಿದ್ದವು.

ನಿನ್ನೆಯ ದಿನ ವಿದ್ಯಾರ್ಥಿಗಳ ಇಂಟರ್‌ಸ್ಕೂಲ್ ಜಿಮ್ಖಾನವು ನಡೆಯಿತು. ಜೂನಿಯರ್ ವಿದ್ಯಾರ್ಥಿಗಳೊಳಗೆ ನಡೆದ ಈ ಆಟಗಳಲ್ಲಿ ಸೈಂಟ-ಅಲೋಷಿಯಸ್ ಕಾಲೇಜಿನವರು ಗೆದ್ದುಕೊಂಡರು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ೧೬ನೇ ಬ್ರಹಸ್ಪತಿವಾರ ಬಾಸೆಲ್ ಮಿಶ್ಯನ್ ಸಭೆಯ ೮೦ನೇ ವಾರ್ಷಿಕೋತ್ಸವವು ಬಲ್ಮಠದಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಈ ಉತ್ಸವಕ್ಕೆ ದಕ್ಷಿಣಕನ್ನಡ, ಉತ್ತರಕನ್ನಡ, ಕೊಡಗು ಪ್ರಾಂತ್ಯಗಳ ಕ್ರೈಸ್ತರಲ್ಲನೇಕರೂ ಸಭಾ ಅಧಿಕಾರಿಗಳೂ ಬಂದಿದ್ದರು. ಬೆಳಿಗ್ಗೆ ದೇವಾಲಯದಲ್ಲಿ ದೇವತಾ ಪ್ರಾರ್ಥನೆಗಳು ಜರಗಿದವು. ನಮ್ಮ ಬ್ರಿಟಿಷ ಸಾಮ್ರಾಜ್ಯಕ್ಕೂ ಮಿತ್ರ ರಾಜ್ಯಗಳಿಗೂ ಬೇಗನೇ ಜಯವಾಗಬೇಕೆಂಬದೇ ಈ ವರ್ಷದ ಪ್ರಾರ್ಥನೆಗಳ ಮುಖ್ಯ ಸಾರಾಂಶವಾಗಿದ್ದವು. ಮಧ್ಯಾನ್ಹ ೧ ಗಂಟೆಯಲ್ಲಿ ತಿರಿಗಿ ದೇವಾಲಯದಲ್ಲಿ ಸಭೆ ಕೂಡಿತು. ಸುಮಾರು ೨೦೦೦ ಮಿಕ್ಕಿದ ಪ್ರೇಕ್ಷಕರು ಕೂಡಿ ಬಂದಿದ್ದರು. ಬಾಸೆಲ್ ಮಿಶ್ಯನಿನ ಪ್ರೆಸಿಡೆಂಟರಾಗಿರುವ ರೆವೆರೆಂಡ್ ಬಿ. ಲೂಥಿ ದೊರೆಗಳವರು ಪ್ರಥಮತಾ ಭಾಷಣವನ್ನು ಮಾಡಿ ಕ್ರೈಸ್ತ ಸಭೆಯಲ್ಲಿರುವ ಕುಂದುಕೊರತೆಗಳನ್ನು ತೋರಿಸಿಕೊಟ್ಟರು. ಅನಂತರ ಇತರ ಪ್ರಾಂತ್ಯಗಳಿಂದ ಬಂದ ನಾಲ್ಕು ವೈದಿಕರು ಮಿಶ್ಯನ್ ಕೆಲಸದ ಸಂಬಂಧ ಭಾಷಣಗಳನ್ನು ಮಾಡಿದರು. ಕಡೆಗೆ ರೆವೆರೆಂಡ್ ಸತ್ಯವರತರವರು ಕೂಡಿ ಬಂದದ್ದ ಸಭಿಕರಲ್ಲಿ ಹೊಸ ಜೀವವನ್ನು ಮೂಡಿಸುವಂಥಾ ಒಂದು ಭಾಷಣವನ್ನು ಕೊಟ್ಟರು. ಕ್ರೈಸ್ತ ಸಭಿಕರು ಮಿಶ್ಯನರಿಗಳನ್ನು ಆದರಿಸಿಕೊಂಡು ನಡಿಯುವ ಮನಸ್ಸನ್ನು ಇನ್ನಾದರೂ ಬಿಡಬೇಕೆಂಬದೂ, ಇದೇ ಅದಕ್ಕೆ ತಕ್ಕಕಾಲವೆಂಬದೂ, ರೆವೆರೆಂಡ್ ಸತ್ಯವರತರ ಭಾಷಣದ ಮುಖ್ಯ ತಾತ್ಪರ್ಯಗಳಾಗಿದ್ದವು. ಮಧ್ಯೆ ಮಧ್ಯೆ ಗಾಯನ ಕೂಟದವರ ಗಾಯನಗಳು ಸಭಿಕರನ್ನು ಸಂತೋಷಗೊಳಿಸಿದ್ದವು. ಹೀಗೆ ಈ ದಿನದ ಉತ್ಸವವು ಅಂತ್ಯವಾಯಿತು.

ಕಳೆದ ಶನಿವಾರ ದಿನ ಇಲ್ಲಿಯ ಡಿಸ್ಟ್ರಿಕ್ಟ ಮತ್ತು ಶೆಶ್ಯನ್ಸ ಜಡ್ಜರವರಾದ ಮೆ| ಕರ್ಗೆನ್‌ವೆನ್ ದೊರೆಗಳವರು ಒಂದು ವನವಿಹಾರವನ್ನು ಜರಗಿಸಿದ್ದರು. ಈ ವನವಿಹಾರಕ್ಕೆ ಪಟ್ಟಣದ ಅನೇಕ ಮಾನ್ಯ ಗೃಹಸ್ಥರನ್ನೂ ಎಲ್ಲಾ ವಕೀಲರನ್ನೂ ಆಮಂತ್ರಿಸಿದ್ದರು. ನಿಯಮಿತ ಕಾಲದಲ್ಲಿ ಆಮಂತ್ರಿತರೆಲ್ಲಾ ಕೂಡಿಬಂದು ಜಡ್ಜ ದೊರೆಗಳವರಿಂದ ತಕ್ಕ ಉಪಚಾರವನ್ನು ಪಡೆದು ಬಹಳ ಸಂತೋಷಪಟ್ಟರು. ವಿವಿಧ ವಿನೋದ ಆಟಗಳೂ, ಕಡೆಗೆ ಒಂದು ನಾಟಕವೂ ನಡೆದ ನಂತರ ಅಭ್ಯಾಗತರೆಲ್ಲರೂ ತಂತಮ್ಮ ಮನೆಗೆ ತೆರಳಿದರು.

ಬರುವ ವಾರ ಡಿಸ್ಟ್ರಿಕ್ಟ ಮತ್ತು ಸೆಶ್ಯನ್ಸ ಜಡ್ಜರಾದ ಮೆ| ಕರ್ಗೆನ್‌ವೆನ್ ದೊರೆಗಳವರು ಉಡ್ಪಿ ಕುಂದಾಪುರ ಅತ್ತಕಡೆ ಸರ್ಕಿಟಿಗೆ ಹೋಗುವರೆಂತ ತಿಳಿದುಬರುತ್ತದೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಜೀನಸು ಧಾರಣೆ.

(ರಖಂ).

ಮಸ್ಕತಿ ಅಕ್ಕಿ . . .	7— 6—0ರಿಂದ	7—10—0
ಗುಡ್ಡು ,, ,,	7— 0—0	7— 4—0
ಊಚು ಸುಗ್ಗಿ ,,	7— 0—0	7— 5—0
ಹೊಸ ರಾಶಿ ,,	5— 2—0	5— 6—0
ಅವ್ವಲ್ ಬೆಳ್ತಿಗೆ ,,	6— 4—0	6—10—0
ಗುಡು ಬೆಳ್ತಿಗೆ ,,	5—12—0	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	10— 4—0	10— 8—0
ಗೋಧಿ ಗೋಣಿ ೧ರ . .	11— 4—0	12— 0—0
ಹುರುಳಿ ಗೋಣಿ ೧ರ . .	5—14—0	6— 0—0
ಕಡಲೆ ಗೋಣಿ ೧ರ ಬೊಂಬೈ	8—12—0	9— 8—0
ತೊಗರಿ ಗೋಣಿ ೧ರ		10— 8—0
ತೊಗರಿ ಬೇಳೆ ಗೋಣಿ ೧ರ .	12— 8—0	15— 8—0
ಉದ್ದು ಗೋಣಿ ೧ರ . .	10— 8—0	11— 4—0
ಊರುಬೆಲ ಖಂಡಿ ೧ರ . . .		50— 0—0
ಉಪ್ಪು ಗೋಣಿ ೧ರ. . . .		4— 6—0
ಕೊಬ್ರಿ ಖಂಡಿ ೧ರ . .	95— 0—0	105—8—0
ಕೊಬ್ರಿಹಿಂಡಿ ಖಂಡಿ ೧ರ		26— 0—0
ಎಳ್ಹಿಂಡಿ ಖಂಡಿ ೧ರ ಬೊಂಬೈ	25— 0—0	31— 4—0
ಕೊಬ್ರಿ ಎಣ್ಣೆ ಮಣ ೧ರ. .	7— 4—0	7— 8—0
ಎಳ್ಳೆಣ್ಣೆ ಮಣ ೧ರ(ಕುರಾಸನ) . . .		4—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	6— 0—0	6—11—0
ಮೋರಿಸ್ ಸಕ್ಕರೆ ಮಣ ೧ರ . . .		5—12—0
ಕಾಫಿ ಖಂಡಿ ೧ರ . .	225— 0—0	235—0—0
ಹೊಸ[illegible] ಖಂಡಿ ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ	2—15—6	3— 9—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	26— 0—0	27— 0—0
ತಾಂಬ್ರ ಪಾತ್ರೆಗಳು ಮಣ ೧ರ . .		28— 0—0
ಜೀನಿ ಬೆಳ್ಳಿ ತೀರು ೧ರ		24— 0—0
ಪಚ್ಚೆಹೆಸರು ಮುಡಿ ೧ರ .	5— 1—0	5— 2—0
ಕಾಳುಮೆಣಸು ಖಂಡಿ ೧ಕ್ಕೆ		260—0—0

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಹುನಾತಿಗೂ ವೈದ್ಯರ ಸಹಾಯವನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

SREE SITHA RAGHAVA VAIDYA SALA MYSORE

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಅಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ. ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— **ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಛಳಿಕಾಲ! **(Best Shwals)** ಭಯವಿಲ್ಲ!!

ಮೇಲಾದ ಶಾಲುಗಳು.

ಈ ಚಿತ್ರದಲ್ಲಿ ಇದ್ದ ಶಾಲು ಸೀಮೆಯಿಂದ ತರಿಸಿ ಇರುತ್ತೇವೆ. ಇದು ಛಳಿಕಾಲಕ್ಕೂ ಮಳೆಕಾಲಕ್ಕೂ ಹಿಮಕ್ಕೂ ಮೈ ಮೇಲೆ ಹಾಕಿಕೊಳ್ಳಬಹುದು. ಇದು ನೋಡುವದಕ್ಕೆ ಥಡುಲ್ ಆಗಿಯೂ ಬೆಲೆ ಸುಲಭವಾಗಿಯೂ ಎರಡು ವಿಧವಾದ ರಂಗಿನಲ್ಲಿ ತಯಾರಿಸಲ್ಪಟ್ಟದ್ದು. ಹೊಸ ನಮೂನೆ ಶಾಲು. ಇದುವರೆಗೂ ಇಂಡಿಯಾ ದೇಶಕ್ಕೂ ಬರಲಿಲ್ಲ. ಇದು ನಮಗಾಗಿ ಸೀಮೆಯಲ್ಲಿ ತಯಾರಿಸಿ ಕಳುಹಿಸಿರುತ್ತಾರೆ. ಇದರ ಅಂಚಿನಲ್ಲಿ ವಿಚಿತ್ರ ಕೆಲಸದಿಂದ ಮಾಡಿರುತ್ತೆ. ಬಣ್ಣ ಗ್ಯಾರಂಟಿ. ಎಲ್ಲರೂ ಕೊಂಡುಕೊಳ್ಳಬೇಕೆಂಬ ಪ್ರೋತ್ಸಾಹದಿಂದ ಪ್ರಚುರಪಡಿಸಿ ಇರುತ್ತೇವೆ. ಈ ಸಮಯ ಬಿಟ್ಟರೆ ಸಿಕ್ಕಲಿಕ್ಕಿಲ್ಲ. ಜಾಗ್ರತೆ ತರಿಸಿಕೊಳ್ಳಿ.

1½ ಮೊಳ ಅಗಲ 6 ಮೊಳ ಉದ್ದ ಇದ್ದ ಶಾಲು 1ಕ್ಕೆ ರೂ. 2—8—0. ವಿ. ಪಿ. ಖರ್ಚು 0—6—0 ಪ್ರತ್ಯೇಕ.

ವ್ಯಾರಂ ಅಂಡು ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವ್ಯಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ.

ಈ ವರುಷಗಳು ಗ್ಯಾರಂಟಿ.

ಈ ಸುಂದರವಾದ ವಾಚ್ ಗೌರ್ನ್ಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಇನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ವಾಜಾಗಿಯೂ ಇಂಜಿನ್‌ಸ್ಟಾಂಪು ಹಾಕಿಯೂ ಇರುವದು.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಸುಸೈಗೂನಲ್ಲಿ ಚಿನ್ನದ ಮೆಡಲ್ ಹೊಂದಿ ಪ್ರಸಿದ್ಧವಾದ ಅಮೃತಸಂಜೀವಿನಿ ಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಅಣೆ ಮಾತ್ರ. ಪೋಸ್ಟು ಚಾರ್ಜು 4 ಅಣೆ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು ಮನಸ್ಸಿಗೆ ಸಂತೋಷವನ್ನು ಧೈರ್ಯವನ್ನು ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— **ವಿನಾಯಕರ್ ಅಂಡ್ ಕಂಪೆನಿ, 154 ಟಂಕಸಾಲೆ ಬೀದಿ, ಮದರಾಸ್.**

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

ಸಪ್ತಶತೀ. ಕನ್ನಡಾಕ್ಷರ, ರೇಶ್ಮೆ ಬೈಂಡ್, ಪಾಕೇಟ್ ಸ್ಯಾಜು ಪಾರಾಯಣಕ್ಕೂ ಅತ್ಯುಪಯೋಗವಾಗುವಂತೆ ಎಲ್ಲಾ ವಿಧಾನದಿಂದೊಡಗೂಡಿದೆ. ಬೆಲೆ ಪುಸ್ತಕ ೧ಕ್ಕೆ ೯ ಆಣೆ. ಪೋಸ್ಟು ಖರ್ಚು ಬೇರೆ.

ವಿಳಾಸ:—

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ.

ದಿವ್ಯಾಂಜನ. Divyanjan. *(Regd.)*

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಬರುವುದು, ಉಳುಕು, ಉರಿ, ಶಿರಶ್ಶೂಲ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ. ಇಡೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಮಕವಚ	0	2	0
ದೇವಪೂಜಾ ಪದ್ಧತಿ	0	3	0	ಚರಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೨ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣು ಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣು ಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತೆ	0	1	6	ಕಾಲಿಕನ್ಯೋಪದೇಶ	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ	0	4	0

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

..................। ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂಚಾಂಗವರ್ಧನಂ । ಕಾಸಶ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತೇ ॥

ಸ್ತ್ರೀಷುಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ಪೂರ್ವಮಪಾಸ್ಯರೂಪಂ । ಬಿಭರ್ತಿರೂಪಂ ನವಯೌವನಸ್ಯ ।
ಜೀವನಾನಂದಸ್ಯಾಶ್ಯನರಃ ಪ್ರಯೋಗಾಲ್ಲಭೇತ ಜೀರ್ಣೋರಪಿಕುಟೀಪ್ರವೇಶಾತ್ ॥

"......ವಿಕೃತಸ್ವರ, ಅನ್ನಕೋಶದ ರೋಗಗಳು, (ಅಜೀರ್ಣ ಮುಂತಾದ್ದು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ, ಮುದುಕರಿಗೆ, ಮಕ್ಕಳಿಗೆ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣಪಡಿಸುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿತವಾಗುವಂತೆ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತುವನ್ನು ಪೂರ್ಣ ಗಟ್ಟಿಪಡಿಸುವುದೇ ಮುಂತಾದವಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನ ನವಯೌವನತರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ವೇಶ್ಯಾಲ್ಯಂಪಟನಾಗಿ ಕೆಲಸಕ್ಕೆ ಭಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿಸಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅದರ ಸಂಗಡಲೇ ಜ್ವರ, ಕೆಮ್ಮು, ಎರಚುಳು, ತಲೆನೋವು ಸರ್ಪ ಕಡಿತಗಳಿಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.
ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).

ತಂತೀ ಎಡ್ರೆಸ್:— ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ಹಿಂದುಸ್ಥಾನ, ಬರ್ಮಾ, ಸೀಲೋನ್ ಮೊದಲಾದ ದೇಶಗಳಲ್ಲಿ ಪ್ರಖ್ಯಾತಿ ಪಡೆದ



ವೆಸ್ಟ್ ಎಂಡ್ ವಾಚು ಕಂಪೆನಿಯ ವಾಚುಗಳು.

ಸರಿಯಾದ ಟೈಮ್ ಕೊಡುತ್ತದೆ.

		ನಿಕ್ಕಲ್ ಬೆಳ್ಳಿ. ಸಣ್ಣ 16 ಸ್ಯಾಜು.			ಓಪನ್ ಪೆಸ್. ಮಿಡಿಯಂ 18 ಸ್ಯಾಜು.		
ನಂಬ್ರ	1	12	0	0	11	0	0
,,	2	13	0	0	12	0	0
,,	3	9	0	0	8	4	0
,,	4×	10	0	0	10	0	0
,,	5 A ಫುಲ್ ಜುವೆಲ್	14	0	0	14	0	0
,,	6 ಕಂಪಿಟಿಷನ್	18	0	0	18	0	0
,,	7 ಸಿವಿಲ್	22	0	0	22	0	0
,,	8 ಕ್ವೀನ್ ಎನ್ ಪೋಕೆಟ್ ಸ್ಯಾಜು	15	8	0			
	ಮತ್ತು ರಿಸ್ಟ್ ವಾಚು	15	8	0			
,,	9 ರಿಸ್ಟ್ ವಾಚು ಬೆಳ್ಳಿ ಕೇಸು	30	0	0			
	ರೋಲ್ಡ್ ಗೋಲ್ಡ್ ಕೇಸ್	30	0	0			
	9 ಕೆರಟ್ ಗೋಲ್ಡ್	40	0	0			
	14 ,, ,,	50	0	0			
,,	10. ಬೆರಲ್ ಕೇಸ್ ರಿಸ್ಟ್ ವಾಚು ನ್ಯೂ ಪೇಟೆಂಟ್ ಲಿವರ್ ಮೆಶಿನ್						
	11 ಸ್ಯಾಜ್. ಬೆಳ್ಳಿ	46	0	0			
	18 ಕೆರಟ್ ಗೋಲ್ಡ್	150	0	0			

ಮೇಲೆ ಹೇಳಿದ ಚಿನ್ನ ಮತ್ತು ಬೆಳ್ಳಿ ವಾಚುಗಳಲ್ಲದೆ ಇನ್ನು ಹಲವು ತರದ ವಾಚುಗಳೂ ಅವುಗಳ ಸಾಮಾನುಗಳೂ ನಮ್ಮಲ್ಲಿ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರಕುವದು. ಪರಸ್ಥಳದ ಆರ್ಡರುಗಳು ವಿ. ಪಿ. ಮೂಲಕ ಕಳುಹಿಸೋಣಾಗುವದು. ವಿ. ಪಿ. 6 ಆಣೆ ಹೆಚ್ಚಿಗೆ. ಅರ್ಧ ಆಣೆಯ ಸ್ಟಾಂಪು ಕಳುಹಿಸಿದರೆ ಕ್ರಯ ಪಟ್ಟಿ ಕಳುಹಿಸಿಕೊಡಬಹುದು.

ವಿಳಾಸ:— **N. GOPALJEE,**
Watch maker.
JOOMA MASJID SHEIK MEMON STREET,
BOMBAY 2.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ!!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲ ಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಒಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಅದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ಕಾರ್ಕಳದಿಂದ ಒಬ್ಬ ಮಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ:— ಟೂರಕಬ್ ಸೇವಿಸಿ 6 ವರ್ಷಗಳಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ಪರಿಹಾರವಾಗಿರುತ್ತದೆ. ಇತ್ಯಾದಿ.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು,

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು. ಮಂಗಳೂರು.

"ಅನೇಕಾಂಜನಗಳು ಪ್ರತಿಸೃಷ್ಟಿಯಾಗಿರುವವು"

ಪಂಚಭಾಷೆಗಳಲ್ಲಿರುವ ಚೀಟಿಯನ್ನು ನೋಡಿಕೊಂಡರೆ ಮೋಸವಾಗಲಾರದು.

ಅಮೃತಾಂಜನವೇ ದಿವ್ಯಾಂಜನ.

ಅಮೃತಾಂಜನ ಎಲ್ಲಾ ನೋವಿಗೂ ಸಿದ್ಧೌಷಧ. ತಲೆನೋವು, ಕೀಲುಹೊಡತ, ವಾಯುನೋವು, ಪಕ್ಕೆವಾತಕ್ಕೆ, ಚಳುಕು, ಊದು, ಪಕ್ಕೆನೋವು, ಚೇಳುಕಡಿತ, ಉಬ್ಬಸ, ಕೆಮ್ಮಲು, ನೈತ್ಯ, ಹುಣ್ಣು ಮತ್ತು ಎಲ್ಲಾ ತರದ ಜಖಂಗಳಿಗೆ ಅಮೃತಾಂಜನವೇ ಪರಮೌಷಧ. ಸಾವಿರಾರು ಮಂದಿ ಹೊಗಳಿ ಬರೆಯುತ್ತಾರೆ. ಸೊಗಸಾದ ಡಬ್ಬಿ ಸಹಿತ ಕ್ರಯ 0—8—0. 12 ಡಬ್ಬಿಗಳಿಗೆ ಕ್ರಯ ರೂ. 5—0—0. ಪರಸ್ಥಳಗಳಿಗೆ ವಿ. ಪಿ ಯಿಂದಲೂ ರವಾನಿಸುತ್ತೇವೆ.

ಗಜಕರ್ಣ ಮುಲಾಮು ಡಬ್ಬಿ 1ರ ಬೆಲೆ 0—6—0.

ದಂತಧಾವನ ಡಬ್ಬಿ 1ರ ಬೆಲೆ 0—2—0.

ರಖಮಾಗಿಯೂ ಚಿಲ್ಲರೆಯಾಗಿಯೂ ದೊರೆಯುವ ಸ್ಥಳ—

ದಿ ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಾಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**

ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*

ಪೋಸ್ಟು ಪೊಳಲಿ, ದ. ಕ. POST POLALY, S. C.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಜಂತಿನ ಹುಳ ಔಷಧ:—ಕರಳಿನಲ್ಲಿ ಎಲ್ಲಾ ವಿಧವಾದ ಹುಳಗಳನ್ನು ಹೊರಪಡಿಸಿ ಜಂತುಗಳಿಂದುಂಟಾಗುವ ಭಾದೆಗಳನ್ನು ಪರಿಹಾರಮಾಡಿ ದೇಹಾರೋಗ್ಯವನ್ನುಂಟುಮಾಡುವದು. ಜಂತುಗಳು ಕರಳಿನಲ್ಲಿದ್ದರೆ ಅಡಿವಟ್ಟೆ ಭಾರವಾಗಿರುವದು. ಅಸುವಿಲ್ಲದಿರುವಿಕೆ, ಹೆಚ್ಚು ಹಸುವಾಗುವಂತೆ ತೆರುವದು, ಊಟಮಾಡಿದ ನಂತರ ಹೊಟ್ಟೆಸುಳಿಯುವದು, ವಿರೋಚನೆಯಾಗುವದು, ಬಾಯಿಯಲ್ಲಿ ಕೆಟ್ಟವಾಸನೆ, ವಾಂತಿ, ವಾಕರಿಕೆ, ಜ್ವರ, ತಲೆಸೂಲೆ, ಮೂಗಿನಲ್ಲಿ ಮತ್ತು ಆಸನದಲ್ಲಿ ನವೆ, ನಾಲಿಗೆ ಸೆಳಕೊಳ್ಳುವದು. ಕೆಲಸಮಯದಲ್ಲಿ ಮಲಭಂಧವಾಗುವದು, ಕೆಲಸಮಯದಲ್ಲಿ ವಿರೋಚನೆಯಾಗುವದು ಮುಂತಾದ ಜಂತುಗಳಿಂದುಂಟಾಗತಕ್ಕ ವ್ಯಾಧಿಗಳನ್ನು ಸ್ವಸ್ಥಪಡಿಸುವದು. ಕ್ರಯ ಬುಡ್ಡಿ 1ಕ್ಕೆ 10 ಆಣೆಗಳು. 1ರಿಂದ 12 ಬುಡ್ಡಿಗಳವರೆಗೆ ವಿ. ಪಿ. ಖರ್ಚು 5 ಆಣೆ ಬೀಳುವದು.

ಓಮಂ ವಾಟರ್:—ಇದು ಸಾಧಾರಣವಾಗಿ ಅಂಗಡಿಗಳಲ್ಲಿ ದೊಡ್ಡ ಬುಡ್ಡಿಗಳಲ್ಲಿ ಇರುವ ಓಮಂ ವಾಟರಲ್ಲ. ನಮ್ಮಿಂದ ತಯಾರಾಗುವ ಓಮಂ ವಾಟರ್ ಅರ್ಧ ಔನ್ಸು ಬುಡ್ಡಿಗಳಲ್ಲಿ ಮಾರುತ್ತಲಿರುವದು. ಈ ಚಿಕ್ಕ ಬುಡ್ಡಿಯಲ್ಲಿರುವ ದ್ರಾವಕವನ್ನು 24 ಔನ್ಸು ನೀರಿನಲ್ಲಿ ಮಿಶ್ರಯಿಸಿದರೆ ಅಂಗಡಿಗಳಲ್ಲಿ ಇರುವ ಓಮವಾಟರನ್ನು ಬಿಡಲು ಅತಿ ಶ್ಲಾಘನೀಯವಾದ ಓಮಂ ವಾಟರಾಗುವದು:—ಇದನ್ನು ಹೊಟ್ಟೆ ಉಬ್ಬರ ಹೊಟ್ಟೆನುಲಿ, ಅಗ್ನಿಮಂದ, ಅಜೀರ್ಣಬೇಧಿ ಇದುಗಳಿಗೆ ಕೊಟ್ಟಲ್ಲಿ ತಕ್ಷಣ ಗುಣ ಕೊಡುವದು, ಜೀರ್ಣಶಕ್ತಿಯನ್ನತಿಕರಿಸುವದು, ಕಾಲರಾ ಎಂಬುವ ಮಾರಿ ಉಪದ್ರಕ್ಕೆ ಕೊಡತಕ್ಕ ಗುಣವನ್ನು ಕಂಡಿರುತ್ತೇವೆ. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು 5 ಆಣೆಗಳು ಬೀಳುವದು.

ಬಿಳಿ ಕೂದಲು ಕಪ್ಪುಮಾಡುವ ಕಷಾಯ:—ಬುಡ್ಡಿ ಸಂಗಡ ಸುತ್ತಿ ಇರುವ ದೈರಕ್ಷನಿನಲ್ಲಿ ಹೇಳಿದ ಹಾಗೆ ಉಪಯೋಗಿಸಿದಲ್ಲಿ ಬಿಳಿ ಕೂದಲು ಮತ್ತು ಕೆಂಪು ಕೂದಲು ನರೆಯಲು ಮುಂದಿದ್ದಂತೆ ಕಪ್ಪು ಬಣ್ಣವು ಮತ್ತು ಅತಿ ಕಾಂತಿಯಾಗುವದು. ಇದರ ಉಪಯೋಗದಿಂದ ಮುಖ ಲಕ್ಷಣವು ಮತ್ತು ವಶೀಕರವು ಉಂಟಾಗುವದಲ್ಲದೆ ಮುದುಕರು ಸಹ ಬಾಲ್ಯರ ಹಾಗೆ ಕಾಣುವರು. ಕ್ರಯ ಬುಡ್ಡಿ 1ಕ್ಕೆ ರೂ. 1. 1ರಿಂದ 6 ಬುಡ್ಡಿ ರವಾನಿಸಲು ವಿ. ಪಿ. ಖರ್ಚು 5 ಆಣೆ ಬೀಳುವದು.

ಅತ್ಯುತ್ತಮವಾದ ಗೋರೋಜನ ತೊಲೆ 1ಕ್ಕೆ ರೂ: 6; ಅತ್ಯುತ್ತಮವಾದ ಕುಂಕುಮ ಕೇಸರಿ ತೊಲೆ 1ಕ್ಕೆ ರೂ. 1; ಅತ್ಯುತ್ತಮವಾದ ಪಚ್ಚೆ ಕರ್ಪೂರ ತೊಲೆ 1ಕ್ಕೆ ರೂ. 2.

ಅಪೂರ್ವ ಸುವಾಸನಾ ದ್ರವ್ಯಗಳು:— ಅಮೂಲ್ಯವಾದ ಗುಲಾಬಿ ಅತ್ತರು, ಮಲ್ಲಿಗೆ, ಕಸಕಸ, ತಾಳಿಹೂವು, ದವನ, ಜಾಜಿ, ಸಂಭಾಗ್, ಹೀನಾ ಇವೆಲ್ಲಾ ತೊಲೆ 1ಕ್ಕೆ ರೂ. 1—8—0 ಪ್ರಕಾರ ದೊರಕುತ್ತವೆ. ವಿ. ಪಿ. ಚಾರ್ಜು ಪ್ರತ್ಯೇಕ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY.

Ayurvedic Pharmacy,

Sri Perumalkoil,

SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,

ಆಯುರ್ವೇದ ಔಷಧಶಾಲ,

ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,

ಸನ್ನದಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಪಡಿಸಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: ಓರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.
ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳೆತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಶಮನವಾಗುತ್ತವೆ. ೧೦–೨೫ ವರ್ಷಗಳ ಹಳೆತ, ಮೈಮುನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ—ಅದರೆಲ್ಲಾ ದೋಷಗಳಷ್ಟು ಶಮನವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಮೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಇದನ್ನು ಅವಶ್ಯವಾಗಿ ನೋಡಿ.

ಹೊಸ ನಮೂನೆ ಗಡಿಯಾರ! ಹೊಸ ನಮೂನೆ ಗಡಿಯಾರ!!

ಮುಂಚಿನ ಬೆಲೆ ರೂ. 4. ಈಗ ರೂ. 2.

ಲೇಡಿಸ್ ಪಾಕೆಟ್ ವಾಚ್.

ಈ ನಕ್ಷೆಯಲ್ಲಿ ಇದ್ದ ಗಡಿಯಾರವನ್ನು ನಮ್ಮ ಸ್ವಂತ ಆರ್ಡರ್ ಮೇಲೆ ಸೀಮೆಯಿಂದ ತರಿಸಿ ಇರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಇಂಡಿಯಾ ದೇಶದಲ್ಲಿ ಅನೇಕ ಗಡಿಯಾರಗಳು ಖರ್ಚಾಗಿಯದೆ. ಇದು ನೋಡುವದಕ್ಕೆ ಸೊಗಸಾಗಿಯೂ ಇದೆ. ಗಂಟೆ ಸರಿಯಾಗಿ ತೋರಿಸುವದು. ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವದಕ್ಕಾಗಿ ಇದೇ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೂ. 4—0—0 ಗಡಿಯಾರವನ್ನು ರೂ. 2—0—0 ಕೊಡುವೆವು. ಜಾಗ್ರತೆ ತರಿಸಿಕೊಳ್ಳಿ.



ವಿಳಾಸ:— ಥಾಪ್ ವಾಚ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನಸ್ಖಲಿತವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಪಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ನೆಲ್ಲ ಕೈಗಂಟಾಗಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು — ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ-ಕೇಶವಜಿ,
ಆಯುರ್ವೇದೋದಯ ಔಷಧಾಲಯ,
20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ. ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,
Ayurvedodaya Aushadhalaya,
20, CHINA BAZAAR ROAD, MADRAS.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	343,389—5—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ನಿಯಮಿತ ಮೂಲ ಧನವು ರೂಪಾಯಿ.	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	343,389—5—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲಿಕರಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮೇಲ್ಪಟ್ಟ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st. November 1916

P. Gopal Nak,
Secretary.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಲಂಕಾರ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬೆಳ್ಳಿಯ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯುವ ಮೂತ್ರವನ್ನು ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯಲ್ಲಿ ಅತ್ಯುತ್ತಮವು. ಸಾತ್ವಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಹುದಿನದ ಪ್ಲೀಹದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಕ್ಕಿಂತ ಸೊಗಸಾದ ಹಲ್ಲು ಪುಡಿ. ಅನೇಕ ಪ್ರಶಸ್ತ ಪದಾರ್ಥಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ—ಪಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗೆ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಾಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಜಡಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ., ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಆಯುರ್ವೇದೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ಕನ್ನಡದಿಂದ ಅಥವಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

P. M. Nath & Co., *Ayurvedic Chemists,*
Vepery Post, MADRAS.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತ್ತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮೆ। ಜೋರ್ಜ್‌ಕಿಂಗ್ ಎಫ್. ಎಸ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೆತ್ತ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

ಮೈಸೂರು ಊದುಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದುಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡ್ರ್ಯ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈ ಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝುಪರಪುರ, ಬರಿಯುವದೇನಂದ್ರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್,

ಮಂಗಳೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ, ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲೆಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. Kately & Co.

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Rombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮುಖ್ಯಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಪಾತುಪಾತಿಗೂ ವೈದ್ಯರ ಸಹಾಯವನು ಕಾದು ನೋಡಿಯಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಹೆಟ್ಟಿಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಡಬ್ಬಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—9—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ರಾ| ರಾ| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಡಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ವಿಷಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ರಾ| ರಾ| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ಬಿಕರಿಸುವ ಶಿರೋತೈಲಗಳು (ಹೇರ್‌ಆಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157 ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael, & Co.,** *Mangalore.*

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಸಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನೂ ಬಿಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ. ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ಧಪೆ ೨ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಕಾರ್ತಿಕ ಬ. ೧೫ ಶುಕ್ರವಾರ.

ಮೈಸೂರು ಸಂಸ್ಥಾನದ ಒಂದು ಅನುಕರಣೀಯವಾದ ಸಂಗತಿ.

ಬ್ರಿಟಿಷ ಹಿಂದೂಸ್ಥಾನದ ಪ್ರಜೆಗಳು ಈಗ ೩೦-೩೫ ವರ್ಷಗಳಿಂದ ರಾಷ್ಟ್ರೀಯ ಸಭೆಯ ದ್ವಾರಾ ಹಲವು ಬಗೆಯ ರಾಜಕೀಯ ಸುಧಾರಣೆಗಳನ್ನು ಕೇಳುತ್ತಿದ್ದಾರೆ. ರಾಷ್ಟ್ರೀಯ ಸಭೆಯವರು ಕೇಳುತ್ತಿರುವ ಸುಧಾರಣೆಗಳಲ್ಲಿ ಒಂದಾದ ಸಂಗತಿಯು ಯಾವುದೆಂದರೆ—ನ್ಯಾಯಖಾತೆ ಮತ್ತು ಅಮ್ಮಲಬಜಾವಣೆಯ ಎಂದರೆ ದಂಡಾಧಿಕಾರದ ಖಾತೆ ಇವು ಬೇರೆಬೇರೆಯಾಗಿರಬೇಕು. ಈ ಎರಡು ಅಧಿಕಾರಗಳು—ನ್ಯಾಯಾಧಿಕಾರ ಹಾಗು ದಂಡಾಧಿಕಾರ ಇವು ಒಂದೇ ವ್ಯಕ್ತಿಯಲ್ಲಿರುವುದು ಹಿತವಲ್ಲ. ೧೮೮೭ನೆ ಇಸವಿಯಲ್ಲಿ ಮದ್ರಾಸಿನಲ್ಲಿ ಜರಗಿದ ರಾಷ್ಟ್ರೀಯ ಸಭೆಯಲ್ಲಿ ಈ ವಿಷಯವಾಗಿ ಒಂದು ನಿರ್ಣಯವು ಪಾಸಾಗಿತ್ತು; ಆಗ ಮಾತ್ರವಲ್ಲ, ಅಂದಿನಿಂದ ಈವರೆಗೆ ಈ ಉಚ್ಛಿಷ್ಟ ಸ್ವರೂಪದ ಹಳೆ ನಿರ್ಣಯವು ರಾಷ್ಟ್ರೀಯ ಸಭೆಯಲ್ಲಿ ಪ್ರತಿ ವರ್ಷ ಪಾಸಾಗುತ್ತಲೆ ಇದೆ. ಈ ರೀತಿಯಿಂದ ದೇಶದೊಳಗಿನ ಲೋಕಮತವು ನ್ಯಾಯದ ಮತ್ತು ದಂಡದ ಎರಡೂ ಅಧಿಕಾರಗಳು ಒಂದೇ ವ್ಯಕ್ತಿಯ ಕೈಯಲ್ಲಿರಕೂಡದೆಂದು ಹೇಳುತ್ತ ಬಂದಿರುವುದಾದರೂ ನಮ್ಮ ಸರಕಾರದ ಕಿವಿಯು ಅದರ ಕಡೆಗೆ ಹೋದುದು ಕಂಡುಬರುವುದಿಲ್ಲ. ನಮ್ಮ ಸರಕಾರವು ಇಷ್ಟರವರೆಗೆ ಈ ವಿಷಯದಲ್ಲಿ ಯಾವ ಸುಧಾರಣೆಯನ್ನು ಮಾಡದಿದ್ದರೂ ಬರೋಡಾ ಮೈಸೂರು ಮುಂತಾದ ಸಂಸ್ಥಾನಗಳಲ್ಲಿ ಈ ಬಗೆಯ ಸುಧಾರಣೆಗಳು ಆಗಹತ್ತಿವೆ. ಇದಾದರೂ ಒಂದು ಸುದೈವವೆಂತಲೇ ಹೇಳಬೇಕು. ರಾಷ್ಟ್ರೀಯ ಸಭೆಯು ಬಿತ್ತಿರುವ ಬೀಜಕ್ಕೆ ಬ್ರಿಟಿಷರ ಕೈಕೆಳಗಿನ ಪ್ರದೇಶದಲ್ಲಿ ಮೊಳಿಕೆ ಬಾರದಿದ್ದರೂ ದೇಶಿ ಸಂಸ್ಥಾನಗಳ ಭೂಮಿಯಲ್ಲಿ ಅದು ಬರುವಂತಾಗಿದೆ, ಅಲ್ಲ, ಬಂದಿದೆ; ಈ ವಿಷಯದಲ್ಲಿ ಬ್ರಿಟಿಷ ಪ್ರಜೆಗಳಿಗೆ ನಿಜವಾಗಿ ಹೊಟ್ಟೆಕಿಚ್ಚು ಆಗಬೇಕಾದುದಿಲ್ಲ. ತಿರಿಗಿ ಇದರಿಂದ ಅವರಿಗೆ ಸಮಾಧಾನವೇ ಉಂಟಾಗಬೇಕು. ನಮಗೆ ಬೇಕಾದ ಸೌಕರ್ಯಗಳು ನಮ್ಮಗೆ ಸಿಗಲಿಲ್ಲ. ನೆರೆಯವರ ಸೆರಗಿನಲ್ಲಿ ಹೆಚ್ಚಿನ ಪ್ರಯತ್ನವಿಲ್ಲದೆ ಬಿದ್ದವು ಎಂಬುದರಿಂದ ಯಾರಿಗಾದರೂ ಯಾಕೆ ಮತ್ಸರವಾಗಬೇಕು! ಈ ಹೊತ್ತು ಅವರ ಸೆರಗಿನಲ್ಲಿ ಬಿದ್ದರೆ ನಾಳೆ ನಮ್ಮ ಸರಕಾರವು ನಮ್ಮ ಜೇಬಿನಲ್ಲಿ ಇವೇ ರಾಜಕೀಯ ಸುಧಾರಣೆಗಳನ್ನು ಹಾಕಬಾರದೆಂತ ಉಂಟೇ? ಈ ವಿಧದಿಂದ ನಾವು ಸಮಾಧಾನಪಟ್ಟು ಆ ಸೌಕರ್ಯಗಳನ್ನು ಪಡೆದವರಿಗೆ ಧನ್ಯವಾದಗಳನ್ನೇ ಕೊಡಬೇಕು.

ಈ ಆಲೋಚನೆಗಳು ಈ ಹೊತ್ತು ಬರಲು ಕಾರಣವೇನೆಂದರೆ—ಮೈಸೂರ ಸಂಸ್ಥಾನದಲ್ಲಿ ನ್ಯಾಯ ಮತ್ತು ಅಮ್ಮಲಬಜಾವಣೆಯ ಖಾತೆಗಳನ್ನು ವಿಂಗಡಿಸುವ ಯೋಜನೆಯು ನಡಿಯುತ್ತಿದೆ. ಈ ಯೋಜನೆಯ ಸ್ವರೂಪವು ಸ್ಥೂಲಮಾನದಿಂದ ಹೀಗಿದೆ:—ಜಿಲ್ಲೆಗಳ ಎಂದರೆ ಮೊಕದಮೆಗಳ ಪ್ರಮಾಣಕ್ಕೆ ಅನುಕೂಲವಾಗುವಂತೆ ತಾಲೂಕುಗಳನ್ನು ಒಟ್ಟಿಗೆ ಸೇರಿಸಿ ಆ ಒಟ್ಟಿಗೆ ಸೇರಿಸಿದ ಒಂದೊಂದು ಜಾಗೆಗೆ ಮೂರನೇ ಮತ್ತು ಎರಡನೇ ವರ್ಗದ ಮೇಜಿಸ್ಟ್ರೇಟನನ್ನು ನೇಮಿಸುವುದು. ಪ್ರತಿ ಒಂದು ಜಿಲ್ಲೆಯ ಮುಖ್ಯ ಸ್ಥಾನದಲ್ಲಿ ಬೇಕಾದರೆ ಒಂದನೇ ವರ್ಗದ ಒಬ್ಬೊಬ್ಬ ಮೇಜಿಸ್ಟ್ರೇಟನು ಇರಬೇಕು. ಆದರೆ ಜಿಲ್ಲೆಯ ಕಲೆಕ್ಟರನಿಗೆ ಇದ್ದ ಡಿ. ಮೇಜಿಸ್ಟ್ರೇಟುತನದ ಅಧಿಕಾರವು ಅವನ ಕೈಯಲ್ಲೆ ಇರಬೇಕು. ಡಿಪ್ಯುಟಿ ಮತ್ತು ಅಸಿಸ್ಟಾಂಟ ಕಲೆಕ್ಟರಿಗೆ ಮಾತ್ರ ಕ್ರಿ. ಪ್ರೊ. ಕೋಡಿನ ೮ನೇ ಮತ್ತು ೧೫ನೇ ಭಾಗದ ಅಧಿಕಾರಗಳಷ್ಟೇ ಇರಬೇಕು. ಇವುಗಳಲ್ಲದೆ ಬೇರೆ ಮೇಜಿಸ್ಟ್ರೇಟು ಅಧಿಕಾರಗಳು ಅವರಿಗಿರಬಾರದು. ಮೇಜಿಸ್ಟ್ರೇಟ ಮತ್ತು ಮುನಸೀಫ ಈ ಇಸಮುಗಳನ್ನು ನೇಮಿಸುವ ಕೆಲಸವು ನ್ಯಾಯಖಾತೆಯ ಮುಖಾಂತರವಾಗಬೇಕು. ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಅಧಿಕಾರಿಗಳನ್ನು ಬದಲಾಯಿಸುವ ಕ್ರಮವನ್ನಿಡಬೇಕು. ಈ ಕ್ರಮದಿಂದ ಎರಡೂ ತರದ ಎಂದರೆ ಮೆ. ಮತ್ತು ಮು. ತನದ ಅನುಭವವು ಒಬ್ಬನಿಗೆ ಉಂಟಾಗುವುದರಿಂದ ಅವನನ್ನು ಮುಂದೆ ಡಿಸ್ಟ್ರಿಕ್ಟ ಜಡ್ಜನ ಕೆಲಸದಲ್ಲಿ ನೇಮಿಸಲು ಅನುಕೂಲವಾಗುತ್ತದೆ. ಈ ಎಲ್ಲ ಬದಲಾವಣೆಯನ್ನು ಜಾರಿಗೆ ತರುವುದಕ್ಕೆ ಸಾಧಾರಣವಾಗಿ ೧॥ ಲಕ್ಷ ರೂಪಾಯಿ ಹೆಚ್ಚು ಖರ್ಚು ಬಂದೀತು.

ಹೊಸ ಯೋಜನೆಯ ಸ್ವರೂಪವು ಸಾಮಾನ್ಯವಾಗಿ ಮೇಲೆ ತೋರಿಸಿದಂತೆ ಇರುವುದು. ಈ ಯೋಜನೆಯು ಮೈಸೂರಿನ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು, ಮಂಜೂರಾಗಿ ಬೇಗನೆ ಪ್ರಚಾರದಲ್ಲಿ ಬಂದೀತೆಂದು ತೋರುತ್ತದೆ.

ಈ ಹೊಸ ಯೋಜನೆಯ ಮಟ್ಟಿಗೆ ಯೋಜನೆಯು ಅಭಿನಂದನೀಯವಾಗಿದ್ದರೂ ನ್ಯಾಯದಂಡಾಧಿಕಾರಗಳ ವಿಭಾಗದ ತತ್ವವು ಸಂಪೂರ್ಣವಾಗಿ ಅಂಗೀಕರಿಸಲ್ಪಟ್ಟಿದೆಂದು ಹೇಳಲಾಗುವುದಿಲ್ಲ. ಒಂದುವೇಳೆ ಅಧಿಕಾರ ವಿಭಜನೆಯ ತತ್ವವನ್ನು ಆದರಿಸಿಯೇ ಈ ಸುಧಾರಣೆಗಳು ಬರುವವಾದರೂ ಎಂದರೆ ಆ ತತ್ವದ ಮಟ್ಟಿಗೆ ತತ್ವವಿದ್ದರೂ ಆ ತತ್ವದ ಪೂರ್ಣತೆಯು ಈ ಯೋಜನೆಯಿಂದ ಸಾಧ್ಯವಾಗದೆಂದು ಹೇಳಲು ಮಾತ್ರ ಯಾವ ಸಂಕೋಚವೂ ಕಾಣುವುದಿಲ್ಲ. ಕಾರಣವೇನೆಂದರೆ, ಹೆಡ್‌ಕ್ಲಾರ್ಕ ತಹಶೀಲದಾರ ಮತ್ತು ಅಸಿಸ್ಟಂಟ ಕಲೆಕ್ಟರ ಮುಂತಾದ ದಂಡಾಧಿಕಾರಿಗಳಿಂದ ಕ್ರಿಮಿನಲ್ ಸ್ವಭಾವದ ಕೆಲಸಗಳನ್ನು ಪೂರ್ಣವಾಗಿ ತೆಗೆದಿದ್ದಾರೆಂಬುದು ನಿಜವಾದರೂ ಡಿಸ್ಟ್ರಿಕ್ಟ ಮೇಜಿಸ್ಟ್ರೇಟನ ಅಧಿಕಾರವು ಕಲೆಕ್ಟರನ ಕೈಯಲ್ಲಿ ಇದ್ದ ಹಾಗೆಯೆ ಇದೆ ಎಂದ ಮೇಲೆ ಈ ಅಧಿಕಾರದ ವಿಸರ್ಜನೆಯಾದ ಹೊರತು, ಅದನ್ನು ಕಳಚಿದ ಹೊರತು ನ್ಯಾಯ ಮತ್ತು ಅಮಲು ಬಜಾವಣೆಯ ಅಧಿಕಾರಗಳ ವಿಭಜನೆಯು ಪೂರ್ಣವಾಗಿ ಆದಂತೆ ಆಗುವುದಿಲ್ಲೆಂದು, ಆದುದರಿಂದಲೇ ನಾವು ಮೇಲೆ ಹೇಳಿರುತ್ತೇವೆ. ಒಂದುವೇಳೆ ಈ ಅಧಿಕಾರಗಳನ್ನು ಪೂರ್ಣವಾಗಿ ಬದಲಾಯಿಸುವುದು ಸಾಧ್ಯವಿಲ್ಲವಾದರೆ ಎರಡನೇ ಮೂರನೇ ವರ್ಗದ ಮೇಜಿಸ್ಟ್ರೇಟರ ತೀರ್ಮಾನಿನ ಅಪೀಲನ್ನು ಕೇಳುವ ಅಧಿಕಾರವನ್ನು ಕಲೆಕ್ಟರನಿಗೆ ಕೊಟ್ಟದ್ದು ಸರಿಯಾಗಲಿಲ್ಲ. ಇದನ್ನಾದರೂ ತೆಗೆದು ಹಾಕಬಹುದಿತ್ತು. ಆ ಅಧಿಕಾರವನ್ನು ಕಲೆಕ್ಟರನಿಗೆ ಕೊಟ್ಟಿರುವುದರಿಂದ ಕೆಳಗಿನ ಮೇಜಿಸ್ಟ್ರೇಟರು ಎಂದೂ ಸ್ವತಂತ್ರರಾಗುವುದಿಲ್ಲ. ಈ ನ್ಯೂನತೆಯು ಹೋಗಬೇಕಾದರೆ ಮೇಲಿನ ಯೋಜನೆಯಲ್ಲಿ ಇದ್ದ ವೈಗುಣ್ಯವನ್ನು ಹೋಗಲಾಡಿಸಬೇಕು. ಅದು ಮೈಸೂರಿನ ಸುಶಿಕ್ಷಿತ ಲೋಕಮತದ ಮತ್ತು ಕಾಯಿದೆ ಕೌನ್ಸಿಲಿನ ಸಭಾಸದರ ಚರ್ಚೆಯ ಮೇಲೆ ಹೊಂದಿಕೊಂಡಿದೆ. ಅಲ್ಲಿಯವರು ಈ ಬಗ್ಗೆ ಅವಶ್ಯವಾದ ಸುಧಾರಣೆಗಳನ್ನು ಸಾಧಿಸಿಕೊಂಡಾರೆಂಬುದಕ್ಕೆ ಸಂದೇಹವಿಲ್ಲ.

ಮೇಲೆ ದಿಗ್ದರ್ಶಿಸಿದ ಮೈಸೂರಿನ ಯೋಜನೆಯು ತತ್ವತಃ ನಿರ್ದೋಷವಿರಲಿ, ಸದೋಷವಿರಲಿ, "ಅಕರಣಾನ್ಮಂದ ಕರಣಂಶ್ರೇಯಃ" ಏನೂ ಮಾಡದೆ ಇರುವುದಕ್ಕಿಂತ ಸ್ವಲ್ಪವಾದರೂ ಮಾಡುವುದು ಲೇಸೆಂಬ ಮಾತಿನಂತೆ ನಮ್ಮ ಬ್ರಿಟಿಷ್ ಪ್ರದೇಶದೊಳಗಿರುವ ನ್ಯಾಯ ಅಮ್ಮಲ ಬಜಾವಣೆಯ ಸ್ಥಿತಿಗಿಂತ ಎಷ್ಟೋ ಶ್ಲಾಘ್ಯವಿದೆಂದು ಯಾರೂ ಒಪ್ಪಬಹುದು. ಮೈಸೂರಿನಲ್ಲಿ ಅಥವಾ ಬರೋಡೆಯಲ್ಲಿ ಈ ವಿಷಯವಾಗಿ ಸ್ವಲ್ಪವಾದರೂ ಏರ್ಪಾಡುಗಳು ಆಗುತ್ತಿವೆ, ಆಗಿವೆ. ಇಲ್ಲಿ ಮಾತ್ರ ನಮ್ಮ ರಾಷ್ಟ್ರೀಯ ಸಭೆಯು ನಿರ್ಣಯಗಳನ್ನು ಪಾಸುಮಾಡಿ ಕಾಗದದ ಗಟ್ಟಿಗಳನ್ನೇ ಹಾಕುತ್ತಿದೆ. ಹೆಚ್ಚು ಒತ್ತಾಯಪಡಿಸಿ ಕೇಳಿದರೆ ಜವಾಬುದಾರರಾದ ಯಾರಾದರೂ ಅಧಿಕಾರಿಗಳು—ಈ ತರದ ವಿಭಜನೆಯು ವ್ಯವಹಾರ್ಯವಲ್ಲ—ಎಂತ ಹೇಳುವರು. ಆದರೆ ಇವರ ಮತದಿಂದ ಅವ್ಯವಹಾರ್ಯವಾದ ಸಂಗತಿಯೇ ದೇಶಿ ಸಂಸ್ಥಾನಗಳಲ್ಲಿ ವ್ಯವಹಾರಕ್ಕೆ ಬರುತ್ತಿದೆ. ಇಲ್ಲಿ 'ಸಂಗತಿ' ಎಂದು ಏಕವಚನವಾಗಿ ಹೇಳುವುದಕ್ಕಿಂತ ಬಹುಮಾನದಿಂದ ಹೇಳುವುದು ವಿಶೇಷ ಸತ್ಯವಾಗುವುದು. ಇಂಥ ಹಲವು ಸಂಗತಿಗಳಲ್ಲಿ ನ್ಯಾಯ-ಅಮ್ಮಲ ಬಜಾವಣೆಖಾತೆಗಳ ವಿಭಜನೆಯು ಇದೊಂದು ಅನುಕರಣೀಯವಾದುದರಿಂದ ನಮ್ಮ ವಾಚಕರಿಗೆ ಆ ಬಗ್ಗೆ ಕೆಲವು ಮಾತುಗಳನ್ನು ಈ ಹೊತ್ತು ಹೇಳಿದ್ದೇವೆ.

ದೇಶಭಕ್ತಿ.

(ಲೇಖಾಂಕ ೩)

ಉಳಿದ ಸಾಧನೆಗಳು

ಪಾದಸೇವನೆಯು ದೇವಭಕ್ತಿಯಲ್ಲಿ ನಾಲ್ಕನೆಯ ಮೆಟ್ಟು. ಗುಣಗಳಾಗಲಿ, ಆಕಾರವಾಗಲಿ ದೇವರಲ್ಲಿ—ದೇವರಿಗೆ ಇಲ್ಲಾದುದರಿಂದ ಪಾದಗಳೂ ಇಲ್ಲೆಂಬುದು

ಅರ್ಥಾತ್ ಸಿದ್ಧವಾಗುತ್ತದೆ. ಹಾಗಾದರೆ ಪಾದಸೇವನೆಯು ಎಲ್ಲಿಂದ? ನಿಜ, ನವವಿಧಾ ಭಕ್ತಿಯಲ್ಲಿ ತೋರಿಸಿರುವ ಭಕ್ತಿಯ ಪ್ರಕಾರಗಳು ನಿರ್ಗುಣಬ್ರಹ್ಮಕ್ಕೆ ಸಂಬಂಧಪಟ್ಟವಲ್ಲ; ಸಗುಣ ಮತ್ತು ಸಾಕಾರ ಬ್ರಹ್ಮಕ್ಕೆ ಸಂಬಂಧಪಟ್ಟವುಗಳು. ಸಗುಣ ಬ್ರಹ್ಮಕ್ಕೆ ಶಿವವಿಷ್ಣು, ರಾಮಕೃಷ್ಣ ಮುಂತಾದ ಹೆಸರುಗಳೂ, ಆ ಹೆಸರುಗಳಿಗೆ ತಕ್ಕವಾದ ಶರೀರಗಳೂ, ಆ ಶರೀರಗಳಿಗೆ ಅನುರೂಪವಾದ ಕೈಕಾಲುಗಳೂ ಇವೆ. ಆಗ ಪಾದಸೇವನೆಯು ಅಸಂಭವನೀಯವಾಗುವುದಿಲ್ಲ. ತಾತ್ಪರ್ಯ, ದೇವಭಕ್ತಿಯಲ್ಲಿ ನಿರ್ಗುಣ ಬ್ರಹ್ಮವಿಷಯದಲ್ಲಿ ಪಾದಸೇವನೆಯು ಕಾಲಮೋಟನಿಗೆ ಪಾದುಕಗಳನ್ನು ಹಾಕುವಂತೆ ಅಥವಾ ಕಿವುಡನಿಗೆ ಸಂಗೀತದಿಂದ ಸಂತೋಷಪಡಿಸುವಂತೆ ಅಸಂಭವನೀಯವಾಗಿದ್ದರೂ ಸಗುಣ ಬ್ರಹ್ಮವಾದ ರಾಮಕೃಷ್ಣಾದಿ ವಿಷಯದಲ್ಲಿ ಸಮಂಜಸವೂ ಸಾಧಕವೂ ಆಗಿರುತ್ತದೆ. ಪ್ರಕೃತ ದೇಶಭಕ್ತಿಯ ವಿಚಾರವಾದರೂ ಹೀಗೆಯೆ ಸರಿ. ದೇವರಿಗೆ ಕಾಲುಗಳಿಲ್ಲದಂತೆಯೆ ದೇಶಕ್ಕೂ ಕಾಲುಗಳಿಲ್ಲ. ದೇಶವು ವ್ಯಕ್ತಸ್ಥಿತಿಯಲ್ಲಿದ್ದುದಾದರೂ ಕೈಕಾಲುಗಳುಳ್ಳ ಒಂದು ವ್ಯಕ್ತಿಯಲ್ಲ. ಎಂದ ಮೇಲೆ ಪಾದಸೇವನೆಯೆಂಬ ದೇಶಭಕ್ತಿಯೊಳಗಿನ ಈ ನಾಲ್ಕನೆಯ ಮೆಟ್ಟಿನ ಅರ್ಥವೇನು? ಇದೀಗ ಆಲೋಚಿಸಬೇಕಾಗಿದೆ. ವೇದದಲ್ಲಿ ಹೇಳುವಂತೆ ವಿರಾಟ ಬ್ರಹ್ಮನ (ದೇಶದ) ಕಾಲುಗಳಿಂದ ಶೂದ್ರರು ಉತ್ಪನ್ನರಾದರು, ಕಿಂಬಹುನಾ ಶೂದ್ರರೇ ದೇವರ ಎಂದರೆ ದೇಶದ ಪಾದಗಳು. ಇಲ್ಲಿ ಶೂದ್ರರು ಎಂಬ ಶಬ್ದದ ಅರ್ಥವು ಅಜ್ಞಾನಿಗಳು, ವಿದ್ಯಾಹೀನರು, ಓದುಬರಹ ಬಾರದವರು ಎಂಬವಲ್ಲದೆ ಬೇರೆ ಅಲ್ಲ. ಇವರು ದೇಶಪುರುಷನ ಕಾಲುಗಳು. ಇವರ ಸೇವೆಯನ್ನು ಮಾಡುವುದೇ ದೇಶಭಕ್ತಿಯೊಳಗಿನ ಪಾದಸೇವನೆ, ಎಂದರೆ ದೇಶದೊಳಗಿನ ಅಜ್ಞಾನಿಗಳಿಗೆ ಓದುಬರಹ ಕಲಿಸುವುದು, ವಿದ್ಯಾದಾನ ಮಾಡುವುದು ಹಾಗೂ ಅವರಲ್ಲಿ ರಾಜಕೀಯ, ಸಮಾಜಿಕ, ಔದ್ಯೋಗಿಕ ಶಿಕ್ಷಣದ ಪ್ರಸಾರಣೆಯನ್ನು ಮಾಡುವುದು. ಇವೆಲ್ಲ ದೇಶಮಾತೆಯ ಪಾದಸೇವನೆಯೆ ಸರಿ. ಪಂಚಮರಂಥ ಅತಿಹೀನ ಸ್ಥಿತಿಯಲ್ಲಿರುವ—ಗಾಢ ಅಜ್ಞಾನದಲ್ಲಿರುವ ಜನರ ಉದ್ಧರಣೆಯು ದೇಶದ ಪಾದಸೇವನೆಯೊಳಗಿನದೆ ಒಂದು ಕರ್ತವ್ಯವಾಗಿದೆ. ದೇಶದೊಳಗಿನ ಯಾವ ಜಾತಿಮತದವರೇ ಆಗಲಿ, ನಿರಕ್ಷರರಾದವರು ಶೂದ್ರರೇ ಸರಿ. ಅವರಿಗೆ ವಿದ್ಯಾಮಂದಿರದಲ್ಲಿ ತರುವುದು ಮುಖ್ಯವಾದ ಕರ್ತವ್ಯವು. ಈ ಪಾದಸೇವನೆಯಿಲ್ಲದೆ ದೇಶವು ಎದ್ದು ನಿಂತುಕೊಳ್ಳಲಾರದು, ನಾಲ್ಕು ಹೆಜ್ಜೆಗಳನ್ನಿಟ್ಟು ನಡೆಯಲಾರದು. ಲಕ್ಷ್ಮಿಯು ಭಗವಂತನ ಪಾದಸೇವೆಯಿಂದ ತಾನು ಕೃತಾರ್ಥಳಾದಳು; ಭಗವಂತನನ್ನು ಆನಂದಗೊಳಿಸಿದಳು. ಹಾಗೆಯೆ ನಿರಕ್ಷರ ಜನರಿಗೆ ವಿದ್ಯಾದಾನವೆಂಬ ದೇಶದ ಪಾದಸೇವೆಯಿಂದ ದೇಶಭಕ್ತರು ತಾವು ಸ್ವತಃ ಕೃತಾರ್ಥರಾಗಿ ದೇಶದಲ್ಲಿ ಕಾರ್ಯಕ್ಷಮತೆಯನ್ನು ಹುಟ್ಟಿಸಿದ್ದಾದರೆ ಈ ಪಾದಸೇವೆಯ ಭಕ್ತಿಯು ಸಾರ್ಥಕವಾಗುವುದು.

ಭಕ್ತಿಶಾಸ್ತ್ರದೊಳಗಿನ ಮುಂದಿನ ಎರಡು ವಿಧಗಳು ಅರ್ಚನ ಮತ್ತು ವಂದನೆಗಳು. ಮಾತೃದೇಶವನ್ನು ಅರ್ಚಿಸುವುದು ಮತ್ತು ವಂದಿಸುವುದು ಈ ಮಾತುಗಳಲ್ಲಿ ಬಹಳ ಅರ್ಥವು ಅಡಗಿಕೊಂಡಿದೆ. ತನ್ನ ದೇಶದೊಳಗಿನ ಧರ್ಮ, ಧರ್ಮಗ್ರಂಥ, ಸಂಸ್ಕೃತಿ, ಆಚಾರ, ದೇಶಬಂಧು, ಮಾನ್ಯವ್ಯಕ್ತಿ, ದೇಶಭಾಷೆ ಇವುಗಳನ್ನೆಲ್ಲ ಮನ್ನಿಸುವುದೂ ವಂದಿಸುವುದೂ ದೇಶಭಕ್ತಿಯೊಳಗಿನ ಅರ್ಚನೆವಂದನೆಗಳು. ಧರ್ಮ ಮುಂತಾದ ಈ ಮಾನ್ಯ ಸಂಗತಿಗಳ ವಿಷಯದಲ್ಲಿ ಆದರವಿಲ್ಲದೆ 'ಧರ್ಮವೆಂತಹದು? ಆ ಹಳೆ ಸಂಸ್ಕೃತಿಯನ್ನು ಯಾರು ಕೇಳುವರು? ದೇಶಬಂಧುಗಳಾದರೆ ನಮಗೇನು? ದೇಶಭಾಷೆಯು ಮೇಲೆ ಬಂದರೇನು, ಮೂಲೆಗೆ ಬಿದ್ದರೇನು?'/ ಇವೇ ತರದ ಆಲೋಚನೆ—ಅಲ್ಲ, ದುರಾಲೋಚನೆಗಳಿಂದ ತನ್ನ ದೇಶದೊಳಗಿನ ಧರ್ಮ ಮುಂತಾದವುಗಳಿಗೆ ವಿರೋಧಿಯಾಗಿ ನಿಲ್ಲುವುದು, ಕನಿಷ್ಠ ಪಕ್ಷಕ್ಕೆ ಅವುಗಳ ಬಗ್ಗೆ ಉದಾಸೀನನಾಗಿರುವುದು ದೇಶಭಕ್ತನ ಧರ್ಮವಲ್ಲ. ಯಾವುದೊಂದು ಸಮರ್ಪಕ ಅಥವಾ ಸಮಂಜಸವಾದ ಕಾರಣವಿಲ್ಲದೆ ತನ್ನ ಪೂರ್ವ ಸಂಪ್ರದಾಯದ ಉಡಿಗೆತೊಡಿಗೆಗಳನ್ನು, ಆಚಾರವಿಚಾರಗಳನ್ನು ಎಂದರೆ ವೇಷಭೂಷೆಗಳನ್ನು ಬಿಟ್ಟು ಈ ಸಂಗತಿಗಳಲ್ಲಿ ದೇಶಭಕ್ತನಾದವನು ವೃಥಾ ಪರಾನುಕರಣ ಮಾಡ್ಯಾನೆ? ತಲೆಯನ್ನು ಕತ್ತರಿಸಿಕೊಂಡು ಡ್ರೆಸ್ಸಿನಲ್ಲಿ ಸಾಹೇಬನಂತೆ—ದೊರೆಯಂತೆ ನಟಿಸುವವನು—ಕಾಸಿನ ಪ್ರಯೋಜನವಿಲ್ಲದೆ ನಟಿಸುವವನು ದೇಶಭಕ್ತನೋ ದೇಶಭ್ರಷ್ಟನೋ? ದೇಶವನ್ನು ಅರ್ಚಿಸುವುದು ಮತ್ತು ವಂದಿಸುವುದು ಯಾರ ಕರ್ತವ್ಯವಾಗಿದೆಯೋ ಅಂತಹ ಭಕ್ತರು ಯಾವ ಲಾಭವೂ ಇಲ್ಲದೆ ಇಂಥ ಅಂಧಾನುಕರಣವನ್ನು ಮಾಡುವುದಿಲ್ಲ, ಮಾಡಲಿಕ್ಕೂ ಇಲ್ಲ. ದೇಶವೆಂದರೆ ಬರೆ ಮಣ್ಣಿನ ಭೂಮಿಯಲ್ಲ. ಜನತೆ, ಆ ಜನತೆಯ ಧರ್ಮ, ಪೂರ್ವಪರಂಪರೆ, ಸಂಸ್ಕೃತಿ, ಭಾಷೆ, ವೈಶಿಷ್ಟ್ಯ, ಮತ್ತು ರಾಷ್ಟ್ರೀಯತೆ. ಇಷ್ಟೆಲ್ಲ ಸಂಗತಿಗಳು ದೇಶದೊಳಗೆ ಅಂತರ್ಭವಿಸುವವು. ತನ್ನ ಸ್ವಂತ ರಾಷ್ಟ್ರೀಯತ್ವಕ್ಕೆ ಭಂಗಬಾರದಂತೆ, ಅದರ ಗುರುತು ಮಾಸಿ ಹೋಗದಂತೆ ಅದರ ಹೆಸರಿಗೆ ನಾಚಿಗೆಯುಂಟಾಗದಂತೆ ನಡಕೊಳ್ಳುವುದೇ ದೇಶಭಕ್ತಿಯ ಅರ್ಚನೆಯೂ ವಂದನೆಯೂ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಪ್ರತಿ ಒಂದು ಸಂಗತಿಗಳಲ್ಲಿ ತನ್ನ ರಾಷ್ಟ್ರೀಯತ್ವಕ್ಕೂ, ವೈಶಿಷ್ಟ್ಯಕ್ಕೂ ಮನ್ನಣೆಯನ್ನು ಕೊಡುವುದೇ ಅರ್ಚನ ವಂದನೆಗಳು.

ಭಕ್ತಿಪ್ರಾಸಾದದ ಮುಂದಿನ ಸೋಪಾನಗಳು ದಾಸ್ಯ, ಸಖ್ಯ ಮತ್ತು ಆತ್ಮನಿವೇದನ. ದೇಶಭಕ್ತಿಯಲ್ಲಿ ದಾಸ್ಯವೆಂದರೇನು, ಸಖ್ಯವೆಂದರೇನು, ಈ ಎರಡು ಪ್ರಶ್ನೆಗಳನ್ನು ಮೊದಲು ಆಲೋಚಿಸೋಣ. ಒಂದಾನೊಂದು ಸ್ಥಿತಿಯಲ್ಲಿ ಸಾಕ್ಷಾತ್ ಈಶ್ವರನೇ ಆಗಿದ್ದ, ಇಲ್ಲವೆ ಹಾಗೆ ಯತ್ನಿಸಿದರೆ ತಿರುಗಿ ಅವನೇ ಆಗಲಿಕ್ಕಿದ್ದ ಮನುಷ್ಯನು ಒಬ್ಬನ 'ದಾಸ'ನಾಗುವುದು ಎಂದರೆ ಆಳಾಗಿ ನಿಲ್ಲುವುದು ಮಹತ್ಪಾಪ! ಎಷ್ಟೆಂದರೆ, ದಾಸ್ಯವೆಂಬುದು ಒಂದು ನರಕವೇ ಸರಿ. ಈ ದಾಸ್ಯ ನರಕದ ಯೌವನವನ್ನು ನಿರೀಕ್ಷಿಸಬೇಕೆಂದಿಚ್ಛೆ ಇರುವವರು ಕೆಲಕಾಲದ ಹಿಂದಿನ ಪಾಶ್ಚಾತ್ಯರ "ಗುಲಾಮ ವ್ಯಾಪಾರ"ದ ಚರಿತ್ರೆಯನ್ನು ನೋಡಿಕೊಳ್ಳಬಹುದು. ಮನುಷ್ಯ ಲೋಕಕ್ಕೇ ಅವಮಾನಕರವಾದ ಈ ಸಂಗತಿಯನ್ನು ಓದುವವರಿಗೆ ಮೈಯಲ್ಲಿ ರೋಮಾಂಚವಾಗದೆ ನಿಲ್ಲದು! ಮಾನವವಂಶದ ಪರಿಶುದ್ಧತೆಯನ್ನು ಗಾಢಾಂಧಕಾರದ ಬಾವಿಯಲ್ಲಿ ಮುಣುಗಿಸಿಬಿಡುವ 'ಗುಲಾಮ ವ್ಯಾಪಾರ'ವನ್ನು ಸ್ವಾತಂತ್ರ್ಯ ಪ್ರಿಯ ಮತ್ತು ಉದಾರರಾದ ಬ್ರಿಟಿಶರೇ ನಿರ್ಮೂಲಪಡಿಸಿ ಪಾಶ್ಚಾತ್ಯ ದೇಶದ ಇತಿಹಾಸಚಂದ್ರನ ಮೇಲಿರುವ ಕಲಂಕದ ಈ ಕಪ್ಪು ಬೊಟ್ಟನ್ನು ಉಜ್ಜಿ ಹಾಕಿದರು! ಮಾಯಿಸಿ ಬಿಟ್ಟರು! ಸಮತೆಯ ಹಕ್ಕನ್ನು ಕಾಪಾಡಿದರು! ಶ್ರೇಯಸ್ಸನ್ನು ಹೊಂದಿದರು! ಧನ್ಯರವರು!! ಇರಲಿ. ಈ ಅಪ್ರಾಸಂಗಿಕ ಸಂಗತಿಯನ್ನು ಹೇಳುವ ಪ್ರಸಂಗವು ಇಷ್ಟೇ, ಮನುಷ್ಯನು ಇನ್ನೊಬ್ಬನ ದಾಸ್ಯದಲ್ಲಿ ನಿಲ್ಲುವುದು ಮಹತ್ ಪಾಪ. ಬರೇ ದಾಸ್ಯದ ಸಂಗತಿಯನ್ನೆ ಹಿಡಿದು ಆಲೋಚಿಸಿದರೆ ಅದೊಂದು ಮೇಲೆ ಹೇಳಿದಂತೆ ಕಗ್ಗತ್ತಲೆಯ ಬಾವಿಯೆಂಬುದಕ್ಕೆ ಸಂದೇಹವಿಲ್ಲ. ಆದರೆ ಅದೇ ದಾಸ್ಯವು ಮಾತೃದೇಶದ್ದಾಗಿದ್ದರೆ ಅದು ಮುಕ್ತಿಮಂದಿರವನ್ನು ತೋರಿಸುವ ಒಂದು ಪವಿತ್ರವಾದ ದೀಪಸ್ತಂಭವೇ ಸರಿ. ದೇಶದ ದಾಸ್ಯವೇ ದೇಶಸೇವೆಯು. ದೇಶದೊಳಗಿನ ಬಂಧುಗಳ ಸಂಕಷ್ಟಕ್ಕೆ ತಲೆಕೊಟ್ಟು ಅವರ ಕೊರತೆಗಳನ್ನು ಪರಿಹರಿಸಿ ಇಲ್ಲವೆ ಪರಿಹರಿಸಲು ಯತ್ನಿಸಿ 'ಅವರ ಸುಖವೇ ತನ್ನ ಸುಖ, ಅವರ ದುಃಖವೇ ತನ್ನ ದುಃಖ'ವೆಂಬ ಅದ್ವೈತ ಭಾವನೆಯಿಂದ ಅವರ ಉನ್ನತಿಗಾಗಿ ಹಗಲೂ ಇರುಳೂ ಕಳವಳಪಡುವವನು, ಉದ್ಯೋಗ ಮಾಡುವವನು ಕೊನೆಗೆ ಯಾವ ಮಾನಸಿಕ ತೃಪ್ತಿಯನ್ನು ಮತ್ತು ಧನ್ಯತೆಯ ಆನಂದಾತಿಶಯವನ್ನು ಹೊಂದುವನೋ ಅದು ವಾಚಕರೇ! ನಮಗೆ ನಿಮಗೆ ಗೊತ್ತಾಗದು! ದೇಶದಾಸ್ಯದಲ್ಲಿ ನಿರತನಾದವನು ದೇಶಬಂಧುಗಳು ಕಷ್ಟಕ್ಕೆ ಗುರಿಯಾದುದಾದರೆ ತಾನು ಎಂದೂ ಸುಖವನ್ನನುಭವಿಸನು, ಪ್ರಲೋಭಿಸಲ್ಪಡನು. ಯುಧಿಷ್ಠಿರನ ಸ್ವರ್ಗಾರೋಹಣದ ಸಂದರ್ಭದಲ್ಲಿ ಒಂದು ಸಂಗತಿಯನ್ನು ಹೇಳುವರು: ಸ್ವರ್ಗದಲ್ಲಿ ಯುಧಿಷ್ಠಿರನನ್ನು ಯೋಗ್ಯ ಮರ್ಯಾದೆಯಿಂದ ಕರೆದುಕೊಂಡು ಹೋಗಿ ಉಚ್ಚಾಸನದಲ್ಲಿ ಕುಳ್ಳಿರಿಸಲು ಸಾಮಾನ್ಯನಾಗಿ ಬೇರೆ ಎಲ್ಲರನ್ನು ಕಂಡು ತನ್ನ ತಮ್ಮಂದಿರನ್ನು ಕಾಣದೆ ಇದ್ದ ಕಾರಣ ಆ ಧೀರೋದಾತ್ತ ಯುಧಿಷ್ಠಿರನು ತಮ್ಮಂದಿರೆಲ್ಲಿ? ಅವರಿಲ್ಲದ ಈ ಸ್ವರ್ಗವು ಸ್ವರ್ಗವಾದರೂ ನನಗೇಕೆ? ಸ್ವರ್ಗೀಯ ಈ ಅಮೃತವೂ, ಸುಖಸಂತೋಷಗಳೂ ನನ್ನ ಪ್ರಿಯ ತಮ್ಮಂದಿರು ಇಲ್ಲದ ಮೇಲೆ ನನಗೆ ಕೇವಲ ತುಚ್ಛವೇ—ಎಂದು ನುಡಿದು ಆಸನದಿಂದ ಇಳಿದನು. ಧೀರೋದಾತ್ತನಾದ ದೇಶಸೇವಕನಾದರೂ ದೇಶಬಂಧುಗಳ ವ್ಯಸನದಲ್ಲಿ ತಾನೊಬ್ಬನೇ ಎಂದೂ ಸುಖವನ್ನನುಭವಿಸಲಾರನು. ಅವನು ಸುಖದುಃಖಗಳ ವಿಷಯದಲ್ಲಿ ದೇಶಬಂಧುಗಳ ಸಮಭಾಗಿಯಾಗುವನು. ಇಂಥವನು ದೇಶಸೇವಕನಾದರೂ ಬಂಧುಗಳು ಅವನನ್ನು ದೇಶದ ಪ್ರಭುವೆಂತಲೇ ನೆನಿಸುವರು. ದೇಶದಾಸ್ಯದ ಲೋಕಮಾನ್ಯತೆಯೆಂಬ ಹೊರಗಿನ ಫಲವನ್ನು ಬಿಟ್ಟರೂ ಮಾನಸಿಕ ತೃಪ್ತಿಯೆಂಬ ಅಮೂಲ್ಯವಾದ ಫಲವೇ ದೇಶಸೇವಕನಿಗೆ ಸಾಕಾಗಿದೆ. ದೇಶದಾಸ್ಯದಿಂದ ಇಷ್ಟು ಅವರ್ಣನೀಯವಾದ ಫಲವು ಪ್ರಾಪ್ತವಾಗುವಲ್ಲಿ ಸಖ್ಯದ ಸ್ವರೂಪವನ್ನೂ ಫಲವನ್ನೂ ತಿರುಗಿ ಹೇಳಬೇಕೆ? ದೇಶದ ಹಿತಾಚರಣೆಯಿಂದ ದೇಶ ಸಖನಾಗುವನು. ಮಿತ್ರನ ಲಕ್ಷಣಗಳನ್ನು ಹೇಳುವಾಗ ಭರ್ತೃಹರಿಯು ಹೇಳುವಂತೆ ದೇಶಸಖನು ದೇಶದ ಗುಹ್ಯಗಳನ್ನು ಅಡಗಿಸಿ ಗುಣಗಳನ್ನು ಪ್ರಕಟಿಸುವನು. ಇವನೂ ಕೂಡ ದೇಶಸೇವಕನಂತೆ ದೇಶದ ಆಪದ್ ಬಂಧುವಾಗಿರುವನು. ಸಂಕ್ಷೇಪದಿಂದ ಹೇಳುವುದಾದರೆ ಸ್ವದೇಶದ ಸೇವಕನೂ ಸಖನೂ ಇವರು ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಿ ಭಕ್ತಿಯ ಅಂಥಾ ಸುಖಗಳನ್ನು ಅನುಭವಿಸುತ್ತಾರೆ. ಇದೇ ಈ ಎರಡು ವಿಧಗಳ ಸಾರಾಂಶವು.

ಭಕ್ತಿ ಮೀಮಾಂಸೆಯೊಳಗಿನ ಒಂಬತ್ತನೆಯ ಮತ್ತು ಕೊನೆಯ ಸಾಧನೆಯಾದ 'ಆತ್ಮ ನಿವೇದನ'ದ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಿ ಸಾಧನೆಗಳ ಈ ಉದ್ದ ಪ್ರಕರಣವನ್ನು ಮುಗಿಸಬೇಕಾಗಿದೆ. ಆತ್ಮ ನಿವೇದನದ ವಿಷಯದಲ್ಲಿ ಒಂದೆರಡು ಸಂಗತಿಗಳನ್ನು ಹಿಂದೆಯೇ ಹೇಳಿದ್ದೇವೆ. ಹೀಗಿದ್ದರೂ ಇಲ್ಲಿ ತಿರಿಗಿ ಅದೇ ವಿಷಯವಾಗಿ ಇನ್ನೆರಡು ಮಾತುಗಳನ್ನು ಹೇಳಿದರೆ ವಾಚಕರಿಗೆ ಅದು ಹಂಟಿಯಾಗಲಾರದು. ಕಾರಣವೇನೆಂದರೆ ಆತ್ಮ ನಿವೇದನವು ಭಕ್ತಿಯ ಸಾಧನೆಗಳಲ್ಲಿ "ಭಕ್ತಿಯ ಪ್ರಕಾರಗಳಲ್ಲಿ ಅತಿ ಗಹನವಾದದು, ಪರಾಕಾಷ್ಠೆಯದು. ಆತ್ಮನಿವೇದನದ ಸ್ವರೂಪವನ್ನು ಭಗವಂತನ ಮಾತಿನಿಂದಲೇ ಹೇಳುವುದು ಉಚಿತವಾಗಿದೆ. "ಸರ್ವ ಧರ್ಮಾನ್ ಪರಿತ್ಯಜ್ಯ" ಎಲ್ಲ ಧರ್ಮಗಳನ್ನು ತ್ಯಜಿಸಿ ದೇಶವನ್ನೇ ಶರಣ ಹೋಗು. ಭಗವಂತನ ಮಾತಿದು. ಸುಖದುಃಖ ಮುಂತಾದವು ಅಂತಃಕರಣದ ಧರ್ಮಗಳು, ಉಚ್ಚನೀಚ ಮುಂತಾದವು ಬಾಹ್ಯ ಧರ್ಮಗಳು, ನಾನು, ಅವನು, ನನ್ನದು, ಅವನದು ಮೊದಲಾದವು ದ್ವೈತಧರ್ಮಗಳು, ಮಾನಾಪಮಾನ ಮತ್ತು ಅವುಗಳಿಂದುಂಟಾಗುವ ಹರ್ಷ ವಿಷಾದ ಮುಂತಾದ ಕ್ಷಣಿಕ ಧರ್ಮಗಳು. ಇವೇ ಮೇಲಿನ "ಸರ್ವ ಧರ್ಮ"ಗಳು. ಇವುಗಳನ್ನು ತೊರೆದು ದೇಶಭಕ್ತನು ಅನನ್ಯನಾಗಿ ದೇಶಕ್ಕೆ ಶರಣು ಹೋಗುವನು. ಅವನ ಕೆಲಸ, ತಿಂಡಿ, ಹವನ (ಯಜ್ಞ), ದಾನ, ತಪಶ್ಚರಣೆ ಇವೆಲ್ಲ ದೇಶದ ಅರ್ಪಣೆಗಾಗಿಯೆ ಇರುವವು. ದೇಶದ ಸ್ವಾಸ್ಥ್ಯಕ್ಕಾಗಿ, ದೇಶದ ಯೋಗಕ್ಷೇಮಕ್ಕಾಗಿ, ದೇಶದ ಅಭಿವೃದ್ಧಿಗಾಗಿ ಅವನು ತನ್ನ ಎಲ್ಲ ವ್ಯಾಪಾರಗಳನ್ನು, ಚಲನವಲನೆಗಳನ್ನು ಕೂಡ ಅರ್ಪಿಸುವನು. ಇದೇ ಭಗವಂತನ ಆಜ್ಞೆ. ಈ ತರದ ಆತ್ಮನಿವೇದನ ಮಾಡುವವನಿಗೆ ದೇಶಪುರುಷನು ಭಗವಂತನ ಬಾಯಿಂದ ಕೊಡುವ ಅಭಿವಚನವು ಯಾವುದೆಂದರೆ:- "ಅಹಂತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ "ಈ ರೀತಿಯಿಂದ ಆತ್ಮನಿವೇದನ ಮಾಡುವನನ್ನು ನಾನು ಎಲ್ಲ ಪಾಪಗಳಿಂದ ಬಿಡಿಸುವೆನು." ಎಂತಹ ಪ್ರಸಾದ ವಾಣಿಯು! ನಾವು ಹೇಳುವುದಾದರೆ ಭಕ್ತನಿಗೆ ಇಷ್ಟು ದಿವ್ಯವಾದ ಅಭಿವಚನವು ಬೇರೆ ಎಲ್ಲಿಯೂ ಸಿಗಲಾರದು. ತನ್ನನ್ನು ಅರ್ಪಿಸಿಕೊಳ್ಳುವವನ, ರಕ್ಷಣೆಯು ಆ ದಿವ್ಯವಾದ ದೇಶಮಾತೆಯ ಕೈಗಳಿಂದಲೇ ಆಗಬೇಕಲ್ಲದೆ ಬೇರೆ ಉಪಾಯವಿಲ್ಲ. ತನ್ನ ಸರ್ವ ವ್ಯಾಪಾರಗಳನ್ನು ದೇಶಕ್ಕಾಗಿಯೇ ಮಾಡುವಂಥ ಸುಪುತ್ರರು, ಸಾಲದು, ಸತ್ಪುತ್ರರು ವಿರಳವಾಗಿ ಜನಿಸುತ್ತಾರೆಂಬುದು ನಿಜ. ಆದರೂ ಅಷ್ಟರಿಂದ ಅದರ ಮಹತ್ವವು ಎಂದೂ ಕಡಿಮೆಯಾಗದು. ಆತ್ಮನಿವೇದನದ ಭಕ್ತಿಯಲ್ಲಿ ತನ್ನ ಸರ್ವಸ್ವವನ್ನೂ ದೇಶಕ್ಕಾಗಿ ಅರ್ಪಿಸುವವನು ವ್ಯಕ್ತಿ ಭಾವದಲ್ಲಿರುವುದಿಲ್ಲ; ಅವನ ವ್ಯಕ್ತಿತ್ವವು ಹೋಗುವುದು; ಅವನು ದೇಶಸ್ವರೂಪಿಯೇ ಆದಾನು. ಆತ್ಮನಿವೇದನದ ಭಕ್ತಿಯ ಪ್ರಭಾವದಿಂದ ಮೂರುವರೆ ಮೊಳದ ವ್ಯಕ್ತಿತ್ವವು ನಷ್ಟವಾಗಿ ದೇಶಾತ್ಮ ಭಾವವು ಉದಯಿಸಲು ಅವನೇ ಕೃತಾರ್ಥನು! ಅವನೇ ಧನ್ಯನು! ಉಪನಿಷತ್ತಿನ ಭಾಷೆಯಿಂದ ಅವನೇ "ಆಪ್ತಕಾಮನು!" ಮುಂದೆ ಅವನಿಗೆ ಅನ್ಯ ಕರ್ತವ್ಯವಿರದು.

ಅಸ್ತು; ಹರಿದಾಸನ ಗಹನವಾದ ಅಧ್ಯಾತ್ಮ ಶಾಸ್ತ್ರದ ಪೂರ್ವರಂಗದ ನಿರೂಪಣೆಯಲ್ಲಿ ಕಾಮುಕರು ಮತ್ತು ಚಿಕ್ಕ ಚಿಕ್ಕ ಪ್ರಾಸಂಗಿಕ ಕಾಟು ಕಥೆಗಳನ್ನು ಕೇಳುವವರು ಕಣ್ಣುಕೂರಿ ತಲೆದೂಗಿಸುವರು. ಹಾಗೆಯೆ ನಮ್ಮ ನವವಿಧ ದೇಶಭಕ್ತಿಯ ಮೀಮಾಂಸೆಯಿಂದ ಕೆಲವರಿಗೆ ತಲೆಸಿಡಿತ ಬರಬಹುದು. ಆದುದರಿಂದ ವಾಚಕಾರಾಧನೆಯೇ ನಮ್ಮ ಮುಖ್ಯ ಕರ್ತವ್ಯವಾದ ಕಾರಣ 'ಸಾಧನೆ' ನಿರೂಪಣೆಯನ್ನು ಇಲ್ಲಿಯೆ ಮುಗಿಸಿ ಬರುವ ಸಾರಿ ದೇಶಭಕ್ತಿಯ 'ರಹಸ್ಯ'ವನ್ನು ಆದಷ್ಟು ಸಂಕ್ಷೇಪದಿಂದ ಹೇಳಲು ಆಲೋಚಿಸಿದ್ದೇವೆ.

ಕರ್ನಾಟಕ ಸಾಹಿತ್ಯ ಪರಿಷತ್ತು.

ಉತ್ತಮ ಪ್ರಬಂಧ ಬಹುಮಾನದ ಪ್ರಕಟನೆ.

ಬೆಂಗಳೂರು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ಕರ್ಣಾಟಕ ಭಾಷೆಯ ಏಳಿಗೆಗಾಗಿ ಕೆಳಗೆ ವಿವರಿಸಿರುವ ಬಹುಮಾನವನ್ನೂ ಅದರ ನಿಬಂಧನೆಗಳನ್ನೂ ಭಾಷಾಭಿಮಾನಿಗಳ ಪರಾಮರ್ಶಕ್ಕೆ ತಂದಿರುವರು. ಯಾವುವೆಂದರೆ—

೧. 'ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು" ಎಂಬುದು ೧೯೧೭-೧೮ನೆಯ ಇಸವಿಗೆ ಪ್ರಬಂಧದ ವಿಷಯವಾಗಿ ಇರತಕ್ಕುದು; ಮತ್ತು ಇದರ ಬಹುಮಾನವು ನಗದು ಒಂದು ನೂರು ರೂಪಾಯಿಯು ಗಂಟಾಗಿಯಾಗಲಿ ಅದೇ ಮೌಲ್ಯದ ಸುವರ್ಣ ಪದಕವೊಂದಾಗಿಯಾಗಲಿ ಇರತಕ್ಕುದು; ಮತ್ತು ಇದರ ಜತೆಗೆ ಯೋಗ್ಯತಾ ಪ್ರತಿಯೊಂದನ್ನೂ ಕೊಡತಕ್ಕುದು.

೨. ಕರ್ಣಾಟಕ ವಿದ್ವಾಂಸರು ಯಾರು ಬೇಕಾದರೂ ಈ ಪ್ರಬಂಧವನ್ನು ಬರೆಯಬಹುದು.

೩. ಡಿಮ್ಮಿ ಕಾಗದದ ಅಷ್ಟಪತ್ರಗಳ (Octavo pages) ಆಕಾರದಲ್ಲಿ ಮುದ್ರಿಸಿದ ಪಕ್ಷಕ್ಕೆ ಮೂವತ್ತೆರಡು ಪುಟಗಳಿಗೆ ಮೀರದಂತೆಯೂ ಇಪ್ಪತ್ತು ನಾಲ್ಕು ಪುಟಗಳಿಗೆ ಕಡಿಮೆಯಾಗದಂತೆಯೂ ಪ್ರಬಂಧಗಳ ಪ್ರಮಾಣವು ಇರತಕ್ಕುದು.

೪. ಆಧಾರಗಳನ್ನು ಕೊಡಬೇಕಾಗಿ ಬಂದಲ್ಲಿ ಅವುಗಳನ್ನು ಸಾಧ್ಯವಾಗುವ ಮಟ್ಟಿಗೂ ಸ್ಪಷ್ಟವಾಗಿಯೂ ನಿರ್ಣಯದೊಡನೆಯೂ ತಿಳಿಸಬೇಕು.

೫. ಪ್ರಬಂಧವನ್ನು ಗ್ರಾಂಥಿಕವಾದ ಹೊಸಗನ್ನಡದಲ್ಲಿ ಒಳ್ಳೆಯ ಫುಲ್‌ಸ್ಕ್ಯಾಪ್ ಕಾಗದದ ಒಂದೊಂದೇ ಪಕ್ಕದಲ್ಲಿ ಮೋಡಿಯಿಲ್ಲದಂತೆ ಬರೆಯಬೇಕು.

೬. ಪ್ರಬಂಧ ಕರ್ತೃಗಳು ತಂತಮ್ಮ ಕಲ್ಪಿತನಾಮಗಳೊಡನೆ (Psuedonym) ತಂತಮ್ಮ ಪ್ರಬಂಧಗಳನ್ನು ಪರಿಷತ್ತಿನ ಗೌರವ ಕಾರ್ಯದರ್ಶಿಗಳಿಗೆ ೧೯೧೭ನೆಯ ಜನವರಿ ೩೧ನೆಯ ತಾರೀಖಿನಲ್ಲಿಯೋ ಅದಕ್ಕೆ ಮೊದಲೇಯೊ ತಲಪುವಂತೆ ರಿಜಿಸ್ಟರಾದ ಲಕ್ಕೋಟೆಯಲ್ಲಿ ಕಳುಹಿಸಬೇಕು. ಮತ್ತು ಇದರೊಡನೆಯೇ ತಂತಮ್ಮ ನಿಜವಾದ ಹೆಸರನ್ನೂ ಇಟ್ಟುಕೊಂಡ ಕಲ್ಪಿತನಾಮವನ್ನೂ ತಮ್ಮ ಮೇಲ್ವಿಳಾಸವನ್ನೂ ಕಾಣಿಸಿರುವ ಕಾಗದವನ್ನು ಮೊಹರುಮಾಡಿದ ಬೇರೊಂದು ಲಕ್ಕೋಟೆಯಲ್ಲಿಟ್ಟು ಕಳುಹಿಸಬೇಕು. ಈ ಮೊಹರಾದ ಲಕ್ಕೋಟೆಯನ್ನು ಪರೀಕ್ಷಕ ಮಂಡಲಿಯು ಬರುವವರೆಗೆ ಪರಿಷತ್ತಿನವರು ಒಡೆಯುವುದಿಲ್ಲ.

೭. ಕಾರ್ಯನಿರ್ವಾಹಕ ಮಂಡಲಿಯಿಂದ ನಿಯಮಿತವಾದ ಮತ್ತು ಮೂರು ಮಂದಿಗೆ ಕಡಿಮೆಯಿಲ್ಲದೆಯೂ ಐದು ಮಂದಿಗೆ ಮೀರದೆಯೂ ಇರುವ ಪರೀಕ್ಷಕ ಮಂಡಲಿಯು ಪೂರ್ಣಾಂಕಕ್ಕೆ ನೂರನ್ನು ಇಟ್ಟುಕೊಂಡು ಪ್ರಬಂಧಗಳ ಯೋಗ್ಯತೆಗಳನ್ನು ನಿರ್ಣಯಿಸಬೇಕು; ಮತ್ತು ಈ ಮಂಡಲಿಯವರು ತಮ್ಮ ವರದಿಯನ್ನು ವಿಜಯಿಗಳಾದ ಪ್ರಬಂಧಕರ್ತೃಗಳಿದ್ದಲ್ಲಿ ಅವರ ಕಲ್ಪಿತ ನಾಮಗಳೊಡನೆ ಕಾರ್ಯನಿರ್ವಾಹಕ ಮಂಡಲಿಗೆ ೧೯೧೭ನೆಯ ಇಸವಿ ಮಾರ್ಚಿ ೩೧ನೆಯ ತಾರೀಖಿಗೆ ಮೊದಲೆ ತಲಪುವಂತೆ ರವಾನಿಸಬೇಕು.

೮. ಸಮಸಮವಾದ ಸಾಮರ್ಥ್ಯವುಳ್ಳ ಪ್ರಬಂಧಕರ್ತೃಗಳು ಇರುವಂತೆ ಕಾರ್ಯನಿರ್ವಾಹಕ ಮಂಡಲಿಗೆ ತೋರಬಂದಲ್ಲಿ ಆ ಇಬ್ಬರಿಗೆ ಬಹುಮಾನವನ್ನು ಹಂಚುವ ಸ್ವಾತಂತ್ರ್ಯವನ್ನು ಕಾರ್ಯನಿರ್ವಾಹಕ ಮಂಡಲಿಯು ಇಟ್ಟುಕೊಳ್ಳತಕ್ಕುದು; ಮತ್ತು ಒಪ್ಪಿದ ಪ್ರಬಂಧವನ್ನು ಅಥವಾ ಪ್ರಬಂಧಗಳನ್ನು ಉಚಿತವಾದ ರೀತಿಯಲ್ಲಿ ಮುದ್ರಿಸಿ ಪ್ರಚಾರಮಾಡುವ ಸ್ವಾತಂತ್ರ್ಯವು ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕುದು.

೯. ಪ್ರಬಂಧಗಳಲ್ಲಿ ತಕ್ಕಷ್ಟು ಸಾಮರ್ಥ್ಯವು ಕಾಣಬಾರದಿದ್ದರೆ ಬಹುಮಾನವನ್ನು ಕೊಡದೆ ಉಳಿಸಿಕೊಳ್ಳುವ ಅಧಿಕಾರವೂ ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕುದು.

೧೦. ೧೯೧೮ನೆಯ ಮೇ ತಿಂಗಳಲ್ಲಿ ನಡೆಯುವ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಬಹುಮಾನವೂ ಯೋಗ್ಯತಾ ಪತ್ರಿಕೆಯೂ ವಿಜಯಿಯಾದ ಪ್ರಬಂಧಕರ್ತೃವಿಗೆ ಅಥವಾ ಕರ್ತೃಗಳಿಗೆ ಕೊಡಲ್ಪಡುವುದು.

ರಾ. ರಘುನಾಥರಾಯ ಬಿ. ಎ.

ಬೆಂಗಳೂರು,
22 – 10 – 16.

ಗೌರವಕಾರ್ಯದರ್ಶಿ,
ಕರ್ಣಾಟಕ ಸಾಹಿತ್ಯ ಪರಿಷತ್ತು.

ಕಬ್ಬು, ಹೊಗೆಸೊಪ್ಪು, ತೆಂಗು ಕೃಷಿಮಾಡುವವರಿಗೆ ಸೂಚನೆಗಳು.

ಪಟ್ಲುಪ್ಪಿನ ತುಟ್ಟಿ.

ಬಹಳ ಕಾಲದಿಂದಲೂ ಪಟ್ಲುಪ್ಪನ್ನು ಜರ್ಮನಿಯ ಗನಿಗಳಿಂದ ಅಗಿದು ದೇಶಾಂತರಗಳಿಗೆಲ್ಲ ಕಳುಹಿಸುತ್ತಿದ್ದರು. ಈಗ ಯೂರೋಪಿನ ಮಹಾಯುದ್ಧದ ದೆಸೆಯಿಂದ ಜರ್ಮನಿಯಿಂದ ಈ ಪಟ್ಲುಪ್ಪು ಬರುವುದು ನಿಂತುಹೋಗಿ ಪಟ್ಲುಪ್ಪಿನ ಬೆಲೆ ವಿಪರೀತವಾಗಿ ಏರಿದೆ. ಈ ವರೆಗೆ ಹಿಂದುಸ್ಥಾನದಲ್ಲಿ ಈ ಪಟ್ಲುಪ್ಪು ಸರ್ವಸಾಧಾರಣವಾಗಿ ಗೊಬ್ಬರವಾಗಿ ಉಪಯೋಗಿಸಲ್ಪಡುವುದಿಲ್ಲ; ಆದರೂ ಈಚೀಚೆಗೆ ಟೀ ಮತ್ತು ಕಾಫಿತೋಟಗಳಲ್ಲಿ ಅದು ಗೊಬ್ಬರವಾಗಿ ಪ್ರಚಾರಕ್ಕೆ ಬರುತ್ತಲಿದೆ. ಪಟ್ಲುಪ್ಪು ತುಟ್ಟಿಯಾದ್ದರಿಂದ ಪೊಟೆಷನ್ನು ಕಟ್ಟಿಗೆ ಬೂದಿಯಿಂದ ಬದಗಿಸಿಕೊಳ್ಳಬಹುದು.

ದೆಂದು. ಡಾ. ಲೆದರ್ ಎಂಬವರು ಅಭಿಪ್ರಾಯಪಡುತ್ತಾರೆ, ಆದರೆ ಬೂದಿಯಲ್ಲಿ ಪೊಟೇಶಿನ ತೇದಾತು ಕಡಿಮೆ ಇರುವುದರಿಂದ ಬೂದಿಯನ್ನು ಬಹಳ ಹಾಕುವುದು ಆಗತ್ಯಬೀಳಬಹುದು. ಪೊಟೇಶಿನಷ್ಟೆ ಪ್ರಯೋಜನವು ನೈಟ್ರೇಟ್ ಒಫ್ ಸೋಡಾ ಎಂಬ ರಾಸಾಯನಿಕ ಗೊಬ್ಬರದಿಂದ ಶಿಕ್ಕುವುದೆಂದು ಕೃಷಿಕರು ತಿಳಿಯಬೇಕಾದುದು ಅಗತ್ಯ. ಅನೇಕಾನೇಕ ಸಂಗತಿಗಳಲ್ಲಿ ಪೊಟೆಶ್ ಉಪ್ಪುಗಳಷ್ಟೆ ಸಾರವು ನೈಟ್ರೇಟ್ ಒಫ್ ಸೋಡಾದಲ್ಲಿ ಇರುವುದರಿಂದ ಕಟ್ಟಿಗೆಯ ಬೂದಿಯನ್ನು ಉಪಯೋಗಿಸುವುದಕ್ಕಿಂತ ಈ ನೈಟ್ರೇಟ್ ಒಫ್ ಸೋಡಾ ಪ್ರಯೋಜನಕಾರಿಯಾಗುವುದು. ಇದಲ್ಲದೆ ನೈಟ್ರೇಟ್ ಒಫ್ ಸೋಡಾ ಸೌಳುಪ್ಪನ್ನು ಮಣ್ಣಿನೊಂದಿಗೆ ಬೆರಸಿದಾಗ ಅದು ಮಣ್ಣಿನಲ್ಲಿ ಮೊದಲೇ ಇರಬಹುದಾದ ಪೊಟ್ಯಾಶ ಉಪ್ಪನ್ನು ಬಹು ಬೇಗನೆ ನಿಂಗಡಿಸಿಬಿಟ್ಟು ಅವನ್ನು ಗಿಡಗಳಿಗೆ ಸಿಕ್ಕುವಂತೆ ಒದಗಿಸಿಕೊಡುತ್ತದೆ. ಈ ವಿಚಾರವನ್ನು ಕೃಷಿಕರು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ.

ಪತ್ರವ್ಯವಹಾರ.

"ರೈಲ್ ಸೆಸ್."

ದಕ್ಷಿಣ ಕನ್ನಡಾ ಜಿಲ್ಲೆಯ ರೈತರಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರು ಶುಮಾರು ಮೂರು ವರುಷಗಳಿಂದ ಒಂದು ಹೊಸ ತೆರಿಗೆಯನ್ನು ಹೊರಿಸಿದ್ದಾರೆ. ಈ ತೆರಿಗೆಯು "ರೈಲ್ ಸೆಸ್". ಇದರ ವಸೂಲಿಯು ಹ್ಯಾಗೆಂದರೆ—ಪ್ರತಿಯೊಬ್ಬನು ತನ್ನ ಸ್ವಾಧೀನ ಇರುವ ಜಮೀನಿಗೆ ಸರಕಾರಕ್ಕೆ ಕೊಡತಕ್ಕ ಒಂದು ರೂಪಾಯಿ ತೀರ್ವೆಯ ಮೇಲೆ ಅರ್ಧಾಣೆಯಂತೆ ಜೆಟ್ಟಿಗೆ ಕೂಡಿಸಿ ವಸೂಲು ಕೊಡುವದು. ಹೀಗೆ ಬರತಕ್ಕ ಮೊಬಲಗು ಇಡೀ ಜಿಲ್ಲೆಯಿಂದ ಮೂವತ್ತೇಳು ಸಾವಿರ ರೂಪಾಯಿಗಳಾಗುತ್ತವೆ. ಈ ಸೆಸ್ಸಿನ ಉದ್ದೇಶವೇನಂದರೆ ಜಿಲ್ಲೆಯ ಒಳಗೆ ರೈಲು ಮಾರ್ಗಗಳನ್ನು ಉಂಟುಮಾಡುವದಾಗಿರುತ್ತದೆ. ಆದ್ದರಿಂದ ಈ ಹಣವನ್ನು ರೈಲು ಮಾರ್ಗಗಳಿಗೆ ಖರ್ಚು ಮಾಡುವದು ಅಗತ್ಯ. ಮೂರು ವರ್ಷಗಳಲ್ಲಿ ಜಮೆ ಇರುವ ಹಣವು ಶುಮಾರು ಒಂದು ಲಕ್ಷ ಹನ್ನೊಂದು ಸಾವಿರ. ರೈಲು ಸೆಸ್ ಜಾರಿಗೆ ತರುವಾಗ ಡಿಸ್ಟ್ರಿಕ್ಟಿನಲ್ಲಿ ಎಲ್ಲೆಲ್ಲಿ ಈಗ ರೈಲು ಬೇಕೆಂಬದನ್ನು ಆಲೋಚಿಸಿಯೇ ಇದರ ವಸೂಲಿ ಶುರುವಾಗಿತ್ತು. ಮಂಗಳೂರಿನಿಂದ ಪಾಣೆಮಂಗಳೂರಿಗೆ ರೈಲು ಆಗಬೇಕೆಂಬದು ಪ್ರಥಮತಃ ವಿಚಾರ ನಡೆಯಿತು. ಸರಕಾರದವರು ಈ ಮಾರ್ಗವನ್ನು ಸರ್ವೆ ಮಾಡಿಸಲಿಕ್ಕೆ ಪ್ರಾರಂಭಿಸಿದರು. ಸರ್ವೆ ಮುಗಿಯುವಷ್ಟರೊಳಗೆ ಪಾಣೆಮಂಗಳೂರಿಗೆ ರೈಲು ಕೊಂಡು ಹೋಗುವ ಆಲೋಚನೆಯು ನಿಲ್ಲಿಸಲ್ಪಟ್ಟಿತು. ಅನೇಕ ವರುಷಗಳಿಂದ ಮೈಸೂರು ಪ್ರಾಂತ್ಯದಿಂದ ವ್ಯಾಪಾರ ನಡಿಯುವ ಮಂಗಳೂರಿಗೆ ರೈಲು ತರುವ ಅನುಕೂಲತೆ ಬಗ್ಗೆ ಈ ಸೆಸ್ಸು ಜನರ ಮೇಲೆ ಹಾಕಲ್ಪಟ್ಟಿತು ಎಂತ ಭಾವನೆಯಿತ್ತು. ಈ ಭಾವನೆಯು ಸಕಾರಣವಾಗಿದೆ. ಯಾಕಂದರೆ ಇಡೀ ಜಿಲ್ಲೆಯ ಮುಖ್ಯ ಪಟ್ಟಣವು ಮಂಗಳೂರು. "ಅರಸಿಕೆರೆ ಮಂಗಳೂರ ರೈಲ್ವೆ" ಎಂಬದರ ಕುರಿತು ಇಡೀ ಜಿಲ್ಲೆಯವರು ಏಕಕಂಠವಾಗಿ ಪ್ರತಿಪಾದಿಸುತ್ತಿದ್ದರು. ಈ ರೈಲ್ವೆಗೆ ಮೈಸೂರು ಪ್ರಾಂತ್ಯದವರ ಸಹಾನುಭೂತಿಯು ಉಂಟು. ನಮ್ಮ ಡಿಸ್ಟ್ರಿಕ್ಟಿಗೆ ಮೈಸೂರಿನಿಂದ ವ್ಯಾಪಾರವು ಬರುವ ಹೆದ್ದಾರಿಯು ಇದೇ. ಆದ್ದರಿಂದ ಮಂಗಳೂರಿಗೆ ರೈಲು ಬರುವ ಮಾತು ನಮ್ಮಿಂದಲೇ ಕೈಗೂಡುವದು ಎಂಬ ಅಭಿಪ್ರಾಯ ಉಂಟಾಯಿತು. ಶುರುವಿಗೆ ಮಂಗಳೂರಿನಿಂದ ಪಾಣೆಮಂಗಳೂರಿಗೆ ರೈಲ್ವೆ ಕೊಂಡುಹೋಗುವದು ಇದೇ ಉದ್ದೇಶವೆಂತ ನೆನಸಿದರು. ಸರಕಾರದವರು ಈ ಮಾರ್ಗ ಸರ್ವೆ ಮಾಡಿಸಲಿಕ್ಕೆ ಒಪ್ಪಿದರು. ಕೆಲಸ ಪ್ರಾರಂಭವಾಯಿತೋ ಎಂಬಂತೆ ಕಂಡುಬಂತು. ಸರ್ವೆ ಮುಗಿಯುವಷ್ಟರೊಳಗೆ ಈ ರೈಲು ಮಾರ್ಗ ತತ್ಕಾಲಕ್ಕೆ ಬೇಡವೆಂತ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗಿನಲ್ಲಿ ನಿರ್ಣಯವಾಯಿತು. ಕಾರಣವೇನೆಂದರೆ—"ಮೈಸೂರಿನವರು ತಮ್ಮ ರಾಜ್ಯದಿಂದ ಒಂದು ರೈಲನ್ನು ಬಂದರು ಇರುವ ಸಮುದ್ರತೀರದ ಪಟ್ಟಣಕ್ಕೆ ಕೊಂಡುಹೋಗುವ ಆಲೋಚನೆ ನಡಿಸುತ್ತಾರೆ. ಆ ರೈಲು ಮಾರ್ಗವು ದಕ್ಷಿಣ ಕನ್ನಡ ಜಿಲ್ಲೆಗೆ, ಉತ್ತರ ಕನ್ನಡ ಜಿಲ್ಲೆಗೆ ಯಾ ಮಲಬಾರ ಜಿಲ್ಲೆಗೆ ಕೊಂಡುಹೋಗುವರು. ಆ ಮಾರ್ಗವು ಯಾವ ಜಿಲ್ಲೆಯ ಯಾವ ಬಂದರಕ್ಕೆಂಬುದು ನಿಶ್ಚಯವಾಗಲಿಲ್ಲ." ಆದ್ದರಿಂದ ಮೈಸೂರಿನವರು ತಮ್ಮ ಮಾರ್ಗವನ್ನು ಯಾವ ಬಂದರಕ್ಕೆ ಕೊಂಡುಹೋಗುವರು ಎಂಬದನ್ನು ನಿಶ್ಚಯಿಸುವ ಮೊದಲು ನಾವು ಡಿಸ್ಟ್ರಿಕ್ಟ್ ಬೋರ್ಡಿನ ರೈಲು ಮಾಡಿಸುವದು ಬೇಡವೆಂದು ಬೋರ್ಡಿನ ಅಭಿಪ್ರಾಯವಾಯಿತು. ಇನ್ನೊಂದು ಕಾರಣವೇನಂದರೆ—ನಮ್ಮ ಜಿಲ್ಲೆಗೆ ಮೈಸೂರಿನಿಂದ ಎರಡು ಬಂದರುಗಳಿಗೆ ಹೆದ್ದಾರಿಯುಂಟು. ಒಂದು ಮಂಗಳೂರು ಬಂದರಕ್ಕೆ. ಒಂದು ಉಡುಪಿಯ ಮಲ್ಪೆ ಬಂದರಕ್ಕೆ. ಜಿಲ್ಲೆ ಒಂದಾದರೂ ಜಿಲ್ಲೆಯ ಪ್ರಮುಖರಲ್ಲಿ ಕೆಲವರು ಮೈಸೂರು ಪ್ರಾಂತದ ರೈಲು ಮುಖ್ಯ ಪಟ್ಟಣವಾದ ಮಂಗಳೂರಿಗೆ ಬರಬೇಕೆಂದೂ ಇನ್ನು ಕೆಲವರು ಉಡುಪಿಯ ಮಲ್ಪೆಗೆ ಬರಬೇಕೆಂದೂ ಹೀಗೆ ಭಿನ್ನಾಭಿಪ್ರಾಯ ಉಳ್ಳವರಾಗಿರುತ್ತಾರೆ. ಏನಂಚ ಉದ್ದೇಶವು ದಕ್ಷಿಣ ಕನ್ನಡ ಜಿಲ್ಲೆಗೆ ರೈಲ್ ಬರಬೇಕೆಂಬದು ಆಗಿರುತ್ತದೆ. ಆದರೆ ಈ ಉದ್ದೇಶವನ್ನು ಮುಂದರಿಸುವ ಸ್ಥಿರಪ್ರಯತ್ನವನ್ನು ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಳ್ಳದೆ ಇರುವದು ಶೋಚನೀಯವಾಗಿರುತ್ತದೆ. ರೈಲ್‌ಸೆಸ್ಸಿನಿಂದ ವಸೂಲಾಗಿ ಜಮೆ ಇರುವ ಐವಜನ್ನು ಬಡ್ಡಿಗೆ ಕೊಟ್ಟು ವೃದ್ಧಿಮಾಡಲಿಕ್ಕೆ ಆಲೋಚಿಸುತ್ತಾರೆ. ಹೀಗೆ ಬಡ್ಡಿ ಇಲ್ಲದೆ ಇರುವ ಹಣವನ್ನು ಬಡ್ಡಿಗೆ ಹಾಕುವದು ನ್ಯಾಯವಾದರೂ—ಈ ತೆರಿಗೆಯ ಮುಖ್ಯ ಉದ್ದೇಶಕ್ಕೆ ಕೊರತೆ ಉಂಟಾಗುವದು. ಹ್ಯಾಗೂ ಸೆಸ್ ವಸೂಲು ಆದರೂ ರೈಲ್ ಮಾಡಿಸಲಿಕ್ಕೆ ಈವರೇಗೆ ಏನೂ ಆರಂಭಿಸಲಿಲ್ಲ. ನಮ್ಮ ಡಿಸ್ಟ್ರಿಕ್ಟಿನ ರೈಲ್ವೆ ನಾವು ಮಾಡಿಸುವದಾದರೆ ಒಂದು ಸಾರಿ ಮಂಗಳೂರಿನಿಂದ ಪಾಣೆಮಂಗಳೂರು ವರೆಗೆ ಮಾಡಿಸಬೇಕೆಂಬ ರೈಲನ್ನು ಮಾಡಿಸಿ ಇನ್ನು ಕೆಲವು ವರುಷಗಳಲ್ಲಾದರೂ ಆ ರೈಲು ಮಂಜರಾಬಾದಿಗೆ ಅಂದರೆ ಮೈಸೂರು ಗಡಿಯ ವರೇಗೆ ನಾವು ಕೊಂಡುಹೋಗಲಿಕ್ಕೆ ಪ್ರಯತ್ನಿಸಿದರೆ ಈಗ ಅರಸಿಕೆರೆಯಿಂದ ಹಾಸನದ ವರೇಗೆ ಬರುವ ಮೈಸೂರು ಪ್ರಾಂತದ ರೈಲು ಮೈಸೂರಿನವರು ತಮ್ಮ ಗಡಿಗೆ ಬೇಗನೆ ತರುವರು. ಆಗ ಅರಸಿಕೆರೆ ಮಂಗಳೂರ ರೈಲ್ವೆ ಉದ್ದೇಶವು ಕೈಗೂಡುವದು. ಮಂಗಳೂರು ಪಟ್ಟಣವು ವೃದ್ಧಿಯಾಗುವದು. ಈಗಿನ ಮಂಗಳೂರು ಊರ್ಜಿತವಾಗುವದು. ಡಿಸ್ಟ್ರಿಕ್ಟ್ ರೈಲ್ವೆ ಮಾಡುವ ಆಲೋಚನೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಬಾಕಿ ಇಟ್ಟರೆ ಮಂಗಳೂರಿಗೆ ಮೈಸೂರು ಪ್ರಾಂತ್ಯದ ರೈಲು ಬರುವ ಸಂಭವಗಳು ಕಡಿಮೆಯಾಗಬಹುದು. ಕೆಲಸ ಮುಂದರಿಸಿದನಂತರ ನಾವು ವ್ಯಥೆಪಟ್ಟರೂ ಪ್ರಯೋಜನವಾಗಲಾರದು. ಮಂಗಳೂರು ಪಟ್ಟಣವು ವೃದ್ಧಿಯಾಗದೆ ಹೀನಸ್ಥಿತಿಗೆ ಬರಬಹುದು. ಇದರಿಂದ ಜಿಲ್ಲೆಗೆ ಕೊರತೆ ಬಂದೀತು. ಡಿಸ್ಟ್ರಿಕ್ಟ್ ಬೋರ್ಡಿನವರು ಈ ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿ ನಮ್ಮ ಜಿಲ್ಲೆಯನ್ನು ಉದ್ಧರಿಸುವ ಮುಖ್ಯವಾದ ಈ ಸತ್ಕಾರ್ಯವನ್ನು ಹಿಂದೆಹಾಕಿ, ರೈಲ್‌ಸೆಸ್ಸಿನ ಹಣವನ್ನು ಬಡ್ಡಿಹಾಕಿ ವೃದ್ಧಿಸುವದರ ಬದಲಿಗೆ ರೈಲ್ ಮಾರ್ಗಗಳ ಕೆಲಸಕ್ಕೆ ಉಪಯೋಗಿಸುವದು ಉತ್ತಮ. ಆಗ ರೈತರು ತಮ್ಮ ಉಪಕಾರವನ್ನು ಸ್ಮರಿಸುತ್ತಾ ತಮ್ಮ ಹಣದ ನ್ಯಾಯವಾದ ಪ್ರಯೋಜನವನ್ನು ಹೊಂದುವರು.

ಬಡ ರೈತ.

ಜಿಲ್ಲೆಯ ಭಂಗ.

ಅಯ್ಯಾ ಪತ್ರಕರ್ತರೇ,

ತಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ "ಪಟ್ಟಣಿಗ"ರೊಬ್ಬನು "ಇದೇನು ಭಂಗ!" ಎಂದು ಕೇಳಿದ್ದರು. ಇದೇನೋ ದಕ್ಷಿಣಕನ್ನಡ ಜಿಲ್ಲೆಯ ಭಂಗವಲ್ಲ; ಮಲಬಾರ್ ಜಿಲ್ಲೆಯ ಭಂಗ! ಪರಂತು, ನಮ್ಮ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಕಾಸರಗೋಡಿನ ಒಂದಾಂಶವನ್ನು ಕಳಚಿಬಿಡುತ್ತಾರೆಂಬ ವಾರ್ತೆಯೇ ಈ ಭಂಗದಲ್ಲಿ ಮಹತ್ವದ್ದಾಗಿರುತ್ತದೆ. ಹೀಗೆ ನಮ್ಮ ಜಿಲ್ಲೆಯ ದಕ್ಷಿಣ ಭಾಗವನ್ನು ಕಡಿದುಹಾಕುವದರಿಂದ ಈ ಜಿಲ್ಲೆಗೆ ವಿಶೇಷ ನಷ್ಟವಾಗುವದರಲ್ಲಿ ಸಂದೇಹವಿಲ್ಲ. ಈ ನಷ್ಟಕಷ್ಟಗಳ ಕುರಿತು ನಮ್ಮ ಪ್ರಜಾ ಮುಂದಾಳುಗಳು ಈ ಮೊದಲೇ ಸರಕಾರಕ್ಕೆ ಮನವಿಮಾಡಿಕೊಂಡಿರುವದರಿಂದ ಅವನ್ನು ಪುನಃ ಇಲ್ಲಿ ಸೂಚಿಸುವ ಅಗತ್ಯವಿಲ್ಲ. ಆದರೆ ಇಲ್ಲಿ ನನ್ನದೊಂದು ಪ್ರತ್ಯೇಕ ವಿನ್ನಹವಿದೆ:—ಸರಕಾರದವರಾಗಲೀ ಪ್ರಜಾಮುಂದಿಯಾಗಲೀ ಆಗಲಿಕ್ಕಿರುವ ಈ ಭಂಗವನ್ನು ಕುರಿತು ಆಲೋಚಿಸುವ ವ ನಿರ್ಣಯಿಸುವ ಕಾಲದಲ್ಲಿ ದಕ್ಷಿಣ ಕನ್ನಡದಿಂದ ಕಿತ್ತುತೆಗೆದ ನಮ್ಮ ಉತ್ತರ ಕನ್ನಡ ಜಿಲ್ಲೆಯನ್ನು ಪುನಃ ನಮ್ಮ ಜಿಲ್ಲೆಗೆ ಸೇರಿಸಬೇಕೋ, ಇಲ್ಲವೆ ನಮ್ಮ ಜಿಲ್ಲೆಯನ್ನು ಉತ್ತರ ಕನ್ನಡಕ್ಕೆ ಸೇರಿಸಿ ಮುಂಬಾಯಿ ಸಂಸ್ಥಾನಕ್ಕೇನೇ ಕೂಡಿಸಿಬಿಡಬೇಕೋ ಎಂಬ ವಿಷಯವನ್ನು ಕುರಿತೂ ವಿಚಾರಿಸುವದು ಅವಶ್ಯವಾಗಿದೆ. ಇದೇ ನನ್ನ ವಿನ್ನಹ. ಯಾಕಂದರೆ, ಮುಂಬಾಯಿ ಸಂಸ್ಥಾನದಲ್ಲಿ ನಮ್ಮ ಜಿಲ್ಲೆಯವರು ಇರುವಷ್ಟು ಮದ್ರಾಸ್ ಸಂಸ್ಥಾನದಲ್ಲಿಲ್ಲ. ನಮ್ಮ ಕರಾವಳಿಯೂ ಮುಂಬಾಯಿ ಸಂಸ್ಥಾನದ ಕರಾವಳಿಯೂ ಒಂದೇ, ನಮ್ಮ ಪ್ರಾಂತ್ಯದ ಹವಾ, ವಾಯುಗುಣ, ಉತ್ಪತ್ತಿ, ವ್ಯಾಪಾರ, ಜನರ ಭಾಷೆ, ರೀತಿನೀತಿ, ಇತ್ಯಾದಿಗಳನ್ನು ಮುಂಬಾಯಿ ಸಂಸ್ಥಾನದೊಟ್ಟಿಗೆ ಸರಿಹೋಲಿಸಿದರೆ ತಕ್ಕಮಟ್ಟಿಗೆ ಇವೆಲ್ಲಾ ಮುಂಬಾಯಿ ಸಂಸ್ಥಾನಕ್ಕೆ ಸರಿಬೀಳುತ್ತದಲ್ಲದೆ ಮದ್ರಾಸಿಗೆ ಸರಿಬೀಳುವದಿಲ್ಲವೆಂದೇ ಹೇಳಬೇಕಾಗಿದೆ. ಹೀಗಿರುವಾಗ ನಾವೇಕೆ ಮುಂಬಾಯಿ ಆಧಿಪತ್ಯದೊಳಗೆ ಸೇರಿರಬಾರದು? ನಮ್ಮ ಜಿಲ್ಲೆಯನ್ನು ಮುಂಬಾಯಿ ಸಂಸ್ಥಾನಕ್ಕೆ ಸೇರಿಸಿದರೆ ಆ ಸಂಸ್ಥಾನಕ್ಕೆ ಸೇರಿದ ದಕ್ಷಿಣ ಮಹಾರಾಷ್ಟ್ರ, ಉತ್ತರ ಕನ್ನಡ ಮೊದಲಾದ ಪ್ರಾಂತ್ಯಗಳು ನಮ್ಮ ಪ್ರಾಂತ್ಯದೊಳಗೆ ಸೇರಿಕೊಂಡು ನಾವೂ ಅವರೂ ಪರಸ್ಪರ ಭ್ರಾತೃತ್ವದಲ್ಲಿ ಬೆಳೆದು, ವ್ಯಾಪಾರ ಕೈಗಾರಿಕೆಗಳನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವದಾಗುವದು. ಅಷ್ಟೇ ಅಲ್ಲ; ನಮ್ಮ ನೆರೆಯಲ್ಲಿರುವ ಮೈಸೂರು ಸಂಸ್ಥಾನದವರು ಮುಂಬಾಯಿ ಸಂಸ್ಥಾನಕ್ಕೆ ಸೇರಿದ ಬಟ್ಕಳಕ್ಕೆ ರೈಲ್ವೆ ಹಾಕಿಸಲಿಕ್ಕೆ ಹವಣಿಸುತ್ತಿರುವದರಿಂದ ಮೈಸೂರಿನವರೂ ನಾವೂ ಒಂದುಗೂಡುವ ಹಾಗಾಗಿ ನಮ್ಮಲ್ಲಿಯ ವ್ಯಾಪಾರವು ಮೈಸೂರಿನವರೊಡನೆಯೂ ಬೆಳೆಯುವದಲ್ಲವೇ? ಹೀಗೆ ನಮ್ಮ ಜಿಲ್ಲೆಯನ್ನು ಮುಂಬಾಯಿ ಸಂಸ್ಥಾನಕ್ಕೆ ಸೇರಿಸುವದರಿಂದ ಇನ್ನೂ ಅನೇಕ ಅನುಕೂಲತೆಗಳು ನಮಗೆ ಒದಗುವವೆಂದು ನನ್ನ ಅಭಿಪ್ರಾಯ. ಈ ನನ್ನ ಅಭಿಪ್ರಾಯವನ್ನು ಬಲ್ಲವರು ಆಲೋಚಿಸಬೇಕಾಗಿ ವಿಜ್ಞಾಪಿಸುವ.

N. A.

ಯೂರೋಪದ ಮಹಾ ಯುದ್ಧ.

ಕಳೆದ ವಾರದಲ್ಲಿ ಎಲ್ಲಾ ರಣರಂಗಗಳಲ್ಲಿಯೂ ತೀಕ್ಷ್ಣವಾದ ಕದನಗಳು ನಡೆದಿರುವವು. ಮುಖ್ಯವಾಗಿ ಈ ಕದನಗಳು ಸೊಮ್ಮೆಯಲ್ಲಿಯೂ ಬಾಲ್ಕಾನಿನಲ್ಲಿಯೂ ತೀಕ್ಷ್ಣವಾಗಿದ್ದವು. ಬ್ರಿಟಿಷರು ಎಂಕ್ರೆಯ ಉತ್ತರದಲ್ಲಿ ಪ್ರಮುಖ್ಯವಾಗಿ ಒಂದು ಜಯವನ್ನು ಪಡೆದಿರುತ್ತಾರೆ. ಅತ್ತಕಡೆ ಬಾಲ್ಕಾನ್ ರಣರಂಗದಲ್ಲಿ ಮಿತ್ರರು ತಮಗೆ ಜಯವಾಗಿರುವದೆಂದೂ ಶತ್ರುಗಳು ತಮಗೆ ಜಯವಾಗಿರುವದೆಂದೂ ಹೇಳಿಕೊಳ್ಳುತ್ತಿದ್ದಾರೆ. ಮಿತ್ರರಿಗೆ ಜಯವಾಗಿರುವದೆಂಬ ವಾರ್ತೆಯಿಂದ ಮೊನಸ್ಟಿರ್ ಬೇಗನೇ ಬೀಳಬಹುದೆಂದೂ ಶತ್ರುಗಳಿಗೆ ಜಯವಾಗಿದೆಂಬ ವಾರ್ತೆಯಿಂದ ರುಮೇನಿಯದ ಪರಿಣಾಮವು ಅತಿ ಭೀಕರವಾಗಿದೆಂದೂ ಊಹಿಸಲು ಕಾರಣವಾಗಿದೆ. ಶತ್ರುಗಳು ಈ ರಣರಂಗದಲ್ಲಿ ತಮಗೆ ಜಯವಾಗಿದೆಂದು ಹೇಳುತ್ತಿರುವದಾದರೂ ಅವರಿಗೆ ವಿಶೇಷ ಜಯವಾಗಲಿಲ್ಲವೆಂದೇ ಹೇಳಬೇಕಾಗಿಯದೆ. ರುಮೇನಿಯನರು ಇಲ್ಲಿ ಶತ್ರುಗಳ ಅಪಾರವಾದ ಸೇನೆಗಳನ್ನೂ ತೋಪುಗಳನ್ನೂ ವಿಶೇಷ ಧೈರ್ಯಸಾಹಸದಿಂದ ತಡೆದಿರುತ್ತಾರೆ. ಆದರೂ ರುಮೇನಿಯವರ ಸ್ಥಿತಿಯು ಈಗ ನೆಟ್ಟಗಿಲ್ಲವೆಂತ ಹೇಳಬಹುದು. ಯಾಕೆಂದರೆ ಸಲೋನಿಕದಲ್ಲಿರುವ ಮಿತ್ರರ ಸಹಾಯ್ಯವು ಬೇಕಾದಷ್ಟು ಇನ್ನೂ ರುಮೇನಿಯನರಿಗೆ ಸಿಕ್ಕಿರುವದಿಲ್ಲ. ಸಲೋನಿಕದಲ್ಲಿರುವ ಮಿತ್ರರ ಸಹಾಯ್ಯವು ತಕ್ಕ ಕಾಲದಲ್ಲಿ ಸಿಕ್ಕಿದ್ದರೆ ರುಮೇನಿಯವು ಶತ್ರುಗಳ ಮೇಲೆ ಹೋಗಿ ಬೀಳುವ ಹಾಗಿತ್ತಲ್ಲದೆ ಶತ್ರುಗಳು ರುಮೇನಿಯದ ಮೇಲೆ ಬೀಳುವ ಹಾಗಾಗುತ್ತಿದ್ದಿಲ್ಲ. ಮಾತ್ರವಲ್ಲದೆ ಬಲ್ಗೇರಿಯಕ್ಕೆ ಸಹಾಯ್ಯ ಮಾಡುವರೆ ಜರ್ಮನಿಗೆ ಅಷ್ಟು ಬೇಗ ಅಸ್ಪದ ದೊರಕುತ್ತಿದ್ದಿಲ್ಲ. ಅತ್ತಕಡೆ ರುಸ್ಯನರಿಂದ ರುಮೇನಿಯನರಿಗೆ ಸಹಾಯ್ಯವು ದೊರೆತಿದೆಂದು ಹೇಳಬಹುದಾದರೂ ಬೇಕಾದಷ್ಟು ಸಹಾಯ್ಯವು ಸಿಕ್ಕಿಯದೆಂದು ಹೇಳಲಾಗುವದಿಲ್ಲ. ಹೀಗೆ ರುಮೇನಿಯನರ ಸ್ಥಿತಿಯು ಕಷ್ಟತರವಾಗಿ ಬಂದಿದೆ. ಆದರೆ ಈಗ ಪಶ್ಚಿಮ ರಣರಂಗದಲ್ಲಿ ಬ್ರಿಟಿಷರು ನುಗ್ಗಿಹೋಗಿ ಕದನ ಮಾಡಿ ಸುಮಾರು ೫ ಮೈಲು ಮುಂದರಿದಿರುತ್ತಾರೆ. ಜರ್ಮನರಲ್ಲಿ ಸುಮಾರು ೬೦೦೦ ಸೇನಿಕರು ಬ್ರಿಟಿಷರ ಶೆರೆ ಬಿದ್ದಿರುತ್ತಾರೆ. ಈ ಪ್ರಾಂತ್ಯದಲ್ಲಿ ಹೇಗೂ ಸುಮಾರು ೫೦,೦೦೦ ಶತ್ರುಸೇನಿಕರ ಪ್ರಾಣಾಪಾಯವಾಗಿರಬಹುದು ಎಂಬ ವಾರ್ತೆಯು ಬಂದಿರುವದರಿಂದ ರುಮೇನಿಯನರ ಮೇಲಿರುವ ಒತ್ತಾಟವು ಸದ್ಯದಲ್ಲಿಯೇ ಕಡಿಮೆಯಾದೀತೆಂದು ನಂಬಬಹುದಾಗಿದೆ. ಹೇಗೂ ಈ ರಣರಂಗಗಳಲ್ಲಿ ಅತಿ ತೀಕ್ಷ್ಣತೆಯು ಇದ್ದರೂ ಸರ್ವಿಯಕ್ಕೆ ಆದ ಗತಿಯು ರುಮೇನಿಯಕ್ಕೆ ಬೇಗನೇ ಬಂದೀತು ಎಂದು ಹೇಳಲು ಯಾವ ಕಾರಣವೂ ಇಲ್ಲ. ಕಡೆಗೆ ಬಂದ ವಾರ್ತೆಯಿಂದ ಮೊನಸ್ಟಿರ್ ಮಿತ್ರರ ವಶವಾಯಿತೆಂದು ತಿಳಿದುಬರುವದರಿಂದ ರುಮೇನಿಯವರ ಮೇಲಿರುವ ಶತ್ರುಗಳ ತೀಕ್ಷ್ಣತೆಯು ಕಡಿಮೆಯಾಯಿತೆಂದು ಹೇಳಲು ಪ್ರತ್ಯವಾಯ ತೋರುವದಿಲ್ಲ.

ಪಶ್ಚಿಮ ರಣರಂಗ.

ಬ್ರಿಟಿಷರು ಈ ರಣರಂಗದಲ್ಲಿ ಕಳೆದ ಒಂದು ವಾರದಲ್ಲಿ ನುಗ್ಗಿಹೋಗಿ ಮಾಡಿದ ಕದನಗಳಲ್ಲಿ ಜರ್ಮನರಿಗೆ ಅಪರಿಮಿತವಾದ ನಷ್ಟವಾಗಿರುವದು. ಸೆಯೊಮೊಂಟ—ಹೆಮಲಿನಲ್ಲಿ ಬ್ರಿಟಿಷರು ನುಗ್ಗಿಹೋಗಿ ೪೦೦೦ಕ್ಕೆ ಮಿಕ್ಕಿದ ಶತ್ರುಸೇನಿಕರನ್ನು ಶೆರೆ ಹಿಡಿದಿರುತ್ತಾರೆ. ಬ್ರಿಟಿಷರು ಬಿಯೋಕೋರ್ಟು—ಎಂಕ್ರೆಯನ್ನು ಹಿಡಿದಿರುತ್ತಾರೆ. ಇಲ್ಲಿ ೫೦೦೦ಕ್ಕೆ ಮಿಕ್ಕಿದ ಶತ್ರುಸೇನಿಕರು ಬ್ರಿಟಿಷರ ಶೆರೆ ಬಿದ್ದಿರುವರು. ಎಂಕ್ರೆ ಮತ್ತು ಬಿಯೋಮುಂಟಿನ ಮಧ್ಯೆ ಶತ್ರುಗಳ ೫ ಕಂದಕಗಳ ಸಾಲುಗಳಿದ್ದವು. ಇವುಗಳೆಲ್ಲಾ ಬಾರ್ಬಡ್ ತಂತಿಗಳಿಂದ ಬಲಕಾಯಿಸಿಕೊಂಡವುಗಳು. ಆದರೆ ಬ್ರಿಟಿಷರ ಕಾಲಾಳು ಸೇನಿಕರು ಇವನ್ನೆಲ್ಲಾ ಲಕ್ಷ್ಯಮಾಡದೆ ಮುಂದರಿದು ಶತ್ರುಗಳನ್ನು ಹಿಂದಟ್ಟಿ ಈ ಪ್ರಾಂತ್ಯವನ್ನು ಸ್ವಾಧೀನಮಾಡಿಕೊಂಡಿರುವರು. ಶತ್ರುಗಳ ನಾಲ್ಕನೇ ಸೇನಾನೆಲೆಯನ್ನು ಬ್ರಿಟಿಷ ಸೇನಿಕರು ೧೫ ನಿಮಿಷಗಳೊಳಗೆ ಸ್ವಾಧೀನ ಮಾಡಿಕೊಂಡು ತಮ್ಮ ಉದ್ದೇಶಗಳನ್ನೆಲ್ಲಾ ಸಾಧಿಸಿಕೊಂಡಿರುವರು.

ಸೊಮ್ಮೆ ರಣರಂಗದಲ್ಲಿ ಅತಿ ಭೀಕರವಾದ ಕದನಗಳು ನಡೆದಿರುತ್ತದೆ. ಸೊಮ್ಮೆಯ ಉತ್ತರ ಮತ್ತು ದಕ್ಷಿಣದಲ್ಲಿ ಶತ್ರುಗಳು ಅತಿ ರೋಷಾವೇಶದಿಂದ ಹಲ್ಲೆ ಮಾಡಿದರು. ಹೀಗೆ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಭೀಕರ ಕಾಳಗವು ನಡೆದು ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ಎಂಕ್ರೆಯ ಉತ್ತರದಲ್ಲಿ ಬ್ರಿಟಿಷರು ಪುನಃ ಮುಂದರಿದು ಒಟ್ಟಿಗೆ [illegible] ಸೇನಿಕರನ್ನು ಶೆರೆ ಹಿಡಿದಿರುತ್ತಾರೆ. ಇಲ್ಲಿ ಬ್ರಿಟಿಷ ಸೇನಿಕರು ತೋರಿಸಿದ ಧೈರ್ಯಸಾಹಸಗಳನ್ನೂ ಮತ್ತು ಈ ಸ್ಥಳದ ಸ್ಥಿತಿಯನ್ನೂ ನೋಡುವದಾದರೆ ಬ್ರಿಟಿಷರಿಗೆ ಈ ಜಯದಲ್ಲಿ ಆದ ನಷ್ಟವು ಮಹತ್ವವಾದುದಲ್ಲ. ಬ್ರಿಟಿಷರ ಒಂದು ಡಿವಿಜನ್ ಸೇನೆಯು ೧ ಮೈಲು ಮುಂದರಿದು ೪೫೦ ಮಂದಿಯನ್ನು ಆಹುತಿ ಕೊಟ್ಟು ೧೦೦೦ ಜರ್ಮನ ಸೇನಿಕರನ್ನು ಶೆರೆ ಹಿಡಿದಿರುತ್ತದೆ.

ಇದೇ ತಾ. ೧೩ರಿಂದ ಬ್ರಿಟಿಷರ ಶೆರೆಬಿದ್ದ ಶತ್ರುಗಳ ಸಂಖ್ಯೆ ೬೧೯೦ ಎಂತ ಜನರಲ್ ಹೇಗರವರು ಪ್ರಕಟಿಸಿರುತ್ತಾರೆ. ಬ್ರಿಟಿಷರ ವಾಯುನಾವೆಗಳು ಶತ್ರುಗಳ ರೈಲ್ವೇಸ್ಟೇಷನುಗಳ ಮೇಲೆ ಬೊಂಬುಗಳನ್ನು ಹಾಕಿ ವಿಶೇಷ ನಷ್ಟಪಡಿಸಿರುತ್ತವೆ. ಶತ್ರುಗಳ ೫ ವಾಯುನಾವೆಗಳನ್ನು ಕೆಳಗಿಳಿಸಿರುತ್ತವೆ.

ಪೂರ್ವ ರಣರಂಗ.

ಈ ರಣರಂಗದಿಂದ ಈ ವಾರ ವಿಶೇಷ ವರ್ತಮಾನಗಳು ಬಂದಿರುವದಿಲ್ಲ.

ಬಾಲ್ಕಾನ್.

ಈ ವರ್ಷದಾಂತ್ಯದೊಳಗೆ ರುಮೇನಿಯವನ್ನು ಹತಬಡೆಯಬೇಕೆಂಬ ಉದ್ದೇಶದಿಂದ ಶತ್ರುಗಳು ರುಮೇನಿಯಕ್ಕೆ ವಿರೋಧವಾಗಿ ದೊಡ್ಡ ಸೇನೆಯೊಂದನ್ನು ಕೂಡಿಸುತ್ತಿದ್ದಾರೆಂತ ವಾರ್ತೆ ಬಂದದೆ.

ಒಕ್ಟೋಬರ ತಾ. ೨೯ರಿಂದ ಯಜಿಲ್ ಮತ್ತು ಕೆಸಿನೋ ಕಣಿವೆಗಳ ಮಧ್ಯೆ ಹಲ್ಲೆಮಾಡುತ್ತಿದ್ದ ಶತ್ರುಗಳನ್ನು ರುಮೇನಿಯನರು ಹಿಂದಕ್ಕಟ್ಟಿ ೬೦ ಸೇನಿಕರನ್ನೂ ೩ ಯಂತ್ರಚಾಲಿತ ಫಿರಂಗಿಗಳನ್ನೂ ಶೆರೆಹಿಡಿದಿರುವರು. ಅಲ್ಟ್ ನದಿಯ ಬಲಕಡೆಯಲ್ಲಿ ರುಮೇನಿಯನರು ಬಂಟೆಸ್ತಿಯ ದಕ್ಷಿಣ ಕಡೆಗೆ ಹಿಂದೆ ಸರಿದಿರುತ್ತಾರೆ.

ಕಿಂಪ್ಲೊಂಗಿನಲ್ಲಿ ರುಮೇನಿಯನರು ಶತ್ರುಸೇನೆಯಲ್ಲಿ ವಿಶೇಷ ನಷ್ಟಪಡಿಸಿ ಅವರನ್ನು ಹಿಮ್ಮೆಟ್ಟಿರುತ್ತಾರೆ. ಡೊಬ್ರುಡ್ಜದ ದಕ್ಷಿಣದಲ್ಲಿ ಪುನಃ ರುಮೇನಿಯನರು ಮುಂದರಿದಿರುತ್ತಾರೆ. ಅಲ್ಟ್ ನದಿಯ ಎಡದಡ ಮತ್ತು ಜ್ಯುಲ್ ಪ್ರಾಂತ್ಯದಿಂದ ರುಮೇನಿಯನರು ಹಿಂದೆ ಸರಿದಿರುವರು.

ಸೆರ್ನದಲ್ಲಿ ಕೆಲವು ದಿವಸಗಳಲ್ಲಿ ಯಾವದೊಂದು ವಿಶೇಷ ಕಾರ್ಯಗಳು ನಡೆಯದೆ ಇದ್ದು ಇದೇ ತಾ. ೧೩-೧೪ರಲ್ಲು ಪುನಃ ಇಲ್ಲಿ ತೀಕ್ಷ್ಣವಾದ ಕದನಗಳಿಗೆ ಪ್ರಾರಂಭವಾಯಿತು. ಈ ಎರಡು ದಿವಸಗಳ ಕದನಗಳಲ್ಲಿಯೂ ಸರ್ವಿಯಾನರಿಗೆ ವಿಶೇಷ ಜಯವಾಗಿರುತ್ತದೆ. ಜರ್ಮನರೂ ಬಲ್ಗೇರಿಯನರೂ ದಿಸ್ಟೆ ೧೨೧೨ ಬಳಿಗೆ ಸರಿದಿರುತ್ತಾರೆ. ಸರ್ವಿಯನರು ಸಿಂಗೆಲ್ ಎಂಬ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುವರು. ಸೆರ್ನದ ಪೂರ್ವದಲ್ಲಿ ನಡೆಯುತ್ತಿದ್ದ ಕದನವು ಕೊಹಲಿರ್ ಪ್ರಾಂತ್ಯಕ್ಕೆ ವಿಸ್ತರಿಸಿಯದೆ. ಸೆರ್ನದಲ್ಲಿ ೩೨೦೯ ಶತ್ರುಸೇನಿಕರು ಸರ್ವಿಯನರ ಶೆರೆಬಿದ್ದಿರುತ್ತಾರೆ. ಈ ಪೈಕಿ ೬೦೦ ಜರ್ಮನರು.

ಫ್ರೆಂಚರು ಕರಿಣ ಕಾಳಗಮಾಡಿ ಕೆನ್ನಾಲಿಯನ್ನು ಗೆದ್ದುಕೊಂಡಿರುತ್ತಾರೆ. ಬ್ರಿಟಿಷರು ಬರೆಕ್ಲಿಯನ್ನು ಸ್ವಾಧೀನಮಾಡಿಕೊಂಡಿರುವರು.

ಕಡೆಗೆ ಬಂದ ವಾರ್ತೆಯಿಂದ ಬ್ರಿಟಿಷರು ಸ್ಟ್ರುಮ ನದಿಯ ಎಡಗಡೆಯಲ್ಲಿ ಕವಾಕ್ಲಿಯನ್ನು ಸ್ವಾಧೀನಮಾಡಿಕೊಂಡರು ಎಂತ ತಿಳಿದುಬರುತ್ತದೆ. ಫ್ರೆಂಚರು ಮತ್ತು ಸರ್ವಿಯನರು ಸೆರ್ನಾ ಪ್ರಾಂತ್ಯದಲ್ಲಿ ಜಯಪ್ರದರಾಗಿ ಮುಂದೆ ನುಗ್ಗಿಹೋಗುತ್ತಿದ್ದಾರೆ. ತಾ. ೧೫ರಲ್ಲು ೪೦೦ ಮಂದಿ ಶತ್ರುಸೇನಿಕರು ಬ್ರಿಟಿಷರ ಶೆರೆಬಿದ್ದಿರುತ್ತಾರೆ. ಬಲ್ಗೇರಿಯನರೂ ಜರ್ಮನರೂ ಮ[illegible] ಮೈದಾನುಗಳಲ್ಲಿ ವಿಶೇಷ ನಷ್ಟಪಟ್ಟಿರುತ್ತಾರೆ. ಫ್ರೆಂಚರೂ ಸರ್ವಿಯನರೂ ಮೊನಸ್ಟಿರಿಗೆ ಹತ್ತಿರ ಸೇರುತ್ತಿದ್ದಾರೆ. ಮೊನಸ್ಟಿರ್ ಮಿತ್ರರ ಸ್ವಾಧೀನವಾಯಿತು. ಮಿತ್ರ ಸೇನಿಕರು ಮೊನಸ್ಟಿರನ್ನು ಪ್ರವೇಶಿಸಿದರು ಎಂತ ಫ್ರೆಂಚರು ಪ್ರಕಟಿಸಿರುತ್ತಾರೆ. ಮೊನಸ್ಟಿರ್ ಮಿತ್ರರ ಸ್ವಾಧೀನವಾದುದರಿಂದ ಇನ್ನು ಮಿತ್ರರು ಈ ಮಾರ್ಗವಾಗಿ ಬಲ್ಗೇರಿಯಕ್ಕೆ ನುಗ್ಗಿ ಬಲ್ಗೇರಿಯನರ ಹಮ್ಮನ್ನು ಸುಲಭವಾಗಿ ಮುರಿಯಬಹುದಾಗಿದೆ.

ಇಟಲಿ.

ಗೋರಿಡ್ಜಕ್ಕೆ ಪಶ್ಚಿಮದಲ್ಲಿರುವ ಸಾನ್‌ಮಾರ್ಕೋದ ಬಳಿ ಇಟಲಿಯನರ ಮೇಲೆ ಬಿದ್ದ ಶತ್ರುಗಳನ್ನು ಇಟಲಿಯನರು ಹಿಂದಕ್ಕಟ್ಟಿರುತ್ತಾರೆ. ಕಾರ್ಸೊದಲ್ಲಿ ಕೆಲವು ಕಡೆ ಇಟಲಿಯನರು ಮುಂದರಿದಿರುವರು. ಸಾನ್ ಮಾರ್ಕೊದಲ್ಲಿ ಇನ್ನೂ ಕದನವು ನಡಿಯುತ್ತದೆ.

ಈಜಿಪ್ಟ್.

ಕೈರೋ ನಗರದ ಮೇಲೆ ತಾ. ೧೩ರಲ್ಲು ವಾಯುನಾವೆಗಳು ಹಾಕಿದ ಬೊಂಬುಗಳಿಂದ ೪ ಯೂರೋಪಿಯನರು ಹತರಾಗಿರುವರು. ೪ ಮಂದಿ ಗಾಯಪಟ್ಟಿರುವರು.

ವಾಯುನಾವೆಗಳು.

ಜರ್ಮನರ ೮ ವಾಯುನಾವೆಗಳು ರುಮೇನಿಯದ ಪ್ರಧಾನ ಪಟ್ಟಣವಾದ ಬುಕಾರೆಸ್ಟಿನ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ೪ ಮಂದಿ ಹತರಾಗಿರುವರು. ೨೦ ಮಂದಿ ಗಾಯ ಒಡೆದಿರುವರು.

ಇಟಲಿಗೆ ಸೇರಿದ ಪಡೂಯ ಪಟ್ಟಣದ ಮೇಲೆ ಶತ್ರುಗಳ ವಾಯುನಾವೆಗಳು ಬೊಂಬುಗಳನ್ನು ಹಾಕಿರುತ್ತವೆ. ೯೦ ಮಂದಿ ಪ್ರಾಣಾಪಾಯ ಹೊಂದಿರುತ್ತಾರೆ. ಶತ್ರುಗಳ ಈ ಕೃತ್ಯವನ್ನು ಪೋಪ ಸ್ವಾಮಿಯವರು ಆಕ್ಷೇಪಿಸಿರುತ್ತಾರೆ.

ಈಜಿಪ್ತಿನಲ್ಲಿ ಬ್ರಿಟಿಷರು ಶತ್ರುಗಳ ಪಾಳೆಯಗಳ ಮೇಲೆ ೪೦೦ ರಾತ್ತು ಸಿಡಿಮದ್ದುಗಳನ್ನು ಎಸೆದು ಬಹಳ ನಷ್ಟಪಡಿಸಿರುತ್ತಾರೆ.

ಜಲಂತರ್ಗಾಮಿ ನಾವೆಗಳು.

ಈ ವಾರದಲ್ಲಿಯೂ ಶತ್ರುಗಳ ಜಲಂತರ್ಗಾಮಿ ನಾವೆಗಳಿಂದ ಬ್ರಿಟಿಷರ ಮತ್ತು ಇತರ ತಟಸ್ಥರಾಜ್ಯಗಳವರ ಕೆಲವು ಹಡಗಗಳು ಮುಣುಗಿಸಲ್ಪಟ್ಟಿರುತ್ತವೆ.

ವಿದೇಶ ವೃತ್ತಾಂತ.

ಹಿಂದೂಸ್ಥಾನದಲ್ಲಿರುವ ಬ್ರಿಟಿಷ ಸೇನಿಕರನ್ನು ಫ್ರಾನ್ಸಿಗೆ ಕಳುಹಿಸಿ ಫ್ರಾನ್ಸ್ ರಣರಂಗದ ಕಂದಕಗಳಲ್ಲಿರುವ ಸೇನಿಕರನ್ನೂ ೧೯ ವರ್ಷ ವಯಸ್ಸಿನ ಕೆಳಗಿನ ಸೇನಿಕರನ್ನೂ ಹಿಂದೂಸ್ಥಾನಕ್ಕೆ ಕಳುಹಿಸುವ ಏರ್ಪಾಡು ಮಾಡಬೇಕೆಂಬ ಪ್ರಸ್ತಾಪವು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ನಡೆದಿರುತ್ತದೆ. ಈ ಪ್ರಸ್ತಾಪವನ್ನು ಯುದ್ಧ ಮಂತ್ರಿಯಾದ ಲೋಯಿಡ್ ಜೋರ್ಜರವರ ಅಭಿಪ್ರಾಯದ ಒಟ್ಟೆ ಕಳುಹಿಸಬೇಕೆಂಬದಾಗಿ ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಕಳೆದ ವಾರ ಲಂಡನಿನಲ್ಲಿ ಪತ್ರಿಕಾಕಾರರ ಒಂದು ಸಭೆಯು ಕೂಡಿಬಂದಿರುತ್ತದೆ. ಕಾಗದಗಳ ಬೆಲೆಯು ಏರಿರುವದರಿಂದ ಪತ್ರಿಕೆಗಳ ಬೆಲೆಯನ್ನೂ ಏರಿಸುವ ಸಂಬಂಧ ಆಲೋಚಿಸುವದೇ ಈ ಸಭೆ ಕೂಡಿದುದರ ಉದ್ದೇಶವಾಗಿತ್ತು.

ಮೆಜರ್ ಜನರಲ್ ಸರ್. ಎ. ಕೊಕ್ಸರವರು ಇಂಡಿಯಾ ಆಫೀಸಿನ ಮಿಲಿಟರಿ ಸೆಕ್ರಟರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಿತ್ರರಾಜ್ಯಗಳವರು ಸಲೋನಿಕದಲ್ಲಿರುವ ಗ್ರೀಕರ ವೆಂಜಲಿಸ್ಟ ಸರಕಾರಕ್ಕೆ ೪೦೦ ಸಾವಿರ ಪವನುಗಳನ್ನು ಮುಂಗಡವಾಗಿ ಕೊಟ್ಟಿರುತ್ತಾರೆ.

ಬೆಲ್ಜಿಯಮಿನಲ್ಲಿರುವ ಬೆಲ್ಜಿಯಮ್ ಪ್ರಜಾಜನರನ್ನು ಜರ್ಮನರು ಹಿಡಿದು ಬಲಾತ್ಕಾರದಿಂದ ಜರ್ಮನಿಗೆ ಕಳುಹಿಸುತ್ತಲಿದ್ದಾರೆ. ಹೋಗಲಿಕ್ಕೆ ಒಪ್ಪದೆ ತಪ್ಪಿಸಿಕೊಳ್ಳುವವರನ್ನು ಕೊಲ್ಲುತ್ತಲಿದ್ದಾರೆ. ಜರ್ಮನರ ಈ ಅಮಾನುಷ ಕೃತ್ಯವನ್ನು ಎಲ್ಲಾ ರಾಜ್ಯಗಳು ಆಕ್ಷೇಪಿಸುತ್ತಲಿವೆ.

ಡೆವೊನ್‌ಶಯರಿನ ಡ್ಯೂಕರವರು ಕೆನಡಾ ದೇಶದ ಗವರ್ನರರಾಗಿ ನೇಮಿಸಲ್ಪಟ್ಟು ಪತ್ನಿ ಪರಿವಾರ ಸಹಿತ ಕೆನಡಾ ದೇಶಕ್ಕೆ ಹೋಗಿ ತಲಪಿರುತ್ತಾರೆ.

ಐರ್ಲ್ಲಾಂಡಿನಲ್ಲಿ ಸೇನೆಗೆ ಸೇರಲು ಅರ್ಹರಾದ ೧೬೧,೦೦೦ ಮಂದಿ ಇದ್ದಾರೆಂತ ಪ್ರಕಟವಾಗಿದೆ.

ಉತ್ತರ ಹಿಂದೂಸ್ಥಾನ.

ಇದೇ ನವಂಬರ ತಾ. ೧೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೪೬೦ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೫೦೩೩ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನ ಮತ್ತು ಸಿಂಧ್ ೨೫೩೨; ಮದ್ರಾಸ್ ೩೩೬; ಬಿಹಾರ್ ಮತ್ತು ಒರಿಸ್ಸ ೬೪; ಸಂಯುಕ್ತ ಸಂಸ್ಥಾನ ೧೬೨; ಪಂಜಾಬು ೫೨; ಬರ್ಮ ೨೪; ಮಧ್ಯಸಂಸ್ಥಾನಗಳು ೬೪೩; ಮೈಸೂರು ೩೨೧; ಹೈದರಾಬಾದ್ ೬೭; ಮಧ್ಯ ಹಿಂದೂಸ್ಥಾನ ೬೬ ಮರಣಗಳಾಗಿರುವವು.

ಇದೇ ತಾ. ೧೮ರಲ್ಲು ಮುಂಬಾಯಿಯಲ್ಲಿ ಯುದ್ಧದ ಫಂಡಿನ ಬಗ್ಗೆ ಹಣ ಕೂಡಿಸುವ ಉದ್ದೇಶದಿಂದ ಒಂದು ವಿಹಾರವೂ, ಸಂತೆಯೂ ಜರಗಿತು. ಈ ಸಂತೆಗೆ ಮುಂಬಾಯಿಯ ಪ್ರಖ್ಯಾತ ಹತ್ತೀ ವರ್ತಕರು ಕಳುಹಿಸಿ ಕೊಟ್ಟ ಹತ್ತಿಯ ಕೆಲವು ಮೂಟೆಗಳನ್ನು ಮುಂಬಾಯಿ ಗವರ್ನರ ಪ್ರಭು ಪತ್ನಿಯವರು ಏಲಂ ಹಾಕಿಸಿದಲ್ಲಿ ಇವಕ್ಕೆ ಮೇಲಾಟದಿಂದ ಬಹಳ ಹಣವು ದೊರಕಿತು. ಹೀಗೆ ಒಟ್ಟಿಗೆ ಈ ಹತ್ತಿಗಳ ಮೂಟೆಗಳನ್ನು ಏಲಂ ಹಾಕಿ ೧೨,೩೦೦ ರೂಪಾಯಿಗಳು ಕೂಡಿಬಂತು.

ಹಿಂದೂಸ್ಥಾನದಿಂದ ಲಂಡನಿಗೆ ವಕೀಲ ಪರೀಕ್ಷೆಗೆ ಓದುವರೆ ಹೋಗಿದ್ದ ಮೆ| ಎಲಿಸ್‌ವಾಸ್ ಎಂಬವರು ಸೇನೆಗೆ ಸೇರಿಕೊಂಡಿದ್ದರು. ಇವರು ಫ್ರಾನ್ಸ್ ರಣರಂಗದ ಯುದ್ಧದಲ್ಲಿ ಮಡಿದು ಹೋದರೆಂಬ ವರ್ತಮಾನವು ಕಳೆದ ವಾರ ಬಂದಿರುತ್ತದೆ.

ಟೆಲಗ್ರಾಮ್ ಇಲಾಖೆಯ ಅನೇಕ ಆಫೀಸರರು ಸೇನೆಗೆ ಬರಸಿಕೊಂಡದ್ದರಿಂದ ಸಾಧಾರಣ ಟೆಲಗ್ರಾಮುಗಳನ್ನು ಕಳುಹಿಸಲು ಆ ಇಲಾಖೆಯವರಿಗೆ ಕಷ್ಟವಾಗಿ ಬಂದುದರಿಂದ ಇಂಡಿಯಾ ಗವರ್ನಮೆಂಟಿನವರು ಇದೇ ಬರುವ ದಶಂಬರ ತಾ. ೧ರಿಂದ ೧೨ ಶಬ್ದಗಳಿಗೆ ಇದ್ದ ೬ ಆಣೆ ದರವನ್ನು ೮ ಆಣೆಗೆ ಹೆಚ್ಚಿಸಲು ನಿರ್ಣಯಿಸಿರುತ್ತಾರೆ. ೧೨ ಶಬ್ದಗಳಿಗಿಂತ ಹೆಚ್ಚಿನ ಒಂದು ಶಬ್ದಕ್ಕೆ ಎಂದಿನಂತೆಯೇ ಅರ್ಧಾಣೆ ಇದೆ. ಯುದ್ಧ ತೀರಿದನಂತರ ಈ ದರವು ಕಡಿಮೆ ಮಾಡಲಾದೀತು ಎಂತ ನಿಶ್ಚಯ ಹೇಳಲಾಗುವದಿಲ್ಲ. ಆ ಕಾಲದಲ್ಲಿ ಟೆಲಗ್ರಾಫ್ ಇಲಾಖೆಯ ಬಂಡವಾಳಕ್ಕನುಸಾರವಾಗಿ ಈ ದರವು ಕಡಮೆಮಾಡಲಾದೀತು ಇಲ್ಲವೆ ಇದಕ್ಕಿದ್ದ ಹಾಗೆಯೇ ಇದ್ದೀತು ಎಂತ ತಿಳಿದುಬರುತ್ತದೆ.

ಮುಣುಗಿ ಹೋದ "ಆರೇಬಿಯ" ಹಡಗದಲ್ಲಿದ್ದ ಪ್ರಯಾಣಿಕರಲ್ಲಿ ೩೦ ಮಂದಿ ಲಂಡನಿಗೆ ಸುರಕ್ಷಿತವಾಗಿ ತಲಪಿರುವರು ಎಂತ ವಾರ್ತೆ ಬಂದಿದೆ.

ಬಂಗಾಳಕ್ಕೆ ಸೇರಿದ ಚಂಪ್‌ಪುರದಲ್ಲಿ ಕಳೆದ ವಾರ ಪೋಲಿಸಿನವರಿಗೂ, ದಕಾಯಿತರಿಗೂ ಒಂದು ಕದನ ನಡೆದಿರುತ್ತದೆ. ಈಚೆಗೆ ಕೆಲವು ದಕಾಯಿತರು ರಾತ್ರಿಕಾಲ ದೋಣಿಗಳ ಮೂಲಕ ಗ್ರಾಮಗಳನ್ನು ನುಗ್ಗಿ ಸೂರೆಸುಲಿಗೆ ಮಾಡುತ್ತಾರೆಂಬದಾಗಿ ಪೋಲಿಸರಿಗೆ ವರದಿ ಬಂದುದರಿಂದ ಪೋಲಿಸಿನವರು ಈ ವಿಷಯ ಹೆಚ್ಚಿನ ವಿಚಾರ ತಕ್ಕೊಳ್ಳುತ್ತಿದ್ದರು. ತಾ. ೬ರಲ್ಲು ಪೋಲಿಸಿನವರು ದಕಾಯಿತರ ದೋಣಿಯನ್ನು ಹಿಂದಟ್ಟಿಕೊಂಡು ಹೋದಲ್ಲಿ ಪೋಲಿಸಿನವರಿಗೂ, ದಕಾಯಿತರಿಗೂ ಗಂಟುಬಿದ್ದು ದಕಾಯಿತರು ಪೋಲಿಸಿನವರ ಕೋವಿಯನ್ನೂ ತೋಟೆಗಳನ್ನೂ ಕಿತ್ತುಕೊಂಡು ಒಬ್ಬ ಕನ್‌ಸ್ಟೇಬಲನಿಗೆ ಗಾಯಪಡಿಸಿದ್ದರಿಂದ ಪೋಲಿಸಿನವರು ಪುನಃ ಈ ದಕಾಯಿತರನ್ನು ಹಿಡಿಯಬೇಕೆಂಬ ಪ್ರಯತ್ನ ನಡಿಸುತ್ತಲೇ ಇದ್ದರು. ಕಳೆದ ವಾರ ದಕಾಯಿತರು ಒಂದು ನದಿಯಲ್ಲಿ ಹೋಗುತ್ತಿರುವಾಗ ಪೋಲಿಸಿನವರು ಅವರನ್ನು ಹಿಂದಟ್ಟಿದರು. ಹೀಗೆ ಪೋಲಿಸಿನವರೂ ದಕಾಯಿತರೂ ಗುಂಡುಹಾರಿಸಿಕೊಂಡರು. ಒಟ್ಟಿಗೆ ೬ ದಕಾಯಿತರಿದ್ದರು. ಕಡೆಗೆ ದಕಾಯಿತರು ದೋಣಿಯನ್ನು ದಡ ಸೇರಿಸಿದರು. ದಡದಲ್ಲಿ ಎರಡು ಪಂಗಡದವರಿಗೂ ಕದನವಾಯಿತು. ಪೋಲಿಸಿನವರ ಪಕ್ಷ ಗ್ರಾಮಸ್ಥರನೇಕರು ಸೇರಿಕೊಂಡರು. ೬ ತಾಸುಗಳ ವರೆಗೆ ಕದನವಾಗಿ ಪೋಲಿಸಿನವರು ೨ ದಕಾಯಿತರನ್ನು ಹಿಡಿದರು. ನಾಲ್ಕು ದಕಾಯಿತರು ತಪ್ಪಿಸಿಕೊಂಡರು. ದಕಾಯಿತರು ಪೋಲಿಸಿನವರಿಂದ ಹಿಂದೆ ಕಿತ್ತುಕೊಂಡಿದ್ದ ಕೋವಿಯೂ ತೋಟೆಗಳೂ ಪೋಲಿಸಿನವರಿಗೆ ದೊರಕಿದವು. ಈ ಕದನದಲ್ಲಿ ಒಬ್ಬ ಚೌಕಿದಾರನಿಗೆ ಗುಂಡು ತಗಲಿರುತ್ತದೆ.

ಪಂಜಾಬು ರಾಜಕೀಯ ತಕ್ಸೀರಿನ ಸಂಬಂಧದಲ್ಲಿ ಕಲ್ಕತ್ತೆಯ ಪೋಲಿಸಿನವರು ಕಳೆದ ವಾರ ಸೇವಾಸಿಂಘನೆಂಬ ಒಬ್ಬ ಸಿಕ್ಕನನ್ನು ಕೈದುಮಾಡಿದರು. ಅವನು ಪೋಲಿಸಿನವರಿಂದ ತಪ್ಪಿಸಿ ಓಡಿಹೋದಲ್ಲಿ ಪೋಲಿಸಿನವರು ಅವನನ್ನು ಹಿಂದಟ್ಟಿ ಹಿಡಿದರು. ನಂತರ ಮೇಜಿಸ್ಟ್ರೇಟರ ಹುಕುಂ ಪ್ರಕಾರ ಅವನನ್ನು ಇಬ್ಬರು ಕನ್‌ಸ್ಟೇಬಲರೂ ಒಬ್ಬ ಹೆಡ್‌ಕನ್‌ಸ್ಟೇಬಲನೂ ಟ್ರೇನಿನಲ್ಲಿ ಅಲ್ಲಹಾಬಾದಿಗೆ ತಕ್ಕೊಂಡು ಹೋಗುವಾಗ ದಾರಿಯಲ್ಲಿ ಟ್ರೇನು ಬಂಡಿ ಓಡುತ್ತಿರುವಾಗಲೇ ಸಿಂಘನು ಕಿಡಿಕಿಯಿಂದ ಹಾರಿ ತಲೆತಪ್ಪಿಸಿಕೊಂಡಿರುವನೆಂಬ ವಾರ್ತೆ ಬಂದದೆ.

"ಕೆಲೆಡೋನಿಯ" ಎಂಬ ಟಪ್ಪಾಲು ಹಡಗವು ಕಳೆದ ತಾ. ೨೮ರಲ್ಲು ಲಂಡನಿನಿಂದ ಹೊರಟು ಇದೇ ತಾ. ೧೫ರಲ್ಲು ಸುರಕ್ಷಿತವಾಗಿ ಮುಂಬಾಯಿಗೆ ತಲಪಿರುತ್ತದೆ. ಈ ಹಡಗದಲ್ಲಿ ಒಟ್ಟಿಗೆ ೪೦೦ ಪ್ರಯಾಣಿಕರಿದ್ದರು. ಜಸ್ಟಿಸ್ ಫ್ಲೆಚ್ಚರ್, ಜಸ್ಟಿಸ್ ವಾಮ್‌ಸ್ಲೆ, ಜಸ್ಟಿಸ್‌ಗ್ರೀವ್ಸ್ ಮೊದಲಾದವರು ಈ ಹಡಗದಲ್ಲಿದ್ದರು.

ದಕ್ಷಿಣ ಆಫ್ರೀಕದಿಂದ ಬಂದ ಮೆ| ಹೆನ್ರಿ ಎಸ್. ಎಲ್. ಪೋಲಕರವರಿಗೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು ಇದೇ ತಾ. ೧೫ರಲ್ಲು ಆಮಂತ್ರಿಸಿ ಸನ್ಮಾನಿಸಿದರು. ಹಿಂದೀ ಜನರು ಈ ಘೋರ ಯುದ್ಧದಲ್ಲಿ ತೋರಿಸಿದ ರಾಜಭಕ್ತಿಯಿಂದಲೂ ದಕ್ಷಿಣ ಆಫ್ರೀಕದಲ್ಲಿರುವ ಹಿಂದೀ ಜನರು ಸ್ವತಹಾ ಸೇನೆಗೆ ಸೇರಿಸಿಕೊಂಡು ಮಾಡಿದ ಸಹಾಯ್ಯದಿಂದಲೂ ದಕ್ಷಿಣ ಆಫ್ರೀಕದಲ್ಲಿರುವ ಯೂರೋಪಿಯನರು ಈ ಹಿಂದೀಗಳನ್ನು ಮುಂಚಿನಂತೆ ನಡಿಸುವದಿಲ್ಲ. ಈ ವಿಷಯದಲ್ಲಿ ಯೂರೋಪಿಯನರ ಸ್ಥಿತಿಯು ಮಾರ್ಪಟ್ಟಿದೆ ಎಂಬದಾಗಿ ಮೆ| ಪೋಲಕರವರು ಹೇಳಿರುತ್ತಾರೆ.

ಲಕ್ನೌನಗರದ ಪಂಡಿತ ಬಿಶನ್ ನಾರಾಯಣಧಾರರವರು ತಾ. ೧೯ರಲ್ಲು ದೈವಾಧೀನರಾದರು ಎಂಬ ವಾರ್ತೆ ಬಂದಿರುವದು. ಇವರ ಮರಣದಿಂದ ಹಿಂದೂಸ್ಥಾನದಲ್ಲೆಲ್ಲಾ ವಿಷಾದ ಉಂಟಾಗಿದೆ. ಪಂಡಿತ ನಾರಾಯಣಧಾರರವರು ಪ್ರಖ್ಯಾತರಾದ ಬೆರಿಷ್ಟರರೂ ಅಷ್ಟೇ ಅಲ್ಲಾ; ೧೯೧೧ನೇ ಇಸವಿಯ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ೧೯೧೪ನೇ ಇಸವಿಯಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರಾಗಿದ್ದು ಹಲವು ಬಗೆಯ ಲೋಕಸೇವೆಯನ್ನು ಮಾಡಿದವರು.

ಪೂನೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಲೋ| ತಿಲಕರವರಿಂದ ೪೦,೦೦೦ ರೂಪಾಯಿಗಳ ಕೇವಣಾತಿ ತಕ್ಕೊಂಡ ಕೂಡಲೇ ಮುಂಬಾಯಿಯ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕಾಕಾರರು ಲೋ| ತಿಲಕರವರನ್ನು ದೂಷಿಸಿ ಒಂದು ಲೇಖನವನ್ನು ಪ್ರಕಟಿಸಿದ್ದರು. ಈಗ ತಾನೇ ಹೈಕೋರ್ಟಿನವರು ತಿಲಕರವರ ಗುಣವಾಗಿ ತೀರ್ಮಾನ ಕೊಟ್ಟದ್ದರಿಂದ ಸದರಿ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕಾಕಾರರು ಪಶ್ಚಾತ್ತಾಪ ಪಟ್ಟು ಹಿಂದೆಬರೆದ ಆ ಲೇಖನದ ಕ್ಷಮಾಪಣೆ ಕೇಳಿರುತ್ತಾರೆ. ಇದೇ ಸತ್ಯ ಪ್ರೀತಿ.

ದಕ್ಷಿಣ ಹಿಂದೂಸ್ಥಾನ.

ಸಿಲೋನು ಮತ್ತು ಮಲಯಾ ದ್ವೀಪಗಳ ತೋಟಗಳಲ್ಲಿ ಕೆಲಸ ಮಾಡುವ ಹಿಂದೀ ಕೂಲಿಯಾಳುಗಳ ಸ್ಥಿತಿಗತಿಗಳನ್ನು ವಿಚಾರಿಸಿ ವರದಿ ಮಾಡುವರೆ ಮದ್ರಾಸ್ ಸರಕಾರದವರು ಇಂಡಿಯಾ ಸರಕಾರದವರ ಅನುಮತಿಯಿಂದ ಗುಂಟೂರು ಕಲೆಕ್ಟರರಾದ ಮೆ| ಎಸ್. ಇ. ಮೆಜೋರಿಬೆಂಕ್ಸರನ್ನೂ ಬಹುಮಾನಪಟ್ಟ ಖಾನ್‌ಬಹದ್ದೂರ್ ಅಹಮ್ಮದ್ ತಂಬಿ ಮರಕಯ್ಯರರವರನ್ನೂ ನಿಯಮಿಸಿರುತ್ತಾರೆ.

ಮದ್ರಾಸ್ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರುವ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರರ ಕೆಲಸದವಧಿಯು ಇದೇ ಬರುವ ಫೆಬ್ರುವರಿ ತಿಂಗಳಲ್ಲಿ ಮುಗಿಯುವದರಿಂದ ಅವರ ಬದಲಿಗೆ ಈಗ ತಾನೇ ಬಂಗಾಳದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರುವ ಸರ್ ಶಮ್ಸುಲ ಹುದ್ದಾರವರು ನೇಮಿಸಲ್ಪಡುವರೆಂಬದಾಗಿ ಸುದ್ದಿ ಎದ್ದಿದೆ. ಈ ಕೆಲಸಕ್ಕೆ ಮದ್ರಾಸ್ ಸಂಸ್ಥಾನದಲ್ಲಿ ಅರ್ಹರಾದವರಿರುತ್ತಾ ಬಂಗಾಳದವರನ್ನು ನೇಮಿಸುವದು ನ್ಯಾಯವಲ್ಲವೆಂದೂ ಮದ್ರಾಸಿನವರನ್ನು ನೇಮಿಸಬೇಕೆಂದೂ ಸೂಚಿಸುವ ಸಭೆಗಳು ಮದ್ರಾಸಿನಲ್ಲಿ ಜರಗುತ್ತಲಿವೆ. ಮದ್ರಾಸಿನ "ಹಿಂದೂ" ಪತ್ರಿಕಾಕಾರರು ಈ ನೇಮಕಕ್ಕೆ ಆಫೀಸರರ ವರ್ಗದಲ್ಲಿ ದಿವಾನ್‌ಬಹದ್ದೂರ ರಾಜಗೋಪಾಲಾಚಾರಿ ಮತ್ತು ಜಸ್ಟಿಸ್ ಅಬ್ದುಲರಹಿಮರ ಹೆಸರನ್ನೂ ಆಫೀಸರರಲ್ಲದವರಲ್ಲಿ ನವಾಬ್ ಸೈಯ್ಯದ್ ಮಹಮ್ಮದ್ ಬಹದ್ದೂರರವರ ಹೆಸರನ್ನೂ ಸೂಚಿಸಿರುತ್ತಾರೆ. ನವಾಬ್ ಸೈಯ್ಯದ್ ಮಹಮ್ಮದ್ ಬಹದ್ದೂರರವರು ಮದ್ರಾಸಿನ ಶೆರೀಫರಾಗಿದ್ದರು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ೧೧ವರ್ಷಗಳಿಂದ ವರಿಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರು. ರಾಷ್ಟ್ರೀಯ ಸಭೆಯ ಜೋಯಿಂಟ್ ಜನರಲ್ ಸೆಕ್ರೆಟರಿಯೂ ಆಗಿರುತ್ತಾರೆ. ಮಾತ್ರವಲ್ಲ; ಅನೇಕ ದೇಶೋದ್ಧಾರಕ ಕಾರ್ಯಗಳನ್ನು ಮಾಡಿದವರು. ಇಂಥವರನ್ನು ಮದ್ರಾಸ್ ಕಾರ್ಯನಿರ್ವಾಹಕ ಸಭೆಯ

ಮೆಂಬರರಾಗಿ ನೇಮಿಸುವದಕ್ಕೆ ಯಾರ ಅಡ್ಡಿಯೂ ಇರದು ಎಂಬದಾಗಿ ಸೂಚಿಸೋಣಾಗಿದೆ.

~~~~~

ಮೈಸೂರಿನ ದಿವಾನರಾಗಿರುವ ಸರ್ ಎಮ್. ವಿಶ್ವೇಶ್ವರಯ್ಯನವರು ಕೆಲಸದಿಂದ ನಿವೃತರಾಗುವರೆಂಬ ವಾರ್ತೆಗೆ ಯಾವ ಆಧಾರವೂ ಇಲ್ಲವೆಂಬದಾಗಿ ತಿಳಿದು ಬರುತ್ತದೆ.

~~~~~

ದಕ್ಷಿಣ ಕನ್ನಡ.

~~~~~

ಸಹಕಾರ.

೧೯೧೬-೧೭ನೇ ವರ್ಷದ ೨ನೇ ಸರ್ಕ್ಯುಲಾರು.

ಹಿಂದಿನ ಸರ್ಕ್ಯುಲಾರಿನಲ್ಲಿ ಪ್ರಕಟಿಸಿದ ಪಂಚಾಯತಿಕೆ (Arbitration)ಯ ಕ್ರಮದಲ್ಲಿ ಸಂಘಗಳು ಸರಿಯಾಗಿ ಗ್ರಹಿಸಬೇಕಾದ ವಿಷಯಗಳು ಕೆಲವು ಇರುತ್ತವೆ. ಅವುಗಳ ಪೈಕಿ ಮೊದಲನೆಯದೇನೆಂದರೆ:—ಆ ಕ್ರಮವನ್ನನುಸರಿಸಿ ಪ್ರತಿ ಒಂದು ಸಂಘವು ತನ್ನ ಸ್ವಂತ ನಿಬಂಧನೆಗಳಲ್ಲಿ ಒಂದು ನಿಬಂಧನೆಯನ್ನು ಏರ್ಪಡಿಸಿಕೊಳ್ಳಬೇಕು. ಹಾಗೆ ನಿಬಂಧನೆಯನ್ನು ಏರ್ಪಡಿಸಿಕೊಳ್ಳದಿದ್ದರೆ ಸರಕಾರದವರಿಂದ ಮಾಡಲ್ಪಟ್ಟ ಪಂಚಾಯತಿಕೆಯ ಕ್ರಮವನ್ನು ಜಾರಿ ನಡೆಯಿಸಲು ಸಂಘಗಳಿಗೆ ಅಧಿಕಾರವಿಲ್ಲವೆಂದಲ್ಲ; ಆದರೆ ಸಂಘದ ನಿಬಂಧನೆಗಳಲ್ಲಿ ಕೂಡಾ ಒಂದು ಕ್ರಮವನ್ನು ಕೂಡಿಸಿದರೆ, ಅದರ ತತ್ವಗಳು ಮತ್ತು ವಿಧಿಗಳು ಎಲ್ಲವೂ ಸಂಘದ ಎಲ್ಲಾ ಮೆಂಬರರಿಗೆ ತಿಳಿಸಿದಹಾಗಾಗುತ್ತದೆ. ಸರಕಾರದವರಿಂದ ಪ್ರಕಟಿಸಲ್ಪಟ್ಟ ಕ್ರಮಗಳು ಮೆಂಬರರೆಲ್ಲರಿಗೆ ಗೊತ್ತಿರಬೇಕಾಗಿದ್ದರೂ ಸಹಜವಾಗಿ ಗೊತ್ತಿರುವುದಿಲ್ಲ;—ಸಂಘದ ನಿಬಂಧನೆಗಳಲ್ಲಿ ಸೇರಿಸಿದರೆ ಅದನ್ನು ತಿಳಿದುಕೊಳ್ಳುವುದಕ್ಕೆ ಮೆಂಬರರಿಗೆ ಹೆಚ್ಚಿನ ಆಸ್ಪದವನ್ನು ಕೊಟ್ಟಂತೆ ಆಗುತ್ತದೆ. ಆದುದರಿಂದ ಪಂಚಾಯತಿಕೆಯ ಕ್ರಮವನ್ನು ಪ್ರತಿಒಂದು ಸಂಘವು ಮಹಾ ಸಭೆಯಲ್ಲಿ ವಿವರಿಸಿ ನಿಬಂಧನೆಯಾಗಿ ಸೇರಿಸಿಕೊಂಡು ಅದನ್ನು ಜಾರಿ ನಡೆಯಿಸುವುದಕ್ಕೋಸ್ಕರ ರಿಜಿಸ್ಟ್ರಾರವರಿಂದ ಕ್ರಮವಾದ ಸೇಂಕ್ಷನ್ ಪಡೆಸಿಕೊಳ್ಳತಕ್ಕದ್ದು. ಸಂಘದ ನಿಬಂಧನೆಗಳಲ್ಲಿ ಪಂಚಾಯತಿಕೆಯ ಕುರಿತು ಏರ್ಪಡಿಸಬೇಕಾದ ಸೂತ್ರಗಳನ್ನು ಸಹಕಾರ ಇಲಾಖೆಯವರು ಈ ಕೆಳಗೆ ನಮೂದಿಸಿದಂತೆ ಸಂಗ್ರಹಿಸಿ ಒಂದು ನಿಬಂಧನೆಯ ಮಸೂದೆಯನ್ನು ತಯಾರಿಸಿದ್ದಾರೆ. ಅದು ಏನೆಂದರೆ:—

"ಸಂಘದ ಮೆಂಬರರ ಯಾ ಮಾಜಿ ಮೆಂಬರರ ಅಥವಾ ಮೆಂಬರನ ಯಾ ಮಾಜಿ ಮೆಂಬರನ ಮುಖಾಂತರ ದಾವೆಮಾಡುವ ಜನರ ಒಳಗೆ ಅಥವಾ ಒಬ್ಬ ಮೆಂಬರನ ಯಾ ಮಾಜಿ ಮೆಂಬರನ ಯಾ ಹಾಗೆ ದಾವೆಮಾಡುವ ಮನುಷ್ಯರ ಮತ್ತು ಆಡಳಿತ ಸಭೆಯವರ ಒಳಗೆ ಸಂಘದ ಕೆಲಸಕ್ಕೆ ಸಂಬಂಧಪಟ್ಟು ವಿವಾದವು ಹುಟ್ಟಿದರೆ ಯಾವ ಪಕ್ಷದವನಾದರೂ ಅದನ್ನು ರಿಜಿಸ್ಟ್ರಾರವರಿಗೆ ಒಪ್ಪಿಸಬಹುದು. ಸದರೀ ವಿವಾದವನ್ನು ತಾನೇ ಇತ್ಯರ್ಥಪಡಿಸಲು ಅಥವಾ ಇತ್ಯರ್ಥದ ಬಗ್ಗೆ ಆಕ್ಟಿನ ೪೩ನೇ ಪ್ರಕರಣದ ಮೇರೆಗೆ ಸರಕಾರದವರಿಂದ ಏರ್ಪಡಿಸೋಣಾದ XIIನೇ ಕ್ರಮದ (ತ)ನೇ ಉಪಕ್ರಮದಲ್ಲಿ ಹೇಳಿರುವಂತೆ ಒಬ್ಬ ಪಂಚಾಯತಿದಾರನಿಗೆ ಯಾ ಹಲವು ಪಂಚಾಯತಿದಾರರಿಗೆ ಒಪ್ಪಿಸಲು ರಿಜಿಸ್ಟ್ರಾರವರಿಗೆ ಅಧಿಕಾರವಿರತಕ್ಕದ್ದು. ರಿಜಿಸ್ಟ್ರಾರವರ ತೀರ್ಮಾನವಾಗಲಿ ಪಂಚಾಯತಿದಾರನ ಯಾ ಪಂಚಾಯತಿದಾರರ ತೀರ್ಮಾನವಾಗಲಿ ಆಖೈರ ತೀರ್ಮಾನವಾಗಿರತಕ್ಕದ್ದು. ಮತ್ತು ಅದು ಅಮಲ್‌ಜಾರಿಯ ಬಗ್ಗೆ ಸಂಘವು ಸೇರಿರುವ ಚಕ್ಕಬಂದಿಯುಳ್ಳ ಸಿವಿಲ್ ಕೋರ್ಟಿನಲ್ಲಿ ಹಾಜರುಪಡಿಸತಕ್ಕದ್ದು.

ಈ ರೀತಿಯಲ್ಲಿ ಎಲ್ಲಾ ಸಂಘದವರು ಒಂದು ನಿಬಂಧನೆಯನ್ನು ಏರ್ಪಡಿಸಬೇಕಾಗಿ ಈ ಮೂಲಕ ಸೂಚಿಸೋಣಾಗುತ್ತದೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು, ತಾ. 12-11-16.

ಯಂ. ಅನಂತರಾವ್,
ಕಾರ್ಯದರ್ಶಿ.

~~~~~

ಸುಳ್ಯ:—ಪೋಲಿಸ ಅಸಿಸ್ಟಾಂಟ ಸುಪರಿಂಟೆಡೆಂಟ ದೊರೆಗಳವರು ಇಲ್ಲಿಗೆ ೧೩-೧೧-೧೬ಕ್ಕೆ ತಲ್ಪಿ ಇಲ್ಲಿಯ ಸ್ಟೇಶನು-ವಗೈರೆ ಸಂದರ್ಶಿಸಿ ನೆಲ್ಲೂರು ಕೆಮ್ರಾಜೆ ಗ್ರಾಮದಲ್ಲಿ ನಡೆದ ಖೂನಿ ಮೊಕದಮೆಯನ್ನು ತನಕಿಮಾಡಿ ಈ ದಿವಸ ಹಿಂದೆ ಹೋಗಿರುತ್ತಾರೆಂಬ ವರ್ತಮಾನ ಕೇಳುತ್ತೇನೆ. ಮಳೆಯು ಈಗ ೨ ದಿವಸಗಳಿಂದ ಸ್ವಲ್ಪ ದೂರವಾಗಿದೆ. ಆದರೆ ರಾತ್ರಿಕಾಲ ಮಳೆಯು ಆಗಾಗ್ಯೆ ಸುರಿಯುತ್ತಿದೆ.

ಇಲ್ಲಿಯ ಎಲಿಮೆಂಟರಿ ಶಾಲೆಯಲ್ಲಿ ಈಗ ನೂರಾರು ವಿದ್ಯಾರ್ಥಿಗಳ ಸಂಖ್ಯೆಯು ಇದ್ದಾಗ್ಯೂ ಈವರೆಗೆ ಕನ್ನಡ ನಾಲ್ಕನೇ ಕ್ಲಾಸು ತೆರೆಯದೆ ಇದ್ದದ್ದು ವಿದ್ಯಾರ್ಥಿಗಳವ ಬಡಜನರ ದುರಾದೃಷ್ಟವೇ ಸರಿ. ಈ ಸಂಬಂಧ ಇದೇ ತಿಂಗಳ ೩ನೇ ತಾರೀಕಿನಲ್ಲಿ ಇಲ್ಲಿ ಒಂದು ಮಹಾಸಭೆ ಕೂಡಿಸಿ ಈ ಕೊರತೆಯನ್ನು ಪರಿಹರಿಸಬೇಕೆಂತ ಇರುವದರಿಂದ ಈ ಊರ ವ ಆಜುಬಾಜಿನವರಾದ ಎಲ್ಲಾ ನಿವಾಸಿಕರು ಬಂದು ತಮ್ಮ ಕೋರಿಕೆಗಳನ್ನು ಹೇಳಕೊಳ್ಳಬೇಕಾಗಿ ಈ ಮೂಲಕ ತಿಳಿಸಿಯದೆ.

ಇಲ್ಲಿಯ ವೈದ್ಯ ಉದ್ಯೋಗಸ್ಥರು ಆಸ್ಪತ್ರೆಯನ್ನು ಮುಚ್ಚಿ ಸುಬ್ರಮಣ್ಯಕ್ಕೆ ಹೋಗಿರುವದರಿಂದ ರೋಗಿಗಳ ಕಷ್ಟವು ಅಷ್ಟು ಇಷ್ಟೆಂದು ಹೇಳತೀರದು.

~~~~~

ಪುತ್ತೂರು:—ಸುಬ್ರಮಣ್ಯದ ಕುಳಗುಂದದಲ್ಲಿ ಈ ವರುಷ ಇದೇ ನವಂಬರ ತಾ. ೧೮ರವರೆಗೆ ೨೦,೪೦೭ ಜಾನುವಾರುಗಳು ಬಂದಿದ್ದವು. ಇದರಿಂದ ರೂಪಾಯಿ ೨೫೫೦—೪—೦ ಸುಂಕ ವಸೂಲು ಆಗಿದ್ದಾಗಿ ತಿಳಿದು ಬರುತ್ತದೆ.

ಇದೇ ತಿಂಗಳ ತಾ. ೧೪ರಿಂದ ಹಿಂದೂ ಟ್ರಾನ್ಸಿಟ್ ಕಂಪೆನಿಯ ಮೋಟರ್ ಬಸ್ ಗಾಡಿಯು ಪುತ್ತೂರಿಂದ ಮಂಗಳೂರಿಗೆ ನಡಿಯುವರೆ ಆರಂಭಿಸಿರುವದು.

ಈ ವರ್ಷ ಕುಳಗುಂದ ಜಾನುವಾರು ಸಂತೆ ಸಮಯ ಅತಿ ವೃಷ್ಟಿಯಾದುದರಿಂದ ಕುಳಗುಂದದ ಮಜ್ಜ ಗದ್ದೆಗಳಲ್ಲಿ ಬೈಲು ಸಾಗುವಳಿಗೆ ಹೂಡಿ ಇಟ್ಟಂತೆ ಆಗಿ ಜಾನುವಾರುಗಳಿಗೆ ನಿಲ್ಲಲಿಕ್ಕಾಗದೆ ಜಾನುವಾರು ತಂದ ಮಾಲೀಕರಿಗೂ ಜಾನುವಾರು ಕೊಂಡುಕೊಳ್ಳಲಿಕ್ಕೆ ಬಂದವರಿಗೂ ಬಹಳ ಅಭ್ಯಂತರವಾಯಿತು. ಮಳೆ ವಿಶೇಷವಾದ್ದರಿಂದ ಜಾನುವಾರುಗಳ ಬೆಲೆಯು ತಗ್ಗಿ ಈ ಕಾರಣದಿಂದ ಜಾನುವಾರುಗಳು ವಾಪಾಸು ಹೋಗಲು ಪ್ರಾರಂಭಿಸಿ ಜಾನುವಾರುಗಳ ಬೆಲೆ ಪುನಃ ಏರಿಹೋಯಿತು, ಹೊಳೆಯಲ್ಲಿ ನೆರೆತುಂಬಿ ಮೇಯಹೋದ ಜಾನುವಾರುಗಳಿಗೆ ವಾಪಾಸು ಬರಲಿಕ್ಕಾಗಲಿಲ್ಲ. ಜಾನುವಾರು ಮಾಲಿಕರಲ್ಲೊಬ್ಬ ಹೊಳೆ ದಾಟುವಾಗ್ಯೆ ನೆರೆನೀರಿಗೆ ಮುಳುಗಿಹೋಗಿ ಅವನ ಶವ ಈ ವರೆಗೆ ಸಿಕ್ಕಲಿಲ್ಲವೆಂತಲೂ ಹೊಳೆ ದಾಟುವಾಗ್ಯೆ ಪಡಕೊಂಡ ಮಾಲಿಕರ ಹಲವು ಜಾನುವಾರುಗಳು ನೆರೆಗೆ ಹೋಗಿ ಬಿಟ್ಟವೆಂತಲೂ ವಾರ್ತೆ ಇದೆ. ಎನೆಕಲ್ಲು ದೋಣಿಕಡವು ದಾರರಿಗಂತೂ ನಡೆಬಂದರ ೨ ಆಣೆ ಲ್ಲಾಗಾಯಿತು ೧೦ ಆಣೆವರೆಗೆ ಫೀಸು ವಸೂಲು ಮಾಡುವದಕ್ಕೆ ಇದೇ ತಕ್ಕ ಸಮಯವಾಯಿತು. ಕುಳಗುಂದದಲ್ಲಿ ಎಮ್ಮೆ ಕೋಣಗಳಿಗೆ ರೋಗ ತೊಡಗಿ ಅನೇಕ ಜಾನುವಾರುಗಳು ಸತ್ತುಹೋದುವು ಎಂತ ತಿಳಿದುಬರುತ್ತವೆ.

~~~~~

ಬಂಟ್ವಾಳ:—ಶ್ರೀ ದೇವರ ಭಂಡಾರದ ಕಡೆಯಿಂದ ಸ್ಥಾಪಿಸಲ್ಪಟ್ಟ ಸೆಕೆಂಡರಿ ಶಾಲೆಯು ಸರಕಾರದ ಮಂಜೂರಾತಿಗೆ ಒಳಪಟ್ಟಿತೆಂತ ಇಲ್ಲಿ ತಾ. ೨೦ನೇ ನವಂಬರದಲ್ಲಿ ಡೈರೆಕ್ಟರ ಬಹದ್ದೂರರಿಂದ ಬಂದ ಅಧಿಕಾರ ಪತ್ರವನ್ನು ಓದಿದ ಕೂಡಲೆ, ಊರ ಗೃಹಸ್ಥರು ದೇವಸ್ಥಾನದಲ್ಲಿ ಶಾಲಾಮಕ್ಕಳೊಡನೆ ನೆರೆದು ಬಂದು; ದೇವರ ಸನ್ನಿಧಾನದಲ್ಲಿ ಸಮ್ರಾಟನು ನಡೆಸುವ ಧರ್ಮಯುದ್ಧದಲ್ಲಿ ಶೀಘ್ರದಲ್ಲಿ ಸಂಪೂರ್ಣವಾದ ಜಯವುಂಟಾಗಲೆಂದು ಪ್ರಾರ್ಥನೆಗೈದು, ಒಡನೆಯೆ ಹಗಲಲ್ಲೇ ಒಂದು ಉತ್ಸವವನ್ನು ಹೊರಡಿಸಿದುದಾಯಿತು. ಇಂದಿನವರೆಗೆ ಪ್ರತಿ ವರ್ಷವೂ ಅನೇಕ ವೇಳೆ ನಡೆವ ಹಗಲೋತ್ಸವಗಳ ಸೇವೆಗಿಂತ, ಈ ಉತ್ಸವದಲ್ಲಿ ವಿಶೇಷವಾದ ಉತ್ಸಾಹವು ತೋರಿಬಂದಿತು. ಶಾಲಾವಿಷಯಕವಾದ ಸಂಗತಿಗಳಲ್ಲಿ ಅನೇಕಾನೇಕ ಹೊಸ ಚಳವಳಗಳು ಈಗಲೀಗ ಇತ್ತೀಚೆಗೆ ವ್ಯಕ್ತಪಡುತ್ತಿವೆ. ಕ್ರಮೇಣ ಇಲ್ಲಿದ್ದ ಒಂದು ಮಿಶನ್ ಸೆಕೆಂಡರಿ ಶಾಲೆಯು ತಾನಾಗಿ ಕ್ಷೀಣಗೊಂಡು ಫಕ್ಕನೆ ಕಳೆದ ವರ್ಷ ಕೊನೆಗೊಂಡಾಗ ದೇವಳ ತರ್ಫಿನಿಂದ ನಡೆವ ಈ ಸೆಕೆಂಡರಿ ಶಾಲೆಯೇ ಆಧರೂ ಇಲ್ಲದಿದ್ದರೆ ಮಕ್ಕಳೆಲ್ಲ ನಿರಾಧಾರಿಗಳಾಗುತ್ತಿದ್ದರು. ಆದುದರಿಂದಲೇ ಇಲ್ಲಿಯವರಿಗೆ ಈಗ ತಾನೇ ಸೆಕೆಂಡರಿಶಾಲೆಯ ಅಮೂಲ್ಯ ಪ್ರೇಮವು ಮಾತ್ರವಲ್ಲ, ಈಗ ಅದು ಮಂಜೂರಾತಿಗೆ ಪಾತ್ರವಾಗಿರುವುದರಿಂದೆ ಕಾರ್ಕಳ, ಮಂಗಳೂರು ಕಾಸರಗೋಡು ಪಟ್ಟಣಗಳ ಈಚೆಗೆ ಯಾವತ್ತು ಪ್ರದೇಶಗಳ ಬಾಲಕರಿಗೆ ಬಂಟ್ವಾಳದ ಈ ಶಾಲೆಯೊಂದೇ ಅನುಕೂಲವಾಗಿದ್ದು, ಅನಾರೋಗ್ಯದ ಹಾವಳಿ ತಟ್ಟದಂತೆ ಸುರಕ್ಷಿತವಾಗಿದೆ. ಈ ಸಂದರ್ಭವನ್ನು ಶಾಲಾಮಕ್ಕಳ ಹೆತ್ತವರು ಈ ಸರಹದ್ದಿನಲ್ಲಿ ಎಲ್ಲಾ ಕಡೆಗಳಲ್ಲೂ ನೆನೆಪಿನಲ್ಲಿಡುವರಾಗಿಯೂ, ತನ್ಮೂಲಕವಾಗ ಅವರವರ ಮಕ್ಕಳುಗಳಿಗೆ ಉಪಕಾರವನ್ನುಂಟುಮಾಡಿಕೊಳ್ಳುವರಾಗಿಯೂ ಕೋರುತ್ತೇನೆ.

~~~~~

ಮಂಗಳೂರು.

~~~~~

ಇದೇ ತಾ. ೨೦ರಲ್ಲು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಕೂಡಿ ಬಂತು. ಈ ಸಾರಿಯ ಮೀಟಿಂಗಿನಲ್ಲಿ ಜಿಲ್ಲೆಯ ಕೆಲವು ದಾರಿಗಳ ದುರುಸ್ತಿ ಇತ್ಯಾದಿಗಳ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರಿಂದ ಕಳುಹಿಸೋಣಾದ ಅಂದಾಜು ಪಟ್ಟಿಗಳು ಇಡೋಣಾಗಿ ಮಂಜೂರಾಗಿತ್ತವೆ. ಕುಂದಾಪುರ, ಉಡ್ಪಿ, ಕಾರ್ಕಳ ತಾಲೂಕುಗಳ ದಾರಿಗಳ ದುರುಸ್ತಿ ಬಗ್ಗೆ ಒಟ್ಟಿಗೆ ರೂ. ೩೭೩೫, ಕೋಟೇಶ್ವರದಿಂದ ಪಾತೂರಿನ ವರೆಗೆ ಮೊದಲನೇ ೫ ಮೈಲುಗಳನ್ನು ಕಡಿಯುವರೆ ರೂ. ೫೦೦೦; ಮಂಗಳೂರು ಸಂಪಾಜೆ ದಾರಿಯಲ್ಲಿ ಜರಿದು ಬಿದ್ದ ದಾರಿಯನ್ನು ಸರಿಪಡಿಸುವರೆ ರೂ. ೨೧೦೦ ಸೆಂಕ್ಷನ್ ಆಗಿರುವದು.

ಇದೇ ತಾ. ೧೮ನೇ ರಾತ್ರಿ ಗಣಪತಿ ಸೆಕಂಡರಿ ಶಾಲೆಯ ಬಳಿ ಒಂದು ವಿಚಿತ್ರ ಸುಲಿಗೆ ನಡೆದಿರುವದು. ಆ ದಿನ ಇಲ್ಲಿಯ ಪಂದ್ಯಾಟಗಳ ಪಂಗಡದವರು ಮೈದಾನಿ ಕಪ್ಪ್‌ಗಳನ್ನು ಪಡಕೊಂಡು ಮೆರವಣಿಗೆ ಹೊರಟು ಬೇಂಡ್ ವಾದ್ಯದೊಡನೆ ಬರುತ್ತಿರುವಾಗ ಗಣಪತಿ ಸೆಕಂಡರಿ ಶಾಲೆಯ ಬಳಿ ಬಂಟ್ವಾಳದ ಅಣ್ಣಪ್ಪ ಬಾಳಿಗನೆಂಬವನು ಈ ಮೆರವಣಿಗೆಯೊಂದಿಗೆ ಇದ್ದ ರಾ| ರಘುವೇದ್ರ ಕಿಣಿಯವರ ಮಗ ೯ ವರ್ಷ ವಯಸ್ಸಿನ ವಾಮನ ಕಿಣಿ ಎಂಬ ಬಾಲಕನನ್ನು ಕೈಹಿಡಿದು ನಾವು ಸ್ವಲ್ಪ ಮೆಲ್ಲಗೆ ಹೋಗುವ ಅಂದನಂತೆ. ಆದರೆ ಹುಡುಗನು ತನಗೆ ಮೆರವಣಿಗೆಯೊಂದಿಗೆನೇ ಹೋಗಬೇಕೆಂದು ಹೇಳಿದ್ದರಿಂದ ಸದರಿ ಅಣ್ಣಪ್ಪ ಬಾಳಿಗನು ಹುಡುಗನ ಕುತ್ತಿಗೆ ಬಿಗಿಯಾಗಿ ಹಿಡಿದು ಕೈಯಲ್ಲಿದ್ದ ೪ ಚಿನ್ನದ ಬಳೆಗಳನ್ನು

ಎಳೆದು ತೆಗೆದು ರಾಮರಾವ್ ಗಲ್ಲಿಯ ದಾರಿಯಲ್ಲಿ ಓಡಿ ಹೋದನಂತೆ. ಹುಡುಗನು ಗಟ್ಟಿಯಾಗಿ ಕೂಗಿಕೊಂಡದ್ದರಿಂದ ದಾರಿಯಲ್ಲಿ ಹೋಗುವ ಕೆಲವರು ಹುಡುಗನ ಬಳಿಗೆ ಬಂದು ವಿಚಾರಿಸಿ, "ಕಳ್ಳ ಕಳ್ಳ" ಎಂದು ಎಲ್ಲರೂ ಕೂಗುತ್ತಾ ರಾಮರಾವ್ ಗಲ್ಲಿಯಿಂದ ಹೋಗುವಾಗ ಆ ದಾರಿಯಲ್ಲಿರುವ ಮುನ್ಸಿಪಾಲ್ ಪಾಯಖಾನೆಯ ಕಡೆಗೆ ಯಾರೋ ಒಬ್ಬನು ಓಡಿದಹಾಗೆ ಕಂಡಿದ್ದೇನೆಂದು ಒಬ್ಬ ದಾರಿಗನು ಹೇಳಿದ್ದರಿಂದ ಇವರೆಲ್ಲರೂ ಮುನ್ಸಿಪಾಲ್ ಪಾಯಖಾನೆಗೆ ಹೋಗಿ ಪಾಯಖಾನೆಗೆ ಬಾಗಲು ಹಾಕಿರುವದನ್ನು ಕಂಡು, ಕಳ್ಳನು ಅದರೊಳಗೆ ಇದ್ದಾನೆಂದು ತಿಳಿದು ಬಲತ್ಕಾರದಿಂದ ಭಾಗಲು ತೆರೆಯಿಸುವಾಗ ಒಳಗೆ ಕಳ್ಳನು ಇದ್ದನು. ಅಪಹರಿಸಿದ ಬಳೆಗಳೂ ಅವನೊಡನೆ ಇದ್ದವು. ಈ ಸಂಗತಿಯನ್ನು ಕೂಡಲೇ ಬೀಟ್ ಪೋಲಿಸಿನವರಿಗೆ ತಿಳಿಸಿದ್ದಲ್ಲಿ ಬೀಟ್ ಪೋಲಿಸಿನವರು ಅವನನ್ನು ಕಳವಾದ ಬಳೆಗಳ ಸಹಿತ ಕೈದುಮಾಡಿ ರಿಮಾಂಡಿನಲ್ಲಿಟ್ಟಿರುತ್ತಾರೆ. ಅಪಾದಿತನು ತಾನು ಬಂಟ್ವಾಳದವನೆಂದೂ ಏನೋ ಒಂದು ಸಿವಿಲ್ ಮೊಕದಮೆಯ ಬಗ್ಗೆ ಮಂಗಳೂರಿಗೆ ಬಂದಿದ್ದ ತನಗೆ ಹಣದ ಅಡಚಣೆಯಾದುದರಿಂದ ಈ ಕೃತ್ಯವನ್ನು ನಡಿಸಿದೆನೆಂದೂ ತನಗೆ ಮಾಫಿ ಬಿಡಬೇಕೆಂದೂ ವಾಗ್ಮೂಲ ಕೊಟ್ಟಿರುತ್ತಾನೆಂತ ತಿಳಿಯುತ್ತೇವೆ.

ಕೆ. ಡಿ. ಮಂಜುನಾಥನ ಜೊತೆಯಲ್ಲಿ ಮಣ್ಣಗುಡ್ಡೆಯ ಮಾಧವ ಭಟ್ಟರಲ್ಲಿ ಕಳವು ಮಾಡಿದ ಮಾನುವೇಲ್ ಸೋಜನಿಗೆ ೩ ತಿಂಗಳ ಸಜಾ ವಿಧಿಸೋಣಾಗಿರುತ್ತದೆ. ಇದೇ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ರಾಮಣ್ಣ ಎಂಬವನನ್ನು ಮೆಜಿಸ್ಟ್ರೇಟರು ಖುಲಾಸುಪಡಿಸಿರುತ್ತಾರೆ.

ಬೋಳಾರದ ಮಾರಿಗುಡಿಯಲ್ಲಿ ಬಡ್ಡಕುಂಞಿ ಯಾನೆ ಅಹಮ್ಮದಕುಂಞಿ ಎಂಬವನು ಕೆಲವು ಹಣತಿಗೆಗಳನ್ನು ಕಳವು ಮಾಡಿದ್ದನೆಂದು ಆಪಾದಿಸಲ್ಪಟ್ಟಿದ್ದನು. ಡ್ಯೆಪಿಟಿ ಮೇಜಿಸ್ಟ್ರೇಟರು ಆಪಾದಿತನಿಗೆ ೯ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಕಣ್ಣೂರ ಗ್ರಾಮದ ದೇವು ಸೆಟ್ಟಿ ಎಂಬವನ ಕುತ್ತಿಗೆ ಕಡದ ಶವವು ಪಂಜಿಮಾರು ಎಂಬಲ್ಲಿಯ ಭಾವಿಯಲ್ಲಿ ಸಿಕ್ಕಿತೆಂದು ತಿಳಿಸಿದ್ದೆವಷ್ಟೆ. ಈ ವಿಷಯ ಪೋಲಿಸ ಇಲಾಖೆಯವರು ತನಿಕೆ ನಡಿಸಿ ಉಗ್ಗ ಎಂಬವನನ್ನು ಕೈದು ಮಾಡಿರುತ್ತಾರೆ. ಮೃತನಿಗೂ ಸದರಿ ಉಗ್ಗನ ಹೆಂಡತಿಗೂ ಇದ್ದ ಪರಸ್ಪರ ಪ್ರೇಮದಿಂದ ಉಂಟಾದ ಕಲಹವೇ ಈ ಖೂನಿಗೆ ಕಾರಣವಾಯಿತೆಂತ ಕೇಳುತ್ತೇವೆ.

ಕಳದ ಶನಿವಾರವು ಇಲ್ಲಿಯ ಆಟಗಳ ಪಂಗಡದವರಿಗೆ ಒಂದು ವಿಶೇಷ ದಿನವಾಗಿತ್ತು. ಆ ದಿನ ಇಂಟರ್ ಸ್ಕೂಲ್ ಜಿಮ್ನ್ಯಾನಸ್ಟಿಕದ ಕಡೆಯ ಆಟವು ಗವರ್ನಮೆಂಟ ಕಾಲೇಜಿಯ ಸೀನಿಯರ್ ಪಂಗಡದವರಿಗೂ ಸ್ಯೆಂಟ್ ಅಲೋಸಿಯಸ್ ಕಾಲೇಜಿಯ ಸೀನಿಯರ್ ಪಂಗಡದವರಿಗೂ ಕಡೆಯ ವರೆಗೆ ನಡೆಯಿತು. ಎರಡು ಪಂಗಡದವರಿಗೂ ಕಡೆಯ ವರೆಗೆ ಸರಿಸಮಾನವಾಗಿ ಮಾರ್ಕುಗಳು ದೊರಕಿದವು. ಆದರೆ ಕಡಗೆ ಹಗ್ಗ ಎಳೆಯುವುದರಲ್ಲಿ ಈ ಪಂಗಡಗಳೊಳಗೆ ಸುಮಾರು ೨೦-೨೫ ನಿಮಿಷ ಎಳದಾಟವು ನಡೆದು ಕಡೆಗೆ ಗವರ್ನಮೆಂಟ ಕಾಲೇಜಿಯವರು ಜಯಯುಕ್ತರಾದರು. ಹೀಗೆ ಕಪ್ಪ ಗವರ್ನಮೆಂಟ ಕಾಲೇಜಿಯವರ ಪಾಲಿಗೆ ಬಿತ್ತು. ಈ ದಿನವೇ ಒಂದೆರಡು ತಿಂಗಳುಗಳಲ್ಲಿ ನಡೆದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಕಪ್ಪಗಳನ್ನು ಕೊಡುವ ಸಮಾರಂಭವು ನಡೆಯಿತು. ಮೆ| ಪ್ಯೆಂಟರ್ ದೊರೆಗಳವರು ಗೆದ್ದುಕೊಂಡ ಪಂಗಡಗಳವರಿಗೆ ಈ ಕಪ್ಪಗಳನ್ನು ಬಹುಮಾನಿಸಿದರು. ಈ ವರ್ಷದ ಕಪ್ಪಗಳಲ್ಲಿ ಜೂನಿಯರ್ ಕ್ರಿಕೆಟ್ ಕಪ್ಪ ಕೆನರಾ ಹೈಸ್ಕೂಲಿನವರಿಗೂ, ಸೀನಿಯರ್ ಕ್ರಿಕೆಟ್ ಕಪ್ಪ ಸ್ಯೆಂಟ್ ಅಲೋಶಿಯಸ್ ಕಾಲೇಜಿನವರಿಗೂ, ಕೊರನೇಷನ್ ಕಪ್ಪ ಹಿಂದೂ ಕ್ರಿಕೆಟ್ ಪಂಗಡದವರಿಗೂ. ಜಿಮ್ನ್ಯಾಸ್ಟಿಕ್ ಜೂನಿಯರ್ ಕಪ್ಪ ಗಣಪತಿ ಸೆಕಂಡರಿ ಶಾಲೆಯವರಿಗೂ, ಸೀನಿಯರ್ ಜಿಮ್ನ್ಯಾಸ್ಟಿಕ್ ಕಪ್ಪ ಗವರ್ನಮೆಂಟ ಕಾಲೇಜಿಯವರಿಗೂ, ಆಟಗಳ ಜೂನಿಯರ್ ಕಪ್ಪ ಸ್ಯೆಂಟ್ ಅಲೋಷಿಯಸ್ ಕಾಲೇಜಿಯವರಿಗೂ ಸೀನಿಯರ್ ಕಪ್ಪ ಗವರ್ನಮೆಂಟ ಕಾಲೇಜಿಯವರಿಗೂ ದೊರಕಿರುತ್ತವೆ. ದೊರೆಗಳವರು ಆಯಾ ಕಪ್ಪಗಳನ್ನು ಅವರವರಿಗೆ ಕೊಟ್ಟನಂತರ ಸ್ಯೆಂಟ್ ಅಲೋಷಿಯಸ್ ಕಾಲೇಜು ಪಂಗಡದವರ ಹೊರತು ಉಳಿದ ಆಟಗಳ ಪಂಗಡಗಳವರೆಲ್ಲರೂ ಒಟ್ಟುಕೂಡಿ 'ಬ್ಯಾಂಡ್ ವಾದ್ಯದೊಡನೆ ಮೆರವಣಿಗೆ ಹೊರಟು ಬಂದರದ ಮಾರ್ಗವಾಗಿ ಮಿಶ್ಶನ್ ಹ್ಯಾಸ್ಕೂಲು, ಕೆನರಾ ಹ್ಯಸ್ಕೂಲ್, ಗಣಪತಿ ಸೆಕೆಂಡರಿಶಾಲೆ, ಗವರ್ನಮೆಂಟ ಕಾಲೇಜು ಮಾರ್ಗವಾಗಿ ತಂತಮ್ಮ ಕಪ್ಪಗಳನ್ನು ಆಯಾ ಸ್ಥಾನಗಳಲ್ಲಿ ಇರಿಸಿ ಸಂತೋಷದಿಂದ ತಂತಮ್ಮ ಮನೆಗಳಿಗೆ ತೆರಳಿದರು. ಹೀಗೆ ಈ ವರ್ಷದ ಪಂದ್ಯಾಟಗಳು ಕಳದ ಶನಿವಾರಕ್ಕೆ ಅಂತ್ಯವಾಯಿತೆನ್ನಬಹುದು.

ಇದೇ ತಾ. ೧೯ನೇ ಆದಿತ್ಯವಾರ ಇಲ್ಲಿಯ ಬೊಕ್ಕಪಟ್ಣ ಪ್ರೊಟೆಸ್ಟಾಂಟ ಹಿಂದೀ ಕ್ರೈಸ್ತ ದೇವಾಲಯದಲ್ಲಿ ಸ್ವದೇಶೀಯ ಮಿಶ್ಶನಿನ ೬ನೇ ವಾರ್ಷಿಕೋತ್ಸವು ಅತಿ ವಿಜೃಂಭಣೆಯಿಂದ ಜರಗಿರುತ್ತದೆ. ಈ ಸಮಾರಂಭದಲ್ಲಿ ಊರ ಪರವೂರುಗಳಿಂದ ಬಂದಿದ್ದ ಕೆಲವು ಕ್ರೈಸ್ತ ವೈದೀಕರು ಭಾಷಣಗಳನ್ನು ಕೊಟ್ಟು ಸ್ವದೇಶೀಯ ಮಿಶ್ಶನಿನ ಕೆಲಸಕ್ಕೆ ಕ್ರೈಸ್ತ ಬಾಂಧವರೆಲ್ಲರೂ ಒಂದೇ ಮನಸ್ಸಿನಿಂದ ಸಹಾಯ್ಯಮಾಡುವ ಹಾಗೆ ಕ್ರೈಸ್ತ ಸಭಿಕರನ್ನು ವಿಜ್ಞಾಪಿಸಿಕೊಂಡರು. ಈ ಮಿಶ್ಶನಿನ ಸೆಕ್ರಿಟರಿಯವರು ಓದಿದ ಗತವರ್ಷದ ರಿಪೋರ್ಟಿನಿಂದ. ಈ ಮಿಶ್ಶನಿಗೆ ರೂ. ೪೦೦ ಸಾಲವಾಗಿದೆಂತ ತಿಳಿದು ಬಂದಿರುತ್ತದೆ. ಇದೇ ಮಿಶ್ಶನ್ ಸಂಬಂಧ ತಾ. ೨೨ನೇ ಬುಧವಾರ ರಾತ್ರಿ ಬಲ್ಮಠ ದೇವಾಲಯದಲ್ಲಿ ಒಂದು ಸಂಗೀತ ಸೇವೆಯು ನಡೆಯಿತು. ಈ ಸಂಗೀತ ಸೇವೆಯಲ್ಲಿ ಸಂಗೀತಮಂಡಲಿಯವರು ಹಲವು ಕಲ್ಪಿತ ಗಾಯನಗಳನ್ನು ಹಾಡಿ ಕೂಡಿಬಂದ ಸಾವಿರಾರು ಸಭಿಕರನ್ನು ಸಂತೋಷಗೊಳಿಸಿದರು. ಗಾಯನಗಳ ಮಧ್ಯೆ ಮಧ್ಯೆ ಸಭಿಕರನ್ನು ಆತ್ಮೀಕಜೀವನದಲ್ಲಿ ಬಲಗೊಳಿಸುವ ಪ್ರೊ| ಸಿ. ಮಾಬೆನರ ಮತ್ತು ರೆವರೆಂಡ್ ಶೋಬ್ ಮೊದಲಾದವರ ಕನ್ನಡ, ಇಂಗ್ಲಿಷ್, ಮಳೆಯಾಳಿ ಭಾಷೆಯಲ್ಲಿ ಕೆಲವು ಭಾಷಣಗಳಿದ್ದವು. ಕಡೆಗೆ ಈ ಧರ್ಮಯುದ್ಧದಲ್ಲಿ ಬ್ರಿಟಿಷರಿಗೆ ಶೀಘ್ರ ಜಯವಾಗಲೆಂಬ ಪ್ರಾರ್ಥನೆಗಳು ನಡೆದು ಸಂಗೀತಸೇವೆಯು ಕೊನೆಗೊಂಡಿತು.

ಬೆಳ್ತಂಗಡಿ ಸಬ್ ಮೇಜಿಸ್ಟ್ರೇಟರಾಗಿರುವ ಮ| ರಾ| ಕೆ. ಪಿ. ಕಿಣಿ ಬಿ. ಎ. ಎಲ್. ಎಲ್. ಬಿ.ರವರಿಗೆ ಉಡ್ಪಿಗೂ, ಉಡ್ಪಿಯ ಸಬ್ ಮೇಜಿಸ್ಟ್ರೇಟರಾಗಿರುವ ಸುಲ್ತಾನ್ ಮ್ಹೊದಿನ್ ಸಹೇಬರಿಗೆ ಮಂಗಳೂರು ಟವನಿಗೂ, ಮಂಗಳೂರು ಟೌನ್ ಸಬ್ ಮೇಜಿಸ್ಟ್ರೇಟರಾಗಿರುವ ಮ| ರಾ| ಎ. ತಿಮ್ಮಪ್ಪ ಪೊಂಜ ಬಿ. ಎ. ರವರಿಗೆ ಬೆಳ್ತಂಗಡಿಗೂ ವರ್ಗವಾಗಿರುತ್ತದೆ.

ನೆಲ್ಲೂರಿನ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾಗಿರುವ ರಾವ್ ಬಹದ್ದೂರ್ ಸಿ ಕೃಷ್ಣಸ್ವಾಮಿರಾವ್‌ರವರು ದಕ್ಷಿಣ ಕನ್ನಡಾ ಜಿಲ್ಲೆಯ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿರುವ ಮ| ರಾ| ಮಂಜುನಾಥ ಬಾಳಿಗರಿಗೆ ಒಂದು ತಿಂಗಳ ಹೆಚ್ಚಿಗೆ ಪ್ರಿವಿಲೆಜ್ ರಜೆ ಕೊಡೋಣಾಗಿಯದೆ.

I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ| ಡಿ. ಶ್ರೀನಿವಾಸ ಶ್ಯಾನುಭಾಗರು ಕುಮೆರಿ ಕೆಲಸ ಸಂಬಂಧ ೩ ತಿಂಗಳ ಮಾತಿಗೆ ಕಾಸರಗೋಡಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

II ಗ್ರೇಡ್ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರ್ ಮತ್ತು ಕುಂದಾಪುರದ II ಗ್ರೇಡ್ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿರುವ ರಾ| ಆರ್. ವಾಸುದೇವರಾಯರು ರಾ| ಪಿ. ಶಂಭಯ್ಯನವರಿಗೆ ಚಾರ್ಜು ಕೊಟ್ಟು ಹೊಸದುರ್ಗ ಪಿರ್ಕಾದಲ್ಲಿ I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರ ಕೆಲಸ ಮಾಡಬೇಕಾಗಿದೆ.

ರಾ| ಕೆ. ರಾಮ ಶೆನಾಯಿ ಟೆಂಪರರಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಆದರೆ ಉಡುಪಿಯಲ್ಲಿ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರ ಕೆಲಸಮಾಡಬೇಕಾಗಿರುವದು.

ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರು ಇದೇ ತಿಂಗಳ ತಾ. ೨೬ ಮಂಗಳೂರಿಂದ ಪಣನಾಡಿಗೆ ಹೋಗಿ ಹಿಂದೆಬಂದು ತಾ. ೨೭ರಲ್ಲು ಮಂಗಳೂರಿಂದ ಸೋಮೇಶ್ವರ, ತಾ. ೨೮-೩೦ ಸೋಮೇಶ್ವರ, ದಶಂಬರ ತಾ. ೧ ಸೋಮೇಶ್ವರ—ಮಂಗಳೂರು, ತಾ. ೩ ಮಂಗಳೂರಿಂದ ಮೂಲ್ಕಿಗೆ ಹೋಗಿ ಹಿಂದೆಬಂದು ತಾ. ೪ ಪರೆಂಗಿಪೇಟೆ, ತಾ. ೫ ಪರೆಂಗಿಪೇಟೆ, ತಾ. ೬ ಪರೆಂಗಿಪೇಟೆ-ಮಂಗಳೂರು, ತಾ. ೭ ಮಂಗಳೂರು—ಬಂಟ್ವಾಳ, ತಾ. ೮-೧೦ ಬಂಟ್ವಾಳ, ತಾ. ೧೧ ಬಂಟ್ವಾಳದಿಂದ ಮಂಗಳೂರಿಗೆ ಹಿಂದೆ ಬರುವರು.

ಇದೇ ತಿಂಗಳ ತಾ. ೧೭ನೇ ಶುಕ್ರವಾರ ಸ್ಯೆಂಟ್ ಎಲೋಷಿಯಸ್ ಕಾಲೇಜಿಯಲ್ಲಿ ಇನಾಂ ಹಂಚುವ ಸಮಾರಂಭವು ವಿಶೇಷ ವಿಜೃಂಭಣೆಯಿಂದ ಜರಗಿರುತ್ತದೆ. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾದ ಮೆ| ಎ. ಜೆ. ಕರ್ಗೆನ್‌ವೆನ್ ಐ. ಸಿ. ಎಸ್‌ರವರು ಅಧ್ಯಕ್ಷರಾಗಿದ್ದು ಕಾಲೋಚಿತ ಭಾಷಣಕೊಟ್ಟು ಇನಾಮುಗಳನ್ನು ಹಂಚಿದರು.

ಹಿಂದೂ ಟ್ರಾನ್ಸಿಟು ಕಂಪೆನಿಯ ಮೋಟರ್ ಬಸ್ ಸರ್ವಿಸ್ ಕಳದ ವಾರದಿಂದ ಪುತ್ತೂರಿಗೂ ನಡಿಯ ಪ್ರಾರಂಭವಾಗಿದೆ.

ಹುಡುಗಿಯರ ಶಾಲೆಗಳ ಅಸಿಸ್ಟಾಂಟ ಇನ್ಸ್‌ಪೆಕ್ಟ್ರೆಸ್ಸರರಾದ ಮಿಸ್ ಪೆಟರ್‌ಸನ್‌ರವರು ಕಳದವಾರದಿಂದ ಇಲ್ಲಿಯ ಹುಡುಗಿಯರ ಶಾಲೆಗಳನ್ನು ಸಂದರ್ಶಿಸಿ ಪರೀಕ್ಷಿಸುತ್ತಲಿದ್ದಾರೆ.

ಕಳದವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಸೇವಿಸಿ ಪ್ರ ಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ . .	7 — 4 — 0ರಿಂದ	7 — 8 — 0
ಗುಡ್ಡು „ ಜೊಪ್ಪು .	5 — 4 — 0	5 — 8 — 0
ಮಸ್ಸೂರಿ „ „ .	5 — 8 — 0	5 — 13 — 0
ಹೊಸ ರಾಶಿ „ .	4 — 14 — 0	5 — 0 — 0
ಅತ್ತಾವರ ಬೆಳ್ತಿಗೆ „ .	6 — 0 — 0	6 — 4 — 0
ಗುಡು ಬೆಳ್ತಿಗೆ „ .	5 — 10 — 0	5 — 14 — 0
ರಂಗೂನು ಬೆಳ್ತಿಗೆ ಗೋಣಿ ಗೆ	10 — 0 — 0	10 — 4 — 0
ಗೋದಿ ಗೋಣಿ ಗೆ . .	11 — 4 — 0	12 — 0 — 0
ಹುರುಳಿ ಗೋಣಿ ಗೆ . .	5 — 14 — 0	
ಕಡಲೆ ಗೋಣಿ ಗೆ ಬೊಂಬಾಯಿ		9 — 8 — 0
ತೊಗರಿ ಗೋಣಿ ಗೆ		10 — 8 — 0
ತೊಗರಿ ಬೇಳೆ ಗೋಣಿ ಗೆ .	12 — 8 — 0	15 — 8 — 0
ಉದ್ದು ಗೋಣಿ ಗೆ . .	10 — 8 — 0	11 — 4 — 0
ಊರುಬೆಲ್ಲ ಖಂಡಿ ಗೆ		50 — 0 — 0
ಉಪ್ಪು ಗೋಣಿ ಗೆ.		4 — 0 — 0
ಕೊಬ್ಬರಿ ಖಂಡಿ ಗೆ . .	95 — 0 — 0	105 — 8 — 0
ಕೊಬ್ಬರಿಹಿಂಡಿ ಖಂಡಿ ಗೆ		23 — 0 — 0
ಎಳ್ಳಿಂಡಿ ಖಂಡಿ ಗೆ ಬೊಂಬಾಯಿ	25 — 0 — 0	30 — 0 — 0
ಕೊಬ್ರಿ ಎಣ್ಣೆ ಮುಡಿ ಗೆ. .	7 — 0 — 0	7 — 4 — 0
ಎಳ್ಳೆಣ್ಣೆ ಮುಡಿ ಗೆ(ಕುರಾಸನ)		4 — 10 — 0
ಚಿಮಿಣಿ ಎಣ್ಣೆ ಪೆಟ್ಟಿಗೆ ಗೆ .	6 — 0 — 0	6 — 11 — 0
ಮೋರಿಸ್ ಸಕ್ಕರೆ ಮುಡಿ ಗೆ		5 — 10 — 0
ಕಾಫಿ ಖಂಡಿ ಗೆ . .	225 — 0 — 0	235 — 0 — 0
ಹೊಸಬೆಳಗೋಟು ಖಂಡಿಗೆ	82 — 0 — 0	85 — 0 — 0
ಹೊಸ ಗೇರುಬೀಜ ಮುಡಿ ಗೆ	2 — 15 — 6	3 — 0 — 0
ಕಟ್ಟಿಗ ಖಂಡಿ ಗೆ		75 — 0 — 0
ತಾಂಬ್ರ ತಗಡು ಮುಡಿ ಗೆ	26 — 0 — 0	27 — 0 — 0
ತಾಂಬ್ರ ಪಾತ್ರಗಳು ಮುಡಿ ಗೆ		28 — 0 — 0
ಚೀನಿ ಬೆಳ್ಳಿ ಕೇರು ಗೆ		24 — 0 — 0
ಹಚ್ಚೆಹೆಸರು ಮುಡಿ ಗೆ .	5 — 1 — 0	5 — 2 — 0
ಕಾಳುಮೆಣಸು ಖಂಡಿ ಗೆ		260 — 0 — 0

ನೋಟೀಸು.

ತೀರ್ಥಹಳ್ಳಿ ತಾಲೂಕು ಶೀತೂರು ಮಾಗಣೆ ಕಲ್ಲಮನೆಯಲ್ಲಿ ವಾಸಿಸಿರುವ ಗುರುಪುರ ಎರವೆ ಅಪ್ಪಯ್ಯ ಕಮ್ತಿರ ಮಗ ವೆಂಕಪ್ಪ ಕಮ್ತಿಯು ಇದರ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ: —

ನನ್ನ ದೊಡ್ಡತಂದೆ ನಾರಾಯಣ ಕಮ್ತಿರ ಮಗ ಲಕ್ಷ್ಮಣ ಕಮ್ತಿರು ನಿಸ್ಸಂತತಿಯಾಗಿ ಮೃತಪಟ್ಟು ಹೋಗಿರುತ್ತಾರೆ. ನಮ್ಮ ಕುಟುಂಬದವರ ಒಳಗೆ ರಿಜಿಸ್ಟ್ರಿ ನಿಸಿ ಆದ ಪಾಲುಪಟ್ಟಿಗಳ ಪ್ರಕಾರ ಅವರ ಹಿಸೆ ಹಕ್ಕಿನ ಪೆರಾರ ಗ್ರಾಮದ ಮೂಲ ನಂಬ್ರ 37ನೇ ಶುಕ್ಲಭಟ್ಟಾ ಎಂಬ ಹೆಸರುವರ್ಗದ ಆಸ್ತಿ ಪೈಕಿ ಅವರ ಹಿಸೆ ಆಸ್ತಿಗೆ ಕಾನೂನು ಪ್ರಕಾರ ನಾನು ವ ನನ್ನ ಅಣ್ಣ ಅನಂತ ಕಮ್ತಿರು ಪೂರ್ಣ ಹಕ್ಕುದಾರರಾಗಿರುತ್ತೇವೆ. ಆದರೆ ಸದರಿ ಆಸ್ತಿಯು ಈಗ ಜೀವನ ನಡಿಸುವಗೋಸ್ಕರ ಮಾತ್ರ ಅವರ ವಿಧವೆ ರುಕ್ಮಿಣಿಯಾನೆ ಸರಸ್ವತಿ ಅಮ್ಮನವರ ವಶಾ ಇರುತ್ತದೆ. ಸದರಿಯವರು ನಮ್ಮ ಹಕ್ಕಿಗೆ ಮೋಸಕೊಡಬೇಕೆಂಬ ಇರಾಧೆಯಿಂದ ನಮ್ಮ ಹಕ್ಕಿನ ಸದರಿ ಆಸ್ತಿಯು ಅಡವು ಕ್ರಯ ವಗೈರೆ ಜವಾಬ್ದಾರಿ ವ ಪರಾಧೀನ ಮಾಡುವ ಇರಾಧೆಯಲ್ಲಿ ಇರುತ್ತಾರೆಂಬಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಅವರಿಗೆ ಯಾವ ವಿಧದಿಂದಲೂ ಜವಾಬ್ದಾರಿ ವ ಪರಾಧೀನ ಮಾಡುವ ಹಕ್ಕು ಎಷ್ಟುಮಾತ್ರಕ್ಕೂ ಇರುವದಿಲ್ಲ. ಇದಕ್ಕೆ ವಿರೋಧವಾಗಿ ಅವರು ಯಾವ ವಿಧದ ಜವಾಬ್ದಾರಿ ವ ಪರಾಧೀನ ಮಾಡಿದ್ದಾದರೆ ಅದು ನಮ್ಮ ಹಕ್ಕಿಗೆ ಬಾಧಿಸತಕ್ಕದ್ದಲ್ಲ. ಮಾತ್ರವಲ್ಲ, ಅದು ಸಿಂಧಾಗತಕ್ಕದ್ದಿಲ್ಲ ಎಂಬ ಸಂಗತಿ ಎಲ್ಲಾ ಜನರಿಗೆ ಇದರ ಮೂಲಕ ತಿಳಿಸಿದ್ದೇನೆ.

ತಾ. 23 — 11 — 1916. ವೆಂಕಪ್ಪ ಕಮ್ತಿ ರುಜು.

ಡಾಕ್ಟರ್ ನವರತ್ನರ

ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮೂವರ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೇರಿಯಂಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1 — 8 — 0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡಿ'ಸೋಜರು ಬರಿಯುತ್ತಾರೆ: — ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡಾ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರಿಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾತ್ಯಾವಾಡಿನ ವಿಶವಲ್‌ನಿಂದ ಮಿ. ಜೆ. ರಸ್ಕಿನಾರು ಬರಿಯುತ್ತಾರೆ: — ಒಂದು ವರುಷದ ಲಾಗಾಯ್ತು ಮಲೇರಿಯದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್ಸ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:—

The Malariana Company,
Kankanady S. C.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರ ವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

100 ರೂಪಾಯಿಗಳ ಬಹುಮಾನ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ಪ ಚೇಳು ವಿಷ ಸಂಜೀವಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುವೆವು. ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳು ವಿಷ ಸಂಜೀವಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನಮ್ಮ ಔಷಧವನ್ನು ವಾಪಸು ಮಾಡಿ ತಮ್ಮ ಪೊಬಲಗನ್ನು ವಾಪಸು ಪಡಿಯುವದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಶೀಸೆ 1ಕ್ಕೆ 8 ಅಣೆ; ಡಜನ್ 1ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಮಕ್ಕಳ ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿ ೧ ಕ್ಕೆ ೧—೮—೦ ಮಧ್ಯಮ ತರದ ಪೆಟ್ಟಿ ೧ ಕ್ಕೆ ೨-೦-೦. ದೊಡ್ಡ ಪೆಟ್ಟಿ ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪ್ಪಾ ೧ಕ್ಕೆ ೪ ತೊಲೆ, ದುಯಂ ರೂಪ್ಪಾ ೧ಕ್ಕೆ ೮ ತೊಲೆ, ತೀಯಂ ರೂಪ್ಪಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಪಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೇಶ್ಮೆ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
SIROMANI NARAYANA CHARYA & CO, ಚೌಕಾಂಬಾ, ಕಾಶಿ.
Chaukhambay, BENARES CITY.

ನೋಟೀಸು.

ಸರ್ವಸಾಧಾರಣ ಜನರಿಗೆ ಈ ಕೆಳಗೆ ದಸ್ಕತು ಮಾಡಿದ ನಾನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನಮ್ಮ ತರುವಾಡು ಪೆರಿಯೆ ಪುದಿಯ ಬೀಟ್ಲ ತರುವಾಡು ಎಂಬ ಹೆಸರಿನಿಂದ ತಿಳಿದು ಬಂದಿದೆ. ನಮ್ಮ ತರವಾಡಿನಲ್ಲಿ ಕೋರನ್ನಾಯರು ಎಂಬವರು ಕಾರ್ನವತೀವ ಅಡಳಿತೆದಾರರು ಆಗಿರುತ್ತಾರೆ. ಇವರ ಖಾಸಾ ಅಳಿಯ ಕುಂಞಂಬು ನಾಯರರು ಹಿರೇ ಅನಿಂದ್ರುವರಾಗಿರುತ್ತಾರೆ. ಈ ಎರಡು ಜನರು ಕುಟುಂಬದ ಮೇಲೆ ನಿರ್ಮೋಹಿತರಾಗಿ ಕುಟುಂಬಕ್ಕೆ ಬಾಧಕ ಯಾ ಕೇಡನ್ನು ಉಂಟುಮಾಡುವ ಇರಾಧೆಯಿಂದ ಕುಟುಂಬದ ಆಸ್ತಿಗಳನ್ನು ಏನೊಂದು ಕುಟುಂಬಾರ್ಥದ ಅಗತ್ಯವಿಲ್ಲದೆ ಪರಾಧೀನ ಮಾಡುವರೆ ಉದ್ಯುಕ್ತರಾಗಿರುತ್ತಾರೆ. ನಮ್ಮ ಕುಟುಂಬಕ್ಕೆ ಈವರೇಗೂ ಏನೊಂದೂ ಸಾಲವಿರುವದಿಲ್ಲಾ. ಜೀವನಕ್ಕೆ ಸಾಕಷ್ಟು ಆಸ್ತಿಗಳು ಇರುವದರಿಂದ ಸಾಲಮಾಡುವ ಅಗತ್ಯವೂ ಇರುವದಿಲ್ಲಾ. ಆದುದರಿಂದ ಅವರ ಕುಟುಂಬದ ನಾನು ಕೂಡಾ ಪ್ರಾಯ ಬಂದ ಎಲ್ಲಾ ಗಂಡು ವ ಹೆಣ್ಣು ಮೆಂಬರರ ಶೇರುವಿಕೆ ವಿನಹಾ ಕುಟುಂಬದ ಯಾವತ್ತು ಆಸ್ತಿಗಳ ಮೇಲೆ ಸಾಲಹೊರಿಸಿದ್ದಾದರೆ ಯಾ ಆಸ್ತಿಗಳನ್ನು ಯಾವ ವಿಧದಿಂದಲೂ ಪರಾಧೀನಮಾಡಿದರೆ ಅಂಥಾ ಸಾಲಪರಾಧೀನಗಳು ನಮ್ಮ ಕುಟುಂಬದ ಆಸ್ತಿಗಳ ಮೇಲೆ ಬಾಧಿಸಲಿಕ್ಕಿಲ್ಲಾ. ಈ ವಿನಹಾ ನಮ್ಮ ಕುಟುಂಬಕ್ಕೆ ಹೊರಗಿನಿಂದ ಬರತಕ್ಕ ಅಡವು ವ ಅರವಾರಿನ ಕಾಣಗಳನ್ನು ಸದರಿ ಎರಡು ಜನರು ಕುಟುಂಬದವರ ತಿಳುವಳಿಕೆ ಇಲ್ಲದೆ ಪಡದು ದುರ್ವ್ಯಯ ಮಾಡುವರೆ ಉದ್ಯುಕ್ತರಾಗಿದ್ದಾರೆ. ಆದುದರಿಂದ ಸಮ್ಮಂಧಪಟ್ಟವರು ಅಡವು ಅರವಾರಿನ ಕಾಣಗಳನ್ನು ಸಹಾ ಮೇಲೆ ಹಮೂದಿಸಿದಂತೆ ಎಲ್ಲಾ ಕುಟುಂಬದ ಮೆಂಬರರ ಕೂಡುವಿಕೆ ವಿನಹಾ ತರವಾಡಿಗೆ ಸಲಾಯಿಸಕೂಡದ್ದಾಗಿರುತ್ತದೆ. ಆದುದರಿಂದ ನಮ್ಮ ಕುಟುಂಬದ ಕೂಡೆ ವಹಿವಾಟು ನಡಿಸುವವರಿಗೆ ಈ ಮೂಲಕ ಎಚ್ಚರಿಸೋಣಾಗಿದೆ ಎಂತ ಪುದಿಯ ಬೀಟ್ಲ ತರುವಾಡಿನ ಮೆಂಬರನಾದ ಪಾಟೆಹೆಂಗಸಿನ ಮಗ ಪೆರ್ಯೆಗ್ರಾಮದಲ್ಲು ಇರುವ ಕಣ್ಣನ್ನಾಯರನ ಅಳಿಯ ರಾಮನ್ನಾಯರ ಶ್ರುತಪಡಿಸಿದ್ದು.

ಕಾಸರಗೋಡು, ತಾ. 2—11—16.

ಮಲಯಾಳಿ ಬರಹದಲ್ಲಿ ಸದರಿ ರಾಮನ್ನಾಯರ ದಸ್ಕತು ಇದೆ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು! ೧೬ ಮೊಳ!! ಬಾಳಿಕೆ ಬರುವುದು!!!

ಗೋವರ್‌ಜಾನ್ ಬಳ್ಳಿ ಶೀರೆ ರೂ. ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಛೀಟೀ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಶಿಘ್ರ ಪಥ! ಪರೀಕ್ಷಿಸಿ ನೋಡಿರಿ !!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲ ಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ಬೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆ ಯನ್ನು ಬಿಡಿಸುತ್ತದೆ. ಅದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿ ಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನ ನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದ ಲಾದ ಸಕಲ ಗುಪ್ತರೋಗಗಳಿಗೆ ಇದೆಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೊಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ಕಾರ್ಕಳದಿಂದ ಒಬ್ಬ ಮಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ—ಟೂರಕಬ್ ಸೇವಿಸಿ 6 ವರ್ಷಗಳಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ಪರಿಹಾರವಾಗಿರುತ್ತದೆ. ಇತ್ಯಾದಿ.

ತಾಜಾ ಯೂಕಲಿಪ್ಟಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು,

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು. ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲ ಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದೇ ಆದರೆ 8 ದಿವಸ ಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್ .	0	8	0
1 ,, .	0	12	0
½ ಔನ್ಸ್ ಟ್ಯೂಬ್ . .	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,

10 Princes Street, BOMBAY

ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ತಾಂಬೂಲವಿಹಾರವು:—ತಾಂಬೂಲವು ಉಪಯೋಗಿಸುವವರಿಗೆ ಅದು ಮುಖ್ಯವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸುವಾಸನೆ ಅಡಿಕೆಹುಡಿ ಡಬ್ಬಾ 1ಕ್ಕೆ 4 ಆಣೆ. ವಿ. ಪಿ. 1ರಿಂದ 12 ಡಬ್ಬಿಗಳವರಿಗು 5 ಆಣೆಗಳು ಪ್ರತ್ಯೇಕವು.

ಸೋಡಾವಾಟರ್ ಪವ್ರುಡರ್:—ಈ ಚೂರ್ಣದಲ್ಲಿ ಸ್ವಲ್ಪ ತೆಗದು ತಣ್ಣೀರಿನಲ್ಲಿ ಮಿಶ್ರಮಾಡಿದರೆ ಅದು ಸ್ವಯವಾದ ಸೋಡಾವಾಟರ್ ಆಗುತ್ತದೆ. ಒಂದು ಸೀಸೆ ಚೂರ್ಣವು 8 ಸೀಸೆ ಸೋಡಾವಾಟರ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು. ವಿ. ಪಿ. 1ರಿಂದ 4 ಸೀಸೆಗಳವರಿಗೂ 5 ಆಣೆಗಳು ಪ್ರತ್ಯೇಕವು.

ಲಿಮನೆಡ್ ಪವ್ರುಡರ್:—ಈ ಚೂರ್ಣದಲ್ಲಿ ಸ್ವಲ್ಪ ತೆಗದು ತಣ್ಣೀರಿನಲ್ಲಿ ಮಿಶ್ರಯಮಾಡಿದರೆ ಅದು ರುಚಿಕರವಾದ ಲಿಮನೆಡ್ ಆಗುತ್ತದೆ. ಒಂದು ಸೀಸೆಯ ಲ್ಲಿರುವ ಚೂರ್ಣವು ಸುಮಾರು 8 ದೊಡ್ಡ ಸೀಸೆಗಳ ಲಿಮನೆಡ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು. ವಿ. ಪಿ. 1ರಿಂದ 4 ಸೀಸೆಗಳವರಿಗೂ 5 ಆಣೆಗಳು. ಪ್ರತ್ಯೇಕವು.

ಪನ್ನೀರು ಗುಲಾಬಿ:—ಅದು ಅರ್ಧ ಔನ್ಸ್ ಚಿಕ್ಕ ಸೀಸೆಯಲ್ಲಿ ಇದೆ. ಅದ ರಲ್ಲಿರುವ (ಗುಲಾಬಿ) ಪನ್ನೀರನ್ನು 3 ದೊಡ್ಡ ಸೀಸೆ ನೀರಿನಲ್ಲಿ ಸೇರಿಸಿದರೆ ಅವ್ವಲ್ ರಖಂ ಗುಲಾಬಿ ಆಗುತ್ತದೆ. ಸೀಸೆ 1ಕ್ಕೆ 8 ಆಣೆ ವಿ. ಪಿ. 1 ಸೀಸೆಯಿಂದ 3 ಸೀಸೆ ವರಿಗೂ 5 ಆಣೆಗಳು.

ಕಸ್ತೂರಿ ಮಿಶ್ರವಾದ ಲವೆಂಡರ್ ವಾಟರ್:—ಇದು ನಮ್ಮ ಔಷಧ ಶಾಲೆಯಲ್ಲಿ ತಯಾರಿಸುವ ಅತಿ ಸುವಾಸನೆಯಾದ ವಸ್ತುವು. ವಿಲಾಯತಿಯಿಂದ ತರಿಸಿ ಮಾರುವದಲ್ಲ ವಸ್ತ್ರಗಳಿಗೆ ಇದನ್ನು ಉಪಯೋಗಿಸಿದರೆ ಅತಿ ಸುಖವನ್ನು ಕೊಡುವದು. ಇದನ್ನು 4 ತೊಟ್ಟುಗಳು ಪುಸ್ತಕಗಳಿಗೆ ಹಾಕಿದರೆ ಅಂಗಡಿಗಳಲ್ಲಿ ಮಾರುವ ಲವಂಡರ್ ವಾಟರನ್ನು 20ತೊಟ್ಟು ಬಿಟ್ಟರೆ ಎಷ್ಟು ಸುವಾಸನೆಯಾಗುವದೋ ಅದಕ್ಕಿಂತಲೂ ಹೆಚ್ಚು ಸುವಾಸನೆಯನ್ನು ನಮ್ಮ ಕಸ್ತೂರಿ ಲವಂಡರ್ ವಾಟರ್ ಮನೋ ರಮ್ಯವಾದ ಸುವಾಸನೆಯನ್ನು ಕೊಡುವದು. ಉಪಯೋಗಿಸಿದವರು ಸುತ್ತಲು ಬಹಳ ಹೊತ್ತು ರಮ್ಯವಾದ ಸುವಾಸನೆಯನ್ನು ಬೀಸುವಂತೇ ಮಾಡುವದು. ಅರ್ಧ ಔನ್ಸ್ ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿ ಗಳಿಗೆ ವಿ. ಪಿ. ಖರ್ಚು 5 ಆಣೆ ಬೀಳುವದು.

ವಾಸನೆ ಬಿಲ್ಲೆಗಳು:—ಅಸನಾದ ಗುಲಾಬಿ, ಮೋತಿಯಾ ಲಾವಂಡರ ಇಂಥಾ ವಾಸನೆದ್ರವ್ಯಗಳಿಂದ ಮಾಡಲ್ಪಟ್ಟಿದೆ. ಬಟ್ಟೆಗಳ ಸಂಗಡ ಇಟ್ಟಿದ್ದರೆ ಸುವಾಸನೆ ಯಾಗಿ ಇರುವದು. ಡಬ್ಬಿ 1ಕ್ಕೆ 8 ಆಣೆಗಳು. ವಿ. ಪಿ. 1ಡಬ್ಬಾ ಮೊದಲು 6 ಡಬ್ಬಾ ಗಳವರಿಗೆ 5 ಆಣೆ.

ಈ ಪ್ರಾಂತ್ಯದಲ್ಲಿ ಕನ್ನಡ,ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ ವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವ ಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯು ವಂತೆ ಬರಿಯಬೇಕು.

MY ADDRESS.

P. SUBBA ROY.

Ayurvedic Pharmacy,

Sri Perumalkoil,

SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,

ಆಯುರ್ವೇದ ಔಷಧಶಾಲ,

ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,

ಸನ್ನದಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಟ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.
ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

Estd. 1888. | ಸ್ಥಾಪನೆ 1888

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕದ್ದು, ತುರಿಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳೆತ, ಪ್ರಯತ್ನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬತ್ತಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಶನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	[illegible]	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೨ನೇ ಭಾಗ	0	6	0
ಶ್ರೀ ಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭಾನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	8	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ತುಳುಕನ್ನೋಪದೇಶ	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ	0	4	

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲ ವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

೧,೦೦೦

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ-ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟ್ಟಾಗಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚಂತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು—ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,

Ayurvedodaya Aushadhalaya,

20, CHINA BAZAAR ROAD, MADRAS.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಿತ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷ ಮಾತರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನ ವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ. ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತ್ವದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನುಗಳ ಸಹಿತ ಕ್ರಯ 1ಕ್ಕೆ ರೂ. 4-0-0.

ವಿಳಾಸ:—

ವಿ. ಎ. ಕೃಷ್ಣ ಅಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪ್ಯಾ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್		STANY BROTHERS
ಮತ್ತು	ಸಬ್ ಏಜಂಟರು	Sole Agents
ಹಂಪನ್‌ಕಟ್ಟೆ ಶೋಪುಗಳಲ್ಲಿ ದೊರಕುವದು.	ಬೇಕಾಗಿವೆ.	C. M. C's, Toothache Specific, Mangalore.

ದಿವ್ಯಾಂಜನ. Divyanjan. *(Regd.)*

ಗುಣ ಬಾರದಿದ್ದರೆ ಹಣ ಮರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ ಸೊಂಟನೋವು, ವ್ಯಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಬರುವುದು, ಉಳುಕು, ಉದ್ದಿ ಶಿರೋಧಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ 1 ಡಬ್ಬಿಗೆ ಖರ್ಚು ಸೇರಿ ಒಂಬಾಣೆ ಮಾತ್ರ. ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ. ಇದೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರೇಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡಿದೆ ಫುಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲವಲ್ಲಿರುವವರಿಗೆ ದೃಢಬುದ್ಧಿಯುನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವುಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರು 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ಗ್ರಂಥ ... ಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇಂತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರದಲ್ಲೇ ಮೇಲೆ ಹೇಳಿದ ವಿ... ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೬ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸೋಲ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಗಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ. 1ನೇ ದಶಂಬರ ಶುಕ್ರವಾರ 1916. | ಸಂಚಿಕೆ 47

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಸ್ತೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ವಾಜು 2 ಆಣೆ ಕ್ರಯದ
ಆವ್ಸಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇದರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಧಾತ್ವರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂದಿರುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು.................3—12—0
ಮೇಘಸಂದೇಶ ಪೂರ್ತ...............................2— 0—0
ಕುಮಾರಸಂಭವ 1, 2ನೇ ಸರ್ಗ.......................1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ.....................0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ, ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦ ಹಾಸಲು ೬ ಆಣೆ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

Just out! 2nd Edition. 167 pages!

1001 GEMS
OF
HINDU RELIGIOUS THOUGHT.

Gleaned from the written works and spoken words and teachings of ancient and modern Hindu Saints Sages and preceptors.

By

PARARY KUNHI CHANDU

Price: 1—0—0.

Apply to—M. T. A. SHARADA PRESS,
Car Street, Mangalore.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,, ...	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,, ...	225,000—0—0
Paid up Capital	200,000—0—0	ಆಗತ ಮೂಲ ಧನವು ,, ...	200,000—0—0
Deposits	343,389—5—4	ಠೇವಣಾತಿಯಾಗಿ ಕೊಡೋಣಾದ ನೊಬಲುಗಳು ...	343,389—5—4
Reserve Fund	40,442—8—0	ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ. ನೊಬಲುಗಳು ಕೂಡಿಸಲ್ಪಡವುದಲ್ಲದೆ ಹಿಸೆ ಪಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last seven years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, $4\frac{1}{2}$, 5 and $5\frac{1}{2}$% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, $4\frac{1}{2}$, 5 ಮತ್ತು $5\frac{1}{2}$ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ನೊಬಲುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ $2\frac{1}{2}$% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ $2\frac{1}{2}$ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ $4\frac{1}{2}$%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವಿತು. ಈ ಠೇವಣಾತಿಗಳಿಗೆ ಸೇಕಡಾ $4\frac{1}{2}$ರ ದರ ಬಡ್ಡಿಯು ಕೊಡೋಣಾಗುವುದು.

Loans granted on proper securities and pledges.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುವವು.

Canara Bank Ltd.,
Mangalore, 1st. November 1916

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಾಭಿವರ್ಧಕ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಿಂದ ಬೆಳ್ಳಿಯ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಕುರಿಯುವ ಮೂತ್ರವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವುದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವುದು. ರಾತಲಿಗೆ ೩ ರೂ.

೪. ಸೂರಣಾವಲೇಹ. ರಕ್ತ ಅರ್ಶಸ್ಸು ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪಿರೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಬಾಲರಿಗಾಗುವ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಕಿಮ್ಮತ್ತು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಯನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ವಟಾಕೆ, ಚಳಿಜ್ವರ, ವಿಷಮ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. ಕೆಮ್ಮು, ಗುರುಗುಟ್ಟುವಿಕೆ, ಕಫ, ಕ್ಷಯಗಳ ಮೇಲೆ [illegible]. ರಾತಲಿಗೆ ೩ ರೂ.

೧೦. ಕಾಲ್ಯಲೀ ಪಾಕ. [illegible] ಮೂತ್ರದಲ್ಲಿ [illegible] ಮೂಲಕವಾಗಿ [illegible] ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತವೊುದಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೭ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಸುರಿಯುವದಿಲ್ಲ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸೌವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಾಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೩ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಣವು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಆಗಲಿ ಇಂಗ್ಲಿಷಿನಿಂದಾಗಲಿ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು, ಮದರಾಸು.

B. M. Nath & Co., *Ayurvedic Chemists,*
Vepery Post, MADARS

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕೆಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು): ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಭಾಯಿ ಸಾಮಲ್ ಧಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ... ಜನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಟುವೆರಿ:—ಮಿ| ಜೋಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಂಗ್ ಡ್ಯಾರೆಕ್ಟರಂಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಆಶ್ಚರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮಿನ ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕ್ಷಯ, ಕಾಲುಗಳ ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.
ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ,|ಜಲ್ಲಾ ಮುಝುಫರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯಗಳಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12—0—0, 5—0—0, 3—0—0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ತಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೊಂಡ್ ಫೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಶೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎಡೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, R. D. Kately & Co.
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಶೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿದ್ದಾರೆ.

ಮಹಾಭಾಗ. ಒಂದೇ ಒಂದು ಶೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ, ವೈದ್ಯರ ಸಮಯವನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಕಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವೆ, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—9—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ|| ರಾ|| ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗ್ಮೂರ್‌ನಂ. 2, ಬೊಂಬಾಯಿ ಇವರು ಬರೆದಿರುವುದು. ತಮ್ಮ ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಲವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಶೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾತ್ರದದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.

ಈ ಸುಂದರವಾದ ವಾಚ್ ಗ್ಯಾರಂಟಿ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ಪಾಜಾಗಿಯೂ ಇಂಜಿನ್‌ಸ್ಟಾಂಪು ಹಾಕಿಯೂ ಇರುವದು.

ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಸುಸ್ಯಗೂನಲ್ಲಿ ಚಿನ್ನದ ಮೆಡಲ್ ಪಡಿಸಿಕೊಟ್ಟ ಪ್ರಸಿದ್ಧವಾದ **ಅಮೃತಸಂಜೀವಿನಿ ಗುಳಿಗೆ.** 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ. 12 ಆಣೆ ಮಾತ್ರ. ಪೋಸ್ಟು ಚಾರ್ಜು 4 ಆಣೆ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ವೃದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯ ಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಮಾರ್ಗಶೀರ್ಷ ಶು. ೭ ಶುಕ್ರವಾರ.

ರೆವಿನ್ಯೂ ಬೋರ್ಡಿನಲ್ಲಿ ಹಿಂದೀ ಇಸಮಿನ ನೇಮಕದ ಪ್ರಶ್ನೆ.

ನಮ್ಮ ಮದ್ರಾಸ ಕಾಯಿದೆ ಕೌನ್ಸಿಲಿನ ಅಧಿವೇಶನಗಳು ಕಳೆದ ನವಂಬರ ತಿಂಗಳಿನ ಕಡೆಯ ವಾರದಲ್ಲಿ ಆದವು. ಈ ಅಧಿವೇಶನಗಳಲ್ಲಿ ಕೆಲವು ಮಹತ್ವದ ಪ್ರಸ್ತಾಪಗಳು ನಡೆದಿದ್ದವು. ಅವುಗಳಲ್ಲಿ ರೆವಿನ್ಯೂ ಬೋರ್ಡಿನಲ್ಲಿ ಹಿಂದೀ ಗೃಹಸ್ಥನ ನೇಮಕದ ಕುರಿತು ಬಂದ ಸಂಗತಿಯು ಒಂದಾಗಿದೆ. ನಾಮದಾರ ಬಿ. ವಿ. ನರಸಿಂಹ ಐಯರ ಇವರು ಈ ಬಗ್ಯೆ ಒಂದು ಠರಾವನ್ನು ತಂದರು. "ರೆವಿನ್ಯೂ ಬೋರ್ಡಿನಲ್ಲಿ ಕಡೆ ಪಕ್ಷಕ್ಕೆ ಒಬ್ಬ ಹಿಂದೀ ಗೃಹಸ್ಥನನ್ನಾದರೂ ನೇಮಿಸತಕ್ಕದ್ದು." ಈ ಠರಾವನ್ನು ಪುಷ್ಟೀಕರಿಸುವಾಗ ನಾಮದಾರ ಐಯರರು ಹೇಳಿದ್ದೇನೆಂದರೆ, ಈ ಮದ್ರಾಸ ಸಂಸ್ಥಾನದ ರೆ. ಬೋರ್ಡಿನಲ್ಲಿ ಒಬ್ಬನಾದರೂ ಹಿಂದೀ ಗೃಹಸ್ಥನು ಇಲ್ಲ. ಹಿಂದೀ ಗೃಹಸ್ಥರು ಬೇರೆ ಜವಾಬದಾರಿಯ ಜಾಗೆಗಳ ವಿಷಯವಾಗಿ ಬೇಕಾಗಿದ್ದರು. ರೆವಿನ್ಯೂ ಬೋರ್ಡಿನಲ್ಲಿ ಇಷ್ಟರ ವರೆಗೆ ತಕ್ಕ ಯೋಗ್ಯತೆ ಮತ್ತು ಗುಣಗಳುಳ್ಳ ಹಿಂದೀ ಜನರನ್ನು ತೆಕ್ಕೊಳ್ಳದೆ ಇದ್ದುದಕ್ಕೆ ಯಾವ ಕಾರಣವನ್ನೂ ತೋರಿಸಲು ಸಾಧ್ಯವಿರಲಿಲ್ಲ. ಈ ವಿಷಯದಲ್ಲಿ ಜನರಿಗೆ ಬೇಸರವಿತ್ತು. ಮತ್ತೆ ೧೮೮೬ರಲ್ಲಿ ಒಂದು ಕಮಿಷನು ನೇಮಿಸೋಣಾಯಿತು. ಆ ಕಮಿಷನು ಹಿಂದೀ ಗೃಹಸ್ಥರನ್ನು ರೆವಿನ್ಯೂ ಬೋರ್ಡಿನಲ್ಲಿ ನೇಮಿಸಬಹುದೆಂಬುದಾಗಿ ಶಿಫಾರಸು ಮಾಡಿತು. ಆದರೆ ಈ ಶಿಫಾರಸಿನಂತೆ ಮಾತ್ರ ಯಾವ ಏರ್ಪಾಡಾದುದೂ ಕಂಡುಬರುವುದಿಲ್ಲ. ೧೮೩೩ನೆ ಇಸವಿಯ ಚಾರ್ಟರ ಎಕ್ಟಿನ ಮತ್ತು ವಿಕ್ಟೋರಿಯಾ ಮಹಾರಾಣಿಯವರ ಸುಪ್ರಸಿದ್ಧವಾದ ಸನದಿನ ನೆನಪನ್ನು ಹುಟ್ಟಿಸಿ ನಾಮದಾರ ಐಯರರು ಪ್ರತಿಪಾದಿಸಿದ್ದೇನೆಂದರೆ, ಹಿಂದೀ ಜನರಲ್ಲಿ ಪಾತ್ರತೆ, ಗುಣ ಇವು ಕಂಡುಬಂದಲ್ಲಿ ಅವರನ್ನು ತಕ್ಕ ಸ್ಥಾನಗಳಲ್ಲಿ ನೇಮಿಸಲು ಅಡ್ಡಿಯಿಲ್ಲೆಂದು ಮೇಲಿನ ಸನದು ಮುಂತಾದುದರಲ್ಲಿ ಹೇಳಿದಾಗ್ಯೂ ರೆವಿನ್ಯೂ ಬೋರ್ಡಿನಲ್ಲಿ ಇಷ್ಟರ ವರೆಗೆ ಒಬ್ಬ ಹಿಂದೀ ಗೃಹಸ್ಥನದಾದರೂ ಪ್ರವೇಶವಾಗಲಿಲ್ಲ, ಇದು ದುರ್ದೈವವೇ ಸರಿ. ಹಿಂದೀ ಜನರು ಕಲೆಕ್ಟರಿಯ ಮತ್ತು ಎಕ್ಸಿಕ್ಯುಟಿವ ಕೌನ್ಸಿಲಿನ ಮೆಂಬರುತನದಂಥ ಮತ್ತು ದೇಶೀಯ ಸಂಸ್ಥಾನಗಳಲ್ಲಿ ದಿವಾಣಗಿರಿಯಂಥ ಮಹತ್ವದ ಮತ್ತು ಜವಾಬದಾರಿಯ ಕೆಲಸಗಳನ್ನೇ ನಿರಾಕ್ಷೇಪದಿಂದ ಮಾಡುತ್ತಿರುವಾಗ ಹಿಂದೀ ಜನರಿಗೆ ಜವಾಬದಾರಿಯ ಕೆಲಸಗಳನ್ನು ಕೈಕೊಳ್ಳುವ ಪಾತ್ರತೆ ಬರಲಿಲ್ಲ, ಅವರು ಬೇರೆಯವರ ಕೈಕೆಳಗೆನೆ ಕೆಲಸ ಮಾಡಲು ಯೋಗ್ಯರಾಗಿದ್ದಾರೆಂದು ವಾದಿಸುವುದಂತೂ ಈಗ ಶುದ್ಧ ಅಪ್ರಯೋಜಕವಾಗಿದೆ. ಅನಂತರ ಮೇಲ್ಕಂಡ ಐಯರರು ಇದೇ ವಿಷಯದಲ್ಲಿ ಮೊದಲು ಕೌನ್ಸಿಲಿನೊಳಗೆ ನಡೆದ ಚರ್ಚೆಯನ್ನು ಪ್ರಸ್ತಾಪಿಸಿ ಸರ್. ಎಮ್, ಹೆಮಿಕರು ರೆವಿನ್ಯೂ ಬೋರ್ಡಿನಲ್ಲಿ ಹಿಂದೀ ಜನರನ್ನು ನೇಮಿಸಲು ಅಡ್ಡಿಯಿಲ್ಲೆಂದು ಹೇಳಿದ ಸಂಗತಿಯನ್ನು ಸಹ ನೆನಪಿಗೆ ತಂದು ರೆ. ಬೋರ್ಡಿನಲ್ಲಿ ಆದಷ್ಟು ಬೇಗನೆ ಸರಕಾರವು ಹಿಂದೀ ಇಸಮರನ್ನು ನೇಮಿಸೀತೆಂಬ ಭರವಸೆಪಟ್ಟರು.

ಮಾ. ಮಿ. ರಂಗಾಚಾರ್ಯರು ಈ ಠರಾವಿಗೆ ತಮ್ಮ ಸಮ್ಮತಿಯನ್ನು ಕೊಟ್ಟರು. ~~ಆದರೆ ಸರ್. ಎ. ಜಿ. ಕಾರ್ಡ್ಯೂ ಇವರು ಸಾಧಾರಣವಾಗಿ ಒಂದು ಉದ್ದ ಭಾಷಣ~~ವನ್ನು ಮಾಡಿ ಈ ಠರಾವಿನೊಳಗಿನ ಕೆಲವು ಶಬ್ದಗಳ ವಿಷಯದಲ್ಲಿ ತಮ್ಮ ಆಕ್ಷೇಪಗಳನ್ನು ಹೇಳಿ ಆ ಶಬ್ದಗಳನ್ನು ಬದಲಾಯಿಸಿದರೆ ಇದು ಮಾನ್ಯವಾದೀತೆಂದು ವಾದಿಸಿದರು. ಇವರ ಉದ್ದವಾದ ಭಾಷಣದ ಗಿಡ್ಡವಾದ ಸಾರಾಂಶವು ಹೀಗಿರುತ್ತದೆ. ಕೊನ್‌ಸೊಲಿಡೇಶನ ಎಕ್ಟಿನ ೯ಲನೆ ಕಲಮಿನಂತೆ ಖಾಲಿಯಾದ ಜಾಗೆಗಳಲ್ಲಿ ಸಿವಿಲ ಸರ್ವಿಸಿನ ಮೆಂಬರರೇ ಬರತಕ್ಕದ್ದು. ಕಾನೂನಿನಂತೆ ನೋಡಿದರೆ ರೆ. ಬೋರ್ಡಿನ ನೇಮಕಗಳ ಪಟ್ಟಿಯಾಗಿಲ್ಲ, ಹೀಗಿರುವಾಗ ಈ ಕಲಮಿನಂತೆ ಹಿಂದೀ ಗೃಹಸ್ಥನಿಗೆ ಆ ನೇಮಕಕ್ಕೆ ಹಕ್ಕು ಬರುತ್ತದೆಂತ ಹೇಳಲು ಸಾಧ್ಯವಿಲ್ಲ. ಈಗ ಅದೇ ಕಾನೂನಿನ ೧೦ನೇ ಕಲಮಿನ ವಿಚಾರ ಮಾಡಿ ನೋಡಿದರೆ ಪ್ರಾಂತಿಕ ನೇಮಕಗಳನ್ನು ಸ್ಟೇಟ ಸೆಕ್ರೆಟರಿಗಳ ಅಪ್ಪಣೆಯ ಮೇರೆಗೆ ಮಾಡಬೇಕಾದುದು." ಈ ಪ್ರಕಾರ ಈ ಕಲಮುಗಳ ಶಾಸ್ತ್ರಾರ್ಥವನ್ನು ಹೇಳಿ ಕಾರ್ಡ್ಯೂ ದೊರೆಗಳು ೧೮೫೮ನೆ ಇಸವಿಯ ಸನದಿನ ಇತ್ಯರ್ಥವನ್ನು ಮಾಡಿದರು. ಅನಂತರ ಸರ್. ಎಮ್, ಹೆಮಿಕರ ರೆವಿನ್ಯೂ ಬೋರ್ಡಿನಲ್ಲಿ ಹಿಂದೀ ಜನರನ್ನು ತೆಕ್ಕೊಳ್ಳಬಹುದೆಂದು ಹೇಳಿದ ಮಾತು ಕಾಯಿದೆಯ ಶರ್ತಗಳನ್ನು ಮೀರಿರುತ್ತದೆಂದು ಅಪ್ಪಣೆ ಕೊಟ್ಟರು. ರೆವಿನ್ಯೂ ಬೋರ್ಡೆಂದರೆ ಸೊಲ್ಟ, ಅಬಕಾರಿ, ಫೊರೆಸ್ಟ್, ಸರ್ವೆ, ಸೆಟ್ಲಮೆಂಟ, ಲೆಂಡರೆವಿನ್ಯೂ ಮುಂತಾದ ಭಿನ್ನಭಿನ್ನ ಇಲಾಖೆಗಳ ವರಿಷ್ಠರಿಂದ ಸಂಮಿಶ್ರವಾದ ಒಂದು ಕೂಟವಾಗಿದೆ. ಬೋರ್ಡಿನ ಅಧಿಕಾರ ಸ್ಥಾನದಲ್ಲಿ ನೇಮಿಸುವಾಗ ಅವರ ಸರ್ವಿಸು ಮತ್ತು ಪಾತ್ರತೆ ಈ ಎರಡು ಸಂಗತಿಗಳನ್ನು ನೋಡತಕ್ಕದ್ದು. ಸಿವಿಲ ಸರ್ವಿಸಿನ ಮೆಂಬರರಿಗೇ ಈ ಜಾಗೆಗಳು ಕಾದಿಡಲ್ಪಟ್ಟಿವೆ. ರೆ ಬೋರ್ಡಿನ ನೇಮಕವು ಕಾಯಿದೆಯಂತೆ ಆಗುವ ಸಂದರ್ಭದಲ್ಲಿ ಸರ್ ಎಮ್. ಹೆಮಿಕರ ಮತದಂತೆ ಸರಕಾರಕ್ಕೆ ನಡಕೊಳ್ಳುವ ಅಗತ್ಯ ತೋರುವುದಿಲ್ಲ. ಗವರ್ನಮೆಂಟ ಓಫ್ ಇಂಡಿಯಾ ಎಕ್ಟಿನ ೧೦ನೇ ಕಲಮಿನಂತೆ ಈ ಬೋರ್ಡಿನಲ್ಲಿ ಇಸಮು ಖಾಲಿಯಾದಾಗ ಸಾಕಷ್ಟು ಪಾತ್ರತೆ ಮೊದಲಾದದ್ದಿರುವ ಹಿಂದೀ ಗೃಹಸ್ಥನನ್ನು ಆ ಸ್ಥಾನದಲ್ಲಿ ನೇಮಿಸಲು ಸರಕಾರವು ಬಹು ಸಂತೋಷಗೊಂಡೀತು. ಪಾತ್ರತೆ ಇಲ್ಲದವನನ್ನು ಆ ಜಾಗೆಗೆ ನೇಮಿಸಲು ಯಾರೂ ಹೇಳಲಿಕ್ಕಿಲ್ಲ. ಹಿಂದೀ ಗೃಹಸ್ಥನೆಂಬದೇ ಪಾತ್ರತೆಯಲ್ಲ."

ಈ ಪ್ರಕಾರ ಸರಕಾರ್ಡ್ಯೂಯವರು ಸದರೀ ಠರಾವನ್ನು ಪ್ರತಿಷೇಧಿಸಿದ ಮೇಲೆ ಬೇರೆ ಬೇರೆ ಮೆಂಬರರ ಪ್ರತಿ ಸಮಾಧಾನ ಮೊದಲಾದ ವಿಧಿಗಳು ಯಥಾಸಾಂಗವಾದವು. ಕೊನೆಗೆ ಎಷ್ಟೋ ಭವತಿನಭವತಿಯಾಗಿ ಮೇಲೆ ಹೇಳಿದಂತೆ ಕೆಲವು ಶಬ್ದಗಳ ಬದಲಾವಣೆಯಿಂದ ಆ ಠರಾವು ಮಾನ್ಯವಾದಂತಾಯಿತು.

ಬದಲಾಯಿಸಿದ ಠರಾವಿನ ಸ್ವರೂಪವನ್ನು ವಾಚಕರಿಗೆ ತಿಳಿಸುವುದಾದರೆ "ಅನುಕೂಲವಾದ ಸಂದರ್ಭವು ಒದಗಿದಾಗ ರೆವಿನ್ಯೂ ಬೋರ್ಡಿನಲ್ಲಿ ಒಬ್ಬ ಹಿಂದೀ ಗೃಹಸ್ಥನಿಗೆ ಪ್ರವೇಶವು ಸಿಗುವುದೆಂಬ ಮೇರೆಗೆ ತಿದ್ದಿದ ಸ್ವರೂಪವನ್ನು ಹೇಳಿದರೆ ಸಾಕಾಗಿದೆ. ಇರಲಿ. ಅಂತು ಕೌನ್ಸಿಲಿನವರು "ಅನುಕೂಲವಾದ ತಕ್ಕ ಸಮಯವನ್ನು" ನಿರೀಕ್ಷಿಸಲಿಕ್ಕೆ ಹೇಳಿರುತ್ತಾರೆ. ಆದರೆ ಈ ತಕ್ಕ ಸಮಯವು ಯಾವಾಗ ಬರುವುದೋ ಗೊತ್ತಾಗದು. "ಅನುಕೂಲ ಸಮಯ"ವೆಂಬಲ್ಲಿಯ "ಅನುಕೂಲ" ಶಬ್ದದ ಅರ್ಥವೇನೆಂಬುದು ಗೊತ್ತಾಗುವುದು ಕೊಂಚ ಕಷ್ಟಸಾಧ್ಯವೇ ಸರಿ. ಲೋಕಮತದ ಪ್ರತಿನಿಧಿಗಳಿಗಾಗಲಿ ಜನರಿಗಾಗಲಿ ಇದೇ ಅನುಕೂಲದ ಮತ್ತು ತಕ್ಕ ಸಮಯವೆಂದು ತೋರುತ್ತಿದೆ. ಸರಕಾರದವರಿಗೆ ಬೇರೊಂದು ಸಮಯವು ಅನುಕೂಲದ್ದಾಗಿ ತೋರುವುದು. ಆದುದರಿಂದ "ತಕ್ಕ" ಮತ್ತು "ಅನುಕೂಲ" ಈ ಶಬ್ದಗಳು ಎಲ್ಲರಿಗೆ ಅವರವರ ಮತದಂತೆ "ಅನುಕೂಲ"ವಾಗಿಯೇ ಇರುವುದರಿಂದ ಇದೊಂದು "ಅನುಕೂಲ"ವಾದ ಸಂಗತಿಯೇ ಸರಿ! ಆದರೂ ಎಲ್ಲರಿಗೆ "ಅನುಕೂಲವಾದ ಸಮಯವು" ಈ ಹೊತ್ತು ಇರಬಹುದು; ಇಲ್ಲವೆ ಒಂದು ತಲಾಂತರ ಕಳೆಯುವ ತನಕ ಕೂಡ ಅದು ಬಾರದೆಯೂ ಇರಬಹುದು. ಆದುದರಿಂದ ಒಬ್ಬ ಕೌನ್ಸಿಲ ಮೆಂಬರರು ಈ ಅನುಕೂಲ ಸಂದರ್ಭವೆಂಬ ಯಾವ ಶರ್ತನ್ನು ತೋರಿಸದೆ ಇರುವ ಶಬ್ದಕ್ಕೆ ಆಕ್ಷೇಪಿಸಿದರು. ಆದರೆ ಈ ಆಕ್ಷೇಪವು ನಿರರ್ಥಕವಾಯಿತೆಂದು ತಿಳಿಸಲು ನಾವು ವಿಷಾದಪಡುತ್ತೇವೆ.

ರೆವಿನ್ಯೂ ಬೋರ್ಡಿನಲ್ಲಿ ಮಾತ್ರವಲ್ಲ ಯಾವದೇ ಜವಾಬದಾರಿಯ ಕೆಲಸವಾದರೂ ಅದರಲ್ಲಿ ಹಿಂದೀ ಜನರು ಪಾತ್ರರಿದ್ದಾರೆಂಬುದನ್ನು ಈ ಹೊತ್ತು ಯಾರೂ ಹೊಸದಾಗಿ ಸಾಧಿಸಬೇಕಾದ ಅಗತ್ಯವಿಲ್ಲ. ಅವರು ಸಾಮಾನ್ಯವಾಗಿ ಪ್ರತಿ ಒಂದು ಖಾತೆಯ ವರಿಷ್ಠ ಸ್ಥಾನದಲ್ಲಿ ಅಧಿಕಾರ ನಡಿಸಲು ಸರ್ವಥಾ ಪಾತ್ರರಿದ್ದಾರೆಂಬುದು ಎಲ್ಲರು ಒಪ್ಪಿಕೊಳ್ಳತಕ್ಕ ಮಾತಾಗಿದೆ. ಸರಕಾರಕ್ಕೂ ಈ ಸಂಗತಿಯು ಗೊತ್ತಿದೆ. ಅನೇಕ ಜವಾಬದಾರಿಯ ಕೆಲಸಗಳನ್ನು ಹಿಂದೀ ಜನರು ಮಾಡುತ್ತ ಬಂದಿದ್ದಾರೆ. ಹೀಗಿರುವಾಗ ಸರಕಾರ್ಡ್ಯೂ ಇವರು ಹಿಂದೀಯೆಂಬದೇ ಪಾತ್ರತೆಯ ಲಕ್ಷಣವಲ್ಲೆಂತ ಹೇಳಿದ್ದು ಅಷ್ಟೊಂದು ಯೋಗ್ಯವಾದ ಮಾತಾಗುವುದಿಲ್ಲ. ಈಗ ಹಿಂದೀ ಜನರು ಅಂತರ್ಗತ ಸ್ವರಾಜ್ಯದ ಅಧಿಕಾರಗಳನ್ನು ಕೇಳುತ್ತಿದ್ದಾರೆ, ಇಂಥಾ ಸಣ್ಣ ಸಂಗತಿಗಳಲ್ಲಿ ಮೇಲಿನಂಥ ಸಬೂಬುಗಳನ್ನು ಹೇಳುವುದು ಯಾಕೆ? ಹಿಂದಿಯಾಗಿದ್ದರೂ ಬರೇ ಅಪಾತ್ರನಾದವನಿಗೆ ಮೇಲಿನಂಥ ಜಾಗೆಗಳನ್ನು ಕೊಡಲು ಯಾರೂ ಹೇಳುವುದಿಲ್ಲ, ಪಾತ್ರನಾದವನನ್ನೆ ತಕ್ಕೊಳ್ಳಲು ಯಾರಾದರೂ ಹೇಳುವರು. ಅಲ್ಲದೆ ಪಾತ್ರತೆ ಬಂದ ಮೇಲೆ ಅಧಿಕಾರ ಕೊಡುವುದಲ್ಲಾ, ಅಧಿಕಾರದ ಉಪಭೋಗದಿಂದಲೇ ಪಾತ್ರತೆಯು ಬರಬೇಕಾದದು. ಇದು ಅನುಭವದ ಹಾಗೂ ನಿರಾಕ್ಷೇಪಣೀಯವಾದ ಮಾತು. ಆದರೂ ನಮ್ಮ ಸರ್ ಸಾಹೇಬರ ಆಗ್ರಹವು "ಅನುಕೂಲ ಮತ್ತು ತಕ್ಕ ಸಂದರ್ಭದ" ಬೇಲಿಯನ್ನು ಕಟ್ಟಿದೆ!

ಸಂಯುಕ್ತ ಸಭೆಯ ರಾಜಕೀಯ ಆಕಾಂಕ್ಷೆಗಳು.

ಕಳೆದ ವರ್ಷ ಮುಂಬಯಿಯ ರಾಷ್ಟ್ರೀಯ ಸಭೆ ಮತ್ತು ಮೊಸ್ಲೆಮ್‌ಲೀಗ ಇವುಗಳ ಅಧಿವೇಶನಗಳಲ್ಲಿ ಹಿಂದುಸ್ಥಾನಕ್ಕೆ ಯಾವ ಯಾವ ಹೊಸ ರಾಜಕೀಯ ಸುಧಾರಣೆಗಳು ಅಗತ್ಯ ಇರುವವೆಂಬುದನ್ನು ಸೂಚಿಸುವುದಕ್ಕಾಗಿ ರಾಷ್ಟ್ರೀಯ ಸಭೆಯ ಕಡೆಯಿಂದ ಒಂದು ಮತ್ತು ಮೊಸ್ಲೆಮ್ ಲೀಗಿನ ಕಡೆಯಿಂದ ಒಂದು ಹೀಗೆ ಎರಡು ಕಮಿಟಿಗಳು ನೇಮಿಸಲ್ಪಟ್ಟಿದ್ದವು. ಆ ಕಮಿಟಿಗಳು ತಮ್ಮ ತಮ್ಮ ಸೂಚನೆಗಳ ಮಸೂದೆಯನ್ನು ತಯಾರಿಸಿ ಅವುಗಳನ್ನು ಕಳೆದ ನವಂಬರ ತಿಂಗಳ ತಾ. ೧೭ರಲ್ಲಿ ಕಲಕತ್ತಾ ಪಟ್ಟಣದಲ್ಲಿ ನೆರೆದ ಸಂಯುಕ್ತ ಸಭೆಯ ಮುಂದಿಟ್ಟವು. ಮಾನ್ಯರಾದ ಬಾಬು ಸುರೇಂದ್ರನಾಥ ಬಾನರ್ಜಿಯವರು ಈ ಸಂಯುಕ್ತ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಬಂಗಾಲದ ಸಾಮಾನ್ಯವಾಗಿ ಎಲ್ಲ ಸಭಾಸದರು ಹಾಜರಿದ್ದರು, ಮದ್ರಾಸಿನಿಂದ ಬಿಝುಂಟರು ಕೂಡಿ ೧೨, ಮುಂಬಯಿಯಿಂದ ೫, ಸಂಯುಕ್ತ ಪ್ರಾಂತದಿಂದ ೮, ಪಂಜಾಬ ಮತ್ತು ಬ್ರಹ್ಮದೇಶದಿಂದ ಒಬ್ಬೊಬ್ಬರು, ಮಧ್ಯಪ್ರಾಂತದಿಂದ ೨ ಮತ್ತು ಬಿಹಾರದಿಂದ ೩ ಇಷ್ಟು ಜನರು ಪ್ರತಿನಿಧಿಗಳಾಗಿ ಬಂದಿದ್ದರು. ಹಾಗೆ ಮೊಸ್ಲೆಮ್ ಲೀಗಿನ ಕಡೆಯಿಂದ ೭ ಪ್ರತಿನಿಧಿಗಳು ಹಾಜರಿದ್ದರು. ಎರಡೂ ಸಂಸ್ಥೆಗಳಿಂದ ನೇಮಿಸಲ್ಪಟ್ಟ ಕಮಿಟಿಗಳು ಯಾವ ಸುಧಾರಣೆಗಳನ್ನು ತಯಾರಿಸಿಕೊಂಡು ಬಂದಿದ್ದವೋ ಅವುಗಳನ್ನು ವಿಚಾರಾರ್ಥವಾಗಿ ಸಂಯುಕ್ತ ಸಭೆಯಲ್ಲಿ ಡೋಣಾಯಿತು. ಈ ಬಗ್ಗೆ ಅನಂತರ ಆ ಸಭೆಯಲ್ಲಿ ಆದ ನಿರ್ಣಯವು ಯಾವುದೆಂದರೆ, ಸ್ಟೇಟಸೆಕ್ರಿಟರಿಯ ಕೌನ್ಸಿಲನ್ನು ತೆಗೆದು ಹಾಕಬೇಕು; ವರಿಷ್ಠಕಾಯಿದೆ ಕೌನ್ಸಿಲಿನಲ್ಲಿ ೧೫೦ ಸಭಾಸದರಿರಬೇಕು; ಮುಂಬಯಿ, ಮದ್ರಾಸ, ಬಂಗಾಲ, ಸಂಯುಕ್ತ ಪ್ರಾಂತ ಇಂಥ ದೊಡ್ಡ ದೊಡ್ಡ ಪ್ರಾಂತಗಳ ಕೌನ್ಸಿಲುಗಳಲ್ಲಿ ೧೨೫, ಮತ್ತು ಪಂಜಾಬು ಮಧ್ಯಪ್ರಾಂತಗಳ ಕೌನ್ಸಿಲುಗಳಲ್ಲಿ ೬೦ರಿಂದ ೭೫ರ ವರೆಗೆ ಕೌನ್ಸಿಲರರು ಇರಬೇಕು. ಪ್ರತಿ ಒಂದು ಕೌನ್ಸಿಲಿನಲ್ಲಿ ೪/೫ ಲೋಕನಿಯುಕ್ತ ಸಭಾಸದರೇ ಇರಬೇಕು. ಎಂದರೆ ಉದಾಹರಣೆಗಾಗಿ ೧೫೦ ಸಭಾಸದರಿರುವ ವರಿಷ್ಠ ಕೌನ್ಸಿಲಿನಲ್ಲಿ ೧೨೦ ಸಭಾಸದರು ಜನರಿಂದ ಆರಿಸಲ್ಪಟ್ಟವರಾಗಿರಬೇಕು. ಕಾಂಗ್ರಸ ಕಮಿಟಿಯ ಈ ಸೂಚನೆಯು ಕೂಡ ಸಂಯುಕ್ತ ಸಭೆಯಲ್ಲಿ ಪಾಸಾಯಿತು. ಹಾಗೆಯೆ ಪ್ರಾಂತಿಕ ಕಾರ್ಯಕಾರಿ ಸಭೆಗಳಲ್ಲಿಯು ಅರ್ಧದಷ್ಟು ಸಭಾಸದರು ಲೋಕನಿಯುಕ್ತರಾದ ಹಿಂದೀ ಗೃಹಸ್ಥರೇ ಇರಬೇಕೆಂಬ ತತ್ವವು ಉಭಯಪಕ್ಷದವರಿಗೂ ಮೊದಲೇ ಮಾನ್ಯವಾಗಿತ್ತು, ಆದರೆ ಇದೇ ನ್ಯಾಯವು ವರಿಷ್ಠ ಕಾರ್ಯಕಾರಿ ಕೌನ್ಸಿಲಿಗೂ ಲಗಾವ ಆಗತಕ್ಕದ್ದೆಂದು ಸೂಚಿಸಿದ್ದ ಕಾಂಗ್ರೆಸ ಕಮಿಟಿಯ ಸೂಚನೆಗೆ ಮೊಸ್ಲೆಮ ಲೀಗಿನ ಸಭಾಸದರು ತಮ್ಮ ಒಪ್ಪಿಗೆಯನ್ನು ಕೊಟ್ಟಿರುವದು ಇದು ಬಹು ಸಂತೋಷದ ಮಾತು. ಮುಸಲಮಾನರ ಕಡೆಯಿಂದ ಕೌನ್ಸಿಲಿನಲ್ಲಿ ಎಷ್ಟು ಸಭಾಸದರಿರಬೇಕೆಂಬ ವಿಷಯವಾಗಿ ಸಂಯುಕ್ತ ಸಭೆಯಲ್ಲಿ ಬಹಳೇ ಚರ್ಚೆ ನಡೆದು ಕೊನೆಗೆ ಸಾಧಾರಣವಾಗಿ ಇಂಥಿಂಥಾ ಪ್ರಾಂತಕ್ಕೆ ಇಂತಿಂತಿಷ್ಟು ಸಭಾಸದರು ಇರಬೇಕೆಂಬದಾಗಿ ಕೂಡ ನಿರ್ಣಯಿಸೋಣಾಗಿದೆ. ಆದರೆ ಈ ಪ್ರಶ್ನೆಯ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಮತಭೇದವಿರುವ ಕಾರಣ ಇದ್ದೇ ಪ್ರಶ್ನೆಯು ಕಾಂಗ್ರೆಸಿನಲ್ಲಿಯೂ ಲೀಗಿನಲ್ಲಿಯೂ ಚರ್ಚೆಗೆ ಬಂದು ನಿಶ್ಚಯಿಸಲ್ಪಡುವದು. ಈ ಅರ್ಥದ ನಿರ್ಣಯವಾಗಿ ಸಂಯುಕ್ತ ಸಭೆಯ ಅಧಿವೇಶನವು ಮುಗಿಯಿತು.

ಸಂಯುಕ್ತ ಸಭೆಯಲ್ಲಿ ಆದ ಈ ಕಾರ್ಯಕ್ರಮವನ್ನು ನೋಡುವಾಗ ಹಿಂದು ಮುಸಲಮಾನರು ಸ್ವರಾಜ್ಯದ ಒಂದು ದೊಡ್ಡ ಕಂತನ್ನು ಕೇಳಹತ್ತಿದವೆಂಬುದು ನಿಜ. ಹಿಂದುಸ್ಥಾನದೊಳಗಿನ ವಿಭಿನ್ನ ಧರ್ಮೀಯರ ಮುಖಂಡರು ಈ ಪ್ರಕಾರ ಏಕತ್ರ ಸೇರಿ ಒಂದೇ ಸಂಗತಿಯನ್ನು ಕೇಳುವುದರಿಂದ ಏಕಮತ್ಯದ ಮತ್ತು ಭ್ರಾತೃಭಾವದ ಗಾಳಿಯು ಹಿಂದುಸ್ಥಾನದಲ್ಲಿ ಎಷ್ಟು ಅನುಕೂಲವಾಗಿ ಬೀಸಹತ್ತಿದೆಂಬುದು ಇಡೀ ಜಗತ್ತಿಗೆ ತಿಳಿದು ಬರುವ ಹಾಗಿದೆ. ಬೇರೆ ಬೇರೆ ಸಂಗತಿಗಳಲ್ಲಿ ಎಷ್ಟು ಮತಭೇದ ವಿದ್ದರೂ ರಾಷ್ಟ್ರೀಯ ವಿಷಯದಲ್ಲಿ ನಮ್ಮೆಲ್ಲರ ಐಕಮತ್ಯವಾಗುವುದು ನಮ್ಮ ಹಿತಕ್ಕಾಗಿಯೇ ಇರುವುದು. ಮತ್ತು ಅದು ಪ್ರಸಂಗ ಒದಗಿದ್ದಲ್ಲಿ ಆಗಿಯೇ ಆಗುತ್ತದೆ. ಈ ವಿಷಯದಲ್ಲಿ ಇನ್ನೆರಡು ಮಾತುಗಳು ಹೇಳುವ ಹಾಗಿವೆ. ಅವುಗಳನ್ನು ನಮ್ಮ ವಾಚಕರಿಗೆ ಯಥಾವಕಾಶ ತಿಳಿಸುವೆವು.

ಒನರೆಬಲ್ ಕೆ. ಎಸ್. ಭಟ್ಟರವರ ಸವಾಲುಗಳು.

(ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ.)

ಒನರೆಬಲ್ ಭಟ್ಟರವರ ಮೇಲೆ ಈ ಜಿಲ್ಲೆಯ ಜನರು ಇಟ್ಟ ವಿಶ್ವಾಸವು ನಿರರ್ಥಕವಾಗಲಿಲ್ಲವೆಂಬುದು ಈ ತಿಂಗಳ ನ್ಯಾಯವಿಧಾಯಕ ಸಭೆಯಲ್ಲಿ ಒನರೆಬಲ್ ಭಟ್ಟರವರು ಹಾಕಿದ ಸವಾಲುಗಳಿಂದ ಗೊತ್ತಾಗುವುದು. ತಮ್ಮ ೩೩ ಸವಾಲುಗಳಲ್ಲಿ ವಿದ್ಯಾ ಇಲಾಖೆ, ರೆವಿನ್ಯೂ, ಕ್ರಿಮಿನಲ್, ಫೋರೆಸ್ಟ, ರೈಲ್ವೇ, ದರಕಾಸ್ತು, ಸಹಕಾರ, ಲೋಕಲ್ ಬೋರ್ಡುಗಳು ಮುಂತಾದ ವಿಷಯಗಳಲ್ಲೆಲ್ಲ ಕಂಡುಬಂದ ಕುಂದುಕವನ್ನು ಅವರು ಸರಕಾರದವರ ಕಣ್ಣೆದುರಿಗೆ ಇಡುವುದಕ್ಕೆ ಪ್ರಯತ್ನಿಸಿದರು.

ವಿದ್ಯಾ ಇಲಾಖೆಯ ಸಂಬಂಧವಾದ ೪ ಸವಾಲುಗಳಲ್ಲಿ ಮಲೆಬಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹುಡುಗಿಯರ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್ಪೆಕ್ಟರುಗಳಿಗೆ ಆಯಾ ಜಿಲ್ಲೆಯ ಭಾಷಾ ಪರಿಚಯವಿದೆಯೊ ಎಂದು ಒಂದು ಸವಾಲು ಇತ್ತು. ಇದಕ್ಕೆ ಹಲವು ರೂಲ್ಸಿನ ಪುಸ್ತಕಗಳನ್ನೂ ಆಫೀಸರುಗಳ ಪಟ್ಟಿಯನ್ನೂ ಓದಿನೋಡುವಂತೆ ಸೂಚನೆ ಸಿಕ್ಕಿತು. ಸಬ್ ಅಸಿಸ್ಟಾಂಟ ಇನ್ಸ್ಪೆಕ್ಟರರಿಗೆ ದೇಶಭಾಷಾ ಪರಿಚಯವೆಷ್ಟಿದೆ ಎಂದು ನೋಡುವುದಕ್ಕೆ ಆಫೀಸರುಗಳ ಪಟ್ಟಿಗಳನ್ನು ಓದಬೇಕಾದ್ದಿಲ್ಲ. ಅವರು ಶಾಲಾ ಸಂದರ್ಶನೆ ಕಾಲದಲ್ಲಿ ಸುಪರ್‌ವೈಜರುಗಳ ಸಹಾಯವನ್ನು ಅಪೇಕ್ಷಿಸುವುದಲ್ಲದೆ ಇಂಗ್ಲಿಷ್ ಗೊತ್ತಿಲ್ಲದ ಉಪಾಧ್ಯಾಯರಿಂದಲೂ ಇಂಗ್ಲಿಷ ಭಾಷೆಯಲ್ಲಿ ರಿಪೋರ್ಟುಗಳು ಬರಬೇಕಾಗಿ ಒತ್ತಾಯಮಾಡುವುದು, ಇದನ್ನು ಸರಕಾರದವರು ವಿಚಾರಿಸಿದರೆ ಗೊತ್ತಾಗುತ್ತಿತ್ತು.

ಮಿಶ್ಯನ್ ಶಾಲೆಗಳಿಗೆ ಒಂದು ಸಲ ಮಂಜೂರಾತಿಯನ್ನು ತೆಗದುಹಾಕಿ ಪುನಃ ಒಂದು ವರ್ಷಕ್ಕೋಸ್ಕರ (ಅಂದರೆ ೧೯೧೭ ಮಾರ್ಚಿ ಅಖೈರಿ ವರೆಗೆ) ಮಾತ್ರವೆ ಮಂಜೂರಾತಿಯನ್ನು ಕೊಟ್ಟ ಕಾರಣವು ಆ ಶಾಲೆಗಳ ಆಡಳಿತೆಯನ್ನು ಕೌನ್ಸಿಲ್ ಒಫ್ ಮಿಶ್ಯನ್ ಎಡ್ಯೂಕೇಶನ್ ಎಂಬ ಸಭೆಯು ಶತ್ರುರಾಜ್ಯಕ್ಕೆ ಸಂಬಂಧಪಟ್ಟ ಅಥವಾ ಶತ್ರುಜನಾಂಗದವರಿಂದ ನಡಿಸಲ್ಪಡುವ ಸಂಸ್ಥೆಗಳನ್ನು ತಾವು ನಡಿಸುವುದಾಗಿ ಒಪ್ಪಿದ್ದೆ ಎಂದು ಗೊತ್ತಾಗುತ್ತದೆ. ಆ ಶಾಲೆಗಳ ಆಡಳಿತೆಯ ಬಗ್ಗೆ ಮುಂದಿನ ವಿಚಾರವು ಸರಕಾರದವರ ಆಲೋಚನೆಯಲ್ಲಿಯೇ ಇದೆಯಂತೆ.

ತಲಚೇರಿಯ ಬ್ರೆನ್ನನ್ ಕೊಲೇಜನ್ನು ವಿಸ್ತರಿಸುವ ಬಗ್ಗೆ ಸರಕಾರದವರಿಂದ ಸಿಕ್ಕಿದ ೪೦,೦೦೦ ರೂಪಾಯಿಯ ವ್ಯವಸ್ಥೆಯು ಹೇಗಾಯಿತೆಂದಾಗ ಮೊದಲಿನ ಅಂದಾಜಿಗಿಂತಲೂ ಈಗ ಸುಮಾರು ೧ ಲಕ್ಷ ರೂಪಾಯಿ ವಿಕ್ಕಿ ಖರ್ಚು ತಗಲುವ ಅಂದಾಜು ಪಟ್ಟಿಗಳು ಬಂದ ಕಾರಣ ಆ ಹಣಸಹಾಯ ಕೊಡಲಿಕ್ಕಾಗದೆ ಕೆಲಸವನ್ನು ಬಾಕಿ ಇಟ್ಟಿದೆ ಎಂದು ಗೊತ್ತಾಯಿತು.

ಪುತ್ತೂರ ಸೆಕೆಂಡರಿ ಶಾಲೆಯ ಕಟ್ಟೋಣದ ಬಗ್ಗೆ ಕಲ್ಲುಗಳನ್ನು ಫೀಸು ಮಾಫಿಯಿಂದ ಅಗಿಸಲಾಗುವುದಿಲ್ಲವೆಂದು ಇಲ್ಲಿಯ ಕಲ್ಲೆಕ್ಟರರು ಕೊಟ್ಟ ಹುಕುಂ ತಮ್ಮ ತಿಳುವಳಿಕೆಗೆ ಬರಲಿಲ್ಲವೆಂತಲೂ ಈ ವಿಷಯದಲ್ಲಿ ಬಾಧಕ ಹೊಂದಿದವರು ರೆವಿನ್ಯೂ ಬೋರ್ಡಿಗಾಗಲಿ ಸರಕಾರಕ್ಕಾಗಲಿ ಮನವಿ ಮಾಡಲಾಗಿ ಆ ಕುರಿತು ಆಲೋಚನೆ ಲಾಗುವುದೆಂದೂ ಗೊತ್ತಾಯಿತು.

ಮಲೆಬಾರಿನಲ್ಲಿ ಇನ್ಸ್ ಎಂಬ ಕಲೆಕ್ಟರರು ಅಲ್ಲಿಯ ಜಮ್ಮಿಗಳ ಮತ್ತು ಒಕ್ಕಲುಗಳ ಹಕ್ಕು ಬಾಧ್ಯತೆಗಳಲ್ಲಿ ದುರುಸ್ತಿಗಳನ್ನು ಸೂಚಿಸಿ ಮಾಡಿದ ರಿಪೋರ್ಟಿನ ವ್ಯವಸ್ಥೆಯು ಇನ್ನೂ ಆಗಲಿಲ್ಲವೆಂತಲೂ ಈಗ ತತ್ಕಾಲದಲ್ಲಿ (ಯುದ್ಧದ ದೆಸೆಯಿಂದಲೊ?) ಕಾಯಿದೆ ಬದಲಾವಣೆ ಮಾಡಲಾಗುವುದಿಲ್ಲವೆಂದು ಸರಕಾರದವರು ತಿಳಿಸಿದರು.

ಗೇಣಿಬಾಕಿಗೆ ರೆವಿನ್ಯೂ ವ್ಯವಹರಣೆ ಕ್ರಮವನ್ನು ನಿಲ್ಲಿಸಿ ಸಿವಿಲ್ ವ್ಯಾಜ್ಯದ ಮೂಲಕ ಇತ್ಯರ್ಥವಾಗಬೇಕೆಂದು ಮಾಡಿದ ನಿರ್ಣಯವು ಪ್ರಯೋಜನಕಾರಿಯಾಯಿತೊ, ಇಲ್ಲವಾದರೆ ರೆವಿನ್ಯೂ ಕೋರ್ಟುಗಳಲ್ಲಿಯೆ ಅಂಥ ವಿಲೆವಾರಿಗಳು ಆಗುವ ಹಾಗೆ ಮಾಡುವುದು ಸಾಧ್ಯವೊ ಎಂಬುದಕ್ಕೆ ಜಿಲ್ಲಾ ಕಲ್ಲೆಕ್ಟರರವರ ಅಭಿಪ್ರಾಯ ತರಿಸುವುದು ಅಗತ್ಯವೆಂದು ಸರಕಾರಕ್ಕೆ ಕಂಡುಬರಲಿಲ್ಲವಂತೆ. ಕಂದಾಯವು ಸರಾಗವಾಗಿ ವಸೂಲಾಗುವುದಕ್ಕೆ ಯಾವ ವರೆಗೆ ಆತಂಕಗಳಿಲ್ಲವೊ ಅಷ್ಟರ ವರೆಗೆ ವರ್ಗದಾರನ ತೊಂದರೆಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳಲಿಕ್ಕೆ ಸರಕಾರದವರು ತುಂಬಾ ಹಿಂಜರಿಯುತ್ತಾರೆ. ಒಂದು ಕಡೆಗೆ ಗೇಣಿ ಒಕ್ಕಲು ಗೇಣಿ ಬಾಕಿಮಾಡಿಕೊಂಡಾಗ ಅವನ ಮೇಲೆ ಸಿವಿಲ್ ವ್ಯವಹರಣೆ ಮಾಡಿ ಅದು ತೀರುವಷ್ಟರಲ್ಲಿ ದಾವಾ ಮೊಬಲಗಿನ ಜತೆಯಲ್ಲಿ ಇನ್ನೂ ಒಂದೆರಡು ವರ್ಷದ ಗೇಣಿಯನ್ನು ಒಕ್ಕಲು ನಿರಾತಂಕವಾಗಿ ಅನುಭವಿಸುವಂತೆ ಮಾಡುವದು ಈಗಿನ ಏರ್ಪಾಡಿನ ಫಲ. ವರ್ಗದಾರನು ಕಂಡಾಬಟ್ಟೆ ಗೇಣಿ ಏರಿಸಿದರೆ ಒಕ್ಕಲು ನಿರಾಧಾರಿಯಾಗುವನು ಎಂಬ ಭೀತಿಯು ಸರಕಾರದವರಿಗೆ ಉಂಟಾಗಿ ಈ ಕ್ರಮವನ್ನು ಜಾರಿಗೆ ತಂದಹಾಗೆ ಕಾಣುತ್ತದೆ. ಆದರೆ ಇಲ್ಲಿಯೂ ಮಲೆಬಾರಿನಲ್ಲಿಯೂ ಅದೇ ರೀತಿಯಲ್ಲಿ ವರ್ಗದಾರನ ಹಕ್ಕುಗಳನ್ನು ಸುರಕ್ಷಿತಪಡಿಸುವ ಕಾಯಿದೆ ಇನ್ನೂ ಬರುವುದಿಲ್ಲ. ಅದಕ್ಕೆ ಕಾಲಕಾಲಕ್ಕೂ ವಿವಿಧ ರೀತಿಯ ಅಡ್ಡಿಗಳು ಸರಕಾರದ ಕಣ್ಣೆದುರಿಗೆ ಹೊಳೆಯುತ್ತವೆ.

ದರಕಾಸ್ತು ಕ್ರಮಗಳಲ್ಲಿ ತಿದ್ದುಪಡಿಗಳು ಯಾವದಾಗಬೇಕೆಂದು ಕಲ್ಲೆಕ್ಟರವರ ಅಭಿಪ್ರಾಯ ಪಡೆಯಬೇಕೆಂದಾಗ ಅದು ಈಗ ತತ್ಕಾಲ ಅಗತ್ಯವಿಲ್ಲೆಂದೂ ಜನರು ಮನವಿಮಾಡಿದ್ದಲ್ಲಿ ಕಲ್ಲೆಕ್ಟರರು ಅವಶ್ಯವಿರುವ ಬದಲಾವಣೆಗಳನ್ನು ಮಾಡುವರೆಂದೂ ಉತ್ತರ ದೊರಕಿತು. ಈ ವಿಷಯದಲ್ಲಿ ಜನರಿಗೆ ಉಂಟಾದ ತೊಂದರೆಗಳನ್ನು ಈ ಪತ್ರಿಕೆಯಲ್ಲಿ ಆಗಾಗ ನಾವು ಚರ್ಚಿಸಿರುವೆವು. ಉಪ್ಪಿನಂಗಡಿ ತಾಲೂಕಿನಲ್ಲಿ ಅಮರ ಸುಳ್ಯ ಮಾಗಣೆಗಳಲ್ಲಿ ಸಾಗುವಳಿಯ ಭೂಮಿಗೆ ೧ ಎಕ್ರೆಗೆ ಬರೆ ಎರಡು ಎಕ್ರೆ ಬಾಣೆಯನ್ನು ಮಾತ್ರ ಇಟ್ಟು ಉಳಿದ ಸ್ಥಳವನ್ನು ಸರಕಾರಿಯಾಗಿ ಮಾಡಿದೆ. ೧೮೬೬ರಲ್ಲಿ ಈ ಮಾಗಣೆಗಳಲ್ಲಿ ಪ್ರತಿ ವರ್ಗಕ್ಕೆ ಸಂಬಂಧಪಟ್ಟ ಬಾಣೆಯನ್ನು ವಿಂಗಡಿಸಿ ಅವುಗಳ ವಿವರವನ್ನು ಕಾಣಿಸಿದ ಚೀಟಿಗಳ ಮತ್ತು ಆ ಕಾಲದ ಸರಕಾರಿ ರಿಜಿಸ್ತ್ರಿಗಳ ನಕಲುಗಳನ್ನು ಸರಕಾರದವರು ಕೊಡಲಿಕ್ಕೆ ಒಪ್ಪದ ಕಾರಣ ಜನರಿಗೆ ತಮ್ಮ ಹಕ್ಕುಗಳನ್ನು ಕುರಿತು ವ್ಯವಹರಿಸಲಿಕ್ಕೆ ಸಾಧ್ಯವಿಲ್ಲ. ಇಂಥ ತೊಂದರೆಯನ್ನು ಹೋಗಲಾಡಿಸುವ ವಿಷಯದಲ್ಲಿ ಜನರ ಮನವಿ ಬರಲಿಲ್ಲವೆಂತಲೂ ಕುಮಕಿಯು ವರ್ಗದಾರನಿಗೆ ಸಿಕ್ಕುವ ರಿಯಾಯತಿಯಲ್ಲದೆ ಹಕ್ಕಲ್ಲವೆಂದೂ ಸರಕಾರದವರು ಹೇಳಿದರು. ಮನವಿ ಇಲ್ಲದೆ ಸರಕಾರವು ತಾನಾಗಿಯೇ ಕಲ್ಲೆಕ್ಟರವರಿಗೆ ಬರೆದು ಈ ವಿಷಯದಲ್ಲಿ ಜನರಿಗೆ ಉಂಟಾದ ತೊಂದರೆಗಳನ್ನು ತನಖಿ ಮಾಡಲಿಕ್ಕೆ ಮುಂದೊತ್ತಲಾರದೆಂದು ಗೊತ್ತಾಯಿತು.

ಹುಕುಮಿಲ್ಲದೆ ಶರಾಬನ್ನು ತಯಾರಿಸುವ ತಪ್ಪಿಗೆ ಜುರುಮಾನೆಯೊಂದಿಗೆ ಸಜೆಯನ್ನೂ ವಿಧಿಸಬೇಕಾಗಿಯೂ ಮಾರಾಮಾರಿ ತಕ್ಸೀರುಗಳಲ್ಲಿ ಸಜೆಯನ್ನೆ ವಿಧಿಸಬೇಕಾಗಿಯೂ ಜಿಲ್ಲಾ ಕಲ್ಲೆಕ್ಟರರವರು ಸಬ್ ಮೇಜಿಸ್ಟ್ರೇಟರುಗಳಿಗೆ ಕೊಟ್ಟ ಸರ್ಕಿಲಾರುಗಳು ಆ ಉದ್ಯೋಗಸ್ಥರ ಕೈಕಟ್ಟುವುದರಿಂದ ಅಂಥ ಸರ್ಕಿಲಾರುಗಳನ್ನು ಹಿಂದೆಗೆಯುವಂತೆ ಸರಕಾರದವರು ಹುಕುಂ ಕೊಡಬೇಕಾಗಿ ಕೇಳಿದಾಗ ಈ ಸಂಗತಿಯಲ್ಲಿ ವಿಚಾರ ನಡಿಸಲಾಗುವುದೆಂದು ಉತ್ತರ ಸಿಕ್ಕಿತು.

ಸಹಕಾರದ ವಿಷಯವಾಗಿ ಕೇಳಿದ ೪ ಪ್ರಶ್ನೆಗಳಿಂದ ಪ್ರೊವಿನ್‌ಶ್ಯಲ್ ಕೊಒಪರೆಟಿವ್ ಬೇಂಕಿನ ವಿಷಯವು ಸರಕಾರದ ಮುಂದೆ ಇದೆ ಎಂದೂ ಈಗಿನ ಇನ್ಸ್‌ಪೆಕ್ಟರುಗಳ ಸಂಖ್ಯೆಯು ಮಲೆಬಾರ ಮತ್ತು ದಕ್ಷಿಣಕನ್ನಡಕ್ಕೆ ಬೇಕಾದಷ್ಟು ಇಲ್ಲವಾದರೆ ಆ ವಿಷಯವನ್ನು ರಿಜಿಸ್ಟ್ರಾರವರು ಆಲೋಚನೆಗೆ ತೆಗೆದುಕೊಳ್ಳುವರೆಂದೂ, ಗೌರವಾರ್ಥವಾಗಿ (ಒನರೆರಿ) ಆಸಿಸ್ಟಾಂಟ ರಿಜಿಸ್ಟ್ರಾರರನ್ನು ನೇಮಿಸಬೇಕಾಗಿ ಕೊಯಮುತ್ತೂರ ಸರ್ಕಲ್ ಕೊಒಪರೇಟಿವ್ ಕೊನ್ಫರೆನ್ಸಿನವರು ಮಾಡಿದ ಸೂಚನೆಯನ್ನು ಕುರಿತು ಸರಕಾರದವರು ಆಲೋಚನೆ ಮಾಡುತ್ತಲಿದ್ದಾರೆಂದೂ ಗೊತ್ತಾಯಿತು. ಈಗಿನ ರಿಜಿಸ್ಟ್ರಾರರು ಫಕ್ಕನೆ ಈ ಡಿಪಾರ್ಟಮೆಂಟಿನಿಂದ ವರ್ಗಾಯಿಸಲ್ಪಟ್ಟು ಸಿವಿಲಿಯನ್ ಗ್ರೇಡಿನವರು ಬರುವರೊ ಎಂಬ ಸಂಶಯವು ಹೋಯಿತು. ಸಹಕಾರ ವಿಚಾರದ ಕಮ್ಮಿಟಿಯವರು ಮಾಡಿದ ಸೂಚನೆಗಳಲ್ಲಿ ಈ ಉದ್ಯೋಗಕ್ಕೆ ಸಿವಿಲಿಯನ್ ಎಂದರೆ ಐ. ಸಿ. ಎಸ್. ಪರೀಕ್ಷೆ ಪಾಸಾದವರನ್ನೆ ನೇಮಿಸಬೇಕೆಂದು ಒಂದು ಸೂಚನೆಯಿತ್ತು. ದೇಶಭಾಷೆಯ ಪರಿಚಯವೇನೂ ಇಲ್ಲದೆ ಇಂಥ ಉದ್ಯೋಗಸ್ಥರು ತಮ್ಮ ಕೆಲಸವನ್ನು ಸರಿಯಾಗಿ ನಡಿಸುವುದೇ ಅಸಾಧ್ಯವೆಂದು ಶಂಕೆ ಉಂಟಾಗಿತ್ತು. ದೇಶಿಯರೂ ಆಗಿ ತಮ್ಮ ಕೆಲಸದಲ್ಲಿ ತುಂಬಾ ಉತ್ಸಾಹವೂ ಪಾಂಡಿತ್ಯವೂ ಇರುವ ಈಗಿನ ರಿಜಿಸ್ಟ್ರಾರರು ಈ ಇಲಾಖೆಯನ್ನು ಬಿಟ್ಟುಹೋಗುವ ಹಾಗಿಲ್ಲವೆಂದು ಕೇಳಲಿಕ್ಕೆ ಸಂತೋಷಪಡುತ್ತೇವೆ.

ಮಂಗಳೂರು ಮೈಸೂರು ರೈಲ್‌ವೇ ಸಮಾಚಾರವು ಇನ್ನೂ ತನಖಿಯಲ್ಲಿಯೇ ಬಾಕಿ ಇದೆ ಎಂತ ಗೊತ್ತಾಗುತ್ತದೆ.

ತಾಲೂಕು ಕಚೇರಿಗಳಲ್ಲಿ ಕೆಲಸಮಾಡುವ ಫ್ಲೊರೆಷ್ಟ ಕ್ಲಾರ್ಕರ ಇಸಂ ಯಾವಾಗ ಜಾರಿಗೆ ಬಂತು, ಅದು ಕಾಯಂ ಆಗಿದೆಯೊ ಎಂಭ ಮಾಹಿತಿಯು ಸರಕಾರದವರಿಗೆ ಸ್ಪಷ್ಟವಾಗಿ ಇಲ್ಲವಂತೆ. ಫ್ಲೊರೆಷ್ಟ ರೇಂಜರುಗಳ ಕ್ಲಾರ್ಕರಿಗೆ ೨೦ ರೂಪಾಯಿ ತಲ್ಲಬು ಸಿಕ್ಕುವಾಗ ಈ ಬಡ ಗುಮಾಸ್ತೆಯರಿಗೆ 'ಬಾಜಿರಾಯನ ಕಾಲದಲ್ಲಿ' ನಿರ್ಣಯಿಸಿದ ೧೨ ರೂಪಾಯಿ ಸಂಬಳವು ಇನ್ನೂ ಹೆಚ್ಚಲಿಲ್ಲ. ಆ ಇಸಂ ಕಾಯಂ ಹೌದೊ ಅಲ್ಲವೊ (ಅಂದರೆ ಪೆನ್ಸನ್ ಹಕ್ಕುಳ್ಳವುಗಳೊ) ಎಂಬುದನ್ನೂ ವಿಚಾರಿಸಿ ಬೇಕಾದ ಬದಲಾವಣೆಗಳ ವಿಷಯವಾಗಿ ಹೇಳುವುದಕ್ಕೆ ಇದೇ ಪ್ರಶ್ನೆಯನ್ನು ಮುಂದಿನ ಸಭೆಗಳಲ್ಲಿ ಕೇಳುವಂತೆ ಒನರೆಬಲ್ ಭಟ್ಟರಿಗೆ ಸಮ್ಮತ ಸಿಕ್ಕಿತು.

ಕುತ್ತಿಕಾಣಿಕೆಯ ದರಗಳನ್ನು ೧೮೮೮ನೇ ಇಸವಿಯ ನಂತರ ಬದಲಾಯಿಸಲಿಲ್ಲವೆಂತಲೂ ಅದರ ನಂತರ ಧೂಪದ ಮರವನ್ನು ಮಾತ್ರವೇ 'ದರವಾರಿ' ವರ್ಗಕ್ಕೆ ಸೇರಿಸಿದರೆಂತಲೂ ಇದಕ್ಕೆ ಸಂಬಂಧಪಟ್ಟ ರಿಪೋರ್ಟುಗಳನ್ನು ತೋರಿಸುವುದು ಅನುಚಿತವೆಂತಲೂ ಉತ್ತರ ಸಿಕ್ಕಿತು.

ಕಾರ್ಕಳ ತಾಲೂಕಿಗೆ ಬೇರೆಯಾಗಿ ದೇವಸ್ಥಾನದ ಕಮ್ಮಿಟಿಗಳ ಮೆಂಬರನ್ನು ನೇಮಕಮಾಡಲಿಕ್ಕೆ ಸಾಧ್ಯವಿಲ್ಲವಂತೆ. ಈ ಮೊದಲು ಕಾರ್ಕಳವು ಉಡುಪಿ ತಾಲೂಕಿಗೆ ಸೇರಿದ್ದಾಗ ಇದ್ದ ಕಮ್ಮಿಟಿ ಮೆಂಬರುಗಳ ಅಧಿಕಾರಕ್ಕೆ ಸೇರಿದ ಗ್ರಾಮಗಳನ್ನು ಅವರ ಕೈಯಿಂದ ತಪ್ಪಿಸಲು ಕಾನೂನು ಇಲ್ಲವೆಂದು ತಿಳಿಯಿತು.

ರೆವಿನ್ಯೂ ಡಿವಿಜನಲ್ ಆಫಿಸರುಗಳು ಯಾವಾಗಲೂ ಸರ್ಕಿಟಿನಲ್ಲಿ ಇರುವ ಕಾರಣ ರೆವಿನ್ಯೂ ಕ್ರಿಮಿನಲ್ ಅಪ್ಪೀಲುಗಳನ್ನು ಇನ್‌ಕಂಟೆಕ್ಸ ಆಕ್ಷೇಪಣೆ ಅರ್ಜಿಗಳನ್ನು ಆ ಆಫಿಸರರ ಹೆಡ್‌ಕ್ವಾರ್ಟರ್ಸಿನಲ್ಲಿ ಯಾವಾಗಲೂ ಇರುವ ಅವರ ಹೆಡ್ ಕ್ಲಾರ್ಕರು ದಾಖಲು ಮಾಡಿಕೊಳ್ಳುವ ಅನುಕೂಲತೆ ಸಿಕ್ಕಬೇಕೆಂದು ಕೇಳಿದ್ದಕ್ಕೆ ಆಲೋಚನೆ ಮಾಡಲಾಗುವುದು ಎಂದು ಉತ್ತರ ಸಿಕ್ಕಿತು.

ವೈನಾಡಿನಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರರ ಫಿರ್ಕೆಗಳು ಈಚೆಗೆ ಹೆಚ್ಚಾದ್ದರಿಂದ ವೈನಾಡು ತಾಲೂಕು ಬೋರ್ಡಿಗೆ ಜನರಿಂದ ಚುನಾಯಿಸಲ್ಪಡುತ್ತಿದ್ದ ೫ ಮೆಂಬರರ ಬದಲಾಗಿ ೭ ಮೆಂಬರರನ್ನು ಚುನಾಯಿಸಲಿಕ್ಕೆ ಸಾಧ್ಯವಾಗಲಾರದೆ ಎಂದು ಮಲೆಬಾರ ಕಲೆಕ್ಟರರ ಅಭಿಪ್ರಾಯ ಪಡೆಯಬೇಕೆಂಬದಕ್ಕೆ ಈಗಿನ ಸ್ಥಿತಿಯಲ್ಲಿ ೫ 'ಸೀಟು'ಗಳನ್ನೂ ಕೊಡಬಾರದಿತ್ತೆಂದು ಕಲ್ಲೆಕ್ಟರರ ಅಭಿಪ್ರಾಯವೆಂದು ತಿಳಿದುಬಂತು.

ರಸ್ತೆಯ ಮಧ್ಯದಿಂದ ೨೨ ಗಜಕ್ಕೆ ಕುಣಿಯನ್ನು ತೆಗೆಯುವುದಕ್ಕೆ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡಿನವರು ಸಾವಿರ ಗಟ್ಲೆಯಿಂದ ರೂಪಾಯಿ ಖರ್ಚು ಮಾಡಿದ್ದಕ್ಕೆ ಸರಕಾರದ ಮಂಜೂರಾತಿಯಾಗಲಿ ಹುಕುಂ ಆಗಲಿ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರ ಠರಾವಾಗಲೀ ಇತ್ತೊ ಎಂದು ಕೇಳಿದ ಪ್ರಶ್ನೆಗೆ ಈ ವಿಷಯದಲ್ಲಿ ತನಖಿ ನಡಿಸಲಾಗುವುದು ಎಂದು ಉತ್ತರ ಸಿಕ್ಕಿತು.

ಮೇಲಿನ ಸವಾಲುಗಳಿಂದ ನಮ್ಮ ಜಿಲ್ಲೆಯಲ್ಲಿ ಇರುವ ಕುಂದುಕೊರತೆಗಳು ಅನೇಕಾನೇಕವಿದ್ದು ಜನರು ಆಗಾಗ ಮನವಿ ಮಾಡದೆ ನಿರ್ಜೀವಾವಸ್ಥೆಯಲ್ಲಿ ಇದ್ದ ಕಾರಣ ಸರಕಾರದವರು ಹಲವು ಸಂಗತಿಗಳು ತಮ್ಮ ಗೋಚರಕ್ಕೆ ಬರಲಿಲ್ಲವೆಂದು ತೋರ್ಪಡಿಸಿದ್ದಾರೆ. ಆದ್ದರಿಂದ "ಮಗು ಅತ್ತವಿನಾ ತಾಯಿ ಮೊಲೆಯೂಡುವುದಿಲ್ಲ" ಎಂಬ ಮಾತು ಇದೆ. ಹಾಗೆಯೇ ನಮ್ಮ ಪ್ರತಿನಿಧಿಯ ಮೂಲಕ ನಾವು ಆಗಾಗ ಇಲ್ಲಿಯ ಸರಕಾರಿ ನವ್ಕರರ ಆಸಡ್ಡೆ, ನವಾಬಿ ದೌಲತ್ತು, ಅದರಿಂದ ಜನ ಸಾಮಾನ್ಯರಿಗೆ ಇರುವ ಬಾಧಕಗಳು, ಇವನ್ನು ಸರಕಾರದವರ ಅವಗಾಹನೆಗೆ ತರುವುದು ಪ್ರಜೆಗಳ ಕರ್ತವ್ಯ.

ತಂತಿಗಳ ದರವು ಹೆಚ್ಚಾಯಿತು!

ಇಷ್ಟರ ವರೆಗೆ ತಂತಿಯ ಮೊದಲಿನ ೧೨ ಶಬ್ದಗಳಿಗೆ ೬ ಆಣೆ ದರವಿದ್ದದ್ದು ಈ ಹೊತ್ತಿನಿಂದ ಎಂದರೆ ಡಿಸೆಂಬರ ತಾ. ೧ರಿಂದ ೮ ಆಣೆ ಮಾಡಲ್ಪಟ್ಟದೆಂದು ಹಿಂದುಸ್ಥಾನ ಸರಕಾರವು ಪ್ರಸಿದ್ಧ ಮಾಡಿದೆ. ಈ ವಿಷಯದಲ್ಲಿ ಸರಕಾರವು ತೋರಿಸಿರುವ ಕಾರಣವು ಯಾವುದೆಂದರೆ—ಯುದ್ಧದ ಕೆಲಸದ ಮೇಲೆ ತಂತಿ-ಖಾತೆಯೊಳಗಿನ ಅನೇಕ ಜನರು ರಣಭೂಮಿಗೆ ಹೋಗಿರುವುದರಿಂದ ಬಾಕಿ ಉಳಿದ ನೌಕರರಿಂದ ಅಷ್ಟು ಕೆಲಸವು ಸಾಧ್ಯವಾಗುವುದಿಲ್ಲ, ಹೀಗಾಗಿ ತಂತಿಗಳ ಸಂಖ್ಯೆಯನ್ನು ತಗ್ಗಿಸುವುದಕ್ಕೆ ಈ ದರವು ಹೆಚ್ಚಿಸಿದೆ! ಬೇಷ್! ಕಾರಣವು ಬಹು ಚಂದವಿದೆ! ಆದರೆ ಸಮರ್ಪಕವಾಗಿದ್ದುದು ಮಾತ್ರ ಕಾಣುವುದಿಲ್ಲ. ತಂತಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ ದರವನ್ನು ಹೆಚ್ಚಿಸುವುದೆಂದರೆ ಮನೆಗೆ ಬಂದ ನೆಂಟರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ ಯಜಮಾನನು ಬಂದವರನ್ನು ಎಡಬಿಡದೆ ಬೆಟ್ಟಿಗೆ ಹಚ್ಚುವಂತೆಯೆ ಆಗಿದೆ! ಆದರೂ ಇವರ ಮೀಮಾಂಸೆಯನ್ನು ಮಾಡಲು ಈ ಕಾರ್ಯಕಾರಣ ಭಾವವು ಸರಿಯಾಗಿ ಸೇರುವುದಿಲ್ಲೆಂದು ಹೇಳಬೇಕಾಗುತ್ತದೆ. ತಂತಿ-ಖಾತೆಯೊಳಗಿನವರು ಯುದ್ಧಭೂಮಿಗೆ ಹೋದುದಾದರೆ ಅವರ ಬದಲಿಗೆ ಬೇರೆಯವರನ್ನು ತೆಕ್ಕೊಳ್ಳಬಹುದಲ್ಲವೆ? ಮಿಲಿಟರಿಯಂಥ ಖಾತೆಯಲ್ಲಿ ಕೂಡ ಹಳೆಯವರ ಜಾಗೆಯಲ್ಲಿ ಬೇಕಷ್ಟು ಹೊಸಜನರ ಭರತಿಯಾಗುತ್ತಿರುವಾಗ ಈ ಖಾತೆಯಲ್ಲಿ ಅದು ಅಸಾಧ್ಯವಾದೀತೆ? ಈ ಏರ್ಪಾಡಿನಿಂದ ಖರ್ಚು ಹೆಚ್ಚಿಗೆ ಬಂದೀತೆಂದು ನೆನಿಸಲೂ ಅವಕಾಶವಿಲ್ಲ. ಯುದ್ಧ ಭೂಮಿಗೆ ಹೋದವರ ಖರ್ಚನ್ನು ಯುದ್ಧದ ಇಲಾಖೆಯು ವಹಿಸಿಕೊಳ್ಳುವ ಕಾರಣ ಈ ಭಾಗದಲ್ಲಿ ಹೆಚ್ಚಿಸುವ ಅಗತ್ಯ ಕಂಡು ಬರುವುದಿಲ್ಲ. ಯುದ್ಧ ಭೂಮಿಗೆ ಹೋದವರ ಸ್ಥಾನದಲ್ಲಿ ಹೊಸದಾಗಿ ಬಂದವರು ವ್ಯಕ್ತಿತ್ವದಿಂದ ಹೊಸಬರಾದರೂ ತಂತಿ ಖಾತೆಗೆ ಹೊಸಬರಲ್ಲ, ಮೊದಲಿನ ನೌಕರರಿಗೆ ಕೊಟ್ಟಂತೆಯೆ ಇವರಿಗೆ ಸಂಬಳ ಕೊಟ್ಟರೆ ಸರಿ. ಸ್ವಲ್ಪ ಸಮಯದೊಳಗೆ ಬೇಕಷ್ಟು ಜನರು ತಂತಿಯ ವಿದ್ಯೆಯನ್ನು ಕಲಿತವರು ಸಿಗುವದು ದುರ್ಲಭವೆಂದು ತಿಳಿದುಕೊಳ್ಳುವುದು ಬೇಕಾದ್ದಿಲ್ಲ. ಈ ವಿದ್ಯೆಯು ಅಷ್ಟೊಂದು ಬುದ್ಧಿಶಕ್ತಿಯದಾಗಲಿ ಅಥವಾ ಶ್ರಮ ಸಾಧ್ಯದ್ದಾಗಲಿ ಅಲ್ಲ. ಹೀಗಿರುವಾಗ ಮೇಲೆ ತೋರಿಸುವ ಕಾರಣವು ಸಮಂಜಸವಾಗಿದ್ದುದು ಕಂಡು ಬರುವುದಿಲ್ಲ. "ಇದು ಯುದ್ಧ ಸಮಯವಾದ ಕಾರಣ ಮತ್ತು ಈ ಖಾತೆಯ ವರಿಷ್ಠಸ್ಥಾನಗಳಲ್ಲಿ ಯುರೋಪಿಯನ್, ಮತ್ತು ಯುರೇಜಿಯನ್ನರನ್ನೆ ನೇಮಿಸುವ ಹೆಚ್ಚಿನ ವಹಿವಾಟ ಇರುವುದರಿಂದ ಆ ಕ್ಲುಪ್ತ ನೌಕರರಿಗೆ ಸಾಧ್ಯವಾಗುವಷ್ಟೇ ಕೆಲಸವು ಆಗಬೇಕಾಗಿದೆ, ಹೆಚ್ಚಿನ ಕೆಲಸವು

ಅಸಾಧ್ಯ, ಮತ್ತು ಹೀಗೆ ಕೆಲಸ ಕಡಿಮೆಯಾದರೂ ಆ ಖಾತೆಯ ಉತ್ಪತ್ತಿಯ ಮಾನವು ಮೊದಲಿನಂತೆ ಇಡುವುದಕ್ಕಾಗಿ ದರವನ್ನು ಹೆಚ್ಚಿಸುವುದು ಉಚಿತವಾಯಿತೆಂದು ಸರಕಾರವು ಇದರ ಪ್ರಸ್ತಾವನೆಯನ್ನು ಬರೆದುದ್ದಾದರೆ ಅದು ನಿರಾತಂಕವಾಗುತ್ತಿತ್ತು. ಯುದ್ಧದ ಸ್ವಲ್ಪಾವಧಿಯಲ್ಲಿ ಬೇರೆ ಎಷ್ಟೋ ಸಂಗತಿಗಳಂತೆ—ಹತ್ತರೊಟ್ಟಿಗೆ ಹನ್ನೊಂದು ಎಂಬ ಮಾತಿಗನುಸಾರವಾಗಿ ಈ ಹೆಚ್ಚಾದ ದರವನ್ನು ಪಿತಾಂಬಂತನಾದ ಪ್ರತಿ ಒಬ್ಬನು ಒಪ್ಪಿಕೊಳ್ಳಬೇಕಾದದ್ದೆ. ಆದರೆ ನಿಜವಾದ ಕಾರಣವನ್ನು ಬಿಟ್ಟು ಅಸಮರ್ಪಕವಾದ ಸಬಬನ್ನು ಕೇಳುವುದರಿಂದ ಮಾತ್ರ ಮನಸ್ಸಿಗೆ ಅಷ್ಟೊಂದು ಸಮಾಧಾನವಾಗುವುದಿಲ್ಲ. ಕಾರಣವು ಯಾವುದೂ ಇರಲಿ, ಅದರ ವೃಥಾ ಚರ್ಚೆಯಿಂದ ನಮಗೇನೂ ಪ್ರಯೋಜನವಿಲ್ಲ. ಆದರೆ ಈ ಹೊತ್ತಿನಿಂದ ತಂತಿಗಳ ದರವು ಆಣೆ ಇದ್ದದ್ದು ಎಂಟಾಣೆಯಾಗಿದೆಯೆಂಬುದು ಮಾತ್ರ ನಿಜವು.

ಔದ್ಯೋಗಿಕ ಕಮಿಷನ.

(ಕೆಲವು ಸಾಕ್ಷಿಗಳು.)

ಹಿಂದೊಮ್ಮೆ ಔದ್ಯೋಗಿಕ ಕಮಿಷನಿನಲ್ಲಿ ಆದ ಸಾಕ್ಷಿಗಳಲ್ಲಿ ಮಹತ್ವದ ಎರಡು ಸಾಕ್ಷಿಗಳನ್ನು ಕೊಟ್ಟಿರುವೆವು ಈ ಸಾರಿಯೂ ಇನ್ನೆರಡು ಮಹತ್ವದ ಸಾಕ್ಷಿಗಳನ್ನು ಕೊಡುತ್ತೇವೆ.

"ವಿದ್ಯಾ ಇಲಾಖೆಯ ಡಿರೆಕ್ಟರರಾದ ಮಿ ಫೋಸೆ (ಲಖನೌ) ಎಂಬವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ, ಔದ್ಯೋಗಿಕ ಶಾಲೆಗಳು ಸರಕಾರದ ಉದ್ಯೋಗ ಖಾತೆಯ ಕೈಕೆಳಗೇ ಇರುವುದು ಲಾಭಕರವಲ್ಲ. ಈ ಔದ್ಯೋಗಿಕ ಶಾಲೆಯ ಮೇಲೆ ಉದ್ಯೋಗ ಇಲಾಖೆಯ ತನಖಿಯು ನಡೆಯಬೇಕೆಂಬುದು ನಿಜ. ಆದರೆ ವಿದ್ಯಾ ಇಲಾಖೆಯ ಕೈಯೂ ಅದರ ಮೇಲೆ ನಡೆಯಬೇಕು. ಗಿರಣಿ ಮತ್ತು ಕಾರಖಾನೆಯೊಳಗಿನ ಕೂಲಿಗಳಿಗೆ ಶಿಕ್ಷಣ ಕೊಡುವುದು ಅವಶ್ಯವಾಗಿದೆ. ಶಿಕ್ಷಣ ಸಿಕ್ಕಿದರೆ ಹುಡುಗರು ಕೆಲಸ ಬಿಟ್ಟು ಹೋಗುವರೆಂಬ ಭಯದಿಂದ ಕಾರಖಾನೆಯವರು ಕೂಲಿಗಳಿಗೆ ಶಿಕ್ಷಣ ಕೊಡುವುದನ್ನು ಆದಷ್ಟು ತಪ್ಪಿಸುತ್ತಾರೆ. ಆದುದರಿಂದ ಕೂಲಿಗಳಿಗೆ ಶಿಕ್ಷಣವನ್ನು ಕೊಡಲೇಬೇಕೆಂಬ ನಿರ್ಬಂಧನನ್ನು ಕಾರಖಾನೆಯವರ ಮೇಲೆ ನಡಿಸಬೇಕು." "ಈ ಶಿಕ್ಷಣದ ವಿಷಯದಲ್ಲಿ ಕಾರಖಾನೆಯವರನ್ನೆ ನಿರ್ಬಂಧ ಪಡಿಸಬೇಕೆಂದು ನೀವು ಆಗ್ರಹ ತೆಕ್ಕೊಳ್ಳುವುದು ಯಾಕೆ?" ಎಂಬ ಸರಫಾಜಲ ಭಾಯಿಯವರ ಪ್ರಶ್ನೆಗೆ ಮಿ. ಫೋಸೆಯವರು ಉತ್ತರಿಸಿದ್ದೇನೆಂದರೆ, "ಹಿಂದುಸ್ಥಾನದಲ್ಲೆಲ್ಲ ಶಿಕ್ಷಣವು ಖಡ್ಡಾಯದ್ದಾಗಬೇಕೆಂದು ನನ್ನ ಮತವಿರುವುದು."

೨ ಮೆಸರ್ಸ ಕೂಪರ-ಎಲನ್ ಕಂಪೆನಿಯ ಮೆನೆಜಿಂಗ ಡಿರೆಕ್ಟರರೂ ಮತ್ತು ಅಪ್ಪರ ಇಂಡಿಯಾ ಕೊಮರ್ಸಿನ ಪ್ರೆಸಿಡೆಂಟರೂ ಆದ ನಾಮದಾರ ಪ್ರೋಟಸನರು ಹೇಳಿದ್ದೇನೆಂದರೆ:—ಸರಕಾರವು ಒಂದು ಖಾಸಗಿ ಕಾರಖಾನೆಗೆ ಮದತು ಮಾಡಿದ್ದಲ್ಲಿ ಆ ಕಾರಖಾನೆಯೊಳಗಿನ ಕಸರು ಮಾಲುಗಳ ಕ್ರಯ, ತಯಾರಿಸಿದ ಮಾಲುಗಳ ಕ್ರಯ, ಕೆಲಸದವರ ಸಂಬಳ ಮುಂತಾದ ವಿಷಯಗಳನ್ನು ಸರಕಾರವು ನೋಡುತ್ತಿರಬೇಕು. ಈ ವಿಷಯದಲ್ಲಿ ತನಖಿ ನಡಿಸುತ್ತಿರಬೇಕು. ಸರಕಾರವು ತಾನೇ ಒಂದು ಕೈಗಾರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಲಾಭ ಬರುತ್ತದೆಂತ ಆದ ಮೇಲೆ ಅದನ್ನು ಖಾಸಗಿ ಕಾರಖಾನೆಯವರ ಕೈಗೆ ಕೊಡಲು ಅಡ್ಡಿಯಿಲ್ಲ. ಗುಂಡುಮದ್ದಿನ ಕಾರಖಾನೆಯಂಥ ರಾಜಕೀಯ ಸಂಬಂಧವು ಯಾವುದರಲ್ಲಿಲ್ಲವೊ ಇಂಥ ಕಾರಖಾನೆಗಳನ್ನು ಸರಕಾರವು ಯಾವ ಪರಿಸ್ಥಿತಿಯಲ್ಲಾದರೂ ತನ್ನ ಕೈಯೊಳಗಿಟ್ಟುಕೊಳ್ಳುವುದು ಉಚಿತವಲ್ಲ: ಪರದೇಶದಿಂದ ಬರತಕ್ಕ ಮಾಲುಗಳ ಪಟ್ಟಿಯನ್ನು ಸರಕಾರವು ತಯಾರಿಸಬಹುದು, ಆದರೆ ಈ ಮಾಲುಗಳ ಪ್ರದರ್ಶನೆಯನ್ನು ಮಾಡುವುದರಿಂದ ವಿಶೇಷ ತರದ ಪ್ರಯೋಜನವುಂಟೆಂದು ನಾನು ನೆನೆಸುವುದಿಲ್ಲ. ಈ ದೇಶದಲ್ಲಿ ತಯಾರಾಗುವ ಜಿನಸುಗಳನ್ನು ಸರಕಾರಿ ಇಲಾಖೆಗಳಲ್ಲಿ ಉಪಯೋಗದ ಬಗ್ಗೆ ತೆಕ್ಕೊಳ್ಳಬೇಕಾದುದು ನಿಜ. ಆದರೆ ಎಷ್ಟೋ ಸಾರಿ ಆಗುವ ಸಂಗತಿಯೇನೆಂದರೆ, ತಮ್ಮ ಇಲಾಖೆಗೆ ಬೇಕಾಗಿರುವ ಮಾಲುಗಳು ದೇಶದಲ್ಲಿ ತಯಾರಿಸಿ ಸಿಗುವ ಹಾಗಿವೆಯೊ ಇಲ್ಲವೊ, ಇದೇ ಸರಕಾರಿ ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ, ಸರಕಾರಕ್ಕೆ ಯಾವ ಜಿನಸುಗಳು ಬೇಕಾಗಿವೆಯೆಂಬುದು ಕಾರಖಾನೆಯವರಿಗೆ ಗೊತ್ತಿರುವುದಿಲ್ಲ. ಈ ನ್ಯೂನತೆಯು ಹೋಗುವಂತೆ ಪ್ರಯತ್ನಗಳಾಗಬೇಕು. ಹಿಂದೀ ಕೂಲಿಗಳಿಗೆ ತಮ್ಮ ಕೆಲಸಗಳಲ್ಲಿ ಕುಶಲವಿರುವುದಿಲ್ಲೆಂತಲ್ಲ, ಆದರೆ ಅವರು ತಮ್ಮ ಕೆಲಸದಲ್ಲಿ ಮನಸ್ಸು ಹಾಕುವಂತೆಯೂ, ಅದರಲ್ಲಿ ಉತ್ಸಾಹ ತೆಕ್ಕೊಳ್ಳುವಂತೆಯೂ ಅವರಿಗೆ ಕೈಬಿಟ್ಟು ಸಂಬಳ ಕೊಡುವ ಹಾಗೆ ಯೋಗ್ಯ ವ್ಯವಸ್ಥೆಯು ಆಗಬೇಕಾಗಿದೆ. ಅವರು ತಮ್ಮ ಕೆಲಸವನ್ನು ಬಹು ಉತ್ತಮರೀತಿಯಿಂದ ಮಾಡಿದ್ದಾದರೆ ಅವರಿಗೆ ಇನಾಮು ಕೂಡ ಸಿಗುವಂತೆ ಏರ್ಪಾಡಾಗಬೇಕು.

ಪತ್ರವ್ಯವಹಾರ.

ಮಂಗಳೂರಿನ ಹೊಸ್ಟೆಲುಗಳು.

ಆಯ್ಯಾ ಪತ್ರಕರ್ತರೇ,

ಹಳ್ಳಿಹಳ್ಳಿಗಳಿಂದ ವಿದ್ಯಾಭ್ಯಾಸದ ಬಗ್ಯೆ ಪಟ್ಟಣಗಳಿಗೆ ಬರುವ ವಿದ್ಯಾರ್ಥಿಗಳು ಹಿಂದಿನ ಕಾಲದಲ್ಲಿ ಪಟ್ಟಣದ ಹಾಗು ಹೊಟೆಲುಗಳಲ್ಲಿಯೋ, ನೆಂಟರಿಷ್ಟರ ಮನೆಗಳಲ್ಲಿಯೋ ಯಾ ಪ್ರತ್ಯೇಕ ಬಿಡಾರ ಮಾಡಿಯೋ ಉಳಕೊಳ್ಳುವ ಪದ್ಧತಿಯಿತ್ತು. ಆದರೆ ಸಸಿಗಳಂತೆ ಇರುವ ಈ ವಿದ್ಯಾರ್ಥಿಗಳಿಗೆ ಈ ಪದ್ಧತಿಯಿಂದ ತಕ್ಕ ಪಾಲನೆ ಸಿಕ್ಕದೆ ಅವರು ಬಾಲ್ಯದಲ್ಲಿಯೇ ಕೆಟ್ಟುಹೋಗುತ್ತಾರೆಂಬ ಭಾವನೆಗಳು ಸರಕಾರದವರಲ್ಲಿಯೂ ಪ್ರಜಾ ಮುಂದಾಳುಗಳಲ್ಲಿಯೂ ಉಂಟಾಗಿ ಈಗ ಶಾಲೆಗೆ ಸಂಬಂಧಿಸಿದ ಹೊಸ್ಟೆಲುಗಳು ಉಂಟಾಗಿವೆ. ನಮ್ಮ ಪಟ್ಟಣದಲ್ಲಿಯೇ ನೋಡುವದಾದರೆ,—ಗವರ್ನಮೆಂಟ ಕಾಲೇಜು ಹೊಸ್ಟೆಲು, ಸೈಂಟ್ ಅಲೋಶಿಯಸ್ ಕಾಲೇಜು ಹೊಸ್ಟೆಲು, ಕೆನರಾ ಹೈಸ್ಕೂಲು ಹೊಸ್ಟೆಲು, ಮಿಶ್ಯನ್ ಹೈಸ್ಕೂಲು ಹೊಸ್ಟೆಲು, ಗಣಪತಿ ಸೆಕಂಡರಿ ಸ್ಕೂಲು ಹೊಸ್ಟೆಲು—ಇಷ್ಟೆ ಅಲ್ಲ; ಇನ್ನು ಜಾತಿ ಜಾತಿಗೆ, ಪಂಗಡ ಪಂಗಡಕ್ಕೆ ಎಂಬಂತೆ ಬಂಟರ ಯಾನೆ ನಾಡವರ ಹೊಸ್ಟೆಲು, ಜೈನರ ವಿದ್ಯಾರ್ಥಿಗಳ ಬಗ್ಗೆ ಎರಡು ಹೊಸ್ಟೆಲುಗಳು, ಬ್ರಾಹ್ಮಣರ ಹೊಸ್ಟೆಲು—ಹೀಗೆ ಎಷ್ಟೋ ಹೊಸ್ಟೆಲುಗಳು ಆಗಿ ಹೋಗಿವೆ. ಸದ್ಯದಲ್ಲಿಯೇ ಬಾಕಿ ಉಳಿದ ಮಹಮ್ಮದೀಯರ ಹೊಸ್ಟೆಲೊಂದಕ್ಕೆ ಏರ್ಪಾಡುಗಳು ನಡೆಯುತ್ತಿವೆ. ವಿದ್ಯಾರ್ಥಿವರ್ಗದ ಅಭಿವೃದ್ಧಿ ದೃಷ್ಟಿಯಿಂದ ಆಲೋಚಿಸುವದಾದರೆ ಇದೆಲ್ಲಾ ಒಳ್ಳೆದೇ ಸರಿ. ಇಂಥಾ ಹೊಸ್ಟೆಲುಗಳಿಗೆ ವಿದ್ಯಾರ್ಥಿಗಳ ಮೇಲ್ತನಿಕೆಯನ್ನು ನೋಡುತ್ತಾ ಅವರ ಏಳಿಗೆಯನ್ನು ಚಿಂತಿಸುವ ಒಬ್ಬೊಬ್ಬ ವಾರ್ಡರರು ಯಾನೆ ಸುಪರಿಂಟೆಂಡೆಂಟರು ಇರುವರು. ಮುಂಜಾನೆ ಹುಡುಗರನ್ನು ಎಬ್ಬಿಸುವದು, ಅವರು ಮುಖಮಜ್ಜನ, ಸಂಧ್ಯಾವಂದನೆ, ವ್ಯಾಯಾಮ, ವಿದ್ಯಾಭ್ಯಾಸ ಇತ್ಯಾದಿಗಳನ್ನು ಸರಿಯಾಗಿ ಮಾಡಿಕೊಳ್ಳುವಂತೆ ನೋಡುವದು, ಊಟ ಇತ್ಯಾದಿಗಳು ಸರಿಯಾಗಿ ಸಿಕ್ಕುವಂತೆ ಪ್ರಯತ್ನಿಸುವದು, ಇದೇ ಮೊದಲಾದ್ದು ಈ ವಾರ್ಡರರ ಕೆಲಸ. ಹೀಗೆ ಈ ಹೊಸ್ಟೆಲುಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಬಾಧಕವೂ ಬಾರದಂತೆ ತಕ್ಕ ಏರ್ಪಾಡುಗಳು ಇರುವದರಿಂದ ವಿದ್ಯಾರ್ಥಿಗಳು ಹಿಂದಿನ ಪದ್ಧತಿಯಂತೆ ಹೊಟೆಲುಗಳಲ್ಲಿ ವಿಮ್ಮ ಕೆಟ್ಟ ಚಾಳಿಗಳನ್ನು ಕಲಿತುಕೊಳ್ಳುವ ಸಂದರ್ಭವು ಈಗಿನ ಹೊಸ್ಟೆಲುಗಳ ಪದ್ಧತಿಯಲ್ಲಿ ಇರುವ ಸಂಭವವೇ ಇಲ್ಲವೆನ್ನಬಹುದು. ಪರಂತು, ಹೊಸ್ಟೆಲುಗಳನ್ನು ಸ್ಥಾಪಿಸುವಾಗ ಸರಕಾರದವರಲ್ಲಿಯೂ ಪ್ರಜಾ ಮುಂದಾಳುಗಳಲ್ಲಿಯೂ ಇದ್ದ ಈ ಉದ್ದೇಶವು ಈಗಿನ ಕಾಲದ ಹೊಸ್ಟೆಲುಗಳಲ್ಲಿ ಕೈಗೂಡಿ ಬಂದಿರುತ್ತದೋ ಎಂಬ ಒಂದು ಪ್ರಶ್ನೆ ಇದೆ ಈ ಪ್ರಶ್ನೆಗೆ ಉತ್ತರ ಕೊಡುವದಾದರೆ, ಈ ಹೊಸ್ಟೆಲುಗಳಲ್ಲಿ ಹೆಚ್ಚಿನವುಗಳಿಂದ ಹೊಸ್ಟೆಲುಗಳ ಉದ್ದೇಶವು ಈಡೇರಲಿಲ್ಲ, ಈಡೇರುವದಿಲ್ಲ, ಈಡೇರುವ ಸಂಭವವೂ ಇಲ್ಲ, ಇವೆಲ್ಲಾ ಒಂದು ಕಾರ್ಖಾನೆಯಂತೆ ಕೆಲಸ ನಡಿಸುತ್ತವೆ ಎನ್ನಬಹುದು. ಹೀಗೆ ಆಗಲಿಕ್ಕೆ ಮನೆಮನೆ ಪಾಮಸವೆಂಬಂತೆ ಹೊಸ್ಟೆಲುಗಳು ಆದುದೇ ಅಂದರೆ ಶಾಲೆಗೊಂದು ಹೊಸ್ಟೆಲು ಹೋಗಿ ಒಂದೊಂದು ಜಾತಿಗೆ ಒಂದೊಂದರಂತೆ—ಎರಡೆರಡರಂತೆ ಹೊಸ್ಟೆಲುಗಳು ಆದುದೇ ಈ ಹೊಸ್ಟೆಲುಗಳನ್ನು ಸ್ಥಾಪಿಸುವಾಗ ಇದ್ದ ಉದ್ದೇಶವು ಮೂಲೆ ಸೇರಲು ಕಾರಣವಾಯಿತು ಎನ್ನಬಹುದು. ಶಾಲೆಗೊಂದು ಹೊಸ್ಟೆಲು ಎಂಬಂತೆ ಇದ್ದುದೇ ಆದರೆ ಆಯಾ ಹೊಸ್ಟೆಲುಗಳಲ್ಲಿ ತಕ್ಕ ಮೇಲ್ವಿಚಾರವೂ ನಡೆಯುತ್ತಿತ್ತು. ವಿವಿಧ ಜಾತಿಯ ವಿದ್ಯಾರ್ಥಿಗಳು ಒಂದೇ ಕಡೆಯಲ್ಲಿ ಸೇರುವದರಿಂದ ಭ್ರಾತೃಭಾವವೂ ಉಂಟಾಗಿ ಹುಡುಗರ ಏಳಿಗೆಯೊಡನೆ ದೇಶೋನ್ನತಿಯ ಸಾಧನೆಯೂ ಆಗುತ್ತಿತ್ತು. ಆದರೆ ಈಗ ಹೊಸ್ಟೆಲುಗಳಲ್ಲಿ ಸಂಧ್ಯಾವಂದನೆ ಎಲ್ಲಿ? ವ್ಯಾಯಾಮವೆಲ್ಲಿ? ಭ್ರಾತೃಭಾವವೆಲ್ಲಿ? ಎಂಬಿತ್ಯಾದಿ ಪ್ರಶ್ನೆಗಳ ವಿಚಾರ ನಡಿಸುವದು ಪ್ರತಿ ಒಬ್ಬ ದೇಶಾಭಿಮಾನಿಯ ಕರ್ತವ್ಯವಾಗಿದೆ. ಅಷ್ಟೇ ಅಲ್ಲ; ಈ ಹೊಸ್ಟೆಲುಗಳಲ್ಲಿರುವ ಕುಂದು ಕೊರತೆಗಳನ್ನು ಕಂಡು ಹಿಡಿದು ಈ ಕಾಲದ ವಿದ್ಯಮಾನಕ್ಕನುಸಾರವಾಗಿ ಅವನ್ನು ಸರಿಪಡಿಸುವದೂ ಅಗತ್ಯವಾಗಿದೆ. ಈ ವಿಷಯದಲ್ಲಿ ಬರೆಯಬೇಕಾದ ಇನ್ನೊಂದೆರಡು ಸೂಚನೆಗಳನ್ನು ಸಂದರ್ಭಾನುಸಾರ ಬರೆಕೊಳ್ಳುವೆನು.

V. T.

ಕುಪ್ಪೆಪದವು ಬೋರ್ಡು ಸ್ಕೂಲ್.

ಆಯ್ಯಾ ಪತ್ರಕರ್ತರೇ,

ಈ ಶಾಲೆಯಲ್ಲಿ ಸುಮಾರು ೬೦ ವಿದ್ಯಾರ್ಥಿಗಳಿರುತ್ತಾರೆ. ಶಾಲೆಯು ಬೋರ್ಡಿನವರ ಸ್ವಾಧೀನವಿದ್ದರೂ ಕಟ್ಟೋಣವು ನಾದುರುಸ್ತಿಯಲ್ಲಿರುವುದು ಬಹಳ ಶೋಚನೀಯವೇ ಸರಿ. ಶಾಲೆಯ ಮಾಡು ವಗೈರೆ ಸರಿಯಿಲ್ಲದೆ ಮಳೆನೀರು ಒಳಗೆ ಸೋರಿ ಗೋಡೆಯೂ ನೆಲವೂ ತ್ಯಾವದಿಂದ ಹಾಳಾಗಿ ಉಪಾಧ್ಯಾಯರುಗಳಿಗೆ ಸರಿಯಾಗಿ ಕೆಲಸ ನಡಿಸುವರೆ ಬಹಳ ಅನಾನುಕೂಲವಾಗಿಯದೆ. ಇದೇ ತಿಂಗಳ ತಾ. ೧೮ರಲ್ಲು ಮ|ರಾ| ಅತ್ತಾವರ ಬಾಲಕೃಷ್ಣ ಸೆಟ್ಟಿರವರು ಬಂಟರ ಯಾನೆ ನಾಡವರ ಸಂಘದ ಉದ್ದೇಶ ಸರ್ಕಿಟಿಗೆ ಹೊರಟವರು ಈ ಶಾಲೆಯನ್ನು ಸಂದರ್ಶಿಸಿ ಅದರ ಸ್ಥಿತಿಯನ್ನು ಕಂಡು ರೂಪಾಯಿ ೧೦ನ್ನು ದುರುಸ್ತಿ ಬಗ್ಯೆ ವಂತಿಗೆ ವಾಗ್ದಾನ ಮಾಡಿರುತ್ತಾರೆ. ಇದೇ ರೀತಿಯಲ್ಲಿ ನೆರೆ ಗ್ರಾಮಸ್ಥರು ಸಹ ಕೂಡಿ ಬೋರ್ಡಿನವರ ಸಮಯವನ್ನು ಕಾಯದೆ ವಂತಿಗೆಯಿಂದ ಶಾಲೆಯನ್ನು ದುರುಸ್ತಿಪಡಿಸಿ ವಿದ್ಯಾರ್ಥಿಗಳ ಪುಣ್ಯಕ್ಕೆ ಭಾಗಿಗಳಾಗಬಾರದೇ?

ಒಬ್ಬ ಗ್ರಾಮಸ್ಥ.

ಯೂರೋಪದ ಮಹಾ ಯುದ್ಧ.

————.o.————

ಬಾಲ್ಕಾನ್ ರಣರಂಗದ ಸ್ಥಿತಿಯು ಈಗ ತಾನೇ ಲಕ್ಷ್ಯಕೊಡ ತಕ್ಕ ವಿಷಯವಾಗಿದೆ. ಕಳೆದ ವಾರದಲ್ಲಿ ಈ ರಣರಂಗದ ಒಂದು ಕಡೆಯಲ್ಲಿ ಮಿತ್ರರಿಗೂ ಮತ್ತೊಂದು ಕಡೆಯಲ್ಲಿ ಶತ್ರುಗಳಿಗೂ ಜಯವಾಗಿರುತ್ತದೆ. ಮಿತ್ರರು ಮೊನಸ್ಟಿರನ್ನು ಸ್ವಾಧೀನಮಾಡಿಕೊಂಡದ್ದು ಒಂದು. ಇದರಿಂದ ಬಲ್ಗೇರಿಯನರ ಸ್ಥಿತಿಯು ಭೀಕರವಾಗಿದೆ. ಮಿತ್ರರಿಗೆ ಆದ ಈ ವಿಶೇಷ ಜಯದ ಮೇಲೆ ಕಲಿಯನ್ನು ತರುವಂಥಾ ಮತ್ತೊಂದು ಜಯವು ಶತ್ರುಗಳಿಗೆ ವಲ್ಕಾನ್ ಕಣಿವೆಯ ಮಾರ್ಗದಲ್ಲಿ ಆಗಿದೆ. ಇಲ್ಲಿ ಶತ್ರುಗಳು ಟರ್ಗಜ್ಯಲ್ ಎಂಬಲ್ಲಿ ಜಯಪ್ರದರಾಗಿ ಒರ್ಸಾವ ಮತ್ತು ಬುಕಾರೆಸ್ಟನ್ನು ಒಂದುಗೂಡಿಸುವ ರೈಲ್ವೇ ಲೈನನ್ನು ಕಡದು ಹಾಕಿರುತ್ತಾರೆ ಎಂಬ ವಾರ್ತೆ ಬಂದಿರುತ್ತದೆ. ರುಮೇನಿಯ ರಣರಂಗದ ಎಡಪಾರ್ಶ್ವದ ಕಡೆಯ ಸ್ಥಳವು ಒರ್ಸೋವ. ಇದು ರುಮೇನಿಯದೊಳಗೆ ನುಗ್ಗುವ ಪ್ರಾಮುಖ್ಯವಾದ ದಾರಿಗಳಲ್ಲಿ ಒಂದನ್ನು ಕಾಯುವಂಥಾದ್ದು. ಇಲ್ಲಿಂದ ರಣರಂಗವು ಪರ್ವತಗಳ ಸಾಲುಗಳ ಮಾರ್ಗವಾಗಿ ವಲ್ಕಾನ್ ಕಣಿವೆಯ ವರೆಗೆ ಮುಂದರಿದಿರುತ್ತದೆ. ರುಮೇನಿಯನರ ಸೇನೆಯು ಈ ಕಣಿವೆಯನ್ನು ಬಲಕಾಯಿಸಿಕೊಂಡಿರುವದು. ಮೇಲೆ ಹೇಳಿದಂತೆ ಜರ್ಮನರಿಗೆ ಜಯವಾಗಿದ್ದಲ್ಲಿ ಇಲ್ಲಿದ್ದ ರುಮೇನಿಯನರ ಸೇನೆಯು ಹಿಂದೆ ಸರಿದಿರಬೇಕು ಮತ್ತು ರಣರಂಗವು ಕಡಿಯಲ್ಪಟ್ಟು ರುಮೇನಿಯನರ ಸೇನೆಯ ಒಂದಾಂಶವು ಜರ್ಮನರಿಂದ ಪೆಟ್ಟು ತಿಂದಿರಬೇಕು. ಆದರೆ ಇನ್ನೂ ಈ ರಣರಂಗದ ನಿಜಸ್ಥಿತಿಯು ತಿಳಿದು ಬಂದಿರುವದಿಲ್ಲವಾದುದರಿಂದ ರುಮೇನಿಯನರ ಸ್ಥಿತಿಯು ಅಷ್ಟೊಂದು ಭೀಕರವಾಗಿದೆಂದು ಹೇಳಲಾಗುವದಿಲ್ಲ. ಮತ್ತೊಂದು ಕಡೆಯಲ್ಲಿ ಮಿತ್ರರು ಮೊನಸ್ಟಿರನ್ನು ಸ್ವಾಧೀನಮಾಡಿಕೊಂಡಿರುವದರಿಂದ ಡೊಬ್ರುಡ್ಜದಲ್ಲಿರುವ ಬಲ್ಗೇರಿಯನರಿಗೆ ದೊಡ್ಡ ಪೆಟ್ಟು ಬಿದ್ದಂತಾಗಿ ಡೊಬ್ರುಡ್ಜದಿಂದ ಮಿತ್ರರನ್ನು ತಡೆಯಬಾರದೆ ನಿರ್ವಾಹವಿಲ್ಲದಂತಾಗಿದೆ. ಹೀಗೆ ಬಲ್ಗೇರಿಯನರು ಡೊಬ್ರುಡ್ಜದ ಸೇನೆಯನ್ನು ಈ ಕಡೆಗೆ ತಿರುಗಿಸಬೇಕಾದುದರಿಂದ ಡೊಬ್ರುಡ್ಜದಲ್ಲಿರುವ ರುಮೇನಿಯನರ ಸೇನಿಕರಿಗೆ ಜರ್ಮನ ಸೇನೆಯನ್ನು ಸುಲಭವಾಗಿ ತಡೆಯಬಹುದಾಗಿದೆ.

ಪಶ್ಚಿಮ ರಣರಂಗ.

ಈ ರಣರಂಗದಲ್ಲಿ ಅಲ್ಲಲ್ಲಿ ಸಣ್ಣ ಪುಟ್ಟ ಕದನಗಳು ನಡೆದಿರುವವಲ್ಲದೆ ವಿಶೇಷ ಕದನಗಳು ಕಳೆದ ವಾರ ನಡೆದಿರುವದಿಲ್ಲ. ಸೊಮ್ಮೆಯಲ್ಲಿ ಕೆಲವು ವಾಯುನಾವೆಗಳ ಕದನಗಳು ನಡೆದಿರುತ್ತವೆ.

ಬಾಲ್ಕಾನ್.

ಮೊನಸ್ಟಿರ್ ಪ್ರಾಂತ್ಯದಲ್ಲಿ ಹಿಮವು ಬಿದ್ದಿರುವದರಿಂದ ವಿಶೇಷ ಕದನಗಳನ್ನು ಮಾಡುವದೆ ಅಶಕ್ಯಂತರವಾಗಿದೆಂತ ಫ್ರೆಂಚರು ಪ್ರಕಟಿಸಿರುತ್ತಾರೆ. ಮೊನಸ್ಟಿರಿನ ಉತ್ತರದಲ್ಲಿ ಶತ್ರುಗಳು ಭೀಕರವಾಗಿ ಎದುರಾಡುತ್ತಿದ್ದಾರೆ. ಮಿತ್ರರು ಪುನಃ ೫೦೦ ಶತ್ರುಸೇನಿಕರನ್ನು ಸೆರೆಹಿಡಿದಿರುವರು.

ರುಮೇನಿಯ ರಣರಂಗದಲ್ಲಿ ಆಸ್ಟ್ರಿಯನರ ಮತ್ತು ಜರ್ಮನರ ೨೫ ಡಿವಿಜನ್ ಸೇನೆಗಳು ಇವೆ ಎಂತಲೂ ಇವು ವೆಲ್ಲಾಚಿಯದ ಕಡೆಗೆ ಮುಂದರಿಯುತ್ತಲಿವೆಂತಲೂ ಫ್ರೆಂಚರ ಕಡೆಯಿಂದ ಪ್ರಕಟವಾಗಿದೆ.

ಸರ್ವಿಯನರು ಬುತಿಮಿರ್ಕ ಎಂಬಲ್ಲಿ ಜಯಪ್ರದರಾಗಿ ಕೆಲವು ಗುಡ್ಡಗಳನ್ನೂ ದಿನ್ನೆಗಳನ್ನೂ ೧೫೬ ಜರ್ಮನರನ್ನೂ ೩೦೦ ಬಲ್ಗೇರಿಯನರನ್ನೂ ಸೆರೆಹಿಡಿದಿರುತ್ತಾರೆ.

ಬಲ್ಗೇರಿಯದ ಅರಸರಾದ ಫರ್ಡಿನಾಂಡರವರು ಕೊನ್ಸ್ಟಾಂಟಿನೋಪಲ್ಲಿಗೆ ಬಂದಿರುವರೆಂಬ ವಾರ್ತೆ ಬಂದಿದೆ. ರುಮೇನಿಯನರ ವಿಪ್ಲವವನ್ನು ನೋಡುವದಾದರೆ ಅದು ಭಯಾಸ್ಪದದಾಗಿದೆ ಎಂಬದಕ್ಕೆ ಸಂದೇಹವಿಲ್ಲ ಎಂತ ಲಂಡನ್ನಿನಿಂದ ಬಂದ ವಾರ್ತೆಯಿಂದ ತಿಳಿದುಬರುತ್ತದೆ. ರುಮೇನಿಯನರ ಒಂದು ಸೇನೆಯು ಜರ್ಮನರಿಂದ ನಿರ್ನಾಮವಾಗಿ ಹೋಗುವ ಸಂಭವವಿರುವದೋ ಏನೆಂಬ ಅನುಮಾನವೂ ಉಂಟಾಗಿರುವದು. ಈ ಸಂಕಷ್ಟವನ್ನು ತಪ್ಪಿಸಿಕೊಳ್ಳುವದೆ ಕಾಯುವದದಲ್ಲಿರುವ ರುಮೇನಿಯನರು ಹಿಂದೆ ಸರಿಯಬೇಕಾಗುವದು. ಈ ಪಟ್ಟಣವು ಡೆನ್ಯೂಬಿಗೆ ೩೫ ಮೈಲು ಉತ್ತರದಲ್ಲಿದೆ. ಜರ್ಮನರ ಜನರಲ್ ಫಾಲ್ಕೆನ್‌ಹಾನನು ಈ ಸ್ಥಳಕ್ಕೆ ಮುಂದರಿಸಿದರೆ ರುಮೇನಿಯದ ಪಶ್ಚಿಮ ಸೇನಾ ಭಾಗವು ಕಡೆದು ಹೋದಹಾಗಾಗುವದು. ವೆಲ್ಲಾಚಿಯನ್ ಮೈದಾನುಗಳಲ್ಲಿ ಸದ್ಯದಲ್ಲೇ ಒಂದು ದೊಡ್ಡ ಕದನವು ನಡೆಯಲಿಕ್ಕಿದೆಂತ ತಿಳಿದು ಬರುತ್ತದೆ. ಇಲ್ಲಿ ರುಷ್ಯನರ ಸೇನೆಯು ಒಟ್ಟುಗೂಡಿರುತ್ತದೆ.

ಮೊನಸ್ಟಿರಿನ ಪಶ್ಚಿಮದಲ್ಲಿ ಮೇಲೆ ಬಿದ್ದ ಶತ್ರುಗಳನ್ನು ಇಟಲಿಯನರು ಹಿಂದಕ್ಕೆ ಓಡಿಸಿರುತ್ತಾರೆ. ಮೊನಸ್ಟಿರಿನ ಉತ್ತರದಲ್ಲಿ ನಡೆಯುವ ಕದನವು ಮಿತ್ರರಿಗೆ ಅನುಕೂಲವಾಗಿದೆ. ಇಲ್ಲಿ ಶತ್ರುಗಳನ್ನು ಮಿತ್ರರು ಹಿಂದಕ್ಕಟ್ಟಿರುವರು. ಸರ್ವಿಯರು ಈಗ ೧೨೦೦ ಚದರ ಮೈಲು ವಿಸ್ತೀರ್ಣದ ಸ್ಥಳವನ್ನು ಶತ್ರುಗಳಿಂದ ಬಿಡಿಸಿಕೊಂಡಿರುತ್ತಾರೆ.

ರುಮೇನಿಯನರು ಪ್ರಿಡ್‌ಸ್ಟಾವೆಲ್ಲೆ ಮತ್ತು ಆಲ್ಟ್ ಕಣಿವೆಯಲ್ಲಿ ತಮ್ಮನ್ನು ಬಲಕಾಯಿಸಿಕೊಂಡಿರುತ್ತಾರೆ. ಜ್ಯಲ್ ತಗ್ಗಿನಿಂದ ರುಮೇನಿಯನರು ಹಿಂದೆ ಸರಿದು ತಮ್ಮ ಮುಂಚಿನ ಸ್ಥಳವನ್ನು ಸೇರಿಕೊಂಡಿರುವರು. ಶತ್ರುಗಳು ಬುಕಾರೆಸ್ಟಿಗೆ ೪೫ ಮೈಲು ದಕ್ಷಿಣದಲ್ಲಿರುವ ಜಿಮಿನ್ಸ್ಟಜ ಎಂಬಲ್ಲಿ ತಮ್ಮ ಸೇನೆಯನ್ನು ಇಳಿಸಲು ಪ್ರಯತ್ನಿಸಿರುತ್ತಾರೆ. ವಲ್ಲಾಚಿಯದ ಪಶ್ಚಿಮದಲ್ಲಿ ರುಮೇನಿಯನರು ಪುನಃ ಹಿಂದೆ ಸರಿದಿರುತ್ತಾರೆ.

ಗ್ರೀಸ್.

ಗ್ರೀಸ್ ದೇಶದಲ್ಲಿರುವ ಶತ್ರುಪಕ್ಷದ ಮಂತ್ರಿಗಳನ್ನು ಗ್ರೀಕ ದೇಶದಿಂದ ಕಳುಹಿಸಿಕೊಡಬೇಕಾಗಿ ಮಿತ್ರ ರಾಜ್ಯಗಳವರು ಗ್ರೀಕ ಸರಕಾರದವರಿಗೆ ಆಜ್ಞಾಪಿಸಿದ್ದರಿಂದ ಗ್ರೀಕ ಸರಕಾರದವರು ಅವರನ್ನು ಅಥೆನ್ಸಿಗೆ ಕಳುಹಿಸಿಕೊಟ್ಟಿರುತ್ತಾರೆ. ಶತ್ರುಗಳ ಕಾನ್ಸಲರುಗಳು ಮೊದಲಾದವರು ಗ್ರೀಕ ದೇಶವನ್ನು ಬಿಟ್ಟುಹೋಗಬೇಕಾಗಿ ಮಿತ್ರರಾಜ್ಯಗಳವರು ಆಜ್ಞಾಪಿಸಿರುತ್ತಾರೆ.

ಜಲಾಂತರ್ಗಾಮಿ ನಾವೆಗಳು.

ಶತ್ರುಗಳು ಬ್ರಿಟಿಷರ "ಬ್ರಿಟಾನಿಕ್" ಎಂಬ ಆಸ್ಪತ್ರೆ ಹಡಗವನ್ನು ಮುಳುಗಿಸಿರುತ್ತಾರೆ. ಈ ಹಡಗವು ೪೮ ಸಾವಿರ ಟನ್ ಭಾರವಾಗಿದ್ದು. ಈ ಹಡಗವು ಸಲೋನಿಕದಿಂದ ಹೊರಟು ಬರುತ್ತಿರುವಾಗ ಅಥೆನ್ಸಿಗೆ ೫೦ ಮೈಲು ದೂರದಲ್ಲಿರುವ ಜಿ ಎಂಬಲ್ಲಿ ಜಲಾಂತರ್ಗಾಮಿ ನಾವೆಯು ಎರಡು ಮುಗ್ಗಲಿನಿಂದ ಈ ಹಡಗಕ್ಕೆ ಬಡೆಯಿತು. ೫೦ ನಿಮಿಷಗಳಲ್ಲಿ ಹಡಗವು ಮುಳುಗಿಹೋಯಿತು. ನಾವಿಕರಲ್ಲಿ ೩೦—೪೦ ಮಂದಿಗೆ ಜಖಂ ಆಗಿದೆ. ಮಿತ್ರರ ಹಡಗಗಳು ಕೂಡಲೇ ಸಹಾಯಕ್ಕೆ ಹೋಗಿ ಈ ಹಡಗದಲ್ಲಿದ್ದ ದಾದಿಗಳನ್ನೂ ಇತರರನ್ನೂ ರಕ್ಷಿಸಿರುತ್ತದೆ.

ಬ್ರಿಟಿಷರ "ಸಿಟಿ ಆಫ್ ಮೆಕ್ಸಿಕೋ" ಮತ್ತು "ಗ್ರೇನಾಡ" ಎಂಬ ಹಡಗಗಳೂ ಮುಳುಗಿಸಲ್ಪಟ್ಟಿರುತ್ತವೆ.

"ಬ್ರೇಮರ್ ಕೆಸ್ಸ್" ಎಂಬ ಆಸ್ಪತ್ರೆ ಹಡಗವು ಸಲೋನಿಕದಿಂದ ಮಾಲ್ಟಕ್ಕೆ ಹೋಗುತ್ತಿರುವಾಗ ಮೈಕೋನ್ ಕಾಲುವೆಯ ಬಳಿ ಮುಳುಗಿಸಲ್ಪಟ್ಟಿರುತ್ತದೆ.

~~~~~~

ಉತ್ತರ ಹಿಂದೂಸ್ಥಾನ.

ಗಾಯಕವಾಡ ಮಹಾರಾಜರವರು ಬರೋಡಾ ಸಂಸ್ಥಾನದಲ್ಲಿ ಮೈಸೂರು ಸಂಸ್ಥಾನದಂತೆಯೇ ಪ್ರಜಾ ಪ್ರತಿನಿಧಿಗಳ ಸಭೆಯನ್ನು ನಿರ್ಮಿಸಿರುತ್ತಾರೆ. ಈ ಸಭೆಗೆ ಬರೋಡೆಯ ದಿವಾನರವರು ಅಧ್ಯಕ್ಷರಾಗಿರುವರು. ಪ್ರತಿ ಒಂದು ಡಿಸ್ಟ್ರಿಕ್ಟಿನಿಂದ ಮತ್ತು ಲೋಕಲ್ ಬೋರ್ಡಿನಿಂದ ಈ ಸಭೆಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಬೇಕಾಗಿರುವದು. ಈ ಪ್ರಜಾ ಪ್ರತಿನಿಧಿ ಸಭೆಯ ಮೊದಲನೇ ಕೂಟವು ೧೯೧೭ನೇ ಜನವರಿ ತಾ. ೧೫ರಲ್ಲು ನಡೆಯತಕ್ಕದಿದೆ.

~~~~~~

ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನ ಕಟ್ಟೋಣ ರಸ್ತೆ ಇತ್ಯಾದಿಗಳನ್ನು ಇನ್ನು ಮಿತವ್ಯಯದಲ್ಲಿ ಕಟ್ಟಿಸಲಿಕ್ಕಾಗುತ್ತದೋ ಏನೆಂಬ ವಿಚಾರ ನಡಿಸುವದೆ ಮತ್ತು ಈ ಇಲಾಖೆಯ ಇಂಜಿನಿಯರರಿಗೆ ಕೊಡುವ ಶಿಕ್ಷಣದಲ್ಲಿ ತಿದ್ದುಪಡಿ ಮಾಡುವ ಸಂದರ್ಭವಿದೆಯೋ ಎಂಬಿತ್ಯಾದಿ ವಿಷಯಗಳ ಇತ್ಯರ್ಥ ಮಾಡುವದೆ, ಸ್ಟೇಟ್ ಸೆಕ್ರೆಟರಿಯವರ ಸಮ್ಮತದಿಂದ ಇಂಡಿಯಾ ಸರಕಾರದವರು ಒಂದು ಕಮಿಟಿಯನ್ನು ನೇಮಿಸಿರುತ್ತಾರೆ. ಈ ಕಮಿಟಿಗೆ ನಾಗಪುರ ಡಿವಿಜನಿನ ಕಮಿಷನರಾದ ಮಿ| ಎಫ್. ಜಿ. ಸ್ಲೈರವರು ಅಧ್ಯಕ್ಷರಾಗಿರುವರು. ಈ ಕಮಿಟಿಗೆ ಪಬ್ಲಿಕ್ ವರ್ಕ್ಸ್ ಇಲಾಖೆಯ ರಿಟಾಯರ್ಡ್ ಮೆಂಬರರೊಬ್ಬರೂ ಬಿನ್‌ಸರಕಾರಿ ಮೆಂಬರರೊಬ್ಬರೂ ಇಂಗ್ಲಾಂಡಿನ ಲೋಕಲ್ ಗವರ್ನಮೆಂಟ ಬೋರ್ಡಿನ ಆಫೀಸರರೊಬ್ಬರೂ ಲಂಡನ್ ಕೌಂಟಿ ಕೌನ್ಸಿಲಿನ ಮೆಂಬರರೊಬ್ಬರೂ ಹೀಗೆ ನಾಲ್ಕು ಮೆಂಬರರು ನೇಮಿಸಲ್ಪಡುವರು. ಈ ಕಮಿಟಿಯವರು ಜನವರಿ ತಿಂಗಳಾರಂಭದಿಂದ ಮುಂಬಾಯಿ, ಮದ್ರಾಸ್, ರಂಗೂನು, ಕಲ್ಕತ್ತ ಮೊದಲಾದ ಪ್ರಾಂತ್ಯಗಳನ್ನು ಸಂದರ್ಶಿಸುವರು.

~~~~~~

ಇಂಡಿಯಾ ಕೌನ್ಸಿಲಿನಲ್ಲಿ ಮೆಂಬರರಾಗಿರುವ ಸರ್. ಕೃಷ್ಣಗುಪ್ತರವರು ಲಂಡನಿನಿಂದ ಹೊರಟು ಇದೇ ನವಂಬರ ತಾ. ೨೩ರಲ್ಲು ಮುಂಬಾಯಿಗೆ ತಲಪಿ ೫-೬ ದಿವಸಗಳ ವರೆಗೆ ಗವರ್ನರ ಪ್ರಭುಗಳ ಅತಿಥಿಗಳಾಗಿದ್ದರು.

~~~~~~

ಬಂಗಾಳ ಗವರ್ನರರಾಗಿರುವ ಕಾರ್ಮೈಕಲ್ ಪ್ರಭುಗಳವರ ಕೆಲಸದವಧಿಯನ್ನು ಹೆಚ್ಚಿಸಬೇಕೆಂಬದಾಗಿ ಸರಕಾರದವರನ್ನು ಕೇಳಿಕೊಳ್ಳುವದೆ ಕಲ್ಕತ್ತೆಯ ಶೆರೀಫರವರು ಕಲ್ಕತ್ತೆಯಲ್ಲಿ ಒಂದು ಮಹಾ ಸಭೆ ಕೂಡಿಸುವದರಲ್ಲಿದ್ದಾರೆ.

~~~~~~

ಪಿ ಎಂಡ್ ಓ. ಕಂಪೆನಿಯ "ಮುಲ್ತಾನ್" ಹಡಗವು ಶೀಮೆಯ ಟಪ್ಪಾಲ್ ಮತ್ತು ೩೦೦ ಪ್ರಯಾಣಿಕರ ಸಹಿತ ಇದೇ ನವಂಬರ ತಾ. ೨೩ರಲ್ಲು ಮುಂಬಾಯಿಗೆ ಬಂದು ತಲಪಿರುತ್ತದೆ.

~~~~~~

ಲೋ| ಬಾಲಗಂಗಾಧರ ತಿಲಕರವರು ದೋಷಮುಕ್ತರಾದ ಸಂಬಂಧ ಮದ್ರಾಸಿನಲ್ಲಿ ಪ್ರಕಟವಾಗುವ "ಮದ್ರಾಸ್ ಮೈಲ್" ಪತ್ರಿಕಾಕಾರರು ತಿಲಕರವರನ್ನು ದೂಷಿಸುವ ಒಂದು ಲೇಖನವನ್ನು ಪ್ರಕಟಿಸಿದ್ದರಷ್ಟೆ. ಈ ಸಂಬಂಧ ತಿಲಕರವರು "ಮದ್ರಾಸ್ ಮೈಲ್" ಪತ್ರಕಾರರಿಗೆ ಒಂದು ರಿಜಿಸ್ಟ್ರಿ ಕಾಗದ ಬಿಟ್ಟು ಈ ದೂಷಣಾ ಲೇಖನದ ವಿಷಯ ತಾನು ಬೇಗನೇ ವಕೀಲರ ಮೂಲಕ ತಕ್ಕ ವ್ಯವಸ್ಥೆ ಮಾಡಲಿಕ್ಕಿರುವದರಿಂದ ಮೊದಲು ಪ್ರಕಟಿಸಿದ ಲೇಖನದಲ್ಲಿ ಇನ್ನು ಯಾವ ಬದಲಾವಣೆಯನ್ನೂ ಮಾಡಕೂಡದೆಂತ ತಿಳಿಯಪಡಿಸಿರುತ್ತಾರೆ.

~~~~~~

ಟ್ರೇನು ಬಂಡಿ ಹೋಗುತ್ತಿರುವಾಗ ಬಂಡಿಯಿಂದ ಸೂರೆಸುಲಿಗೆ ಮಾಡುವವರ ಒಂದು ತಂಡವನ್ನು ಹೌರ ಸ್ಟೇಶನಿನಲ್ಲಿ ಪೋಲಿಸಿನವರು ಹಿಡಿದಿರುತ್ತಾರೆ. ಪಂಜಾಬು ಮೈಲಿನಲ್ಲಿ ಹೆಂಗಸರಿಗಾಗಿ ಪ್ರತ್ಯೇಕಿಸಿಟ್ಟಿದ್ದ ಕಂಪಾರ್ಟಮೆಂಟಿನಲ್ಲಿ ತಲೆಯಿಂದ ಕಾಲಿನ ವರೆಗೆ ಮುಸುಕು ಹಾಕಿಕೊಂಡಿದ್ದ ೬ ಮಹಮ್ಮದೀಯ ಹೆಂಗಸರು ಇದ್ದರು. ಅದೇ ಕಂಪಾರ್ಟಮೆಂಟಿನಲ್ಲಿ ಕುಳಿತಿದ್ದ ಮತ್ತೊಬ್ಬ ಹೆಂಗಸು ಈ ವೇಶಧಾರಿಗಳಾದ ಮಹಮ್ಮದೀಯ ಹೆಂಗಸರನ್ನು ನೋಡಿ ಅನುಮಾನಪಟ್ಟು ಟಿಕೆಟ್ ಕಲೆಕ್ಟರನಿಗೆ ತಿಳಿಸಿದ್ದಲ್ಲಿ ಅವನು ವಿಚಾರ ನಡಿಸುವಾಗ ಆ ಮಹಮ್ಮದೀಯ ಹೆಂಗಸರು ವೇಶ ಬದಲಾಯಿಸಿದ ಗಂಡಸರಾಗಿದ್ದರು. ಪೋಲೀಸಿನವರು ಅವರನ್ನು ಕೈದುಮಾಡಿ ಹೆಚ್ಚಿನ ತನಿಕೆ ನಡಿಸುತ್ತಲಿದ್ದಾರೆ.

~~~~~~

ನವೆಂಬರ ತಾ. ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ಪ್ಲೇಗುಬೇನೆಯಿಂದ ೮೮೧೪ ಮಂದಿ ಕಾಲಾಧೀನರಾದರು. ಈ ಪೈಕಿ ಮುಂಬಾಯಿ ಮತ್ತು ಸಿಂಧ್‌ನಲ್ಲಿ ೩೦೮೧; ಮದ್ರಾಸ್ ೪೨೫; ಬಿಹಾರ್ ಮತ್ತು ಒರಿಸ್ಸ ೮೬; ಸಂಯುಕ್ತ ಸಂಸ್ಥಾನ ೨೬೧; ಪಂಜಾಬು ೬೪; ಬರ್ಮ ೩೩; ಮಧ್ಯ ಸಂಸ್ಥಾನಗಳು ೧೧೦೩; ಮೈಸೂರು ೪೧೯; ಹೈದರಾಬಾದ್ ೧೨೪೭; ರಜಪುತಾನ ೮೧ ಮರಣಗಳಾಗಿರುವವು.

ಸರ್ ಕೃಷ್ಣಗುಪ್ತರವರು ಮುಂಬಾಯಿಯಲ್ಲಿ ೫-೬ ದಿವಸಗಳವರೆಗೆ ಗವರ್ನರ ಪ್ರಭುಗಳವರ ಅತಿಥಿಗಳಾಗಿದ್ದು ತಾ. ೨೭ರಲ್ಲು ಕಲ್ಕತ್ತೆಗೆ ಹೊರಟುಹೋದರು. ಇವರು ಮುಂಬಾಯಿಯಲ್ಲಿ ಮುಂಬಾಯಿ ಪ್ರೆಸಿಡೆನ್ಸಿ ಎಸೋಸಿಯೇಶನಿನವರೊಡನೆ ಸಭೆಕೂಡಿಸಿ ಹಿಂದೂಸ್ಥಾನದ ಮುಂದಿನ ರಾಜಕೀಯ ವಿಷಯಗಳನ್ನು ಕುರಿತು ಚರ್ಚಿಸಿದರು. ಬಹುಮಾನಪಟ್ಟ ಡಿ. ಇ. ವಾಚ, ಸರ್ ನಾರಾಯಣಚಂದಾವರಕಾರ್, ಸರ್ ಇಬ್ರಾಹಿಮ್‌ರಹಿಮ್‌ತುಲಾ, ಸರ್. ವಿಟ್ಠಲ್‌ದಾಸ್ ಠಾಕರ್ಸೆ, ಮಿ| ಬಿ. ಹೋರ್ನಿಮೇನ್ ಮೊದಲಾದ ಪ್ರಜಾ ಮುಂದಾಳುಗಳು ಸರ್. ಕೃಷ್ಣಗುಪ್ತರೊಡನೆ ಹಿಂದೂಸ್ಥಾನದ ಮುಂದಿನ ಸ್ಥಿತಿಗತಿಗಳನ್ನು ಕುರಿತಾಗಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಸರ್. ಕೃಷ್ಣಗುಪ್ತರವರು ಉತ್ತರವಾಗಿ ಹೀಗೆ ಹೇಳಿರುತ್ತಾರೆ. ಹಿಂದೂಸ್ಥಾನದ ಸೇನಿಕರು ಫ್ರಾನ್ಸ್ ರಣರಂಗದಲ್ಲಿ ಬ್ರಿಟಿಷ ಸೈನಿಕರೊಡನೆ ಇದ್ದುಕೊಂಡು ತೋರಿಸಿದ ಧೈರ್ಯ ಸಾಹಸ ಕೃತ್ಯಗಳಿಂದ ಇಂಗ್ಲಾಂಡಿನಲ್ಲಿ ಹಿಂದೂಸ್ಥಾನದ ವಿಷಯ ಹೊಸ ತಿಳುವು ಉಂಟಾಗಿದೆ. ಹಿಂದೀ ಸೇನಿಕರು ಫ್ರಾನ್ಸ್ ರಣರಂಗದಲ್ಲಿ ಚಳಿಕಾಲದಲ್ಲಿ ಬಹಳ ಕಷ್ಟಪಟ್ಟಿರುವರು. ಬ್ರಿಟಿಷರು ವಿಶೇಷ ಕಷ್ಟಕಾಲದಲ್ಲಿರುವ ಸಮಯದಲ್ಲಿ ಹಿಂದೀ ಸೇನಿಕರು ಫ್ರಾನ್ಸ್ ರಣರಂಗದಲ್ಲಿದ್ದುಕೊಂಡು ಅವರಿಗೆ ಎಷ್ಟೋ ಸಹಾಯ್ಯವನ್ನು ಮಾಡಿರುತ್ತಾರೆ. ಈಗ ಹಿಂದೀ ಸೇನಿಕರು ಯುರೋಪಿನಲ್ಲಿ ಕಾದಾಡುತ್ತಿರುವದಿಲ್ಲವಾದರೂ ಹಿಂದೀ ಸೇನಿಕರ ಮೇಲೆ ಆ ಸಮಯದಲ್ಲಿ ಬ್ರಿಟಿಷರಿಗೆ ಹುಟ್ಟಿದ ಪ್ರೀತಿಭಾವಗಳು ಇನ್ನೂ ಕಡಿಮೆಯಾಗಲಿಲ್ಲ. ಒಂದು ವರ್ಷದ ಹಿಂದೆ ಲಂಡನಿನಲ್ಲಿ ನಡೆದ ಒಂದು ಸಭೆಯಲ್ಲಿ ಪ್ರಧಾನ ಮಂತ್ರಿಯವರಾದ ಅಸ್ಕ್ವಿತರವರೇ ಮೊದಲಾದವರು ಇದ್ದರು. ಈ ಸಭೆಯಲ್ಲಿ ಮಿ| ಬೊನರ್‌ಲಾರವರು ಹಿಂದೂಸ್ಥಾನವನ್ನು ಬಹಳ ಶ್ಲಾಘಿಸಿ ಮಾತನ್ನಾಡಿದ್ದಾರೆ. ಯುದ್ಧವು ತೀರಿದ ನಂತರ ಹಿಂದೂಸ್ಥಾನದ ಅಭಿವೃದ್ಧಿಯ ವಿಷಯ ತಕ್ಕ ಆಲೋಚನೆ ನಡಿಸೋಣಾದೀತೆಂಬುದಾಗಿ ಅವರು ಒತ್ತಿ ಹೇಳಿರುತ್ತಾರೆ. ಪ್ರಧಾನ ಮಂತ್ರಿಯವರು ಲೇಡಿಬೇಂಕ್ ಎಂಬಲ್ಲಿ ಮಾತಾಡುವಾಗ ಹಿಂದೂಸ್ಥಾನದ ವಿಷಯ ಒಂದೇ ಒಂದು ಮಾತನ್ನಾದರೂ ಹೇಳದ್ದರಿಂದ ಹಿಂದೂಸ್ಥಾನದಲ್ಲಿಯೂ ಇಂಗ್ಲಾಂಡಿನಲ್ಲಿಯೂ ಸ್ವಲ್ಪ ನಿರಾಶೆವುಂಟಾಗಿದೆ. ಯಾವ ತರದ ಬದಲಾವಣೆಗಳು ಹೇಗೆ ಉಂಟಾಗುವವು ಎಂಬದನ್ನು ಈಗ ಹೇಳಲು ತಾನು ಅಶಕ್ತನಾಗಿದ್ದೇನೆ. ಯುದ್ಧವು ತೀರಿದನಂತರ ಹಿಂದೂಸ್ಥಾನದಿಂದ ಪ್ರಸಿದ್ಧ ಪುರುಷರು ಇಂಗ್ಲಾಂಡಿಗೆ ಹೋಗಬೇಕು. ಬಹಳ ಹಣವೂ ಇವರ ಬೆಂಬಲವಾಗಿ ಇರಬೇಕು. ಇವರು ಈ ವಿಷಯ ಇಂಗ್ಲಾಂಡಿನಲ್ಲಿ ಚಳವಳ ನಡಿಸಬೇಕು. ಇಂಥಾ ಚಳವಳವು ಉಂಟಾಗದೆ ಇಂಗ್ಲಾಂಡು ಯಾವದನ್ನೂ ಮಾಡಲಾರದು. ಹೋಮ್ ರೂಲ್ ಎಂಬ ಶಬ್ದಕ್ಕೆ ಇಂಗ್ಲಾಂಡಿನಲ್ಲಿ ಒಳ್ಳೇ ಅರ್ಥವಿಲ್ಲ. ಆದುದರಿಂದ ಸೆಲ್ಫ್ ಗವರ್ನಮೆಂಟ ಎಂಬ ಶಬ್ದವನ್ನು ಪ್ರಯೋಗಿಸಿ ಕೆಲಸವನ್ನು ಮಾಡುವದರಿಂದ ಹೆಚ್ಚಿನ ಪ್ರಯೋಜನವಾಗುವದು. ಸೆಲ್ಫ್ ಗವರ್ನಮೆಂಟನ್ನು ಕೊಡಲು ಇಂಗ್ಲಾಂಡು ಸಿದ್ಧವಾಗಿಲ್ಲ. ಆದರೆ ವಸಾಹತಿಗಳಂಥಾ ಸೆಲ್ಫ್ ಗವರ್ನಮೆಂಟನ್ನು ಒಂದುವೇಳೆ ಕೊಡುವದು. ಹಿಂದೂಸ್ಥಾನವು ಸೆಲ್ಫ್ ಗವರ್ನಮೆಂಟಿಗೆ ಪಾತ್ರವಾಗಿಲ್ಲ. ಪಾತ್ರತೆಯನ್ನು ಪಡೆಯುವ ಹಾಗೆ ಅವರಿಗೆ ತಕ್ಕ ತರಬೇತು ಅವಶ್ಯ ಎಂಬದಾಗಿ ಇಂಗ್ಲಾಂಡಿನಲ್ಲಿ ಹೇಳುತ್ತಿದ್ದಾರೆ. ಆದರೆ ಹಿಂದೂಸ್ಥಾನಕ್ಕೆ ಸೆಲ್ಫ್ ಗವರ್ನಮೆಂಟನ್ನು ಕೊಡುವ ವಿನಹಾ ಅದಕ್ಕೆ ತನ್ನನ್ನು ತಾನೇ ಆಳಿಕೊಳ್ಳಲು ಶಕ್ತಿಬಾರದು. ಹಿಂದೀ ಸೇನೆಯ ಸಂಬಂಧವಾದ ಪ್ರಶ್ನೆಗೂ ಇಂಗ್ಲಾಂಡಿನಲ್ಲಿ ತಕ್ಕ ಮಹತ್ವವು ಬಂದಿಲ್ಲ. ಸೆಲ್ಫ್ ಗವರ್ನಮೆಂಟ ಇತ್ಯಾದಿಗಳ ವಿಷಯ ಇಂಗ್ಲಾಂಡಿನಲ್ಲಿ ಮಾತಿದೆಯಾದರೂ ಹಿಂದೀಗಳನ್ನು ಸೇನೆಗೆ ಸೇರಿಸುವ ವಿಷಯ ಇನ್ನೂ ಇಂಗ್ಲಾಂಡು ತಕ್ಕ ಗಮನ ಕೊಟ್ಟಿರುವದಿಲ್ಲ. ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳಲು ಶಕ್ತರಾಗುವ ವಿನಹಾ ಸೆಲ್ಫ್ ಗವರ್ನಮೆಂಟನ್ನು ಸಾಧಿಸಿಕೊಳ್ಳುವದು ಹೇಗೆ? ಎಂಬದಾಗಿ ಸರ್. ಕೃಷ್ಣ ಗುಪ್ತರವರು ಹೇಳಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಯುನಿವರ್ಸಿಟಿಯಲ್ಲಿ ಈ ವರ್ಷ ಆಯಾ ಪದವಿಗಳನ್ನು ಪಡಕೊಂಡವರಿಗೆ ಡಿಗ್ರಿಗಳನ್ನು ಬಹುಮಾನಿಸುವ ಸಮಾರಂಭವು ಇದೇ ತಾ. ೨೩ನೇ ಸಾಯಂಕಾಲ ಮದ್ರಾಸ್ ಸೆನೆಟ್ ಸಭಾಸದನದಲ್ಲಿ ಜರಗಿತು. ಈ ಸಭೆಗೆ ಯುನಿವರ್ಸಿಟಿ ಚೆನ್ಸೆಲ್ಲರಾದ ಗವರ್ನರ ಪ್ರಭುಗಳು ಅಧ್ಯಕ್ಷರಾಗಿದ್ದರು. ಈ ಸಮಾರಂಭಕ್ಕೆ ಸೆನೆಟ್ ಮೆಂಬರರೂ, ಬಹುಮಾನಪಟ್ಟ ಹಲವು ಮೆಂಬರರೂ ಇನ್ನೂ ಅನೇಕ ಮಾನ್ಯ ಗೃಹಸ್ಥರೂ ಚಿತ್ತೈಸಿದ್ದರು. ಚೆನ್ಸಲ್ಲರವರು ಈ ಸಭೆ ಕೂಡಿದ್ದುದರ ಉದ್ದೇಶವನ್ನು ವಿವರಿಸಿ, ಡಿಗ್ರಿಗಳನ್ನು ಪಡಕೊಳ್ಳಲಿಕ್ಕಿರುವ ಉಮೇದ್ವಾರರನ್ನು ಮುಂದೆ ನಿಲ್ಲಲು ಹೇಳಿ ನಿಯಮಿತ ಪ್ರಶ್ನೆಗಳನ್ನು ಕೇಳಿ, ತಕ್ಕ ಉತ್ತರಗಳನ್ನು ಪಡಕೊಂಡರು. ಒಟ್ಟಿಗೆ ೧೩೩೭ ಉಮೇದ್ವಾರರಿದ್ದರು. ಎಮ್. ಎಲ್ ೭; ಬಿ. ಎಲ್ ೩೧೧; ಬಿ. ಎಸ್ ಸಿ. ೧೧; ಎಮ್. ಬಿ. ಎಂಡ್ ಬಿ. ಎಸ್ ೮; ಎಮ್. ಬಿ ಎಂಡ್ ಸಿ. ಎಮ್ ೧; ಎಲ್ ಎಮ್. ಎಸ್ ೨೪; ಬಿ. ಇ ೩; ಎಲ್. ಟಿ. ೧೦೬; ಎಮ್. ಎ. (ಒನರ್ಸ್) ೫೫; ಎಮ್. ಎ. ೧೨; ಟ್ರಾನ್ಸಿಟರಿ ರೇಗಸ್ ೨೬; ಬಿ. ಎ. (ಒನರ್ಸ್) ೪೧; ಬಿ. ಎ. ೬೭೮; ಒರಿಯಂಟಲ್ ಟೈಟ್ಲ್ಸ್ ೫; ಈ ಪೈಕಿ ೭ ಹೆಂಗಸರಿದ್ದರು. ೩ ಮಂದಿ ಎಲ್ ಟಿಯ ಡಿಗ್ರಿ, ಒಬ್ಬರು ಎಮ್. ಬಿ. ಮತ್ತು ಬಿ. ಎಸ್. ಡಿಗ್ರಿ ಪಡೆದರು. ೩ ಬಿ. ಎ. ಡಿಗ್ರಿ ಪಡಕೊಂಡರು. ಕಡೆಗೆ ನವಾಬ್ ಇಮಾಮುಲ್ ಸೆಯ್ಯದ್ ಹುಶೇನ್ ಬಿಲ್ಗ್ರಾಮಿ ಸಿ. ಎಸ್. ಐರವರು ಒಂದು ಕಾಲೋಚಿತ ಭಾಷಣವನ್ನು ಮಾಡಿದರು.

ಕಳೆದ ತಾ. ೨೨ನೇ ದಿನ ಮದ್ರಾಸಿನಲ್ಲಿ ಬೆಳಗಿನಿಂದಲೂ ಮೋಡ ಮುಚ್ಚಿ ವಿಪರೀತವಾಗಿ ಮಳೆ ಸುರಿಯುತ್ತಿದ್ದು ಸಾಯಂಕಾಲದ ಹೊತ್ತಿಗೆ ಭಯಂಕರವಾದ ಬಿರುಗಾಳಿ ಎದ್ದಿತು. ಇಂಥಾ ಗಾಳಿಯು ಪಟ್ಟಣದ ಮೇಲೆ ಬೀಸುವದೆಂಬದನ್ನು ಯಂತ್ರಮೂಲಕ ಸರಕಾರದವರು ತಿಳಿದು ಅಪಾಯ ಸೂಚನೆಯ ಧ್ವಜಪಟವನ್ನು ಮೊದಲೇ ಎತ್ತಿ ಕಟ್ಟಿದ್ದರು. ಇದರಿಂದ ತಂತೀ ವಾರ್ತೆಯ ಕಂಭಗಳೂ ಮರಗಳೂ ಬಹಳವಾಗಿ ಬಿದ್ದುವು. ಹಾದಿ ಬೀದಿಯಲ್ಲಿ ಬಂಡಿಗಳ ಜನರ ತಿರುಗಾಟವೆಲ್ಲಾ ನಿಂತುಹೋಯಿತು. ಹಲವು ಮನೆಗಳು ಬಿದ್ದುಹೋದವು. ಸಮುದ್ರ ತೀರದಲ್ಲಿದ್ದ ಲೈಟ್‌ಹೌಸ್ ಮುರಿದುಬಿದ್ದಿತು. ಕೆಲವು ಕಡೆಯಲ್ಲಿ ಪ್ರಾಣಾಪಾಯ ಸಂಭವಿಸಿರುವ ವಾರ್ತೆಯೂ ಬಂದಿದೆ. ಲ್ಯಾಟ್‌ಹೌಸಿನಲ್ಲಿ ಬಿದ್ದುಹೋದ ಭಾಗವನ್ನು ಇನ್ನು ದುರುಸ್ತಿ ಮಾಡುವರೆ ಕನಿಷ್ಟ ಪಕ್ಷಕ್ಕೆ ೨-೨॥ ವರ್ಷಗಳ ಕಾಲ ಬೇಕಾಗುವದು. ಬಂದರದ ಹಡಗಗಳಲ್ಲಿ ವಿಶೇಷ ನಷ್ಟವಾಗಲಿಲ್ಲ. ರೈಲ್ವೇಯಲ್ಲಿ ತುತುಕುಡಿ ರೈಲ್ವೆ ಲ್ಯಾನಿನಲ್ಲಿ ಇಡೀ ಟ್ರೇನು ಸುಂಟರಗಾಳಿಯಿಂದ ಪ್ರಯಾಣಿಕರ ಸಹಿತ ಮಗಚಿ ಬಿದ್ದು ವಿಶೇಷ ನಷ್ಟ ಉಂಟಾಗಿರುತ್ತದೆ. ಇತರ ಕೆಲವು ಟ್ರೇನು ಬಂಡಿಗಳೂ ಬಿದ್ದಿರುವವೆಂಬ ವಾರ್ತೆ ಬಂದಿದೆ.

ಇದೇ ನವೆಂಬರ ತಾ. ೨೧-೨೨-೨೩ರಲ್ಲು ಮದ್ರಾಸಿನಲ್ಲಿ ನ್ಯಾಯವಿಧಾಯಕ ಸಭೆಯು ಕೂಡಿಬಂದಿರುತ್ತದೆ. ಈ ಸಭೆಯಲ್ಲಿ ಹೆಚ್ಚುಕಡಿಮೆ ಎಲ್ಲಾ ಮೆಂಬರರು ಹಾಜರಿದ್ದರು. ಪ್ರಥಮ ದಿನದ ಸಭೆಯಲ್ಲಿ ಹಿಂದೀ ಜನರನ್ನು ರೆವಿನ್ಯೂ ಬೋರ್ಡಿಗೆ ನೇಮಿಸುವ ವಿಷಯದ ಮಸೂದೆಯನ್ನೂ ಕೋಒಪರೇಟಿವ್ ಸೊಸ್ಯಾಟಿಗಳ ರಿಜಿಸ್ಟ್ರಾರರಾಗಿ ಹಿಂದೀಗಳನ್ನೇ ನೇಮಿಸಬೇಕೆಂಬ ಮಸೂದೆಯನ್ನೂ ಸಭೆಯ ಮುಂದೆ ಇಟ್ಟಿದ್ದರು. ಈ ವಿಷಯ ಚರ್ಚೆಗಳು ನಡೆದು ತಕ್ಕ ಸಂದರ್ಭವು ದೊರಕಿದ್ದಲ್ಲಿ ಹಿಂದೀಗಳನ್ನು ರೆವಿನ್ಯೂ ಬೋರ್ಡಿಗೆ ನೇಮಿಸುವೆವೆಂಬದಾಗಿ ನಿರ್ಣಯವಾಯಿತು. ಕೋಒಪರೇಟಿವ್ ಸೊಸ್ಯಾಟಿಯ ರಿಜಿಸ್ಟ್ರಾರರಾಗಿ ಹಿಂದೀಗಳನ್ನು ಯಾ ಯುರೋಪಿಯನರನ್ನು ನೇಮಿಸಬೇಕೆಂಬ ಪ್ರತ್ಯೇಕ ನಿಯಮವಿಲ್ಲ. ಈ ಕೆಲಸವನ್ನು ಪ್ರತ್ಯೇಕ ಹಿಂದೀಗಳಿಗಾಗಿಯೇ ಪ್ರತ್ಯೇಕಿಸಿಡುವ ಈ ಮಸೂದೆಯನ್ನು ಅಂಗೀಕರಿಸಿ ಸರಕಾರದವರು ತಮ್ಮ ಕೈಯನ್ನು ಕಟ್ಟಿಕೊಳ್ಳುವಹಾಗಿಲ್ಲ. ಸರಕಾರದವರು ಈ ಕೆಲಸಕ್ಕೆ ಇಂಡಿಯಾನ್ನರನ್ನಾಗಲೀ ಸಿವಿಲಿಯಾನ್ನರನ್ನಾಗಲೀ ನೇಮಿಸಬಹುದು. ಆದರೆ ಈಗ ಈ ಕೆಲಸವನ್ನು ಇಂಡಿಯನರೇ ನೋಡುತ್ತಿದ್ದಾರೆ. ಸದ್ಯಾ ಈ ಹುದ್ದೆಯು ಖಾಲಿಬಿದ್ದಿರುವದಿಲ್ಲ. ಈ ಹುದ್ದೆಗೆ ಅವನಿವನು ಎಂಬ ಬೇಧವಿಲ್ಲದೆ ಅದಕ್ಕೆ ತಕ್ಕ ಸಮರ್ಥರಾಗಿರುವವರನ್ನೇ ಸರಕಾರದವರು ನೇಮಿಸುವರು. ಆದುದರಿಂದ ಈ ಮಸೂದೆಯನ್ನು ಅಂಗೀಕರಿಸಲು ಆಗುವದಿಲ್ಲ ಎಂಬ ಉತ್ತರವು ಸಿಕ್ಕಿದುದರಿಂದ ಬಹುಮಾನಪಟ್ಟ ನರಸಿಂಹ ಅಯ್ಯರರು ಈ ಮಸೂದೆಯನ್ನು ಹಿಂದೆಗೆದರು. ನಂತರದ ದಿವಸಗಳಲ್ಲಿ ಕೂಡಿದ ಈ ಸಭಾ ವೃತ್ತಾಂತಗಳಲ್ಲಿ ವಿಶೇಷವಾದ ಕೆಲವನ್ನು ಬರುವ ಸಂಚಿಕೆಯಲ್ಲಿ ಕೊಡುವೆವು.

ದಕ್ಷಿಣ ಕನ್ನಡ.

ಸಹಕಾರ.

೧೯೧೬-೧೭ನೇ ವರ್ಷದ ೩ನೇ ಸರ್ಕೀಲಾರು.

ಪಂಚಾಯತಿಕೆಯ ಕುರಿತು ಸರಕಾರದವರು ಏರ್ಪಡಿಸಿದ ಕ್ರಮದಿಂದಾಗಲಿ ಆ ಕ್ರಮವನ್ನನುಸರಿಸಿ ಪ್ರತಿಯೊಂದು ಸಂಘದ ಉಪನಿಬಂಧನೆಗಳಲ್ಲಿ ಕೂಡಿಸಬೇಕೆಂದು ಈ ಮೊದಲು ಸೂಚಿಸಿದ ಹೊಸ ನಿಬಂಧನೆಯ ಮಸೂದೆಯಿಂದಾಗಲಿ, ಸಂಘದಲ್ಲಿ ಹುಟ್ಟ

ಬಹುದಾದ ವಿವಾದಗಳನ್ನು ರಿಜಿಸ್ಟ್ರಾರರಿಗೆ ಒಪ್ಪಿಸಬಹುದೆಂಬುದು ಸ್ಪಷ್ಟವಾಗುತ್ತದೆ. ಆದರೆ, ಸದರಿ ರಿಜಿಸ್ಟ್ರಾರರು ಮಾತ್ರ ಅಂತಹ ವಿವಾದಗಳನ್ನು ತಾನೇ ಸ್ವತಹಾ ತೀರ್ಮಾನಿಸಲೂ ಬಹುದು, ಯಾ ಬೇರೆಯವರಿಗೆ ಒಪ್ಪಿಸಲೂ ಬಹುದು. ಹಾಗೆ ಬೇರೆಯವರಿಗೆ ಒಪ್ಪಿಸುವದಾದರೆ ಒಬ್ಬ ಪಂಚಾಯತಿದಾರನಿಗೆ ಮಾತ್ರ ಒಪ್ಪಿಸಲೂ ಬಹುದು, ಯಾ ಹಲವು ಮಂದಿ ಪಂಚಾಯತಿದಾರರಿಗೆ ಒಪ್ಪಿಸಲೂ ಬಹುದು. ಹಲವು ಮಂದಿ ಪಂಚಾಯತಿದಾರರಿಗೆ ಒಪ್ಪಿಸುವುದೆಂದು ರಿಜಿಸ್ಟ್ರಾರರು ನಿರ್ಣಯಿಸಿದ ಸಂಗತಿಗಳಲ್ಲಿ ರಿಜಿಸ್ಟ್ರಾರರು ಒಬ್ಬನನ್ನೂ, ವಿವಾದದ ಪಕ್ಷಗಳ ಪೈಕಿ ಪ್ರತಿಯೊಂದು ಪಕ್ಷದವರು ಒಬ್ಬೊಬ್ಬನನ್ನೂ ನೇಮಿಸಬಹುದು.

ಈ ಎಲ್ಲಾ ಸೂತ್ರಗಳಿಂದ ತಿಳಿಯಬೇಕಾದ ವಿಷಯಗಳು ಕೆಲವು ಇವೆ. ಮೊದಲನೆಯದು "ನೇಮಿಸಬಹುದು" ಎಂಬ ಆದೇ ಶಬ್ದದ ಸರಿಯಾದ ಅರ್ಥ. "ಬಹುದು" ವಾದಿದ್ದುದರಿಂದ ಪ್ರತಿಯೊಂದು ಪಕ್ಷದವರು ಒಬ್ಬೊಬ್ಬನನ್ನು ನೇಮಿಸುವ ಸ್ವಾತಂತ್ರ್ಯವು ರಿಜಿಸ್ಟ್ರಾರರು ಕೊಟ್ಟರೆ ಮಾತ್ರ ಸಿಕ್ಕುವುದು ವಿನಹಾ, ಅವರು ಕೊಡದಿದ್ದರೆ ಇಲ್ಲವೆಂಬುದು ವಿಷದವಾಗುತ್ತದೆ.

ಹಲವು ಸಂಘಗಳಲ್ಲಿ ಪಂಚಾಯತಿಕೆಯ ಬಗ್ಗೆ ಎಂದು ಮೆಂಬರರೊಳಗೊಬ್ಬನನ್ನು ಆರಿಸಿಯದೆಂತ ತಿಳಿದು ಬಂದದೆ; ಇದು ಮೇಲೆ ವಿವರಿಸಿದ ಸೂತ್ರಗಳಿಗೆ ಕೇವಲ ವಿರೋಧವಾಗಿರುತ್ತದೆ. ಏಕೆಂದರೆ, ಯಾವುದೊಂದು ವಿವಾದವನ್ನು ರಿಜಿಸ್ಟ್ರಾರರಿಗೆ ಒಪ್ಪಿಸಿದಾಗ ಅವರು ಅದನ್ನು ತಾನೇ ತೀರ್ಮಾನಿಸದೆ ಬೇರೆಯವರಿಗೆ ಒಪ್ಪಿಸುವರು ಎಂದಾಗಲಿ ಹಾಗೆ ಬೇರೆಯವರಿಗೆ ಒಪ್ಪಿಸುವುದಾದರೂ ಒಬ್ಬ ಪಂಚಾಯತಿದಾರನಿಗಲ್ಲದೆ ಹಲವು ಪಂಚಾಯತಿದಾರರಿಗೆ ಒಪ್ಪಿಸುವರೆಂದಾಗಲಿ, ಕಡೆಗೆ ಹಲವು ಪಂಚಾಯತಿದಾರರಿಗೆ ಒಪ್ಪಿಸುವುದಾದರೆ ಕೂಡಾ ಅವರ ಪೈಕಿ ಒಬ್ಬನನ್ನು ನೇಮಿಸುವ ಅಧಿಕಾರವನ್ನು ಸಂಘಕ್ಕೆ ಕೊಡುವರೆಂದಾಗಲಿ, ಯಾವುದೂ ನಿಶ್ಚಯವಿಲ್ಲವಷ್ಟೆ. ಆದುದರಿಂದ ಹಾಗೆ ಆರಿಸುವುದೂ ಕ್ರಮಗಳಿಗೆ ತೀರಾ ವಿರೋಧವಾಗಿರುತ್ತದೆಂಬ ಸಂಗತಿಯನ್ನು ಎಲ್ಲಾ ಸಂಘದವರೂ ಚೆನ್ನಾಗಿ ಗ್ರಹಿಸಬೇಕೆಂದು ಈ ಮೂಲಕ ಸೂಚಿಸಲಾಗುತ್ತದೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು, ತಾ. 25-11-16. } ಮಂ. ಅನಂತರಾವ್. ಕಾರ್ಯದರ್ಶಿ.

ಬಂಟರ ಯಾನೆ ನಾಡವರ ಸಂಘ.

ಇದೇ ನವಂಬರ ತಿಂಗಳ ತಾ. ೧೨ರಿಂದ ೧೫ರವರೆಗೆ ನಾನು ರಾ. ಕರಿಯಂಗಳ ಮುತ್ತಯ ಶೆಟ್ರು ಅವರ ತಮ್ಮ ರಾ. ಶಾಂತಪ್ಪ ಶೆಟ್ರು, ರಾ. ಕೊಡಿಯಾಲ ಗುತ್ತು ಕೃಷ್ಣ ಸುಲಾಯರು ಮತ್ತು ಅವರ ಮಗ ರಾ. ಭುಜಂಗ ಸುಲಾಯರು ಉಳಿಪಾಡಿ, ಮೊಗರು, ಮುತ್ತೂರು, ಕೊಳವೂರು ಗ್ರಾಮಗಳಲ್ಲಿರುವ ಜಾತಿಗೃಹಸ್ಥರ ಕೆಲವು ಮನೆಗಳಿಗೆ ಹೋಗಿ ರೂ. ೫೧೧ ಸಂಘಕ್ಕೆ ವಾಗ್ದಾನ ಪಡಕೊಂಡು ರೂ. ೩೪೭ ವಸೂಲು ಮಾಡಿರುತ್ತೇವೆ. ಈ ಪೈಕಿ ರೂ. ೮೧ ರಾ. ಕರಿಯಂಗಳ ಮುತ್ತಯ ಶೆಟ್ರ ಶಾಲೆಯ ವಾರ್ಷಿಕ ದಿವಸದ ಸಭೆಯಲ್ಲಿ ವಸೂಲಾಗಿತ್ತು. ಮೊಗರು ಗ್ರಾಮದಲ್ಲಿ ಬಡ ಗೇಣಿ ಒಕ್ಕಲುಗಳು ಸಹ ತಮ್ಮ ತಮ್ಮ ಶಕ್ತ್ಯಾನುಸಾರ ವಂತಿಗೆ ಕೊಟ್ಟಿರುತ್ತಾರೆ ಎಂಬ ಸಂಗತಿಯನ್ನು ಈ ಮೂಲಕ ತಿಳಿದು ಸ್ವಜಾತಿ ಹಿತೈಷಿಗಳಾದ ಗೃಹಸ್ಥರೆಲ್ಲಾ ಉತ್ಸಾಹ ಪಡದೆ ಇರಲಾರರೆಂದು ನಂಬುತ್ತೇವೆ. ಮೇಲೆ ಹೇಳಿದ ವಂತಿಗೆ ವಸೂಲಿನ ವಿಷಯ ವಿಶೇಷ ಶ್ರಮಪಟ್ಟು ಸಹಾಯ ಮಾಡಿದ ರಾ. ಕರಿಯಂಗಳ ಮುತ್ತಯ ಶೆಟ್ರು ಸಂಘದ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ.

ಮಂಗಳೂರು: ತಾ. 26-11-16 } ಅ. ಬಾಲಕೃಷ್ಣ ಶೆಟ್ಟಿ. ಕೋಶಾಧಿಕಾರಿ.

ದರಬಾರು ಇನಾಮು ಪರೀಕ್ಷೆ, ಪುತ್ತೂರು.

ಈ ಪರೀಕ್ಷೆಯಲ್ಲಿ ಈ ವರ್ಷ ಕೆಳಗೆ ಕಾಣಿಸಿದ ವಿದ್ಯಾರ್ಥಿಗಳು ಇನಾಮಿಗೆ ಅರ್ಹರಾಗಿರುತ್ತಾರೆ.

೪ನೇ ದರ್ಜೆ:—ಕೊಳಂಬೆ ಪುಟ್ಟಣ್ಣ, ಐವರ್ನಾಡು ಬೋರ್ಡು ಶಾಲೆ.

೩ನೇ ದರ್ಜೆ:—ಅರ್ಬಡ್ಕ ಐತಪ್ಪ ಗೌಡ, ಸುಳ್ಯ ಬೋರ್ಡು ಶಾಲೆ.

ಕೆ. ಪುರುಷೋತ್ತಮ ಕುದ್ರೆತ್ತಾಯ, ಪುತ್ತೂರು ಬೋರ್ಡು ಶಾಲೆ.

ಮೇಲ್ಕಂಡ ಇನಾಮುಗಳಲ್ಲದೆ, ಪಂಚಮ ಜಾತಿಯ ವಿದ್ಯಾರ್ಥಿಗಳಿಗೆಂದು ಏರ್ಪಡಿಸಿದ ಇನಾಮು ಪುತ್ತೂರು ಪಂಚಮರ ಬೋರ್ಡು ಶಾಲೆಯ ವಿದ್ಯಾರ್ಥಿ ಮ್ಯಾಲ ಎಂಬವನಿಗೆ ಕೊಡೋಣಾಗುವುದು.

ಎಲ್ಲಾ ಇನಾಮುಗಳು ಇದೇ ದಶಂಬರ ತಿಂಗಳ ತಾ. ೧೨ನೇ ಮಂಗಳವಾರ ದಿವಸ ಪುತ್ತೂರು ಬೋರ್ಡು ಶಾಲೆಯಲ್ಲಿ ಕೊಡೋಣಾಗುವುವು.

ಪುತ್ತೂರು, ತಾ. 1-12-16. } ಬೈಂದೂರು ಆನಂದರಾವ್.

ಬಡ ವಿದ್ಯಾರ್ಥಿಗಳ ಸಹಾಯ ಫಂಡು.

ಕಳೆದ ಅಗೋಸ್ತು ತಾ. ೨೨ರನಂತರ ಈವರೆಗೆ ವಾಗ್ದಾನ ಮಾಡಿದವರ ಯಾ ವಸೂಲು ಕೊಟ್ಟವರ ಹೆಸರು ಮತ್ತು ಮೊಬಲಗು:—

ಮ। ರಾ। ವಕೀಲ್ ಎಮ್. ಗುಡ್ಡಪ್ಪ ರೈಗಳು (ವರ್ಷ ೧ಕ್ಕೆ ರೂ. ೫೦) ಕೆ. ಟಿ. ಭಂಡಾರಿಗಳು ರೂ. ೧೦. ಬಿ. ಮಂಜಪ್ಪ ಭಂಡಾರಿಗಳು ರೂ. ೧೨. ಡಾಕ್ಟರ್ ಎಚ್. ವೆಂಕಪ್ಪ ಅಡಪ್ಪರು ರೂ. ೧೦. ಬಾಕ್ರಬೈಲು ಬೈಂಕಿ ಅಡಪ್ಪರು ರೂ. ೧೨. ವಕೀಲ್ ಎಮ್. ಮಾಧವರಾಯರು ರೂ. ೩. ಅ. ತಿಮ್ಮಪ್ಪ ಪೂಂಜರು ರೂ. ೧೨. ಬಂಬ್ರಾಣ ಕೋಚಣ್ಣಾಳ್ವರು ರೂ. ೬. ಕಡಂದಲೆ ದೇಜು ಶೆಟ್ರು ರೂ. ೧೨.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು. ತಾ. 28-11-16. } ಮೂಲ್ಕಿ ರಾಮಣ್ಣ ಶೆಟ್ಟಿ. ಕಾರ್ಯದರ್ಶಿ.

ಕಾಪು:—ಬೋರ್ಡು ಶಾಲಾ ಮಾಸ್ತರರು ಕಳೆದ ಒಕ್ಟೋಬರ ತಿಂಗಳ ಸಂಬಳ ನವಂಬರ ತಾ. ೨೫ ದಾಟಿದಾಗ್ಯೂ ಹೊಂದಲಿಲ್ಲವೆಂದರೆ ಯಾರು ತಾನೆ ವಿಷಾದಪಡರು! ಇಂಥಾ ದುರ್ದಶೆಯ ಕಾಲದಲ್ಲಿ ಮಂಗಾಯಿ ಬತ್ತೆಯೂ ಹೊಂದಲು ಭಾಗ್ಯಹೀನರಾದ ಉಪಾಧ್ಯಾಯರುಗಳಿಗೆ ಪ್ರತಿ ತಿಂಗಳ ಸಂಬಳ ಕ್ಲಪ್ತ ಸಮಯಕ್ಕೆ ಸಿಕ್ಕುವಂತೆ ಮಾಡುತ್ತಿದ್ದರೆ ಒಳ್ಳೇದಿತ್ತು.

ವರ್ಷಂಪ್ರತಿಯೂ ನಡಿಯುತ್ತಲಿರುವ ಯರ್ಮಾಳ ಶ್ರೀ ಜನಾರ್ಧನ ದೇವಸ್ಥಾನದ ಉತ್ಸವವು ದಶಂಬರ ತಿಂಗಳ ತಾ. ೧೫ನೇ ದಿನ ಮ। ರಾ। ಪಟೇಲ್ ಕುಮಾರಯರವರ ಮೋಹನತ್ತಿನಿಂದ ಬಲು ವಿಜೃಂಭಣೆಯಿಂದ ನಡೆಯುವದಾಗಿ ತಿಳಿದುಬಂದಿದೆ.

ಯರ್ಮಾಳದಲ್ಲಿ ಅಳಿದುಹೋದ ಟಪ್ಪಾಲಾಫೀಸು ಪುನಃ ಆಗುವದು ಎಂದು ಕೇಳಿ ಬಹಳ ಸಮಯವಾದಾಗ್ಯೂ ಅದಂತೆ ಕಂಡುಬಂದಿಲ್ಲ. ಈ ಸಂದರ್ಭದಲ್ಲಿ ಸಾಹಸಪಡುತ್ತಲಿದ್ದ ಟಪ್ಪಾಲು ಇನ್ಸ್‌ಪೆಕ್ಟರರಿಗೆ ವರ್ಗವಾಗಿ ಹೊಸ ಇನ್ಸ್‌ಪೆಕ್ಟರರು ಬರುವರಾಗಿ ವದಂತಿ ಕೇಳುತ್ತೇವೆ. ಹೊಸತಾಗಿ ಬಂದ ಇನ್ಸ್‌ಪೆಕ್ಟರರಾದರೂ ಟಪ್ಪಾಲಾಫೀಸು ಆಗುವಂತೆ ಪ್ರಯತ್ನವಿಟ್ಟಲ್ಲಿ ಯರ್ಮಾಳ ನಿವಾಸಿಗಳು ಕೃತಾರ್ಥರಾದರೆನ್ನಬೇಕಾಗಿದೆ.

ಪಡುಬಿದ್ರೆ ಪೇಟೆಯ ಸಾಹುಕಾರರಲ್ಲೊಬ್ಬರಾದ ಮ। ರಾ। ಲಕ್ಷ್ಮಣ ನ್ಯಾಕರೆಂಬವರು ಈ ವರ್ಷ ಬಡಜನರ ಪ್ರಯೋಜನಾರ್ಥವಾಗಿ ಒಂದು ತಿಂಗಳ ತನಕ ಅಕ್ಕಿಯನ್ನು ಸೇರು ೧ರ ೨ ಆಣೆ ದರದಲ್ಲಿ ಮಾರುತ್ತಿದ್ದುದು ತುಂಬಾ ಸ್ತುತ್ಯವಾದದ್ದೆ. ಅಲ್ಲದೆ ಈ ವರ್ಷ ದಿಂಡು ಮಹೋತ್ಸವದ ಕಾಲದಲ್ಲಿ ಸದ್ರಿಯವರು ಪಟ್ಟಿಕ್ರಮಗಳನ್ನು ಬಡಬಗ್ಗರೂ ಇತರರೂ ಶ್ರವಣಮಾಡುತ್ತಿರುವರು. ಇಂಥಾ ದುರ್ಭಿಕ್ಷ ಕಾಲದಲ್ಲಿ ವನಭೋಜನ ಸಮಾರಾಧನೆಯನ್ನು ಬಲು ಸೊಗಸಾಗಿ ಮಾಡಿದ್ದು ಕೇಳಿ ಆನಂದಪಡಬೇಕಾಗಿದೆ.

ಕಟಪಾಡಿ:—ಕೆಲವು ದಿವಸಗಳ ಹಿಂದೆ ವಿದ್ಯಾನಿಧಿಗಳೂ ಯತಿಶ್ರೇಷ್ಠರೂ ಎಂದು ಹೆಸರು ಪಡೆದ ಉಡುಪಿಯ ಶ್ರೀ ಅದಮಾರು ಮಠದ ಶ್ರೀ ಪಾದಂಗಳವರು ಇಲ್ಲಿಯ ಶ್ರೀ ವೆಂಕಟರಮಣಸ್ವಾಮಿ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಶಾಲಾ ಕಟ್ಟೋಣವನ್ನೂ ಇತರ ಸಾಮಾಗ್ರಿಗಳನ್ನೂ ನೋಡಿ ಸಂತೋಷಪಟ್ಟು ರೂಪಾಯಿ ೨೫ನ್ನು ಆಗಲೇ ಕೊಡಿಸಿ ಬರುವ ವರ್ಷವೂ ರೂಪಾಯಿ ೨೫ನ್ನು ಕೊಡುವೆನೆಂಬದಾಗಿ ಅಭಯವಿತ್ತಿರುವರು. ಮತ್ತು ಇದರ ಹಿಂದೆಯೇ ಕಟ್ಟಿಸಲ್ಪಡುವ ಗರ್ಲ್ಸ್ ಸ್ಕೂಲು ಕಟ್ಟೋಣದ ಬಗ್ಗೆ ತಮ್ಮ ಉದಾರಹಸ್ತದಿಂದ ಮೇಲುಪಂಕ್ತಿಯಾಗಿ ರೂಪಾಯಿ ೫೦ ಕೊಡುತ್ತೇನಾಗಿ ವಾಗ್ದಾನ ಮಾಡಿರುವರು. ಇವರ ಧರ್ಮಕಾರ್ಯವು ಚಿರಸ್ಮರಣೀಯವಾದುದು. ಆಗಲೇ ಶಾಲಾ ಹುಡುಗರಿಗೆ ಬಾಳೆ ಹಣ್ಣು ಮಿಠಾಯಿ ವಗೈರೆ ಹಂಚಿಸಿ ಹುಡುಗರನ್ನು ಸಂತೋಷಗೊಳಿಸಿದರು.

ಇದೇ ಬರುವ ದಶಂಬರ ತಾರೀಕು ೧೫ರ ಒಳಗೆ ಇಲ್ಲಿಯ ಶಾಲೆಯಲ್ಲಿ ಶಾಲಾ ಕಮಿಟಿಯವರ ಮತ್ತು ಊರ ಪ್ರಮುಖ ಗೃಹಸ್ಥರ ಒಂದು ಸಭೆಯು ಕೂಡಲಿಕ್ಕಿರುವದು. ಶಾಲಾಫೀಸು ಕೊಡುವರೆ ಅನಾನುಕೂಲ ಸ್ಥಿತಿಯಲ್ಲಿರುವ ಬಡ ವಿದ್ಯಾರ್ಥಿಗಳ ಸಂಬಳದಲ್ಲಿ ರಿಯಾಯತಿ ತೋರಿಸುವದೇ ಈ ಸಭೆಯ ಮುಖ್ಯ ಉದ್ದೇಶವಾಗಿರುತ್ತದೆ. ಬಡ ವಿದ್ಯಾರ್ಥಿಗಳ ಹೆತ್ತವರು ದಶಂಬರ ತಾರೀಕು ೧೦ರ ಒಳಗಾದರೂ ಸಂಬಳದ ರಿಯಾಯತಿಯ ಕುರಿತು ಅರ್ಜಿಯನ್ನು ಶಾಲೆಯ ಮೇನೇಜಿಂಗ್ ಕಮಿಟಿಯ ಕೊರೆಸ್ಪೊಂಡೆಂಟ ಮೇನೇಜರರವರಿಗೆ ಬರಕೊಳ್ಳಬೇಕಾಗಿ ತಿಳಿಸಿರುತ್ತದೆ. ಸಭೆಯಲ್ಲಿ ಬಡ ವಿದ್ಯಾರ್ಥಿಗಳ ವಿಷಯ ತನಿಕೆಯಿಂದ ಅರ್ಧ, ಕಾಲು, ಪೂರಾ ಮಾಫಿ ಈ ರೀತಿಯಿಂದ ಅವರವರ ಯೋಗ್ಯತಾನುಸಾರ ರಿಯಾಯತಿ ತೋರಿಸಲ್ಪಡುವದು. ಈ ವಿಷಯದಲ್ಲಿ ಹೆಚ್ಚಿನ ಶ್ರಮವನ್ನು ವಹಿಸಿರುವ ಇಲ್ಲಿಯ ಹ್ಯಾಕೋರ್ಟ ವಕೀಲ ಪಾಂಗಾಳ ಪಾಂಡುರಂಗನಾಯಕ್ ಬಿ. ಎ. ಬಿ. ಎಲ್‌ರವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಸದರಿ ಶಾಲೆಯ ಬಿಲ್ಡಿಂಗ್ ಗ್ರೇಂಟಿನ ಬಗ್ಗೆ ಬಹುಮಾನಪಟ್ಟ ವಿದ್ಯಾ ಇಲಾಖೆಯ ಡೈರೆಕ್ಟರ ದೊರೆಗಳವರಿಂದ ರೂಪಾಯಿ ೧೫೦೦ ಸೆಂಕ್ಷನು ಆಗಿ ಹ.ಕಂ ಬಂದಿದೆ ಎಂತ ಕೇಳಿ ಸಂತೋಷಪಡುತ್ತೇವೆ.

ಮಂಗಳೂರು.

ಇದೇ ಕಳೆದ ಒಕ್ಟೋಬರ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೦೪೫ ಜನನ; ೧೯೭೩ ಮರಣಗಳಾಗಿರುವವು. ಈ ಪೈಕಿ ಜನನ. ಕುಂದಾಪುರ ತಾಲೂಕು ಗಂಡು ೧೮೧, ಹೆಣ್ಣು ೧೯೩=೩೭೪; ಉಡುಪಿ ಗಂಡು ೩೨೦, ಹೆಣ್ಣು ೩೧೩=೬೩೩; ಕಾಸರಗೋಡು ಗಂಡು ೩೨೩, ಹೆಣ್ಣು ೩೩೮=೬೬೧; ಉಪ್ಪಿನಂಗಡಿ ಗಂಡು ೨೧೯; ಹೆಣ್ಣು ೧೬೮=೩೮೭; ಕಾರ್ಕಳ ಗಂಡು ೧೪೪, ಹೆಣ್ಣು ೧೨೮=೨೭೨; ಮಂಗಳೂರು ಗಂಡು ೩೧೦, ಹೆಣ್ಣು ೨೬೭=೫೭೭; ಮುನಿಸಿಪಾಲಿಟಿ ಗಂಡು ೮೩, ಹೆಣ್ಣು ೫೮=೧೪೧; ಜುಮುಲಾ ಗಂಡು ೧೫೮೦, ಹೆಣ್ಣು ೧೪೬೫=೩೦೪೫; ಮರಣ ಸಂಖ್ಯೆ—ಕುಂದಾಪುರ ತಾಲೂಕು ಗಂಡು ೧೫೫, ಹೆಣ್ಣು ೧೩೫=೨೯೦; ಉಡ್ಪಿ ಗಂಡು ೧೯೩, ಹೆಣ್ಣು ೧೭೧=೩೬೪; ಮಂಗಳೂರು ಗಂಡು ೧೭೧, ಹೆಣ್ಣು ೧೫೯=೩೩೦; ಕಾರ್ಕಳ ಗಂಡು ೯೫, ಹೆಣ್ಣು ೧೦೧=೧೯೬; ಕಾಸರಗೋಡು ಗಂಡು ೧೭೫, ಹೆಣ್ಣು ೧೭೩=೩೪೮; ಉಪ್ಪಿನಂಗಡಿ ಗಂಡು ೧೭೭, ಹೆಣ್ಣು ೧೪೯=೩೨೬; ಮುನಿಸಿಪಾಲಿಟಿ ಗಂಡು ೭೦, ಹೆಣ್ಣು ೪೯=೧೧೯; ಜುಮುಲಾ ಗಂಡು ೧೦೩೬, ಹೆಣ್ಣು ೯೩೭=೧೯೭೩;

ಕಲೆಕ್ಟರ ಆಫೀಸಿನ ಆಕ್ಟಿಂಗ್ ಹೆಡ್ ಒಡಿಟರರಾದ ಮ|| ರಾ|| ಎಚ್. ಅನಂತಯ್ಯನವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಒಂದು ತಿಂಗಳ ಹೆಚ್ಚಿನ ರಜೆ ಪಡಕೊಂಡಿರುವರು.

ಮಂಗಳೂರು ಸರ್ಕಲಿನ ಶಾಲೆಗಳ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಮ|| ರಾ|| ಸವೂರು ರಾಮರಾವ್ ಮಂಗೇಶರಾಯರಿಗೆ ಕೊಡಗು ಸರ್ಕಲಿಗೆ ವರ್ಗವಾಗಿದೆಂತ ಕೇಳಿ ತುಂಬಾ ವಿಷಾದಪಡುತ್ತೇವೆ. ಮ|| ರಾ|| ಸವೂರು ಆರ್. ಮಂಗೇಶರಾಯರು ಇಲ್ಲಿ ಶಾಲೆಗಳ ಅಸಿಸ್ಟಾಂಟ ಇನ್ಸಪೆಕ್ಟರರಾಗಿದ್ದ ಕೊಂಚ ಕಾಲದಲ್ಲಿಯೇ ಶಾಲೆಗಳ ಉಪಾಧ್ಯಾಯರ, ವಿದ್ಯಾರ್ಥಿಗಳ ಶಿಕ್ಷಣ ಬಗ್ಗೆ ವಿಶೇಷ ಪ್ರಯತ್ನ ತಕ್ಕೊಂಡು ಶಿಕ್ಷಣ ಮಂಡಲಿಗೆ ಸೇರಿದವರ ಪ್ರೀತಿಮನ್ನಣೆಗಳಿಗೆ ಪಾತ್ರರಾಗಿದ್ದರು. ಅಷ್ಟೇ ಅಲ್ಲ; ಇವರು ಕ್ರಿಕೆಟ್ ಮೊದಲಾದ ಆಟಗಳಲ್ಲಿ ಆಸಕ್ತರಾಗಿದ್ದು, ಇಲ್ಲಿಯ ಹಿಂದೂ ಕ್ರಿಕೆಟ್ ಕ್ಲಬ್ಬಿನ ಕೆಪ್ಟನರಾಗಿ ಆ ಪಂಗಡದವರೊಡನೆ ಸೇರಿಕೊಂಡು ಊರ ಜನರನ್ನೂ ಆಕರ್ಶಿಸಿಕೊಂಡು ಸರಕಾರಿ ಹುದ್ದೆದಾರರು ಜನರೊಳಗೆ ಬೆರಸಿಕೊಂಡು ನಡಿಯುವದು ಹೇಗೆಂಬದನ್ನು ದೃಷ್ಟಾಂತಪೂರ್ವಕ ತೋರಿಸಿಕೊಟ್ಟಿದ್ದರು. ಕಳೆದ ವರ್ಷ ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಉಮೇದ್ವಾರರು ಮುಷ್ಕರ ಹಾಕಿದ್ದಾಗ ಮ|| ರಾ|| ಸವೂರು ರಾಮರಾಯರು ಇನ್ಸ್‌ಪೆಕ್ಟರ್ ದೊರೆಗಳವರಿಗೂ ಈ ಉಮೇದ್ವಾರರಿಗೂ ಮಧ್ಯವರ್ತಿಗಳಾಗಿದ್ದುಕೊಂಡು ಮುಷ್ಕರ ಹಾಕಿದ ಉಮೇದ್ವಾರರಲ್ಲಿ ಯಾರಿಗೂ ಕೇಡಾಗದಂತೆ ಈ ಮುಷ್ಕರವನ್ನು ಕೊನೆಗಾಣಿಸಿ ನಮ್ಮ ಜಿಲ್ಲೆಯ ಉಪಾಧ್ಯಾಯ ವರ್ಗದ ಮೇಲೆ ಬೀಳಲಿಕ್ಕಿದ್ದ ಕಪ್ಪು ಕಲೆಯನ್ನು ಹೋಗಲಾಡಿಸಿದ್ದು ಒಂದು ಮಹತ್ವದ ವಿಷಯವಾಗಿದೆ.

ಕೆನರಾ ಹೈಸ್ಕೂಲಿನ ಸಿಲ್ವರ್ ಜುಬ್ಲಿ ಮತ್ತು ಈ ಶಾಲೆಯ ಸ್ಕೂಲ್ ಡೇ ಸಮಾರಂಭವು ಇದೇ ತಿಂಗಳ ತಾ. ೨೭ರಲ್ಲು ನಡೆಯತಕ್ಕದಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಹೊಂದಿದವರೆಲ್ಲರು ಈ ಬಗ್ಗೆ ಬೇಕಾದ ಚಂದಾಹಣವನ್ನು ಶಾಲೆಯ ಮುಖ್ಯ ಉಪಾಧ್ಯಾಯರಿಗೆ ಕಳುಹಿಸಿಕೊಡಬೇಕೆಂತ ವಿಜ್ಞಾಪಿಸೋಣಾಗಿರುವದು.

ದಿವಾನ್ ಬಹದ್ದೂರ್ ಕಲ್ಲೆ ನಾರಾಯಣರಾಯರವರು ಮದ್ರಾಸಿನಿಂದ ದೇಹಾರೋಗ್ಯವು ಸರಿಯಿಲ್ಲದೆ ಇಲ್ಲಿಗೆ ಬಂದಿದ್ದವರು ಇದೇ ನವಂಬರ ತಾ. ೨೯ನೇ ಬುಧವಾರ ಬೆಳಿಗ್ಗೆ ೧೦ ಘಂಟೆಗೆ ಗುಂಡಿಗೆಯ ಬೇನೆಯಿಂದ ವಿಧಿವಶರಾದರು ಎಂತ ತಿಳಿಸಲು ವಿಷಾದಿಸುತ್ತೇವೆ. ದಿವಾನ್ ಬಹದ್ದೂರ್ ಕಲ್ಲೆ ನಾರಾಯಣರಾಯರು ನಮ್ಮ ಜಿಲ್ಲೆಯವರು. ಬಹಳ ಕಾಲದಿಂದ ಮದ್ರಾಸ್ ಹೈಕೋರ್ಟಿನಲ್ಲಿ ವಕೀಲ ಕೆಲಸ ನಡಿಸಿಕೊಂಡು ವಿಶೇಷ ಖ್ಯಾತಿಯನ್ನು ಪಡೆದಿದ್ದರು. ಕೆಲವು ಕಾಲ ಮದ್ರಾಸ ಲಾ ಕಾಲೇಜಿಯ ವೈಸ ಪ್ರಿನ್ಸಿಪಾಲರಾಗಿಯೂ ಇದ್ದರು. ಹೈಕೋರ್ಟ ಜಡ್ಜರಾಗುವ ಸಂಭವವು ಇವರಿಗೆ ಬಹಳವಾಗಿ ಇದ್ದಿತು. ಅದಕ್ಕೆ ತಕ್ಕ ಪಾತ್ರತೆಯೂ ಅವರಲ್ಲಿ ಇತ್ತು. ಎಲಾಯತಿವರೆಗೂ ಹೋಗಿದ್ದರು. ಆದರೆ ಸರಕಾರಿ ಹುದ್ದೆಗಳನ್ನು ಪಡೆಯಲು ಇಂಥಾ ಯೋಗ್ಯತೆ ಮಾತ್ರ ಇದ್ದರೆ ಸಾಲದ್ದರಿಂದ ಈ ಹುದ್ದೆಯು ಇವರಿಗೆ ದೊರಕಲಿಲ್ಲ. ಈಚೆಗೆ ಕೆಲವು ಕಾಲದಿಂದ ಇವರ ಕ್ಷೇಮವು ಕೆಡುತ್ತಾ ಬಂದುದರಿಂದ ಮದ್ರಾಸನ್ನು ಬಿಟ್ಟು ಇಲ್ಲಿಯೇ ಬಂದು ಉಳಕೊಂಡಿದ್ದರು. ಇಲ್ಲಿ ಕೆಲಕಾಲ ಆರೋಗ್ಯದಲ್ಲಿದ್ದರೂ ಇವರಿಗೆ ಪ್ರಾಪ್ತವಾದ ರೋಗ ಪ್ರಕೃತಿಯು ಸ್ವಭಾವವು ಬಹಳ ಅಪಾಯಕರವಾದ್ದರಿಂದ ಈ ಬೇನೆಯಿಂದಲೇ ಮೃತಪಟ್ಟರು. ನಾರಾಯಣರಾಯರ ಮರಣದಿಂದ ಸಂತಾಪ ಪಡುವ ಅವರ ಕುಟುಂಬ ವ ನೆಂಟರಿಷ್ಟರೊಡನೆ ನಮ್ಮ ಸಹಸಂತಾಪವನ್ನು ಈ ಮೂಲಕ ಸೂಚಿಸಿರುತ್ತೇವೆ.

ಜಿಲ್ಲಾ ಜಡ್ಜರಾಗಿರುವ ಮಿ|| ಕರ್ಗನ್‌ವೆನ್ ದೊರೆಗಳು ಇದೇ ತಾ. ೬ರಲ್ಲಿ ರಜೆಯ ಮೇಲೆ ಶೀಮೆಗೆ ಹೋಗುವದರಲ್ಲಿದ್ದಾರೆಂತ ತಿಳಿಯುತ್ತೇವೆ.

ಸಬ್ ಜಡ್ಜರಾಗಿರುವ ಮಿ|| ವಿ. ಸಿ ಮಸ್ಕರೇಂಞಾರವರು ಇದೇ ತಾ. ೧೨ರಿಂದ ಕೆಲಸದಿಂದ ನಿವೃತ್ತರಾಗುವರು.

ಮಂಗಳೂರು ತಾಲೂಕು ಬೋರ್ಡಿಗೆ ಈವರೆಗೆ ಸರಕಾರಿ ಆಫೀಸರರು ವೈಸ ಪ್ರೆಸಿಡೆಂಟರಾಗಿದ್ದರು. ಆದರೆ ಈಗ ಬಿನ್‌ಸರಕಾರಿ ಮೆಂಬರರನ್ನು ವೈಸ ಪ್ರೆಸಿಡೆಂಟರಾಗಿ ಆರಿಸಬಹುದೆಂಬದಾಗಿ ಸರಕಾರದಿಂದ ಹುಕುಂ ಬಂದ ಪ್ರಕಾರ ಮಂಗಳೂರು ತಾಲೂಕು ಬೋರ್ಡಿಗೆ ರಿಟಾಯರ್ಡ್ ಮೇಜಿಸ್ಟ್ರೇಟರಾದ ಮಹಮ್ಮದ್ ಖಾನ್ ಬಹದ್ದೂರ್ ಸಾಹೇಬರು ವೈಸ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರೆ. ಹೀಗೆ ಮಂಗಳೂರು ತಾಲೂಕು ಬೋರ್ಡಿನ ಪ್ರೆಸಿಡೆಂಟರೂ ವೈಸ ಪ್ರೆಸಿಡೆಂಟರೂ ಬಿನ್‌ಸರಕಾರ ಮೆಂಬರರಾದದ್ದು ಒಂದು ಸಂತೋಷದ ವಿಷಯವಾಗಿದೆ.

ಬೋಳೂರು ಮಾರಿಗುಡಿಯ ಚಿನ್ನಾಭರಣಗಳನ್ನು ಕಳವು ಮಾಡಿದ ಪುಟ್ಟಣ್ಣನಿಗೆ ೩ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಬೋಳಾರದ ಅಲ್ಬುಕರ್ಸರ ಹಂಚು ಕಾರ್ಖಾನೆಯಿಂದ ತಾಮ್ರದ ಕೊಡ ಕಳವುಮಾಡಿದ ಮಂಜಪ್ಪ ಶೆಟ್ಟಿಗೆ ೨ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಸೆಶ್ಶನ್ಸ್ ಮೊಕದಮೆ ತನಕೆ ಬಗ್ಗೆ ಬಂದಿದ್ದ ಬಂದಿವಾನರ ಪೈಕಿ ಈಶ್ವರ ಎಂಬವನು ಇಲ್ಲಿಯ ಸಬ್‌ಜೈಲಿನಿಂದ ತಲೆತಪ್ಪಿಸಿಕೊಂಡಿರುವನೆಂತ ತಿಳಿಸಿತ್ತಷ್ಟೆ. ತಲೆತಪ್ಪಿಸಿಕೊಂಡ ಬಂದಿವಾನನನ್ನು ಇದೇ ತಾ. ೨೯ರಲ್ಲು ಪೋಲಿಸಿನವರು ಸಂಪಾಜೆಯಲ್ಲಿ ಕೈದುಮಾಡಿರುತ್ತಾರೆಂಬ ವಾರ್ತೆ ಬಂದದೆ.

ಮೆಸ್ಸರ್ಸ್ ಸುಜೀರ್ ನಾಗಪ್ಪನಾಯಕ ಮತ್ತು ಕೊಂಚಾಡಿ ಅಪ್ಪಯ್ಯ ಶ್ಯಾನುಭಾಗರವರ ಜವಳಿ ಅಂಗಡಿಯ ಬಾಗಲು ಮುರಿದು ೫೦೦-೬೦೦ ರೂಪಾಯಿ ಕ್ರಯಬಾಳುವ ವಸ್ತ್ರಗಳನ್ನು ಕಳವುಮಾಡಿದ್ದರಾಗಿ ಆಪಾದಿಸಲ್ಪಟ್ಟ ೧ನೇ ಆಪಾದಿತ ಉಂಜಿಬ್ಯಾರಿಗೆ ೬ ತಿಂಗಳ ಕಠಿಣ ಸಜಾ, ೨ನೇ ಆಪಾದಿತ ಉಸ್ಸಿಬ್ಯಾರಿಗೆ ೬ ತಿಂಗಳ ಕಠಿಣ ಸಜೆ, ೩ನೇ ಆಪಾದಿತ ಮೊಯ್ದಬ್ಬಬ್ಯಾರಿಗೆ ೫ ತಿಂಗಳ ಕಠಿಣ ಸಜಾ ವಿಧಿಸೋಣಾಗಿರುತ್ತದೆ.

ಮ|| ರಾ|| ರಾ|| ಬೆಂಚ್ ಮೇಜಿಸ್ಟ್ರೇಟರಾದ ಅತ್ತಾವರ ಬಾಲಕೃಷ್ಣ ಶೆಟ್ಟಿ, ವಕೀಲರುಗಳಾದ ಮ|| ರಾ|| ರಾ|| ಎಮ್. ಮಾಧವರಾವ್ ಬಿ. ಎ. ಬಿ. ಎಲ್. ಮ|| ರಾ|| ರಾ|| ಎನ್. ಎನ್. ಸುವರ್ಣ ಬಿ. ಎ. ಬಿ. ಎಲ್. ಮತ್ತು ಡಾಕ್ಟರ್ ಎಮ್. ಶಿವರಾವ್—ಈ ಮಹನೀಯರು ಜಿಲ್ಲೆಯ ಮುಖ್ಯ ಪ್ರಾಂತ್ಯಗಳಲ್ಲಿ ಹೋಮ್‌ರೂಲ್‌ಲೀಗಿನ ಶಾಖೆಗಳು ಸ್ಥಾಪಿಸೋಣಾಗಿ ನಮ್ಮ ಜಿಲ್ಲೆಯ, ಸಹಕಾರವೂ ಸಹ ಹೋಮ್‌ರೂಲ್‌ಲೀಗಿನವರಿಗೆ ದೊರಕುವಂತೆ ಈ ಲೀಗಿನ ಮೆಂಬರರಾಗಿ ಸೇರಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಈ ಪಟ್ಟಣದ ಮತ್ತು ಈ ಜಿಲ್ಲೆಯ ಇತರ ಕಡೆಗಳಲ್ಲಿಯ ಮುಂದಾಳುಗಳೂ ಪ್ರಜಾ ಸಾಮಾನ್ಯರೂ ಲೀಗಿನ ಮೆಂಬರರಾಗಿ ಸೇರಿಕೊಂಡು ಹೋಮ್‌ರೂಲ್‌ಲೀಗಿನ ಉದ್ದಿಷ್ಟ ಹೇತುಗಳನ್ನು ನೆರವೇರಿಸುವದರಲ್ಲಿ ಭಾಗಿಗಳಾಗುವರೆಂಬುದಾಗಿ ಕೋರುತ್ತೇವೆ.

ಸ್ವೀಕಾರ:—"ಪರಮಾರ್ಥ" ಎಂಬ ಬೆಂಗಳೂರಲ್ಲಿ ಪ್ರಕಟವಾಗುತ್ತಿರುವ ಕನ್ನಡ ಮಾಸಪತ್ರಿಕೆಯ ಪ್ರತಿಗಳನ್ನು ಆತ್ಯಾದರದಿಂದ ಸ್ವೀಕರಿಸಿರುವೆವು. ಇದರಲ್ಲಿ ವೇದ ವೇದಾಂತ ಪುರಾಣ, ಇತಿಹಾಸ, ಇವುಗಳ ರಹಸ್ಯಾರ್ಥಗಳೂ ಭಕ್ತಿ ನೀತಿ ಧರ್ಮ ಜ್ಞಾನ ವೈರಾಗ್ಯ ಇವುಗಳನ್ನು ಬೋಧಿಸುವ ಉಪಾಖ್ಯಾನಗಳೂ ಸೇರಿಕೊಂಡಿವೆ. ಭಾಷಾ ಶೈಲಿಯು ಸುಲಭವಾಗಿದೆ. ಕನ್ನಡಿಗರು ಈ ಮಾಸಪತ್ರಿಕೆಗೆ ತಕ್ಕ ಪ್ರೋತ್ಸಾಹ ಕೊಡಬೇಕಾಗಿ ಹಾರೈಸುವೆವು.

ಆನಂದಚಂದ್ರಿಕೆ:—ಬೆಂಗಳೂರಲ್ಲಿ ಪ್ರಕಟವಾಗಿರುವ ಆನಂದಚಂದ್ರಿಕೆ ಎಂಬ ಕನ್ನಡ ಮಾಸ ಪತ್ರಿಕೆಯ ೧ನೇ ಸಂಚಿಕೆಯು ನಮ್ಮ ಹಸ್ತಗತವಾಗಿರುತ್ತದೆ. ಈ ಮಾಸ ಪತ್ರಿಕೆಯಲ್ಲಿ ಸ್ತ್ರೀ ಪುರುಷರೆಲ್ಲರಿಗೂ ಬೇಕಾದ ಉಪಯುಕ್ತ ವಿಷಯಗಳೂ ಹಿಂದೂಸ್ಥಾನದ ಪ್ರಸಿದ್ಧ ಸ್ತ್ರೀಪುರುಷರ ಮತ್ತು ದೇಶೀಯ ರಾಜರ ಚಿತ್ರಪಟಗಳು ಅವರವರ ಸಂಕ್ಷಿಪ್ತ ಚರಿತ್ರೆಗಳೊಂದಿಗೆ ಅಡಗಿವೆ. ಈ ಪತ್ರಿಕೆಯು ಈಗಿನ ಸ್ಥಿತಿಯನ್ನು ನೋಡುವಾಗ ಮೈಸೂರಲ್ಲಿ ಪ್ರಕಟವಾಗುವ ಮಾಸ ಪತ್ರಿಕೆಗಳಲ್ಲಿ ಇದು ಉಚ್ಚ ಸ್ಥಾನವನ್ನು ಪಡೆಯುವದು ಎಂದು ಹೇಳಲು ಸಂದೇಹ ತೋರುವದಿಲ್ಲ.

ಕಾವಡಾದ್ವೈತ—ಕುಮಟೆ:—ಕುಮಟೆಯಲ್ಲಿ ಪ್ರಕಟವಾಗುವ ಈ ಪಾಕ್ಷಿಕ ಪತ್ರಿಕೆಯ ೨ ಸಂಚಿಕೆಗಳು ನಮ್ಮ ಕೈಸೇರಿರುವವು. ಈ ಪತ್ರಿಕೆಯು ಪರಿಮಾಣದಲ್ಲಿ ಸಣ್ಣದಾದರೂ ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳ ಲೇಖನಗಳಿಂದ ಕೂಡಿಕೊಂಡು ಉತ್ತರ ಕನ್ನಡ ಪ್ರಾಂತ್ಯದ ಸಮಾಚಾರ ಪತ್ರಿಕೆಯಾಗಿ ಹೊರಡಹತ್ತಿದೆ. ಆ ಪ್ರಾಂತ್ಯದಲ್ಲಿ "ವಿಚಾರಿ" ಎಂಬ ಬೇರೊಂದು ಪತ್ರಿಕೆಯು ಬಹಳ ವರ್ಷದಿಂದ ಇದೆ. ಆದರೆ ಈ ಹೊಸ ಪತ್ರಿಕೆಯಿಂದ ಆ ಜಿಲ್ಲೆಗೆ ತುಂಬಾ ಪ್ರಯೋಜನವಾದೀತೆಂತ ನಂಬುತ್ತೇವೆ.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಶತಧೌತ ಘೃತಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ: —"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪರಿಮಳ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road. BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರಿಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಕ್ಯಾನಾಡಿನ ವಿಶವಲ್‌ನಿಂದ ಮ. ಜಿ. ರಸ್ಕಿನ್‌ರು ಬರಿಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೊನಿಕ್‌ಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:—

The Malariana Company,
Kankanady S. C.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ ಹಳೆತು	7—6—0ರಿಂದ	7—14—0
ಗುಡ್ಡು ,, ಹೊಸ್ತು	6—4—0	6—8—0
ಮಸ್ಸೂರಿ ,, ,,	6—0—0	6—6—0
ಹೊಸ ರಾಶಿ ,,	4—14—0	6—6—0
ಅವ್ವಲ್ ಬೆಳ್ತಿಗೆ ,,	6—4—0	6—8—0
ಗುಡು ಬೆಳ್ತಿಗೆ ,,	5—8—0	5—12—0
ರಂಗೂನು ಬೆಳ್ತಿಗೆ ಗೋಣಿ 1ರ	10—0—0	10—4—0
ಗೋದಿ ಗೋಣಿ 1ರ	11—4—0	12—0—0
ಹುರುಳಿ ಗೋಣಿ 1ರ	5—10—0	5—12—0
ಕಡಲೆ ಗೋಣಿ 1ರ ಬೊಂಬ್ಯ	9—8—0	10—8—0
ಕೊಗರಿ ಗೋಣಿ 1ರ		10—8—0
ಕೊಗರಿ ಬೇಳೆ ಗೋಣಿ 1ರ	12—8—0	15—8—0
ಉದ್ದು ಗೋಣಿ 1ರ	10—8—0	11—4—0
ಊರುಬೆಲ ಖಂಡಿ 1ರ		50—0—0
ಉಪ್ಪು ಗೋಣಿ 1ರ		4—7—0
ಕೊಬ್ರಿ ಖಂಡಿ 1ರ	95—0—0	105—8—0
ಕೊಬ್ರಿಹಿಂಡಿ ಖಂಡಿ 1ರ		23—0—0
ಎಳ್ಳಿಂಡಿ ಖಂಡಿ 1ರ ಬೊಂಬ್ಯ	25—0—0	30—0—0
ಕೊಬ್ರಿ ಎಣ್ಣೆ ಮುಡಿ 1ರ	7—0—0	7—2—0
ಎಳ್ಳೆಣ್ಣೆ ಮುಡಿ 1ರ(ಕುರಾಸನ)		4—10—0
ಚಿಮಿಣಿ ಎಣ್ಣೆ ಪೆಟ್ಟಿಗೆ 1ರ	6—0—0	6—11—0
ಮೋರಿಸ್ ಸಕ್ಕರೆ ಮುಡಿ 1ರ		5—10—0
ಕಾಫಿ ಖಂಡಿ 1ರ	225—0—0	235—0—0
ಹೊಸಬೀಗ್ಲೋಟು ಖಂಡಿ1ರ	82—0—0	85—0—0
ಹೊಸ ಗೇರುಬೀಜ ಮುಡಿ 1ರ	2—12—0	2—13—0
ಕಬ್ಬಿಣ ಖಂಡಿ 1ರ		76—0—0
ತಾಂಬ್ರ ತಗಡು ಮುಡಿ 1ರ	26—0—0	27—0—0
ತಾಂಬ್ರ ಪಾತ್ರಗಳು ಮುಡಿ 1ರ		28—0—0
ಚೀನ ಬೆಳ್ಳಿ ಸೇರು 1ರ		24—0—0
ಪಚ್ಚೆಹೆಸರು ಮುಡಿ 1ರ	5—1—0	5—2—0
ಕಾಳುಮೆಣಸು ಖಂಡಿ 1ಕ್ಕೆ		260—0—0

ರಾ. ಮಟ್ಟಿಗೋಪಾಲಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ ಪದಗಳೂ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಮಟ್ಟಿನ ಪದಗಳೂ, ದಾಸರ ಕೀರ್ತನೆಯ ನಮೂನೆ ಪದಗಳೂ, ನಾಟಕದ ನಮೂನೆ ಹಿಂದೂಸ್ಥಾನಿ ಮಟ್ಟಿನ ಕೀರ್ತನೆಗಳೂ, ಮಂಗಲ ಪದಗಳೂ, ಶೋಭನ ಪದಗಳೂ, ಜೋಗುಳ ಪದಗಳೂ, ಉದಯ ರಾಗ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಟಪ್ಪಾಲ ಹಾಸಲು ಸಮೇತ 4 ಆಣೆಗೆ ಸಿಕ್ಕುವದು.

ಕೊಂಚ ಪ್ರತಿಗಳು ಮಾತ್ರ ಇವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಶಾಸ್ತ್ರ ವಿಶ್ರುತವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಸಿಹಿಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

100 ರೂಪಾಯಿಗಳ ಬಹುಮಾನ.

ಮದರಾಸ್ ಗವರ್ನರ್ಮೆಂಟಿನವರಿಂದ ರಿಜಿಸ್ತರ್ ಮಾಡಲ್ಪಟ್ಟಿರುವ

ಸರ್ವ ಚೇಳು ವಿಷ ಸಂಜೀವಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿ ಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುವೆವು. ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳು ವಿಷ ಸಂಜೀವಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನಮ್ಮ ಔಷಧವನ್ನು ವಾಪಸು ಮಾಡಿ ತಮ್ಮ ಮೊಬಲಗನ್ನು ವಾಪಸು ಪಡಿಯುವದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಶೀಸೆ 1ಕ್ಕೆ 8 ಅಣೆ; ಡಜನ್ 1ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪೆನಿ,
ಸಾಹುಕಾರಪೇಟೆ, ಮದರಾಸು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರಹ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮ ತರಹಗಳಿಗೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ಗಿಕ್ಕೆ ೪ ತೊಲೆ, ದುಯಂ ರೂಪಾಯಿ ಗಿಕ್ಕೆ ೮ ತೊಲೆ, ಶೀಯಂ ರೂಪಾಯಿ ಒಂದಕ್ಕೆ ೧೧ ತೊಲೆ, ಚಾರಂ ರೂಪಾಯಿ ಗಿಕ್ಕೆ ೧೫ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
SIROMANI NARAYANA CHARYA & CO, ಚೌಕಾಂಬಾ, ಕಾಶಿ.
Choukhambay, BENARES CITY.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿ ಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು! ೧೬ ಮೊಳ!! ಬಾಳಿಕೆ ಬರುವುದು!!!

ಗೋವರ್ಜಾನ್ ಬಳ್ಳಿ ಶೀರೆ ರೂ. ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೀ ಮಲ್ಲಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟೆ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹೆಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಯುಕಲಿಪ್ಟಸ್ ಒಯಿಲ್.

(ನೀಲಗಿರಿ ಎಣ್ಣೆ).

ಇದೊಂದು ಇಲ್ಲದಿದ್ದರೆ ಎಂಥಾ ಬಾಮ್ ಆಗಲಿ ಅಥವಾ ಅಂಜನವಾಗಲಿ ನಡಿಯಲಾರದು. ನೀಲಗಿರಿ ಎಣ್ಣೆಯನ್ನು ಸೇರಿಸಿಕೊಂಡು, ಅಥವಾ ರೂಪಾಂತರಗೊಳಿಸಿಕೊಂಡು ನಾನಾ ಬಗೆಯ ಬಾಮುಗಳೂ ಅಂಜನಗಳೂ ತಯ್ಯಾರುಮಾಡಲ್ಪಡುವವು. ನೀಲಗಿರಿ ಎಣ್ಣೆಯ ಗುಣವು ಅಷ್ಟು ಧಾರಾಳವಾಗಿದೆ.

ಅಧಿಕ ಬೆಲೆಯ ಬಾಮುಗಳೂ ಅಂಜನಗಳೂ ಇವುಗಳನ್ನು ತೆಗದಿಡುವದಕ್ಕಿಂತ ಬರೇ ಕ್ರಯ ಆಣೆ 5ರ ಒಂದು ನೀಲಗಿರಿ ಎಣ್ಣೆಯ ಬುಡ್ಡಿಯನ್ನು ಸದಾ ಪ್ರಯಾಣ ಕಾಲದಲ್ಲಿಯೂ ಗೃಹಗಳಲ್ಲಿಯೂ ಸಂಗ್ರಹಿಸಿಡುವದು ಎಷ್ಟೋ ಗುಣಕಾರಿಯಾಗಿದೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ವ್ಯಾಪಾರಸ್ಥರಿಗೆ ಕಮಿಶನ್ ಕೊಡೋಣಾಗುವದು. ಇತರ ಎಲ್ಲಾ ಔಷಧಿಗಳ ಸಂಗ್ರಹವೂ ನಮ್ಮಲ್ಲಿರುವದು.

ಟಿಸ್ಯು ಮತ್ತು ಹೋಮಿಯೋಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರಹೋಗಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರೆನ್ಸಲೇಟರಾದ ಮ॥ ರಾ॥ ಬೆನಗಲ್ ರಾಮರಾವ್‌ರವರಿಂದ

ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸಧಾಹಾರ ವಿವೇಚನೆ ಬೆಲೆ 2 ಆಣೆ, ಇತರ ಪ್ರಬಂಧಗಳು— ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಲೀಲೆ 3 ಆಣೆ ಇತ್ಯಾದಿ.

ಗೇಣಿಚೀಟು ಫೋರ್ಮುಗಳು ಮತ್ತು ಕೋರ್ಟು ಫೋರ್ಮುಗಳು, ಲೆಕ್ಕ ಬರಿಯುವ ಬಗ್ಗೆ ಬೇಕಾದ ಪುಸ್ತಕಗಳು ಬಿಕಂಗೆ ಸಿದ್ಧವಿರುತ್ತವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಚಕ್ರಕೋಡಿ ವಿಷ್ಣುಶಾಸ್ತ್ರಿಗಳ ಮಗ ಸುಬ್ಬಣ್ಣ ಶಾಸ್ತ್ರಿಗಳು ಗುಣಿಸಿ
ಚ॥ ಗೋಪಾಲಕೃಷ್ಣ ಶಾಸ್ತ್ರಿಗಳು ಮತ್ತು
ತಿರಂಕಲ್ಲು ಸುಬ್ರಾಯ ಜೋಯಿಸರಿಂದ
ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗಿರುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3; 1 ದರ್ಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0 ಬೇಕಾದವರು ಬೇಗನೇ ಬರಕೊಳ್ಳುವದು.

ವಿಳಾಸ:—
ಕೆ. ಅಣ್ಣಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಮಾರಾಟಕ್ಕೆ ಸಿದ್ಧವಾಗಿವೆ.

ಗೇಣಿ ರಶೀದಿ ೧೦೦	ಫೋರ್ಮುಗಳ	ಪುಸ್ತಕ ೧ ಕ್ಕೆ		೦	೧೨	೦
,, ೫೦	,,	,,		೦	೬	೦
,, ೨೫	,,	,,		೦	೩	೦
ಕುರಿ ಫಂಡಿನ ರಶೀದಿ ೧೦೦	,,	,,		೦	೮	೦
,, ೫೦	,,	,,		೦	೪	೦
,, ೨೫	,,	,,		೦	೨	೦
ಪರಸ್ಪರ ಸಹಾಯಕ ಸಂಘಗಳ ಬಗ್ಯೆ ರಶೀದಿ ೧೦೦	ಫೋರ್ಮುಗಳ	ಪುಸ್ತಕ ೧ಕ್ಕೆ		೦	೮	೦
ಯಾವದಕ್ಕಾದರೂ ಉಪಯೋಗಿಸಲು ಅನುಕೂಲವಾದ ರಶೀದಿ ೧೦೦	ಫೋರ್ಮುಗಳ	ಪುಸ್ತಕ ೧ಕ್ಕೆ		೦	೮	೦
,, ೫೦	,,	,,		೦	೪	೦
,, ೨೫	,,	,,		೦	೨	೦
ಇಂಗ್ಲಿಷು ಡಿ. ೧೦೦	,,	,,		೦	೧೨	೦
,, ಡಿ. ೫೦	,,	,,		೦	೬	೦
,, ಡಿ. ೨೫	,,	,,		೦	೩	೦
ಕೋರ್ಟು ಫೋರ್ಮುಗಳು ೧೦೦ಕ್ಕೆ				೦	೧೨	೦
ಗೇಣಿಚೀಟು	,,	,,		೦	೧೨	೦
ಪರ್ಮಿಟು	,,	,,		೦	೧೨	೦
ಪ್ರೊಮಿಸರಿ ನೋಟು	,,	,,		೦	೮	೦

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟದ ಬಗ್ಯೆ.

ತರಿಕೆರೆ ರೈಲ್ವೆ ಸ್ಟೇಷನ್‌ನಿಂದ 40 ಮೈಲು ದೂರವಿದ್ದು ಮೈಸೂರು ಸಂಸ್ಥಾನ ಕಡೂರು ಜಿಲ್ಲಾ ಕೊಪ್ಪದ ಹತ್ತರ ಇರುವ ಹಟ್ಟಿನ್ ಕೋಡಿಗಿ ಮತ್ತು ಬೆಲ್ಗೋಡು ಎಂಬ 2 ಕಾಫಿತೋಟಗಳು ಮಾರಾಟಕ್ಕೆ ಇರುತ್ತವೆ. ಈ ತೋಟಗಳಿಗೆ ಕುಮಾರು 8 ಮೈಲು ದೂರದೊಳಗೆ ಮದ್ರಾಸ್ ಮತ್ತು ಸದರ್ನ್ ಮಾರಾಟಾ ರೈಲ್ವೆ ಕಂಪೆನಿಯವರ ಸ್ಟೀಮ್ ಟ್ರಾಮ್‌ವೆ ಸಹ ನಡಿಯುವರೆ ಪ್ರಾರಂಭವಾಗುತ್ತದೆ. ಈ ತೋಟಗಳು 3000 ಅಡಿ ಎತ್ತರದಲ್ಲಿರುತ್ತವೆ. ವರ್ಷಕ್ಕೆ ಸರಾಸರಿ 130 ಇಂಚು ಮಳೆ ಸುರಿಯುತ್ತಿರುತ್ತದೆ. ಒಟ್ಟಿಗೆ ವಿಸ್ತೀರ್ಣ 661 ಎಕ್ರೆ, ಕಾಡು ಇದ್ದು ಈ ಪೈಕಿ 200 ಎಕ್ರೆ ಸ್ಥಳಗಳಲ್ಲಿ ಕಾಫಿಗಿಡಗಳೂ, ಅಡಿಕೆಮರಗಳೂ, ಗದ್ದೆಗಳೂ, ಬಂಗ್ಲೆ, ಗೋಡವುನ್, ರೈಟರ್‌ಗಳ 2 ಮನೆಗಳು, ಸ್ಟೋರು ಮತ್ತು ನಾಜೂಕಾಗಿ ಕಟ್ಟಲ್ಪಟ್ಟ ಕೆಲವು ಆಳುಗಳ ಮನೆಗಳೂ ಇರುತ್ತವೆ. ಖ್ಯಾಸಿ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಎಲ್ಲಾ ವಿಲೇವಾರಿ ತಿಳಕೊಳ್ಳಬಹುದು.

ಎಫ್. ಜೆ. ಪಾರ್ಟನ್ಸ್,
ಕೊಪ್ಪ ಪೋಸ್ಟು,
ಕಡೂರು ಡಿಸ್ಟ್ರಿಕ್ಟ್.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ.

— ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

ಸಪ್ತಶತೀ. ಕನ್ನಡಾಕ್ಷರ, ರೇಶ್ಮೆ ಬೈಂಡ್, ಪಾಕೇಟ್ ಸ್ಯಾಜು ಪಾರಾಯಣಕ್ಕೂ ಅತ್ಯುಪಯೋಗವಾಗುವಂತೆ ಎಲ್ಲಾ ವಿಧಾನದಿಂದೊಡಗೂಡಿದೆ. ಬೆಲೆ ಪುಸ್ತಕ ೧ಕ್ಕೆ ೪ ಆಣೆ. ಪೋಸ್ಟು ಖರ್ಚು ಬೇರೆ.

ವಿಳಾಸ:—

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, **S. P. RAJA & Co.,**
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ಸಮೃದ್ಧಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ,

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

.... । ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂಚಾಂಗವರ್ಧನಂ । ಕಾಸಶ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತೇ ॥

ಸ್ತ್ರೀಷುಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ರೂಪಮಪಾಸ್ಯ ರೂಪಂ । ಬಿಭರ್ತಿ ರೂಪಂ ನವಯೌವನಸ್ಯ ।
ಜೀವನಾನಂದಸ್ಯಾಸ್ಯ ನರಃ ಪ್ರಯೋಗಾಲ್ಲಭೇತ ಜೀರ್ಣೋಽಪಿ ಕುಟೀಪ್ರವೇಶ್ಯಾತ್ ॥

"........ವಿಕೃತಸ್ವರ, ಅನ್ನಕೋಶದ ರೋಗಗಳು, (ಅಜೀರ್ಣ ಮುಂತಾದ್ದು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ, ಮುದುಕರಿಗೆ, ಮಕ್ಕಳಿಗೆ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣಪಡಿಸುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿತವಾಗುವಂತೆ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತುವನ್ನು ಪೂರ್ಣ ಗಟ್ಟಿಪಡಿಸುವುದೇ ಮುಂತಾದವಕ್ಕೆಲ್ಲ ಉಪಯೋಗಿತವೆ ಮುದಿಯಾಗಲ್ಪಟ್ಟ ಶರೀರವನ್ನು ನವಯೌವನಶರೀರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ವೇಶ್ಯಾಲ್ಯಂಪಟನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅವರ ಸಂಗಡಲೇ ಜ್ವರ, ಕೆಮ್ಮು, ಎರೆಹುಳು, ಕಿವಿಸೋವು ಸರ್ಪ ಕಡಿತಗಳಿಗೂ, ಸುಖಭೇದಿಗೂ ಆಸುವ ಅವು ತವಟೆಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).
ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ಹಿಂದುಸ್ಥಾನ, ಬರ್ಮಾ, ಸೀಲೋನ್ ಮೊದಲಾದ ದೇಶಗಳಲ್ಲಿ ಪ್ರಖ್ಯಾತಿ ಪಡೆದ

ವೆಸ್ಟ್ ಎಂಡ್ ವಾಚು ಕಂಪೆನಿಯ ವಾಚುಗಳು.



ಸರಿಯಾದ ಟೈಮ್ ಕೊಡುತ್ತದೆ.

		ನಿಕ್ಕಲ್ ಬೆಳ್ಳಿ. ಸಣ್ಣ 16 ಸ್ಯಾಜು.			ಓಪನ್‌ಫೇಸ್. ಮಿಡಿಯಂ 18 ಸ್ಯಾಜು.		
ನಂಬ್ರ	1	12	0	0	11	0	0
,,	2	13	0	0	12	0	0
,,	3	9	0	0	8	4	0
,,	4×	10	0	0	10	0	0
,,	5 A ಫುಲ್ ಜುವೆಲ್ ...	14	0	0	14	0	0
,,	6 ಕಂಪಿಟಿಶನ್ ...	18	0	0	18	0	0
,,	7 ಸಿವಿಲ್	22	0	0	22	0	0
,,	8 ಕ್ವೀನ್ ಎನ್ ಪೋಕೆಟ್ ಸ್ಯಾಜು	15	8	0			
	ಮತ್ತು ರಿಸ್ಟ್ ವಾಚು ...	15	8	0			
,,	9 ರಿಸ್ಟ್ ವಾಚು ಬೆಳ್ಳಿ ಕೇಸು	30	0	0			
	ರೋಲ್ಡ್ ಗೋಲ್ಡ್ ಕೇಸ್	30	0	0			
	9 ಕೆರೆಟ್ ಗೋಲ್ಡ್	40	0	0			
	14 ,, ,, ...	50	0	0			
,,	10. ಬೆರೆಲ್ ಕೇಸ್ ರಿಸ್ಟ್ ವಾಚು ನ್ಯೂ ಪೇಟೆಂಟ್ ಲಿವರ್ ಮೆಶಿನ್						
	11 ಸ್ಯಾಜ್, ಬೆಳ್ಳಿ	46	0	0			
	18 ಕೆರೆಟ್ ಗೋಲ್ಡ್	150	0	0			

ಮೇಲೆ ಹೇಳಿದ ಚಿನ್ನ ಮತ್ತು ಬೆಳ್ಳಿ ವಾಚುಗಳಲ್ಲದೆ ಇನ್ನು ಹಲವು ತರದ ವಾಚುಗಳೂ ಅವುಗಳ ಸಾಮಾನುಗಳೂ ನಮ್ಮಲ್ಲಿ ರಕಂ ಆಗಿಯೂ ಚಿಲ್ಲರೆಯಾಗಿಯೂ ದೊರಕುವದು. ಪರಸ್ಥಳದ ಆರ್ಡರುಗಳು ವಿ. ಪಿ. ಮೂಲಕ ಕಳುಹಿಸಲಾಗುವದು. ವಿ. ಪಿ. 6 ಆಣೆ ಹೆಚ್ಚಿಗೆ. ಅರ್ಧ ಆಣೆಯ ಸ್ಟಾಂಪು ಕಳುಹಿಸಿದರೆ ಕ್ರಯ ಪಟ್ಟಿ ಕಳುಹಿಸಿಕೊಡಬಹುದು.

ವಿಳಾಸ:— **N. GOPALJEE,**
Watch maker.
JOOMA MASJID S[illegible] MEMON STREET,
BOMBAY 2.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ!!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲ ಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಹಿಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಉದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೀ ಸೆರಗು ಹೋಗುವದು, ಬಿಳೀ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡತಕ್ಕದ್ದೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ಕಾರ್ಕಳದಿಂದ ಒಬ್ಬ ಮಹಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ:— ಟೂರಕಬ್ ಸೇವಿಸಿ 6 ವರ್ಷಗಳಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ಪರಿಹಾರವಾಗಿರುತ್ತದೆ. ಇತ್ಯಾದಿ.

ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ, ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು. ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದರೆ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್. ಆರ್. ಮೋಡಿ ಎಂಡ್ ಕೋ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಬ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಓದಿ ಕಲೋನ್:—ಇದು ವಿಲಾಯತಿಯಿಂದ ತರಿಸಿದ್ದಲ್ಲ ನಮ್ಮ ಔಷಧಶಾಲೆಯಲ್ಲಿಯೇ ಸ್ವತಾ ತಯಾರಿಸಲ್ಪಟ್ಟಿದ್ದು ಮನಸ್ಸು ಸಂತೋಷವಾದಂಥ ಸುವಾಸನೆಯಾದಂತಾದ್ದು. ಇದನ್ನು ದೇಹಕ್ಕೂ ಸವರಬಹುದು ಮತ್ತು ವಸ್ತ್ರಗಳಿಗೆ ಹಾಕಬಹುದು. ಇದರ ಉಪಯೋಗದಿಂದ ತಲೆಸೂಲೆ ಗುಣವಾಗುವದಲ್ಲದೆ ದೇಹಶ್ರಮವನ್ನು ತೀರಿಸುವದು. ಬಹಳ ಹೊತ್ತು ಇದನ್ನು ಉಪಯೋಗಿಸಿದವರನ್ನು ಸುತ್ತಲು ಅತಿ ವಾಸನೆಯಾಗಿರುವದು. ಸಾಧಾರಣವಾಗಿ ಅಂಗಡಿಗಳಲ್ಲಿ ಜಲಮಿಸ್ರವಾದಂತೆ ಇಲ್ಲದೆ ಇದೊಂದು ಸುಯುವಾದ ವಾಸನೆಯಾದ ವಸ್ತುವು. ಅಂಗಡಿಗಳಲ್ಲಿ ಇರುವ ಓದಿ ಕಲೋನ್ 10 ತೊಟ್ಟು ಉಪಯೋಗಿಸುವದಕ್ಕಿಂತಲೂ ನಮ್ಮಿಂದ ತಯಾರಾಗಿ ಮಾರುತ್ತಲಿರುವ ಓದಿಕಲೋನನ್ನು 2 ತೊಟ್ಟು ಬಿಟ್ಟಲ್ಲಿ ಸಾಕಾಗುವದು. ಅರ್ಧ ಔನ್ಸ್ ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು 5 ಆಣೆ ಬೀಳುವದು.

ಬಟ್ಟೆಗಳಿಗೆ ಹಾಕುವ ಸುವಾಸನಾ ದ್ರವ್ಯಗಳು:—ಮನಮೋಹಿನಿ, ಮನೋರಂಜಿನಿ, ಜಗನ್ಮೋಹಿನಿ, ಮದನವಿಲಾಸ, ಅಕ್‌ಬರ್ ಚಿರಾಯಿ, ಷಾಜಿಹಾನ್ ಚಿರಾಯಿ ಎಂಬ ಆರು ವಿಧ ಸುವಾಸನೆಗಳು ಉಂಟು. ಈ ದಿನಸುಗಳು ಈಗ ಪುಷ್ಪಿಸಿದ ಪುಷ್ಪಗಳಂತೇ ಪರಿಮಳಿಸುವದು. ಯಾವದು ಬೇಕಾದರೂ ಸೀಸೆ 1ಕ್ಕೆ 8 ಆಣೆಗಳು ವಿ. ಪಿ. 1ರಿಂದ 3 ಸೀಸೆಗಳ ವರೆಗೂ 5 ಆಣೆಗಳು ಪ್ರತ್ಯೇಕವು.

ಕೇಸರಿ ಪವುಡರ್:—ಇದು ಒಂದು ವಿಧವಾದ ಹೆಚ್ಚು ಬೆಲೆಯಾದ ಸುಗಂಧ ಮಿಶ್ರವು ಇದರಲ್ಲಿ ಸ್ವಲ್ಪ ಹುಡಿಯನ್ನು ತೆಗದು ನೀರಲ್ಲಿ ಆಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಿ ದೇಹಕ್ಕೆ ಹಚ್ಚಿಕೊಂಡದ್ದೇ ಆದರೆ ಸರ್ವಜನಗಳಿಗೆ ಸಂತೋಷವನ್ನು ಹೊಂದುವಂತೇ ಸುವಾಸನೆಯನ್ನು ಕೊಡುವದು. ವಿವಾಹಪ್ರಸ್ತ ಮೊದಲಾದ ಶುಭಪ್ರಯೋಜನಗಳಿಗೆ ಇದನ್ನು ಅವಶ್ಯ ಉಪಯೋಗಿಸಬೇಕು. ಇದನ್ನು ಶ್ರೀಗಂಧದಲ್ಲಿ ಸೇರಿಸಿದರೆ ಇತರ ಅತ್ತರ್ ಪನ್ನೀರು, ಕುಂಕುಮದ ಹೂವು, ವಗ್ಯೆರಾ ಯಾವ ಸುವಾಸನಾ ದ್ರವ್ಯಗಳು ಸೇರಿಸಬೇಕಾದವಶ್ಯವಿಲ್ಲ. ಕ್ರಯ ಸೀಸೆ 1ಕ್ಕೆ 8 ಆಣೆಗಳು 1 ಮೊದಲು 6 ಸೀಸೆವರಿಗೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು.

ಅರಗಜಾ:—ಇದು ಮತ್ತೊಂದು ವಿಧವಾದ ಪರಿಮಳ ದ್ರವ್ಯವು. ಇದನ್ನು ಪ್ರತ್ಯೇಕವಾಗಲಿ ಶ್ರೀಗಂಧದಲ್ಲಿ ಆಗಲಿ ಸೇರಿಸಬಹುದು ಪ್ರತ್ಯೇಕವಾಗಿ ಶರೀರಕ್ಕೆ ಹಚ್ಚಿಕೊಳ್ಳಬಹುದು. ಮುಖಕ್ಕೆ ತಿಲಕವನ್ನು ಇಟ್ಟುಕೊಳ್ಳಬಹುದು, ದಿವ್ಯವಾದ ಉಡುಪುಗಳಿಗೆ, ವಸ್ತ್ರಗಳಿಗೆ ಕೈಗುಡ್ಡೆಗಳಿಗೆ ಹಚ್ಚಬಹುದು. ಇದರ ಸುವಾಸನೆಯನ್ನು ಹೇಳಲು ಸಾಧ್ಯವಿಲ್ಲ. ಇದನ್ನು ದೇಹಕ್ಕೆ ಹಚ್ಚಿಕೊಂಡನಂತರ ಮೂರು ದಿವಸದ ವರಿಗೂ ಪ್ರತಿನಿತ್ಯ ಅಭ್ಯಂಗಸ್ನಾನಮಾಡಿದರೂ ಪರಿಮಳ ಬಿಡದೇ ಇರುತ್ತದೆ. ಕ್ರಯ ಡಬ್ಬಿ 1ಕ್ಕೆ 8 ಆಣೆಗಳು, 12 ಡಬ್ಬಿಗಳ ವರಿಗೂ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕ.

ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.	ನಮ್ಮ ವಿಳಾಸ:
P. SUBRA ROY.	ಪಿ. ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲೆ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಧಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು: ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ,
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀಧ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರಿ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.
ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ಕಜ್ಜಿ, ತುರಿಕೆ, ಇವುಗಳ ಮೇಲೆ ಮಲಾಮು.

ಎಷ್ಟೋ ಹಳೆಯ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಾಮಿನ ಒಂದೆ ರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳೆಯ, ಕ್ಷಮಿಸಿ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಡಬ್ಬಿಗೆ ೪ ಆಣೆ ಟಪ್ಪಾಲು ಖರ್ಚು ೮ ಡಬ್ಬಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿನಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಕೆಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧–೪–೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಅಣ್ಣ ಕಂಪೆನಿ, ಗಿರ್ಗಾಂವ್ ನಂ. ೪ ಮುಂಬಯಿ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೨ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೇಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ತುಳುಕನ್ನೋಪದೇಶ	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ	0	4	

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟೀ.

ತಿಳಿಪಿನ ಭಂಡಾರವು.

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು — ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರೆದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದಪ್ಪೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1–0–0.

Rajavaidya Narayanji Keshavaji,

Ayurvedodaya Aushadhalaya,

20, CHINA BAZAAR ROAD, MADRAS.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು

ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ 4-0-0.

ವಿಳಾಸ:—

ವಿ. ಎ. ಕೃಷ್ಣ ಅಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪ್ಯಾ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್		STANY BROTHERS
ಮತ್ತು	ಸಬ್ ಏಜಂಟರು	Sole Agents
ಹಂಪನ್‌ಕಟ್ಟೆ ಶೋಪ್ರಗಳಲ್ಲಿ	ಬೇಕಾಗಿವೆ.	C. M. C's. Toothache
ದೊರಕುವದು.		Specific, Mangalore.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ, ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈಕಾಲು ಬಾತು ಬರುವುದು, ಉಳುಕು, ಉರಿ, ಶಿರೋಭಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ 1 ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ. ಇಡೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ: — ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**

Fergusson Road, BOMBAY.

1,001 ರಾತ್ರೆ ಕಥೆಗಳು.

ಅರೇಬಿಯನ್ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. 1,032 ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಘಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನುಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನುಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ 1032 ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕ್ರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು 6 ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಕಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,

ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath, of the Mangalore Trading Association's Sharada Press, Mangalore.

Registered No. M. 488

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ. 8ನೇ ದಶಂಬರ ಶುಕ್ರವಾರ 1916. | ಸಂಚಿಕೆ 48

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಯಾಜು 2 ಆಣೆ ಕ್ರಯದ
ಅಪ್ಸಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇವರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಧಾತ್ವರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂಬುವ ಕನ್ನಡಿಗರಿಗೆ ಈ ಪುಸ್ತಕಗಳು ಆವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು..................3—12—0
ಮೇಘಸಂದೇಶ ಪೂರ್ತ..................2— 0—0
ಕುಮಾರಸಂಭವ 1, 2ನೇ ಸರ್ಗ..................1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ..................0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ; ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦ ಹಾಸಲು ೬ ಆಣೆ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

Just out! | 2nd Edition. | 167 pages!

1001 GEMS

OF

HINDU RELIGIOUS THOUGHT.

Gleaned from the written works and spoken words and teachings of ancient and modern Hindu Saints Sages and preceptors.

By

PARARY KUNHI CHANDU

Price: 1—0—0.

Apply to—M. T. A. SHARADA PRESS,
Car Street, Mangalore.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	336,227—9—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

[C]urrent Deposit Account opened free of charge.

Savings [B]ank Account opened for any sum not less than 4 As. and multiples thereof and interest paid @ 4⅛%.

L[oa]ns granted on proper securities and pledges.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	225,000—0—0
ಆಗತ ಮೂಲ ಧನವು ,, ...	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	336,227—9—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸ್ಸೆದಾರರುಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಧರ್ಮಶಾಪತ್ರಗಳಲ್ಲಿ ಠೇವಣಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದಲ್ಲಿ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗುವದು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುವವು.

Canara Bank Ltd.,
Mangalore, 1st December 1916.

P. Gopal Naik,
Secretar[y].

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತಿದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ [illegible] ತಾಲ್ಲು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. [illegible] ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯು[ವ] [ಮೂತ್ರ]ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖ[ಚಿ]ತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಬೇರಳ ಪಾಕ. ಎಲ್ಲಾ ಪ್ರದರಗಳನ್ನೂ ಮುಟ್ಟು ಕಟ್ಟಿಲೆಯ ದೋಷ[ಗಳನ್ನೂ] [illegible]ವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ[ನ್ನು] [illegible] ಅಪ್ರತ್ಯಕ್ಷವಾಗಿ. ಪಾಸ್ಟಿಕವಾಗಿದೆ. ರಾತಲಿಗೆ ೨ ರೂ.

೫. [illegible] ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible] ಗಡ್ಡೆ ಮುಖ್ಯ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ[ಪಡಿ]ಸುವದು. ತಿಂಗಳ ಔಷಧಕ್ಕೆ ಒಟ್ಟು ೪ ರೂ. ೮ ಆಣೆ.

೬. ಅಗಸ್ತ್ಯೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ[ಗಳ]ನ್ನು ಪರಿಹರಿಸತಕ್ಕ, ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲಾ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮರ್ಬ್ಬಸ, ಕಫ, ಕ್ಷಯಗಳ ಪಕ್ಕೆ [illegible]. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. [illegible], ಮೂತ್ರದಲ್ಲಿ ಧಾತುಪತನ, [illegible]ಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿ [illegible] ಆಣೆ. ೩ ಪಾಟ್ಲಿಗೆ ೧ ರೂ. ೩ ಆಣೆ.

೧೨. ಗಜಚರ್ಮ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. [illegible] [illegible] ಸುವಾಸಿಕವಾಗಿದೆ. ಕರಡಿಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕ್ಯಾಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಲ್ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ಸ್ಥಳ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,

B. M. Nath & Co., Ayurvedic Chemists

[illegible]

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಿವ್‍ರೋಜ್ ಆರ್ ಜೋಶಿರವರು, ಜೆ. ಪಿ. ಬನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮಿ। ಜೋರ್ಜ್‍ಕಿಂಗ್ ಎಫ್. ಐ. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೋಟ್ಬಿಕಾರ್ ಬ್ರದರ್ಸ್, ಉಡುಪಿ,

ಪ್ರಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಬಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ತವಕಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕಿರಿಯಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ.
ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹ್ಯಜಿಲ್ಲಾ ಮುಝುಪರಪುರ, ಬರೆಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಎಲ್ಲಾ ಮಕ್ಕಳ ರೋಗಗಳಿಗೆ ಇಂಥ ಜಾದೂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‍ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಹಾಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸ್ನಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟು**ಗಳು, ಯುಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಪ್ರೊಸ್ಪರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು, ಮಲಬದ್ಧತೆ, ಬಾಡಿದ ಮುಖ, ತಲಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು, ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ, **R. D. Kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಹಾಯವನು ಕಾಯು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಎ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗ್ಮೂರ್ ವೇನ್ ನಂ. 2. ಬೊಂಬ್ಬೆ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ಮೊದಲಾದವುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಣಿತ್ರೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರ್ ಆಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದ್ರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ.

ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾನೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ.

೫ ವರುಷಗಳು ಗ್ಯಾರಂಟಿ.



ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲಿತವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಸಂಹರಿಸುವದು ಇತ್ಯಾದಿ ಗುಣಗಳು ಇದಕ್ಕಿವೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೨ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಖರ್ಚು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಮಾರ್ಗಶೀರ್ಷ ಶು. ೧೪ ಶುಕ್ರವಾರ.

ಗುಪ್ತರವರ ಸ್ಪಷ್ಟ ಭಾಷಣ!

ಹಿರಿಯರು ಅನೇಕ ಕಡೆಗಳಲ್ಲಿ ಐಕ್ಯಮತ್ಯದ ಮಾಹಾತ್ಮ್ಯವನ್ನೂ, ಪ್ರಯೋಜನವನ್ನೂ ವರ್ಣಿಸುವರು. ಇದು ಹಿರಿಯರ ಬುದ್ಧಿವಾದದ ಅಥವಾ ಹಿತವಾದದ ಒಂದು ಮಾತೆ, ಮತ್ತೇನಲ್ಲವೆಂದು ಅದನ್ನು ಉಪೇಕ್ಷಿಸುವವರ ಅನುಭವದಲ್ಲಿಯೂ ಈ ಐಕಮತ್ಯದ ಸತ್ಯತ್ವವು ಬಂದೇ ಬರುತ್ತದೆ. ಅಣ್ಣತಮ್ಮಂದಿರಲ್ಲಿ ಐಕಮತ್ಯವು ಮೂವತ್ತಾರನೆ ಅಂಕೆಯಂತೆ ಒಂದಕ್ಕೊಂದು ಬೆನ್ನು ಹಾಕಿಕೊಂಡು ಕೂತರೆ ಅದರಿಂದ ನೆರೆಯವರಿಗೆ ಮಾತ್ರ ಲಾಭವಾಗುವುದು. ಮತ್ತು ಆದುದರಿಂದಲೆ "ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ"ವೆಂಬ ಅನುಭವದ ಮಾತು ಗಾದೆಯಾಗಿದೆ. ಸಣ್ಣ ಸಣ್ಣ ಸಂಗತಿಗಳಲ್ಲಿ ಐಕಮತ್ಯದ ಮಹತ್ವವು ಇರುವಾಗ ರಾಷ್ಟ್ರೀಯ ವಿಷಯಗಳಲ್ಲಿ ಅದರ ಉಪಯುಕ್ತತೆಯನ್ನು ತಿರಿಗಿ ಹೇಳಬೇಕಾದುದಿಲ್ಲ. ರಾಷ್ಟ್ರದೊಳಗಿನ ಕೆಲವರು ಒಂದು ಸಂಗತಿಯನ್ನು ಕೇಳುವಾಗ ಬೇರೆ ಕೆಲವರು, ಅದು ಬೇಡಂತ ಹೇಳುವುದಾಗಲಿ ಇಲ್ಲವೆ ಬೇರೊಂದನ್ನೇ ಕೇಳುವದಾಗಲಿ ನಿರರ್ಥಕವಾಗಿರುವುದು, ಮಾತ್ರವಲ್ಲ ಈ ದ್ವೈತದಿಂದ ರಾಷ್ಟ್ರದ ಉನ್ನತಿಯು ಸಾಗದು. ಐಕಮತ್ಯದಿಂದ ರಾಷ್ಟ್ರದ ಹೆಚ್ಚಿಯು ಮುಂದರಿಯುವುದು. ಆದಕಾರಣ ಐಕಮತ್ಯವು ಸೌಭಾಗ್ಯದ ಲಕ್ಷಣವಾಗಿದೆ.

ಈ ಆಲೋಚನೆಗಳು ಈ ಹೊತ್ತು ಬರಲು ಕಾರಣವೇನೆಂದರೆ, ಈಗ ಹಿಂದೀ ರಾಷ್ಟ್ರಕ್ಕೆ ಸ್ವರಾಜ್ಯವೇ ಬೇಕೆಂಬ ವಿಷಯದಲ್ಲಿ ಹಿಂದುಸ್ಥಾನದೊಳಗಿನ ಎಲ್ಲ ಪಕ್ಷಗಳ ಏಕವಾಕ್ಯತೆಯುಂಟಾಗಿದೆ. ಇದು ಬಹು ಸಂತೋಷದ ಮತ್ತು ಅಭಿಮಾನಾಸ್ಪದವಾದ ಮಾತು. ನಮ್ಮ ದೇಶದಲ್ಲಿ ಕೆಲವು ವರ್ಷಗಳಿಂದ ರಾಜಕೀಯ ಚಳವಳಿನ ಮೈದಾನಿನಲ್ಲಿ ಕೆಲವು ತಂಡಗಳು ಒಂದಕ್ಕೊಂದು ವಿರೋಧಿಗಳಾಗಿ ಜಗಳಾಡುತ್ತಿದ್ದವು. ಕೆಲವರು ಬಿರುಸು ತಂಡದವರೆಂತ, ಕೆಲವರು ಸಪ್ಪೆ ತಂಡದವರೆಂತ ಈ ಪ್ರಕಾರ ವಿವಾದ ಮಾಡಿಕೊಳ್ಳುತ್ತಿದ್ದರು. ಇವರ ಹಳೆ ಹೆಸರುಗಳು ಉಗ್ರ ಅಥವಾ ತ್ರೀವ್ರಪಕ್ಷ ಮತ್ತು ಶಾಂತಪಕ್ಷ ಹೀಗಿದ್ದವು. ಈ ಹೆಸರುಗಳು ಇನ್ನು ಮುಂದಿನ ರಾಜಕೀಯ ವಾಙ್ಮಯದಲ್ಲಿ ಅಷ್ಟೊಂದು ಪ್ರಾಮುಖ್ಯದಿಂದ ಕೇಳಿಸಲಾರವು. ಇರಲಿ. ಹಿಂದೀ ಸ್ವರಾಜ್ಯದ ವಿಷಯದಲ್ಲಿ ಬಿರುಸು ಮತ್ತು ಸಪ್ಪೆ ತಂಡದವರ ಐಕಮತ್ಯವು ಆಚರಣೆಗೆ ಹೇಗೆ ಉಂಟಾಗುತ್ತ ಬಂದಿದೆಂಬುದು ಕಳೆದ ವಾರದಲ್ಲಿ ಸರ್ ಕೃಷ್ಣ ಗೋವಿಂದ ಗುಪ್ತರವರ ಮುಂಬಾಯಿಯಲ್ಲಿ ಆದ ಭಾಷಣದಿಂದ ಸ್ಪಷ್ಟವಾಗುತ್ತದೆ. ಸರ್ ಗುಪ್ತರ ಭಾಷಣದ ಕೆಲವಂಶವನ್ನು ಕಳೆದ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ನಾವು ಕೊಟ್ಟಿರುವೆವಷ್ಟೆ. ರಾಷ್ಟ್ರೀಯ ಸಭೆಯ ಅಧಿವೇಶದ ದಿವಸಗಳು ಸಮೀಪಿಸಿದ ಕಾರಣ ಇವರು ಲಂಡನಿನಲ್ಲಿರುವ ಬ್ರಿಟಿಶ್ ಕೊಂಗ್ರೆಸ್ ಕಮಿಟಿಯ ಕಡೆಯಿಂದ ಪ್ರತಿನಿಧಿಗಳಾಗಿ ಮುಂಬಯಿಗೆ ಬಂದಿಳಿದರು. ನಮ್ಮ ವಾಚಕರಿಗೆ ಇವರ ಪರಿಚಯವನ್ನು ಮಾಡಿಕೊಡುವುದೆಂದರೆ ಒಂದೆರಡೇ ಮಾತುಗಳನ್ನು ಹೇಳಿದರೆ ಸಾಕಾಗಿದೆ. ಇವರಷ್ಟು ಶಾಂತ ಸ್ವಭಾವದವರು ಶಾಂತ ಪಕ್ಷದಲ್ಲಿ ಕೂಡ ಇಲ್ಲ. ಇವರ ಆಲೋಚನೆಗಳು ಗಂಭೀರವಾಗಿಯೇ ಇರುತ್ತವೆಂದು ಹೇಳುತ್ತಾರೆ. ಅಷ್ಟೇ ಅಲ್ಲ, ಲೆಫ್ಟನೆಂಟ ಗವರ್ನರ ಹುದ್ದೆಯ ಕೆಲಸ ಮಾತ್ರ ಇವರಿಗೆ ಸಿಗಲಿಲ್ಲ. ಅದರ ಕೆಳಗಿನ ಹುದ್ದೆಯ ಸರಕಾರಿ ನೌಕರಿಯನ್ನು ಅವರು ಅನುಭವಿಸಿರುವರು. ಮತ್ತು ಸ್ಟೇಟ ಸೆಕ್ರೆಟರಿಯ ಕೌನ್ಸಿಲಿನೊಳಗಿನ ವೈಸ ಪ್ರೆಸಿಡೆಂಟರ ಜಾಗೆ ಮೇಲೆ ಸಹ ಇದ್ದರು.

ಇಂಥವರ ರಾಜಕೀಯ ಮತದ ಪ್ರಾಮಾಣಿಕತ್ವದ ವಿಷಯದಲ್ಲಿ ಯಾರೂ ಸಾಶಂಕರಾಗಿರಬೇಕಾದುದಿಲ್ಲ. ಇವರು ಮುಂಬಯಿಗೆ ಬಂದಂದಿನಿಂದ ಎರಡು ಮೂರು ಕಡೆಗಳಲ್ಲಿ ಬೇರೆ ಬೇರೆ ಭಾಷಣಗಳನ್ನು ಕೊಟ್ಟರು. ಸರ್ ಗುಪ್ತರು ತಮ್ಮ ಭಾಷಣವಲ್ಲಿ ಹಿಂದೀ ಹೋಮರೂಲಿನ 'ಸೂತ ಉವಾಚ'ವನ್ನು ಮಾಡಿ ಅದರ ಪುಷ್ಟೀಕರಣಾರ್ಥ ಹೇಳಿದ್ದೇನೆಂದರೆ—ಈ ಮಹಾ ಯುದ್ಧದಲ್ಲಿ ಹಿಂದೀ ಜನರು ವಿಲಾಯತಿ ಸರಕಾರಕ್ಕೆ ಸಾಹಾಯ್ಯಮಾಡಿದಂದಿನಿಂದ ಹಿಂದೂಸ್ಥಾನದ ವಿಷಯದಲ್ಲಿದ್ದ ಇಂಗ್ಲಿಷರ ಪೂರ್ವಗ್ರಹವು ಬದಲಾಗುತ್ತ ಬಂದಿದೆಂದರೂ ಅದಿನ್ನೂ ಶುದ್ಧ ಮುಂಡಲವಾಗಲಿಲ್ಲ. ಆದುದರಿಂದ ಇನ್ನುಮುಂದೆ ನಮ್ಮ ಹೋಮರೂಲಿನ ವಿಷಯವಾಗಿ ಇಂಗ್ಲಂಡಿನಲ್ಲಿ ದೀರ್ಘ ಪ್ರಯತ್ನವು ನಡಿಯಬೇಕಾಗಿದೆ. "ಹೋಮರೂಲ" ಎಂಬೀ ಶಬ್ದವು ಇಂಗ್ಲಂಡಿನಲ್ಲಿ ಅನೇಕರಿಗೆ ಸೇರುವುದಿಲ್ಲೆಂದು ಹೇಳಿ ಸರಗುಪ್ತರು ಹೋಮರೂಲ ಶಬ್ದದ ಬದಲಿಗೆ ಸೆಲ್ಫ್ ಗವರ್ನಮೆಂಟ್ ಅಥವಾ ಸ್ವರಾಜ್ಯವೆಂಬ ಶಬ್ದವನ್ನೇ ಉಪಯೋಗಿಸಲು ಸೂಚಿಸಿರುವರು. ಸ್ವಂತ ದೇಶದ ಸ್ವಂತ ಹಕ್ಕುಗಳನ್ನು ಕೇಳುವಾಗ ಸ್ವಂತ ಶಬ್ದವನ್ನು ಉಪಯೋಗಿಸಲು ಗುಪ್ತರು ಉಪದೇಶಿಸುವುದು ಔಚಿತ್ಯದ ದೃಷ್ಟಿಯಿಂದಲೂ, ಸ್ವದೇಶಿತತ್ವದ ದೃಷ್ಟಿಯಿಂದಲೂ ಸಮಂಜಸವಾಗಿಯೇ ಇದೆ. ಸರ್ ಕೃಷ್ಣ ಗೋವಿಂದ ಗುಪ್ತರು ಮುಂದೆ ಹೇಳಿದ್ದೇನೆಂದರೆ—ರಾಜ್ಯಕರ್ತರು ಮಡಿಯಾದ ಸ್ವರಾಜ್ಯವನ್ನು ನಮಗೆ ಕೊಡದಿದ್ದರೂ ವಸಾಹತುಗಳ ಕ್ರಮದ ಸ್ವರಾಜ್ಯವನ್ನಾದರೂ ಒಂದುವೇಳೆ ಕೊಟ್ಟಾರು. ಆದರೆ ಬ್ರಿಟಿಷ ಸಾಮ್ರಾಜ್ಯದೊಳಗಣ ಸ್ವರಾಜ್ಯವೇ ನಮ್ಮ ಅಂತಿಮಧ್ಯೇಯವಾಗಿದೆ. ಮತ್ತು ಈ ನಮ್ಮ ಅಂತಿಮಧ್ಯೇಯವನ್ನು ಸಾಧಿಸಿಕೊಳ್ಳುವುದಕ್ಕಾಗಿ "ನಾವು ಪ್ರಾಮಾಣಿಕತನದಿಂದ ಹಿಂದೀ ಜನರಿಗೆ ಪಾತ್ರತೆಯ ಶಿಕ್ಷಣವನ್ನು ಕೊಟ್ಟೇವೆಂದು ಇಂಗ್ಲಿಷರಿಂದ ಸ್ಪಷ್ಟವಾದ ಅಭಿವಚನವನ್ನು ಪಡಕೊಳ್ಳತಕ್ಕದ್ದು.

ಈ ತರದ ಅಭಿಪ್ರಾಯವನ್ನು ಸರಗೋವಿಂದ ಕೃಷ್ಣರು ಸರ್ವಂಟ್ಸ ಒಫ್ ಇಂಡಿಯಾ ಸೊಸೈಟಿಯವರ ಭೇಟಿಯಲ್ಲಿ ಕೂಡ ತಿರಿಗೊಮ್ಮೆ ಹೇಳಿದರು. 'ಇಂತಿಷ್ಟೇ ವರ್ಷಗಳೊಳಗೆ ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ನಾವು ಖಾತ್ರಿಯಿಂದ ಕೊಡುವೆವೆಂದು ಬ್ರಿಟಿಷ ಸರಕಾರದಿಂದ ಸ್ಪಷ್ಟವಾದ ಆಶ್ವಾಸನೆಯನ್ನು ನಾವು ಪಡೆದುಕೊಳ್ಳಬೇಕಾಗಿದೆ. ಬರೇ ಈ ಆಶ್ವಾಸನೆಯ ಮೇಲೆಯೆ ನಾವು ಸುಮ್ಮನೆ ಕೂತರೆ ಸಾಲದು; ಈ ವಿಷಯದಲ್ಲಿ ನಮ್ಮದೂ ಒಂದು ಕರ್ತವ್ಯವಿದೆ, ಅದನ್ನು ನಾವು ಮಾಡುತ್ತಲೇ ಇರಬೇಕು. ಸರಗುಪ್ತರ ಈ ಉಪದೇಶವು ಈಗ ಎಲ್ಲರಿಗೆ ಮಾನ್ಯವಾದ ಸಂಗತಿಯು. ಹಿಂದೀ ಸ್ವರಾಜ್ಯದ ವಿಷಯದಲ್ಲಿ ಇವರು ಇಷ್ಟು ಸ್ಪಷ್ಟವಾಗಿ ಕೊಟ್ಟ ಅಭಿಪ್ರಾಯವನ್ನು ಕೇಳಿಯಾದರೂ, ಇನ್ನೂ ಸ್ವರಾಜ್ಯ ಶಬ್ದಕ್ಕೆ ಹೆದರಿ ಕತ್ತಲೆಯಲ್ಲಿ ಹೋಗಿ ಯಾರಾದರೂ ಸಪ್ಪೆತಂಡದವರು ಕೂತವರಿದ್ದರೆ ಅವರು ಸರಗುಪ್ತರ ಸ್ವರಾಜ್ಯದ ಸ್ಪಷ್ಟ ಪ್ರಕಾಶದ ಲಾಭವನ್ನು ಪಡಕೊಳ್ಳಬೇಕೆಂದು ನಾವು ಕೇಳಿಕೊಳ್ಳುವೆವು. ಪಕ್ಷಭೇದಗಳನ್ನು ಬಿಟ್ಟುಬಿಡಿರಿ. ರಾಷ್ಟ್ರದ ಉದ್ಧಾರಕ್ಕಾಗಿ ಎಲ್ಲರೂ ರಾಷ್ಟ್ರೀಯವೆಂಬದೊಂದೇ ಪಕ್ಷವನ್ನು ಮಾಡಿಕೊಂಡು ಪ್ರಾಮಾಣಿಕತನದಿಂದ ಯತ್ನಿಸಿರಿ. ಕರ್ತವ್ಯವು ನಮ್ಮ ಹಂಗು, ಫಲವು ಈಶ್ವರಾಧೀನ.

ದೇಶಭಕ್ತಿ.

(ಲೇಖಾಂಕ ೪)

ರಹಸ್ಯ.

ಕಳೆದ ಮೂರು ಲೇಖನಗಳಲ್ಲಿ ದೇಶಭಕ್ತಿ ಎಂದರೇನು, ಅದರ ಸಾಧನೆಗಳಾವುವೆಂಬುದನ್ನು ವಿವರಿಸಿದ್ದೆವು. ಈ ಲೇಖದಲ್ಲಿ ದೇಶಭಕ್ತಿಯ ರಹಸ್ಯವನ್ನು ಆದಷ್ಟು ಚುಟುಕಿನಿಂದ ಹೇಳಬೇಕಾಗಿ ಸಂಕಲ್ಪಿಸಿದ್ದೇವೆ. ರಹಸ್ಯವೆಂದರೆ ಗುಟ್ಟು. ಗುಟ್ಟಿನ ಮಾತುಗಳು ಹೆಚ್ಚಿರುವುದಿಲ್ಲ; ಸಾರವತ್ತಾದ ಸಂಗತಿಗಳವು, ಹದಿನೆಂಟು ಮುಖ್ಯ ಪುರಾಣಗಳು, ಅಷ್ಟೇ ಉಪಪುರಾಣಗಳು, ಇವುಗಳ ರಹಸ್ಯವೇನು? ತಾತ್ಪರ್ಯವೇನು? ಸಾರಾಂಶವೇನು? ಎಂದರೆ ಅವುಗಳ ಧ್ಯೇಯವು ಯಾವುದು? ಹದಿನೆಂಟು ಮುಖ್ಯ ಮತ್ತು ಅಷ್ಟೇ ಅಮುಖ್ಯ ಕೂಡಿ ಮೂವತ್ತಾರು ಅತಿ ವಿಸ್ತೃತ ಗ್ರಂಥಗಳ ಧ್ಯೇಯವು ಯಾವುದೆಂಬದನ್ನು ಕೇಳಿಯೋ ತಿಳಿದುಕೊಳ್ಳಬೇಕಲ್ಲದೆ ಅವುಗಳಿಂದ ತಾನೇ ಕಂಡುಹಿಡಿಯುವೆನೆಂತ ಒಬ್ಬನು ಅಭಿಪ್ರಾಯಪಟ್ಟರೆ ಅದು ಎಷ್ಟರಮಟ್ಟಿಗೆ ಕೈಗೂಡಿತೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಆ ೩೬ ಗ್ರಂಥಗಳ ರಹಸ್ಯವನ್ನು ಒಂದೇ ಚುಟುಕು ಮಾತಿನಿಂದ ಅದೇ ವ್ಯಾಸ ಮಹರ್ಷಿಗಳು ಹೇಳಿದರಂತೆ "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್" ಪರೋಪಕಾರವು ಪುಣ್ಯ ಸಂಪಾದನೆಗೆ ಕಾರಣವಾಗುವುದು; ಪರಪೀಡನೆಯು ಪಾಪಕ್ಕೆ ಕಾರಣವಾಗುವುದು. ಇದೇ ಆ ಎಲ್ಲ ಪುರಾಣಗಳಿಂದ ಹೊರಡಿಸಿದ ಬೆಣ್ಣೆ. ಪುರಾಣಗಳು ಆಕಾರದಿಂದಲೂ ದೊಡ್ಡವು, ಸಂಖ್ಯೆಯಿಂದಲೂ ಹೆಚ್ಚು. ಹೀಗಿರುವುದರಿಂದ ಅವುಗಳ ರಹಸ್ಯವನ್ನು ಹೇಳಬೇಕಾದುದೇ. ಆದರೆ ದೇಶಭಕ್ತಿಯ ವಿಮಾಂಸೆಯು ಅಷ್ಟು ದೊಡ್ಡದಿಲ್ಲ. ಹೀಗಿರಲು ಇದರ ರಹಸ್ಯವೇಕೆ? ನಿಜ. ಆದರೆ ರಹಸ್ಯವು ಗ್ರಂಥವಿಸ್ತಾರವನ್ನಾದರಿಸಿಕೊಂಡೇ ಇರುವುದಿಲ್ಲ, ಅಲ್ಲದೆ,

ನಾವು ಬರೆದಿರುವ ದೇಶಭಕ್ತಿಯು ಈ ಮಿಾಮಾಂಸೆಯ ರಹಸ್ಯವನ್ನು ಹೇಳುವುದಲ್ಲ. ದೇಶಭಕ್ತಿಯ ರಹಸ್ಯವನ್ನು ಹೇಳುವುದು.

ಪುರಾಣಗಳ, ಗೀತಾಗ್ರಂಥದ, ಇಲ್ಲವೆ ಉಪನಿಷತ್ತುಗಳ ಅಥವಾ ಬೇರೆ ಯಾವುದೇ ಧರ್ಮಗ್ರಂಥದ ರಹಸ್ಯವನ್ನು ಹೇಳದಿದ್ದರೂ ನಡಿಯುವ ಹಾಗಿದೆ. ಅವುಗಳ ಗುಟ್ಟನ್ನು ಅಡಗಿಸಿಡುವುದರಿಂದ ಯಾವ ತೊಂದರೆಯೂ ಬರುವ ಹಾಗಿಲ್ಲ. ಆದರೆ ದೇಶಭಕ್ತಿಯ ಗುಟ್ಟನ್ನು ಬಚ್ಚಿಡುವುದರಿಂದ ಮಾತ್ರ ದೇಶದ್ರೋಹವು ಘಟಿಸುವುದು. ದೇಶಭಕ್ತಿಯ ರಹಸ್ಯವನ್ನರಿಯದವನು ಯಾವ ಕೆಲಸಕ್ಕೂ ಬಾರನು. ದೇಶಭಕ್ತಿಯ ಮಾಹಾತ್ಮ್ಯವನ್ನು ತಿಳಿಯದೆ, ಇದ್ದರೂ ದೇಶಸೇವೆಯನ್ನು ಮಾಡಿದರೆ ಸಾಕಲ್ಲವೇ? ದೇಶಸೇವೆಯೆ ಮುಖ್ಯವಾದುದರಿಂದ ಅದನ್ನು ಮಾಡಿದಮೇಲೆ ಅದರ ರಹಸ್ಯವು ಹಾಗಿದೆ, ಹೀಗಿದೆ ಈ ಸಂಗತಿಗಳನ್ನೆಲ್ಲ ತಿಳಿದು ಏನು ಮಾಡಬೇಕಾಗಿದೆ? ನಿಷ್ಕಾಮ ಕರ್ಮದಲ್ಲಿ ಫಲದ ವಿಚಾರವಿಲ್ಲ, ಕರ್ತವ್ಯ ಬುದ್ಧಿಯಿಂದ ಕರ್ಮವನ್ನಾಚರಿಸುತ್ತಿದ್ದರೆ ಸರಿ. ಹಾಗೆ ಕೈಯಿಂದ ದೇಶಸೇವೆ ಆದರೆ ಸಾಕು, ಈ ಯುಕ್ತಿವಾದವು ಬಹು ಚಂದವಾಗಿ ಕಾಣುವುದೆಂಬದು ಹೌದು. ಫಲದ ವಿಚಾರವಿಲ್ಲದೆ ಮಾಡತಕ್ಕ ಕೆಲಸವೆಲ್ಲ ನಿಷ್ಕಾಮ ಕರ್ಮವೆಂದು ವಾದಿಸುವುದೇ ಮೊದಲು ಪ್ರಶಸ್ತವಲ್ಲ. ಕಾರಣ—ಯಜಮಾನನು ಗೋಣಿನ ಮೇಲಿಟ್ಟ ನೇಗಿಲಿನಿಂದ ಗದ್ದೆಯನ್ನು ಊಳುವ ಕೋಣಕ್ಕೆ 'ನಿಷ್ಕಾಮ ಕರ್ಮಿ'ಯೆಂಬ ಹೆಸರನ್ನು ಯಾರೂ ಕೊಡುವುದಿಲ್ಲ, ಕೊಡುವ ಹಾಗೂ ಇಲ್ಲ! ಅದಕ್ಕೆ ಹೇಗೆ ಫಲಜ್ಞಾನವಿಲ್ಲವೊ ಹಾಗೆಯೆ 'ಇದು ತನ್ನ ಕರ್ತವ್ಯ'ವೆಂಬ ತಿಳಿವೂ ಇಲ್ಲ. ಭಕ್ತಿ ರಹಸ್ಯವನ್ನು ತಿಳಿದು ದೇಶಸೇವೆಯನ್ನು ಮಾಡುವುದು ಹೇಗೆ, ಅದನ್ನು ತಿಳಿಯದೆ ಮಾಡುವುದು ಹೇಗೆ? ಚಿಕ್ಕ ಮಕ್ಕಳಾದರೂ (ಅವು ಒಮ್ಮೊಮ್ಮೆ ನಿಷ್ಕಾಮನೆಯಿಂದ) ಅಳುವಾಗ ಆಕಾಶದೊಳಗಿನ ಚಂದ್ರಬಿಂಬವನ್ನು ತೋರಿಸಬೇಕಾಗುತ್ತದೆ! ಇದು ಅವರ ಜೀವನದ ರಹಸ್ಯವು! ಹಾಗೆಯೆ ದೇಶಭಕ್ತನಿಗೆ ಭಕ್ತಿಯ ರಹಸ್ಯವನ್ನು ತಿಳಿಸುವುದು ಅಗತ್ಯವೇ. ಈ ರಹಸ್ಯ ಜ್ಞಾನದಿಂದಲೇ ಅವನಿಗೆ ದೇಶಾರಾಧನೆಯಲ್ಲಿ ದೃಢವಾದ ಆಸಕ್ತಿಯುಂಟಾಗುವುದು. ದೇಶಭಕ್ತಿಯು ನಿಜವಾಗಿ ಚಿಂತಾಮಣಿಯೋ ಅಥವಾ ಕಲ್ಪಲತೆಯೊ ಇದನ್ನು ನಿರ್ಣಯಿಸುವುದನ್ನು ನಾವು ವಾಚಕರಿಗಾಗಿಯೆ ಬಿಟ್ಟಿದ್ದೇವೆ. ಮಹಾ ಕವಿಗಳಲ್ಲಿ ಕಾವ್ಯಸ್ಫೂರ್ತಿಯನ್ನು ಹುಟ್ಟಿಸುವುದು ದೇಶಾರಾಧನೆಯ ಉಜ್ವಲವಾದ ಪ್ರಸಾದವಲ್ಲದೆ ಇನ್ನೊಂದಲ್ಲ. ಕಾಳಿದಾಸನ ಮೇಘದೂತ, ಬಾಣನ ಅಚ್ಛೋದ ಸರೋವರದ ವರ್ಣನೆ ಹಾಗೆಯೆ ಪ್ರಾಕೃತ ಕವಿಗಳ ಗಿರಿ, ನದಿ, ವನ ಮುಂತಾದವುಗಳ ವರ್ಣನೆ, ಇವೆಲ್ಲ ದೇಶಭಕ್ತಿಯ ತೆರೆಗಳಲ್ಲವೆ? ದೇಶದ ಕಡೆಗೆ ನೋಡಿ ಕವಿಯ ಅಂತಃಕರಣವು ದೇಶ ಪ್ರೇಮದಿಂದ ಕರಗಿ ಹೋದಾಗ—ಅಂತಃಕರಣವು ದೇಶಪರವಶವಾದಾಗ—ಕವಿಯು ಮಾತಾಡುವುದೆಲ್ಲ ಕಾವ್ಯವೆ. ಅಥವಾ ಚಂದ್ರೋದಯವಾದಲ್ಲಿ ಚಂದ್ರಕಾಂತ ಶಿಲೆಯು ತನ್ನಷ್ಟಕ್ಕೆ ಅಮೃತಧಾರೆಯನ್ನು ಸುರಿಸುವಂತೆ ದೇಶ ಪ್ರೇಮವು ಆವಿರ್ಭವಿಸಿದ್ದಲ್ಲಿ ಕವಿಗಳ ವಾಣಿಯಿಂದ ಮೇಲೆ ಹೇಳಿದಂಥಾ ಕಾವ್ಯ ಪ್ರವಾಹಗಳು ಹರಿದು ಹೋಗುವವು. ಆದುದರಿಂದ ಸಜೀವ ಮತ್ತು ಪ್ರತಿಭಾ ಸಂಪನ್ನವಾದ ಕಾವ್ಯವು ದೇಶಭಕ್ತನಾದ ಕವಿಯ ಬಾಯಿಂದಲೇ ಬರಬೇಕಲ್ಲದೆ ಬೇರೆಯವನ ಬಾಯಿಂದಲ್ಲ. ಎಂದ ಮೇಲೆ ಇಂಥಾ ದೇಶಭಕ್ತಿಯ ರಹಸ್ಯವು ಯಾವುದು? ಕವಿಯೇ ಮಾತ್ರ ದೇಶಭಕ್ತಿಯ ಬೆಳೆಯಲ್ಲ, ಮುತ್ಸದಿಯೂ ದೇಶಾರಾಧಕನು. ಈ ಮುತ್ಸದಿಯ ಹೃದಯಾಕಾಶವು ದೇಶಭಕ್ತಿಯ ತಂತಿಗಳಿಂದ ತುಂಬಿ ಹೋಗಿರುವದು! ಆ ತಂತಿಗಳು ಬೇಕು ಬೇಕಾದಾಗ ಸಂಗತಿಗಳನ್ನು ಮುತ್ಸದಿಗೆ ಪೂರಯಿಸುವುದರಲ್ಲೇ ಇರುವವು. ಸ್ವಾದಿ ಹೇಳಿದ ನಾನಾ ಘಟನಾವಿಸಂಘ ದೇಶಭಕ್ತ ಮುತ್ಸದಿಯ ವ್ರತಾಚರಣೆಯು ಗಳಿಗೆ ದಿವಸಗಳ ಏಕಾದಶಿಯಲ್ಲ, ದೇಶದ ಯೋಗಕ್ಷೇಮವೇ ಆಗಿರುವದು. ಅವನ ಸ್ವಪ್ನವು ಕೂಡ ಮುತ್ಸದಿತನದ ಆಟಗಳಿಂದ ಅವನಿಗೆ ರಂಜನೀಯವಾಗಿರುವುದು. ಎಂದ ಮೇಲೆ ಇಂಥ ದೇಶಭಕ್ತಿಯ ರಹಸ್ಯವು ಯಾವುದು? ಹೇಗೆ ಕವಿಯೋ, ಹೇಗೆ ಮುತ್ಸದಿಯೋ ಹಾಗೆಯೆ ಭಂಟನು ದೇಶಭಕ್ತಿಯಿಂದ ಉದ್ದೀಪಿತನಾಗಿ ಹೋಗುವನು. ದೇಶಭಕ್ತನಾದ ವೀರನ ಸಾಹಸವೂ, ಚಲುವಲನೆಯೂ, ಉತ್ಸಾಹಶಕ್ತಿಯೂ ಇವೆಲ್ಲ ಜ್ವಲಿಸುತ್ತಿರುವ ದೇಶಭಕ್ತಿಯೆಂಬ ಕೆಂಡದ ಕಿಡಿಗಳು! ಗಂಡಸಾದ ವೀರನು ದೇಶಮಾತೆಯ ಅಭಿಮಾನದ ಮೂರುತೆಯನ್ನು ರಕ್ಷಿಸಲು ಕೈಗೆ ಕಂಕಣವನ್ನು ಕಟ್ಟಿಕೊಳ್ಳುವಂತೆ ಝಾಂಶಿಯ ಲಕ್ಷ್ಮೀಬಾಯಿಯಂಥ ವೀರಳಾದ ಹೆಂಗಸು ಕೈಯಲ್ಲಿ ಕತ್ತಿಯನ್ನು ಧರಿಸುವಳು! ಯಾವ ಕೆಲಸಕ್ಕಾಗಿ ಗಂಡಸು ಕಂಕಣ ಧರಿಸುವಾಗ ಹೆಂಗಸು ಖಡ್ಗ ಧರಿಸುವಳೊ ಆ ದೇಶಸೇವೆಯ ಚರಿತ್ರೆಯಲ್ಲಿ ಕಂಡುಬರುವ ಇಂಥ ಆಶ್ಚರ್ಯಕಾರಕ ವಿರೋಧಗಳು ಈ ದೇಶಭಕ್ತಿಯ ಪುರಾಣದಲ್ಲಿ, ಈ ದೇಶಭಕ್ತಿಯ ವೇದಗ್ರಂಥಗಳಲ್ಲಿ ತಮ್ಮ ವಿರೋಧಾಂಶವನ್ನು ಬಿಟ್ಟು, ಕರಿಮೆಣಸು, ನಿಂಬೆಹುಳಿ, ಏಲಕ್ಕಿ, ಸಕ್ಕರೆ ಮುಂತಾದ ಬೇರೆ ಬೇರೆ ಗುಣಧರ್ಮದ ಪದಾರ್ಥಗಳು ಪಾನಕದಲ್ಲಿ ಸಮರಸವಾಗುವಂತೆ ಒಂದಕ್ಕೊಂದು ಅನುಕೂಲವಾಗಿಯೆ ಕಾಣುತ್ತವೆ! ಇದೆಲ್ಲ ದೇಶಭಕ್ತಿಯ ಮಾಹಾತ್ಮ್ಯವು! ಇಂಥ ದೇಶಭಕ್ತಿಯ ರಹಸ್ಯವು ಯಾವುದು? ಸಾರಾಂಶ ಮಹಾಕವಿಯ ಪ್ರತಿಭಾಶಕ್ತಿಗೂ, ಮುತ್ಸದಿಯ ಮಂತ್ರಶಕ್ತಿಗೂ, ವೀರನ ಉತ್ಸಾಹಶಕ್ತಿಗೂ ಕಾರಣವಾದ ಈ ದೇಶಭಕ್ತಿಯ ರಹಸ್ಯವು ಯಾವುದು? ಬೆಂಕಿ ಪೆಟ್ಟಿಗೆಯಲ್ಲಿ ದಾಹಕ ಶಕ್ತಿಯು ಇದ್ದೇ ಇರುವುದು; ಕಡ್ಡಿಯನ್ನು ಪೆಟ್ಟಿಗೆಗೆ ಉಜ್ಜುವ ಕೆಲಸ ಮಾತ್ರ ಬೇಕಾಗಿದೆ. ಹಾಗೆಯೆ ವ್ಯಕ್ತಿಗಳಲ್ಲಿರುವ ಪ್ರತಿಭಾದಿ ಶಕ್ತಿಗಳ ಕಡ್ಡಿಯನ್ನು ಇದೇ ದೇಶಭಕ್ತಿಯು ಸಂಘರ್ಷಿಸುವುದು. ಅಂಥ ದೇಶಭಕ್ತಿಯ ರಹಸ್ಯವು—ಧ್ಯೇಯವು ಯಾವುದು?

ಇದೇ ಕಾರಣಗಳಿಂದ ದೇಶಭಕ್ತಿಯ ರಹಸ್ಯವನ್ನು ಒಡಿಯಬೇಕೆಂತಲ್ಲ, ಹತ್ತಿಯ ಗಟ್ಟಿಯಿಂದ ಬೇಕಾದಷ್ಟು ಉದ್ದ ನೂಲನ್ನು ತೆಗೆಯುವಂತೆ ಕೆಲವರು ದೇಶಭಕ್ತಿಯ ಅರ್ಥವನ್ನು ಬೇಕಷ್ಟು ಉದ್ದ ಎಳೆಯುತ್ತಿದ್ದಾರೆ. ಅದು ಹಿತಾವಹವಲ್ಲ, ಈ ಮಾತು ನಮ್ಮ ಜನರಿಗೆ ತಿಳಿಯಬೇಕೆಂಬುದರಿಂದ ದೇಶಭಕ್ತಿಯ ರಹಸ್ಯವು ಯಾವುದೆಂಬ ಪ್ರಶ್ನೆಗೆ ಉತ್ತರಕೊಡಬೇಕಾಗಿದೆ. ಅನ್ಯದೇಶದ ಸಂಸ್ಕೃತಿ, ಧರ್ಮ, ವ್ಯಾಪಾರ ಈ ತ್ರಿಮೂರ್ತಿಗಳ ಪ್ರಾಣಪ್ರತಿಷ್ಠೆಯನ್ನು ತಮ್ಮ ದೇಶದೊಳಗೆ ಮಾಡಿಕೊಂಡು ತನ್ಮೂಲಕ ತಾವು ದೇಶಾಭಿಮಾನಿಗಳೆಂತ ನೆನಸುವವರು ಪ್ರತಿ ಒಂದು ದೇಶದಲ್ಲಿ ಇರುವರು. ಇದೇ ಹಿಂದುಸ್ಥಾನದಲ್ಲಿ ಮೊದಲು ಮುಸಲ್ಮಾನರ ಆಳಿಕೆಯಲ್ಲಿ ಮುಸಲ್ಮಾನರ ಸಂಸ್ಕೃತಿಯನ್ನು ಅಭಿಮಾನಪೂರ್ವಕವಾಗಿ ಅನುಕರಿಸುವವರಿದ್ದ ಹಾಗೆಯೆ ಈ ಬಂದ ಶತಮಾನದಲ್ಲಿ ಪಾಶ್ಚಾತ್ಯರ ಸಂಸ್ಕೃತಿಯನ್ನು ಅನುಕರಿಸುವರು; ಅದು ಬರೆ ದೇಶಭಕ್ತಿಯಲ್ಲ, ಸತ್ಯ ದೇಶಭಕ್ತಿಯೆಂದೆನಿಸಿಕೊಳ್ಳಹತ್ತಿದೆ! ನಾಳೆ ಒಂದುವೇಳೆ ನಮ್ಮ ಆಂಗ್ಲ ಪ್ರಭುಗಳು ಕೆಲವು ಕಾಲದ ಮಟ್ಟಿಗೆ ಈ ಹಿಂದುಸ್ಥಾನದ ಚಾರ್ಜನ್ನು ಜಪಾನಿಯರ ಕೈಗೆ ಒಪ್ಪಿಸಿದರೆ ಈ ಸತ್ಯ ದೇಶಾಭಿಮಾನಿಗಳು ಅವರನ್ನೂ ಅನುಕರಿಸುವದರಲ್ಲಿ ಪ್ರತಿಜ್ಞಾನುವರು. ಸ್ವದೇಶದ ವೈಶಿಷ್ಟ್ಯವನ್ನು ಮರೆತು ಕಂಡ ಕಂಡ ಸಂಗತಿಗಳಲ್ಲಿ ಕಂಡ ಕಂಡವರನ್ನು ಅನುಕರಿಸುವವರೂ ಹಾಗೂ ಕೇವಲ ಸ್ವಾರ್ಥದ ಬೇಲಿಯನ್ನು ತಮ್ಮ ಸುತ್ತಮುತ್ತಲು ಕಟ್ಟಿಕೊಂಡು ಪರಕೀಯ ವಸ್ತುಗಳ ವ್ಯಾಪಾರದಿಂದ ನಾಲ್ಕು ಹಣಕಾಸುಗಳನ್ನು ಗಳಿಸುವವರೂ ದೇಶಭಕ್ತರ ಪಟ್ಟಿಯಲ್ಲಿ ತಮ್ಮ ಹೆಸರನ್ನು ತರಲು ಯತ್ನಿಸುವರು! ಇನ್ನೊಂದು ಕಡೆಯಲ್ಲಿ ಇನ್ನು ಕೆಲವರು ದೇಶಭಕ್ತಿಯ ಹೇಮ ಗರ್ಭಮಾತ್ರೆಯೆಂಬ ಭವ್ಯವಾದ ಹೆಸರಿನಿಂದ ದೇಶದ್ರೋಹದ ನಂಜಿನ ಒಡೆಗಳನ್ನು ತಿನ್ನಿಸುವರು! ಪ್ರಹ್ಲಾದನು ವಿಷ್ಣುಭಕ್ತಿಯನ್ನು ಬಿಟ್ಟುಬಿಡಬೇಕು, ದೇವರ ಮಹಿಮೆಗಳನ್ನು ಕೊಂಡಾಡಬಾರದು, ದೇವರ ಸೇವೆಯನ್ನು ಮಾಡಬಾರದು, ಇವುಗಳ ಬದಲಿಗೆ ರಾಕ್ಷಸಭಕ್ತಿ, ರಾಕ್ಷಸ ಮಹಿಮೆ ಮತ್ತು ರಾಕ್ಷಸಸೇವೆ ಇವೇ ವಿಷಯಗಳ ಪಾಠಗಳನ್ನು ಅವನು ಕಲಿಯತಕ್ಕದೆಂದು ಆ ಕಾಲದ ಅರಸನಾದ, ಮಾತ್ರವಲ್ಲ, ಅವನ ತಂದೆಯಾದ ಹಿರಣ್ಯಕಶಿಪುವು ಅವನಿಗೆ ಉಪದೇಶಿಸಿದನು, ಗುರುವಿನಿಂದ ನಾಲ್ಕು ಮಾತುಗಳನ್ನು ಹೇಳಿಸಿದನು, ಆದರೂ ಪ್ರಹ್ಲಾದನು ಈ ಮಾತುಗಳಿಗೆ ಗಮನ ಕೊಡನು. ಕೊನೆಗೆ ಈ ರಾಜದ್ರೋಹಿಯನ್ನು ಬಹು ಕಠಿಣವಾದ ಶಿಕ್ಷೆಯಿಂದ ದಂಡಿಸಿದನು. ಆದರೂ ಅವನು ದೇವಭಕ್ತಿ, ದೇವಮಹಿಮೆ, ದೇವಸೇವೆ ಈ ಮೂರು ಸಾಧನೆಗಳನ್ನು ಬಿಡಲಿಲ್ಲ! ಅವನ್ನೇ ಸಂಗ್ರಹಿಸಿದನು. ಹಾಗೆಯೆ ಜನರು ತಮ್ಮ ತಮ್ಮ ದೇಶಭಕ್ತಿ, ದೇಶಮಹಿಮೆ ಮತ್ತು ದೇಶಸೇವೆ ಇವುಗಳನ್ನು ಅವಶ್ಯವಾಗಿ ಸಂಗ್ರಹಿಸಬೇಕು. ಪ್ರಹ್ಲಾದನು ದೇವಭಕ್ತನಿದ್ದನು, ದೈತ್ಯಭಕ್ತನಾಗಿದ್ದಿಲ್ಲ. ದೈತ್ಯನು ದೈತ್ಯಭಕ್ತಿಯನ್ನು ಉಪದೇಶಿಸುವುದು ಸಹಜವೇ. ಮತ್ತು ದೇವ ಪ್ರಕೃತಿಯವನು ದೇವಭಕ್ತಿಯನ್ನೆ ಮಾಡುವುದು ಅತಿ ಸಹಜವೇ. ಒಬ್ಬ ಆಂಗ್ಲ ಗೃಹಸ್ಥನಿಗೆ ಜರ್ಮನನು ಜರ್ಮನಿಯ ಭಕ್ತಿಯನ್ನು ಕಲಿಸಲು ಬಂದರೆ ಅವನ ಮುಖಶ್ರೀಗೆ ಮಂಗಳಾರತಿ ಎತ್ತಿ 'ನಮ್ಮ ಬ್ರಿಟಾನಿಯೆಯು ವಿಜಯಿಯಾಗಲಿ' ಎಂದು ಆ ಆಂಗ್ಲೇಯನು ತನ್ನ ರಾಷ್ಟ್ರಗೀತವನ್ನು ಹಾಡುವನು. ಇದೇ ಅವನ ದೇಶಭಕ್ತಿಯು. ಇಂಥ ದೇಶಭಕ್ತಿಯ ರಹಸ್ಯವು—ಧ್ಯೇಯವು ಯಾವುದು? ಮೇಲೆ ವರ್ಣಿಸಿದ ಎಲ್ಲ ಸ್ವರ್ಗೀಯ ಕಾರ್ಯಗಳಿಗೆ ಕಾರಣವಾದ ದೇಶಭಕ್ತಿಯ ಧ್ಯೇಯವು ಯಾವುದು? ಮೇಲಿನಿಂದ ಕೇಳಿಕೊಂಡು ಬಂದ ಈ ಪ್ರಶ್ನೆಯ ಉತ್ತರವು ಬಹು ಚಿಕ್ಕದಿದೆ. ಅದು ಸರ್ ಕೃಷ್ಣಗುಪ್ತರವರು ಸೂಚಿಸಿರುವಂಥ ಕಾಯಿದೆಶೀರ ರೀತಿಗಳಿಂದ ಸಾಧಿಸಬೇಕಾದಂಥ "ಸ್ವರಾಜ್ಯವು". ಇದೇ ದೇಶಭಕ್ತಿಯ ರಹಸ್ಯ ಮತ್ತು ಧ್ಯೇಯ.

ಮದ್ರಾಸಿನ ನ್ಯಾಯವಿಧಾಯಕ ಸಭೆ,

ಕಳೆದ ತಿಂಗಳ 31ನೇ ತಾರೀಕಿನಿಂದ ಜರಗಿದ ಸಭೆಯಲ್ಲಿ ಹಲವು ಠರಾವುಗಳು ಚರ್ಚೆಗೆ ಬಂದುವು. ಈ ಪೈಕಿ ರೆವೆನ್ಯೂ ಬೋರ್ಡಿಗೆ ಇಂಡಿಯನ್ ಮೆಂಬರನ್ನು

ನೇಮಕ ಮಾಡಬೇಕೆಂಬ ಮೊದಲನೆ ಠರಾವನ್ನು ಕುರಿತು ನಾವು ಗತಸಂಚಿಕೆಯಲ್ಲಿ ಚರ್ಚಿಸಿರುವೆವು.

ಸಹಕಾರ ಸಂಘಗಳ ರಿಜಿಸ್ಟ್ರಾರರು ಈಗಿನಂತೆಯೇ ಬಹಳ ಕಾಲದವರೆಗೆ ದೇಶೀಯರೇ ಆಗಿರಬೇಕೆಂಬುದು ಎರಡನೇ ಠರಾವು. ಇದು ಚರ್ಚೆಗೆ ಬರಲಿಕ್ಕೆ ಹಲವು ಕಾರಣಗಳಿದ್ದವು. ಹಿಂದೂಸ್ಥಾನದಲ್ಲಿ ಪ್ರತಿ ಇಲಾಖೆಯಲ್ಲಿಯೂ ನವುಕರರ ಮೂರು ವರ್ಗಗಳಿವೆ. (೧) ಇಂಡಿಯನ್ ಸರ್ವಿಸು:—ಇದಕ್ಕೆ ಸೇರಿದವರು ಐ. ಸಿ. ಎಸ್. ಎಂಬ ಚುನಾವಣೆ ಪರಿಕ್ಷೆಯನ್ನು ವಿಲಾಯತಿಯಲ್ಲಿ ತೇರಿ ಅಲ್ಲಿಂದಲೇ ನೇಮಕವಾಗಿ ಬರುವವರು. (೨) ಪ್ರೊವಿನ್ಶಲ್ ಸರ್ವಿಸು:—ಈ ನವುಕರರು ವಾಡಿಕೆಯಾಗಿ ಸ್ಥಳೀಯ ಯೂನಿವರ್ಸಿಟಿಯ ಮತ್ತು ಆಯಾಯ ಇಲಾಖೆಯ ಪರಿಕ್ಷೆಗಳನ್ನು ಪಾಸಾಗಿ ಸ್ಥಳೀಯ ಸರಕಾರದಿಂದ ನೇಮಕಪಟ್ಟವರು. (೩) ಸಬೊರ್ಡಿನೆಟ್ ಸರ್ವಿಸು:—ಇವರು ಆಯಾ ಇಲಾಖೆಯ ಮೇಲಾಫಿಸರರಿಂದ ನೇಮಕವಾಗುವಂಥವರು. ಇವರಿಗೆ ಸಾಮಾನ್ಯವಾಗಿ ೨೦೦ ರೂಪಾಯಿಗೆ ಮಿಕ್ಕಿ ಸಂಬಳ ಇರುವುದು ಇಲ್ಲ. ಪ್ರೊವಿನ್ಶಲ್ ಸರ್ವಿಸಿನವರಿಗೆ ೨೦೦ಕ್ಕೆ ಮಿಕ್ಕಿ ೮೦೦ರ ವರೆಗೆ ಸಂಬಳವಿದೆ. ಡಿಪ್ಯುಟಿ ಕಲ್ಲೆಕ್ಟರರು ಸಬ್ ಜಡ್ಜರು, ಡಿಪ್ಯುಟಿ ಸುಪರಿಂಟೆಂಡೆಂಟರು (ಪೋಲಿಸ್ ಇಲಾಖೆ), ಇನ್ಸ್ಪೆಕ್ಟರರು (ಅಬಕಾರಿ ಇಲಾಖೆ) ಮುಂತಾದವರು ಈ ಸರ್ವಿಸಿಗೆ ಸೇರಿದವರು. ಆಸಿಸ್ಟಾಂಟ್ ಕಲ್ಲೆಕ್ಟರರು ಜಡ್ಜರು ಕಲ್ಲೆಕ್ಟರರು, ರೆವಿನ್ಯೂ ಬೋರ್ಡ ಮೆಂಬರರು ಪೋಲಿಸ್ ಇನ್ಸ್ಪೆಕ್ಟರ ಜನರಲರು ಮುಂತಾದವರು ಐ. ಸಿ. ಎಸ್. (ಇಂಡಿಯನ್ ಸಿವಿಲ್) ಸರ್ವಿಸಿಗೆ ಸೇರಿದವರು. ಇವರಿಗೆ ಆರಂಭದಲ್ಲಿ ಸುಮಾರು ೩೦೦ ರೂಪಾಯಿ ತಲಬು ಸಿಕ್ಕುವುದಾದರೂ ಕಡೆಗೆ ೨೦೦೦ ಅಥವಾ ೩೦೦೦ ರೂಪಾಯಿ ವರೆಗೆ ತಲಬು ಸಿಕ್ಕುವುದು. ದೇಶಿಯರು ವಿಲಾಯತಿಗೆ ಹೋಗಿ ಈ ಚುನಾವಣೆ ಪರಿಕ್ಷೆಯಲ್ಲಿ ಪಾಸಾದಾಗ ಮಾತ್ರವೇ ಈ ಸರ್ವಿಸಿಗೆ ಸೇರಬಹುದಿತ್ತು. ಹೀಗಾಗಿ ದೇಶಿಯರಲ್ಲಿ ಬುದ್ಧಿವಂತರಿದ್ದರೂ ಕಲ್ಲೆಕ್ಟರು ಜಡ್ಜ ಮುಂತಾದ ಪದವಿಗಳನ್ನು ಸರಕಾರದವರು ಅಂಥವರಿಗೆ ಕೊಡುವುದಿಲ್ಲವೆಂದು ಪ್ರಜಾಜನಗಳು ಆಗಾಗ ಮನವಿಯನ್ನು ಮಾಡಿದ್ದರಿಂದ ಈ ಸರ್ವಿಸಿಗೆ ಸಂಬಂಧಪಟ್ಟ ಹೆಚ್ಚುಕಡಿಮೆ ೨೦೦ ಇಸಮುಗಳಲ್ಲಿ ಡಿಸ್ಟ್ರಿಕ್ಟ್ ಜಡ್ಜರ ಇಸಂಗಳಲ್ಲಿ ೩, ಕಲ್ಲೆಕ್ಟರ್ ಇಸಂಗಳಲ್ಲಿ ೨, ರೆವಿನ್ಯೂ ಬೋರ್ಡಿನ ಸೆಕ್ರೆಟರಿಯ ಇಸಂ ೧, ಸರಕಾರದ ಅಂಡರ್ ಸೆಕ್ರೆಟರಿಯ ಇಸಂ ೧, ಹೀಗೆ ೭ ಇಸಂಗಳನ್ನು ಪ್ರೊವಿನ್ಶಲ್ ಸರ್ವಿಸಿನಲ್ಲಿ ಯೋಗ್ಯರಾದವರಿಗೆ ಕೊಡಬಹುದೆಂದು ನಿಯಮವಾಯಿತು. ಈಚೆಗೆ ಇನ್ನೂ ಒಬ್ಬ ಕಲ್ಲೆಕ್ಟರ್ ಮತ್ತು ಒಬ್ಬ ಡಿಸ್ಟ್ರಿಕ್ಟ್ ಜಡ್ಜರ ಇಸಂ ಈ ಸರ್ವಿಸಿಗೆ ಹೆಚ್ಚಿಗೆ ಕೂಡಿಸಿದರು. ಹೀಗೆ ಇಂಡಿಯನ್ ಸರ್ವಿಸಿಗೆ ಸೇರಿದ ಕೆಲವು ಇಸಂಗಳನ್ನು ಪ್ರೊವಿನ್ಶಲ್ ಖಾತೆಗೆ ಸೇರಿಸುವುದರಿಂದ ಆ ಸರ್ವಿಸಿನವರಿಗೆ ನಷ್ಟವಾಗುತ್ತದೆಂಬ ಶಂಕೆಯಿಂದ ಈ ವರೆಗೆ ಪ್ರೊವಿನ್ಶಲ್ ಸರ್ವಿಸಿನವರೆ ನೋಡಿಕೊಂಡು ಬರುವ ಈ ರಿಜಿಸ್ಟ್ರಾರರ ಇಸಮಿಗೆ ಸಿವಿಲ್ ಸರ್ವಿಸಿನವರನ್ನು ನೇಮಕ ಮಾಡುವರು ಎಂದು ವದಂತಿ ಆಯಿತು. ಸಹಕಾರ ಸಂಘಗಳ ವಿಷಯವಾಗಿ ರಿಪೋರ್ಟು ಮಾಡಲಿಕ್ಕೆ ನೇಮಕವಾದ ಕಮಿಟಿಯವರು ಈ ರಿಜಿಸ್ಟ್ರಾರರ ಇಸಮನ್ನು ಸಿವಿಲ್ ಸರ್ವಿಸಿನವರಿಗೆ ಕೊಡಬೇಕೆಂದು ಮಾಡಿದ ಸೂಚನೆಯು ಈ ಸಂದೇಹವನ್ನು ಇನ್ನಷ್ಟು ಬಲಗೊಳಿಸಿತು. ಈ ರಿಜಿಸ್ಟ್ರಾರರ ಕೆಲಸ ಮಾಡುವವರು ದೇಶಭಾಷೆಬಲ್ಲವರೂ ಜನರೊಡನೆ ಹೊಕ್ಕುಬಳಕೆ ಇದ್ದವರೂ ಆಗಿರದಿದ್ದರೆ ಸಹಕಾರಲತೆಯೂ ಬೇಗನೆ ದೇಶದಲ್ಲಿ ಹಬ್ಬಲಾರದು ಎಂದು ಅನೇಕರಲ್ಲಿ ಬಲವತ್ತರವಾದ ಸಂಶಯವುಂಟಾಯಿತು. ೧೯೦೪ನೆ ಇಸವಿಯಲ್ಲಿ ಕೊಓಪರೇಟಿವ್ ಸೊಸೈಟಿಗಳ ಆಕ್ಟು ಜಾರಿಗೆ ಬಂದಂದಿನಿಂದ ಈ ವರೆಗೆ ನಮ್ಮ ಸಂಸ್ಥಾನದಲ್ಲಿ ಪ್ರೊವಿನ್ಶಲ್ ಸರ್ವಿಸಿನಿಂದ ಮೂವರು ಈ ರಿಜಿಸ್ಟ್ರಾರರ ಉದ್ಯೋಗ ನೋಡುತ್ತಿದ್ದರೂ ಈ ಇಸಂ ಪ್ರೊವಿನ್ಶಲ್ ಸರ್ವಿಸಿಗೆ ಸೇರಿದ್ದೊ ಅಥವಾ ಸಿವಿಲ್ ಸರ್ವಿಸಿಗೆ ಸೇರಿದ್ದೊ ಎಂದು ಇದು ವರೆಗೆ ನಿರ್ಣಯವಿಲ್ಲ. ಈ ಅಸ್ಪಷ್ಟತೆಯನ್ನ ಬೆಂಬಲಕ್ಕೆ ಇಟ್ಟುಕೊಂಡು ಸರಕಾರದ ಕಡೆಯಿಂದ ಎದುರುವಾದ ಬಂತು. ಇದಲ್ಲದೆ ಆ ಇಸಂ ಇಂಥಾ ಖಾತೆಗೆ ಸೇರಿದೆ ಎಂದು ನಿರ್ಣಯವಿಲ್ಲದ್ದರಿಂದ ಅದಕ್ಕೆ ಪ್ರೊವಿನ್ಶಲ್ ಸರ್ವಿಸಿನವರನ್ನೆ ಬಹಳ ಕಾಲದವರೆಗೆ ಇಡುವಂತೆ ವಾಗ್ದತ್ತ ಕೊಟ್ಟು ತಮ್ಮ ಕೈಕಟ್ಟಿಕೊಡಲಿಕ್ಕೆ ಸರಕಾರದವರು ಒಪ್ಪದಿದ್ದರೂ ಈಗಿನ ಉದ್ಯೋಗಸ್ಥರಾದ. ದಿವಾನ್ ಬಹದ್ದೂರ ಸ್ವಾಮಿಕಣ್ಣು ಪಿಳ್ಳೆಯವರ ಕಾರ್ಯನಿರ್ವಾಹವನ್ನು ಕೊಂಡಾಡಿದ್ದರಿಂದ ಕೆಲವು ಕಾಲದ ವರೆಗಾದರೂ ಅವರನ್ನು ಅದೇ ಕೆಲಸದಲ್ಲಿ ಇರಗೊಡಿಸುವರೆಂದು ನಂಬಬೇಕಾಗಿದೆ.

ಈಗಿನ ಸೆಕೆಂಡರಿ ಸಾಲೆಗಳಲ್ಲಿ ಸ್ಥಳ ಸಂಕೋಚವಾದ್ದರಿಂದ ಅದನ್ನು ಸರಿಗೊಳಿಸಲಿಕ್ಕೂ ಸೆಕೆಂಡರಿ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸಲಿಕ್ಕೂ ಉಪಾಯಗಳನ್ನು ಸೂಚಿಸುವುದಕ್ಕಾಗಿ ಸರಕಾರಿ ಮತ್ತು ಬಿನ್‌ಸರಕಾರಿ ಪ್ರಮುಖ ಜನರ ಒಂದು ಕಮಿಟಿಯನ್ನು ಏರ್ಪಡಿಸಿ ಅವರ ಸೂಚನೆಗಳನ್ನು ಸರಕಾರದವರು ಆಲೋಚನೆಗೆ ತೆಗೆದುಕೊಳ್ಳಬೇಕೆಂಬುದು ಇನ್ನೊಂದು ಠರಾವು. ಅದನ್ನು ಬಹುಮತದವರು ವಿರೋಧಿಸಿದ್ದರಿಂದ ಅದು ಕಿತ್ತುಹೋಯಿತು. ಈ ವಿಷಯವನ್ನು ಮುಂದಿನ ಸಂಚಿಕೆಯಲ್ಲಿ ಚರ್ಚಿಸುವೆವು.

ಈಗ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಸುಫರ್ದಿಯೊಳಗೆ ಇಟ್ಟುಕೊಂಡಿರುವ ರಸ್ತೆಗಳು, ಕಟ್ಟೋಣಗಳು ಮುಂತಾದುವುಗಳನ್ನೆಲ್ಲ ಆಯಾಯ ತಾಲೂಕು ಬೋರ್ಡಿನವರ ವಶಕ್ಕೆ ಕೊಟ್ಟು ಅದರ ಖರ್ಚಿನ ಹಣವನ್ನೂ ಅವರ ವಶದಲ್ಲಿರಿಸುವುದಲ್ಲದೆ, ಆಸಿಸ್ಟಾಂಟ್ ಇಂಜಿನಿಯರು ಮೊದಲ್ಗೊಂಡು ಅವರ ಕೆಳಗಿನ ಓವರ್ಸಿಯರ್ ಮುಂತಾದ ಎಲ್ಲಾ ಸಿಬಂದಿಯನ್ನೂ ಆಯಾಯ ತಾಲೂಕು ಬೋರ್ಡಿನ ತಾಬೆಯಲ್ಲಿ ಇರಿಸಬೇಕಾಗಿಯೂ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರ್ ಮತ್ತು ಅವರ ಆಫೀಸ್ ಸಿಬಂದಿ ಮಾತ್ರ ಡಿಸ್ಟ್ರಿಕ್ಟ್ ಬೋರ್ಡಿನವರ ಕೈಕೆಳಗೆ ಇರಬೇಕಾಗಿಯೂ ಒಂದು ಠರಾವು ಚರ್ಚೆಗೆ ಬಂತು.

ಈಗಿನ ಸ್ಥಿತಿಯಲ್ಲಿ ಈ ಇಲಾಖೆ ತೀರಾ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರ ಕೈಕೆಳಗೆ ಇದ್ದು ಆ ನವುಕರರ ಮೇಲೆ ತಾಲೂಕು ಬೋರ್ಡಿನವರಿಗೆ ಏನೊಂದು ತರದ ಅಧಿಕಾರವಿರುವುದಿಲ್ಲ. ಹೀಗಾಗಿ ತಾಲೂಕು ಬೋರ್ಡ ಪ್ರೆಸಿಡೆಂಟರು ಪ್ರತಿಯೊಂದು ಸಂಗತಿಯಲ್ಲಿಯೂ ಅಲ್ಲಲ್ಲಿಯ ಓವರ್ಸಿಯರ್ ಮತ್ತು ಅಸಿಸ್ಟಾಂಟ ಇಂಜಿನಿಯರಿಗೆ ಬರೆದು ಬೇಗನೆ ಯಾವುದೊಂದು ವಿಲೆವಾರಿ ನಡಿಸಲಿಕ್ಕೆ ಸಾಧ್ಯವಾಗುವುದೇ ಇಲ್ಲ. ಕಾಗದ ಪತ್ರಗಳು ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರ ಮೂಲಕ ನಡೆಯಬೇಕಾದುದರಿಂದ ಬಹಳ ಕಾಲ ವಿಳಂಬವಾಗುತ್ತದೆ. ಅತಿ ಚಿಲ್ಲರೆ ಕೆಲಸಗಳಿಗೂ ಈ ರೀತಿಯ "ದ್ರಾವಿಡ ಪ್ರಾಣಾಯಾಮ"ವು ಅವಶ್ಯವಾಗುತ್ತದೆ. ಇದಲ್ಲದೆ ತಾಲೂಕು ಬೋರ್ಡಿನ ಅಧಿಕಾರದೊಳಗೆ ತಾವು ಇಲ್ಲವೆಂದು ಆ ಓವರ್ಸಿಯರ್ ಮತ್ತು ಅಸಿಸ್ಟಾಂಟ ಇಂಜಿನಿಯರರು ತಾಲೂಕು ಬೋರ್ಡ ಪ್ರೆಸಿಡೆಂಟರ ಸೂಚನೆಗಳಿಗೆ ಅಲಕ್ಷ್ಯತೋರಿಸುವುದು ಬಹಳವಾಗಿ ಕಂಡುಬರುತ್ತದೆ. ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರು ಇಡೀ ಜಿಲ್ಲೆಯ ಅಧಿಕಾರಿಯಾಗಿದ್ದು ಅನೇಕ ಸಲ ಓವರ್ಸಿಯರು ಮಾಡಿದ ಅಂದಾಜುಪಟ್ಟಿಗಳನ್ನು ಸ್ವತಃ ಪರಿಶೋಧಿಸಲಿಕ್ಕೆ ಸಮಯವಿಲ್ಲದೆ ಶಿಫಾರಸು ಮಾಡಬೇಕಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರ ದಸ್ಕತು ಮೊಹರು ಬಿದ್ದಮೇಲೆ ಅಂಥಾ ಅಂದಾಜುಪಟ್ಟಿಗಳನ್ನು ತಾಲೂಕು ಬೋರ್ಡಿನವರು ಕಣ್ಣುಮುಚ್ಚಿ ಸೆಂಕ್ಶನ್ ಮಾಡಬೇಕಾಗುತ್ತದೆ. ಕೆಲವು ಸಲ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರು ತಾಲೂಕು ಬೋರ್ಡ ಪ್ರೆಸಿಡೆಂಟರೊಡನೆ ತಾತ್ಸಾರ ಪೂರ್ವಕವಾದ ರೀತಿಯಲ್ಲಿ ಪತ್ರವ್ಯವಹಾರ ನಡೆಸುವುದೂ ಉಂಟು. ತಾಲೂಕು ಬೋರ್ಡು ಪ್ರೆಸಿಡೆಂಟರು ಆಗಾಗ ಈ ಕಾಮಗಾರಿಗಳನ್ನು ಸಂದರ್ಶಿಸುವ ಸಂದರ್ಭವಿದೆ. ಆಗ ಅವುಗಳಲ್ಲಿ ಅಗತ್ಯ ಕಂಡ ಬದಲಾವಣೆಗಳನ್ನು ಸೂಚಿಸಿದರೂ ಅಥವಾ ಕುಂದುಕೊರತೆಗಳನ್ನು ಎದುರಿಗೆ ತಂದರೂ ಇಂಜಿನಿಯರ್ ಇಲಾಖೆಯವರು ಲೇಗಿಬೀಳುವರು. ಹಾಗೂ ಹೀಗೂ ತಾಲೂಕು ಬೋರ್ಡಿನವರು ಖರ್ಚುಮಾಡುವ ಹಣವು ದುರ್ವ್ಯಯವಾಗದಂತೆ ನೋಡಿಕೊಳ್ಳುವುದಕ್ಕೆ ಅವರಿಗೆ ಇಂಬು ಸಿಕ್ಕುವುದಿಲ್ಲ. ಹೀಗೆ ಇರುವುದಕ್ಕಿಂತ ಅಸಿಸ್ಟಾಂಟ ಇಂಜಿನಿಯರ್ ವರೆಗೆ ಎಲ್ಲಾ ನವುಕರರು ಆಯಾ ತಾಲೂಕು ಬೋರ್ಡು ಅಧಿಕಾರದೊಳಗಿದ್ದು ಅಗತ್ಯಬಿದ್ದ ಸಂದರ್ಭಗಳಲ್ಲಿ ಮಾತ್ರ ಅಂದರೆ ದೊಡ್ಡ ಮೊಬಲಗನ್ನು ಖರ್ಚುಮಾಡುವ ಅಂದಾಜುಪಟ್ಟಿಗಳ ಮೇಲೆ ಡಿಸ್ಟ್ರಿಕ್ಟ್ ಬೋರ್ಡ ಇಂಜನಿಯರರ ಮೇಲ್ವಿಚಾರವನ್ನು ಇರಗೊಡಿಸುವುದು ಯೋಗ್ಯವೆಂದು ಈ ಠರಾವಿನ ಮುಖ್ಯ ಮಂತ್ರ. ಇದರಿಂದ ತಾಲೂಕು ಬೋರ್ಡು ಈಗಿನಂತೆ ಠರಾವಿನ ಯಂತ್ರವಾಗಿರದೆ ತಮ್ಮ ಹಣವು ವೆಚ್ಚವಾಗಲಿಕ್ಕೆ ಇದ್ದಾಗ ನಿಜವಾದ ವ್ಯವಸ್ಥೆ ನಡಿಸುವುದಕ್ಕೆ ಮತ್ತು ಮೇಲ್ವಿಚಾರ ನೋಡುವುದಕ್ಕೆ ಸಾಮರ್ಥ್ಯವುಳ್ಳ ಸಂಸ್ಥೆಯಾಗುವುದು. ಈ ನವುಕರರು ಮಾಡಿದ ಕೆಲಸವನ್ನು ಆಗಾಗ ತನಖೆಮಾಡಿ ಅವುಗಳ ಕುಂದುಕೊರತೆಗಳನ್ನು ಬಯಲಿಗೆ ತರುವುದು, ಅವರನ್ನು ದಂಡಿಸುವುದಕ್ಕಾಗಲಿ ಕೆಲಸದಿಂದ ತಳ್ಳಿಹಾಕುವುದಕ್ಕಾಗಲಿ ಶಿಫಾರಸು ಮಾಡುವುದು. ಈ ಅಧಿಕಾರಗಳು ಇಂಜಿನಿಯರರ ಮೇಲೆ ಈಗಿನಂತೆ ಹೊಂದಿಕೊಂಡಿದ್ದರೂ ಶಿಕ್ಷೆರಕ್ಷೆಗೆ ತಾಲೂಕು ಬೋರ್ಡಿನವರೆ ಕರ್ತೃಗಳಾದರೆ ತಾಲೂಕು ಬೋರ್ಡಿನ ಕೆಲಸವು ನೆಟ್ಟಗಾಗುವುದಕ್ಕೆ ಸಂದೇಹವಿಲ್ಲ. ಈ ಠರಾವಿನ ಅಭಿಪ್ರಾಯವನ್ನು ಸರಕಾರದ ಕಡೆಯಿಂದ ಮನ್ನಿಸಿದರೂ ಆಯಾ ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳ ಅಭಿಪ್ರಾಯವನ್ನು ಪಡೆಯದೆ ಯಾವುದೊಂದು ಬದಲಾವಣೆಯನ್ನು ಒಮ್ಮೆಯೇ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಉತ್ತರ ಸಿಕ್ಕಿದರೂ ಸರಕಾರದವರು ಡಿಸ್ಟ್ರಿಕ್ಟ್ ಬೋರ್ಡುಗಳ ಅಭಿಪ್ರಾಯ ಕೇಳುವುದಕ್ಕೆ ಒಪ್ಪಿದ ಕಾರಣ ಈ ಠರಾವನ್ನು ಓನರೆಬಲ್ ರಾಮಚಂದ್ರರಾಯರು ಹಿಂತೆಗೆದರು.

ಪತ್ರವ್ಯವಹಾರ.

ಶಾಲೆಗಳಲ್ಲಿ ಮಾತೃಭಾಷೆ.

ಎಲಿಮೆಂಟರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅವರವರು ಮನೆಯಲ್ಲಿ ಆಡುವ ಭಾಷೆಯಿಂದಲೇ ಉಪಾಧ್ಯಾಯರು ಕಲಿಸಿಕೊಡಬೇಕೆಂಬುದು, ವಿದ್ಯಾ ಇಲಾಖೆಯಿಂದ

ಇತ್ತಲಾಗಿ ವಿದಿತವಾದ ಕ್ರಮಗಳಲ್ಲೊಂದಾಗಿದೆ ಎಂದು ಕೇಳುತ್ತೇನೆ. ಈ ಹೊಸ ಕ್ರಮಕ್ಕೆ ಮೂಲಪುರುಷರು ಯಾರೆಂದು ತಿಳಿಯುವದಿಲ್ಲ; ಇತ್ತಲಾಗೆ ಪೆರಾರ್ ಇಗರ್ಜಿಯ ವಿಕಾರರು ಆದಿತ್ಯವಾರ ಪೂಜೆಗೆ ನೆರೆದ ಶಿಷ್ಯವರ್ಗದವರಿಗೆ, "ನೀವು ನಿಮ್ಮ ಮಕ್ಕಳನ್ನೆಲ್ಲಾ ಇಗರ್ಜಿಯ ಶಾಲೆಗೆ, ಅಥವಾ ನಮ್ಮ ಹೇಳಿಕೆಯಿಂದ ಸ್ಥಾಪಿತವಾದ ಮಚ್ಚಾರುಶಾಲೆ, ಅಥವಾ ಕಂದಾವರ ಚರ್ಚ್ ಶಾಲೆ (ಇಲ್ಲಿ ಚರ್ಚ್ ಇನ್ನು ಆಗಬೇಕಷ್ಟೆ) ಮೊದಲಾದ ಕ್ರೈಸ್ತ ಶಾಲೆಗಳಿಗೆ ಕಳುಹಿಸಬೇಕಲ್ಲದೆ ಇತರ ಖಾಸಗಿ ಅಥವಾ ಬೋರ್ಡ್ ಶಾಲೆಗಳಿಗೆ ಕಳುಹಿಸಕೂಡದೆಂತಲೂ, ಬಜಪೆ ಇಗರ್ಜಿ ಶಾಲೆಯಲ್ಲಿ ನಾಲ್ಕನೇ ತರಗತಿಯ ಮೇಲಣ ಕ್ಲಾಸುಗಳು ಸದ್ಯದಲ್ಲೇ ತೆರೆಯಲ್ಪಡುವದರಿಂದ ಇತರರ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವ ಸಂದರ್ಭವು ನಿಮಗೆ ಎಂದೂ ಒದಗದೆಂತಲೂ ಹೇಳಿದರಂತೆ. ಹಾಗೆಯೇ ಬಜಪೆ ಇಗರ್ಜಿಯ ವಿಕಾರರು ತನ್ನ ಶಾಲೆಯಲ್ಲಿ ಏಳನೇದರ್ಜೆ ವರೇಗಿನ ಕ್ಲಾಸುಗಳು ಸದ್ಯದಲ್ಲೇ ಇರಿಸಲಾಗುವವೆಂದೂ, ಬೋಧನೆಯು ಸ್ವಭಾಷೆಯಿಂದ ಕೊಡಲ್ಪಡುವ ಕಾರಣ ಇಂಗ್ಲಿಷು ಆರಂಭದಿಂದಲೇ ಕಲಿಸಲ್ಪಡುವುದೆಂತಲೂ ಈ ಶಾಲೆಯಿಂದ ಹೊರಡುತ್ತಲೇ ಮಕ್ಕಳನ್ನು ತಮ್ಮ ಕೋಲೇಜಿಗೆ ಸೇರಿಸುವ ವಿಲೆವಾರಿ ಮಾಡಿರುವೆವೆಂತಲೂ ತಮ್ಮ ಶಿಷ್ಯಮಂಡಲಿಗೆ ಸಾರಿ ಅವರ ಮನಸ್ಸಿಗೆ ಬೆಲ್ಲತಾಗಿಸುತ್ತಿರುವರಂತೆ; ಇದರಿಂದ ವಿದೇಶೀಯರಾದ ಇನ್ಸ್‌ಪೆಕ್ಟರುಗಳು ಒಂದುವೇಳೆ ತಾವೆ ಸ್ವತಹ ಹೊಸ ಕ್ರಮಕ್ಕೆ ಮನಸ್ಸುಕೊಟ್ಟಿರಬಹುದಾದರೂ ಹಿಂದೂ ಸಮಾಜದೊಳಗೆ ಮೊದಲೇ ಕಡಿಮೆಯಾಗಿರುವ ಐಕಮತ್ಯವನ್ನು ಪೂರಾ ಮುರಿದು ಸಾಧ್ಯವಾದ ಮಟ್ಟಿಗೆ ತಮ್ಮ ಮತಾವಲಂಬಿಗಳ ಸಂಖ್ಯೆಯನ್ನು ಹೆಚ್ಚಿಸುವ ಗೋಸ್ಕರ ಪ್ರಾಥಮಿಕ ವಿದ್ಯಾದಾನವನ್ನು ಕೈವಶಮಾಡಿಕೊಳ್ಳಬೇಕೆಂದು ಸದಾ ಪ್ರಯತ್ನಿಸುತ್ತಿರುವ ಕ್ರೈಸ್ತ ವಿಕಾರ್‌ಗಳೇ ಈ ಆಲೋಚನೆಯನ್ನು ಅವರ ತಲೆಗೆ ಹೊಕ್ಕಿಸಿದವರಾಗಿರಬಹುದೆಂದು ತೋರಿಬರಲು ಸಾಧ್ಯವಿದೆ.

ನಮ್ಮೂರಲ್ಲಿ ಒಂದೇ ಭಾಷೆಯು ಹಲವು ಪಂಗಡದವರಿಂದ, ಹಲವು ರೀತಿಯಾಗಿ ಮಾತಾಡಲ್ಪಡುತ್ತಿರುವಲ್ಲಿ, ಶಾಲೆಗಳಲ್ಲಿ ಯಾವ ಪಂಗಡದವರಾಡುವ ಭಾಷೆಯನ್ನು ಕಲಿಸುವಾಗ ಉಪಯೋಗಿಸಬೇಕು ಎಂಬದು ಪ್ರಥಮತಃ ಇತ್ಯರ್ಥಿಸಲ್ಪಡಬೇಕಿತ್ತು. ಕರ್ನಾಟಕ ಭಾಷೆಯನ್ನು ಆಡುವ ಗೌಡ, (ಗೌಂಡ) ಪೈರ, (ರಾಣಾವೆ) ಇವರಂತಿರಲಿ; ಬ್ರಾಹ್ಮಣ ವರ್ಗದವರಾದ ಕರ್ಣಾಟಕ, ಕೋಟ, ಮತ್ತು ಹವೀಕ ಬ್ರಾಹ್ಮಣರುಗಳು ಆಡುವ ಭಾಷೆಯು ಕನ್ನಡವೇ ಆಗಿದ್ದರೂ ಒಬ್ಬರು ಆಡಿದ ಮಾತು ಇನ್ನೊಬ್ಬರಿಗೆ ಅರ್ಥವಾಗದಷ್ಟು ರೂಪಾಂತರವನ್ನು ಹೊಂದಿರುವದು. ನಮ್ಮ ಈ ಜಿಲ್ಲೆಯಲ್ಲಿ ಜನರು ಹೆಚ್ಚಾಗಿ ಉಪಯೋಗಿಸುವ ತುಳು, ಮತ್ತು ಕೊಂಕಣಿ ಭಾಷೆಗಳು ಸಹ ಈ ದೋಷರಹಿತವಾದವುಗಳಲ್ಲ. ಮೇಲುಜಾತಿಯವರಾದ ಬ್ರಾಹ್ಮಣರೂ, ಕೀಳುಜಾತಿಯವರಾದ ಪಂಚಮರೂ, ಆಡುವ ತುಳುವನ್ನು ಬಿಟ್ಟು, ವ್ಯಾಪಾರ ಸಾಹಸಗಳಲ್ಲಿ ತಮಗೆ ಆಗಾಗ್ಯೆ ಸಿಕ್ಕುವವರಾದ ಶೂದ್ರರು ಆಡುವ ತುಳು ಭಾಷೆಯನ್ನು, ಜರ್ಮನ್ ಮಿಶ್ಯನರಿಗಳು ಅಚ್ಚತುಳುವೆಂದು ಸ್ವೀಕರಿಸಿಕೊಂಡ ಓಪಾದಿ—ಪ್ರತಿ ಒಂದು ಇಗರ್ಜಿಯಲ್ಲಿ ಒಂದು ಶಾಲೆ ಇರಬೇಕೆಂದೂ, ಆಯಾ ಇಗರ್ಜಿಗೆ ಸೇರಿದವರ ಮಕ್ಕಳೆಲ್ಲಾ ಅದೇ ಶಾಲೆಗೆ ಬರಬೇಕೆಂದೂ ನಿರ್ಬಂಧಿಸಿ ಕ್ರೈಸ್ತ ಉಪಾಧ್ಯಾಯರ ಮೂಲಕ ವಿದ್ಯಾಭ್ಯಾಸವನ್ನು ಮಾಡಿಸುತ್ತಿರುವ ರೋಮನ್ ಕೆಥೋಲಿಕ ಸಂಘದವರು ಆಡುವ ಕೊಂಕಣಿ ಭಾಷೆಯೇ ತಾಜಾ ಕೊಂಕಣಿ ಭಾಷೆಯಾಗಿ ನಿಲ್ಲಬೇಕಾಗುವದು ಹೀಗಾಗುವದು ಕೊಂಕಣಿ ಭಾಷೆಯ ಇತರ ತರಗಳನ್ನು ಆಡುತ್ತಿರುವ ಪಂಗಡಗಳವರಿಗೆ ಎಷ್ಟರಮಟ್ಟಿಗೆ ಸಮ್ಮತವೋ ನಾನರಿಯೆನು.

ವಿದ್ಯಾ ಇಲಾಖೆಯಲ್ಲಿ ಅನೇಕ ವರ್ಷ ಸಾರ್ಥಕವಾಗಿ ಕೆಲಸ ನಡಿಸಿ ದಿಗಂತ ವಿಶ್ರಾಂತ ಕೀರ್ತಿಯನ್ನು ಪಡೆದ ನಮ್ಮ ಜಿಲ್ಲೆಯ ಶಾಲೆಗಳ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾಗಿದ್ದು ಇತ್ತಲಾಗೆ ಪೆನ್ಶನ್ ಪಡೆದ ಮ। ರಾ। ರಾ। ರಾಯಿಬಹದೂರ್ ಯ.೦. ರಘುನಾಥರಾಯರವರು ಇದೇ ಕಳದ ಸೆಪ್ಟಂಬರ ತಿಂಗಳ "ಬೋಧಿನಿ"ಯಲ್ಲಿ ಬರೆದ ಲೇಖನವು ಸವಿಸ್ತಾರವಾದ ಪೂರ್ಣ ಅನುಭವವನ್ನು ಕೊಡುವದು.

ಮೇಲುದ್ಯೋಗಸ್ಥರು "ಮಕ್ಕಳಿಗೆಲ್ಲಾ ಸ್ವಭಾಷೆಯಿಂದ ಕಲಿಸಬೇಕು" ಎಂದು ಹೇಳಿಬಿಟ್ಟರಾಯಿತು. "ಅತ್ತೆಗೊಂದು ಮಾತು ಸೊಸೆಗೆ ಪ್ರಾಣಸಂಕಟ" ಎಂಬಂತೆ ಬಡ ಉಪಾಧ್ಯಾಯನು ದಿಕ್ಕುತೋಚದೆ ಯೋಚಿಸುತ್ತಿರಬೇಕಾಗಿದೆ. ಶಾಲೆಗಳಲ್ಲೂ ಸರಕಾರಿ ರಿಕಾರ್ಡು ವ ಕಾಗದ ಪತ್ರಗಳಲ್ಲೂ ಉಪಯೋಗಿಸುವ ಕನ್ನಡಭಾಷೆಯು ತರವು ಬಹು ಸುಲಭವಾಗಿ ತಿಳಿಯಲ್ಪಡಬಹುದಾದ ರೂಪದಲ್ಲಿದೆ. ಕೊಂಕಣಿಗರು ತುಳು ಭಾಷೆಯಾಡುವುದನ್ನು ಕೇಳಿರುವವರು ಈ ಉಪಾಧ್ಯಾಯರುಗಳು ತುಳು ಭಾಷೆಯಿಂದ ಚಿಕ್ಕ ಮಕ್ಕಳಿಗೆ ಅರ್ಥವಾಗುವಂತೆ ಮಾತಾಡಬಲ್ಲರೋ ಎಂಬುದನ್ನು ಯೋಚಿಸಲಿ. ಇದೇ ಕುಂದು ಕೊಂಕಣಿ ಭಾಷೆಯನ್ನರಿಯದ ಇತರರಲ್ಲೂ ಸ್ವಭಾಷೆಯಲ್ಲದ ಇತರ ಭಾಷೆಗಳನ್ನು ಅಲ್ಪಸ್ವಲ್ಪ ಕಲಿತುಕೊಂಡು ಮಕ್ಕಳಿಗೆ ಅದರ ಮೂಲಕ ಬೋಧಿಸ ಪ್ರಯತ್ನಿಸುವ ಎಲ್ಲರಲ್ಲೂ ಕಾಣಬರುವುದು.

ಭಾಷೆ, ನಡತೆ, ಉಡುಪು, ಜಾತಿ, ನೀತಿ ಮೊದಲಾದ ತಾಕುತೊಡರುಗಳನ್ನೆಲ್ಲಾ ಒಕ್ಕಡೆಗಿಟ್ಟು ದೇಶದಲ್ಲಿ ಪರಸ್ಪರ ಸಹಾಯವೂ ನಂಬಿಕೆಯೂ ಪ್ರೀತಿಯೂ ಬೆಳೆದು ಐಕಮತ್ಯ ಉಂಟಾಗಬೇಕೆಂದು ಮಾತೃಸೇವಾನಿರತರಾದ ದೇಶವತ್ಸಲರೆಲ್ಲ ಭಗೀರಥ ಪ್ರಯತ್ನಪಡುವಲ್ಲಿ, "ಕುಂಬಾರಗೆ ವರುಷ ದೊಣ್ಣೆಗೆ ನಿಮಿಷ" ಎಂಬಂತೆ ಸರ್ವವೂ ಈ ನೂತನ ಶಿಕ್ಷಣಾ ಕ್ರಮದಿಂದ ಮಾಯವಾಗುವ ಹಾಗೆ ತೋರುತ್ತದೆ.

ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಕನ್ನಡವು ದೇಶಭಾಷೆಯಾಗಿಯೂ ಕೋರ್ಟು ಭಾಷೆಯಾಗಿಯೂ ಉಪಯೋಗಿಸಲ್ಪಡುತ್ತದೆ. "ಬೀದಿ ಬಳಿಯುವ ಮಾದಿಗನಿಂದ, ಹುಟ್ಟಿದಾರಭ್ಯ ಪಟ್ಟಣವನ್ನು ನೋಡದ ಧನಿಕ ರೈತನ ವರಿವಿಗೆ, ಪ್ರತಿಯೊಬ್ಬನೂ ಕನ್ನಡಭಾಷೆಯಲ್ಲಿ ಆಡಿದ್ದನ್ನು ತಿಳಿದುಕೊಳ್ಳಲು ಶಕ್ತನಾಗಿರುತ್ತಾ"ನೆಂದು ಈ ಊರಿನ ವಿಷಯ ಮಾತಾಡುವಾಗ ಒಬ್ಬ ದೊಡ್ಡ ಉದ್ಯೋಗಸ್ಥರು ಹೇಳಿದ್ದು ನೆನಪಿಗೆ ಬರುತ್ತದೆ. ಭಾಷೆಗಳೊಳಗೆಲ್ಲಾ ಕನ್ನಡವು ಬಹು ಸುಲಭವಾಗಿ ಕಲಿಯಲ್ಪಡಬಹುದಾದ ಭಾಷೆಯಾಗಿರುವುದರಿಂದಲೋ, ಈ ಜಿಲ್ಲೆಯ ಹೆಚ್ಚಿನ ಪ್ರಜೆಗಳಿಂದ ಆಡಲ್ಪಡುವ ತುಳು ಭಾಷೆಯು ಕನ್ನಡಕ್ಕೆ ಸಮೀಪ ಬಂಧುವಾಗಿ ಅವರಿಗೆ ಸ್ವಾಭಾವಿಕವಾಗಿ ಅರ್ಥವಾಗುವುದರಿಂದಲೋ, ಯಾವ ಕಾರಣದಿಂದಲೇ ಆಗಲಿ ಅನೇಕ ಭಾಷೆಗಳು ರೂಢಿಯಲ್ಲಿರುವ ಈ ಜಿಲ್ಲೆಯಲ್ಲಿ ಕನ್ನಡವನ್ನು ಬಿಟ್ಟು ಇತರ ಭಾಷೆಗಳಿಂದ ಮಕ್ಕಳಿಗೆ ಕಲಿಸಬೇಕೆಂದು ಹೇಳುವ ಆಗತ್ಯವು ವಿದ್ಯಾಭಿಮಾನಿಗಳಲ್ಲಿ ಯಾರೊಬ್ಬರಿಗೂ ಈ ವರೆಗೆ ಕಂಡದ್ದಿಲ್ಲವೆಂಬುದು ಯೋಚಿಸತಕ್ಕ ಪ್ರಮೇಯವಲ್ಲವೇ?

ನಾಳೆ, ತುಳುಬ್ರಾಹ್ಮಣರ ಶಾಲೆ, ತುಳು ಶೂದ್ರರ ಶಾಲೆ, ಕ್ರೈಸ್ತ ಕೊಂಕಣಿ ಶಾಲೆ, ಕರಿಕುಡುಂಬಿ ಕೊಂಕಣಿ ಶಾಲೆ, ಕೋಟೆಗ ಕೊಂಕಣಿ ಶಾಲೆ, ಮರಾಟಿ ಕೊಂಕಣಿ ಶಾಲೆ, ಕೋಟ ಕನ್ನಡ ಶಾಲೆ, ಹವೀಕ ಕನ್ನಡ ಶಾಲೆ ಮುಂತಾದ ಅನೇಕಾನೇಕ ಶಾಲೆಗಳು ನಮ್ಮ ಊರಲ್ಲಿ ತುಂಬಿಹೋಗಿ ಊರಲ್ಲೆಲ್ಲಾ ವಿದ್ಯಾದಾನ ಲಭಿಸುವುದನ್ನು ಕಂಡಾಗ ನಮ್ಮ ಅಕ್ಷಿಗಳು ಧನ್ಯವಾಗುವವು. ಆದರೆ ಇಷ್ಟೆಲ್ಲಾ ಮಾಡುವುದರ ಬದಲಾಗಿ ತಮ್ಮ ಮಕ್ಕಳ ಬುದ್ಧಿ, ಜಾತಿ, ನಡತೆ, ಆರೋಗ್ಯ ಮೊದಲಾದವುಗಳನ್ನು ಆಲೋಚಿಸುವ ಹೆತ್ತವರು ತಮ್ಮ ತಮ್ಮ ಮನೆಗಳೇ ಮಕ್ಕಳಿಗೆ ಶಾಲೆಯಾಗುವಂತೆ ಮಾಡಿಕೊಳ್ಳುವ ಹಾಗೆ ದಯಾಳು ಸರಕಾರದವರಿಂದ ಸಹಾಯ ಲಭಿಸುತ್ತಿದ್ದರೆ ಇನ್ನಷ್ಟು ಉತ್ತಮವೆಂದು ಯೋಚಿಸುವವರು ಹಲಬರಿರಬಹುದು.

ವಾಮನ.

ಅಯ್ಯಾ ಪತ್ರಕರ್ತರೇ,

ಹೊಸದುರ್ಗಕ್ಕೆ ಸಮೀಪವಿರುವ ಅಜಾನೂರ ಗ್ರಾಮಸ್ಥರು ಬೆಳ್ಳಿಕೋತ ಮಾರ್ಗವಾಗಿ ಮೂಡು ರಸ್ತೆಗೆ ಒಂದು ರಸ್ತೆಯನ್ನು ಮಾಡಬೇಕಾಗಿ ಮಾಡಿಕೊಂಡ ಅರ್ಜಿ ತನಿಕೆ ಬಗ್ಗೆ ಅಸಿಸ್ಟೆಂಟ ಇಂಜಿನಿಯರರೇ ಮೊದಲಾದ ಇಲಾಖಾ ಉದ್ಯೋಗಸ್ಥರು ಇಲ್ಲಿಗೆ ಚಿತ್ತೈಸಿ ಪರಿಶೋಧನೆ ನಡಿಸಿ, ಅತಿ ಸುಲಭವಾಗಿದ್ದು ಜನ ಜಾನುವಾರುಗಳ ಸಂಚರಣೆಗೆ ತಕ್ಕುದಾದ ಅಜನೂರು ಗ್ರಾಮದ ಬೆಳ್ಳಿಕೋತ ದಾರಿಯನ್ನು ಬಿಟ್ಟು ಊರಿನ ಜನ ಜಾನುವಾರುಗಳಿಗೆ ಏನೊಂದು ಪ್ರಯೋಜನಕ್ಕೆ ಬೀಳಲಾರದ ಬಲ್ಲ ಗ್ರಾಮದ ಒಂದು ಮೂಲೆಯಿಂದ ಒಂದು ದಾರಿಯನ್ನು ಹುಡುಕಿ ತೆಗೆದಿರುತ್ತಾರೆಂತ ತಿಳಿದು ವಿಷಾದಪಡುತ್ತೇನೆ. ಇಲಾಖಾ ಅಧಿಕಾರಿಗಳು ಕಂಡು ಹಿಡಿದ ಈ ದಾರಿಯಿಂದ ಸ್ವಲ್ಪಮಟ್ಟಿನ ಖರ್ಚು ಕಡಿಮೆಯಾಗೀತಾದರೂ ದಾರಿಗಳಿಂದ ಊರ ನಿವಾಸಿಕರಿಗೆ ಉಂಟಾಗಬಹುದಾದ ಪ್ರಯೋಜನದ ದೃಷ್ಟಿಯಿಂದ ನೋಡುವದಾದರೆ ಈ ದಾರಿ ಕಡಿಯುವದು ನಿಷ್ಪ್ರಯೋಜನವೇ ಸರಿ. ರಸ್ತೆಯು ಅಗತ್ಯವೆಂದು ಮೇಲಾಧಿಕಾರಿಗಳಿಗೆ ಆಗಾಗ್ಗೆ ತಿಳಿಸಿ, ಅವರಿಗೆ ನಮ್ಮ ಸಂಕಷ್ಟಗಳನ್ನು ಹೇಳಿ ಹೇಗೂ ರಸ್ತೆಯಾಗುವ ಸಂಭವವಿತ್ತು. ಆದರೆ ಈಗ ಖರ್ಚಿನ ದೃಷ್ಟಿಯಿಂದ ಪ್ರಯೋಜನವಿಲ್ಲದ ಕಡೆಯಲ್ಲಿ ರಸ್ತೆ ಮಾಡಿಸುವದಕ್ಕಿಂತ ರಸ್ತೆ ಮಾಡಿಸದಿರುವದೇ ಲೇಸು. ಇಲಾಖೆಯವರು ಒಳ್ಳೇದೆಂದು ಅಭಿಪ್ರಾಯಪಡುವ ಕಡೆಯಲ್ಲಿ ಒಂದು ತೋಡೂ ಅತಿ ಸಂಕೋಚವಾಗಿರುವ ಒಂದು ಗದ್ದೆಬೈಲೂ ಇದೆ. ಮಳೆಗಾಲದಲ್ಲಿ ಈ ಬೈಲಲ್ಲಿ ನೀರು ತುಂಬಿ ನೀರು ಹರಿದು ಹೋಗಲು ಸರಾಗ ತೋಡು ಇಲ್ಲದೆ ಬಲ ದಿವಸಗಳ ಪರ್ಯಂತರ ನೀರು ನಿಂತು ಒಂದೊಂದುವೇಳೆ ಬೆಳೆಯೂ ಹಾಳಾಗಿ ಹೋಗುವ ಸಂಭವ ಉಂಟು. ಇಂಥಾ ನೀರು ತುಂಬುವ ದಾರಿಯಲ್ಲಿ ರಸ್ತೆಯನ್ನು ಮಾಡಿಸುವದಾದರೆ ಬಹಳ ಎತ್ತರವಾಗಿ ಮಾಡಿಸಬೇಕು. ಹೀಗೆ ರಸ್ತೆಯು ಎತ್ತರವಾದರೆ ತಗ್ಗಾದ ಬೈಲಿಗೆ ಈ ರಸ್ತೆಯು ಒಂದು ಕಟ್ಟದಂತೆ ಆಗಿ, ಮಳೆಗಾಲದ ನೀರು ಇಳಿದು ಹೋಗಲಿಕ್ಕೆ ಉಪಾಯವಿಲ್ಲದೆ ಪ್ರತಿ ವರ್ಷವೂ ಬೈಲಿನ ಪೈರು ಹಾಳಾಗುವದು. ಆದುದರಿಂದ ದಯಾಳು ಸರಕಾರದವರು ಈ ವಿಷಯ ಇನ್ನೂ ತಕ್ಕ ವಿಚಾರ ನಡಿಸಿ ಬಲ್ಲ ಗ್ರಾಮದ ಈ ದಾರಿಯನ್ನು ಬಿಟ್ಟು ಎಲ್ಲಾ ಜನರ ಉಪಯೋಗಕ್ಕೆ ಬೀಳುವ ಹಾಗೆ ಅಜನೂರು ಗ್ರಾಮದಿಂದ ಬೆಳ್ಳಿಕೋತಕ್ಕಾಗಿ ಮೂಡುರಸ್ತೆಗೆ ಸೇರುವಂತೆ ರಸ್ತೆಯನ್ನು ಮಾಡಿಸಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುವ.

ಹೊಸದುರ್ಗ,
2—12—16.

ಬಡ ರೈತ.

ಯೂರೋಪದ ಮಹಾ ಯುದ್ಧ.

ಪಶ್ಚಿಮ ರಣರಂಗದಲ್ಲಿ ಈ ವಾರ ವಿಶೇಷ ಕದನಗಳು ನಡಿಯಲಿಲ್ಲ. ಬ್ರಿಟಿಷರು ಕೆಲವು ಕಡೆಗಳಲ್ಲಿ ಜರ್ಮನರ ನೆಲೆಗಳಿಗೆ ತೋಫುಗಳನ್ನು ಹಾರಿಸುತ್ತಲಿದ್ದಾರೆ. ಫ್ರೆಂಚರೂ ರಣರಂಗದಲ್ಲೆಲ್ಲಾ ತೋಫುಗಳನ್ನು ಹಾರಿಸಿ ಕದನಮಾಡುತ್ತಿದ್ದಾರೆ.

ಬಾಲ್ಕಾನ್.

ರುಷ್ಯನರು ಕಾರ್ಪಥೇನಿಯದ ಅಡವಿಗಳಲ್ಲಿ ಮತ್ತು ಟ್ರಾನ್ಸಿಲವಾನಿಯದ ಪೂರ್ವದ ಕೆಲವು ಕಡೆಗಳಲ್ಲಿ ಹಲ್ಲೆ ಮಾಡಿ ಅಯಶಸ್ವಿದರಾಗುತ್ತಿದ್ದಾರೆಂತ ಜರ್ಮನರು ಪ್ರಕಟಿಸಿದ ವಾರ್ತೆಯಿಂದ ತಿಳಿದುಬರುತ್ತದೆ.

ಶತ್ರುಗಳು ಪ್ರಹೋವ ಕಣಿವೆಯಲ್ಲಿ ಮೇಲ್ಬಾಯಿದು ಹಿಮ್ಮೆಟ್ಟಿದುವರು. ರುಮೇನಿಯದ ಉತ್ತರ ಮತ್ತು ಉತ್ತರ ಪಶ್ಚಿಮ ಪ್ರಾಂತ್ಯದಲ್ಲಿ ಘೋರ ಕಾಳಗವು ನಡೆಯುತ್ತಿದೆ. ವಲ್ಲಾಚಿಯದ ಪಶ್ಚಿಮದಲ್ಲಿ ರುಮೇನಿಯನರು ಹಿಂದೆ ಸರಿದಿರುತ್ತಾರೆ. ಶತ್ರುಗಳು ಅಲೆಕ್ಸಾಂಡ್ರಿಯ-ಜುಮಿಟ್ಸ ದಾರಿಯಲ್ಲಿ ನಾಲ್ಕು ಪಟ್ಟಣಗಳನ್ನು ಸ್ವಾಧೀನಮಾಡಿಕೊಂಡು ಕೌಲಿಂಗೋರೆನಿ ಎಂಬಲ್ಲಿಗೆ ಮುಂಬರಿದಿರುತ್ತಾರೆ.

ಕಾರ್ಪಥೇನಿಯದ ಅಡವಿಗಳಲ್ಲಿ ರೆಕೇಡ ಗುಡ್ಡ ಶಿಖರವನ್ನು ರುಷ್ಯನರು ಸ್ವಾಧೀನಮಾಡಿಕೊಂಡು ೧೦೦ ಮಂದಿ ಶತ್ರು ಸೈನಿಕರನ್ನು ಸೆರೆಹಿಡಿದಿರುತ್ತಾರೆ. ಈ ಗುಡ್ಡ ಶಿಖರದಲ್ಲಿ ಕದನವು ನಡೆಯುತ್ತಿದೆ. ೨ ದಿವಸಗಳಲ್ಲಿ ರುಷ್ಯನರು ೬೦೦ ಶತ್ರು ಸೈನಿಕರನ್ನು ಸೆರೆಹಿಡಿದಿರುತ್ತಾರೆ.

ರುಮೇನಿಯನರಿಗೂ ರುಮೇನಿಯವನ್ನು ನುಗ್ಗಿದ ಶತ್ರುಗಳಿಗೂ ಈವರೆಗೆ ದೊಡ್ಡ ಕದನವು ನಡೆಯಲಿಲ್ಲ. ರುಮೇನಿಯನರು ಕ್ರಮವಾಗಿ ಬುಕಾರೆಸ್ಟಿನ ಬಳಿಯ ನೆಲೆಗಳಿಗೆ ಹಿಂದೆ ಸರಿಯುತ್ತಲೇ ಇದ್ದಾರೆ. ಬುಕಾರೆಸ್ಟ್ ಒಂದನೇ ತರಗತಿಯ ಪ್ರಾಮುಖ್ಯವಾದ ಕೋಟೆಗಳಿಂದ ಸುತ್ತಲ್ಪಟ್ಟಿದೆ. ಎಲ್ಲಾ ಕೋಟೆಗಳು ರೈಲ್ವೇ ಲ್ಯಾನುಗಳಿಂದ ಸೇರಿಕೊಂಡಿರುವವು. ರುಮೇನಿಯದಲ್ಲಿ ಗೋಧಿ ಬೆಳೆಯುವ ಪ್ರಾಮುಖ್ಯವಾದ ಸ್ಥಳಗಳು ಈಗ ಜರ್ಮನರ ಕೈಸೇರಿರುವದಾದರೂ ಎಣ್ಣೆಯು ದೊರಕುವ ಸ್ಥಳಗಳು ಇನ್ನೂ ಜರ್ಮನರ ಕೈಸೇರಿಲ್ಲ, ಜರ್ಮನರು ಬುಕಾರೆಸ್ಟಿನ ಕಡೆಗೆ ಮುಂದರಿಯುತ್ತಲಿದ್ದಾರೆ. ಜರ್ಮನರು ಈಗ ಬುಕಾರೆಸ್ಟಿಗೆ ೨೦ ಮೈಲು ದೂರದಲ್ಲಿದ್ದಾರೆ. ಮತ್ತು ಬುಕಾರೆಸ್ಟಿನ ಹೊರ ಕೋಟೆಗಳಿಗೆ ೧೦ ಮೈಲು ದೂರದಲ್ಲಿದ್ದಾರೆ. ರುಷ್ಯನರು ಕಾರ್ಪಥೇನಿಯದ ರಣರಂಗಗಳಲ್ಲೆಲ್ಲಾ ನುಗ್ಗಿ ಹೋಗಿ ಕದನ ಮಾಡ ಪ್ರಾರಂಭಿಸಿದ್ದಾರೆ.

ರುಮೇನಿಯ ಸರಕಾರವು ಬುಕಾರೆಸ್ಟನ್ನು ಬಿಟ್ಟು ಇತರ ಕಡೆಗೆ ಹೋಗಿರುತ್ತದೆ.

ರುಷ್ಯನರು ಜೊಬ್ಲೊಂಟ್ಸ ಕೆಜ್ವಿವಾರ್ಸಲ್ಲಿ ಪರ್ವತಗಳ ಮಧ್ಯೆ ನುಗ್ಗಿ ಹೋಗಿ ರೋಷಾವೇಶದಿಂದ ಕದನ ಮಾಡುತ್ತಿದ್ದಾರೆ. ಬಹಳ ರಕ್ತ ಚೆಲ್ಲಿ ಕೆಲವು ಕಡೆ ರುಷ್ಯನರಿಗೆ ಜಯವಾಗಿರುವದೆಂತ ಜರ್ಮನರು ಪ್ರಕಟಿಸುತ್ತಾರೆ.

ರುಮೇನಿಯನರಿಗೆ ಸಹಾಯವಾಗಿ ರುಷ್ಯನರ ಸೇನೆಯು ಬುಕಾರೆಸ್ಟಿಗೆ ಹೋಗಿ ಸೇರಿರುತ್ತದೆ.

ಗ್ರೀಸ್.

ಗ್ರೀಕರು ಯುದ್ಧಸಾಮಾಗ್ರಿಗಳನ್ನೂ, ಮದ್ದು ಗುಂಡುಗಳನ್ನೂ ಮಿತ್ರರ ಸ್ವಾಧೀನ ಕೊಡಬೇಕೆಂದು ಎಡ್ಮಿರಲ್ ಫೊರ್ನೆಟರವರು ಗ್ರೀಕ ಸರಕಾರದವರನ್ನು ಕೇಳಿಕೊಂಡಿದ್ದರು. ಗ್ರೀಕ ಸರಕಾರದವರು ಇದಕ್ಕೆ ಒಪ್ಪದ್ದರಿಂದ ತಾ. ೧ರಲ್ಲು ಮಿತ್ರರ ಸೇನೆಯು ಪಿರೇಯುಸಿನಲ್ಲಿ ಇಳಿದಿರುತ್ತದೆ. ನಂತರ ಗ್ರೀಕ ಅರಸರು ೬ ಬತ್ತೇರಿಗಳನ್ನು ಮಿತ್ರರ ಸ್ವಾಧೀನ ಕೊಡಲು ಒಪ್ಪಿದರೆಂದೂ ಎಡ್ಮಿರಲ್ ಫೊರ್ನೆಟರು ೩೦೦ ಕಾವಲು ಸೈನಿಕರ ಹೊರತು ಉಳಿದ ಸೇನೆಯನ್ನು ಹಿಂದೆ ಕಳುಹಿಸಲು ಒಪ್ಪಿದರೆಂದೂ ವಾರ್ತೆ ಬಂದದೆ. ಗ್ರೀಕ ಅರಸರು ಬತ್ತೇರಿಗಳನ್ನು ಮಿತ್ರರ ಸ್ವಾಧೀನ ಕೊಡುವ ಮೊದಲು ಗ್ರೀಕ ಸೈನಿಕರು ಮಿತ್ರ ಸೈನಿಕರನ್ನು ದಾರಿಯಲ್ಲಿ ಹಾದು ಹೋಗಬಿಡದ್ದರಿಂದ ಉಭಯತರೂ ಕೋವಿ ಸುಟ್ಟುಕೊಂಡಿರುವರು. ೬೦೦ ಬ್ರಿಟಿಷ ಮತ್ತು ಫ್ರೆಂಚ ನೌಕಾವಳಿ ಸೈನಿಕರು ಜೆಪ್ಯಾನ್‌ನನ್ನು ಬಿಟ್ಟು ಪಿರೇಯುಸಿಗೆ ಹೋಗಿರುತ್ತಾರೆ. ಅನಂತರ ಗ್ರೀಕರು ೮ ಬತ್ತೇರಿಗಳನ್ನು ಬಿಟ್ಟುಕೊಡಲು ಒಪ್ಪಿದರು. ಆದರೆ ಮಿತ್ರರು ಇದಕ್ಕೆ ಒಪ್ಪಲಿಲ್ಲ ಎಂದು ತಿಳಿದುಬರುತ್ತದೆ.

ಜಲಂತರ್ಗಾಮಿ ನಾವೆಗಳು.

ಬ್ರಿಟಿಷರ "ಜರ್ಸಿಮೇನ್" "ಎಮ್ಡಿನ್‌ವರ್ಗ" "ಸಿಟಿ ಆಫ್ ಬರ್ಮಿಂಗ್ಹಾಮ್" "ಎರ್ಮಸ್ಟನ್" ಎಂಬ ಹಡಗಗಳೂ ನೊರ್ವೆಯವರ "ವಿಸ್‌ಬರ್ಗ" "ಬೆಲ್ಮೆಲ್" ಅಮೇರಿಕದ "ಚೆಯಂಗ್" ಗ್ರೀಕರ "ಮಿಚೈಲ್" "ಕ್ರಿಸ್ಟೊಫೋರಸ್" ಬ್ರಿಟಿಷರ "ರೆಡ್ಡೀನ್" "ರಾಮಗಾರ್ತ" "ಎಲಿಸನ್" ಮತ್ತು "ಅಲರ್ಟ" "ಕಿಂಗ್ ಮೆಲ್ಕೊವನ್" "ಮೊನ್ಸೆಟ" "ರೀಪ್‌ವೆಲ್" ನೋರ್ವೆಯರ "ಪೆರ" ಸ್ಪಾನಿಯರ "ಉಸೆನ್ನ" ಗ್ರೀಕರ "ಮರ್ಗರೇಟ್" ಬ್ರಿಟಿಷರ "ಎಗೋಲ್ಡ" ಡೇನಿಸರ "ನಾಜಲ್" ನೋರ್ವೆಯನರ "ಸ್ಕಾಜೋಡಫ" ಬ್ರಿಟಿಷರ "ಬರ್ಗೋಮ್" ಹಡಗಗಳು ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

ವಾಯುನಾವೆಗಳು.

ಕಳೆದ ವಾರ ಜರ್ಮನರ ವಾಯುನಾವೆಗಳು ಇಂಗ್ಲಾಂಡಿನ ಕರಾವಳಿಯನ್ನು ದಾಟಿ ಯೋರ್ಕ್‌ಶಯರ್ ಮತ್ತು ತತ್ಪ್ರಾಂತದ ಮೇಲೆ ಬೊಂಬುಗಳನ್ನು ಹಾಕಿರುತ್ತಾರೆ. ಬ್ರಿಟಿಷರು ಶತ್ರುಗಳ ಎರಡು ವಾಯುನಾವೆಗಳನ್ನು ನಾಶಪಡಿಸಿರುತ್ತಾರೆ. ಜರ್ಮನರ ವಾಯುನಾವೆಗಳು ನೂರಕ್ಕೆ ಮಿಕ್ಕಿ ಬೊಂಬುಗಳನ್ನು ಹಾಕಿರುತ್ತವೆ ಆದರೆ ಇದರಿಂದ ವಿಶೇಷ ನಷ್ಟವಾಗಲಿಲ್ಲ. ಒಬ್ಬ ಹೆಂಗಸು ಮೃತಳಾಗಿರುತ್ತಾಳೆ. ೭ ಹೆಂಗಸರು, ೪ ಮಕ್ಕಳು ಗಾಯಪಟ್ಟಿರುವರು. ಒಂದು ಪಟ್ಟಣದಲ್ಲಿ ೧೫ ಮನೆಗಳಿಗೆ ಭಾರಿ ಜಖಂ ಆಗಿದೆ. ೨೦ ಮನೆಗಳಿಗೆ ಸ್ವಲ್ಪ ಜಖಂ ಆಗಿದೆ.

ಲಂಡನಿನ ಮೇಲೆ ಮಧ್ಯಾಹ್ನ ಹೊತ್ತಿಗೆ ಶತ್ರುಗಳ ವಾಯುನಾವೆಯು ೬ ಬೊಂಬುಗಳನ್ನು ಹಾಕಿರುತ್ತದೆ. ಒಬ್ಬ ಹೆಂಗಸಿಗೆ ಗಾಯವಾಗಿದೆ. ಬೇರೆ ವಿಶೇಷ ನಷ್ಟವಾಗಲಿಲ್ಲ.

ಉತ್ತರ ಹಿಂದೂಸ್ಥಾನ.

ಲೋ॥ ಬಾಳಗಂಗಾಧರ ತಿಲಕರವರು ಈಚೆಗೆ ಗದಗಿಗೆ ಏನೋ ಖಾಸಗಿ ಜಂಬರದ ಮೇಲೆ ಹೋಗಿದ್ದರು. ತಿಲಕರವರು ಅಲ್ಲಿಗೆ ಬರಲಿಕ್ಕಿದ್ದಾರೆಂಬ ವಾರ್ತೆ ಕೇಳುತ್ತಲೇ ಅಲ್ಲಿಯ ಜನರು ತಿಲಕರವರನ್ನು ಸನ್ಮಾನಿಸುವ ಉದ್ದೇಶದಿಂದ ಒಂದು ಕಡೆಯಲ್ಲಿ ಕೂಡಿ ಬಂದರು. ಅಲ್ಲಿಯ ಆಸಿಸ್ಟಾಂಟ್ ಪೋಲಿಸ್ ಸುಪರಿಂಟೆಂಡೆಂಟರವರು ೨೦-೨೫ ಕನ್‌ಸ್ಟೇಬಲರೊಡನೆ ಮತ್ತು ಮಾಮಲೇದಾರ ರಾ॥ ಆರ್. ವಿ. ಪಡುಬಿದ್ರಿಯವರು ಜನರು ಗುಂಪು ಕೂಡಿದ ಸ್ಥಳಕ್ಕೆ ಹೋಗಿ ಅವರನ್ನು ಚದರಿಸ ಪ್ರಾರಂಭಿಸಿದರು. ಇದಾಗುವಷ್ಟರೊಳಗೆ ತಿಲಕರವರು ಅಲ್ಲಿಗೆ ಬಂದು ನಿಲ್ದಾಣವನ್ನು ಹತ್ತಿ ಕುಳಿತುಕೊಂಡರು. ತಿಲಕರವರಿಗೆ ಕೂಡಲೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ ಟರ್ನರರಿಂದ ಒಂದು ನೋಟೀಸು ಕೊಡೋಣಾಯಿತು—ಅದರಲ್ಲಿ ಬಾಲಗಂಗಾಧರ ತಿಲಕರವರು ಗದಗ-ಬೇಟಗೇರಿಯ ಮುನಿಸಿಪಾಲ್ ಸಾಸಲಿಯೊಳಗೆ ಇರುವಾಗ ರಸ್ತೆಗಳಲ್ಲಾಗಲೀ ಇತರ ಯಾವ ಸ್ಥಳದಲ್ಲಾಗಲೀ ಶಾಂತತೆಗೆ ಭಂಗವಾಗುವಂಥಾ ಭಾಷಣಗಳನ್ನು ಮಾಡ ಕೂಡದು ಎಂಬದಾಗಿ ಸೂಚಿಸೋಣಾಗಿತ್ತು. ತಿಲಕರವರು ಈ ನೋಟೀಸನ್ನು ನೋಡಿ ರಾ॥ ಪಡುಬಿದ್ರಿಯವರಿಗೆ "ಭಾಷಣ ಯಾವದೆಂದು ನನಗೆ ಗೊತ್ತದೆ, ನಾನು ಅದಕ್ಕೆ ಜವಾಬ್ದಾರನು. ಆದರೆ ಇಲ್ಲಿ ಕೂಡಿದ ಜನರನ್ನು ಬಲತ್ಕಾರದಿಂದ ಅಟ್ಟಿಬಿಡಲು ಕಾರಣವೇನು? ಮೇಜಿಸ್ಟ್ರೇಟರ ಪ್ರತಿಷೇಧ ಹುಕುಂ ವ್ಯಕ್ತಿಶಃ ತನಗೆ ಅಲ್ಲದೆ ಜನರಿಗಲ್ಲ" ಎಂದು ಹೇಳಲು ಪಡುಬಿದ್ರಿಯವರು ಚುಟ್ಟಿ ಸೇದುತ್ತಾ "ಹಾಗೆ ಮಾಡಲು ನನಗೆ ಬಾಯಿದೆರೆಯ ಹುಕುಂ ಇದೆ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪಟ್ಟಣದಲ್ಲಿ ಇದ್ದಾರೆ" ಎಂದು, ಉತ್ತರ ಕೊಟ್ಟರು. ತಿಲಕರು—"ಏನು? ಜನರನ್ನು ಆಕ್ಷೇಪಿಸುವರೆ ಬಾಯ್ದೆರೆಯ ಹುಕುಂ? ಸೆಕ್ಷನ್ ಪ್ರಕಾರ ಲೇಖ ಮೂಲಕ ಡಂಗೂರೆ ಹೊಡಿಸಬೇಕು" ಎಂದರು. ಮೆ॥ ಪಡುಬಿದ್ರಿಯವರು—"ನಮಗೆ ಬಾಯ್ದರೆಯ ಹುಕುಂ. ನಾವು ಅದಕ್ಕೆ ವಿಧೇಯರಾಗಬೇಕು." ತಿಲಕರು—"ಹಾಗಾದರೆ ನೀವು ಜನರು ನನಗೆ ಪಾನಸುಪಾರಿ ಕೊಡುವದನ್ನು ಆಕ್ಷೇಪಿಸುವಿರೋ ಮತ್ತು ನಾನು ಅವರಿಗೆ ಉಪಕಾರಸ್ಮರಣೆ ಹೇಳದಹಾಗೆ ತಡೆಯುವಿರೋ?" ಎಂದು ಕೇಳಲು—ಪಡುಬಿದ್ರಿಯವರು—"ನಮ್ಮ ಹುಕುಂ ಹಾಗೆಯೇ ಇದೆ. ಇದು ಥಿಯೇಟರಿನಲ್ಲಿ ವ ಖಾಸಗಿ ಸ್ಥಳದಲ್ಲಿ ನಡೆಯುತ್ತಿದ್ದರೆ ನಮ್ಮ ಆಕ್ಷೇಪವಿದ್ದಿಲ್ಲ" ಎಂದು ಹೇಳಿದರು. ತಿಲಕರು—"ಜನರು ಈಕ್ಷಣದಲ್ಲಿ ಅಂಥಾ ಏರ್ಪಾಡುಗಳನ್ನು ಮಾಡಲು ಅಶಕ್ತರಾಗಿದ್ದಾರೆ. ಇಲ್ಲಿ ಪಾನಸುಪಾರಿ ಕೊಡುವದು ಮತ್ತು ಸ್ವೀಕರಿಸುವದು ಪೋಲಿಸ್ ಆಕ್ಟಿನ ೪೫ನೇ ಸೆಕ್ಷನಿನ ಪ್ರಕಾರ ಆಕ್ಷೇಪಕರವೆಂದು ನೀವು ಬರಹ ಮೂಲಕ ನನಗೆ ಆಜ್ಞೆ ಕೊಡುವಿರೋ?" ಎಂದು ಕೇಳಿದರು. ಕೂಡಲೇ ಪಡುಬಿದ್ರಿಯವರು ಸ್ವಲ್ಪ ದೂರದಲ್ಲಿಯೇ ಇದ್ದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿಗೆ ಹೋಗಿ ಹಿಂದೆ ಬಂದು ೧೫ ನಿಮಿಷದೊಳಗೆ ಸಭೆ ಬರಕಾಸ್ತು ಆಗುವದಾದರೆ ಸಭೆ ಕೂಡಬಹುದೆಂತ ಮೇಜಿಸ್ಟ್ರೇಟರು ಅಪ್ಪಣೆ ಕೊಟ್ಟಿದ್ದಾರೆಂಬ ವರ್ತಮಾನವನ್ನು ತಂದರು. ಅನಂತರ ಜನರು ಸಭೆ ಕೂಡಿ ಏನೂ ಅಭ್ಯಂತರವಿಲ್ಲದೆ ತಿಲಕರವರನ್ನು ಸನ್ಮಾನಿಸಿದರು.

ಬರ್ಮ ಯುದ್ಧಫಂಡಿಗೆ ಈ ವರೆಗೆ ೨೦ ಲಕ್ಷ ರೂಪಾಯಿಗಳು ಕೂಡಿರುತ್ತವೆ.

ಬರುವ ವರಿಷ್ಠ ನ್ಯಾಯವಿಧಾಯಕ ಸಭೆಯು ೧೯೧೭ನೇ ಇಸವಿ ಫೆಬ್ರುವರಿ ತಾ. ೭ರಲ್ಲು ಕೂಡಿ ಬರುವದು.

ಬಂಗಾಳದ ಗವರ್ನರಾಗಿರುವ ಕಾರ್ಮಿಖೇಲ್ ಪ್ರಭುಗಳ ಕೆಲಸದವಧಿಯು ಇದೇ ಬರುವ ೧೯೧೭ನೇ ಇಸವಿ ಮಾರ್ಚ ತಿಂಗಳಿಗೆ ಅಂತ್ಯವಾದುದರಿಂದ ಅವರ ಬದಲಿಗೆ ರೊನಾಲ್ಡ್ಸೆ ಪ್ರಭುಗಳು ಬಂಗಾಳ ಗವರ್ನರರಾಗಿ ನೇಮಿಸಲ್ಪಟ್ಟಿರುತ್ತಾರೆ. ರೊನಾಲ್ಡ್ಸೆ ಪ್ರಭುಗಳು ಕನ್ಸರ್ವೇಟಿವ್ ಪಕ್ಷದವರು ಕರ್ಜನ್ ಪ್ರಭುಗಳ ಎ. ಡಿ. ಸಿಯಾಗಿದ್ದವರು. ಅದಲ್ಲದೆ ಈಚೆಗೆ ನೇಮಿಸೋಣಾದ ರಾಜಕೀಯೋದ್ಯೋಗ ಕಮಿಷನಿನ ಮೆಂಬರರಾಗಿದ್ದರು. ಈ ಕಾಲದಲ್ಲಿಯೂ ಇವರ ಮತವು ಹಿಂದೀ ಜನರ ಕಡೆಗಿರಲಿಲ್ಲ. ಆದುದರಿಂದ ಇವರ ಈ ನೇಮಕದಿಂದ ಬಂಗಾಳದಲ್ಲಿಯೂ ಹಿಂದೂಸ್ಥಾನದ ಇತರ ಕಡೆಗಳಲ್ಲಿಯೂ ಸಂತೋಷವಾಗಲಿಲ್ಲ,

ನವಂಬರ ತಾ. ೨೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೫೭ ಮಂದಿ ಪ್ಲೇಗ ಬೇನೆಯಿಂದ ಮೃತರಾಗಿರುವರು. ಈ ಪೈಕಿ ಮುಂಬಾಯಿ ಸಂಸ್ಥಾನ ೩೫೭; ಮಧ್ಯ ಹಿಂದೂಸ್ಥಾನ ೧೩೨; ಹೈದರಾಬಾದ್ ೧೩೭; ಮದ್ರಾಸ್ ೪೪೦ ಮೈಸೂರು ೪೩೬; ಸಂಯುಕ್ತ ಸಂಸ್ಥಾನ ೩೩೨; ಬಿಹಾರ್ ಮತ್ತು ಒರಿಸ್ಸ ೧೭೧; ಪಂಜಾಬು ೪೬; ಬರ್ಮ ೨೫; ಮಧ್ಯ ಹಿಂದೂಸ್ಥಾನ ೧೦೦; ರಾಜಪುತಾನ ೪ ಮರಣಗಳಾಗಿರುವವು.

ಮುಂಬಾಯಿ ಸಂಸ್ಥಾನದ ಗವರ್ನರರಾದ ವಿಲಿಂಗ್ಡನ್ ಪ್ರಭುಗಳವರು ಮುಂಬಾಯಿ ಹೆಂಗಸರ ಯುದ್ಧಫಂಡಿನ ವರ್ಷಾಂತಿಕ ಸಭೆಯಲ್ಲಿ ಮಾತಾಡುವಾಗ ಈ ಯುದ್ಧ ಕಾಲದಲ್ಲಿ ಹಿಂದೂಸ್ಥಾನವು ಸಾಮ್ರಾಜ್ಯ ಸರ

ಕಾರಕ್ಕೆ ಮಾಡಿದ ಸಹಾಯ್ಯವನ್ನು ಕುರಿತು ಹೀಗೆ ಮಾತನ್ನಾಡಿರುತ್ತಾರೆ—ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಮತ್ತು ಇಂಗ್ಲಾಂಡಿನ ಕೆಲವು ಜನರು ಹಿಂದೂಸ್ಥಾನವು ಈ ಯುದ್ಧ ಕಾಲ ಸಾಮ್ರಾಜ್ಯಕ್ಕೆ ಮಾಡಬಹುದಾಗಿದ್ದಷ್ಟು ಸಹಾಯ್ಯವನ್ನು ಮಾಡಲಿಲ್ಲವೆಂತ ಹೇಳುತ್ತಿರುವದನ್ನೂ ಬರೆದಿರುವದನ್ನೂ ನೀವು ಕೇಳಿರಬಹುದು. ಈ ವಿಷಯ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಕೆಲವು ಕಾಲದಿಂದ ಆಲೋಚಿಸುತ್ತಿರುವೆನಾದರೂ ಸಮಯ ಒದಗಲಿಲ್ಲ. ಈಗ ಈ ಸಂದರ್ಭದಲ್ಲಿ ನಾನು ಹೇಳುವದೇನೆಂದರೆ—ನಾನು ಮುಂಬಾಯಿ ಸಂಸ್ಥಾನದ ವಿಷಯವಾಗಿ ಮಾತ್ರ ಮಾತಾಡಬಹುದಾದರೂ ಇತರ ಸಂಸ್ಥಾನಗಳು ಕೂಡಾ ಮಾಡಿದ ಕೆಲಸಗಳನ್ನು ಓದಿ ಮತ್ತು ಸ್ವತಹ ನೋಡಿದವನಾಗಿರುವದರಿಂದ ಹಿಂದೂಸ್ಥಾನವು ಈ ಯುದ್ಧ ಕಾಲ ಬೇಕಾದಷ್ಟು ಸಹಾಯ್ಯವನ್ನು ಮಾಡಿದೆ, ಅದು ಹಿಂದೆ ಮಾಡಿಯದೆ, ಈಗಲೂ ಮಾಡುತ್ತಿದೆ, ಮತ್ತು ಮುಂದಕ್ಕೂ ಮಾಡುವದು ಎಂಬ ಭರವಸೆವು ತನಗಿದೆ. ಹಿಂದೂಸ್ಥಾನಕ್ಕೆ ಪುನಃ ಈ ವಿಷಯ ಕರೆಯಾದರೆ ಅದು ನಿಜವಾಗಿಯೂ ಬ್ರಿಟಿಷ ಸಾಮ್ರಾಜ್ಯದ ಒಂದು ಅಂಗವಾಗಿರುವ ತನ್ನ ಕರ್ತವ್ಯವೇನೆಂಬದನ್ನು ತಿಳಕೊಂಡು ಸರಿಯಾದ ಕರ್ತವ್ಯವನ್ನು ಮಾಡದಿರದು ಎಂಬ ನಂಬಿಕೆ ತನಗಿದೆ ಎಂತ ದೃಢವಾಗಿ ಹೇಳುತ್ತೇನೆ.

~~~~

ಸರ್. ಕೃಷ್ಣ ಗುಪ್ತರವರು ಈಗ ಕಲ್ಕತ್ತೆಯಲ್ಲಿರುವರು. ಪತ್ರ ಪ್ರತಿನಿಧಿಗಳು ಅವರಿಗೆ ಭೇಟಿಕೊಟ್ಟು ಹಿಂದೂಸ್ಥಾನದ ಭವಿಷ್ಯವನ್ನು ಕುರಿತಾಗಿ ಕೇಳಿದ್ದಕ್ಕೆ ಅವರು ತಾನು ಈ ಸಾರಿ ಈ ದೇಶಕ್ಕೆ ಬರುವಾಗ ನಿರೀಕ್ಷೆಯ ವಾರ್ತೆಯೊಡನೆ ಬಂದಿದ್ದೇನೆ ಎಂದು ಹೇಳಿರುತ್ತಾರೆ. ಸರ್. ಕೃಷ್ಣಗುಪ್ತರವರು ನಿರೀಕ್ಷೆಯುಳ್ಳವರಾಗಿ ಬಂದಿರುವರಾದರೂ ಹಿಂದೂಸ್ಥಾನದವರಲ್ಲಿ ಈಗಿರುವ ಕೆಲವು ಮನೋರಥಗಳ ವಿಷಯಗಳಲ್ಲಿ ಅವರಲ್ಲಿ ಸಕಲ ಉತ್ಸಾಹವು ತೋರಿಬರುವದಿಲ್ಲ. ಹಿಂದೂಸ್ಥಾನದವರು ಅಪೇಕ್ಷಿಸುತ್ತಿರುವ ವಿಷಯಗಳಲ್ಲಿ ಇಂಗ್ಲಾಂಡಿನಲ್ಲಿ ಈವರೆಗೆ ಯಾವ ತರದ ಬದಲಾವಣೆಗಳೂ ಆದಂತೆ ತೋರಿಬರುವದಿಲ್ಲ. ಆದರೆ ಹಿಂದೂಸ್ಥಾನವೂ ಅದರ ದೇಶೀಯ ರಾಜರುಗಳೂ ಈ ಯುದ್ಧ ಕಾಲ ಮಾಡಿದ ಸಹಾಯ್ಯದಿಂದ ಬ್ರಿಟಿಷ ಜನರಿಗೆ ಹಿಂದೂಸ್ಥಾನದವರ ಮೇಲೆ ಸಹಭಾವತ್ವವು ಹುಟ್ಟಿದೆ. ಹಿಂದೂಸ್ಥಾನದವರು ಒಟ್ಟುಕೂಡಿ ಮುಂದಾಳುಗಳನ್ನು ಇಂಗ್ಲಾಂಡಿಗೆ ಕಳುಹಿಸಿ ತಕ್ಕ ಚಳವಳ ನಡಿಸಿದರೆ ಪ್ರಯೋಜನವು ಬಂದೀತು. ಇಂಥಾ ಚಳವಳವನ್ನು ಈಗಲೇ ಪ್ರಾರಂಭಿಸಿ ಪ್ರಯೋಜನವಿಲ್ಲ. ಯಾಕಂದರೆ ಬ್ರಿಟಿಷ ಜನರಿಗೆ ಈಗ ಯುದ್ಧದ ವಿಷಯವೇ ಬೇಕಾದಷ್ಟು ಕೆಲಸವಿದೆ. ಹಿಂದೂಸ್ಥಾನದ ವಿಷಯ ಆಲೋಚಿಸುವರೆ ಅವರಿಗೆ ಈಗ ಏನೂ ಸಮಯವಿಲ್ಲ ಎಂಬದಾಗಿ ಹೇಳಿರುವರು. ಸರ್. ಕೃಷ್ಣಗುಪ್ತರವರು ಇನ್ನು ೪-೫ ತಿಂಗಳಲ್ಲಿ ಹಿಂದೂಸ್ಥಾನದಲ್ಲಿದ್ದುಕೊಂಡು ಪುನಃ ಇಂಗ್ಲಾಂಡಿಗೆ ಹೋಗುವರು.

~~~~

ಕಲ್ಕತ್ತಾ ನಗರದ ಅಧಿಕಾರಿಗಳು ಅಲ್ಲಿ ಆಚರಣೆಯಲ್ಲಿರುವ "ಹಾಕ್ನಿ ಕಾರೇಜು ಆಕ್ಟು" ಎಂಬ ಕುದುರೆ ಗಾಡಿಗಳ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿರುತ್ತಾರೆ. ಅವುಗಳಲ್ಲೊಂದು ಅತ್ಯಂತ ಶ್ಲಾಘ್ಯವಾದ ಏರ್ಪಾಡೆಂದು ಧಾರಾಳವಾಗಿ ಹೇಳಬಹುದು. ಅದಾವುದೆಂದರೆ "ಗಾಡಿ ಹೊಡೆಯುವವರಿಗೆ ಲೈಸನ್ಸನ್ನು ವಿವೇಚನೆ ಇಲ್ಲದೆ ಕೊಡುವುದಿಲ್ಲ. ೧೮ ವರ್ಷ ವಯಸ್ಸಿನೊಳಪಟ್ಟವನಿಗೆ ಲೈಸೆನ್ಸು ಕೊಡುವದೇ ಇಲ್ಲಾ. ಇದಲ್ಲದೆ ಲೈಸನ್ಸು ಪಡೆದವರಿಗೆ ಕಲ್ಕತ್ತಾ ಪಟ್ಟಣದ ಬೀದಿಗಳೆಲ್ಲಾ ಗೊತ್ತಿರಬೇಕು. ಅವನು ಶಾಂತ ಸ್ವಭಾವವುಳ್ಳವನಾಗಿರಬೇಕು. ಯಾವುದಾದರೂ ಅಪರಾಧಕ್ಕೆ ಅವನಿಗೆ ಹಿಂದೆ ಶಿಕ್ಷೆಯಾಗಿರಕೂಡದು. ಇಂಥಾ ಯೋಗ್ಯತೆಯುಳ್ಳವನಿಗೆ ಮಾತ್ರ ಲೈಸನ್ಸು ಕೊಡೋಣಾಗುವದು." ಈ ಏರ್ಪಾಡನ್ನು ಮುಂಬಾಯಿ ಸರಕಾರದವರೂ ಆಚರಣೆಗೆ ತರಲಿಕ್ಕಿರುವರು. ಇತರ ಸಂಸ್ಥಾನಗಳವರೂ ಇದೇ ಏರ್ಪಾಡನ್ನು ಆಚರಣೆಗೆ ತಂದರೆ ಒಳ್ಳೇದು.

~~~~

ದಕ್ಷಿಣ ಹಿಂದೂಸ್ಥಾನ.

~~~~

ಇದೇ ಕಳೆದ ನವಂಬರ ತಾ. ೨೩ರಲ್ಲಿ ಸುಂಟರಗಾಳಿಯು ಮದ್ರಾಸಿನಲ್ಲಿ ಮಾತ್ರವಲ್ಲ; ಇತರ ಪ್ರಾಂತ್ಯಗಳಲ್ಲಿಯೂ ವಿಶೇಷ ಅನಾಹುತವನ್ನುಂಟುಮಾಡಿರುತ್ತದೆ. ಪೊಂಡಿಚೇರಿಯಲ್ಲಿ ತಾ. ೨೩ನೇ ಬೆಳಗ್ಗೆ ೧೧ ಗಂಟೆಯಿಂದ ಸಾಯಂಕಾಲ ೪ ಗಂಟೆಯವರೆಗೆ ಈ ಗಾಳಿಯು ಬೀಸಿ ಸಾವಿರಾರು ಮನೆಗಳು ಬಿದ್ದುಹೋಗಿರುತ್ತವೆ. ಜನ ಜಾನುವಾರುಗಳ ನಷ್ಟವೂ ಆಗಿರುತ್ತದೆ. ಪೊಂಡಿಚೇರಿಗೆ ಅಲಂಕಾರವನ್ನು ಕೊಡುತ್ತಿದ್ದಂಥಾ ತೆಂಗಿನ ಮರಗಳಲ್ಲಿ ನೇಕಡಾ ೯೦ರಂತೆ ಬಿದ್ದುಹೋದವು. ಪಟ್ಟಣದ ಬೀದಿಗಳಲ್ಲೆಲ್ಲಾ ಮರಗಳು ಬಿದ್ದು ಕಾಡಿನಂತೆ ಕಾಣುತ್ತಿದ್ದವು. ನಿರ್ಗತಿಕರಾದವರ ಗೋಳು ಪ್ರತಿ ಕಡೆಯಿಂದಲೂ ಕೇಳಹತ್ತಿವೆ. ಬಾಳೆ ಹಣ್ಣು, ವೀಳ್ಯದೆಲೆ, ತೆಂಗುತೋಟಗಳೆಲ್ಲಾ ಸುಂಟರ ಗಾಳಿಯಿಂದ ಹಾಳಾಗಿರುತ್ತವೆ. ತಾ. ೨೬ನೇ ಸಾಯಂಕಾಲದ ವಾರ್ತೆಯಿಂದ ೧೦೮ ಮಂದಿ ಈ ಅನಾಹುತದಿಂದ ಸತ್ತುಹೋದರೆಂಬುದಾಗಿ ತಿಳಿದುಬರುತ್ತದೆ. ಗಾಯ ಪಡೆದವರು ಆಸ್ಪತ್ರೆಯನ್ನು ತುಂಬುತ್ತಿದ್ದಾರೆ. ನಿರ್ಗತಿಕರ ಬಗ್ಗೆ ಪೊಂಡಿಚೇರಿ ಸರಕಾರದವರು ೧೫೦,೦೦೦ ರೂಪಾಯಿಗಳ ಸೆಂಕ್ಷನ್ ಮಾಡಿರುತ್ತಾರೆ. ಆಸ್ಪತ್ರೆಗಳಲ್ಲಿ ಬಂದು ಸೇರುವ ಗಾಯವೊಡೆದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿದೆ. ರೈಲ್ವೇ ಸ್ಟೇಶನಿನ ಬಳಿ ಇದ್ದ ಹೊಸ ದೇವಾಲಯದ ಪ್ರತಿಮೆಯು ಬಿದ್ದುಹೋಗಿರುತ್ತದೆ. ಕನಿಷ್ಟಪಕ್ಷಕ್ಕೆ ಪೊಂಡಿಚೇರಿಯ ಮುತ್ಯಾಲ ಪೇಟೆ ಗ್ರಾಮ ಒಂದರಲ್ಲಿಯೇ ೫೦೦೦ ಮಂದಿ ನಿರ್ಗತಿಕರಾಗಿರುವರು. ಕೋಲಾಯಿ ತಂಡಾವರ ಕುಪ್ಪಂನಲ್ಲಿ ೬೦೦ ಮನೆಗಳಿದ್ದವು. ಈಗ ೬ ಮನೆಗಳು ಮಾತ್ರ ಉಳಿದಿರುತ್ತವೆ. ಅಲಾನ್ ಕುಪ್ಪಾಂ ಎಂಬಲ್ಲಿ ಎಲ್ಲಾ ಮನೆಗಳು ಬಿದ್ದಿರುತ್ತವೆ. ಸರಕಾರದವರೂ ಪ್ರಜಾಜನರಲ್ಲಿ ಪ್ರಮುಖರೂ ನಿರ್ಗತಿಕರಾದವರಿಗೆ ಸಹಾಯ್ಯ ಮಾಡುತ್ತಿದ್ದಾರೆ.

~~~~

ಪೆನುಕೊಂಡದಲ್ಲಿ ಸಬ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ನಡೆಯುತ್ತಿದ್ದ ರೈಲ್ವೇ ರಿಜರ್ವ್ ಕಂಪಾರ್ಟಮೆಂಟ ಮೊಕದಮೆಯು ಈಗತಾನೇ ಇತ್ಯರ್ಥವಾಗಿರುವದು. ಈ ಮೊಕದಮೆಯಲ್ಲಿ ಮೇಜಿಸ್ಟ್ರೇಟರು ಮುದ್ದೆಯಾಲೆ ಸ್ಟೇಶನ್ ಮಾಸ್ತರನಿಗೆ ೫ ರೂಪಾಯಿ ಜುಲುಮಾನೆ ವಿಧಿಸಿ ರೈಲ್ವೇ ಆಕ್ಟಿನಲ್ಲಾಗಲಿ ಆ ಆಕ್ಟಿನ ೪೬ನೇ ಸೆಕ್ಷನ್ ಪ್ರಕಾರ ಮಾಡಲ್ಪಟ್ಟ ಕ್ರಮಗಳಲ್ಲಾಗಲೀ ಗಾಡಿಗಳನ್ನು ರಿಜರ್ವ್ ಮಾಡುವ ಸಂಕೇತವು ಇಲ್ಲ ಎಂಬ ಅಭಿಪ್ರಾಯಪಟ್ಟಿರುತ್ತಾರೆ. ಈ ಮೊಕದಮೆಯಲ್ಲಿ ಒಬ್ಬ ಹಿಂದೀ ಗೃಹಸ್ಥನು "ಯೂರೋಪಿಯನರಿಗೆ ಪ್ರತ್ಯೇಕಿಸಲ್ಪಟ್ಟದ್ದು" ಎಂಬ ಪಟ್ಟಿ ತಗಲಿಸಿದ ೩ನೇ ತರಗತಿಯ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದನು. ಟ್ರೇನು ಬಂದು ಮತ್ತೊಂದು ಸ್ಟೇಶನಿಗೆ ತಲುಪುತ್ತಲೇ ಒಬ್ಬ ಯೂರೋಪಿಯನ ಹೆಂಗಸು ರಿಜರ್ವ್ ಮಾಡಲ್ಪಟ್ಟ ಗಾಡಿಯ ಬಳಿ ಬಂದು ಅದರೊಳಗಿದ್ದ ಆ ಹಿಂದೀ ಗೃಹಸ್ಥನನ್ನು ಕೆಳಗಿಳಿಯಹೇಳಿದಳು. ಆದರೆ ಆ ಗೃಹಸ್ಥನು ಕೆಳಗಿಳಿಯದ್ದರಿಂದ ಆ ಹೆಂಗಸು ಸ್ಟೇಶನ್ ಮಾಸ್ತರಲ್ಲಿ ಹೋಗಿ ದೂರು ಕೊಟ್ಟಳು. ತನ್ಮಧ್ಯೆ ಆ ಹಿಂದೀ ಪ್ರಯಾಣಿಕನು ಗಾಡಿಯೊಳಗಿಂದ ಕೆಳಗಿಳಿದು ನಿಲ್ದಾಣದಲ್ಲಿ ತಿರುಗಾಡುತ್ತಿದ್ದನು. ಸ್ಟೇಶನ್ ಮಾಸ್ತರನು ಈ ಪ್ರಯಾಣಿಕನ ಬಳಿಗೆ ಬಂದು ರಿಜರ್ವ್ ಮಾಡಲ್ಪಟ್ಟ ಗಾಡಿಯೊಳಗಿದ್ದ ಅವನ ಸಾಮಾನುಗಳನ್ನು ಕೆಳಗೆ ತೆಗೆಯಹೇಳಿದನು. ಆದರೆ ಅವನು ಕೆಳಗೆ ತೆಗೆಯಲು ನಿರಾಕರಿಸಿದ್ದರಿಂದ ಸ್ಟೇಶನ್ ಮಾಸ್ತರನು ಆ ಪ್ರಯಾಣಿಕನ ಸಾಮಾನುಗಳನ್ನು ಹೊರಗೆ ತೆಗೆಯಿಸಿ ನಿಲ್ದಾಣದಲ್ಲಿ ಹಾಕಿಸಿ ಆ ಯೂರೋಪಿಯನ ಹೆಂಗಸನ್ನು ಗಾಡಿಯೊಳಗೆ ಕೂತುಕೊಳ್ಳಿಸಿ ಈ ಹಿಂದೀ ಪ್ರಯಾಣಿಕನನ್ನು ಆ ಗಾಡಿಯೊಳಗೆ ಹೋಗಬಿಡಲಿಲ್ಲ. ಈ ಪ್ರಯಾಣಿಕನು ಗಾಡಿಬಿಡಲು ಸಮಯವಾದುದರಿಂದ ಮತ್ತೊಂದು ಗಾಡಿಯೊಳಗೆ ಹೋಗಿ ಕುಳಿತನು. ನಂತರ ಅವನ ಸಾಮಾನುಗಳನ್ನು ಸ್ಟೇಶನ್ ಮಾಸ್ತರನು ನಿಲ್ದಾಣದಿಂದ ಅವನು ಕುಳಿತುಕೊಂಡ ಗಾಡಿಯೊಳಗೆ ಹಾಕಿಸಿದನು. ಇದರ ಮೇಲೆ ಆ ಪ್ರಯಾಣಿಕನು ಸ್ಟೇಶನ್ ಮಾಸ್ತರನ ಮೇಲೆ ಫಿರ್ಯಾದಿ ಕೊಟ್ಟನು. ಈ ಮೊಕದಮೆಯು ತನಿಖೆಯಾಗಿ ಮೇಜಿಸ್ಟ್ರೇಟರು ಮೇಲೆ ಹೇಳಿದ ತೀರ್ಮಾನವನ್ನು ಕೊಟ್ಟಿರುತ್ತಾರೆ.

~~~~

ಮದ್ರಾಸಿನ ಫೋರ್ಟು ಸ್ಟೇಶನಿನಲ್ಲಿ ಇದೇ ಕಳೆದ ಜುಲಾಯಿ ತಿಂಗಳ ತಾ. ೨೭ರಲ್ಲಿ ಕೆಲವು ಹಿಂದೀ ವಿದ್ಯಾರ್ಥಿಗಳಿಗೂ ಆಂಗ್ಲೋ ಇಂಡಿಯನರಿಗೂ ಯೂರೋಪಿಯನರಿಗೆ ರಿಜರ್ವ್ ಮಾಡಿದ ಕಂಪಾರ್ಟಮೆಂಟಿನ ಸಂಬಂಧದಲ್ಲಿ ಜಗಳ ಉಂಟಾಗಿ ಈ ಸಂಬಂಧ ಈ ಹಿಂದೀ ವಿದ್ಯಾರ್ಥಿಗಳೂ ಆಂಗ್ಲೋ ಇಂಡಿಯನರೂ ಮದ್ರಾಸ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಯಾಗಿದ್ದರು. ಈ ಮೊಕದಮೆಯು ತನಿಖೆ ನಡೆದು ಇದೇ ನವಂಬರ ತಾ. ೩೦ರಲ್ಲಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ತೀರ್ಮಾನ ಕೊಟ್ಟಿರುವರು. ಆಂಗ್ಲೋ ಇಂಡಿಯನರಲ್ಲಿ ರಿಚಾರ್ಡ ಎಂಬವನಿಗೆ ರೂ. ೪೦. ಜುಲುಮಾನೆ ಕೊಡತಪ್ಪಿದರೆ ೧ ತಿಂಗಳ ಕಠಿಣ ಸಜಾ. ಲೂಕೆ, ಸ್ಮಾಸಿ, ಸ್ಟೀಪನ್ಸ್ ಮತ್ತು ಮೆಕ್‌ಮೋಹನ ಎಂಬವರಲ್ಲಿ ಒಬ್ಬೊಬ್ಬರಿಗೆ ರೂ. ೧೫. ಜುಲುಮಾನೆ, ಜುಲುಮಾನೆ ಕೊಡತಪ್ಪಿದರೆ ಒಂದು ವಾರದ ಕಠಿಣ ಸಜೆಯೂ ಹಿಂದೀಗಳಲ್ಲಿ ವೆಂಕಟರೆಡ್ಡಿ, ಕೃಷ್ಣರಾವ್, ಮತ್ತು ಶ್ರೀಪತಿರಾವ್ ಒಬ್ಬೊಬ್ಬರಿಗೆ ಹತ್ತತ್ತು ರೂಪಾಯಿ ಜುಲುಮಾನೆ, ಜುಲುಮಾನೆ ಕೊಡತಪ್ಪಿದರೆ ೧ ವಾರದ ಸಜೆ ಎಂತ ತೀರ್ಮಾನ ಕೊಟ್ಟಿರುವರು.

~~~~
~~~~

ದಕ್ಷಿಣ ಕನ್ನಡ.

Notice. The Silver Jubilee and School Day of the Canara High School, Mangalore, will be celebrated this year on Tuesday the 26th December 1916. All "Old Boys" are requested to be present on the occasion and take part in its celebrations. They are also requested to communicate their addresses and send their subscriptions at a very early date to the Headmaster of the School.

A. Padmanabhaya
Head Master and
President, Day Celebration Committee.

ಉಡುಪಿ:— ಕಾಶಿ, ಕಂಚಿ, ಗೋದಾವರಿ, ಉಡುಪಿ ಮೊದಲಾದ ಮುಖ್ಯ ಕ್ಷೇತ್ರಗಳಲ್ಲಿ ಅನೇಕಾವರ್ತಿ ಅನೇಕ ವಿಧಗಳಾದ ಯಾಗಗಳನ್ನು ಮಾಡಿ, ಮಹಾರಾಜರುಗಳೇ ಮೊದಲಾದವರಿಂದ ಅನೇಕ ಸಂಭಾವನಾದಿಗಳನ್ನು ಪಡೆದಿರುವ ಕುಂಭಕೋಣದ ದೀಕ್ಷಿತ ವಾಸುದೇವಾಚಾರ್ಯರು ಇಲ್ಲಿ ಶ್ರೀಕೃಷ್ಣ ಮಠದಲ್ಲಿ ಈಗ ಪ್ರತಿ ದಿವಸ ಗೀತೋಪನ್ಯಾಸಗಳನ್ನು ಮಾಡುತ್ತಿದ್ದಾರೆ.

ಈ ಕ್ಷೇತ್ರಕ್ಕೆ ಕಾರ್ತಿಕೋತ್ಸವ ಕಾಲದಲ್ಲಿ ಶ್ರೀಕೃಷ್ಣ ದರ್ಶನಾರ್ಥವಾಗಿ ಬಂದಿದ್ದ ಶ್ರೀರಂಗದ ದೇಶ ಭೂಷಣ ಆರ್. ಕೆ. ಪ್ರಸನ್ನ ವೆಂಕಟೇಶರಾವ್, ಮಿರಾಶಿದಾರ್, ಇವರು ಅನ್ನದಾನ, ಉತ್ಸವ ಮೊದಲಾದ ಶ್ರೀಕೃಷ್ಣ ಸೇವಾರ್ಥವಾಗಿ ರೂ. ೭೫೦. ಶ್ರೀಕೃಷ್ಣ ಮಠಕ್ಕಾಗಿ ತಯಾರಾಗುತ್ತಿರುವ ಚಿನ್ನದ ಪಾಲಕಿ ಬಗ್ಯೆ ರೂ. ೧೦೦. ಇಲ್ಲಿಯ ಮ. ಶಿ. ಪ್ರ. ಸಂಸ್ಕೃತ ಪಾಠಶಾಲೆಯ ಬಗ್ಯೆ ರೂ. ೧,೦೦೦ ಈ ಪ್ರಕಾರ ದಾನಮಾಡುವವರಾದರು. ಇವರು ಮಾಡಿದ ಈ ತಾರತಮ್ಯದಿಂದ ಎಲ್ಲಾದ್ದಕ್ಕಿಂತ ವಿದ್ಯಾಭ್ಯಾಸಕ್ಕೇನೇ ವಿಶೇಷ ಪ್ರೋತ್ಸಾಹ ಕೊಡತಕ್ಕದ್ದೆಂಬದಾಗಿ ಒಂದು ಪಾಠ ಶಿಕ್ಕಿದಂತೆ ತಿಳಿಯಬಹುದು.

ಮಲ್ಪೆ ಬಂದರದಲ್ಲಿ ಅಸಂಖ್ಯಾತ ಮೀನುಗಳು ಬಿದ್ದು ಅವನ್ನು ಒಣಗಿಸುತ್ತಿರುವದರಿಂದ ಹುಟ್ಟುವ ಹೊಲಸು ವಾಸನೆಯು ಇಲ್ಲಿಯ ವರೆಗೂ ಇಲ್ಲಿಂದ ಒಂದೆರಡು ಮೈಲು ಪೂರ್ವಕ್ಕೂ ವ್ಯಾಪಿಸಿ ಅಸಹನೀಯವಾಗಿದೆ. ಇದಲ್ಲದೆ ದೊಡ್ಡ ನೊಣಗಳು ಬಂದು ಆಹಾರ ಪದಾರ್ಥಗಳನ್ನು ಮುಟ್ಟಿಕೊಳ್ಳುತ್ತವೆ. ಇದೇ ರೀತಿ ಇನ್ನೂ ಕೆಲವು ಕಾಲ ನಡೆದರೆ ಈ ಪ್ರಾಂತ್ಯದಲ್ಲಿ ನಿಶ್ಚಯವಾಗಿಯೂ ವಾಂತಿಭೇದಿಯು ಆರಂಭವಾಗದೆ ಇರಲಾರದು.

ಕಾಡಬೆಟ್ಟಿನಲ್ಲಿ ಇತ್ತಲಾಗೆ ಒಂದು ಮನೆ ಸುಟ್ಟು ಅದರಲ್ಲಿದ್ದ ಒಂದು ಮಗು ಸತ್ತು ಹೋಯಿತು. ಪೆರಂಪಳ್ಳಿಯಲ್ಲಿ ಒಂದು ಹಟ್ಟಿ ಸುಟ್ಟು ಹೋಯಿತು. ಜಾನುವಾರುಗಳನ್ನು ಬದುಕಿಸಿದರಂತೆ.

ಕುಂದಾಪುರ:— ನಮ್ಮ ತಾಲೂಕು ಬೋರ್ಡು ಮೆಂಬರಿಕೆಗೆ ಉಮೇದ್ವಾರರಾಗಿದ್ದ ರಾ| ಲಕ್ಷ್ಮಿ ನಾರಾಯಣ ಕಮ್ತಿಯರಿಗೂ ಈ ಮುಂಚೆ ಮೆಂಬರರಾಗಿದ್ದ ರಾ| ಕಂಡ್ಲೂರು ಪಟೇಲ ಅಂತಯ್ಯ ಸೆಟ್ಟರವರಿಗೂ ಮೆಂಬರಿ ಸಂಬಂಧ ಇಲೆಕ್ಶನ್ ಆಗಿ ಸಬ್ ಕಲೆಕ್ಟರರು ರಾ| ಲಕ್ಷ್ಮಿ ನಾರಾಯಣ ಕಮ್ತಿಯರಿಗೆ ಓಟುಗಳು ಹೆಚ್ಚು ಸಿಕ್ಕಿಯವೆ ಎಂಬ ಅರ್ಥಮಾಡಿ ಸದ್ರಿಯವರಿಗೆ ಮೆಂಬರಿಕೆ ಆಯಿತು ಎಂತ ಹುಕುಂ ಕೊಟ್ಟಿದ್ದರು. ಈ ಸಂಬಂಧ ರಾ| ಅಂತಯ್ಯ ಶೆಟ್ಟರವರು ತಾ. ೧೬-೯-೧೯೧೬ರಲ್ಲು ಜಿಲ್ಲಾ ಕಲೆಕ್ಟರ ದೊರೆಗಳವರ ಕೋರ್ಟಿನಲ್ಲಿ ರಿವಿಜನ್ ಮಾಡಿದ್ದಲ್ಲಿ ಸಬ್ ಕಲೆಕ್ಟರವರ ಹುಕುಂ ರದ್ದುಪಡಿಸಿ ಪುನಹಾ ಇಲೆಕ್ಷನ್ ಆಗುವಂತೆ ಹುಕುಂ ಆಗಿತ್ತು. ಆ ಪ್ರಕಾರ ಇದೇ ತಾ. ೩೦-೧೧-೧೯೧೬ರಲ್ಲು ಪುನಃ ಚುನಾವಣೆಯಾದಲ್ಲಿ ರಾ| ಕಮ್ತಿಯವರಿಗೆ ೬ ಓಟ್ಸು. ರಾ| ಶೆಟ್ಟರವರಿಗೆ ೭೯ ಓಟ್ಸು ಸಿಕ್ಕಿ ರಾ| ಶೆಟ್ಟರವರು ನಮ್ಮ ತಾಲೂಕು ಬೋರ್ಡು ಮೆಂಬರರಾಗಿ ಪುನಃ ಆರಿಸಲ್ಪಟ್ಟಿರುತ್ತಾರೆ.

ವಿಟ್ಲ:— ಇದೇ ಕಳದ ನವಂಬರ ತಾ. ೮ರಲ್ಲು ವಿಟ್ಲ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ದಿವಾನ ಸುಬ್ರಾಯ ಭಟ್ಟ ಎಂಬವರು ದಿವಾನ ಕೃಷ್ಣ ಭಟ್ಟರಿಗೆ ರಿಜಿಸ್ಟ್ರನಿಶಿ ರೂಪಾಯಿ ೨೫೦೦ಕ್ಕೆ ಡಿಮಾಂಡ್ ಪ್ರೊ. ನೋಟು ಬರಕೊಟ್ಟಿದ್ದರೆಂತಲೂ ಈಗ ತಾನು ಅದನ್ನು ಬರಕೊಟ್ಟಿದಿಲ್ಲವೆಂಬದಾಗಿ ಮತ್ತು ಸದ್ರಿ ನೋಟು ಬನಾವಣೆದ್ದೆಂಬದಾಗಿ ಪುತ್ತೂರು ಸ್ಪೇಶಲ್ ಸಬ್ ಮೆಜಿಸ್ಟ್ರೇಟರ ಮುಂದೆ ಫಿರ್ಯಾದಿ ಮಾಡಿದ್ದರೆಂಬದಾಗಿಯೂ ಕೇಳುತ್ತೇವೆ.

ಇಲ್ಲಿಯ ಹಿಂದೂ ಟ್ರಾನ್ಸಿಟ್ ಕಂಪೆನಿಯವರ ಟ್ರಾನ್ಸಿಟ್ ಚಲಾವಣೆಯು ಇದೇ ಕಳೆದ ತಾ. ೪ರಿಂದ ಇಲ್ಲಿಂದ ಪುತ್ತೂರಿಗೂ ಪುತ್ತೂರಿಂದ ಇಲ್ಲಿಗೂ ಚಲಾವಣೆಯಾಗಲಿಕ್ಕೆ ಪ್ರಾರಂಭವಾಗಿಯದೆ.

ಪುತ್ತೂರು:— ಪುತ್ತೂರು ಡಿವಿಜನ ಡಿಪ್ಯುಟಿ ಕಲೆಕ್ಟರವರು ಇದೇ ತಾ. ೪ರಿಂದ ೧೦ರ ವರೆಗೆ ಟ್ರೆಜರಿ ಚಾರ್ಜಿನಲ್ಲಿ ಮಂಗಳೂರಲ್ಲಿರುವರು. ತಾ. ೧೧ ಮುಳಿಯಾರ; ೧೨-೧೩ ಬೆಳಿಂಜೆ; ೧೪ ಪೆರಿಯೆ; ೧೫-೧೭ ಬೇಕಲ; ೧೮-೨೦ ಹೊಸದುರ್ಗ; ೨೧-೨೨ ಕಾಸರಗೋಡು. ಈ ರೀತಿ ಸರ್ಕೀಟು ಬೀಸುವರು.

ಖಜಾನಾ ಚಾರ್ಜು ಡಿಪ್ಯುಟಿ ಕಲೆಕ್ಟರವರಾದ ದಿವಾನ್ ಬಹದ್ದೂರ್ ಸಿ. ಗೋಪಾಲನ್ ನಾಯರವರು ಇದೇ ತಾ. ೪ರಲ್ಲು ಇಲ್ಲಿಗೆ ತಲುಪಿ, ಇಲ್ಲಿಯ ತಾಲೂಕು ಖಜಾನೆ ತನಖಿ ನಡಿಸಿರುವರು.

ಸುಳ್ಯ:— ಅಮರಮುಡ್ನೂರು ಗ್ರಾಮದ ಮು| ರಾ| ನೆಲ್ಲಿಕುಂಜ ಕೃಷ್ಣಯ್ಯನವರು ಇದೇ ತಿಂಗಳ ತಾ. ೨ರಲ್ಲು ಊಟ ವಗ್ಯೆರೆ ತೀರಿಸಿ ಚಾವಡಿಯಲ್ಲಿ ದೀಪ ಇಟ್ಟು ಒಂದು ಕುರ್ಚಿಯ ಮೇಲೆ ಕೂತುಕೊಂಡಿರುವಾಗ್ಯೆ ಯಾರೋ ಇವರ ದ್ವೇಶಿಕರು ಕೋವಿಯಿಂದ ಇವರ ತಲೆಗೆ ಗುಂಡು ಹಾರಿಸಿದ್ದಾರಾಗಿಯೂ ದೈವವಶಾತ್ ಇದು ತಪ್ಪಿ ಸ್ವಲ್ಪ ಮಾತ್ರ ಜಕಂ ಆದುದಾಗಿಯೂ ಇವರು ಚಿಕಿತ್ಸೆ ಬಗ್ಯೆ ಪುತ್ತೂರು ಆಸ್ಪತ್ರೆಗೆ ಹೋಗಿರುತ್ತಾರಾಗಿಯೂ ವರ್ತಮಾನ ಕೇಳಿರುತ್ತೇನೆ.

ಸಂಪಾಜೆ ಶಾಲೆಗೂ, ಸುಳ್ಯ ಶಾಲೆಗೂ ಮಧ್ಯ ಇರುವ ಅರಂತೋಡು ಗ್ರಾಮವು ಸುಮಾರು ೭ ಮೈಲು ದೂರದಲ್ಲಿ ಇರುವದಲ್ಲದೆ ಸದರಿ ಅರಂತೋಡು ಗ್ರಾಮವು ಶುಮಾರು ೧೦,೭೧೦ ಎಕ್ರೆ ವಿಸ್ತೀರ್ಣ ಉಳ್ಳದ್ದಾಗಿಯೂ ಸಂಖ್ಯೆ ೭೫೯ ಇದ್ದು ನೂರಾರು ಎಳೇ ಪ್ರಾಯದ ಹುಡುಗರಿಗೆ ಶಾಲೆಯು ಈ ಗ್ರಾಮದಲ್ಲಿ ಇಲ್ಲದೆ ಇರುವದರಿಂದ ಈ ಊರ ನಿವಾಸಿಕರು ಪಡುವ ಕಷ್ಟವು ಬಹಳ ಹೆಚ್ಚಿನದ್ದೇ ಆಗಿರುತ್ತದೆ. ಆದ್ದರಿಂದ ದಯಾಳು ಸರಕಾರದವರು ಈ ಗ್ರಾಮದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದ್ದಾದರೆ ವಿದ್ಯೆಯಲ್ಲಿ ಹಿಂದುಳಿದ ಗೌಡುಗಳ ಹುಡುಗರಿಗೆ ಬಹು ಉಪಕಾರವಾಗುತ್ತಿತ್ತು.

ಕುಂಬಳೆ:— ಕೆಲವು ದಿವಸದ ಹಿಂದೆ ಇಲ್ಲಿಗೆ ಸಮೀಪ ತೆಂಕುಂಬಳೆ ಮುಚ್ಚಿಶಿಕಾರಿಯ ಹಾಜಿಮಗ ಮೊಯಿದಿನ್‌ಕುಂಞಿ ಎಂಬವನಲ್ಲಿ ಮರಕೆಲಸ ಮಾಡುತ್ತಾ ಇದ್ದ ತೆಂಕಲಾಗಿನ ಶಂಕರನ್ ಎಂಬವನು ಮನೆಯವರಿಲ್ಲದ ಸಮಯ ಒಳನುಗ್ಗಿ ಪೆಟ್ಟಿಗೆಯೊಡೆದು ನೂರು ಚಿಲ್ಲರೆ ರೂಪಾಯಿಗಳು ವ ಒಂದೆರಡು ಚಿನ್ನದ ನಗಗಳ ಸಮೇತ ಪರಾರಿಯಾದ ಸಂಗತಿ ಪೋಲೀಸಿನವರಿಗೆ ತಿಳಿಸಿದ್ದಲ್ಲಿ ತಲಾಸಿಯಿಂದ ನಗಗಳು ಮಾತ್ರ ಸಿಕ್ಕಿರುವದಾಗಿಯೂ ಇವನ ಸಹಾಯಕನಾದ ಇನ್ನೊಬ್ಬ ಮಲೆಯಾಳಿಯನ್ನು ಸಹಾ ಕೈದುಮಾಡಿ ಕೊಂಡೋಗಿರುವರಾಗಿಯೂ ತಿಳಿಯುತ್ತೇವೆ.

ಅಳತೆ ತೂಕದ ಸಾಮಾನುಗಳಿಗೆ ಮೊಹರು ಮಾಡುವವರು ಕಾಸರಗೋಡಿಗೆ ಬಂದು ಅನೇಕ ಸಮಯವಾದರೂ ಇಲ್ಲಿಯ ಕೆಲವರು ಇನ್ನೂ ಮೊಹರು ಹಾಕಿಸದಿರುವದರಿಂದ ಮೊಹರು ಬಗ್ಯೆ ಹುಕುಂ ಪುನಹ ಹೊರಡಿಸುವದು ಅಗತ್ಯ.

ಶ್ರೀಪ್ಪೆ ಕಲ್ವರ್ಟು ಅಡಿಯ ಶಹಾರು ರಸ್ತೆಯು ಗಾಡಿ ಜನ ಜಾನುವಾರುಗಳ ಸಂಚಾರಕ್ಕೆ ಆಟಂಕ ಉಂಟಾಗಿರುವ ಕಷ್ಟವನ್ನು ಈ ಮೊದಲು ಎರಡು ದಫೆಯಿಂದ ಇದೇ ಪತ್ರಿಕೆ ಮೂಲಕ ಅರಿಕೆಮಾಡಿದಾಗ್ಯೂ ಈ ವರೆಗೆ ಇತ್ಯರ್ಥವಾಗದ್ದರಿಂದ ಮೂರಕ್ಕೆ ಮುಕ್ತಾಯವೆಂಬಂತೆ ಈ ಸಾರಿ ವ್ಯಸನ ಮೂಲಕ ಪುನಹಾ ಪ್ರಕಟಿಸಬೇಕಾಗಿದೆ.

ಮಂಗಳೂರು.

ಇದೇ ತಾ. ೭ರಲ್ಲು ಕಂಪನಕಟ್ಟೆಯ ಒಂದು ಮನೆಯ ಗೌರಿ ಎಂಬ ಹುಡುಗಿಯು ಒಲೆಯ ಮೇಲೆ ನಿಂತು ಅದರ ಮೇಲಿದ್ದ ಅಟ್ಟಳಿಗೆಯಿಂದ ಏನನ್ನೋ ತೆಗೆಯುವಾಗ ಒಲೆಯ ಬೆಂಕಿ ವಸ್ತ್ರಕ್ಕೆ ತಗಲಿ ಹುಡುಗಿಯು ಸುಟ್ಟುಹೋಗಿ ಮರುದಿನ ಆಸ್ಪತ್ರಿಯಲ್ಲಿ ಮೃತಳಾದಳು. ಒಲೆಯ ಮೇಲೆ ಇರುವ ಅಟ್ಟಳಿಗೆಗಳಲ್ಲಿ ಅಡಿಗೆಯ ಸಾಮಾನುಗಳನ್ನು ಇಟ್ಟು ಒಲೆಯಲ್ಲಿ ಬೆಂಕಿ ಉರಿಯುತ್ತಿರುವಾಗಲೇ ಏನೂ ಲಕ್ಷ್ಯವಿಲ್ಲದೆ ಮೇಲಿನ ಅಟ್ಟಳಿಗೆಯಿಂದ ಸಾಮಾನುಗಳನ್ನು ತೆಗೆಯುವ ಹೆಂಗಸರು ಸದರಿ ಗೌರಿ ಹುಡುಗಿಯ ಈ ಅಕಸ್ಮಿತ ಮರಣದಿಂದ ಎಚ್ಚರ ತಕ್ಕೊಳ್ಳಬೇಕಾಗಿ ಹಾರೈಸುವೆವು.

ಮಿಶ್ಯನ್ ಹ್ಯಾಸ್ಕೂಲಿನ ಉಪಾಧ್ಯಾಯರಲ್ಲೊಬ್ಬರಾದ ರಾ| ನಟರಾಜನರ ಸಂಬಂಧಿತ ಹೆಂಗಸು ಇದೇ ತಾ. ೪ರಲ್ಲು ಬೆಳಿಗ್ಯೆ ಮಾಜಿ ಹಳಿಗೇರಿ ಕೃಷ್ಣರಾಯರ ಹಿತ್ತಲಲ್ಲಿರುವ ಕೆರೆಗೆ ಸ್ನಾನಕ್ಕೆ ಹೋಗಿದ್ದಾಗ ಮುಣುಗಿ ಅಕಸ್ಮಾತ ಮರಣಪಟ್ಟಳು ಎಂತ ತಿಳಿಯುತ್ತೇವೆ. ಈಡುಬಾರದ ಹೆಂಗಸರು ಕೆರೆಗೆ ಇಳಿದು ಸ್ನಾನಮಾಡುವದಕ್ಕಿಂತ ಮೇಲೆಯೇ ಸ್ನಾನಮಾಡಿದರೆ ಇಂಥಾ ಅನಾಹುತಗಳು ಸಂಭವಿಸಲಿಕ್ಕಿಲ್ಲ.

ಗೋಳಿಕಟ್ಟೆ ಬಜಾರಿನ ಅಬ್ಬು ಬ್ಯಾರಿ ಮಗ ೯ ವರ್ಷ ವಯಸ್ಸಿನ ಬಾಪು ಎಂಬ ಹುಡುಗನು ಶಾಲೆಯಿಂದ ಹಿಂತಿರುಗಿ ಇತರ ಇಬ್ಬರು ಹುಡುಗರೊಡನೆ ಇದೇ ತಾ.

೪ರಲ್ಲು ಬಂದರದಲ್ಲಿ ಸ್ನಾನಮಾಡುತ್ತಿರುವಾಗ ಹೊಳೆಯಲ್ಲಿ ಮುಣುಗಿ ಸತ್ತಿರುವನು.

ಕೆ. ಡಿ. ತುಕ್ರನೆಂಬವನು ಮ| ರಾ| ನೆಲ್ಲಿಕಾಯಿ ಶ್ರೀನಿವಾಸರಾಯರ ಮಾಡಿನ ತಮರದ ತಗಡುಗಳನ್ನು ಕಳವುಮಾಡಿ ಮಾರಲಿಕ್ಕೆ ಕೊಂಡುಹೋಗುವಾಗ ಬೀಟ್ ಪೋಲಿಸಿನವರು ಹಿಡಿದು ಅವನನ್ನು ವಿಚಾರಣೆಗೆ ಗುರಿಮಾಡಿಸಿದ್ದರು. ಸದರಿ ಕೆ. ಡಿ. ತುಕ್ರನಿಗೆ ೯ ತಿಂಗಳ ಸಜಾ ವಿಧಿಸೋಣಾಗಿರುತ್ತದೆ.

ಇಲ್ಲಿಯ ಬಾಸೆಲ್ ಮಿಶ್ಶನ್ ನೇಯುವ ಕಾರ್ಖಾನೆಯ ಹೆಡ್ ಕ್ಲಾರ್ಕ ಬಿ. ಭಾಸ್ಕರರೆಂಬವರು ಸದರಿ ಕಾರ್ಖಾನೆಯಲ್ಲಿ ಕ್ಲಾರ್ಕರಾಗಿದ್ದ ಒಲಿವರ್ ಐಮನ್ ಎಂಬವರಿಗೆ ಏನೋ ಸಿಟ್ಟಿನಿಂದ ಆಫೀಸಿನಲ್ಲೇ ಹೊಡೆದುಬಿಟ್ಟರೆಂಬದಾಗಿ ಸದರಿ ಒಲಿವರ್ ಐಮನರು ಹೆಡ್ ಕ್ಲಾರ್ಕ ಭಾಸ್ಕರ ಎಂಬವರ ಮೇಲೆ ಫಿರ್ಯಾದು ದಾಖಲು ಮಾಡಿದ್ದರು. ಈ ಫಿರ್ಯಾದಿಯ ತನಿಖೆಯು ಇದೇ ತಾ. ೪ರಲ್ಲು ನಡೆದು ಮುದ್ದೆಯಾಲೆಗೆ ೭ ರೂಪಾಯಿ ಜುಲುಮಾನೆ, ಜುಲುಮಾನೆ ಕೊಡದೆ ತಪ್ಪಿದರೆ ೫ ದಿವಸಗಳ ಸಜಾ ಎಂಬದಾಗಿ ತೀರ್ಮಾನವಾಗಿದೆ.

ಇದೇ ತಾ. ೧೫ನೇ ಶುಕ್ರವಾರ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ ಸಭೆಯು ಕೂಡಿಬರುವದು.

ಕದ್ರಿ ಗ್ರಾಮದ ಬಟ್ಟಗುಡ್ಡೆ ಎಂಬಲ್ಲಿಯ ಪಕೀರ ಬೆಳ್ಚಾಡನ ಸುಮಾರು ೪೦ ರೂಪಾಯಿ ಕ್ರಯ ಬಾಳುವ ಗಾಡಿಯ ಎತ್ತನ್ನು ಕೊಂದು ಚರ್ಮ ಸುಳಿದು ಮಾರಿದ್ದನಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟ ಅಮ್ಮು ಬ್ಯಾರಿಗೆ ೧ ವರ್ಷದ ಕಠಿಣ ಸಜಾ ವಿಧಿಸೋಣಾಗಿದೆ.

ಬೋಳಾರದ ಮುಳಿಹಿತ್ಲು ಮಂಜು ಬೆಳ್ಚಾಡನ ಮನೆಯಲ್ಲಿ ಜುಗಾರು ಆಡುತ್ತಿದ್ದ ಮಂಜು ಬೆಳ್ಚಾಡ, ಗುಡ್ಡಪ್ಪ ವಗೈರೆ ೪ ಮಂದಿಯನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೆ| ಸೋಜರವರು ರಾತ್ರಿ ೧೧|| ಘಂಟೆಗೆ ಜುಗಾರಿ ಆಡುತ್ತಿರುವಾಗಲೇ ಹಣ ಮತ್ತು ಜುಗಾರಿ ಸಾಹಿತ್ಯಗಳ ಸಹಿತ ಕೈದುಮಾಡಿರುತ್ತಾರೆ.

ಸೆಶ್ಶನ್ಸ್ ತನಿಕೆಗೆ ಬಂದಿದ್ದು ಇಲ್ಲಿಯ ಸಬ್‌ಸಿಡಿಯರಿ ಬಂದಿಖಾನೆಯಲ್ಲಿದ್ದ ಈಶ್ವರ ಎಂಬವನು ತಪ್ಪಿಸಿಕೊಂಡು ಹೋದನೆಂತಲೂ ಕಳೆದ ವಾರ ಸಂಪಾಜೆಯಲ್ಲಿ ಪೋಲಿಸಿನವರು ಅವನನ್ನು ಕೈದುಮಾಡಿರುವರೆಂತಲೂ ತಿಳಿಸಿತ್ತಷ್ಟೆ. ಆದರೆ ತಲೆತಪ್ಪಿಸಿಕೊಂಡ ಈಶ್ವರನನ್ನು ಸಂಪಾಜೆ ಗ್ರಾಮದ ಪಟೇಲರಾದ ರಾ| ಕೀಲಾರು ರಾಮಚಂದ್ರಯ್ಯನವರು ಅನುಮಾನದ ಮೇಲೆ ಹಿಡಿದು ನಂತರ ಆತನು ಪರಾರಿಯಾದ ಬಂದಿವಾನನೆಂದು ತಿಳಿದುಬಂದದ್ದರಿಂದ ಅವನನ್ನು ಕೈದುಮಾಡಿ ಬೆಳ್ಳಾರೆ ಪೋಲಿಸಿನವರ ಸ್ವಾಧೀನ ಕಳುಹಿಸಿಕೊಟ್ಟಿದ್ದಾಗಿರುತ್ತದೆಂಬ ನಿಜ ವರ್ತಮಾನವು ನಮಗೆ ಬಂದಿರುತ್ತದೆ. ಹೀಗೆ ಗ್ರಾಮ ಗ್ರಾಮಗಳ ಪಟೇಲರೂ ಜನರೂ ಪೋಲೀಸಿನವರಿಗೆ ಸಹಾಯ ಮಾಡಿದರೆ ಕಳ್ಳರ ಪತ್ತೆಯನ್ನು ಮಾಡಲು ಪೋಲೀಸರಿಗೆ ಸುಲಭ ಸಾಧ್ಯವಾಗುವದು.

ಪಟ್ಟಣದಲ್ಲಿ ಮೋಟರ್ ಬಂಡಿಗಳು, ಟ್ರಾನ್ಸಿಟುಗಳು ಸೈಕಲುಗಳು, ಮತ್ತು ಜಟ್ಕಾ ಬಂಡಿಗಳ ಚಲಾವಣೆಯು ಈಚೀಚೆಗೆ ಹೆಚ್ಚಾಗುತ್ತಾ ಬರುತ್ತಿದೆ. ಪರಂತು, ಈ ಚಲಾವಣೆಯು ಹೆಚ್ಚಾಗಿರುವ ಈ ಕಾಲದಲ್ಲಿ ಪಟ್ಟಣದ ದಾರಿಗಳಲ್ಲಿ ಮುಖ್ಯವಾಗಿ ಮೋಟರ್ ಬಂಡಿಗಳು ಹೋಗುವ ದಾರಿಗಳಲ್ಲಿ ಬಿಡಿದನಗಳನ್ನು ವ ಹಂದಿ ಇತ್ಯಾದಿ ಮೃಗಗಳನ್ನು ತಿರುಗಾಡಬಿಡುವದು ದಾರಿಗರ ಕ್ಷೇಮಕ್ಕೆ ಹಿತಕರವಲ್ಲ. ಕಳೆದ ಶನಿವಾರ ಸಾಯಂಕಾಲ ೫|| ಗಂಟೆಗೆ ಹಂಪನಕಟ್ಟೆಯ ಬೀದಿಯಲ್ಲಿ ಎರಡು ದನಗಳು ಒಂದಕ್ಕೊಂದು ಹಾಯುತ್ತಾ ಬೀದಿಯಲ್ಲಿ ಹೋಗುತ್ತಿದ್ದ ದಾರಿಗರಲ್ಲಿ ಒಬ್ಬಿಬ್ಬರಿಗೆ ಅಪಾಯವನ್ನುಂಟುಮಾಡಿರುತ್ತದೆ. ಇಂಥಾ ಅಪಾಯಗಳು ಇತರ ಬೀದಿಗಳಲ್ಲಿಯೂ ಆಗಾಗ್ಗೆ ಆಗುತ್ತಿವೆಂತ ತಿಳಿದು ಬಂದದೆ. ಆದಕಾರಣ ಪಟ್ಟಣದ ದಾರಿಗಳಲ್ಲಿ ಬಿಡಿದನ ಮತ್ತು ಹಂದಿ ಇತ್ಯಾದಿ ಮೃಗಪಶ್ವಾದಿಗಳು ತಿರುಗಾಡದಂತೆ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಏರ್ಪಾಡು ಮಾಡಬೇಕಾಗಿ ಹಾರೈಸುವೆವು.

ಯುದ್ಧ ಫಂಡಿನ ಸ್ತ್ರೀಶಾಖೆಗೆ ಹಣವನ್ನು ಕೂಡಿಸುವ ಉದ್ದೇಶದಿಂದ ಇದೇ ತಾ ೫ನೇ ಮಂಗಳವಾರ ಇಲ್ಲಿಯ ಗವರ್ನಮೆಂಟ ಹುಡುಗಿಯರ ಟ್ರೈನಿಂಗ್ ಶಾಲೆಯ ಉಮೇದ್ವಾರರು ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಒಂದು ನಾಟಕವನ್ನಾಡಿ ಸುಮಾರು ೩೦೦ ರೂಪಾಯಿಗಳನ್ನು ಕೂಡಿಸಿರುವರು ಎಂತ ತಿಳಿಯುತ್ತೇವೆ.

ಗುಂಟೂರಿನ ಸೆಶ್ಶನ್ಸ್ ಮತ್ತು ಡಿಸ್ಟ್ರಿಕ್ಟ್ ಜಡ್ಜರಾಗಿರುವ ರಾ| ಸಿ. ಕೆ. ಶ್ರೀನಿವಾಸರಾಯರು ದಕ್ಷಿಣ ಕನ್ನಡಾ ಜಿಲ್ಲೆಯ ಸೆಶ್ಶನ್ಸ್ ಮತ್ತು ಡಿಸ್ಟ್ರಿಕ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಗಣಪತಿ ಸೆಕಂಡರಿ ಶಾಲೆಯಲ್ಲಿ ಇದೇ ೯ನೇ ಶನಿವಾರ ಸಾ| ೪ ಗಂಟೆಗೆ ಮಹಿಳಾ ಸಭೆಯ ಪರವಾಗಿ ಗವರ್ನಮೆಂಟ ಕಾಲೇಜಿಯ ಸಂಸ್ಕೃತ ಪಂಡಿತರಾದ ರಾ| ಶ್ರೀನಿವಾಸಾಚಾರ್ಯರವರು ವಾಲ್ಮೀಕಿ ರಾಮಾಯಣವನ್ನು ಓದುವರು. ಆದಿತ್ಯವಾರ ೪ ಗಂಟೆಗೆ ಮಿಸ್ ಜಾನಕಿ ಅಮ್ಮಾಳ್‌ರವರು ಮಕ್ಕಳಪಾಲನೆ ಸಂಬಂಧವಾದ ಮಾಹಿತಿಗಳನ್ನು ಕೊಡುವರು ಎಂತ ತಿಳಿಯುತ್ತೇವೆ.

ಕಳೆದವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಪ್ಲೇಗು ಮರಣವಿದ್ದಿಲ್ಲ.

ಅನಂತಪುರದ ಸಿಡೆಡ್ ಡಿಸ್ಟ್ರಿಕ್ಟ್ ಕಾಲೇಜಿನಲ್ಲಿ ಜೂನಿಯರ್ ಲೆಕ್ಚರರಾಗಿರುವ ರಾ| ಕೆ. ಶಂಕರ ಮೆನೊನರವರು ದಕ್ಷಿಣ ಕನ್ನಡಾ ಜಿಲ್ಲೆಯ ಶಾಲೆಗಳ ಆಕ್ಟಿಂಗ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿ ಭವನದಲ್ಲಿದ್ದು ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸೀನಿಯರ್ ಬಿ. ಎ. ಕ್ಲಾಸಿನಲ್ಲಿ ಕಲಿಯುತ್ತಿದ್ದ ಮೂಲ್ಕಿ ಟಿ. ಲಕ್ಷ್ಮಣ ಶ್ಯಾನುಭಾಗನೆಂಬ ವಿದ್ಯಾರ್ಥಿಯು ನಿನ್ನೆ ಮಧ್ಯಾನ್ಹ ೩-೧೫ ಗಂಟೆಗೆ ವಿಷಮ ಜ್ವರದಿಂದ ದೈವಾಧೀನನಾದನೆಂಬದನ್ನು ತಿಳಿಸಲು ವಿಷಾದಪಡುತ್ತೇವೆ. ಈ ವಿದ್ಯಾರ್ಥಿಯು ಬಾಲ್ಯದಿಂದಲೇ ಕುಶಾಗ್ರ ಬುದ್ಧಿಯುಳ್ಳವನಾಗಿದ್ದು ಮುಲ್ಕಿ ಮಿಶ್ಶನ್ ಶಾಲೆ, ಉಡುಪಿ ಮಿಶ್ಶನ್ ಶಾಲೆಗಳಲ್ಲಿ ಉಪಾಧ್ಯಾಯರ ಪ್ರೀತಿಯನ್ನು ಗಳಿಸಿಕೊಂಡು ಪ್ರತಿ ವರ್ಷವೂ ತಪ್ಪದೆ ಮೇಲಿನ ತರಗತಿಗಳನ್ನು ಸೇರುತ್ತಾ ಬಂದಿದ್ದನು. ೪ ವರ್ಷಗಳಿಂದ ಇಲ್ಲಿಯೂ ಕಾಲೇಜು ಉಪಾಧ್ಯಾಯರ ಪ್ರೀತಿ ಮನ್ನಣೆಗೆ ಪಾತ್ರನಾಗಿದ್ದನು. ಅಷ್ಟೇ ಅಲ್ಲ; ಈ ವಿದ್ಯಾರ್ಥಿಯಲ್ಲಿ ದೇಶಸೇವೆ ಮಾಡುವ ಅದರಲ್ಲಿಯೂ ಕನ್ನಡಾ ಭಾಷಾಸೇವೆಗೆ ಉತ್ತಮ ಸಹಕಾರಿಯಾಗುವ ಸಂಭವಗಳಿದ್ದವು ಎಂಬದು ನಮ್ಮ ಅನುಭವಕ್ಕೆ ಬಂದ ವಿಷಯವಾದುದರಿಂದ ಈ ವಿದ್ಯಾರ್ಥಿಯ ಮರಣದಿಂದ ದಕ್ಷಿಣ ಕನ್ನಡ ಜಿಲ್ಲೆಯ ಒಂದು ರತ್ನವೇ ಕಳೆದುಹೋಯಿತೆಂತ ಧಾರಾಳವಾಗಿ ಹೇಳುವೆವು. ಈ ವಿದ್ಯಾರ್ಥಿಯ ಮರಣಕ್ಕಾಗಿ ಸಂತಾಪಪಡುವ ಗುರುಹಿರಿಯರ ಮತ್ತು ನೆಂಟರಿಷ್ಟರೊಡನೆ ನಾವೂ ಸಹಸಂತಾಪಪಡುವೆವು.

ಇದೇ ತಿಂಗಳ ತಾ. ೨೨ರಲ್ಲು ಸಾಯಂಕಾಲ ೪|| ಗಂಟೆಗೆ ಕಾರ್ಕಳದ ಹಿಂದೂ ಹುಡುಗಿಯರ ಶಾಲೆಯಲ್ಲಿ ರಾಮಸಮುದ್ರ ಕಾಡು ಬಗ್ಯೆ ೧೯೧೭ನೇ ಇಸವಿಯ ಪಂಚಾಯತಿದಾರರನ್ನು ಆರಿಸುವರೆ ಕಾರ್ಕಳ ಮತ್ತು ಮಿಯ್ಯಾರ್ ಗ್ರಾಮಸ್ಥರ ಒಂದು ಸಭೆಯು ಕೂಡುವದು. ಈ ಸಾರಿ ಆರಿಸಲ್ಪಟ್ಟ ಕಾರ್ಕಳದ ಮೆಂಬರರಿಗೆ ಕಾರ್ಕಳ ಗ್ರಾಮದ ಇತರ ಪಂಚಾಯತಿಗೆಯ ಅಧಿಕಾರವು ಕೊಡೋಣಾಗುವದು. ಕಾರ್ಕಳದ ಎಲ್ಲಾ ಜನರಿಗೂ ಈ ಸಭೆಗೆ ಸ್ವಾಗತವಿದೆಂತ ರಾಮಸಮುದ್ರ ಕಾಡು ಪಂಚಾಯತಿ ಕಮಿಟಿಯ ಸೆಕ್ರೆಟರಿಯಾಗಿರುವ ಬಹುಮಾನಪಟ್ಟ ಕೆ. ಎಸ್. ಬಟ್ಟರವರು ತಿಳಿಸಿರುತ್ತಾರೆ.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಸಭೆಯು ಕಳೆದ ವರುಷ ಮಂಗಳೂರಲ್ಲಿ ನೆರದಾಗ್ಯೆ ಕಾಸರಗೋಡಿನಿಂದ ಬಂದ ಪ್ರತಿನಿಧಿಗಳ ಪರವಾಗಿ ಮ| ರಾ| ವಕೀಲ್ ಶ್ಯಾಮಸೆಟ್ರು ಈ ವರುಷದ ಸಭೆಯನ್ನು ಕಾಸರಗೋಡಿಗೆ ಕರೆದಿದ್ದರು. ೮-೯ ವರುಷಗಳಲ್ಲಿ ಮಂಗಳೂರು ವಿನಹ ಇತರ ಕಡೆಗೆ ಸಭೆಯನ್ನು ಆಮಂತ್ರಿಸಿದ್ದು ಇದೇ ಪ್ರಥಮ ಸಾರಿಯಾಗಿರುತ್ತದೆ. ಆದರೆ ಕಾಸರಗೋಡಿನವರ ಈ ಆಮಂತ್ರಣಕ್ಕೆ ಸಭೆಯಲ್ಲಿ ಕೆಲವು ಮೆಂಬರರು ಪ್ರತಿಕೂಲವಾಗಿ ವಾದಿಸಿದ್ದರು. ಮ| ರಾ| ಕೆ. ಶ್ಯಾಮಸೆಟ್ರು ಈ ತರದ ಬದಲಾವಣೆಯಿಂದ ಸಂಘಕ್ಕೆ ಉಂಟಾಗುವ ಪ್ರಯೋಜನವನ್ನು ತಿಳಿಯಪಡಿಸಿ, ಸಭೆಯು ತಕ್ಕ ವಿಜೃಂಭಣೆಯಿಂದ ನಡೆಯುವಂತೆ ಕಾಸರಗೋಡಿನವರು ಪ್ರಯತ್ನಿಸುವರೆಂತಲೂ ಒಂದುವೇಳೆ ಅಂಥಾ ಅನಾನುಕೂಲತೆ ಕಂಡುಬಂದಲ್ಲಿ ಸಭೆಯು ಮಂಗಳೂರಲ್ಲಿಯೇ ಕೂಡುವಂತೆ ಒಕ್ಟೋಬರ ತಿಂಗಳೊಳಗೆ ತಾವು ತಿಳಿಸುವೆವೆಂತಲೂ ಹೇಳಿದ ಮೇಲೆ ಬಹು ಪಕ್ಷದವರ ಅನುಮತಿ ಮೇರೆಗೆ ವಾರ್ಷಿಕ ಸಭೆಯು ಕಾಸರಗೋಡಿನಲ್ಲಿ ಕೂಡುವಂತೆ ಮಂಜೂರಾಯಿತು. ಈ ಪ್ರಕಾರ ಕಾಸರಗೋಡಿನಲ್ಲಿ ಬರುವ ಸಭೆಯ ಕುರಿತು ಈಗಲೇ ಹೆಚ್ಚಿನ ಸಾಧನೆಯಲ್ಲಿದ್ದಾರೆಂದು ವರ್ತಮಾನವಿದೆ. ಮಾತ್ರವಲ್ಲ, ಕಳೆದ ಆದಿತ್ಯವಾರ ಮ| ರಾ| ಶ್ಯಾಮಸೆಟ್ರು ಸ್ವತಹ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನಕ್ಕೆ ಬಂದು ಭವನ ವಾಸಿಗಳ ಕೂಡೆ ಸಭೆಯು ಜನವರಿ ತಿಂಗಳ ಶುರುವಿನ ವಾರದಲ್ಲಿ ನೆರೆಯುವದೆಂದೂ ಈ ಸಂದರ್ಭದಲ್ಲಿ ಕಾಸರಗೋಡಿನ ವಿದ್ಯಾರ್ಥಿಗಳು ಉಮೇದ್ವಾರರಾಗಿ ೨ ದಿವಸಗಳಿಗೆ ಮುಂದಾಗಿ ಬಂದು ಹಳ್ಳಿಗಳಿಂದ ವಂತಿಗೆ ವಸೂಲುಮಾಡುವುದರಲ್ಲಿ ಹೆಚ್ಚಿನ ಪ್ರಯತ್ನ ತೆಗೆದುಕೊಂಡು ತಮ್ಮ ಕೆಲಸದಲ್ಲಿ ಸಹಾಯಕರಾಗಿ ಸಭೆಯನ್ನು ಸಾರ್ಥಕಗೊಳಿಸಬೇಕೆಂಬದಾಗಿಯೂ ಕೇಳಿಕೊಂಡಿದ್ದಾರೆ ಎಂತ ಸಂಘದ ಮೆಂಬರರಲ್ಲೊಬ್ಬರು ತಿಳಿಸಿರುತ್ತಾರೆ.

ವಿದೇಶ ವೃತ್ತಾಂತ.

ಇಂಗ್ಲಾಂಡಿನ ರಾಜಕೀಯ ಆವರಣದಲ್ಲಿ ಬದಲಾವಣೆಯಾಗುವ ಸಂಭವವಿದೆಂತ ವಾರ್ತೆ ಬಂದದೆ. ಯುದ್ಧ ಕೌನ್ಸಿಲ್ ಸಭೆಯನ್ನು ಹೊಸತಾಗಿ ರೂಪಿಸುವ ಸಂಭವವಿದೆ. ಈ ಕೌನ್ಸಿಲಿನ ಸಂಬಂಧ ಯುದ್ಧಮಂತ್ರಿಯಾದ ಲ್ಯೊಡ್ ಜೋರ್ಜರಿಗೂ ಪ್ರಧಾನ ಮಂತ್ರಿಯರಾದ ಮೆ| ಅಸ್ಕ್ವಿತರವರಿಗೂ ಮತಭೇದ ಉಂಟಾಗಿ ಮೆ| ಲ್ಯೊಡ್‌ರವರು ರಾಜಿನಾಮೆ ಕೊಟ್ಟಿರುವರು. ಮೆ| ಬೋನರ್‌ಲಾ, ಡರ್ಬಿ ಪ್ರಭುಗಳೂ ರಾಜಿಕೊಡಲಿಕ್ಕಿದ್ದಾರೆಂತ "ರೆನೋಲ್ಡ್ಸ್" ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ನಂತರದ ವಾರ್ತೆಯಿಂದ ಲ್ಯೊಡ್‌ರವರ ರಾಜಿನಾಮೆಯು ಅಂಗೀಕರಿಸೋಣಾಗಲಿಲ್ಲ. ಮೆ| ಅಸ್ಕ್ವಿತರವರು ಮೆ| ಲ್ಯೊಡ್ ಜೋರ್ಜ, ಮೆ| ಬೋನರ್‌ಲಾ, ಕ್ರೂ ಪ್ರಭುಗಳು, ಮೆ| ಮೊಂಟೆಗೋರವರ ಕೂಡೆ ತಕ್ಕ ಆಲೋಚನೆ ನಡಿಸಿರುತ್ತಾರೆಂತಲೂ ಲ್ಯೊಡ್ ಜೋರ್ಜರವರ ಸೂಚನೆ ಪ್ರಕಾರ ಸರ್ ಎಡ್ವರ್ಡ್ ಕಾರ್ಸನ್, ಮೆ| ಅಸ್ಕ್ವಿತ್, ಮೆ| ಚಾರ್ಕ್ಲೋರ್‌ರವರು ಕೂಡಿದ ಒಂದು ಯುದ್ಧ ಕೌನ್ಸಿಲ್ ಸಭೆಯು ರೂಪಿಸೋಣಾಗಲಿಕ್ಕಿರುವುದರಿಂದ ಇಂಗ್ಲಾಂಡಿನ ರಾಜಕೀಯ ಸ್ಥಿತಿಯಲ್ಲಿ ಬದಲಾವಣೆಗಳು ಉಂಟಾಗುವ ಸಂಭವವಿಲ್ಲವೆಂದೂ ವಾರ್ತೆ ಬಂದಿತ್ತು. ಆದರೆ ಈ ದಿನ ಬಂದ ವಾರ್ತೆಯಿಂದ ಮೆ| ಅಸ್ಕ್ವಿತರವರೂ ಮೆ| ಲ್ಯೊಡ್‌ರವರೂ ರಾಜಿನಾಮೆ ಕೊಟ್ಟಿರುವರೆಂದೂ ಚಕ್ರವರ್ತಿಯವರು ಮೆ| ಬೋನರ್‌ಲಾರವರನ್ನು ಆಲೋಚನೆ ಬಗ್ಗೆ ತನ್ನ ಬಳಿಗೆ ಕರೆಸಿರುವರೆಂದೂ ವಾರ್ತೆ ಬಂದದೆ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ತಂತೀ ವಿಳಾಸ:—"ಪಂಡಿಟ್" ಮದರಾಸ್. ಜಾರ್ಜಟೌನ್, ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ವಿಕ್ರೇತರು:—ಡಿ. ಊಲನ್ ಮಾರ್ಟಿಸ್,
ಮಾಥರ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮೆಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜೆ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾಪ್ಯಾವಾಡಿನ ವಿಠವೆಲ್‌ನಿಂದ ಮ. ಜೆ. ರಸ್ಕಿನ್ಹ ಬರೆಯುತ್ತಾರೆ:—ಒಂದ ವರುಷದ ಲಾಗಾಯಿತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:—

The Malariana Company,
Kankanady S. C.

ಜೀನಸು ಧಾರಣೆ.

(ರಖಂ).

ಮುಸ್ಕತಿ ಅಕ್ಕಿ ಹಳೆತು	7— 6—0ರಿಂದ	7—14—0
ಗುಡ್ಡು ,, ಹೊಸ್ತು	6— 4—0	6— 8—0
ಮುಸ್ಕತಿ ,, ,,	6— 0—0	6— 6—0
ಹೊಸ ರಾಶಿ ,,	4—14—0	5— 6—0
ಅವ್ವಲ್ ಬೆಳ್ತಿಗೆ ,,	6— 4—0	6— 8—0
ಗುಡು ಬೆಳ್ತಿಗೆ ,,	5— 8—0	5—12—0
ರಂಗೂನು ಬೆಳ್ತಿಗೆ ಗೋಣಿ ೧ರ	10— 0—0	10— 4—0
ಗೋಧಿ ಗೋಣಿ ೧ರ	11— 4—0	12— 0—0
ಹುರುಳಿ ಗೋಣಿ ೧ರ	5—10—0	5—12—0
ಕಡಲೆ ಗೋಣಿ ೧ರ ಬೊಂಬ್ಯ	9— 8—0	10— 8—0
ತೊಗರಿ ಗೋಣಿ ೧ರ		10— 8—0
ತೊಗರಿ ಬೇಳೆ ಗೋಣಿ ೧ರ	12— 8—0	15— 8—0
ಉದ್ದು ಗೋಣಿ ೧ರ	10— 8—0	11— 4—0
ಊರುಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ.		4— 7—0
ಕೊಬ್ರಿ ಖಂಡಿ ೧ರ	95— 0—0	105—8—0
ಕೊಬ್ರಿಹಿಂಡಿ ಖಂಡಿ ೧ರ		23— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	2[illegible]— 0—0	30— 0—0
ಕೊಬ್ರಿ ಎಣ್ಣೆ ಮುಡಿ ೧ರ.	7— 0—0	7— 2—0
ಎಳ್ಳೆಣ್ಣೆ ಮುಡಿ ೧ರ(ಕರಾವಳ)		4—10—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ	6— 0—0	6—11—0
ಮೋರಿಸ್ ಸಕ್ಕರೆ ಮುಡಿ ೧ರ		5—10—0
ಕಾಫಿ ಖಂಡಿ ೧ರ	225— 0—0	235—0—0
ಹೊಸಬೆಳಗೋಟು ಖಂಡಿ೧ರ	82— 0—0	85— 0—0
ಹೊಸ ಗೇರುಬೀಜ ಮುಡಿ ೧ರ	2—12—0	2—13—0
ಕಬ್ಬಿಣ ಖಂಡಿ ೧ರ		75— 0—0
ತಾಂಬ್ರ ತಗಡು ಮಣ ೧ರ	26— 0—0	27— 0—0
ತಾಂಬ್ರ ಪಾತ್ರಗಳ ಮಣ ೧ರ		28— 0—0
ಚೀನಿ ಬೆಳ್ಳಿ ತೀ. ೧ರ		24— 0—0
ಪಚ್ಚೆಹೆಸರು ಮುಡಿ ೧ರ	5— 1—0	5— 2—0
ಕಾಳುಮೆಣಸು ಖಂಡಿ ೧ಕ್ಕೆ		260—0—0

ರಾ. ಮುಟ್ಟುಗೋಪಾಲಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ ಪದಗಳೂ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಮಟ್ಟಿನ ಪದಗಳೂ, ದಾಸರ ಕೀರ್ತನೆಯ ನಮೂನೆ ಪದಗಳೂ, ನಾಟಕದ ನಮೂನೆ ಹಿಂದೂಸ್ಥಾನಿ ಮಟ್ಟಿನ ಕೀರ್ತನೆಗಳೂ, ಮಂಗಲ ಪದಗಳೂ, ಶೋಭನ ಪದಗಳೂ, ಜೋಗುಳ ಪದಗಳೂ, ಉದಯ ರಾಗ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಟಪ್ಪಾಲ ಹಾಸಲು ಸಮೇತ 4 ಆಣೆಗೆ ಸಿಕ್ಕುವದು.

ಕೊಂಚ ಪ್ರತಿಗಳು ಮಾತ್ರ ಇವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಖಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಚರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂಧರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ರ, ಧಾತುಕ್ಷಯ, ಇದಲ್ಲದೆ ಉದರವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

100 ರೂಪಾಯಿಗಳ ಬಹುಮಾನ.

ಮದ್ರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳು ವಿಷ ಸಂಜೀವಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುವೆವು. ಚೇಳು ಹೊಡೆದ ಸ್ಥಳದಲ್ಲಿ **ಸರ್ವ ಚೇಳು ವಿಷ ಸಂಜೀವಿನಿ** ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ಓಡಿಹೋಗುವಂತೆ ಬಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ಸ್ಥಾಪಿಸುವವರು ನಮ್ಮ ಔಷಧವನ್ನು ಮಾರಾಟ ಮಾಡಿ ತಮ್ಮ ನೆರೆಹೊರೆಯವರನ್ನು ಮೋಸಗೊಳಿಸುವುದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಸೀಸೆ 1ಕ್ಕೆ 8 ಅಣೆ; ಡಜನ್ 1ಕ್ಕೆ ರೂ. ೬.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ್ದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿ ಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಕ್ಕೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಪೆಟ್ಟಿ ೧ಕ್ಕೆ ೨-೦-೦. ದೊಡ್ಡ ಪೆಟ್ಟಿ ಉತ್ತಮ ತರಹಗಳಿಗೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿಗೆ ೪ ತೊಲೆ, ದ್ವಿಯಂ ರೂಪಾಯಿಗೆ ೮ ತೊಲೆ, ತೃಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿಗೆ ೧೬ ತೊಲೆ.

ಇವಲ್ಲದೆ ಬೇರೆ ದೇಶ ಸಾಮಾನುಗಳ ಕ್ಯಾಟಲಾಗನ್ನು ಕೇಳುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
SIROMANI NARAYANA CHARYA & CO, ಚೌಕಾಂಬಾ, ಕಾಶಿ.
Choukhambay, BENARES CITY.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು! ೧೬ ಮೊಳ!! ಬಾಳಿಕೆ ಬರುವುದು!!!

ಗೋವರ್ಜಾನ್ ಬಳ್ಳಿಶೀರೆ ರೂ. ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಮೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಜಿಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಯುಕಲಿಪ್ಟಸ್ ಒಯಿಲ್.

(ನೀಲಗಿರಿ ಎಣ್ಣೆ).

ಇದೊಂದು ಇಲ್ಲದಿದ್ದರೆ ಎಂಥಾ ಬಾಮ್ ಆಗಲಿ ಅಥವಾ ಅಂಜನವಾಗಲಿ ನಡಿಯಲಾರದು. ನೀಲಗಿರಿ ಎಣ್ಣೆಯನ್ನು ಸೇರಿಸಿಕೊಂಡು, ಅಥವಾ ರೂಪಾಂತರಗೊಳಿಸಿಕೊಂಡು ನಾನಾ ಬಗೆಯ ಬಾಮುಗಳೂ ಅಂಜನಗಳೂ ತಯ್ಯಾರುಮಾಡಲ್ಪಡುವವು. ನೀಲಗಿರಿ ಎಣ್ಣೆಯ ಗುಣವು ಅಷ್ಟು ಧಾರಾಳವಾಗಿದೆ.

ಅಧಿಕ ಬೆಲೆಯ ಬಾಮುಗಳೂ ಅಂಜನಗಳೂ ಇವುಗಳನ್ನು ತೆಗೆದಿಡುವದಕ್ಕಿಂತ **ಬರೇ ಕ್ರಯ ಆಣೆ 5ರ** ಒಂದು ನೀಲಗಿರಿ ಎಣ್ಣೆಯ ಬುದ್ದಿಯನ್ನು ಸದಾ ಪ್ರಯಾಣಕಾಲದಲ್ಲಿಯೂ ಗೃಹಗಳಲ್ಲಿಯೂ ಸಂಗ್ರಹಿಸಿಡುವದು ಎಷ್ಟೋ ಗುಣಕಾರಿಯಾಗಿದೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ವ್ಯಾಪಾರಸ್ಥರಿಗೆ ಕಮಿಶನ್ ಕೊಡೋಣಾಗುವದು. ಇತರ ಎಲ್ಲಾ ಔಷಧಿಗಳ ಸಂಗ್ರಹವೂ ನಮ್ಮಲ್ಲಿರುವದು.

ಟಿಸ್ಸ್ಯು ಮತ್ತು ಹೋಮಿಯೋಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರಹೋಗಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರಾನ್ಸಲೇಟರಾದ ಮ॥ ರಾ॥ ಬೆನಗಲ್ ರಾಮರಾವ್‌ರವರಿಂದ
ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫೈನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಚಾರ ವಿವೇಚನೆ ಬೆಲೆ 2 ಆಣೆ, ಇತರ ಪ್ರಬಂಧಗಳು ಕಾಷ್ಟದಾ ಬೆಲೆ ೧ ಆಣೆ. ಮುಕ್ತಾಹಾರ 2 ಆಣೆ, ಗೃಹಲಕ್ಷ್ಮಿ 3 ಆಣೆ ಇತ್ಯಾದಿ.

ಗೇಣಚೀಟು ಫೋರ್ಮುಗಳು ಮತ್ತು ಕೋರ್ಟು ಫೋರ್ಮುಗಳು, ಶಿಕ್ಷಾ ಬಾಬಿನ ಬಗ್ಗೆ ಬೇಕಾದ ಪುಸ್ತಕಗಳು ಬೇಗನೆ ಸಿದ್ಧವಿರುತ್ತವೆ.

ಶಾರದಾ ಛಾಪಖಾನೆ.
ರಥಬೀದಿ, ಮಂಗಳೂರು.

ಚಕ್ರಕೋಡಿ ವಿಷ್ಣುಶಾಸ್ತ್ರಿಗಳ ಮಗ ಸುಬ್ಬಣ್ಣ ಶಾಸ್ತ್ರಿಗಳು ಗುಣಿಸಿ
ಚ॥ ಗೋಪಾಲಕೃಷ್ಣ ಶಾಸ್ತ್ರಿಗಳು ಮತ್ತು
ತಿರಂಕಲ್ಲು ಸುಬ್ರಾಯ ಜೋಯಿಸರಿಂದ
ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗಿರುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3, 1 ದರ್ಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0 ಬೇಕಾದವರು ಬೇಗನೇ ಬರಕೊಳ್ಳುವದು.

ವಿಳಾಸ:—

ಕೆ. ಅಣ್ಣಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಮಾರಾಟಕ್ಕೆ ಸಿದ್ಧವಾಗಿವೆ.

ಗೇಣು ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ ಕ್ಕೆ			೦	೧೦	೦
,,	೫೦	,, ,,	೦	೬	೦
,,	೨೫	,, ,,	೦	೩	೦
ಕುರಿ ಫಂಡಿನ ರಶೀದಿ ೧೦೦		,, ,,	೦	೮	೦
,,	೫೦	,, ,,	೦	೪	೦
,,	೨೫	,, ,,	೦	೨	೦
ಪರಸ್ಪರ ಸಹಾಯಕ ಸಂಘಗಳ ಬಗ್ಗೆ ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ಕ್ಕೆ			೦	೮	೦
ಯಾವದಕ್ಕಾದರೂ ಉಪಯೋಗಿಸಲು ಅನುಕೂಲವಾದ ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ಕ್ಕೆ			೦	೮	೦
,,	೫೦	,, ,,	೦	೪	೦
,,	೨೫	,, ,,	೦	೨	೦
ಇಂಗ್ಲಿಷು	ಡಿ. ೧೦೦	,, ,,	೦	೧೨	೦
,,	ಡಿ. ೫೦	,, ,,	೦	೬	೦
,,	ಡಿ. ೨೫	,, ,,	೦	೩	೦
ಕೋರ್ಟು ಫೋರ್ಮುಗಳು ೧೦೦ಕ್ಕೆ			೦	೧೨	೦
ಗೇಣುಚೀಟು	,,	,,	೦	೧೨	೦
ಪರ್ಮಿಟು		,,	೦	೧೨	೦
ಪ್ರೊಮಿಸರಿ ನೋಟು ..		,,	೦	೮	೦

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟದ ಬಗ್ಗೆ.

ತರಿಕೆರೆ ರೈಲ್ವೆ ಸ್ಟೇಶನ್‌ನಿಂದ 40 ಮೈಲು ದೂರವಿದ್ದು ಮೈಸೂರು ಸಂಸ್ಥಾನ ಕಡೂರು ಜಿಲ್ಲಾ ಕೊಪ್ಪದ ಸಮೀಪ ಇರುವ ಹಟ್ಟನ್ ಕೊಡಿಗೆ ಮತ್ತು ಬೆಲ್ಲೋಡು ಎಂಬ 2 ಕಾಫಿತೋಟಗಳು ಮಾರಾಟಕ್ಕೆ ಇರುತ್ತವೆ. ಈ ತೋಟಗಳಿಗೆ ಸುಮಾರು 8 ಮೈಲು ದೂರದೊಳಗೆ ಮದ್ರಾಸ್ ಮತ್ತು ಸದರ್ನ್ ಮಾರಾಠಾ ರೈಲ್ವೆ ಕಂಪೆನಿಯವರ ಸ್ಟೀಮ್ ಟ್ರಾಮ್‌ವೆ ಸಹ ನಡಿಯುವದಕ್ಕೆ ಪ್ರಾರಂಭವಾಗುತ್ತದೆ. ಈ ತೋಟಗಳು 3000 ಅಡಿ ಎತ್ತರದಲ್ಲಿರುತ್ತವೆ. ವರ್ಷಕ್ಕೆ ಸರಾಸರಿ 130 ಇಂಚು ಮಳೆ ಸುರಿಯುತ್ತಿರುತ್ತದೆ. ಒಟ್ಟಿಗೆ ವಿಸ್ತೀರ್ಣ 661 ಎಕ್ರೆ ಕಾಡು ಇದ್ದು ಈ ಪೈಕಿ 200 ಎಕ್ರೆ ಸ್ಥಳಗಳಲ್ಲಿ ಕಾಫಿಗಿಡಗಳೂ, ಅಡಿಕೆಮರಗಳೂ, ಗದ್ದೆಗಳೂ; ಬಂಗ್ಲೆ, ಗೋಡವುನ್, ರೈಟರ್‌ಗಳ 2 ಮನೆಗಳು, ಸ್ಟೋರು ಮತ್ತು ನಾಜೂಕಾಗಿ ಕಟ್ಟಲ್ಪಟ್ಟ ಕೆಲವು ಆಳುಗಳ ಮನೆಗಳೂ ಇರುತ್ತವೆ. ಖ್ಯಾಸಿ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಎಲ್ಲಾ ವಿಲೇವಾರಿ ತಿಳಕೊಳ್ಳಬಹುದು.

ಎಫ್. ಜೆ. ಪಾರ್‌ಟನ್ಸ್,
ಕೊಪ್ಪ ಪೋಸ್ಟು,
ಕಡೂರು ಡಿಸ್ಟ್ರಿಕ್ಟ್.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ನಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

ಸಪ್ತಶತೀ. ಕನ್ನಡಾಕ್ಷರ, ರೇಷ್ಮೆ ಬೈಂಡ್, ಪಾಕೆಟ್ ಸ್ಯಾಜು ಪಾರಾಯಣಕ್ಕೂ ಅತ್ಯುಪಯೋಗವಾಗುವಂತೆ ಎಲ್ಲಾ ವಿಧಾನದಿಂದೊಡಗೂಡಿದೆ. ಬೆಲೆ ಪುಸ್ತಕ ೧ಕ್ಕೆ ೯ ಆಣೆ. ಪೋಸ್ಟು ಖರ್ಚು ಬೇರೆ.

ವಿಳಾಸ:—

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ

ಶ್ರೀಮತ್ ಕಲ್ಯಾಣಿ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದ್ವಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನ್ನಿ, S. P. RAJA & Co.,
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಅಪೂರ್ವ ಸಮ್ಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ, ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ೦ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

.... । ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂ ಅಂಗವರ್ಧನಂ । ಕಾಸಶ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತೆ ॥

ಸ್ತ್ರೀಷು ಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ರೂಪಮಪಾಸ್ಯ ಸರ್ವಂ । ಬಿಭರ್ತಿ ರೂಪಂ ನವಯೌವನಸ್ಯ ।
ಜೀವನಾನಂದಸ್ಯಾಸ್ಯ ಸನ್ ಪ್ರಯೋಗಾಲ್ಲಭೇತ ಜೀರ್ಣೋಪಿ ಕುಟೀಪ್ರವೇಶಾತ್ ॥

"..........ವಿಕೃತಸ್ವರ, ಅನೇಕ ವಿಧದ ರೋಗಗಳು, (ಅಜೀರ್ಣ ಮುಂತಾದ್ದು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣಾಂಗಗಳಿಗೆ, ಮುದುಕರಿಗೆ, ಮಕ್ಕಳಿಗೆ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣವಡಿಸುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವುದು. ವಾಯು ದೇಹದಲ್ಲಿ ಸುಲಭವಾಗಿ ಸಂಚರಿತವಾಗುವಂತೆ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತುವನ್ನು ಪೂರ್ಣ ಗಟ್ಟಿಪಡಿಸುವುದೇ ಮುಂತಾದವುಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನು ನವಯೌವನತರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ವೇಶ್ಯಾಲಂಪಟನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅಧರ ಸಂಗಡಲೇ ಜ್ವರ, ಕೆಮ್ಮು, ಎದೆಹುಳು, ಕಿವಿಸೋವು ಸರ್ಪ ಕಡಿತಗಳಿಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).
ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ಹಿಂದುಸ್ಥಾನ, ಬರ್ಮಾ, ಸೀಲೋನ್ ಮೊದಲಾದ ದೇಶಗಳಲ್ಲಿ ಪ್ರಖ್ಯಾತಿ ಪಡೆದ



ವೆಸ್ಟ್ ಎಂಡ್ ವಾಚು ಕಂಪೆನಿಯ ವಾಚುಗಳು.

ಸರಿಯಾದ ಟ್ಯಾಮ್ ಕೊಡುತ್ತದೆ.

		ನಿಕ್ಕಲ್ ಬೆಳ್ಳಿ. ಸಣ್ಣ 16 ಸ್ಯಾಜು.			ಓಪನ್ ಪೇಸ್. ಮಿಡಿಯಂ 18 ಸ್ಯಾಜು.		
ನಂಬ್ರ	1	12	0	0	11	0	0
,,	2 ...	13	0	0	12	0	0
,,	3	9	0	0	8	4	0
,,	4×	10	0	0	10	0	0
,,	5 A ಫುಲ್ ಜುವೆಲ್ ...	14	0	0	14	0	0
,,	6 ಕಂಪಿಟಿಶನ್ ...	18	0	0	18	0	0
,,	7 ಸಿವಿಲ್	22	0	0	22	0	0
,,	8 ಕ್ವೀನ್ ಏನ್ ಪೋಕೆಟ್ ಸ್ಯಾಜು	15	8	0			
,	ಮತ್ತು ರಿಸ್ಟ್ ವಾಚು ...	15	8	0			
,,	9 ರಿಸ್ಟ್ ವಾಚು ಬೆಳ್ಳಿ ಕೇಸು	30	0	0			
	ರೋಲ್ಡ್ ಗೋಲ್ಡ್ ಕೇಸ್	30	0	0			
	9 ಕೆರೆಟ್ ಗೋಲ್ಡ್	40	0	0			
	14 ,, ,, ...	50	0	0			
,,	10 ನಿಕೆಲ್ ಕೇಸ್ ರಿಸ್ಟ್ ವಾಚು ನ್ಯೂ ಪೇಟೆಂಟ್ ಲಿವರ್ ಮೊಬಿನ್						
	11 ಸ್ಯಾಜ್. ಬೆಳ್ಳಿ	46	0	0			
	18 ಕೆರೆಟ್ ಗೋಲ್ಡ್	150	0	0			

ಮೇಲೆ ಹೇಳಿದ ಚಿನ್ನ ಮತ್ತು ಬೆಳ್ಳಿ ವಾಚುಗಳಲ್ಲದೆ ಇನ್ನು ಹಲವು ತರದ ವಾಚುಗಳೂ ಅವುಗಳ ಸಾಮಾನುಗಳೂ ನಮ್ಮಲ್ಲಿ ರಕಂ ಆಗಿಯೂ ಚಿಲ್ಲರೆಯಾಗಿಯೂ ದೊರಕುವವು. ಪರಸ್ಥಳದ ಆರ್ಡರುಗಳು ವಿ. ಪಿ. ಮೂಲಕ ಕಳುಹಿಸಲ್ಪಡಲಾಗುವದು. ವಿ. ಪಿ 6 ಆಣೆ ಹೆಚ್ಚಿಗೆ. ಅರ್ಧ ಆಣೆಯ ಸ್ಟಾಂಪು ಕಳುಹಿಸಿದರೆ ಕ್ರಯ ಪಟ್ಟಿ ಕಳುಹಿಸಿಕೊಡಬಹುದು.

ವಿಳಾಸ:— **N. GOPALJEE,**
Watch maker.
JOOMA MASJID SHEIK MEMON STREET,
BOMBAY 2.

ಸಿದ್ಧೌಷಧ! • ಪರೀಕ್ಷಿಸಿ ನೋಡಿರಿ !!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಆದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಳಿಜೆಗಳಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡತಕ್ಕದ್ದೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ಕಾರ್ಕಳದಿಂದ ಒಬ್ಬ ಮಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ:— ಟೂರಕಬ್ ಸೇವಿಸಿ 6 ವರ್ಷಗಳಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ನಿವಾರಣವಾಗಿರುತ್ತದೆ. ಇತ್ಯಾದಿ.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನೂ ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಶಂಕರನಾರಿ ಪೋಸ್ಟು.

ಏಜಂಟರು:— ಸುಗಂಧವಿಲಾಸ, ಮಂಗಳೂರು.
ರಥಬೀದಿ, ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ !!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈ ವಸ್ತ್ರದಲ್ಲಿ ತಾಗಿಸಿದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕ್ಯಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:
ಏಚ್. ಆರ್. ಮೋಡಿ ಎಂಡ್ ಕೋ.
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಅಂಬರ್:—ಈ ಸುಗಂಧದ್ರವ್ಯವನ್ನು ಸ್ವಲ್ಪ ತೆಗೆದುಕೊಂಡು ಧೋತ್ರಗಳು, ಉಡುಪುಗಳು, ಮೊದಲಾದ ಬಟ್ಟೆಗಳಿಗೆ ಹಾಕಿದರೆ ಸುವಾಸನೆಕೊಡುವದಲ್ಲದೆ, ಬಟ್ಟೆಗಳಿಗೆ ಹುಳ ಮುಂತಾದ ಕ್ರಿಮಿಗಳು ಸೇರದೆ ಇರುತ್ತದೆ. ಶರೀರಕ್ಕೂ ಮುಖಕ್ಕೂ ಹಚ್ಚಿಕೊಂಡರೆ ಮುಖದಲ್ಲಿಯೂ ಶರೀರದಲ್ಲಿಯೂ ಉಂಟಾಗುವ ಕಜ್ಜಿತುರಿ, ಮೇಹ ಸಂಬಂಧವಾದ ಹುಳುಕಡ್ಡಿ ಮೊದಲಾದವು ಹೋಗಲಾಡಿಸಿ ತೇಜಸ್ಸು ಉಂಟುಮಾಡುತ್ತದೆ. ತಾಂಬೂಲದ ಸಂಗಡ ಉಪಯೋಗಿಸಬಹುದು. ಇದನ್ನೇ ಸ್ವಲ್ಪ ತೆಗೆದು ಸ್ನಾನಮಾಡುವ ಬಿಸಿನೀರಲ್ಲಿ ಸೇರಿಸಿದರೆ ನೀರೆಲ್ಲಾ (ಪನ್ನೀರು) ಗುಲಾಬಿಯಂತೆ ಪರಿಮಳಿಸಿ, ಮನಸ್ಸಿಗೆ ತೃಪ್ತಿಕರವನ್ನು ಕೊಟ್ಟು ದೇಹಶ್ರಮವನ್ನು ನಿವಾರಣಮಾಡುತ್ತದೆ. ಡಬ್ಬಿ 1ಕ್ಕೆ 8 ಆಣೆ, 1 ಮೊದಲು 12 ಡಬ್ಬಿಗಳವರೆಗೆ ವಿ. ಪಿ. 5 ಆಣೆ ಪ್ರತ್ಯೇಕವು.

ಇಂಡಿಯನ್ ಪೆಟಲ್‌ಡಸ್ಟ್:—ಈ ಮನೋಹರವಾದ ಸುಗಂಧ ಒಂದು ಪೊಟ್ಲವು ನೀವು ವಸ್ತ್ರವಿಡುವಲ್ಲಿಯಾಗಲಿ ವಸ್ತ್ರದ ಪೆಟ್ಟಿಗೆಯಲ್ಲಿಯಾಗಲಿ ಇಟ್ಟರೆ ನಿಮ್ಮ ಎಲ್ಲಾ ಉಡಿಗೆ ತೊಡಿಗೆಗಳಿಗೆ ಮಧುರವಾದ ಮತ್ತು ದೀರ್ಘಕಾಲದವರೆಗೆ ಉಳಿಯುವ ಸುವಾಸನೆಯನ್ನು ಕೊಡುವದು. ಮತ್ತು ನಿಮ್ಮ ವಸ್ತ್ರಗಳನ್ನು ಕ್ರಿಮಿಗಳ ಅನಾಹುತದಿಂದ ಕಾಪಾಡುವದು. ಶಾಂತವಾದ ಮತ್ತು ಇಂಪಾದ ಪರಿಮಳದಿಂದ ಅಪ್ರಮೇಯವಾಗಿದ್ದು ಅದರ ಮೃದು ಸುಗಂಧಕ್ಕೂ ಸ್ಥಿರವಾದ ಪರಿಮಳಕ್ಕೂ ಅನೇಕರಿಂದ ಹಾರೈಸಲ್ಪಡುವದು. ಈ ಅದ್ವಿತೀಯವಾದ ಸುಗಂಧವು ಪರಿಮಳಾತಿಶಯದಿಂದಲೂ, ಸುಗುಣ ರಮ್ಯತೆಯಿಂದಲೂ ಸ್ಥಿರವಾಗಿ ನಿಂತೀತು. ಗೂಢವಾಗಿಯೂ ವಿಸ್ತಾರವಾಗಿಯೂ ವ್ಯಾಪಿಸಿಕೊಂಡದೆ. ಅದು ವಿಶೇಷವಾದ ಕ್ರಿಮಿನಾಶಕವೂ ಅಪೂರ್ವಗುಣಗಳಿಂದ ಕೂಡಿದ ಔಷಧವೆ ಸ್ವಚ್ಛಕಾರಿಯೂ ಆಗಿರುವದು. ಮತ್ತು ಈಗ ಇರುವವುಗಳಲ್ಲಿ ಅತ್ಯಂತ ಒಳ್ಳೇ ಕ್ರಿಮಿನಾಶಕ ಔಷಧವಲ್ಲದೆ ಹಿಂದೂಸ್ಥಾನದ ಅತ್ಯಂತ ಮನೋಹರವಾದ ವಿವಿಧ ಔಷಧಗಳ ಸಾರವು. ಕ್ರಯ ಪೊಟ್ಲ 1ಕ್ಕೆ 4 ಆಣೆಗಳು.

ವಸ್ತ್ರಗಳಿಗೆ ವಿಲಾಸಹಾಕುವ ಕೆಡದಂತಾ ಶಾಯಿ:—ಹರಳೆ, ಉಣ್ಣೆ, ರೇಶ್ಮೆ ಮುಂತಾದ ವಸ್ತ್ರಗಳಿಗೆ ಇದರಿಂದ ವಿಲಾಸಹಾಕಿದಲ್ಲಿ ಎಷ್ಟಾವರ್ತಿ ತೊಳೆದರೂ ಇಸ್ತ್ರಿಮಾಡಿದರೂ ವಿಲಾಸವು ಯಾವಾಗಲೂ ಕೆಡುವದಿಲ್ಲ. ಈ ಶಾಯಿಯಿಂದ ವಿಳಾಸಹಾಕಿದ್ದಲ್ಲಿ ವಸ್ತ್ರಗಳು ಕಳವುಹೋಗದೆಯೂ ಇರುವಂತೆ ಕಾಯುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ. 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು 5 ಆಣೆಗಳು ಬೇಕಾಗುವದು.

ಧಾತುಪುಷ್ಟಿ ರಸಾಯನ:—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿಧವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡು ಚಿಕ್ಕವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವುದು. ಪೆಟ್ಟಿಗೆ 1ಕ್ಕೆ ರೂ. 2, ವಿ. ಪಿ. ಛಾಂಗಿಚಾರ್ಜು 6 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿದಾ ಬಿಲ್ಡಿಂಗ್, ಜುಮ್ಮಾ ಮಶೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರೆ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ-ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನ ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ.1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಸಿ ನಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಣ್ಣೆ ಕೈ ಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ದೇಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಿಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೨ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೀಗರಹಾಡು ಮೂರು ವರಪದಗಳು	0	2	0
ಪಾಂಡವ ಗೀತಾ	0	1	6	ತುಳುಕನ್ನೋಪದೇಶ	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ	0	4	

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ— ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

೧,೦೦೦

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಿಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು— ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳುವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್ಡು, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಿಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,

Ayurvedodaya Aushadhalaya,

20, CHINA BAZAAR ROAD, MADRAS.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು

ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪುಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷ ವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉಕ್ಕಿನ ಮುಚ್ಚಳ 1, ಗೆಜ್ಜೆ ಅಟ್ಟಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4-0-0.

ವಿಳಾಸ:—

ವಿ. ಎ. ಕೃಷ್ಣ ಅಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡಾಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಔಷಧಿಗಳಲ್ಲಿ ದೊರಕುವದು.	ಸಬ್ ಏಜಂಟರು ಬೇಕಾಗಿವೆ.	STANY BROTHERS Sole Agents C. M. C's, Toothache Specific, Mangalore.

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ ಸಂಧಿವಾತ ಸೊಂಟನೋವು, ವಾಯು, ನೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈ ಕಾಲು ಬಾತು ಬರುವುದು, ಉಳುಕು, ಉರಿ, ಶಿರೋಧಾರ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್‌ಗೆ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡುಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ. ಇದೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರ ವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ತಂತಿ ಮಾಲಕರು:— **Someshwar & Sons,**
Fergusson Road, BOMBAY.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1, ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಭದ್ರವಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಗಳಿಂದ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕ್ರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು 8 ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಬಾಸೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X ಮಂಗಳೂರು ತಾ 15ನೇ ದಶಂಬರ ಶುಕ್ರವಾರ 1916. ಸಂಚಿಕೆ 49

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಸಾಜು 2 ಆಣೆ ಕ್ರಯದ
ಅವ್ವಲ್ ಪೆನ್ಸಿಲು ಸಹಿತ ಆಣೆ 0—10—0
ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇದರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕೂ ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಧಾತ್ವರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂಬುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು	3—12—0
ಮೇಘಸಂದೇಶ ಪೂರ್ತ	2— 0—0
ಕುಮಾರಸಂಭವ 1, 2ನೇ ಸರ್ಗ	1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ	0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ, ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿದೆ. ಪ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೪. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦ ಹಾಸಲು ೬ ಆಣೆ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

Just out! 2nd Edition. 167 pages!

1001 GEMS
OF
HINDU RELIGIOUS THOUGHT.

Gleaned from the written works and spoken words and teachings of ancient and modern Hindu Saints Sages and preceptors.

BY

PARARY KUNHI CHANDU

Price: 1—0—0.

Apply to—**M. T. A. SHARADA PRESS.**
Car Street, Mangalore.
OR TO THE AUTHOR, Tellicherry.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	336,227—9—4
Reserve Fund	40,442—8—0

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	336,227—9—4
ರಕ್ಷಿತ ಧನವು	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee.

[C]urrent Deposit Account opened free of charge.

S[av]ings [B]a[n]k Account opened for any sum not less than ¼ As. and multiples thereof and interest paid @ 4½%.

L[oa]ns granted on proper securities and pledges.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿನ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ್ಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುವವು.

Canara Bank Ltd.,
Mangalore, 1st. December 1916.

R. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಾವಂಜ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೬ ಬಾಟ್ಲಿಗೆ ೫ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ, ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಬಂಜಬೇರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಜೆತಹವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಪಾಂಡು ರೋಗ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಸಹಿತ್ತು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಪೆದಾ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಗಳ್ಳುಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನು ಕೂಡಲೆ ಗೆಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಾಗುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸುವೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಯಿಸುವದು, ನಾಲಿಗೆಗೆ ಪಟುತ್ವವನ್ನು ಕೊಡುವದು, ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಯಾ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡಯಿಸಬಹುದು.

ತಿಳಿವಳಿಕೆ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADARS

ಮುಂಬಾಯಿ ಲ್ಯಾಫ್ಸ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಜಸ್ಟಿಸ್ ನಾನಪಟ್ಟಿ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:—ಮಿ| ಜೋರ್ಜ್ ಕಿಂಗ್ ಎಫ್. ಐ. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಪ್ರಾವಿನ್ಶಿಯಲ್ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ಅವರ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರಿಗೆ—

ನನ್ನ ಮೃತ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಬರತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಿದು ಬಹಳ ಸಂತೋಷಪಟ್ಟಿರುವೆನು. ಬೇರೆ ವಿಮಾ ಸಂಘಗಳಲ್ಲಿಲ್ಲದ ಕೆಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವ ಪದ್ಧತಿಯು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,

ಡಿಸ್ಟ್ರಿಕ್ಟ್ ಕೋರ್ಟಿನ ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ಸಂತೋಷಪಟ್ಟು ತೆಕ್ಕೊಳ್ಳುವವು ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳ ಸೊಟ್ಟಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೪ ಆಣೆ.

ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,

ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುರಗಾಹಿ, ಜಿಲ್ಲಾ ಮುಝಫರಪುರ, ಬರೆಯುವದೇನಂದರೆ:—ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್ಸ್,

ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ

ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸವ್ಯ ಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧ ಕಾಪುರ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು** ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಚಿನ್ನದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರ.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಹಸ್ತಿಯಾನ ಮತ್ತು ಕಂಪೌಂಡ್ ಪೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಕ್ಷಯ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೭—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವದನ್ನು, ಉರಿಯುವದು ಮುಂತಾದ್ದೆಲ್ಲಾ ನಿಂತುಹೋಗುವದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು ಮೂತ್ರ ನಿಲ್ಲಿಸಿ, ಮೂತ್ರವು ಬೆಳ್ಳಗಾಗಿ ನಿರ್ಮಲವಾಗುವದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ, **R. D. Kately & Co.**

ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*

ಮುಂಬಯಿ. *Near Wright & Co. Fort Bombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನು ಕಾದು ನೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಸ್ವಪ್ನ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೨೦೦ ಮಾತ್ರೆಗಳುಳ್ಳ ಬುಡ್ಡಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಆಫ್. ವ್ಹಿ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೊಂಬ್ಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿನ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟ್ರಯಲ್ ಸಾಂಪಲು ಬೇರೆ ಬೇಕಿಲ್ಲವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಷಲ್ ಕಮಿಷನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ. ೫ ವರುಷಗಳು ಗ್ಯಾರಂಟಿ.

ಈ ಸುಂದರವಾದ ವಾಚ್ ಗಾರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಅನೇಕ ವರ್ಷಗಳು ಬಾಳಿಕೆ ಬರುವದು. ನೋಡುವದಕ್ಕೆ ಚಿಕ್ಕ ಸ್ವಾಭಾವಿಕವೂ ರಂಜಿಸ್ವಾಂತವೂ ಹಾಕಿಯೂ ಇರುವದು.



ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ವ್ಯಾಪಿಸಿ ಅನೇಕ ಸರ್ಟಿಫಿಕೇಟುಗಳನ್ನು ೧೯೦೬ ಸ್ವಸ್ಥಿಗೂಡಲ್ಲಿ ಚಿನ್ನದ ಮೆಡಲ್ ಹರಿಸಿಕೊಟ್ಟ ಪ್ರಸಿದ್ಧವಾದ ಅಮೃತಸಂಜೀವಿನಿ ಗುಳಿಗೆ. 24 ಗುಳಿಗೆ ಇರುವ ಬಾಟ್ಲಿ 1ಕ್ಕೆ ಕ್ರಯ 12 ಆಣೆ ಮಾತ್ರ. ಪೋಸ್ಟು ಚಾರ್ಜು 4 ಆಣೆ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವುದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು, ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ. ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ, 154 ಟಂಕಸಾಲೆ ಬೀದಿ, ಮದರಾಸ್.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ಮಾರ್ಗಶೀರ್ಷ ಬ. ೬ ಶುಕ್ರವಾರ.

ರುಶಿಯದ್ದಾದರೂ ಒಂದು ಹೆಜ್ಜೆ ಮುಂದೆಯೆ!

ಯುರೋಪದೊಳಗಿನ ಸುಧಾರಿಸಿದ ರಾಷ್ಟ್ರಗಳಲ್ಲಿ ರುಶಿಯಾ ದೇಶದ ಸಮಾವೇಶವು ಆಗುತ್ತಿರಲಿಲ್ಲ. ಇದಕ್ಕೆ ಹಲವು ಕಾರಣಗಳಿದ್ದವು. ಒಂದನೆದಾಗಿ, ಅಲ್ಲಿಯ ಸಂಸ್ಕೃತಿಯು ಇತರ ರಾಷ್ಟ್ರಗಳದ್ದಷ್ಟು ಮೇಲುತರಗತಿಯದಿರಲಿಲ್ಲ. ಎರಡನೆದೇನೆಂದರೆ, ಅಲ್ಲಿಯ ರಾಜ್ಯಕ್ರಮವು ಪ್ರಾಗತಿಕವಲ್ಲ, ರಾಜಸತ್ತಾತ್ಮಕವಾದುದು ಮೂರನೆ ಕಾರಣವು ವಿದ್ಯಾ ಪ್ರಸಾರಣೆ, ಕಲಾಭಿವೃದ್ಧಿ ಮೊದಲಾದ ಲೋಕಶಿಕ್ಷಣದ ವಿಷಯಗಳು ಅಲ್ಪ ಪ್ರಮಾಣದಲ್ಲಿಯೇ ಇದ್ದವು. ಈ ಮುಖ್ಯ ಸಂಗತಿಗಳಿಂದಲೂ ಇನ್ನು ಬೇರೆ ಕಾರಣಗಳಿಂದಲೂ ಕೂಡ ರುಶಿಯಾ ದೇಶವು ಯುರೋಪಿಯನ್ ರಾಷ್ಟ್ರವಾದರೂ ಬೇರೆ ಯುರೋಪಿಯನ್ ಸುಸಂಸ್ಕೃತ ರಾಷ್ಟ್ರಮಾಲಿಕೆಯಲ್ಲಿ ಅದಕ್ಕೆ ಸ್ಥಾನವಿದ್ದಿಲ್ಲ; ಒಂದುವೇಳೆ ಆ ಪಂಕ್ತಿಯಲ್ಲಿ ಇದರ ಸಮಾವೇಶವಾಗುತ್ತಿದ್ದರೂ ಇದಕ್ಕೆ ಕೆಳಗಿನ ಮಣೆಯು ಇತ್ತಲ್ಲದೆ ಮೇಲಿನದಿದ್ದಿಲ್ಲ. ಈ ರುಶಿಯಾ ದೇಶವು ಎಷ್ಟು ಹಿಂಮುಳಿದಿತ್ತೆಂದರೆ—ಹಿಂದುಸ್ಥಾನದಲ್ಲಿ ಯಾವುದಾದರೂ ಒಂದು ಸುಧಾರಣೆಯನ್ನು ಪ್ರಜಾಪಕ್ಷೀಯರು ಕೇಳಿದ್ದಾದರೆ ರುಶಿಯಾದ ಕಡೆಗೆ ಬೆರಳು ತೋರಿಸಿ "ನೋಡಿರಿ, ರುಶಿಯವು ಯುರೋಪಿಯನ್ ರಾಷ್ಟ್ರವಾಗಿದ್ದರೂ ಅಲ್ಲಿ ಇಂಥ ಸುಧಾರಣೆಗಳಿಲ್ಲ; ಶುದ್ಧ ಏಸಿಯಾಟಿಕಾದ ಹಿಂದುಸ್ಥಾನದಲ್ಲಿ ಅವನ್ನು ಜಾರಿಗೆ ತರುವುದು ಉಚಿತವೇ?" ಎಂದು ಹೇಳಲು ಆಗಾಗ ಎಡೆಸಿಗುತ್ತಿತ್ತು. ಎಂದರೆ ಕಾಶೀಪಟದೊಳಗಿನ ತಿರುಮಲರಾಯನು ಮಹಾ ಕುಲೀನನಾಗಿದ್ದರೂ ಏನೋ ಒಂದು ದುರ್ವ್ಯಾಪಾರದಿಂದ ಹೀನನಾಗಿ ಆ ಪಟಗಾರನಿಗೆ ಪ್ರದರ್ಶನೀಯನಾದಂತೆ ರುಶಿಯ ದೇಶವು ಇಷ್ಟರವರೆಗೆ ಪ್ರದರ್ಶನೀಯವಾಗಿತ್ತು. ಅಥವಾ ಕೆಲವು ಸಂಗತಿಗಳಲ್ಲಿ ರುಶಿಯಕ್ಕಿಂತಲೂ ಹಿಂದುಸ್ಥಾನವು ಪ್ರಗತಿಪರವಾಗಿದೆಂದು ಹೇಳುತ್ತಿದ್ದರು. ಆದರೆ ಇನ್ನು ಮುಂದೆ ಇಂಥಾ ಸಂಗತಿಗಳಲ್ಲಿ ಆ ದೇಶವು ದೃಷ್ಟಾಂತವಾಗಿ ಸಿಗಲಿಕ್ಕಿಲ್ಲೆಂದು ತುಂಬಾ ಧೈರ್ಯದಿಂದ ಹೇಳಬಹುದು. ದಿವಸಗಳು ಹೋದ ಹಾಗೆ ಈ ವಿಷಯದಲ್ಲಿ ರುಶಿಯದ ಆಧಾರವು ಕಡಿಮೆ ಕಡಿಮೆಯಾಗುತ್ತಲೆ ಬರುತ್ತದೆ. ರುಶಿಯದಲ್ಲಿ ಲೋಕಮತದರ್ಶಕವಾದ ಡ್ಯೂಮಾ ಸಭೆಯುಂಟಾಯಿತು. ಮಾತ್ರವಲ್ಲ, ಈ ಸಭೆಯ ಮುಖಂಡರು ಮಂತ್ರಿಮಂಡಲದಲ್ಲಿ ಸಹ ಸೇರಿಕೊಂಡಿದ್ದಾರೆ. ಈ ಯುದ್ಧದಲ್ಲಿ ಬಂದ ಅನುಭವದಿಂದ ಕೂಡಲೆ 'ವೊಡ್ಕಾ' ಎಂಬ ಸೇಂದಿಯನ್ನು ನಿಲ್ಲಿಸಲು ಏರ್ಪಾಡುಗಳಾದುವು. (ಹಿಂದುಸ್ಥಾನದಲ್ಲಿ ಸೇಂದಿಯನ್ನು ಪ್ರತಿಬಂಧಿಸುವುದೆಂದರೆ ಸರಕಾರದ ಮತದಿಂದ 'ಜನರ ಪಾನಸ್ವಾತಂತ್ರ್ಯಕ್ಕೆ ತೊಡಕು'! ಇರಲಿ.) ಪೋಲಂಡಿಗೆ ಸ್ವರಾಜ್ಯವು ದೊರೆಯಿತು. ಇನ್ನೂ ಆಶ್ಚರ್ಯದ ಸಂಗತಿ ಏನೆಂದರೆ—ಲೋಕಮತವನ್ನು ಅನುವರ್ತಿಸುವಂಥ ಮಿ. ಟ್ರೆಪೊಫ್ ಎಂಬ ಪ್ರಧಾನರು ಈಗ ಅಧಿಕಾರಾರೂಢರಾಗಿದ್ದು ದೇಶದೊಳಗಿನ ಔದ್ಯೋಗಿಕ ಶಿಕ್ಷಣದ ಪ್ರಸಾರಣೆ ಮತ್ತು ಖಡ್ಡಾಯದಿಂದ ಪ್ರಾಥಮಿಕ ಶಿಕ್ಷಣದ ಪ್ರಾರಂಭ—ಈ ಎರಡು ಮುಖ್ಯ ಉದ್ದೇಶಗಳನ್ನು ಸಾಧಿಸಲಿಕ್ಕೆ ಒಂದು ಮಸೂದೆಯನ್ನು ತರುವೆನೆಂಬದಾಗಿ ಅಭಿವಚನವನ್ನು ಕೊಟ್ಟಿದ್ದಾರೆ.

ಮೇಲೆ ತೋರಿಸಿರುವ ರಾಜ್ಯಕ್ರಮದೊಳಗಿನ ಮೂರು ನಾಲ್ಕು ಸುಧಾರಣೆಗಳಲ್ಲಿ ಸುಧಾರಿಸಿದ ರಾಷ್ಟ್ರಗಳಲ್ಲಿ ಅಗ್ರೇಸರವಾದ ನಮ್ಮ ಬ್ರಿ. ಸರಕಾರವು ಇಲ್ಲಿ ಈ ಸುಧಾರಣೆಗಳ ಪ್ರಾರಂಭವನ್ನು ಹೇಗೆ ಮಾಡಿದೆ? ಲೋಕಮತದ ವಿಷಯ, ಸೇಂದಿಯ ಪ್ರತಿಬಂಧ, ಸ್ವರಾಜ್ಯ ಮುಂತಾದ ಅವರ ಮತದಿಂದ ಹರಟೆಯ ಸಂಗತಿಗಳನ್ನು ಬಿಟ್ಟು ಉದಾಹರಣೆಗಾಗಿ ಪ್ರಾಥಮಿಕ ಶಿಕ್ಷಣದ ವಿಷಯವನ್ನು ಇಟ್ಟುಕೊಳ್ಳೋಣ. ಈ ವಿಷಯದಲ್ಲಿ ಸರಕಾರವು ಯಾವ ಪ್ರಗತಿಯನ್ನು ಸಾಧಿಸಿದೆ? ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಗೋಖಲೆಯವರು ಖಡ್ಡಾಯ-ಶಿಕ್ಷಣದ ಮಸೂದೆಯನ್ನು ತಂದಾಗ "ಇಂಥ ಸುಧಾರಣೆಗಳ ಉಪಕ್ರಮವು ವರಿಷ್ಠ ಕೌನ್ಸಿಲಿನಲ್ಲಿ ಆಗತಕ್ಕದಲ್ಲ. ಸ್ಥಾನಿಕ ಅಥವಾ ಪ್ರಾಂತಿಕ ಸರಕಾರಗಳು ಖಡ್ಡಾಯ ಶಿಕ್ಷಣದಂಥ ಸುಧಾರಣೆಯನ್ನು ಕೈಕೊಳ್ಳಬೇಕು. ಮತ್ತು ಈ ಬಗೆಯಿಂದ ಪ್ರಾಂತ ಸರಕಾರಗಳಲ್ಲಿ ಪ್ರಾರಂಭವಾದದು ವರಿಷ್ಠಸ್ಥಾನದಲ್ಲಿ ಅಂತ್ಯವಾಗಬೇಕು." ಎಂಬದಾಗಿ ಸರಕಾರದ ಕಡೆಯಿಂದ ಬಹು ಗಂಭೀರವಾದ ಉಪದೇಶವು—ಆಲೋಚನೆಯು ಕೊಡೋಣಾಗಿತ್ತು. ಆದರೆ ಇತ್ತಲಾಗೆ ಮುಂಬಯಿಯ ನ್ಯಾಯವಿಧಾಯಕ ಸಭೆಯಲ್ಲಿ ಖಡ್ಡಾಯ ಶಿಕ್ಷಣದ ಬಗ್ಗೆ ನಡೆದ ಚರ್ಚೆಯನ್ನು ಕೇಳುವಾಗ "ವಾರಾಂಗನೇವ ನೃಪನೀತಿರನೇಕರೂಪಾ" ಎಂಬದಾಗಿ ಭರ್ತೃಹರಿಯು ಹೇಳಿರುವಂತೆ ರಾಜನೀತಿಯ ಕುಟಿಲ ಸ್ವರೂಪವು ಅಭಿವ್ಯಕ್ತವಾಗದೆ ಇರದು. ಮುನ್ಸಿಪಾಲಿಟಿಯ ಗಡಿಗಳಲ್ಲಿ ಖಡ್ಡಾಯದ ಹಾಗೂ ನಿರ್ವೇತನದ ಎಂದರೆ ಧರ್ಮಾರ್ಥವಾಗಿ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬುದಾಗಿ ಒಂದು ಠರಾವನ್ನು ಒಬ್ಬ ಮೆಂಬರರು ತಂದಿದ್ದರು; ಅದಕ್ಕೆ ಸರಕಾರಿ ಮೆಂಬರರಾದ ಮಿ. ಚೌಬಳರು ವಿರೋಧಪಡಿಸುವಾಗ ಕೊಟ್ಟ ಕಾರಣಗಳು ಬಹು ವಿಚಿತ್ರವಾದವುಗಳಲ್ಲಾದರೂ ಸರಕಾರದ ಪೂರ್ವಪದ್ಧತಿಗೆ ಅನುಸಾರಿಗಳಾಗಿಯೇ ಇದ್ದವು. "ಮುನ್ಸಿಪಾಲಿಟಿಗಳಲ್ಲಿ ಇಂಥ ಶಿಕ್ಷಣವನ್ನು ಪ್ರಾರಂಭಿಸುವುದೆಂದರೆ ಖರ್ಚಿನ ರಕಮು ಹೆಚ್ಚಾಗುವುದು; ಮುನ್ಸಿಪಾಲಿಟಿಗಳಲ್ಲಿ ಮಾತ್ರ ಇಂಥ ಶಿಕ್ಷಣವನ್ನು ಜಾರಿಗೆ ತರುವುದರಿಂದ ಹಳ್ಳಿಯೊಳಗಿನವರಿಗೆ ಧರ್ಮಾರ್ಥ ಶಿಕ್ಷಣದ ಲಾಭವು ಸಿಗದೆ ಹೋಗುವುದು; ಇಷ್ಟು ಬೇಗನೆ ಶಿಕ್ಷಣದ ವಿಷಯದಲ್ಲಿ ಖಡ್ಡಾಯದ ಕ್ರಮವನ್ನು ಅಂಗೀಕರಿಸುವುದೆಂಬುದು ತೀರಾ ಅಸಾಧ್ಯ ಸಂಗತಿಯೇ ಸರಿ; ವರಿಷ್ಠ ಕೌನ್ಸಿಲಿನಲ್ಲಿಯಾದರೂ ಇವೇ ಕಾರಣಗಳಿಂದ ಗೋಖಲೆಯವರ ಬಿಲ್ಲು ಹಿಂದಕ್ಕೆ ಹೋಯಿತು." ಮಿ. ಚೌಬಳರ ಈ ಕಾರಣಗಳು ಎಷ್ಟು ಅಸಮರ್ಪಕವಾಗಿವೆಂಬುದನ್ನು ತೋರಿಸಲೇಬೇಕೆಂತಿದ್ದರೆ ಆ ಬಗ್ಗೆ ಒಂದೆರಡು ಮಾತುಗಳನ್ನು ಕೆಳಗೆ ಬರೆಯುವೆವು.

ಪ್ರಜಾಪಕ್ಷಕ್ಕೆ ಬೇಕಾಗಿರುವ, ಅದಕ್ಕೆ ಹಿತಕರ ಮತ್ತು ಪ್ರಯೋಜನಕಾರಿಯಾದ ಯಾವದಾದರೊಂದು ಸುಧಾರಣೆಯನ್ನು ಮಾಡಲು ಸರಕಾರಕ್ಕೆ ಸೂಚಿಸಿದರೆ "ಖರ್ಚು ಹೆಚ್ಚು" ಎಂಬ ಸೂತ್ರವು ಯಾವಾಗಲೂ ಕಟ್ಟಿದ್ದೇ ಇರುವುದು. ಸರಕಾರದವರು ಉದ್ದೇಶಿಸಿರುವ ಕೆಲಸಕ್ಕೆ ಎಷ್ಟು ಖರ್ಚು ಬಂದರೂ, ಯುದ್ಧದಂಥ ಎಂಥಾ ಇಕ್ಕಟ್ಟಿನ ಸಮಯವಿದ್ದರೂ ಅದರದೊಂದು ಎಣಿಕೆಯಿರುವುದಿಲ್ಲ. ಇದು ಹೀಗೆ ಯಾಕೆ? ಇತರ ಕೆಲಸಗಳಲ್ಲಿ ಖರ್ಚುಮಾಡಲಿಕ್ಕೆ ಸರಕಾರದ ಹತ್ತರ ಬೇಕಷ್ಟು ಹಣ ಇರುವದು. ಪ್ರಜಾ ಶಿಕ್ಷಣಕ್ಕೆ ಮಾತ್ರ ಹಣದ ಕೊರತೆ ಬರುವುದು. ಇದು ನಮ್ಮ ದುರ್ದೈವವೇ ಸರಿ. ಮುನ್ಸಿಪಾಲಿಟಿಯೊಳಗಿನವರಿಗೆ ಧರ್ಮಾರ್ಥವಾಗಿ ಶಿಕ್ಷಣವನ್ನು ಕೊಡುವುದರಿಂದ ಹಳ್ಳಿಯವರನ್ನು ವಂಚಿಸಿದಂತಾಗುವುದು, ಈ ಪಂಕ್ತಿಪ್ರಪಂಚವು ಒಳ್ಳೇದಲ್ಲ, ಆದುದರಿಂದ ಮುನ್ಸಿಪಾಲಿಟಿಗಳಲ್ಲಿ ಇಂಥ ಏರ್ಪಾಡುಗಳನ್ನು ಮಾಡುವದು ಅನುಚಿತವೆಂಬ ಮಿ. ಚೌಬಳರ ಯುಕ್ತಿವಾದವನ್ನು ಕೇಳಿ ನಮಗೆ ತಿರಿಗಿ ತಿರಿಗಿ ಆಶ್ಚರ್ಯವಾಗುವುದು. ಶಿಕ್ಷಣದ ವಿಷಯದಲ್ಲಿ ಹಿಂದೂಸ್ಥಾನ ಸರಕಾರದ ಪಂಕ್ತಿಪ್ರಪಂಚವನ್ನು ನೋಡುವುದಾದರೆ ಮೊನ್ನೆಯೆ ಪ್ರಸಿದ್ಧವಾದ ೧೯೧೪-೧೫ನೆ ವರ್ಷದ ಹಿಂದೀ ಶಿಕ್ಷಣದ ಬಿಸಿ ಬಿಸಿ ವರದಿಯನ್ನು ನೋಡಿದರೆ ಇದೇ ಚೌಬಳರಿಗೆ ಸಮಾಧಾನವಾಗುವಹಾಗಿದೆ. ಯುರೋಪಿಯನ್ ವಿದ್ಯಾರ್ಥಿಗಳಿಗಾಗಿ ಸೆಕೆಂಡರಿ ಶಾಲೆಗಳೆಷ್ಟು, ಆ ಶಾಲೆಗಳ ಬಗ್ಗೆ ಸರಕಾರವು ಮಾಡುವ ಖರ್ಚೆಷ್ಟು ಮತ್ತು ಹಿಂದೀ ಜನರಿಗಾಗಿ ಶಾಲೆಗಳೆಷ್ಟು ಅವುಗಳ ಖರ್ಚೆಷ್ಟು ಈ ಸಂಗತಿಗಳನ್ನು ಪರೀಕ್ಷಿಸಿದರೆ ಪಂಕ್ತಿಪ್ರಪಂಚದ ಬೇರೆ ದೃಷ್ಟಾಂತವು ಬೇಡ. ಇದೂ ಹೋಗಲಿ. ಮುನ್ಸಿಪಾಲಿಟಿಯಿಂದ ಸಿಗುವ ಆಸ್ಪತ್ರೆ, ಮಾರ್ಗ, ದೀಪ ಮುಂತಾದ ಸೌಕರ್ಯಗಳು ಹಳ್ಳಿಯವರಿಗಿಲ್ಲದೆ ಪಟ್ಟಣದವರಿಗೆ ಸಿಗಬಹುವಲ್ಲವೆ? ಇದರಲ್ಲಿ ಪಂಕ್ತಿ ಪ್ರಪಂಚವಿಲ್ಲ! ಶಿಕ್ಷಣದ ವಿಷಯದಲ್ಲಿ ಮಾತ್ರ ಸಮದೃಷ್ಟಿಯ ಉದಾರತ್ವವು ನೆನಪಿಗೆ ಬರುವುದು! ಈ ಯುಕ್ತಿವಾದವನ್ನು ಕೇಳಿ ಲೋಕದೊಳಗಿನ ಎಲ್ಲ ಬಡ ಬೇಡುವವರಿಗೆ ಸಾಕಾಗುವಷ್ಟು ತನ್ನಲ್ಲಿ ಇಲ್ಲೆಂದು ಹೇಳಿ ಒಬ್ಬಬ್ಬರಿಗೂ ಧರ್ಮ ಮಾಡದೆ ಮನೆಯ ಗೇಟನ್ನು ಮುಚ್ಚಿಕೊಳ್ಳುವ ಲಕ್ಷಾಧೀಶನ ವರ್ತನವು ಸ್ಮರಣೆಗೆ ಬಾರದೆ ಇರದು. ಈಗ ಆ ಶಿಕ್ಷಣವನ್ನು ಖಡ್ಡಾಯದ ಸ್ಥಿತಿಗೆ ತರುವುದು ಅಸಾಧ್ಯವೆಂದು ಹೇಳಿದ ಇವರ ಮೂರನೆ ಕಾರಣವಂತೂ ಬರೆ ಅಪ್ರಯೋಜಕವಾಗಿರುವುದು. ಈ ವಿಷಯದಲ್ಲಿ ಇನ್ನೂ ನಾಲ್ಕು ಮಾತುಗಳನ್ನು

ಬರೆಯಬಹುದಿತ್ತು. ಆದರೂ ನಾವು ಅವುಗಳನ್ನು ಮರೆತುಬಿಡುತ್ತೇವೆ. ವರಿಷ್ಠ ಕೌನ್ಸಿಲಿನಲ್ಲಿ ಹೇಳುವುದೇನೆಂದರೆ ಕೆಳಗಿನಿಂದ ಬನ್ನಿರಿ. ಕೆಳಗಿನ ಕೌನ್ಸಿಲಿನಲ್ಲಿ ಹೇಳುವುದು ನಿಮಗೆ ಮೇಲಿಯೆ "ಅರ್ಧಚಂದ್ರ"ವು ಸಿಕ್ಕಿದೆ; ತಿರಿಗಿಲ್ಲಿ ಯಾಕೆ ಬರುವಿರಿ. ಈ ಸ್ಥಿತಿಯನ್ನು ನೋಡಿ ನಮಗೊಂದು ಮನೋರಂಜಕವಾದ ಚುಟುಕು ಕಥೆಯು ನೆನಪಿಗೆ ಬರುವುದು. ಅರ್ಜನ ಪ್ರಿಯನಾದ ಆಚಾರ್ಯನು ಸ್ನಾನಕ್ಕಾಗಿ ನದಿಗೆ ಹೋಗುವಾಗ ಒಂದು ಅತಿ ವಿಸ್ತಾರವಾದ ತುಲಸಿ ತೋಟದಲ್ಲಿ ಹೋಗಿ ತನ್ನ ಸಂಧ್ಯಾವಂದನೆಯ ಸಾಹಿತ್ಯಗಳನ್ನು ಒಂದು ಕಡೆಯಲ್ಲಿಟ್ಟು ಒಂದು ಬುಟ್ಟಿಯೊಳಗೆ ತುಲಸಿಗಳನ್ನು ಕೊಯ್ಯಹತ್ತಿದನು. ಸುಮಾರು ಮೂರು ತಾಸುಗಳು ಕಳೆದುಹೋದವು. ತುಲಸಿಯ ಬುಟ್ಟಿಯನ್ನು ಒಂದು ಕಡೆಯಲ್ಲಿಟ್ಟು ಸ್ನಾನಸಂಧ್ಯೆಯ ಸಾಹಿತ್ಯಗಳನ್ನು ತರಲು ಬಂದು ನೋಡುತ್ತಾನೆ: ಅಲ್ಲೇನೂ ಇದ್ದಿಲ್ಲ. ವ್ಯಸನವಾಯಿತು. ಹಾಗೆಯೆ ತಿರಿಗಿ ತುಲಸಿ ಬುಟ್ಟಿಯ ಹತ್ತರ ಹೋಗುತ್ತಾನೆ ಒಂದು ಆಡು ಬಂದು ಆ ತುಲಸಿಗಳನ್ನೆಲ್ಲ ತಿಂದುಬಿಟ್ಟಿದೆ. ಏವಂಚ ವಿಸ್ತಾರವಾದ ತೋಟವೊಳಗಿನ ಒಂದು ಮೂಲೆಯಲ್ಲಿಟ್ಟ ಸಾಹಿತ್ಯಗಳೂ ಇಲ್ಲ, ಇನ್ನೊಂದು ಮೂಲೆಯಲ್ಲಿ ಕೊಯಿದಿಟ್ಟ ತುಲಸಿಯೂ ಇಲ್ಲ. ಹಾಗೆಯೆ ವರಿಷ್ಠ ಕೌನ್ಸಿಲಿನಲ್ಲಿಯೂ ಇಲ್ಲ, ಸ್ಥಾನಿಕ ಕೌನ್ಸಿಲಿನಲ್ಲಿಯೂ ಇಲ್ಲ. ಈ ಅವಸ್ಥೆಯು ನಮ್ಮ ಶಿಕ್ಷಣಕ್ಕೆ ಬಂದು ಒದಗಿದೆ.

ಗೋಖಲೆಯವರ ಶಿಕ್ಷಣದ ಮಸೂದೆಯು ಕೌನ್ಸಿಲಿನ ಮುಂದೆ ಬಂದಾಗ ಸರ್‌ಹಾರಕೋರ್ಟ ಬಟಲರ ಇವರು ಪ್ರದರ್ಶಿಸಿದ ಇಚ್ಛೆಯ ಮೇರೆಗೆ ಮುಂಬಯಿಯ ಸ್ಥಾನಿಕ ಕೌನ್ಸಿಲಿನಲ್ಲಿ ಇದೇ ಶಿಕ್ಷಣದ ಮಸೂದೆಗೆ ಇಂಬು ಸಿಗದೆ ಹೋದರೂ ನಮ್ಮ ಮದ್ರಾಸು ಸಂಸ್ಥಾನದಲ್ಲಿ ಈ ತರದ ಏರ್ಪಾಡು ಆಗಲಿಕ್ಕಿದೆಂಬುದನ್ನು ಕೇಳಿ ನಮಗೆ ಸಂತೋಷವಾಗುವುದು. ಆದರೂ ಇಲ್ಲಿ ಹೇಳಬೇಕಾದ ಮಾತೇನೆಂದರೆ ಮುಂಬಯಿ ಕೌನ್ಸಿಲಿನಲ್ಲಿ ನಾಮದಾರ ಚೌಬಳರು ಈ ಮಸೂದೆಯನ್ನು ಹಿಂದಕ್ಕೆ ತೆಗೆಯಲು ಮಸೂದೆಯ ಪ್ರೇರಕರಿಗೆ ಹೇಳಿದ್ದಲ್ಲಿ ಅವರು ಕೇಳದೆ ಇದ್ದಕಾರಣ ಕೊನೆಗೆ ಅಧಿಕಮತದಿಂದ ಆ ಮಸೂದೆಯು ಸ್ವಸ್ವರೂಪದಲ್ಲಿ ಲೀನವಾಯಿತು! ಈ ಅಧಿಕ ಮತದಾರರಲ್ಲಿ ಸರಕಾರಿ ಮತ್ತು ಬಿನಸರಕಾರಿ ಮೆಂಬರರೇ ಅಧಿಕವಾಗಿರಬೇಕಲ್ಲದೆ ಬೇರೆಯವರಲ್ಲ. ಹೀಗಿರುವದರಿಂದ ನಾವು ಪುನಃ ಹೇಳುವುದೇನೆಂದರೆ, ರುಶಿಯದಲ್ಲಿ ಲೋಕ ಪಕ್ಷದ 'ಡ್ಯೂಮಾ' ಸಭೆಯುಂಟಾಯಿತು; ಇಲ್ಲಿ ಯಾವುದಕ್ಕೆ 'ಪಾನಸ್ವಾತಂತ್ರ್ಯ'ವೆಂಬ ಭವ್ಯವಾದ ಹೆಸರು ಕೊಡಲ್ಪಟ್ಟಿದೆಯೋ ಆ ಮದ್ಯವ್ಯಸನಕ್ಕೆ ರುಶಿಯದಲ್ಲಿ ಜನರದಲ್ಲ—ಸರಕಾರಿ ಬಹಿಷ್ಕಾರವುಂಟಾಯಿತು; ಪೋಲಂಡಿಗೆ ಸ್ವರಾಜ್ಯದ ಹಕ್ಕು ಸಿಕ್ಕಿತು; ಮತ್ತು ಈಗ ಇಡೀ ರುಶಿಯದಲ್ಲಿ ಖಡ್ಡಾಯದ ಶಿಕ್ಷಣವು ಪ್ರಾರಂಭವಾಗುವುದಿದೆ. ಆದುದರಿಂದಲೇ ನಾವು ಹೇಳುವುದು 'ರುಶಿಯದ್ದಾದರೂ ಒಂದು ಹೆಜ್ಜೆ ಮುಂದೆಯೇ!'

ದೇಶ ಭಕ್ತಿ.

(ಲೇಖಾಂಕ ೫.)

ಇದಿಲ್ಲದವನಾರು?

ಒಂದು ಸಂಗತಿಯು ಅತಿರೇಕವುಂಟಾದರೆ ಅದರಿಂದ ಜನರಿಗೆ ಹೆಚ್ಚಾಗಿ ಬೇಸರವಾಗದೆ ಇರದು, ಮತ್ತೆ ಅದು ಪ್ರಿಯವಾದುದೇ ಆಗಿರಲಿ! ಬೆಳಗ್ಗಿನ ಮತ್ತು ಸಂಜೆಯ ಹೀಗೆ ಎರಡೂ ಹೊತ್ತಿನ ಊಟವು ದಿನಾಲು ಒಂದೇ ವಿಧದ್ದಾಗಿದ್ದರೆ ಅದು ನಾಲಿಗೆಯನ್ನು ಬಿಗಿಹಿಡಿದವನಿಗಾದರೂ ಸೇರೀತೆ? ಸ್ವಲ್ಪವಾದರೂ ಅದರಲ್ಲಿ ಬದಲಾವಣೆ ಆಗಲೇ ಬೇಕಾಗುವುದು. ಇದೇ ಕ್ರಮದಿಂದ ಉಡಿಗೆತೊಡಿಗೆಗಳಲ್ಲಿ ಸಹ ಜನರು ಆಗಾಗ್ಗೆ ಪರಿವರ್ತನೆಯನ್ನು ಮಾಡಿಕೊಳ್ಳುವರು. ಮಧುರವಾದ ಆಲಾಪಗಳಿಂದ ಸುಖವಾಗಿ ಹಾಡುವ ಗಾಯಕನನ್ನು ಕೇಳುವುದು ಯಾರಿಗೆ ತಾನೆ ಅಪ್ರಿಯವಾಗಿದ್ದೀತು? ಆದರೆ ಅವನು ಪ್ರತಿದಿನ ಅದದನ್ನೇ ಹಾಡ ಹತ್ತಿದರೆ ಅದನ್ನು ಕೇಳಿ ಒಂದು ದಿನ ಅಯ್ಯೋ! ಇಲ್ಲಿಂದ ಹೊರಟು ಹೋಗುವ; ಸಾಕಿದು. ಎಂದೆನಿಸದೆ ಯಾರಿಗೂ ಇರದು. ಹೇಗೆ ಗಾಯನದ ವಿಷಯವೋ ಹಾಗೆಯೆ ಪರಿಮಳದ್ರವ್ಯದ ಸಂಗತಿಯು. ಪ್ರತಿದಿನ ಒಂದೇ ವಿಧದ ಪರಿಮಳವು—ಅದು ಎಷ್ಟು ಮಧುರವಾಗಿದ್ದರೂ—ಒಪ್ಪಲಿಕ್ಕಿಲ್ಲ. ಈ ರೀತಿಯಿಂದ ಎಷ್ಟೋ ಉದಾಹರಣೆಗಳನ್ನು ತೋರಿಸಬಹುದು. ಆದರೂ ಆ ಎಲ್ಲ ಉದಾಹರಣೆಗಳಿಂದ ತಿಳಿದುಕೊಳ್ಳಬೇಕಾದ ಮಾತು, ಮೇಲೆ ಹೇಳಿದಂತೆ ಒಂದು ವಸ್ತುವಿನ ಅತಿರೇಕದಿಂದ ಅದರಲ್ಲಿ ಜನರ ಶ್ರದ್ಧೆಯು ಕಡಿಮೆಯಾಗುತದೆ—ಇದೇ ಅಲ್ಲದೆ ಬೇರೆ ಅಲ್ಲ. ಈ ಸಾಮಾನ್ಯನಿಯಮದ ಅನುಭವವು ಸಾಮಾನ್ಯವಾಗಿ ಎಲ್ಲರಿಗೂ ಬರುತ್ತದೆ, ಆದರೆ ಈ ನಿಯಮಕ್ಕೆ ಅಪವಾದವಿಲ್ಲ, ಇದು ನಿರ್ಬಾಧವಾದ ಸಿದ್ಧಾಂತ. ಹೀಗೆ ಮಾತ್ರ ಯಾರೂ ನೆನೆಸಕೂಡದು. ಅತಿಪರಿಚಯದಿಂದ ಅವಜ್ಞೆಯನ್ನುಂಟು ಮಾಡುವ ಸಂಗತಿಗಳಿದ್ದಾವೆ; ಪರಂತು, ಎಲ್ಲ ಸಂಗತಿಗಳು ಹಾಗಿಲ್ಲ. ಪ್ರತಿ ದಿವಸ, ತಪ್ಪದೆ ಜನರು ಸೂರ್ಯ-ಚಂದ್ರರ ಉದಯಾಸ್ತಗಳನ್ನು ನೋಡುತ್ತಿರುವರು. ಪಲ್ಲೆ, ಹುಳಿ, ಮೇಲೋಗರ ಮುಂತಾದವುಗಳನ್ನು ಬದಲಾಯಿಸುವುದೆಂತು ಇರಲಿ, ಪ್ರಾಣಾಧಾರವಾದ ಅನ್ನಕ್ಕೆನೇ ಹದಿನೈದು ದಿವಸಗಳಿಗೊಮ್ಮೆ ಏಕಾದಶಿಯ ನೆವದಿಂದ ಧರ್ಮಶಾಸ್ತ್ರಕಾರರು ರಜೆ ಕೊಟ್ಟಿರುವರು. - ಇದರಂತೆ ಪ್ರತಿ ದಿವಸ ಅದದೇ ಸೂರ್ಯೋದಯವನ್ನು ಏನು ನೋಡುವುದೆಂದು ಅದಕ್ಕೆ ಯಾವನಾದರೂ 'ಸಿಂಧು'ಕಾರನು ಏಕಾದಶಿಯನ್ನಾಗಲಿ ಬೇರೆ ದಶಿಯನ್ನಾಗಲಿ ಏರ್ಪಡಿಸಿದ್ದುಂಟೇ? ಸೂರ್ಯಚಂದ್ರರ ಉದಯಾಸ್ತಗಳು ನೋಡಿದಷ್ಟಕ್ಕೂ ನವೀನವೇ ಸರಿ. ಹಾಗೆಯೇ ಹತ್ತು ವರ್ಷಗಳಿಂದ ಸಮುದ್ರದ ತೆರೆಗಳನ್ನು ನೋಡುತ್ತಿದ್ದಾಗ್ಯೂ ಆ ತೆರೆಗಳ ಚಂಚಲವಾದ ಚಲನೆಯು ಅಪೂರ್ವವಾಗಿಯೇ ಇರುವುದು. ಎಷ್ಟೋ ವರ್ಷಗಳಿಂದ ಅನುಭವಿಸುತ್ತ ಬಂದ ಋತುಗಳೇ ಅವು. ಆದರೆ ಅವುಗಳ ವಿಷಯದಲ್ಲಿ ಬೇಸರವಾಗಲಿ, ಜಿಹಾಸೆಯಾಗಲಿ ಹುಟ್ಟುವುದಿಲ್ಲ. ಸೃಷ್ಟಿ ಸೌಂದರ್ಯಕ್ಕೂ ಇದೇ ನ್ಯಾಯವು ಸಂಬಂಧಿಸುವುದು. ಪ್ರಭಾತ ಸಮಯದ ಆರಕ್ತವಾದ ಸೂರ್ಯಬಿಂಬ, ವಿಶಾಲವಾದ ಸಮುದ್ರದ ಗಾಂಭೀರ್ಯ, ಗಹನವಾದ ವನದೇವಿಯ ಸೌಂದರ್ಯ ಇವೆಲ್ಲ ನೋಡಿದಷ್ಟೂ ಅಪೂರ್ವವೇ ಆಗುವವು ಮತ್ತು ಪ್ರತಿಸಾರಿ ಉತ್ಸಾಹವನ್ನೇ ಹುಟ್ಟಿಸುವವು. ಅವುಗಳ ವಿಷಯದಲ್ಲಿ ತೃಪ್ತಿಯುಂಬುದುಂಟಾಗುವುದಿಲ್ಲ. ಇಂಥ ಅಪೂರ್ವ ಸಂಗತಿಗಳಲ್ಲಿಯೇ ಕಳೆದ ಇಷ್ಟು ಲೇಖಗಳಲ್ಲಿ ಪ್ರತಿಪಾದಿಸಿಕೊಂಡು ಬಂದ ದೇಶಭಕ್ತಿಯು ಅಂತರ್ಭವಿಸುವುದು. ಈ ವಿಷಯವನ್ನು ಎಷ್ಟು ಉದ್ದವಾಗಿ ಎಳೆದುಕೊಂಡು ಹೋದರೂ ಸೂರ್ಯೋದಯದಂತೆ ಅದು ಪ್ರತಿಕ್ಷಣದಲ್ಲಿ ವಾಚಕರಿಗೆ ಖಂಡಿತವಾಗಿ ಆಹ್ಲಾದಕವಾಗಿಯೇ ಇದ್ದೀತೆಂಬುದಕ್ಕೆ ಸಂದೇಹವಿಲ್ಲ.

ಎಂದೂ ಅಜೀರ್ಣಾಂಶವನ್ನು ಹುಟ್ಟಿಸದಂಥ, ಎಂದೂ ಬೇಸರಕ್ಕೆ ಆಸ್ಪದವಾಗದಂಥ ಎಂದೂ ಅವಜ್ಞೆಗೆ ಪಾತ್ರವಲ್ಲದಂಥ ದೇಶಭಕ್ತಿಯ ಮಾಹಾತ್ಮ್ಯವನ್ನು ಕೊಂಡಾಡುವಾಗ ನಮಗೆಷ್ಟು ಆದರವೂ, ಪ್ರೇಮವೂ, ಆನಂದವೂ ಆಗುವವೇ ಅಷ್ಟೇ ಕಿಂಬಹುನಾ ಸ್ವಲ್ಪ ಹೆಚ್ಚೇ ಆ ಮಾನಸಿಕ ವೃತ್ತಿಗಳು ವಾಚಕರಲ್ಲಿ ಮೂಡದೆ ಇರಲಾರವು. ಆದುದರಿಂದ ದೇಶಭಕ್ತಿಯ ನಿರೂಪಣೆಯಲ್ಲಿ 'ರಹಸ್ಯ'ವನ್ನು ಹೇಳಿದ ನಂತರವೂ ಈ ಹೊತ್ತು 'ದೇಶಭಕ್ತಿಯಿಲ್ಲದವನಾರು?' ಈ ಪ್ರಶ್ನೆಯನ್ನು ಉತ್ತರಿಸಲು ನಮಗೆ ಧೈರ್ಯ ಬಂದಿರುವುದು. ಮಕ್ಕಳಲ್ಲಿ ತಂದೆತಾಯಿಗಳವಿಷಯವಾಗಿ ಭಕ್ತಿಯು ಸ್ವಾಭಾವಿಕವಾಗಿಯೆ ಹುಟ್ಟುವುದು. ಹಾಗೆಯೆ ಗುರುಭಕ್ತಿಯೂ ಸ್ವಯಂಸಿದ್ಧವೆ. ಮಾತೃಭಕ್ತಿ, ಪಿತೃಭಕ್ತಿ, ಗುರುಭಕ್ತಿ, ಇವು ಸ್ವಯಂ ಸಿದ್ಧವಾಗಿದ್ದರೂ ಕೆಲಕೆಲವರ ಪ್ರಕೃತಿಯು ಈ ಸ್ವಾಭಾವಿಕ ಧರ್ಮವನ್ನು ಸಹ ಉಲ್ಲಂಘಿಸುತ್ತದೆಂಬುದರಿಂದ "ಮಾತೃದೇವೋ ಭವ; ಪಿತೃದೇವೋ ಭವ, ಆಚಾರ್ಯದೇವೋ ಭವ" ಎಂಬುದಾಗಿ ವೇದವು ಉಪದೇಶಿಸಿದೆ. ಒಂದುವೇಳೆ ವೇದದ ಈ ಕಟ್ಟಾಜ್ಞೆಯು ಇರಲಿಲ್ಲವಾದರೂ ಆಯಾ ವ್ಯಕ್ತಿಗಳು ತಮಗೆ ಸಲ್ಲತಕ್ಕ ಭಕ್ತಿಯನ್ನು ವಸೂಲ ಮಾಡಿಕೊಳ್ಳುತ್ತಿದ್ದರು, ಮಾತ್ರವಲ್ಲ ಈಗ ಲೋಕದಲ್ಲಿ ನಡೆಯುವುದಾದರೂ ಇದೇ ಆಗಿದೆ. ಇದಕ್ಕೆ ಮೊದಲಿನ ಒಂದು ರಾಜಭಕ್ತಿಯ ದೃಷ್ಟಾಂತವನ್ನು ತೋರಿಸಬಹುದು. ರಾಜಭಕ್ತಿಯನ್ನು ತೋರಿಸದೆ ಇದ್ದವರನ್ನು ನಹುಷನು ತನ್ನ ವಾಹನವಾಗಿ ಉಪಯೋಗಿಸುತ್ತಿದ್ದನು. ಯೂರೋಪದ ಹಳೆ ಇತಿಹಾಸದಲ್ಲಿಯಾಗಲಿ ಇಲ್ಲವೆ ಇಲ್ಲಿಯ ಪೂರ್ವದ ಮಹಮ್ಮದೀಯರ ಆಳಿಕೆಯಲ್ಲಿಯಾಗಲಿ ರಾಜರು ತಮತಮಗೆ ಸಲ್ಲತಕ್ಕ ರಾಜಭಕ್ತಿಯನ್ನು ಬಡ್ಡಿಕೂಡಿಸಿ ವಸೂಲ ಮಾಡುತ್ತಿದ್ದರು! ಮತ್ತು "ಜುಲುಮಕಾ ರಾಮರಾಮ" ಎಂಬ ಮಾತಾದರೂ ಅಂದಿನಿಂದಲೇ ಪ್ರಚಾರದಲ್ಲಿ ಬಂದಿರಬಹುದು. ಅಸ್ತು. ಆ ಪ್ರಸಕ್ತಿಯು ಹೆಚ್ಚಾಯಿತು. ಪ್ರಕೃತ ವಿಷಯಕ್ಕೆ ಬಂದು ಹೇಳುವ ಮುಖ್ಯ ಮಾತೇನೆಂದರೆ, ಮೇಲೆ ಹೇಳಿದ ಭಕ್ತಿಗಳು ಸ್ವಾಭಾವಿಕವಾಗಿದ್ದರೂ ಒಂದು ವೇಳೆ ಭಕ್ತರು ಅವನ್ನು ಸಾಂಗವಾಗಿ ನೆರವೇರಿಸುವುದರಲ್ಲಿ ತಪ್ಪಿದ್ದಾದರೆ ಅವರಿಂದ ಹೇಗಾದರೂ ಅವನ್ನು ಸಾಧಿಸಿಕೊಳ್ಳುವರು. ಆದರೆ ದೇಶಭಕ್ತಿಯ ಸಂಗತಿಯು ಈ ಎಲ್ಲವುಗಳಿಗಿಂತ ಅಧಿಕವಾಗಿದೆಂಬುದನ್ನು ನಾವು ಮೊದಲನೆ ಲೇಖಾಂಕದಲ್ಲಿ ವಾಚಕರಿಗೆ ಒಪ್ಪಿಸಿದ್ದೇವೆ. ಎಂದ ಮೇಲೆ ಮಾತೃಪಿತೃ ಭಕ್ತಿಗಿಂತ ದೇಶಭಕ್ತಿಯು ಸ್ವಭಾವಿಕವಾದುದು. ಈ ಸಂಗತಿಯು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾದುದರಿಂದ ಯಾವ ವೇದವೂ ಯಾವ ಧರ್ಮ ಗ್ರಂಥವೂ ಇದನ್ನು ಪುನಃ ಉಪದೇಶಿಸುವುದರಲ್ಲಿ ಕಾಲವ್ಯಯ ಮಾಡಲಿಲ್ಲ. ಅಲ್ಲದೆ, ತಂದೆ, ತಾಯಿ ಮತ್ತು ಗುರು ಇವರು ಯಾವ ಯಾವ ಉಪಕಾರಗಳನ್ನು ಮಾಡುವರು, ಯಾವ ಯಾವ ಕರ್ತವ್ಯಗಳನ್ನು ವಹಿಸಿಕೊಂಡಿರುವರು ಅವನ್ನೆಲ್ಲ ದೇಶವೇ ಮಾಡುತ್ತಿರುವಾಗ

'ಮಾತೃದೇವೋ ಭವ' ಇತ್ಯಾದಿ ಹೇಳಿದ್ದಂತೆ 'ದೇಶದೇವೋ ಭವ' ಅಥವಾ ರಾಷ್ಟ್ರದೇವೋ ಭವ' ಎಂಬ ಮಾತು ಹೇಳಬೇಕಾದುದುಂಟೇ? ದೇಶವು ತಂದೆಗೂ ತಂದೆ, ತಾಯಿಗೂ ತಾಯಿ, ಹಾಗೆ ಗುರುವಿಗೂ ಗುರು. ತಂದೆ, ತಾಯಿ, ಗುರು ಈ ಬೇರೆ ಬೇರೆ ದೇವತೆಗಳಿಗೆ ಮನ್ನಣೆಯನ್ನು ಸಲ್ಲಿಸಬೇಕೆಂದು ಹೇಳಿದ ಮೇಲೆ ಆ ತ್ರಿಮೂರ್ತಿ ಸ್ವರೂಪಿಯಾದ ದೇಶವೆಂಬ ಮೂಲ ಬ್ರಹ್ಮದ ಉಪಾಸನೆಯನ್ನು ಮಾಡೆಂದು ಭಕ್ತನಿಗೆ, ಹೇಳಬೇಕಾದ ಅವಶ್ಯಕತೆಯುಂಟೆ? ನೂರರಲ್ಲಿ ಐವತ್ತು ಇದ್ದೇ ಇರುವಂತೆ ಅಥವಾ ತೋಟದೊಳಗಿನ ಒಂದೊಂದು ಗಿಡಕ್ಕೆ ನೀರು ಹಾಕಲು ಹೇಳಿದ್ದಲ್ಲಿ ಇಡೀ ತೋಟಕ್ಕೆ ನೀರು ಹಾಕುವುದು ಯುಕ್ತಿಸಿದ್ಧವಾದಂತೆ ಮಾತೃಪಿತೃ ಗುರು ಸ್ವರೂಪಿಯಾದ ದೇಶ ಭಕ್ತಿಯು ವೇದವಿಹಿತವಾದ ಧರ್ಮವೆಂತಲೇ ಸಿದ್ಧವಾಗುತ್ತದೆ. ವಸ್ತುಸ್ಥಿತಿಯು ಹೀಗಿದ್ದರೂ, ದುರ್ದೈವದಿಂದ ಇಂಥ ಆವಶ್ಯಕ ಕರ್ತವ್ಯವಾದ ದೇಶಭಕ್ತಿಯನ್ನು ಮರೆತು ಬಿಡುವವನಿದ್ದರೆ ಅವನಾರು? ಎಂಬ ಪ್ರಶ್ನೆಯು ಬರುತ್ತದೆ. ಈ ಪ್ರಶ್ನೆಯ ಉತ್ತರವು ಮೇಲಿನ ಉಪಪಾದನೆಯನ್ನು ಮನಸ್ಸಿನಲ್ಲಿ ತರುವವರಿಗೆ ತವಷ್ಟಕ್ಕೆ ಗೊತ್ತಾಗುವುದು. ದೇಶಭಕ್ತಿಯಿಲ್ಲದವನು ಮಾತೃಭಕ್ತನಲ್ಲ, ಪಿತೃಭಕ್ತನಲ್ಲ, ಗುರುಭಕ್ತನೂ ಅಲ್ಲ. ಒಂದುವೇಳೆ ಈ ತ್ರಿಮೂರ್ತಿಗಳನ್ನು ಭಜಿಸಿದ್ದಾದರೂ ಆ ಭಕ್ತಿಯು ದೇಶ ಮುಖವಾಗದಿದ್ದರೆ ಅದಕ್ಕೆ ಪೂರ್ಣತ್ವವು ಬರುವ ಹಾಗಿಲ್ಲ, ಇಂಥ ಮಾತೃಪಿತೃ ಗುರುಭಕ್ತನಲ್ಲದವನಿಗೆ 'ದೇಶದ್ರೋಹಿ' ಎಂಬದೊಂದೇ ಹೆಸರಿರುವುದು.

ಧರ್ಮಶಾಸ್ತ್ರದಲ್ಲಿ ಒಬ್ಬನಿಗೆ ದೇವಋಣ, ಪಿತೃಋಣ ಮತ್ತು ಋಷಿಋಣ ಈ ಪ್ರಕಾರ ಮೂರು ಸಾಲಗಳಿರುವವೆಂದು ಹೇಳಿದೆ. ಈ ಸಾಲಗಳನ್ನು ಕ್ರಮವಾಗಿ ಯಜ್ಞ, ಸಂತತಿ ಮತ್ತು ಸ್ವಾಧ್ಯಾಯ ಈ ಸಾಧನೆಗಳಿಂದ ಬಗೆಹರಿಸಬೇಕೆಂಬುದಾಗಿಯೂ ಅಲ್ಲಿಯೇ ಉಪದೇಶಿಸೋಣಾಗಿದೆ. ಆದರೆ ಈ ಎಲ್ಲ ಸಾಲಗಳಿಗಿಂತಲೂ ಮಿಕ್ಕಿದ ಇನ್ನೊಂದು ಸಾಲವಿದೆ. ಅದು 'ದೇಶಋಣ'ವು. ಪಶುಯಜ್ಞವನ್ನು ಮಾಡುವದರಿಂದಲೂ ವ್ಯರ್ಥ ಸಂತತಿಯನ್ನು ಹುಟ್ಟಿಸುವುದರಿಂದಲೂ ನಿರರ್ಥಕ ಸ್ವಾಧ್ಯಾಯದಿಂದಲೂ ಕ್ರಮಶಃ ಮೇಲಿನ ಮೂರು ಸಾಲಗಳು ಹೋಗುತ್ತವೆಂದು ಧರ್ಮಶಾಸ್ತ್ರದ ನಂಬಿಕೆಯಿದ್ದರೂ ಸ್ವಾರ್ಥಯಜ್ಞ, 'ಅಮರಕೀರ್ತಿ, ಸ್ವರಾಜ್ಯದ ಸ್ವಾಧ್ಯಾಯ ಇವೇ ಆ ಮೂರು ಸಾಲಗಳಿಂದಲೂ ಮತ್ತು ದೇಶಋಣದಿಂದಲೂ ವಿಮೋಚನೆಯನ್ನು ಹೊಂದಲು ಮೇಲಾದ ಮತ್ತು ಮುಖ್ಯವಾದ ಸಾಧನೆಗಳಾಗಿವೆ. ಏಕೆಂದರೆ, ದೇಶವೇ ದೇವ, ಪಿತೃ, ಋಷಿ ಇವರ ಸ್ಥಾನದಲ್ಲಿದೆ. ದೇಶಕ್ಕಾಗಿ ಸ್ವಾರ್ಥಯಜ್ಞವನ್ನು ಮಾಡಿ ದೇಶದೇವರನ್ನು ತೃಪ್ತಿಪಡಿಸಬೇಕು. ದೇಶಸೇವೆಯಿಂದ ಅಮರವಾದ ಕೀರ್ತಿಯನ್ನು ಗಳಿಸಿ ಅದನ್ನು ಸಂತತಿರೂಪದಿಂದ ತನ್ನ ಹಿಂದೆ ಬಿಟ್ಟುಹೋಗಬೇಕು; ಇದು ದೇಶಪಿತೃಗಳಿಗೆ ಸಲ್ಲಿಸತಕ್ಕ ಸಾಲವು. ಸ್ವರಾಜ್ಯವೆಂದರೇನು, ಅದನ್ನು ಹೇಗೆ ಸಂಪಾದಿಸಬೇಕು, ಅದಕ್ಕೆ ಬೇಕಾದ ಪಾತ್ರತೆಯು ಯಾವುದು ಮೊದಲಾದ ಸಂಗತಿಗಳನ್ನು ಕಲಿತು ದೇಶ ಋಷಿಗಳ ಋಣದಿಂದ ಮುಕ್ತನಾಗಬೇಕು. ವೇದದೊಳಗಿನ ಮೂರು ಋಣಗಳನ್ನು ಮಾತ್ರ ಬಗೆಹರಿಸಿದವನು ನಿಜವಾಗಿ ಋಣಮುಕ್ತನಲ್ಲ. ದೇಶಪುರುಷನ ಋಣದ ಗಂಟು ಅಥವಾ ಹೊರೆಯು ಅವನ ತಲೆಯ ಮೇಲೆ ಇದ್ದೇ ಇರುವುದು. ಇದಕ್ಕಾಗಿಯೇ ದೇಶಭಕ್ತಿಯು ಅವಶ್ಯವಾಗಿದೆ. ಹೀಗಿರುವಾಗ ಅದಿಲ್ಲದವನಾರು? ಅವನು ದೇವರ ಸಾಲಗಾರನು, ಪಿತೃಗಳ ಸಾಲಗಾರನು, ಋಷಿಗಳ ಸಾಲಗಾರನು, ಚಿಕ್ಕ ಮಾತಿನಿಂದ–ಅವನು ದೇಶದ ಸಾಲಗಾರನು.

ಶ್ಲೇಷಾಲಂಕಾರಪ್ರಿಯರಾದ ಕನ್ನಡಿಗರು ನಮ್ಮ ಮೇಲಿನ ಪ್ರಶ್ನೆಯಲ್ಲಿ ಅದರ ಉತ್ತರವನ್ನು ಸಹ ಕಂಡುಹಿಡಿಯದೆ ಇರರು. ದೇಶಭಕ್ತಿಯಿಲ್ಲದವನಾರು? ಇದಕ್ಕೆ 'ದೇಶಭಕ್ತಿಯಿಲ್ಲದವನಾರು!' ಇದೇ ಉತ್ತರವು. ನಾರು ಕೋಲಿನಂತೆ ಗಟ್ಟಿಯಲ್ಲ, ಅದು ನೆಟ್ಟಗೆ ನಿಲ್ಲಲಾರದು, ಅದು ಬಿದ್ದುಕೊಂಡಿರುವುದು. ದೇಶಭಕ್ತಿಯಿಲ್ಲದ ವ್ಯಕ್ತಿಯು ಸಹ ನಾರಿನಂತೆ ತನ್ನ ತಲೆಯನ್ನು ಮೇಲಕ್ಕೆ ಎತ್ತದು, ಕೆಳಗೆ ಬಿದ್ದುಕೊಂಡಿರುವುದು!" ಇದೇ ದೃಷ್ಟಿಯಿಂದ ಮಾತ್ರ ದೇಶಭಕ್ತಿಶೂನ್ಯನಿಗೆ ನಾರಿನ ಉಪಮೆಯು ಸಂಬಂಧಿಸುತ್ತದೆಂತಲ್ಲ, ನಾರು ಭೇರಿಯವರ ಬಂಧನೆಗೆ ಕಾರಣವಾಗುವಂತೆ ಇದಿಲ್ಲದ ವ್ಯಕ್ತಿಯೂ ದೇಶದ ಬಂಧನೆಗೆ ಕಾರಣವಾಗುವದು, ಈ ದೃಷ್ಟಿಯಿಂದಲೂ ಮೇಲಿನ ಉಪಮೆಯು ಸಮಂಜಸವಾಗುತ್ತದೆ. ಕೊನೆಗೆ ಈ ಲೇಖದ ತಾತ್ಪರ್ಯವನ್ನು ವರ್ಣಿಸುವುದೆಂದರೆ, ದೇಶಭಕ್ತಿಯಿಲ್ಲದವನು ದೇಶದ್ರೋಹಿಯು, ದೇಶದ ಸಾಲಗಾರನು ಮತ್ತು ದೇಶದ ಬಂಧಕನು.

ಸೆಕೆಂಡರಿ ಶಾಲೆಗಳನ್ನು ಕುರಿತು ಒನರೆಬಲ್ ರಾಮಚಂದ್ರರಾಯರು ಚರ್ಚಿಸಿದ ಠರಾವು.

(ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ.)

ಮದ್ರಾಸು ಸಂಸ್ಥಾನದಲ್ಲಿ ಈಗ ಇರುವ ಸೆಕೆಂಡರಿ ಶಾಲೆಗಳಲ್ಲಿ ಸ್ಥಳ ಸಾಕಷ್ಟು ಇದೆಯೋ ಎಂಬದನ್ನು ತನಖಿ ನಿಶಿಂ ರಿಪೋರ್ಟ ಮಾಡುವಂಥಾ ಸರಕಾರಿ ಮತ್ತು ಬಿನ್‌ಸರಕಾರಿ ಮೆಂಬರುಗಳುಳ್ಳ ಒಂದು ಕಮಿಟಿಯನ್ನು ಸರಕಾರದವರು ನೇಮಿಸಬೇಕೆಂದೂ ಈ ಕಮಿಟಿಯವರು ಸೆಕೆಂಡರಿ ಶಿಕ್ಷಣವನ್ನು ವೃದ್ಧಿಗೊಳಿಸುವುದಕ್ಕೆ ಅಗತ್ಯವಿರುವ ಏರ್ಪಾಡುಗಳನ್ನು ತೋರಿಸಿ ಕೊಡುವಂತೆ ಅವರಿಗೆ ಸೂಚಿಸಬೇಕೆಂದೂ ಒನರೆಬಲ್ ರಾಮಚಂದ್ರರಾಯರು ಒಂದು ಠರಾವನ್ನು ಚರ್ಚೆಗೆ ತಂದರು.

೧೯೦೬ನೇ ಇಸವಿಯಲ್ಲಿ ಆಗ ಡಿರೆಕ್ಟರಾಗಿದ್ದ ಡಾಕ್ಟರ್ ಬೂರ್ನರು ಹೊಸ ಗ್ರೆಂಟ ಇನ್ ಎಯ್ಡ್ ಕೋಡನ್ನು ಜಾರಿಗೆ ತಂದಂದಿನಿಂದ ಶಾಲೆಗಳ ಸಂಖ್ಯೆ ತಗ್ಗಿತೆಂದೂ ಈಗ ಇರುವ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಏರಿ ಸ್ಥಳ ಸಂಕೋಚವಾಗಿದೆ ಎಂದೂ ಅವರು ೧೯೦೧ರಿಂದ ೧೯೧೫ರವರೆಗೆ ವರ್ಷಂಪ್ರತಿ ಸರಕಾರದಿಂದ ಮುದ್ರಿತವಾಗುವ ರಿಪೋರ್ಟಗಳಿಂದ ಸ್ಪಷ್ಟಗೊಳಿಸಿದರು. ಹೀಗೆ ಶಾಲೆಗಳ ಸಂಖ್ಯೆ ಕಡಿಮೆಯಾದ್ದರಿಂದ ದೂರದ ಹಳ್ಳಿಗಳಿಂದ ಸಣ್ಣ ಮಕ್ಕಳನ್ನು ದೊಡ್ಡ ಶಹರುಗಳಲ್ಲಿ ತಂದು ತಕ್ಕ ನಿವಾಸಗ್ರುಹಗಳಿಲ್ಲದೆ ಕಂಡಾಬಟ್ಟೆ ಇರಗೊಡಿಸುವುದು ಅವರ ಆರೋಗ್ಯಕ್ಕೂ ವಿದ್ಯಾರ್ಜನೆಗೂ ಬಾಧಕಕರವೆಂದು ಅವರು ಚರ್ಚಿಸಿದರು. ಅವರು ಮುದ್ರಿಸಿ ಸಭೆಯ ಮೆಂಬರರಿಗೆ ಹಂಚಿದ ಸೂಚನಾ ಪತ್ರದ ಮೇರೆಗೆ ೧೬ ಸೆಕೆಂಡರಿ ಶಾಲೆಗಳಲ್ಲಿ ಒಂದೊಂದರಲ್ಲಿ ೧೦೦ದಿಂದ ೧೫೦ ವರೆಗೆ ಮಕ್ಕಳ ಸಂಖ್ಯೆ ಇತ್ತೆಂದೂ ೬೬ ಶಾಲೆಗಳಲ್ಲಿ ೫೦ರಿಂದ ೧೦೦ವರೆಗೆ ಸಂಖ್ಯೆ ಇತ್ತೆಂದೂ ಗೊತ್ತಾಗುತ್ತದೆ. ಇದಲ್ಲದೆ ಹೊಸ ರೂಲ್ಸುಗಳು ಸೆಕೆಂಡರಿ ವಿದ್ಯಾಭ್ಯಾಸವು ಕುಗ್ಗಿಹೋಗುವುದಕ್ಕೆ ಸಹಕಾರಿಯಾದುವೆಂತಲೂ ಬಹುಮಾನಪಟ್ಟ ಗವರ್ನರವರು ಸ್ವತಃ ಅನೇಕ ಶಾಲೆಗಳನ್ನು ಸಂದರ್ಶಣೆ ಮಾಡಿರುವುದರಿಂದ ಈ ವಿಷಯಗಳಲ್ಲಿ ಅವರ ಗೋಚರಕ್ಕೆ ಬಂದಿರಬಹುದೆಂತಲೂ ಅವರು ಸೂಚಿಸಿದರು.

ಡಿರೆಕ್ಟರರಾದ ಒನರೆಬಲ್ ಸ್ಟೋನರು ಈ ವಿಷಯದಲ್ಲಿ ಸರಕಾರ ಕಡೆಯಿಂದ ಚರ್ಚಿಸಿದರು. ಇದರಲ್ಲಿ ಯಾವ ಹೊಸ ನಿಯಮಕ್ಕೂ ಡಾಕ್ಟರ್ ಬೂರ್ನರು ಕರ್ತೃವಲ್ಲವೆಂತಲೂ ಅವರು ಸರಕಾರದ ಅನುಜ್ಞೆಯನ್ನು ಜಾರಿಗೆ ತಂದದರಲ್ಲಿ ತಪ್ಪು ಅವರದೇನೂ ಇಲ್ಲವೆಂತಲೂ ಒನರೆಬಲ್ ಸ್ಟೋನರು ಹೇಳಿದರು. ವಿದ್ಯಾ ಇಲಾಖೆಗೆ ಹಣದ ಉದಾರ ಆಶ್ರಯವು ದೊರೆಯದ ಕಾರಣ ಹೆಚ್ಚಿನ ಹಣವನ್ನು ಅತಿ ಪ್ರಾಮುಖ್ಯವಾದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ವೆಚ್ಚ ಮಾಡಲಾಗಿ ಉಳಿದ ಮೇಲು ತರಗತಿಯ ಶಾಲೆಗಳಿಗೆ ಅರ್ಧಾಶನವಾಯಿತೆಂದೂ ಪ್ರಾಥಮಿಕ ಶಿಕ್ಷಣದಲ್ಲಿರುವ ಮಕ್ಕಳು ತೀರಾ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೋಗುವವರಲ್ಲವೆಂದು ಭಾಷಿಸಿ ಈ ಎರಡು ವಿದ್ಯಾಭ್ಯಾಸದ ಗಡಿಗಳನ್ನು ಗುರ್ತಿಸಲಿಕ್ಕೆ ಕಬ್ಬಿಣದ ಸರಿಗೆಗಳ ಬೇಲಿಯು ಭದ್ರವಾಗಿದ್ದು ಮಧ್ಯದಲ್ಲಿ ಇಟ್ಟ ದಾರಿಯು ಇಕ್ಕಟ್ಟಾದ ಕಾರಣ ಎಲಿಮೆಂಟರಿ ಶಾಲೆಗಳಿಂದ ಹೆಚ್ಚಿನ ಮಕ್ಕಳು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೋಗಲಿಕ್ಕೆ ತೊಡಕಾಯಿತೆಂದು ಅವರು ಒಪ್ಪಿದರು. ಇದಲ್ಲದೆ ೧೯೦೬ನೆ ಇಸವಿಯ ಮುಂಚೆ ಮಿಡ್ಲ್ ಸ್ಕೂಲ್ ಅಥವಾ ಲೋವರ್ ಸೆಕೆಂಡರಿ ಸ್ಕೂಲ್ ಎಂದು ಕರೆಯಲ್ಪಡುತ್ತಿದ್ದ ಶಾಲೆಗಳಲ್ಲಿ ಹಲವು ಎಲಿಮೆಂಟರಿ ವರ್ಗಕ್ಕೆ ದಾಖಲಾದ್ದು ಸೆಕೆಂಡರಿ ಶಾಲೆಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣವಾಯಿತೆಂದು ಅವರ ಅಭಿಪ್ರಾಯ. ಈ ಶಾಲೆಗಳು ನಿಜವಾಗಿಯೂ ಸೆಕೆಂಡರಿ ಶಾಲೆಗಳೆಂದು ಕರೆಯಲ್ಪಡುವ ಯೋಗ್ಯತೆಯಿಲ್ಲದವುಗಳೆಂದು ಅವರ ಮತ. ಹಳ್ಳಿ ಶಾಲೆಗಳಿಂದ ಅನಾವಶ್ಯಕವಾಗಿ ಮಕ್ಕಳು ಬಂದು ಸೇರಿ ನಿರರ್ಥಕವಾಗದಂತೆ ಇವುಗಳನ್ನು ಎಲಿಮೆಂಟರಿ ವರ್ಗಕ್ಕೆ ಸೇರಿಸಿದ್ದು ಜನರಲ್ಲಿ ಅಂಥಾ ಶಾಲೆಗಳ ನಿಜಸ್ಥಿತಿಯನ್ನು ಬಯಲಿಗೆ ತಂದಹಾಗಾಯಿತೆಂದು, ಅವರು ಪ್ರತಿಪಾದಿಸಿದರು. ಸರಕಾರದ ಹಣ ಸಹಾಯದ ಮೇಲೆ ಈಗ ಶಾಲೆಗಳು ವೃದ್ಧಿಯಾಗಬೇಕಾದ್ದರಿಂದ ಅಂಥ ಸಹಾಯ ದೊರೆತರೆ ಶಾಲೆಗಳ ಸಂಖ್ಯೆ ಹೆಚ್ಚಿಸುವುದಕ್ಕೆ ತಾನು ತುಂಬಾ ಆತುರವುಳ್ಳವನೆಂದು ಅವರು ನಮ್ಮಲ್ಲಿ ನಂಬಿಕೆ ಹುಟ್ಟಿಸ್ಸುವುದಕ್ಕೆ ಪ್ರಯತ್ನಿಸಿದರು. ಈ ವಿಚಾರಕ್ಕೆ ಕಮ್ಮಿಟಿಯು ಬೇರೆ ಅಗತ್ಯವಿಲ್ಲ ಎಂದು ಅವರ ವಿದುರುವಾದ. ಈ ಚರ್ಚೆಯು ಬಹುಮತದ ಎದುರುವಾದದಿಂದ ಬಿದ್ದುಹೋಯಿತು; ಠರಾವು ಮಂಜೂರಾಗಲಿಲ್ಲ. ಆದರೆ ಈ ಚರ್ಚೆಯ ಮಧ್ಯ ಕಾಲದಲ್ಲಿ ಬಹುಮಾನಪಟ್ಟ ಗವರ್ನರರು ಉಚ್ಚರಿಸಿದ ಕೆಲವು ಮಾತುಗಳನ್ನು ವಾಚಕರು ತಿಳಿಯಬೇಕಾಗುವುದು.

ಎಲ್ಲಾ ದೇಶಗಳಲ್ಲಿಯೂ ವಿದ್ಯಾಭಿವೃದ್ಧಿಯ ಕಡೆಗೆ ಜನರು ಆತುರತೋರಿಸುವಂತೆ ಈಗ ಈ ಮಹಾ ಯುದ್ಧದ ಮಧ್ಯ ಕಾಲದಲ್ಲಿಯೂ ಇಂಗ್ಲಾಂಡಿನಲ್ಲಿ ಶಿಕ್ಷಣದ ದುರುಸ್ತಿಯ ವಿಷಯವಾಗಿ ಚರ್ಚೆಗಳು ಬರುತ್ತಲೆ ಇವೆ ಎಂತಲೂ ಇಲ್ಲಿಯೂ ಈ ಸಭೆಯಲ್ಲಿ ಆಗಾಗ ಹಲವು ಠರಾವುಗಳನ್ನು ಮಂಜೂರು ಮಾಡಿದ್ದಲ್ಲದೆ ಶಿಕ್ಷಣದ ವ್ಯವಸ್ಥೆಯನ್ನು ಕುರಿತು ಸರಕಾರದವರು ಇಲ್ಲಿ ಸದಾ ಚಿಂತನೆ ಮಾಡುತ್ತಿರುವರೆಂದು ಅವರು ಹೇಳಿದರು. ಹೀಗೆ ಹೇಳುವಾಗಲೇ ಸರಕಾರದವರು ಸಂಗ್ರಹಿಸಿ ವರ್ಷಂಪ್ರತಿ

ಪ್ರಕಟಿಸುತ್ತಿರುವ ವಹಿವಾಟು ಪಟ್ಟಿಗಳನ್ನೆ ಆಧಾರವಾಗಿ ಇಟ್ಟುಕೊಂಡು ಯಾವುದೊಂದು ರೀತಿಯ ತೀರ್ಮಾನವನ್ನು ತಕ್ಕ ವಿವೇಚನೆಯಿಲ್ಲದೆ ಮಾಡುವುದು ಶುದ್ಧ ತಪ್ಪೆಂದು ಅವರು ಉತ್ಕಂಠವಾಗಿ ಹೇಳಿಬಿಟ್ಟರು. ತಾನು ಅಲ್ಲಲ್ಲಿ ಸಂದರ್ಶಣೆಮಾಡಿದಾಗ ಶಾಲೆಗಳಲ್ಲಿ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಯ ಕುರುಹುಗಳೇ ಕಾಣಬರುತ್ತಿವೆಯಾದ್ದರಿಂದ ಈಗ ಈ ತನಕಿಯ ಬಗ್ಗೆ ಬೇರೆ ಕಮ್ಮಿಟಿಯು ಅವಶ್ಯವಿಲ್ಲವೆಂದು ಅವರು ಸೂಚಿಸಿದರು.

ಸರಕಾರಿ ವಹಿವಾಟು ಪಟ್ಟಿ (statistics) ಗಳನ್ನು ಆಧಾರವಾಗಿಟ್ಟುಕೊಳ್ಳುವುದು ಸಮಂಜಸವಾದ್ದಲ್ಲವೆಂದು ಗವರ್ನರವರ ಅಪ್ಪಣೆಯಾದುದು ವಾಸ್ತವವೇ ಸರಿ. ಒಂದು ಗ್ರಾಮದಲ್ಲಿ ಜನಸಂಖ್ಯೆ ೧೦೦ ಇದ್ದರೆ ಶಾಲೆಗೆ ಹೋಗುವ ಪ್ರಾಯದವರು ಈ ಪೈಕಿ ಬರೆ ೧೫ ಮಂದಿ ಎಂದು ಸರಕಾರದವರ ಪ್ರಥಮ ಮಂತ್ರ. ಈ ಮಂತ್ರದ ಮೇರೆಗೆ ನೋಡಿದರೆ ಈ ಸಂಸ್ಥಾನದ ಹಲವು ಮ್ಯುನಿಸಿಪಾಲಿಟಿಗಳೊಳಗೆ ಎಲ್ಲಾ ಮಕ್ಕಳು ಶಿಕ್ಷಣವನ್ನು ಹೊಂದುತ್ತಾರೆಂದು ಭಾವನೆಯಾಗುವುದು. ಆದರೆ ವಿದ್ಯೆಯ ಸುಳಿವು ಇಲ್ಲದ ಮಕ್ಕಳು ಆ ಪಟ್ಟಣಗಳಲ್ಲಿ ಎಷ್ಟೋ ಇವೆ. ಇದಲ್ಲದೆ ಬರೆ ಶಾಲೆಗಳ ಸಂಖ್ಯೆ, ಅವುಗಳಲ್ಲಿರುವ ಮಕ್ಕಳ ಸಂಖ್ಯೆ, ಅಥವಾ ಸರಕಾರದವರು ವೆಚ್ಚ ಮಾಡಿದ ಹಣ ಈ ಪಟ್ಟಿಗಳನ್ನು ನೋಡಿದ ಮಾತ್ರದಿಂದಲೇ ಒಂದು ಕಡೆಯಲ್ಲಿ ವಿದ್ಯಾಪ್ರಚಾರ ಚೆನ್ನಾಗಿದೆ ಎಂದು ಹೇಳುವುದು ಶುದ್ಧ ತಪ್ಪಾದೀತು, ೧೯೧೫ನೆ ಇಸವಿಯ ಮಾರ್ಚಿ ಆಖೈರಿಗೆ ಎಲಿಮೆಂಟರಿ ಶಾಲೆಗಳಲ್ಲಿ ಬಾಲಕ ದರ್ಜೆಯಲ್ಲಿ ಗಂಡುಮಕ್ಕಳ ಸಂಖ್ಯೆ ೧೭೫೦೦೦, ೧ನೇ ದರ್ಜೆಯಲ್ಲಿ ೮೨,೫೦೦, ೨ನೇ ದರ್ಜೆಯಲ್ಲಿ ೬೩,೦೦೦, ೩ನೇ ದರ್ಜೆಯಲ್ಲಿ ೫೦,೦೦೦, ೪ನೇ ದರ್ಜೆಯಲ್ಲಿ ೧೮೨೦೦ ಮಕ್ಕಳಿದ್ದರು. ಎಂದರೆ ಬಾಲಕ ದರ್ಜೆಯ ಮತ್ತು ೪ನೇ ದರ್ಜೆಯ ಸಂಖ್ಯಾ ವ್ಯತ್ಯಾಸವು ಅರ್ಥಗರ್ಭಿತವಾಗಿದೆ; ಇದೇ ದಾಮಾಶಾಯವು ಹೆಚ್ಚುಕಡಿಮೆ ಎಲ್ಲಾ ವರ್ಷಗಳಲ್ಲಿಯೂ ಇರುವುದಾದರೆ ಎಷ್ಟೊ ಮಕ್ಕಳು 'ಓನಾಮ' ಕಲಿಯುವುದರಲ್ಲಿಯೆ ಬಿಟ್ಟುಬಿಡುತ್ತಾರೆಂದು ಗೊತ್ತಾಗುವುದು. ಇನ್ನೊಮ್ಮೆ ನೋಡೋಣ. ಸೆಕೆಂಡರಿ ಸಾಲೆಗಳಲ್ಲಿ I ಫಾರ್ಮಿನಲ್ಲಿ ೧೨,೯೦೦ ಗಂಡುಮಕ್ಕಳು, III ಫಾರ್ಮಿನಲ್ಲಿ ೧೦,೮೦೦ ಮಕ್ಕಳು, VI ಫಾರ್ಮಿನಲ್ಲಿ ೮,೫೦೦ ಮಕ್ಕಳೆಂದರೆ (ಅದೇ ವರ್ಷದಲ್ಲಿ) I ಫಾರ್ಮಿನಲ್ಲಿದ್ದ ಮಕ್ಕಳಲ್ಲಿ ಅರ್ಧಾಂಶ ಸಹಾ ಸ್ಕೂಲಫೈನಲ್ ಪರೀಕ್ಷೆಗೆ ಬರಲಾರರು ಎಂದು ತಿಳಿಯಬೇಕಾಗಿದೆ. ಹಾಗಾದರೆ ಬರೆ ಸಂಖ್ಯೆಯನ್ನು ಅಚ್ಚಿನಲ್ಲಿ ನೋಡಿದಾಕ್ಷಣ ವಿದ್ಯಾಪ್ರಸಾರ ಚೆನ್ನಾಗಿದೆ ಎಂದು ಸಂತೃಪ್ತಿಪಡುವುದು ತಪ್ಪಾಗದೆ?

ಒನರೆಬಲ್ ರಾಮಚಂದ್ರರಾಯರ ಪಟ್ಟಿಗಳನ್ನು ಇನ್ನೊಮ್ಮೆ ಪರೀಕ್ಷಿಸೋಣ:— ೧೯೧೧—೧೨ರಲ್ಲಿ ೪೩೭ ಸೆಕಂಡರಿ ಸಾಲೆಗಳಿದ್ದುವು; ೧೯೧೩—೧೪ರಲ್ಲಿ ೪೬೩ಕ್ಕೆ ಏರಿದುವು; ೧೯೧೪—೧೫ರಲ್ಲಿ ೩೩೩ಕ್ಕೆ ಬಂದು ನಿಂತವು. ಆದರೆ ಮಕ್ಕಳ ಸಂಖ್ಯೆ ೧೯೧೧—೧೨ರಲ್ಲಿ ೭೪,೫೦೦ ಇದ್ದು ೧೯೧೪—೧೫ರಲ್ಲಿ ೧೨೩,೧೪೦ಕ್ಕೆ ಏರಿತು. ಸಾಲೆಗಳಲ್ಲಿ ಹೀನಸ್ಥಿತಿಯಲ್ಲಿದ್ದುವುಗಳು ಎಲಿಮೆಂಟರಿ ವರ್ಗಕ್ಕೆ ಸೇರಿಹೋದಕಾರಣ ಸಂಖ್ಯೆ ಏರಿತು ತೋರುತ್ತದೆ ಎಂಬದಾಗಿ ಒನರೆಬಲ್ ಡಿರೆಕ್ಟರವರು ಒಪ್ಪುತ್ತಾರೆ. ಸಾಲೆಗಳ ಸಂಖ್ಯೆ ಕಡಿಮೆಯಾದರೂ ಮಕ್ಕಳ ಸಂಖ್ಯೆ ವೃದ್ಧಿಯಾಗಿದೆ ಎಂದು ಹಿಗ್ಗುವುದೇಕೆ? ಸ್ಥಳಸಂಕೋಚವಾಗಿದ್ದರೆ, ಉಪಾಧ್ಯಾಯರ ಸಂಖ್ಯೆ ಸಾಕಷ್ಟು ಇಲ್ಲದೆ ಟ್ರೈನಿಂಗ್ ಹೊಂದದ ಉಪಾಧ್ಯಾಯರನ್ನು ಒಂದೊಂದು ಕ್ಲಾಸಿನ A, B, C, D ಡಿವಿಜನುಗಳಿಗೆ ಅಧ್ಯಾಪಕರಾಗಿ ಮಾಡಿದ್ದರಿಂದ ವಿದ್ಯಾಸ್ಥಿತಿಯು ಹೇಗೆ ಒಳ್ಳೇದಾಗಬಹುದು?

ಇದಲ್ಲದೆ ಹಳ್ಳಿ ಶಾಲೆಗಳಲ್ಲಿ ಕಲಿತವರಿಗೆ ಅಥವಾ ಶಹರುಗಳಲ್ಲಿಯೂ ಎಲಿಮೆಂಟರಿ ಶಾಲೆಗಳಲ್ಲಿ ಕಲಿತವರಿಗೆ ಸೆಕೆಂಡರಿ ಶಾಲೆಗೆ ಸೇರಲಿಕ್ಕೆ ಒಂದು ವರ್ಷದ ಫೀಸು ಪ್ರವೇಶ ಹಾಸಲಾಗಿ ತೆರುವ ನಿಯಮವೊಂದು, ಎಲಿಮೆಂಟರಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯ ಸುಳಿವು ಇಲ್ಲದ ನಿಯಮವೊಂದು, ಈ ಎರಡು ನಿಯಮಗಳು ಕಬ್ಬಿಣದ ಸರಿಗೆ ಬೇಲಿಯಾದವು. ಇದನ್ನು ಹಾರಿ ಹೋಗಲಾರದ ಮಕ್ಕಳು ಬೇಲಿಯ ಕೆಳ ಸರಿಗೆಗಳಾದ IIನೆ ದರ್ಜೆಯಿಂದಲೋ ಅಥವಾ Iನೇ ದರ್ಜೆಯಿಂದಲೊ ಹಾರಿ ಹಾರಿ ಈ ಸೆಕೆಂಡರಿ ಶಾಲೆಗಳಿಗೆ ಸೇರಬೇಕಾಯಿತು. ಇಲ್ಲವಾದರೆ ಸೆಕೆಂಡರಿ ಶಾಲೆಗಳಲ್ಲಿ ಬಾಲಕದಲ್ಲಿ ೪೭೦೦ ಮಕ್ಕಳು, Iನೆ ದರ್ಜೆಯಲ್ಲಿ ೫೦೦೦, IIನೆ ದರ್ಜೆಯಲ್ಲಿ ೭೪೦೦, IIIನೆ ದರ್ಜೆಯಲ್ಲಿ ೧೪,೮೦೦ ಈ ರೀತಿಯ ವ್ಯತ್ಯಾಸವಿರಲು ಕಾರಣವೇನು. ಕೆಲವು ಸೆಕೆಂಡರಿ ಶಾಲೆಗಳಲ್ಲಿ ಬಾಲಕ, I, II ದರ್ಜೆಗಳೇ ಇಲ್ಲ. ಹೀಗಾಗಿ ಬೇಲಿಯನ್ನು ನುಸುಳಿ ಮಕ್ಕಳು ಹಾರಿ ಹೋದ ಸಮಾಚಾರವೇ ಅಲ್ಲದೆ ಇಲ್ಲಿ ಸರಕಾರದವರಾಗಲಿ ವಿದ್ಯಾ ಇಲಾಖೆಯವರಾಗಲಿ ಸಾಧಕಬಾಧಕಗಳನ್ನು ಚೆನ್ನಾಗಿ ಆಲೋಚಿಸಿ ನಿಯಮಗಳನ್ನು ಮಾಡಿದಂತೆ ಹೇಳಲು ಬರುವುದಿಲ್ಲ.

ಇದಲ್ಲದೆ ವಿಲಾಯತಿಯಲ್ಲಿ ಎಲಿಮೆಂಟರಿ ಸಾಲೆಗಳೆ ಯೂನಿವರ್ಸಿಟಿಯ ಶಿಖರಕ್ಕೆ ಹತ್ತುವ ಕೆಳ ಮೆಟ್ಟಿಲುಗಳಾಗಬೇಕು ಎಂದು ಡಾಕ್ಟರ್ ಆರ್ಮಸ್ಟ್ರೊಂಗ್ ಮೊದಲಾದ ಮಹಾ ವಿದ್ವಾಂಸರು ಪ್ರತಿಪಾದಿಸುತ್ತಿರುವಾಗ ಅವರು ಉಚ್ಛಿಷ್ಟವೆಂದು ತ್ಯಾಜ್ಯ ಮಾಡಬೇಕೆಂದಿರುವ ನಿಯಮಗಳನ್ನು ನಾವು ಇಲ್ಲಿ ವೇದಸೂತ್ರಗಳಾಗಿ ಕಟ್ಟಿಕೊಳ್ಳುವುದರಲ್ಲಿ ಪುರುಷಾರ್ಥವೇನಿದೆ ಎಂದು ಗೊತ್ತಾಗುವುದಿಲ್ಲ. ವಿಲಾಯತಿಯಲ್ಲಿ ಎಲಿಮೆಂಟರಿ ಸಾಲೆಗಳಿಂದ ಮೇಲೆ ಹತ್ತಿಹೋಗಲಾರದ ತರುಣರಿಗೆ ಕಂಟಿನ್ಯೂಯೇಶನ್ ಕ್ಲಾಸಸ್ ಎಂದರೆ ಉಪಶಿಕ್ಷಣ ಕ್ರಮಗಳನ್ನು ವಿಧಿಸಿ ಈ ತರುಣರು ಜೀವನೋಪಾಯದ ವೃತ್ತಿಗಳನ್ನು ಅವಲಂಬಿಸುವಾಗಲೂ ಅದಕ್ಕೆ ಬೇಕಾದ ಕಲಾಪಾಂಡಿತ್ಯವನ್ನು ಹೊಂದುವ ಏರ್ಪಾಡುಗಳು ಇವೆ. ಅವು ಸಾಕಾಗದೆ ಸಾಯಂಕಾಲದಲ್ಲಿ ಉಪಶಿಕ್ಷಣ, ಸ್ತ್ರೀಯರಿಗೆ ಗೃಹಶಿಕ್ಷಣ (evening olasses) (home classes) ಮುಂತಾದ ಏರ್ಪಾಡುಗಳು ಇವೆ. ಇವುಗಳನ್ನು ಮಾಡುವ ಗೊಡವೆ ನಮಗೆ ಇನ್ನೂ ಹತ್ತಲೇ ಇಲ್ಲ.

ಇದಕ್ಕೆ ಬದಲಾಗಿ ಸೆಕೆಂಡರಿ ಸಾಲೆಗಳು ಕುಗ್ಗಿ ಹೋಗುವುದಕ್ಕೆ ಹಲವು ಕಾರಣಗಳು ಸೇರಿದುವು:—

(೧) ಸೆಕೆಂಡರಿ ಸಾಲೆಗಳಲ್ಲಿ ಫೀಸಿನ ದರವನ್ನು ಹೆಚ್ಚಿಸಿದುದು.

(೨) ಫೀಸು ಮಾಫಿಯ ಕ್ರಮಗಳನ್ನು ರದ್ದುಪಡಿಸಿದುದು.

(೩) ಖಾಸಗಿ ಸಾಲೆಗಳಲ್ಲಿ ಗ್ರೇಂಟನ್ನು ಎಣಿಸುವಾಗ ಆ ಸಾಲೆಗಳಲ್ಲಿ ಫೀಸು ಮಾಫಿ ಮಾಡಿದ್ದ ಅಂಶವನ್ನು ಲೆಕ್ಕಿಸದೆ ಅಷ್ಟು ಸಂಬಳ ವಸೂಲಾಗುತ್ತದೆ ಎಂದು ಆದಾಯವನ್ನು ಎಣಿಸಿ ಆದಾಯ ಕಳೆದು ಮೆನೆಜಮೆಂಟಿಗೆ ಹೆಚ್ಚಿಗೆ ಬೀಳುವ ಖರ್ಚಿನಲ್ಲಿ ಅರ್ಧಾಂಶಕ್ಕೆ ಮೀರದಂತೆ ಮಾತ್ರ ಕೊಡಬಹುದಾಗಿ ನಿರ್ಣಯಿಸಿದುದು.

(೪) ಉಳಿದ ಅರ್ಧ ಅಂಶವನ್ನು ಭರ್ತಿ ಮಾಡುವುದಕ್ಕೆ ಬೇಕಾದ ಮೂಲಧನವನ್ನು ಶೇಖರಿಸಿ ಇಡುವಂತೆ ಮಾಡಿದುದು.

(೫) ಸೆಕೆಂಡರಿ ಸಾಲೆಗಳಲ್ಲಿ ಮೆಟ್ರಿಕ್ಯುಲೇಶನ್ ಪಾಸಾದವರನ್ನೆ ಇಡಬೇಕೆಂತಲೂ ಲೋವರ್ ಸೆಕೆಂಡರಿ, ಮತ್ತು ಹೈಸ್ಕೂಲುಗಳಲ್ಲಿ ಸುಪರ್ವೈಜಿಂಗ್ ಹೆಡ್ಮಾಸ್ತರ್ ಎಂಬ ಹೆಚ್ಚಿಗೆ ಇಸಂ ಇಡುವಂತೆ ಬಲಾತ್ಕಾರ ಪಡಿಸಿದುದು.

(೬) ಹೊಸ ಸೆಕೆಂಡರಿ ಸಾಲೆಗಳು ಜನನಕ್ಕೆ ಬಂದು ಮಂಜೂರಾಗಬೇಕಾದರೆ ಸರಿಯಾದ ಕಟ್ಟೋಣವೂ ರೂಲುಮೇರೆಗೆ ಸರ್ಟಿಫೀಕೇಟುಗಳುಳ್ಳ ಉಪಾಧ್ಯಾಯರೂ, ಆಡಳಿತೆಯ ಸಭೆಯೂ, ಸಾಲೆಗಳ ವಹಿವಾಟಿಗೆ ಮೂಲಧನವೂ ಅಗತ್ಯವೆಂದು ಸ್ಪಷ್ಟವಾಗಿ ತಿಳಿಯ ಪಡಿಸಿದುದು.

(೭) ಎಲಿಮೆಂಟರಿ ಸಾಲೆಗಳಿಂದ ಬರುವ ಮಕ್ಕಳಿಗೆ ಸೆಕೆಂಡರಿ ಸಾಲೆಯ ಹೆಡ್ ಮಾಸ್ತರರು ಯುಕ್ತಕಂಡ ಕ್ಲಾಸಿನಲ್ಲಿ ಇರಗೊಡಿಸಬಹುದಾಗಿಯೂ ಹಾಗೆ ಅವರನ್ನು ದಾಖಲು ಮಾಡುವ ಕ್ಲಾಸಿನ ಕೆಳಗಿನ ಕ್ಲಾಸಿನ ಒಂದು ವರ್ಷದ ಸಂಬಳವನ್ನು ಪ್ರವೇಶ ಹಾಸಲಾಗಿ ಪಡಕೊಳ್ಳಬೇಕೆಂದು ನಿರ್ಬಂಧಿಸಿದುದು.

ಇವುಗಳನ್ನು ಜಾರಿಗೆ ತರುವುದರಲ್ಲಿ ಬಹಳ ಬಾಧಕವಾಗಿದೆ ಎಂದು ಜನರು ಗೋಳಿಟ್ಟ ಮೇಲೆ ಕ್ಷಣಿಕ ನಿವಾರಣೆಯ ಕೆಲವು ನಿಯಮಗಳನ್ನು ಸರಕಾರದವರು ಮಾಡಿರುವುದಾಗಿ ನಾವು ಒಪ್ಪುತ್ತೇವೆ. ಫೀಸಿನ ದರವು ಸರಕಾರಿ ಮತ್ತು ಬೋರ್ಡ ಸಾಲೆಗಳಿಗೆ ಮಾತ್ರ ಲಗಾವಾಗಬೇಕೆಂತಲೂ ಮೊದಲೇ ಮಂಜೂರಾದ ಸಾಲೆಗಳಲ್ಲಿ ಉಪಾಧ್ಯಾಯರು ರೂಲುಪ್ರಕಾರ ಪೂರ್ಣ ಯೋಗ್ಯತೆಯ ಸರ್ಟಿಫಿಕೇಟು ಇಲ್ಲದವರಾದರೆ ಅಂಥವರು ದೊರಕುವ ವರೆಗೆ ಸ್ವಲ್ಪ ರಿಯಾಯತಿ ತೋರಿಸಿದುದು, ಒಂದೇ ಮೆನೆಜಮೆಂಟಿನೊಳಗಿರುವ ಕೆಲವು ಸಾಲೆಗಳಿಗೆ ಒಬ್ಬರೆ ಸುಪರ್ವೈಜಿಂಗ್ ಹೆಡ್ ಮಾಸ್ತರರು ಇರಲಿಕ್ಕೆ ಆಕ್ಷೇಪವಿಲ್ಲವೆಂದು ಹೇಳಿದುದು, ಇವು ವ್ಯವಸ್ಥೆಗೆ ಬರುವಾಗ ಹೆಚ್ಚಿನ ಪ್ರಯೋಜನ ಕೊಡಲಿಲ್ಲವೆಂಬುದು ವ್ಯಕ್ತವಾಗಬಹುದು. ಜನರು ತಾವು ಒಗ್ಗಟ್ಟಾಗಿ ಸಾಲೆಗಳನ್ನು ಸ್ಥಾಪಿಸಲಿಕ್ಕೆ ಮುಂದು ಬಾರದಿದ್ದಾಗ, ಸ್ಥಾಪಿತವಾದ ಬೋರ್ಡ ಸಾಲೆಗಳು ಬೋರ್ಡ ಹಣದ ಮೇಲೆ ಆಧರಿಸದೆ ಫೀಸಿನ ಮೇಲೆಯೇ ಆಧರಿಸಿರಬೇಕೆಂದು ನಿರ್ಣಯ ಮಾಡಿದ ಕಾರಣ ಅನೇಕ ಬೋರ್ಡ ಸಾಲೆಗಳು ಬಹಳ ಹೀನ ಸ್ಥಿತಿಯಲ್ಲಿವೆ. ಒಳ್ಳೆ ಕೆಲಸ ಮಾಡಿ ಜನರ ಪ್ರೀತಿಗೆ ಪಾತ್ರರಾದ ಅಧ್ಯಾಪಕರಿರುವ ಸಾಲೆಗಳಲ್ಲಿ ಮಕ್ಕಳು ತುಂಬುವುದರಿಂದ ಫೀಸಿನ ಐವಜಿನಿಂದಲೇ ಖರ್ಚು ಅಥವಾ ಅದರ ಹೆಚ್ಚಿನ ಪಾಲು ವಜಾ ಆಗುವುದರಿಂದ ಅಂಥಾ ಸಾಲೆಗಳಿಗೆ ಸಿಕ್ಕುವ ಗ್ರೇಂಟು ಕಡಿಮೆ. ಮಿಶ್ಯನ್ ಸಾಲೆಗಳಲ್ಲಿ ಮೆನೆಜಮೆಂಟ್ ಖರ್ಚು ಯುರೋಪಿಯನ್ ಹೆಡ್ ಮಾಸ್ತರರ ಸಂಬಳ ಹೆಚ್ಚಾಗಿರುವುದರಿಂದ ಅಂಥಾ ಸಾಲೆಗಳಿಗೆ ಸಿಕ್ಕುವ ಗ್ರೇಂಟು ಹೆಚ್ಚು. ಹೀಗೆ ಅನೇಕ ತರದ ಕುಂದುಕಗಳು ಈ ಸೆಕೆಂಡರಿ ವಿದ್ಯಾ ಪ್ರಸಾರದ ವ್ಯವಸ್ಥೆಯಲ್ಲಿ ಕಂಡು ಬರುತ್ತವೆ. ಇದರಲ್ಲಿ ಸರಕಾರದವರ ಅಶ್ರದ್ಧೆಯೇ ಮೂಲಕಾರಣವೆಂದು ನಾವು ಹೇಳಲಾರೆವು. ಆದರೆ ಪರ್ಯಾಲೋಚಿಸದೆ ದುಡುಕುತನದಿಂದ ಮಾಡಿದ ಕೆಲಸದಿಂದ ಸರಕಾರದ ನಿಜವಾದ ಅಭಿಪ್ರಾಯ ನೆರವೇರುವುದಕ್ಕೆ ಭಂಗ ಬರುತ್ತದಲ್ಲದೆ ಜನರಿಗೆ ಸರಕಾರದವರ ಏರ್ಪಾಡುಗಳ ಕಡೆಗೆ ಅವಿಶ್ವಾಸ ತಲೆದೋರುವುದಕ್ಕೆ ಇಂಥ ಅಪೂರ್ಣ ವಿಚಾರದ ಕೃತ್ಯಗಳೇ ಕಾರಣವಾಗುತ್ತವೆ.

ಯೂರೋಪದ ಮಹಾ ಯುದ್ಧ.

———.o.———

ಈಗಿನ ಹವ ಸ್ಥಿತಿಯು ಯುದ್ಧ ಮಾಡಲು ಶಕ್ಯವಾಗಿಲ್ಲವಾದುದರಿಂದ ವಿಶೇಷ ಯುದ್ಧಗಳೇನೂ ನಡೆದಿರುವುದಿಲ್ಲ. ಪಶ್ಚಿಮ ರಣರಂಗದಲ್ಲಿ ಫ್ರೆಂಚರೂ, ಬ್ರಿಟಿಷರೂ ಅಲ್ಲಲ್ಲಿ ಸಮಯ ಒದಗಿದಾಗ ಶತ್ರುಗಳ ಕಂದಕಗಳ ಮೇಲೆ ಗುಂಡುಗಳನ್ನು ಹಾರಿಸಿ ಶತ್ರುಗಳನ್ನು ಎದೆಗುಂದಿಸುತ್ತಲಿದ್ದಾರಲ್ಲದೆ ಮುಂದೆ ಸುಗ್ಗಿ ಹೋಗಿ ಕದನ ಮಾಡುವದಿಲ್ಲ. ಕೆಲವು ಕಡೆಗಳಲ್ಲಿ ಮಿತ್ರ ಸೇನಿಕರು ಶತ್ರುಗಳನ್ನು ಕಂದಕಗಳಿಂದ ಹೊರ ಅಟ್ಟಿರುವರು.

ರುಶ್ಯನರ ರಣರಂಗಗಳಿಂದಲೂ ವಿಶೇಷ ವರ್ತಮಾನಗಳು ಬಂದಿರುವುದಿಲ್ಲ.

ರುಮೇನಿಯಾ.

ಈ ದೇಶಕ್ಕೆ ಬುಕಾರೆಸ್ಟ್ ಪಟ್ಟಣವೇ ರಾಜಧಾನಿಯು. ಶತ್ರುಗಳು ಆ ಪಟ್ಟಣವನ್ನು ಸ್ವಾಧೀನಮಾಡಿಕೊಳ್ಳಬೇಕೆಂದು ನಾಲ್ಕು ದಿಕ್ಕುಗಳಿಂದಲೂ ಸಾಗಿ ಹೋಗಿ ಕೊನೆಗೆ ಕೋಟೆಯ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದರು. ಈ ಕೋಟೆಗಳು ಬಲವಾಗಿದ್ದರೂ ಈಗಿನ ಕಾಲದ ಗುಂಡುಗಳ ಹೊಡತಕ್ಕೆ ಎಂಥಾ ಬಲವಾದ ಕೋಟೆಗಳೂ ನಿಲ್ಲುವದು ಅಸಾಧ್ಯವೆಂಬದು ಅನುಭವದಿಂದ ತಿಳಿದುಬಂದಿರುವದರಿಂದ ರುಮೇನಿಯನರು ಸೇನಾರಕ್ಷಣೆಯನ್ನು ಮಾಡುವ ಉದ್ದೇಶವನ್ನಿಟ್ಟುಕೊಂಡು ಬುಕಾರೆಸ್ಟ್ ಪಟ್ಟಣವನ್ನು ಬಿಟ್ಟು ಹೋಗಿರುತ್ತಾರೆ. ಜರ್ಮನರು ರುಮೇನಿಯಾ ದೇಶದೊಳಗಣ ಒಳ್ಳೇ ಧಾನ್ಯ ಮತ್ತು ಎಣ್ಣೆ ಸಂಗ್ರಹವಿದ್ದ ಸ್ಥಳಗಳನ್ನು ಸೇರಿರುತ್ತಾರೆ. ರುಮೇನಿಯನರು ಬೇಕಾದಷ್ಟು ಧಾನ್ಯಗಳನ್ನು ಸಾಗಿಸಿಕೊಂಡು ಹೋಗಿ ಉಳಿದವುಗಳಿಗೆ ಬೆಂಕಿ ಕೊಟ್ಟಿರುವರು. ಪೂರ್ಣ ಜಯಾಪಜಯಗಳನ್ನು ನಿರ್ಣಯಿಸುವ ಯುದ್ಧವು ಇನ್ನೂ ರುಮೇನಿಯ ಮತ್ತು ಜರ್ಮನರೊಳಗೆ ಆಗಲಿಲ್ಲ. ರುಮೇನಿಯನರು ಇನ್ನೂ ಕ್ರಮವಾಗಿ ಅಲ್ಲಲ್ಲಿ ಯುದ್ಧ ಕೊಡುತ್ತಾ ಹಿಂದೆಸರಿಯುತ್ತಲೇ ಇದ್ದಾರೆ.

ಸರ್ವಿಯ ರಣರಂಗದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಶತ್ರುಗಳಿಗೆ ಬೆಂಬಲ ಸೇನೆಯು ಬಂದು ಕೂಡಿರುವದರಿಂದ ಅವರು ಕಳಕೊಂಡ ಪ್ರಾಂತ್ಯಗಳನ್ನು ತಿರಿಗಿ ಸ್ವಾಧೀನಮಾಡಿಕೊಳ್ಳಲು ಪ್ರಯತ್ನಿಸುತ್ತಲಿದ್ದಾರೆ. ಸರ್ವಿಯರು ಶತ್ರುಗಳನ್ನು ಮೇಲೆ ಬಿದ್ದ ಲೈಲ್ಲಾ ಹಿಂದಕ್ಕಟ್ಟಿರುತ್ತಾರೆ.

ಗ್ರೀಸ್.

ಗ್ರೀಸು ಪ್ರಭು ಪಕ್ಷದವರ ದ್ರೋಹ ಬುದ್ಧಿಯು ಹೆಚ್ಚುತ್ತಾ ಬಂದದೆ. ಗ್ರೀಕ ಅರಸರು ಮಿತ್ರರಿಗೆ ಫಿರಂಗಿಗಳನ್ನು ಬಿಟ್ಟುಕೊಡುತ್ತೇನೆಂತ ಒಪ್ಪಿದರೂ ಅರಸರ ಪಕ್ಷದವರು ಒಪ್ಪಲಿಲ್ಲ. ಆದುದರಿಂದ ಮಿತ್ರಮಂಡಲಿಯವರು ಅಲ್ಲಿ ತಮ್ಮ ಸೇನೆಯನ್ನು ಇಳಿಸಿದರು. ಮಿತ್ರ ಮಂಡಲಿಯ ಸೇನಿಕರ ಮೇಲೆ ಗ್ರೀಕ ಸೇನಿಕರು ಗುಂಡುಗಳನ್ನು ಹಾರಿಸಿದರು. ಇದರಿಂದ ಉಭಯ ಪಕ್ಷದಲ್ಲಿಯೂ ಪ್ರಾಣಾಪಾಯ ಉಂಟಾಗಿರುವದು. ವೆನೇಜಲಿಸ್ಟ ಪಕ್ಷದವರ ಮೇಲೆ ಗ್ರೀಕ ಪ್ರಭು ಪಕ್ಷದವರು ಹಗೆಸಾಧಿಸಿಕೊಳ್ಳುತ್ತಿದ್ದಾರೆ. ಕೆಲವರನ್ನು ಸೆರೆ ಇಟ್ಟಿದ್ದಾರೆ.

ಗ್ರೀಕ ದೇಶದೊಳಗೆ ವ್ಯಾಪಾರ ಸಾಪಾರಗಳೇನೂ ನಡೆಯದಂತೆ ಮಿತ್ರ ಮಂಡಲಿಯವರು ಹಡಗಗಳು ಹೋಗುವ ದಾರಿಯನ್ನು ತಮ್ಮ ಸ್ವಾಧೀನ ಇಟ್ಟುಕೊಂಡಿರುತ್ತಾರೆ.

ಇಟಲಿ.

ಇಲ್ಲಿಯ ಹವಾಗುಣವು ನೆಟ್ಟಗಿಲ್ಲದಿರುವುದರಿಂದ ವಿಶೇಷ ಕದನಗಳು ನಡೆದಿರುವದಿಲ್ಲ.

ಈಜಿಪ್ಟ್.

ಈಚೆಗೆ ಶತ್ರುಗಳ ವಾಯುನಾವೆಗಳು ಕೈರೋಪಟ್ಟಣದ ಮೇಲೆ ಬೊಂಬುಗಳನ್ನು ಹಾಕಿರುವವು. ಈ ಪೈಕಿ ಒಂದು ಬೊಂಬು ಒಂದು ಆಸ್ಪತ್ರೆಯ ಮೇಲೆ ಬಿದ್ದಿರುತ್ತದೆ. ಉಳಿದವುಗಳು ಬೀದಿಗಳ ಮೇಲೆ ಬಿದ್ದಿರುವವು. ಇದರಿಂದ ಒಟ್ಟಿಗೆ ೨೧ ಮಂದಿ ಹತರಾಗಿರುವರು, ೧೪ ಮಂದಿ ಗಾಯ ಒಡೆದಿರುವರು. ಬ್ರಿಟಿಷರ ವಾಯುನಾವೆಗಳು ಇದರ ಮುಂಚಿನ ದಿನ ಬಿರ್‌ಸಾಬ ಮತ್ತು ಮಗ್ದಾಬ ಎಂಬಲ್ಲಿರುವ ತುರ್ಕರ ಸೇನಾನೆಲೆಗಳ ಮೇಲೆ ಬೊಂಬುಗಳನ್ನು ಹಾಕಿ ವಿಶೇಷ ನಷ್ಟಪಡಿಸಿದುದರಿಂದ ಇದರ ಹಗೆ ತೀರಿಸುವರೆ ತುರ್ಕರು ಮರುದಿನ ಕೈರೋ ನಗರದ ಮೇಲೆ ಬೊಂಬು ಹಾಕಿದ್ದಾಗಿರುತ್ತದೆ.

ದರ್ಫ್ಯಾರ್ ಎಂಬಲ್ಲಿಯ ಅಲಿ ದಿನಾರ್ ಎಂಬ ಸುಲ್ತಾನನಿಗೂ, ಬ್ರಿಟಿಷ ಸೇನಿಕರಿಗೂ ಕದನ ನಡೆದು ಬ್ರಿಟಿಷ ಸೇನಿಕರು ಸುಲ್ತಾನನನ್ನೂ ಅವರ ಸೈನಿಕರನ್ನೂ ಸೋಲಿಸಿರುತ್ತಾರೆ. ಸುಲ್ತಾನನು ಈ ಕದನದಲ್ಲಿ ಮಡಿದು ಹೋಗಿರುವನು.

ಜಲಂತರ್ಗಾಮಿ ನಾವೆಗಳು.

ಯುದ್ಧ ಪ್ರಾರಂಭವಾದ ನಂತರ ನೋರ್ವೆ ದೇಶದವರ ೫೪೩ ಹಡಗಗಳು ಜಲಂತರ್ಗಾಮಿ ನಾವೆಗಳಿಂದ ಮುಳುಗಿಸಲ್ಪಟ್ಟಿವೆ. ಈ ಪೈಕಿ ೯೩ ಕಳದ ಮೂರು ತಿಂಗಳೊಳಗಾಗಿಯೇ ಮುಳುಗಿ ಹೋಗಿರುವವು.

ಕಳದ ವಾರದಲ್ಲಿಯೂ ಬ್ರಿಟಿಷರ ನೋರ್ವೇಯವರ, ಗ್ರೀಕರ ಹಲವು ಹಡಗಗಳು ಜರ್ಮನರ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

~~~~~~

ವಿದೇಶ ವೃತ್ತಾಂತ.

~~~~~~

ಬ್ರಿಟಿಷ್ ಪ್ರಧಾನ ಮಂತ್ರಿಯಾಗಿದ್ದ ಮಿ। ಅಸ್ಕ್ವಿತರವರ ರಾಜಿನಾಮೆಯು ಜೋರ್ಜ ಚಕ್ರವರ್ತಿಯವರಿಂದ ಅಂಗೀಕರಿಸೋಣಾಯಿತು. ಹೊಸ ಮಂತ್ರಿ ಸಭೆಯನ್ನು ರೂಪಿಸುವ ಬಗ್ಗೆ ಅರಸರು ಮಿ। ಬೊನರ್ ಲಾರವರನ್ನು ಕರೆಯಿಸಿದರು. ಆದರೆ ಮಿ। ಬೊನರ್‌ಲಾರವರು ಹೊಸ ಮಂತ್ರಿ ಸಭೆಯನ್ನು ರೂಪಿಸುವರೆ ನಿರಾಕರಿಸಿದ್ದರಿಂದ ಅರಸರು ಮಿ। ಲ್ಯೊಡ್ ಜೋರ್ಜರನ್ನು ಕರೆಯಿಸಿರುತ್ತಾರೆ. ಲ್ಯೊಡ ಜೋರ್ಜರವರು ಒಪ್ಪಿ ಹೊಸ ಮಂತ್ರಿ ಸಭೆಯನ್ನು ರೂಪಿಸುತ್ತಿದ್ದಾರೆ. ಲ್ಯೊಡ ಜೋರ್ಜರವರು ಅರಸರಿಗೆ ಭೇಟಿಕೊಟ್ಟು ಪ್ರಧಾನ ಮಂತ್ರಿ ಪದವಿಯನ್ನು ಸ್ವೀಕರಿಸಿರುತ್ತಾರೆ.

~~~~~~

ಮಿ। ಅಸ್ಕ್ವಿತರವರು ಪ್ರಧಾನ ಮಂತ್ರಿಯಾಗಿರುವ ಕಾಲ ಮಾಡಿದ ಕೆಲಸಗಳನ್ನು ಶ್ಲಾಘಿಸಿ ಅರಸರವರು ಅಸ್ಕ್ವಿತರವರಿಗೆ ಒಂದು ಕೃತಜ್ಞತಾ ಪತ್ರಿಕೆಯನ್ನು ಕಳುಹಿಸಿದ್ದರೆಂತಲೂ ಮಿ। ಅಸ್ಕ್ವಿತರಿಗೆ ಪ್ರಭು ಪದವಿಯನ್ನು ಮತ್ತು ಗಾರ್ಟರ್ ಎಂಬ ಬಿರುದನ್ನೂ ಕೊಡುತ್ತೇನೆಂತ ತಿಳಿಸಿದ್ದರೆಂತಲೂ "ಮೋರ್ನಿಂಗ್ ಪೋಸ್ಟು" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಿ। ಅಸ್ಕ್ವಿತರವರು ಈ ಬಹುಮಾನಗಳನ್ನು ಸ್ವೀಕರಿಸಲಿಲ್ಲ ಎಂತ ಅದೇ ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~~

ಮಿ। ಅಸ್ಕ್ವಿತರವರು ಇಂಗ್ಲಾಂಡಿನ ರಿಫೋರ್ಮ ಕ್ಲಬ್ಬಿನಲ್ಲಿ ಕೊಟ್ಟ ಭಾಷಣದಿಂದ ಅವರು ಯಾಕೆ ರಾಜಿನಾಮೆ ಕೊಟ್ಟರೆಂಬದು ಸ್ಪಷ್ಟವಾಗುತ್ತದೆ. ಈ ಕ್ಲಬ್ಬಿನಲ್ಲಿ ೨೦೦ಕ್ಕೆ ಮಿಕ್ಕಿದ ಪಾರ್ಲಿಮೆಂಟ್ ಮೆಂಬರರು ಹಾಜರಿದ್ದರು. ಮಿ। ಅಸ್ಕ್ವಿತರವರು ಹೇಳಿದ್ದೇನೆಂದರೆ–ವಿಸ್ಕೌಂಟ ಗ್ರೇ ಮತ್ತು ತನಗೆ ವಿರೋಧವಾಗಿ ಬಹಳ ಜಾಗ್ರತೆಯಿಂದ ಪಿತೂರಿ ನಡೆಯುತ್ತಿತ್ತು. ಈ ಪಿತೂರಿಯಲ್ಲಿ ಲ್ಯೊಡ್ ಜೋರ್ಜರಾಗಲೀ ಸರಕಾರದ ಇತರ ಯಾವ ಮೆಂಬರನಾಗಲೀ ಸೇರಿದ್ದರೆಂತ ತಾನು ಹೇಳುವದಿಲ್ಲ. ಮಿ। ಲ್ಯೊಡ ಜೋರ್ಜರವರು ಸಣ್ಣದಾದ ಯುದ್ಧ ಕೌನ್ಸಿಲನ್ನು ರೂಪಿಸಬೇಕೆಂದು ದಶಂಬರ ತಾ. ೧ರಲ್ಲು ಕೊಟ್ಟ ಸೂಚನೆಯನ್ನು ತಾನು ಕೂಡಲೇ ಅಂಗೀಕರಿಸಿ ಈ ಕೌನ್ಸಿಲಿನಲ್ಲಿ ಪ್ರಧಾನ ಮಂತ್ರಿಯು ಅಧ್ಯಕ್ಷರಾಗಿರಬೇಕೆಂದು ಉತ್ತರ ಕೊಟ್ಟೆನು. ಮಿ। ಲ್ಯೊಡ ಜೋರ್ಜರವರು ಇದಕ್ಕೆ ಒಪ್ಪಲಿಲ್ಲ. ಮತ್ತು ಅಸ್ಕ್ವಿತರವರು ರಾಜಿ ಕೊಡದಿದ್ದರೆ ತಾವು ರಾಜಿ ಕೊಡುತ್ತೇವೆಂದು ತಾ. ೩ರಲ್ಲು ಯುನಿಯನಿಸ್ಟ ಮಂತ್ರಿಗಳು ತಿಳಿಸಿದರು. ಮಿ। ಬೋನರ್ ಲಾರವರು ಮಂತ್ರಿ ಸಭೆಯಲ್ಲಿ ಇರಬೇಕೆಂದು ತಾನು ವಿಜ್ಞಾಪಿಸಿಕೊಂಡೆನು. ಮತ್ತೆ ತಾ, ೪ರಲ್ಲು ತಾನು ಮಿ। ಲ್ಯೊಡ ಜೋರ್ಜರಿಗೆ ಪತ್ರ ಬರೆದು ತಾನು ಕೇಬಿನೆಟ್ ಸಭೆಯಲ್ಲಿ ಪ್ರೇಕ್ಷಕನಾಗಿ ಕೂತುಕೊಳ್ಳಲಾರೆನೆಂದು ತಿಳಿಸಿ ಕೆಲವು ಹೊಸ ಸೂಚನೆಗಳನ್ನು ತಿಳಿಸಿದೆನು. ತಾನು ವಾರ್ ಕೌನ್ಸಿಲಿನಲ್ಲಿ ಅಧ್ಯಕ್ಷರಾಗಿರುವದಕ್ಕೆ ಇದ್ದ ಮಿ। ಲ್ಯೊಡ ಜೋರ್ಜರವರ ಆಕ್ಷೇಪಣೆಗಳನ್ನು ತನ್ನ ಸ್ನೇಹಿತರ ಕೂಡೆ ಹೇಳಿ ಆಲೋಚಿಸಿ ಕಡೆಗೆ ರಾಜಿನಾಮೆ ಕೊಟ್ಟೆನು. ತಾನು ಹೊಸ ಮಂತ್ರಿ ಸಭೆಗೆ ಸೇರುವ ಹಾಗಿಲ್ಲ. ಯಾಕಂದರೆ ತನ್ನ ಮೇಲೆ ಬಹಳ ದೋಷಾರೋಪಣೆಗಳು ಇದ್ದೇ ಇರುವವೆಂದು ತನಗೆ ಗೊತ್ತದೆ. ಇಂಥಾ ಆರೋಪಣೆಗಳಿಗೆ ಹೊರಗೆ ನಿಂತೇ ಸ್ವತಂತ್ರನಾಗಿದ್ದುಕೊಂಡು ಪ್ರತಿಷೇಧಿಸುವದು ಒಳ್ಳೇದು ಎಂದು ಅಸ್ಕ್ವಿತರವರು ಹೇಳಿರುತ್ತಾರೆ.

~~~~~~

ಇಂಗ್ಲಾಂಡ್ ಬೇಂಕಿಗೆ ಹೊರತು ಇಂಗ್ಲಾಂಡಿನಿಂದ ಚಿನ್ನವನ್ನು ಪರದೇಶಗಳಿಗೆ ಯಾವ ರೂಪದಲ್ಲಿಯೂ ಕಳುಹಿಸಿಕೊಡಕೂಡದು. ಚಿನ್ನ ಬೆಳ್ಳಿಯ ವಾಚುಗಳಲ್ಲದೆ ಇತರ ಆಭರಣಗಳನ್ನು ಕೂಡಾ ಕಳುಹಿಸ ಕೂಡದು ಎಂತ ಬ್ರಿಟಿಷ ಸರಕಾರದ ಆಜ್ಞೆ ಆಗಿದೆ.

~~~~~~

ಇಂಗ್ಲಾಂಡಿನ ಉತ್ತರದಲ್ಲಿರುವ ಯುದ್ಧಸಾಮಾಗ್ರಿಗಳನ್ನು ಮಾಡುವ ಕಾರ್ಖಾನೆಯೊಂದರಲ್ಲಿ ಸಿಡಿತ ಉಂಟಾಗಿ ೫೭ ಮಂದಿ ಹತರಾಗಿರುವರು. ೩೦ ಮಂದಿ ಗಾಯಪಟ್ಟಿರುತ್ತಾರೆ.

~~~~~~

ಸರ್ದಾರ್ ಡಲ್ಜಿತಸಿಂಘರವರು ತಾ. ೭ರಲ್ಲು ಜೋರ್ಜ, ಚಕ್ರವರ್ತಿಯವರಿಗೆ ಭೇಟಿ ಕೊಟ್ಟಿರುತ್ತಾರೆ.

~~~~~~

ಇಂಗ್ಲಿಷ್ ವರ್ತಮಾನ ಪತ್ರಿಕೆಗಳ ಮಾಲೀಕರು ವರ್ತಮಾನ ಪತ್ರಿಕೆಗಳಿಗೆ ಅರ್ಧ ಪೆನ್ಸ್‌ನಂತೆ ಕ್ರಯ ಹೆಚ್ಚಿಸಬೇಕೆಂತ ನಿರ್ಣಯಿಸಿರುತ್ತಾರೆ.

~~~~~~

ಲ್ಯೊಡ ಜೋರ್ಜರವರು ೧೨ ಸದಸ್ಯರು ಕೂಡಿದ ಕೆಬಿನೆಟ್ ಸಭೆಯನ್ನು ಸ್ಥಾಪಿಸಬೇಕೆಂದಿದ್ದಾರೆ. ಈ ಪೈಕಿ ೫ ಲಿಬರಲ್ ಪಕ್ಷದವರು, ೫ ಯೂನ್ಯನಿಷ್ಟರು, ೨ ಲೇಬರ್ ಪಕ್ಷದವರನ್ನು ಸೇರಿಸಬೇಕೆಂದಿರುವರು. ಕೆಬಿನೆಟ್ ಸಭೆಯ ಒಬ್ಬ ಲೇಬರ್ ಮೆಂಬರನು ವಾರ್ ಕೌನ್ಸಿಲಿನ ಮೆಂಬರನಾಗಿರುವನು. ಇತರ ೩ ಲೇಬರ್ ಮೆಂಬರರು ಮಂತ್ರಿ ಸಭೆಯಲ್ಲಿ ಸೇರಿಸಲ್ಪಡುವರು. ಹಿಂದಿನ ಲಿಬರಲ್ ಪಕ್ಷದ ಮಂತ್ರಿಗಳೆಲ್ಲರೂ ಲ್ಯೊಡ್ ಜೋರ್ಜರ ಮಂತ್ರಿ ಸಭೆಗೆ ಸೇರಲು ಒಪ್ಪುವದಿಲ್ಲವಾದುದರಿಂದ ಹೊಸ ಮಂತ್ರಿ ಸಭೆಗೆ ತಕ್ಕ ಲಿಬರಲ್ ಮೆಂಬರರು ಸಿಕ್ಕುವದು ಕಷ್ಟವಾಗಿದೆ.

~~~~~~

ಸರ್‌ದಾರ ದಲಜಿತಸಿಂಘರವರು ಲಂಡನಿನಿಂದ ಹಿಂದೂಸ್ಥಾನಕ್ಕೆ ಹೊರಟಿರುತ್ತಾರೆ. ಇವರು ರಣರಂಗದಲ್ಲಿರುವ ಪ್ರತಿ ಒಬ್ಬ ಹಿಂದೀ ಸೇನಿಕನಿಗೆ ಜೋರ್ಜ ಸಾರ್ವಭೌಮರ ಪಟ್ಟಾಭಿಷೇಕದ ಚಿತ್ರವಿರುವ ಕಾರ್ಡುಗಳನ್ನು ಹೊಸ ವರ್ಷದ ಬಹುಮಾನವಾಗಿ ಕೊಡುವ ಏರ್ಪಾಡು ಮಾಡಿರುತ್ತಾರೆ.

~~~~~~
~~~~~~

ರಣರಂಗಕ್ಕೆ ಬಂದಿದ್ದ ಕೆನಡಾ ದೇಶದ ಸೇನಿಕರಲ್ಲಿ ಈವರೆಗೆ ೬೫,೬೬೦ ಮಂದಿ ಪ್ರಾಣಾಪಾಯ ಹೊಂದಿರುವರು. ಈ ಪೈಕಿ ೧೦,೩೩೩ ಹತರಾಗಿರುವರು. ೫೪೦೦ ಮಂದಿ ಸತ್ತಿರುವರು ಎಂತ ಪ್ರಕಟವಾಗಿದೆ.

~~~

ಲೈಾಡ ಜೋರ್ಜರವರು ನಿರ್ಮಿಸಿದ ಹೊಸ ಮಂತ್ರಿ ಸಭೆಯಲ್ಲಿ ಯುದ್ಧ ಸಂಬಂಧವಾದ ಕೌನ್ಸಿಲಿಗೆ ಕರ್ಜನ್ ಪ್ರಭುಗಳು, ಮೆ। ಹೆಂಡರ್ಸನ್, ಮೆ। ಬೊನರ್‌ಲಾರವರು ಮೆಂಬರರಾಗಿರುವರು. ಸರಕಾರದ ಇತರ ಮೆಂಬರರು:—ಸರ್ ಲೋಬರ್ಟ್ ಫಿನ್ಲೆ, ಲೋರ್ಡ್ ಹ್ಯಾ ಚೇನ್ಸಲ್ಲರ್. ಸ್ವದೇಶದ ಸಂಬಂಧವಾದ ವ್ಯವಸ್ಥೆ ನಡಿಸುವ ಸೆಕ್ರೆಟರಿ-ಸರ್. ಜೋರ್ಜಕೇವ್. ವಿದೇಶ ಸೆಕ್ರೆಟರಿ-ಮೆ। ಬಾಲ್ಫೋರ್. ವಸಾಹತಿಗಳ ಸೆಕ್ರೆಟರಿ-ಮೆ। ವಾಲ್ಟರ್. ಯುದ್ಧ ಸೆಕ್ರೆಟರಿ-ಲೋರ್ಡ್ ಡರ್ಬಿ, ಹಿಂದೂಸ್ಥಾನದ ಸೆಕ್ರೆಟರಿ ಮೆ। ಚೆಂಬರ್‌ಲೇನ್. ಸ್ಥಳಿಕ ಗವರ್ನಮೆಂಟ ಬೋರ್ಡಿನ ಪ್ರೆಸಿಡೆಂಟ-ರ್ಹೊಂಡ್ಡ ಪ್ರಭು. ವ್ಯಾಪಾರ ಸಂಬಂಧವಾದ ಬೋರ್ಡಿನ ಪ್ರೆಸಿಡೆಂಟ್-ಸರ್. ಅಲ್ಬರ್ಟ್ ಸ್ಟಾನ್ಲಿ. ಕೆಲಸಗಾರರ ಮಂತ್ರಿ-ಮೆ। ಹೊಡ್ಜ್. ನೌಕಾ ವಳಿ ಖಾತೆಯ ಅಧಿಪತಿ-ಸರ್ ಎಡ್ವರ್ಡ್ ಕಾರ್ಸನ್. ಮದ್ದುಗುಂಡುಗಳ ಸಂಬಂಧವಾದ ಮಂತ್ರಿ-ಡಾಕ್ಟರ್ ಎಡಿಸನ್. ಬ್ಲೋಕೆಡ್ ಮಿನಿಸ್ಟರ್-ಲೋರ್ಡ್ ರೋಬರ್ಟ್ಸ್ ಸಿಸಿಲ್. ಆಹಾರ ಸಂಬಂಧವಾಗಿ ಮೇಲ್ತನಕೆ ನಡಿಸುವ ಕಂಟ್ರೋಲರ್-ಮೆ। ಜೋಸೆಫ್ ಮೆಕ್ಲೆ. ವ್ಯವಸಾಯ ಬೋರ್ಡಿನ ಪ್ರೆಸಿಡೆಂಟ್-ಮೆ। ಪ್ರೊತೇರ. ವಿದ್ಯಾಭ್ಯಾಸ ಬೋರ್ಡಿನ ಪ್ರೆಸಿಡೆಂಟ-ಮೆ। ಎಚ್. ಎ. ಎಲ್. ಫಿಶರ್. ಪೋಸ್ಟ್‌ಮಾಸ್ಟರ್ ಜನರಲ್-ಮೆ। ಇಲಿಂಗ್‌ವರ್ತ್. ಪೆನ್ಶನ್ ಇಲಾಖಾ ಸಂಬಂಧವಾದ ಮಂತ್ರಿ-ಮೆ। ಜೋರ್ಜ ಬಾರ್ನೆಸ್. ಅಟೊರ್ನಿ ಜನರಲ್-ಸರ್. ಎಫ್. ಇ. ಸ್ಮಿತ್. ಸೋಲಿಸಿಟರ್ ಜನರಲ್-ಮೆ। ಗೋರ್ಡನ್ ಹ್ಯೂವರ್ಟ. ಸ್ಕೋಟ್ಲಾಂಡಿನ ಚೀಫ್ ಸೆಕ್ರೆಟರಿ-ಮೆ। ಆರ್. ಮುನ್ರೊ. ಲೋರ್ಡ್ ಎಡ್ವೊಕೇಟ್-ಮೆ। ಮೆ। ಜೆ. ಎ. ಕ್ಲೈಡ್. ಸ್ಕೋಟ್ಲಾಂಡಿನ ಸೊಲಿಸಿಟರ್ ಜನರಲ್-ಮೆ। ಟಿ. ಬಿ. ಮೊರಿಸನ್. ಐರ್ಲಾಂಡಿನ ಲೋರ್ಡ್ ಲೆಫ್ಟನೆಂಟ-ಲೋರ್ಡ ವಿಂಬೊರ್ನ; ಐರ್ಲಾಂಡಿನ ಚೀಫ್ ಸೆಕ್ರೆಟರಿ-ಮೆ। ಡ್ಯೂಕ್. ಐರ್ಲಾಂಡಿನ ಲೋರ್ಡ ಚೇನ್ಸಲ್ಲರ್-ಮೆ। ಇಗ್ನಾಸಿಯಸ್ ಒಬ್ರೈನ್.

~~~

ಫ್ರಾನ್ಸ್ ದೇಶದಲ್ಲಿಯೂ ಹೊಸ ಮಂತ್ರಿ ಸಭೆಯು ಆಗುವ ವ್ಯವಸ್ಥೆ ನಡೆಯುತ್ತಿದೆ.

~~~

ಜನರಲ್ ವನ್ ಹೈನ್ರಿಕ್ ಎಂಬವರನ್ನು ಜರ್ಮನರು ಬುಕಾರೆಸ್ಟಿನ ಗವರ್ನರರಾಗಿ ನೇಮಿಸಿರುತ್ತಾರೆ

~~~

ಉತ್ತರ ಹಿಂದೂಸ್ಥಾನ.

~~~

ಡಿಫೆನ್ಸ್ ಆಫ್ ಇಂಡಿಯಾ ಆಕ್ಟನ್ನು ಬಂಗಾಳದಲ್ಲಿ ಜಾರಿಗೆ ತಂದ ಸಂದರ್ಭದಲ್ಲಿ ಇರುವ ನ್ಯೂನತೆಗಳನ್ನು ವೈಸರಾಯ ಪ್ರಭುಗಳ ಚಿತ್ತಕ್ಕೆ ತರುವರೆ ಬಂಗಾಳದ ಬಾಬು ಮೋತಿಲಾಲ ಮತ್ತು ಸುರೇಂದ್ರನಾಥ ಬೆನರ್ಜಿಯವರು ಇತರ ೧೦-೧೨ ಪ್ರಜಾ ಮುಂದಾಳುಗಳೊಡನೆ ವೈಸರಾಯ ಪ್ರಭುಗಳಿಗೆ ಭೇಟಿಕೊಡತಕ್ಕವರಿದ್ದಾರೆ.

~~~

ಕಾಥ್ಯಾವಾಡಿಗೆ ಸೇರಿದ ರಾಜಕೋಟೆ ಬಂದಿಖಾನೆಯಲ್ಲಿ ಭಾರಿ ದಾಂದಲೆಯು ನಡೆದಿರುತ್ತದೆಂಬ ವಾರ್ತೆ ಬಂದಿರುತ್ತದೆ. ಈ ಬಂದಿಖಾನೆಯಲ್ಲಿ ೨೩ ಬಂದಿವಾನರಿದ್ದರು. ಈ ಪೈಕಿ ೧೧ ಮಂದಿ ಜೀವಾಂತಶಿಕ್ಷೆ ವಿಧಿಸಲ್ಪಟ್ಟವರು. ಕಳೆದ ಶುಕ್ರವಾರ ದಿನ ಈ ಬಂದಿವಾನರನ್ನು ಜಪ್ತಿಮಾಡಿ ಕೋಣೆಯೊಳಗೆ ಹಾಕಲಿಕ್ಕೆದ್ದಾಗ ಈ ಪೈಕಿ ಇಬ್ಬರು ಬಂದಿಗಳು ಕಾವಲುಗಾರನೊಡನೆ ಜಗಳವಾಡಿ ಅವನ ರೈಫಲನ್ನು ಕಿತ್ತುಕೊಂಡರು. ಇನ್ನೊಬ್ಬ ಕಾವಲಿಗಾರನೂ ಇತರ ೩ ಮಂದಿ ಬಂದಿವಾನರೂ ಲೂಟಿಮಾಡಿದ ಬಂದಿವಾನರಿಂದ ರೈಫಲನ್ನು ಹಿಂದೆ ಕಿತ್ತುಕೊಳ್ಳಲು ಪ್ರಯತ್ನಿಸಿದರು. ತನ್ಮಧ್ಯೆ ಬಂದಿವಾನರೆಲ್ಲರು ಮಾಳಿಗೆಯ ಮೇಲೆ ಹೋಗಿ ಅಲ್ಲಿದ್ದ ಕೋವಿಗಳನ್ನೂ ೪೫೦೦ ತೋಟೆಗಳನ್ನೂ ತಮ್ಮ ಸ್ವಾಧೀನಮಾಡಿಕೊಂಡು ಕಿಟಕಿಯೊಳಗಿಂದ ಗುಂಡುಹಾರಿಸಲು ಪ್ರಾರಂಭಿಸಿದರು. ಪೋಲಿಸಿನವರೂ ಸೇನಿಕರೂ ಕೂಡಲೇ ಆ ಸ್ಥಳಕ್ಕೆ ಬಂದರು. ಆದರೆ ಬಂದಿವಾನರು ಎಡೆಬಿಡದೆ ಗುಂಡುಹಾರಿಸುತ್ತಿದ್ದುದರಿಂದ ಹತ್ತಿರ ಹೋಗಲಿಕ್ಕಾಗಲಿಲ್ಲ. ಈ ದಂಗೆಗಾರರು ಬಾವುಟೆಯನ್ನು ಏರಿಸಿ ಸೇನಿಕರನ್ನು ಕದನಕ್ಕೆ ಕರೆದರು. ದಂಗೆಗಾರರನ್ನು ಹತೋಟಿಯಲ್ಲಿ ಡುವದು ಸಾಧ್ಯವಲ್ಲವೆಂದು ಸೇನಿಕರಿಗೆ ಕಂಡದ್ದರಿಂದಲೂ ಜೀವನಷ್ಟಮಾಡದೆ ಈ ದಂಗೆಯನ್ನು ಅಡಗಿಸಬೇಕೆಂತ ಯೋಚಿಸಿದ್ದರಿಂದಲೂ ಬೇರೆ ಉಪಾಯ ತೋರದೆ ಸೇನಿಕರು ಸೀಮೆಎಣ್ಣೆಯನ್ನು ಮಾಳಿಗೆಯ ಮೇಲೆ ಹಾರಿಸಿ ಬೆಂಕಿಕೊಟ್ಟರು. ಇದರಿಂದ ಬಂದಿವಾನರು ಮೇಲ್ಮಾಳಿಗೆಯಲ್ಲಿ ನಿಲ್ಲಲಿಕ್ಕಾಗದೆ ಕೆಳಗಿನ ಕೋಣೆಯೊಳಗೆ ಸೇರಿದರು. ಮಧ್ಯಾಹ್ನದನಂತರ ಸೇನಿಕರು ಗೋಡೆಯ ಮೂಲಕ ಒಂದು ತೂತನ್ನು ಕೊರೆದು ಅದರ ಮೂಲಕ ಕೆಲವು ಸೇನಿಕರು ಒಳನುಗ್ಗಿದರು. ಇಲ್ಲಿ ಬಂದಿವಾನರಿಗೂ ಸೇನಿಕರಿಗೂ ಕದನವಾಯಿತು. ಆದರೂ ಈ ದಂಗೆಗಾರರನ್ನು ಹಿಡಿಯಲು ಸಾಧ್ಯವಾಗದ್ದರಿಂದ ಸೇನಿಕರು ರಾತ್ರಿಯಲ್ಲಿ ಉರಿಯುವ ದೀವಟಿಗೆಗಳನ್ನು ಒಳಗೆ ಬಿಸಾಡಿದರು. ಅನಂತರ ದಂಗೆಗಾರರ ಕೈಸೇರಿದ್ದ ಮದ್ದುಗುಂಡುಗಳು ಖರ್ಚಾಗುತ್ತಾ ಬಂದುದರಿಂದ ಒಬ್ಬೊಬ್ಬರಾಗಿಯೇ ಶರಣಾಗತರಾದರು. ದಂಗೆಗಾರರಲ್ಲಿ ಒಬ್ಬನು ಹತನಾಗಿರುವನು. ಒಬ್ಬನಿಗೆ ಗಾಯವಾಗಿಯದೆ. ಸೇನಿಕರಲ್ಲಿ ಯಾರಿಗೂ ಅಪಾಯವಾಗಲಿಲ್ಲ.

~~~

ಲಾಹೋರ ರಾಜದ್ರೋಹ ಮೊಕದಮೆಯ ೨ನೇ ಸಪ್ಲಿಮೆಂಟರಿ ವಿಚಾರಣೆಯು ಈಗ ತಾನೇ ಲಾಹೋರಿನಲ್ಲಿ ನಡೆಯುತ್ತಿದೆ. ಈ ಮೊಕದಮೆಯಲ್ಲಿ ಕೋರ್ಟ ಸಾಕ್ಷಿಯಾಗಿ ಮಾಡಲ್ಪಟ್ಟ ಯೋಧಾಸಿಂಘನೆಂಬವನು ಪಿತೂರಿ ಚಳವಳದಲ್ಲಿ ಜರ್ಮನರ ಸಾಹಾಯ್ಯವು ಇತ್ತೆಂದು ವಾಗ್ಮೂಲಕೊಟ್ಟಿರುವನು. ಯೋಧಾಸಿಂಘನು ಕೆಲಸ ಹುಡುಕುತ್ತಾ ಕೆನಡಾ ದೇಶಕ್ಕೆ ಹೋದನು. ಅಲ್ಲಿಂದ ವಾನ್‌ಕವರ್, ಪೋರ್ಟ್‌ಲೇಂಡ್‌ಗೆ ಹೋದನು. ಆದರೆ ಎಲ್ಲಿಯೂ ಕೆಲಸ ದೊರೆಯದ್ದರಿಂದ ೧೯೦೭ನೇ ಇಸವಿಯ ಅಂತ್ಯದಲ್ಲಿ ಇಂಗ್ಲಾಂಡಿಗೆ ಹೋಗಿ ಮೆ। ಕೃಷ್ಣವರ್ಮ ಶ್ಯಾಮಜಿಯವರು ನಡಿಸಿಕೊಂಡು ಬರುವ "ಇಂಡಿಯಾ ಹೌಸ್"ನಲ್ಲಿ ಹರಿದಯಾಳನನ್ನು ಕಂಡನು. ಯೋಧಸಿಂಘನು ಅಲ್ಲಿಂದ ಬರ್ಲಿನಿಗೆ ಹೋಗಿ ಅಲ್ಲಿ ೩ ವರ್ಷಗಳ ವರೆಗೆ ಇದ್ದು ೧೯೧೦ನೇ ವರ್ಷಾಂತ್ಯದಲ್ಲಿ ಬ್ರೆಜಿಲಿಗೆ ಹೋದನು. ಬ್ರೆಜಿಲಿನಲ್ಲಿ ಅವನಿಗೆ ಪಾರಿಸಿನಿಂದ ಮಡಾಮ ಕಾಮಾನಿಂದ ರಾಜವಿಪ್ಲವ ಪಕ್ಷಕ್ಕೆ ಸೇರಬೇಕೆಂಬ ಪತ್ರಗಳು ಬರುತ್ತಿದ್ದವು. ಯೋಧಸಿಂಘನು ವಿಪ್ಲವ ಪಕ್ಷದ "ಘಾದರ್" ಎಂಬ ಪತ್ರಿಕೆಯನ್ನು ಓದಿ ಅದಕ್ಕೆ ವಂತಿಗೆಯನ್ನು ಕೂಡಿಸುತ್ತಿದ್ದನು. ರಿಯೋ ಡಿ ಜೆನೋರೋದಲ್ಲಿ ಅವನು ಮಹಮ್ಮದೀವೇಶವನ್ನು ಧರಿಸಿದ ಅಜಿತಸಿಂಘನನ್ನು ಕಂಡನು. ಅಜಿತಸಿಂಘನು ಜಿನೋವದಲ್ಲಿರುವ ಹರಿದಯಾಳನನ್ನು ಕಾಣಬೇಕೆಂದು ಯೋಧಸಿಂಘನಿಗೆ ಹೇಳಿದ್ದರಿಂದ ಯೋಧಸಿಂಘನು ರಿಯೋ ಜೆನಿರೋದಲ್ಲಿದ್ದ ಜರ್ಮನ ಕೌನ್ಸಲ್ಲರ ಮೂಲಕ ಹಣಪಡಕೊಂಡು ಜಿನೋವಕ್ಕೆ ಹೋದನು. ಜಿನೋವದಲ್ಲಿ ಜರ್ಮನ ಕೌನ್ಸಲ್ಲರು ಹರಿದಯಾಳನನ್ನು ಬರ್ಲಿನಿನಲ್ಲಿ ಕಾಣಬೇಕೆಂದು ಹೇಳಿದ್ದರಿಂದ ಯೋಧಸಿಂಗನು ಬರ್ಲಿನಿಗೆ ಹೋದನು. ಬರ್ಲಿನಿನಲ್ಲಿ ಯೋಧಸಿಂಘನು ಹರಿದಯಾಳನನ್ನೂ ಇನ್ಸ್ ಕಾಲೇಜಿಯಿಂದ ಬರತರಪು ಹೊಂದಿದ ಚಾತೋಪಾಧ್ಯಾಯ ಎಂಬ ವಿದ್ಯಾರ್ಥಿಯನ್ನೂ ಇತರ ಅನೇಕ ಹಿಂದೀಗಳನ್ನೂ ಕಂಡನು. ಇವರ ಮೀಟಿಂಗುಗಳಿಗೆ ತುರ್ಕರೂ, ಈಜಿಪ್ತ ದೇಶಿಯರೂ, ಮತ್ತು ಹಿಂದೆ ಹಿಂದೂಸ್ಥಾನದಲ್ಲಿದ್ದ ಜರ್ಮನರೂ ಕೆಲವು ಜರ್ಮನ ಆಫೀಸರರೂ ಬರುತ್ತಿದ್ದರು. ಬರ್ಲಿನಿನಲ್ಲಿದ್ದ ಘಾದರ್ ಸೊಸೈಟಿಗೆ ಭಾಷಾಂತರ ಮಾಡುವ ಒಂದು ಶಾಖೆ ಇತ್ತು. ಒಪೆನ್‌ಹೈಮ್ ಎಂಬ ಹೆಸರಿನ ಜರ್ಮನ ಮಾಜಿ ಮಂತ್ರಿಯು ಈ ಸಭೆಗಳಲ್ಲಿ ಅಧ್ಯಕ್ಷನಾಗುತ್ತಿದ್ದನು. ಹರಿದಯಾಳನು ಭಾಷಣ ಕೊಡುತ್ತಿದ್ದನು. ಬ್ರಿಟಿಷರಿಗೆ ವಿರೋಧವಾದ ಪಹಿಗಳನ್ನು ಸರಕಾರದ ಛಾಪಖಾನೆಗಳಲ್ಲಿ ಛಾಪಿಸಿ ಹಿಂದೂಸ್ಥಾನಕ್ಕೆ ಕಳುಹಿಸುತ್ತಿದ್ದರು. ಯೋಧಸಿಂಘನು ಬರ್ಲಿನಿನಿಂದ ಜರ್ಮನ ಹಣಸಹಾಯ ಪಡೆದು ನ್ಯೂಯೋರ್ಕಿಗೆ ಹೋದನು. ಅಲ್ಲಿಂದ ಸಿಯಾಮ್, ಪಿಲಿಪ್ಪಾಯಿನ, ಮಾನಿಲ್ಲಾಕ್ಕೆ ಬಂದನು. ಮಾನಿಲ್ಲಾ ಮತ್ತು ಎನೋಯದಲ್ಲಿ ಜರ್ಮನ ಕೌನ್ಸಲ್ಲರನ್ನು ಕಂಡಿದ್ದನು ಎಂತ ವಾಗ್ಮೂಲ ಕೊಟ್ಟಿರುತ್ತಾನೆ.

~~~

ಬಿಹಾರ್ ಮತ್ತು ಒರಿಸ್ಸ ಸಂಸ್ಥಾನಗಳ ಎಡ್ವೊಕೇಟ ಮೆ। ಪಿ. ಸಿ. ಮೆನಕರವರು ಇದೇ ಬರುವ ಜನವರಿಯಲ್ಲಿ ಕೆಲಸದಿಂದ ನಿವೃತರಾಗುವದರಿಂದ ಬಿಹಾರ್ ಮತ್ತು ಒರಿಸ್ಸ ಸರಕಾರದವರು ಮೆ। ಸೈಯ್ಯದ್ ಸುಲ್ತಾನ್ ಅಹಮ್ಮದ್ ಎಂಬವರನ್ನು ಎಡ್ವೊಕೇಟರಾಗಿ ನೇಮಿಸಿರುತ್ತಾರೆ. ಮೆ। ಅಹಮ್ಮದರವರು ೧೮೮೫ನೇ ಇಸವಿಯಲ್ಲಿ ಕಲ್ಕತ್ತೆಯ ವಕೀಲರಾಗಿ ಸೇರಿ ಬೇಗನೇ ವಿಶೇಷ ಖ್ಯಾತಿಯನ್ನು ಪಡೆದರು. ವಕೀಲ ಕೆಲಸ ಪ್ರಾರಂಭಿಸಿ ೬ ವರ್ಷದೊಳಗೆ ಕಲ್ಕತ್ತಾ ಹೈಕೋರ್ಟಿನ ಡಿಪ್ಯುಟಿ ಲೀಗಲ್ ರಿಮೆಂಬ್ರೆನ್ಸರ್ ಎಂಬ ಹುದ್ದೆಯನ್ನು ಪಡೆದರು. ಬಂಗಾಳದಿಂದ ಬಿಹಾರ್ ಮತ್ತು ಒರಿಸ್ಸವನ್ನು ಪ್ರತ್ಯೇಕಿಸಿದಾಗ ಈ ಪ್ರೊವಿನ್ಸಿನ ಡ್ಯುಪಿಟಿ ಲೀಗಲ್ ರಿಮೆಂಬ್ರೆನ್ಸರಾಗಿ ನೇಮಿಸಲ್ಪಟ್ಟರು. ಪಾಟ್ನ ಹೈಕೋರ್ಟು ಬದಲಾವಣೆಯಾಗುವಾಗ ಇವರು ಬಂಕೀಪುರದ ಅಸಿಸ್ಟಾಂಟ ಗವರ್ನಮೆಂಟ ಎಡ್ವೊಕೇಟರಾಗಿ ನೇಮಿಸಲ್ಪಟ್ಟರು. ಈಗ ತಾನೇ ಮೆ। ಅಹಮ್ಮದರು ಎಡ್ವೊಕೇಟರಾಗಿ ನೇಮಿಸಲ್ಪಟ್ಟರು. ಹಿಂದೀಗಳಲ್ಲಿ ಎಡ್ವೊಕೇಟರಾಗಿ ನೇಮಿಸಲ್ಪಟ್ಟವರಲ್ಲಿ ಇವರೇ ಪ್ರಥಮರಾದುದರಿಂದ ಹಿಂದೂಸ್ಥಾನದಲ್ಲೆಲ್ಲಾ ಈ ನೇಮಕದಿಂದ ಹೆಚ್ಚಿನ ಸಂತೋಷ ಉಂಟಾಗಿದೆ.

~~~

ಮೆ। ಬಿ. ಜಿ. ತಿಲಕರವರು ಸರ್ ವಲೆಂಟೈನ ಚಿರೋಲರ ಮೇಲೆ ಇಂಗ್ಲಾಂಡಿನಲ್ಲಿ ಮಾಡಿದ ಸಿವಿಲ್ ಮೊಕದ-
~~~

ಮೆಯ ಸಂಬಂಧ ಬೇಕಾದ ಭಾಷಾಂತರಗಳನ್ನು ಮಾಡಿಸುವರೆ ಸರಕಾರದ ಒರಿಯಂಟಲ್ ಟ್ರಾನ್ಸ್‌ಲೇಟರ್ಸ್ ಆಫೀಸಿನ ಇಬ್ಬರು ಭಾಷಾಂತರ ಕರ್ತರನ್ನು ಸರ್ ವಲೆಂಟೀನ್ ಚಿರೋಲರವರು ಕೆಲಸಕ್ಕೆ ಹಿಡಿದಿರುವರೋ? ಇದು ಹೌದಾದರೆ ಸರಕಾರದಿಂದ ಅಥವಾ ಅವರ ಆಫೀಸರರಿಂದ ಇದಕ್ಕೆ ಹುಕುಂ ದೊರಕಿರುತ್ತದೋ ಎಂಬದಾಗಿ ಇದೇ ತಾ. ೪ರಲ್ಲು ಮುಂಬಾಯಿಯಲ್ಲಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಬೆಲ್ವಿಯವರು ಕೇಳಿದರು. ಸರಕಾರದ ಸಂಬಳವಿಲ್ಲದೆ ಸರ್ ವೆಲೆಂಟೈನರ ಕೆಲಸಮಾಡಲು ಒರಿಯಂಟಲ್ ಟ್ರಾನ್ಸ್‌ಲೇಟರರ ಆಫೀಸಿನ ೨ ಕ್ಲಾರ್ಕರಿಗೆ ಅಪ್ಪಣೆ ದೊರಕಿರುತ್ತದೆ. ಈ ದಾವೆಯಲ್ಲಿ ಬೇಕಾದ ದಾಕಲೆಗಳು ಭಾಷಾಂತರ ಮಾಡುವ ಉದ್ದೇಶದಿಂದ ಅವರನ್ನು ಸರಕಾರದವರ ಅನುಮತಿಯಿಂದ ಬಿಟ್ಟುಕೊಟ್ಟದ್ದಾಗಿದೆ. ಈ ದಾಖಲೆಗಳು ಪಟ್ಟಣದ ಹೊರಗಿನ ನಾಡುಗಳಲ್ಲಿ ಇದ್ದುದರಿಂದ ಹೈಕೋರ್ಟ ಟ್ರಾನ್ಸಲೇಟರರು ದೊರಕಲಿಲ್ಲ ಎಂಬ ಉತ್ತರವು ಸರಕಾರದಿಂದ ದೊರಕಿರುತ್ತದೆ.

ಧಾರವಾಡದ ಮೇಜಿಸ್ಟ್ರೇಟರು ಮಿ| ತಿಲಕರವರಿಗೆ ಗದಗಿನಲ್ಲಿ ಮುಂಬಾಯಿ ಪೋಲಿಸ್ ಆಕ್ಟಿನ ಸೆಕ್ಷನ್ ೪೨ನೇ ಪ್ರಕಾರ ನೋಟೀಸು ಕೊಟ್ಟದು ಹೌದೋ ಎಂಬದಾಗಿ ಅದೇ ಮಾನ್ಯ ಮೆಂಬರರು ಹಾಕಿದ ಪ್ರಶ್ನೆಗೆ ಸರಕಾರದವರು ಜನರು ಕಿಕ್ಕಿರಿದು ದಾರಿಯಲ್ಲಿ ನಿಲ್ಲುವದರಿಂದ ವ್ಯವಹಾರಕ್ಕೆ ಅಚೆಈಚೆ ಹೋಗಲು ಭಂಗವಾಗದಹಾಗೆ ಹೆಚ್ಚು ಜನರು ಕೂಡದಂತೆ ಆ ನೋಟೀಸು ಕೊಡೋಣಾಗಿತ್ತೆಂಬ ಉತ್ತರ ಕೊಟ್ಟಿರುವರು.

~~~~~~

ದಶಂಬರ ತಾ. ೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೦,೭೦೬ ಮಂದಿಗೆ ಪ್ಲೇಗಬೇನೆಯು ಸೊಂಕಿ ೮೦೨೮ ಮಂದಿ ಮೃತರಾಗಿರುವರು. ಈ ಪೈಕಿ ಡಿಲ್ಲಿಯಲ್ಲಿ ೧, ಮುಂಬಾಯಿ ಮತ್ತು ಸಿಂಧ್ ೩೩೪೦; ಮದ್ರಾಸ್ ೪೯೧; ಬಿಹಾರ್ ಮತ್ತು ಒರಿಸ್ಸ ೩೨೮; ಸಂಯುಕ್ತ ಸಂಸ್ಥಾನ ೬೯೬; ಪಂಜಾಬು ೩೨; ಬರ್ಮ ೨೨; ಮಧ್ಯ ಸಂಸ್ಥಾನಗಳು ೧೯೯೭; ಮೈಸೂರು ೩೯೨; ಹೈದರಾಬಾದ್ ೧೪೬೫; ಮಧ್ಯ ಹಿಂದೂಸ್ಥಾನ ೯೯; ರಜಪುತಾನ ೬ ಮರಣಗಳಾಗಿರುವವು.

~~~~~~

ಬಂಗಾಳದ ಗವರ್ನರ ಪ್ರಭುಗಳಾಗಿ ನೇಮಿಸಲ್ಪಟ್ಟಿರುವ ರೊನಾಲ್ಡ್‌ಸೆ ಪ್ರಭುಗಳ ಲೇಖನಗಳೂ ಭಾಷಣಗಳೂ ಹಿಂದೂಸ್ಥಾನದವರ ಕಾಯಿದೆಸೀರವಾದ ಮನೋರಥಗಳನ್ನು ಖಂಡಿಸುವಂಥವುಗಳಾದುದರಿಂದಲೂ ಹಿಂದೂಸ್ಥಾನದಲ್ಲಿ ಇತ್ತಲಾಗ್ಗೆ ಆದ ರಾಜಕೀಯ ಬದಲಾವಣೆಗಳನ್ನು ಅವರು ಮೆಚ್ಚುವಂಥವರಲ್ಲವಾದುದರಿಂದಲೂ ಅವರ ನೇಮಕವನ್ನು ಇಂಡಿಯನ್ ಎಸೋಸಿಯೇಶನಿನವರು ವಿರೋಧಿಸುತ್ತಾರೆಂಬ ತಂತೀಯನ್ನು ಸದರೀ ಎಸೋಸಿಯೇಶನಿನ ಸೆಕ್ರೆಟರಿಯವರಾದ ರಾ| ಸುರೇಂದ್ರನಾಥ ಬೆನರ್ಜಿಯವರು ಸ್ಟೇಟ್ ಸೆಕ್ರೆಟರಿಯವರಿಗೆ ಕಳುಹಿಸಿಕೊಟ್ಟಿರುತ್ತಾರೆ.

~~~~~~

ನೋರ್ತ್ ವೆಸ್ಟರ್ನ್ ರೈಲ್ವೇ ಕಂಪೆನಿಯವರು ಬರುವ ಜನವರಿ ತಿಂಗಳಿನಿಂದ ಪೆಸೆಂಜರ್ ಟ್ರೇನು ಸರ್ವಿಸಿನಲ್ಲಿ ಹೆಚ್ಚಿನವುಗಳನ್ನು ಕಡಿಮೆ ಮಾಡಲಿಕ್ಕಿದ್ದಾರೆ. ಹೀಗೆ ಕಡಿಮೆ ಮಾಡುವದರಿಂದ ತಿಂಗಳಿಗೆ ೧೮೦,೦೦೦ ಮೈಲುಗಳ ಟ್ರೇನು ಬಂಡಿಯ ವಹಿವಾಟವು ಕಡಿಮೆಯಾದಂತಾಗುವದು. ಬರುವ ವರ್ಷಾರಂಭದಲ್ಲಿ ಮೈಲ್ ಸರ್ವಿಸ್ ಸಹಾ ಕಡಿಮೆ ಮಾಡಲಿಕ್ಕಿದ್ದಾರೆ. ಪೋಸ್ಟಲ್ ಸ್ಪೆಶ್ಯಲ್ ಟ್ರೇನು ಸರ್ವಿಸ್ ಇತ್ಯಾದಿಗಳೂ ನಿಲ್ಲಿಸಲ್ಪಡುವವು.

~~~~~~

ಈಚೆಗೆ ರೈಲ್ವೇ ಬೋರ್ಡು ಮತ್ತು ಎಲ್ಲಾ ರೈಲ್ವೇ ಕಂಪೆನಿಗಳ ಏಜಂಟರೊಳಗೆ ಆದ ಕನ್ಫರೆನ್ಸಿನಲ್ಲಿ ನಿರ್ಣಯವಾದಪ್ರಕಾರ ಬರುವ ಫೆಬ್ರವರಿ ತಿಂಗಳಾರಂಭದಿಂದ ಎಲ್ಲಾ ರೈಲ್ವೆ ಕಂಪೆನಿಗಳಲ್ಲಿಯೂ ಪೆಸೆಂಜರ್ ಟ್ರೇನು ಸರ್ವಿಸ್ ಕಡಿಮೆ ಮಾಡೋಣಾಗುವದೆಂತ ತಿಳಿದುಬರುತ್ತದೆ.

~~~~~~

ದಕ್ಷಿಣ ಹಿಂದೂಸ್ಥಾನ.

ಮೈಸೂರಿನ ಲಾಲ್‌ಬಾಗಿನಲ್ಲಿದ್ದ ೩ ಮಂಗಗಳು ಪ್ಲೇಗುಬೇನೆಯಿಂದ ಸತ್ತು ಹೋದವು ಎಂತ ತಿಳಿದು ಬರುತ್ತದೆ.

~~~~~~

ಸರ್. ಶಂಕರನ್ನಾಯರರವರು ಮದ್ರಾಸಿನಿಂದ ಬೆಂಗಳೂರಿಗೆ ಬಂದಿರುತ್ತಾರೆ.

~~~~~~

ಈಚೆಗೆ ಮದ್ರಾಸ್ ಸಂಸ್ಥಾನದಲ್ಲಿ ಬೀಸಿದ ಬಿರುಮಳೆಯಿಂದ ದಕ್ಷಿಣ ಆರ್ಕಾಡು ಜಿಲ್ಲೆಯ ಜಿಂಜೀ, ಟಿಂಡೀವನಂ, ವಿಲ್ಲುಪುರಂ, ಕಡಲೂರು ಈ ತಾಲೂಕುಗಳಲ್ಲಿ ವಿಶೇಷ ನಷ್ಟ ಉಂಟಾಗಿರುತ್ತದೆ. ಎಲ್ಲಾ ವ್ಯವಹಾರಗಳು ನಿಂತು ಹೋಗಿರುವವು. ಟೆಲಗ್ರಾಮು ಕಂಭಗಳು ನೆಲಸಮವಾಗಿರುವವು, ದಾರಿಗಳಲ್ಲಿ ಬಿದ್ದ ಮರಗಳಿಂದ ದಾರಿ ನಡೆಯುವದೇ ಕಷ್ಟವಾಗಿತ್ತು. ತಿಳಿದು ಬಂದ ಮಟ್ಟಿಗೆ ೧೦೦೦ ಮಂದಿಗೆ ಮಿಕ್ಕಿದ ಜನರು ಸತ್ತು ಹೋಗಿರುವರು. ಈ ಪೈಕಿ ಕೆಲವರು ನೆರೆಯಲ್ಲಿ ಮುಣುಗಿರುವರು, ಕೆಲವರು ಮನೆಗಳು ಬೀಳುವಾಗ ಅದರ ಅಡಿಯಲ್ಲಿ ಬಿದ್ದು ಸತ್ತಿರುವರು. ಸಾವಿರಾರು ಜನರು ನಿರ್ಗತಿಕರಾಗಿರುತ್ತಾರೆ. ನಿರ್ಗತಿಕರಾದವರಿಗೆ ಸಹಾಯ್ಯ ಮಾಡುವ ಏರ್ಪಾಡು ನಡೆಯುತ್ತಿದೆ.

~~~~~~

ವ್ಯವಸಾಯ ಇಲಾಖೆಯ ಡಿರೆಕ್ಟರರವರು ಮದ್ರಾಸು ಸಂಸ್ಥಾನದಲ್ಲಿ ಬೀಜದ ಹೋರಿಗಳನ್ನು ಸಾಕುವ ವಿಷಯ ಕೊಟ್ಟ ಸೂಚನೆಗಳನ್ನು ಮದ್ರಾಸ್ ಸರಕಾರದವರು ಅಂಗೀಕರಿಸಿರುತ್ತಾರೆ. ಈ ಸೂಚನೆಯ ಪ್ರಕಾರ ಸಂಸ್ಥಾನದಲ್ಲಿ ಇಂಥಾ ಹೋರಿಗಳನ್ನು ಸಾಕುವ ಸೊಸ್ಯಾಟಿಗೆಯಾ ಒಬ್ಬ ವ್ಯಕ್ತಿಗೆ ವರ್ಷಕ್ಕೆ ರೂ. ೧೦೦ ಸರಕಾರದಿಂದ ಕೊಡೋಣಾಗುವದು. ವರ್ಷಾಂತ್ಯದಲ್ಲಿ ಈ ಹೋರಿಯನ್ನು ಇಲಾಖಾ ಅಧಿಕಾರಿಗಳು ಪರಿಶೋಧಿಸಿದನಂತರ ರೂ. ೧೦೦ ಕೊಡೋಣಾಗುವದು. ಮೂರು ವರ್ಷಗಳವರೆಗೆ ಮಾತ್ರ ಅಂಥಾ ಒಂದು ಹೋರಿಗೆ ಅದು ತಕ್ಕದಾಗಿದ್ದರೆ ಪ್ರತಿ ವರ್ಷವೂ ಈ ಹಣವು ಸಿಕ್ಕುವದು. ಈ ಹಣವು ಸಿಕ್ಕಬೇಕಾದರೆ ಹೋರಿಗೆ ತಕ್ಕದಾದ ಹಟ್ಟಿ ಇರಬೇಕು. ತಕ್ಕ ಪಾಲನೆ ಇರಬೇಕು. ಈ ಹೋರಿಯು ಮಾಡಿದ ಕೆಲಸದ ಮತ್ತು ಫಲದ ಒಂದು ರಿಜಿಸ್ತ್ರಿ ಇಡತಕ್ಕದು. ಇಂಥಾ ಹೋರಿಯು ಗ್ರಾಮಗಳ ಹಿಂಡಿನ ದನಗಳಿಂದ ಪ್ರತ್ಯೇಕ ಇರತಕ್ಕದ್ದು. ಮತ್ತು ಅಂಥಾ ಹಿಂಡಿನ ದನಗಳನ್ನು ಈ ಹೋರಿಯು ಬಳಿ ಬಿಡಲೂ ಕೂಡದು. ಸೊಸ್ಯಾಟಿಯ ಮೆಂಬರರ ದನಗಳನ್ನು ಮತ್ತು ದನಗಳನ್ನು ಸಾಕುವ ಪ್ರತ್ಯೇಕ ಪಂಗಡಗಳವರ ದನಗಳನ್ನು ಮಾತ್ರ ಈ ಹೋರಿಯ ಬಳಿ ಬಿಡಬಹುದು. ಸೊಸ್ಯಾಟಿಯವರಾದರೆ ಒಂದು ಸಾರಿ ಒಂದು ದನವನ್ನು ಬಿಟ್ಟದ್ದಕ್ಕೆ ತಮ್ಮ ಸ್ವಂತ ದರವನ್ನು ನಿಯಮಿಸಬೇಕು. ಪ್ರತ್ಯೇಕ ವ್ಯಕ್ತಿಯಾದರೆ ಒಂದು ಸಾರಿಗೆ ಒಂದು ದನದಿಂದ ಸದ್ಯಾ ೪ ಆಣೆಯಂತೆ ವಸೂಲು ಮಾಡಬೇಕು. ಸರಕಾರದವರು ಈ ಬಗ್ಗೆ ಜಾಸ್ತಿ ವರುಷಕ್ಕೆ ೧೦೦೦ ರೂಪಾಯಿ ಸೆಂಕ್ಷನ್‌ಮಾಡಿರುತ್ತಾರೆ.

~~~~~~

ಮದ್ರಾಸಿನ ಎಡ್ವೊಕೇಟ್ ಜನರಲರಾಗಿದ್ದು ರಜೆಯ ಮೇಲೆ ಶೀಮೆಗೆ ಹೋಗಿದ್ದ ಮಿ: ಎಫ್. ಎಚ್. ಎಮ್. ಕೊರ್ಬೆಟರವರು ಶೀಮೆಯಲ್ಲಿ ಇದೇ ತಾ. ೧ರಲ್ಲು ೫೪ನೇ ವರ್ಷ ವಯಸ್ಸಿನಲ್ಲಿ ವಿಧಿವಶರಾದರು. ಮಿ. ಕೊರ್ಬೆಟರವರ ದೇಹಾರೋಗ್ಯವು ನೆಟ್ಟಗಿಲ್ಲವಾದುದರಿಂದ ವೈದ್ಯರ ಆಲೋಚನೆ ಪ್ರಕಾರ ಕಳೆದ ವರ್ಷಾಂತ್ಯದಲ್ಲಿ ಇವರು ರಜೆಯ ಮೇಲೆ ಶೀಮೆಗೆ ಹೋಗಿದ್ದರು. ಮಿ| ಕೊರ್ಬೆಟರು ಇಲ್ಲಿಂದ ಹೊರಡುವ ಮೊದಲೇ ಅವರ ಇಬ್ಬರು ಮಕ್ಕಳು ರಣರಂಗದಲ್ಲಿ ಮಡಿದು ಹೋಗಿದ್ದರು. ಇದೇ ಶೋಕದಿಂದ ಅವರ ರೋಗವು ಹೆಚ್ಚಾಗಲು ಕಾರಣವಾಯಿತು.

~~~~~~

ಮದ್ರಾಸಿನ ಎಸ್. ಪಿ. ಜಿ. ಹೈಸ್ಕೂಲಿನಲ್ಲಿ ರೆ| ಎಡ್ಮಂಡ್ ಎಂಬ ಪಾದರಿಗಳ ಹತ್ತಿರ ವಿದ್ಯಾಭ್ಯಾಸ ಮಾಡುತ್ತಿದ್ದು ಈಗ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದುತ್ತಿದ್ದ ಮೊದಲಿಯಾರ್ ಜಾತಿಯ ರಾಜಾರಾಮ್ ಎಂಬ ವಿದ್ಯಾರ್ಥಿಯು ಕಳೆದ ತಾ. ೧೯ರಲ್ಲು ರೆಡ್ಮಂಡ್ ಪಾದರಿಗಳ ಉಪದೇಶದಿಂದ ಕ್ರೈಸ್ತ ಮತಕ್ಕೆ ಸೇರಿ ಪೌಲ್ ಎಂಬ ಹೆಸರನ್ನು ಧರಿಸಿಕೊಂಡನು. ಈತನನ್ನು ಸೀಮೆಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುತ್ತೇವೆಂದು ರೆಡ್ಮಂಡರು ಈತನಿಗೆ ವಾಗ್ದಾನ ಮಾಡಿದ್ದೇ ಈತನ ಮತಪರಿವರ್ತನಕ್ಕೆ ಕಾರಣವಂತೆ. ಪಾದರಿಯವರು ಈ ಹುಡುಗನನ್ನು ಕಲ್ಕತ್ತಾ ಪಟ್ಟಣಕ್ಕೆ ಕಳುಹಿಸಿಕೊಡುವದಕ್ಕಾಗಿ ವೆಚ್ಚಕ್ಕೆ ಕೊಟ್ಟು ಸಿಲ್ದಾಣಕ್ಕೆ ಕರೆದುಕೊಂಡು ಹೋಗಿರಲು ಹುಡುಗನ ತಂದೆಯು ಈ ಸುದ್ದಿಯನ್ನು ಕೇಳಿ ಅಲ್ಲಿಗೆ ಹೋಗಿ ಮಗನನ್ನು ಹಿಂದೆ ಕರೆದನೆಂತಲೂ ಈ ವಿಷಯ ಪೋಲಿಸಿಗೆ ವರದಿಯಾಗಿದೆಂತಲೂ ಪ್ರಕಟವಾಗಿದೆ. ಈ ಸಂಗತಿಯನ್ನೆಲ್ಲಾ ಮದ್ರಾಸಿನಲ್ಲಿರುವ ಆರ್ಯ ಸಮಾಜದವರು ಕೇಳಿ ಮರುದಿನವೇ ಆತನ ಮನೆಗೆ ಹೋಗಿ ಬೋಧಿಸಲಾಗಿ ತನ್ನ ಮತಪರಿವರ್ತನೆಗಾಗಿ ರಾಜಾರಾಮನು ವ್ಯಸನಪಟ್ಟು ಮರಳಿ ಆರ್ಯ ಮತಕ್ಕೆ ಪ್ರವೇಶ ಕೊಡಬೇಕೆಂದು ವಿಜ್ಞಾಪನಾ ಪತ್ರ ಬರಕೊಂಡಲ್ಲಿ ನವಂಬರ ತಾ. ೨೭ರಲ್ಲು ಕಹನ ಚಂದ್ರ ವರ್ಮರವರೇ ಮೊದಲಾದ ಶುದ್ಧೀ ಸಭೆಯವರು ಹೋಮಾದಿ ಪ್ರಾಯಶ್ಚಿತ್ತಕರ್ಮಗಳನ್ನು ಮಾಡಿ ಆರ್ಯ ಸಮಾಜಕ್ಕೆ ಆತನನ್ನು ಸೇರಿಸಿಕೊಂಡರು.

~~~~~~

ದಕ್ಷಿಣ ಕನ್ನಡ.

ಪುತ್ತೂರು:—ಖಜಾನಾ ಚಾರ್ಜು ಡಿಪ್ಯುಟಿಕಲೆಕ್ಟರ ಮ| ರಾ| ದಿವಾನ್ ಬಹದ್ದೂರ ಸಿ. ಗೋಪಾಲನ್‌ನಾಯರವರು ಇಲ್ಲಿಯ ಖಜಾನಾ ತನಖಿ ನಡಿಸಿ ತಾ. ೯ರಲ್ಲು ವಾಪಾಸು ಮಂಗ್ಳೂರಿಗೆ ಹೋಗಿರುವರು.

ಕೊಒಪರೇಟಿವ್ ಸೊಸ್ಯಾಟಿಗಳ ರಿಜಿಸ್ಟ್ರಾರವರಾದ ಒನರೆಬಲ್ ಸ್ವಾಮಿ ಕಣ್ಣುಪಿಳ್ಳೆಯವರು ಇದೇ ತಾ. ೧೦
~~~~~~

ರಲ್ಲು ಇಲ್ಲಿಗೆ ತಲಪಿ ಇಲ್ಲಿಯ ಕೆನರಾಬ್ಯಾಂಕ್ ಮತ್ತು ಪರಸ್ಪರ ಸಹಾಯ ಸಂಘದ ತನಖಿ ನಡಿಸಿ ತಾ. ೧೧ರಲ್ಲು ವಾಪಾಸು ಹೋಗಿರುವರು.

ಇದೇ ೧೯೧೬ನೇ ಇಸವಿಯಲ್ಲಿ ಸುಬ್ರಮಣ್ಯದ ಕುಳಗುಂದ ಜಾನುವಾರು ಸಂತೆಗೆ ೨೦,೨೭೭ ಜಾನುವಾರುಗಳು ಬಂದದ್ದರಿಂದ ರೂಪಾಯಿ ೨೫೩೪-೧೧-೦ ಸರಕಾರಕ್ಕೆ ಜಾನುವಾರುಗಳಿಂದ ಹುಟ್ಟುವಳಿ ಬಂದಿರುವದು. ಕಳದ ವರುಷ ೧೮,೩೭೯ ಜಾನುವಾರುಗಳು ಬಂದು ರೂಪಾಯಿ ೨೨೯೨ ಆಣೆ ೬ ಹುಟ್ಟುಬಂದಿತ್ತು ಎಂತ ತಿಳಿದು ಬರುತ್ತದೆ. ಕಳದ ವರ್ಷಕ್ಕಿಂತಲೂ ಈ ವರ್ಷ ೧೯೩೮ ಜಾನುವಾರು ಜಾಸ್ತಿ ಬಂದದ್ದರಿಂದ ರೂಪಾಯಿ ೨೮೨—೮—೦ ಜಾಸ್ತಿ ವಸೂಲಾಗಿರುವದು.

ಮಂಗಳೂರು.

ಈಚೆಗೆ ಆದ ಸಬ್ ಮೇಜಿಸ್ಟ್ರೇಟರವರ ವರ್ಗಾವರ್ಗಿಗಳಲ್ಲಿ ಪುನಃ ಬದಲಾವಣೆಗಳು ಮಾಡಲ್ಪಟ್ಟಿರುವವು. ಈ ಬದಲಾವಣೆ ಪ್ರಕಾರ ಮ॥ ರಾ॥ ಬಿ. ಪರಮೇಶ್ವರರವರು ಬಂಟ್ವಾಳದಿಂದ ಉಡುಪಿಗೂ, ಮಿ॥ ಸುಲ್ತಾನ್ ಮೈದಿನ ಸಾಹೇಬರವರು ಉಡುಪಿಯಿಂದ ಮಂಗಳೂರಿಗೂ, ಮ॥ ರಾ॥ ಎ. ತಿಮ್ಮಪ್ಪ ಪೂಂಜರವರು ಮಂಗಳೂರು ಟೌನಿನಿಂದ ಬಂಟ್ವಾಳಕ್ಕೂ ವರ್ಗಾಯಿಸಲ್ಪಟ್ಟಿರುವರು.

ಮ॥ ರಾ॥ ಆರ್. ಶಿವರಾಯರು ಮಂಗಳೂರು ಟೌನ್ ಸ್ಟೇಶನರಿ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಮ॥ ರಾ॥ ಬಿ. ಮಂಜುನಾಥ ಬಾಳಿಗರವರಿಗೆ ಮ॥ ರಾ॥ ಬಿ. ಪರಮೇಶ್ವರರವರು ಚಾರ್ಜು ಕೊಟ್ಟು ಮಿ॥ ಸುಲ್ತಾನ್ ಮೈದಿನ ಸಾಹೇಬರಿಂದ ಚಾರ್ಜು ತಕ್ಕೊಳ್ಳಬೇಕಾಗುವದು. ಮಿ॥ ಸುಲ್ತಾನ್ ಮೈದಿನರವರು ಕ್ರಿಸ್‌ಮಸ್ ರಜೆಯನಂತರ ಮ॥ ರಾ॥ ಆರ್. ಶಿವರಾಯರಿಂದ ತಾಲೂಕು ಮೇಜಿಸ್ಟ್ರೇಟರ ಚಾರ್ಜು ತಕ್ಕೊಳ್ಳುವರು. ಮ॥ ರಾ॥ ಎ. ತಿಮ್ಮಪ್ಪ ಪೂಂಜರವರು ಮ॥ ರಾ॥ ಆರ್. ಶಿವರಾಯರಿಗೆ ಚಾರ್ಜು ಕೊಟ್ಟು ಬಂಟ್ವಾಳ ಡೆಪ್ಯುಟಿ ತಹಸೀಲದಾರ ಆಫೀಸು ಚಾರ್ಜು ತಕ್ಕೊಳ್ಳಬೇಕಾಗಿರುವದು.

ಇಲ್ಲಿಯ ಮೈದಾನಿನ ಮುಂದುಗಡೆಯಲ್ಲಿ ಪಯನೀರ್ ಸ್ಪೋರ್ಟ್ಸ್ ಕಂಪೆನಿಯ ಏಜಂಟನಾಗಿದ್ದ ಎಮ್. ಶಾಫಿ ಎಂಬವನು ಕಂಪೆನಿಗೆ ಸುಮಾರು ೬೦೦ ರೂಪಾಯಿಯ ದಗೆ ಮಾಡಿದ್ದನಾಗಿ ಇಂಡಿಯನ್ ಪಿನಲ್ ಕೋಡಿನ ೩೭೯, ೪೦೩, ೪೦೯, ೪೭೭ A ಪ್ರಕರಣಗಳ ಮೇಲೆ ಸದರಿ ಶಾಫಿಯ ಮೇಲೆ ಫಿರ್ಯಾದಿ ಆಗಿರುತ್ತದೆ. ಮುದ್ದೆಯಾಳಿಯು ತಲೆ ತಪ್ಪಿಸಿಕೊಂಡಿರುವನು ಎಂತ ತಿಳಿಯುತ್ತೇವೆ.

ಕಳದ ವಾರ ಕುದ್ರೋಳಿ ಈಶ್ವರ ಪೂಜಾರಿ ಎಂಬವನ ಮನೆಗೆ ಸುಮಾರು ರಾತ್ರಿ ೭-೮ ಗಂಟೆ ಸಮಯ ಕೊರಗ ಎಂಬವನು ನುಗ್ಗಿ ಕೆಲವು ಸಾಮಾನುಗಳನ್ನು ಕಳವು ಮಾಡಿ ಮನೆಯಿಂದ ಹೊರಗೆ ಬರುತ್ತಿರುವಾಗಲೇ ಸಬ್ ಇನ್ಸ್‌ಪೆಕ್ಟರ್ ಅಮ್ಮತರಾಯರು ಅವನನ್ನು ಕಳವು ಮ್ಯಾಲುಗಳ ಸಹಿತ ಹಿಡಿದು ರಿಮಾಂಡಿನಲ್ಲಿಟ್ಟಿರುತ್ತಾರೆಂತ ತಿಳಿಯುತ್ತೇವೆ.

ಕಾವೂರು ಗ್ರಾಮದ ಸಾಯರ ಮಿರಾಂಡಾ ಎಂಬವನು ತಾ. ೧೧ರಲ್ಲು ಇಲ್ಲಿಯ ವೆಬ್‌ಸ್ಟರ್ ಮಾರ್ಕೆಟಿನಲ್ಲಿ ಮೀನಿಗೆ ಕ್ರಯ ಮಾಡುತ್ತಿರುವಾಗ ಕೆ. ಡಿ. ದೇವಣ್ಣ ಮತ್ತು ಕೆ. ಡಿ ಕಾರ್ಕಳ ಅಚ್ಚಣ್ಣ ಎಂಬ ಇಬ್ಬರು ಹಿಂದಿನಿಂದ ಹೋಗಿ ಸದರಿ ಮಿರಾಂಡಾನ ಕಿಸೆಯಿಂದ ರೂ. ೧೨—೮—೦ ಚಾರಿಸಿ ಓಡಿ ಹೋಗುತ್ತಿರುವಾಗ ಸಬ್ ಇನ್ಸ್‌ಪೆಕ್ಟರ್ ಸಂಜೀವರಾಯರು ಈ ಕಳ್ಳರ ಹಿಂದಿನಿಂದ ಓಡಿ ಇಬ್ಬರನ್ನೂ ಕಳವಾದ ರೂಪಾಯಿಗಳ ಸಹಿತ ಕೈದು ಮಾಡಿರುತ್ತಾರೆ. ಇಂಥಾ ಹಗಲು ಕಳ್ಳರ ವಿಷಯ ಪೋಲಿಸಿನವರು ಇನ್ನೂ ಹೆಚ್ಚಿನ ನಿಗಾಕೊಡಬೇಕಾಗಿ ಅಪೇಕ್ಷಿಸುವೆವು.

ಕಾಸರಗೋಡಿನ ಪರಮೇಶ್ವರ ಎಂಬವನು ಮ॥ ರಾ॥ ವಾಸುದೇವ ಮಲ್ಯರ ಅಂಗಡಿಯಿಂದ ನಮೂನೆಯ ಬಗ್ಗೆ ಎರಡು ಶೀರೆಗಳನ್ನು ಕೊಂಡು ಹೋಗಿ ಸ್ವಲ್ಪ ಹೊತ್ತಿನ ನಂತರ ಪುನಃ ಆ ಶೀರೆಗಳ ಸಹಿತ ಅಂಗಡಿಗೆ ಹಿಂದೆ ಬಂದು ಆ ಶೀರೆಗಳನ್ನು ಹಿಂದೆ ಕೊಟ್ಟು ತಿರಿಗಿ ಹೆಚ್ಚು ಕ್ರಯ ಬಾಳುವ ೨ ಶೀರೆಗಳನ್ನು ನಮೂನೆ ಬಗ್ಗೆ ಕೊಂಡು ಹೋಗಿ ಆ ಶೀರೆಗಳನ್ನು ಸಾಲೆಯಂಗೆ ಕೊಟ್ಟು ಪರಾರಿಯಾಗಿದ್ದನು. ಪೋಲಿಸಿನವರು ಈ ಅಸಾಮಿಯನ್ನು ತಲಾಸಿಯಿಂದ ಕೈದು ಮಾಡಿ ವಿಚಾರಣೆಗೆ ಗುರಿಮಾಡಿದಲ್ಲಿ ಸದರಿ ಪರಮೇಶ್ವರನಿಗೆ ಒಂದು ವರ್ಷದ ಕಠಿಣ ಸಜಾ ವಿಧಿಸಲ್ಪಟ್ಟಿದೆ.

ವಾರ್ ಫಂಡ್ ಫೇಟ್-ಯುದ್ಧ ಫಂಡಿನ ವಿಹಾರವು ಇದೇ ಬರುವ ಜನವರಿ ತಾ. ೬ನೇ ಶನಿವಾರ ಬಲ್ಮಠ ಮಿಶ್ಯನ್ ಕಂಪೌಂಡಿನಲ್ಲಿ ನಡೆಯುವದು. ಈ ವಿಹಾರವನ್ನು ನೋಡಬೇಕೆಂದಿರುವವರಿಗೆ ಪ್ರವೇಶಹಾಸಲು ಟಿಕೇಟಿಗೆ ಆಣೆ ೮. ಮಕ್ಕಳಿಗೆ ಪ್ರವೇಶಹಾಸಲು ಆಣೆ ೪ ಇರುವದು. ೨ ಆಣೆಯ ಟಿಕೇಟುಗಳೂ ಮಾರಲ್ಪಡುವದು. ಈ ಟಿಕೇಟುಗಳನ್ನು ಪ್ರೇಕ್ಷಕರು ಈ ವಿಹಾರ ಮೈದಾನಿನಲ್ಲಿ ಸಂತೆ ಇತ್ಯಾದಿಗಳನ್ನಿಟ್ಟುಕೊಂಡಿರುವವರಿಗೆ ಕೊಟ್ಟು ಟಿಕೇಟಿನ ಕ್ರಯಕ್ಕೆ ಹುದುವಾದ ವಸ್ತು ಇತ್ಯಾದಿಗಳನ್ನು ಪಡೆಯಬಹುದು. ಟಿಕೇಟುಗಳು ಜಿಲ್ಲೆಯ ಎಲ್ಲಾ ಸರಕಾರಿ ಆಫೀಸುಗಳಲ್ಲಿಯೂ ಶಾಲೆಗಳಲ್ಲಿಯೂ ಕ್ರಯಕ್ಕೆ ದೊರೆಯುವವು. ೮ ಆಣೆಯ ಮತ್ತು ೨ ಆಣೆಯ ಟಿಕೇಟುಗಳಿಗೆ ಈ ವಿಹಾರ ಕಮಿಟಿಯ ಪ್ರೆಸಿಡೆಂಟರ ಮೊಹರು ಇದೆ. ಮೊಹರು ಇಲ್ಲದ ಟಿಕೇಟುಗಳನ್ನು ಅಂಗೀಕರಿಸಲ್ಪಡಲಿಕ್ಕಿಲ್ಲ. ಈ ವಿಹಾರದಿಂದ ಹುಟ್ಟಿಬಂದ ನಫೆಯು ಯುದ್ಧಫಂಡಿನ ಹೆಂಗಸರ ಶಾಖೆಗೆ ಕೊಡಲ್ಪಡುವದು. ಇದರ ಲೆಕ್ಕಪತ್ರಾದಿಗಳು ವಿಹಾರವು ಆದನಂತರ ಆದಷ್ಟು ತ್ವರಿತದಲ್ಲಿ ಪ್ರಕಟಿಸಲ್ಪಡುವದು. ವಿಹಾರದಲ್ಲಿ ಮಹಿಳಾ ಸಭೆಯವರಿಂದ ಏರ್ಪಡಿಸಲ್ಪಟ್ಟ ಬಗೆ ಬಗೆಯ ವಸ್ತು ಸಂಗ್ರಹಗಳ ಒಂದು ಸಂತೆ, ಕೊಸ್ಮೊಪೊಲಿಟನ್ ಕ್ಲಬ್ಬಿನವರ ದೇಶೀಯ ಪಾನಪನಿಹಾರಗಳು, ಯೂರೋಪಿಯನರ ಪಾನಪರಿಹಾರಗಳು, ಪುಸ್ತಕ ಮಾರಾಟ ಮಾಡುವ ಮಂಡಿ, ಮಿಶ್ಯನ್ ಕೆಲಸಗಳು, ವಿವಿಧ ಬಗೆಯ ಕೆಲಸಗಳ ಮಂಡಿ. ಮಕ್ಕಳ ಆಟದ ಸಾಮಾನುಗಳು ಮತ್ತು ಮೀನುಗಳನ್ನಿಟ್ಟಿರುವ ಕೊಳ, ಆಟದ ಸಾಮಾನುಗಳ ಸಂತೆ. ಹೂವು ಮತ್ತು ಫಲವಸ್ತುಗಳ ಸಂತೆ, ಚಾಪೆಗಳು ಮತ್ತು ಸ್ಥಳೀಕ ವಸ್ತುಗಳ ಸಂಗ್ರಹ, ಚಿತ್ರಪಟ ಮೊದಲಾದ ಪ್ರೇಕ್ಷಣೀಯ ವಿಷಯಗಳು ಇರುವವು. ಅಷ್ಟೇ ಅಲ್ಲ ವಿವಿಧ ಆಟಗಳು — ತೂಕಮಾಡುವ ಯಂತ್ರಗಳು, ಕೋಲಾಟ ಮತ್ತು ನರ್ತನಗಳು, ಗುರಿ ಇಟ್ಟು ಹೊಡೆಯುವದು, ಡ್ರಾಮಗಳು, ಕಸರತ್ತುಗಳು, ಭೂತಗಳ ಮತ್ತು ಕುಡುಮಿಗಳ ನರ್ತನ, ಮ್ಯಾಜಿಕ್ ಲ್ಯಾಂಟರ್ನ್, ಆನೆ ಸವಾರಿ, ಮೃಗಶಾಲೆ, ಜಲತರಂಗ ಮತ್ತು ಕ್ಲಾರ್‌ನೆಟ್ ಗಾಯನಗಳು, ಭವಿಷ್ಯ ಹೇಳುವದು, ಸಂಗೀತ ಇತ್ಯಾದಿಗಳ ಸತ್ಕಾರಗಳೂ ಸ್ಥಳೀಯ ಚಿನ್ನ ಬೆಳ್ಳಿ ಆಭರಣಗಳು, ಶೀರೆ ವಸ್ತ್ರಗಳು, ಬಾಸೆಲ್ ಮಿಶ್ಯನ್ ಕೈಗಾರಿಕೆಗಳ ವಸ್ತುಪ್ರದರ್ಶನಗಳೂ ಇರುವವು. ನಮ್ಮ ಜಿಲ್ಲೆಯಲ್ಲಿ ಇಂಥಾ ವಿಹಾರವು ಇದೇ ಮೊದಲನೇ ಸಾರಿಯಾದುದರಿಂದಲೂ ಈ ವಿಹಾರದಿಂದ ಹುಟ್ಟಿಬಂದ ಲಾಭವು ಯುದ್ಧಫಂಡಿಗೆ ಹೋಗತಕ್ಕದ್ದಾದುದರಿಂದಲೂ ಈ ವಿಹಾರಕ್ಕೆ ನಮ್ಮ ಜಿಲ್ಲೆಯ ಜನರು ಕೈಲಾದಷ್ಟು ಪ್ರೋತ್ಸಾಹ ಕೊಡಬೇಕಾಗಿ ಅಪೇಕ್ಷಿಸುವೆವು.

ಇಲ್ಲಿಯ ಸಬ್ ಕೋರ್ಟು ಸಬ್ ಜಡ್ಜರಾಗಿದ್ದ ಮಿ॥ ಪಿ. ಸಿ. ಮಸ್ಕರೇನ್ಹಾಸರವರು ಇದೇ ತಾ. ೧೨ರಲ್ಲು ಕೆಲಸದಿಂದ ನಿವೃತ್ತರಾದುದರಿಂದ ಇಲ್ಲಿಯ ವಕೀಲರೆಲ್ಲರೂ ಕೂಡಿ ಅವರನ್ನು ತಾ ೧೨ರಲ್ಲು ಸನ್ಮಾನಿಸಿ ಭಾವಚಿತ್ರಗಳನ್ನು ತೆಗೆಯಿಸಿದರು.

ಗುಂಟೂರು ಸಬ್ ಜಡ್ಜರಾಗಿರುವ ಮ॥ ರಾ॥ ಎಸ್. ವೆಂಕಟಸುಬ್ಬರಾಯರು ಇಲ್ಲಿಯ ಸಬ್ ಕೋರ್ಟು ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಸೆಶ್ಯನ್ಸ್ ಮತ್ತು ಡಿಸ್ಟ್ರಿಕ್ಟ್ ಜಡ್ಜರಾಗಿರುವ ಮಿ॥ ಕರ್ಗೆನ್‌ವನ್ ಐ. ಸಿ. ಎಸ್‌ರವರಿಗೆ ಒಂದು ವರ್ಷದ ಪ್ರಿವಿಲೇಜ್ ಮತ್ತು ಫರ್ಲೋ ರಜೆ ಕೊಡಲ್ಪಟ್ಟಿರುವದರಿಂದ ನೆಲ್ಲೂರಿನಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರಾಗಿರುವ ರಾವ್ ಬಹದ್ದೂರ್ ಸಿ. ಕೃಷ್ಣಸ್ವಾಮಿ ರಾವ್‌ರವರು ದಕ್ಷಿಣ ಕನ್ನಡಾ ಜಿಲ್ಲೆಯ ಡಿಸ್ಟ್ರಿಕ್ಟ್ ಮತ್ತು ಸೆಶ್ಯನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿ ಸ್ಥಾಪಿಸಲ್ಪಟ್ಟ ಹೋಮ್‌ರೂಲ್ ಲೀಗಿಗೆ ಈಗ ಸದ್ಯಾ ೧೫ ಮಂದಿ ಮೆಂಬರರು ಸೇರಿರುತ್ತಾರೆ. ಈ ಪೈಕಿ ಇಬ್ಬರು ಉಡುಪಿಯವರು, ಒಬ್ಬರು ವರ್ತಕರು, ಒಬ್ಬ ದಾಕ್ತಾರರು, ೨ ಸಾಹುಕಾರರು, ಒಬ್ಬರು ವಕೀಲ ಪರೀಕ್ಷೆಗೆ ಓದುವ ವಿದ್ಯಾರ್ಥಿ, ಉಳಿದವರು ವಕೀಲರು ಎಂದು ತಿಳಿಯುತ್ತೇವೆ. ಸದ್ಯಾ ಉಡುಪಿಯಲ್ಲಿ ಹೋಮ್‌ರೂಲ ಶಾಖೆಯು ಇಲ್ಲದಿರುವುದರಿಂದ ಉಡುಪಿಯ ಕೆಲವು ಗೃಹಸ್ಥರು ಮಂಗಳೂರಿನ ಹೋಮ್‌ರೂಲು ಲೀಗಿಗೆ ಸೇರಬಯಸಿರುವರು. ಹೀಗೆಯೇ ಎಲ್ಲಾ ವಿಷಯಗಳಲ್ಲಿ ಮುಂದಾಳಾಗಿರುವ ಪುತ್ತೂರಿನವರೂ ಈ ಹೋಮ್‌ರೂಲ್ ಲೀಗಿಗೆ ಸೇರಿಕೊಂಡು ಅಥವಾ ಅಲ್ಲಲ್ಲಿ ಶಾಖೆಗಳನ್ನು ಸ್ಥಾಪಿಸಿಕೊಂಡು ಹೋಮ್‌ರೂಲು ಲೀಗಿನವರಿಗೆ ನಮ್ಮ ಜಿಲ್ಲೆಯ ಸಹಕಾರವು ದೊರೆಯುವಂತೆ ಪ್ರಯತ್ನಿಸಬೇಕಾಗಿ ಅಪೇಕ್ಷಿಸುವೆವು.

ನಿನ್ನೆಯ ದಿನ ಸಾಯಂಕಾಲ ಗವರ್ನಮೆಂಟ ಕಾಲೇಜು ಸಭಾಸದನದಲ್ಲಿ ಮುಂಬಾಯಿ ವಿಕ್ಟೋರಿಯ ಯುದ್ಧ ಆಸ್ಪತ್ರೆಯ ಹೆಡ್ ಕ್ಲಾರ್ಕರಾದ ಮಿ॥ ಜೆ. ಎಲ್. ಎಮ್. ಡಿ. ಸೋಜರವರು ವಿಕ್ಟೋರಿಯ ಯುದ್ಧ ಆಸ್ಪತ್ರೆಯಿಂದ ಮುಂಬಾಯಿ ಮತ್ತು ಈಜಿಪ್ಟಿನಲ್ಲಿ ಆಗುತ್ತಿರುವ ಕೆಲಸಗಳ ವಿವರವನ್ನೂ ಮುಂಬಾಯಿ "ವಾರ್ ಫೇಟ"ನ ವಿವರವನ್ನೂ ಕುರಿತಾಗಿ ಒಂದು ಭಾಷಣವನ್ನು ಕೊಟ್ಟರು. ಜಿಲ್ಲಾ ಕಲೆಕ್ಟರಾಗಿರುವ ಮಿ॥ ಎಲ್. ವೈಬರ್ಟ್ ದೊರೆಗಳವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದುದಲ್ಲದೆ ಪಟ್ಟಣದ ಮಾನ್ಯ ಗೃಹಸ್ಥರಲ್ಲಿ ಹೆಚ್ಚಿನವರೂ ಸರಕಾರಿ ಹುದ್ದೆದಾರರೂ ಈ ಭಾಷಣವನ್ನು ಕೇಳಲಿಕ್ಕೆ ಬಂದಿದ್ದರು. ಅಧ್ಯಕ್ಷರು ಪ್ರಥಮತಃ ಮಿ॥ ಸೋಜರವರ ಪರಿಚಯವನ್ನು ಸಣ್ಣ ಭಾಷಣದ ಮೂಲಕ ಸಭಿಕರಿಗೆ ಮಾಡಿಸಿದ ನಂತರ ಮಿ॥ ಸೋಜರವರು ವಿಕ್ಟೋರಿಯ ಆಸ್ಪತ್ರೆಯ ವರ್ಣನೆಯನ್ನೂ ಅದು ಈ ಮಹಾ ಯುದ್ಧಕಾಲದಲ್ಲಿ ಸರಕಾರದವರಿಗೆ ಹ್ಯಾಗೆ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡುತ್ತಿದೆಂಬದನ್ನೂ ಸಾಂಗವಾಗಿ ವಿವರಿಸಿದರು. ಅನಂತರ ಮುಂಬಾಯಿ ವಾರ್ ಫೇಟಿನ ಸಂಬಂಧವಾಗಿ ಕೆಲವು ಮಾತುಗಳನ್ನು ಹೇಳಿ ಇಲ್ಲಿ ಆಗಲಿಕ್ಕಿರುವ ವಾರ್ ಫೇಟಿಗೆ ಉತ್ತೇಜನ ಕೊಡುವಂತೆ ಸಭಿಕರನ್ನು ಪ್ರೋತ್ಸಾಹಗೊಳಿಸಿದರು. ಬಳಿಕ ಅಧ್ಯಕ್ಷರು ಮಿ॥ ಸೋಜರವರ ಭಾಷಣವನ್ನು ಆದರಿಸಿ ಮಾತನ್ನಾಡಿ ಇಲ್ಲಿ ನಡೆಯಲಿಕ್ಕಿರುವ ವಾರ್ ಫೇಟಿಗೆ ಜಿಲ್ಲಾ ಜನರ ಸಹಕಾರವು ಅಗತ್ಯವೆಂಬದನ್ನು ಕಾಲೋಚಿತ ಮಾತುಗಳಿಂದ ಹೇಳಿ ಈ ತನಕ ಇಲ್ಲಿಯ ಸ್ತ್ರೀ ಶಾಖೆಯವರು ಯುದ್ಧದಲ್ಲಿ ಗಾಯ ಒಡೆದವರ ಫಂಡಿಗೆ ಮಾಡಿದ ಉಚಿತಗಳ ವಿವರವನ್ನೂ ಈ ಸಂಬಂಧ ಮೆಸಪೊಟಾಮಿಯದಿಂದ ನಿನ್ನೆಯ ದಿನವೇ ಮಿಸೆಸ್ ವೈಬರ್ಟರಿಗೆ ಬಂದಿದ್ದ ಒಂದು ಪತ್ರವನ್ನೂ ಓದಿ ಸಭಿಕರಲ್ಲಿ ಉತ್ತೇಜನವನ್ನು ಉಂಟು ಮಾಡಿದರು. ಈ ಜಿಲ್ಲೆಯಿಂದ ಯುದ್ಧ ಪ್ರಾರಂಭವಾದಂದಿನಿಂದ ಮದ್ರಾಸ್ ಯುದ್ಧಫಂಡಿಗೆ ಸುಮಾರು ೨೦,೦೦೦ ರೂ. ವೈಸರಾಯ ಯುದ್ಧಫಂಡಿಗೆ ರೂಪಾಯಿಗಳು ೧೪,೦೦೦, ಮದ್ರಾಸ್ ಹಡಗ ಫಂಡಿಗೆ ಸುಮಾರು ೬ ಸಾವಿರ ರೂಪಾಯಿಗಳು ಕಳುಹಿಸಿಕೊಡಲ್ಪಟ್ಟಿದೆಂಬದು ಅಧ್ಯಕ್ಷರ ಮಾತುಗಳಿಂದ ತಿಳಿದುಬಂದಿರುತ್ತದೆ. ಕಡೆಗೆ ರಾವ್ ಬಹದ್ದೂರ್ ಎನ್. ಸುಬ್ಬರಾಯರು "ವಿಕ್ಟೋರಿಯ" ಯುದ್ಧ ಹಡಗದ ಪರಿಚಯವನ್ನು ಇಲ್ಲಿಯವರಿಗೂ ಮಾಡಿಕೊಟ್ಟದ್ದಕ್ಕಾಗಿ ಮಿ॥ ಸೋಜರವರಿಗೆ ಕೃತಜ್ಞತೆಯನ್ನು ಹೇಳಿದನಂತರ ಸಭೆಯು ಬರಕಾಸ್ತು ಆಯಿತು.

ಕಳದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು.

ಇದೇ ತಾ. ೧೨ರಲ್ಲು ಡಿಲ್ಲಿ ದರ್ಬಾರಿನ ಮಹೋತ್ಸವಗಳು ಜಿಲ್ಲೆಯ ಆಯಾ ಶಾಲೆಗಳಲ್ಲಿ ಅತಿ ವಿಜೃಂಭಣೆಯಿಂದ ನಡೆದಿರುವ ವರ್ತಮಾನಗಳು ನಮಗೆ ಬಂದಿರುತ್ತವೆ.

ಧೈರ್ಯಲಕ್ಷ್ಮಿ ಎಂಡ್ ಕೋ, ಮದ್ರಾಸ್-ಇವರ ಕಂಪೆನಿಯ ಜಾಹಿರಾತನ್ನು ಈ ಸಂಚಿಕೆಯ ಪುರವಣೆಯಾಗಿ ಇಟ್ಟಿರುವೆವು.

ಬಂಟರ ಯಾನೆ ನಾಡವರ ಸಂಘ.

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಇದೇ ಬರುವ ಜನವರಿ ತಿಂಗಳ ತಾ. 1ನೇ ಸೋಮವಾರ ಮಧ್ಯಾಹ್ನ ಘಂಟೆ 1ಕ್ಕೆ ಕಾಸರಗೋಡು ಕಸಬೆಯಲ್ಲಿ ಸೇರಬೇಕಾಗಿ ನಿಶ್ಚೈಸಿದುದರಿಂದ ಜಾತಿಗೃಹಸ್ಥರೆಲ್ಲಾ ಈ ಸಂಗತಿಯನ್ನು ತಮ್ಮ ಬಂಧುಮಿತ್ರವರ್ಗದಲ್ಲಿ ಪ್ರಚುರಪಡಿಸಿ ಅವರ ಸಮೇತ ಸಭೆಗೆ ದಯಮಾಡಿ ಬಂದು ಸಂಘಕ್ಕೆ ಉದಾರ ಮನಸ್ಸಿನಿಂದ ಸಹಾಯ ಮಾಡಿ ತಮ್ಮ ಜನರ ಏಳಿಗೆಗೆ ಸಹಕಾರಿಗಳಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಹೇರೂರು ತಿಂಗಳ್ಳ ಆಳ್ವ.	ಇಚ್ಲಂಪಾಡಿ ಕೋಟ್ಯಪ್ಪ ಆಳ್ವ.
ಬಂಟ್ವಾಳ. ಚಿಕ್ಕಪ್ಪ ನಾಯಕ.	ಕೋಡಿಂಗಾರು ಶಂಕರ ಆಳ್ವ.
ಬಾಡೂರ ತಿಮ್ಮಣ್ಣರೈ.	ನೆಕ್ರಾಜೆ ಐಶೆಟ್ಟಿ.
ಕೋಟೆಕುಂಜ ಪಟೇಲ	ಬಾಕ್ರಬೈಲು ತಿಮ್ಮಪ್ಪ ಶೆಟ್ಟಿ.
ರಾಮಯ ಹೆಗ್ಗಡೆ.	ಕಾಸರಗೋಡು ಕಸಬಾ ಪಟೇಲ್
ಶಿರಿಬಾಗಿಲು ರಾಮಯಾಳ್ವ.	ಮುತ್ತಯ ಶೆಟ್ಟಿ.
ಕೂಡ್ಲುಮೂಗರು ಸಂಕಪ್ಪರೈ.	ವಕೀಲ ಕೆ. ರಾಮ ಶೆಟ್ಟಿ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ. 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತ

ಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ್ಸು—"ಪಂಡಿಟ್" ಮದರಾಸ್.

ಜೀನಸು ಧಾರಣೆ.

(ರ...

ಮುಸ್ಕಿ ಅಕ್ಕಿ ಹಳೆದು .	76—0ರಿಂದ	7—14—0
ಗುಡ್ಡು ,, ಹೊಸ್ತು .	4—0	6—8—0
ಮುಸ್ಕಿ ,, ,, .	0—0	6—6—0
ಹೊಸ ತಾತಿ ,, .	14—0	5—6—0
ಅಪ್ಪಲ್ ಬೆಳ್ತಿಗೆ ,, .	4—0	6—8—0
ಗುಡ್ಡ ಬೆಳ್ತಿಗೆ ,, .	8—0	5—12—0
ರಂಗೂನು ಬೆಳ್ತಿಗೆ ಗೋಣಿ ೧ರ	10—0	10—4—0
ಗೋದಿ ಗೋಣಿ ೧ರ .	14—0	12—0—0
ಹುರಾಳಿ ಗೋಣಿ ೧ರ .	10—0	5—12—0
ಕಡಲೆ ಗೋಣಿ ೧ರ ಬೊಂಬ್ಯ	8—0	10—8—0
ತೊಗರಿ ಗೋಣಿ ೧ರ .	. .	10—8—0
ತೊಗರಿ ಬೇಳೆ ಗೋಣಿ ೧ರ .	18—0	15—8—0
ಉದ್ದು ಗೋಣಿ ೧ರ .	18—0	11—4—0
ಊರುಬೆಲ ಖಂಡಿ ೧ರ .	. .	50—0—0
ಉಪ್ಪು ಗೋಣಿ ೧ರ. .	. .	4—7—0
ಕೊಬ್ಬರಿ ಖಂಡಿ ೧ರ .	90—0	105—8—0
ಕೊಬ್ಬರಿ ಹಿಂಡಿ ಖಂಡಿ ೧ರ .	. .	23—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	30—0	30—0—0
ಕೊಬ್ಬರಿ ಎಣ್ಣೆ ಮಣ ೧ರ.	0—0	7—2—0
ಎಳ್ಳೆಣ್ಣೆ ಮಣ ೧ರ (ಕುರಾಸಾ)	. .	4—10—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	0—0	6—11—0
ಮೋರಿಸ್ ಸಕ್ಕರೆ ಮಣ ೧ರ	. .	5—10—0
ಕಾಫಿ ಖಂಡಿ ೧ರ . .	220—0	235—0—0
ಹೊಸಬೀಗೋಟು ಖಂಡಿ ೧ರ	80—0	85—0—0
ಹೊಸ ಗೇರುಬೀಜ ಮುಡಿ ೧ರ	2—0	2—13—0
ಕಬ್ಬಿಣ ಖಂಡಿ ೧ರ .	. .	75—0—0
ತಾಂಬ್ರ ತಗಡು ಮಣ ೧ರ	20—0	27—0—0
ತಾಂಬ್ರ ಪಾತ್ರೆಗಳು ಮಣ ೧ರ	.	28—0—0
ಚೀನ ಬೆಳ್ಳಿ ಶೇರು ೧ರ .	. .	24—0—0
ಪಚ್ಚಕೆಸರು ಮುಡಿ ೧ರ .	3—0	5—2—0
ಕಾಳ ಮೆಣಸು ಖಂಡಿ ೧ಕ್ಕೆ .	.	260—0—0

ರಾ. ಮಟ್ಟಿಗೋಪಾಲಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ ಪದಗಳೂ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಮಟ್ಟಿನ ಪದಗಳೂ, ದಾಸರ ಕೀರ್ತನೆಯ ನಮೂನೆ ಪದಗಳೂ, ನಾಟಕದ ನಮೂನೆ ಹಿಂದೂಸ್ಥಾನಿ ಮಟ್ಟಿನ ಕೀರ್ತನೆಗಳೂ, ಮಂಗಲ ಪದಗಳೂ, ಶೋಭನ ಪದಗಳೂ, ಜೋಗುಳ ಪದಗಳೂ, ಉದಯ ರಾಗ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಟಪ್ಪಾಲ ಹಾಸಲು ಸಮೇತ 4 ಆಣೆಗೆ ಸಿಕ್ಕುವದು.

ಕೆಲವೇ ಪ್ರತಿಗಳು ಮಾತ್ರ ಇವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಛಾಪಖಾನೆ,
ರಥವೀದಿ, ಮಂಗಳೂರು.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮೂಫನ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜಿ. ಎ. ಡಿ'ಸೋಜರು ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾತ್ಯಾವಾಡಿನ ಪಿಶವಲ್‌ನಿಂದ ಮಿ. ಜೆ. ರಸ್ಕಿನಾರು ಬರೆಯುತ್ತಾರೆ:—ಒಂದು ವರುಷದ ಲಾಗಾಯತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್‌ಗಳನ್ನೂ ತೆಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತೆಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೇ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:—

The Malariana Company,
Kankanady S. C.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇವಲ್ಲದೆ ಉದರವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

100 ರೂಪಾಯಿಗಳ ಬಹುಮಾನ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳು ವಿಷ ಸಂಜೀವಿನಿ.

ಆ! ಹಾ!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿ ಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುವೆವು. ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳು ವಿಷ ಸಂಜೀವಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳುಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನಮ್ಮ ಔಷಧವನ್ನು ವಾಪಸು ಮಾಡಿ ತಮ್ಮ ಮೊಬಲಗನ್ನು ವಾಪಸು ಪಡಿಯುವದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಶೀಸೆ 1ಕ್ಕೆ 8 ಆಣೆ; ಡಝನ್ 1ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಆಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿ ನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೩ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧—೮—೦ ಮಧ್ಯಮ ತರದ ಪೆಟ್ಟಿ ೧ಕ್ಕೆ ೨—೦—೦. ದೊಡ್ಡ ಪೆಟ್ಟಿ ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ; ದುಯಂ ರೂಪಾಯಿ ೧ಕ್ಕೆ ೮ ತೊಲೆ, ಶೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚ್ಹಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೇಶ್ಮಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ, ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay, BENARES CITY.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಆಜೀಜುದ್ದೀನ್ ರಸ್ತೆಯು ರಥವೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿ ಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವುದು.

ಚಕ್ರಕೋಡಿ ವಿಷ್ಣು ಶಾಸ್ತ್ರಿಗಳ ಮಗ ಸುಬ್ಬಣ್ಣಶಾಸ್ತ್ರಿಗಳು ಗುಣಿಸಿ ಚ! ಗೋಪಾಲಕೃಷ್ಣ ಶಾಸ್ತ್ರಿಗಳ ಮತ್ತು ತಿರಂಕಲ್ಲು ಸುಬ್ರಾಯ ಜೋಯಿಸರಿಂದ ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3, 1 ದರ್ಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0 ಬೇಕಾದವರು ಬೇಗನೆ ಒದಗಿಕೊಳ್ಳುವದು.

ವಿಳಾಸ:—
ಕೆ. ಅಣ್ಣಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೇವೆ.

ಬಹಳ ಸೊಗಸಾದದ್ದು! ೧೬ ಮೊಳ!! ಬಾಳಿಕೆ ಬರುವುದು!!!

ಗೋವರ್‌ಜಾನ್ ಬಳ್ಳಿ ಶೀರೆ ರೂ. ೨-೮-೦.

ಈ ಹೊಸ ನಮೂನೆ ಶೀರೆಗಳು ಬಹು ನಯವಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಯು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿದ್ದೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದುವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3, ಇರುಳಪ್ಪನ ವೀದಿ,
ಮದರಾಸು.

ಯುಕಲಿಪ್ಟಸ್ ಒಯಿಲ್.

(ನೀಲಗಿರಿ ಎಣ್ಣೆ).

ಇದೊಂದು ಇಲ್ಲದ್ದರೆ ಎಂಥಾ ಬಾಮ್ ಆಗಲಿ ಅಥವಾ ಅಂಜನವಾಗಲಿ ನಡಿಯಲಾರದು. ನೀಲಗಿರಿ ಎಣ್ಣೆಯನ್ನು ಸೇರಿಸಿಕೊಂಡು, ಅಥವಾ ರೂಪಾಂತರಗೊಳಿಸಿಕೊಂಡು ನಾನಾ ಬಗೆಯ ಬಾಮುಗಳೂ ಅಂಜನಗಳೂ ತಯ್ಯಾರುಮಾಡಲ್ಪಡುವವು. ನೀಲಗಿರಿ ಎಣ್ಣೆಯ ಗುಣವು ಅಷ್ಟು ಧಾರಾಳವಾಗಿದೆ.

ಅಧಿಕ ಬೆಲೆಯ ಬಾಮುಗಳೂ ಅಂಜನಗಳೂ ಇವುಗಳನ್ನು ತೆಗದಿಡುವದಕ್ಕಿಂತ ಬರೆ ಕ್ರಯ ಆಣೆ 5ರೊಂದು ನೀಲಗಿರಿ ಎಣ್ಣೆಯ ಬುಡ್ಡಿಯನ್ನು ಸದಾ ಪ್ರಯಾಣ ಕಾಲದಲ್ಲಿಯೂ ಗೃಹದಲ್ಲಿಯೂ ಸಂಗ್ರಹಿಸಿಡುವದು ಎಷ್ಟೋ ಗುಣಕಾರಿಯಾಗಿದೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ. ವ್ಯಾಪಾರಸ್ಥರಿಗೆ ಕಮಿಶನ್ ಕೊಡೋಣಾಗುವದು. ಇತರ ಎಲ್ಲಾ ಔಷಧಿಗಳ ಸಂಗ್ರಹವೂ ನಮ್ಮಲ್ಲಿರುವದು.

ಟಿಸ್ಯು ಮತ್ತು ಹೋಮಿಯೋಪತಿಕ್

ಔಷಧಿಗಳ ಬಗ್ಗೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರಹೋಗಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರಾನ್ಸ್‌ಲೇಟರಾದ ಮ| ರಾ| ಬೆನಗಲ್ ರಾಮರಾವ್‌ರವರಿಂದ ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ 10 ಆಣೆ, (ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಚಾರ ವಿವೇಚನೆ ಬೆಲೆ 2 ಆಣೆ, ಇತರ ಪ್ರಬಂಧಗಳು— ಕುಸುಮ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲೆ 3 ಆಣೆ ಇತ್ಯಾದಿ.

ಗೇಣಿಚೀಟು ಫಾರ್ಮುಗಳು ಮತ್ತು ಕೋರ್ಟು ಫೋರ್ಮುಗಳು, ಲೆಕ್ಕ ಬರೆಯುವ ಬಗ್ಗೆ ಬೇಕಾದ ಪುಸ್ತಕಗಳು ಮಾರಾಟಕ್ಕೆ ಸಿದ್ಧವಿರುತ್ತವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಾರಾಟದ ಬಗ್ಗೆ.

ತರಿಕೆರೆ ರೈಲ್ವೆ ಸ್ಟೇಶನ್‌ನಿಂದ 40 ಮೈಲು ದೂರವಿದ್ದು ಮೈಸೂರು ಸಂಸ್ಥಾನ ಕಡೂರುಜಿಲ್ಲಾ ಕೊಪ್ಪದ ಹತ್ತರ ಇರುವ ಹಟ್ಟಿನ್ ಕೊಡಿಗಿ ಮತ್ತು ಬೆಲ್ಗೋಡು ಎಂಬ ಕಾಫಿತೋಟಗಳು ಮಾರಾಟಕ್ಕೆ ಇರುತ್ತವೆ. ಈ ತೋಟಗಳಿಗೆ ಶುಮಾರು ಮೈಲು ದೂರದೊಳಗೆ ಮದ್ರಾಸ್ ಮತ್ತು ಸದರ್ನ್ ಮಾರಾಟಾ ರೈಲ್ವೆ ಕಂಪೆನಿಯ ಸ್ಟೀಮ್ ಟ್ರಾಮ್‌ವೆ ಸಹ ನಡಿಯುವರೆ ಪ್ರಾರಂಭವಾಗುತ್ತದೆ. ಈ ತೋಟಗಳು 00 ಅಡಿ ಎತ್ತರದಲ್ಲಿರುತ್ತವೆ. ವರ್ಷಕ್ಕೆ ಸರಾಸರಿ 130 ಇಂಚು ಮಳೆ ಸುರಿಯುತ್ತಿರುತ್ತದೆ. ಒಟ್ಟಿಗೆ ವಿಸ್ತೀರ್ಣ 661 ಎಕ್ರೆ ಕಾಡು ಇದ್ದು ಈ ಪೈಕಿ 200 ಎಕ್ರೆ ಸ್ಥಳಗಳಲ್ಲಿ ಕಾಫಿಗಿಡಗಳೂ, ಅಡಿಕೆಮರಗಳೂ, ಗದ್ದೆಗಳೂ, ಬಂಗ್ಲೆ, ಗೋಡೌನ್, ರೈಟರ್‌ಗಳ 2 ಮನೆಗಳು, ಸ್ಟೋರು ಮತ್ತು ನಾಜೂಕಾಗಿ ಕಟ್ಟಲ್ಪಟ್ಟ ಕೆಲಸಗಾರರ ಮನೆಗಳೂ ಇರುತ್ತವೆ. ಖ್ಯಾಸಿ ಇದ್ದವರು ಈ ಕೆಳಗಿನ ವಿಳಾಸಕ್ಕೆ ಕೊಂಡಲ್ಲಿ ಎಲ್ಲಾ ವಿಲೇವಾರಿ ತಿಳಕೊಳ್ಳಬಹುದು.

ಎಫ್. ಜೆ. ಪಾರ್‌ಟನ್ಸ್,
ಕೊಪ್ಪ ಪೋಸ್ಟು,
ಕಡೂರು ಡಿಸ್ಟ್ರಿಕ್ಟ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0	ಮಹಾರಾಣೀ ಹೇರಾಯಿಲ್ ಸೀಸೆ 1ಕ್ಕೆ	0-12-0
ಆಯಪಾ ಹೇರ್ ಆಯಿಲ್ ,,	1—0—0	ಕಾಮಿನಿಯಾ ಹೇರಾಯಿಲ್ ,,	1-0-0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —		ರಾಧಾನಾಥ (ಹೊಸ ನಾವಿಲ್).	0-2-0
ಉನ್ಮಾದಿನಿ	0-6-0	ಸುಭದ್ರೆ ,,	0-5-0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0-8-0	ಚಂದ್ರಹಾಸ (ಹೊಸ ಕಥೆ).	0-1-0
ಅಮೃತ ಪುಳಿನ (ದ್ವಿತೀಯ ಮುದ್ರಣ)	0-10-0	ಧ್ರುವ ,,	0-2-0
ಇಂದಿರಾ ಕೃ. ಮು.	0-6-0	ಮಕ್ಕಳ ತಿದ್ದುವಿಕೆ (School Discipline)	0-12-0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).		ಪುಷ್ಪರಚನೆ (Flower Making)	0-14-0
		ಕನ್ನಡ ಆಹ್ನಿಕ ಮಂಜರಿ	1-0-0
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0-10-0	,, ಸಂಗೀತ ಸಮಯಸಾರ	1-4-0
		ನಾತ್ಯನಂದಿನಿ (ಶ್ರೀ ತಿರುಮಲುಮ್ಮ)	1-4-0
ಮಧುಸೂದನ ಡಿಟೆಕ್ಟಿವ್ ನಾವಿಲ್	0-4-0	ವಿಕ್ರಮ ,,	1-2-0
ಪ್ರಫುಲ್ಲೆ ,, ,,	0-12-0	ಚಂದ್ರವದನಾ ,,	0-1[illegible]-0
ಅಂಬಾಲಿಕೆ (ಹೊಸ ನಾವಿಲ್)	0-1-6	ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18"×28"ಕ್ಕೆ	0-1-0
ಕುಸುಮ ,,	0-1-6		

NOTICE.

In the Court of the District Munsiff, Kundapur.

SMALL CAUSE SUIT NO. $\frac{831}{16}$

Baisgallu Ramaya son of Devappaya residing in Koteshiroor Village Hannar Magane Coondapoor Taluk.	*Plaintiff.*
Subba Bhatta son of Samsekai Rama Bhatta residing in Mattikai village Kabbanada Magane Nagar Taluk.	*Defendant.*

To the above defendant:—

Take notice that the above named plaintiff has filed S. C. $\frac{831}{16}$ in the above court for Rs. 40—0—0 principle and interest of Rs. 30—0—0 borrowed by you on Magha Shuddha 15 of Pramadicha promising to repay the same by 30th Magha of Ananda with interest at 12½ p. c. p. a. & the suit is posted to 21—12—16 for trial.

COONDAPOOR. 9th December 1916.

K. Venkappa Shetty,
Pleader for Plaintiff.

ನೋಡಿ!

ಆಹ್ನಿಕರತ್ನಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ.

ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

ಸಪ್ತಶತೀ. ಕನ್ನಡಾಕ್ಷರ, ರೇಶ್ಮೆ ಬೈಂಡ್, ಪಾಕೇಟ್ ಸ್ಯಾಜು ಪಾರಾಯಣಕ್ಕೂ ಅತ್ಯುಪಯೋಗವಾಗುವಂತೆ ಎಲ್ಲಾ ವಿಧಾನದಿಂದೊಡಗೂಡಿದೆ. ಬೆಲೆ ಪುಸ್ತಕ ೧ಕ್ಕೆ ೯ ಆಣೆ. ಪೋಸ್ಟು ಖರ್ಚು ಬೇರೆ.

ವಿಳಾಸ:—

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, S. P. RAJA & Co.,
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಗಣ್ಯರಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ,

ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಜಾಹಿರು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

.... । ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂಚಾಂಗವರ್ಧನಂ । ಉಚ್ಛ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತೇ ॥
ಸ್ತ್ರೀಷುಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ರೂಪಮಪಾಸ್ಯ ಸರ್ವಂ । ಬಿಭರ್ತಿ ರೂಪಂ ನವಯೌವನಸ್ಯ ।
ಜೀವನಾನಂದಸ್ಯಾಸ್ಯನರಃ ಪ್ರಯೋಗಾಲ್ಲಭೇತ ಜೀರ್ಣೋಽಪಿ ಕುಟಿಪ್ರವೇಶ್ಯಾತ್ ॥

"........ವಿಕೃತಸ್ವರ, ಅನ್ನಕೋಶದ ರೋಗಗಳು, (ಅಜೀರ್ಣ ಮುಂತಾದ್ದು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ, ಮುದುಕರಿಗೆ, ಮಕ್ಕಳ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣವಡಿಸುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿತವಾಗುವ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತನ್ನು ಪೂರ್ಣ ಗಟ್ಟಿಪಡಿಸುವದೇ ಮುಂತಾದವಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನು ನವಯೌವನಶರೀರವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುವನೋ ಅವನು ವೇಶ್ಯಾಲಂಪಟನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನ ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನರಾದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರು ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅದರ ಸಂಗಡಲೇ ಜ್ವರ, ಕೆಮ್ಮು, ಎದೆಹುಳು, ಕಿವಿಸೋವು ಮತ್ತು ಕಡಿತಗಳಿಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರಪೇಟೆ, (ಕೊಡಗು).
ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೇ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವ ವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ,

ನಂಬ್ರ 4.—ವಾರಕ್ಕೊಂದಾವರ್ತಿ ಕೀ ಕೊಡುವವಂಥಾ ನಿಕ್ಕಲ್ ಸಿಲ್ವರ್ ಕೇಸ್ ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತಪಟ್ಟ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ವ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಂ ಆಗಿಯೂ ಮಾರಲ್ಪಡುತ್ತದೆ.

ವಿಳಾಸ:— **N. GOPALJEE**
Watch Maker.
JOOMA MASJID SHEIK MEMON STREET,
BOMBAY 2.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ !!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೊನಿಕಬ್ ಸ್ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸುತ್ತು, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಬಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ರೋಗಗಳೂ ಹೋಗುವವು. "ಟೊನಿಕಬ್" ಮಲಬದ್ಧತೆಯನ್ನು ಬಿಡಿಸುತ್ತದೆ. ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೆಗಳಲ್ಲಿ ಇದು ತೀವ್ರವಾದ ಕೆಲಸವನ್ನು ಮಾಡಿ, ಸರನಾಡಿಗಳನ್ನು ಬಲಪಡಿಸುವದು. "ಟೊನಿಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಸ್ಥಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನ ಧಾತುನಷ್ಟ, ಇಂದ್ರಿಯ ಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೊಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—[illegible]—0.

ಕಾರ್ಕಳದಿಂದ ಒಬ್ಬ ಮಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ:— ಟೊನಿಕಬ್ ಸೇವಿಸಿ 6 ವರ್ಷದಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ಪರಿಹಾರವಾಗಿರುತ್ತದೆ. ಇತ್ಯಾದಿ.

ಇದಲ್ಲದೆ ತಾಜಾ ಯುವರಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನೂ ಅನೇಕ ಔಷಧಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್,
ಮಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತೊಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

		ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	.	0	8	0
1 ,,	.	0	12	0
½ ಔನ್ಸ್ ಟ್ಯೂಬ್	.	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳ ಡಬ್ಬಿಗೆ	.	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:
ಎಚ್. ಆರ್. ಮೋಡಿ ಎಂಡ್ ಕೋ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.
H. R. MODY & Co.,
10 Princes Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಶಾಕ್ಕರೈನ್ ಅಥವಾ ಪಂಚದಾರ ಬಿಲ್ಲೆಗಳು:— ಇವು ನಯವಾಗಿ ಸೀಮೆಯಲ್ಲಿ ಮಾಡಲ್ಪಟ್ಟು ಅಪೂರ್ವವಾಗಿ 550 ಮಣಗಳ ಹೆಚ್ಚಾಗಿ ಪಂಚದಾರ್ರ ರುಚಿಯನ್ನು ಕೊಡುವ ಚಿಕ್ಕ ಬಿಲ್ಲೆಗಳ ರೂಪದಲ್ಲಿ ನಾವು ಮಾಡುತ್ತಿರುವೆವು. ಒಂದು ಶೇರು ಹಾಲು ಅಥವಾ ಕಾಫಿ ಮತ್ತು ಟೀ ಇವುಗಳ ಉಪಯೋಗದಲ್ಲಿ ಹೇಗೆ ಸಾಧಾರಣವಾದ ಪಂಚದಾರವನ್ನು ಹಾಕುವಲ್ಲಿ ಎಷ್ಟು ರುಚಿಕೊಡುವದೋ ಅದಕ್ಕಿಂತಲೂ ಅಪೂರ್ವವಾದ ಈ ಬಿಲ್ಲೆಗಳಲ್ಲಿ ಎರಡನ್ನು ಹಾಕಿ ಉಪಯೋಗಿಸಿದರೆ ಸಾಕಾಗುವದು. ಇವಲ್ಲದೆ ಸರ್ವಸಾಧಾರಣದಲ್ಲಿ ಪಂಚದಾರಿ ಉಪಯೋಗ ದೇಹಕ್ಕೆ ಹಾನಿಕರವಾದ ಬಹುಮೂತ್ರ ಇತ್ಯಾದಿ ಜಾಡ್ಯಗಳ ಅವಲಂಭನೆಯನ್ನು ಈ ಉಪಯೋಗವಾದ ವಸ್ತುವಿನಿಂದ ತೊಲಗಿಸಬಹುದು. ಅಥವಾ ಆ ಜಾಡ್ಯಗಳೆಲ್ಲವು ಸೇರಲು ಸಂಭವವಿಲ್ಲ. ಪಂಚದಾರಕ್ಕಿಂತಲೂ ಇದರ ಬೆಲೆ ಸ್ವಲ್ಪವು. ಈಗ ಬಹುಜನರು ಪಂಚದಾರ ಕಷ್ಟಕರವೆಂದೂ ಅದನ್ನು ಉಪಯೋಗಿಸದೆ ಕಾಫಿ, ಟೀ ಇತ್ಯಾದಿಗಳನ್ನು ಭಯದಿಂದ ನಿವಾರಿಸುವದು ಅಲ್ಲದೆ ಪಂಚದಾರೆಯನ್ನು ಹಾಕದೆ ಉಪಯೋಗಿಸುವವರು ಇಂಥವರು. ಮತ್ತು ಸರ್ವಜನರು ಅಭ್ಯಂತರ ಏಮಾತ್ರವಿಲ್ಲದೆ ಉಪಯುಕ್ತವಾದ "ಈ ಶಾಕ್ಕರೈನ್" ಎಂಬ ಈ ಬಿಲ್ಲೆಗಳನ್ನು ಉಪಯೋಗಿಸ ಬಹುದು. ಇದರ ಉಪಯೋಗಗಳು ಅಸಾಧ್ಯ. ಸೀಸಾ 1ಕ್ಕೆ 8 ಆಣೆ. ವಿ. ಪಿ. 1ರಿಂದ 12 ಸೀಸಾಗಳಿಗೆ ಆಣೆ 5 ಪ್ರತ್ಯೇಕವು.

ಅಜೀರ್ಣ ಮಾತ್ರೆಗಳು:— ಅಜೀರ್ಣ ತೀರುವದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ತದಿಂದ ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆತಿರುಗುವುದು ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ 1ಕ್ಕೆ 8 ಆಣೆ ವಿ. ಪಿ. ಛಾರಗಿಚಾರ್ಜುಗಳು 3 ಪೆಟ್ಟಿಗೆವರಿಗೂ 5 ಆಣೆ.

ಪ್ರಮೇಹನಿವಾರಿಣಿ:— ಯಾವ ಕಾರಣದಿಂದಲಾದರೂ ಸಂಭವಿಸಿದ ಕಷ್ಟ ನಿದ್ರೆಯಲ್ಲಿ ಉರಿ ಮುಂತಾದವು ವಾಸಿಯಾಗುವುದು. ಸ್ತ್ರೀಪುರುಷರು ಉಪಯೋಗಿಸಬಹುದು. ಸೀಸೆ 1ಕ್ಕೆ 1 ರೂಪಾಯಿ. 6 ಸೀಸೆವರಿಗೂ ವಿ. ಪಿ. ಚಾರ್ಜು 5 ಆಣೆ.

ಲಕ್ಷ್ಮೀಕಸ್ತೂರಿ ಮಾತ್ರೆಗಳು:— ಇದು ಭೋಜನಾನಂತರ ತಾಂಬೂಲದ ಸಂಗಡ 1—2 ಮಾತ್ರೆಗಳನ್ನು ಸೇವಿಸಿದರೆ ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಿಗ್ಯೆ ಊಟಕ್ಕೆ ಮುಂಚೆ 2 ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೆಯವಾದ ಲಹರಿ ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲ. ಕಸ್ತೂರಿ ಸ್ವರ್ಣಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ, ಎಳೆಮಕ್ಕಳಿಂದ ಮುದುಕರವರೆಗೆ ಎಲ್ಲರೂ ಬರಿನೆಯಲ್ಲಿ ಹಾಕಿಕೊಂಡು ಉಪಯೋಗಿಸ ಬಹುದು. ಕ್ರಮವಾಗಿ ಸೇವಿಸುವದರಿಂದ ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರವರೆಗೆ 1ರಿಂದ 4 ಮಾತ್ರೆಗಳಂತೆ ಕೊಟ್ಟರೆ ತಕ್ಷಣ ಗುಣವಾಗುವದು. ಸೀಸೆ 1ಕ್ಕೆ 4 ಆಣೆ ವಿ. ಪಿ. 3 ಸೀಸೆವರಿಗೂ 5 ಆಣೆ ಪ್ರತ್ಯೇಕವು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳಿಯ ಪದಕಗಳನ್ನು ಪಡೆದಿದೆ. ಏಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2-0-0. 1 ಡ್ರಾಮ್ ಸೀಸೆಗೆ 0-12-0. ಪರಿಮಳದ ಕಾರ್ಡುಗಳು ಡಜನ್ 10-12-0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸಬೀನಿಯಾ ಮತ್ತು ರೊಬ್ಬಿನಿಯಾ ಅತ್ತರುಗಳು ನಮ್ಮಲ್ಲಿ ಯಥೇಷ್ಟವಾಗಿ ಇವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: ಓರಿಯಂಟಲ್ ಡ್ರಗ್ ಎಂ ಕೆಮಿಕಲ್ ಕೊ,
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ
3 ಫಿದಾ ಬಿಲ್ಡಿಂಗ್, ಜುಮ್ಮಾ ಮಸ್ಜಿದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಅಂಡ್ ಕೋ,
177 ಚೀನಾ ಬಜಾರ್‍ಸ್ಟ್ರೀಟ್, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ **ಅಕಬರ ಬೀರಬಲರ ವಿನೋದ ಕಥೆಗಳು**

ಸುಮಾರು ೩೦೦ ವರುಷದ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿದ್ದ ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರ ನಡುವೆ ನಡೆದಂಥ ಚಾತುರ್ಯವಾದ ವಿನೋದ ಗರ್ಭಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1-8-0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ **ಸಚಿತ್ರ ಸ್ತ್ರೀಚರಿತ್ರ** ಪ್ರತ್ಯುರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧವು ಪ್ರತಿಯೊಬ್ಬ ಸ್ತ್ರೀ ಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2-0-0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು **ಅರೇಬಿಯನ್ ನೈಟ್ಸ್**

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.
ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1-4-0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯ. ಸ. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಪ್ರೆಸ್, ಬಳ್ಳಾರಿ.

Estd. 1888. **K. B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ಶಮ್ಯವಾಗುತ್ತವೆ. ೨೦–೨೫ ವರ್ಷಗಳ ಹಳತ, ಸ್ಥಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾಸಾರ್ಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾಸಾರ್ಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ಇಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈ ಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾಸಾರ್ಪರಿಲ್ಲೆಯು. ಕ್ರಯ ಬಾಟ್ಲಿಗಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ್ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ	0	3	0	ಗೋಪಿಕಾ ಗೀತ	0	1	0
ಯಜುರ್ವೇದ ಸಂಧ್ಯಾವಂದನ	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ	0	3	0	ರಾಜಕವಚ	0	2	0
ದೇವಪೂಜಾ ಪದ್ಧತಿ	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು	0	2	0	೨ನೇ ಭಾಗ	0	6	0
ಶ್ರೀಸೂಕ್ತ ಪುರುಷಸೂಕ್ತ	0	1	0	ಉದಯರಾಗ ೧ನೇ ಭಾಗ	0	4	0
ವಾಯುಸ್ತುತಿ	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ	0	2	0	ಹರಿಭಕ್ತಿಸಾರ	0	1	0
ದ್ವಾದಶ ಸ್ತೋತ್ರ	0	2	0	ಉಡುಪಿ ಶ್ರೀಕೃಷ್ಣಚರಿತ್ರೆ	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಸ್ವಪ್ನಪದ ಮಧ್ವನಾಮ	0	1	6
ಗಜೇಂದ್ರ ಮೋಕ್ಷ	0	1	6	ಬೇಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ	0	1	6	ತುಳುಕನ್ಯೋಪದೇಶ	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ	0	4	

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ – ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು—ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವವರ್ಗದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದವೇ ಆದರೆ ಈ ಮಾತ್ರೆಗಳ ಸೇವನೆಯು ಅವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,

Ayurvedodaya Aushadhalaya,

20, CHINA BAZAAR ROAD, MADRAS.

ಮದರಾಸ್ ಮೇಲ್ ವಾಚ್.

6 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು

ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷ ಹೆಚ್ಚು ಕಡಿಮೆ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನ ವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮಣಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4-0-0.

ವಿಳಾಸ:—

ವಿ. ಎ. ಕೃಷ್ಣ ಅಂಡ್ ಕೊ.,

3. ಇದುಳಪ್ಪನ ಬೀದಿ, ಮದರಾಸ್.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರರ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶೂಲಘ್ನಾನ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವಮ
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.
ಶೀಸೆ 1ರ ಕ್ರಯ ರೂಪ್ಯ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂದಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಶೋಪುಗಳಲ್ಲಿ ದೊರಕುವದು.

ಸಬ್ ಏಜಂಟರು ಬೇಕಾಗಿವೆ.

STANY BROTHERS
Sole Agents
C. M. C's, Toothache
Specific, Mangalore

ದಿವ್ಯಾಂಜನ. Divyanjan. (*Regd.*)

ಗುಣ ಬಾರದಿದ್ದರೆ ಹಣ ಪರತು.

ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈ ಕಾಲು ಬಾತು ಬರುವುದು, ಉಳುಕು, ಉರಿ, ಶಿರೋಘಾತ ಇವೇ ಮೊದಲಾದವುಗಳ ಮೇಲೆ ರಾಮಬಾಣ ಮುಲಾಮು ಆಗಿರುತ್ತದೆ. ಕ್ರಯ ಬಾಕ್ಸಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ. ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡು ಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕಲಾದೀತು. ಏಜಂಟರು ಬೇಕಾಗಿರುತ್ತಾರೆ. ಇಡೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:— ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲಿಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ರಾತ್ರೆ ಕಥೆಗಳು.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೆ.

“ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್” ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಮಾಡಿದೆ. 1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಭಟ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಆತುರವೆಂಬ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಬಹು ಮಧುರ ವಾಕ್ಯದಿಂದ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾಂತರದಲ್ಲಿ ಚಿತ್ರಕಥಾಚಮತ್ಕಾರಶೋಭಿತವಾಗಿ ಶುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸಮಸ್ತರಿಗೂ ಉಪಯೋಗವಾಗಿರುವ ಗಂಭೀರ ಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸುಲಭವಾಗಿ ತಿಳಿಯಬರುವದು. — ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿರುತ್ತದೆ. ಉಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ. ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು 6 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ “ಲಾ” ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 408

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X | ಮಂಗಳೂರು ತಾ 22ನೇ ದಶಂಬರ ಶುಕ್ರವಾರ 1916. | ಸಂಚಿಕೆ 50

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕು ರಷ್ಟು ಏರಿರುವದಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು.

ದೊಡ್ಡ ಸ್ಸಾಜು ೩ ಆಣೆ ಕ್ರಯದ

ಅವ್ವಲ್ ಪೆನ್ಸಿಲು ಸಹಿತ ಆಣೆ 0—10—0

ಚಿಕ್ಕದ್ದು ... ... 0—6—0

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಕಾವ್ಯಗಳು.

ಇದರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಲ್ಲಿರುವ ಪ್ರತಿಯೊಂದು ಶ್ಲೋಕಕ್ಕು ಪದಚ್ಛೇದ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಧ್ವನ್ಯರ್ಥ ವಿಶೇಷಾಂಶಗಳು ವಿಶದವಾಗಿ ಬರೆದಿವೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂದಿರುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು	3—12—0
ಮೇಘಸಂದೇಶ ಪೂರ್ತ	2—0—0
ಕುಮಾರಸಂಭವ 1, 2ನೇ ಸರ್ಗ	1—4—0
ಕಿರಾತಾರ್ಜುನೀಯ ಪ್ರಥಮ ಸರ್ಗ	0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಕೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦ ಹಾಸ್ಲು ೬ ಆಣೆ.

ವಿಳಾಸ:—ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

Just out! | 2nd Edition. | 167 pages!

1001 GEMS

OF

HINDU RELIGIOUS THOUGHT.

Gleaned from the written works and spoken words and teachings of ancient and modern Hindu Saints Sages and preceptors.

By

PARARY KUNHI CHANDU.

Price: 1—0—0.

Apply to—M. T. A. SHARADA PRESS,

Car Street, Mangalore.

OR TO THE AUTHOR, *Thalayi, Tellicherry.*

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	336,227—9—4
Reserve Fund	40,442—8—0

Besides the uncalled capital of Rs. 25,000/- 25 %. of the net profits are added annually to the Reserve Fund. Rs. 28,485/- have been invested in Government Paper of the face value of Rs. 29,300/-

Dividends of not less than 6 %. paid during the past years and a bonus of 1 %. to 2 %. paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½ %. respectively at the discretion of the managing committee.

Short-notice Deposits requiring one weeks notice of withdrawal after one month received @ 2½ %. per annum at the discretion of the managing committee.

urrent Deposit Account opened free of charge.

Svings a k Account opened for any sum not less than 4 As. and multiples thereof and interest paid @ 4⅜ %.

L ns granted on proper securities and pledges.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	225,000—0—0
ಆಗತ ಮೂಲ ಧನವು „	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	336,227—9—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಪಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರದ ಧರ್ಮ್ಯಶಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st. December 1916.

P. Gopal Naik,
Secretary.

ಅನುಭವಸಿದ್ಧವಾದ ಔಷಧಗಳು.

೧. ಕುಂತಳಾವಂಪ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೦ ತಾಮ್ರ ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯಲ್ಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಔಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮರ್ಕ್ಷಯ, ಕಫ, ಶ್ವಾಸಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಸ್ಖಲನ, ಮೂತ್ರದಲ್ಲಿ ಧಾತುಪತನ, ದುಸ್ಸಂಸರ್ಗಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುದ್ಗರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ದಿಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸರ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ಡಬ್ಬಿಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೧ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಿಂದ ಯೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., ***Ayurvedic Chemists,***
Vepery Post, MADARS

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ವಕೀಲರವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ| ಜೋಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಒಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೆ. ಟಿ. ಕಾರ್ ಬ್ರದರ್ಸ್, ಉಡುಪಿ,

ಪ್ರಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಸಂಪತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ದಸ್ತಾವೇಜನ್ನು ಸಂಪ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ರಮ ಪ್ರಕಾರ ಕೂಡಲೆ ಹಣವನ್ನು ವಿಮೆದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟೆನು. ಇಂಥ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ರಮ ಪ್ರಕಾರ ಹಣವನ್ನು ವಿಮೆದಾರರ ಮನೆಗೆ ತಂದುಕೊಡುವಂಥದ್ದು ಈ ಕಂಪೆನಿಯ ಮುಖ್ಯಂಶ ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ಸವಿಕಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈ ಕಾಲುಗಳು ಕಿರಿದಾಗೋಣ, ನೆಗಡಿಯಿಂದ ಮೂಗು ಸುರಿಯೋಣ ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಕುಡಲಾಹಿ, ಜಿಲ್ಲಾ ಮುರ್ಶಿದಾಬಾದ, ಬರಿಯುವದೇನಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಖಾತ್ರಿಪೂರ್ವಕ ಹೇಳುವದೇನಂದರೆ:—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ಯಾವದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ."

ಏಜಂಟರು:— ಊಲನ್ ವರ್ಕ್ಸ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಎಗ್ಜಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12—0—0, 5—0—0, 3—0—0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ಡಬ್ಬಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ, ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ಸರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳಿಪು ಹೋಗುವುದು, ಉರಿಯುವುದು ಮುಂತಾದ್ದೆಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು, ಮೂತ್ರ ನಿಲ್ಲಿಸಿ, ಮೂತ್ರವು ಬೆಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯುರವೇನ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಸ್ತ ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೆನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತದಲ್ಲಿ ವಿಕರಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ಮಿಶ್ರಿಸಿ ಉತ್ತಮ ಮಾಡುವದಕ್ಕಿಂತ ಕೇಡನ್ನುಂಟುಮಾಡುತ್ತವೆ. ಮತ್ತು ಶಾಸ್ತ್ರೀಕ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾಡಲ್ಪಟ್ಟದು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ದೇಹದ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡತಕ್ಕ ಸಾಬೂನುಗಳಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪಾಲ್ ಹಾಸಲು ಬೇರೆ ಬೀಳುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರತ್ನಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ರೈಲ್ವೆ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ. ೫ ವರುಷಗಳು ಗ್ಯಾರಂಟಿ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬೆಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇದಕ್ಕಿದೆ ಎಂದು ನಿಜವಾಗಿ ಹೇಳುತ್ತೇವೆ. ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ, ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೩ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಚಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 [illegible], ಮದರಾಸ್.

ಸ್ವದೇಶಾಭಿಮಾನಿ.

ಮಂಗಳೂರು ಶಕ ೧೮೩೮ ನಳ ಮಾರ್ಗಶೀರ್ಷ ಬ. ೧೨ ಶುಕ್ರವಾರ.

ಸ್ವದೇಶಾಭಿಮಾನಿ.

ಬರುವ ತಾ. ೨೯ನೆಯ ಶುಕ್ರವಾರದ ಸಂಚಿಕೆಯು ಹೊರಟಲ್ಲಿ ನಮ್ಮ ಸ್ವದೇಶಾಭಿಮಾನಿಗೆ ಈಸ್ವರನ ದಯೆಯಿಂದ ಹತ್ತು ವರ್ಷಗಳು ದಾಟುವವು. ಮುಂದಿನ ಹನ್ನೊಂದನೆಯ ವರ್ಷದಿಂದ ಕೆಲವು ಪರಿವರ್ತನೆಗಳನ್ನು ಮಾಡಬೇಕಾಗಿ ಬಂದಿದೆ. ಆ ವಿಷಯದಲ್ಲಿ ಕೆಲವು ಮಾತುಗಳನ್ನು ಕೆಳಗೆ ವಿವರಿಸುವೆವು.

ಈ ವರ್ಷದ ಅಂತ್ಯದಲ್ಲಿ ಅಥವಾ ಬರುವ ಹೊಸ ವರ್ಷದ ಸುರುವಿನಲ್ಲಿ ಯುರೋಪದ ಮಹಾ ಯುದ್ಧವು ಮುಗಿದು ಲೋಕದಲ್ಲಿ ಶಾಂತತೆಯುಂಟಾದೀತೆಂಬ ಭರವಸೆಯು ನಮಗಿತ್ತು. ಆದರೆ ಯುದ್ಧದ ವರ್ತಮಾನಗಳನ್ನು ಕೇಳುವಾಗ ಅದು ಬೇಗನೆ ಮುಗಿದೀತೆಂದು ಕಾಣುವುದಿಲ್ಲ. ಈ ಯುದ್ಧದ ಪರಿಣಾಮವು ರಣಭೂಮಿಯ ಮೇಲೆ ಹೆಚ್ಚೆಂದರೆ ಯುರೋಪಖಂಡದ ಮೇಲೆ ಮಾತ್ರ ಉಂಟಾಗಿದೆಂತಲ್ಲ, ಸಾಮಾನ್ಯವಾಗಿ ಇಡೀ ಜಗತ್ತೇ ಇದರಿಂದ ಆವರಿಸಲ್ಪಟ್ಟಿದೆನ್ನಬಹುದು. ಮಹಾ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಸೇರಿದ ರಾಷ್ಟ್ರಗಳಿಗೆ ಹೆಚ್ಚಿನ ಆಪತ್ತುಗಳು ಸಂಭವಿಸಿರುವಂತೆ ತಟಸ್ಥ ರಾಷ್ಟ್ರಗಳಿಗೂ ಹೆಚ್ಚಿನ ಅನಾನುಕೂಲತೆಗಳು ಒದಗಿವೆ. ಈ ಯುದ್ಧದಿಂದ ಜಗತ್ತಿನ ಎಲ್ಲ ಭಾಗಗಳಲ್ಲಿ ಮುಖ್ಯವಾಗಿ ಸಂಭವಿಸಿದ ಒಂದು ವಿಪತ್ತು ಯಾವುದೆಂದರೆ— ವ್ಯಾಪಾರದ ದುರವಸ್ಥೆಯು. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗತಕ್ಕ ಸಾಮಾನುಗಳು ಬೇಕಷ್ಟು ಹೋಗುವುದಿಲ್ಲ; ಹೋಗುವವೂ ಸರಿಯಾಗಿ ತಲಪುವುದಿಲ್ಲ; ತಲಪಿದರೂ ಅವುಗಳ ಕ್ರಯವು ಮೊದಲಿನದಕ್ಕೂ ಈಗಿನದಕ್ಕೂ ಅಜಗಜಾಂತರದ್ದು. ಆಯಾ ದೇಶದಲ್ಲಿ ಉತ್ಪನ್ನವಾಗತಕ್ಕ ಸರಕುಗಳ ಬೆಲೆ ಕೂಡ ಯುದ್ಧವು ಪ್ರಾರಂಭವಾಗುವುದಕ್ಕಿಂತ ಮೊದಲು ಇದ್ದಂತೆ ಇಲ್ಲ, ಎಷ್ಟೋ ಪ್ರಮಾಣದಿಂದ ಅಧಿಕವಾಗಿದೆ. ಎಂದ ಮೇಲೆ ಬೇರೆ ದೇಶಗಳಿಂದ—ವಿಶೇಷತಃ ವಿಲಾಯಿತಿಯಿಂದ ಬರುವ ಸಾಮಾನುಗಳ ಕ್ರಯವು ಹೆಚ್ಚಾದರೆ ಅದರಲ್ಲಿ ಆಶ್ಚರ್ಯವುಂಟೆ? ವ್ಯಾಪಾರದ ಈ ದುರವಸ್ಥೆಯನ್ನು ನಾವು ಮಾತ್ರ ಈ ರೀತಿಯಿಂದ ವರ್ಣಿಸಿದ್ದೇವೆಂತಲ್ಲ, ಪೇಟೆಗಳಲ್ಲಿ ಯಾವ ಜಿನಸನ್ನು ತೆಕ್ಕೊಳ್ಳುವವರಿಗೂ ಮೇಲೆ ವರ್ಣಿಸಿದ ಸಂಗತಿಗಳು ಅಕ್ಷರಶಃ ಸತ್ಯವಿರುವವೆಂತ ಕಂಡು ಬಂದೀತು. ಇಂಥ ಸ್ಥಿತಿಯಲ್ಲಿ ಛಾಪಖಾನೆಯಂಥ ಸಂಸ್ಥೆಯನ್ನು ಯಥಾಪೂರ್ವ ನಡಿಸಿಕೊಂಡು ಬರುವುದು ಸುಲಭಸಾಧ್ಯವಲ್ಲೆಂತ ಹೇಳಬೇಕಾಗುತ್ತದೆ. ಯಂತ್ರ, ಮೊಳೆ ಮೊದಲು ಮಾಡಿಕೊಂಡು ಕಾಗದದ ವರೆಗೆ ಛಾಪಖಾನೆಯ ಎಲ್ಲ ಸಾಮಾನುಗಳು ವಿಲಾಯತಿಯಿಂದ ಬರಬೇಕಾಗುತ್ತವೆ. ಹೊಸ ಛಾಪಖಾನೆಗೆ ಬೇಕಾದ ಎಲ್ಲ ಸಾಹಿತ್ಯಗಳನ್ನು ಕೊಂಡುಕೊಳ್ಳುವುದು ಕಷ್ಟ ಸಾಧ್ಯವಾದುದೆಂತ ಯುದ್ಧಕ್ಕಿಂತಲೂ ಮೊದಲಿನಿಂದ ಅಸ್ತಿತ್ವದಲ್ಲಿರುವ ಮುದ್ರಣಾಲಯಗಳಿಗೆ ಯಂತ್ರ, ಮೊಳೆ ಮುಂತಾದವುಗಳನ್ನು ಈ ಇಕ್ಕಟ್ಟಿನ ಸ್ಥಿತಿಯಲ್ಲಿ ಕೊಂಡುಕೊಳ್ಳುವುದು ಅಗತ್ಯವಿಲ್ಲೆಂಬುದು ನಿಜವಿದ್ದರೂ ಕಾಗದವು ದುರ್ಲಭವಾಗಿ ಒಂದಕ್ಕೆ ನಾಲ್ಕರಷ್ಟು ಕ್ರಯವು ಹೆಚ್ಚಾಗಿದೆ; ಅದೂ ಒಳ್ಳೇ ತರದ್ದು ಸಿಗುವುದಿಲ್ಲ; ಸಾಕಷ್ಟಂತು ಇಲ್ಲವೇ ಇಲ್ಲ; ತಕ್ಕ ಸಮಯಕ್ಕೆ ಸಹ ಕೈಗೆ ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹೊಸತ್ತಾದರೇನು ಹಳೆದಾದರೇನು, ಮುದ್ರಣಾಲಯಗಳ, ದಿನ-ವಾರಪತ್ರಿಕೆಗಳ ಜೀವನಕ್ರಮವು ಬಹು ನಾಜೂಕಾಗುತ್ತ ಬಂದಿದೆ.

ಇದೇ ಕಾರಣದಿಂದ ಮುಂಬಯಿ ಪಟ್ಟಣದಂಥ ವ್ಯಾಪಾರದ ಮಾತೃ ಭೂಮಿಯಲ್ಲಿಯ 'ಟಾಯಿಮ್ಸ್ ಒಫ್ ಇಂಡಿಯಾ,' 'ಕ್ರೊನಿಕಲ್' ಮೊದಲಾದ ಪತ್ರಿಕೆಗಳು ಇಂತಿಷ್ಟಕ್ಕೆ ತಮ್ಮ ಪತ್ರಿಕೆಗಳನ್ನು ಮಾರಬೇಕೆಂಬುದಾಗಿ ತಂತಮ್ಮೊಳಗೆ 'ಕರಾರನ್ನು' ಮಾಡಿಕೊಂಡಿರುವವು. ಅಲ್ಲದೆ ಪೂಣೆಯ ಸುಪ್ರಸಿದ್ಧ 'ಕೇಸರಿ' ಪತ್ರಿಕೆಯ 'ಪರಿಶಿಷ್ಟ' ಕಾಗದವು ಕಡಿಮೆಯಾಗಿ ಚಂದಾ ದರದಲ್ಲಿ ಕೆಲವು ರಕಮು ಹೆಚ್ಚಿಸೋಣಾಗಿದೆ. ಇಂಥ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಈ ಯುದ್ಧ ಸಮಯದಲ್ಲಿ ಪ್ರತಿ ಒಂದು ಒಡವೆಗೆ ಕ್ರಯವು ಹೆಚ್ಚಾಗಿರುವಾಗ ಯಾವುದರ ಆಹಾರವು ಕಿಂಬಹುನಾ ಶರೀರವು ಸಂಪೂರ್ಣವಾಗಿ ಪರದೇಶದಿಂದಲೇ ಬರಬೇಕೊ ಅಂಥ ವರ್ತಮಾನ ಪತ್ರಿಕೆಗಳ ಸಾಂಪತ್ತಿಕ ಪರಿಸ್ಥಿತಿಯು ಎಂದಿನಂತೆಯೆ ಇರಬಹುದೆಂದು ನೆನೆಸುವುದು ವಿಚಾರ ದೃಷ್ಟಿಗೆ ಒಪ್ಪಲಾಗದು. ಎಂದ ಮೇಲೆ ಮೇಲಿನ ಪತ್ರಿಕೆಗಳ ವಿಷಯದಲ್ಲಾಗಲಿ ಅದೇ ವರ್ಗಕ್ಕೆ ಸೇರಿದ ಬೇರೆ ಪತ್ರಿಕೆಗಳ ವಿಷಯದಲ್ಲಾಗಲಿ ಪ್ರತಿಕೂಲ ಅಥವಾ ಔದಾಸೀನ್ಯದ ಅಭಿಪ್ರಾಯಪಡಲಿಕ್ಕೆ ಯಾರಿಗೂ ಎಡೆಯಿಲ್ಲ.

ಆದರೆ ಬೇರೆ ಕೆಲವು ಪತ್ರಕಾರರು ಸರಳವಾದ ಈ ಮಾರ್ಗವನ್ನಾಶ್ರಯಿಸದೆ ಬೇರೆ ಉಪಾಯವನ್ನು ಮಾಡಿರುವರು. ಕೆಲವರು ಲೆಕ್ಕಕ್ಕೆ ಚಂದಾಹಣವನ್ನು ಹೆಚ್ಚಿಸದೆ ಇಲ್ಲವಾದರೂ ಒಂದು ವಾರಕ್ಕೆ ೧೦ ಪೃಷ್ಠಗಳನ್ನು, ಇನ್ನೊಂದು ವಾರಕ್ಕೆ ಆರೇ ಪೃಷ್ಠಗಳನ್ನು, ಬೇರೊಂದು ವಾರಕ್ಕೆ ನಾಲ್ಕು, ಅಲ್ಲವಾದರೆ ಆಕಾರದಲ್ಲಿ ನ್ಯೂನತೆ ಈ ರೀತಿಯಿಂದ ಎಷ್ಟೋ ಉಪಾಯಗಳನ್ನು ನಡಿಸಿ ಯುದ್ಧದ ದೆಸೆಯಿಂದ ಏರಿದ ಧಾರಣೆಯೊಡನೆ ಒಂದು ತರದ ಯುದ್ಧವನ್ನೇ ನಡಿಸಿದ್ದಾರೆ! ಇದು ಅವರ ತಪ್ಪೆಂತ ನಮ್ಮ ಅಭಿಪ್ರಾಯವಲ್ಲ. ಚಂದಾಹಣವನ್ನು ಹೆಚ್ಚಿಸದೆ ಪತ್ರಿಕೆಯನ್ನು ಚಿಕ್ಕದಾಗಿ ಮಾಡುವುದು ಮತ್ತು ಪತ್ರಿಕೆಯನ್ನು ಇದ್ದ ಸ್ಥಿತಿಯಲ್ಲಿಯೆ ಇಟ್ಟು ಕಾಲಪ್ರಾಪ್ತವಾದ ನಿರ್ವಾಹಕ್ಕೆ ಸಾಕಷ್ಟು ಚಂದಾಹಣವನ್ನು ಏರಿಸುವುದು ಈ ಎರಡು ಉಪಾಯಗಳಲ್ಲಿ ದೇಶಹಿತಕ್ಕಾಗಿ ಬೇಕಾಗಿರುವ ವರ್ತಮಾನ ಪತ್ರಿಕೆಗಳ ಮಹತ್ವವನ್ನು ನೋಡುವಾಗ ಎರಡನೆದೇ ನಮಗೆ ರುಜುವಾದ ದಾರಿಯೆಂದು ತೋರುತ್ತದೆ. ಮೇಲಿನ ಎರಡು ಮಾರ್ಗಗಳಲ್ಲಿ ಅದು ಒಳ್ಳೇದೊ ಇದು ಒಳ್ಳೇದೊ ಎಂಬ ವಿಷಯವನ್ನು ನಿರ್ಣಯಿಸುವುದು ಅಥವಾ ಅವುಗಳಲ್ಲಿ ತಾರತಮ್ಯವನ್ನು ಹೇಳುವುದು ಇದು ಯಾರೊಬ್ಬನ ಕೆಲಸವಲ್ಲ. ಅದು ಅವರವರ ಅಭಿರುಚಿ, ವ್ಯವಸಾಯಪ್ರಿಯತೆ ಮತ್ತು ಸುತ್ತುಮುತ್ತಲಿನ ಪರಿಸ್ಥಿತಿ ಈ ಎಲ್ಲ ಸಂಗತಿಗಳ ಮೇಲೆ ಹೊಂದಿಕೊಂಡಿರುವುದರಿಂದ ನಾವು ಈ ಬಗ್ಗೆ ಇದಕ್ಕಿಂತ ಹೆಚ್ಚು ಶಬ್ದಗಳನ್ನು ಬರೆಯುವುದಿಲ್ಲ.

ಇರಲಿ; ಮೇಲೆ ಹೇಳಿದ ಎಲ್ಲ ವಿಷಯಗಳನ್ನು ಆಲೋಚಿಸಿ ಸ್ವದೇಶಾಭಿಮಾನಿಯ ಬರುವ ಹನ್ನೊಂದನೆಯ ವರ್ಷದಿಂದ ಚಂದಾಹಣದಲ್ಲಿ ಬರೆ ನಾಲ್ಕು ಆಣೆಗಳನ್ನು ಹೆಚ್ಚಿಸಬೇಕೆಂದು ನಿರ್ಣಯಿಸಿದ್ದೇವೆ. ಇದರಿಂದ ನಮ್ಮ ಪ್ರಿಯ ಚಂದಾದಾರರಿಗೂ ಹೊರೆಯಾಗಬಾರದು, ನಮ್ಮ ಆಹಾರಕ್ಕೂ ತೊಡಕು ಬರಬಾರದು; ಇದೇ ನಮ್ಮ ಮನೋರಥವು. ಇಷ್ಟರವರೆಗೆ ಚಂದಾ ೧ ರೂ. ೪ ಆ. ಮತ್ತು ಟಪ್ಪಾಲು ಹಾಸಲು ಸೇರಿ ೨ ರೂ. ೧ ಆ. ಆಗುತ್ತಿತ್ತು. ಈಗ ಬರುವ ವರ್ಷದಿಂದ ೪ ಆ. ಹೆಚ್ಚಿಸಿದ್ದಲ್ಲಿ ಚಂದಾ ೧ ರೂ. ೮ ಆ. ಮತ್ತು ಟಪ್ಪಾಲ ಹಾಸಲು ಕೂಡಿಸಿ ೨ ರೂ. ೫ ಆ. ಆಗುತ್ತದೆ. ನಾವೇ ವಿ. ಪಿ. ಮಾಡಿ ಕಳುಹಿಸುವುದಾದರೆ ವಿ. ಪಿ. ಖರ್ಚು ಕೂಡಿ ೨ ರೂ. ೭ ಆ. ಆದೀತು. ಚಂದಾದಾರರು ಮಣಿಆರ್ಡರಿನಿಂದ ಕಳುಹಿಸುವಾಗ ೨ ರೂ. ೫ ಆ. ರಕಮನ್ನು ಕಳುಹಿಸಿದರೆ ಸಾಕು.

ಯುದ್ಧವು ಪ್ರಾರಂಭವಾಗಿ ೧-೧½ ವರುಷದ ಸಮಯ ದಾಟುವ ತನಕ ಛಾಪಖಾನೆಯವರಿಗೆ ಕಾಗದದ ಅಷ್ಟೊಂದು ತೊಂದರೆಯು ಬರಲಿಲ್ಲ. ಎರಡನೆಯ ವರ್ಷದ ಕೊನೆಯ ಭಾಗದಲ್ಲಿ ಮತ್ತು ಮುಂದೆ ಹಿಂದೂಸ್ಥಾನದೊಳಗಿನ ಕಾಗದದ ಮಾರ್ಕೇಟಿನಲ್ಲಿ ಅದರ ಕ್ರಯವು ಹೆಚ್ಚಾಯಿತು; ಪುರವಠೆಯು ಕಡಿಮೆಯಾಯಿತು; ಮತ್ತು ಬೇಕಾದಂಥ ಮಾಲು ಸಿಗದಂತಾಯಿತು. ಅಂದಿನಿಂದಲೆ ಎಷ್ಟೋ ಪತ್ರಕಾರರು ತಮ್ಮ ಪತ್ರಿಕೆಗಳ ದರವನ್ನು ಹೆಚ್ಚಿಸಿದ್ದಾರೆ. ಆದರೆ ಈ ಯುದ್ಧವು ಮುಗಿದು ಪೂರ್ವ ಸ್ಥಿತಿಯು ಬೇಗನೆ ಬಂದೀತೆಂಬ ನಿರೀಕ್ಷಣೆಯಿಂದಲೆ ಇಷ್ಟರ ವರೆಗೆ ನಾವು ಚಂದಾ ವಿಷಯದಲ್ಲಿ ಯಾವ ಬದಲಾವಣೆಯನ್ನೂ ಮಾಡಿದ್ದಿಲ್ಲ; ಪರಂತು ನಮ್ಮ ನಿರೀಕ್ಷಣೆಯಂತೆ ಅದು ಬೇಗನೆ ಮುಗಿಯುವ ಸಂದರ್ಭವು ಕಾಣುವುದಿಲ್ಲಾದುದರಿಂದ ಚಂದಾದಲ್ಲಿ ನಾಲ್ಕಾಣೆಯನ್ನು ನಮಗೆ ಹೆಚ್ಚಿಸಬೇಕಾಗಿ ಬಂದಿದೆ. ಈ ಹೆಚ್ಚಿಸಿದ ರಕಮಿನ ಪ್ರಯೋಜನವನ್ನು ಪತ್ರಿಕೆಯ ಸುಂದರವಾದ ಆಕಾರ, ಉಪಯುಕ್ತ ವಿಷಯಗಳ ವಿವೇಚನೆ ಮುಂತಾದ ರೂಪದಿಂದ ವಾಚಕರಿಗೆ ಕೊಟ್ಟೇವು. ಬರುವ ವರುಷದಿಂದ ಯಾವ ಯಾವ ಸುಧಾರಣೆಗಳನ್ನು ಮಾಡಬೇಕೆಂತಿದ್ದೇವೊ ಅವನ್ನು ಆ ವರ್ಷದ ಸುರುವಿನಲ್ಲಿ ತಿಳಿಸುವೆವು. ಕೊನೆಗೆ ನಮ್ಮ ಪ್ರಿಯ ವಾಚಕ ವರ್ಗಕ್ಕೆ ನಾವು ವಿನಂತಿ ಮಾಡುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ಇದೊಂದೇ ವಾರ ಪತ್ರಿಕೆಯಾದುದರಿಂದ ಸ್ವಹಸ್ತ ಪರಹಸ್ತದಿಂದ ಸಹಾಯ್ಯವನ್ನು ಮಾಡಬೇಕಾಗಿ ಕೇಳಿಕೊಳ್ಳುವೆವು. ಸ್ವದೇಶಾಭಿಮಾನಿಯು ವಾರ ವಾರಕ್ಕೆ ಹೊಸ ಹೊಸ ಉತ್ಸಾಹದಿಂದ ತಮ್ಮ ಕೈಗೆ ಬಂದು ಸ್ನೇಹಪೂರ್ವಕ ಉಪ್ಪವಚನಗಳನ್ನು ಮಾತನಾಡುವಾಗ ಆ ಸ್ನೇಹಿತನ ಅಭಿವೃದ್ಧಿಯನ್ನು ಬಯಸ

ವಾಚಕರು ಎಂದೂ ಕೋರದೆ ಇರಲಾರರು. ಬಾಲ್ಯದ ಹತ್ತು ವರ್ಷಗಳು ಕಳೆದು ಮುಂದಿನ ವಯಸ್ಸು ಬರುವಾಗ ಆ ಉಪಯೋಗಕ್ಕೆ ಅಪ್ಪನಿಗೆ ವಯಸ್ಸಿಗೆ ತಕ್ಕಂತೆ ಆಹಾರವು ಸ್ವಲ್ಪ ಹೆಚ್ಚು ಬೇಕಾಗುವುದು ಸೃಷ್ಟಿ ನಿಯಮಕ್ಕೆ ಒಳಪಟ್ಟ ಸಂಗತಿಯೇ ಸರಿ. ಈ ಔಚಿತ್ಯದ ದೃಷ್ಟಿಯಿಂದ ಆಲೋಚಿಸಿದರೂ ನಮ್ಮ ವಾಚಕರಿಗೆ ಇದೊಂದು ಹೊರೆಯಾಗಲಿಕ್ಕಿಲ್ಲ. ಅಸ್ತು ಇನ್ನು ಮುಂದೆ ಸ್ವದೇಶಾಭಿಮಾನಿಯು ದೇಶ ಸೇವೆಯ ಯಾವ ಯಾವ ಮಾರ್ಗಗಳನ್ನು ಹೇಗೆ ಹೇಗೆ ಆಕ್ರಮಿಸಲು ನಿರ್ಣಯಿಸಿದೆಂಬದನ್ನು ವಾಚಕ ಮಹಾಶಯರ ಗೋಚರಕ್ಕೆ ಬೇಗನೆ ತಂದು ಕೊಟ್ಟೇತು. ಈ ಪವಿತ್ರ ಕಾರ್ಯದಲ್ಲಿ ಸರ್ವನಿಯಂತನಾದ ಈಶ್ವರನ ಅನುಗ್ರಹವೂ, ಕನ್ನಡಿಗರ ಪ್ರೋತ್ಸಾಹವೂ ಇವೆರಡೇ ನಮಗೆ ಬೇಕಾದುದು. ಅವನ್ನೇ ನಾವು ನಿರೀಕ್ಷಿಸುವೆವು.

ನ್ಯಾಯವಿಧಾಯಕ ಸಭೆಗಳಲ್ಲಿ ಪ್ರಜಾಪ್ರತಿನಿಧಿ ಮೆಂಬರರ ಕಾರ್ಯಭಾರ.

ಪ್ರಜೆಗಳ ಪ್ರತಿನಿಧಿಗಳಾಗಿ ನ್ಯಾಯವಿಧಾಯಕ ಸಭೆಗಳಿಗೆ ಹೋಗುವ ಮೆಂಬರುಗಳ ಜವಾಬ್ದಾರಿಯು ತುಂಬಾ ಇದೆ. ಅವರು ಯಾವ ಜಿಲ್ಲೆಗಳ ಅಥವಾ ಸಂಸ್ಥೆಗಳ ಕಡೆಯಿಂದ ಪ್ರತಿನಿಧಿಗಳಾಗಿ ಬರುವರೋ ಆ ಕಡೆಗೆ ಸರಕಾರದ ರಾಜಕಾರ್ಯದಲ್ಲಿ ಯಾವ ಕುಂದುಕೊರತೆಗಳು ಕಂಡು ಬರುತ್ತವೆಯೋ ಅವನ್ನು ಸರಕಾರದ ಕಣ್ಣೆದುರಿಗೆ ಸವಾಲುಗಳ ಮೂಲಕ ಇಡುವುದು ಈ ಮೆಂಬರರ ಪ್ರಥಮ ಕರ್ತವ್ಯ. ಹೀಗೆ ಸರಕಾರಕ್ಕೆ ಈ ಕುಂದುಕೊರತೆಗಳನ್ನು ತಿಳಿಸುವ ಸವಾಲುಗಳು ಸಭೆಯು ಜರಗುವುದಕ್ಕೆ ಸುಮಾರು ೩ ವಾರಗಳ ಮುಂಚಿತವಾಗಿ ಗವರ್ನರವರ ಕೈಸೇರಬೇಕು. ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡುವುದರಿಂದ ರಾಜಕೀಯ ವಿಷಯಗಳು ಹೊರಬೀಳುವುದು. ಪ್ರಜಾಜನರ ಒಳ್ಳಿತಕ್ಕೆ ಹಾನಿ ತರಬಹುದು ಎಂಬ ಶಂಕೆಯುಂಟಾದರೆ ಗವರ್ನರವರು ಈ ಪ್ರಶ್ನೆಗಳನ್ನು ಸಭೆಯ ಎದುರಿಗೆ ತಾರದೆ ಇರುವ ಅಧಿಕಾರವು ಅವರಿಗೆ ಇದೆ. ಒಮ್ಮೆವೇಳೆ ಆ ರೀತಿಯ ಬಾಧಕವಿಲ್ಲದಿದ್ದರೆ ಅದರಲ್ಲಿ ಶಬ್ದಸಂಯೋಜನವು ಸರಕಾರದ ಗೌರವಕ್ಕಾಗಲಿ ರಾಜಕಾರ್ಯಕ್ಕಾಗಲೀ ಸರಿಯಾದ್ದಲ್ಲವೆಂದು ಕಂಡರೆ ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಸರಕಾರದವರು ಸೂಚಿಸುತ್ತಾರೆ. ಅಂಥ ಶಬ್ದಜೋಡಣೆಯನ್ನು ಮೆಂಬರರು ಒಪ್ಪಿದರೆ ಆ ಮಂಜೂರಾದ ಪ್ರಶ್ನೆಗಳು ಯಾವ ಡಿಪಾರ್ಟಮೆಂಟಿಗೆ ಸಂಬಂಧಪಟ್ಟಿರುವವೊ ಅವುಗಳಿಗೆ ಕಳುಹಿಸಲ್ಪಟ್ಟು ಅಗತ್ಯವಿರುವ ಅನುಭವವನ್ನು ಆಯಾ ಇಲಾಖೆಯಿಂದ ತರಿಸಲಾಗುವುದು. ಆ ಅನುಭವವು ಬರುವುದಕ್ಕೆ ಸಾಕಷ್ಟು ಸಮಯವಿಲ್ಲವಾದರೆ ಆ ಪ್ರಶ್ನೆಯನ್ನು ಮುಂದಿನ ಸಭೆಗಳಲ್ಲಿ ಕೇಳುವಂತೆ ಆ ಮೆಂಬರನಿಗೆ ಸೂಚನೆ ಸಿಕ್ಕುವುದು. ಬೇಕಾದ ಮಾಹಿತಿ ಬಂದಿದ್ದರೆ ಅದನ್ನು ಆಧರಿಸಿ ಆಯಾ ಪ್ರಶ್ನೆ ಮತ್ತು ಅದರ ಉತ್ತರ ಕೂಡಿ ಒಟ್ಟಿಗೆ ಅಚ್ಚಾದ ಒಂದು ಪುಸ್ತಕವು ಸಭೆ ಜರಗುವ ಒಂದು ತಾಸು ಮುಂಚಿತವಾಗಿ ಪ್ರತಿಯೊಬ್ಬ ಮೆಂಬರನಿಗೂ ಸಿಕ್ಕುವುದು. ಸಭೆ ಆರಂಭಿಸಿದೊಡನೆ ಗವರ್ನರರು ಅಧ್ಯಕ್ಷರಾಗಿಯೂ ಸರಕಾರಿ ಮೆಂಬರರು ಒಂದು ಕಡೆಯಲ್ಲಿಯೂ ಬಿನ್‌ಸರಕಾರಿ ಮತ್ತು ಪ್ರಜಾಪ್ರತಿನಿಧಿ ಮೆಂಬರರೂ ಇನ್ನೊಂದು ಕಡೆಯಲ್ಲಿಯೂ ಕುಳಿತ ನಂತರ ಸರಕಾರದ ಚೀಫ್ ಸೆಕ್ರೆಟರಿಯವರು ಆಯಾ ಮೆಂಬರನ ಹೆಸರನ್ನು ಕರೆದು ಅವನ ಪ್ರಶ್ನೆಯ ನಂಬ್ರವನ್ನು ಓದುವರು. ಉತ್ತರ ಮೊದಲೇ ಅಚ್ಚಾಗಿರುವುದರಿಂದ ಅದು ಅಸಮಾಧಾನಕರವಾದರೆ ಇನ್ನೂ ಹೆಚ್ಚಿನ ಮಾಹಿತಿಯ ಬಗ್ಗೆ ಉಪಪ್ರಶ್ನೆಗಳನ್ನು ಆಯಾ ಮೆಂಬರರು ಸಭೆಯಲ್ಲಿಯೇ ಕೇಳಬಹುದು. ಅದಕ್ಕೆ ಬೇಕಾದ ಮಾಹಿತಿಯು ಸರಕಾರದವರ ಬಳಿಯಲ್ಲಿದ್ದರೆ ಅದನ್ನು ಎದುರಿಗೆ ತರುವರು. ಇಲ್ಲವಾದರೆ ತರಿಸಿಕೊಡಬಹುದೆಂದಾಗಲಿ ಅದು ಅಗತ್ಯವಾಗಿ ಕಂಡುಬರಲಿಲ್ಲವೆಂದಾಗಲಿ ಉತ್ತರ ಕೊಡುವರು. ಈ ಪ್ರಶ್ನೆಗಳ ಉತ್ತರಗಳ ಮೇಲೆ ಸರಕಾರದ ಆಡಳಿತೆಯ ಕ್ರಮವು ಜನರಿಗೆ ಗೊತ್ತಾಗುತ್ತದೆ. ಅಲ್ಲಿ ಹಾಜರಿರುವ ಸರಕಾರಿ ನವುಕರರು ನಿಜವಾಗಿಯೂ ಜನರ ಹಿತಚಿಂತಕರಾಗಿದ್ದರೆ ಅವರ ಉತ್ತರಗಳಲ್ಲಿ ಬೇಕಾದ ಮಾಹಿತಿಯೂ ಸಿಕ್ಕುವುದು; ಮೆಂಬರರು ಆಡಳಿತೆಯಲ್ಲಿ ನ್ಯೂನಾತಿರಿಕ್ತಗಳ ದುರುಸ್ತಿಯಾಗುವುದೆಂದು ನಂಬುಗೆಯ ಮಾತೂ ಹೊರಡುವುದು; ಕೆಲವು ಸಲ ಮೆಂಬರನು ಗೈರ್‌ಮಾಹಿತಿಯಿಂದ ಕೇಳಿದ ಪ್ರಶ್ನೆಯು ನಿಷ್ಪ್ರಯೋಜಕವಾಗಿದ್ದರೆ ಅವನಿಗೆ ಬಿಗಳರು ಬಿಗಳ ಸಾಲೆಯಲ್ಲಿ ಹುಂಟರಿಗೆ ಬಿರುನುಡಿಗಳ ಸಹಸ್ರನಾಮ ಮಾಡಿಸಿದಂತೆ ಮಾಡದೆ ನಯನುಡಿಗಳಿಂದ ಅವನ ತಪ್ಪುಗ್ರಹಿಕೆಯನ್ನು ಸರಿಗೊಳಿಸಲು ಪ್ರಯತ್ನಿಸುವರು. ಆದರೆ ಹೆಚ್ಚಾಗಿ ಈ ಕೌನ್ಸಿಲುಗಳು ಸರಕಾರದವರು ನಡಿಸುವ ಕೆಲಸಗಳ ಮೇಲೆ ಅಂಕುಶವೆಂದು ಅನೇಕ ನವುಕರರ ಅಭಿಪ್ರಾಯವಿದೆ. ಒಂದು ಕಾಲದಲ್ಲಿ ಇಂಥ ಅಂಕುಶಗಳೇನೂ ಇಲ್ಲದೆ ಆಜ್ಞಾನುವರ್ತಿಗಳಾಗಿ ಅಭ್ಯಾಸವು ಬೆನ್ನುಹಿಡಿದು ಬಂದ ಅನೇಕಾನೇಕ ನವುಕರರಿಗೆ ತಮ್ಮ ಆಡಳಿತೆಯಲ್ಲಿ ಕುಂದುಕಗಳನ್ನು ಮೇಲಕ್ಕೆ ಎತ್ತುವ ಈ ಪ್ರಶ್ನೆಗಳು ಮನಸ್ಸಿಗೆ ಒಗ್ಗುವುದಿಲ್ಲ. ಅದಲ್ಲದೆ ಸಿವಿಲ್ ಸರ್ವಿಸು ಎಂದರೆ ಸರಕಾರದ ಚತುರ್ವರ್ಣಗಳಲ್ಲಿ ಮೊದಲನೆಯದು ಎಂದು ಪಾಶ್ಚಾತ್ಯ ಜನರ ಅಭಿಪ್ರಾಯ. ಈ ಸಿವಿಲ್ ಸರ್ವಿಸಿಗೆ ಸೇರಿದವರಲ್ಲಿ ಅನೇಕರಿಗೆ ವಿದ್ಯಾಬಲವೂ ವ್ಯವಹಾರಜ್ಞಾನವೂ ಚೆನ್ನಾಗಿ ಇರುವುದರಿಂದ ಈ ಬ್ರಾಹ್ಮಣತ್ವವು ಒಪ್ಪತಕ್ಕದ್ದೆ. ಆದರೆ ಮನುಷ್ಯನು ಮನುಷ್ಯನಾಗಿರುವಷ್ಟಕ್ಕೆ ಅವನು ಎಂದೆಂದಿಗೂ ತಪ್ಪು ಮಾಡಲಾರನು ಎಂದರೆ ಅವನಲ್ಲಿ ದೇವಾಂಶವನ್ನು ಕಲ್ಪಿಸಿದಂತಾಯಿತು. ಈ ಭೂಸುರತ್ವವು ಸಿವಿಲ್ ಸರ್ವಿಸಿನ ಒಂದು ಭೂಷಣವಾಗಿರುವುದರಿಂದ ಅವರ ಆಡಳಿತೆ ಕ್ರಮದಲ್ಲಿ ಕುಂದುಕಗಳನ್ನು ಕಂಡುಹಿಡಿದು ಬಯಲಿಗೆ ತಂದರೆ ಅವರಲ್ಲಿ ಅಲ್ಪಸ್ವಲ್ಪ ಸಿಟ್ಟು ತಲೆದೋರುತ್ತದೆ. ಹೀಗಾಗಿ ಉತ್ತರಗಳು ಹಲವು ಸಲ ಸಮರ್ಪಕವಾಗುವುದಿಲ್ಲ.

ಇದಲ್ಲದೆ ದಿನೇದಿನೇ ಈ ಸಿವಿಲ್ ಸರ್ವಿಸಿನ ಗುತ್ತಿಗೆ ಸೇರಿದ ಹಲವು ಅಧಿಕಾರಗಳು ಪ್ರಜೆಗಳ ಪೀಡನಕ್ಕೆ ಒಳಪಟ್ಟು ಈ ಸರ್ವಿಸಿನ ಕೈಯಿಂದ ಜಗುಳುತ್ತವೆ. ಇದು ಅವರಿಗೆ ಮನಸ್ಸಿಗೆ ಅಲ್ಪಸ್ವಲ್ಪ ವೇದನೆಯುಂಟುಮಾಡುತ್ತಿವೆ. ಮತ್ತು ಮಗುವು ಆಗಾಗ ರೋದಿಸಿ ಪೀಡಿಸಿದಾಗ ಸಮಾಧಾನಪಡಿಸುವುದಕ್ಕೆ ಕೊಟ್ಟ ಆಟದ ಸಾಮಾನುಗಳಿಂದ ಕ್ಷಣಿಕ ತೃಪ್ತಿಹೊಂದಿ ಇನ್ನೂ ಇನ್ನೂ ಕೇಳುತ್ತಿರುವಂತೆ ಪ್ರಜೆಗಳು ಈ ಅಧಿಕಾರಗಳನ್ನು ಬೇಡಿ ಅವರನ್ನು ಕಾಡುತ್ತಾರೆಂದು ಅನೇಕ ಸರಕಾರಿ ಉದ್ಯೋಗಸ್ಥರ ಅಭಿಪ್ರಾಯ. ಅನೇಕ ಪಾಶ್ಚಾತ್ಯ ಜನಾಂಗಗಳಂತೆ ತಮ್ಮ ರಾಜ್ಯಪರಿಪಾಲನ ಕಾರ್ಯದಲ್ಲಿ ಪ್ರಜೆಗಳು ತಮಗೂ ಒಂದಿಷ್ಟು ಪಾಲನ್ನು ಬೇಡುವುದು ಸ್ವಾಭಾವಿಕವಾದ ಕಾಂಕ್ಷೆಯೆಂದು ಈ ಸರ್ವಿಸಿನವರಿಗೆ ಬೋಧೆಯಾಗುವುದಿಲ್ಲ.

ಈ ಕಾರಣದಿಂದ ಹಲವು ಪ್ರಶ್ನೆಗಳಿಗೆ "ಆ ಅನುಭವವು ಸರಕಾರದವರ ಬಳಿಯಲ್ಲಿ ಇಲ್ಲ" ಅಥವಾ "ಆ ಅನುಭವವನ್ನು ಕೊಡುವುದು ಸರಕಾರದವರಿಗೆ ಉಚಿತವಾಗಿ ಕಂಡುಬರುವುದಿಲ್ಲ" ಎಂದು ಮುಂತಾದ ತಾತ್ಸಾರ ಸ್ವರೂಪದ ಉತ್ತರಗಳು ಹೊರಡುತ್ತವೆ. ಕಳೆದ ಸಭೆಯಲ್ಲಿ ಇಂಥದ್ದೊಂದು ಉತ್ತರವು ಬಂತು. ಕೃಷ್ಣಾ ಮತ್ತು ತುಂಗಭದ್ರೆಯ ನೆರೆಯಿಂದ ಉಂಟಾದ ಹಾವಳಿಯ ಮಿತಿಯೇನು ಎಂದು ಒಂದು ಪ್ರಶ್ನೆ ಕೇಳಿದ್ದಕ್ಕೆ ಬೇಕಾದ ಅನುಭವ ತಮ್ಮಲ್ಲಿ ಇಲ್ಲವೆಂತ ಸರಕಾರದವರು ಮೊದಲು ಹೇಳಿದರು. "ಅದನ್ನು ತರಿಸಬಹುದೇ" ಎಂದಾಗ "ಅಗತ್ಯವೆಂದು ಕಾಣುವುದಿಲ್ಲ" ಎಂದು ಉತ್ತರ ಹೊರಟಿತು. ಸರಕಾರದ ಕಡೆಯಿಂದ ಈ ಉತ್ತರ ಹೊರಡುವಾಗ ಆ ಮೆಂಬರರು ನಿಜವಾಗಿಯೂ ತಮ್ಮ ಮಾತಿನ ಪರಿಣಾಮವೇನೆಂದು ಅರಿಯಲಿಲ್ಲವೆಂದು ಕಾಣುತ್ತದೆ. ಆಗ ಪ್ರಜಾಪ್ರತಿನಿಧಿಗಳಲ್ಲಿ ಮುಂದಾಳಾದ ಒನರೆಬಲ್ ಎಮ್. ರಾಮಚಂದ್ರರಾಯರು ಎದ್ದುನಿಂತು ಬೇಕಾದ ಮಾಹಿತಿಯನ್ನು ತರಿಸುವವರೆಗೆ ಈ ಸಭೆಯನ್ನು ತವಕೂಫ್ ಇಡಬೇಕೆಂದು ಸೂಚಿಸಿದರು. ಅಂದರೆ ಈ ಹಾವಳಿಯು ಆದ ಹಲವು ದಿನಗಳ ನಂತರವೂ ಸರಕಾರದವರಿಗೆ ಪ್ರಜೆಗಳಿಗೆ ಆದ ಹಾನಿಯನ್ನು ವಿಚಾರಿಸುವುದಕ್ಕೆ ಸಮಯ ದೊರಕದೆ ಇರುವುದು ಶೋಚನೀಯವೆಂಬುದನ್ನು ಸರಕಾರದವರಿಗೆ ಸ್ಪಷ್ಟಗೊಳಿಸುವುದೇ ಈ ಠರಾವಿನ ಮುಖ್ಯ ಉದ್ದೇಶವಾಗಿತ್ತು. ಇದು ಆ ಮೆಂಬರರ ಕಣ್ಣಿಗೆ ಅಂಜನದಂತಾಯಿತು. ಕೂಡಲೆ ಅವರು ಬೇಕಾದ ಅನುಭವವನ್ನು ಬೇಗನೆ ತರಿಸಿ ಅದನ್ನು ಪ್ರಕಟಗೊಳಿಸುವುದಾಗಿ ನಂಬುಗೆಯಿತ್ತ ಮೇಲೆ ಒನರೆಬಲ್ ರಾಮಚಂದ್ರರಾಯರು ಸಭೆ 'ಬರಕಾಸ್ತು' ಮಾಡುವ ಠರಾವನ್ನು ಹಿಂದೆಗೆದರು.

ಸರಬರಾಯಿ ಠರಾವು.

ಮದ್ರಾಸು ನ್ಯಾಯವಿಧಾಯಕ ಸಭೆಯ ಕಳೆದ ಮೀಟಿಂಗಿನಲ್ಲಿ ಒನರೆಬಲ್ ಕೆ. ರಾಮಯ್ಯಂಗಾರರು ಸರಕಾರಿ ನವುಕರರಿಗೆ ಕೊಡುವ ಸರಬರಾಯಿಯನ್ನು ಕುರಿತು ತಂದ ಠರಾವಿನ ವಿಷಯವಾಗಿ ವಿಶೇಷ ಚರ್ಚೆಯುಂಟಾಯಿತು. "ಮೇಲಾಫೀಸರರಿಗೆ ಸರಬರಾಯಿಯನ್ನು ಒದಗಿಸಿಕೊಡುವ ಕೆಲಸವು ರೆವಿನ್ಯೂ, ಪೋಲಿಸ್, ಫೊರೆಸ್ಟ್ ಮುಂತಾದ ಇಲಾಖೆಗಳಲ್ಲಿ ಕೆಳಗಿನ ನವುಕರರಿಗೆ ಸಂಬಂಧಪಟ್ಟದ್ದಲ್ಲವೆಂದು ಖಂಡಿತವಾಗಿ ಕ್ರಮವನ್ನು ಪ್ರಕಟಿಸಬೇಕೆಂದೂ, 'ಸರ್ಕಿಟು' ಬೆಳೆಸುವ ಆಫೀಸರರು ಆಯಾಯ ಗ್ರಾಮಕ್ಕೆ ಹೋಗುವುದಕ್ಕೆ ಸಾಕಷ್ಟು ಸಮಯ ಮುಂಚಿತವಾಗಿಯೇ ತಮಗೆ ಅಗತ್ಯ ಬೀಳಬಹುದಾದ ಸರಬರಾಯಿ ವಿಷಯವಾಗಿ ಆ ಗ್ರಾಮದ ಪಟೇಲರಿಗೆ ಸೂಚಿಸಬೇಕೆಂತಲೂ ಇದಕ್ಕೆ ತಗಲಿದ ಖರ್ಚನ್ನು ಆ ಪಟೇಲರು ಸರಕಾರಿ ನಿರಖು ಬೆಲೆಯ ಪಟ್ಟಿಗಳ ಮೇರೆಗೆ ಸಮೀಪದ ಖಜಾನೆಯಿಂದ ಪಡಕೊಳ್ಳುವಂತೆ ಮಾಡಬೇಕೆಂದೂ, ಈ ಹಣವನ್ನು ಆಯಾ ಆಫೀಸರರ ಪ್ರಯಾಣದ ಭತ್ತೆಯ ಬಿಲ್ಲಿನಲ್ಲಿ ಆ ಖಜಾನೆಯವರು ವಜಾ ಮಾಡಬೇಕೆಂದೂ ರಾಮಯ್ಯಂಗಾರರ ಠರಾವಿನ ಮುಖ್ಯ ಅಭಿಪ್ರಾಯ. ಅನೇಕ

ಕಡೆಗಳಲ್ಲಿ ಪಟೇಲರಿಂದ ಈ ಸರಬರಾಯಿಯನ್ನು ತರಿಸದೆ ದೊಡ್ಡ ದೊಡ್ಡ ಹುದ್ದೆದಾರರೂ ಕೂಡ ತಮ್ಮ ಕೈಕೆಳಗಿನ ನವುಕರರಿಂದ ಅದನ್ನು ಒದಗಿಸಿಕೊಳ್ಳುವುದರಿಂದ ಈ ಕೆಳನವುಕರರಿಗೆ ಬಹಳ ನಷ್ಟವೂ ಅನ್ಯಾಯವೂ ಆಗುತ್ತದೆಂದು ಅವರು ವಾದಿಸಿದರು. ರಾಮನಾಡು ಜಿಲ್ಲೆಯ ಕಲೆಕ್ಟರರು ತನ್ನ ಸರಬರಾಯಿಯು ಸರಿಯಾಗಿ ಒದಗಲಿಲ್ಲವೆಂಬ ದಕ್ಕೆ ದೇವಕೋಟೆಯ ಡಿವಿಜನಲ್ ಆಫೀಸರರ ಮೇಲೆ ಬಹಳ ರೇಗಿಬಿದ್ದರೆಂದು ಗೊತ್ತಾಗಿ ಆ ಕುರಿತು ಇದೇ ಸಭೆಯಲ್ಲಿ ಒನರೆಬಲ್ ರಾಮಯ್ಯಂಗಾರರು ಕೇಳಿದ ಪ್ರಶ್ನೆಗೆ ಸರಕಾರ ಕಡೆಯಿಂದ ಸಮರ್ಪಕವಾದ ಉತ್ತರ ದೊರೆಯದೆ ಇದ್ದುದೇ ಈ ಠರಾವನ್ನು ಇವರು ಸಭೆಯ ಮುಂದೆ ಇರಿಸಲಿಕ್ಕೆ ಕಾರಣವಾಯಿತೆಂದು ಗೊತ್ತಾಗುತ್ತದೆ. ಈ ಪ್ರಶ್ನೆಯೂ ಠರಾವೂ ಆ ಸಭೆಯಲ್ಲಿ ಹಾಜರಿಲ್ಲದ ಒಬ್ಬ ದೊಡ್ಡ ಹುದ್ದೆದಾರರ ಮೇಲೆ ಒಂದು ಬಗೆಯ ಲಾಂಛನವನ್ನು ಹೇರುತ್ತದೆಂಬ ಹೇತುವಿನಿಂದ ಆ ಠರಾವನ್ನು ಚರ್ಚಿಸಬಾರದೆಂದು ಒನರೆಬಲ್ ಕಾಡ್ಸ್ಯೂರ್, ಮತ್ತು ಬಹುಮಾನಪಟ್ಟ ಗವರ್ನರರು ತಡೆಯಲು ಪ್ರಯತ್ನಿಸಿದರು. ಸರಕಾರದ ಕಡೆಯಿಂದ ಈ ವಿಷಯವನ್ನು ಚರ್ಚಿಸುವಾಗ ಒಂದಿಷ್ಟು ಸಿಟ್ಟು ತಲೆದೋರಿದಂತೆ ಕಾಣುತ್ತದೆ. ಆದರೆ ಒನರೆಬಲ್ ರಾಮಚಂದ್ರರಾಯರು ಒನರೆಬಲ್ ರಾಮಯ್ಯಂಗಾರರ ಪರವಾಗಿ ಈ ವಿಷಯವನ್ನು ಚರ್ಚಿಸುವಾಗ ಸರಕಾರಿ ನವುಕರರ ಸ್ವೇಚ್ಛಾವರ್ತನಗಳನ್ನೂ ಅವುಗಳಿಂದ ಇತರರಿಗೆ ಉಂಟಾಗುವ ಭಾದಕಗಳನ್ನೂ ಸಭೆಯ ಮುಂದೆ ತರುವುದೇ ತಪ್ಪೆಂದು ಗ್ರಹಿಸಿದರೆ ಚೆಲೋದಾಗಲಾರದು ಎಂತಲೂ ಹಲವು ಕಡೆಗಳಲ್ಲಿ ಈ ಸರಬರಾಯಿ ಗಲಾಟೆಯಿಂದ ಕೆಳನವುಕರರಿಗೆ ತೊಂದರೆಗಳು ಉಂಟಾಗುತ್ತವೆಂದೂ ಬಹಳ ವಾದಿಸಿದರು. ಕಡೆಗೆ ಈ ಠರಾವನ್ನು ಬಹುಮಾನಪಟ್ಟ ಗವರ್ನರವರ ಅನುಮತಿಯಿಂದ ಹಿಂದೆಗೆಯಲಾಯಿತು.

ಸರಕಾರದವರು ಇಂಥ ಸ್ವೇಚ್ಛಾವರ್ತನದ ದೃಷ್ಟಾಂತಗಳೇ ಇಲ್ಲವೆಂದು ನಿರಾಕರಿಸಲಿಲ್ಲ. ಮೊತ್ತಮೊದಲಿನ ಚರ್ಚೆಯಲ್ಲಿ ಇಂಥ ಸಂಗತಿಗಳನ್ನು ರುಜುಪಡಿಸಬಹುದೇ ಎಂದು ಶಂಕಿಸಿದಂತೆ ತೋರುತ್ತದೆ. ಜನಜನಿತವಾದ ಈ ಸಂಗತಿಯಲ್ಲಿಯೂ ಕೂಡ ತನ್ನ ಕೆಲಸದ ಮೇಲೆ ಆಸೆಯಿರುವ ಯಾವನೊಬ್ಬ ಕೆಳನವುಕರನೂ ಈ ತೊಂದರೆಗಳನ್ನು ಕುರಿತು ಬರಹ ಮೂಲಕ ಮನವಿಯನ್ನು ಮಾಡಲಾರನು. ಇಂಥ ಮನವಿಗಳು ಇಲ್ಲವೆಂಬ ಕಾರಣದಿಂದಲೇ ಇದು ರಾಮಯ್ಯಂಗಾರರ ಸ್ವಕಪೋಲ ಕಲ್ಪಿತವೆಂದು ಹೇಳಲಾಗುವುದಿಲ್ಲ. ಅನೇಕ ಸಲ "ಬೇಲಿಯೇ ಹೊಲನಂ ಮೇದರೆ" ಯಾರ ಬಳಿಯಲ್ಲಿ ದೂರು ಕೊಡಬೇಕು? ಅಧಿಕಾರ ಉನ್ಮತ್ತರಾದ ನವುಕರರು ಆಗಾಗ ಬರುತ್ತಲೇ ಇರುವರು. ಇವರು ಯಾವ ರೀತಿಯಿಂದ ಜನರನ್ನು ಪೀಡಿಸುತ್ತ ಇರುವರೆಂಬುದು ಸರಕಾರಕ್ಕೆ ಗೊತ್ತಾಗುವುದಕ್ಕಿಂತ ಪ್ರಜಾಜನರೊಡನೆ ಹೊಕ್ಕುಬಳಕೆಯಿದ್ದ ಪ್ರತಿನಿಧಿಗಳಿಗೆ ಗೊತ್ತಾಗುವುದು ಸುಲಭ. ಇಂಥ ಸಂಗತಿಗಳನ್ನು ಈ ಪ್ರತಿನಿಧಿಗಳು ಆಗಾಗ ಸರಕಾರದ ಮುಂದೆ ಇರಿಸುತ್ತ ತಕ್ಕ ವ್ಯವಸ್ಥೆ ಮಾಡುವುದು ಅವರ ಕರ್ತವ್ಯ. ಇದರಲ್ಲಿ ಸರಕಾರದವರು ರೇಗಿಬೀಳುವರು ಎಂದು ಹಿಂಜರಿಯುವುದಾದರೆ ಜನರ ಅಹವಾಲುಗಳು ಸರಕಾರಕ್ಕೆ ತಿಳಿಯುವ ಬಗೆ ಹೇಗೆ? ರಾಮಯ್ಯಂಗಾರರ ಮಾತಿನಲ್ಲಿ ಎಲ್ಲಾ ಮೇಲ್ ನವುಕರರು ಕೀಳು ನವುಕರರಿಗೆ ಪೀಡಿಸುತ್ತಾರೆಂದು ಅರ್ಥಬರುವುದಿಲ್ಲ. ಸರ್ಕಿಟು ಹೋಗುವ ನವುಕರರಿಗೆ ಅಗತ್ಯವಿರುವ ಸರಬರಾಯಿ ಸಿಕ್ಕುವುದಕ್ಕೆ ತಕ್ಕ ಏರ್ಪಾಡು ಇರಬೇಕು, ಅದನ್ನು ಒದಗಿಸಿದವರು ಈ ನವುಕರರನ್ನು ಸುಲಿಯದ ಹಾಗೆ ಸರಕಾರದವರೇ ಆಯಾಯ ವಸ್ತುಗಳಿಗೆ ನಿರಖು ಬೆಲೆಗಳನ್ನು ಕಾಣಿಸಿ ಪಟ್ಟಿಗಳನ್ನು ಪ್ರಕಟಿಸಬೇಕು, ಮತ್ತು ಒದಗಿಸಿದವರಿಗೆ ಸರಿಯಾಗಿ ಖರ್ಚು ಸಿಕ್ಕುವಂತೆ ಆ ಹಣವು ಖಜಾನೆಯಿಂದ ಏರ್ಪಾಡು ಆಗಬೇಕು, ಈ ಹಣವು ಸರಕಾರಕ್ಕೆ ನಷ್ಟವಾಗದ ಹಾಗೆ ಆ ನವುಕರರಿಗೆ ಸಿಕ್ಕುವ ಭತ್ತೆಯಿಂದ ಮುಜ್ರೆಯಾಗಬೇಕು ಎಂಬುದರಲ್ಲಿ ದೋಷವೇನೆಂದು ಗೊತ್ತಾಗುವುದಿಲ್ಲ.

ಅನೇಕ ಕಡೆಗಳಲ್ಲಿ ಸರಕಾರಿ ನವುಕರರು ಇರುವ ಬಂಗಲೆಗಳು ಪೇಟೆಯಿಂದ ದೂರವಾಗಿವೆ. ಪಟೇಲರು ತಂದಿಟ್ಟ ಸರಬರಾಯಿ ಸರಿಯಾಗಿದ್ದರೂ ದಫೆದಾರ ಸಾಹೇಬರಿಗೂ ಬಟ್ಲರ್ ಸಾಹೇಬರಿಗೂ ಕೈತಣ್ಣಗಾಗದಿದ್ದರೆ ಈ ಸರಬರಾಯಿ ಆಫಿಸರರಿಗೆ ತಲಪುವುದೇ ಇಲ್ಲ. ಇದು ತಪ್ಪಿದರೂ ಅದರಲ್ಲಿ ಹಲವು ದೋಷಗಳು ಕಂಡುಬರುವುವು. ಇದು ಸರ್ವವಿದಿತವಾದ ಗೋಷ್ಟಿ.

ಇನ್ನೂ ಕೆಲವು ನವುಕರರು ಪಟೇಲರಿಗೆ ಸರಬರಾಯಿ ತೊಂದರೆಗಳನ್ನು ಅಂಟಿಸುವುದಿಲ್ಲ. ತಮ್ಮ ಕೆಳನವುಕರರು ಈ ವಿಷಯವಾಗಿ ವಿಲೆವಾರಿ ಮಾಡುವರೆಂದು ಅವರಲ್ಲಿ ಖಾತ್ರಿಯಾಗಿ ನಂಬಿಕೆ ಇದೆ. ಒಂದೊಂದು ವೇಳೆ ಯಾವ ರೀತಿಯ ಸರಬರಾಯಿ ಆಗಬೇಕೆಂದು ತಿಳಿಯದ ಕೆಳನವುಕರರು ಇಂಥ ಮೇಲುನವುಕರರ ಸಿಟ್ಟಿಗೆ ಬಲಿಬೀಳುವುದೂ ಉಂಟು. ಇನ್ನೂ ಕೆಲವು ನವುಕರರಿಗೆ ತೆಗೆದುಕೊಂಡ ವಸ್ತುಗಳ ಬೆಲೆಕೊಡುವ ಯೋಚನೆಯೇ ಇಲ್ಲ. ತನ್ನ ಕೆಳನವುಕರನು ಯಾರ ಮೇಲೆ ಅಧಿಕಾರ ನಡಿಸೆ ಬಹುದೊ ಅಲ್ಲಿಂದ ಬೆಲೆಕೊಡದೆ ಈ ವಸ್ತುಗಳನ್ನು ತಂದಿರಬೇಕೆಂದು ನೆನೆಸಿ ಅದರ ಬೆಲೆಯನ್ನು ತಾನು ಕೊಟ್ಟರೆ ನಿಜವಾದ ಮ್ಹಾಲೀಕನಿಗೆ ಆ ಹಣವು ಸಲ್ಲುವುದಿಲ್ಲ ಎಂಬ ತಿಳುವಳಿಕೆಯಿಂದ ಹಣದ ಚೀಲವನ್ನು ಬಿಚ್ಚದೆ ಇರುವವರು ಇದ್ದಾರೆ. ಇನ್ನೂ ಕೆಲವರು ಚೆನ್ನಾಗಿ ಲೋಕವ್ಯವಹಾರಜ್ಞಾನವುಳ್ಳವರು; ಇಂಥವರಿಗೆ ಆಯಾಯ ಗ್ರಾಮದಲ್ಲಿ ಯಾವ ವಸ್ತುವಿಗೆ ಎಷ್ಟು ಬೆಲೆಯಿದೆ ಎಂದು ಚೆನ್ನಾಗಿ ಅನುಭವ ಇದೆ. ಆದ್ದರಿಂದ ಸರಬರಾಯಿ ಆಫಿಸರನು ಮೋಸದಿಂದ ತಂದ ಬಿಲ್ಲಿನಲ್ಲಿ ಹೆಚ್ಚಿಗೆ ಹೊರಿಸಿದ ಹಣವನ್ನು ವಜಾಮಾಡಿ ಸರಿಯಾದ ಬೆಲೆಯನ್ನು ಕೊಡುವರು. ಆ ಸಮಯದಲ್ಲಿ ಹೊಂಚುಹಾಕುತ್ತಿದ್ದ ದಫೆದಾರ ಸಾಹೇಬರು ಈ ಹಣವೂ ಆ ಸರಬರಾಯಿ ಆಫಿಸರನಿಗೆ ಸಲ್ಲತಕ್ಕದ್ದಲ್ಲವೆಂದು ತುಂಬಾ ತಿಳಿದು ಅದು ಅವನಿಂದ ತಮ್ಮ ಕಿಸೆಗೆ ಬರುವಂತೆ ಮಾಡುವರು. ಇದು ಈಚೀಚೆಗೆ ಕಡಿಮೆಯಾಗುತ್ತ ಬಂದರೂ ಇನ್ನೂ ತೀರಾ ಹೋಗಿಲ್ಲವೆಂದು ನಿರ್ಧಾರವಾಗಿ ಹೇಳಬಹುದು. ಆದರೆ ಈ ಕುರಿತು ರುಜುವಾತನ್ನು ಕೊಡಬೇಕೆಂದು ನಮಗೆ ಯಾರಾದರೂ ಹೇಳಿದರೆ ಅದು ಎಂದಿಗೂ ಸಾಧ್ಯವಲ್ಲವೆಂದು ನಾವೂ ಸ್ಪಷ್ಟವಾಗಿಯೇ ಹೇಳುವೆವು.

ಸರಕಾರದ ನವುಕರರು ಈ ರೀತಿಯಾಗಿ ಸರಬರಾಯಿ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಬದಲಾಗಿ, ಮತ್ತು ಅದರಿಂದ ಇಲ್ಲದಸಲ್ಲದ ದೂರು ದೂಷಣೆಗಳಿಗೆ ಆಸ್ಪದ ಸಿಕ್ಕುವ ಬದಲಾಗಿ ಅನುಕೂಲವಿರುವಲ್ಲಿ ಸರಬರಾಯಿ ಒದಗಿಸಿಕೊಡುವುದಕ್ಕೆ ಲೈಸನ್ಸು ಹೊಂದಿದ ಕಂಟ್ರಾಕ್ಟರರನ್ನು ನೇಮಿಸುವುದು ಸಾಧ್ಯವಾದೀತೆ ಎಂದು ಸರಕಾರದವರು ನೋಡುವುದು ಒಳ್ಳೇಯದು. ಆಗ ಪ್ರಯಾಣದ ಭತ್ತೆಯು ಸಂಬಳಕ್ಕೆ ಉಪಧನ ಎನ್ನಿಸಿಕೊಳ್ಳುವ ಬದಲಾಗಿ ಯಾವ ಉದ್ದೇಶಕ್ಕೆ ಸರಕಾರದಿಂದ ಕೊಡಲ್ಪಟ್ಟಿತೋ ಅದಕ್ಕೆನೇ ವಿನಿಯೋಗಿಸಲ್ಪಟ್ಟಂತಾಗುವುದು. ಸರಕಾರಿ ನವುಕರರಿಗೆ ಇತರ ಹಂಗಿಲ್ಲದೆ ಅಗತ್ಯವಿರುವ ಸಾಮಾನನ್ನು ಒದಗಿಸಿಕೊಟ್ಟಂತಾಗುವುದು. ನಿರಖು ಪಟ್ಟಿಯ ಪ್ರಕಾರ ಬೆಲೆಯನ್ನು ಕೊಡುವುದರಿಂದ ಕಂಟ್ರಾಕ್ಟರನು ಈ ನವುಕರರಿಗೆ ಮೋಸಮಾಡಲಿಕ್ಕೂ ಎಡೆ ಸಿಕ್ಕಲಾರದು.

ಹೋಮ್‌ರೂಲ್ ಲೀಗ್.

ಮಂಗಳೂರಿನ ಶಾಖೆಗೆ ಸೂಚನೆಗಳು.

(ಪ್ರೇಷಿತ.)

ಮದ್ರಾಸಿನ ಹೋಮ್‌ರೂಲ್ ಲೀಗಿನ ಒಂದು ಶಾಖೆಯು ದಕ್ಷಿಣ ಕನ್ನಡದಲ್ಲಿ ತೆರೆಯಲಾಗಿದೆಂದು ಸ್ವದೇಶಾಭಿಮಾನಿಯಲ್ಲಿ ಒಂದೆರಡು ಸಾರಿ ಪ್ರಕಟವಾದ ಬಾತಮಿಗಳನ್ನು ನೋಡಿ, ಸಂತೋಷಪಟ್ಟು ಈ ಶಾಖೆಯ ಮೆಂಬರುಗಳಿಗೆ ಒಂದೆರಡು ಸೂಚನೆಗಳನ್ನು ಕೊಡುವುದು ಅಯುಕ್ತವಲ್ಲವೆಂದು ತೋರುತ್ತದೆ.

ನಾವು ಹೋಮ್‌ರೂಲನ್ನು ಪಡಕೊಳ್ಳುವುದು ಬರೆ ಸುಶಿಕ್ಷಿತರಿಗಾಗಿ ಮಾತ್ರವಲ್ಲ, ಸುಶಿಕ್ಷಿತರೂ, ಅಶಿಕ್ಷಿತರೂ, ಹಿಂದುಗಳೂ, ಮುಸಲಮಾನರೂ, ಕ್ರೈಸ್ತರೂ, ಪಾರ್ಸಿಯರೂ ಮುಂತಾದ ಈ ದೇಶದೊಳಗಿನ ನಿವಾಸಿಗಳಾಗಿ ಯಾರು ಇರುವರೋ ಆ ಎಲ್ಲ ಜನರಿಗಾಗಿ ಪಡಕೊಳ್ಳತಕ್ಕದ್ದು. ವರ್ತಮಾನ ಪತ್ರಿಕೆಯೊಳಗಿನ—ಹೆಚ್ಚಾಗಿ ಇಂಗ್ಲಿಷ್ ಪತ್ರಿಕೆಯೊಳಗಿನ ಸಂಸ್ಥೆಗಳು ಸುಶಿಕ್ಷಿತ ಜನರಿಗೆ ಮಾತ್ರ ಪರಿಚಿತವಾದವುಗಳಲ್ಲದೆ ಅಶಿಕ್ಷಿತ ಸಮಾಜಕ್ಕೆ ಈಗ ಎಷ್ಟೋ ವರ್ಷಗಳಿಂದ ನಡಕೊಂಡು ಬಂದ 'ರಾಷ್ಟ್ರೀಯ ಸಭೆ'ಯಂಥ ಸಾರ್ವದೇಶಿಕ ಸಂಸ್ಥೆಯ ಹೆಸರು ಕೂಡ ಪ್ರಾಯಶಃ ಗೊತ್ತಿಲ್ಲೆಂತಲೇ ಹೇಳಬೇಕು. ರಾಷ್ಟ್ರೀಯ ಸಭೆಯದೆಂತಲೇ ಅಲ್ಲ, ಬೇರೆ ರಾಜಕೀಯ ವಿಷಯಗಳ ಮಾಹಿತಿಯನ್ನು ವಿಪುಲವಾಗಿ ಸಾಮಾನ್ಯಜನ ಸಮಾಜಕ್ಕೆ ಕೊಡತಕ್ಕವು ಈ ದೇಶದ ಬೇರೆ ಭಾಷೆಗಳಲ್ಲಿ ಎಷ್ಟೋ ಪತ್ರಿಕೆಗಳಿದ್ದಾವೆಂಬುದು ನಿಜವು. ಮತ್ತು ಅವುಗಳ ಮುಖಾಂತರ ರಾಜಕೀಯ ಶಿಕ್ಷಣವು ಅಲ್ಲಿಯ ಬಹುಜನ ಸಮಾಜಕ್ಕೆ ತಕ್ಕಮಟ್ಟಿಗೆ ಸಮಾಧಾನಕರವಾಗಿ ಸಿಗಹತ್ತಿದೆಂಬುದೂ ಅಷ್ಟೇ ನಿಜವು. ಆದರೆ ನಮ್ಮ ಕನ್ನಡ ಸೀಮೆಯೊಳಗಿನ ಯಾವ ಭಾಗದ ಜನರಿಗೂ ಇಂಥ ಶಿಕ್ಷಣವು ಇಷ್ಟರವರೆಗೆ ದೊರಕಲಿಲ್ಲೆಂತಲೇ ಹೇಳಬಹುದು ಎಂದಮೇಲೆ ನಮ್ಮ ಜಿಲ್ಲೆಯೊಳಗಿನ ಬಿ. ಎ. ಬಿ. ಎಲ್. ಮುಂತಾದ ನಾಲ್ಕಾರು ಪದವೀಧರರು ಸೇರಿ ಆಪವಾದ ಹೋಗಲಾಡಿಸ ತಕ್ಕಂತೆ ಲೀಗಿನ ಒಂದು ಶಾಖೆಯನ್ನು ತೆರೆಯುವುದರಿಂದ ಲೀಗಿನ ಉದ್ದೇಶವು ಸಫಲವಾಗದು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ ಹೋಮ್‌ರೂಲ್ ಲೀ...

ಸಾಮಾನ್ಯ ಜನರ ಸಹಾನುಭೂತಿ, ಅನುಕೂಲತೆ, ಬೆಂಬಲ ಇವು ಸಂಗತಿಗಳು—ಅವರಿಗೆ ಲೀಗಿನ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ತಿಳಿಸಿ ಹೇಳಿದ್ದಲ್ಲಿಯೆ—ದೊರಕುವವು.

ಇನ್ನೊಂದು ಕಾರಣಕ್ಕಾಗಿಯೂ ಇಂಥ ಕಾರ್ಯಗಳಲ್ಲಿ ಸಾಮಾನ್ಯಜನ ಸಮಾಜದ ಸಹಾನುಭೂತಿಯು ಬೇಕಾಗಿರುವುದು. ರಾಷ್ಟ್ರೀಯ ಸಭೆಯ ಪ್ರಾರಂಭದ ಎರಡು ಮೂರು ವರ್ಷಗಳಲ್ಲಿಯೇ ಎಂಗ್ಲೋ ಇಂಡಿಯನ್ ಅಧಿಕಾರಿಗಳು "ರಾಷ್ಟ್ರೀಯ ಎಂಬ ಹೆಸರು ಮಾತ್ರ ದೊಡ್ಡದಲ್ಲದೆ ಇದು ಸಾಮಾನ್ಯ ಜನರಿಗೆ ಬೇಕಾದ ಸಂಗತಿಯಲ್ಲ; ಇದು ಬರೆ ನಾಲ್ಕಾರು ಪದವೀಧರರ ಗುಲ್ಲು" ಎಂದು ಹೇಳತೊಡಗಿದರು. ಮತ್ತು ಈ ಮಾತು ಎಷ್ಟೋ ಅಂಶದಿಂದ ನಿಜವಾಗಿಯೂ ಇತ್ತು. ಅಂದು ರಾಷ್ಟ್ರೀಯ ಸಭೆಗೆ ಬಂದಂತೆಯೆ ಇಂದು ಈ ಹೋಮ್‌ರೂಲ್ ಲೀಗಿಗೂ ವಿಸ್ತಾರವಾದ ಅಶಿಕ್ಷಿತ ಸಮಾಜದ ಬೆಂಬಲವಿಲ್ಲದಿದ್ದರೆ ಅದೇ ಅಪಖ್ಯಾತಿಯು ಬರುವುದು. ಮಾತ್ರವಲ್ಲ, ಬಹುಜನ ಸಮಾಜದ ಪರಿಚಯವನ್ನು ಪಡಕೊಳ್ಳದ ಈ ಲೀಗಿಗೆ ಬೇಕಷ್ಟು ಪ್ರತಿಷ್ಠೆಯೂ, ಪ್ರಭಾವವೂ ಇರಲಾರದು. ಮತ್ತು ಕೊನೆಗೆ ಇದೊಂದು ವ್ಯಥಾ ಶ್ರಮಕ್ಕೆ ಕಾರಣವಾದ ಬರೆ ಗುಲ್ಲಾದೀತು! ಆದುದರಿಂದ ಬಹುಜನ ಸಮಾಜದ ಸಹಾನುಭೂತಿಯನ್ನು ಲೀಗಿನವರು ಸಂಪಾದಿಸಬೇಕೆಂಬುದು ಸರ್ವಥೈವ ಒಪ್ಪತಕ್ಕ ವಿಷಯವಾಗಿರುತ್ತದೆ.

ಹೋಮ್‌ರೂಲ್ ಲೀಗಿಗೆ ಈ ರೀತಿಯಿಂದ ಅತಿ ಆಗತ್ಯವಾದ ಅಶಿಕ್ಷಿತರ ಬೆಂಬಲವನ್ನು ಪಡೆಯಲು ಮುಖ್ಯ ಉಪಾಯವು ಯಾವುದೆಂದರೆ—ಪದವೀಧರರು ತಮ್ಮಷ್ಟಕ್ಕೆ ಮೆಂಬರುಗಳಾಗಿ ಕುಳಿತರೆ ಮಾತ್ರ ಸಾಲದು. ಈ ಲೀಗಿನ ಪ್ರಚಾರಕರೂ ಮೆಂಬರುಗಳೂ ಜಿಲ್ಲೆಯೊಳಗಿನ ಹಳ್ಳಿಹಳ್ಳಿಗಳಲ್ಲಿ ಹೋಗಿ ಲೀಗಿನ ಉದ್ದೇಶವೇನು, ಅದನ್ನು ಪಡೆಯಬೇಕಾದರೆ ಯಾವ ಯಾವ ಪ್ರಾಮಾಣಿಕತನದ ಮತ್ತು ಕಾಯಿದೆಶೀರ ಉಪಾಯಗಳನ್ನು ಅವಲಂಬಿಸಬೇಕಾದುದು ಈ ಮೊದಲಾದ ಸಂಗತಿಗಳನ್ನು ಸುಶಿಕ್ಷಿತ, ಅಶಿಕ್ಷಿತ, ಶ್ರೀಮಂತ, ಬಡವ ಈ ಭೇದಗಳನ್ನಿಡದೆ ಎಲ್ಲರಿಗೆ ತಿಳಿಸಿಕೊಡಬೇಕು. ಈ ಕೆಲಸಕ್ಕೆ ಬೇಕಾದ ವಕ್ತೃಗಳನ್ನು ಪ್ರಚಾರಕ ವರ್ಗದಲ್ಲಿ ಸೇರಿಸಿಕೊಳ್ಳಬೇಕು. ಅವಶ್ಯವಿದ್ದಲ್ಲಿ ಹಸ್ತಪತ್ರಿಕೆಗಳನ್ನು ಹಂಚಬೇಕು. ಇದೇ ವಿಷಯದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಹೊರಡಿಸಬೇಕು. ಈ ಲೀಗಿನವರು ಯಾವ ಯಾವ ಕಡೆಗಳಲ್ಲಿ ಏನೇನು ಕೆಲಸ ಮಾಡಿದ್ದಾರೆಂಬುದನ್ನು ಬೇರೆಯವರಿಗೆ ತಿಳಿಸುವದಕ್ಕಾಗಿ ಆಗಾಗ ಸ್ವದೇಶಾಭಿಮಾನಿಯಂಥ ದೇಶಿಪತ್ರಗಳಲ್ಲಿ ಪ್ರಕಟಿಸುತ್ತಿರಬೇಕು.

ಈ ರೀತಿಯಿಂದ ಹೋಮ್‌ರೂಲ್ ಲೀಗಿನ ಮಂಗಳೂರ ಶಾಖೆಯವರು ಕೆಲಸ ಮಾಡಿದರೆ ಅದರಿಂದ ಬೇಗನೆ ಹೆಚ್ಚಿನ ಪ್ರಯೋಜನ ಉಂಟಾದೀತೆಂದು ತೋರುತ್ತದೆ. 'ಅಶಿಕ್ಷಿತ ಜನರು, ಬಡ ದೇಶೀಭಾಷೆ, ಕನ್ನಡ ಪತ್ರಿಕೆ' ಇವೇ ಮೊದಲಾದ ಮಹಾ ಮಂತ್ರಗಳನ್ನು ಕಟ್ಟಿಕೊಂಡು ತಾವು ಆಧುನಿಕ ಸುಶಿಕ್ಷಿತರೆಂಬ ಅಭಿಮಾನದಿಂದ ಈ ಎಲ್ಲರಿಂದ ಬಹು ದೂರದಲ್ಲಿ—ಬಹು ಮೇಲಿನ ಸ್ಥಾನದಲ್ಲಿ ಪ್ರತ್ಯೇಕವಾಗಿ ಕುಳಿತುಕೊಳ್ಳುವ ದಿವಸಗಳು ಈಗ ಹೋಗಿವೆ! ಈಗ ಎಲ್ಲರೂ ಒತ್ತಟ್ಟಿಗೆ ಸೇರಬೇಕಾಗಿ ಬಂದಿದೆ. ಅಶಿಕ್ಷಿತ ಸಮಾಜದ ಬೆಂಬಲವಿಲ್ಲದೆ ಅಲ್ಪಸಂಖ್ಯಾಕ ಸುಶಿಕ್ಷಿತರಿಗೆ ಬೆಲೆ ಬಾರದು. ಸುಶಿಕ್ಷಿತರ ನಾಯಕತ್ವವಿಲ್ಲದೆ ಅಶಿಕ್ಷಿತರಿಂದ ಮುಂದರಿಸಲಾಗದು. ಬಟ್ಟಾರೆ ಎಲ್ಲರೂ ಒಟ್ಟಿಗೆ ಸೇರಿ ಇಂದಿನ ಕೆಲಸವನ್ನು ಕೈಕೊಳ್ಳಬೇಕಾಗಿದೆ.

ಈ ಸೂಚನೆಗಳನ್ನು ಮಾಡುವ ಕಾರಣವೇನೆಂದರೆ, ವರ್ತಮಾನ ಸಂಗ್ರಹದಿಂದಲೇ ಇಲ್ಲಿಯ ಲೀಗಿನ ವಿಷಯವು ಗೊತ್ತಾದುದಲ್ಲದೆ ಆ ಮೆಂಬರರೊಳಗಿನ ಒಬ್ಬ ಗೃಹಸ್ಥನೂ ಕೂಡ ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದು ಕಾಣುವುದಿಲ್ಲ. ಬಹುವೇಳೆ ಇಂಗ್ಲಿಷ್ ಪತ್ರಿಕೆಗಳಿಗೆ ಬರೆದು ಕಳುಹಿಸಿದ್ದಾರೋ ಏನೋ? ಆದರೆ ಹಾಗೆ ಕಳುಹಿಸಿದ್ದರೆ ಪುನಃ ಕೇಳುವುದೇನೆಂದರೆ, ಅದರಿಂದ ಈ ಜಿಲ್ಲೆಯೊಳಗಿನ ಸಾಮಾನ್ಯರಿಗೆ ಯಾವ ಪ್ರಯೋಜನವು? ಜಿಲ್ಲೆಯೊಳಗಿನ ದೇಶಿಭಾಷೆಯ ಪತ್ರಿಕೆಯಲ್ಲಿ ಲೀಗಿನ ವಿಷಯದ ಪ್ರಸ್ತಾಪಗಳನ್ನು ಜನಸಾಮಾನ್ಯಕ್ಕೆ ತಿಳಿಸುವುದು ಯುಕ್ತವಲ್ಲವೆ? ಇನ್ನು ಮುಂದೆಯಾದರೂ ಈ ತರದ ಉಪಕ್ರಮವುಂಟಾದೀತೆಂಬ ಭರವಸೆ ತಾಳಬಹುದೆ?

ದೂರದ ಪ್ರವಾಸಿ.

ದಕ್ಷಿಣ ಕನ್ನಡದ ವಾಙ್ಮಾಲ.

(ಮೈಸೂರು ವೃತ್ತಾಂತ ಪತ್ರಿಕೆಯ ದಶಂಬರ ತಾ. ೧೪ನೇ ಸಂಚಿಕೆಯಿಂದ).

ಅಯ್ಯಾ,—ನಿಮ್ಮ (ವೃತ್ತಾಂತ ಪತ್ರಿಕೆ) ತಾ. ೩೦ನೇ ಸಂಚಿಕೆಯ ಬಾತಮಿದಾರರಲ್ಲೊಬ್ಬ "ದೇಶ ಹಿತೈಷಿಯು" ಮೈಸೂರು ಸೀಮೆಯ ಹಿತಕಾಂಕ್ಷಿಯಾಗಿ ಕೆಲವು ಮಾತುಗಳನ್ನು ಬರೆಯುವಾಗ ಮಧ್ಯದಲ್ಲಿಯೇ "ಈ ದೇಶಕ್ಕೆ ದಕ್ಷಿಣ ಕನ್ನಡ ಜಿಲ್ಲೆಯು ಕೇವಲ ಸಮೀಪವಾಗಿರುವದರಿಂದ ದೇಶಭಾಷೆಯೂ ಕೆಟ್ಟು ಹೋಗಿರುತ್ತೆ" ಎಂದು ಗುಣುಗುಟ್ಟಿರುವನು. ಈ ಮಾತಿಗೆ ನಿಷ್ಪಕ್ಷಪಾತಿಗಳಾದ ವಾಚಕರ ಸಮಾಧಾನಕ್ಕಾಗಿ "ವಾಙ್ಮಾಲ"ದ ಎರಡೇ ಮಾತುಗಳನ್ನು ಬರೆಯುವೆನು.

ಮೈಸೂರು ಕನ್ನಡ ಭಾಷೆಗೆ ನನ್ನ ಸಾನಿಧ್ಯದಿಂದ ಯಾವತರದ ತೊಡಕು ಬಂದಿದೆ? ಮೈಸೂರಿನ ಕನ್ನಡವು ತೊಳೆದ ಅಕ್ಕಿಯಷ್ಟು ಸ್ವಚ್ಛವಾಗಿರುವದೇ? ಅಥವಾ ಬೇರೆ ಭಾಷೆಗಳ ಎಂದರೆ ತೆಲುಗು, ತಮಿಳು ಮುಂತಾದವುಗಳ ಸಂಪರ್ಕದಿಂದ ದೂಷಿತವಾಗಿರುವದೇ? ಇದೂ ಹೋಗಲಿ. ನಾಲ್ಕು ನಾಲ್ಕು ಮೊಳ ಉದ್ದದ ಸಂಸ್ಕೃತ ಶಬ್ದಗಳನ್ನು ಪೋಣಿಸಿ ಸಾಹಿತ್ಯ ಶಾಸ್ತ್ರದಲ್ಲಿ ಹೇಳಿರುವಂತೆ "ಅಪುಷ್ಟಾರ್ಥತ್ವ"ದ ಉದಾಹರಣೆಗಳನ್ನು ಮಾಡಿ ತೋರಿಸುವ ಮೈಸೂರಿನ ಪದ್ಧತಿಗೆ ಮೆಚ್ಚಿದ ಈ ಲೇಖಕನು ಅನ್ಯರ ಭಾಷೆಗೆ ನಗುವದು ಕಿಂಬಹುನಾ ಅವರ ಕಡೆಗೆ ತಾತ್ಸಾರ ದೃಷ್ಟಿಯಿಂದ ನೋಡುವದು ಲೋಕಧರ್ಮಕ್ಕೆ ಸಹಜವಾಗಿದ್ದರೂ ವಿಚಾರವಂತರ ದೃಷ್ಟಿಗೆ ಇಂತಹ ಪ್ರಯತ್ನಗಳು ನಿಂದ್ಯವಾಗಿಯೇ ಇರುವವು. ಈಗ ಇವನು ಹೇಳುವಂತೆ ಮೈಸೂರಿನ ಭಾಷೆಯು ರಚನೆಯಿಂದಲೂ ಅರ್ಥಬೋಧಕತ್ವದಿಂದಲೂ ಅತ್ಯುತ್ಕೃಷ್ಟವಾದುದೆಂತ ನೆನಸಿದಲ್ಲಿ ಆ ಭಾಷೆಯು ಇಷ್ಟರ ವರೆಗೆ ಯಾವ ಕೆಲಸ ಮಾಡಿದೆ? ಬಂಗಾಲಿ, ಮರಾಠಿ, ಗುಜರಾಥಿ, ಮುಂತಾದ ಬೇರೆ ಭಾಷೆಗಳಂತೆ ಅಂಗ್ಲಭಾಷಾಭಿಜ್ಞರಿಗೆ ಈ ಮೈಸೂರ ಭಾಷೆಯು ಯಾವ ಯಾವ ಹೊಸ ಶಾಸ್ತ್ರಗಳ ಅಥವಾ ಹೊಸ ಜೀವನದ ಅನುಭವು ಕೊಟ್ಟಿದೆ? ಈ ಪ್ರಶ್ನೆಗಳು ಬರುವವು.

ತಮ್ಮ ಬಾತಮಿದಾರನಾದ "ದೇಶಹಿತೈಷಿ"ಯು ತಾನು ಮಾಡಿಕೊಂಡ ನಾಮಕರಣದಂತೆ ನಿಜವಾಗಿ "ದೇಶಹಿತೈಷಿ"ಯಾದುದಾದರೆ ಅವನು ತನ್ನ ಮೈಸೂರ ಪ್ರಾಂತ್ಯದಲ್ಲಿ ಪ್ರಚಲಿತವಿರುವ ಶುದ್ಧ ಮತ್ತು ಗಂಭೀರವಾದ ಭಾಷೆಯ ಗಂಗಾ ಪ್ರವಾಹದಲ್ಲಿ ನನನ್ನೆ ಮುಳುಗಿಸಿ ಬಿಡುತ್ತಿದ್ದನು. ಹಾಗೆ ಮಾಡದೆ ಈ ಬಾಣವಾಕ್ಯಗಳನ್ನು ಕೊಚ್ಚುವದು ಏಕೆ? ಏನೋ, ನನ್ನದೋ, ಅವನದೋ, ದುರದೃಷ್ಟದಿಂದ ನನ್ನನ್ನಾಗಲಿ, ತಂಗಿ ಮೈಸೂರೇ, ನಿನ್ನನ್ನಾಗಲಿ ವಿಯೋಗಮಾಡಲು ಈಗ ಯಾರಿಗೂ ಸಾಧ್ಯವಿಲ್ಲೆಂತ ತೋರುತ್ತೆ! ಅದೂ ನೋಡಬೇಕು. ಈ ಹಿತೈಷಿಯು ನನ್ನನ್ನು ಕಿತ್ತು ಎಲ್ಲಿಯಾದರೂ ಸಮುದ್ರದಲ್ಲಿ ಚೆಲ್ಲುವನೋ ಅಥವಾ ನಿನ್ನನ್ನು ತಕೊಂಡು ಹಿಮಾಲಯದ ಮೇಲೆ ಕುಳ್ಳಿರಿಸುವನೋ?

ದಕ್ಷಿಣ ಕನ್ನಡ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ತಾವಾಗಲೀ ತಮ್ಮ ವಾಚಕ ಮಹಾಶಯರುಗಳಾಗಲೀ ಈ ಕೆಳಗೆ ಕಾಣಿಸಿದ ಕಲ್ಕತ್ತದ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿಯ ಮದಿವೆ ಶಾಖೆಯ ಡಿಪ್ಲೋಮದ ಹಣವು ಸಿಕ್ಕುವ ಹಾಗೆ ಏನು ಮಾಡಿದರಾದೀತು ಎಂದು ಈ ಪತ್ರದ ಮೂಲಕವಾಗಲೀ ಕಾಗದ ಪತ್ರದ ಮೂಲಕವಾಗಲೀ ತಿಳಿಸುತ್ತಿದ್ದರೆ ತಮ್ಮ ಮಹಾ ಉಪಕಾರವನ್ನು ಎಂದೂ ನಾನು ಮರೆಯುತ್ತಿದ್ದಿಲ್ಲ. ಸದರಿ ಕಂಪೆನಿಯ ಡಿಪ್ಲೋಮ ಹೋಲ್ಡರ ಮದುವೆಯು ಕಳೆದ ದಶಂಬರ ತಿಂಗಳಲ್ಲಿ ಜರಗಿರುತ್ತದೆ. ನಂತರ ಕಂಪೆನಿಯ ಚೀಫ್ ಏಜಂಟರುಗಳಾದ ಲಕ್ಷ್ಮಣರಾವ್ ಬ್ರದರ್ಸ್ ಉಡುಪಿ, ಇವರಿಗೂ ಕಂಪೆನಿಯ ಕಲ್ಕತ್ತದ ಆಫೀಸಿಗೂ ಒಂದಲ್ಲ; ಒಂದು ಡಜನ್ ರಿಜಿಸ್ಟ್ರಿ ಕಾಗದಗಳನ್ನು ಬರೆದಾಗ್ಯೂ ಉತ್ತರವೇ ಇಲ್ಲ. ಸದರಿ ಕಂಪೆನಿಯವರು ಈ ರೀತಿ ಮಾಡಲು ಕಾರಣವೇನೆಂದು ತಿಳಿಯುವದಿಲ್ಲ. ಬೇರೆ ಬೇರೆ ವರ್ತಮಾನ ಪತ್ರಗಳಲ್ಲಿದ್ದ ಸದರಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿಯ ನೋಟೀಸು, ಜಾಹೀರಾತುಗಳೂ ಈಗ ಕಾಣಲಿಕ್ಕೆ ಸಿಕ್ಕುವದೇ ಇಲ್ಲ.

ಬೆಂದೂರು, ಮಂಗಳೂರು,
ತಾ. 14—12—1916.

ಜೆ. ಡಿ. ಪಿನೆಹಾಸ್,
ನಂಬ್ರ 4849ನೇ ಡಿಪ್ಲೋಮದ ವಾರಿಸುದಾರ.

ಅಯ್ಯಾ ಪತ್ರಕರ್ತರೇ,

ನೇತ್ರಾವತಿ ಹೊಳೆಯ ಸಂಕದ ಮೇಲಣ ಕಾಲುದಾರಿಯ ಮೇಲೆ ಹಾಸಿದ ಮರದ ತುಂಡುಗಳಲ್ಲಿ ಹಲವು ಹುಳಹಿಡಿದು ಹೋಗಿಯವೆ; ಇನ್ನೂ ಕೆಲವುಗಳ ಮೊಳೆಗಳು ಕಿತ್ತುಹೋಗಿವೆ. ಇದನ್ನೆಲ್ಲ ಈಗಲೇ ದುರುಸ್ತುಮಾಡದಿದ್ದರೆ ರಾತ್ರಿಹಗಲು ಆ ಸಂಕದ ಮೇಲೆ ಹೋಗುವ ಜನರಿಗೆ ಅಪಾಯವುಂಟಾಗುವುದು ನಿಶ್ಚಯ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಎಚ್ಚರವಿಡಬೇಕಾಗುವುದು.

ದಾರಿಗ.

ಯೂರೋಪದ ಮಹಾ ಯುದ್ಧ.

—.o.—

ಯೂರೋಪದ ಮಹಾ ಯುದ್ಧದ ರಣರಂಗದಲ್ಲಿ ರುಮೇನಿಯವನ್ನು ನೋಡಿದವಾದರೆ ರುಮೇನಿಯದ ಪ್ರಕೃತ ಸ್ಥಿತಿಯು ಅವ್ಯವಸ್ಥೆಯಲ್ಲಿದೆಂತ ಹೇಳಲು ಪ್ರತ್ಯವಾಯ ತೋರುವದಿಲ್ಲ. ರುಮೇನಿಯದ ವಲ್ಲಾಚಿಯ ಸಂಸ್ಥಾನವು ಹಂಗೇರಿಯ ಮತ್ತು ಬಲ್ಗೇರಿಯದ ಮಧ್ಯೆ ಒಂದು ದೊಡ್ಡ ಪಾಗಾರದಂತೆ ಇದ್ದುದರಿಂದ ಜರ್ಮನರು ಟರ್ಕಿಯವರೊಡನೆ ವ್ಯವಹಾರ ನಡಿಸಲಿಕ್ಕೆ ಕಷ್ಟಸಾಧ್ಯವಾಗಿತ್ತು. ಈಗ ಅದನ್ನು ಶತ್ರುಗಳು ಸ್ವಾಧೀನಮಾಡಿಕೊಂಡು ಬ್ರಾಸೋದ ಉತ್ತರದಿಂದ ಸೆರ್ನೋವಾಡ ಮತ್ತು ಕಪ್ಪು ಸಮುದ್ರದ ವರೆಗೆ ಸರಾಗವಾದ ರಣರಂಗವನ್ನು ಸ್ಥಾಪಿಸಿಕೊಂಡಿದ್ದಾರೆ. ಹೀಗೆ ಶತ್ರುಗಳ ರಣರಂಗವು ೨೦೦ ಮೈಲುಗಳಿಗಿಂತಲೂ ಕಡಿಮೆಯಾಯಿತು. ಶತ್ರುಗಳು ರುಮೇನಿಯದಲ್ಲಿ ನುಗ್ಗಿಹೋಗಿ ಮಾಡಿದ ಕದನಗಳ ಫಲ ಇದೇ. ತಾವು ಈಗ ಈ ರಣರಂಗದಲ್ಲಿ ತಮ್ಮ ಉದ್ದಿಷ್ಟಹೇತುವನ್ನು ಸಾಧಿಸಿಕೊಂಡಿರುವೆವು. ನುಗ್ಗಿಹೋಗಿ ಕದನ ಮಾಡುವದನ್ನು ಬಿಟ್ಟು ಬಲಕಾಯಿಸಿಕೊಳ್ಳಲು ಶಕ್ತರಾಗಿರುವೆವು ಎಂದು ಶತ್ರುಗಳು ಹಿಗ್ಗುವರು. ರುಮೇನಿಯದ ಅರ್ಧಾಂಶಕ್ಕೆ ಮಿಕ್ಕಿದ ಪ್ರದೇಶವು ಶತ್ರುಗಳ ಸ್ವಾಧೀನವಾಗಿದೆ. ಎಣ್ಣೆ ಮತ್ತು ಗೋಧಿ ಬೆಳೆಯುವ ಪ್ರಾಮುಖ್ಯ ಪ್ರಾಂತ್ಯಗಳು ಶತ್ರುಗಳಿಗೆ ಸಿಕ್ಕಿಯವೆ. ಹೀಗೆ ಶತ್ರುಗಳಿಗೆ ಅವಶ್ಯವಾಗಿ ಬೇಕಾಗಿದ್ದ ಪೆಟ್ರೋಲ್ ಮತ್ತು ಆಹಾರವು ಸುಲಭವಾಗಿ ದೊರಕಿದಂತಾಯಿತು. ಅಷ್ಟೇ ಅಲ್ಲ; ಒಳ್ಳೇ ದಾರಿ ವ್ಯವಹಾರಗಳಿರುವ ರುಮೇನಿಯದ ಒಂದಂಶವೂ ಶತ್ರುಗಳ ಸ್ವಾಧೀನವಾಗಿದೆ. ಶತ್ರುಗಳ ಕೈಸೇರಿದ ವಲ್ಲಾಚಿಯ ಸಂಸ್ಥಾನದ ನದಿಗಳೂ ಶತ್ರುಗಳ ಸ್ವಾಧೀನವಿರುವದರಿಂದ ಈ ನದಿಗಳ ಮೂಲಕ ಬಲಕಾಯಿಸಿಕೊಳ್ಳಲು ಶತ್ರುಗಳಿಗೆ ಸುಲಭಸಾಧ್ಯವಾಯಿತು. ಆಸ್ಟ್ರಿಯದವರ ಪರಾಜಯ, ಜರ್ಮನರಿಗೆ ಸೊಮ್ಮೆಯಲ್ಲಿದ ಅಪರಿಮಿತ ನಷ್ಟ, ವರ್ಡನನ್ನು ಸ್ವಾಧೀನಮಾಡಿಕೊಳ್ಳಲು ಅಸಾಧ್ಯವಾಗಿ ಹೋದದ್ದು — ಈ ಎಲ್ಲಾ ವಿಷಯಗಳಿಂದ ಕುಗ್ಗಿಹೋಗಿದ್ದ ಜರ್ಮನ್ ದೇಶದ ಜನರು ಈಗ ರುಮೇನಿಯದಲ್ಲಾದ ಜಯದಿಂದ ಹಿಗ್ಗಿಕೊಂಡು ನಿಜವಾಗಿಯೂ ನಿರ್ಬಲವಾಗುತ್ತ ಬರುವದಾದರೂ ಜಯದೇವತೆಯು ತಮ್ಮ ಕಡೆಯಲ್ಲಿಯೇ ಇದೆ ಎಂತ ನಂಬುವರಾಗಿಯಿತು. ಜರ್ಮನ್ ದೇಶದಲ್ಲಿ ಆಹಾರವಿಲ್ಲದೆ ಅಲ್ಲಿಯ ಜನರು ಕಷ್ಟಕ್ಕೊಳಗಾಗುವ ಈ ಕಾಲದಲ್ಲಿ ರುಮೇನಿಯದ ಪೈರುಗಳು ಶತ್ರುಗಳ ಕೈಸೇರಿದ್ದು ಹದ್ದಿಗೆ ಹೆಣಸಿಕ್ಕಿದಂತಾಯಿತು. ಈ ಜಯದಿಂದ ಜರ್ಮನರು ತಮ್ಮ ರಣರಂಗದ ವಿಸ್ತೀರ್ಣವನ್ನು ಕಡಿಮೆಮಾಡಿಕೊಂಡು ಟರ್ಕಿಯೊಡನೆ ವ್ಯವಹಾರ ನಡಿಸಲು ಸಾಧ್ಯವಾಯಿತು. ಮತ್ತು ರುಷ್ಯನರ ಎಡಕಡೆಯ ಸೇನೆಯ ಮೇಲೆ ಬೀಳಲು ಈಗ ಅದಕ್ಕೆ ಅನುವಾಗಿದೆ. ಅಂತೆಯೇ ಮೊನಸ್ಟಿರಿನ ಉತ್ತರದಲ್ಲಿರುವ ಮಿತ್ರರ ಸೇನೆಯ ಕಡೆಗೂ ತನ್ನ ದೃಷ್ಟಿಯನ್ನು ತಿರುಗಿಸಬಹುದಾಗಿದೆ. ಇತ್ತ ಕಡೆ ಮಿತ್ರರ ಯುದ್ಧಸಾಧನೆಯನ್ನು ನೋಡುವದಾದರೆ ಅವರು ರುಮೇನಿಯವನ್ನು ತಮ್ಮ ಕಡೆಗೆ ಸೇರಿಸಿಕೊಳ್ಳುವ ಯತ್ನದಲ್ಲಿ ಜಯಪ್ರದರಾದರು. ಆದರೆ ರುಮೇನಿಯವು ಯುದ್ಧಕ್ಕೆ ಸೇರಿದ್ದರಿಂದ ಉಂಟಾಗಬಹುದಾಗಿದ್ದ ಲಾಭಗಳನ್ನು ಪಡೆಯಲು ತಕ್ಕ ಯತ್ನಗಳನ್ನು ಮಾಡದೆ ಹೋದರು. ಸಲೋನಿಕದಲ್ಲಿ ಮಿತ್ರರು ಅಪಾರವಾದ ಸೇನೆಯನ್ನು ತಂದೊಡ್ಡಿ ಮಹಾಯುದ್ಧ ಸನ್ನಾಹವನ್ನು ಮಾಡುತ್ತಿರುವರಾದರೂ ಈ ಸೇನೆಯು ಜನರಲ್ ಸರೆಲ್‌ರವರು ತಯಾರಿಸಿದ ಸೇನಾನೆಲೆಗಳನ್ನು ಕಾಪಾಡಿಕೊಳ್ಳುವದಕ್ಕೆ ಮಾತ್ರ ಶಕ್ತಿಯುಳ್ಳದ್ದಾಗಿದೆ. ರುಮೇನಿಯನರು ಬಲ್ಗೇರಿಯ ಮತ್ತು ಟ್ರಾನ್ಸಿಲವಾನಿಯವನ್ನು ನುಗ್ಗಿದಾಗ ಈ ಸೇನೆಯು ದಕ್ಷಿಣ ರಣರಂಗದಲ್ಲಿ ಇದ್ದುದರಿಂದ ಇತರ ಕಾರ್ಯಗಳನ್ನು ಮಾಡಲು ಅದಕ್ಕೆ ಅನಾನುಕೂಲವಾಗಿದೆಂತ ತೋರುತ್ತಿದೆ. ಹೀಗಾದರೂ ಡೊಬ್ರುಡ್ಜಾದಲ್ಲಿರುವ ರುಷ್ಯೋ ರುಮೇನಿಯರ ಸೇನೆಯು ತಮ್ಮ ನೆಲೆಗಳನ್ನು ರಕ್ಷಿಸಿಕೊಂಡಿದ್ದರೆ ಶತ್ರುಗಳಿಗೆ ರುಮೇನಿಯದಲ್ಲಿ ಕ್ಷೇಮವಿರುವದು ತುಂಬಾ ಅಸಾಧ್ಯವಾಗಿದೆ, ಅದಲ್ಲದೆ ಹಂಗೇರಿಯಲ್ಲಿ ರುಷ್ಯಯನರು ಮುಂದರಿಸಿ ಬಂದರೆ ಉತ್ತರಪಾರ್ಶ್ವದ ರಣರಂಗದಲ್ಲಿ ಸ್ಥಿತಿಸ್ಥಾಪಕವು ಉಂಟಾಗಲಿಕ್ಕೆ ಸಂದೇಹವಿಲ್ಲ. ಹೇಗೂ ಇರಲಿ; ರುಮೇನಿಯವು ಈಗ ತನ್ನ ಸೇನೆಯು ನಾಶವನ್ನು ಮಾಡಿಕೊಳ್ಳುವ ಬದಲಿಗೆ ಬುಕಾರೆಸ್ಟನ್ನು ಬಿಟ್ಟು ಹೋದದ್ದು ಈ ಯುದ್ಧದಲ್ಲಿ ಅದು ತೋರಿಸಿದ ಒಂದು ಮಹತ್ವಾದ ವಿಷಯವಾಗಿದೆ.

ಪಶ್ಚಿಮ ರಣರಂಗ.

ಫ್ರೆಂಚರು ಈ ರಣರಂಗದಲ್ಲಿ ಕೆಲವು ದಿವಸಗಳ ವರೆಗೆ ಫಿರಂಗಿ ಮೊದಲಾದ ಯುದ್ಧ ಸನ್ನಾಹಗಳನ್ನು ಮಾಡುತ್ತಿದ್ದು ಈಗ ಕಾನೇ ಮ್ಯೂಜ್ ಮತ್ತು ವೊವ್ರೆಯ ಮಧ್ಯೆ ಡೊವಾವೊಂಟಿನ ಉತ್ತರದಲ್ಲಿ ಹಲ್ಲೆಮಾಡಿ, ಶತ್ರುಗಳ ರಣರಂಗವನ್ನು ಪ್ರತಿ ಕಡೆಯಲ್ಲಿಯೂ ಹರಿದು ಬಿಟ್ಟಿರುತ್ತಾರೆ. ಹಲವು ಕಂದಕಗಳೂ ಫ್ರೆಂಚರ ಸ್ವಾಧೀನವಾಗಿರುವವು. ಅದಲ್ಲದೆ ವಾಚರಾವಿಲ್ಲೆ ಎಂಬ ಗ್ರಾಮವೂ, ಚೆಂಬರೆಟ್ಟೆಯ ಹೊಲಗದ್ದೆಗಳೂ, ಹಾರ್ಡೊನ್ಮಂಟ ಮತ್ತು ಬೆಜೊನ್‌ವಾಕ್ಸಿನ ಜರ್ಮನರ ಸನ್ನಾಹಗಳೂ ಫ್ರೆಂಚರ ಕೈಸೇರಿರುವವು. ೭,೫ ಸಾವಿರಕ್ಕೆ ಮಿಕ್ಕಿದ ಶತ್ರುಸೈನಿಕರು ಫ್ರೆಂಚರ ಸೆರೆ ಬಿದ್ದಿರುವರು. ಫ್ರೆಂಚರು ಈ ಕದನದಲ್ಲಿ ಜರ್ಮನರ ೫ ಡಿವಿಜನ್ ಸೇನೆಗಳನ್ನು ಸೋಲಿಸಿರುತ್ತಾರೆ. ಪೆಪ್ಪರ್ ಹಿಲ್ ಎಂಬ ದಿನ್ನೆಯ ಬಳಿ ಜರ್ಮನರು ಭೀಕರವಾಗಿ ಹಲ್ಲೆಮಾಡಿದರು. ಫ್ರೆಂಚರು ಅವರನ್ನು ಸೋಲಿಸಿ ಹಿಂದಕ್ಕೆ ಓಡಿಸಿದ್ದಾರೆ. ಈ ಕದನಗಳಲ್ಲಿ ಫ್ರೆಂಚರ ಸೆರೆ ಬಿದ್ದವರ ಸಂಖ್ಯೆ ೧೦,೦೦೦ಕ್ಕೆ ಮಿಕ್ಕಿರುತ್ತದೆ.

ಬ್ರಿಟಿಷ ಸೈನಿಕರು ಅರ್ಮೆಂಟಿಯರಿಸ ಮತ್ತು ಯಿಯರ್ ಸ್ಕಾಟ್ ಬಳಿ ಶತ್ರುಗಳ ಕಂದಕಗಳ ಮೇಲೆ ಹಲ್ಲೆಮಾಡಿ ಜಯಪ್ರದರಾಗುತ್ತಿದ್ದಾರೆ.

ಬಾಲ್ಕನ್.

ತಾ. ೧೪ನೇ ದಿವಸ ಮಧ್ಯಾನ್ಹ ೩ ಗಂಟೆಗೆ ಮಿತ್ರ ರಾಜ್ಯಗಳವರು ಗ್ರೀಕ ಸರಕಾರಕ್ಕೆ ೨೪ ತಾಸಿನ ಅವಧಿಯ ಒಂದು ಪತ್ರವನ್ನು ಕಳುಹಿಸಿಕೊಟ್ಟು ಥೆಸಲ್ಲಿಯಲ್ಲಿರುವ ಗ್ರೀಕ ಸೇನೆಯನ್ನೆಲ್ಲಾ ಹಿಂದೆ ಕರೆಯಿಸಬೇಕು. ಮಿತ್ರರು ಹೇಳುವ ಸೇನೆಯ ಅಂಶವನ್ನು ಯುದ್ಧ ಸಾಹಿತ್ಯ ಸಮೇತ ಪೆಲೊಪೊನೆಸಸ್‌ಗೆ ಕಳುಹಿಸಿಕೊಡಬೇಕು ಎಂಬದಾಗಿ ತಿಳಿಸಿರುತ್ತಾರೆ. ಮಿತ್ರರು ಕೇಳಿಕೊಂಡ ಶರ್ತಗಳಿಗೆ ಗ್ರೀಕರು ಒಪ್ಪಿರುತ್ತಾರೆಂತ ಈಗ ತಾನೇ ವರ್ತಮಾನ ಬಂದದೆ. ಗ್ರೀಕಸೈನಿಕರು ಉತ್ತರ ಗ್ರೀಸ್ ಅಂದರೆ ಥೆಸಲ್ಲಿ ಪ್ರಾಂತ್ಯವನ್ನು ಬಿಟ್ಟು ಹೋಗುತ್ತಿದ್ದಾರೆಂತಲೂ ವಾರ್ತೆ ಬಂದದೆ.

ರುಷ್ಯನರ ಯುದ್ಧನಾವೆಗಳು ಬಾಲ್ಟಿಕ್ ಬಂದರದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿಯದೆ. ಬಲ್ಗೇರಿಯನರು ಮೊನಸ್ಟಿರಿನ ಮೇಲೆ ಏನೊಂದು ಪ್ರಯೋಜನವಿಲ್ಲದೆ ಗುಂಡು ಹಾರಿಸುತ್ತಿದ್ದಾರೆ.

ಸಂಧಿ ಪ್ರಸ್ತಾಪ.

ಯುದ್ಧವು ಪ್ರಾರಂಭವಾದಂದಿನಿಂದ ಎಂದೂ ನಡೆಯದ ಒಂದು ವಿಶೇಷ ಪ್ರಸ್ತಾಪವು ಜರ್ಮನ್ ಮಂತ್ರಿ ಸಭೆಯಲ್ಲಿ ಬಂದಿರುವದು. ಜರ್ಮನ್ ಮುಖ್ಯಮಂತ್ರಿಯವರು ಪ್ರಶ್ಯನ್ ಮಂತ್ರಿ ಸಭೆಯನ್ನು ಕೂಡಿಸಿ, ಈ ಸಭೆಗೆ ಆಸ್ಟ್ರಿಯ, ಬಲ್ಗೇರಿಯ, ಟರ್ಕಿ ಮಂತ್ರಿಗಳನ್ನೂ, ತಟಸ್ಥ ರಾಜ್ಯಗಳ ಮಂತ್ರಿಗಳನ್ನೂ ಬರಮಾಡಿ ಒಪ್ಪಂದದ ಪ್ರಸ್ತಾಪವನ್ನು ಎತ್ತಿರುತ್ತಾರೆ. "ಜರ್ಮನರೂ ಅವರ ಪಕ್ಷದ ರಾಷ್ಟ್ರಗಳವರೂ ಸಹ ದೇವರಿಗೆ ಹೆದರಿ ತಮ್ಮ ಕರ್ತವ್ಯವನ್ನು ಗ್ರಹಿಸಿ ಇಂದಿನಿಂದ ಮಿತ್ರರಾಜ್ಯಗಳವರೊಡನೆ ಸಂಧಿ ಮಾಡಲು ಅಪೇಕ್ಷಿಸುತೇವೆ" ಎಂತ ಜರ್ಮನ್ ಮಂತ್ರಿಯವರು ಮಂತ್ರಿಸಭೆಯಲ್ಲಿ ಹೇಳಿರುತ್ತಾರೆ. ಈ ಸೂಚನೆಯನ್ನು ಶತ್ರುರಾಜ್ಯಗಳವರು ಮಿತ್ರರಾಜ್ಯಗಳವರಿಗೆ ಶಧ್ಯದಲ್ಲೆ ಕಳುಹಿಸಿ ಕೊಡುವರು. ಈ ಸಂಧಿ ಪ್ರಸ್ತಾಪದಲ್ಲಿರುವ ಶರ್ತಗಳಾವುವೆಂಬ ವರ್ತಮಾನವು ಇನ್ನೂ ನಿಜವಾಗಿ ತಿಳಿದಿರುವದಿಲ್ಲ. ಆದರೆ ವಾಸಿಂಗ್ಟನ್ ನಗರದಿಂದ ಬಂದ ವಾರ್ತೆಯಿಂದ ಈ ಸಂಧಿ ಪ್ರಸ್ತಾಪದಲ್ಲಿ ಮಿತ್ರರ ಕೈಸೇರಿದ ಶತ್ರುಗಳ ಪ್ರದೇಶಗಳನ್ನು ಇದ್ದಕ್ಕಿದ್ದ ಹಾಗೆ ಬಿಟ್ಟುಕೊಡುವದಾದರೆ ಜರ್ಮನರು ಬೆಲ್ಜಿಯಮ್ ಮತ್ತು ಫ್ರಾನ್ಸಿನಲ್ಲಿ ಸ್ವಾಧೀನ ಮಾಡಿಕೊಂಡ ಪ್ರದೇಶಗಳನ್ನು ಬಿಟ್ಟು ಕೊಡುವರು. ಬಾಲ್ಕನ್ ಪ್ರದೇಶದ ಇತರ್ಥವು ಒಪ್ಪಂದ ಸಂಬಂಧವಾಗಿ ಕೂಡುವ ಸಭೆಯಲ್ಲಿ ಆಗತಕ್ಕದ್ದು ಎಂಬ ಸಲಹೆಗಳು ಇವೆಯೆಂತ ತಿಳಿದು ಬರುತ್ತದೆ. ಹೇಗೂ ಇರಲಿ; ಜರ್ಮನರ ಈ ಸಂಧಿ ಪ್ರಸ್ತಾಪಕ್ಕೆ ಮಿತ್ರರಾಜ್ಯಗಳವರು ಒಪ್ಪುವ ಹಾಗೆ ಇಲ್ಲ. ಮಿತ್ರರಾಜ್ಯಗಳ ಎಲ್ಲಾ ವರ್ತಮಾನಪತ್ರಗಳು ಈ ಜರ್ಮನರ ಸಂಧಿ ಪ್ರಸ್ತಾಪವು ಸಂಧಿ ಪ್ರಸ್ತಾಪವಲ್ಲ; ಏನೋ ಕುತಂತ್ರವಾಗಿದೆ. ಇವರು ಈ ವೇಳೆಯಲೇ ಸಂಧಿಯನ್ನು ಮಾಡಬೇಕೆಂತ ಯುನೈಟೆಡ್ ಸ್ಟೇಟಿನವರನ್ನು ಬೇಡಿ ಬೇಡಿ ಕಡೆಗೆ ಸೋತು ಹೋಗಿ ಈಗ ನೆಟ್ಟಿಗೆ ತಾವೇ ನಿರ್ವಾಹವಿಲ್ಲದೆ ಸಂಧಿ ಪ್ರಸ್ತಾಪವನ್ನು ತೆಗೆದಿದ್ದಾರೆ. ಜರ್ಮನರ ಕೈಸೇರಿದ ಪ್ರದೇಶಗಳನ್ನು ಮಿತ್ರರು ಪುನಃ ಸ್ವಾಧೀನಮಾಡಿಕೊಂಡು ಶತ್ರುಗಳಿಂದ ಇದಕ್ಕೆ ತಕ್ಕ ಪರಿಹಾರವನ್ನು ಪಡೆಯುವವರೆಗೆ ಮಿತ್ರರಾಜ್ಯಗಳವರು ಎಂದೂ ಸಂಧಿ ಪ್ರಸ್ತಾಪಕ್ಕೆ ಒಪ್ಪುವ ಹಾಗೆ ಇಲ್ಲ ಎಂತ ಒಂದೇ ಸವನೆಯಿಂದ ಹೇಳುತ್ತಿವೆ. ಮಿತ್ರರಾಜ್ಯಗಳ ಸರಕಾರದವರಾದರೋ ಹೀಗೆಯೇ ಹೇಳುತ್ತಿದ್ದಾರೆ. ಜರ್ಮನರ ಕ್ಷಾತ್ರವೃತ್ತಿಯನ್ನು ನಾಶಮಾಡಿ, ಬೆಲ್ಜಿಯಮ್, ಸರ್ವಿಯ ಮೊದಲಾದ ರಾಜ್ಯಗಳಿಗೆ ಆದ ಅನ್ಯಾಯಕ್ಕೆ ಪ್ರತಿಫಲವನ್ನು ಕೊಟ್ಟು ಈ ರಾಜ್ಯಗಳಿಗೆ ಸ್ವಾತಂತ್ರ್ಯವನ್ನು ಕಲ್ಪಿಸಿಕೊಡುವ ವರೆಗೆ ಸಂಧಿ ಪ್ರಸ್ತಾಪವೇ ಇಲ್ಲವೆಂತ ಇಂಗ್ಲಾಂಡ್ ರುಷ್ಯಾ, ಫ್ರಾನ್ಸ್ ಇಟಲಿ ಮಂತ್ರಿಗಳು ಹೇಳುತ್ತಿದ್ದಾರೆ. ಶತ್ರುರಾಜ್ಯಗಳ ಈ ಸಂಧಿ ಪ್ರಸ್ತಾಪದ ಪತ್ರವನ್ನು ಈಗ ತಾನೇ ಅಮೇರಿಕ ಸರಕಾರದವರು ಮಿತ್ರರಾಜ್ಯಗಳಿಗೆ ಕಳುಹಿಸಿಕೊಟ್ಟಿರುತ್ತಾರೆ.

ಜಲಂತರ್ಗಾಮಿ ನಾವೆಗಳು.

ಈ ವಾರದಲ್ಲಿಯೂ ಬ್ರಿಟಿಷರ, ನೋರ್ವೆಯವರ, ಬೆಲ್ಜಿಯನರ, ಗ್ರೀಕರ, ಡಚ್ಚರ ಹಡಗಗಳಲ್ಲಿ ಒಟ್ಟಿಗೆ ೩೦-೩೫ ಹಡಗಗಳು ಶತ್ರುಗಳ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

ವಿದೇಶ ವೃತ್ತಾಂತ.

ಬಂಗಾಳದ ಗವರ್ನರರಾಗಿ ನೇಮಿಸಲ್ಪಟ್ಟ ರೊನಾಲ್ಡ್ಸೆ ಪ್ರಭುಗಳ ವಿಷಯವಾಗಿ ಮಿ। ಗಿನ್ನೆಲ್ ಎಂಬವರು ಬ್ರಿಟಿಷ ಕಾಮನ್ಸ ಸಭೆಯಲ್ಲಿ ಪ್ರಸ್ತಾಪಿಸಿದ್ದಲ್ಲಿ ಸ್ಟೇಟ್ ಸೆಕ್ರೆಟರಿಯವರಾದ ಮಿ। ಚೆಂಬರ್ಲೇನರು ಈ ನೇಮಕವನ್ನು ಆದರಿಸಿ, ರೊನಾಲ್ಡ್ಸೆ ಪ್ರಭುಗಳು ದೇಶ ಸಂಚಾರ ಮಾಡಿ ಒಳ್ಳೇ ಅನುಭವವನ್ನು ಪಡೆದವರು, ಹಿಂದೀ ರಾಜಕೀಯೋದ್ಯೋಗ ಸಭೆಯಲ್ಲಿ ಮೆಂಬರರಾಗಿದ್ದವರು, ಕಾಮನ್ಸ್ ಸಭೆಯ ಮೆಂಬರರು, ಹಿಂದೂಸ್ಥಾನದ ವಿಷಯವಾಗಿ ಚೆನ್ನಾಗಿ ಬಲ್ಲವರು, ಈ ವರೆಗೆ ನೇಮಿಸಲ್ಪಟ್ಟ ಕೆಲಸದಲ್ಲೆಲ್ಲಾ ಒಳ್ಳೇ ಹೆಸರನ್ನು ಪಡೆದವರು ಎಂಬದಾಗಿ ಹೇಳಿರುವರು ಮತ್ತು ರೊನಾಲ್ಡ್ಸೆ ಪ್ರಭುಗಳು ಬಂಗಾಳ ಗವರ್ನರ ಪದವಿಯನ್ನು ಅಂಗೀಕರಿಸಿದ್ದರಿಂದ ಇಂಡಿಯಾ ಸರಕಾರದವರು ಬಹಳ ಆನಂದಪಟ್ಟಿರುತ್ತಾರಲ್ಲದೆ ಈ ಕೆಲಸದಲ್ಲಿಯೂ ಅವರು ವಿಶೇಷ ಸನ್ಮಾನಕ್ಕೆ ಪಾತ್ರರಾಗುವರೆಂಬ ತುಂಬಾ ಭರವಸೆಯುಳ್ಳವರಾಗಿದ್ದಾರೆಂತ ಉತ್ತರ ಕೊಟ್ಟಿರುವರು.

೧೯೧೫ನೇ ಇಸವಿಯ ಪ್ರಾರಂಭದಲ್ಲಿ ಟರ್ಕಿಯಲ್ಲಿ ೧,೮೦೦,೦೦೦ ಅರ್ಮೇನಿಯರು ಇದ್ದರು. ಈ ಪೈಕಿ ೬೦೦,೦೦೦ ಮಂದಿಯನ್ನು ಜರ್ಮನರ ಆಜ್ಞಾನುಸಾರ ತುರ್ಕರು ಕೊಂದುಹಾಕಿರುವರು ಎಂತ ತಿಳಿದುಬರುತ್ತದೆ.

ಹಿಂದೂಸ್ಥಾನದಿಂದ ಪ್ರಿವಿಕೌನ್ಸಿಲಿಗೆ ಹೋಗುವ ದಾವೆಗಳ ಇತ್ಯರ್ಥವಾಗುವರೆ ಬಹಳ ವಿಳಂಬವಾಗುವದನ್ನು ಪ್ರಿವಿಕೌನ್ಸಿಲಿನ ಜುಡೀಶಿಯಲ್ ಕಮಿಟಿಯವರು ಈ ದಿವಸಗಳಲ್ಲಿ ೨ ಸಾರಿ ಆಕ್ಷೇಪಿಸಿರುತ್ತಾರೆ. ೧೯೧೪ನೇ ಇಸವಿಯಲ್ಲಿ ದಾಖಲಾದ ಬಂಗಾಳದ ಒಂದು ಅಪೀಲು ಇನ್ನೂ ಬಾಕಿಯಿರುವದೇ ಈ ಕಮಿಟಿಯವರು ಹೀಗೆ ಆಕ್ಷೇಪಿಸಲು ಕಾರಣವಾಯಿತು.

ಉತ್ತರ ಹಿಂದೂಸ್ಥಾನ.

ಇದೇ ತಾ. ೧೦ರಲ್ಲು ಲಕ್ನೌ ಪಟ್ಟಣದಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿಬಂತು. ಇದೇ ಬರುವ

ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಬಹುಮಾನಪಟ್ಟ ಪಂಡಿತ ಜಗತ್ ನಾರಾಯಣರವರು ಈ ಸಭೆಯಲ್ಲಿ ಅಧ್ಯಕ್ಷರಾಗಿದ್ದು ಈ ವರ್ಷ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯ ವಿಶೇಷತೆಯನ್ನೂ ಈ ಸಂದು ಕಟ್ಟಿನಲ್ಲಿ ಸ್ವರಾಜ್ಯವನ್ನು ಕೇಳುವ ಅವಶ್ಯಕತೆಯನ್ನೂ ಕೂಡಿದ ಸಭಿಕರಿಗೆ ಕೆಲವು ಕಾಲೋಚಿತ ಮಾತುಗಳಿಂದ ತಿಳಿಯಪಡಿಸಿದರು. ಅಲ್ಲಹಾಬಾದಿನಿಂದ ಈ ಸಭೆಗೆ ಬಂದಿದ್ದ ಬಹುಮಾನಪಟ್ಟ ಡಾಕ್ಟರ್ ತಾಜ ಬಹದ್ದೂರ ಸಪ್ರುರವರು ಸುಮಾರು ೧ ತಾಸುಗಳವರೆಗೆ ಭಾಷಣ ಕೊಟ್ಟು ಹಿಂದೂಸ್ಥಾನಕ್ಕೆ ಬ್ರಿಟಿಷ ಸಾಮ್ರಾಜ್ಯದೊಳಗಣ ಸ್ವರಾಜ್ಯ ದೊರೆತರೆ ಅದು ಹ್ಯಾಗೆ ಅಭಿವೃದ್ಧಿಯನ್ನು ಹೊಂದುವದೆಂಬದನ್ನು ಭಾಷಣದಲ್ಲಿ ಸೂಚಿಸಿದರು. ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವದಕ್ಕೆ ಆಗ್ಗಾಗ್ಯೆ ಮುಂದೆ ಬರುತ್ತಿರುವ ಆಕ್ಷೇಪಗಳ ವಿಮರ್ಶನೆಯನ್ನು ಭಾಷಣಕಾರರು ಮಾಡಿ ಹಿಂದೂಸ್ಥಾನದ ಜನರು ಸ್ವರಾಜ್ಯ ಪಡೆಯಲು ಸಿದ್ಧರಾಗಿದ್ದಾರೆ, ಅದಕ್ಕೆ ತಕ್ಕ ಪಾತ್ರತೆಯೂ ಅವರಲ್ಲಿದೆಂಬದಾಗಿ ಹೇಳಿದುವರು. ಬ| ಡಾಕ್ಟರ್ ಸಪ್ರುರವರ ಭಾಷಣವನ್ನು ಬಹುಮಾನಪಟ್ಟ ಚಿಂತಾಮಣಿಯವರು ಅನುಮೋದಿಸಿ ಮಾತನ್ನಾಡಿದನಂತರ ಬರುವ ರಾಷ್ಟ್ರೀಯ ಸಭೆಗೆ ೩೦೦ ಮಂದಿ ಪ್ರತಿನಿಧಿಗಳನ್ನು ಆರಿಸಿ ಆ ದಿನದ ಸಭೆಯು ಬರಕಾಸ್ತು ಆಯಿತು.

~~~~~

ಕಾಗದದ ಮತ್ತು ಅಚ್ಚು ಹಾಕುವ ಇತರ ಸಾಮಾಗ್ರಿಗಳ ಬೆಲೆಯು ವಿಪರೀತವಾಗಿ ಏರಿರುವ್ಪದರಿಂದ "ಟೈಮ್ಸ್ ಆಫ್ ಇಂಡಿಯಾ" ಮತ್ತು "ಎಡ್ವೋಕೇಟ್ ಆಫ್ ಇಂಡಿಯಾ" ಮತ್ತು "ಬೊಂಬೆ ಕ್ರಾನಿಕಲ್" ಮುಂಬಾಯಿ—ಈ ಪತ್ರಿಕೆಗಳಿಗೆ ಇದ್ದ ೧ ಆಣೆ ಬೆಲೆಯು ಇದೇ ಬರುವ ಜನವರಿ ತಾ. ೧ರಿಂದ ೨ ಆಣೆಗೆ ಹೆಚ್ಚಿಸೋಣಾಗಿದೆ. ಹೀಗೆ ಬೆಲೆ ಹೆಚ್ಚಿಸಿದ್ದು ತಾತ್ಕಾಲಿಕವಾಗಿ ಎಂತಲೂ ಕಾಗದ ಇತ್ಯಾದಿಗಳ ಬೆಲೆಯು ಮುಂಚಿನಹಾಗೆಯೇ ತಗ್ಗಿದಾಕ್ಷಣ ಈ ಪತ್ರಿಕೆಗಳ ಬೆಲೆಯೂ ಮುಂಚಿನ ದರಕ್ಕೆ ತಗ್ಗಿಸಲಾಗುವದೆಂತಲೂ ತಿಳಿದುಬರುತ್ತದೆ.

~~~~~

ಪಟಿಯಾಲದ ಸೆಂಟ್ರಲ್ ಬಂದಿಖಾನೆಯಲ್ಲಿದ್ದ ಬಂದಿವಾನರಲ್ಲಿ ಜ್ಞಾನಸಿಂಘ್, ಪ್ರತಾಪ, ಚಾಟುಮಾಲಸಿಂಘ್ ಮತ್ತು ದಿಲೀಪಸಿಂಘನೆಂಬವರು ವಾರ್ಡರರ ಮೇಲೆ ಬಿದ್ದು ೮ ವಾರ್ಡರರನ್ನು ಗಾಯಪಡಿಸಿರುವರು. ಹೀಗೆ ವಾರ್ಡರರಿಗೂ ಬಂದಿವಾನರಿಗೂ ಆದ ಕದನದಲ್ಲಿ ಜ್ಞಾನಸಿಂಘನು ಮತ್ತು ಚಾಟೂ ಸಿಂಘನು ಕದನ ನಡೆಯುತ್ತಿರುವಾಗಲೇ ಹತರಾದರು. ಪ್ರತಾಪನು ರಾತ್ರಿಕಾಲ ಸತ್ತುಹೋದನು. ಮಾಲ್ಕಸಿಂಘ್ ಮತ್ತು ದಲೀಪಸಿಂಘ್‌ನಿಗೆ ಗಾಯಗಳಾಗಿರುವವು ಎಂತ ವಾರ್ತೆ ಬಂದಿರುತ್ತದೆ.

~~~~~

ಧಾರವಾಡದಲ್ಲಿ ೨ನೇ ಗ್ರೇಡ್ ಕರ್ನಾಟಕ ಕಾಲೇಜನ್ನು ಸ್ಥಾಪಿಸಬೇಕೆಂಬ ಚಳವಳವು ಕೆಲವು ವರ್ಷಗಳಿಂದ ನಡೆಯುತ್ತಲೇ ಇದೆ. ಈ ಬಗ್ಗೆ ಅಲ್ಲಿಯ ಪ್ರಮುಖರು ೨ ಲಕ್ಷ ರೂಪಾಯಿಗಳನ್ನು ಕೂಡಿಸಿ ಸರಕಾರದವರಿಗೆ ಕೊಡುತ್ತೇವೆಂತ ವಾಗ್ದಾನ ಮಾಡಿದ್ದರು. ಇದೇ ಬರುವ ೧೯೧೯ನೇ ಇಸವಿ ಮಾರ್ಚಿ ತಿಂಗಳೊಳಗೆ ರಾವ್ ಬಹದ್ದೂರ್ ಎಸ್. ಕೆ. ರೊದ್ದ ಮತ್ತು ರಾವ್ ಬಹದ್ದೂರ್ ಆರ್. ಸಿ. ಅರಟಾಳರವರು ಕೂಡಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದ ಈ ೨ ಲಕ್ಷ ರೂಪಾಯಿಗಳನ್ನು ಸರಕಾರದ ಖಜಾನೆಯಲ್ಲಿ ಕೊಟ್ಟರೆ ಧಾರವಾಡದಲ್ಲಿ ೨ನೇ ಗ್ರೇಡ್ ಕಾಲೇಜನ್ನು ಸ್ಥಾಪಿಸುವರೆ ಆಕ್ಷೇಪವಿಲ್ಲವೆಂತ ಸರಕಾರದವರು ನಿರ್ಣಯಿಸಿರುತ್ತಾರೆ.

~~~~~

ಈ ಸಾರಿ ಲಕ್ನೌದಲ್ಲಿ ಜರಗಲಿಕ್ಕಿರುವ ರಾಷ್ಟ್ರೀಯ ಸಭೆಯ ಸಮ್ಬಂಧ ಯುನೈಟೆಡ್ ಪ್ರೊವಿನ್ಸ್‌ಗಳ ಲೆಪ್ಟನೆಂಟ ಗವರ್ನರರಾದ ಸರ್ ಜೇಮ್ಸ್ ಮೆಸ್ಟನರವರು ಒಂದು ಅಪೂರ್ವ ಪತ್ರವನ್ನು ಲಕ್ನೌ ಡಿವಿಜನಿನ ಕಮಿಷನರ ಮೂಲಕ ರಾಷ್ಟ್ರೀಯಸಭೆಯ ಸ್ವಾಗತ ಕಮಿಟಿಯ ಚೇರ್ಮನ್‌ರಾದ ಬಹುಮಾನಪಟ್ಟ ಜಗತ್‌ನಾರಾಯಣರವರಿಗೆ ಕಳುಹಿಸಿಕೊಟ್ಟಿರುತ್ತಾರೆ. "ಸ್ಥಳೀಕ ಸರಕಾರದವರು, ಹಿಂದೂಸ್ಥಾನದ ಆಯಾ ಸಂಸ್ಥಾನಗಳಲ್ಲಿ ಕೂಡುತ್ತಿರುವ ಸಭೆಗಳಲ್ಲಿ ನಡೆಯುವ ಪ್ರಸ್ತಾಪಗಳನ್ನು ಈ ದೇಶದಲ್ಲಿ ಕಾಯಿದೆಸೀರ ಬದಲಾವಣೆಗಳು ಆಗಬೇಕೆಂಬದಾಗಿ ಮತ್ತು ಒಂದು ವಿಧದ ಹೋಮ್ ರೂಲ್ ಸ್ಥಾಪಿಸಬೇಕೆಂಬದಾಗಿ ನಡೆಯುತ್ತಿರುವ ಚಳವಳಗಳನ್ನೂ ಜಾಗರ ನೋಡುತ್ತಿದ್ದಾರೆ. ಈ ಸಂಬಂಧ ಲೆಪ್ಟನೆಂಟ ಗವರ್ನರರವರು ಈಗ ತನ್ನ ಯಾವ ಅಭಿಪ್ರಾಯವನ್ನೂ ತಿಳಿಯಪಡಿಸುವ ಅಪೇಕ್ಷೆಯುಳ್ಳವರಾಗಿಲ್ಲ. ಆದರೆ ಆಯಾ ಭಾಷಣಕಾರರಿಂದ ಪ್ರಯೋಗಿಸಲ್ಪಡುವ ಮಾತುಗಳು ದಿನೇ ಹೋಗುತ್ತಾ ವಿಶೇಷ ಕಠಾಕಠಿಯಾಗುತ್ತಾ ಬರುತ್ತವೆಂಬದು ಅವರ ಲಕ್ಷಕ್ಕೆ ಬಂದಿದೆ. ಪುನಃ ಹೇಳುವದೇನಂದರೆ, ಸರ್ ಜೇಮ್ಸ್ ಮೆಸ್ಟನರು ಪ್ರಜಾಜನರ ಮಾತುಗಳ ಸ್ವಾತಂತ್ರ್ಯಕ್ಕೆ ಕೈಹಾಕುವ ಹಾಗಿಲ್ಲ. ಆದರೆ ಒಂದು ಕಾಲದಲ್ಲಿ ಮತ್ತು ಕೆಲವು ಕಡೆಗಳಲ್ಲಿ ಆದ ಭಾಷಣಗಳಲ್ಲಿ ಹೊರಬಿದ್ದ ಅಭಿಪ್ರಾಯಗಳೂ, ವಾದಾನುವಾದಗಳೂ ಕಾಯಿದೆ ಕಾನೂನುಗಳನ್ನು ಮೀರಿಹೋಗಿರುತ್ತವೆ. ಈ ವಿಷಯದಲ್ಲಿ ಅವರು ಕಣ್ಣುಮುಚ್ಚಿ ಕೂತುಕೊಳ್ಳಲಾರರು. ಬರುವ ರಾಷ್ಟ್ರೀಯ ಸಭೆಯಲ್ಲಿ ಆಗುವ ಭಾಷಣಗಳು ಹೀಗೆ ಕಾಯಿದೆ ಕಾನೂನನ್ನು ಮಿಕ್ಕಿ ಹೋದರೆ ಸ್ಥಳಿಕ ಸರಕಾರದವರು ಅದಕ್ಕೆ ಕೈಹಾಕದೆ ಇರಲಿಕ್ಕಾಗುವದಿಲ್ಲ. ಇದು ಸರಕಾರದವರ ಮತ್ತು ಅವರ ಆಫೀಸರರ ಧರ್ಮವಾಗಿದೆ. ಅಂಥಾ ಸಂಭವಗಳು ಸರಕಾರಕ್ಕೆ ಬಾರದಹಾಗೆ ರಾಷ್ಟ್ರೀಯ ಸಭೆಯ ಕಾರ್ಯನಿರ್ವಾಹಕ ಕಮಿಟಿಯವರು ಮೊದಲೇ ಅಂಥಾ ಭಾಷಣಗಳು ಮೇರೆ ತಪ್ಪಿಹೋಗದಂತೆ ಎಚ್ಚರ ತಕ್ಕೊಳ್ಳುವದು ಒಳ್ಳೇದೆಂತ ಸರಕಾರದವರ ಅಭಿಪ್ರಾಯವಾಗಿದೆ" ಎಂತ ಆ ಪತ್ರದಲ್ಲಿ ಸೂಚಿಸೋಣಾಗಿದೆ.

~~~~~

ಹಿಂದೂಸ್ಥಾನದಲ್ಲಿ ಮನೆಗಳಲ್ಲಿಯೇ ಮಾಡಬಹುದಾದ ಕೈಗಾರಿಕೆಗಳಿಗೆ ಉತ್ತೇಜನಕೊಡುವ ಉದ್ದೇಶದಿಂದ ಬಂಗಾಳದಲ್ಲಿ ಒಂದು ಸಂಘವನ್ನು ಸ್ಥಾಪಿಸುವ ಆಲೋಚನೆಯು ನಡೆದಿರುವದು. ಈ ಸಂದರ್ಭದಲ್ಲಿ ಕಲ್ಕತ್ತೆಯ ಸರಕಾರ ಮಂದಿರದಲ್ಲಿ ಗವರ್ನರ ಪ್ರಭುಗಳ ಪತ್ನಿಯವರ ಅಧ್ಯಕ್ಷತೆಯಲ್ಲಿ ತಾ. ೧೫ರಲ್ಲು ಒಂದು ಸಭೆ ಕೂಡಿಬಂತು. ಜನರಿಂದಲೇ ತಂತಮ್ಮ ಮನೆಗಳಲ್ಲಿ ಮಾಡಬಹುದಾದ ಒಡವೆಗಳನ್ನು ತೆಗೆದುಕೊಳ್ಳುವದಕ್ಕೂ ಅಂಥಾ ಒಡವೆಗಳು ತಕ್ಕ ಕ್ರಯಕ್ಕೆ ಮಾರಿಹೋಗುವಂತೆಯೂ ಮಾಡುವ ಉಪಾಯವಿಲ್ಲದಿರುವದು ವಿಷಾಧಕರವಾಗಿದೆ. ಇಲ್ಲಿಯ ಜನರು ಅಂಥಾ ಕೈಗಾರಿಕೆಗಳನ್ನು ಮಾಡುವಂತೆ ಉತ್ತೇಜನ ಕೊಡಬೇಕೆಂದು ತಾನು ಬಹು ದಿವಸಗಳಿಂದಲೂ ಆಲೋಚಿಸುತ್ತಿದ್ದೆನು ಎಂಬದಾಗಿ ಲೇಡಿ ಕಾರ್ಮೈಖಿಯೇಲರವರು ಹೇಳಿದ್ದಲ್ಲದೆ ಇಂಥಾ ಕೈಗಾರಿಕೆಗಳಿಗೆ ಉತ್ತೇಜನ ಕೊಡಲು ಈ ಯುದ್ಧ ತೊಡಗಿದಂದಿನಿಂದ ಎಷ್ಟೋ ಕಾರಣಗಳಿವೆ. ವಿದೇಶಿ ವಸ್ತುಗಳಿಂದ ತುಂಬುತ್ತಿದ್ದ ವಸ್ತುಗಳ ಬದಲಿಗೆ ಇಲ್ಲಿ ಯಾವ ವಸ್ತುಗಳನ್ನು ಮಾಡಬಹುದೆಂಬದನ್ನು ಈ ಯುದ್ಧವು ಚೆನ್ನಾಗಿ ತೋರಿಸಿಕೊಟ್ಟಿದೆ. ಜರ್ಮನಿ ಮತ್ತು ಆಸ್ಟ್ರಿಯದಿಂದ ಈಗ ವಸ್ತುಗಳು ಬರುವದಿಲ್ಲ. ಆದುದರಿಂದ ಇಲ್ಲಿಗೆ ಬೇಕಾದ ಒಡವೆಗಳನ್ನು ಮಾಡಿಕೊಡುವ ಉದ್ದೇಶದಿಂದ ಇತರ ದೇಶಗಳು ಮುಂದರಿಯುವ ಮೊದಲೇ ಇಲ್ಲಿಯವರಿಗೆ ಬೇಕಾದ ವಸ್ತುಗಳನ್ನು ಇಲ್ಲಿಯವರೇ ಮಾಡಿಕೊಳ್ಳುವಂತೆ ಪ್ರಯತ್ನಿಸುವದು ಒಳ್ಳೇದೆಂದು ತನ್ನ ಭಾಷಣದಲ್ಲಿ ಒತ್ತಿ ಹೇಳಿರುತ್ತಾರೆ.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಪ್ರೊಫೆಸರ್ ರಂಗಾಚಾರ್ಯ ರಾವ್‌ಬಹದ್ದೂರರವರು ಇದೇ ತಾ. ೧೬ನೇ ಬೆಳಿಗ್ಗೆ ಮದ್ರಾಸಿನಲ್ಲಿ ಕಾಲಾಧೀನರಾದರು ಎಂಬ ವಿಷಾದಕರವಾದ ವಾರ್ತೆ ಬಂದಿರುತ್ತದೆ. ಪ್ರೊ| ರಂಗಾಚಾರ್ಯರು ೧೯೧೪ನೇ ಇಸವಿಯಲ್ಲಿ ಕೆಲಸದಿಂದ ನಿವೃತರಾದಂದಿನಿಂದ ನೇಮಸ ರೋಗದಿಂದ ಅಸ್ವಸ್ಥರಾಗಿಯೇ ಇದ್ದರು. ಈಚೆಗೆ ಕೆಲವು ತಿಂಗಳ ಹಿಂದೆ ಅವರ ಇಬ್ಬರು ಹೆಮ್ಮಕ್ಕಳು ಕ್ಷಯರೋಗದಿಂದ ಕಾಲವಾದ ದುಃಖದಿಂದ ಅವರ ರೋಗವು ಹೆಚ್ಚಾಗುತ್ತಾ ಬಂತು. ಪ್ರೊಫೆಸರ್ ರಂಗಾಚಾರ್ಯರು ಘನಪಂಡಿತರು, ವಿದ್ಯಾಸಂಪನ್ನರು, ಸಮರ್ಥರಾದ ಪ್ರೊಫೆಸರರು ಆಗಿದ್ದರು. ಇಂಥಾ ವಿದ್ಯಾಸಂಪನ್ನರು ಈಗತಾನೇ ತನ್ನ ೬೫ನೇ ವಯಸ್ಸಿನಲ್ಲಿ ಕಾಲವಾದುದರಿಂದ ಮದ್ರಾಸ್ ಸಂಸ್ಥಾನದ ವಿದ್ಯಾರ್ಥಿಗಳೂ; ಅವರನೆಂಟರಿಷ್ಟರೂ ಬಹಳ ವಿಷಾದಪಡುತ್ತಿದ್ದಾರೆ. ಪ್ರೊಫೆಸರ್ ರಂಗಾಚಾರ್ಯರಂತಹ ವಿದ್ಯಾಸಂಪನ್ನತೆಯೂ ಸೊಗಸಾದ ವಾಕ್ಪಟುತ್ವವುಳ್ಳವರೂ ಸಿಕ್ಕುವದು ವಿರಳ. ಮ. ರಾ. ರಂಗಾಚಾರ್ಯರು ೧೮೮೪ನೇ ಇಸವಿಯಲ್ಲಿ ಕುಂಭಕೋಣದ ಕಾಲೇಜಿಯಲ್ಲಿ ಲೆಕ್ಚರರಾಗಿ ಸೇರಿದ್ದರು. ಇವರು ೧೮೯೦ನೇ ಇಸವಿಯಲ್ಲಿ ಪ್ರೆಸಿಡೆನ್ಸಿ ಕಾಲೇಜಿಯ ಸಂಸ್ಕೃತ ಪ್ರೊಫೆಸರರಾಗಿ ಮತ್ತು ಕಂಪಾರೆಟಿವ್ ಫಿಲೋಲಜಿ ಪ್ರೊಫೆಸರರಾಗಿ ನೇಮಿಸಲ್ಪಡುವವರೆಗೆ ಕುಂಭಕೋಣ ಮತ್ತು ರಾಜಮಹೇಂದ್ರಿ ಕಾಲೇಜುಗಳಲ್ಲಿ ಸಾಯನ್ಸ್, ಇತಿಹಾಸ, ಫಿಲೋಸಫಿ ಲೆಕ್ಚರರಾಗಿ ಇದ್ದರಲ್ಲದೆ ಪ್ರೆಸಿಡೆನ್ಸಿ ಕಾಲೇಜಿಯಲ್ಲಿ ಎರಡಾವರ್ತಿ ಕೆಮಿಸ್ಟ್ರಿ ಮತ್ತು ಫಿಸಿಕ್ಸ್ ಪ್ರೊಫೆಸರರಾಗಿ ಆಕ್ಟಿಂಗ್ ಕೆಲಸ ನೋಡಿದ್ದರು. ಇವರಿಗಿದ್ದ ಅಪೂರ್ವ ಸಂಸ್ಕೃತ ಭಾಷಾಜ್ಞಾನದಿಂದ ಇವರು ಪ್ರೆಸಿಡೆನ್ಸಿ ಕಾಲೇಜಿಯ ಸಂಸ್ಕೃತ ಪ್ರೊಫೆಸರರಾಗಿ ನೇಮಿಸಲ್ಪಟ್ಟರು. ಅವರು ದೇಶವೆಲ್ಲಾ ಸಂಚರಿಸಿ ಹಳೇ ಸಂಸ್ಕೃತ ತಾಳೆಗಳನ್ನು ಕೂಡಿಸಿ, ಕೆಲವನ್ನು ಭಾಷಾಂತರಿಸಿದ್ದರು. ಸಾಯುವವರೆಗೂ ಪೌರ್ವಾತ್ಯ ಹಸ್ತಲೇಖಗಳ ಪುಸ್ತಕ ಭಂಡಾರದ ಪಾರುಪತ್ಯಗಾರರಾಗಿಯೂ ಪುಸ್ತಕಗಳ ರಿಜಿಸ್ಟ್ರಾರರಾಗಿಯೂ ಇದ್ದರು. ಶಿಕ್ಷಣ ಸಂಬಂಧವಾಗಿ ಪ್ರೊ| ರಂಗಾಚಾರ್ಯರು ಮಾಡಿದ ಮಾನ್ಯ ಕೆಲಸಗಳನ್ನು ಸರಕಾರದವರು ಮಾನ್ಯ ಮಾಡಿ ೧೯೦೬ನೇ ಇಸವಿಯಲ್ಲಿ ಅವರಿಗೆ ರಾವ್‌ಬಹದ್ದೂರ್ ಎಂಬ ಬಹುಮಾನವನ್ನು ಕೊಟ್ಟು ಸನ್ಮಾನಿಸಿದರು. ಇವರು ಮದ್ರಾಸ್ ಯುನಿವ-
~~~~~

ರ್ಸಿಟಿಯ ಸೆನೇಟ್ ಮೆಂಬರರಾಗಿದ್ದ ಕಾಲದಲ್ಲಿ ಈ ದೇಶೀ ಭಾಷೆಯ ಪ್ರಾಮುಖ್ಯತೆಯನ್ನು ಯುನಿವರ್ಸಿಟಿಯವರು ಮಾನ್ಯಮಾಡುವಂತೆ ಭಗೀರಥ ಪ್ರಯತ್ನಮಾಡಿದ್ದರು. ಹಿಂದೀ ರಾಜಕೀಯೋದ್ಯೋಗ ಕಮಿಷನಿನ ಮುಂದೆ ಇವರು ಕೊಟ್ಟ ಸಾಕ್ಷ್ಯದಲ್ಲಿ ಇಂಗ್ಲಿಷ್ ಮತ್ತು ಹಿಂದೀ ಪ್ರೊಫೆಸರರಿಗೆ ತೋರಿಸಲ್ಪಡುವ ತಾರತಮ್ಯವನ್ನು ಖಂಡಿಸಿ, ಇದರಿಂದುಟಾಗುವ ಬಾಧಕಗಳನ್ನು ಕಮಿಷನಿನವರಿಗೆ ತೋರಿಸಿ ಕೊಟ್ಟಿದ್ದರು.

~~~~~~

ಸ್ಟ್ರೇಟೋಸಿನ ನ್ಯಾಯವಿಧಾಯಕ ಸಭೆಗೆ ಸರಕಾರದಿಂದ ನೇಮಿಸಲ್ಪಟ್ಟ ೫ ಮೆಂಬರರ ಅವಧಿಯು ಸಧ್ಯದಲ್ಲೇ ಮುಗಿಯುವದರಿಂದ ಪುನಃ ಅವರನ್ನೇ ನೇಮಿಸಲಾಗುವದಿಲ್ಲವೆಂತ ಗವರ್ನರರು ತಿಳಿಸಿರುತ್ತಾರೆ.

~~~~~~

ದಕ್ಷಿಣ ಅಫ್ರೀಕದಲ್ಲಿ ಭಾರತೀಯರ ಕಷ್ಟ ನಿವಾರಣೆ ಬಗ್ಗೆ ಮಾನ್ಯ ಗಂಧಿಯವರ ಸಹಭಾಗಿಯಾಗಿದ್ದ ಮಿ। ಪೊಲಕರವರನ್ನು ಇದೇ ತಾ. ೧೪ರಲ್ಲು ಮದ್ರಾಸಿನ ವೈ. ಎಂ. ಸಿ. ಎಸೋಸಿಯೇಶನಿನಲ್ಲಿ ಮದ್ರಾಸಿನ ಮುಖಂಡರು ಆಮಂತ್ರಿಸಿ, ಅವರಿಗೆ ಸತ್ಕಾರ ಮಾಡಿದರು. ಈ ಸಂದರ್ಭದಲ್ಲಿ ಲೋರ್ಡ ಬಿಷೊಪರವರು ಅಧ್ಯಕ್ಷರಾಗಿದ್ದರು. ಭಾರತೀಯರ ಸಲುವಾಗಿ ಮಿ। ಪೊಲಕರವರು ದಕ್ಷಿಣ ಅಫ್ರೀಖದಲ್ಲಿ ಮಾಡಿದ ಕಾರ್ಯಗಳನ್ನು ಶ್ಲಾಘಿಸುವ ಮಸೂದೆಗಳು ಸಭೆಯ ಮುಂದೆ ತರಲ್ಪಟ್ಟು ಮಿ। ಪೊಲಕರು ಭಾರತೀಯರೊಡನೆ ನಾನಾ ವಿಧದ ಕಷ್ಟ ತಾಳಿದ ವಿಷಯವನ್ನು ಮದ್ರಾಸಿನ ಪ್ರಜಾಜನರು ಮಾನ್ಯ ಮಾಡಿದ್ದಾರೆಂಬ ನಿರ್ಣಯಗಳು ಸಭೆಯಲ್ಲಿ ಆದವು. ದಕ್ಷಿಣ ಅಫ್ರೀಕದಲ್ಲಿ ಭಾರತೀಯರ ಪರವಾಗಿ ಮಿ। ಪೊಲಕರವರಿಂದ ಇನ್ನು ಆಗಬೇಕಾದ ಕಾರ್ಯಗಳು ಇಲ್ಲವಾದುದರಿಂದ ಮಿ। ಪೊಲಕರವರು ಕೆಲವು ತಿಂಗಳುಗಳ ಪರ್ಯಂತರ ಹಿಂದೂಸ್ಥಾನದಲ್ಲಿದ್ದುಕೊಂಡು ನಂತರ ತನ್ನ ಸ್ವಂತ ಊರಾದ ಇಂಗ್ಲಾಂಡಿಗೆ ಹೋಗಿ ಅಲ್ಲಿಯೇ ಇದ್ದುಕೊಳ್ಳುವರು ಎಂಬದಾಗಿ ಅವರ ಮಾತುಗಳಿಂದ ತಿಳಿದುಬಂದಿರುತ್ತದೆ.

~~~~~~

ದಕ್ಷಿಣ ಕನ್ನಡ.

ಸಹಕಾರ.

~~~~~~

೧೯೧೬-೧೭ನೇ ವರ್ಷದ ೪ನೇ ಸರ್ಕಲಾರು.

ಪಂಚಾಯತಿಕೆಯ ಕ್ರಮಗಳಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವು ಯಾವುದೆಂದರೆ—ತನಗೆ ಕಳುಹಿಸಲ್ಪಟ್ಟ ವಿವಾದವನ್ನು ತಾನೇ ಇತ್ಯರ್ಥಪಡಿಸುವುದರ ಬದಲಾಗಿ ಪಂಚಾಯತಿಕೆಗೆ ಒಪ್ಪಿಸಿ ಕೊಡುವದೆಂದು ರಿಜಿಸ್ಟ್ರಾರರವರು ನಿರ್ಣೈಸಿದರೆ, ಪಂಚಾಯತಿದಾರರನ್ನು ಸಹ ಕಕ್ಷಿಗಾರರ ಒಪ್ಪಿಗೆಯ ಮೇಲೆಯೇ ನೇಮಿಸತಕ್ಕದ್ದಾಗಿರುತ್ತದೆ. ಇದರಿಂದಲೂ ಕೂಡಾ ನೇಮಿಸಲ್ಪಡುವ ಪಂಚಾಯತಿದಾರರು ಆಗಾಗ್ಗೆ, ವಿವಾದಗಳು ಬಂದಂತೆ, ಆವಶ್ಯವಿದ್ದಾಗ ನೇಮಿಸಲ್ಪಡಬೇಕೆಂದು ಸ್ಪಷ್ಟವಾಗುವದು. ಅದಲ್ಲದೆ, ಪಂಚಾಯತಿದಾರರನ್ನು ನೇಮಿಸುವ ಸಂಗತಿಗಳಲ್ಲಿ ಪ್ರತಿ ಸರ್ತಿಯೂ ಕಕ್ಷಿಗಾರರ ಒಪ್ಪಿಗೆಯು ಬೇಕೆಂದಾದರೆ, ಯಾವ ಕಕ್ಷಿಗಾರರಾದರೂ ಒಮ್ಮೆ ನೇಮಿಸಿದ ಪಂಚಾಯತಿದಾರರಿಗೇನೇ ಒಪ್ಪುವರೆಂದು ನಿಶ್ಚಯವಿಲ್ಲದಿರುವುದರಿಂದ, ಎಂದರೆ, ಕೆಲವು ಕಕ್ಷಿಗಾರರೊಳಗಣ ವಿವಾದದಲ್ಲಿ ನೇಮಿಸಲ್ಪಟ್ಟ ಪಂಚಾಯತಿದಾರರನ್ನೇ ಬೇರೆ ಕೆಲವು ಕಕ್ಷಿಗಾರರೂ ನೇಮಿಸ್ಯಾರೆಂಬ ಭರವಸೆಯಿಲ್ಲದುದರಿಂದ, ಪ್ರತಿ ಸರ್ತಿಯ ಪಂಚಾಯತಿದಾರರು ಆಯಾ ಸಂದರ್ಭಗಳಲ್ಲೇ ನೇಮಿಸಲ್ಪಟ್ಟವರಾಗಿರಬೇಕೆಂದು ವಿಶದವಾಗುತ್ತದೆ. ಈ ಕಾರಣದಿಂದ ಕೂಡಾ, ಕಳೆದ ಸರ್ಕಲಾರಿನಲ್ಲಿ ಸೂಚಿಸಿದಂತೆ ಹಲವು ಸಂಘಗಳಲ್ಲಿ ಪಂಚಾಯತಿಕೆಯ ಬಗ್ಗೆ ಎಂದು ಮೆಂಬರರೊಳಗಿನಿಂದೊಬ್ಬನನ್ನು ಆರಿಸಿಯಿಡುವುದು ಕ್ರಮಗಳಿಗೆ ವಿರೋಧವಾಗಿರುತ್ತದೆ.

ಈ ಸರ್ಕಲಾರಿನಲ್ಲಿಯೂ ಹಿಂದಿನ ಸರ್ಕಲಾರುಗಳಲ್ಲಿಯೂ ರಿಜಿಸ್ಟ್ರಾರರವರ ಹೆಸರನ್ನು ಮಾತ್ರ ಸೂಚಿಸಿದುದರಿಂದ, ವಿವಾದಗಳನ್ನು ತೀರ್ಮಾನದ ಬಗ್ಗೆ ಒಪ್ಪಿಸುವದಾದರೆ ರಿಜಿಸ್ಟ್ರಾರರವರಿಗೆ ಮಾತ್ರ ಒಪ್ಪಿಸಬೇಕೆಂದು ಒಂದು ಸಂದೇಹವು ಉಂಟಾಗಬಹುದು. ಆದುದರಿಂದ ಈ ಕುರಿತು ಕೂಡಾ ಒಂದು ಮಾತು ಹೇಳುವದು ಅಗತ್ಯವೆಂದು ತೋರುತ್ತದೆ. ಸಹಕಾರ ಸಂಘಗಳ (೧೯೧೨ನೇ ಇಸವಿಯ ೨ನೇ) ಆಕ್ಟಿನ ೩ನೇ ಪ್ರಕರಣದ ಮೇರೆಗೆ "ಸ್ಥಳೀಯ ಗವರ್ನಮೆಂಟಿನವರು ಸಂಸ್ಥಾನದ ಯಾ ಅದರ ಯಾವದೊಂದು ಭಾಗದ ಬಗ್ಗೆ ಸಹಕಾರ ಸಂಘಗಳ ರಿಜಿಸ್ಟ್ರಾರನಾಗಿ ಒಬ್ಬನನ್ನು ನೇಮಿಸಬಹುದು. ಮತ್ತು ಅಂತಹ ರಿಜಿಸ್ಟ್ರಾರರಿಗೆ ಸಹಾಯಕ (ಅಸಿಸ್ಟಾಂಟ) ರನ್ನೂ ನೇಮಿಸಬಹುದು. ಮತ್ತು ಸಾಮಾನ್ಯ ಯಾ ವಿಶೇಷ ಹುಕುಮಿನ ಮೂಲಕವಾಗಿ, ಅಂತಹ ಸಹಾಯಕರಿಗೆ ಈ ಆಕ್ಟಿಗನುಗುಣವಾಗಿ ರಿಜಿಸ್ಟ್ರಾರರಿಗಿರುವ ಎಲ್ಲಾ ಯಾ ಯಾವುದಾದರೂ ಅಧಿಕಾರಗಳನ್ನು ಕೊಡಬಹುದು." ಈ ಪ್ರಕಾರ ಈಗ ಈ ಮದರಾಸು ಸಂಸ್ಥಾನದಲ್ಲಿ ನೇಮಿಸಲ್ಪಟ್ಟ ಅಸಿಸ್ಟಾಂಟ್ ರಿಜಿಸ್ಟ್ರಾರರವರು ಕಲ್ಲಿಕೋಟೆಯಲ್ಲಿಯೂ ಇದ್ದಾರೆ; ಪ್ರಕೃತ ಈ ಜಿಲ್ಲೆಯು ಸದರೀ ಕಲ್ಲಿಕೋಟೆಯ ಅಸಿಸ್ಟಾಂಟ್ ರಿಜಿಸ್ಟ್ರಾರರವರ ಚಕ್ಕಬಂದಿಯೊಳಗಿರುತ್ತದೆ; ಮತ್ತು ಅವರಿಗೆ ಪಂಚಾಯತಿಕೆಯ ಅಧಿಕಾರವೂ ಕೊಡೋಣವಾಗಿಯದೆ. ಆದುದರಿಂದ ವಿವಾದಗಳನ್ನು ಮದರಾಸು ರಿಜಿಸ್ಟ್ರಾರವರಿಗೆ ಕಳುಹಿಸದೆ ಕಲ್ಲಿಕೋಟೆಯ ಅಸಿಸ್ಟಾಂಟ್ ರಿಜಿಸ್ಟ್ರಾರವರಿಗೇನೇ ಕಳುಹಿಸತಕ್ಕದ್ದಾಗಿರುತ್ತದೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು, ತಾ. 25-11-16. } ಮಂ. ಅನಂತರಾವ್, ಕಾರ್ಯದರ್ಶಿ.

~~~~~~

ಮುಲ್ಕಿ:—ನಮ್ಮ ಯೂನಿಯನ್ ಕ್ಲಬ್ಬಿನಲ್ಲಿ ಡಿಲ್ಲಿ ದರಬಾರಿನ ದಿನವನ್ನು ಆಚರಿಸಲಾಯಿತು. ಮರುದಿನ ಯೂನಿಯನ್ ಕ್ಲಬ್ಬಿನ ಪ್ರಥಮ ವಾರ್ಷಿಕೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಡಿಸ್ಟ್ರಿಕ್ಟ ಪೋಲೀಸು ಸುಪರಿಂಟೆಂಡೆಂಟರಾದ ಮ। ರಾ। ಅರ್ಣೆ ಸುಬ್ಬರಾವ್ ಅವರ್ಗಳರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಸಾಮಾನ್ಯವಾಗಿ ಕ್ಲಬ್ಬಿನ ಎಲ್ಲಾ ಮೆಂಬರರೂ ಊರಿನ ಮಾನ್ಯ ಗೃಹಸ್ಥರೂ ಸ್ಥಳೀಯ ಉದ್ಯೋಗಸ್ಥರೂ ಸಭೆಗೆ ದಯಮಾಡಿದ್ದರು. ಶಾಲಾ ಮಕ್ಕಳು ಹಾಡುಗಳನ್ನೂ ಪದ್ಯರೂಪವಾದ ಸಂವಾದಗಳನ್ನೂ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಬಹಳ ಸೊಗಸಾಗಿ ಹಾಡಿ ತೋರಿಸಿ ಸಭಿಕರಿಗೆ ಮನೋಲ್ಲಾಸವನ್ನುಂಟುಮಾಡಿದರು. ಅನಂತರ ಕ್ಲಬ್ಬಿನ ಸಂಬಂಧವಾದ ಗತವರುಷದ ವರದಿಯನ್ನು ಸೆಕ್ರೆಟರಿ ರಾ। ಕೆ. ಶ್ರೀನಿವಾಸರಾಯರು ಓದಿಹೇಳಿದ ತರುವಾಯ ರಾ। ಪಿ. ಸೋನ್ಸರವರು ಕ್ಲಬ್ಬಿನ ವಿಷಯದಲ್ಲಿ ಊರಿನ ಜನಸಾಮಾನ್ಯರು ತೋರಿಸುವ ಆಸಕ್ತಿಯನ್ನೂ ಸಹಾನುಭೂತಿಯನ್ನೂ ಪ್ರಸ್ತಾಪಿಸಿ ಸೊಗಸಾದ ಭಾಷಣವನ್ನು ಮಾಡಿದರು. ಅನಂತರ ಸನ್ಮಾನ್ಯರಾದ ಅಧ್ಯಕ್ಷ ಮಹಾಶಯರು ಗಂಭೀರವೂ ಸುರಸವೂ ಆದ ಭಾಷಣವನ್ನಾರಂಭಿಸಿ "ನಾವು ವಿವಿಧ ಜಾತಿ, ಮತಾವಲಂಬಿಗಳಾದರೂ ಒಂದೇ ಹಿಂದೂ ಭೂಮಾತೆಯ ಪುತ್ರರು ಎಂಬ ಭಾವನೆಯಿಂದ ಸಹೋದರ ಭಾವದಿಂದಲೂ, ಐಕ್ಯಮತ್ಯದಿಂದಲೂ ವರ್ತಿಸಬೇಕೆಂದೂ, ದೇಶದ ಸಾಂಪತ್ತಿಕ ಮತ್ತು ಬೌದ್ಧಿಕ ಉನ್ನತಿಯನ್ನು ಸಾಧಿಸುವದೇ ಇಂಥಾ ಸಂಸ್ಥೆಗಳ ಮುಖ್ಯ ಉದ್ದೇಶ್ಯವೆಂದು ತಿಳಕೊಂಡು, ಉತ್ಕರ್ಷ ಅಕರ್ಷಗಳು ಸ್ವೈಸರ್ಗಿಕ ಧರ್ಮಗಳಾಗಿರುವದರಿಂದ ನಾವು ಕೈಕೊಂಡ ಯಾವ ಕೆಲಸದಲ್ಲ್ಯಾದರೂ ವಿಘ್ನ ವಿಡ್ಡೂರಗಳು ಬರುವದು ಸ್ವಾಭಾವಿಕವಾದರೂ ಅದರಿಂದ ನಾವು ನಿರಾಶೆ ಹೊಂದದೆ ಯಾವಾಗಲೂ ಕರ್ತವ್ಯನಿಷ್ಠರಾಗಿ ಪ್ರಯತ್ನಪರರಾಗಿರಬೇಕೆಂ"ದು ಮಾನ್ಯ ಅಧ್ಯಕ್ಷರವರು ಅಪ್ಪಣೆ ಕೊಡಿಸಿದ ಮಾತುಗಳು ಮನನೀಯವಾಗಿರುವವು. ಅಧ್ಯಕ್ಷರವರ ಭಾಷಣದ ತರುವಾಯ ಇಂದಿನ ಸಮಾರಂಭಕ್ಕೆ ಬಂದ ಸಭಿಕರನ್ನು ಪುಷ್ಪ ತಾಂಬೂಲುಗಳನ್ನು ಹಂಚಿ ಉಪಚರಿಸಿ ಅಧ್ಯಕ್ಷರವರಿಗೆ ಧನ್ಯವಾದವನ್ನಿತ್ತು ಮಹಾರಾಜಾ ಚಕ್ರವರ್ತಿಯವರ ಹೆಸರಿನ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಇಂದಿನ ಸಭೆಯಲ್ಲಿ ಸೆಕ್ರೆಟರಿಯವರು ಓದಿ ಹೇಳಿದ ವರದಿಯಲ್ಲಿ ತೋರುವಂತೆ ಈ ಕ್ಲಬ್ ಸ್ಥಾಪನೆಯಾದಂದಿನಿಂದ ಮೆಂಬರರ ಸಂಖ್ಯೆಯು ಕಡಿಮೆಯಾಗದೆ ಹೆಚ್ಚಿರುವದೆಂದೂ ಈಗ I ಕ್ಲಾಸ್ ಮೆಂಬರರು ೨೫, II ಕ್ಲಾಸ್ ಮೆಂಬರರು ೭೯, ಪರಸ್ಥಳೀಯ ಮೆಂಬರರು ೧೪ ಹೀಗೆ ಮೆಂಬರರ ಸಂಖ್ಯೆ ಇರುವದೆಂದೂ ಗತವರುಷದಲ್ಲಿ ಪ್ರವೇಶ ಫೀಸ, ಸಹಾಯ ದ್ರವ್ಯ ಮೊದಲಾಗಿ ಜಮೆಯಾದ ಹಣದಿಂದ ಖರ್ಚು ಕಳದು ರೂಪಾಯಿ ೩೫೧ ಕೋಓಪರೇಟಿವ್ ಸೊಸೈಟಿಯಲ್ಲಿ ಬಡ್ಡಿಗೆ ಇಟ್ಟಿರುವದೆಂದೂ ತಿಳಿದುಬರುತ್ತದೆ. ಅದಲ್ಲದೆ ಈ ದಿನ ಮಾನ್ಯ ಅಧ್ಯಕ್ಷರವರ ಹೆಸರಿನಿಂದ ಒಂದು ಪುಸ್ತಕಭಂಡಾರವು ತೆರೆಯಲ್ಪಟ್ಟು ಅದಕ್ಕೆ ರಾ। ಡಾಕ್ಟರ್ ಕೆ. ರಾಮರಾವ್, ರಾ। ಕೆ. ವಿಶ್ವೇಶ್ವರರಾವ್ ಇವರಿಂದ ಹಲವು ಪುಸ್ತಕಗಳು ಸಭೆಯಲ್ಲಿಯೇ ಒಪ್ಪಿಸಲ್ಪಟ್ಟವು. ಅದಲ್ಲದೆ ಹಲವು ಮಾನ್ಯ ಗೃಹಸ್ಥರು ಈ ಪುಸ್ತಕ ಭಂಡಾರಕ್ಕೆ ಸಹಾಯಮಾಡುವರೆ ವಾಗ್ದಾನ ಕೊಟ್ಟಿರುವದಾಗಿ ಸೆಕ್ರೆಟರಿಯವರ ವರದಿಯಿಂದ ಕಂಡುಬರುತ್ತದೆ.

~~~~~~

ಸುಳ್ಯ:—ಅಜ್ಜಾವರ ಗ್ರಾಮವು ೬೦೦೦ ಎಕ್ರೆ ವಿಸ್ತೀರ್ಣ ಉಳ್ಳದ್ದಾಗಿ ಜನಸಂಖೆ ೧೫೩೬ ಮಂದಿ ಇದ್ದು ಶಾಲೆಗೆ ಹೋಗುವ ಎಳೇ ಪ್ರಾಯದ ಹುಡುಗರು ಸುಮಾರು ೧೫೦ ಮಂದಿ ಇರುವಾಗ್ಯೆ ಇಲ್ಲಿ ಒಂದು ಶಾಲೆ ಸ್ಥಾಪಿಸದೆ ಇರುವದು ಇಲ್ಲಿಯ ಹುಡುಗರ ಮತ್ತು ಬಡ ರೈತರ ದುರಾದೃಷ್ಟವೇ ಸರಿ.

ಇಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ನಾಚಿಕೆ ಮುಳ್ಳು (Touch me not) ಎಂಬ ಗಿಡಗಳು ತುಂಬಿಹೋಗಿ ಜನ ಜಾನುವಾರುಗಳ ಆಮದು ರಪ್ತಿಗೂ, ಜಾನುವಾರುಗಳ ಮೇವಿಗೂ ಬಹಳ ಕಷ್ಟವೇ ಸರಿ. ಈ ಗಿಡಗಳನ್ನು ಕೂಡಲೆ ತೆಗಿಸುವ ವಿಲೆವಾರಿ ಮಾಡದಿದ್ದರೆ ಊರೆಲ್ಲಾ ಇದರಿಂದ ತುಂಬಿಹೋಗಿ ಜನ ಜಾನುವಾರುಗಳ ಆಮದುರಪ್ತಿಗೂ ಜಾನುವಾರು ಮೇವಿಗೂ ಬಹು ಕಷ್ಟ ಉಂಟಾದೀತು. ಆದ್ದರಿಂದ ದಯಾಳು ಸರಕಾರದವರು ರೈತರಿಂದ ಇದನ್ನು ತೆಗಿಸುವ ವಿಲೆವಾರಿ ಮಾಡುತ್ತಿದ್ದರೆ ಬಹು ಉಪಕಾರವಾಗುತ್ತಿತ್ತು.

~~~~~~

ಪುತ್ತೂರು:—ಗೌಡರ ಜಾತಿಯ ಹುಡುಗರ ವಿದ್ಯಾಭಿವೃದ್ಧಿಗೋಸ್ಕರ ಒಂದು ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸುವದಕ್ಕಾಗಿ ಗೌಡರ ಜಾತಿಯವರ ಎರಡನೇ ಮಹಾಸಭೆಯು ರಾಯಬಹದ್ದೂರ್ ಮಂಜೇಶ್ವರ ರಘುನಾಥ ರಾಯರ ಅಧ್ಯಕ್ಷತೆಯಲ್ಲಿ ಬರುವ ಜನವರಿ ತಾರೀಕು ೧ನೇ ಸೋಮವಾರ ಮಧ್ಯಾಹ್ನ ೨ ಘಂಟೆಗೆ ಪುತ್ತೂರು ಯೂನಿಯನ್ ಕ್ಲಬ್ ಕಟ್ಟೋಣದಲ್ಲಿ ಜರಗುವುದು. ಜಿಲ್ಲೆಯ ಸಮಸ್ತ ಗೌಡ ಜಾತಿಯವರು ಈ ಮಹಾಸಭೆಗೆ ದಯಪಾಲಿಸಿ ತಮ್ಮ ಜಾತಿಯ ಶ್ರೇಯೋಭಿವೃದ್ಧಿಗೆ ಮನಸ್ಸು ಕೊಡದೆ ಇರಲಾರರೆಂದು ಕೋರುತ್ತಾರೆ.

ಇಲ್ಲಿ ಇದೇ ತಿಂಗಳ ತಾ. ೧೨ಲ್ಲಿ ಡಿಲ್ಲಿ ದರಬಾರಿನ ಸ್ಮರಣಾರ್ಥವಾಗಿ ನಡೆಯುವ ವರ್ಷಾವಧಿ ಮಹೋತ್ಸವವ
~~~~~~

ಅತಿ ಸಂಭ್ರಮದಿಂದ ನಡೆಯಿತು. ಬೋರ್ಡು ಎಲಿಮೆಂಟರಿ ಶಾಲೆಯ ಮತ್ತು ಸರಕಾರಿ ಹುಡುಗಿಯರ ಶಾಲೆಯ ವಿದ್ಯಾರ್ಥಿಗಳು ಅನೇಕ ತರತರದ ಆಟಗಳಿಂದ ಸಭಿಕರನ್ನು ಆನಂದಿಸಿದರು.

ಕಾಪು:—ಈ ಕಾಲ ಮೊಹಲೇ ಕಷ್ಟತರ. ಅದರಲ್ಲಂತೂ ಸಮುದ್ರ ಕರಾವಳಿಯಲ್ಲಿರುವವರ ದೌರ್ಭಾಗ್ಯ ಏನೆಂತ ವರ್ಣಿಸಲಿ. ಸಾಂಕ್ರಾಮಿಕ ರೋಗಗಳು ಅಲ್ಲಲ್ಲಿ ಮೂಡುವಂತಿದೆ. ವಾಯುಗುಣ ಕೆಟ್ಟಿದೆ. ಉಪ್ಪು ಹಾಕದೆ ಮೀನನ್ನು ಒಣಗಿಸಬಾರದೆಂದೂ, ನಿಯಮಿತ ಸ್ಥಳ ಹೊರತು ಇತರ ಸ್ಥಳಗಳಲ್ಲಿ ಒಣಗಿಸ ಕೂಡದೆಂದೂ ಸರಕಾರದವರು ಅನುಜ್ಞೆ ಕೊಟ್ಟಿದ್ದಾದರೆ ಲೋಕೋಪಕಾರವೇ ಅನ್ನಬಹುದು.

ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲಾ ಕಟ್ಟೋಣವು ಮಕ್ಕಳ ಸಂಖ್ಯೆಗೆ ಸಣ್ಣದಾದ್ದರಿಂದ ದಯಾಳುವಾದ ಬೋರ್ಡಿನವರು ೧೫೦೦ ರೂ. ಕ್ರಯಬಾಳುವ ಒಂದು ಹೊಸ ಕಟ್ಟೋಣ ಕಟ್ಟಿಸುತ್ತಾರಾಗಿ ಕೇಳಿ ತುಂಬಾ ಸಂತೋಷಿಸುತ್ತೇವೆ. ಆದರೆ ಈ ಕಟ್ಟೋಣ ಆದಷ್ಟು ಬೇಗನೆ ಆಗುವಂತೆ ಪ್ರಯತ್ನಿಸಿದ್ದಲ್ಲಿ ಈಗ ಗ್ರಾಮ ದೇವಸ್ಥಾನದ ಗೋಪುರದಲ್ಲಿ ಬಿಸಿಲಿನ ತಾಪದಿಂದ ಕುಂದುತ್ತಿರುವ ಮಕ್ಕಳಿಗೆ ಎಷ್ಟೋ ಉಪಕಾರವಾದೀತ..

ಮಂಗಳೂರು.

ಸ್ವೀಕಾರ:—ಬೆಂಗಳೂರು ಸಿಟಿ ಎಸ್. ಪುಟ್ಟಣ್ಣಯ್ಯನವರಿಂದ ಕಳುಹಿಸೋಣಾದ ೧೯೧೭ನೇ ಇಸವಿಯ ಸಚಿತ್ರ ರಾಜಮಾರ್ತಾಂಡ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುವೆವು.

ಸಬ ಮೇಜಿಸ್ಟ್ರೇಟರ ವರ್ಗಾವರ್ಗಗಳಲ್ಲಿ ಪುನಃ ತಿದ್ದುಪಡಿ ಮಾಡೋಣಾಗಿದೆ. ಈ ಹೊಸ ಬದಲಾವಣೆ ಪ್ರಕಾರ ಮ| ರಾ| ಎ. ತಿಮ್ಮಪ್ಪ ಪೂಂಜರು ಮಂಗಳೂರಿಂದ ಬೆಳ್ತಂಗಡಿಗೂ, ಮ| ರಾ| ಕೆ. ಪಿ. ಕಿಣಿ ಬಿ. ಎ., ಎಲ್. ಟಿ. ಬಿ.ಯವರು ಬೆಳ್ತಂಗಡಿಯಿಂದ ಮಂಗಳೂರಿಗೂ ಎಮ್. ಸುಲ್ತಾನ್ ಮೊಯಿದಿನ್ ಸಾಹೇಬರು ಉಡ್ಪಿಯಿಂದ ಮೂಲ್ಕಿಗೂ ಮ| ರಾ| ಆರ್. ಶಿವರಾಯರು ಮಂಗಳೂರಿಂದ ಉಡ್ಪಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರವರ ಜಮಾಬಂದಿ ಸರ್ಕೀಟು ಈ ರೀತಿಯಾಗಿರುವದು:-೧೯೧೭ನೇ ಜನವರಿ ತಾ. ೮ ಆಫೀಸಿನಿಂದ ಕಾರ್ಕಳ; ತಾ. ೧೪ ಮೂಡಬಿದ್ರೆ, ತಾ. ೧೫-೧೯ ಮೂಡಬಿದ್ರೆ; ತಾ. ೨೦ ಮುಲ್ಕಿ; ತಾ. ೨೧-೨೨ ಮತ್ತು ೨೩ ಮುಲ್ಕಿಯಲ್ಲಿ; ತಾ. ೨೪ ಬೆಳ್ಮಣ್ಣು, ತಾ. ೨೫-೨೬ ಬೆಳ್ಮಣ್ಣು, ತಾ. ೨೭-೨೮ ಮತ್ತು ೨೯ ಮುಲ್ಕಿಯಲ್ಲಿ; ತಾ. ೩೦-೩೧ ಮೂಡಬಿದ್ರೆ, ತಾ. ೧ನೇ ಫೆಬ್ರವರಿ ಕಾರ್ಕಳ; ತಾ. ೨-೩ ಕಾರ್ಕಳ; ತಾ. ೪ ಮಾರ್ನೆಯಲ್ಲಿ, ತಾ. ೭ ಹೆಬ್ರಿ, ತಾ. ೮ ಹೆಬ್ರಿ ತಾ. ೯ ಕಾರ್ಕಳ, ತಾ. ೧೦-೧೧-೧೩ ಕಾರ್ಕಳ; ತಾ ೧೪ ಗುರುಪುರ, ತಾ. ೧೫-೧೬ ಗುರುಪುರ, ತಾ. ೧೭ ಮಂಗಳೂರಿಗೆ ಹಿಂತಿರುಗುವರು.

ಮ| ರಾ| ಟಿ. ಜಿವಾಜಿರಾಯರು ಇಲ್ಲಿಯ ಸಬ್ ಕೋರ್ಟಿನ ಸಬ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಈಶ್ವರ ಪೂಜಾರಿ ಮನೆಯಿಂದ ಕಳವುಮಾಡಿ ಹೊರಗೆ ಬರುತ್ತಿರುವಾಗಲೇ ಪೋಲೀಸಿನವರ ಕೈಗೆ ಬಿದ್ದ ಕೊರಗ ಎಂಬವನಿಗೆ ಟೌನ್ ಮೇಜಿಸ್ಟ್ರೇಟರು ೩ ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಇದೇ ತಾ. ೧೫ನೇ ಶುಕ್ರವಾರ ದಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಕೂಡಿ ಬಂತು. ಬೋರ್ಡು ಪ್ರೆಸಿಡೆಂಟರೂ ಜಿಲ್ಲಾ ಕಲೆಕ್ಟರರೂ ಆದ ಮೆ| ಎಲ್. ವೈಬರ್ಟ್ ದೊರೆಗಳು ಸಭಾ ಅಧ್ಯಕ್ಷರಾಗಿದ್ದರು. ಡಿಸ್ಟ್ರಿಕ್ಟ್ ಬೋರ್ಡು ವೈಸ ಪ್ರೆಸಿಡೆಂಟರಾದ ರಾವ್‌ಬಹದ್ದೂರ್ ಎಸ್. ಸುಬ್ಬರಾವ್‌ರವರೂ ಸರಕಾರಿ ಮೆಂಬರರ ಪೈಕಿ ಮಂಗಳೂರು ಡಿವಿಜನ್ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರಾದ ಮ| ರಾ| ರಾಮವರ್ಮ ರಾಜರವರೂ ದಿವಾನ್ ಬಹದ್ದೂರ್ ಸಿ. ಗೋಪಾಲನ್ ನಾಯರರೂ ಸರಕಾರ ನಿಯುಕ್ತ ಖಾಸಗಿ ಸಭಾಸದರ ಪೈಕಿ ಮೆ| ಸಿ. ಎಚ್. ಮೋರ್ಗನ್ ದೊರೆಗಳೂ ಪ್ರಜಾ ಪ್ರತಿನಿಧಿಗಳ ಪೈಕಿ ಬಹುಮಾನಪಟ್ಟ ಕೆ. ಎಸ್. ಭಟ್ಟರವರೂ, ಮ. ರಾ. ಎಸ್. ಮಂಗೇಶರಾಯರೇ ಮೊದಲಾದವರೂ ಸಭೆಯಲ್ಲಿ ಹಾಜರಿದ್ದರು. ಬರುವ ವರ್ಷದ ಆದಾಯ ವೆಚ್ಚಗಳ ಅಂದಾಜುಪಟ್ಟಿಗಳ ವಿಷಯ ಆಲೋಚಿಸುವದೇ ಈ ಸಾರಿಯ ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಖ್ಯ ಉದ್ದೇಶವಾಗಿತ್ತು.

ಮಲ್ಪೆ ನದಿಯ ಸಂಕದ ದಾರಿ ಬಗ್ಗೆ ತಿದ್ದುಪಡಿ ಮಾಡಿದ ಅಂದಾಜು ಪಟ್ಟಿ ಪ್ರಕಾರ ರೂ. ೯೭೦೦, ಉಡ್ಪಿಯ ಅಜ್ಜರಕಾಡಿನಲ್ಲಿ ಹೊಸ ದಾರಿಗಳನ್ನು ಕಡಿಯುವರೆಯೂ ಅಲ್ಲಿ ಒಂದು ಥಾವಿಯನ್ನು ತೋಡಿಸುವರೆಯೂ ಒಟ್ಟಿಗೆ ರೂ. ೧೭೩೪; ಈ ದಿನ ಕೂಡಿದ ಬೋರ್ಡು ಸಭೆಯಲ್ಲಿ ಮಂಜೂರಾಯಿತು.

ಉಡ್ಪಿ ಕಲ್ಲಸಂಕದ ಟೋಲ್‌ಗೇಟನ್ನು ತೆಗೆದುಬಿಡಬೇಕೆಂಬದಾಗಿ ಉಡ್ಪಿ ಪಟ್ಟಣ ನಿವಾಸಿಗಳಿಂದ ಒಂದು ವಿಜ್ಞಾಪನಾ ಪತ್ರವು ಸಭೆಯ ಮುಂದೆ ಇಡೋಣಾಗಿ ವಾದ ವಿವಾದಗಳು ನಡೆದು ಕಡೆಗೆ ಬರುವ ಎಪ್ರಿಲ್ ತಾ. ೧ರಿಂದ ಈ ಟೋಲ್‌ಗೇಟನ್ನು ತೆಗೆದುಹಾಕುವದೆಂತ ಬೋರ್ಡು ಸಭೆಯಲ್ಲಿ ನಿರ್ಣಯವಾಯಿತು.

ಒಂದು ಮೋಟರ್ ಬೋಟನ್ನು ತೆಗೆದುಕೊಳ್ಳುವರೆ ರೂ. ೩೦೦೦; ಕಾರ್ಕಳದಲ್ಲಿ ಒಂದು ಟ್ರವಲ್ಲರ್ಸ್ ಬಂಗ್ಲೆಯನ್ನು ಕಟ್ಟಿಸುವರೆ ರೂ. ೫೦೦೦ ಸೆಂಕ್ಷನ್ ಮಾಡಬೇಕೆಂದು ಬರುವ ವರ್ಷದ ಅಂದಾಜು ಪಟ್ಟಿಯಲ್ಲಿದ್ದ ಈ ಪ್ರಸ್ತಾಪವನ್ನು ಅಂದಾಜು ಪಟ್ಟಿಯಿಂದ ತೆಗೆದುಹಾಕೋಣಾಗಿಯದೆ.

ಕರಾವಳಿ ರಸ್ತೆಯ ೨೪, ೨೫, ೩೦ನೇ ಮೈಲುಗಳ ಬಳಿ ಹಾಳಾದ ರಸ್ತೆಗಳ ದುರುಸ್ತಿ ಬಗ್ಗೆ ೬೦೦೦ ರೂಪಾಯಿಯ ಅಂದಾಜು ಖರ್ಚ ಸಮ ಅರ್ಧಕ್ಕೆ ಕಡಿಮೆ ಮಾಡೋಣಾಗಿರುತ್ತದೆ.

ಮಲ್ಪೆ ದಾರಿಯಲ್ಲಿ ಒಂದು ಟೋಲಗೇಟನ್ನು ತೆರೆಯುವ ಪ್ರಸ್ತಾಪದ ವಿಷಯ ಇನ್ನೂ ತಕ್ಕ ಆಲೋಚನೆ ನಡಿಸಬೇಕೆಂಬದಾಗಿ ನಿರ್ಣಯಿಸೋಣಾಗಿರುವದು.

ಬಂಟ್ವಾಳದಲ್ಲಿ ಮೆಡಿಕಲ್ ಆಫೀಸರರಿಗೆ ಕ್ವಾರ್ಟರ್ಸ್ ಕಟ್ಟಿಸುವರೆ ರೂ. ೧೦೦೦, ಕಿನ್ನಿಕಂಬ್ಲದಲ್ಲಿ ಎಲಿಮೆಂಟರಿ ಶಾಲೆಯ ಕಟ್ಟಡದ ಬಗ್ಗೆ ರೂ. ೭೦೦, ಪುತ್ತೂರು ಗುರುವಾಯನಕೆರೆ ರಸ್ತೆಯಲ್ಲಿ ಹಾಳಾದ ರಸ್ತೆಯ ದುರುಸ್ತಿ ಬಗ್ಗೆ ರೂ. ೧೦೦೦, ಕಾರ್ಕಳ—ಉಡ್ಪಿ ರಸ್ತೆಯಲ್ಲಿ ಮೋಟರ್ ಬಸ್ ಸರ್ವಿಸ್ ಹೋಗುವ ಬಗ್ಗೆ ಆ ರಸ್ತೆಗಳನ್ನು ದುರುಸ್ತಿ ಮಾಡುವರೆ ರೂ. ೩೦೦೦, ಸೆಂಕ್ಷನ್ ಆಗಿ ಬರುವ ವರ್ಷದ ಆದಾಯ ವೆಚ್ಚಗಳ ಪಟ್ಟಿಯು ಬೋರ್ಡಿನವರಿಂದ ಮಂಜೂರಾಗಿರುತ್ತದೆ.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಹೊಸ ಡ್ಯುಪಿಟಿ ತಹಸೀಲ್ದಾರರ ಡಿವಿಜನೊಂದನ್ನು ತೆರೆದು ಈ ಡಿವಿಜನಿಗೆ ಆಯಾ ಗ್ರಾಮಗಳನ್ನು ಹಂಚಿ ಹಾಕಬೇಕೆಂಬ ರೆವಿನ್ಯೂ ಬೋರ್ಡಿನವರ ಸೂಚನೆಯು ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಂದೆ ಇಡೋಣಾಗಿತ್ತು.

ಮಂಗಳೂರು, ಪುತ್ತೂರು, ಕುಂದಾಪ್ರ ತಾಲೂಕು ಬೋರ್ಡುಗಳ ೧೯೧೬—೧೭ ಮತ್ತು ೧೯೧೭—೧೮ನೇ ವರ್ಷಗಳ ಆದಾಯ ವೆಚ್ಚಗಳ ತಿದ್ದುಪಡಿ ಮಾಡಿದ ಅಂದಾಜು ಪಟ್ಟಿಗಳು ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಮಂಜೂರಾಗಿರುತ್ತದೆ.

ಪ್ರೊಫೆಸರ್ ಎಲ್. ಕೆ. ಶಹಾರವರು ಮಂಜೇಶ್ವರ ಹೊಸಬೆಟ್ಟು ಮಿಶ್ಶನ್ ಶಾಲೆಗೆ ಗಂಟೆ ಹೊಡೆಯುವ ಒಂದು ದೊಡ್ಡ ಗಡಿಯಾರವನ್ನು ತಮ್ಮ ಜ್ಞಾಪಕಾರ್ಥವಾಗಿ ಉಚಿತವಾದಿರುವರು. ಶಾಲಾ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಇದಕ್ಕಾಗಿ ಪ್ರೊಫೆಸರ್ ಶ್ಯಾಹಾರವರಿಗೆ ತುಂಬಾ ಕೃತಜ್ಞರಾಗಿದ್ದಾರೆಂತ ಒಬ್ಬ ಬಾತ್ಮಿದಾರರು ತಿಳಿಸಿರುತ್ತಾರೆ.

ಇದೇ ತಾ. ೨೩ರಲ್ಲಿ ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು ಕೂಡುವದು. ಈ ಸಭೆಯಲ್ಲಿ ಸರಕಾರದವರ ಮಂಜೂರಾತಿಗೆ ಕಳುಹಿಸಿಕೊಡುವ ಮುಂದಿನ ವರ್ಷದ ಖರ್ಚಿನ ಅಂದಾಜು ಪಟ್ಟಿಯು ಕೌನ್ಸಿಲಿನ ಸೆಂಕ್ಷನ್ ಬಗ್ಗೆ ಇಡೋಣಾಗಿದೆ.

ಮೊನ್ನೇ ತಾರೀ ತಾ. ೨೦ನೇ ಬುಧವಾರ ಮಂಗಳಾದೇವಿ ದೇವಸ್ಥಾನದ ಬಳಿ ಒಂದು ಬೈಸಿಕಲ್ ಅಪಗಡವು ಸಂಭವಿಸಿತು. ಇಲ್ಲಿ ನಡೆದ ಅಪಗಡದಲ್ಲಿ ಬೈಸಿಕಲ್ ಸವಾರನಾದ ಟೆಲಿಗ್ರಾಫ್ ಇಲಾಖೆಯ ಒಬ್ಬ ಪ್ಯಾದೆಯು ಬೋಳಾರ ಮಂಜುನಾಥನ ಮೇಲೆ ಸೈಕಲ್ ಹಾಕಿರುವನು. ಮಂಜುನಾಥನು ಈ ಪೆಟ್ಟಿನಿಂದ ಕೂಡಲೇ ಮೂರ್ಛೆ ಹೊಂದಿದುದರಿಂದ ಗಾಡಿಯಲ್ಲಿ ಆಸ್ಪತ್ರಿಗೆ ಸಾಗಿಸಲ್ಪಟ್ಟು ದಾಕ್ತರರಿಂದ ಚಿಕಿತ್ಸೆ ಹೊಂದಿದ ನಂತರ ಅವನು ಚೇತರಿಸಿಕೊಂಡನೆಂತಲೂ ಮೈಮೇಲೆ ಗಾಯಗಳಾಗಿರುವವೆಂತಲೂ ತಿಳಿಯುತ್ತೇವೆ. ಈ ಅಪಗಡ ವೃತ್ತಾಂತವು ಸಂಬಂಧಪಟ್ಟ ಅಧಿಕಾರಿಗಳ ತಿಳುವಳಿಕೆಗೆ ಇನ್ನೂ ಬಂದದ್ದಿಲ್ಲವಂತೆ.

ಕವಿರಾಜ ರಾಮಚಂದ್ರ ವಾಸುದೇವರಾವ್ ಸೌಂಖ್ಯತೀರ್ಥ ಚಿಕಿತ್ಸಾಲಯ ಚಿಕ್ಕಮಂಗಳೂರು. ಇವರ ಜ್ಯಾಹಿರಾತುಗಳನ್ನು ಈ ಸಂಚಿಕೆಯೊಂದಿಗೆ ಇಟ್ಟಿರುತ್ತೇವೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಿತ್ತು.

ಬಂಟರ ಯಾನೆ ನಾಡವರ ಸಂಘ.

ಜನವರಿ ತಾ. 1ರಲ್ಲು ಕಾಸರಗೋಡು ಕಸಬೆಯಲ್ಲಿ ಕೂಡುವ ವಾರ್ಷಿಕ ಮಹಾ ಸಭೆಗೆ ಹೊಗೆಬಂಡಿಯಲ್ಲಿ ಬರುವವರು ಮಂಗಳೂರಿನಿಂದ ಬೆಳಿಗ್ಯೆ 6 ಘಂಟೆಗೆ ಹೊರಡುವ ಬಂಡಿಯಲ್ಲಿ ಬರಬೇಕಾಗಿ ಅಪೇಕ್ಷಿಸುತ್ತೇವೆ. ಪೂರ್ವಾಹ್ನ ಘಂಟೆ 9ರಿಂದ 11ರ ವರೆಗೆ ಕೃಷಿ ವಿಷಯ ಉಪನ್ಯಾಸಗಳು ಕೊಡುವಂತೆ ಏರ್ಪಾಡು ಮಾಡುತ್ತದೆ. ಗಾಯನಕ್ಕೆ ಸಹಾ ಏರ್ಪಾಡು ಮಾಡೋಣಾಗುವುದು. ಸಭೆಯು ಮಧ್ಯಾಹ್ನ ಘಂಟೆ 1ಕ್ಕೆ ಆರಂಭವಾಗುವುದು. ಪ್ರತಿ ತಾಲೂಕಿನಿಂದಲೂ ಸಂಘಕ್ಕೆ ಸೇರಿದ ಕೆಲವು ಪ್ರಮುಖ ಗೃಹಸ್ಥರು ಸಭೆಗೆ ಬರುತ್ತೇವೆಂತ ತಿಳಿಸಿರುತ್ತಾರೆ.

ತಾ. 21ನೇ ದೆಶಂಬರ 1916. ಕೆ. ಶ್ಯಾಮಶೆಟ್ಟಿ.

ಕಾಸರಗೋಡು ಸ್ವಾಗತ ಕಮಿಟಿ ಬಗ್ಗೆ.

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನು, ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ. ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಮ್ಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.



ಶತಧೌತ ಘೃತಕ್ಕೆಗಳೆಂಬ ಈ ಘೃತವು ಪ್ಲೇಗ್ ಒಬ್ಯೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಮ್ಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಜೀನಸು ಧಾರಣೆ.

(ರಖಂ).

ಮಸ್ಕತಿ ಅಕ್ಕಿ ಹಳೆತು	7— 6—0ರಿಂದ	7—14—0
ಗುದ್ದು ,, ಹೊಸ್ತು	6— 4—0	6— 8—0
ಮಸ್ಕತಿ ,, ,,	6— 0—0	6— 6—0
ಹೊಸ ರಾಶಿ ,,	4—14—0	5— 6—0
ಅವ್ವಲ್ ಬೆಳ್ತಿಗೆ ,,	6— 4—0	6— 8—0
ಸುಡು ಬೆಳ್ತಿಗೆ ,,	5— 8—0	5—12—0
ರಂಗೂನು ಬೆಳ್ತಿಗೆ ಗೋಣಿ 1ರ	10— 0—0	10— 4—0
ಗೋದಿ ಗೋಣಿ 1ರ	11— 4—0	12— 0—0
ಹುರುಳಿ ಗೋಣಿ 1ರ	5—10—0	5—12—0
ಕಡಲೆ ಗೋಣಿ 1ರ ಬೊಂಬ್ಯೆ	9— 8—0	10— 8—0
ತೊಗರಿ ಗೋಣಿ 1ರ		10— 8—0
ತೊಗರಿ ಬೇಳೆ ಗೋಣಿ 1ರ	12— 8—0	15— 8—0
ಉದ್ದು ಗೋಣಿ 1ರ	10— 8—0	11— 4—0
ಊರುಬೆಲ್ಲ ಖಂಡಿ 1ರ		50— 0—0
ಉಪ್ಪು ಗೋಣಿ 1ರ.		4— 7—0
ಕೊಬ್ರಿ ಖಂಡಿ 1ರ	95— 0—0	105— 8—0
ಕೊಬ್ರಿಹಿಂಡಿ ಖಂಡಿ 1ರ		23— 0—0
ಎಳ್ಳಿಂಡಿ ಖಂಡಿ 1ರ ಬೊಂಬ್ಯೆ	25— 0—0	30— 0—0
ಕೊಬ್ರಿ ಎಣ್ಣೆ ಮಣ 1ರ.	7— 0—0	7— 2—0
ಎಳ್ಳೆಣ್ಣೆ ಮಣ 1ರ (ಕುಂದಾಪುರ)		4—10—0
ಚಿಮಿಣಿ ಎಣ್ಣೆ ಪೆಟ್ಟಿಗೆ 1ರ	6— 0—0	6—11—0
ಮೋರಿಸ್ ಸಕ್ಕರೆ ಮಣ 1ರ		5—10—0
ಕಾಫಿ ಖಂಡಿ 1ರ	225— 0—0	235—0—0
ಹೊಸಬೆಳಗೋಟು ಖಂಡಿ 1ರ	82— 0—0	85— 0—0
ಹೊಸ ಗೇರುಬೀಜ ಮುಡಿ 1ರ	2—12—0	2—13—0
ಕಟ್ಟಿಗೆ ಖಂಡಿ 1ರ		75— 0—0
ತಾಂಬ್ರ ತಗಡು ಮಣ 1ರ	26— 0—0	27— 0—0
ತಾಂಬ್ರ ಪಾತ್ರೆಗಳು ಮಣ 1ರ		28— 0—0
ಚೀನಿ ಬೆಳ್ಳಿ ಶೇರು 1ರ		24— 0—0
ಹಚ್ಚೆಹೆಸರು ಮುಡಿ 1ರ	5— 1—0	5— 2—0
ಕಾಳುಮೆಣಸು ಖಂಡಿ 1ಕ್ಕೆ		260—0—0

ರಾ. ಮಟ್ಟಿಗೋಪಾಲಪ್ರಭುಗಳು ರಚಿಸಿದ

ಹರಿನಾಮ ಸಂಕೀರ್ತನ ಸುಧಾಮೃತ.

ಇದರಲ್ಲಿ ವಿಷ್ಣುಸ್ತುತಿ, ಗಣಪತಿ, ಶಾರದೆ, ಗುರುಸ್ತುತಿ ಪದಗಳೂ, ವೆಂಕಟಗಿರಿ ಮಹಾತ್ಮೆ ಪದಗಳೂ, ತ್ಯಾಗರಾಜ ಕೃತಿಪಟ್ಟಿನ ಪದಗಳೂ, ದಾಸರ ಕೀರ್ತನೆಯ ನವೂನೆ ಪದಗಳೂ, ನಾಟಕದ ನವೂನೆ ಹಿಂದೂಸ್ಥಾನಿ ವಟ್ಟಿನ ಕೀರ್ತನೆಗಳೂ, ಮಂಗಲ ಪದಗಳೂ, ಶೋಭನ ಪದಗಳೂ, ಜೋಗುಳ ಪದಗಳೂ, ಉದಯ ರಾಗ ಪದಗಳೂ ಅಡಗಿರುತ್ತವೆ.

ಕ್ರಯ ಪ್ರತಿ 1ಕ್ಕೆ 0—5—0. ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಟಪ್ಪಾಲ ಹಾಸಲು ಸಮೇತ 4 ಆಣೆಗೆ ಸಿಕ್ಕುವದು.

ಕೊಂಚ ಪ್ರತಿಗಳು ಮಾತ್ರ ಇವೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಡಾಕ್ಟರ್ ನವರತ್ನರ

ಪಕ್ವಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಬಹಳ ಅಗ್ಗ. ಕಪ್ ಮತ್ತು

ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road. BOMBAY.
ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

MALARIANA.

"ಮಲೇರಿಯಾನಾ" ಸರ್ವ ಪ್ರಕಾರದ ಮಲೆಜ್ವರಗಳನ್ನೂ ಅವುಗಳ ಪರಿಣಾಮಗಳನ್ನೂ ನಿರ್ಮೂಲಪಡಿಸುವ ಅತ್ಯುತ್ತಮವಾದ ಔಷಧ. ಬಾಟ್ಲಿ ಒಂದಕ್ಕೆ ರೂ. 1—8—0.

ಬೆಳ್ತಂಗಡಿ ಗುರುಗಳಾದ ರೆವರೆಂಡ್ ಜ. ಎ ಡಿ'ಸೋಜಾ ಬರೆಯುತ್ತಾರೆ:—ನನ್ನ ಅಪೇಕ್ಷೆ ಪ್ರಕಾರ ನೀವು ಕಳುಹಿಸಿದ 8 ಬಾಟ್ಲಿ ಮಲೇರಿಯಾನಾ ನನಗೆ ಬಂದು ತಲ್ಪಿತು. ಇದು ಕೂಡ ತರಿಸಿದ್ದು 22 ಬಾಟ್ಲಿಗಳು ಆದವು. ಅನೇಕ ಜನರು ಒಂದು ಎರಡು ಸರ್ತಿ ಕೊಟ್ಟ ಮದ್ದಿನಿಂದಲೇ ಪೂರ್ಣ ಗುಣಹೊಂದಿರುತ್ತಾರೆ. ಇನ್ನು ಹೆಚ್ಚು ನಾನು ಬರೆಯಬೇಕೆಂತಿಲ್ಲ. ಎಲ್ಲಾ ಕಡೆಯಲ್ಲಿ ನನ್ನ ಕರ್ತವ್ಯವನ್ನು ಇದು ವಿಸ್ತರಿಸಲಿ ಎಂತ ನನ್ನ ಅಪೇಕ್ಷೆ!

ಕಾತ್ಯಾಯಿನಾಡಿನ ವಿಶವಲ್‌ನಿಂದ ಮ. ಜೆ. ರಸ್ಕಿನ್ಹಾ ಬರೆಯುತ್ತಾರೆ:—ಒಂದು ವರುಷದ ಲಾಗಾಯಿತು ಮಲೆಜ್ವರದಿಂದ ನಾನು ಬಹಳ ಕಷ್ಟಪಟ್ಟು ಇದರ ನಿವಾರಣೆ ಬಗ್ಗೆ ಬಹಳ ಔಷಧಗಳನ್ನೂ ಟೋನಿಕ್‌ಗಳನ್ನೂ ತಕ್ಕೊಂಡಲ್ಲಿ ಗುಣವೇನು ಕಾಣದೆ, ನಿಮ್ಮ ಮಲೇರಿಯಾನಾ ತಕ್ಕೊಂಡು ಈಗ 2 ತಿಂಗಳಿಂದ ಬಹಳ ಕ್ಷೇಮದಲ್ಲಿದ್ದೇನೆ. ಕೂಡಲೆ ಇನ್ನೊಂದು ಬಾಟ್ಲಿಯನ್ನು ಕಳುಹಿಸಿರಿ.

ವಿಳಾಸ:—

The Malariana Company,
Kankanady S. C.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಔಷಧದ ಸೇವನೆಯಿಂದ ಶ್ವಾಸಕಾಸ, ಕ್ಷಯ, ಕೆಮ್ಮು, ದಮ್ಮು, ಅರುಚಿ, ಛರ್ದಿ, ಅಗ್ನಿಮಾಂದ್ಯ, ಗ್ರಹಣಿ, ಗುಲ್ಮ, ಭಗಂದರ, ವಾತ, ಪಾಂಡುರೋಗ, ಕಾಮಿಲೆ, ಕುಷ್ಠ, ಮೂಲವ್ಯಾಧಿ, ಮೇಹ, ಶೀಘ್ರಮೂತ್ರ, ಮೂತ್ರಕೃಚ್ಛ್ರ, ಧಾತುಕ್ಷಯ, ಇದಲ್ಲದೆ ಉದರವ್ಯಾಧಿಗಳು ನಿಸ್ಸಂದೇಹವಾಗಿ ಗುಣವಹವು. ಕೃಶಾಂಗರು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಾಗುತ್ತಾರೆ. ಇದರಿಂದ ತೇಜಸ್ಸೂ, ಬಲವೂ, ಧಾತುವರ್ಧನೆಯೂ ಉಂಟಾಗುತ್ತದೆ.

ಶೀಸೆ 1ರ ಕ್ರಯ 14 ಆಣೆ. ವಿ. ಪಿ ಖರ್ಚು ಪ್ರತ್ಯೇಕ.

ವಿಳಾಸ:—ಟಿ. ಬಾಬುರಾವ್ ಎಂಡ್ ಸನ್ಸ್,
ವೈದ್ಯರು, ಕದ್ರಿ, ಮಂಗಳೂರು.
ಕಂಕನಾಡಿ ಪೋಸ್ಟು.

100 ರೂಪಾಯಿಗಳ ಬಹುಮಾನ.

ಮದರಾಸ್ ಗವರ್ನಮೆಂಟಿನವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳು ವಿಷ ಸಂಜೀವಿನಿ.

ಆ! ಹಾ!!! ಏನಾಶ್ಚರ್ಯ? ಎಂಥಾ ಆಶ್ಚರ್ಯ?

ಅಳುತ್ತಾ ಬಂದವರು ನಗುತ್ತಾ ಹೋಗುವರು.

ಚೇಳಿನ ಹೊಡೆತಕ್ಕೆ ಸಿಲುಕಿದ ಕೂಡಲೆ ಉರಿಯನ್ನೂ ಚಳುಕನ್ನೂ ಪರಿಹಾರ ಮಾಡಿಕೊಳ್ಳಲು ತಕ್ಕ ಔಷಧವು ಇಲ್ಲದೆ ಚೇಳಿನ ಹೊಡೆತದಿಂದ ಕಷ್ಟಪಡುತ್ತಿರುವವರನ್ನು ನೋಡಿ ನಾವು ಬಹಳ ಪ್ರಯಾಸದಿಂದ ಈ ಔಷಧವನ್ನು ತಯಾರಿಸಿರುವೆವು. ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳು ವಿಷ ಸಂಜೀವಿನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು. ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರು ನಮ್ಮ ಔಷಧವನ್ನು ವಾಪಸು ಮಾಡಿ ತಮ್ಮ ಮೊಬಲಗನ್ನು ವಾಪಸು ಪಡಿಯುವದಲ್ಲದೆ ಮೇಲ್ಕಂಡ ಬಹುಮಾನಕ್ಕೂ ಬಾಧ್ಯರಾಗಿರುತ್ತಾರೆ. ಕ್ರಯ ಶೀಸೆ 1ಕ್ಕೆ 8 ಆಣೆ; ಡಜನ್ 1ಕ್ಕೆ ರೂ. 5.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೬ ಸಾಮಾನುಗಳು ಇರುವ ಪೆಟ್ಟಿ ೧ಕ್ಕೆ ೧–೮–೦ ಮಧ್ಯಮ ತರದ ಪೆಟ್ಟಿ ೧ಕ್ಕೆ ೨-೦-೦. ದೊಡ್ಡ ಪೆಟ್ಟಿ ಉತ್ತಮ ತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿ ೧ಕ್ಕೆ ೪ ತೊಲೆ, ಘುಯಂ ರೂಪಾಯಿ ೧ಕ್ಕೆ ೮ ತೊಲೆ, ಶೀಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೇಶ್ಮೆ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—ಶಿರೋಮಣಿ ನಾರಾಯಣಚಾರ್ಯ ಮತ್ತು ಕಂಪೆನಿ,
SIROMANI NARAYANA CHARYA & CO, ಚೌಕಾಂಬಾ, ಕಾಶಿ.
Choukhambay, BENARES CITY.

S. NAGAPPA NAYAK,
K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥವೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿ ಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಚಕ್ರಕೋಡಿ ವಿಷ್ಣುಶಾಸ್ತ್ರಿಗಳ ಮಗ ಸುಬ್ಬಣ್ಣ ಶಾಸ್ತ್ರಿಗಳು ಗುಣಿಸಿ
ಚ. ಗೋಪಾಲಕೃಷ್ಣ ಶಾಸ್ತ್ರಿಗಳು ಮತ್ತು
ತಿರಂಕಲ್ಲು ಸುಬ್ರಾಯ ಜೋಯಿಸರಿಂದ
ಪರಿಶೋಧಿಸಲ್ಪಟ್ಟ

ಪಿಂಗಳ ಸಂವತ್ಸರದ ಪಂಚಾಂಗವು.

ಈಗಲೇ ಮಾರಾಟಕ್ಕೆ ಸಿದ್ಧವಾಗಿರುವುದು.

ಕ್ರಯ ಪ್ರತಿ ಒಂದಕ್ಕೆ ಆಣೆ 3, 1 ಡಜನು ಪ್ರತಿಗಳಿಗೆ ರೂ. 1—14—0, 100 ಪ್ರತಿಗಳಿಗೆ ರೂ. 14—0—0 ಬೇಕಾದವರು ಬೇಗನೇ ಬರಕೊಳ್ಳುವದು.

ವಿಳಾಸ:—
ಕೆ. ಅಣ್ಣಪ್ಪ ನಾಯ್ಕ,
ಜನರಲ್ ಟ್ರೇಡಿಂಗ್ ಏಜನ್ಸಿ,
ವಿಟ್ಲ, ದ. ಕ.

ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಒಂದು ಗೆಜ್ಜೆ ಅಡ್ಡಿಗೆ ಇನಾಮಾಗಿ ಕಳುಹುತ್ತೆ.

ಬಹಳ ಸೊಗಸಾದದ್ದು! ೧೬ ಮೊಳ!! ಬಾಳಿಕೆ ಬರುವುದು!!!

ಗೋವರ್‌ಜಾನ್ ಬಳ್ಳಿ ಶೀರೆ ರೂ. ೨—೮—೦.

ಈ ಹೊಸ ನಮೂನೆ ಶೀರೆಗಳು ಬಹು ನಾಜೂಕಾದ ಬಿಳೇ ಮಲ್ಲಿನಲ್ಲಿ ಗೋವರ್‌ಜಾನ್ ಬಳ್ಳಿಗಳು ಹಾಕಲ್ಪಟ್ಟು ಸುತ್ತಲೂ ಬಹು ರಮಣೀಯವಾದ ಸಣ್ಣ ಅಂಚು ಕಟ್ಟಿ ಇರುತ್ತದೆ. ಇದು ಉಡುವುದಕ್ಕೆ ಧಡೂತಿ ಆಗಿಯೂ, ನೋಟಕ್ಕೆ ನಯವಾಗಿಯೂ, ನೋಡುವುದಕ್ಕೆ ಹೊಸ ನಮೂನೆ ಆಗಿಯೂ ಇದೆ. ಬಣ್ಣ ಹೋಗದು. ಇಂಥಾ ಶೀರೆಗಳು ಇದು ವರಿಗೂ ಯಾರಲ್ಲಿಯೂ ಬರಲಿಲ್ಲ. ನಮ್ಮಲ್ಲಿಗೆ ಹಬ್ಬದ ಮಹೋತ್ಸವಕ್ಕೆ ತರಿಸಿ ಇರುವದರಿಂದ ಜಾಗ್ರತೆ ತರಿಸಿಕೊಳ್ಳಿ. ಇದನ್ನು ಪ್ರತಿ ಒಬ್ಬ ಸ್ತ್ರೀಯರೂ ಧರಿಸಿಕೊಂಡು ಅಲಂಕಾರಭೂಷಿತರಾಗಿ ಸಂತೋಷಿಸುವರೆಂದು ನಂಬಿ ಇರುತ್ತೇವೆ. ಈ ಶೀರೆ ಯಾರಲ್ಲಿಯೂ ದೊರೆಯಲಾರದು. ಇದನ್ನು ನೋಡಿ ಪ್ರತಿ ಒಬ್ಬರೂ ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡುವಷ್ಟು ಶ್ಲಾಘನೀಯವಾದುದು.

ವಿಳಾಸ:— ರಾಸ್ ವಾಚ್ ಅಂಡ್ ಕಂಪೆನಿ,
3 ಇರುಳಪ್ಪನ ಬೀದಿ,
ಮದರಾಸು.

ಯುಕಲಿಪ್ಟಸ್ ಒಯಿಲ್.

(ನೀಲಗಿರಿ ಎಣ್ಣೆ).

ಇದೊಂದು ಇಲ್ಲದಿದ್ದರೆ ಎಂಥಾ ಬಾಮ್ ಆಗಲಿ ಅಥವಾ ಅಂಜನವಾಗಲಿ ನಡಿಯಲಾರದು. ನೀಲಗಿರಿ ಎಣ್ಣೆಯನ್ನು ಸೇರಿಸಿಕೊಂಡು, ಅಥವಾ ರೂಪಾಂತರಗೊಳಿಸಿಕೊಂಡು ನಾನಾ ಬಗೆಯ ಬಾಮುಗಳೂ ಅಂಜನಗಳೂ ತಯ್ಯಾರುಮಾಡಲ್ಪಡುವವು. ನೀಲಗಿರಿ ಎಣ್ಣೆಯ ಗುಣವು ಅಷ್ಟು ಧಾರಾಳವಾಗದೆ.

ಅಧಿಕ ಬೆಲೆಯ ಬಾಮುಗಳೂ ಅಂಜನಗಳೂ ಇವುಗಳನ್ನು ತೆಗದಿಡುವದಕ್ಕಿಂತ ಬರೆ ಕ್ರಯ ಆಣೆ 5ರ ಒಂದು ನೀಲಗಿರಿ ಎಣ್ಣೆಯ ಒಡ್ಡಿಯನ್ನು ಸದಾ ಪ್ರಯಾಣ ಕಾಲದಲ್ಲಿಯೂ ಗೃಹಗಳಲ್ಲಿಯೂ ಸಂಗ್ರಹಿಸಿಡುವದು ಎಷ್ಟೋ ಗುಣಕಾರಿಯಾಗಿದೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ವ್ಯಾಪಾರಸ್ಥರಿಗೆ ಕಮಿಶನ್ ಕೊಡೋಣಾಗುವದು. ಇತರ ಎಲ್ಲಾ ಔಷಧಿಗಳ ಸಂಗ್ರಹವೂ ನಮ್ಮಲ್ಲಿರುವದು.

ಟಿಸ್ಯು ಮತ್ತು ಹೋಮಿಯೋಪತಿಕ್

ಔಷಧಿಗಳ ಬಗ್ಯೆ ಮಂಗಳೂರು ಪಟ್ಟಣವನ್ನು ಬಿಟ್ಟು ದೂರಹೋಗಬೇಕೆಂತಿಲ್ಲ, ಅಥವಾ ಕೆಲಸ ಬಿಟ್ಟು ಕಾದು ನಿಲ್ಲಬೇಕೆಂತಲೂ ಇಲ್ಲ. ಇವೆರಡನ್ನೂ ನಾವು ಸಂಗ್ರಹಿಸಿ ಸರ್ವರಿಗೂ ಅನುಕೂಲವಾಗುವಂತೆ ರಥಬೀದಿಯ ನಮ್ಮ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

(ಶಾರದಾ ಛಾಪಖಾನೆ) ಆಫೀಸಿನಲ್ಲಿಟ್ಟಿರುತ್ತೇವೆ.

ಇನ್ನು ಬಹಳ ಸ್ವಲ್ಪ ಪ್ರತಿಗಳೇ ಉಳಿದಿರುವವು.

ಗವರ್ನಮೆಂಟ ಟ್ರೆನ್ಸಲೇಟರಾದ ಮಾ। ರಾ। ಬೆನಗಲ್ ರಾಮರಾವ್‌ರವರಿಂದ

ವಿರಚಿಸಲ್ಪಟ್ಟ

ಕೃಷ್ಣಾಕುಮಾರಿ ಬೆಲೆ 10 ಆಣೆ, (ಸ್ಕೂಲ್ ಫ್ಯಾನಲ್ ಪರೀಕ್ಷೆಗೆ ಇದು ಪಠ್ಯ ಪುಸ್ತಕವಾಗಿರುತ್ತದೆ). ರಮಾಮಾಧವ ಬೆಲೆ 6 ಆಣೆ, ಸದಾಚಾರ ವಿವೇಚನೆ ಬೆಲೆ 2 ಆಣೆ, ಇತರ ಪ್ರಬಂಧಗಳು — ಕುಮುದಾ ಬೆಲೆ 8 ಆಣೆ, ಮುಕ್ತಾಹಾರ 2 ಆಣೆ, ಗೃಹಶೀಲಿ 3 ಆಣೆ ಇತ್ಯಾದಿ.

ಗೇಣಿಚೀಟು ಫೋರ್ಮುಗಳು ಮತ್ತು ಕೋರ್ಟು ಫೋರ್ಮುಗಳು, ಲೆಕ್ಕ ಬರಿಯುವ ಬಗ್ಯೆ ಬೇಕಾದ ಪುಸ್ತಕಗಳು ಬಿಕರಿಗೆ ಸಿದ್ಧವಿರುತ್ತವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಮಾರಾಟದ ಬಗ್ಯೆ.

ತರಿಕೆರೆ ರೈಲ್ವೆ ಸ್ಟೇಷನ್‌ನಿಂದ 40 ಮೈಲು ದೂರವಿದ್ದು ಮೈಸೂರು ಸಂಸ್ಥಾನ ಕಡೂರು ಜಿಲ್ಲಾ ಕೊಪ್ಪದ ಹತ್ತರ ಇರುವ ಹಟ್ಟಿನ್ ಕೊಡಿಗಿ ಮತ್ತು ಬೆಲ್ಗೋಡು ಎಂಬ 2 ಕಾಫಿತೋಟಗಳು ಮಾರಾಟಕ್ಕೆ ಇರುತ್ತವೆ. ಈ ತೋಟಗಳಿಗೆ ಶುಮಾರು 8 ಮೈಲು ದೂರದೊಳಗೆ ಮದ್ರಾಸ್ ಮತ್ತು ಸದರ್ನ್ ಮಾರಾಟಾ ರೈಲ್ವೆ ಕಂಪೆನಿಯವರ ಸ್ಟೀಮ್ ಟ್ರಾಮ್‌ವೆ ಸಹ ನಡಿಯುವರೆ ಪ್ರಾರಂಭವಾಗುತ್ತದೆ. ಈ ತೋಟಗಳು 3000 ಅಡಿ ಎತ್ತರದಲ್ಲಿರುತ್ತವೆ. ವರ್ಷಕ್ಕೆ ಸರಾಸರಿ 130 ಇಂಚು ಮಳೆ ಸುರಿಯುತ್ತಿರುತ್ತದೆ. ಒಟ್ಟಿಗೆ ವಿಸ್ತೀರ್ಣ 661 ಎಕ್ರೆ ಕಾಡು ಇದ್ದು ಈ ಪೈಕಿ 200 ಎಕ್ರೆ ಸ್ಥಳಗಳಲ್ಲಿ ಕಾಫಿಗಿಡಗಳೂ, ಅಡಿಕೆಮರಗಳೂ, ಗದ್ದೆಗಳೂ, ಬಂಗ್ಲೆ, ಗೋಡವುನ್, ರೈಟರ್‌ಗಳ 2 ಮನೆಗಳು, ಸ್ಟೋರು ಮತ್ತು ನಾಜೂಕಾಗಿ ಕಟ್ಟಲ್ಪಟ್ಟ ಕೆಲವು ಆಳುಗಳ ಮನೆಗಳೂ ಇರುತ್ತವೆ. ಖ್ಯಾಸಿ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಎಲ್ಲಾ ವಿಲೇವಾರಿ ತಿಳಕೊಳ್ಳಬಹುದು.

ಎಫ್. ಜೆ. ಪಾರ್ಟನ್ಸ್,

ಕೊಪ್ಪ ಪೋಸ್ಟು,

ಕಡೂರು ಡಿಸ್ಟ್ರಿಕ್ಟ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0	ಮಹಾರಾಣೀ ಹೇರಾಯಿಲ್ ಸೀಸೆ1ಕ್ಕೆ	0-12-0
ಆಯಪಾ ಹೇರ್ ಆಯಿಲ್ ,,	1—0—0	ಕಾಮಿನಿಯಾ ಹೇರಾಯಿಲ್ ,,	1 -0-0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —		ರಾಧಾನಾಥ (ಹೊಸ ನಾವಿಲ್)	0- 2-0
ಉನ್ಮಾದಿನಿ	0- 6-0	ಸುಭದ್ರೆ ,,	0- 5-0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0- 8-0	ಚಂದ್ರಹಾಸ (ಹೊಸ ಕಥೆ)	0- 1-0
ಅಮೃತ ಪುಳಿನ (ದ್ವಿತೀಯ ಮುದ್ರಣ)	0-10-0	ಧ್ರುವ ,,	0- 2-0
ಇಂದಿರಾ ಕೃ. ಮು.	0- 6-0	ಮಕ್ಕಳ ತಿದ್ದುವಿಕೆ (School Discipline)	0-12-0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).		ಪುಷ್ಪರಚನೆ (Flower Making)	0-14-0
		ಕನ್ನಡ ಆಹ್ನಿಕ ಮಂಜರಿ	1- 0-0
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0-10-0	,, ಸಂಗೀತ ಸಮುಚ್ಚಯಸಾರ	1- 4-0
		ಮಾತೃನಂದಿನಿ (ಶ್ರೀ ತಿರುಮಲಮ್ಮ)	1- 4-0
ಮಧುಸೂದನ ಡಿಟೆಕ್ಟಿವ್ ನಾವಿಲ್	0 -4-0	ವಿಕ್ರಮ ,,	1- 2-0
ಪ್ರಫುಲ್ಲೆ ,, ,,	0-12-0	ಚಂದ್ರವದನಾ ,,	0-10-0
ಅಂಬಾಲಿಕೆ (ಹೊಸ ನಾವಿಲ್)	0- 1-6	ಕನ್ನಡ ಅಕ್ಷರಮಾಲೆ, ಹೊಸ ಮಾದರಿ,	
ಕುಸುಮ ,,	0- 1-0	ದೊಡ್ಡ ಸೈಜ್ 18″×28″ಕ್ಕೆ	0- 1-0

ಮಾರಾಟಕ್ಕೆ ಸಿದ್ಧವಾಗಿವೆ.

ಗೇಣಿ ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ ಕ್ಕೆ	೦	೧೦	೦
,, ೫೦ ,, ,,	೦	೬	೦
,, ೨೫ ,, ,,	೦	೩	೦
ಕುರಿ ಫಂಡಿನ ರಶೀದಿ ೧೦೦ ,, ,,	೦	೮	೦
,, ೫೦ ,, ,,	೦	೪	೦
,, ೨೫ ,, ,,	೦	೨	೦
ಪರಸ್ಪರ ಸಹಾಯಕ ಸಂಘಗಳ ಬಗ್ಯೆ ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ಕ್ಕೆ	೦	೮	೦
ಯಾವದಕ್ಕಾದರೂ ಉಪಯೋಗಿಸಲು ಅನುಕೂಲವಾದ ರಶೀದಿ ೧೦೦ ಫೋರ್ಮುಗಳ ಪುಸ್ತಕ ೧ಕ್ಕೆ	೦	೮	೦
,, ೫೦ ,, ,,	೦	೪	೦
,, ೨೫ ,, ,,	೦	೨	೦
ಇಂಗ್ಲಿಷು ಡಿ. ೧೦೦ ,, ,,	೦	೧೨	೦
,, ಡಿ. ೫೦ ,, ,,	೦	೬	೦
,, ಡಿ. ೨೫ ,, ,,	೦	೩	೦
ಕೋರ್ಟು ಫೋರ್ಮುಗಳು ೧೦೦ಕ್ಕೆ	೦	೧೨	೦
ಗೇಣಿಚೀಟು ,, ,,	೦	೧೨	೦
ಪರ್ಮಿಟು ,, ,,	೦	೧೨	೦
ಪ್ರೊಮಿಸರಿ ನೋಟು ,, ,,	೦	೮	೦

ವಿಳಾಸ:— ಮ್ಯಾನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ನೋಡಿ!

ಆಹ್ನಿಕಮಂಜರೀ. ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮ ಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

ಸಪ್ತಶತೀ. ಕನ್ನಡಾಕ್ಷರ, ರೇಶ್ಮೆ ಬೈಂಡ್, ಪಾಕೆಟ್ ಸೈಜು. ಪಾರಾಯಣಕ್ಕೂ ಅತ್ಯುಪಯೋಗವಾಗುವಂತೆ ಎಲ್ಲಾ ವಿಧಾನದಿಂದೊಡಗೂಡಿದೆ. ಬೆಲೆ ಪುಸ್ತಕ ೧ಕ್ಕೆ ೮ ಆಣೆ. ಪೋಸ್ಟು ಖರ್ಚು ಬೇರೆ.

ವಿಳಾಸ:—

M. S. Rao Co., ಮ್ಯಾನೇಜರ್,
Avenue Road, ವೇದಸಾರ ಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ

ಶ್ರೀಮತ್ ಕಲ್ಯಾಣಿ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು.

ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

ವಿಳಾಸ:— *Address:—*

ಎಸ್. ಪಿ. ರಾಜಾ ಮತ್ತು ಕಂಪೆನಿ, S. P. RAJA & Co.,
ಕಲ್ಯಾಣಕಾರಕ ಭಿಷಗ್ಮಂದಿರ, *Kalyanakaraka Bishagmandir.*
ಪೋಸ್ಟು ಪೊಳಲಿ, ದ. ಕ. POST POLALY, S. C.

ಅಪೂರ್ವ ಸಮಯ! ತ್ವರೆಮಾಡಿ!!

ಎಲ್ಲರೂ ಕೋರುವುದೇನು?—ಸುಖ!

ಸುಖಪ್ರಾಪ್ತಿಯಾಗುವುದು ಹೇಗೆ?—ಎಲ್ಲಾ ಅನುಕೂಲಗಳೂ ಒದಗುವುದರಿಂದ!

ಅವುಗಳನ್ನು ಹೇಗೆ ಸಾಧಿಸಬೇಕು?—ನಾಗರಿಕ ಜನಾಂಗಗಳಲ್ಲಿ ಮುಖ್ಯವಾಗಿ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳುವ ನಮ್ಮದಿಯಾಗಿರುವುದರಿಂದ ಇದಕ್ಕೆ ಅರ್ಥಸಾಧನೆಯೇ ಸುಲಭೋಪಾಯ! ಅದೇ ದೃಢತರವಾದ ಸೋಪಾನ!

ಈ ದಾರಿಯನ್ನು ತೋರಿಸತಕ್ಕವರು ಯಾರು?

ಅರ್ಥಸಾಧಕ ಪತ್ರಿಕೆ.

ಇದರಲ್ಲಿ ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ, ಲೇವಾದೇವಿ, ಮಿತವ್ಯಯ, ಕಾರ್ಯನಿರ್ವಾಹ—ಇವೇ ಮೊದಲಾದ ಐಶ್ವರ್ಯಾಭಿವೃದ್ಧಿ ಸಾಧಕವಾದ ವಿಷಯಗಳು ಎಲ್ಲರಿಗೂ ಅರ್ಥವಾಗುವಂತೆ ಜನಮನೋರಂಜಕವಾಗಿ ಬರೆಯಲ್ಪಡುತ್ತಿವೆ.

ಓದಿ ಪ್ರಯೋಜನ ಹೊಂದಿರಿ!

ಇದು ಮೈಸೂರು ಸರ್ಕಾರದ ಅರ್ಥಸಾಧಕ ಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿದೆ, ವರ್ಷಕ್ಕೆ ೫೦೦ ಪುಟಗಳಿಗೆ ಕಡಿಮೆಯಿಲ್ಲ. ೫೦ ಚಿತ್ರಗಳಿರುತ್ತವೆ.

ಚಂದಾ ಅತ್ಯಲ್ಪ! ಅಂಚೆ ವೆಚ್ಚ ಸೇರಿ ವರ್ಷಕ್ಕೆ ೩ ರೂ. ಮಾತ್ರ.

ಇದಕ್ಕೆ ಉತ್ತಮ ಲೇಖನಗಳನ್ನು ಬರೆದವರಿಗೆ ಯಥೋಚಿತವಾದ ಧನ ಬಹುಮಾನವುಂಟು. ಇದು ಕನ್ನಡ ದೇಶದ ನಾನಾ ಭಾಗಗಳಲ್ಲಿ ವಿಶೇಷವಾಗಿ ಪ್ರಚಾರವಾಗುತ್ತದೆ. ಮಾದರಿ ಸಂಚಿಕೆಗೆ ಬೆಲೆಯಿಲ್ಲ, ಬರೆದರೆ ಕಳುಹಿಸುತ್ತೇವೆ. ವ್ಯಾಪಾರಿಗಳು ತಮ್ಮ ಸರಕನ್ನು ಇದರಲ್ಲಿ ಪ್ರಕಟಿಸಿದರೆ ಅಲಭ್ಯ ಲಾಭ! ಬರೆದರೆ ಒಟ್ಟು ದರಗಳನ್ನು ತಿಳಿಸಲಾಗುತ್ತದೆ.

ವಿಳಾಸ:—ಅರ್ಥಸಾಧಕ ಪತ್ರಿಕಾ ಸಂಪಾದಕರು,
"ರಿಂಗ್‌ವುಡ್," ಬೆಂಗಳೂರು.

We Challenge Competition.

ಜೀವನಾನಂದವನ್ನು ಪ್ರತಿಯೊಬ್ಬರೂ ಏಕೆ ಸೇವಿಸಬೇಕು?

ಪ್ರಶ್ನೆಗೆ ಶಾಸ್ತ್ರಗಳೇ ಉತ್ತರ ಕೊಡುತ್ತವೆ. ಏಕೆಂದರೆ—

...................। ಸ್ವರಕ್ಷಯಮುರೋರೋಗಂ ಹೃದ್ರೋಗಂ ವಾತಶೋಣಿತಂ ।
ಕ್ಷೀಣಕ್ಷತಾನಾಂ ವೃದ್ಧಾನಾಂ ಬಾಲಾನಾಂ ಚಾಂಗವರ್ಧನಂ । ಕಾಸಶ್ವಾಸ ಹರಶ್ಚೈವ ವಿಶೇಷೇಣೋಪದಿಶ್ಯತೇ ॥

ಸ್ತ್ರೀಷು ಪ್ರಹರ್ಷಂ ಪರಮಗ್ನಿವೃದ್ಧಿಂ ವರ್ಣಪ್ರಸಾದಂ ಪವನಾನುಲೋಮ್ಯಂ ।
ಮೇಧಾಂ ಸ್ಮೃತಿಂ ಕಾಂತಿಮನಾಮಯತ್ವಮಾಯುಃ ಪ್ರಕರ್ಷಂ ಬಲಮಿಂದ್ರಿಯಾಣಾಂ ॥
ಜರಾಕೃತಂ ರೂಪಮಪಾಸ್ಯ ರೂಪಂ । ಬಿಭರ್ತಿ ರೂಪಂ ನವಯೌವನಸ್ಯ ।
ಜೀವನಾನಂದಸ್ಯಾಸ್ಯ ನರಃ ಪ್ರಯೋಗಾಲ್ಲಭೇತ ಜೀರ್ಣೋಽಪಿ ಕುಟೀಪ್ರವೇಶಾತ್ ॥

"..........ವಿಕೃತಸ್ವರ, ಅನ್ನಕೋಶದ ರೋಗಗಳು, ಅಜೀರ್ಣ ಮುಂತಾದವು) ಹೃದಯದ ರೋಗಗಳು, ವಾತಗಳಲ್ಲೂ ಕ್ಷೀಣದೇಹಿಗಳಿಗೆ, ಮುದುಕರಿಗೆ, ಮಕ್ಕಳಿಗೆ ದೇಹ ವೃದ್ಧಿಮಾಡಿ ಬಲಪಡಿಸುವುದಕ್ಕೂ ಕೆಮ್ಮು, ಉಬ್ಬಸಗಳೇ ಮುಂತಾದವುಗಳ ನಾಶನಕ್ಕೂ ಜೀವನಾನಂದವು ವಿಶೇಷವಾಗಿ ಉಪಯೋಗಿತವಾದುದು! ಆಹಾರ ಜೀರ್ಣವಾಗುವುದು, ಶರೀರಕ್ಕೆ ಸೌಂದರ್ಯವನ್ನು ಕೊಡುವುದು, ವಾಯು ದೇಹದಲ್ಲಿ ಸುಲಭವಾಗಿ ಸಂಚರಿತವಾಗುವಂತೆ ಮಾಡುವುದು, ಮಾನಸಿಕ ಬಲ, ಜ್ಞಾಪಕಶಕ್ತಿ, ಶರೀರಕ್ಕೆ ಕಾಂತಿ, ಆಯುರ್ವರ್ಧನ, ಧಾತುವನ್ನು ಪೂರ್ಣ ಗಟ್ಟಿಪಡಿಸುವುದೇ ಮುಂತಾದವಕ್ಕೆಲ್ಲ ಉಪಯೋಗಿತ. ಮುದಿಯಾಗಲ್ಪಟ್ಟ ಶರೀರವನ್ನು ನವಯೌವನದವನ್ನಾಗಿ ಮಾಡುತ್ತದೆ. ಯಾವ ಮನುಷ್ಯನು ಇದರ ಸೇವನೆ ಮಾಡುತ್ತಾನೋ ಅವನು ವೃದ್ಧಾಪ್ಯ ಕಂಪಿತನಾಗಿ ಕೆಲಸಕ್ಕೆ ಬಾರದವನಾಗಿದ್ದರೂ ಈ ಔಷಧಿಯು ಅವನನ್ನು ನವಯೌವನಸ್ಥನನ್ನಾಗಿ ಮಾಡುತ್ತದೆ." ಇಂತಹ ಮಹೌಷಧಿಗೆ

ಈ ದಿನ ಬರೆಯಿರಿ.

ಏಕೆಂದರೆ ಕಳೆದು ಹೋದ ಕಾಲವು ಪುನಃ ಸಿಕ್ಕುವುದಿಲ್ಲ. ಈಗ ಉದಾಸೀನಮಾಡಿದರೆ ಕಳೆದು ಹೋದ ಕಾಲಕ್ಕೆ ದುಃಖಿತರಾಗುವ ಕಾಲ ಬಂದೀತು! ಸ್ತ್ರೀಪುರುಷರಲ್ಲಿ ಪ್ರತಿ ವಯಸ್ಸಿನವರೂ ಸೇವಿಸಬಹುದಾದ

ಒಂದು ತಿಂಗಳ ಔಷಧಿಗೆ 3 ರೂಪಾಯಿ ಮಾತ್ರ.

ಅದರ ಸಂಗಡಲೇ ಜ್ವರ, ಕೆಮ್ಮು, ಎದೆಶೂಲೆ, ಶಿವಸೋಂಕು ಸರ್ಪ ಕಡಿತಗಳಿಗೂ, ಸುಖಭೇದಿಗೂ ಆಗುವ ಅಮೃತವಟಿಯನ್ನು ತರಿಸಿ.

ಡಬ್ಬಿಗೆ 8 ಆಣೆ. ಡಜನಿಗೆ ರೂ. 4—12—0.

ಎಲ್ಲೆಲ್ಲೂ ಏಜಂಟರು ಬೇಕು.

ದಿ ಜನರಲ್ ಹೆಲ್ಪಿಂಗ್ ಹೌಸ್,
ಎಂ. ಡಿಪಾರ್ಟ್‌ಮೆಂಟ್, ಸೋಮವಾರ ಪೇಟೆ, (ಕೊಡಗು).
ತಂತೀ ಎಡ್ರೆಸ್:—ಹೆಲ್ಪಿಂಗ್ ಹೌಸ್, ಸೋಮವಾರಪೇಟೆ.

ವಾಚುಗಳನ್ನು ತರಿಸುವವರಿಗೆ

ಒಳ್ಳೇ ಸಂದರ್ಭ!

ತಮಗೆ ಅತ್ಯುತ್ತಮವಾದ ವಾಚುಗಳು ಯಾವ ತರಹದ್ದು ಬೇಕಾಗಿದ್ದರೂ ನಮಗೆ ಬರೆಯಿರಿ!

ನಂಬ್ರ 1. ಮೆಟಲ್ ಕೇಸ್.—ವಿದ್ಯಾರ್ಥಿಗಳಿಗೆ ಅತೀ ಉಪಯೋಗಕರವಾದ್ದು. ರೂ. 3—0—0. ಫೆನ್ಸಿ ಡಾಯಲ್ ರೂ. 3—8—0. 3 ವರ್ಷಗಳ ಗ್ಯಾರಂಟಿ.

ನಂಬ್ರ 2. ಮೆಟಲ್ ಅಥವಾ ಗನ್‌ಮೆಟಲ್ ಕೇಸ್.—ಸರಿಯಾದ ಸಮಯವನ್ನು ತೋರಿಸುತ್ತದೆ. ರೂ. 4—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 3. ಅತ್ಯುತ್ತಮವಾದ ನಿಕ್ಕಲ್ ಸಿಲ್ವರ್ ಕೇಸ್.—ಜುವೆಲ್, ಲೀವರ್ ಗಿಲ್ಟ ಮೆಸ್ಸಿನು ಹೆಚ್ಚು ಕ್ರಯಬಾಳುವ ವಾಚುಗಳಿಗಿಂತಲೂ ಉತ್ತಮ ತರದ್ದು. ಪೆಟ್ಟಿಗೆ, ಗ್ಲಾಸ್ ಮತ್ತು ಸ್ಪ್ರಿಂಗ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ನಂಬ್ರ 4.—ವಾರಕ್ಕೊಂದಾವರ್ತಿ ಕೀಕೊಡುವವಂಥಾದ್ದು ನಿಕ್ಕಲ್ ಸಿಲ್ವರ್ ಕೇಸ್ ರೂ. 7. ಸಿಲ್ವರ್ ಕೇಸ್ ರೂ. 9—8—0. 5 ವರ್ಷಗಳ ಗ್ಯಾರಂಟಿ.

ನಂಬ್ರ 5.—ರಿಸ್ಟ ವಾಚು ನಿಕ್ಕಲ್ ಸಿಲ್ವರ್ ಕೇಸ್ ರೂ. 5. ಸಿಲ್ವರ್ ಕೇಸ್ ಸ್ಟ್ರೇಪ್ ಸಹಿತ ರೂ. 6. 5 ವರ್ಷಗಳ ಗ್ಯಾರಂಟಿ.

ಮೇಲ್ಕಂಡ ವಾಚುಗಳಲ್ಲದೆ ವೆಸ್ಟ್ ಎಂಡ್ ವಾಚ್ ಕಂಪೆನಿ, ರಾಸ್ಕೋಪ್ ಪೇಟೆಂಟ್ ಮುಂತಾದ ಪ್ರಖ್ಯಾತಪಟ್ಟ ಕಂಪೆನಿಗಳ ಎಲ್ಲಾ ತರಹದ ಚಿಕ್ಕ ನ ದೊಡ್ಡ ಸೈಜಿನ ವಾಚುಗಳನ್ನು ಚಿಲ್ಲರೆಯಾಗಿಯೂ ರಖಮ್ ಆಗಿಯೂ ಮಾರಾಟಕ್ಕಿರುತ್ತದೆ.

ವಿಳಾಸ:— **N. GOPALJEE,**
Watch maker.
JOOMA MASJID SHEIK MEMON STREET,
BOMBAY 2.

ಸಿದ್ಧೌಷಧ! ಪರೀಕ್ಷಿಸಿ ನೋಡಿರಿ !!

ಯಾರಿಗೆ ಬೇಕು?

ಆರೋಗ್ಯಜೀವನ!

ಬೇಕಾದವರು

ಟೂರಕಬ್ ಸೇವಿಸಿರಿ.

ಇದರ ಸೇವನೆಯಿಂದ ಮೆದುಳಿನ ಅಶಕ್ತಿ, ನರಗಳ ಬಲಹೀನತೆ, ತಲೆಸಿಡಿತ, ತಲೆನೋವು, ಶಿರೋಭ್ರಮಣ, ನಾಡಿ ತೀವ್ರವಾಗಿ ಒಡಿಯುವದು, ರಕ್ತಹೀನತೆ, ರಾತ್ರಿಕಾಲ ಬೆವರುವದು,—ಮುಂತಾದ ದೇಹದ ಕೊರತೆಗಳೂ ಜಾಡ್ಯಗಳೂ ಹೋಗುವವು. "ಟೂರಕಬ್" ಮಲಬದ್ಧತೆಯನ್ನ ಬಿಡಿಸುತ್ತದೆ. ಅದರೂ ಅತಿಸಾರವನ್ನು ನಿಲ್ಲಿಸುತ್ತದೆ. ಹೊಟ್ಟೆ, ಕರುಳು, ಕಲಿಜೇಕಲ್ಲಿ ಇದು ತೀಕ್ಷ್ಣವಾದ ಕೆಲಸವನ್ನು ಮಾಡಿ, ನರನಾಡಿಗಳನ್ನು ಬಲಪಡಿಸುವದು. "ಟೂರಕಬ್" ಗುಪ್ತ ವ್ಯಾಧಿಗಳಿಗೆ ಅಮೂಲ್ಯ ಚಿಕಿತ್ಸೆಯಾಗಿದೆ. ಪ್ರಮೇಹ, ಮೇಹ, ಅಗ್ನಿಸ್ರಾವ, ಬಿಳೇ ಸೆರಗು ಹೋಗುವದು, ಬಿಳೇ ಮೇಹ, ಜನನೇಂದ್ರಿಯಗಳ ಬಲಹೀನತೆ, ಧಾತುನಷ್ಟ, ಇಂದ್ರಿಯಪತನ, ಸ್ವಪ್ನೇಂದ್ರಿಯ ಮೊದಲಾದ ಸಕಲ ಗುಪ್ತರೋಗಗಳಿಗೆ ಇದಕ್ಕಿಂತ ಉತ್ತಮ ಔಷಧಿಯು ಬೇರೊಂದಿಲ್ಲವೆಂತ ಹೋಮಿಯೋಪತಿ ವೈದ್ಯರ ಅನುಭವದ ಸಿದ್ಧಾಂತ. ಅಜೀರ್ಣ, ಅಗ್ನಿಮಾಂದ್ಯಕ್ಕೆ ಇದು ಕೊಡಲಿಯೇ ಸರಿ. ಔಷಧಿಯ ಕ್ರಯ ಶೀಸೆ ಒಂದಕ್ಕೆ ರೂ. 1—8—0; ವಿ. ಪಿ. ಸಹಿತ ರೂ. 1—12—0.

ಕಾರ್ಕಳದಿಂದ ಒಬ್ಬ ಮಾನ್ಯ ಗೃಹಸ್ಥರು ಈ ರೀತಿ ಹೇಳುತ್ತಾರೆ:— ಟೂರಕಬ್ ಸೇವಿಸಿ 6 ವರ್ಷಗಳಿಂದ ಇದ್ದ ಒಂದು ಕಠಿಣ ಗುಪ್ತವ್ಯಾಧಿಯು ಪೂರ್ಣವಾಗಿ ಪರಿಹಾರವಾಗಿರುತ್ತದೆ. ಇತ್ಯಾದಿ.

☞ ತಾಜಾ ಯುಕಲಿಪ್ಟಸ್ ತೈಲ 5 ಆಣೆ; ಇಕ್ಲಿಪ್ಸ್ ಬಾಂ 8 ಆಣೆ; ಗಜಕರ್ಣದ ಮುಲಾಮು 6 ಆಣೆ. ಇನ್ನು ಅನೇಕ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:—ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ರೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ¼ ಡ್ರಾಮ್ ಟ್ಯೂಬ್	0	8	0
1 ,,	0	12	0
¼ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ,

H. R. MODY & Co.,
10 Princes Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯ್ಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವೇದನಾ ಪರಿಹಾರಕ ತೈಲವು:—ಇದನ್ನು ಮೇಲುಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವುದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು, ಸೊಂಟ ಮತ್ತು ಎದೆತೋಳು, ಸಕಲ ಅಂಗಗಳ ಕೀಲಿನ ನೋವುಗಳು ತಲೆಶೂಲೆ, ಹಲ್ಲುನೋವು, ಕಿವಿನೋವು, ಛಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಕಂಡಿತವಾಗಿ ವಾಸಿಯಾಗುವವು. ಸೀಸೆ 1ಕ್ಕೆ ರೂ. 1. ವಿ. ಪಿ. 3 ಸೀಸೆವರಿಗೂ 5 ಆಣೆ.

ಪರಿಮಳ ಕೇಶ ತೈಲವು:—ಸೋಲುತಲೆ, ಚಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು. ಮತ್ತು ಕಣ್ಣು, ಮೆದುಳುಸಂಬಂಧವಾದ ರೋಗವನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ.

ನೇತ್ರಬಿಂದು:—ಸಮೀಪ ದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬರುವುದು, ಉರಿ, ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

ಶ್ರೋತ್ರಬಿಂದು:— ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಮತ್ತು ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನು ಜಾಗ್ರತೆಯಲ್ಲಿ ಪರಿಹರಿಸುವುದು. ಬೆಲೆ ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

ಹುಳುಕಡ್ಡಿಗೆ ಔಷಧಿ:— ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದುಸಾರಿ ವಾಸಿಯಾದಮೇಲೆ ಪುನಃ ತಲೆದೋರುವುದಿಲ್ಲ. ಸೀಸೆ 1ಕ್ಕೆ 4 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

ವಿರೇಚನ ಮಾತ್ರೆಗಳು:— ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ವಿರೇಚನಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

ಜ್ವರಸಂಹಾರಿ:—ಎಲ್ಲಾ ವಿಧವಾದ ಜ್ವರ, ವಿಷಮ ಶೀತಜ್ವರ, 2ರ 3ರ 4ರ ಛಳಿ, ಇನ್‌ಪ್ಲುಯೆನ್ಸ್, ಚಳಿಜ್ವರ, ವಾತರೋಗ ಇವುಗಳನ್ನು ಸಂಪೂರ್ಣವಾಗಿ ವಾಸಿಮಾಡುವದು. ಪೆಟ್ಟಿಗೆ 1ಕ್ಕೆ ರೂ. 1. ವಿ. ಪಿ. ಚಾರ್ಜು 5 ಆಣೆ.

ಕೂದಲು ಉದುರಿಹೋಗುವದಕ್ಕೆ:—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ 5 ನಿಮಿಷಗಳಲ್ಲಿಯೇ ಉದುರಿಹೋಗುವದು. ಸೀಸೆ 1ಕ್ಕೆ 4 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS:—
P. SUBRA ROY.
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ
ಸನ್ನಿಧಿ, ತಂಜಾವೂರು.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೋ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ 4 ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೋ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS

ಪ್ರೊಪ್ರೈಟರರು: ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೊ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬೈ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ ರಸ್ತೆ, ಮದ್ರಾಸು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೩೮೦ ಕಥೆಗಳುಳ್ಳ ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರ್ಬಲರ ನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೩೮೦. ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

೮೦ ಕಥೆಗಳುಳ್ಳ ಸಚಿತ್ರ ಸ್ತ್ರೀಚರಿತ್ರ

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದ್ಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.
ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದ್ದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:— ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್‌ಡಿಪೊ ಪ್ರೆಸ್, ಬಳ್ಳಾರಿ.

Estd. 1888. **K . B. RELE & Cos.,—BOMBAY** ಸ್ಥಾಪನೆ 1888

ಕೆ. ಬಿ. ರೇಳೆ ಕಂಪೆನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೩೫ ವರ್ಷಗಳ ಹಳತ, ಸ್ಥಿಪನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿತಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ.೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಶನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದ ಸಂಧ್ಯಾವಂದನ .	0	3	0	ಗೋಪಿಕಾ ಗೀತ . .	0	1	0
ಯಜುರ್ವೇದ ಸಂಧ್ಯಾವಂದನ .	0	4	0	ಶ್ರೀರಾಘವೇಂದ್ರ ಸ್ತೋತ್ರ ವಾದಿ			
ಋಗ್ವೇದ ಬ್ರಹ್ಮಯಜ್ಞ ವಗೈರೆ .	0	3	0	ರಾಜಕವಚ . . .	0	2	0
ದೇವಪೂಜಾ ಪದ್ಧತಿ . .	0	3	0	ಹರಿಕಥಾಮೃತಸಾರ ಮೂಲ	0	10	0
ಪ್ರಾತರಾಹ್ನಿಕ ಪದ್ಧತಿ . .	0	3	0	ಪುರಂದರ ದಾಸರ ಕೀರ್ತನೆಗಳು			
ಅಭಿಷೇಕ ಸೂಕ್ತಗಳು . .	0	2	0	೨ನೇ ಭಾಗ . . .	0	6	0
ಶ್ರೀಸೂಕ್ತ ಪುರುಷಸೂಕ್ತ .	0	1	0	ಉದಯರಾಗ ೧ನೇ ಭಾಗ	0	4	0
ವಾಯುಸುತಿ . . .	0	2	0	ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುಸಹಸ್ರನಾಮ ಸ್ತೋತ್ರ .	0	2	0	ತುಲಸಿಸಂಕೀರ್ತನೆ ಪದಗಳು	0	2	0
ವಿಷ್ಣುಸಹಸ್ರನಾಮಾವಳಿ .	0	2	0	ಹರಿಭಕ್ತಿಸಾರ . . .	0	1	0
ದ್ವಾದಶ ಸ್ತೋತ್ರ .	0	2	0	ಉಡುಪಿ ಶ್ರೀಕೃಷ್ಣಚರಿತ್ರೆ .	0	3	0
ದ್ವಾದಶ ದ್ವಾದಶನಾಮ ಸ್ತೋತ್ರ	0	1	6	ಕೃಷ್ಣಪದ ಮಧ್ವನಾಮ .	0	1	6
ಗಜೇಂದ್ರ ಮೋಕ್ಷ .	0	1	6	ಬೀಗರಹಾಡು ದೂರುವಪದಗಳು	0	2	0
ಪಾಂಡವ ಗೀತಾ . . .	0	1	6	ತಾರುಕನ್ಯೋಪದೇಶ .	0	2	0
ಹನುಮದ್ಭೀಮ ಮಧ್ವಾಷ್ಟೋತ್ತರ	0	2	0	ಆಚಾರದರ್ಪಣ .	0	4	

ಇವುಗಳಲ್ಲದೆ ಇನ್ನು ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ದ. ಕ.

ಈ ಪುಸ್ತಕಗಳು ಮಂಗಳೂರಲ್ಲಿ ಶಾರದಾ ಪ್ರೆಸ್ಸಿನಲ್ಲಿಯೂ ದೊರೆಯುವವು.

1,000 ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ— ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್‌ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ತಿಳಿವಿನ ಭಂಡಾರವು

144 ಪಾನುಗಳಲ್ಲಿ ಅಡಕವಾಗಿರುವುದು.

ಲೋಕದಲ್ಲಿ ಸಂಗ್ರಹಿಸಬಹುದಾದಂಥಾ ಅನುಭವದ ತಿಳಿವನ್ನು ಒಂದೇ ಸಲ ಕೈಗಂಟಾಗಿ ಕೊಟ್ಟಿರುವೆವು. ಕಾಯಕ ಮಾನಸಿಕ ತಪ್ಪಿತಗಳು ಮತ್ತು ಸುಚರಿತವನ್ನು ಬಿಟ್ಟು ಮಾಡಿದಂಥಾ ಅಪರಾಧಗಳು— ಇವುಗಳೆಲ್ಲವನ್ನು ತಿದ್ದಿ ಮುಂದಕ್ಕೆ ಇಂಥಾ ತಪ್ಪುಗಳನ್ನು ಮಾಡದಂತೆ ಬೇಕಾದ ತಿಳಿವು ಇರುವಂಥಾ ಪುಸ್ತಕವು ಟಪ್ಪಾಲು ಹಾಸಲೂ ಕ್ರಯವೂ ಸಹ ಇಲ್ಲದೆ ಮುಫತ್ತಾಗಿ ಈ ಕೆಳಗಿನ ವಿಳಾಸದವರಿಗೆ ಬರದರೆ ಕಳುಹಿಸೋಣಾಗುತ್ತದೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

ಆಯುರ್ವೇದೋದಯ ಔಷಧಾಲಯ,

20, ಚೈನಾ ಬಜಾರ್ ರೋಡ್, ಮದ್ರಾಸು.

ಪ್ರಥಮ ಅಪೇಕ್ಷೆ ಯಾವುದು?

ಶಾಶ್ವತವಾದ ಯೌವನಾವಸ್ಥೆಯನ್ನು ಅನುಭವಿಸುತ್ತಲಿರಬೇಕೆಂಬದು ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನ ಅಪೇಕ್ಷೆಯಾಗಿರುವುದು. ಈ ಯೌವನಾವಸ್ಥೆಯು ಪೂರ್ವಕಾಲದಲ್ಲಿ ದೇವಗಣದವರೇ ವಿಶೇಷವಾಗಿ ಅನುಭವಿಸುವದಿತ್ತು. ಸರ್ವರ ರಕ್ಷಣೆ ಬಗ್ಗೆ ಈ ಯೌವನಾವಸ್ಥೆಯು ಸ್ವರ್ಗಲೋಕದಿಂದ ಭೂಲೋಕಕ್ಕೆ

ಮದನಮಂಜರಿ ಮಾತ್ರೆಗಳ

ಮೂಲಕ ಬಂದಿರುವದು. ನಿರ್ಬಲವಾದ ಜೀರ್ಣಶಕ್ತಿ, ಮಲಬದ್ಧತೆ, ಕಾಯಕ ಮತ್ತು ಮಾನಸಿಕ ದುರ್ಬಲತೆ, ಯಾವ ಕಾರಣಗಳಿಂದಾದರೂ ಇವು ಪ್ರಾಪ್ತವಾದದ್ದೇ ಆದರೆ ಈ ಮಾತ್ರೆಗಳ ಸೇವನೆಯು ಇವುಗಳನ್ನು ಗುಣಪಡಿಸಿ ನಿರಂತರವಾದ ಯೌವನಾವಸ್ಥೆಯನ್ನು ಕೊಡುವವು. 40 ಮಾತ್ರೆಗಳ 1 ಟಿನ್ನಿಗೆ ರೂ. 1—0—0.

Rajavaidya Narayanji Keshavaji,

Ayurvedodaya Aushadhalaya,

20, CHINA BAZAAR ROAD, MADRAS.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು

ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು ಮತ್ತು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷ ವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನ ವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿ ಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಪೀಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರ ಮುಖಿ 1, ಗಜ್ಜಿ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ 4-0-0.

ವಿಳಾಸ:—

ವಿ. ಎ. ಕೃಷ್ಣ ಅಂಡ್ ಕೊ.,

3. ಇರುಕಪ್ಪನ ಪೇಟೆ, ಮದರಾಸ್.

ಹಲ್ಲುನೋವುಗಳಿಗೆ ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡಾಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಭಕರವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ
ಶೀಸೆ 1ರ ಕ್ರಯ ರೂಪಾಯಿ 1—4—0. ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡಲ್ ಗಾರ್ಡನ್ ಮತ್ತು ಹಂಪನ್‌ಕಟ್ಟೆ ಶಾಪುಗಳಲ್ಲಿ ದೊರಕುವದು.	ಸಬ್ ಏಜಂಟರು ಬೇಕಾಗಿವೆ.	STANY BROTHERS Sole Agents C. M. C's, Toothache Specific, Mangalore.

ದಿವ್ಯಾಂಜನ. Divyanjan. (*Regd*)

ಗುಣ ಬಾರದಿದ್ದರೆ ಹಣ ಪರತು.



ಇದು ತಲೆನೋವು, ತಲೆಸಿಡಿತ, ವಾತ, ಸಂಧಿವಾತ ಸೊಂಟನೋವು, ವಾಯು, ಮೈನೋವು, ಗಾಯ, ಸುಟ್ಟಗಾಯ, ಜಜ್ಜಿದ ಗಾಯ, ತುರಿಕಜ್ಜಿ, ಕೈ ಕಾಲು ಬಾತು ಬರುವುದು, ಉಳುಕು, ಉರಿ, ಶಿರೋಭಾರ ಇವೇ ಮೊದಲಾದವುಗಳ ವೇದನೆಗಳನ್ನು ಬಾಣ ಮುಲಾಮು ಆಗಿರುತ್ತದೆ, ಕ್ರಯ ಬಾಟ್ಲಿ 1ಕ್ಕೆ ಆಣೆ 8. ಟಪ್ಪಾಲು ಹಾಸಲು ಪ್ರತ್ಯೇಕ. ಸೆಂಪಲ್ ೧ ಡಬ್ಬಿಗೆ ಖರ್ಚು ಸೇರಿ ಒಂದಾಣೆ ಮಾತ್ರ.

ವರ್ತಕರಿಗೂ ಇದನ್ನು ಜಾಸ್ತಿಯಾಗಿ ಕೊಂಡು ಕೊಳ್ಳುವವರಿಗೂ ಅತಿಶಯ ಕಮಿಷನ್ ದೊರಕ ಲಾದೀತು. ಏಜಂಟರು ಬೇಕಾಗಿರುತ್ತಾರೆ. ಇಡೀ ದಕ್ಷಿಣಕನ್ನಡ ಜಿಲ್ಲೆಯ ಸೋಲ್ ಏಜಂಟರು:— ಎಸ್. ಪಿ. ರಾಜಾ ಮತ್ತು ಕಂಪೆನಿ, ಪೊಳಲಿ ದ. ಕ.

ಸೂಚನೆ:—ದಕ್ಷಿಣಕನ್ನಡ ಜಿಲ್ಲೆಯವರು ದಿವ್ಯಾಂಜನಕ್ಕೋಸ್ಕರ ಅಲ್ಲಿಯ ಸೋಲ್ ಏಜಂಟರಿಗೆ ಬರೆಯತಕ್ಕದ್ದು. ನಾವು ಔಷಧವನ್ನು ವಿ. ಪಿ. ಮುಖಾಂತರ ರವಾನಿಸುತ್ತೇವೆ. ನಮಗೆ ಪತ್ರವನ್ನು ಬರೆಯುವಾಗ ನಮ್ಮ ವಿಳಾಸವನ್ನು (ಮಾತ್ರ) ಇಂಗ್ಲೀಷಿನಿಂದ ಬರೆಯತಕ್ಕದ್ದು.

ಇಂತಿ ಮಾಲಕರು:— **Someshwar & Sons,**
Fergusson Road, BOMBAY.

೧,೦೦೧ ರಾತ್ರೆ ಕಥೆಗಳು.

ಅರೇಬಿಯನ್ ನೈಟ್ಸ್ ಕಥೆ.

ಸಂಪೂರ್ಣ ಗ್ರಂಥ. ೧,೦೫೨ ಪುಟಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

ಪೂರ್ವ ಕಾಲದಲ್ಲಿ ಅರಬ್ಬಿ ದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್‌ಟೇಯಿನ್‌ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರ ಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ.

1. ಇದು ಪೂರ್ತಿಯಾಗಿ ಇದೆ. ಬೇರೆ ಬೇರೆ ಭಾಗಗಳಾಗಿ ಮಾಡದೆ ಪುಷ್ಟಿಯಾಗಿರುವುದಕ್ಕೋಸ್ಕರ ಒಂದೇ ಬೈಂಡು ಮಾಡಿದೆ. 2. ಈ ಕಥೆಯನ್ನು ಓದುವದರಿಂದ ಅನೇಕ ವಿಷಯಗಳ ಪರಿಚಯವನ್ನುಂಟುಮಾಡುತ್ತದೆ. 3. ವಿವಿಧ ಯುಕ್ತಿ, ನೀತಿ, ಕುಶಲತೆ, ಚಾತುರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ತಿಳಿಸುತ್ತದೆ. 4. ಅತ್ಯುತ್ತಮ ಗುಣವನ್ನು ತಪ್ಪಿಸಿ ತಾಳ್ಮೆಯನ್ನುಂಟುಮಾಡುವದಾಗಿದ್ದು, ದುರ್ಮಾರ್ಗದಲ್ಲಿ ಪ್ರವೇಶಿಸಬಹುದಾದ ಸಂಭವವನ್ನು ನಿವಾರಣೆಗೊಳಿಸುವದು. 5. ಬುದ್ಧಿ ಚಂಚಲದಲ್ಲಿರುವವರಿಗೆ ದೃಢಬುದ್ಧಿಯನ್ನು ಉಂಟುಮಾಡುವದಾಗಿಯೂ, ಸನ್ಮಾರ್ಗದಲ್ಲಿ ಎಳೆತಂದು ಬಿಡುವದಾಗಿಯೂ ಇರುವದು. 6. ನವರಸಾಲಂಕೃತವಾಗಿ ಮೃದು ಮಧುರ ವಾಕ್ಯಬಂಧ ರಚನೆಯಿಂದ ರಸಿಕರಿಗೆ ಮನೋಹ್ಲಾದವನ್ನು ಉಂಟುಮಾಡುವದು. 7. ಕಥಾರೂಪದಲ್ಲಿ ಚಿತ್ರಕಥಾಚಮತ್ಕಾರವಿಶೇಷವಾಗಿ ಸುಲಭಶೈಲಿಯಿಂದ ಬರೆಯಲ್ಪಟ್ಟಿದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಗ್ರಾಹ್ಯಯೋಗ್ಯವಾಗಿರುವುದು. 8. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯುವುದರಿಂದ ದೇಶವತ್ಸಲರಿಗೆ ತುಂಬಾ ಸಹಾಯಕವಾಗಿರುವುದು. 9. ಸರ್ವರಿಗೂ ಉಪಯೋಗವಾಗಿರುವ ೧೦೫೨ ಪುಟಗಳುಳ್ಳ ಈ ಭಾರೀ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಇರತಕ್ಕ ಪುಸ್ತಕವಾಗಿದೆ. ಹೆಚ್ಚಾಗಿ ಹೇಳುವದರಿಂದೇನು? ಪುಸ್ತಕವನ್ನು ತರಿಸಿ ನೋಡಿದ ಮಾತ್ರವೇ ಮೇಲೆ ಹೇಳಿದ ವಿಷಯಗಳೆಲ್ಲಾ ಸೂಚಿತವಾಗಿ ಇಂಥಾ ದೊಡ್ಡ ಗ್ರಂಥವು ಎಲ್ಲರಿಗೂ ಉಪಯೋಗವಾಗಲೆಂದು ಬೆಲೆಯನ್ನು ಬಹಳ ಸುಲಭಮಾಡಿರುವುದು ಸಹ ತಿಳಿಯಬರುವದು. ಈ ಗ್ರಂಥವು ದಪ್ಪ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಪ್ರಿಂಟುಮಾಡಿ ಸೊಗಸಾದ ಬೈಂಡಿನಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತದೆ. ಬೇಕಾದವರು ನಮ್ಮ ಕಂಪೆನಿಗೆ ಬರೆದು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಪ್ರತಿ 1ಕ್ಕೆ ರೂ. 3. ಟಪ್ಪಾಲ್ ಹಾಸಲು ೭ ಆಣೆ. ಥಳಥಳಿಸುವ ದಪ್ಪ ಗ್ಲೇಜು ಕಾಗದ ಪ್ರತಿ 1ಕ್ಕೆ ರೂ. 4. ಟಪ್ಪಾಲ್ ಹಾಸಲು 8 ಆಣೆ.

ನಮ್ಮಲ್ಲಿ ಇನ್ನೂ ಅನೇಕ ವಿಧವಾದ ಕನ್ನಡ "ಲಾ" ಖಾನೂನ್ ಪುಸ್ತಕಗಳು, ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ ಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವಮತ ಗ್ರಂಥಗಳು, ವೈಷ್ಣವಮತ ಗ್ರಂಥಗಳು, ನಾಟಕಗಳು, ಮುಂತಾದವುಗಳು ಸುಲಭ ಖರೀದಿಗೆ ದೊರೆಯುವವು. ಬೇಕಾದ ಪುಸ್ತಕಗಳಿಗೆ ಬರೆದರೆ ವಿ. ಪಿ. ಪೋಸ್ಟು ಮೂಲಕ ಕಳುಹಿಸುವೆವು. ನಮ್ಮ ಪುಸ್ತಕಗಳ (ಕ್ಯಾಟಲಾಗ್) ಕ್ರಯಪಟ್ಟಿಗೆ ಬರೆದರೆ ಕಳುಹಿಸಿಕೊಡುತ್ತೇವೆ.

ನಮ್ಮ ವಿಳಾಸ:— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ,
ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

Printed & Published by V. S. Kamath at the Mangalore Trading Association's Sharada Press, Mangalore

ರೆಜಿಸ್ಟರ್ಡ್ No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ X ಮಂಗಳೂರು ತಾ 29ನೇ ದಶಂಬರ ಶುಕ್ರವಾರ 1916. ಸಂಚಿಕೆ 51

ಶಾರದಾ ಛಾಪಖಾನೆಯ

1917ನೇ ವರುಷದ ಡೈರಿಗಳು.

ಕಾಗದ ವಗೈರೆ ಮುದ್ರಣ ಸಾಹಿತ್ಯಗಳ ಬೆಲೆಯು ನಾಲ್ಕರಷ್ಟು ಹೆಚ್ಚುವಾದರೂ ಏನೂ ನ್ಯೂನವಿಲ್ಲದೆ ಡೈರಿಗಳನ್ನು ಎಂದಿನಂತೆ ತಯ್ಯಾರಿಸಿರುವೆವು. ವಿಷಯಸಂಗ್ರಹಗಳಲ್ಲಿ ಯಾವುದನ್ನೂ ಕಡಮೆ ಮಾಡಿಲ್ಲ. ಕಾಗದವು ಚಲೋದಾಗಿದೆ. ಬೈಂಡಿಂಗ್ ಗಟ್ಟಿಯಾಗಿರುವದು. ಪೂರ್ಣ ಕ್ಯಾಲಿಕೊ ಕವರು

ದೊಡ್ಡ ಸೈಜು 2 ಆಣೆ ಕ್ರಯದ
ಅಪ್ಸಲ್ ಪೆನ್ಸಿಲು ಸಹಿತ ಆಣೆ 0-10-0
ಚಿಕ್ಕದ್ದು 0-6-0

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕಾವ್ಯಗಳು.

ಇದರಡಿಯಲ್ಲಿ ನಮೂದಿಸಿರುವ ಮಹಾಕಾವ್ಯಗಳಿರುವ ಪ್ರತಿಯೊಂದು ಶ್ಲೋಕಕ್ಕು ಅನ್ವಯ, ಪ್ರತಿಪದಾರ್ಥ, ತಾತ್ಪರ್ಯ, ಶಬ್ದರೂಪ, ಆಕಾಂಕ್ಷೆ, ಭಾವಾರ್ಥ ಎಲ್ಲವನ್ನೂ ವಿವರವಾಗಿ ಬರೆದಿದೆ. ಸಂಸ್ಕೃತ ಭಾಷೆಯು ಪರಿಚಯವಾಗಬೇಕೆಂಬುವ ಕನ್ನಡಿಗರಿಗೆ ಈ ಪುಸ್ತಕಗಳು ಅವಶ್ಯಕ.

ರಘುವಂಶ 1, 2, 3, 4ನೇ ಸರ್ಗಗಳು................3—12—0
ಮೇಘಸಂದೇಶ ಪೂರ್ತಿ................2— 0—0
ಕುಮಾರಸಂಭವ 1, 2ನೇ ಸರ್ಗ................1— 4—0
ಕಿರಾತಾರ್ಜುನೀಯ ಪ್ರಥಮ ಸರ್ಗ................0—10—0

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನತ್ರಯ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮೊದಲಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦ ಹಾಸಲು ೬ ಆಣೆ.

ವಿಳಾಸ:—ಹೆಚ್ ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

Just out! 2nd Edition. 167 pages!

1001 GEMS
OF
HINDU RELIGIOUS THOUGHT.

Gleaned from the written works and spoken words and teachings of ancient and modern Hindu Saints Sages and preceptors.

BY

PARARY KUNHI CHANDU

Price: 1—0—0.

Apply to—M. T. A. SHARADA PRESS,
Car Street, Mangalore.

OR TO THE AUTHOR, *Thalai*

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ, ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	225,000—0—0
Paid up Capital	200,000—0—0
Deposits	336,227—9—4
Reserve Fund	40,442—8—0

Besides the uncalled capital of Rs. 25,000/- 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last seven years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st. December 1916.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	225,000—0—0
ಆಗತ ಮೂಲ ಧನವು ,, ...	200,000—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	336,227—9—4
ರಕ್ಷಿತ ಧನವು	40,442—8—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ವಸೂಲಿಯಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ. 29,300ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವವು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 7 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವದು. ಯೋಗ್ಯ ಜವಾಬ್ದಾರಿಯ ಸ್ಕ್ಯೂರಿಟಿ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಅನುಭವಸಿದ್ಧವಾದ ಔಷಧಿಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ಚಿನ್ನದ ಬೆಳ್ಳಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. [illegible] ಠೇವನ್ನೂ [illegible] ಬಾಟ್ಲಿಗೆ ೨-೮-೦.

೩. ಪಂಚಕ್ಷೀರಕ ಪಾಕ. ಎಲ್ಲ ಪ್ರದರಗಳನ್ನೂ ಸುಟ್ಟು, ಕಟ್ಟಳೆಯ ದೋಷ [illegible] ತಪ್ಪದೆ ಗುಣಪಡಿಸುವದು. ತಾಂಡೆಗೆ ೨ ರೂ.

೪. ಸೂರಣಾವ ಲೇಹ. [illegible] ಮೂಲವ್ಯಾಧಿಯ [illegible] ತಾಂಡೆಗೆ ೨ ರೂ.

೫. ಪೀಯೂಷೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ [illegible] ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಬೆಲೆ ೩ ರೂ. ೮ ಆಣೆ.

೬. ಭಾಗೆನ್ನೋಚನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಸರ್ಟಿಫಿಕೇಟುಗಳಿಂದ ಶಯಾಗಿದೆ. ೧೦ ತೊಲೆಗೆ ೧೦ ಆಣೆ.

೭. ಸುಲಭಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಜ್ವರ [illegible] ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. [illegible] ಗುಲ್ಮಾರ್ಶಸ, ಕಫ, ಕ್ಷಯಗಳ ನಾಶಕವು. [illegible] ೨ ರೂ.

೧೦. ಕಾಮ್ಯಲೇ ಪಾಕ [illegible] ಮೂತ್ರದಲ್ಲಿ [illegible] ಮೂಲಕವಾಗಿ [illegible] ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. [illegible] ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, [illegible] ವಾತ ಬಾಧೆಗಳನ್ನೂ [illegible] ೮ ಆಣೆ. [illegible]

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, [illegible] ಮುಂತಾದ [illegible] ಗೆಲ್ಲುವದು. [illegible] ೪ ಆಣೆ.

೧೩. ಸಪ್ತಾಮೃತ ಲೋಹದ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. [illegible]

೧೪. ಬ್ರಾಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿ ಮಾಂದ್ಯ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕಸ್ತಾ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ಪತ್ರದೊಡನೆ ಕನ್ನಡದಿಂದ ಯಾ ಇಂಗ್ಲಿಷಿನಿಂದಯಾ ಪತ್ರವ್ಯವಹಾರ ನಡೆಯಿಸಬಹುದು.

ಪತ್ತೆ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು

B. M. Nath & Co., *Ayurvedic Chemists,*
Vepery Post, MADARS

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು). ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಋಷಿ ನಾನಾಪಟ್ಟಿ ಮೆ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶೀರವರು, ಜೆ. ಪಿ. ನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು, ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ದಾಖಲೆಗಳನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಸಂಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡೆ. ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ಏಷ್ಟು ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಡೋಂಗರೆ

ಇವರ

ಬಾಲಾಮೃತ

ಇದು ಬಹು ಮಧುರವಿರುವದರಿಂದ ಮಕ್ಕಳು ಪ್ರೀತಿಪಟ್ಟು ತಕ್ಕೊಳ್ಳುವವು. ಇದರಿಂದ ಅಜೀರ್ಣಜ್ವರ, ಕೆಮ್ಮು, ಕೈಕಾಲುಗಳು ಕರಿಯಾಗೋದು, ನೆಗಡಿಯಿಂದ ಮೂಗು ಸೋರೋದು ಇತ್ಯಾದಿ ವಿಕಾರಗಳು ಹೋಗಿ ಕೂಸುಗಳು ಬಲವುಳ್ಳವು ಮತ್ತು ಸೊಗಸುಳ್ಳವು ಆಗುವವು.

ಒಂದು ಕುಪ್ಪಿಯ ಕ್ರಯ ೧೪ ಆಣೆ.
ಪೋಸ್ಟು ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಈ ಪ್ರಶಂಸಾಪತ್ರವನ್ನು ನೋಡಿರಿ.

ಮಿ. ಎಸ್. ಮಹಮ್ಮದ ಹುಸೇನ ಡಾಕ್ಟರ್, ಸುಗಾಹಿ, ಜಿಲ್ಲಾ ಮುಝಫರಪುರ, ಬರಿಯುವದೇನೆಂದರೆ:—"ಡಾಕ್ಟರ ಕೆಲಸ ಮಾಡುವ ನಾನು, ಪ್ರೀತಿಪೂರ್ವಕ ಹೇಳುವದೇನಂದರೆ—ಸಣ್ಣ ಹುಡುಗರ ರೋಗಗಳಿಗೆ ಇಂದ್ರಜಾಲದಂಥ ಪರಿಣಾಮ ಕೊಡುವ ಔಷಧವಿದ್ದರೆ ಅದು ಡೋಂಗರೆ ಇವರ ಬಾಲಾಮೃತವೇ. ಅದಕ್ಕೆ ಸರಿಯಾದ ಗುಣಕಾರಕ ಔಷಧವು ಮತ್ತಾವುದೂ ಇಲ್ಲೆಂಬದನ್ನು ನಿಶ್ಚಯದಿಂದ ಹೇಳುತ್ತೇನೆ.

ಏಜಂಟರು:— ಊಲನ್ ಹೌಸ್,
ಮಾಧವ ಬಿಲ್ಡಿಂಗ್ಸ್,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸವಗಳಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇವಲ್ಲದೆ ಇನ್ನು **ಅನೇಕ ತರಹ ಸೆಂಟು**ಗಳು, ಎಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಆರ್. ಮಾರ್ಟಿನ್ಸರ ಮಾತ್ರೆಗಳು ನಂ. ೨.

ಡಮಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಶಿಡಿತ; ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರ ರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೮—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆ ನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರೂ ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿ ನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎಡಗೆ ಬೆಲಕೊಟ್ಟು, ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೦—೦.

ಆರ್. ಮಾರ್ಟಿನ್ನರ ಮೇಹರೋಗಕ್ಕೆ ಮಿಶ್ರಣ.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಯುವುದನ್ನು, ಮೂತ್ರ ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೮—೦. ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ, **R. D. Kately & Co.**
ನಂಬ್ರ ಡಿ. ಫ್ರೆಯರ್ ರೋಡ್, *No. D. Frere Road,*
ಮುಂಬಯಿ. *Near Wright & Co. Fort Bombay.*

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಟುಮಾತಿಗೂ ವೈದ್ಯರ ಸಹಾಯವನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ್ಯ, ಮಲಬದ್ಧ, ಕೆಮ್ಮು, ಗಸಿಟೀನೆ, ಬಲಹೀನತೆ, ಹೊಟ್ಟೆಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇವು ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 250 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿನೇಸ್ ನಂ. 2, ಬೆಂಗಳೂರು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿಚಿಕಿತ್ಸೆಗೆ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಸ್ತ್ರದಲ್ಲಿ ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಣಿತೈಲ.

ಶಿರೋಭೂಷಣ! ಕೋಮಲಕರ!!

ಅಯ್ಯಾ,

ಪ್ರಸ್ತುತವಲ್ಲಿ ವಿಕಲಿಸುವ ಶಿರೋತೈಲಗಳು (ಹೇರಾಯಿಲ್‌ಗಳು) ಅಧಿಕವಾದ ಲಾಭವನ್ನು ಹೊಂದುವದಕ್ಕಾಗಿ ವಿಕ್ರಿಸಿ ಉತ್ತಮ ಮಾಡುವದ ಕೃತಕ ಕೇವಲನ್ನುಂಟುಮಾಡುತ್ತಾರೆ. ಮತ್ತು ಶಾಸ್ತ್ರೋಕ್ತ ಕ್ರಮದಿಂದಿರುವ ಈ ಉತ್ತಮವಾದ ಕೂದಲೆಣ್ಣೆಯನ್ನು ಒಂದು ಸಲ ಉಪಯೋಗಿಸಿ ನೋಡಿದರೆ ಸಾಕಾಗುವದು.

ಪ್ರಸಿದ್ಧವಾದ ಆತಂಕನಿಗ್ರಹ ಔಷಧಾಲಯದಲ್ಲಿ ಮಾತ್ರ ಲಭ್ಯಬರು.

ವಿಳಾಸ:— ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96, ಮೌಂಟ್ ರೋಡ್, ಮದ್ರಾಸು.

Agents: **Raphael & Co.,** *Mangalore.*

ದರ್ಬಾರ್ ಸೋಪ್.

(ಯೂನಿವರ್ಸಲ್ ಹೇರ್ ಡಿಸ್ಟ್ರಾಯರ್ ಕೇಶನಾಶಿನಿ).

ಕೆಡಕಿಲ್ಲ! ಕಲೆಯಿಲ್ಲ!! ಉರಿಯಿಲ್ಲ!!!

ಇದು ಸ್ವಲ್ಪವೂ ಕೆಡಕೂ, ಕಲೆಯೂ, ಉರಿಯೂ ಇಲ್ಲದಂತೆ ಮೈಯಲ್ಲಿ ಯಾವ ಭಾಗದಿಂದಲಾದರೂ ಕೂದಲನ್ನು ನಾಶಮಾಡ

ತಕ್ಕ ಸಾಬೂನುಗಳೆಲ್ಲಿ ಅತ್ಯುತ್ತಮವಾದದ್ದೆಂದು ಎಲ್ಲರೂ ಒಪ್ಪಿದ್ದಾರೆ. ನಿಮಿಷಮಾತ್ರವೇ ಹಾಕಿದರೂ ಸಾಕು. ಇದನ್ನು ಉಪಯೋಗಿಸುವ ವಿಧಾನವನ್ನು ನಾಲ್ಕು ಭಾಷೆಗಳಲ್ಲಿ ಇದರೊಡನೆ ಕಳುಹಿಸುತ್ತೇವೆ. ಪ್ರತಿ ಒಬ್ಬರಿಗೂ ಇದನ್ನು ಉಪಯೋಗಿಸುವ ವಿಧಾನವು ಸುಲಭವಾಗಿ ತಿಳಿಯುವದು. ಹೇಳಿರುವ ಪ್ರಕಾರ ಇದನ್ನು ಉಪಯೋಗಿಸಿದರೆ ಮನಸ್ಸಿಗೆ ಬಹಳ ತೃಪ್ತಿಕರವಾದ ಫಲವನ್ನು ಕೊಡತಕ್ಕ ಸಾಬೂನುಗಳಲ್ಲಿ ಇದು ಮೊದಲನೆಯದೆಂದು ಪ್ರಸಿದ್ಧವಾಗಿದೆ. ಇದು ಹೇಳಿದಂತೆ ಗುಣಕಾರಿ ಇಲ್ಲವೆಂದು ಯಾರಾದರೂ ತಾವೇ ಉಪಯೋಗಿಸಿ ನಮಗೆ ಬರೆದರೆ ತಡಮಾಡದೆ ಅವರ ಹಣವನ್ನು ಅವರಿಗೆ ವಾಪಸ್ ಕಳುಹಿಸುವೆವು.

ಮೂರು ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ ರೂ. 0—14—0. ಒಂದೇ ಬಾರಿಗೆ 2 ಪೆಟ್ಟಿಗೆ ತರಿಸಿಕೊಂಡರೆ 2ಕ್ಕೆ ರೂ. 1—10—0.

ಟಪ್ಪಾಲ್ ಹಾಸಲು ಬೇರೆ ವಿಧಿಸುವದು. ವ್ಯಾಪಾರಸ್ಥರಿಗೆ ಅವರು ಹೆಚ್ಚಾಗಿ ತೆಗೆದುಕೊಂಡರೆ ಸ್ಪೆಶಲ್ ಕಮಿಶನ್ ಕೊಡುತ್ತೇವೆ.

ವಿಳಾಸ:— ರಿಕ್ಸಂ ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು.

ಲೈವ್ ರೆಗ್ಯುಲೇಟರ್ ವಾಚ್.

ಕ್ರಯ 12 ಸಾಮಾನುಗಳ ಸಮೇತ ರೂ. 4. ಪೋಸ್ಟೇಜ್ ಪ್ರತ್ಯೇಕ. ೫ ವರುಷಗಳು ಗ್ಯಾರಂಟಿ.

ಈ ಸುಂದರವಾದ ವಾಚ್ ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ತೋರಿಸುವದು ಮತ್ತು ಗಟ್ಟಿ ಮಾಡಿ ಬರುವದು. ಸೊಂದರ್ಯಕ್ಕೆ ಬೆಳ್ಳಿ ಸ್ಯಾಂಡ್ಯಾಯ ಗಂಟೆ ...

ಸುಂದರವಾದ ಎಲ್ಲಾ ಸಾಮಾನುಗಳು ... ಸಹಿತ ... ವರೆಗೆ ಗ್ಯಾರಂಟಿ. ಮೊದಲು ಹಣ ಕಳುಹಿಸಿದವರಿಗೆ ... ಕ್ರಯ 12 ಆಣೆ ಮಾತ್ರ ... 4 ಆಣೆ.

ಈ ಅಮೃತಸಂಜೀವಿನಿ ಗುಳಿಗೆಗಳನ್ನು ಸೇವಿಸುವದರಿಂದ ದೇಹದ ರಕ್ತವನ್ನು ಶುದ್ಧಿಮಾಡಿ ಧಾತುವನ್ನು ಘಟ್ಟಿಯಾಗಿ ದೇಹಕ್ಕೆ ಬಲಕೊಡುವದು. ಮುಖಕ್ಕೆ ವರ್ಚಸ್ಸು, ಮನಸ್ಸಿಗೆ ಸಂತೋಷವನ್ನೂ ಧೈರ್ಯವನ್ನೂ ಕೊಡುವದು. ಸ್ತ್ರೀಯಿಂದ ಸಂಭವಿಸುವ ಎಲ್ಲಾ ವ್ಯಾಧಿಗಳನ್ನು ಖಂಡಿಸುವದು, ಪುತ್ರಸಂತಾನ ಉಂಟಾಗುವದು ನಿದ್ರೆಯಲ್ಲಿ ಸ್ಖಲನವು, ನಡುನೋವು, ಕೀಲು ನೋವು, ಅಧಿಕ ಉಷ್ಣ, ಕೈಕಾಲು ಬಳಲಿಕೆ, ಅಜೀರ್ಣ ಮುಂತಾದ ವ್ಯಾಧಿಯನ್ನು ಆಶ್ಚರ್ಯಕರವಾಗಿ ಪರಿಹರಿಸುವದು ಇತ್ಯಾದಿ ಗುಣಗಳು ಇವಕ್ಕಿದೆ ಎರಡು ನಿಜವಾಗಿ ಹೇಳುತ್ತೇವೆ, ಮೇಲ್ಕಂಡ ಗುಣಗಳು ಇಲ್ಲದ ಪಕ್ಷದಲ್ಲಿ ಜವಾಬು ಮಾಡುತ್ತೇವೆ. ಪ್ರತಿ ಒಬ್ಬರೂ ಸೇವಿಸಿದರೆ ಗುಣವು ತಿಳಿಯಬರುತ್ತೆ. ಪರೀಕ್ಷೆ ಮಾಡಿ ನೋಡಬೇಕು. ಒಂದೇ ದಫೆ ೨ ಬಾಟ್ಲಿ ತರಿಸಿಕೊಳ್ಳುವದಾಗಿದ್ದರೆ ವಿ. ಪಿ. ಛಾರ್ಜು ಇನಾಂ.

ವಿಳಾಸ:— ವಿನಾಯಕರ್ ಅಂಡ್ ಕಂಪೆನಿ,
154 ಟಂಕಸಾಲೆ ಬೀದಿ, ಮದರಾಸ್.

ಬಾತಮೀದಾರರಿಗೆ ವಿನಂತಿ.

ಬರುವ ವರ್ಷದಿಂದ ನಮ್ಮ ಪತ್ರಿಕೆಯಲ್ಲಿ ಕೆಲವು ಹೊಸ ಪರಿಷ್ಕರಣಗಳನ್ನು ಮಾಡುವ ಆಲೋಚನೆ ಇದ್ದ ಕಾರಣ ನಮ್ಮ ಜಿಲ್ಲೆಯೊಳಗಿನ ಕುಂದಾಪುರ, ಉಡಿಪಿ, ಕಾಸರಗೋಡ, ಪುತ್ತೂರು ಮುಂತಾದ ಎಲ್ಲ ತಾಲೂಕುಗಳಲ್ಲಿಯೂ, ಮಹತ್ವದ ಗ್ರಾಮಗಳಲ್ಲಿಯೂ ಹಾಗೆಯೆ ಉತ್ತರಕನ್ನಡ, ಧಾರವಾಡ, ಹುಬ್ಬಳ್ಳಿ, ಮೈಸೂರ, ಬೆಂಗಳೂರ ಮುಂತಾದ ಹೊರನಾಡುಗಳಲ್ಲಿಯೂ ನಮ್ಮ ಪತ್ರಿಕೆಗೆ ಬಾತಮೀದಾರರು ಬೇಕಾಗಿರುವರು.

ಬಾತಮಿಗಳು ಆಯಾ ಸ್ಥಳದ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟವುಗಳಾಗಿರಬೇಕು. ಅಲ್ಲಲ್ಲಿಯ ಸರಕಾರಿ ಖಾತೆಯ ಮಹತ್ವದ ಮಾಹಿತಿಗಳನ್ನು ಕೂಡ ಬಾತಮೀದಾರರು ಕಳುಹಿಸಿಕೊಡಬಹುದು. ಆದರೆ ಬಾತಮಿ ಪತ್ರದೊಳಗಿನ ಯಾವ ವಿಷಯವಾದರೂ ವಿಶ್ವಸನೀಯವಾಗಿಯೂ, ಜನಹಿತಕ್ಕೆ ಸಂಬಂಧಪಟ್ಟದ್ದಾಗಿಯೂ ಇರಬೇಕು. ಈ ರೀತಿಯಿಂದ ಕಾಯಂ ಬಾತಮಿಗಳನ್ನು ಕಳುಹಿಸುವ ಬಾತಮೀದಾರರಿಗೆ ತಕ್ಕ ಉತ್ತೇಜನವನ್ನು ಕೊಡ್ಪೇವು.

ಮೆನೇಜರ್, ಸ್ವದೇಶಾಭಿಮಾನಿ.

ಸ್ವದೇಶಾಭಿಮಾನಿ

ಮಂಗಳೂರು ಶಕ ೧೮೩೮ ಪುಷ್ಯ ಶು. ೫ ಶುಕ್ರವಾರ.

ಇವು ರಾಷ್ಟ್ರೀಯ ಸಭೆಯ ದಿವಸಗಳು.

ಈ ವರ್ಷದ ರಾಷ್ಟ್ರೀಯ ಸಭೆಯ ಅಧಿವೇಶನವು ಲಖನೌ ಪಟ್ಟಣದಲ್ಲಿ ಈ ತಿಂಗಳ ೨೬ನೇಯ ತಾರೀಕಿನಿಂದ ಪ್ರಾರಂಭವಾಗಿದೆ. ಈ ಸಭೆಯ ಕೆಲಸವು ತಾ. ೨೬, ೨೮ ಮತ್ತು ೨೯ ಈ ದಿವಸಗಳಲ್ಲಿ ನಡೆಯುವುದು. ವಿಷಯ ನಿಯಾಮಕ ಸಭೆಯ ಕಾರ್ಯಕ್ರಮಕ್ಕಾಗಿ ತಾ. ೨೭ನೆಯ ದಿವಸವು ನೇಮಿಸಿರುವಂತೆ ಅಂದು ಆ ಕೆಲಸವು ನಡೆದಿದೆ. ರಾಷ್ಟ್ರೀಯ ಸಭೆಯ ಪ್ರಥಮದ ದಿವಸದಲ್ಲಿ ನಡೆದ ವಿಷಯವನ್ನು ಸಾರಾಂಶರೂಪದಿಂದ ನಮ್ಮ ವರ್ತಮಾನ ಸಂಗ್ರಹದಲ್ಲಿ ಕೊಟ್ಟಿರುವೆವು. ಅಧ್ಯಕ್ಷರಾದ ನಾಮದಾರ ಅಂಬಿಕಾಚರಣ ಮುಜುಮುದಾರ ಇವರ ಭಾಷಣವನ್ನೂ ಬೇರೆ ಮಹತ್ವದ ಠರಾವುಗಳನ್ನೂ, ಮತ್ತು ಆ ಠರಾವುಗಳಿಗೆ ಸಂಬಂಧಪಟ್ಟ ಪ್ರಸಿದ್ಧ ವಕ್ತರ ಭಾಷಣಗಳನ್ನೂ ಬರುವ ಸಂಚಿಕೆಯಲ್ಲಿ ವಾಚಕರ ಅವಗಾಹನೆಗಾಗಿ ಕೊಟ್ಟೇವು. ಮತ್ತು ಮುಂದೆ ನಮ್ಮ ಆಲೋಚನೆಗಳನ್ನೂ ಕೂಡ ಮೆಲ್ಲಮೆಲ್ಲನೆ ತಿಳಿಸೇವು.

ಈ ರಾಷ್ಟ್ರೀಯ ಸಭೆಯ ದಿವಸಗಳಲ್ಲಿ ಹಿಂದೂಸ್ಥಾನದೊಳಗಿನ ಎಲ್ಲ ಪ್ರಾಂತಗಳಿಂದಲೂ, ಆ ಪ್ರಾಂತಗಳ ಜಿಲ್ಲೆಗಳಿಂದಲೂ ಪ್ರತಿನಿಧಿಗಳಾಗಿ ಲೋಕಪಕ್ಷದ ಆಯಾ ಸ್ಥಳಿಕ ಮುಖಂಡರು ರಾಷ್ಟ್ರೀಯ ಸಭೆಗೆ ಬರುತ್ತಾರೆ; ಅಲ್ಲಿಯ ಚರ್ಚೆಯನ್ನು ಕೇಳುತ್ತಾರೆ; ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಆ ಸಭೆಯಲ್ಲಿ ಕೆಲಸ ಮಾಡುತ್ತಾರೆ. ಈ ಕ್ರಮವು ರಾಷ್ಟ್ರೀಯ ಸಭೆಯ ಪ್ರಾರಂಭದಿಂದಲೇ ಇದೆ. ಅದರಂತೆಯೇ ಈ ವರ್ಷವಾದರೂ ಪ್ರತಿ ಪ್ರಾಂತಗಳಿಂದಲೂ, ಪ್ರತಿ ಜಿಲ್ಲೆಗಳಿಂದಲೂ ಮುಖಂಡರು ಲಖನೌ ಪಟ್ಟಣದ ರಾಷ್ಟ್ರೀಯ ಸಭೆಗೆ ಪ್ರತಿನಿಧಿಗಳಾಗಿ ಹೋಗಿರಬೇಕು; ಮತ್ತು ಹೋಗಿಯೂ ಇದ್ದಾರೆ.

ರಾಷ್ಟ್ರೀಯ ಸಭೆಯ ದಿವಸಗಳಲ್ಲಿ ಆ ಸಭೆಯು ನೆರೆಯುವ ಪಟ್ಟಣದಲ್ಲಿಯೂ, ಹೆಚ್ಚೇನು, ಆ ಪ್ರಾಂತದಲ್ಲಿಯೂ ಸಜೀವತ್ವದ ಚಟುವಟಿಕೆಯು ಕಂಡುಬರುವುದು ಸಹಜವೇ. ಆದರೆ ಈ ಸಭೆಯ ಅಧಿವೇಶನದ ಒಂದೆರಡು ವಾರ ಮುಂಚೆ ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ಪ್ರತಿನಿಧಿಗಳ ಚುನಾವಣೆ, ರಾಷ್ಟ್ರೀಯ ಸಭೆಯಲ್ಲಿ ಬರಬೇಕಾದ ವಿಷಯಗಳ ಚರ್ಚೆ, ಅಧ್ಯಕ್ಷರ ಚುನಾವಣೆಯ ಪ್ರಶ್ನೆ ಮೊದಲಾದ ಚಳವಳಿಗಳು ನಡಿಯುತ್ತಿರುವವು. ಪ್ರತಿ ಒಂದು ಜಿಲ್ಲೆಯಲ್ಲಿ ರಾಷ್ಟ್ರೀಯ ಪ್ರಶ್ನೆಗಳ ಕುರಿತು ಲೋಕಮತದಲ್ಲಿ ಜಾಗೃತಿ ಹುಟ್ಟುವಂತೆ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕೊಂಗ್ರೆಸ ಕಮಿಟಿಗಳು ಸ್ಥಾಪಿಸೋಣಾಗಿವೆ. ಇದೇ ಕಾರಣದಿಂದಲೂ ಇನ್ನು ಬೇರೆ ಕಾರಣಗಳಿಂದಲೂ ಹಿಂದೂಸ್ಥಾನದೊಳಗಿನ ಎಲ್ಲಾ ಜಿಲ್ಲೆಗಳೊಳಗೆ ಕಾಂಗ್ರೆಸಿನ ದಿವಸಗಳಲ್ಲಿ ಒಂದು ತರದ ಸಜೀವತೆಯ ಗಾಳಿಯು ಬೀಸುತ್ತಿರುವುದು. ಆದರೆ ಈ ಎಲ್ಲಾ ಸಂಗತಿಗಳಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಕೇವಲ ಪರಕೀಯವಾಗಿದೆಂದು ಸಖೇದವಾಗಿ ಹೇಳಬೇಕಾಗುತ್ತದೆ. ರಾಷ್ಟ್ರೀಯ ಸಭೆಯು ದಶಂಬರದ ಅಂತ್ಯದಲ್ಲಿ ಜರಗುತ್ತದೊ, ಆದಿಯಲ್ಲಿಯೋ ಅಥವಾ ಬೇರೊಂದು ತಿಂಗಳಲ್ಲಿಯೋ ಈ ಸಂಗತಿ ಕೂಡ ಇಲ್ಲಿಯ ಎಷ್ಟೋ ಲಬ್ಧಪ್ರತಿಷ್ಠಿತರಿಗೆ ಗೊತ್ತೇ ಇರದು! ಎಂದಮೇಲೆ ಅದಕ್ಕೆ ಪ್ರತಿನಿಧಿಗಳಾಗಿ ಈ ಜಿಲ್ಲೆಯಿಂದ ಯಾರು ಹೋಗುವರು? ದೂರದ ಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಒಂದುವೇಳೆ ಇಲ್ಲಿಂದ ಪ್ರತಿನಿಧಿಗಳು ಹೋಗದಿದ್ದರೂ ಎರಡು ವರ್ಷಗಳ ಹಿಂದೆ ಮದ್ರಾಸಿನಲ್ಲಿ ರಾಷ್ಟ್ರೀಯ ಸಭೆಯು ಸೇರಿದಾಗಾದರೂ ಇಲ್ಲಿಂದ ಪ್ರತಿನಿಧಿತ್ವೇನ ಯಾರಾದರೂ ಹೋಗಿದ್ದರೆ? ಇಲ್ಲ! ಕೆಲವು ವರ್ಷಗಳ ಹಿಂದೆ ಇಲ್ಲಿ ಒಂದು 'ಡಿಸ್ಟ್ರಿಕ್ಟ ಕೊಂಗ್ರೆಸ್ ಕಮಿಟಿ'ಯು ಇತ್ತು. ಈಚೆಗೆ ಅದರ ಹೆಸರೇ ಇಲ್ಲ! ಈಗ ಇಲ್ಲಿಯ ಮುಂದಾಳುಗಳಿಗೆ ಕಾಂಗ್ರೆಸ ಸಭೆ, ಡಿ. ಕಾಂಗ್ರೆಸ ಕಮಿಟಿ, ಪ್ರಾಂತಿಕ ಪರಿಷತ್ ಇವೆಲ್ಲ ಕೋರ್ಟುಗಳು, ಆಟದ ಮತ್ತು ಕಾಫಿಯ ಕ್ಲಬ್ಬುಗಳು ಇವೇ ಆಗಿವೆ!! ನಮ್ಮ ಜಿಲ್ಲೆಗೆ ಇಂಥ ಶೋಚನೀಯ ಪರಿಸ್ಥಿತಿಯು ಯಾಕೆ ಬಂದು ಒದಗಿದೆ, ಈ ಅಜ್ಞಾನದ ಕಗ್ಗತ್ತಲೆಯು ಯಾಕೆ ಮುಸುಕಿದೆ, ಇದು ನಮಗಂತೂ ಗೊತ್ತಾಗದು. ಒಂದುವೇಳೆ ಇವರಿಗೆ ಈಗಿನ ಪರಿಸ್ಥಿತಿಯೇ ತೃಪ್ತಿಕರವಾಗಿ ತೋರುವುದೊ ಏನೋ! ಹಾಗೆ ತೋರಿದರೂ ಕೊಂಚವಾದರೂ ಚಟುವಟಿಕೆಯು ಬೇಕಲ್ಲವೆ?

ಇನ್ನುಮುಂದೆಯಾದರೂ ಈ ವಿಷಾದಕರ ಸ್ಥಿತಿಯು ನಿಲ್ಲಲಿಕ್ಕಿಲ್ಲೆಂದು ತೋರುತ್ತದೆ. ಕಾರಣ—ಮದ್ರಾಸಿನ ಕಾಯಿದೆ ಕೌನ್ಸಿಲಿನಲ್ಲಿ ನಮ್ಮ ಜಿಲ್ಲೆಯಿಂದ ಈ ವರ್ಷ ಮೆಂಬರರಾಗಿ ಚುನಾಯಿಸಲ್ಪಟ್ಟ ಮ। ರಾ। ಸದಾಶಿವ ಭಟ್ಟರು ಇಲ್ಲಿಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜೀರ್ಣೋದ್ಧಾರವನ್ನು ಮಾಡುವವರಿದ್ದಾರೆಂದು ನಾವು ಕರ್ಣೋಪಕರ್ಣವಾಗಿ ಕೇಳುತ್ತೇವೆ. ಅವರು ಸವ್ರೋತ್ಸಾಹವುಳ್ಳವರಾದ ಕಾರಣ ಈ ಕೆಲಸದಲ್ಲಿ ಮನಸ್ಸು ಹಾಕಿದ್ದಾದರೆ ಅವರ ಕೆಲಸದಲ್ಲಿ ಖಂಡಿತವಾಗಿ ಯಶಸ್ಸು ಬಂದೀತೆಂಬುದರಲ್ಲಿ ಅಡ್ಡಿಯಿಲ್ಲ. ಅವರು ತಮ್ಮ ಮನಸ್ಸನ್ನು ಹಾಕುವುದೆ ಅವಕಾಶ. ಕಾರ್ಯದ ಯಶಸ್ಸು ದತ್ತವಾಗಿ ನಿಂತೇ ಇದೆ. ಅವರ ನೆನವರಿಕೆಯಂತೆ ದಕ್ಷಿಣ ಕನ್ನಡದಲ್ಲಿ ಡಿಸ್ಟ್ರಿಕ್ಟ್ ಕೊಂಗ್ರೆಸ ಕಮಿಟಿಯು ಸ್ಥಾಪಿತ್ತವಾಗಿ ಇಲ್ಲವೆ ಮೊದಲೆ ಸ್ಥಾಪಿತವಾಗಿದ್ದುದಾದರೆ ಈಗ ಜೀರ್ಣೋದ್ಧೃತವಾಗಿ ಅದರ ಮುಖಾಂತರ ಜಿಲ್ಲಾ ಸಭೆಯೂ, ಕಾಂಗ್ರೆಸಿನ ಪ್ರತಿನಿಧಿಗಳ ಚುನಾವಣೆಯೂ, ಇನ್ನು ಬೇರೆ ಬೇರೆ ಜಿಲ್ಲೆಯೊಳಗಿನ ಮಹತ್ವದ ಪ್ರಶ್ನೆಗಳ ಚರ್ಚೆಯೂ ಇವೇ ಮೊದಲಾದ ಕಾರ್ಯಗಳು ನಡೆದು ಈ ಜಿಲ್ಲೆಯ ಕುಂದು ಆದಷ್ಟು ಪರಿಮಾರ್ಜಿತವಾದೀತೆಂದು ಭರವಸೆ ಇದೆ. ಹೇಗೂ ಈ ದಿವಸಗಳು ಹೋದವು; ಬರುವ ಕಾಂಗ್ರೆಸಿನ ದಿವಸಗಳಲ್ಲಿಯಾದರೂ ನಮ್ಮ ಜಿಲ್ಲೆಯು ಕಾರ್ಯಪರವಾದೀತೆಂದು ನಾವು ನಂಬುತ್ತೇವೆ.

ದೇಶಭಕ್ತಿ.

(ಲೇಖಾಂಕ ೬.)

ಉಪಸಂಹಾರ.

ಕಳೆದ ಎರಡು ತಿಂಗಳಲ್ಲಿ ಅಥವಾ ಐದು ಲೇಖಗಳಲ್ಲಿ ದೇಶಭಕ್ತಿಯ ವಿಷಯವಾಗಿ ಬರೆದಿರುವ ಸಂಗತಿಗಳ ಮಥಿತಾರ್ಥವನ್ನು "ಸಿಂಹಾವಲೋಕನ" ನ್ಯಾಯದಿಂದ ಈ ಹೊತ್ತು ಹೇಳಿ ಈ ವಿಷಯವನ್ನು ಮುಗಿಸಬೇಕೆಂತಿದ್ದೇವೆ. ಮೊದಲು ದೇಶಭಕ್ತಿಯೆಂದರೇನೆಂಬ ಪ್ರಶ್ನೆಯನ್ನು ಆದಷ್ಟು ವಿಶದವಾಗಿ ವಿವರಿಸಿದ್ದೇವೆ. ಗುರುಭಕ್ತಿ, ಪಿತೃಭಕ್ತಿ, ದೇವಭಕ್ತಿ ಇವುಗಳಿಗಿಂತಲೂ ದೇಶಭಕ್ತಿಯೇ ಶ್ರೇಷ್ಠವಾದುದು. ಭಕ್ತಿಯ ಡಿಪಾರ್ಟಮೆಂಟಿನಲ್ಲಿ ದೇಶಭಕ್ತಿಯೇ ವರಿಷ್ಠಾಧಿಕಾರಿಯು. ಇದನ್ನು ಸರಿಯಾಗಿ ಸಾಧಿಸುವವನಿಗೆ ಅನ್ಯಭಕ್ತಿಗಳು ಅವಶ್ಯವಿಲ್ಲ. "ಸರ್ವೇಪದಾ ಹಸ್ತಿಪದೇ ನಿಮಗ್ನಾಃ" ಎಂದರೆ ಎಲ್ಲ ಹೆಜ್ಜೆಗಳು ಆನೆಯ ಹೆಜ್ಜೆಯಲ್ಲಿ ಅಡಗಿ ಹೋಗುವವೆಂದು ಹೇಳಿದಂತೆ ದೇಶಭಕ್ತಿಯಲ್ಲಿ ಬೇರೆ ಭಕ್ತಿಗಳ ಅಂತರ್ಭಾವವಾಗುತ್ತದೆ. ಇವೇ ಮುಂತಾದ ಸಂಗತಿಗಳನ್ನೆಲ್ಲ ವಿವರಿಸಿ ದೇಶಭಕ್ತಿಯ ಒಂಭತ್ತು ಪ್ರಕಾರಗಳನ್ನು ಅಲ್ಲಲ್ಲಿ ಸೋದಾಹರಣವಾಗಿ

ತಾರೀಕು 29ನೇ ದಶಂಬರ 1916.

ಪಾದಿಸಿದ್ದೇವೆ. ಅನಂತರ ಭಕ್ತಿಯ ರಹಸ್ಯವನ್ನು ಪ್ರಸ್ತಾಪಿಸಬೇಕಾಗಿ ಬಂದಲ್ಲಿ ದೇಶಭಕ್ತಿಯ ರಹಸ್ಯವು—ಅವರವರ ಜನಾಂಗಗಳಲ್ಲಿ ಅವರವರ ಕಾರಭಾರ ಇರುವದು. ಹಾಗೆಯೇ ಹಿಂದೀ ದೇಶಕ್ಕೆ ಹಿಂದೀ ಜನರ ಕಾರಭಾರವು ಅವಶ್ಯವಾದ್ದರಿಂದ ಅಂತರ್ಗತ ಸ್ವರಾಜ್ಯವೇ—ಆಗಿರುವದೆಂಬದನ್ನು ತೋರಿಸಿದ್ದೇವೆ. ಮುಂದಿನ ಲೇಖದಲ್ಲಿ ದೇಶಭಕ್ತಿಯಿಲ್ಲದವನು ದೇಶ ದ್ರೋಹಿಯು, ದೇಶದ ಸಾಲಗಾರನು, ದೇಶದ ಘಾತಕನು ಈ ಮೂರು ಮಾತುಗಳನ್ನು ವಿವರಣ ಪೂರ್ವಕವಾಗಿ ರುಜುಪಡಿಸಿದ್ದೇವೆ. ಇದೇ ನಮ್ಮ ಕಳದ ಲೇಖನಗಳ ಸಾರಾಂಶವು.

ವಾಚಕರೇ, ಹಿಂದಿನ ಲೇಖಗಳನ್ನಾಗಲಿ ಈ ಹೊತ್ತಿನ ಸಾರಾಂಶವನ್ನಾಗಲಿ ಓದಿ ತಮಗೆ ಹಲವು ಆಶಂಕೆಗಳು ಬಂದಿರಬಹುದು, ಅಥವಾ ಇನ್ನಾದರೂ ಬರಲಿಕ್ಕೆ ಸಾಕು. ದೇಶಭಕ್ತಿಯು ಇಷ್ಟು ಸರ್ವೋತ್ತಮವಾಗಿದ್ದರೆ, ಇಷ್ಟು ಮಹತ್ವದ್ದಿದ್ದರೆ ಆ ವಿಷಯದಲ್ಲಿ ಒಂದೇ ಒಂದು ಮಾತನ್ನಾದರೂ ಹಿಂದಿನ ಋಷಿಗಳು ಯಾಕೆ ಹೇಳಲಿಲ್ಲ? ದೇವಭಕ್ತಿಗಿಂತಲೂ ದೇಶಭಕ್ತಿಗೆ ಶ್ರೇಷ್ಠತ್ವವಿದ್ದರೆ ಆ ವಿಷಯದ ವಿಮಾಂಸೆಯನ್ನು ಅವರು ಮಾಡಬೇಕಿತ್ತಲ್ಲವೆ? ಕೊನೆಯು ಪಕ್ಷಕ್ಕೆ ಮಾತೃಭಕ್ತಿ ಮುಂತಾದ್ದಕ್ಕಿಂತ ಇದು ಮೇಲ ತರಗತಿಯದೆಂತಿದ್ದರೆ "ಮಾತೃದೇವೋಭವ" ಎಂದು ಹೇಳುವಾಗಲೇ "ದೇಶದೇವೋಭವ" ಎಂದು ಹೇಳಿದರೆ ಆ ಋಷಿಗಳ ಬಾಯಿಗೆ ಬೇಡೆಂತಲೇ ಶ್ರಮವಾಗುತ್ತಿತ್ತೇ? ಅಥವಾ ಹಾಗೆ ಬರೆದರೆ ಕೈ ಏನಾದರೂ ಸೋತು ಹೋಗುತ್ತಿತ್ತೇ? ಯಾಕೆ ಹೇಳಲಿಲ್ಲ? ಯಾಕೆ ಬರೆಯಲಿಲ್ಲ? ಶ್ರುತಿಸ್ಮೃತಿಗಳ ವಿಷಯವನ್ನು ಬಿಟ್ಟರೂ ಬೇರೆ ಎಷ್ಟೊ ವಿಧದ ಶಾಸ್ತ್ರಗಳನ್ನೂ, ತತ್ವಗಳನ್ನೂ, ಮೀಮಾಂಸೆಯನ್ನೂ ಮತ್ತು ವಿಮರ್ಶೆಯನ್ನೂ ಬರೆದು ಪುಸ್ತಕಗಳ ಕಟ್ಟು ಕಟ್ಟುಗಳನ್ನೆ ಹಾಕಿದಂಥ ನಮ್ಮ ಪ್ರಾಚೀನ ಋಷಿಗಳಿಗೆ ಇಷ್ಟು ಮಹತ್ವದ ಮತ್ತು ಆವಶ್ಯಕವಾದ ದೇಶಭಕ್ತಿಯ ಶಾಸ್ತ್ರವನ್ನಾಗಲಿ, ಮೀಮಾಂಸೆಯನ್ನಾಗಲಿ ರಚಿಸಬಹುದಿತ್ತಲ್ಲವೆ? ನಾಸ್ತಿಕ ಮತವನ್ನು ಕೂಡ ಷಟ್ ಶಾಸ್ತ್ರಗಳಲ್ಲಿ ಸಂಗ್ರಹಿಸಿ ಅಲ್ಲದ ಹರಬೆಯನ್ನು ಹೆಚ್ಚಿಸಿದ ಅವರಿಗೆ ದೇಶಭಕ್ತಿಯ ಮಹತ್ವವು ಕಣ್ಣಿಗೆ ಬೀಳಲಿಲ್ಲವೆ? ಮನಸ್ಸಿಗೆ ಗೋಚರವಾಗಲಿಲ್ಲವೆ? ಆಕಾಶದಲ್ಲಿ-ಅಸಂಖ್ಯಾತಯೋಜನ ದೂರದಲ್ಲಿ ಇರುವ ಆ ಸೂರ್ಯ ಚಂದ್ರರ ಗತಿಗಳನ್ನೂ (ಇವುಗಳಿಂದಲಾದರೂ ಪ್ರಕಾಶದ ಲಾಭನಾಗುವುದು, ಏನೂ ಪ್ರಯೋಜನವಿಲ್ಲದ) ಚಿಕ್ಕ ಚಿಕ್ಕ ತಾರೆಗಳ ಗತಿಗಳನ್ನೂ ಉದಯಾಸ್ತಗಳನ್ನೂ ಶುಭಾಶುಭ ಪರಿಣಾಮಗಳನ್ನೂ, ಕಂಡುಹಿಡಿದು ಆ ವಿಷಯದಲ್ಲಿ ಕೆಲವು ಪುಸ್ತಕಗಳನ್ನು ಬರೆದು ಆ ಜ್ಯೋತಿಃಶಾಸ್ತ್ರವನ್ನು ಬೋಧಿಸುವ ಋಷಿಗಳಿಗೆ ಸಾಕ್ಷಾತ್ ದೇಶದ ಮಹಾತ್ಮ್ಯವು-ವೈಶಿಷ್ಟ್ಯವು—ತಿಳಿಯದೆ ಹೋಯಿತೇ? ಹೇಗೆ ಹೋದೀತು? ಚಿಕ್ಕ ಚಿಕ್ಕ ತಾರೆಗಳಾದರೂ ಕಣ್ಣಿಗೆ ಕಾಣುವವು. ಸ್ವರ್ಗ ನರಕಾದಿ ಅದೃಶ್ಯ ಲೋಕಗಳ ವಿಷಯದಲ್ಲಿ ಸಹ ಜ್ಞಾನವನ್ನು ತಕ್ಕೊಳ್ಳುವ ಋಷಿಗಳಿಗೆ ಸ್ವದೇಶದ ವಿಸ್ಮೃತಿಯುಂಟಾಗುವುದು ಸಂಭವನೀಯವೆ? ಹಾಗೊಂದು ಇಲ್ಲವಾದರೆ ಮತ್ತು ದೇಶಕ್ಕಾಗಲಿ, ದೇಶಭಕ್ತಿಗಾಗಲಿ ಇಷ್ಟೊಂದು ಮಹತ್ವವು ಇದ್ದುದಾದರೆ ಅವರು ಒಂದು ಸ್ಮೃತಿ, ಒಂದು ಪುರಾಣ ಕೊನೆಗೆ ಒಂದು ಸಿಂಧುವನ್ನಾದರೂ ಬರೆದಿಡುತ್ತಿದ್ದರು. ಅಂಥ ಯಾವದೊಂದು ವ್ಯವಸ್ಥೆಯು ಇಲ್ಲ. ಎಂದಮೇಲೆ ದೇಶಭಕ್ತಿಗೆ ಮಹತ್ವವು ಎಲ್ಲಿಂದ? ನೀವು ಮಾತ್ರ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಗೆ ಅನುಕೂಲವಾಗಿ ಬರೆಯುವುದಲ್ಲವೆ?

ಇಂಥ ಎಷ್ಟೋ ಆಕ್ಷೇಪಗಳು ಮನೋಮಂಡಲದಲ್ಲಿ ಮೂಡುವವು. ಆದರೆ ಇದು ತನ್ನ ದೇಶ, ಇದರ ಸೇವೆಯನ್ನು ತಾನು ಮಾಡಬೇಕೆಂಬ ತಿಳಿವನ್ನು ಜನರಲ್ಲಿ ಹುಟ್ಟಿಸಲು ಆ ಮಹರ್ಷಿಗಳು ಮಾಡಿರುವ ಕೆಲವು ವ್ಯವಸ್ಥೆಗಳನ್ನು ಆಲೋಚಿಸಿದರೆ ಇಂಥ ಯಾವ ಆಕ್ಷೇಪಕ್ಕೂ ಎಡೆಯಿಲ್ಲೆಂತ ತೋರುತ್ತದೆ. ಸ್ವದೇಶದ ಮೇಲೆ ಒದಗಿರುವ ಆಪದ್ವಿಮೋಚನೆಗಾಗಿ ಪೂರ್ವದಲ್ಲಿ ದಧೀಚಿ ಋಷಿಯು ಸ್ವಾಸುತ್ಯಾಗ ಮಾಡಿ, ದೇಶಭಕ್ತರ ಮಾಲಿಕೆಯಲ್ಲಿ ಮಧ್ಯಮಣಿಯ ಸ್ಥಾನವನ್ನು ಪಡೆದಿರುವನೆಂಬುದಾಗಿ ನಮ್ಮ ಪ್ರಾಚೀನ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ಈ ವಿಷಯವನ್ನು ನಾವು "ಸಾರ್ವಜನಿಕ ಕರ್ತವ್ಯಗಳು" ಎಂಬ ಲೇಖದಲ್ಲಿ ವಿಸ್ತೃತವಾಗಿ ಪ್ರಸ್ತಾಪಿಸಿದ್ದೇವೆ. ದೇಶಭಕ್ತರಿಗೆ ಪರಮಗುರುವಾದ ಈ ದಧೀಚಿಯು ಸೂರ್ಯನಂತೆ ತೇಜಃಪುಂಜನಾಗಿ ನಮ್ಮೆಲ್ಲರ ಕಣ್ಣುಗಳ ಮುಂದೆ ಹೊಳೆಯುತ್ತಿದ್ದಾನೆ. ಇದಕ್ಕಿಂತ ದೇಶಭಕ್ತಿಯ ಇನ್ನೊಂದು ಪ್ರಮಾಣವು ಅವಶ್ಯವಿದೆಯೇ?

ಇದಲ್ಲದೆ. ಶ್ರೌತ; ಸ್ಮಾರ್ತ ಅಥವಾ ಪೌರಾಣಿಕ ಕರ್ಮಾಂಗಗಳಲ್ಲಿ ಪ್ರಥಮತಃ 'ಸಂಕಲ್ಪ'ವನ್ನು ಮಾಡಬೇಕಾಗುತ್ತದಷ್ಟೇ. ಈ ಸಂಕಲ್ಪದಲ್ಲಿ ದೇಶಕಾಲಗಳ ಉಚ್ಚಾರದ ವ್ಯವಸ್ಥೆಯನ್ನು ಪ್ರಾಚೀನ ಆರ್ಯರು ಮಾಡಿರುವರು. ಇದರ ಹೇತುವೇನು? ... ಭರತಖಂಡ, ಸೌರಾಷ್ಟ್ರವೋ, ಗೌರಾಷ್ಟ್ರವೊ ಯಾವುದೊ ದೇಶ, ಸಹ್ಯಾದ್ರಿಯ ಇಂಥ ದಿಕ್ಕು, ಇಂಥ ಸುಪ್ರಸಿದ್ಧ ನದಿಯ ದಕ್ಷಿಣೋತ್ತರವೊ ಯಾವುದೊ ತೀರ, ಈ ರೀತಿಯಿಂದ ದೇಶದ ಉಚ್ಚಾರವನ್ನು ಮಾಡುವ ಕಟ್ಟಳೆಯನ್ನು ಯಾಕೆ ಹಾಕಿ ಕೊಟ್ಟಿರಬಹುದು? ಅವರು ಈ ಭೂಗೋಲದ ಪಾಠವನ್ನು ಹಾಕಿ ಕೊಟ್ಟದ್ದು, ಈಗಿನ ಶಾಲೆಗಳಲ್ಲಿ ಕಲಿಸುವಂತೆ ಪರೀಕ್ಷೆಯ ತೇರಗಡಿಯ ಉದ್ದೇಶದಿಂದಲೋ? ಅಲ್ಲ. ನಿಜವಾಗಿ ಅಲ್ಲ. ದಶವಿಧಸ್ನಾನದಿಂದ ಪವಿತ್ರಾತ್ಮನಾದವನು ಯಾವುದಾದರೊಂದು ಕರ್ಮಾಂಗದಲ್ಲಿ ಪ್ರವೃತ್ತನಾಗಬೇಕಾದರೆ ಮೊದಲು 'ತನ್ನ ದೇಶವು ಯಾವುದು? ಆ ದೇಶಕ್ಕೆ ತಕ್ಕುದಾದ ಯಾವ ಕೆಲಸವನ್ನು ತಾನು ಮಾಡಬೇಕಾದುದು? ಈ ಆಲೋಚನೆಗಳು ಅವನ ಹೃದಯದಲ್ಲಿ ಹುಟ್ಟಿ ಆ ದೇಶದ ಬಗ್ಗೆ ನಿಷ್ಠೆಯೊ, ಪ್ರೀತಿಯೊ, ವಾತ್ಸಲ್ಯವೊ, ಭಕ್ತಿಯೋ ಯಾವುದೊಂದು ಶುದ್ಧ ವೃತ್ತಿಯು ಸಹಜವಾಗಿ ಉದಯಿಸುವಂತೆ ಪೂರ್ವಜರು ಏರ್ಪಾಡನ್ನು ಮಾಡಿರುವರು. ಮನೆಯೊಳಗಿನ ಮುತ್ತಜ್ಜಿಯು ವೈದ್ಯ ಶಾಸ್ತ್ರದ ಗ್ರಂಥವನ್ನು ಯಾವುದೂ ಬರೆದಿಡಲಿಲ್ಲವಾದರೂ ಊಟದೊಳಗಿನ ಉಪಚಾರದಲ್ಲಿ ಅಥವಾ ಸ್ನಾನಪಾನಾದಿವಿಧಿಗಳಲ್ಲಿಯೆ ರೋಗನಿವಾರಕ ಉಪಾಯಗಳನ್ನು ನಡಿಸುತ್ತಿರುವಾಗ ಅವಳಿಗೆ ಆರೋಗ್ಯ ಶಾಸ್ತ್ರದ ಮಹತ್ವವು ಗೊತ್ತಿದ್ದಿಲ್ಲೆನ್ನಬಹುದೆ? ಹಾಗೆಯೆ ಋಷಿಗಳು ಪ್ರತಿ ಒಂದು ಕರ್ಮಾಂಗದಲ್ಲಿಯ ಸಂಕಲ್ಪದೊಳಗೇ ತನ್ನ ದೇಶದ ಸ್ಮರಣೆಯು ಪ್ರತಿ ಒಬ್ಬನಿಗೆ ಹುಟ್ಟುವಂತೆ ತಕ್ಕ ವ್ಯವಸ್ಥೆಯನ್ನು ಮಾಡಿರುವಾಗ ಅವರಿಗೆ ದೇಶಭಕ್ತಿಯ ಮಹತ್ವವು ಗೊತ್ತಿರಲಿಲ್ಲೆಂದು ಯಾವ ಬುದ್ಧಿವಂತನೂ ಸಾಧಿಸಲಿಕ್ಕಿಲ್ಲ. ಸಂಕಲ್ಪವು ದ್ವಿಜರಿಗೆ ಮಾತ್ರ ಹೇಳಿದ್ದಲ್ಲ, ದ್ವಿಜೇತರರಿಗೂ ಅದು ಅವಶ್ಯವಾದುದು. ಎಂದ ಮೇಲೆ ಯಾವ ವರ್ಣಭೇದವನ್ನೂ ಇಡದೆ ನಮ್ಮ ಮಹರ್ಷಿಗಳು ಪ್ರತಿ ಒಬ್ಬನಲ್ಲಿ 'ತಾನು ಭರತಖಂಡದ ನಿವಾಸಿಯು' ಈ ತಿಳಿವು ಆವಿರ್ಭವಿಸುವಂತೆ ಕಟ್ಟಳೆಗಳನ್ನು ಮಾಡಿರುವರು. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

ದೇಶಭಕ್ತಿಯ ಈ ಮುಖ್ಯ ವಿಷಯವನ್ನು ಪೋಷಿಸುವಂತೆ ಬೇರೆ ಎಷ್ಟೊ ಸಹಾಯಕ ಉಪಾಯಗಳನ್ನು ಮಾಡಿರುವರು. ದೇಶಭಕ್ತಿಗೆ ಪೂರ್ವಜರ ಸ್ಮೃತಿಯು ಉದ್ದೀಪಕವಾದುದರಿಂದ ಗೋತ್ರೋಚ್ಚಾರದ ಪದ್ಧತಿಯನ್ನಿಟ್ಟು ಆ ನೆವದಿಂದ ಇಂಥಿಂಥ ಮಹರ್ಷಿಯ ಸಂತತಿಯವನು ತಾನು ಎಂಬ ಭಾವನೆಯು ಜನರಲ್ಲಿ ಸದಾ ಜಾಗ್ರತವಿರುವಂತೆ ಮಾಡಲು ಅವರು ಮರೆಯಲಿಲ್ಲ. ಇದರಂತೆಯೇ ದೇಶಭಕ್ತಿಗೆ ಸಹಾಯಕವಾದ ಇನ್ನೊಂದು ಸಾಧನವು ಸಾರ್ವಜನಿಕ ಹಿತಬುದ್ಧಿಯು, ಆ ವಿಷಯದಲ್ಲಿ ಕೂಡ "ಲೋಕಾಃ ಸಮಸ್ತಾಃ ಸುಖಿನೋ ಭವಂತು" "ಎಲ್ಲ ದೇಶಬಂಧುಗಳಿಗೆ ಸುಖವಾಗಲಿ" ಎಂಬೀ ಪ್ರಾರ್ಥನೆಯನ್ನಿಟ್ಟು ಪೂಜನೀಯರಾದ ಋಷಿಗಳು ದೇಶಸೇವೆಯ ಮಾರ್ಗವನ್ನು ನಿಷ್ಕಂಟಕವಾಗಿ ಮಾಡಿರುವರು. ಒಂದು ಗೇಣುದ್ದವಾದ ಹೊಟ್ಟೆಗಾಗಿ ರೊಟ್ಟಿಯನ್ನು, ಸರ್ವ ಸಮರ್ಥನಾದ ಪರಮೇಶ್ವರನಿಂದ ಕೇಳಲಿಕ್ಕೆ ನಮ್ಮ ಮಹರ್ಷಿಗಳು ಕಲಿಸದೆ "ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ" ಪ್ರಜೆಗಳಿಗೆ ಸ್ವಸ್ತಿಯಾಗಲಿ, ಅರಸರು ನ್ಯಾಯದಿಂದ ಭೂಮಿಯನ್ನಾಳಲಿ, ಗೋಬ್ರಾಹ್ಮಣರಿಗೆ ಶುಭವುಂಟಾಗಲಿ, ಲೋಕಕ್ಕೆಲ್ಲ ಸುಖವಾಗಲಿ, ಈ ರೀತಿಯಿಂದ ಉದಾತ್ತವಾದ ಪ್ರಾರ್ಥನೆಯನ್ನು ನಮ್ಮ ಬಾಯಿಂದ ಮಾಡಿಸಿರುವರು! ಪ್ರಿಯ ವಾಚಕರೇ, ಇದಕ್ಕಿಂತ ಮಹತ್ವದ್ದು ಇನ್ನಾವ ಶಾಸ್ತ್ರವು, ಅಥವಾ ಸೂತ್ರವು ಅವಶ್ಯವಿರುವದು? ನಾವು ಮಾತ್ರ ನಮ್ಮ ಸಂಧ್ಯಾವಂದನೆಯೊಳಗಿನ, ಸಂಕಲ್ಪದೊಳಗಿನ, ಪ್ರಾರ್ಥನೆಯೊಳಗಿನ, ಮತ್ತು ಗೋತ್ರೋಚ್ಚಾರದೊಳಗಿನ ದೇಶಭಕ್ತಿಯ ತತ್ವವನ್ನರಿಯದೆ ಹಿಂದಿನ ಮಹರ್ಷಿಗಳನ್ನು ಒಂದೆರಡಲ್ಲ, ಹತ್ತು ಮುಖಗಳಿಂದ ದೂಷಿಸುತ್ತೇವೆ. ಇದು ನಮ್ಮದೇ ಪ್ರಮಾದವಲ್ಲದೆ ಧರ್ಮ ಶಾಸ್ತ್ರಕಾರರ ಅಪರಾಧವಲ್ಲ. ಪರಲೋಕದಂಥ ಅದೃಶ್ಯವಾದ ಸಂಗತಿಯನ್ನು ಸೂಕ್ಷ್ಮ ದೃಷ್ಟಿಯಿಂದ ವಿವೇಚಿಸಿದ ಋಷಿಗಳು ಸಾಕ್ಷಾತ್ ಎದುರಿನಲ್ಲಿರುವ ದೇಶಪುರುಷನ ಭಕ್ತಿಯ ವಿಷಯವಾಗಿ ಆಲೋಚಿಸಲಿಲ್ಲೆಂದು ನೆನೆಸುವುದು ಬರೆ ಅಸಮಂಜಸವಾದ್ದು, ಮಾತ್ರವಲ್ಲ, ಗಾಢ ಅಜ್ಞಾನದ ಫಲವು.

ಇರಲಿ; ಈ ಉಪಸಂಹಾರದಲ್ಲಿ ಇನ್ನು ಒಂದೇ ಮಾತು ಹೇಳಲಿಕ್ಕಿದೆ. ಹಿಂದೀ ಜನರ ದೇಶಭಕ್ತಿಯ ಓಕಳಿಯು ಬ್ರಿಟಿಶ್ ಸಾಮ್ರಾಜ್ಯದ ಛತ್ರದ ನೆರಳಿನಲ್ಲಿ ಹಿಂದೀ ಸ್ವರಾಜ್ಯವೇ ಆಗಿರುವದರಿಂದ ಆ ಅವಭೃತಸ್ನಾನದ—ಆ ಓಕಳಿಯ-ಸುದಿನವು ಈಶ್ವರನ ಅನುಗ್ರಹದಿಂದಲೂ, ಬ್ರಿಟಿಶರ ಔದಾರ್ಯದಿಂದಲೂ ಬೇಗನೆ ಬರಬೇಕೆಂದು ನಮ್ಮೆಲ್ಲ ದೇಶಭಕ್ತರ ಸವಿನಯ ವಿಜ್ಞಾಪನೆಯು. ಈ ವಿಜ್ಞಾಪನೆಯಲ್ಲಿ ನಮ್ಮ ವಾಚಕರು ನಮ್ಮೊಡನೆಯೆ ಕೈ ಜೋಡಿಸುವರೆಂಬ ಭರವಸೆಪಟ್ಟು—ಯಾವುದರ ವಿಯೋಗವು ದುಃಸಹವಾಗಿರುವುದೋ—ಅಂಥಾ ಅತಿಪ್ರಿಯವಾದ ಈ ದೇಶಭಕ್ತಿಯ ವಿವೇಚನೆಯನ್ನು ಇಲ್ಲಿಗೆ ಮುಗಿಸುವೆವು.

ಜ್ಞಾನದ ಮಿಠಾಯಿ.

(೧೦ನೇ ಪೊಟ್ಟಣ).

ನಮಸ್ಕಾರ! ನಮಸ್ಕಾರ!!

ಆಯಿತು! ಇದು ಹತ್ತನೇ ಪೊಟ್ಟಣ, ಇಷ್ಟೇ ಸಾಕು!! ಮಹನೀಯ ವಾಚಕರಿಗೆ ಈ ವರೆಗೆ ವಿಧವಿಧದ ಪೊಟ್ಟಣಗಳನ್ನು ಕಟ್ಟಿಕೊಟ್ಟಿದ್ದೇವೆ. ಕೆಲವು ಸಾರಿ ವಿದ್ಯಾರ್ಥಿಗಳಿಗೆ ರೂಢಿಯ ಶಬ್ದಗಳ ಮೋದಕಗಳನ್ನು ಕೊಟ್ಟಿದ್ದೇವೆ; ಒಂದೆರಡು ಸಾರಿ ಮನೋಧರ್ಮದ ಬರ್ಫಿಗಳನ್ನು ಕಳುಹಿಸಿದ್ದೇವೆ; ಇನ್ನೊಮ್ಮೆ 'ಕನ್ನಡ ವಿದೂಷಕ' ರಿಗೆ ಜಿಲೇಬಿಯನ್ನು ಅರ್ಪಿಸಿದ್ದೇವೆ; ಶಿವರಾತ್ರೆಯ ಕಲ್ಲಿನ ಪೊಟ್ಟಣದಲ್ಲಿ ದೇಶಿ ಉದ್ಯೋಗದ ಕಾರಖಾನೆಗಳನ್ನು ಮಾಡದೆ ಮೋಟಾರ ಮುಂತಾದ ತಮಾಶೆಯ ಸಾಧನೆಗಳನ್ನು ಮಾಡಿ ಜನಗಳ ಮೇಲೆ ಮಹದುಪಕಾರ (!) ಮಾಡುತ್ತಿರುವ ಮಹನೀಯರಿಗೆ ಉತ್ತಮೋತ್ತಮವಾದ ಲಾಡುಗಳನ್ನು ತಿನ್ನಿಸಿದ್ದೇವೆ; ಒಮ್ಮೆ ಜೂಜಿನವರಿಗೂ ಕೆಲವು ಪ್ರಶಸ್ತವಾದ ಲಾಡುಗಳನ್ನ ಕಳುಹಿಸಿ ಕೊಟ್ಟದ್ದು ನೆನಪಿಗೆ ಬರುತ್ತದೆ. ಈ ರೀತಿಯಿಂದ ಬೇರೆ ಬೇರೆಯವರ ಉದ್ದೇಶದಿಂದ ಬೇರೆ ಬೇರೆ ತರದ ಮಿಠಾಯಿಯನ್ನು ಕಟ್ಟಿಕೊಡುವಾಗ ವಾಚಕರೇ, ತಮಗೂ ಒಂದಿಷ್ಟು ಅವುಗಳ ಪ್ರಸಾದವು ಸಿಗುತಿತ್ತಲ್ಲವೆ? ಗಾದೆಯೇ ಇದೆ, ಇಬ್ಬರು ತಮಾಶೆಯಲ್ಲಿ ಮೂರನೆಯವನ ಪ್ರವೇಶ! ಈ ಗಾದೆಯು ಇಲ್ಲಿ ಅಷ್ಟು ಕೂಡಿ ಬರುವದಿಲ್ಲಾಗಿರಬಹುದು. ಆದರೂ ಮಾತಿಗೊಂದು ಗಾದೆಯು ಇರಬೇಕಂತೆ.

ಅದಿರಲಿ. ಎಲ್ಲರಿಗೊಂದೊಂದು ಪೊಟ್ಟಣ ಕಳುಹಿಸುವಾಗ ನಮ್ಮ ಮುನ್ಸಿಪಾಲಟಿಗೆ ಒಂದನ್ನೂ ಕಾಣಿಕೆಯಾಗಿ ಕೊಡಲು ಆಗಲೇ ಇಲ್ಲ. ಅದಕ್ಕೆ ಸ್ವಲ್ಪ ಬೇಸರವೋ ಏನೊ? ಎಷ್ಟೋ ವಿಧದಿಂದ ನಮ್ಮ ಉಪಯೋಗಕ್ಕೆ ಬೀಳುವ ಈ ಸಂಸ್ಥೆಗೆ ಒಂದನ್ನೂ ಕಳುಹಿಸದೆ ಇದ್ದರೆ ಅದು ನಿಜವಾಗಿ ನಮ್ಮದೊಂದು ಶಿಷ್ಟಾಚಾರದ ಅತಿಕ್ರಮಣವೇ ಸರಿ. ಮತ್ತು ಅದಕ್ಕೊಂದು ಅವಮಾನವೇ ಸರಿ. ಮುನ್ಸಿಪಾಲಟಿಯ ಅನುಗ್ರಹವು ಎಷ್ಟೆಂದು ಹೇಳಬಹುದು. ಆರೋಗ್ಯಖಾತೆ, ಆಖಾತೆ, ಈ ಖಾತೆ ಎಂದು—ಇದರ ಖಾತೆಗಳು ಕೆಲಸವಿಲ್ಲದೆ ಗೋಳಾಡುವ ಜನರಿಗಾಗಿ ಎಷ್ಟೋ ಕೈಜೋಡಿಸಿ ನಿಂತಿರುವವು. ರೈಲ ಸ್ಟೇಶನಿನಲ್ಲಿ ಹೋದರೆ ಈ ಮುನ್ಸಿಪಾಲಟಿಯ ಕೆಲವು ಬಹಾದೂರರು 'ಪಾಸ್ ಪೋರ್ಟ'ನ್ನು ಕೊಡುವರು. ಅವರ ವಿಲಾಸವೇನೆಂದು ವರ್ಣಿಸಬಹುದು! ಇನ್ನು ಕೆಲವು ಆರೋಗ್ಯಖಾತೆಯವರಿರುವರು. ಅವರ ಕಷ್ಟ, ಶ್ರಮ, ದಣುವು ಇವುಗಳನ್ನೆಲ್ಲ ಚನ್ನಾಗಿ ತಿಳಿದೂ ನಮ್ಮ ಮುನ್ಸಿಪಾಲಟಿ ಅಮ್ಮವು ಅವರಿಗೆ ಕೆಲವು ವಾಹನಗಳನ್ನು ಕೊಟ್ಟಿದ್ದಾಳೆ. ಈ ವಾಹನಗಳಲ್ಲಿ ಕುದುರೆಯು ಬಹುಬೇಗ ಓಡುವದರಿಂದ ಪ್ರಯಾಣದ ಲಘುತ್ವವಾಗುತ್ತದೆಂಬುದು ನಿಜವಿದ್ದರೂ ಅದು ಆನೆಯ ಸವಾರಿಯಷ್ಟು ಬಹುಮಾನದ ಪ್ರಯಾಣವಲ್ಲ. ಲೊರ್ಡ ಕರ್ಝನ ದೊರೆಗಳು ದಿಲ್ಲಿ ದರಬಾರಿನಲ್ಲಿ ಆನೆಯ ಸವಾರಿಯನ್ನು ಮಾಡಿದ್ದರು! ಅಂಥದ್ದು ಇವರಿಗೆ ಬೇಕಲ್ಲವೆ? ಸವಾರಿಗೆ ಒಂದು ಆನೆ ಇಲ್ಲದಿದ್ದರೆ? ಕುದುರೆ ಯಾಕೆ? ಈ ಹೊತ್ತು ಕುದುರೆಯಾದರೆ ನಾಳೆ ಬೇರೆ ಏನಾದರೂ ಚತುಷ್ಪಾದವೇ, ಬೇರೊಂದು ತರದ ವಾಹನವು ಬಂದೀತು! ಆದುದರಿಂದ ನಮ್ಮ ಮುನ್ಸಿಪಾಲಟಿ ಅಮ್ಮವು ಇವರಿಗೆ ಆನೆಯಂಥ ಒಂದೊಂದು ಉಚ್ಚ ವಾಹನವನ್ನು ತಂದು ಕೊಡುವ ವಿಲೇವಾರಿಯನ್ನು ಬೇಗನೆ ಮಾಡಿದರೆ ಒಳ್ಳೇದು. ಯಾಕೆಂದರೆ ಈ ಆರೋಗ್ಯ ನವುಕರರ ತಕ್ಕ ವಿಲೇವಾರಿ ಮಾಡದೆ ಇದ್ದದರಿಂದ ಶಹರದೊಳಗಿನ ಕೊಳೆಯೂ, ಮಲವೂ ಅಲ್ಲಲ್ಲಿ, ಬೀದಿಯಲ್ಲಿ, ಮಾರ್ಗದಲ್ಲಿ, ಆಗಾಗ್ಗೆ ಕಾಣುತ್ತಿರುವವು. ಎಂದರೆ ಅವರು ಆ ಕಡೆಗೆ ನೋಡುವುದಿಲ್ಲ, ಉದಾಸೀನರಾಗಿರುತ್ತಾರೆ, ಇಲ್ಲವೆ ರಾತ್ರೆ ಹಗಲು ಬೇರೆ ಬೇರೆ ಜಂಬರದಲ್ಲಿರುತ್ತಾರೆ, ಹೀಗೊಂದೂ ಅಲ್ಲ. ಅವರು ಯಾವಾಗಲೂ ತಮ್ಮ ಕರ್ತವ್ಯದಲ್ಲಿಯೇ ತತ್ಪರರಾಗಿರುವರು. ಇದು ಖಂಡಿತ. ಆದರೆ ಅವರ ಬಹುಮಾನವನ್ನು ಇಟ್ಟುಕೊಳ್ಳುವ ಕ್ರಮವು ನಮ್ಮ ಮುನ್ಸಿಪಾಲಟಿಯಮ್ಮನಿಗೆ ಗೊತ್ತಿಲ್ಲದ ಕಾರಣ ಎನೊ ಇಂಥದ್ದೊಂದೆರಡು ಪ್ರಮಾದಗಳು ಆಗಿರಬಹುದು. ಅದು ದೊಡ್ಡ ಮಾತಲ್ಲ. ಒಟ್ಟಾರೆ ನಮ್ಮ ಮುನ್ಸಿಪಾಲಟಿಯು ಬಹು ಉಪಯುಕ್ತವಾದ ಒಂದು ಸಂಸ್ಥೆಯಾದ ಕಾರಣ ಅದಕ್ಕೊಂದು ಪೊಟ್ಟಣವನ್ನು ನಾವು ಈ ಮೊದಲೇ ಕಳುಹಿಸಿಕೊಡಬೇಕಿತ್ತು. ಹಾಗೆ ಕಳುಹಿಸಿಕೊಡಲು ಮರೆತದ್ದು ತಪ್ಪು. ಆದರೂ ನಮ್ಮ ಮುನ್ಸಿಪಾಲಟಿಯು ಈ ನಮ್ಮ ತಪ್ಪನ್ನೂ, ತನ್ನ ಅವಮಾನವನ್ನೂ ಬೀದಿಗಳಲ್ಲಿ ಹಾಕಲಿಕ್ಕಿಲ್ಲೆಂದು ದೃಢವಾಗಿ ನಂಬಬಹುದಾಗಿದೆ. ಯಾಕೆ? ಬೇರೆ ದುರ್ಗಂಧಿ ಕೊಳಕುಗಳಿಂದ ಬೀದಿಗಳು ತುಂಬಿ ತುಂಬಿ ತುಳುಕುತ್ತಿರುವಾಗ ನಮ್ಮ ತಪ್ಪಿಗೂ, ಅದರ ಅವಮಾನಕ್ಕೂ ಬೀದಿಗಳಲ್ಲಿ ಇನ್ನು ಸ್ಥಳವಿದೆಯೆ? ಹೇಗೂ ಇರಲಿ. ನಮ್ಮ ತಪ್ಪಿಗೆ ನಾವು ಈಗಲಾದರೂ ಪ್ರಾಯಶ್ಚಿತ್ತ ತೆಕ್ಕೊಳುತ್ತೇವೆ! ಈ ಪೊಟ್ಟಣವು ಅದಕ್ಕೆ ಇರಲಿ!! ಇದೇ ಪ್ರಾಯಶ್ಚಿತ್ತ!!

ಆದರೆ ವಾಚಕರೆ, ಇನ್ನು ಮುಂದೆ ನಮ್ಮ ಅಂಗಡಿಯನ್ನು ಮುಚ್ಚಬೇಕೆಂದು ಆಲೋಚಿಸಿದ್ದೇವೆ. ಬೇರೆ ಯಾವ ಕಾರಣವಿದ್ದರೂ ಸ್ವದೇಶಾಭಿಮಾನಿಯ ಮುಂದಿನ 'ಪರಿವರ್ತನ'ದಲ್ಲಿ ಒಂದುವೇಳೆ ನಮ್ಮ ಅಂಗಡಿಗೆ ಸ್ಥಲವಿಲ್ಲಾದರೆ ಏನು ಮಾಡುವುದು? ಪೋರಫೀಟಿನಲ್ಲಿಯಾದರೂ ಒಂದು ಸ್ಥಲವನ್ನು ಹಿಡಿಯಬಹುದು. ಆದರೆ ಅದು ಒಂದು ದಿವಸದ್ದಲ್ಲವೆ? ಆದುದರಿಂದ ಈಗ ಅಂಗಡಿಯನ್ನು ಮುಚ್ಚುವುದೇ ಒಳ್ಳೇದೆಂದು ನೆನಸಿದ್ದೇವೆ. ಇಷ್ಟು ದಿವಸದ ಸ್ನೇಹ. ಏನೋ ಅಬದ್ಧ ಸುಬದ್ಧ ಹೇಳಿಯಾಯಿತು. ಅದರಲ್ಲಿ ವೈಷಮ್ಯವನ್ನು ಹುಡುಕಬಾರದು. ಈಗ ಈ ಪೊಟ್ಟಣವನ್ನು ಕಟ್ಟುವಾಗಲೇ ಅಂಗಡಿಯ ಕದಗಳನ್ನು ಹಾಕುವೆವು. ಕೊನೆಗೊಂದು ಎಲ್ಲರಿಗೆ ನಮಸ್ಕಾರ!

ದಕ್ಷಿಣ ಕನ್ನಡಾ ಜಿಲ್ಲೆಗೆ ಸುಲಭವಾದ ಕಬ್ಬಿನ ವ್ಯವಸಾಯದ ಕ್ರಮಗಳು.

ಈ ಜಿಲ್ಲೆಯಲ್ಲಿ ವಾಡಿಕೆಯಾಗಿ ಊರಿನ ಕಬ್ಬನ್ನೇ ನಡುತ್ತಾರೆ; ಆದರೆ ಆ ಕಬ್ಬಿನ ಸಾಗುವಳಿ ಮಾಡುವುದಕ್ಕಿಂತ ಸುಲಭವಾದ ರೀತಿಯಿಂದಲೂ ಕಡಿಮೆ ಖರ್ಚಿನಿಂದಲೂ ಸಾಗುವಳಿ ಮಾಡುವುದಕ್ಕೆ ಸಾಧ್ಯವಿರುವ ಮೊರೀಶಿಯಸ್ ಕಬ್ಬು ಈಗ ಸ್ವಲ್ಪ ಪ್ರಚಾರಕ್ಕೆ ಬಂದಿರುತ್ತದೆ. ಮೊರೀಶಿಯಸ್ ಕಬ್ಬಿನ ಹುಟ್ಟುವಳಿಯು ಊರಿನ ಕಬ್ಬಿನ ಉತ್ಪತ್ತಿಗಿಂತ ಕನಿಷ್ಟಪಕ್ಷಕ್ಕೆ ಇಮ್ಮಡಿಯಾಗಿರುತ್ತದೆ. ಮತ್ತು ಅದಕ್ಕೆ ನರಿಗಳ ಕಾಟವಾಗಲಿ ಬೆರು ಯಾನೆ ಕಾಡುಬೆಕ್ಕಿನ ಬಾಧೆಯಾಗಲಿ ಏನೂ ಇರುವುದಿಲ್ಲ. ಅಂತಹ ಕಬ್ಬಿನ ಸಾಗುವಳಿಯಲ್ಲಿ ಅನುಭವಕ್ಕೆ ಬಂದ ಕೆಲವು ಕ್ರಮಗಳು ಇತರರ ಪ್ರಯೋಜನಾರ್ಥವಾಗಿ ಇಲ್ಲಿ ಕೇಳುವುದೇ ಪ್ರಕೃತದ ಉದ್ದೇಶವಾಗಿರುತ್ತದೆ.

ಮೊರೀಶಿಯಸ್ ಕಬ್ಬನ್ನು ನಡಬೇಕಾಗಿ ಆಲೋಚಿಸಿದ ಸ್ಥಳದಲ್ಲಿ ನವಂಬರ ತಿಂಗಳಲ್ಲಿ ಯಾ ದಶಂಬರ ತಿಂಗಳ ಶುರುವಿಗೆ ಮೆಣಸನ್ನು ನಡತಕ್ಕದ್ದು. ಮೆಣಸಿನ ಸಾಲುಗಳ ನಡುವೆ ಕಬ್ಬನ್ನು ನಡುವುದಕ್ಕೆ ಸಾಲುಗಳನ್ನು ತೆಗೆಯಬೇಕು. ಮೆಣಸಿನ ಸಾಲುಗಳನ್ನು ವಾಡಿಕೆಯಂತೆ ತೆಗೆದು, ಮೆಣಸಿನ ವ್ಯವಸಾಯ ಮಾಡತಕ್ಕದ್ದು. ಮೆಣಸಿನ ಸಾಲುಗಳ ನಡುವೆ ೫ ಮೆಟ್ಟಿನಷ್ಟು ಸ್ಥಳ ಬಿಟ್ಟು, ಆ ಸ್ಥಳದಲ್ಲಿ ಒಂದೊಂದು ಮೆಟ್ಟಿನಷ್ಟು ಸ್ಥಳವನ್ನು ಎರಡು ಕರೆಗಳಿಗೂ ಬಿಟ್ಟು ಮಧ್ಯದ ೩ ಮೆಟ್ಟು ಸ್ಥಳದಲ್ಲಿ ಕಬ್ಬಿನ ಬೀಜಗಳನ್ನು ನಡುವರೆ ಅರ್ಧರ್ಧ ಕೋಲಿನಷ್ಟು ಆಳದ ಗುಂಡಿಗಳನ್ನು ತೆಗೆಯಬೇಕು. ಕಬ್ಬನ್ನು ನಡುವುದಕ್ಕೆ ತೆಗೆಯುವ ಸಾಲುಗಳನ್ನು ಮೆಣಸು ನಡುವಾಗಲೇ ಯಾ ಮೆಣಸು ನಟ್ಟೊಡನೆಯೇ ತೆಗೆದು, ಕುಮ್ಮಾಯಿ ಸುಣ್ಣದ ಹುಡಿಯನ್ನು ಸಾಲುಗಳ ಅಡಿಯಲ್ಲಿ ಚದರಿಸಿ, ಅದರ ಮೇಲೆ ಬೂದಿಯನ್ನು ಹಾಕಿ, ಸದರಿ ಬೂದಿಯ ಮೇಲೆ ಸ್ವಲ್ಪ ಮಾದೇರಿಸಪ್ಪು ತುಂಬಿಸಿ, ಮಣ್ಣನ್ನು ಹಾಕಿ, ೩೦ ದಿವಸಗಳ ಪರ್ಯಂತರ ಸಾಲುಗಳನ್ನು ಹಾಗೆಯೇ ಬಿಟ್ಟುಬಿಡತಕ್ಕದ್ದು. ೩೦ ದಿವಸಗಳು ಕಳೆದ ಕೂಡಲೇ ಸಾಲುಗಳಲ್ಲಿ ಪುನಹಾ ಸ್ವಲ್ಪ ಬೂದಿಯನ್ನು ಹಾಕಿ, ಕಬ್ಬಿನ ಬೀಜಗಳನ್ನು ನಟ್ಟು, ಬಿಸಿಲು ತಾಗದಂತೆ ಮರವದ ಮರದ ಸಪ್ಪು ಇರಿಸಿ, ಆ ಸಪ್ಪಿನ ಮೇಲೆ ಸ್ವಲ್ಪ ಮಣ್ಣನ್ನು ಹಾಕಿ, ಪ್ರಥಮ ಸರ್ತಿ ಚೆನ್ನಾಗಿ ನೀರು ಹಾಕಬೇಕು; ಅನಂತರ ಹತ್ತು ದಿವಸಗಳಿಗೊಮ್ಮೆ ನೀರು ಹಾಕುತ್ತಾ ಬಂದರೆ ಸಾಕಾಗಿರುತ್ತದೆ. ಕಬ್ಬಿನ ಬೀಜಗಳು ಸಸಿಗಳಾಗಿ ಮೇಲೆ ಬಂದಂತೆ ಆಗಾಗ್ಯೆ ಅನುಕೂಲವಿದ್ದಷ್ಟು ಬೂದಿ ಮುಂತಾದ ಗೊಬ್ಬರವನ್ನು ಹಾಕುತ್ತಿರಬೇಕು; ಯಾ ಗೋಮೂತ್ರವನ್ನು ಅಥವಾ ಹಸಿಮೊಸಿನ ನೀರು ೪ ಪಾಲಷ್ಟು ನೀರು ಕೂಡಿಸಿ, ಗಿಡಗಳ ಮಧ್ಯವಿರುವ ಸ್ಥಳದಲ್ಲಿ ಸ್ವಲ್ಪ ಸ್ವಲ್ಪ ಹಾಕಿ, ಚೆನ್ನಾಗಿ ನೀರು ಹಾಕಬೇಕು; ಯಾ ನೀರು ಹೊಯ್ಯುವ ಮೊದಲು ಈ ನೀರು ಪ್ರಥಮದಲ್ಲಿ ಹಾಕಿ ಅನಂತರ ನೀರು ಹೊಯ್ಯುತ್ತಿರಬೇಕು. ಈ ರೀತಿ ಮಾಡುವುದರಿಂದ ಕಬ್ಬು ಮಣ್ಣಿನ ಅಡಿಯಲ್ಲಿ ದಿನೇ ದಿನೇ ದಪ್ಪನಾಗಿ ಬೆಳೆಯುತ್ತದೆ. ಪ್ರಥಮದ ಮಳೆ ಪ್ರಾರಂಭವಾದ ಕೂಡಲೇ ಮೆಣಸಿನ ಗಿಡಗಳನ್ನು ಕಿತ್ತು ತೆಗೆದು ಕಬ್ಬಿನ ಗಿಡಗಳ ಅಡಿಯಲ್ಲಿ ಗೊಬ್ಬರದ ಬಗ್ಯೆ ಹಾಕಿ ಮೆಣಸಿನ ಸಾಲುಗಳ ಊಟಿನ ಮಣ್ಣನ್ನು ಕಬ್ಬಿನ ಸಾಲುಗಳಿಗೆ ಹಾಕಿ, ಶುಮಾರು ಒಂದು ಕೋಲು ಎತ್ತರವಾಗುವಷ್ಟು ಮುಚ್ಚಬೇಕು. ಮತ್ತು ಸಪ್ಟಂಬರ ತಿಂಗಳ ವರೆಗೆ ಕಬ್ಬಿನ ಗಿಡಗಳ ಸೋಗೆಗಳನ್ನು ತೆಗೆಯಕೂಡದು. ಈ ರೀತಿ ಮಾಡುವುದರಿಂದ ಕಬ್ಬು ದಪ್ಪನಾಗಿ ಎದ್ದು ಬೆಳೆಯುತ್ತದೆ. ಕಬ್ಬಿನ ಸಾಲುಗಳಲ್ಲಿ ಕಬ್ಬಿನ ಬೀಜಗಳನ್ನು ನಡು

ಒಂದೇ ಖಣಿಯಲ್ಲಿ ಎರಡು ಸಾಲುಗಳಂತೆ ನಡಬೇಕು; ಅಂದರೆ ಸದರಿ ಖಣಿಯ ಎರಡು ಕರೆಗಳಲ್ಲಿಯೂ ನಡಬೇಕು.

ಈ ಕ್ರಮಗಳನ್ನನುಸರಿಸಿ ಸಾಗುವಳಿ ಮಾಡಿದ ಕಬ್ಬಿನ ಬೆಳೆಯು ಒಳ್ಳೇದಾಗಿ ಫಲಿಸುವುದು.

ನೆಟ್ಟಾರ ವರಲಿಂಗರಾವ್,
ವರ್ಗದಾರ, ಪುತ್ತೂರು.

ಪತ್ರವ್ಯವಹಾರ.

ಹೋಮ್‌ರೂಲ್ ಲೀಗ್.

ಅಯ್ಯಾ ಪತ್ರಕರ್ತರೇ,

ನಮ್ಮ ಪಟ್ಟಣದಲ್ಲಿ ಸಂಘಗಳು ಆಗುತ್ತಿವೆ, ಅವುಗಳ ಶಾಖೆಗಳು ಹುಟ್ಟುತ್ತಿವೆ. ಆದರೆ ಮೊಳಕೆ ಬರುವಾಗಲೇ ಬಾಡಿಹೋಗುತ್ತವೆ. ಇದರಿಂದುಂಟಾಗುವ ಫಲಗಳನ್ನು ಕಣ್ಣಿನಿಂದ ನೋಡುವದಕ್ಕಾಗಲೀ ರುಚಿಸುವದಕ್ಕಾಗಲೀ ಯಾರಿಗೂ ಸಿಕ್ಕುವದು ಕಷ್ಟವೆಂಬದು ಸರ್ವಜನಿತವಾದ ಮಾತು. ಈ ಮಾತನ್ನು ನಾನು ಇಲ್ಲಿ ಹೇಳಲು ನಮ್ಮ ಪಟ್ಟಣದಲ್ಲಿ ಹೋಮ್ ರೂಲ್‌ಲೀಗ್ ಎಂಬ ಸಂಘದ ಶಾಖೆಯು ಹುಟ್ಟಿತೆಂದು ತಿಳಿದುದೇ ಕಾರಣವಾಯಿತು. ಅಷ್ಟೇ ಅಲ್ಲ; ತಮ್ಮ ಕಳೆದ ಸಂಚಿಕೆಯಲ್ಲಿ "ದೂರದ ಪ್ರವಾಸಿ"ಯರು ಬರೆದ ಲೇಖನವನ್ನು ಓದಿ ಒಂದೆರಡು ಮಾತುಗಳನ್ನು ಹೇಳದೆ ಇದ್ದರೆ ದೊಡ್ಡ ತಪ್ಪಾದೀತು! ಆದುದರಿಂದ ನನ್ನ ಬಡ ಲೇಖನಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳಕೊಡಬೇಕಾಗಿ ವಿಜ್ಞಾಪಿಸುತ್ತೇನೆ.

"ದೂರದ ಪ್ರವಾಸಿ"ಯರು ಹೋಮರೂಲ ಲೀಗಿನವರಿಗೆ ಕೊಟ್ಟ ಸೂಚನೆಗಳು ತುಂಬಾ ಸ್ತೋತ್ರಾರ್ಹವಾದುದೇ ಸರಿ. ಇವರು "ದೂರದ ಪ್ರವಾಸಿ" ಮಾತ್ರವಲ್ಲ; 'ದೂರದರ್ಶಿ' ಎಂದು ಹೇಳಿದರೆ ನನ್ನದು ತಪ್ಪಾಗದು. ನಮ್ಮ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಎಷ್ಟೋ ಸಂಘಗಳು ಮುಖ್ಯವಾಗಿ ನಮ್ಮ ಮಂಗಳೂರಲ್ಲಿ ಆಗಿ ಹೋದವು. ಒಂದೆರಡು ತಿಂಗಳು ಹೆಸರು ಮಾತ್ರ ಇದ್ದರೂ ನಂತರ ಈ ಹೆಸರಿನಿಂದ ಯಾವ ಕಾರ್ಯವೂ ಆದಂತೆ ತೋರಿ ಬಂದಿರುವದಿಲ್ಲ. ದೃಷ್ಟಾಂತಕ್ಕಾಗಿ ರಾಷ್ಟ್ರೀಯ ಸಭೆಯ ಶಾಖೆಯೊಂದು ಇಲ್ಲಿ ನಿರ್ಮಿಸಿಸೋಣಾಗಿತ್ತು. ಆದರೆ ಈಗ ಅದರ ಸುದ್ದಿಯೇ ಇಲ್ಲ. ಈ ಶಾಖೆಯಿಂದ ಯಾವನಾದರೂ ಈ ವರೆಗೆ ರಾಷ್ಟ್ರೀಯ ಸಭೆಗೆ ಪ್ರತಿನಿಧಿಯಾಗಿ ಹೋದದ್ದು ಕೇಳಬರುವದಿಲ್ಲ. ಅದಲ್ಲದೆ ಈ ಶಾಖೆಯು ಈ ವರೆಗೆ ಯಾವ ಕೆಲಸವನ್ನು ಮಾಡಿದೆ? ಯಾರಿಗೂ ಗೊತ್ತಿಲ್ಲ. ಇಂಥಾ ಅನೇಕ ಸಂಘಗಳು, ಶಾಖೆಗಳು, ನಮ್ಮ ಪಟ್ಟಣದಲ್ಲಿ ಎಷ್ಟೋ ಆಗಿ ಹೋದವು. "ಉತ್ಸಾಹದಿಂದ ರಾಮಭಟ್ಟನ ರುಜು" ಎಂಬಂತೆ ಕೆಲವರ ಉತ್ಸಾಹದಿಂದ ಕೆಲವು ಪದವೀಧರರು ಕೂಡಿಕೊಂಡು ಹೆಸರಿಗೆ ತಕ್ಕ ಇಂಥಾ ಸಂಘವನ್ನು ಸ್ಥಾಪಿಸಿದ್ದೇವೆ, ಇಂಥಾ ಶಾಖೆಯನ್ನು ತೆರೆದಿದ್ದೇವೆಂತ ಹೇಳಿಕೊಂಡು ಸುಮ್ಮನೆ ಕುಳಿತರೆ ಯಾವ ಪ್ರಯೋಜನವು ಬಂದೀತು? ಸ್ವಾರ್ಥವನ್ನು ತ್ಯಜಿಸಿ ಲೋಕಸೇವೆಯ ಮಾರ್ಗವನ್ನು ಹಿಡಿಯಲು ಬದ್ಧಕಂಕಣರಾದವರು ಇಂಥಾ ಸಂಘಗಳ ಮುಂದಾಳುಗಳಾಗಿ ಇದ್ದರೆ ಮಾತ್ರ ತಕ್ಕ ಪ್ರಯೋಜನವು ಬಂದೀತು. ಇಂಥವರಿದ್ದ ಸಂಘಗಳು ಮಾತ್ರ ಲೋಕೋಪಕಾರಕವಾದ ಕೆಲಸಗಳನ್ನು ಮಾಡುವವು. ಆದುದರಿಂದ ನಾನು ಇಲ್ಲಿ ವಿಜ್ಞಾಪಿಸಿಕೊಳ್ಳುವದೇನಂದರೆ:-ನಮ್ಮ ಮಂಗಳೂರಲ್ಲಿ ತೆರೆಯೋಣಾದ ಹೋಮರೂಲು ಲೀಗಿನ ಶಾಖೆಯು ಕೂಡಾ ಹಿಂದೆ/ಇಲ್ಲಿ ಆಗಿಹೋದ ಸಂಘಗಳ ಪರಿಣಾಮವನ್ನು ಹೊಂದದಂತೆ "ದೂರದ ಪ್ರವಾಸಿ"ಯರು ಕಳೆದ ಸಂಚಿಕೆಯಲ್ಲಿ ಕೊಟ್ಟ ಸೂಚನೆಗಳನ್ನು ಅನುಸರಿಸಿ ನಡೆಯಬೇಕು. ಹೀಗೆ ಮಾಡಿದರೆ ಈ ಶಾಖೆಯು ಬದುಕಿ ಬಾಳಿ ದೇಶೋನ್ನತಿಯ ಸಾಧನೆಯಾಗಿ ಪರಿಣಮಿಸುವದು. ಇಲ್ಲವಾದರೆ "ಬರೇ ಗುಲ್ಲು ನಿದ್ದೆಗೇಡು" ಎಂಬಮಾತು ಈ ಶಾಖೆಗೂ ತಟ್ಟಬಹುದು.

ಮಂಗಳೂರು, }
ತಾ. 25-12-16 } ಹಿತವಾದಿ.

ಮುನ್ಸಿಪಾಲಿಟಿಯ ದೀಪಗಳು!

ಅಯ್ಯಾ ಪತ್ರಿಕಾಕರ್ತರೇ,

ನಮ್ಮ ಮಂಗಳೂರು ಪಟ್ಟಣದ ರಸ್ತೆಗಳಲ್ಲಿ ಸಾಕಷ್ಟು ದೀಪಗಳು ಇಲ್ಲದೆಯೂ ಇದ್ದ ದೀಪಗಳು ಸರಿಯಾಗಿ ಪ್ರಕಾಶ ಕೊಡದೆಯೂ ಇದ್ದವೆಂಬ ಸಂಗತಿಯು ಸರ್ವನಿವಾಸಿಕರಿಗೆ ಗೊತ್ತೇ ಆದೆ. ಆದರೆ ರಾ। ದಿವಾನ ಬಹದ್ದೂರ ಮುಂಡಪ್ಪ ಬಂಗೇರರು ನಮ್ಮ ಪಟ್ಟಣದ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿರುವ ಕಾಲದಲ್ಲಿ ಹಲವು ಉದಾರ ಮನಸ್ಸಿನ ಮಹಾನುಭಾವರು ನಮ್ಮ ಮುನ್ಸಿಪಾಲಿಟಿಯ ಶೋಚನೀಯವಾದ ಈ ದುರ್ಗತಿಯನ್ನು ಗಣನೆಗೆ ತಂದು ಹೆಚ್ಚು ಪ್ರಕಾಶ ಕೊಡುವ "ಅಲಾದೀನ ಆರ್ಕ ಲೇಂಪ"ಗಳನ್ನೂ ನಮ್ಮ ಮುನ್ಸಿಪಾಲಿಟಿಗೆ ಉಚಿತವಾಗಿ ಕೊಟ್ಟರು. ಮಾತ್ರವಲ್ಲ; ಒಂದು ದೀಪವನ್ನೂ ಅದರ ಪ್ರಥಮ ಸ್ಥಾಪನೆಯ ಕಾಲದಲ್ಲಿ ಎಷ್ಟೋ ಮಹಾನುಭಾವರು ಕೂಡಿ ಕಾಲೋಚಿತ ಭಾಷಣಗಳನ್ನೂ ಕೊಟ್ಟು ಬಹಳ ವಿಜೃಂಭಣೆಯಿಂದ ಉರಿಸಿದರು. ಕುರುಡಾಗಿದ್ದ ನಮ್ಮ ಪಟ್ಟಣವು ರಾತ್ರೆ ಕಾಲದಲ್ಲಿ ಈ ದೀಪಗಳ ಪ್ರಕಾಶದಿಂದ ಹೊಳೆಯುತ್ತಾ ದಾರಿಗರಿಗೆ ಆನಂದದಾಯಕವಾಗಿತ್ತು. ಹೀಗಿರುತ್ತಾ ದಿವಾನ ಬಹದ್ದೂರ ರಾ। ಮುಂಡಪ್ಪ ಬಂಗೇರರು ಅವರ ಚೆಯರ್ಮೆನ ಹುದ್ದೆಯಿಂದ ನಿವೃತ್ತರಾಗುತ್ತಲೇ ಅವರ ಸಾಹಸದಿಂದ ನಮ್ಮ ಪಟ್ಟಣಕ್ಕೆ ಪ್ರಾಪ್ತವಾದ ಈ ದೀಪಗಳು ಅವರ ಹಿಂದೆಯೇ ನಿವೃತ್ತವಾದಂತೆ ಕಾಣುತ್ತಲಿವೆ. ನಮ್ಮ ಶಹರಿನಲ್ಲಿ ಜನ ಸಮೂಹವ ಜನಜಾನುವಾರು ಗಾಡಿ ವಗೈರೆ ಸಂಚಾರವು ಬಹಳವಿರುವ ಬಂದರ, ಗೋಳಿಕಟ್ಟೆ ಬಜಾರು, ತೇರಬೀದಿ ವ ಕೊಡಿಯಾಲಬೈಲು, ಕ್ಲೈಲೋ ರಸ್ತೆ ಎಂಬ ಮುಖ್ಯ ಸ್ಥಳಗಳಲ್ಲಿಯೇ ಸ್ಥಾಪಿಸಲ್ಪಟ್ಟ ದೀಪಗಳು ಉರಿಸುವುದು ತೋರುವುದಿಲ್ಲ. ದೀಪಸ್ತಂಭಗಳು ದೀಪಗಳಿಲ್ಲದ ಸ್ತಂಭಗಳಾಗಿವೆ. ದಾರಿಗರಿಗೆ ದಾರಿಯನ್ನು ತೋರಿಸುವ ಬದಲಾಗಿ ಕಗ್ಗತ್ತಲೆಯಲ್ಲಿ ದಾರಿಯನ್ನು ಅರಿಯದೆ ಸ್ತಂಭಗಳಿಗೆ ತಲೆ ಬಡದುಕೊಳ್ಳಲಿಕ್ಕೆ ಮಾತ್ರ ಪ್ರಯೋಜನಕ್ಕಾಗಿ ನಿಂತಿವೆ. ಅಯ್ಯೋ ಕುರತೆನು, ಹಗಲಿನಲ್ಲಿ ಗ್ರಾಮಸಿಂಹಗಳಿಗೆ ಮೂತ್ರಶಂಕೆಮಾಡುವರೆಯೂ, ಫೇರಿವಾಲರಿಗೆ ತಮ್ಮ ಸರಕು ಸಾಮಾನುಗಳನ್ನು ವಿಕರಿಮಾಡುವರೆಯೂ ಸಹಾ ಈ ದೀಪಸ್ತಂಭಗಳ ಪೀಠಗಳು ಸಹಕಾರಿಗಳಾಗಿವೆ. ಆದರೆ ನಮ್ಮ ಗವರ್ನಮೆಂಟ ವಕೀಲರಾದ ಮೆ। ಲೋಬರು ಹಂಪನಕಟ್ಟೆಯಲ್ಲಿ ಇಡಿಸಿದ ದೀಪವು ಮತ್ತು ಜಿಲ್ಲಾ ಕಲೆಕ್ಟರ ದೊರೆಗಳವರ ಬಂಗ್ಲೆಯ ಎದುರುಗಡೆಯಲ್ಲಿ ರಾ। ಪುತ್ತೂರು ಸಾಹೇಬರು ಇಡಿಸಿದ ದೀಪವು ಮಾತ್ರ ಉರಿಯುತ್ತಲಿವೆ. ಇವು ೫ ಯಾ ೬ ದಿವಸಗಳ ಹಿಂದಿನಿಂದ ಮಾತ್ರ ಉರಿಸಲಿಕ್ಕೆ ಪ್ರಾರಂಭವಾಗಿಯದೆ. ಕಾರಣವೇನೋ ತಿಳಿಯದು. ಈ ದೀಪಗಳು ಉರಿಯುವದು ಉಚಿತ ಮಾಡಿದ ಮಹಾನುಭಾವರ ಮಹತ್ವದಿಂದಲೋ ನಮ್ಮ ಬಡ ಮುನ್ಸಿಪಾಲಿಟಿಯ ಉದಾರ ಹೃದಯದಿಂದಲೊ ಎಂಬದು ಗೊತ್ತಾಗದು. ಈ ಶೋಚನೀಯವಾದ ಅವಸ್ಥೆಯು ನಮ್ಮ ಪಟ್ಟಣ ತಾತರ ಮತ್ತು ಈಗಿನ ನಮ್ಮ ಮುನ್ಸಿಪಾಲಿಟಿಯ ಚೆಯರ್ಮೆನರ ಗೋಚರಕ್ಕೆ ಬಾರದೆ ಇರುವ ವಿಷಯ ಬಹಳ ವಿಷಾದಪಡಬೇಕಾಗಿದೆ. ಹ್ಯಾಗೂ ನಮ್ಮ ಮುನ್ಸಿಪಾಲಿಟಿಯ ವಳಿತದಲ್ಲಿ ಬಹಳ ಆಸಕ್ತರಾಗಿದ್ದು ಸಾಹಸ ತೆಗೆದುಕೊಳ್ಳುವ ಈಗಿನ ಚೇಯರ್ಮೆನರಾದ ಮೆ। ಡಾಕ್ಟರ್ ವರ್ಗೀಸರವರು ಇನ್ನಾದರೂ ಈ ಶೋಚನೀಯ ಅವಸ್ಥೆಯನ್ನು ಸರಿಪಡಿಸುವರೆಂಬ ಕೋರಿಕೆಯ ಮೇಲೆ ನಿಮ್ಮ ಅಮೂಲ್ಯ ಪತ್ರಿಕೆಯಲ್ಲಿ ಈ ಲೇಖನವನ್ನು ಬರೆದಿರುತ್ತೇನೆ

ಪಟ್ಟಣ ನಿವಾಸಿಕ.

ಅಯ್ಯಾ ಪತ್ರಕರ್ತರೇ,

ಮದ್ಯಪಾನದಿಂದುಂಟಾಗುವ ಕೆಡಕುಗಳನ್ನು ಈಗಲೀಗ ಎಲ್ಲಾ ಜನಾಂಗಗಳೂ ಅರಿತುಕೊಂಡು ಈ ಅಭ್ಯಾಸದ ಹತ ಬಗೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆಂಬದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ನಮ್ಮ ಹಿಂದುಸ್ಥಾನದಲ್ಲಿಯೂ ಮದ್ಯಪಾನದ ಅಂಗಡಿಗಳನ್ನು ಕಡಿಮೆ ಮಾಡಬೇಕು, ಈ ಪಾನದಭ್ಯಾಸದ ಹುಟ್ಟಡಗಿಸಬೇಕು ಎಂಬ ಪ್ರಯತ್ನಗಳು ನಡೆಯುತ್ತಲಿವೆ. ಹೆಚ್ಚೇಕೆ? ನಮ್ಮ ಮಂಗಳೂರಲ್ಲಿ ಕೂಡಾ ಮದ್ಯಪಾನ ನಿವಾರಣ ಸಂಘಗಳು ಹುಟ್ಟಿ ಈ ಬಗ್ಗೆ ಪ್ರಯತ್ನಗಳನ್ನು ಮಾಡುತ್ತಲಿವೆ. ಆದರೆ ಈ ಮದ್ಯಪಾನ ನಿವಾರಣಾ ಸಂಘಗಳ ಪ್ರಯತ್ನದಿಂದಲೋ ಏನೋ ಈಗಲೀಗ ಕೆಲವು ಮಹನೀಯರು ಇಂಥಾ ಗಡಂಗುಗಳಿಗೆ ಹೋಗುವದನ್ನು ನಿಲ್ಲಿಸಿ ಹೊಸ ಒಂದು ಮಾರ್ಗವನ್ನು ಅವಲಂಬಿಸಿದ್ದಂತೆ ತೋರುತ್ತದೆಂತಲೂ ಈ ಹೊಸ ಮಾರ್ಗವು ಸೋಡಾ ಅಂಗಡಿಗಳಲ್ಲಿ ಮದ್ಯಪಾನ ಮಾಡುವದೆಂತಲೂ ಯಾರೋ ಒಬ್ಬರು ಹೇಳಿದರು. ಆದರೆ ಸೋಡಾ ಅಂಗಡಿಗಳಲ್ಲಿ ಸರಾಯಿ ಸಿಗುವ ಬಗೆ ಹೇಗೆ? ಸೋಡಾ ಅಂಗಡಿಗಳಲ್ಲಿ ಸರಾಯಿ ಮಾರಬಹುದೆಂಬ ಹುಕುಂ ಇದೆಯೋ? ಇಲ್ಲವೆ ಇಂಥಾ ಸೋಡಾ ಕಾರ್ಖಾನೆಗಳಿಗೆ ಸರಾಯಿ ಮಾರಲು ಲೈಸನ್ಸು ಇದೆಯೋ ಎಂಬದು ಮಾತ್ರ ತಿಳಿದು ಬಂದಿರುವದಿಲ್ಲ. ಹೇಗೂ ಇರಲಿ; ಸೋಡಾ ಅಂಗಡಿಗಳಲ್ಲಿ ಸರಾಯಿ ಮಾರುವದು ನಿಜವಾದುದಾದರೆ ದೇಶದ ಏಳಿಗೆಯನ್ನು ಬಯಸಿ ಇದರ ಅಭ್ಯಾಸವನ್ನು ಕಿತ್ತು ಬಿಡಲು ಪ್ರಯತ್ನಿಸುವ ದೇಶಭಕ್ತರ ದಾರಿಯಲ್ಲಿ ಒಂದು ಮುಳ್ಳನ್ನು ಹಾಕಿದ ಹಾಗಾಗುವದು. ಅಷ್ಟೇ ಅಲ್ಲ; ಸೋಡಾ ಫೆಕ್ಟರಿಗಳಿಗೆ ಸೋಡಾ ಕುಡಿಯಲಿಕ್ಕೆ ಎಂತ ಹೋಗುವ ಮದ್ಯಪಾನದ ಅಭ್ಯಾಸವಿಲ್ಲದವರೂ ಮೆಲ್ಲಮೆಲ್ಲನೆ ಈ ಅಭ್ಯಾಸವನ್ನು ಸುಲಭವಾಗಿ ಕಲಿತುಕೊಳ್ಳುವ ಹಾಗೆ ಆಗಿ ಮದ್ಯಪಾನ ನಿವಾರಣ ಸಂಘಗಳ ಕೆಲಸಕ್ಕೆ ಒಂದು ತೊಡಕನ್ನು ತಂದು ಒಡ್ಡುವ ಹಾಗೆ ಆಗುವದು. ಸರಕಾರಕ್ಕೂ ಇದರಿಂದ ನಷ್ಟ ಒದಗಬಹುದು. ಈ ಎಲ್ಲಾ ಕಾರಣಗಳಿಂದ ಸೋಡಾ ಫೇಕ್ಟರಿಗಳಲ್ಲಿ ಸರಾಯಿ ಮಾರುವದು ದೇಶದ ಏಳಿಗೆಗೆ ಹಿತಕರವಲ್ಲ ಎಂತ ಧಾರಾಳವಾಗಿ ಹೇಳಬಹುದು. ಆದುದರಿಂದ ಸೋಡಾ ಕಾರ್ಖಾನೆಗಳಲ್ಲಿ ಸರಾಯಿ ಮಾರುವದಾದರೆ ಅದನ್ನು ತ್ವರ್ಯದಲ್ಲಿ ಕಂಡು ಹಿಡಿದು ಈ ದುರಭ್ಯಾಸವನ್ನು ನಿಲ್ಲಿಸುವದು ಅವಶ್ಯವೆಂದೆಣಿಸುತ್ತೇನೆ.

ಮಂಗಳೂರು, }
ತಾ. 26-12-16 } ಪುರಾವುರ್ಶಿ.

ಯೂರೋಪದ ಮಹಾ ಯುದ್ಧ.

ಪಶ್ಚಿಮ ರಣರಂಗ.

ಮ್ಯೂಸಿನ ಬಲಕಡೆಯಲ್ಲಿ ಮಿತ್ರಸೈನಿಕರಿಗೂ ಶತ್ರುಗಳಿಗೂ ತೀಕ್ಷ್ಣವಾದ ಕದನಗಳು ನಡೆದು ಮಿತ್ರರು ಶತ್ರುಗಳನ್ನು ಬ್ರೈಬ್ಸ ಫಾರ್ಮಿನಿಂದ ಓಡಿಸಿರುತ್ತಾರೆ. ಶತ್ರುಗಳ ೨ ಯಂತ್ರಚಾಲಿತ ಫಿರಂಗಿಗಳು ಮಿತ್ರರ ಸ್ವಾಧೀನವಾಗಿವೆ. ಅರ್ಮೆಂಟಿಯರ್ಸಿನ ದಕ್ಷಿಣದಲ್ಲಿರುವ ಕಂದಕಗಳೊಳಗೆ ಬ್ರಿಟಿಷ ಸೈನಿಕರು ನುಗ್ಗಿ ಶತ್ರುಗಳಲ್ಲಿ ಅನೇಕರನ್ನು ಕೊಂದುಹಾಕಿರುತ್ತಾರೆ.

ಮಿತ್ರರು ವೆರ್ಡನಿನಲ್ಲಿ ಪೆಪ್ಪರ್ ಹಿಲ್ ಎಂಬ ದಿನ್ನೆಯನು ಸ್ವಾಧೀನಮಾಡಿಕೊಳ್ಳುವದರಲ್ಲಿ ಜಯಪ್ರದರಾದುದರಿಂದ ಮಿತ್ರರಿಗೆ ಇಲ್ಲಿ ಜಯವಾಗುವದರಲ್ಲಿ ಸಂದೇಹವಿಲ್ಲ ಎಂತ ಹೇಳಬಹುದಾಗಿದೆ. ಜರ್ಮನರು ಜೀವದ ಆಶೆ ಇಲ್ಲದೆ ಈ ದಿನ್ನೆಯ ಬಳಿ ಯುದ್ಧ ಕೊಟ್ಟರು. ಆದರೆ ಮಿತ್ರರು ಅವರ ಮೇಲೆ ಹಿಂದಿನಿಂದ ಫಕ್ಕನೇ ಬಿದ್ದು ಚದರಿಸಿಬಿಟ್ಟರು. ಶತ್ರುಸೈನಿಕರು ಯುದ್ಧ ಸಾಮಗ್ರಿಗಳನ್ನೆಲ್ಲಾ ಬಿಟ್ಟು ಓಡಿಹೋದರು. ಮಿತ್ರ ಸೈನಿಕರು ಅವರು ಓಡಿಹೋಗದ ಹಾಗೆ ತಡೆದ್ದರಿಂದ ನೂರಾರು ಮಂದಿಯಂತೆ ಶರಣಾಗತರಾದರು. ಇದಕ್ಕೆ ಪೂರ್ವ ದಿಕ್ಕಿನಿಂದ ಕೋಟೆಕೊತ್ತಲುಗಳಿಂದ ಬಲಕಾಯಿಸಿಕೊಂಡಿದ್ದ ಚೆಂಬ್ರೆಟ್ಟೆ ಫಾರ್ಮಿನಲ್ಲಿ ಶತ್ರುಗಳು ೬೦ ಯಂತ್ರಚಾಲಿತ ಫಿರಂಗಿಗಳನ್ನು ಬಿಟ್ಟುಹೋಗಿದ್ದರು. ಇತರ ಕಡೆಗಳಲ್ಲಿ ನಡೆದ ಕದನಗಳಲ್ಲಿಯೂ ಶತ್ರುಗಳು ಫ್ರೆಂಚ ಸೈನಿಕರ ಮುಂದೆ ನಿಲ್ಲಲಾರದೆ ಹಿಂದೆ ಸರಿದಿರುತ್ತಾರೆ. ಫ್ರೆಂಚರು ಚೆಂಬ್ರೆಟ್ಟೆ ಫಾರ್ಮನ್ನು ಹಿಂದೆ ತೆಗೆದುಕೊಂಡಿರುತ್ತಾರೆಂಬದನ್ನು ಜರ್ಮನರು ಒಪ್ಪುತ್ತಾರೆ.

ಲೆನ್ಸಿನ ಬಳಿ ಬ್ರಿಟಿಷ ಸೈನಿಕರು ದಾಳಿಮಾಡುತ್ತಾ ಕೆಲವು ಕಂದಕಗಳನ್ನು ನುಗ್ಗಿ ಶತ್ರುಗಳನ್ನು ಕಂದಕಗಳಿಂದ ಅಟ್ಟಿರುತ್ತಾರೆ. ಅರ್ರಾಸಿನ ಬಳಿ ದಾಳಿಮಾಡಿ ೫೦ ಶತ್ರುಗಳನ್ನು ಸೆರೆಹಿಡಿದಿರುತ್ತಾರೆ.

ಸಂಧಿ ಪ್ರಸ್ತಾಪ.

ಬ್ರಿಟಿಷ ಪ್ರಧಾನ ಮಂತ್ರಿಯಾಗಿ ನೇಮಿಸಲ್ಪಟ್ಟ ಮಿ। ಲೊಯ್ಡ ಜೋರ್ಜರವರು ಪ್ರಥಮಸಾರಿ ಮಂತ್ರಿ ಸಭೆಯಲ್ಲಿ ಮಾತನಾಡಿದರು. ಬ್ರಿಟಿಷರಾಗಲೀ, ಫ್ರೆಂಚರಾಗಲೀ, ಇಟಲಿಯವರಾಗಲೀ ಈ ಸಂಧಿ ಪ್ರಸ್ತಾಪಕ್ಕೆ ಕಿವಿಕೊಡುವಹಾಗಿಲ್ಲವೆಂಬದು ಮಿ। ಲೊಯ್ಡ ಜೋರ್ಜರ ಭಾಷಣದಿಂದ ಖಂಡಿತವಾಗುತ್ತದೆ. ಯಾವ ಉದ್ದಿಷ್ಟ ಹೇತುವನ್ನು ಇಟ್ಟುಕೊಂಡು ಬ್ರಿಟಿಷರು ಯುದ್ಧಕ್ಕೆ ತೊಡಗಿರುವರೋ ಆ ಉದ್ದೇಶವು ಕೈಗೂಡುವವರೆಗೆ ಸಂಧಿ ಪ್ರಸ್ತಾಪವು ಎಲ್ಲಿಯದು? ಇತರ ಸಣ್ಣ ರಾಜ್ಯಗಳ ಹಕ್ಕು ಬಾಧ್ಯತೆಗಳನ್ನು ಜರ್ಮನರು ಮಾನ್ಯಮಾಡುವವರೆಗೆ ಸಂಧಿಯೇ ಇಲ್ಲ. ಜರ್ಮನರು ಎತ್ತಿದ ಈ ಸಂಧಿ ಪ್ರಸ್ತಾಪದಲ್ಲಿ ಬೆಲ್ಜಿಯಮ್, ಸರ್ವಿಯಾ ಮೊದಲಾದ ಸಣ್ಣ ರಾಷ್ಟ್ರಗಳಿಗೆ ಜರ್ಮನರಿಂದ ಆದ ಅನ್ಯಾಯಗಳಿಗೆ ಪ್ರತಿಫಲ ಕೊಡುವ ಪ್ರಸ್ತಾಪವು ತೋರುವದಿಲ್ಲ; ತನಗೆ ಜಯವಾಗಿದೆಂದು ಹಿಗ್ಗಿಕೊಂಡು ಸಂಧಿ ಪ್ರಸ್ತಾಪವನ್ನು ಎತ್ತಿರುವ ಜರ್ಮನರೊಡನೆ ಸಂಧಿ ಮಾಡುವದೆಂದರೆ ನಮ್ಮ ತಲೆಯನ್ನು ಉರ್ಲಿಗೆ ಸಿಕ್ಕಿಸಿಕೊಂಡು ದಾರದ ಎರಡು ತುದಿಗಳನ್ನು ಅವರ ಕೈಯಲ್ಲಿ ಕೊಟ್ಟಂತಾಗುವದು ಎಂತ ಲೊಯ್ಡ ಜೋರ್ಜರವರು ಹೇಳಿರುತ್ತಾರೆ. ಹೀಗೆ ಲೊಯ್ಡ ಜೋರ್ಜರವರ ಭಾಷಣವನ್ನು ನೋಡುವದಾದರೆ ಜರ್ಮನರು ಮಾಡಿದ ಅನ್ಯಾಯಗಳಿಗೆ ಮುಯ್ಯಿಗೆ ಮುಯ್ಯಿ ಕೊಟ್ಟು ಅವರ ಕ್ಷಾತ್ರವೃತ್ತಿಯನ್ನು ನಾಶಮಾಡುವವರೆಗೆ ಸಂಧಿ ಆಗುವ ಉಪಾಯವಿಲ್ಲವೆಂತ ಖಚಿತವಾಗುತ್ತದೆ.

ಫ್ರಾನ್ಸ್ ದೇಶದ ಮಂತ್ರಿಯವರಾದ ಮಿ। ಬ್ರೈಯಾಂಡರು ಮಂತ್ರಿ ಸಭೆಯಲ್ಲಿ ಜರ್ಮನರ ಸಂಧಿ ಪ್ರಸ್ತಾಪದಿಂದ ಯಾರೂ ಮೋಸಹೋಗಬಾರದೆಂದು ಹೇಳಿರುತ್ತಾರೆ. ಫ್ರಾನ್ಸಿನ ಸೋಶ್ಯಲಿಸ್ಟ ಪಕ್ಷದವರು ಶತ್ರುಗಳು ಶಾಶ್ವತವಾದ ಶರ್ತಗಳನ್ನು ಕೊಡುವವರೆಗೆ ಸಂಧಾನ ಪ್ರಸ್ತಾಪವನ್ನು ಅಂಗೀಕರಿಸಕೂಡದು ಎಂಬ ನಿರ್ಣಯವನ್ನು ಮಾಡಿರುತ್ತಾರೆ.

ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟರಾದ ಡಾಕ್ಟರ್ ವಿಲ್ಸನರು ಯುದ್ಧಕ್ಕೆ ಸೇರಿದ ರಾಜ್ಯಗಳಿಗೆ ಮತ್ತು ತಟಸ್ಥ ರಾಜ್ಯಗಳಿಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟು ತಟಸ್ಥ ರಾಜ್ಯಗಳ ಸ್ಥಿತಿಯು ಬರಬರುತ್ತಾ ಸಹಿಸಿಕೊಳ್ಳಲು ಕಷ್ಟಸಾಧ್ಯವಾಗಿ ಬರುವದರಿಂದ ಈ ಯುದ್ಧವನ್ನು ಬೇಗನೇ ಮುಗಿಸುವದು ಒಳ್ಳೇದು ಎಂತ ಸೂಚಿಸಿರುತ್ತಾರೆ.

ಡಾಕ್ಟರ್ ವಿಲ್ಸನರ ಈ ಸೂಚನಾ ಪತ್ರವು ಲಂಡನಿನಲ್ಲಿ ಲೊಯ್ಡ ಜೋರ್ಜರವರ ಭಾಷಣದ ಮೊದಲನೇ ದಿನ ಬಂದು ತಲಪಿತ್ತೆಂದೂ ಭಾಷಣದ ಮರುದಿನ ವಿದೇಶಿ ಆಫೀಸಿಗೆ ಕಳುಹಿಸಿತ್ತೆಂದೂ ಜರ್ಮನ್ ಮಂತ್ರಿಯವರು ಸಂಧಾನ ಪ್ರಸ್ತಾಪ ಎತ್ತುವ ಮೊದಲೇ ಅಮೇರಿಕದಲ್ಲಿ ಇದು ತಯಾರಿಸಲ್ಪಟ್ಟಿರಬೇಕೆಂದೂ ತಿಳಿದುಬರುತ್ತದೆ. ಡಾಕ್ಟರ್ ವಿಲ್ಸನರು ತಿರಿಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟಂದಿನಿಂದ ಅಮೇರಿಕದಲ್ಲಿ ಜರ್ಮನರ ಕಡೆಯವರ ಚಟುವಟಿಕೆಯು ಹೆಚ್ಚಾಗುತ್ತಾ ಬಂದಿದೆಂದೂ ಆಹಾರವನ್ನು ಮಿತ್ರರಾಜ್ಯಗಳಿಗೆ ಕಳುಹಿಸಕೂಡದಹಾಗೆ ಮಾಡಬೇಕೆಂಬ ಚಳವಳವು ನಡೆಯುತ್ತಿದೆಂದೂ ತಿಳಿದುಬರುತ್ತದೆ.

ಡಾಕ್ಟರ್ ವಿಲ್ಸನರವರು ಸ್ನೇಹಭಾವದಿಂದಲೇ ಮಿತ್ರರಾಜ್ಯಗಳಿಗೆ ಪತ್ರ ಕಳುಹಿಸಿದ್ದಾರೆಂದೂ ಮಿತ್ರರ ರಾಜ್ಯಗಳಿಗೆ ಹುದುವಾದ ಶರ್ತಗಳು ಜರ್ಮನರಿಂದ ದೊರಕುವ ಹಾಗೆ ಡಾಕ್ಟರ್ ವಿಲ್ಸನರು ಜರ್ಮನರನ್ನು ಪ್ರೇರೇಪಿಸುವ ಸಂದರ್ಭ ಹುಡುಕುತ್ತಿದ್ದಾರೆಂದೂ "ಚಿಕಾಗೋ ಡೈಲಿ ನ್ಯೂಸ್" ಎಂಬ ಪತ್ರಿಕೆಯ ವಾತ್ಮೀದಾರರು ಬರೆದಿರುವರು.

ಕರ್ಜನ್ ಪ್ರಭುಗಳು ಬ್ರಿಟಿಷ ಲೋರ್ಡ ಸಭೆಯಲ್ಲಿ ಯುದ್ಧದ ಸ್ಥಿತಿಯನ್ನು ಕುರಿತು ಮಾತನಾಡುವಾಗ—ಮಿತ್ರರು ಈಗ ಹೇಳಕೂಡದಷ್ಟು ಶ್ರೇಷ್ಠತೆಯನ್ನು ಪಡೆದಿರುತ್ತಾರೆ. ಕದನ ಮಾಡುವದರಲ್ಲಿ ಮಾತ್ರವೇ ಅಲ್ಲ; ಸಂಖ್ಯೆಯಲ್ಲಿಯೂ ಆಯುಧ ಸಾಮಗ್ರಿಗಳಲ್ಲಿಯೂ ಫಿರಂಗಿ ಮತ್ತು ವಾಯುನಾವೆಗಳನ್ನು ನೋಡುವದಾದರೂ ಈಗ ಮಿತ್ರರೇ ಮೇಲುಸ್ಥಾನದಲ್ಲಿ ಇರುವರು. ಜರ್ಮನರ ಮಾನಸ ಸ್ಥಿತಿಯು ಈಗ ಅಲುಗಾಡುತ್ತಿದೆ. ಜರ್ಮನ ದೇಶದ ಒಳಸ್ಥಿತಿಯು ಕೆಟ್ಟುಹೋಗಿದೆಂಬವಕ್ಕೆ ಆಧಾರಗಳು ಬರುತ್ತಲಿವೆ. ಕಳೆದ ಜುಲಾಯಿ ತಿಂಗಳಿಂದ ಜರ್ಮನಿಯಲ್ಲಿ ಆಹಾರದ ಕೊರತೆ ಬಂದದೆಂಬದನ್ನು ಅವರೇ ಒಪ್ಪುತ್ತಿದ್ದಾರೆ. ಫ್ರೆಂಚರ ಮತ್ತು ಬ್ರಿಟಿಷರ ಸೇನೆಯು ಒಟ್ಟಿಗೆ ೧೦೫,೦೦೦ ಜರ್ಮನ ಸೈನಿಕರನ್ನೂ ೧೫೦ ದೊಡ್ಡ ಫಿರಂಗಿಗಳನ್ನೂ ೨೦೦ ಫೀಲ್ಡ್ ಗನ್‌ಗಳೆಂಬ ಫಿರಂಗಿಗಳನ್ನೂ ೧೫೦ ಯಂತ್ರಚಾಲಿತ ಫಿರಂಗಿಗಳನ್ನೂ ಸೆರೆಹಿಡಿರುತ್ತಾರೆ ಎಂದು ಹೇಳಿರುವರು.

ಸಂಧಾನ ಪ್ರಸ್ತಾಪದ ವಿಷಯವಾಗಿ ಲೋರ್ಡ ಕರ್ಜನರವರು—ಜರ್ಮನರು ಪುನಃ ಯುದ್ಧಮಾಡುವದಿಲ್ಲವೆಂಬದಕ್ಕೆ ತಕ್ಕ ಆಧಾರ ಮತ್ತು ಬಧ್ರತೆಯು ನಮಗೆ ಇಲ್ಲದೆ ಸಂಧಾನ ಮಾಡುವದೆಂದರೆ ಈ ಯುದ್ಧದ ಉದ್ದೇಶವೇ ಕೆಟ್ಟುಹೋದಂತಾಗುವದು. ಎಲ್ಲಾ ರಾಷ್ಟ್ರಗಳು ಸರಾಗವಾಗಿ ಅಭಿವೃದ್ಧಿಯಾಗುವದಕ್ಕೆ ಜರ್ಮನರಿಂದ ಆತಂಕವಾಗದ ಹಾಗೆಯೂ ಜರ್ಮನರ ಭಯಾಸ್ಪದವಾದ ಈ ಸೇನಾಬಲವು ಮುಂದಕ್ಕೆ ಇಲ್ಲದ ಹಾಗೆ ಮಾಡುವದಕ್ಕಾಗಿಯೂ ನಾವು ಈ ಕದನವನ್ನು ಮಾಡುತ್ತಿದ್ದೇವೆ, ೧೯೧೪-೧೬ನೇ ಇಸವಿಗಳಲ್ಲಿ ನಮಗೆ ಆದ ಈ ಅನುಭವವು ನಮ್ಮ ಮಕ್ಕಳಿಗೆ ಮುಂದಕ್ಕೆ ಆಗದ ಹಾಗೆ ನಾವು ಕಾದಾಡುತ್ತಿದ್ದೇವೆ. ಇದಕ್ಕೆ ತಕ್ಕ ಬಧ್ರತೆಯು ದೊರಕಿದರೆ ಮತ್ತು ನಮ್ಮ ಈ ಉದ್ದೇಶವು ಕೈಗೂಡಿದರೆ ನಾವು ಸಂಧಿಮಾಡಲು ಸಿದ್ಧರಾಗಿಯೇ ಇದ್ದೇವೆಂದು ಹೇಳಿರುವರು.

ಮಿತ್ರರಾಜ್ಯಗಳೆಲ್ಲಾ ಪೂರ್ಣ ಮನಸ್ಸಿನಿಂದ ಒಪ್ಪುವ ಶರ್ತಗಳು ಇಲ್ಲದ ವಿನಹಾ ಸಂಧಿ ಇಲ್ಲಯೆಂಬದಾಗಿ ಜಪಾನಿ ದೇಶದ ವಿದೇಶಿ ಮಂತ್ರಿಯವರು ಹೇಳಿರುವರು.

ಶತ್ರುಗಳು ತಮ್ಮ ಪ್ರದೇಶವನ್ನು ಸ್ವಾಧೀನಮಾಡಿಕೊಂಡಿರುವಾಗ ಸಂಧಿಯಾಗುವದು ಅಸಾಧ್ಯವೆಂದೂ ಜಯವನ್ನು ಹೊಂದುವವರೆಗೆ ಯುದ್ಧವನ್ನು ಮುಂದರಿಸಲೇ ಬೇಕೆಂದೂ ಫ್ರಾನ್ಸ್ ಮಂತ್ರಿ ಸಭೆಯಲ್ಲಿ ಸೂಚಿಸೋಣಾಗಿದೆ.

ಬಾಲ್ಕಾನ್.

ಶತ್ರುಗಳು ಡೊಬ್ರುಡ್ಜದಲ್ಲಿ ಅಲ್ಲದೆ ಇತರ ಕಡೆಗಳಲ್ಲಿ ಮುಂದರಿಯಲಿಲ್ಲವೆಂತ ಜರ್ಮನರ ಕಡೆಯಿಂದ ಪ್ರಕಟವಾಗಿದೆ. ಬ್ರಾಯಿಲ ಎಂಬಲ್ಲಿಗೆ ೩೦ ಮೈಲು ದೂರದಲ್ಲಿ ಶತ್ರುಗಳು ಹಿಮ್ಮೆಟ್ಟಿರುವರು. ಶತ್ರುಗಳ ಫಿರಂಗಿಗಳು ರುಮೇನಿಯನರ ಸ್ವಾಧೀನವಾಗಿದೆಂತ ರುಶ್ಯನರು ಪ್ರಕಟಿಸಿರುತ್ತಾರೆ. ಶತ್ರುಗಳಿಗೆ ರುಮೇನಿಯದಲ್ಲಿ ೨ ತಿಂಗಳಲ್ಲಿ ೨೫೦,೦೦೦ ಸೈನಿಕರ ನಷ್ಟವಾಗಿದೆಂತ ವಾರ್ತೆ ಬಂದದೆ.

ಈಜಿಪ್ಟ.

ಈಜಿಪ್ಟಿನಲ್ಲಿ ಬ್ರಿಟಿಷರು ೨ ವರ್ಷಗಳಿಂದ ಶತ್ರುಗಳ ಸ್ವಾಧೀನವಿದ್ದ ಎಲ್ ಎರಿಶನ್ನು ಗೆದ್ದುಕೊಂಡಿರುತ್ತಾರೆ. ಇಲ್ಲಿ ಶತ್ರುಗಳು ಕೊನೆತನಕ ಎದುರಿಸಬೇಕೆಂಬ ಉದ್ದೇಶದಿಂದ ಬೇಕಾದ ಸನ್ನಾಹಗಳನ್ನು ಮಾಡಿಕೊಂಡು ಇದ್ದರು. ಆದರೆ ಬ್ರಿಟಿಷರು ಮುಂದರಿದು ಅವರ ಮೇಲೆ ಬಿದ್ದು ಆ ಪ್ರಾಂತ್ಯಗಳನ್ನೆಲ್ಲಾ ಸ್ವಾಧೀನಮಾಡಿಕೊಂಡಿರುತ್ತಾರೆ. ಎಲ್ ಎರಿಶನ್ನು ಬ್ರಿಟಿಷರು ಪುನಃ ಸ್ವಾಧೀನಮಾಡಿಕೊಂಡದ್ದರಿಂದ ಶತ್ರುಗಳಿಗೆ ಒಂದು ದೊಡ್ಡ ಪೆಟ್ಟು ಬಿದ್ದಂತಾಯಿತು.

ಜಲಂತರ್ಗಾಮಿ ನಾವೆಗಳು.

ಕಳೆದ ವಾರದಲ್ಲಿಯೂ ಬ್ರಿಟಿಷರ, ರುಶ್ಯನರ, ನೊರ್ವೇಯವರ, ಡೇನಿಸರ, ಅಮೇರಿಕದವರ ಕೆಲವು ಹಡಗಗಳು ಜರ್ಮನರ ಜಲಂತರ್ಗಾಮಿ ನಾವೆಗಳಿಗೆ ತುತ್ತಾಗಿವೆ.

ಉತ್ತರ ಹಿಂದೂಸ್ಥಾನ.

ಮುಂಬಾಯಿ ಸಂಸ್ಥಾನದ ಡಿಸ್ಟ್ರಿಕ್ಟ್ ಬೋರ್ಡಿಗೆ ಬಿನ್‌ಸರಕಾರಿ ಮೆಂಬರರನ್ನು ಪ್ರೆಸಿಡೆಂಟರಾಗಿ ನೇಮಿಸಬೇಕೆಂಬ ಆಲೋಚನೆಯು ಕೆಲವು ಸಮಯದ ಹಿಂದಿನಿಂದಲೇ ಮುಂಬಾಯಿ ಸರಕಾರದವರಿಗಿತ್ತು. ಈಗ ತಾನೇ ಮುಂಬಾಯಿ ಸರಕಾರರು ಪರೀಕ್ಷಾರ್ಥವಾಗಿ ಪೂನೆಯ ಲೋಕಲ್ ಬೋರ್ಡಿಗೆ ಬಿನ್‌ಸರಕಾರಿ ಪ್ರೆಸಿಡೆಂಟರನ್ನು ನೇಮಿಸಬೇಕೆಂತ ನಿರ್ಣಯಿಸಿರುತ್ತಾರೆ.

ಪರದೇಶಗಳಿಂದ ಮೋಟರ್ ಬಂಡಿಗಳು, ಮೋಟರ್ ಸೈಕಲ್‌ಗಳು, ಇಲ್ಲವೆ ಅವುಗಳ ಆಯಾ ಭಾಗಗಳನ್ನು ಹಿಂದೂಸ್ಥಾನಕ್ಕೆ ತರಿಸಿಕೊಳ್ಳಕೂಡದೆಂತ ಇಂಡಿಯಾ ಸರಕಾರದವರು ಪ್ರಕಟಿಸಿರುತ್ತಾರೆ. ಟಯರುಗಳನ್ನು ತರಿಸಿಕೊಳ್ಳಕೂಡದೆಂಬ ಪ್ರಸ್ತಾಪವು ಸರಕಾರದವರ ಈ ಆಜ್ಞೆಯಲ್ಲಿರುವದಿಲ್ಲ. ಅದಲ್ಲದೆ ತರಿಸಿಕೊಳ್ಳುವ ಮೋಟರ್ ಸೈಕಲು ಮತ್ತು ಗಾಡಿಗಳ ಭಾಗಗಳು ದುರುಸ್ತಿ ಬಗ್ಗೆ ಎಂತ ಕಸ್ಟಮ್ ಕಲೆಕ್ಟರರು ಸಮಾಧಾನ ಪಟ್ಟರೆ ಈ ಬಗ್ಗೆ ಅಂಥಾ ಸಾಮಾನುಗಳನ್ನು ತರಿಸಿಕೊಳ್ಳಲು ಕಸ್ಟಮ್ ಕಲೆಕ್ಟರರು ಲೈಸನ್ಸ್ ಕೊಡಬಹುದೆಂತಲೂ ಈ ಆಜ್ಞೆಯಲ್ಲಿ ಸೂಚಿಸೋಣಾಗಿಯದೆ. ೧೯೧೭ನೇ ಜನವರಿ ತಾ. ೧ರ ಒಳಗೆ ಅಂಥಾ ಸೈಕಲುಗಳನ್ನು ತರಿಸಿಕೊಳ್ಳುವರೆ ಹಣ ಕೊಟ್ಟಿದ್ದರೆ ವ, ಆ ತಾರೀಕಿನೊಳಗೆ ಹಡಗದಲ್ಲಿ ಹಾಕಿದ್ದರೆ ಅಂಥಾ ಸೈಕಲು ವ ಬಂಡಿಗಳನ್ನು ಮಾತ್ರ ಇಳಿಸಲು ಲೈಸನ್ಸ್ ಕೊಡಬಹುದೆಂದು ಕಸ್ಟಮ್ ಕಲೆಕ್ಟರರಿಗೆ ಅಪ್ಪಣೆಯಾಗಿದೆ.

ಲಖನೌದಲ್ಲಿ ಕೂಡಿಬಂದ ಇದೇ ರಾಷ್ಟ್ರೀಯ ಸಭೆಗೆ ಲಖನೌದ ಸರಕಾರಿ ಹುದ್ದೆದಾರರಿಗೆ ಹೋಗಲು ಸರಕಾರದವರ ಆಕ್ಷೇಪವಿಲ್ಲವೆಂತ ಸಂಯುಕ್ತ ಸಂಸ್ಥಾನಗಳ ಸರಕಾರದವರು ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

ಬಂಗಾಳಿ ರೆಜಿಮೆಂಟನ್ನು ಸ್ಥಾಪಿಸಿದ ಮುಂದಾಳುಗಳ ಪ್ರೋತ್ಸಾಹದಿಂದ ಕಲ್ಕತ್ತೆಯಲ್ಲಿ ತಾ. ೨೮ರಲ್ಲು ಒಂದು ಸಭೆಕೂಡಿತು. ಈ ಸಭೆಯಲ್ಲಿ ಬಹುಮಾನಪಟ್ಟ ಲಯೊನೆಲರವರು ಅಧ್ಯಕ್ಷರಾಗಿದ್ದರು. ಡಾಕ್ಟರ್ ಎಸ್. ಕೆ. ಮುಲ್ಲಿಕರವರು ಬಂಗಾಳಿಗಳ ಸೇನಾ ತಂಗಡಕ್ಕೆ ಸೇರಿ ತರ್ಬೀತು ಹೊಂದುತ್ತಿರುವ ಯುವಕರು ಬಹುಬೇಗನೇ ತಮ್ಮ ಕೆಲಸದಲ್ಲಿ ಅಭಿವೃದ್ಧಿಯನ್ನು ತೋರಿಸಿರುವರೆಂದೂ ಬೇಗನೇ ರಣರಂಗಕ್ಕೆ ಹೋಗತಕ್ಕವರಿದ್ದಾರೆಂದೂ ಹೇಳಿರುವರು. ಬಂಗಾಳದವರ ಈ ಕೆಲಸಕ್ಕೆ ಬಂಗಾಳ ಸರಕಾರದವರು ಬಹಳ ಕೃತಜ್ಞರಾಗಿದ್ದಾರೆಂದು ಬಹುಮಾ

ಪಟ್ಟ ಲಯೊನ್ನೆಲಿರವರು ಹೇಳಿರುತ್ತಾರೆ. ಬಂಗಾಳಿ ರೆಜಿಮೆಂಟ್ ಕಮಿಟಿಯವರು ಇಂಥಾ ಇನ್ನೊಂದು ಸೇನಾ ಪಂಗಡವನ್ನು ತಯಾರಿಸುವರೆ ನಿರ್ಣಯಿಸಿರುವರು ಎಂತ ಈ ಸಭೆಯಲ್ಲಿದ್ದ ಬರ್ಡವಾನ್ ಮಹಾರಾಜರು ಹೇಳಿರುವರು.

~~~~~

ಪಿ. ಒ. ಎಂಡ್ ಕಂಪೆನಿಯ "ನಾಗೋಯ" ಹಡಗವು ನವಂಬರ ತಾ. ೨೪ನೇ ಇಂಗ್ಲಿಷ್ ಮೈಲ್ ಸಹಿತ ಮುಂಬಾಯಿಗೆ ಬಂದು ತಲಪಿರುತ್ತದೆ.

~~~~~

ಕರಾಚಿಯಲ್ಲಿ ದವಸಧಾನ್ಯಗಳ ಬೆಲೆಯು ಹೇಗೆ ಏರಿರುತ್ತದೆಂಬದು "ಮೈಲ್ ಗಜೇಟಿ"ನಲ್ಲಿ ಪ್ರಕಟವಾದ ರಖಂ ಧಾರಣೆ ಪಟ್ಟಿಯಿಂದ ತಿಳಿದು ಬರುವದು:—ಯುದ್ಧಕ್ಕೆ ಮೊದಲು ಮಣ ೧ಕ್ಕೆ ೪-೯ ರೂ. ಬೆಲೆ ಇದ್ದ ತುಪ್ಪಕ್ಕೆ ಈಗ ರೂ. ೬೩—೬೪. ಗೋಧಿಯ ಕ್ರಯವು ಮಣ ೧ಕ್ಕೆ ರೂ. ೫—೪—೦ರಿಂದ ರೂ. ೬—೮—೮ಕ್ಕೂ; ಸಕ್ಕರೆ ಮಣ ೧ಕ್ಕೆ ರೂ. ೮ರಿಂದ ರೂ. ೧೬ಕ್ಕೂ; ಒಳ್ಳೆ ಮೆಣಸು ಸೇರು ೧ಕ್ಕೆ ೯ ಆಣೆಯಿಂದ ರೂ. ೧-೩-೦ಕ್ಕೂ; ಬಟಾಟೆ ಸೇರು ೧ಕ್ಕೆ ೨ ಆಣೆಯಿಂದ ೪ ಆಣೆಗೂ; ನೀರುಳ್ಳಿ ಸೇರು ೧ಕ್ಕೆ ೩ ಪೈಯಿಂದ ೨ ಆಣೆಗೂ; ಮೀನು ರಾತ್ತಲಿಗೆ ೧॥ ಆಣೆಯಿಂದ ೪ ಆಣೆಗೂ; ಮಾಂಸ ರಾತ್ತಲ ೧ಕ್ಕೆ ೪—೫ ಆಣೆಯಿಂದ ೬—೮ ಆಣೆಗೂ; ಹಾಲು ಸೇರು ೧ಕ್ಕೆ ೨ ಆಣೆಯಿಂದ ೩—೪ ಆಣೆಗೂ; ಕಟ್ಟಿಗೆ ಮಣ ೧ಕ್ಕೆ ೯ ಆಣೆಯಿಂದ ೧೨ ಆಣೆಗೂ ಹೆಚ್ಚಾಗಿಯದೆ.

~~~~~

ಕರಾಚಿ ಪಟ್ಟಣದಲ್ಲಿ ಹಿಂದೂಗಳ ಒಂದು ಮನೆಯಲ್ಲಿ ಗಂಡಸರಿಲ್ಲದ ವೇಳೆ ಹೆಂಗಸರು ಚಿಮಿಣಿ ಎಣ್ಣೆ ಡಬ್ಬೆಯ ಒಂದು ಮೂಲೆಯಲ್ಲಿ ಒಂದು ಚೂರು ಕಲ್ಲಿದ್ದಲನ್ನು ಇಟ್ಟು ಡಬ್ಬೆ ಒಡೆಯುತ್ತಿರುವಾಗ ಕಲ್ಲಿದ್ದಲಿನಲ್ಲಿ ಬೆಂಕಿಯುಂಟಾಗಿ ಎಣ್ಣೆ ಉರಿದು ೪ ಹೆಂಗಸರೂ ೨ ಹುಡುಗಿಯರೂ ಸುಟ್ಟು ಸತ್ತುಹೋದರು. ಮನೆಗೂ ಬೆಂಕಿ ತಗಲಿತು. ಆದರೆ ನೀರು ಹಾಯಿಸುವ ಯಂತ್ರದಿಂದ ಬೆಂಕಿ ನೊಂದಿಸಲಾಯಿತು,

~~~~~

ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮಾನ್ಯ ಅಂಬಿಕಚರಣ ಮುಜುಮದಾರರವರು ಇದೇ ತಾ. ೨೪ರಲ್ಲು ಲಖನೌಗೆ ಬಂದು ತಲಪಿದರು. ಲಖನೌದ ಹಿಂದೂ ಮತ್ತು ಮುಸಲ್ಮಾನ ಮುಂದಾಳುಗಳು ಅಧ್ಯಕ್ಷರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಮಾಡಿಕೊಂಡರು.

~~~~~

ಕಾಯಸ್ಥ ಕನ್ಫರೆನ್ಸಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಡಾಕ್ಟರ್ ಸರ್. ರಾಷ್‌ಬಿಹಾರಿ ಘೋಷರವರನ್ನು ರೈಲ್ವೇ ಸ್ಟೇಶನಿನಲ್ಲಿ ಸ್ವಾಗತಮಾಡಿಕೊಳ್ಳಲಿಕ್ಕಿದ್ದಾಗ ರೈಲ್ವೇ ಸ್ಟೇಶನಿನಲ್ಲಿ ಒಂದು ಆಕಸ್ಮಿಕವಾದ ಸಂಘಟನೆಯು ನಡೆಯಿತು. ಬಹುಮಾನಪಟ್ಟ ಪಂಡಿತ ಮದನ ಮೋಹನ ಮಲವೀಯ ಮತ್ತು ಬಹುಮಾನಪಟ್ಟ ಡಾಕ್ಟರ್ ತಾಜ ಬಹದ್ದೂರ್ ಸಾಪ್ರುರವರನ್ನು ನಿಲ್ದಾಣಕ್ಕೆ ಹೋಗದ ಹಾಗೆ ತಡೆದರು. ಅಧ್ಯಕ್ಷರನ್ನು ಎದುರ್ಗೊಳ್ಳಲು ಅವರು ನಿಲ್ದಾಣಕ್ಕೆ ಹೋಗಲಿಕ್ಕಿದ್ದಾಗ ನಿಲ್ದಾಣದ ಟಿಕೇಟು ನಿಲ್ಲಿಸಲ್ಪಟ್ಟಿತ್ತು, ಮತ್ತು ೩ ಕೆನ್‌ಸ್ಟೇಬರರೂ ಒಬ್ಬ ಜಮೇದಾರನೂ ಹೊರಗೆ ನಿಂತುಕೊಂಡು ನಿಲ್ದಾಣಕ್ಕೆ ಸ್ವಾಗತ ಕಮಿಟಿಯ ೫ ಮೆಂಬರರಿಗೆ ಮಾತ್ರ ಪ್ರವೇಶಿಸಲು ಹುಕುಂ ಇದೆ ಎಂದೂ ಉಳಿದವರು ಹೋಗಕೂಡದೆಂದು ಹೇಳಿ ಇವರನ್ನು ತಡೆದರು. ಮಾನ್ಯ ಮಲವಿಯವರು ಟೆಲಿಫೋನು ಮೂಲಕ ರೈಲ್ವೇ ಟ್ರೆಫಿಕ್ ಸುಪರಿಂಟೆಂಡೆಂಟರ ಕೂಡೆ ಮಾತಾಡಿ ಈ ಹುಕುಂ ನ್ಯಾಯವಲ್ಲವೆಂತ ತಿಳಿಸಿದರು. ಆದರೆ ಟ್ರೆಫಿಕ್ ಸುಪರಿಂಟೆಂಡೆಂಟರವರು ಮಲವಿಯರಿಂದ ತಾನು ಕಾನೂನು ಕಲಿಯಬೇಕಾದುದಿಲ್ಲವೆಂಬ ಉತ್ತರ ಕೊಟ್ಟದ್ದರಿಂದ ಮಾನ್ಯ ಮಲವಿಯರೂ, ಮಾನ್ಯ ಡಾಕ್ಟರ್ ಸಾಪ್ರೂರವರೂ ಈ ಹುಕುಮನ್ನು ಲಕ್ಷಮಾಡದೆ ನಿಲ್ದಾಣದ ಒಳಗೆ ಹೋಗಿ ಸ್ಟೇಶನ್ ಮಾಸ್ತರರ ಕೂಡೆ ಮಾತಾಡಿದರು. ಸ್ಟೇಶನ್ ಮಾಸ್ತರನು ಆಜ್ಞೆ ಪ್ರಕಾರ ನಡೆಯಬೇಕೆಂದೂ ತನಗೆ ೫ ಮಂದಿಯನ್ನು ಮಾತ್ರ ಒಳಗೆ ಬಿಡಲು ಹುಕುಂ ಇದೆ ಎಂದೂ ಹೇಳಿದರು. ಮಾನ್ಯ ಮಲವಿಯರು ತಾನು ಒಳಗೆ ಇದ್ದ ೫ ಮಂದಿಯಲ್ಲಿ ಸೇರಿರಲಿ, ಹೊರಗೆ ಇದ್ದ ೫ ಮಂದಿಯಲ್ಲಿ ಸೇರಿರಲಿ, ನಿಲ್ದಾಣವನ್ನು ಬಿಟ್ಟು ಹೋಗುವ ಹಾಗೆ ಇಲ್ಲವೆಂದು ಹೇಳಿ ಸರ್. ರಾಷ್‌ಬಿಹಾರಿ ಘೋಷರನ್ನು ಸ್ವಾಗತ ಮಾಡಿಕೊಂಡರು.

~~~~~

ಇದೇ ತಾ. ೨೪ರಲ್ಲು ಹಿಂದೂಸ್ಥಾನದ ಕಾಯಸ್ಥ ಕನ್ಫರೆನ್ಸಿನ ೨೬ನೇ ಅಧಿವೇಶನವು ಅಲ್ಲಹಾಬಾದಿನಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೆ| ಗುಲ್ಜಾರಿ ಲಾಲರವರ ಭಾಷಣವಾದ ನಂತರ ಅಧ್ಯಕ್ಷರಾದ ಡಾಕ್ಟರ ಸರ್. ರಾಷ್‌ಬಿಹಾರಿ ಘೋಷರವರು ಭಾಷಣವನ್ನು ಕೊಟ್ಟು ಕಾಯಸ್ಥರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಾ ಬರುವದನ್ನು ಸಭಿಕರಿಗೆ ತೋರಿಸಿ ಕೊಟ್ಟು ಹೀಗೆ ಕಡಿಮೆಯಾಗುವದರ ಕಾರಣವನ್ನು ಕಂಡುಹಿಡಿದು ಈ ಜಾತಿಯವರನ್ನು ಏಳಿಗೆಗೆ ತರುವ ಉಪಾಯವನ್ನು ಮಾಡುವದು ಆಗತ್ಯವೆಂಬದನ್ನು ಸೂಚಿಸಿದರು. ಸಹಪಂಕ್ತಿ ಭೋಜನ, ಜಾತಿಯ ಹೆಂಗಸರನ್ನು ಅಭಿವೃದ್ಧಿಗೆ ತರುವದು ಮೊದಲಾದ ಸೂಚನೆಗಳೂ ಅಧ್ಯಕ್ಷರ ಭಾಷಣದಲ್ಲಿ ಅಡಕವಾಗಿದ್ದವು. ಅಧ್ಯಕ್ಷರು ಕಡೆಗೆ ಅಭಿವೃದ್ಧಿಯಾಗಬೇಕೆಂಬದೇ ನಿಮ್ಮ ಆದರ್ಶವಾಕ್ಯವಾಗಿರಲಿ, ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದಿರಿ, ಪ್ರತಿಯೊಂದೂ ಪ್ರಯೋಜನಕಾರಿಯಾಗುವಂತೆ ಅಭ್ಯಾಸಿಸಿರಿ, ಪಾಶ್ಚಿಮಾತ್ಯರಿಂದ ನೀವು ಕಲಿತುಕೊಳ್ಳಬೇಕಾಗಿರುವದನ್ನು ಕುರುಡುತನದಿಂದ ಅನುಸರಿಸಬೇಡಿರಿ. ಸುಧಾರಿಸಿದ ರಾಷ್ಟ್ರಗಳೊಳಗೆ ಹಿಂದೂಸ್ಥಾನಕ್ಕೂ ತಕ್ಕ ಸ್ಥಾನವು ಸಿಗಬೇಕಾದರೆ ತನ್ನನ್ನು ತಾನೇ ಸಂರಕ್ಷಿಸಿಕೊಳ್ಳಲು ಶಕ್ತವಾಗಿದ್ದು ಅದು ತನ್ನ ಪರಂಪರಗತವಾದಂಥಾ ರೀತಿನೀತಿಗಳಿಗೆ ಸರಿಯಾಗಿ ನಡಿಯಬೇಕು ಎಂಬಿತ್ಯಾದಿ ಬುದ್ಧಿವಾದದೊಡನೆ ಭಾಷಣವನ್ನು ಮುಗಿಸಿದರು.

~~~~~

ಕರಾಚಿಯ ಸಾಹುಕಾರರಿಂದ ಆಯಾ ಪ್ರದೇಶಗಳಿಗೆ ಕಳುಹಿಸಲಿಕ್ಕಿದ್ದ ಒಂದು ಲಕ್ಷಕ್ಕೆ ಮಿಕ್ಕದ ಗೋಣಿಗಳು ಕರಾಚಿಯಲ್ಲಿ ಬೇಕಾದಷ್ಟು ರೈಲ್ವೇ ಗಾಡಿಗಳಿಲ್ಲದ್ದರಿಂದ ಅಲ್ಲಿಯೇ ಬಿದ್ದಿರುತ್ತವೆ. ರೈಲ್ವೆ ಕಂಪೆನಿಯ ಟ್ರೇಪಿಕ್ ಮೆನೇಜರರು ಕಲ್ಲಿದ್ದಲು ಇಲ್ಲವಾದುದರಿಂದ ಈ ಸರಕನ್ನು ಸಾಗಿಸಲು ಅಸಾಧ್ಯವೆಂದು ಸಾಹುಕಾರರಿಗೆ ಹೇಳಿರುವರು. ಇದರಿಂದ ಕರಾಚಿಯ ಸಾಹುಕಾರರಿಗೆ ಬಹಳ ನಷ್ಟವಾಗುವ ಸಂಭವವಿರುವದರಿಂದ ಈ ಕಷ್ಟವನ್ನು ನಿವಾರಿಸಬೇಕೆಂದು ಕರಾಚಿಯ ಸಾಹುಕಾರ ಸಂಘದವರು ಸಿಮ್ಲಾದ ರೈಲ್ವೆ ಬೋರ್ಡಿನವರಿಗೂ, ವೈಸರಾಯ ಪ್ರಭುಗಳಿಗೂ ತಂತೀ ಬಿಟ್ಟಿರುತ್ತಾರೆ.

~~~~~

ಬಹುಮಾನಪಟ್ಟ ರಾಯಿ ಬಹದ್ದೂರ ಮುನ್ಷಿ ಪ್ರಗ್ ನಾರಾಯಣ ಭಾರ್ಗವರವರು ಇದೇ ತಾ. ೨೪ರಲ್ಲು ಕಾಲವಾದರು. ಇವರು ಇದೇ ಔದ್ಯೋಗಿಕ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರೂ ಲಖನೌ ನ್ಯಾಯವಿಧಾಯಕ ಸಭೆಯ ಮೆಂಬರರೂ ಆಗಿದ್ದುದರಿಂದ ಇವರ ಮರಣದಿಂದ ಲಖನೌದಲ್ಲಿ ವಿಶೇಷ ವಿಷಾದಕ್ಕೆ ಕಾರಣವಾಗಿರುವದು.

~~~~~

ಇದೇ ತಾ. ೨೬ನೇ ಮಂಗಳವಾರ ದಿನ ರಾಷ್ಟ್ರೀಯ ಸಭೆಯ ೩೧ನೇ ಅಧಿವೇಶನವು ಲಖನೌದಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಈ ಬಗ್ಗೆ ಪ್ರತ್ಯೇಕವಾಗಿ ತಯಾರಿಸಿದ ಶೋಭಾಯಮಾನವಾದ ಹಂದರದಲ್ಲಿ ಹಿಂದೂಸ್ಥಾನದ ಎಲ್ಲಾ ಕಡೆಗಳಿಂದ ಬಂದಿದ್ದ ಪ್ರತಿನಿಧಿಗಳು ಸೇರಿದ ನಂತರ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಬಹುಮಾನಪಟ್ಟ ಪಂಡಿತ ಜಗತ್ ನಾರಾಯಣರವರು ಸ್ವಾಗತ ಭಾಷಣವನ್ನು ಕೊಟ್ಟರು. ಸ್ವಾಗತ ಕಮಿಟಿಯ ಅಧ್ಯಕ್ಷರು ಪ್ರಥಮತಾ ರಾಷ್ಟ್ರೀಯ ಸಭೆಯ ಮುಂದಾಳುಗಳಲ್ಲಿ ಗತಿಸಿಹೋದ ಮೆಸರ್ಸ್ ಬಿ. ನಾರಾಯಣ ದಾರು, ಜಿ. ಸುಬ್ರಮಣ್ಯಯ್ಯರ್, ದಾಜಿ ಅಬಾಜಿ ಖಾರೆ ಮೊದಲಾದವರ ಬಗ್ಗೆ ವಿಷಾದವನ್ನು ಸೂಚಿಸುವ ಮಾತುಗಳನ್ನಾಡಿದರು. ಸ್ಥಳಿಕ ಸರಕಾರದವರು ಈ ರಾಷ್ಟ್ರೀಯ ಸಭೆಯು ಕೂಡುವ ಬಗ್ಗೆ ಮಾಡಿದ ಸಹಾಯವನ್ನು ಅಧ್ಯಕ್ಷರು ಕೊಂಡಾಡಿ ಅದರೊಡನೆ ಸರಕಾರದವರು ಈ ರಾಷ್ಟ್ರೀಯ ಸಭೆಯಲ್ಲಿ ನಡೆಯುವ ಉಪನ್ಯಾಸಗಳು ಉದ್ರೇಕಕರವಾಗಿಲ್ಲದಂತೆ ಕೊಟ್ಟ ಎಚ್ಚರಿಕೆಗಾಗಿ ಆಶ್ಚರ್ಯವನ್ನು ತೋರ್ಪಡಿಸಿ, ಸರಕಾರದವರು ಅಂಥಾ ಎಚ್ಚರಿಕೆಯನ್ನು ಕೊಡದಿದ್ದರೆ ಒಳ್ಳೇದಿತ್ತು ಎಂಬದಾಗಿ ಸೂಚಿಸಿದರು. ಅನಂತರ ಈ ಸಾರಿಯ ರಾಷ್ಟ್ರೀಯ ಸಭೆಯಲ್ಲಿ ಪಕ್ಷಭೇದವಿಲ್ಲದೆ ಎಲ್ಲರೂ ಏಕವಾಗಿ ಕೂಡಿದುದರ ಮಹತ್ವವನ್ನು ವಿವರಿಸಿ, ಹಿಂದೂಸ್ಥಾನವು ಈ ಮಹಾ ಯುದ್ಧದಲ್ಲಿ ತೋರಿಸಿದ ರಾಜನಿಷ್ಠೆ, ಸಹಾಯ ಮೊದಲಾದವುಗಳನ್ನು ಸೂಚಿಸಿ, ಯುದ್ಧದ ನಂತರ ಹಿಂದೂಸ್ಥಾನದ ಈಗಿನ ಸ್ಥಿತಿಯು ಬದಲಾಗುವದರಲ್ಲಿ ಸಂದೇಹವಿಲ್ಲವೆಂಬದನ್ನು ಖಚಿತಪಡಿಸಿ ಕೊಟ್ಟರು. ಸ್ವಾಗತ ಕಮಿಟಿಯ ಅಧ್ಯಕ್ಷರು ಮುಖ್ಯವಾಗಿ ತನ್ನ ಭಾಷಣದಲ್ಲಿ ಹಿಂದೂಸ್ಥಾನಕ್ಕೆ ಸ್ವರಾಜ್ಯದ ಕುರಿತು ಮಾತನ್ನಾಡಿ ಹಿಂದೂಸ್ಥಾನಕ್ಕೆ ಸ್ವರಾಜ್ಯ ಕೊಡುವದೇ ಬ್ರಿಟಿಷ ರಾಜನೀತಿಯ ಗುರಿ ಎಂಬದನ್ನು ಬ್ರಿಟಿಷರು ತೋರಿಸಿಕೊಡಬೇಕೆಂದೂ ಯುದ್ಧವಾದ ನಂತರ ಆ ಗುರಿಯನ್ನು ಸಾಧಿಸುವರೆ ತಕ್ಕದಾದ ಏರ್ಪಾಡು ಮಾಡಬೇಕೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಹಿಂದೂಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಲು ಇರುವ ಆಕ್ಷೇಪಗಳನ್ನೂ ಅಧ್ಯಕ್ಷರು ಎತ್ತಿ ಮಾತಾಡಿ ಈ ಆಕ್ಷೇಪಗಳು ನ್ಯಾಯವಲ್ಲವೆಂಬದನ್ನು ಕೆನಡಾ, ಆಸ್ಟ್ರೇಲಿಯ, ದಕ್ಷಿಣ ಆಫ್ರೀಕಗಳಿಗೆ ಕೊಟ್ಟ ಸ್ವರಾಜ್ಯದ ದೃಷ್ಟಾಂತಗಳಿಂದ ತಿಳುಹಿಸಿರುತ್ತಾರೆ. ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣವಾದ ನಂತರ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಹುಮಾನಪಟ್ಟ ಮೆ| ಎ. ಸಿ. ಮುಜುಮದಾರರು ಭಾಷಣವನ್ನು ಕೊಟ್ಟರು. ಈ ಭಾಷಣವು ಉದ್ದವಾಗಿದ್ದರೂ ಕಾಲಕ್ಕೆ ತಕ್ಕದಾದುದಾಗಿತ್ತು. ಅಧ್ಯಕ್ಷರು ಭಾಷಣ
~~~~~

